JAYANTI

★

JUNE

1952

★

ಜೂನ್

★

೧೯೫೨

ಜಯಂತಿಯ

ಸಣ್ಣ ಕತೆಗಳ

ಮೇಲಾಟದ

ಸಂಚಿಕೆ

★



ಬಿಹಾರದ ರಾಜ್ಯಪತಿ ಮಾನ್ಯ ದಿವಾಕರರು.

ಜಯಂತಿ

ಸಂಪುಟ ೧೫ | ೧ನೆಯ ಜೂನ್ ೧೯೫೨ | ಸಂಚಿಕೆ ೧

ಈ ಸಂಚಿಕೆಯಲ್ಲಿ:

ಬಿಹಾರದ ರಾಜ್ಯಪಾಲ ಮಾನ್ಯ ದಿವಾಕರರು (ಮುಖಚಿತ್ರ)
ಸಂಯುಕ್ತ ಕರ್ನಾಟಕದ ಕೃಪೆಯಿಂದ
ಮಂತ್ರಿ ದಿವಾಕರರು ರಾಜ್ಯಪಾಲರಾದರು (ಸಂಪಾದಕೀಯ)
ಸಂಪಾದಕರು ೧
ಸಣ್ಣ ಕತೆಯ ಮೇಲಾಟದ ವರದಿ
ಸಂಪಾದಕ ಸಮಿತಿಯಿಂದ ೨
ನಾಜೂಕದ ನಾರಿ (ಒಂದು ನಲ್ವಾಡು)
'ಆನಂದಕಂದ' ೪
ಒಗಟು (೧ನೆಯ ಬಹುಮಾನ ಪಡೆದ ಸಣ್ಣ ಕತೆ)
ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೫
ಕಿಮತೀ ಮುತ್ತು (೨ನೆಯ ಬಹುಮಾನ ಪಡೆದ ಸಣ್ಣ ಕತೆ)
ಶ್ರೀ. ಶ್ರೀ. ಪಾ. ಹುಳಕಿ ಬಿ. ಎ (ಆನರ್ಸ್). ವಿಜಾಪುರ ೧೪
ಹೊಸಬೆಳಕು (೩ನೆಯ ಬಹುಮಾನ ಪಡೆದ ಸಣ್ಣ ಕತೆ)
ಶ್ರೀ. ವೆಂಕಟೇಶ ಮುರಲೀಧರ ಜೋಶಿ, ಧಾರವಾಡ ೨೨
ಕಾಣದ ಕೈ (ತರಂಗರೂಪಕ)
ಶ್ರೀ. ಬೆಟಗೇರಿ ಕೃಷ್ಣಶರ್ಮ. ಧಾರವಾಡ ೨೯
ಸಾಭಾರ ಸ್ವೀಕಾರ .... (ಮೇಲ್ಹೋಲಿ)

ನಮ್ಮ ಚಂದಾದಾರರಲ್ಲಿ ಅರಿಕೆ

ಜಯಂತಿಯ ಹೊಸ ವರ್ಷ ಪ್ರಾರಂಭವಾಯಿತು. ಇದೀಗ ಕೇವಲ ಸಣ್ಣ ಕತೆಯ ಮೇಲಾಟದ ಸಂಚಿಕೆಯಾಗಿ ಹೊರಟಿದೆ. ಮುಂದಿನ ಸಂಚಿಕೆಯಿಂದ ಕೆಲವು ಸಂಪಾದಕೀಯ ವಿಶೇಷ ವಿಭಾಗಗಳು ಪ್ರಕಟವಾಗುವುವು. ಹಳೆಯ ಚಂದಾದಾರರೆಲ್ಲ ಹೊಸ ವರ್ಷದಲ್ಲಿಯೂ ಉಳಿಯಬೇಕಲ್ಲದೆ, ಶಕ್ಯವಿದ್ದಷ್ಟು ಹೊಸ ಚಂದಾದಾರರನ್ನು ಹೆಚ್ಚಿಸಿಕೊಟ್ಟು ಜಯಂತಿಯ ಬಲವನ್ನು ಬೆಳೆಯಿಸುವ ಉಪಕಾರ ಮಾಡಬೇಕು.

೧. ಚಂದಾಹಣ ಕಳುಹುವವರು ೫ ರೂಪಾಯಿಗಳನ್ನು ಮನಿಯಾರ್ಡರ್ ಮೂಲಕ ಕಳುಹುವುದು ಅನುಕೂಲ. ವ್ಹಿ. ಪಿ. ಯಿಂದ ತರಿಸಿಕೊಳ್ಳಲು ಬಯಸಿದರೆ, ಆರು ಆಣೆಯ ಅಂಚೆಯ ವೆಚ್ಚವನ್ನು ವ್ಯರ್ಥವಾಗಿ ಹೆಚ್ಚಿಗೆ ಕೊಡಬೇಕಾಗುವುದು.

೨. ಜಯಂತಿಯನ್ನು ಮುಂದೆ ತರಿಸಲು ಅಪೇಕ್ಷೆಯಿಲ್ಲದವರು, ತಮ್ಮ ಚಂದಾ ಅವಧಿಯ ಕೊನೆಯ ತಿಂಗಳಲ್ಲಿ ಒಂದು ಕಾಗದ ಬರೆದು ಹಾಗೆಂದು ತಿಳುಹಿದರೆ, ದೊಡ್ಡದೊಂದು ನೆರವನ್ನು ಕೊಟ್ಟಂತಾಗುವುದು.

೪. ಪ್ರತಿ ತಿಂಗಳ ಮೊದಲನೆಯ ವಾರದ ಮೊದಲು ದಿನಗಳಲ್ಲಿ ಜಯಂತಿಯ ಸಂಚಿಕೆಗಳನ್ನು ತಪ್ಪದೆ ಅಂಚಿಗೆ ಹಾಕಲಾಗುತ್ತದೆ. ಸಂಚಿಕೆ ತಲ್ಪದಿರುವವರು, ೧೫ನೆಯ ತಾರೀಖಿನೊಳಗಾಗಿ ಬರೆದು ತಿಳುಹಬೇಕು.

ಜಯಂತಿಯ ಏಜನ್ಸಿ ನಿಯಮಗಳ

卐

ಕನ್ನಡ ನಾಡಿನ ಎಲ್ಲ ನಗರ-ಪಟ್ಟಣಗಳಲ್ಲಿಯೂ, ಸಂಖ್ಯಾಕ ಕನ್ನಡಿಗರಿರುವ ಹೊರನಾಡಿನ ನಗರಗ ಜಯಂತಿಯ ಏಜನ್ಸಿಗಳನ್ನು ಕೊಡಲಾಗುವುದು. ಅಪೇಕ್ಷೆ ವರು ಪತ್ರವ್ಯವಹಾರ ಮಾಡಬೇಕು. ಏಜನ್ಸಿ ನಿಯಮಗಳು ನಂತೆ ಇವೆ.

೧. ೧೫ಕ್ಕಿಂತ ಹೆಚ್ಚಿಗೆ ಪ್ರತಿಗಳನ್ನು ತರಿಸಿಕೊಳ್ಳುವ ರೈಲಿನ ಅನುಕೂಲತೆಯಿದ್ದರೆ— ರೈಲ್ವೇ ಪಾರ್ಸಲಿನಿಂದ ಲಾಗುವುದು. ಯಾವುದೇ ಏಜಂಟನಿಗೆ ಕಳುಹಬೇಕಾದ ಕನಿಷ್ಠ ಸಂಖ್ಯೆ ೫. ಎಂದರೆ ೫ಕ್ಕಿಂತ ಕಡಿಮೆ ಪ್ರತಿಗಳನ್ನು ಏಜಂಟರಿಗೂ ಪೂರಯಿಸಲಾಗುವುದಿಲ್ಲ. ೧೫ಕ್ಕಿಂತ ಹೆಚ್ಚಿಗೆ ಗಳನ್ನು ತರಿಸಿಕೊಳ್ಳುವವರಿಗೆ ೧ ಪ್ರತಿಯನ್ನು ಏಜನ್ಸಿ ಯೆಂದು ಪೂರಯಿಸಲಾಗುವುದು.

೨. ಸಂಚಿಕೆಯ ಬೆಲೆಯ ಮೇಲೆ ೧೦೦ಕ್ಕೆ ೨೫ರಂತೆ ಶನ್ ಕೊಡಲಾಗುವುದು. ಮಾರದೆ ಉಳಿಯುವ ಪ್ರತಿ ತಿರುಗಿ ತೆಗೆದುಕೊಳ್ಳುವುದಿಲ್ಲ. ಆದುದರಿಂದ, ಪ್ರತಿ ಏಜಂಟನೂ ತನಗೆ ಎಷ್ಟು ಬೇಕೋ ಅಷ್ಟೇ ಪ್ರತಿಗಳನ್ನು ಕೊಳ್ಳಬೇಕು.

೩. ಸಂಚಿಕೆಗಳನ್ನು ಏಜಂಟರ ಕಡೆಗೆ ಕಳುಹುವ ವೆಚ ಕಾರ್ಯಾಲಯವು ವಹಿಸುವುದು. ಹಣವನ್ನು ಕಾರ್ಯಾ ತಲ್ಪಿಸುವ ವೆಚ್ಚವನ್ನು ಏಜಂಟರು ವಹಿಸಬೇಕು.

೪. ಪ್ರತಿಯೊಬ್ಬ ಏಜಂಟನೂ ತಾನು ತರಿಸಿಕೊಳ್ಳು ಗಳ ಬೆಲೆಯ ಇಮ್ಮಡಿಯಷ್ಟು ಹಣವನ್ನು, ಕಾರ್ಯಾ 'ಠೇವು' ಎಂದು ಇಡಬೇಕು. ಮುಂದೆ ಪ್ರತಿತಿಂಗಳ ಸಂ ಬೆಲೆಯನ್ನು ಕಮಿಶನ್ ಕಳೆದು, ಆ ಆ ತಿಂಗಳ ೨೫ನೆಯ ತಿ ನೊಳಗಾಗಿ ತಲ್ಪುವಂತೆ ಕಳುಹುತ್ತಿರಬೇಕು.

೫. ಹಣ ಕಳುಹುವವರು ಮನಿಯಾರ್ಡರ್ ಇಲ್ಲವೆ ಪೋ ಆರ್ಡರ್ ಮೂಲಕ ಕಳುಹಬೇಕು. ಬ್ಯಾಂಕಿನ ಚಕ್ಕು ಕಳುಹುವವರು. ಆ ಚಕ್ಕಿಗೆ ಸಲ್ಲುವ ಕಮಿಶನ್ನಿನ ಹಣ ಸೇರಿಸಿ ಕಳುಹಬೇಕು.

೬. ಗೊತ್ತುಮಾಡಿಕೊಂಡ ಅವಧಿಗೆ ಸರಿಯಾಗಿ ಕಾಲ ಹಣವು ಬಾರದೆ ಹೋದರೆ, ಒಂದು ತಿಂಗಳು ದಾರಿಯನ್ನು ಆ ಏಜನ್ಸಿಯನ್ನು ನಿಲ್ಲಿಸಿಬಿಡಲಾಗುವುದು.

ಜಯಂತಿ ಕನ್ನಡಿಗರ ಪ್ರತಿಯೊಂದು ಮನೆಯಲ್ಲಿಯೂ ಬೇಕಾದ ಮಹತ್ತ್ವದ ಮಾಸಪತ್ರಿಕೆ. ಆದುದರಿಂದ ಎಲ್ಲ ಏಜನ್ಸಿಗಳನ್ನು ನಡೆಯಿಸಬೇಕಾಗಿದೆ. ಅಭ್ಯರ್ಥಿಗಳು ಪತ್ರವ್ಯವಹಾರ ಮಾಡಬೇಕು.

ವ್ಯವಸ್ಥಾಪಕ 'ಜಯಂತಿ' ಧಾ

ಜಯಂತಿ

ಸಂ. ೧೫. ಸಂಚಿಕೆ. ೧

ಕುಟುಂಬಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು
ಶ್ರೀ. ಡಿ. ಶರತ್‌ಕುಮಾರ

ಪ್ರಕಾಶಕರು :
ಶ್ರೀ. ಎಮ್. ವಿ. ಮೆಳ್ಳಿಗಟ್ಟಿ.

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

...ನ್ ೧೯೫

ಸಂಪಾದಕೀಯ

★

ಮಂತ್ರಿ ದಿವಾಕರರು ರಾಜ್ಯಪಾಲರಾದರು !

ಭಾರತದಲ್ಲಿ ನಡೆದ ಹೊಸ ಚುನಾವಣೆಗಳ ಫಲವಾಗಿ, ಬೇರೆ ಬೇರೆ ರಾಜ್ಯಗಳಲ್ಲಿಯೂ ಕೇಂದ್ರದಲ್ಲಿಯೂ ಹೊಸ ಆಡಳಿತಗಳು ರೂಪುಗೊಂಡು ನಿಂತುವು. ಮುಂಬಯಿ ರಾಜ್ಯದ ಸರಕಾರದಲ್ಲಿ, ಕನ್ನಡಿಗರಿಗೆ ತೃಪ್ತಿಕರವಾದ ಸ್ಥಾನ-ಮಾನಗಳು ದೊರೆಯದುದರಿಂದ, ನಮ್ಮ ನಾಡಿನಲ್ಲಿ ಎಲ್ಲೆಲ್ಲಿಯೂ ಕುತ್ತುಸುರಿನ ಧ್ವನಿಯು ಕೇಳುತ್ತಲಿದ್ದರೂ, ಮದ್ರಾಸಿನ ಮಂತ್ರಿಮಂಡಲಿಯಲ್ಲಿ, ಅನಿರೀಕ್ಷಿತವಾಗಿ ಮೂವರಿಗೆ ಸ್ಥಾನ ದೊರೆತು, ಕನ್ನಡಿಗರೆಲ್ಲರಿಗೆ ಆಶ್ಚರ್ಯವನ್ನುಂಟುಮಾಡಿದೆ. ಮದ್ರಾಸ ಮಂತ್ರಿಮಂಡಲಿಯಲ್ಲಿ ಮೂವರು ಕನ್ನಡಿಗರಿಗೆ ಸ್ಥಾನ ದೊರೆತುದರಲ್ಲಿ ಕರ್ನಾಟಕದ ಹಿತಬುದ್ಧಿಯೇನೂ ಇಲ್ಲ; ರಾಜ್ಯದ ರಾಜಕಾರಣವು ಇದಕ್ಕೆ ಮುಖ್ಯ ಕಾರಣವಾಗಿದೆ. ಮೂವರು ಕನ್ನಡಿಗರು ಮದ್ರಾಸ್ ಮಂತ್ರಿಮಂಡಲಿಯಲ್ಲಿದ್ದರೂ, ಅವರಿಗೆ ಕರ್ನಾಟಕದ ಹಿತಸಂಬಂಧವನ್ನು ಕುರಿತು ಮಾತನಾಡುವ ಸ್ವಾತಂತ್ರ್ಯವಿದೆಯೋ ಇಲ್ಲವೋ ಎಂಬುದು ಸಂಶಯದ ಮಾತಾಗಿದೆ.

ಮೈಸೂರು ರಾಜ್ಯದ ಮಂತ್ರಿಮಂಡಲವು ಈ ಸಲ ಹದಿನಾರಾಣೆ ಕನ್ನಡಿಗರಿಂದ ಕೂಡಿದುದಾಗಿದೆ. ಮೊನ್ನೆ ಬೇಲೂರ ಸಾಹಿತ್ಯಸಮ್ಮೇಲನದ ಉದ್ಘಾಟಕರಾಗಿ ಮಾತನಾಡಿದ ಮೈಸೂರಿನ ಮುಖ್ಯಮಂತ್ರಿ ಮಾನ್ಯ ಹನುಮಂತಯ್ಯನವರ ವಿಚಾರಗಳನ್ನು ನಿಜವೆಂದು ಭಾವಿಸಿದರೆ, ಕನ್ನಡಿಗರೆಲ್ಲ ಒಂದೆ ಒಂದು ರಾಜ್ಯರಂಗದಲ್ಲಿ ಒಟ್ಟುಗೂಡುವ ಕಾಲ ಬೇಗನೆ ಬರಬಹುದೆಂಬ ಆಶಾವಾದಿಗಳನ್ನಾಗಿ ಮಾಡುತ್ತವ ಅವು ನಮ್ಮನ್ನು.

ಇನ್ನು ಕೇಂದ್ರದ ವಿಚಾರವನ್ನು ತೆಗೆದುಕೊಂಡು ನೋಡಿದರೆ, ಅಲ್ಲಿಯ ಮಂತ್ರಿಮಂಡಲದಲ್ಲಿ ಇಬ್ಬರು ಕನ್ನಡಿಗರಿಗೆ ಸ್ಥಾನ ದೊರೆತಿದೆ. ಶ್ರೀಮಾನ್ ಕೆ. ಸಿ. ರಡ್ಡಿಯವರು ಪೂರ್ಣಮಂತ್ರಿಗಳು; ಶ್ರೀಮಾನ್ ಕರಮರಕರರು ಅಪೂರ್ಣ ಮಂತ್ರಿಗಳು, ಎಂದರೆ ಉಪಮಂತ್ರಿಗಳು ! ಕರ್ನಾಟಕದ ಏಕೀಕರಣಸಾಧನೆಯ ದೃಷ್ಟಿಯಿಂದ ನೋಡಿದರೆ, ಶ್ರೀ. ಕೆ. ಸಿ. ರಡ್ಡಿಯವರಂತಹ ಉದಾಸೀನವಾದಿಗಳಿಂದ ಏನೂ ಹೆಚ್ಚಿನ ಕಾರ್ಯ ನಡೆದೀತೆಂದು ನಮಗೆನಿಸುವುದಿಲ್ಲ. ಕನ್ನಡಿಗರೊಂದಿಗೆ ಇದುವರೆಗೆ ನಡೆದುಕೊಂಡಿರುವ ಅವರ ನಡೆವಳಿಕೆ, ನಮ್ಮ ಭಾವನೆಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ಕರ್ನಾಟಕದ ಹಿತದ ದೃಷ್ಟಿಯಿಂದ ನಾವು ವಿಚಾರವಿಮರ್ಶೆ ನಡೆಯಿಸಿದರೆ, ಶ್ರೀಮಾನ್ ದಿವಾಕರ ರಂಗರಾಯರು ಕೇಂದ್ರ ಮಂತ್ರಿಮಂಡಲಿಯಲ್ಲಿಯೆ ಈ ಸಲವೂ ಉಳಿಯಬೇಕಾಗಿದ್ದಿತು. ರಾಷ್ಟ್ರದ ಹಿತಸಂಬಂಧಕ್ಕೆ ವಿರೋಧವಿಲ್ಲದಂತೆ, ಕನ್ನಡಿಗರ ಹಿತಸಂಬಂಧವನ್ನು ಸರ್ವದೃಷ್ಟಿಯಿಂದಲೂ ನೋಡಿ, ಸಂರಕ್ಷಿಸಬಲ್ಲ ಪ್ರಾಮಾಣಿಕತನ, ಬುದ್ಧಿಸಾಮರ್ಥ್ಯಗಳು ಅವರಲ್ಲಿವೆಯೆಂಬುದನ್ನು ಕನ್ನಡಿಗರೆಲ್ಲರೂ ಚೆನ್ನಾಗಿ ಅರಿತಿರುವರು. ಆದುದರಿಂದಲೇ ಅವರು ಮಂತ್ರಿಮಂಡಲದಲ್ಲಿ ಉಳಿಯಬೇಕಾಗಿದ್ದಿತೆಂದು ಕನ್ನಡಿಗರು ಬಯಸಿದರೆ, ಯಾರೂ ವಿಪರೀತಭಾವನೆ ಮಾಡಿಕೊಳ್ಳಲಾರರೆಂದು ನಮ್ಮ ವಿಶ್ವಾಸ.

ಈಗ ಶ್ರೀಮಾನ್ ದಿವಾಕರ ರಂಗರಾಯರು, ಭಾರತದ ಅಧ್ಯಕ್ಷರ ಅಪೇಕ್ಷೆಗೆ ಕಟ್ಟುಬಿದ್ದು, ಬಿಹಾರದ ರಾಜ್ಯಪಾಲರಾಗಿ ಹೋಗಿದ್ದಾರೆ. ನಮ್ಮವರೊಬ್ಬರು ಅಂತರ ಪ್ರಾಂತೀಯ ಮನ್ನಣೆಗೆ ಪಾತ್ರರಾಗಿ, ಒಂದು ರಾಜ್ಯದ ಅಧಿಪತಿಗಳಾಗಿ ಹೋಗುತ್ತಿರುವುದೂ ನಮಗೆ- ನಮ್ಮ ನಾಡಿಗೆ- ಹೆಮ್ಮೆಯ ಮಾತೇನೋ ಸರಿಯೆ ! ಏಕೀಕರಣದ ದೃಷ್ಟಿಯಿಂದ

(ಕವ್ಹರ್ ೩ನೆಯ ಪುಟ ನೋಡಿರಿ)

ಸಣ್ಣಕತೆಯ ಮೇಲಾಟದ ವರದಿ

ಸಂಪಾದಕ ಸಮಿತಿಯಿಂದ

★

ಜಯಂತಿ ಸಣ್ಣಕತೆಗಳ ಮೇಲಾಟವನ್ನು ಏರ್ಪಡಿಸಿದುದು ಇದೀಗ ಎರಡನೆಯ ಬಾರಿ. ಈ ಸಲ ನಿರೀಕ್ಷಿಸಿದಷ್ಟು ಕತೆಗಾರರು ಮೇಲಾಟದಲ್ಲಿ ಭಾಗವಹಿಸಿದಂತೆ ಕಂಡುಬರುವುದಿಲ್ಲವಾದರೂ ಶ್ರೀ. ಮಿರ್ಜಿ ಅಣ್ಣಾರಾಯರು, ಶ್ರೀ. ವೆಂ. ಮು. ಜೋಶಿ, ಶ್ರೀ. ಚಿದಾನಂದ ಕುಲಕರ್ಣಿ ಮೊದಲಾದ ಕೈಪಳಗಿದ ಕತೆಗಾರರು ಭಾಗವಹಿಸಿದುದು ಸಮಾಧಾನದ ಸಂಗತಿಯಾಗಿದೆ.

ಇಂದಿನ ಸಾಹಿತ್ಯದಲ್ಲಿರುವ ಸಣ್ಣಕತೆಯ ಮಹತ್ತ್ವದ ಸ್ಥಾನವನ್ನರಿತು, ಅಮೇರಿಕೆಯ ಪತ್ರಿಕಾಸಂಸ್ಥೆಯವರು ಜಾಗತಿಕ ಕಥಾಸ್ಪರ್ಧೆಯನ್ನು—ಕಳೆದ ವರುಷ—ನಡೆಯಿಸಿದುದು ಎಲ್ಲರಿಗೂ ಗೊತ್ತಿದ್ದ ಸಂಗತಿಯಾಗಿದೆ. ಆ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಕತೆಗಳನ್ನು ನೋಡಿದರೆ, ಕನ್ನಡ ಕತೆಗಾರರು ಈ ಮೊದಲೇ ಬರೆದ ಕತೆಗಳಲ್ಲಿ ಆ ಕತೆಗಳಿಗೆ ಸರಿಜೋಡಿಯಾಗಿ ನಿಲ್ಲುವ—ಅಷ್ಟೇ ಏಕೆ —ಒಂದು ಗರಿ ಮಿಕ್ಕಿನಿಲ್ಲುವ—ಕತೆಗಳು ಬೇಕಾದಷ್ಟು ... ಒಪ್ಪಿಕೊಳ್ಳಬಹುದಾಗಿದೆ. ಆದರೆ ... ಗಿ ಆ ಮೇಲಾಟದಲ್ಲಿ ಭಾಗವಹಿಸದಿರುವುದು ವಿಷಾದದ ಸಂಗತಿಯಾಗಿದೆ. ಭಾಗ ವಹಿಸಿದ್ದರೆ ಜಾಗತಿಕ ಸಣ್ಣಕತೆಗಳ ಪ್ರಪಂಚದ ಪಟ್ಟ ಕನ್ನಡಕ್ಕೆ ದೊರೆಯಲೂ ಬಹುದಾಗಿದೆ.

ಜಯಂತಿಯು ಯೋಗ್ಯತೆ ಜಾಗತಿಕ ಸ್ಪರ್ಧೆಯಲ್ಲಿಯಂತಹ ಆ ... ವಾದ ಬಹುಮಾನಗಳನ್ನು ಇರಿಸುವಂತಹದಾಗಿಲ್ಲ; ಆದರೂ ಇದು ಆಗಾಗ ಈ ಮೇಲಾಟದ ಅಲ್ಪ ಸಾಹಸಕ್ಕೆ ಕೈಯಿಕ್ಕುತ್ತದೆ. ಕನ್ನಡನಾಡಿನ ಸಾಹಿತ್ಯಪ್ರಿಯ ಧನವಂತರಾರಾದರೂ ಮನಸ್ಸು ಮಾಡಿ, ಬಹುಮಾನಗಳ ಹೊಣೆಯನ್ನು ಹೊತ್ತರೆ, ಕಣ್ಣು ತುಂಬುವಂತಹ ಬಹುಮಾನಗಳನ್ನಿರಿಸಿ, ಇದಕ್ಕಿಂತ ಯಶಸ್ವಿಯಾಗಿ ಮೇಲಾಟಗಳನ್ನು ನಡೆಯಿಸಬಹುದಾಗಿದೆ.

ಈ ಸಲದ ಮೇಲಾಟದಲ್ಲಿ ೨೮ ಜನ ಕತೆಗಾರರು ಭಾಗವಹಿಸಿದ್ದಾರೆ. ಇಬ್ಬರು ಕತೆಗಾರರು ಎರಡೆರಡರಂತೆ ಕತೆಗಳನ್ನು ಕಳುಹಿದ್ದುದರಿಂದ, ಮೇಲಾಟಕ್ಕೆ ಬಂದ ಕತೆಗಳ ಸಂಖ್ಯೆ ಸರಿಯಾಗಿ ೩೦ ಆಯಿತು. ಇಪ್ಪತ್ತೆಂಟು ಜನ ಕತೆಗಾರರಲ್ಲಿ ಇಬ್ಬರು ಮಾತ್ರ ಮಹಿಳೆಯರಿದ್ದಾರೆ. ಇವರಲ್ಲಿ ಒಬ್ಬರು ಎರಡು ಕತೆಗಳನ್ನು ಕಳುಹಿದ್ದಾರೆ.

... ಎಲ್ಲ ಭಾಗಗಳಿಂದ ... ಬಂದಿವೆಯೆಂಬುದನ್ನು ಕಾಣಬಹುದು ... ವಾಗಿ ವಿಂಗಡಿಸಿ ನೋಡಿದರೆ, ಧಾರವಾಡ ಜಿಲ್ಲೆಯಿಂದ ೮, ಬೆಳಗಾಂವಿ ಜಿಲ್ಲೆಯಿಂದ ೪, ವಿಜಾಪುರ ಜಿಲ್ಲೆಯಿಂದ ೬, ಉತ್ತರ ಕನ್ನಡ ಜಿಲ್ಲೆಯಿಂದ ೩, ದಕ್ಷಿಣ ಕನ್ನಡ ಜಿಲ್ಲೆಯಿಂದ ೨, ಮೈಸೂರು ಕರ್ನಾಟಕದಿಂದ ೪, ಮುಂಬಯಿ ನಗರದಿಂದ ೨, ಪುಣೆಯಿಂದ ೧— ಹೀಗೆ ಕತೆಗಳು ಬಂದಿವೆ.

ಕಾರ್ಯಾಲಯಕ್ಕೆ ಬಂದ ಕತೆಗಳ ಅನುಕ್ರಮ ಈ ರೀತಿಯಲ್ಲಿದೆ:

೧ **ಹೊಸ ಬೆಳಕು,** ೨ **ತಿರುಗಿ ತಿರುಪೆಗೆ,** ೩ **ಮೂಕ** ವೇದನೆ, ೪ ಮಲ್ಲಿಯ ಮಾಟ, ೫ ಯಶೋದಾ ನಂದನ, ೬ ಅಜ್ಞಾತ ಹೃದಯ, ೭ ಭಿಕ್ಷುಕಿ, ೮ **ಧ್ಯೇಯವಾದಿ,** ೯ ರಾಧೆಯ ಕೊರಗು, ೧೦ ಮಕ್ಕಳ ಯೋಗ.

೧೧ **ಜನನಮರಣ,** ೧೨ ಅಪರಾಧಿ, ೧೩ **ಬೀರಣ್ಣ,** ೧೪ ಬೆಂಡೋಲೆ, ೧೫ **ಒಗಟು,** ೧೬ **ಅವಳೇ ಇವಳು,** ೧೭ **ವಗ್ಗರಣೆ** ೧೮ **ಕಾಣಿಕೆ,** ೧೯ ಸುರಳಿತ ಬಾಳ್ವೆ, ೨೦ ಪ್ರೇಮಶಕ್ತಿ.

೨೧ **ನಾ ಕಂಡ ಮಗು,** ೨೨ ಸತಿಗಾಗಿ ರಾಜ, ೨೩ ಕಾರಕೂನರ ಇಂದ್ರಾಬಾಯಿ, ೨೪ ಒಲಿದರೆ ನಾರಿ–ಮುನಿದರೆ ಮಾರಿ, ೨೫ ಅಮೂಲ್ಯ ಗ್ರಂಥಗಳು, ೨೬ **ಲಚ್ಚಣ್ಣನ ಲಾಟರಿ,** ೨೭ ಮರಳದ ಮನೆಗೆ, ೨೮ **ಪಾಪದ ಪಿಂಡ,** ೨೯ **ಕಿಮತೀ ಮುತ್ತು,** ೩೦ ಮ್ಯಾಟ್ರಿಕ್ ರಿಝಲ್ಟಿನ ಎದೆಹೊಡೆತ ಅಥವಾ ಜೀವ ತಿಂದ ಎರಡು ಇಂಗ್ಲಿಷ್ ಶಬ್ದಗಳು.

ಸಂಪಾದಕ ಸಮಿತಿಯವರು ಎಲ್ಲ ಕತೆಗಳನ್ನೂ ಓದಿ ಬಂದ ಕತೆಗಳಲ್ಲಿಯ ಕ್ರಮಾಂಕ ೧, ೨, ೧೧, ೧೩, ೧೫, ೧೬, ೧೭, ೧೮, ೨೧. ೨೬, ೨೮, ೨೯ ಈ ಹನ್ನೆರಡು ಕಥೆಗಳನ್ನು ಆಯ್ದು ಮೇಲಾಟದ ಪರೀಕ್ಷಕರ ಕಡೆಗೆ ಕಳುಹಿದರು. ಕ್ರಮಾಂಕ ೭, ೯, ೨೦, ೨೨, ೩೦ ನೆಯ ಕತೆಗಳು ತೀರ ಗುಣವಿಹೀನವಾದವುಗಳೆಂದು ನಿರ್ಣಯಿಸಿದರು.

ಶ್ರೀ. ಎಸ್. ಪಿ. ಕುಲಕರ್ಣಿ ಬಿ ಎ., ಶ್ರೀ. ದ. ಬಾ. ಕುಲಕರ್ಣಿ, ಶ್ರೀ. ಬೆಟಗೇರಿ ಕೃಷ್ಣಶರ್ಮ ಈ ಮೂವರೂ ಪರೀಕ್ಷಕರಾಗಲು ಸಮ್ಮತಿಸಿ, ಆಯ್ದು ಒಪ್ಪಿಸಿದ ಕತೆಗಳನ್ನೆಲ್ಲ ನೋಡಿ, ಪರೀಕ್ಷಿಸಿ ನಿರ್ಣಯ ಕೊಟ್ಟರು. ಅವರ ನಿರ್ಣಯದಂತೆ ೧೫ ಕ್ರಮಾಂಕದ '**ಒಗಟು**' **ಮೊದಲನೆಯ** ಸ್ಥಾನವನ್ನೂ, ೨೯ ಕ್ರಮಾಂಕದ '**ಕಿಮತೀ ಮುತ್ತು**' ಎರಡನೆಯ ಬಹುಮಾನವನ್ನೂ ೧ ಕ್ರಮಾಂಕದ '**ಹೊಸ ಬೆಳಕು**' ಮೂರನೆಯ ಬಹುಮಾನವನ್ನೂ ಪಡೆದುವು. ಇವುಗಳ ತರುವಾಯ ಗುಣಾನ

ಕ್ರಮದಿಂದ ಸ್ಥಾನವನ್ನು ಪಡೆದ ಕತೆಗಳೆಂದರೆ ೨೬ ಲಚ್ಚಣ್ಣನ ಲಾಟರಿ, ೨೮ ಪಾಪದ ಪಿಂಡ, ೧೬ ಅವಳೇ ಇವಳು, ೨ ತಿರುಗಿ ತಿರುಪೆಗೆ, ೧೩ ಬೀರಣ್ಣ ಈ ಐದು ಕತೆಗಳು. ಇವುಗಳನ್ನು ಜಯಂತಿಯಲ್ಲಿ ಪ್ರಕಟಿಸಲೂ ಬಹುದೆಂದು, ಪರೀಕ್ಷಕರು ಅಭಿಪ್ರಾಯ ಪಟ್ಟಿದ್ದಾರೆ. ಮಿಕ್ಕುವೆಲ್ಲ ಸಾಮಾನ್ಯ ಕತೆಗಳೆಂದು ನಿರ್ಣಯಿಸಿದ್ದಾರೆ. ಪರೀಕ್ಷಕರಾಗಿ ಉಪಕಾರ ಮಾಡಿದ ಮಹನೀಯರಿಗೆ ನಮ್ಮ ಕೃತಜ್ಞತೆಯ ವಂದನೆಗಳು.

ಬಹುಮಾನ ಪಡೆದ ಕತೆಗಳು

೧ ಒಗಟು (೧ ನೆಯ ಬಹುಮಾನ)

ಇದನ್ನು ಬರೆದವರು ಶ್ರೀಮಾನ್ ಮಿರ್ಜಿ ಅಣ್ಣಾರಾಯರು. ಇವರು ಹುಟ್ಟಿ ಬೆಳೆದುದು ಬೆಳಗಾಂವಿ ಜಿಲ್ಹೆಯ ಅಥಣೀ ತಾಲೂಕಿನಲ್ಲಿರುವ ಸೇಡಬಾಳ ಗ್ರಾಮವಾದರೂ, ಸದ್ಯ ಅದೇ ತಾಲ್ಲೂಕಿನ ಉಗಾರದ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಶ್ರೀ. ಅಣ್ಣಾರಾಯರು ಕನ್ನಡ ವಾಚಕರಿಗೆ ಹೊಸಬರೇನೂ ಅಲ್ಲ. ಈ ಮೊದಲೇ ಪ್ರಕಟವಾದ ಹಲವು ಗ್ರಂಥಗಳ ಮೂಲಕ ನಾಡಿನಲ್ಲಿ ಸಾಕಷ್ಟು ಹೆಸರುವಾಸಿಯನ್ನು ಪಡೆದಿದ್ದಾರೆ. ಕನ್ನಡ ಸಾಮಾಜಿಕ ಜೀವನವನ್ನು ಸೂಕ್ಷ್ಮದೃಷ್ಟಿಯಿಂದ ನೋಡಿ, ರಸಮಯವಾಗುವಂತೆ ರೇಖಿಸುವ ಇವರ ಲೆಕ್ಕಣಿಕೆಯಿಂದ 'ನಿಸರ್ಗ' 'ರಾಷ್ಟ್ರಪುರುಷ' 'ಶೋಕಚಕ್ರ' 'ರಾಮಣ್ಣ ಶಾಸ್ತ್ರಿರು' ಮೊದಲಾದ ಸಾಮಾಜಿಕ ಕಾದಂಬರಿಗಳೂ ಎರಡು-ಮೂರು ಕಥಾಸಂಕಲನಗಳೂ ಪ್ರಕಟವಾಗಿವೆ. 'ಅಂಬಿಕಾತನಯದತ್ತ' ಮತ್ತು 'ಸಾಹಿತ್ಯಕಲೆ' ಎಂಬ ವಿಮರ್ಶಾತ್ಮಕ ಗ್ರಂಥಗಳನ್ನು ಬರೆದು ಪ್ರಕಟಿಸಿರುವರಲ್ಲದೆ, ಮೊನ್ನೆ ಮೊನ್ನೆಯೆ ೧೦೦೦ ಪುಟಗಳನ್ನೊಳಗೊಂಡ 'ಜೈನಧರ್ಮ' ಎಂಬ ಮಹಾಗ್ರಂಥವೊಂದನ್ನು ಬರೆದು ಬೆಳಕಿಗೆ ತಂದಿದ್ದಾರೆ. ಇವರು ನಮ್ಮ ಮೇಲಾಟದಲ್ಲಿ ಭಾಗವಹಿಸಿದುದು ಸಂತೋಷದ ಸಂಗತಿ.

೨ ತಿಮುತೀಮುತ್ತು (೨ ನೆಯ ಬಹುಮಾನ)

ಇದನ್ನು ಬರೆದ ಎಸ್. ಎಸ್. ಚುಳಕಿಯವರು ವಿಜಾಪುರದ ನಿವಾಸಿಗಳು. ಪ್ರಾಥಮಿಕ-ಮಾಧ್ಯಮಿಕ ಶಿಕ್ಷಣಗಳನ್ನು ಅಲ್ಲಿಯೆ ಮುಗಿಸಿ, ಅಲ್ಲಿಯ ವಿಜಯ ಕಾಲೇಜಿನಲ್ಲಿಯೆ ಉಚ್ಚಶಿಕ್ಷಣ ಪಡೆದು, ಬಿ. ಎ. (ಆನರ್ಸ್) ಪದವಿಯನ್ನು ಸಂಪಾದಿಸಿದ್ದಾರೆ. ಉದಿತೋದಿತ ಕನ್ನಡ ಕತೆಗಾರರಿರುವರು. ಈ ಮೊದಲೇ ಜಯಂತಿಯಲ್ಲಿ ಇವರದೊಂದು ಕತೆ ಪ್ರಕಟವಾಗಿದೆ. ಕತೆಯನ್ನು ಮೇಲಾಟಕ್ಕೆ ಕಳುಹುವಾಗ ಇವರು ಕಾರವಾರದ ಗವರ್ನ್‌ಮೆಂಟ್ ಹೈಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಈಗ ಬಿ. ಟಿ. ಪರೀಕ್ಷೆಗಾಗಿ ಓದುತ್ತಿರುವರು.

೩ ಹೊಸ ಬೆಳಕು (೩ ನೆಯ ಬಹುಮಾನ)

ಈ ಕತೆಯನ್ನು ಬರೆದವರು ಶ್ರೀ. ವೆಂಕಟೇಶ ಜೋಶಿ ಅವರು. ಮೆಟ್ರಿಕ್ ಪರೀಕ್ಷೆಯು ಮುಗಿದೊಡನೆಯೆ ಸೈನ್ಯದಲ್ಲಿ ಸೇರಿಕೊಂಡು ಭಾರತದ ಎಲ್ಲ ಭಾಗಗಳನ್ನೂ ಸುತ್ತಿರುವರಲ್ಲದೆ, ಕಳೆದ ಮಹಾಯುದ್ಧದ ಕಾಲದಲ್ಲಿ ಬ್ರಹ್ಮದೇಶ, ಮಲಯಾಗಳ ಯುದ್ಧಮುಖದಲ್ಲಿ ಪ್ರತ್ಯಕ್ಷ ಹೋರಾಟದಲ್ಲಿದ್ದು, ಯುದ್ಧಕ್ಷೇತ್ರದ ವಿವಿಧಾನುಭವಗಳನ್ನೂ ಪಡೆದುಕೊಂಡಿದ್ದಾರೆ. ಇವರ ಹಲವು ಸಣ್ಣ ಕತೆಗಳು ಅಲ್ಲಲ್ಲಿ ಪತ್ರಿಕೆಗಳಲ್ಲಿ ಅಚ್ಚಾಗಿರುವುವಲ್ಲದೆ, ಧಾರವಾಡದ ಸಮಾಜ ಪುಸ್ತಕಾಲಯದವರು, ಇವರ ಕತೆಗಳದೊಂದು ಸಂಕಲನವನ್ನು ಈ ಮೊದಲೇ ಪ್ರಕಟಿಸಿದ್ದಾರೆ; ಇನ್ನೊಂದು ಸಂಕಲನವನ್ನೂ ಪ್ರಕಟಿಸುವುದರಲ್ಲಿದ್ದಾರೆ. ಇವರ ನಾಲ್ಕಾರು ಸಣ್ಣ ಕತೆಗಳು ಜಯಂತಿಯಲ್ಲಿಯೂ ಅಚ್ಚಾಗಿದ್ದು, ಜನಪ್ರೀತಿಗೆ ಪಾತ್ರವಾಗಿವೆ. ಸದ್ಯ ಇವರು ಧಾರವಾಡದಲ್ಲಿ ದಕ್ಷಿಣ ಭಾಗದ ವಿದ್ಯಾಧಿಕಾರಿಗಳ ಕಚೇರಿಯಲ್ಲಿ ಕಾರಕೂನರಾಗಿ ಕೆಲಸ ಮಾಡುತ್ತಿರುವರಲ್ಲದೆ, ಕಾಲೇಜಿನ ಪದವೀ ಪರೀಕ್ಷೆಗಾಗಿ ಅಭ್ಯಾಸವನ್ನೂ ನಡೆಯಿಸಿದ್ದಾರೆ.

ಮಿಕ್ಕ ಒಳ್ಳೆಯ ಕತೆಗಳು

೧ ಲಚ್ಚಣ್ಣನ ಲಾಟರಿ

ಲೇಖಕರು ಶ್ರೀ. ಚಿದಾನಂದ ಕುಲಕರ್ಣಿ ಬಿ. ಎ. ಇವರು ಧಾರವಾಡದ ಬಾಸೆಲ್ ಮಿಶನ್ ಹೈಸ್ಕೂಲಿನಲ್ಲಿ ಶಿಕ್ಷಕರಾಗಿರುವರು. ಕವಿಗಳು, ಕತೆಗಾರರು. ಜಾಗತಿಕ ಕಥಾಸ್ಪರ್ಧೆಯಲ್ಲಿ ಇವರು ಭಾಗವಹಿಸಿದ್ದರು. ಕನ್ನಡ ಭಾಷೆಯ ಕತೆಗಳಲ್ಲಿ ಇವರ ಕತೆ ಮೂರನೆಯ ಕ್ರಮಾಂಕದಲ್ಲಿ ನಿಂತು, ಬಹುಮಾನವನ್ನು ಪಡೆದಿದೆ.

೨ ಪಾಪದ ಪಿಂಡ

ಮೇಲಾಟದಲ್ಲಿ ೨ ನೆಯ ಬಹುಮಾನವನ್ನು ಪಡೆದಿರುವ ಶ್ರೀ. ಎಸ್. ಎಸ್. ಚುಳಕಿ ಬಿ ಎ (ಆನರ್ಸ್) ಅವರೇ ಬರೆದ ಇನ್ನೊಂದು ಕತೆಯಿದು.

೩ ಅವಳೇ ಇವಳು

ಲೇಖಕರು ಶ್ರೀ ಎಲ್. ವಿ ಸೂರಣಗಿ, ಧಾರವಾಡ

೪ ತಿರುಗಿ ತಿರುಪೆಗೆ

ಲೇಖಕರು : ಶ್ರೀ. ದೊಡ್ಡಮನೆ ಸೀತಾರಾಮು, ಚಿತ್ರದುರ್ಗ.

೫ ಬೀರಣ್ಣ

ಲೇಖಕರು ಶ್ರೀ. ಜಿ. ಶಂಕರಭಟ್ಟ, ಮಂಗಳೂರು.

ಇವೈದು ಕತೆಗಳನ್ನು ಜಯಂತಿಯಲ್ಲಿ ಪ್ರಕಟಿಸಲು ಲೇಖಕರ ಒಪ್ಪಿಗೆಯಿದೆಯೆಂದು ನಮ್ಮ ಭರವಸೆ. ಒಪ್ಪಿಗೆಯಿಲ್ಲದವರು ಆದರಂತೆ ಬರೆದು ತಿಳುಹಿದರೆ, ಅವರ ಕತೆಗಳನ್ನು ಮರಳಿ ಕಳುಹಲಾಗುವುದು.

ಮೇಲಾಟದಲ್ಲಿ ಭಾಗ ವಹಿಸಿದ ಕತೆಗಾರರಿಗೆಲ್ಲ ನಮ್ಮ ಹೃತ್ಪೂರ್ವಕ ವಂದನೆಗಳು. ಬಹುಮಾನ ಪಡೆದ ಮೂವರಿಗೂ ಧನ್ಯವಾದದ ಸಲುವಳಿ.

ಮೇಲಾಟಕ್ಕೆ ಕಳುಹಿದ ಮಿಕ್ಕ ಕತೆಗಾರರಿಗೆ ತಂತಮ್ಮ ಕತೆಗಳು ಮರಳಿ ಬೇಕಾಗಿದ್ದರೆ, ಪತ್ರ ಬರೆದು ತರಿಸಿಕೊಳ್ಳಬೇಕು.

ನಾಜುಕದ ನಾರಿ

(ಒಂದು ನಲ್ವಾಡು)

' ಆನಂದಕಂದ '

卐

ನಾಜುಕದ ನಾರಿ, ರೋಹಿಣೀ ತಾರಿ, ನಿಂತಾಳ ಮಾಳಿಗೀ ಏರಿ:
ನೋಡ್ತಾಳ ಯಾರದೋ ದಾರಿ, ದೂರ ನೋಟ ಬೀರಿ ಕೊರಳ ಮಾಡಿ ವಾರಿ!
ಸುರಲೋಕದಿಂದಿಳಿದ ರಂಬಿ, ಸೂತ್ರದ ಗೊಂಬಿ ಹಾಂಗ ನಗಿಮಾರಿ;
ಬೆರಗಾಗಿ, ತಾನು ಶಿರಬಾಗಿ ನಿಲ್ಲಬೇಕು ಇವಳ ಮುಂದ ಶ್ರೀಗೌರಿ!

೧

ಹದಿನಾರು ಮೀರಿದ್ದರೆ ಭಾರ ಸುತ್ತುಮುತ್ತ
ತೂರತದ ಶೃಂಗಾರಾ;
ನಿಲುವಿಕೆಗೆ ಒಂದು ಹದದಳತೆ, ಬೆಡಗು ಹೊಸ-
ರೀತಿಯಲಂಕಾರಾ!
ನಿಡುಗೂದಲೆಸಳಿನಾ ತಲಿ, ಎಡಕ ಬೈತಲಿ,
ಎರಡು ಕಡೆ ಹೆಳಲು—
ಬೆನ್ನಗುಂಟ ಇಳಿಬಿದ್ದು ಸೊಂಟ ದಾಟಿ ಹೋಗಿ
ತಟ್ಟುತಾವ ಮೊಣಕಾಲು!
ತುದಿಹೆಳಲ ರೇಶಿಮೀ ಗುಚ್ಛ, ಕಣ್ಗೆ ಬಲು ಮೆಚ್ಚು
ಹಿಡಿಸತದ ಹುಚ್ಚು!
ಎಡಬಲಕ ತೂಗಿ ಬಿನ್ನಾಣತೀವ ಹೊಸ-
ಯುಗದ ಬೆಡಗಿನೊಂದಚ್ಚು!
ಮುರಿ-ಮುರಿಗಿಗೊಂಡು ಮುಂಗುರುಳ ಹಿಂಡು ಹಣೆ-
ಮ್ಯಾಗ ನಿಲ್ಲಿಸ್ಯಾವ ಸುಂದರಾ!
ಕುರುಳೊಳಗ ಅಡಗಿದರಗಿಮಿಯ ತೀಗ ಅದು
ಏನು ಮಿಂಚಿನಾಕಾರಾ?
ಉಟ್ಟ್ಯಾಳ ಹಸಿರು ಪತ್ತಲಾ—
ಪತ್ತಲಲ್ಲ ಹೂವಿನ್ನಿತ್ತಲಾ!
ತೊಟ್ಟ್ಯಾಳ ಕುಬಸ ತೋಳಿಲ್ಲಾ—
ಮುತ್ತಿನ್ಹಾಂಗ ಬಣ್ಣ ಥಳಥಳಾ!
ದುಂಡುದೋಳಿನ ಚೆಂದಕ್ಕ ಕೊಸರು ಕುಪ್ಪಸದ
ಕುಸುರು-ಕುಸುರಿನಂಚು—
ನೋಡವರ ಬಾಳ ಮೀನಕ್ಕ ಗಾಳ ಹಾಕಿ
ಕಾಯುತದ ಅದು ಹೊಂಚು!

೨

ದುಂಡ ಮುಖಾ ಅಲ್ಲ, ತೆಳುವಾದ ಗಲ್ಲ, ಅದ
ಕೊಪ್ಪವಂಥ ಕೊನಿಮೂಗು;
ಮುಚ್ಚಾದ ಬಾಯಿ ಚೆಂದುಟಿಯ ತಾಯಿ, ಅದು
ನಕ್ಕರೊಂದು ಸವಿಸೋಗು!
ಎಳಸಾದ ಗದ್ದ ಅದು ಥಾಳ ಸುದ್ದ, ಕೊರ-
ದ್ಹಾಂಗ ಕರಿಯ ಕುಡಿಹುಬ್ಬು;
ಕಣಗಣ್ಣು ಎತ್ತ ನೋಡ್ತಾವ ಅತ್ತ ಕೋಲ್-
ಮಿಂಚಿನ ಬಳ್ಳಿಯ ಹಬ್ಬ!
ಹಿಂದೆಂದೊ ನಾನು ಕಂಡಾಗ, ಹುಡುಗಿ ಇವಳಾಗ,
ನ್ಯಾಯಿ ಬಳಬಳಕು;
ಇಂದೀಗ ನೋಡಿದರ ಎಷ್ಟು ಬದಲು?
ಎಲ್ಲಿಂದ ಬಂತೋ ಈ ಥಳಕು?
'ಇಷ್ಟು ಯಾರ ಕೈಯು ಹಿಡಿದಿಲ್ಲ, ಮಾಲಿಹಾಕಿಲ್ಲ,
ಗೊತ್ತು ನನಗೆಲ್ಲಾ;
ಆದರೂ ನಿಂತು ಈಕಿ ಯಾರನಿಂತು ಕಾ-
ಯುವಳೋ ಶಿವನೆ ಬಲ್ಲಾ!
ಕಣ್ಣಾಗ ಮೂಡತದ ಬಯಕಿ—
ಮಾರಿ ಮ್ಯಾಗ ಎದಿಯ ಹಾರಯಿಕಿ!
ಏನೇನೊ ನೆನಪು—ತಿಳಿವಳಿಕಿ—
ಕೆನ್ನಿಗೇರತದ ನಾಚಿಕಿ!
ಒಂದನರೇ ನೋಡ್ಲಿ, ಯಾರ ದಾರಿ ಕಾಯ್ಲಿ, ನನ
ಗ್ಯಾತಕ ಬೇಕಿದು ಎಲ್ಲಾ?
ಹಿಂಗಂದುಕೊಂಡು ನಾ ಸುಮ್ಮಗಿದ್ದರೂ
ಮನಸು ಸುಮ್ಮಗಿರದಲ್ಲಾ!

ನಾಜುಕದ ನಾರಿ, ರೋಹಿಣೀ ತಾರಿ, ನಿಂತಾಳ ಮಾಳಿಗೀ ಏರಿ—
ನೋಡ್ತಾಳ ಯಾರದೋ ದಾರಿ. ದೂರನೋಟ ಬೀರಿ, ಕೊರಳ ಮಾಡಿ ವಾರಿ!

ಒಗಟು

(ಸಣ್ಣ ಕತೆ)*

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

卐

ಮಾನವನ ಬದುಕಿನಲ್ಲಿ ಅಜ್ಞಾನವೆಂಬುದು ಸತ್ಯದ ಮೇಲೆ ದಟ್ಟವಾದ ತೆರೆಯನ್ನು ಹಾಕುತ್ತದೆ. ಈ ಅಜ್ಞಾನದ ತೆರೆಯೇ ಅವನ ಜೀವನದ ಕಷ್ಟ-ನಷ್ಟಗಳಿಗೆ ಕಾರಣವಾಗುತ್ತದೆ. ಬಸಪ್ಪನ ಹಣ ಎಲ್ಲಿ ಹೋಗಿದೆಯೆಂಬುದು ತಿಳಿದುಬಿಟ್ಟಿದ್ದರೆ!

卐

"ಅವರಲ್ಲಿ ಪೆಟ್ಟಿಗೆಯನ್ನು ಇಡಬಾರದಿತ್ತೇನೋ ನಾನು....! ಛೀ! ಇಲ್ಲದ ಸಂಶಯ....! ಅವರಂಥವರ ಮೇಲೆ....! ಆದರೆ.... ಎಂಥ ವಿಶ್ವಾಸಿಕರಿದ್ದರೇನಾಯಿತು....! ಹಣವೆಂದರೆ ಹೆಣವೂ ಬಾಯಿ ಬಿಡುವುದು. ಆದರಲ್ಲೂ ಹೆಂಗುಸರ ಮನಸ್ಸು ಬಹು ಹಗುರು....! ಸತ್ಯಣ್ಣ ಬೇರೆ ನನ್ನ ಕೂಡ ಬಂದಿದ್ದ....ಏನಾಗಿರುವುದೋ ಏನೋ....!

ಹಾಗೇನಾಗಲಿಕ್ಕಿಲ್ಲ ಬಿಡು....!

ಅಂದರೂ ಪೆಟ್ಟಿಗೆಯಲ್ಲಿ ಏಳೆಂಟು ನೂರು ರೂಪಾಯಿಗಳು....!

ಇಷ್ಟು ಹಣವು ಒಮ್ಮೆಲೇ—ಏನೂ ದುಡಿಯದೆ—ಸಿಗುವಂತಿದ್ದರೆ ಹೂಡು ಬಿಟ್ಟಾರು! ದುಡ್ಡಿನ ಗಂಟನ್ನಷ್ಟು ಎತ್ತಿ ಹಾಕಿಬಿಟ್ಟಿದ್ದರೆ....! ಅಂ! ನನ್ನ ಇಡೀ ಬಾಳಿನ ಆಸ್ತಿಯೇ ಹೋಗಿ ಬಿಟ್ಟಿತಲ್ಲ....! ಹುಚ್ಚ! ಅಂಥದನ್ನು ಇನ್ನೊಬ್ಬರಲ್ಲಿ ಇಟ್ಟು ಎರಡು ದಿನ ಊರಿಗೆ ಹೋಗಿದ್ದೆ ನಾನು!

ಹಿಂದೆಯೂ ಅನೇಕ ಸಲ ಹೋಗಿದ್ದೆನಲ್ಲ....! ಇರಲಿ....!

ಆದರೆ ಏನು ಹೇಳಲಿಕ್ಕೆ ಬರುವುದು....! ನಮ್ಮ ಬೆನ್ನು ನಮಗೆ ಕಾಣುವುದೇ....?"

ಮನಸ್ಸಿನ ಈ ಹೊಯ್ದಾಟದಲ್ಲಿಯೇ ಬಸಪ್ಪನ ಕೈಗಳು, ಅದಾವಾಗಲೋ ಗುಡಿಸಿಲಿನ ಬಾಗಿಲನ್ನು ನೂಕಿದ್ದುವು. ಬಿದುರಿನ ಮುರುಕು ಬಾಗಿಲದು! ಕೊರ್ರೆಂದು ಸದ್ದು ಮಾಡಿ ತೆರೆಯಿತು. ಆ ಸದ್ದಿಗೆ ಒಳಗೆ ಮಲಗಿದ ಹುಡುಗ ಮಿಸುಕಾಡಿದ; 'ಖಸ-ಪಸ' ಸಪ್ಪಳವಾಯಿತು. 'ಸುದ್ದಿಯಿಲ್ಲದ ಹುಡುಗ, ಒಳ ಚಿಲಕವನ್ನೂ ಹಾಕಿಕೊಳ್ಳದೆ ಮಲಗಿಬಿಟ್ಟಿರುವ. ಮೈಮೇಲೆ ಹೊತ್ತುಕೊಂಡಿರುವ ಹಚ್ಚಡವನ್ನೂ ಯಾರಾದರೂ ಎಳೆದೊಯ್ದರೂ ಎಚ್ಚರವಿರುವುದಿಲ್ಲ-ಹುಡುಗನಿಗೆ. ಬಾಗಿಲ ಚಿಲಕ ಹಾಕಿಕೊಳ್ಳಬಾರದೇ? ಹೋಗುವಾಗ ಎಷ್ಟು ಹೇಳ ಹೇಳಿ ಹೋಗಿರುವೆ' ಎಂದುಕೊಂಡ ಬಸಪ್ಪ.

* ಜಯಂತಿ ಸಣ್ಣ ಕತೆಯ ಮೇಲಾಟದಲ್ಲಿ ಮೊದಲನೆಯ ಬಹುಮಾನ ಪಡೆದ ಕತೆಯಿದು.

ಸಂ. ಜ.

ಇನ್ನೂ ಗುಡಿಸಿಲಿನಲ್ಲಿ ಕತ್ತಲೆ! ಏನೂ ಕಾಣದು. ಮೆಲ್ಲನೆ ತನ್ನ ಅಂಗಿಯ ಜೇಬಿನೊಳಗಿನ ಕಡ್ಡಿಯ ಪೆಟ್ಟಿಗೆಯನ್ನು ತೆಗೆ[illegible] ನೋಡಿದ ಬಸಪ್ಪ. ಮೈಮೇಲೆ ಅರಿವಿಲ್ಲದೆ ಹಾಸಿಗೆಯಿಂದ [illegible] ಹೊರಳಿ, ಅಸ್ತವ್ಯಸ್ತವಾಗಿ ಮಲಗಿರುವ ಮಗ, ತಲೆಯದಿಶೆಯಲ್ಲಿ ಉರುಳಿದ ಗುಬ್ಬಿ, ಹತ್ತಿರವೇ ಕಲ್ಲೆಣ್ಣೆಯಿಂದ ನೆನೆದ ಮುಂದ ಕಡ್ಡಿಯ ಪೆಟ್ಟಿಗೆ. ಒಲೆಯ ಕಡೆಗೆ ಏನೋ 'ಕುಡು ಕುಡು' ಸದ್ದಾಗುತ್ತಿದೆ. ಕಡ್ಡಿಯ ಬೆಳಕನ್ನು ಕಂಡು, ಮುಸುರೆಯ ಮಡಕೆ ನೆಕ್ಕುವುದನ್ನು ಬಿಟ್ಟು, ನಾಯಿಯೊಂದು ಹೊರಗೆ ಓಡಿತು. ಹಾಗೇ ಬಸಪ್ಪ ಒಳಗೆ ಹೋಗಿ, ಗುಬ್ಬಿಯನ್ನು ಎತ್ತಿಟ್ಟು, ದೀಪ ಹೊತ್ತಿಸಿದ. ಹೊತ್ತುಕೊಂಡ ಕಂಬಳಿಯನ್ನು ನೆಲಕ್ಕೆ ಒಗೆದು, ಅದರ ಮೇಲೆ ಕುಳಿತ. ತೆರೆದ ಬಾಗಿಲ ಕಡೆಗೊಮ್ಮೆ ನೋಡಿದ. ಹೊರಗಿನ ಮಂದ ಬೆಳಕು ಗುಡಿಸಿಲಿನಲ್ಲಿ ನುಗ್ಗಲು ಯತ್ನಿಸುತ್ತಿತ್ತು; ಅದನ್ನು ಅಲ್ಲಗಳೆಯುತ್ತಿತ್ತು—ಇವನ ಎದುರಿಗಿರುವ ಎಣ್ಣೆ ತೀರಿದ ದೀಪದ ಬೆಳಕು. ಗುಡಿಸಿಲಿನ ಬಾಗಿಲಲ್ಲಿ ಎರಡರಲ್ಲೂ ಕದನವೇ ಆರಂಭವಾದಂತಿತ್ತು. ಏನೋ ವಿಚಾರಿಸಿ. ಬಸಪ್ಪ ಚಟ್ಟನೆ ಎದ್ದು ಬಾಗಿಲ ಹಾಕಿ ಬಂದ; ಮೆಲ್ಲನೆ ಜೇಬಿನೊಳಗಿನ ತಂಬಾಕಿನ ಚೀಲವನ್ನು ಹೊರದೆಗೆದ. ಅದರ ಕಟ್ಟನ್ನು ಸಡಲಿಸಿ, ನೋಟಿನ ಸುರುಳಿಯನ್ನು ದೀಪದ ಬೆಳಕಿಗೆ ತೆಗೆದು ಎಣಿಸಿದ. ಒಂದು, ಎರಡು, ಮೂರು, ನಾಲ್ಕು ನೋಟುಗಳು! ನಲವತ್ತು ರೂಪಾಯಿ! ಇನ್ನೊಮ್ಮೆ ಎಣಿಸಿದ! ನಾಲ್ಕೇ ನೋಟುಗಳು! ಆ ಮೇಲೆ ತಲೆಯ ಮೇಲಿನ ಹರಕು ರುಮಾಲಿನ ಸೆರಗು ಬಿಚ್ಚಿದ; ಅದರಲ್ಲಿ ಕಟ್ಟಿದ ನೋಟುಗಳನ್ನು ಬಿಚ್ಚಿದ. ಎಣಿಸಿದ. ಆರು ನೋಟುಗಳು! ಅರುವತ್ತು ರೂಪಾಯಿಗಳು! ಎರಡೂ ಕೂಡಿಸಿ ಇನ್ನೊಮ್ಮೆ ಎಣಿಸಿದ. ಹತ್ತು ರೂಪಾಯಿಯ ಹತ್ತು ನೋಟುಗಳು! ನೂರು ರೂಪಾಯಿ! ಬಸಪ್ಪನ ಮುಖ ಅರಳಿತು. ಆ ವರ್ಷ ಸುಗ್ಗಿಯಲ್ಲಿ ತಾನೂ ತನ್ನ ಮಗನೂ ಕೂಡಿ ದುಡಿದು ಗಳಿಸಿದ ಹಣವದು. ಇದೀಗ ಆ ಕಾಳುಕಡಿಗಳನ್ನೆಲ್ಲ ಮಾರಿ ಬಂದಿದ್ದ. ನೆರೆಯ ಪೇಟೆಯಾದ ಸಂಗವಳ್ಳಿಗೆ ಸತ್ಯಣ್ಣನ ಬಂಡಿಯನ್ನು ಹೂಡಿಸಿಕೊಂಡು ಹೋಗಿದ್ದ. ನೂರು ನೂರೈವತ್ತು ರೂಪಾಯಿಗಳ ಸತ್ಯಣ್ಣನ ಧಾನ್ಯವನ್ನೂ ಮಾರುವುದಿತ್ತು. ಆದರಿಂದ ಸತ್ಯಣ್ಣನಿಗೆ ಬಸಪ್ಪ ಅರ್ಧಬಂಡಿಯ ಬಾಡಿಗೆ ಕೊಟ್ಟರೆ ತೀರಿತು. ಅದಕ್ಕಾಗಿ ಇನ್ನೂ ಎರಡು ರೂಪಾಯಿಗಳು ಬೇಕಾಗಿದ್ದುವು. ಎಂದರೆ ಈ ನೂರರ ಗಂಟು ಹಾಗೇ ಉಳಿಯುವುದು. ಬಸಪ್ಪನ ಈ ಲೆಕ್ಕವೂ ಸರಿ ಹೊಂದುವಂತೆಯೇ ಇತ್ತು. ತಂಬಾಕಿನ ಚೀಲ—ಧೋತರದಲ್ಲಿ ಕಟ್ಟಿ ನಡುವಿಗೆ ಸಿಕ್ಕಿಸಿದ ಚಿಲ್ಲರೆಗಳನ್ನೆಲ್ಲ ಶೋಧಿಸಿ, ಕೂಡ ಹಾಕಿದ. ಒಂದು ರೂಪಾಯಿ ಹದಿನೈದು ಆಣೆಗಳಾದುವು ಮಾತ್ರ! ಮತ್ತೆಲ್ಲೆಲ್ಲಿ ಹುಡಿಕಿದರೂ ದುಡ್ಡು ಸಿಕ್ಕ-



ಲಿಲ್ಲ ಮತ್ತೆ ಎಣಿಸಿದ. ಅಷ್ಟೆ. ಮತ್ತೂ ಎಣಿಸಿದ. ಮೊದಲಿದ್ದಷ್ಟೆ! 'ಇರಲಿ; ಇವುಗಳನ್ನಷ್ಟೇ ಕೊಟ್ಟು, ನನ್ನ ಪೆಟ್ಟಿಗೆ ಇಸಿದುಕೊಂಡು ಬಂದುಬಿಡಬೇಕು, ಒಂದಾಣೆ ಹಿಂದಿನಿಂದ ಕೊಟ್ಟರಾಯಿತು !'

ಪೆಟ್ಟಿಗೆಯ ನೆನಪಾದೊಡನೆಯೇ ದಿಗ್ಗನೆ ಎದ್ದು ನಿಂತ ಬಸಪ್ಪ. ಹೊರಗೆ ಇನ್ನೂ ಬೆಳಕು ಹರಿದಿರಲಿಲ್ಲ. ಸತ್ಯಣ್ಣ ಇದೀಗ ಎದ್ದಿರಬೇಕು. ಇನ್ನೂ ಮಲಗಿರಲಿಕ್ಕಿಲ್ಲ. ಕೋಳಿ ಕೂಗಿತು. ಇನ್ನೇನು ಮಲಗುವ? ಬೆಳ್ಳಬೆಳತನಕ ನಿದ್ದೆಕಾಯ್ದು ಬಂಡಿ ಹೊಡೆವಿಗುವ. ಅದಕ್ಕೆ ಮೈ ಸಡಿಲಾಗಲೆಂದು ಹೊರಳಿದ್ದರೆ ಹೊರಳಿರಬೇಕು. ಏನಿದ್ದರೇನು ? ನನ್ನ ಪೆಟ್ಟಿಗೆ ನಾನು ಬೇಡಿ ತರಲಿಕ್ಕೇನು ಬಂತು ?— ಎಂದು ಹೊರಟೊರಟ. ಬಾಗಿಲ ವರೆಗೆ ಬಂದು ಗುಡಿಸಿಲಿನ ಕಡೆಗೆ ಹೊರಳಿ ನೋಡಿದ. ಕಿರುದೀಪ ಒಳಗೆ ಉರಿಯುತ್ತಿತ್ತು. ಸುಮ್ಮನೆ ಎಣ್ಣೆ ಸುಡುವುದಲ್ಲ— ಎಂದು ತಿರುಗಿ ಒಳಗೆ ಹೋಗಿ ದೀಪ ಆರಿಸಿದ. ಹಾಗೆಯೇ ಕತ್ತಲೆಯಲ್ಲಿ ತನ್ನ ಅಂಗಿಯ ಜೇಬಿಗೆ ಕೈ ಹಚ್ಚಿ ನೋಡಿಕೊಂಡ. ನೋಟುಗಳ ಕಟ್ಟು ಕೈಗೆ ಹತ್ತಿತು. ಮನಸ್ಸು ಅರಳಿತು. ಈ ನೂರು ! ಆ ಎಂಟು ನೂರು ! ಬೇಕಾದ ಹಾಗೆ ಎರಡು ಎಕರೆ ಹೊಲ ಬರುವುದು !

ಆ ಮೇಲೇನು ? ನನ್ನ ಹೊಲದಲ್ಲಿ ನಾನು ದುಡಿಯುವೆ. ಬೆಳೆ ಮಾಡುವೆ, ಹರಗುವೆ, ಸ್ವಂತ ಹೊಲ ! ದಿನಾಲು ಇನ್ನೊಬ್ಬರಲ್ಲಿ ದುಡಿಯಲು ಹೋಗಬೇಕಾದುದಿಲ್ಲ ಇನ್ನು ... !

ಸತ್ಯಣ್ಣನಲ್ಲಿಯೂ ನನಗಿಂತ ಹೆಚ್ಚು ಹಣವಿರಬೇಕು. ಗಂಡ-ಹೆಂಡಿರಿಬ್ಬರೂ ದುಡಿಯುವವರು. ಜೊತೆಗೆ ಬಂಡಿ-ಎತ್ತುಗಳ ಗಳಿಕೆ ಬೇರೆ. ಇಲ್ಲಿಯ ವರೆಗೆ ಯಾವ ಹೆಚ್ಚಿನ ವೆಚ್ಚವೂ ಇಲ್ಲ. ಈಗಂತೂ ಹುಡುಗ ದೊಡ್ಡವನಾಗಿದ್ದಾನೆ. ಅವರೂ ಸದ್ಯದಲ್ಲಿ ಹೊಲ ಕೊಳ್ಳಬಹುದು. ಕೊಳ್ಳುವ ವಿಚಾರದಲ್ಲಿಯೇ ಇರುವುದಾಗಿ ಅವನೂ ಅನ್ನುತ್ತಿದ್ದ— ಇರುಳು ಬಂಡಿಯಲ್ಲಿ.

ನನ್ನ ಹೆಂಡತಿ ಮಲಗಿದಾಗ ವೈದ್ಯರಿಗೆ ಹತ್ತೆಂಟು ರೂಪಾಯಿಗಳನ್ನು ವೆಚ್ಚಮಾಡಿದೆ; ಹುಡುಗ ಚೆನ್ನಾಗಿ ದುಡಿಯುವುದಿಲ್ಲ. ಒಮ್ಮೊಮ್ಮೆ ಕೆಲಸವನ್ನೂ ತಪ್ಪಿಸುವ. ನಾನೊಬ್ಬನೇ ದುಡಿಯಬೇಕು. ಆದರೂ ಇಷ್ಟು ಹಣ ಕೂಡಿಸಿರುವೆನಲ್ಲ ! ಆಯಿತು. ಅವರ ದೈವ ಅವರ ಜೊತೆ ! ನನ್ನ ದೈವ ನನ್ನ ಜೊತೆ ! ಆದರೆ ಹಾಗೇನು ಆಗಲಿಕ್ಕಿಲ್ಲವಲ್ಲ !

ಬಸಪ್ಪನ ನಡಿಗೆಯಲ್ಲಿ ಅವಸರ ಉಂಟಾಯಿತು. ತಲೆ ಕೆಳಗೆ ಮಾಡಿ ನಡೆಯತೊಡಗಿದ. ಬೆಳಗಿನ ತಂಗಾಳಿ ತೀಡಿತು. ತಲೆಗೆ ತಂಪು ತಗುಲಿತು. ತಲೆಯ ಮೇಲೆ ಕೈಯಾಡಿಸಿಕೊಂಡ ಬಸಪ್ಪ. ಬರಿದಲೆ— ಬೋಳು ತಲೆ— ಕೈಗೆ ಹತ್ತಿತು. ಕೈ ಒದ್ದೆಯಾಯಿತು, ಇಬ್ಬನ್ನಿಗೆ. ಆತುರದಲ್ಲಿ, ತಲೆಯ ಮೇಲೆ ರುಮಾಲು ಹಾಕಿಕೊಳ್ಳದೆ ಹಾಗೇ ಬಂದ ಅರಿವು ಈಗ ಬಂದಿತವನಿಗೆ. ಮನಸ್ಸು ಹೊರಗೆ ಹರಿಯಿತು. ಕೆಮ್ಮಿ, ತಲೆ ಮೇಲೆತ್ತಿ ಸುತ್ತಲೂ ನೋಡಿದ. ಎಲ್ಲೆಡೆಗೂ ಹೊಗೆಮಂಜು ಆವರಿಸಿದ್ದಿತು. ಸುತ್ತಲಿನ ಗುಡಿಸಿಲುಗಳಲ್ಲಿ ತಿರುಗುವ ಬೀಸುವ ಕಲ್ಲಿನ ಸದ್ದು ಕಿವಿಯನ್ನು ಹೊಕ್ಕಿತು. ಹಂದಿಗಳ ಹಿಂಡೊಂದು 'ಡುರು ಡುರು' ಎಂದು ಹೊಲಸನ್ನು ಹುಡುಕುತ್ತ ಎದುರಿಗೇ ಓಡಿ ಬಂದಿತು. ಹಾಗೆಯೇ ಬದಿಗಾಗಿ ಸಾಗಿದ ಬಸಪ್ಪ— ಸತ್ಯಣ್ಣನ ಮನೆಯ ಕಡೆಗೆ.

ಸತ್ಯಣ್ಣನ ಗುಡಿಸಿಲಿನ ಬಾಗಿಲ ಹಾಕಿತ್ತು. ಆದರೂ ಒಳಗೆ ಸಣ್ಣ ದೀಪವೊಂದು ಮಿಣಿ ಮಿಣಿ ಉರಿಯುತ್ತಿತ್ತು. ಅದರ ಮಂದ ಪ್ರಕಾಶವು ಬಾಗಿಲ ಸಂದಿಯೊಳಗಿಂದ ಹೊರಗೆ ಇಣಿಕಿ ನೋಡುತ್ತಿತ್ತು. ಅದರ ಜೊತೆಯಲ್ಲಿಯೇ ಒಳಗೆ ಗಂಡ-ಹೆಂಡಿರು ಮಾತನಾಡುತ್ತಿರುವ ಸ್ವರವೂ, ತಡೆತಡೆದು ಹೊರಗಿನವರಿಗೆ ಕೇಳಿಸುತ್ತಿದ್ದಿತು. ಬಸಪ್ಪ ಒಂದು ಕ್ಷಣ ತಡೆದು ನಿಂತ. ಅವರ ಮಾತುಗಳನ್ನು ಕೇಳತೊಡಗಿದ :

" ಬಸಪ್ಪನ ಲೆಕ್ಕದಿಂದ ನೋಡಿದರೆ, ನಮ್ಮ ಕಾಳಿಗೆ ದುಡ್ಡು ಬರಲಿಲ್ಲ ! "

" ಬಂದುವಲ್ಲ; ಇದಕ್ಕಿಂತ ಹೆಚ್ಚಿಗೆ ಇನ್ನೆಷ್ಟು ಬರಬೇಕು ? '

" ಈ ಮೂರು ತಿಂಗಳ ದುಡಿತಕ್ಕೆಲ್ಲ ಇಷ್ಟೇ ರೂಪಾಯಿ ! ನಾಳೆ ಕಟ್ಟನೆ ಕಡಿಮೆ... ಮನೆಯಲ್ಲಿ ಒಂದು ಕಾಳನ್ನೂ ಇಟ್ಟು ಕೊಂಡಿಲ್ಲ ! ''

" ಇಂದು ಇಬ್ಬರಿಗೂ ಕೆಲಸ ಹೇಳಿಸಿಕೊಂಡಿರಬೇಕಲ್ಲ... ಸಾವುಕಾರರಲ್ಲಿ ? "

" ಇಲ್ಲ; ಇಂದು ನೀವು ಜಾಗರಣೆಮಾಡಿ ಬಂದಿರತೀರಿ. ಅಂತ ನನಗೊಬ್ಬಳಿಗೇ ಹೇಳಿಸಿಕೊಂಡಿರುವೆ. ನನ್ನ ರಟ್ಟೆಯೊಳ

ಕಸುವು ಇರುವ ತನಕ, ಹೊಟ್ಟೆಯ ಕೂಳಿಗೆ ಚಿಂತಿಮಾಡಬೇಕಿಲ್ಲ ನಾವು. ಅದರೂ ಹೇಳಿದೆ ನಾ, ಕಾಳಿಗೆ ಧಾರಣೆ ಬರಲಿಲ್ಲ ಅಂತ."

"ಆ ಮಾಸದಿಂದ ಬಸಪ್ಪನದೇ ನೆಟ್ಟಗಾಯಿತು ಸುಗ್ಗಿ! ಹುಡುಗ ತಾನು ಇಬ್ಬರೇ ದುಡಿಯುವವರು!"

"ಹುಡುಗ ಏನು ದುಡಿಯುವುದು? ಎಲ್ಲ ಬಸಪ್ಪ ಒಬ್ಬನೇ ಮಾಡುವವ. ಲಂಗೋಟಿ ಹಾಕಿಕೊಂಡು ಕೆಲಸಕ್ಕೆ ಹತ್ತಿದನೆಂದರೆ ಎರಡು ಆಳಿನ ಕೆಲಸ ಮಾಡುವ ಅವ...."

"ಇಷ್ಟು ಮಾಡಿ, ಎಲ್ಲಿ ಗಳಿಸಿದಾನು ತಗೋ!"

"ಅದೇಕೆ? ಏಳೆಂಟುನೂರು ರೂಪಾಯಿ ಮಾಡಿದ್ದಾನಲ್ಲ! ಕಮ್ಮಿದೆಷ್ಟಿದೆ?"

ಬಸಪ್ಪನಿಗೆ ಇನ್ನು ಸುಮ್ಮನಿರಲಿಕ್ಕಾಗಲಿಲ್ಲ. ನನ್ನ ಏಳೆಂಟು ನೂರು ರೂಪಾಯಿಗಳ ಲೆಕ್ಕ ಇವಳಿಗೇನು ಗೊತ್ತು? ನನ್ನ ಪೆಟ್ಟಿಗೆ ತೆರೆದಿರಬೇಕಿವಳು. ಈ ವಿಚಾರದಲ್ಲಿಯೇ ಬಸಪ್ಪ:

"ಚಂದ್ರಾ!" ಎಂದು ಕರೆದ.

"ಯಾರು? ಬಸಪ್ಪ!"

"ಹೌದು, ನಾನೇ...."

"ಬಾ, ಈಗ ನಿನ್ನದೇ ಮಾತು ನಡೆದಿತ್ತು....!

ಮಾತಿನೊಡನೆ ಬಾಗಿಲು ತೆರೆಯಿತು. ಬಾಗಿಲಲ್ಲಿ ನಿಂತುಕೊಂಡೇ ಬಸಪ್ಪ:

"ಈ ಬಾಡಿಗೆ ಲೆಕ್ಕ ತಗೋ!" ಎಂದ.

"ಇರಲಿ ಅಲ್ಲ, ಎಲ್ಲಿ ಹೋಗುವವು....ಕೊಟ್ಟೇಯಂತೆ...."

"ಒಂದಾಣೆ ಕಡಿಮೆಯಿದೆ, ಹಿಂದಿನಿಂದ ಕೊಡುವೆ...."

"ಇವು ಮೇಲೆ ಬಂದ ಚಿಲ್ಲರೆ ಏನೋ! ಇಟ್ಟುಕೊಂಡರೆ ಖರ್ಚ ಆಗಿ ಹೋಗುವುವೆಂದು ತಂದಿರುವ ಬಸಪ್ಪ. ತಗೊಳ್ಳಿರಿ!"

ಒಳಗಿನಿಂದ ಚಂದ್ರವ್ವ ಗಂಡನಿಗೆ ಹೇಳಿದಳು. ಅದೇ ಮಾತನ್ನು ಎತ್ತಿ ಸತ್ಯಣ್ಣನೂ ಕೈಯಲ್ಲಿ ತಕ್ಕೊಳ್ಳುತ್ತ,

"ಹಾದಿಯಲ್ಲಿ ಒಂದಾಣೆ ತಂಬಾಕು ಕೊಳ್ಳದಿದ್ದರೆ ಸರಿಯಾಗಿಯೇ ಇರತಿದ್ದುವು....ಅಲ್ಲ?" ಎಂದ.

"ಚಂದ್ರಾ, ನನ್ನ ಪೆಟ್ಟಿಗೆ ಅಷ್ಟ ಕೊಡುತೀಯಾ?"

"ಹೋ! ಒಯ್ಯಲ್ಲ...." ಸ್ವಲ್ಪ ತಡೆದು "ಆ ದೆವ್ವನ ಮನೆಲ್ಲಿ ಕಾಯಲಿಯಷ್ಟ ನಾನು.... ಎರಡು ದಿನ ರಾತ್ರಿ ಕಣ್ಣಿಗೆ ಕಣ್ಣು ಹಚ್ಚಿಲ್ಲ....!"

ಮಾತಿನೊಡನೆಯೇ ಪೆಟ್ಟಿಗೆಯನ್ನು ಎತ್ತಿ ತಂದು ಬಸಪ್ಪನ ಕೈಗಿತ್ತಳು.

"ಅಷ್ಟು ಕಾಯಲಿಕ್ಕೆ ಅದರೊಳಗೇನದ ಬಿಡು!"

ಎಂದು ವ್ಯವಹಾರಕ್ಕಾಗಿ ನುಡಿದು, ಪೆಟ್ಟಿಗೆ ತೆಗೆದುಕೊಂಡ ಬಸಪ್ಪ.

"ಬೇಗ ಗೀಗ ನೋಡಿಕೋ ಣ್ಣಾ

"ಹುಚ್ಚು ನಿನಗೆ!"

ಎಂದರೂ ಬಸಪ್ಪ, ಬೇಗಕ್ಕೆ ಕೈ ಹಚ್ಚಿ ನೋಡದೆ ಇರಲಿಲ್ಲ. ಆದರೂ ತೆರೆದು ಹಣದ ಹಮ್ಮಿಣಿಯನ್ನು ಕಣ್ಣಿನಿಂದ ಕಾಣುವವರೆಗೆ ಅವನಿಗೆ ಸಮಾಧಾನವಿಲ್ಲ; ಹೊರಳಿ ಅವಸರದಿಂದ ಮನೆಯ ಕಡೆಗೆ ನಡೆದ.

"ತಂಬಾಕ ಸೇದಿ ಹೋಗಲ್ಲ ಬಸಪ್ಪ...."

ಎಂದು ಸತ್ಯಣ್ಣ ಸ್ವಾಗತಿಸಿದ ಮಾತು, ಬಸಪ್ಪನ ಕಿವಿಯಲ್ಲಿಯೇ ಹೋಗಲಿಲ್ಲ. ಒಂದೇ ಸಂಶಯ ಆಗ ಅವನ ಮನಸ್ಸನ್ನು ವ್ಯಾಪಿಸಿತ್ತು:

'ನನ್ನ ರೂಪಾಯಿ ಇರುವವೋ... ಏನು ಇವರು ತಕ್ಕೊಂಡಿರುವರೋ!'

ಇಲ್ಲದಿದ್ದರೆ ಅವಳಿಗೇನು ಗೊತ್ತು, ನನ್ನ ಏಳೆಂಟು ನೂರು ರೂಪಾಯಿಗಳ ಸಂಗತಿ? ಈ ಕಾರ್ಯವನ್ನು ಗಂಡ-ಹೆಂಡಿರಿಬ್ಬರೂ ಮಸಲತ್ತು ಮಾಡಿಕೊಂಡೇ ಮಾಡಿರಬಹುದೆ? ಇರಬೇಕು. ಇಲ್ಲದಿದ್ದರೆ ಸತ್ಯಣ್ಣ ನನ್ನ ಮನೆಗೆ ಬಂದು ಕೇಳಿ ಸಂತೆಗೇಕೆ ಕರೆದುಕೊಂಡು ಹೋಗುತ್ತಿದ್ದ? ಅಲ್ಲದೆ ಬಂಡಿಯಲ್ಲಿ ಎಷ್ಟು ನಿಶ್ಚಯವಾಗಿ ತಾನು ಹೊಲ ಕೊಳ್ಳುವುದನ್ನು ನನ್ನ ಮುಂದೆ ಹೇಳಿದ! ಇರುಳೆಲ್ಲ ಅದೇ ಮಾತುಗಳನ್ನಾಡಿದ. ಆ ಮಾತಿನಲ್ಲೆಲ್ಲ ಸ್ವಲ್ಪ ಅಣಕದ ಧ್ವನಿಯೂ ಇತ್ತಲ್ಲ! ಅದು ನನ್ನನ್ನು ಉದ್ದೇಶಿಸಿಯೇ ಇರಬೇಕು....

ಪೆಟ್ಟಿಗೆಯನ್ನು ತಕ್ಕೊಂಡು ತನ್ನ ಮನೆಯನ್ನು ಮುಟ್ಟುವಷ್ಟರಲ್ಲಿ, ಹಣವನ್ನು ಚಂದ್ರವ್ವ ತಕ್ಕೊಂಡಿರುವಳೆಂದೇ ಬಸಪ್ಪ ನಿರ್ಧರಿಸಿದ. ಅದರಿಂದ ಗುಡಿಸಿಲಿನ ಬಾಗಿಲ ತೆರೆದವನೇ ದೀಪ ಹಚ್ಚುವ ಗೊಡವೆಗೆ ಹೋಗದೆ, ತೆರೆದ ಬಾಗಿಲಿನ ಮುಂದ ಪ್ರಕಾಶದಲ್ಲಿಯೇ ಪೆಟ್ಟಿಗೆಯನ್ನು ಇಟ್ಟು, ಅವಸರದಿಂದ ತೆರೆದ. ಬೀಗ ಸರಿಯಾಗಿ ಹೊರಟಿತು. ಒಳಗೆ ತಾನಿಟ್ಟಂತೆಯೇ ಎಲ್ಲ ಜಿನಸುಗಳೂ ಇದ್ದಂತೆ ಕಂಡುವು. ಆದರೂ ಸಮಾಧಾನವಿಲ್ಲ. ಮೇಲಿನ ಅರಿವೆ ಅಂಚಡಿಗಳನ್ನು ಗಡಬಡಿಯಿಂದ ತೆಗೆದು ಇಟ್ಟ; ಒಂದೆರಡು ಪಾತ್ರೆ-ಬಟ್ಟಲುಗಳನ್ನೂ ಹೊರಗೆ ತೆಗೆದ....ಒಳಗೆ ನಿರೀಕ್ಷಿಸಿದ. ಎದೆ ಧಸ್ಸೆಂದಿತು; ಹಣದ ಹಮ್ಮಿಣಿ ಅವನ ದೃಷ್ಟಿಗೆ ಬೀಳಲಿಲ್ಲ! ಕೈಯಾಡಿಸಿ ನೋಡಿದ; ಆದರೂ ಸಿಗಲಿಲ್ಲ.

ಎಲ್ಲವನ್ನೂ ಅಲ್ಲಿಯೇ ಬಿಟ್ಟು ಚಟ್ಟನೆ ಎದ್ದ ಬಸಪ್ಪ. ಇಂಥ ಆಘಾತ ಅವನಿಗೆಂದೂ—ಆಯುಷ್ಯದಲ್ಲಿ—ಒದಗಿರಲಿಲ್ಲ. ಮನಸ್ಸು ಬಧಿರವಾಗಿತ್ತು. ಏನು ಮಾಡಲಿಕ್ಕೂ ತಿಳಿಯದಾಯಿತು ಅವನ ಜೀವನದ ಬುಡಕ್ಕೇನೇ ಕೊಡಲಿಯ ಏಟು ಬಿದ್ದಂತಾಯಿತು ತಾನು ಒಕ್ಕಲಿಗನಾಗಬೇಕು, ಮಗನಿಗೆ ತುಸು ಜಮೀನು ಮಾಡಿ ಇಡಬೇಕು—ಎನ್ನುವ ಕನಸುಗಳೆಲ್ಲ ಅಳಿಸಿ ಹೋದುವು. ಮೈನಡುಗಿತು, ಬೆವತಿತು ಕಾಲುಗಳು ನಿಃಶಕ್ತವಾದುವು, ದುಃಖ ಒತ್ತರಿಸಿ ಬಂತು, ಕ್ರೋಧ ಕಣ್ಣುಗಳು ಕೆಂಪೇರಿದುವು.

ಬಸಪ್ಪ ಮೌನವಾಗಿ ಗಂಟುಮೋರೆಯಿಂದ ಬಾಗಿಲ ಕಡೆಗೆ ಎವೆಯಿಕ್ಕದೆ ನೋಡುತ್ತ ನಿಂತ. ಎದುರಿಗೊಂದು ಮುರುಕು

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ಗುಡಿಸಲು ಕಾಣಿಸುತ್ತಿದೆ. ಅವರ ಮೇಲೆಲ್ಲ. ಮಂಜು ವ್ಯಾಪಿಸಿದೆ. ಏನೋ ಒಂದು ನಿರೀಕ್ಷೆಯಿಂದ ಮಂಜು ಸ್ಥಿರವಾದಂತಿದೆ. ಅದೀಗ ನಿದಾನವಾಗಿ ಗುಡಿಸಲಲ್ಲಿ ಪ್ರವೇಶಿಸುವಂತಿದೆ. ಅದರ ಚಲನೆಯಲ್ಲಿ ವ್ಯಸನಪೂರಿತವಾದುದೊಂದು ಮೃದುಸ್ಪರ್ಶ ಎದ್ದು ತೋರುತ್ತಿದೆ. ಅದೊಂದೇ ಮಂಜಿನ ನಿನಾದ. ಅದೇ ಆ ಮೌನವನ್ನು ಭೀಕರಗೊಳಿಸುತ್ತಿದೆ, ಉಸುರುಗಟ್ಟುವಂತಿದೆ.

ಹೊರಳಿ ಮಗನ ಕಡೆಗೆ ನೋಡಿದ ಬಸಪ್ಪ. ಅವನು ನಿದ್ರೆಯಲ್ಲಿ ಹುಳುವಿನಂತೆ ಉಲುಕಾಡುತ್ತಿದ್ದಾನೆ. ಅದರಂತೆ ಬಸಪ್ಪನ ಮನಸ್ಸೂ ಉಲುಕಾಡಿತು. ಪೂರ್ವದಿಕ್ಕಿನಲ್ಲಿ ಕೆಂಪು ಹೆಚ್ಚಾಗ ತೊಡಗಿತ್ತು. ಅದರ ಚೆಂಬೆಳಕು ಬಸಪ್ಪನ ಮುಖದ ಮೇಲೆ ಹರಡಿದೆ. ಆ ಬೆಳಕು ಹೆಚ್ಚಾದಂತೆ ಅವನ ಮುಖವೂ ಕೆಂಪೇರುತ್ತ ನಡೆದಿದೆ.

ದುಡ್ಡಿಗೆ ದುಡ್ಡು ಕೂಡಿಸಿಟ್ಟು, ಒಣರೊಟ್ಟಿಯ ಮೇಲೆ ಖಾರ ನೀರು ಸೇರಿಸಿ ತಿಂದ ಆ ದಿನಗಳೆಲ್ಲ ಬಸಪ್ಪನ ಬಗೆಗಣ್ಣಿನೆದುರಿಗೆ ಸುಳಿದು ಹೋದುವು. ದೀಪ ಉರಿಸಿದರೆ ವೆಚ್ಚವಾಗುವುದೆಂದು ಒಲೆ ಉರಿಸಿ, ಬೆಂಕಿಯ ಬೆಳಕಿನಲ್ಲಿ ಉಂಡ ಇರುಳುಗಳೆಷ್ಟೋ! ಬೆಳುದಿಂಗಳಲ್ಲಿ ಕುಳಿತು, ಅನ್ಯರ ಮನೆಯ ಬಟ್ಟೆಗಳನ್ನು ಹೊಲಿದು ಕೊಟ್ಟು, ತನ್ನ ಹೆಂಡತಿ ದುಡ್ಡು ಸಂಪಾದಿಸಿದ್ದಳು. ಅವಳು ಮಗನಿಗಾಗಿ ಒಂದು ಗೇಣು ನೆಲವಿಲ್ಲದೆ ಹೋಯಿತಲ್ಲ—ಎಂದು ಕೊರಗಿ ಕೊರಗಿ ಜೀವ ಬಿಟ್ಟಳು! ಸಾಯುವಾಗ ತನ್ನ ಕೊರಳೊಳಗಿನ ಗುಳದಾಳಿಯನ್ನು ತೆಗೆದಿತ್ತಳು. ಅದನ್ನು ಮಾರಿ ಆ ಹಣದಲ್ಲಿ ಕೂಡಿಸಲು ಹೇಳಿದಳು. ಅದೆಲ್ಲ ಈಗ........

ಬಸಪ್ಪನಿಗೆ ಅಲ್ಲಿ ನಿಲ್ಲಲಿಕ್ಕೆ ಆಗಲಿಲ್ಲ. ಆ ಬಿರುಗಾಳಿಗೆ ಯಾರೂ ತಡೆಯುವಂತಿರಲಿಲ್ಲ. ಗಾಳಿಗೆ ಸಿಲುಕಿದ ರವದಿಯಂತೆ ಸತ್ಯಣ್ಣನ ಮನೆಯ ಕಡೆಗೆ ಸಾಗಿದ.

ಸುತ್ತಲಿನ ಗುಡಿಸಿಲಿನ ಬಾಗಿಲುಗಳು ಇದೀಗ ಅಲ್ಲೊಂದು ಇಲ್ಲೊಂದು ತೆರೆದಿದ್ದುವು. ಒಂದಿಬ್ಬರು ಅಂಗಳದ ಕಸಗುಡಿಸುತ್ತಿದ್ದರು. ಕೀಸರಿಡುವ ಕೂಸುಗಳ ಧ್ವನಿಯೂ ಓಣಿಯನ್ನು ಎಚ್ಚರಿಸುತ್ತಿದ್ದಿತು. ಒತ್ತರಿಸಿಬರುವ ಬೆಳಕನ್ನು ಮುಚ್ಚಲು ಆವರಿಸುವಂತೆ, ಮಂಜು ಇನ್ನೂ ಬೆಳೆಯುತ್ತಲೇ ಇತ್ತು. ಗುಡಿಸಿಲುಗಳಿಗೆ ಹೊದಿಸಿದ ರವದಿಯಿಂದ ಇಬ್ಬನ್ನಿಯ ಹನಿಗಳು ತಟಕಿಸ್ಸುತ್ತವೆ.

ಮಳೆಗಾಲದಲ್ಲಿ, ಊರ ಬೀದಿಗಳಲ್ಲಿ ಹರಿಯುವ ನೀರೆಲ್ಲ ಸೇರಿ ಕೊಳೆಯನ್ನು ತಂದು, ಈ ಓಣಿಯಲ್ಲಿ ಹಾಕಿ ಹೋಗುತ್ತಿದ್ದಿತು. ಬೇಸಗೆಯಲ್ಲಿ ಊರಿನ ಧೂಳೆಲ್ಲ ಗಾಳಿಯಿಂದ ಈ ಓಣಿಗೇ ಬರುತ್ತಿದ್ದಿತು. ಆದರಿಂದ ಬೀದಿಯಲ್ಲಿ ಅಲ್ಲಲ್ಲಿ ಕಸದ ಗುಂಪೆಗಳು ಕಾಣುತ್ತಿದ್ದುವು. ಹಾದಿಯ ಮೇಲೆಲ್ಲ ಹುಲ್ಲು ಬೆಳೆದಿದ್ದಿತು.

ಮನೆಮನೆಗಳ ಮುಂದೆಯೂ ಕಸದ ರಾಶಿಗಳು, ತಿಪ್ಪೆಯ ಗುಂಡಿಗಳು. ಅಕ್ರಮವಾಗಿ ಕಟ್ಟಿದ ಮನೆಗಳ ರೀತಿ. ಒಂದರ ಬಾಗಿಲು ಒಂದು ದಿಕ್ಕಿಗಾದರೆ, ಅದರ ಹೊಂದಿಗಿರುವ ಗುಡಿಸಿಲಿನ ಬಾಗಿಲು ಇನ್ನೊಂದು ದಿಕ್ಕಿಗೆ. ಅವುಗಳ ನಡುವೆ ಹಬ್ಬಿರುವ ದಾರಿಗೂ ದಿಕ್ಕಿಲ್ಲ, ಕ್ರಮವಿಲ್ಲ. ಅವುಗಳಲ್ಲಿ ಸಮೀಪದ ದಾರಿಯೊಂದನ್ನು ಹಿಡಿದು ಸಾಗಿದ್ದಾನೆ ಬಸಪ್ಪ.

ಐವತ್ತು ವರ್ಷದ ವಯಸ್ಸು ಆತನಿಗೆ. ಹರಕು ಗಡ್ಡ, ಉಬ್ಬಿದ ಕೆನ್ನೆ, ದಪ್ಪ ತುಟಿಯ ಗಿಡ್ಡವ್ಯಕ್ತಿ. ಮೈಮೇಲೆ ಹರಕು, ಹಳೆಯದಾದ ಕೊಳಕು ಅಂಗಿ. ಮೊಣಕಾಲ ಮೇಲೆಯೇ ಇದ್ದ ಉಟ್ಟ ಕೊಡೆಯ ಧೋತರ. ಕುಡಿದು ಅಮಲೇರಿದವರಂತೆ ಹೋಗಿ ಸತ್ಯಣ್ಣನ ಮನೆಯ ಬಾಗಿಲನ್ನು ತಟ್ಟಿದ.

"ಯಾರವರು?"

"ನಾ.... !..., ನಾ....ನೇ.... ?"

"ಬಸಪ್ಪ!"

"ಘಾ.... ತ....! ಘಾ.... ತಾ.... ತು.... ! ಘಾ.... ತ... ಮಾ.... ಡಿ.... ದಿ....ರಿ!"

"ಏನೋ....? ಏನಾಯಿತು ಬಸಪ್ಪ....! ಬಾ; ಒಳಗೆ; ಕೂಡು; ನೆಟ್ಟಗೆ ಹೇಳಲ್ಲ.... !"

ಸತ್ಯಣ್ಣ ಬಾಗಿಲ ತೆರೆದು, ಬಸಪ್ಪನ ಸ್ಥಿತಿಯನ್ನು ಕಂಡು ಕೈ ಹಿಡಿದು ಸ್ವಾಗತಿಸಿದ.

“ ಅ....ಲ್ಲೋ....ಸತ್ಯಣ್ಣ....! ನಂಬಿದವರ ಕುತ್ತಿಗೀ ಕೊಯ್ಯ ಬಾರದು ಹೀ...ಗೆ! ”

“ ಇ....ಲ್ಲೋ! ಏನಾಯಿತು ಹೇಳಲ್ಲ....! ಯಾರು ಏನು ಮಾಡಿದರು ? ”

ಸತ್ಯಣ್ಣ ಬಸಪ್ಪನನ್ನು ಕೈಯಲ್ಲಿ ಹಿಡಿದುಕೊಂಡು ಒಳಗೆ ಒಯ್ದ. ಚಂದ್ರವ್ವನೂ ಗಾಬರಿಯಿಂದ ಹತ್ತಿರ ಬಂದು ಬೆರಗಿನಿಂದ, “ ಏನು ? ಏನು ? ” ಎಂದು ಕೇಳತೊಡಗಿದಳು.

“ ಗೊತ್ತಿಲ್ಲದವಳಂತೆ ಕೇಳುವಳು ನೋಡೋ ಮತ್ತು !”

ಬಸಪ್ಪ ಸತ್ಯಣ್ಣನ ಕಡೆಗೆ ನೋಡಿ, ತಾರಸ್ವರದಲ್ಲಿ ಚೀರಿದ. ಅವನ ಕೈಯೊಳಗಿಂದ ಕೊಸರಿಕೊಂಡು ಚಂದ್ರವ್ವನ ಪಾದದ ಮೇಲೆ ಬೀಳುತ್ತ,

“ ಪರದೇಶಿ ಮಗನ ಕುತ್ತಿಗೀ ಕೊಯ್ಯಬೇಡ ತಾಯಿ! ಎದೆಯೊಳಗೆ ಉಸಿರು ಇರುವ ತನಕ ಹಂಬಲಿಸಿ ಹಂಬಲಿಸಿ ಜೀವ ಬಿಟ್ಟಳು ಆಕೆ! ಆಕೆಯ ಮಗ ಏನು-ನಿನ್ನ ಮಗ ಏನು, ಬೇರೆ ಅಲ್ಲ! ಕುಡುಗೋಲು ಕುಂಬಳಕಾಯಿ ನಿನ್ನ ಕೈಯೊಳಗೇ ಅವೆ....! ಕೊಯ್ಯಿ, ಇಲ್ಲವೆ ಉಳಿಸು! ಬೆಳೆಯುವ ಬಳ್ಳಿಯ ಕುಡಿ ಚಿವುಟಿ ಬಿಡಬೇಡ ಮಹಾರಾಯತಿ....! ನಮ್ಮವ್ವಾ !”

ಚಂದ್ರವ್ವ ಬಸಪ್ಪನ ಮಾತಿನ ಅರ್ಥವೇ ಹೊಳೆಯದಂತೆ ಇದ್ದಳು. ಅವಳಿಗೆ ಕರುಣೆಯಿಲ್ಲೆಂದು ಭಾವಿಸಿದ ಬಸಪ್ಪ. ತಿರುಗಿ ಸತ್ಯಣ್ಣನ ಪಾದಗಳ ಮೇಲೆ ಹುಚ್ಚನಂತೆ ತಲೆ ಇಟ್ಟು, ಬೇಡಿಕೊಂಡ :

“ನೀನಾದರೂ ಉಳಿಸು ಸತ್ಯಣ್ಣ! ನಿನ್ನ ಹೆಂಡತಿಗೆ ಹೇಳು....’

“ ಏನು ಹೇಳಲಿ, ಹೇಳು.... ! ”

ಭ್ರಾಂತನಾಗಿ ಸತ್ಯಣ್ಣ ನುಡಿದ. ಬಸಪ್ಪನ ಹುಚ್ಚು ಮುಖಚರ್ಯೆಯನ್ನು ಕಂಡು ಅವನೂ ಗಾಬರಿಯಾಗಿದ್ದ. ಅವನ ಎದೆಯೂ ಡವಡವ ಹೊಡೆದುಕೊಳ್ಳತೊಡಗಿತು. ಹೆಂಡತಿಯ ಮುಖದ ಕಡೆಗೊಮ್ಮೆ ನೋಡಿದ. ಅವಳೂ ಗಾಬರಿಯಾಗಿ ನಿಂತಿದ್ದಳು. ಮುಖ ನಿರ್ವಿಕಾರವಾಗಿತ್ತು, ಬಿಳುಪೊಡೆದಿತ್ತು.

“ ಕೊಡಲಿಕ್ಕೆ ಹೇಳು.... ”

“ ಏನು ?”

“ ನನ್ನ ಉಳಿದ ಎಲ್ಲ ಜೀನಸು ಇರುವಂತಿವೆ. ರೂಪಾಯಿಯ ಹಮ್ಮಿಣಿ ಮಾತ್ರ ಪೆಟ್ಟಿಗೆಯಲ್ಲಿ ಇಲ್ಲ....ಚಂದ್ರವ್ವನೇ.... ”

“ ಆಂ !”

“ ಹೌದು; ಎಲ್ಲ ಇವೆ. ಅದೇ...ಇ....ಲ್ಲ !”

“ ಯಾತರ ಆಣೆ ಮಾಡೆನ್ನುವಿ ಬಸಪ್ಪ! ನಾನು ನಿನ್ನ ರೂಪಾಯಿಯ ಚೀಲ ನೋಡಿಲ್ಲ. ನೋಡಿದವರ ಕಣ್ಣು ಹೋಗಲಿ. ಮುಟ್ಟಿದವರ ಕೈಗೆ ಮಹಾರೋಗ ಹತ್ತಲಿ...ಬೇಕಾದರೆ, ಎಣ್ಣೆ ಕಾಯಿಸಲಿಕ್ಕೆ ಇಡಿರಿ. ರವೆ ತೆಗೆಯುವೆ. ಸತ್ಯುಳ್ಳಾಕೆ ಇದ್ದರೆ ಎಣ್ಣೆ ತಣ್ಣಗೆ ಹತ್ತುತದೆ. ಹಸಿಯುದನ್ನು ಉಟ್ಟು ಯಾವ ದೇವರ ಕಟ್ಟೆಯನ್ನು ಏರೆಂದರೂ ಏರುವೆ.... ”

ಚಂದ್ರವ್ವ ಒಂದೇ ಉಸಿರಿನಲ್ಲಿ ಹೇಳಿದಳು.

“ ಈಗೆಲ್ಲ ಹೇಳಲಿಕ್ಕೆ ಬರತದ ಚಂದ್ರಾ.... !”

ಬಸಪ್ಪ ಬೆಂದ ಹೃದಯದ ಮೇಲೆ ಬರೆ ಎಳೆದ. ಸತ್ಯಣ್ಣ ಇನ್ನೂ ಸವಕಾಶವಾಗಿಯೇ ಇದ್ದ. ಉದ್ದೇಶರಹಿತ ಸ್ವರದಲ್ಲಿ ಕೇಳಿದ; ವಸ್ತುಸ್ಥಿತಿಯನ್ನು ತಿಳಿದುಕೊಳ್ಳುವ ರೀತಿಯಲ್ಲಿ ಮಾತು ಇತ್ತು.

“ ಎಲ್ಲಿಟ್ಟಿದ್ದೆ ಬಸಪ್ಪ.... ?”

“ ಪೆಟ್ಟಿಗೆಯಲ್ಲಿಯೇ ಒಂದು ಚೀಲದಲ್ಲಿ ನೋಟುಗಳನ್ನು ಹಾಕಿ ಇಟ್ಟಿದ್ದೆ.... ”

“ ಎಷ್ಟು... ?”

“ ಏಳುನೂರು ರೂಪಾಯಿಗಳ ನೋಟು ! ಚಿಲ್ಲರೆ ಜೀನಸು.... ಕಿವಿಯೊಳಗಿನ ಹೂವು ! ಗುಳದಾಳಿ.... ! ಎಲ್ಲ ಸೇರಿ ಎಂಟು ನೂರಾದೀತು.... ”

“ ಈಗ ಅದರೊಳಗೆ ಇಲ್ಲವೋ ?”

“ ಇಲ್ಲ.... !”

“ ಚೀಲ ಇದೆಯೋ ?”

“ ಅದೂ ಇಲ್ಲ !”

“ ನೆಟ್ಟಗೆ ನೋಡಿರುವೆಯಾ ?”

“ ನೋಡಿದೆ; ಅರಿವೆಗಳನ್ನೆಲ್ಲ ತೆಗೆದಿಟ್ಟು ನೋಡಿದೆ ! ಹುಡುಕಿದೆ, ಎಲ್ಲಿಯೂ ಇಲ್ಲ.... ”

“ ನೋಡೋಣ ನಡೆ....! ಅರಿವೆಗೆ ಹತ್ತಿ, ಗಳಿಗೆಯೊಳಗೆ ಸಿಕ್ಕು ಅಲ್ಲಿಯೇ ಎಲ್ಲಿಯಾದರೂ ಬಿದ್ದಿದ್ದರೆ.... !”

“ ಏನು ಹುಚ್ಚಪ್ಪಾ ನೀನು.... !”

ಬಸಪ್ಪ ಹೀಗೆ ನುಡಿದರೂ. ಅವನ ಮನಸ್ಸಿನಲ್ಲಿ ಒಂದು ಹೊಸ ಹೋರಾಟ ಉತ್ಪನ್ನವಾಯಿತು. ಅಲ್ಲಿಯೇ ಎಲ್ಲಿಯಾದರೂ ಬಿದ್ದು ಇನ್ನಾರ ಕೈಗಾದರೂ ಹತ್ತಿದರೆ.... ? ಇವರು ತಕ್ಕೊಂಡಿರಬಹುದೆಂದು ಬಂದುಬಿಟ್ಟೆ. ಇಲ್ಲಿನ್ನುವರು.... ನಾನೂ ಅಲ್ಲಿ ನೆಟ್ಟಗೆ ನೋಡಿದೆನೋ ಇಲ್ಲವೋ ! ಎಲ್ಲಾ ಹಾಗೇ ಬಾಗಿಲಲ್ಲಿಯೇ ಬಿಟ್ಟು ಬಂದೆ....ನೆರೆಮನೆಯವರೂ ಎದ್ದು ಹೊರಗೆ ಬಂದಿದ್ದರು....ಸಹಜ ತೆರೆದ ಬಾಗಿಲಲ್ಲಿ ಇಣಿಕಿ ನೋಡಿದರೆ ಎಲ್ಲವೂ ಎದುರಿಗೇ.... ಈ ವಿಚಾರ ಬಂದೊಡನೆಯೇ ಬಸಪ್ಪ, ತಿರುಗಿ ತನ್ನ ಗುಡಿಸಿಲಿನ ಕಡೆಗೆ ಧಾವಿಸ ತೊಡಗಿದ.

ಸತ್ಯಣ್ಣನೂ ಅವನ ಜೊತೆಯಲ್ಲಿಯೇ ಹೊರಬಿದ್ದ. ಹುಲ್ಲುಜ್ಜಿಕೊಳ್ಳುತ್ತಿರುವ ತಂಬಾಕದ ಕರಕು ಇನ್ನೂ ಕೈಯಲ್ಲಿ ಹಾಗೇ ಇತ್ತು. ತುಟಿಗಳ ಕಪ್ಪನ್ನೂ ತೊಳೆದುಕೊಂಡಿರಲಿಲ್ಲ. ಮೋರೆಗೆ ಹತ್ತಿದ ಅಪವಾದದ ಕಲಂಕದ ಮುಂದೆ ಆ ಕಪ್ಪು ಲಕ್ಷ್ಯಕ್ಕೆ ಬರಲಿಲ್ಲವೇನೋ ! ಚಂದ್ರವ್ವನೂ ಅವರ ಬೆನ್ನು ಹತ್ತಿದಳು. ನೀರಿನಿಂದ ಹೊರಗೆ ತೆಗೆದ ಮೀನುಗಳಂತೆ ಅವರ ಸ್ಥಿತಿಯಾಗಿತ್ತು.

ಬಸಪ್ಪ ಪೆಟ್ಟಿಗೆಯನ್ನು ತಮ್ಮಲ್ಲಿ ತಂದಿಡುವಾಗ ‘ಒಳಗೆ ಏನೇನಿವೆ ತೋರಿಸಿ ಇಡು !’ ಎಂದು ಹೇಳಿದ್ದರೆ ಚೆನ್ನಾಗಿತ್ತಲ್ಲ! ಹಾಗೆ ಹೇಳದೆ ಇಟ್ಟುಕೊಂಡು ತಪ್ಪುಮಾಡಿದೆ. ಹುಚ್ಚುಮನುಷ್ಯ, ಎಲ್ಲಿಟ್ಟು

೫೨ ವರ್ಷಗಳಿಂದ ಅನುಭವಪಟ್ಟ
ಕರ್ಕೀ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ :—
ಗಣೇಶ ರಾಮಚಂದ್ರ ಕರ್ಕೀ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ಮರೆತಿದೆಯೋ! ಈಗ ನನ್ನ ಮೇಲೆ ಬಂದಿತಲ್ಲ! ಸಿಕ್ಕರೆ ಒಳ್ಳೆಯದಾಯಿತು.... ಇಲ್ಲದಿದ್ದರೆ..., ಹೀಗೆ ಏನೇನೋ ವಿಚಾರಿಸುತ್ತಿದ್ದ ಸತ್ಯಣ್ಣ. ಅದರಲ್ಲೂ ಬಸಪ್ಪನಿಗೆ ಧೈರ್ಯ ಹೇಳುವ.

"ನೀನು ಹೆದರಬೇಡ ಬಸಪ್ಪಾ! ಎಲ್ಲಿ ಹೋಗುವವು ?"

"ಹೋಗಲಿಕ್ಕೇನು ಪುಕ್ಕಟೆ ಬಂದಿಲ್ಲ! ಬೆವರು ಸುರಿಸಿ ಸಂಪಾದಿಸಿದ ದುಡ್ಡು! ಇನ್ನೊಬ್ಬರ ಗಂಟು ಎತ್ತಿಹಾಕಿ ಗಳಿಸಿದ್ದಲ್ಲ...."
ಎನ್ನುವ ಪ್ರತಿಯಾಗಿ ಬಸಪ್ಪ, ಮರುಕ್ಷಣದಲ್ಲಿ ಮತ್ತೆ,

"ಕೈಬಿಟ್ಟು ಹೋದದ್ದು ಇನ್ನೇನು ಸಿಗುವುದು....!" ಎಂದು ನಿಟ್ಟುಸಿರುಬಿಡುವನು. ಕಿವಿಯಲ್ಲಿ ಗಾಳಿಸೇರಿದ ಆಕಳ ಕರುವಿನಂತೆ ಎಲ್ಲರನ್ನೂ ಬಿಟ್ಟು ಮುಂದೆ ಮುಂದೆ ಓಡುವ....

ಬಸಪ್ಪನ ಮಾತಿನ ರೀತಿಯನ್ನು ನೋಡಿ ಚಂದ್ರವ್ವನಂತೂ ಗಾಬರಿಯಾಗಿದ್ದಳು. ಮುಖ ಒಣಗಿಹೋಗಿದ್ದಿತು. ಯಾವ ಜನ್ಮದ ಪಾಪ ಬಂದು ತಮಗೆ ತಟ್ಟಿತೋ ಎಂದು ಕೊರಗುವಳು. ತನ್ನ ಗಂಡ ಎರಡು ರೂಪಾಯಿ ಬಾಡಿಗೆಯ ಆಶೆಗಾಗಿ ಬಸಪ್ಪನನ್ನು ಕರೆದುಕೊಂಡು ಹೋದ. ಹೋದರೂ ಹೋಗಲಿ. ಅವನ ಪೆಟ್ಟಿಗೆಯನ್ನು ನಮ್ಮ ಮನೆಯಲ್ಲೇಕೆ ಇಟ್ಟುಕೊಳ್ಳಬೇಕು? ಎರಡು ಇರುಳು ಕಣ್ಣುರೆಪ್ಪೆ ಹೊಡೆಯದೆ ಕಾವಲುಮಾಡಿದೆ. ಮತ್ತೆ ಈ ಮಾತು ನನ್ನ ತಲೆಗೆ! ಎಂಥ ವಿಚಿತ್ರ ನನ್ನ ದೈವ....! ಉಪಕಾರಮಾಡಲಿಕ್ಕೆ ಹೋದರೂ ಅಪಚಾರವೇ ಆಗುವುದು. ಈಗ ಹುಡುಗ ದೊಡ್ಡವನಾದ. ಪ್ರಪಂಚವೆಲ್ಲ ತಿಸ್ತು ಕೂತಿತು ಎನ್ನುವಷ್ಟರಲ್ಲಿ ಈ ಅಪವಾದ.... ಜನರಲ್ಲಿ ಮೋರೆಯನ್ನಾದರೂ ಹೇಗೆ ತೋರಿಸಬೇಕು ನಾನು....

ಚಂದ್ರವ್ವನಿಗೆ ಅವಳ ಸೋದರತ್ತೆಯ ಬಾಳು ನೆನಪಾಯಿತು. ನೆರೆಮನೆಯೊಳಗಿನ ಹಿಟ್ಟಿನ ಬುಟ್ಟಿಯನ್ನು ಕದ್ದಿದ್ದಳವಳು, ಹಸಿದ ಮಗುವಿನ ಹೊಟ್ಟೆಗೆ ಹಾಕಲೆಂದು. ಆದರೆ ಓಣಿಯೊಳಗಿನ ನಾಲ್ಕಾರು ಮುದುಕಿಯರು ಕೂಡಿ, ಆ ಹಿಟ್ಟಿನ ಬುಟ್ಟಿಯನ್ನು ಹುಡುಕಿದರು; ಕಳವನ್ನು ಬಯಲಿಗೆಳೆದರು! ಅಪಮಾನಗೊಳಿಸಿದರು! ಸಂಜೆ ಗಂಡ ಹೊಲದಿಂದ ಬರುವಷ್ಟರಲ್ಲಿ, ಅವಳು ಕೂಸನ್ನು ಉಡಿಯಲ್ಲಿ ಕಟ್ಟಿಕೊಂಡು ಬಾವಿಹಾರಿ ಸತ್ತುಹೋದಳು. ಗರತಿಯ ಮಗಳು.... ಹೀಗಾದ ಮೇಲೆ ಜೀವ ಇಡುವುದರಲ್ಲಿ ಅರ್ಥವಾದರೂ ಏನಿದೆ?

ಈ ಬಡ ಹೆಂಗುಸು ತನ್ನ ಹಿಂದಿನ ಜೀವನವನ್ನು ಕುರಿತು ಹೆಚ್ಚಿಗೆ ಯೋಚಿಸುತ್ತಿರಲಿಲ್ಲ. ಅವಳು ಹಿಂದಿನ ದಿನಗಳನ್ನು ನೆನಸಿಕೊಂಡರೂ ವಿವರವಾಗಿಯಲ್ಲ. ಹಿಂದಿನದರ ನೆನಪು, ನಾಳೆಯ ದಿನಗಳಿಗೆ ಅವಳಲ್ಲಿರಬಹುದಾದ ಆಶೆಯನ್ನೂ ನೀಗುತ್ತಿದ್ದುದರಿಂದ, ಹಿಂದಿನದನ್ನು ಮರೆಯಲು ಅವಳು ಹೆಚ್ಚಿಗೆ ಹವಣಿಸುತ್ತಿದ್ದಳು. ಆದರೂ ಇಂಥ ಪ್ರಸಂಗ ಬಂದಾಗ, ಹಿಂದಿನ ಬಾಳಿನ ಕತೆಯೆಲ್ಲ ನೆನಪಾಗುವುದು:

ತಾನು, ಬಸಪ್ಪನ ಹೆಂಡತಿ ಕೂಡಿಯೇ ಕೆರೆಯ ಒಡ್ಡು ಹಾಕಲಿಕ್ಕೆ ಹೋಗುತ್ತಿದ್ದುದು. ದಿನಾಲು ಆರು ದುಡ್ಡು ಕೂಲಿ. ತಿನ್ನುವುದು ರಾಗಿಯ ರೊಟ್ಟಿ, ಕುಡಿಯುವುದು ರಾಗಿಯ ಅಂಬಲಿ. ಅದೂ ಸಿಕ್ಕದಾಗ ನೀರು ಕುಡಿದೇ ಮಣ್ಣಿನ ಬುಟ್ಟಿ ಹೊರಲಿಕ್ಕೆ ಹೋಗಬೇಕು. ಮೈಯಲ್ಲಿ ಕಸುವಿರದು. ಬುಟ್ಟಿ ನೆಗೆಯದು. ಮಾಲಕನ ಬೈಗಳು....ಕಟುಮಾತು. ಅದೆಲ್ಲವನ್ನೂ ಕೇಳಿಯೂ ಸಂಜೆ, ಆರು ದುಡ್ಡಿಗೆ ಅವನ ಮುಂದೆ ಕೈಯೊಡ್ಡಬೇಕು. ಕೊಟ್ಟ ಹಣವನ್ನು ಪ್ರಸಾದವೆಂದು ಸ್ವೀಕರಿಸಬೇಕು. ಹೀಗೆ ಮಾಡಿ ಕೂಡಿಸಿದ ಹಣವದು. ಅದರಿಂದ ಎತ್ತು ಬಂಡಿ ಮಾಡಿದೆವು. ಮೇಲೆ ನಾಲ್ಕೈದು ನೂರು ಕೂಡಿಸಿಯೂ ಇಟ್ಟೆವು... ಮಗನಿಗೆ ಒಂದು ಗೇಣು ನೆಲವನ್ನು ಊರ ಅಡವಿಯಲ್ಲಿ ಮಾಡಬೇಕೆಂದು. ಭೂಮಿಯ ಪೂಜೆಮಾಡಲಿಕ್ಕಾದರೂ ನಾಲ್ಕಕ್ಕಡಿ ಸ್ವಂತ ನೆಲ ಇರಬೇಕು. ಬಸಪ್ಪನೂ ಅದಕ್ಕೇ ಮಾಡಿದ. ಆದರೆ ಹೀಗೇನಾಯಿತಿದು! ಅವನ ದುಡ್ಡು ಸಿಕ್ಕದಿದ್ದರೆ ನಮ್ಮದನ್ನು ಕೊಟ್ಟು, ಮುಖ ತೊಳೆದುಕೊಳ್ಳಬೇಕಲ್ಲ! ಅವನ ದುಡ್ಡು ನಮ್ಮ ಮನೆಯಲ್ಲಿ ಹೋಗಿದೆ! ಅದೂ ನನ್ನಿಂದ!

ಗದಗದ ನಡುಗಿದಳು ಚಂದ್ರವ್ವ. ಮೈಮೇಲೆ ಮುಳ್ಳುಗಳೆದ್ದುವು. ಕೆದರಿದ ತಲೆಗೂದಲು, ಹಣೆಯಲ್ಲಿ ಮಸುಕಾದ ದೊಡ್ಡ ಕುಂಕುಮದ ಬೊಟ್ಟು, ಮುಖದಲ್ಲಿ ಹುಚ್ಚುಕಳೆ, ಉಟ್ಟಿದ್ದು ಬಿಳಿಯ ಧೋತರ, ಮೈಯಲ್ಲಿ ಕುಪ್ಪಸವಿಲ್ಲ. ಕೈಯಲ್ಲಿ ಕರೇ ಬಳೆಗಳು. ನೋಡುವವರಿಗೆ ಅಸಹ್ಯವೆನಿಸುವಂತಿತ್ತು ಅವಳ ರೂಪು. ಆದರೂ ಆ ಓಣಿಯಲ್ಲಿ ಬಹುಜನರಿಗೆ ಅವಳು ಬೇಕಾಗಿದ್ದಳು. ಆದುದರಿಂದ ಎದುರಿಗೆ ಬರುವ ಹೆಂಗುಸರೆಲ್ಲ ಕುತೂಹಲದಿಂದ ಕೇಳುವರು:

"ಎಲ್ಲಿ ಹೊರಟಿರುವಿರಿ ಚಂದ್ರಾ?"

"ಇಲ್ಲೇ;.... ಬಸಪ್ಪನ ಮನೆಯ ತನಕ...."

"ನಸುಕಿನೊಳಗೆ ಗಂಡ-ಹೆಂಡಿರಿಬ್ಬರೂ ಹೊರಟಿದ್ದೀರಲ್ಲ....?"

"ಸ್ವಲ್ಪ ಕೆಲಸ ಇತ್ತು ತಾಯಿ!"

"ಇಂಥಾ ಹೊತ್ತಿನೊಳಗೆ ಏನು ಕೆಲಸ ತೆಗೆದಿರಿ?"

"ಇರಹಕ್ಕದ್ದಲ್ಲವ್ವಾ. ಏನಾದರೊಂದು ನಮ್ಮ ಜೀವದ ಸುತ್ತು!"

ಚಂದ್ರವ್ವನ ಬೇಸರದ ಮಾತು— ಅವಸರಗಳನ್ನು ಕಂಡು, ಸರಿಕದವರಾದರೂ ಮಾತನ್ನು ಮುಗಿಸಿ ಬಿಡುತ್ತಿದ್ದರು. ಆದರೆ

ಅವರಿಗೆ ಸಮಾಧಾನವಾಗುತ್ತಿರಲಿಲ್ಲ. ಆ ಓಣಿಯಲ್ಲಿ ಯಾರದೂ ಯಾವುದೂ ಅರಿಯದ್ದು ಯಾರಿಗೂ ಇರುತ್ತಿರಲಿಲ್ಲ. ಯಾರ ಗಳಿಕೆ ಎಷ್ಟು? ಯಾರಲ್ಲಿ ಎಷ್ಟು ಹಣ ಕೂಡ ಬಿದ್ದಿದೆ? ಯಾರ ಮನೆಯಲ್ಲಿ ಯಾವ ಧಾನ್ಯ ಎಷ್ಟಿದೆ ? ಎಲ್ಲವೂ ಎಲ್ಲರಿಗೂ ಗೊತ್ತಿರುತ್ತಿದ್ದಿತು. ಅದರಿಂದ ಅನ್ಯಾಯ ಅತ್ಯಾಚಾರಗಳು ತೂಡಲೆ ಬೆಳಕಿಗೆ ಬರುತ್ತಿದ್ದುವು. ಅದನ್ನು ಸರಿಪಡಿಸುವುದಕ್ಕೂ ಹಿರಿಯರಿಗೆ ಅವಕಾಶ ಹತ್ತುತ್ತಿರಲಿಲ್ಲ. ಒಬ್ಬರಲ್ಲಿ ಇಲ್ಲದ ಜಿನಸು ಆಕಸ್ಮಾತ್ ಕಂಡು ಬಂದರೆ, ಎಲ್ಲಿಂದ ತಂದಿರೆಂದು ಎಲ್ಲರೂ ಕೇಳುವವರೇ. ಅದಕ್ಕೆ ಸಮರ್ಪಕ ಉತ್ತರ ಸಿಕ್ಕರೆ ಸರಿ ಹೋಯಿತು; ಇಲ್ಲದಿದ್ದರೆ ಕಳವಿನ ಅಪರಾಧ ಬಂದಿತೇ. ಕಳವಿನ ಹೊರತಾಗಿ ಅವರು ಹೆಚ್ಚಿಗೆ ಸಂಪಾದಿಸುವುದಾದರೂ ಹೇಗೆ ಪಾಪ !

" ಏನಾದರೂ ಕಪ್ಪು ಇದ್ದೀತು; ನಮಗೇಕೆ ಹೇಳಿಯಾರು ? " ಎಂದೊಬ್ಬಳು ಮಾತನಾಡಿ ಮುಂದೆ ಸಾಗಿದಳು.

" ಹೊತ್ತೇರಿದ ಮೇಲೆ ಎಲ್ಲ ಬೆಳಕಿಗೆ ಬರುವುದಲ್ಲ ! "
ಇನ್ನೊಬ್ಬಳು ಸಮಾಧಾನ ತಂದು ಕೊಳ್ಳುವಳು.

" ನಿನ್ನೆ ಬಸಪ್ಪ-ಸತ್ಯಣ್ಣ ಕೂಡಿಯೇ ಸಂತೆಗೆ ಹೋಗಿದ್ದರು !" ಮತ್ತೊಬ್ಬಳು ಸಂಶೋಧನೆಗೆ ಕೈಯಿಕ್ಕಿದಳು.

" ಅದೇ ಏನಾದರೂ ಕೊಡಕೊಳ್ಳುವುದಿರಬೇಕು...."

" ಅದಕ್ಕೇಕೆ ಇಷ್ಟು ಓಡುತ್ತ ಹೋದಾರು ? ಕೂತು ಲೆಕ್ಕ ಮಾಡಿಕೊಳ್ಳಲಿಕ್ಕೆ ಬರುವುದಿಲ್ಲೇನು ?"

" ಹೌದು ! ಬಸಪ್ಪ ಎರಡೆರಡು ಸಾರೆ ಎಡತಾಕಿದ ಅವರ ಮನೆಗೆ....ಇನ್ನೂ ಮೂಡಲ ಹರಿದಿರಲಿಲ್ಲ....ಆಗೊಮ್ಮೆ ಹೋಗಿದ್ದ; ನಾನು ಅಂಗಳ ಉಡುಗಲಿಕ್ಕೆ ಎದ್ದಿದ್ದೆ.... "

" ಹುಚ್ಚುಮುದುಕ ! ಎಲ್ಲ ಅವರಲ್ಲಿಯೇ ಇಟ್ಟಿದೆ !"

" ಇಂಥಾ ದಿವಸದೊಳಗ ಯಾರನ್ನ. ಯಾರು ನಂಬಬೇಕು ತಾಯಿ !"

ಹೆಂಗುಸರ ಈ ಮಾತುಗಳೆಲ್ಲ ಸತ್ಯಣ್ಣನ ಕಿವಿಯ ಮೇಲೂ ಬೀಳುತ್ತಿದ್ದುವು. ಹಾಗೆಯೇ ಅವನ ತಲೆಯಲ್ಲಿಯೂ ವಿಚಾರ ಸುಳಿಯುವುದು....

ಹೆಂಗುಸರ ತಲೆಯಲ್ಲಿ ಒಳ್ಳೆಯ ವಿಚಾರಗಳೇ ಬರುವುದಿಲ್ಲ! ಆದರಲ್ಲೂ ಅವರು ಮಾಡಿದ ವಿಚಾರಗಳನ್ನು ಮಾತನಾಡದೆ ಇರುವುದು ಅಪರೂಪ. ಆದರಿಂದ ಅವರ ಮಾತುಗಳೆಲ್ಲ ಇಂಥ ಕೀಳುನುಡಿಗಳಾಗಿರುವುದೇ ಹೆಚ್ಚು....

ಆದರೆ ನನ್ನ ಹೆಂಡತಿಯೂ ಇವರೊಳಗಿನವಳೇ ಒಬ್ಬಳಲ್ಲವೆ ? ಒಂದು ವೇಳೆ ಬಸಪ್ಪನ ಹಣವನ್ನು ಕದ್ದಿದ್ದರೆ....?

ಸತ್ಯಣ್ಣನ ಕಣ್ಣುಗಳು ಕೆಂಪೇರಿದುವು, ಹುಬ್ಬು ಗಂಟಿಕ್ಕಿದುವು.... ಮೇಲಿನ ಹಲ್ಲುಗಳಿಂದ ಕೆಳದುಟಿಯನ್ನು ಒತ್ತಿ ಕಡಿದ. ಹಾಗೇನಾದರೂ ಆಗಿದ್ದರೆ, ಚಂದ್ರಿಯ ರುಂಡವನ್ನು ಹಾರಿಸಿ ಬಿಡುವೆ.... ಕುಲಕ್ಕೆ ಕಲಂಕ ಹಚ್ಚಿದ ಮೇಲೆ ಇವಳಿಂದೇನು ನನಗೆ ? ಇಂಥದನ್ನು ಮಾಡಿದವಳ ಕೂಡ ಓರಗೆಯವರೊಳಗೆ ಕೂಡಿ ಜೀವಿಸಲೆ? ಎಂಥ ನಾಚಿಕೆಗೇಡು....!

ಸತ್ಯಣ್ಣನ ತಲೆಗೆ ಕೊಲೆಯ ಆವೇಶ ಏರಿದಂತಾಯಿತು, ಒಂದು ಕ್ಷಣ. ಹೃದಯದ ಹೊಡೆತ ಹೆಚ್ಚಾಯಿತು. ಕಣ್ಣಲ್ಲಿ ಕ್ರೂರತೆ ಸುಳಿಯಿತು. ದೃಷ್ಟಿ ಕುಟಿಲವಾಯಿತು. ಹೊರಳಿ ಹೆಂಡತಿಯ ಕಡೆಗೊಮ್ಮೆ ನೋಡಿದ. ಆಕೆಯನ್ನು ದಿಟ್ಟಿಸಿ ನೋಡಿದ ಏನೋ ಒಂದು ತರದ ನೋವಾಯಿತು. ತನ್ನ ಮುಂದಿರುವ— ಮಂಜು ಕವಿದಿರುವ— ಹಾದಿಯನ್ನು ನಿಟ್ಟಿಸಿದ. ತನ್ನ ಅದೃಷ್ಟದ ಕರಾಳಮುಖ ವಿಕಟಹಾಸ್ಯದಿಂದ ಅರ್ಥರಹಿತ ಮತ್ತು ಕ್ರೂರ ನಗೆಯೊಂದನ್ನು ಬೀರುವಂತೆ ತೋರಿತು. ಆದರೆ ಅದರಲ್ಲಿ ಶಾಂತಿಯೂ ಕಂಡಿತು.

ಬೇವಿನ ಗಿಡದ ಎಲೆಗಳಿಂದ ಪಟಪಟನೆ ತಟಕಿಕ್ಕುವ ಮಂಜಿನ ಹನಿಗಳು, ಶೋಕಪೂರಿತ ಆಲೋಚನೆಗಳು ಹುಟ್ಟುವಂತೆ ಮಾಡುತಿದ್ದುವು. ನಡುನಡುವೆ ಗಾಳಿಯು ಭರ್ರನೆ ಬೀಸಿ, ಗಿಡದ ಟೊಂಗೆಗಳನ್ನು ತೂಗಿಸಿ, ವಿಪರೀತ ಹನಿಗಳನ್ನು ಸುರಿಸುತ್ತಿದ್ದಿತು. ಇದರಿಂದ ಚಿತ್ತವು ಚಂಚಲವಾಗುವುದು. ಬೀಸುವ ಕಲ್ಲುಗಳೂ 'ಘೋರ್ ಘೋರ್ !' ಎಂದು ಸಪ್ಪಳ ಮಾಡುತ್ತಿದ್ದುವು; ನಾಯಿಗಳು 'ಬವ್' ಗುಡುಗುತ್ತಿದ್ದುವು. ಆ ಶಬ್ದಗಳನ್ನಂತೂ ಸಹಿಸಲಸಾಧ್ಯವಾಗುತ್ತಿತ್ತು, ಮನಸ್ಸಿಗೆ ಬಹಳ ಭಾರವೆನಿಸುತ್ತಿತ್ತು. ಮಳೆ, ಚಳಿ, ಬಿಸಿಲು ಇವುಗಳಿಂದ ನೊಂದ ಭೂಮಿಯು ಸುದೀರ್ಘ ಉಸಿರು ಬಿಡುವಂತೆ ಮಂಜು ತೋರುತ್ತಿದ್ದಿತು. ಅದು ನಡುನಡುವೆ ಬೀಸುವ ಗಾಳಿಯಿಂದ ಹೊಯ್ದಾಡುತ್ತಿತ್ತು.

ಚಂದ್ರವ್ವ ಅವಸರವಸರದಿಂದ ನಡೆದು ಗಂಡನ ಹತ್ತಿರ ಬಂದಳು. ಅವಳ ಬಿಳಚುಮುಖದ ಮೇಲೆ ನೀರುತುಂಬಿದ ಕಣ್ಣುಗಳು ಬಹಳ ದೊಡ್ಡವಾಗಿರುವಂತೆ ಭಾಸವಾಗುತ್ತಿತ್ತು. ಅವಳ ಕೆದರಿದ ಕೂದಲು ಏನೋ ಒಂದು ರೀತಿಯ ಭಯಹುಟ್ಟಿಸುವಂತಿದ್ದುವು. ಸ್ವಲ್ಪವೂ ಮಾತನಾಡುವ ಇಚ್ಛೆಯನ್ನು ಪ್ರಕಟಿಸದೆ ಅವಳು ಮೌನವಾಗಿ ಸಾಗಿದ್ದಳು. ನಿಶ್ಚೇಷ್ಟಿತಳಾಗಿ ನಡೆದಿದ್ದಳು. ಹೆಂಡತಿಯ ಈ ಮೌನ, ಸತ್ಯಣ್ಣನಲ್ಲಿ ಒಂದು ಕ್ಷಣ ಹೆದರಿಕೆಯನ್ನುಂಟುಮಾಡಿತು. ಅವಳೊಡನೆ ಮಾತನಾಡಬೇಕೆಂದೆನಿಸಿತು. ಆದರೆ ಮಾತಿಗೆ ಹೇಗೆ ಪ್ರಾರಂಭಮಾಡಬೇಕೆಂಬುದು ತಿಳಿಯಲಿಲ್ಲ. ಆ ಎರಡು ಘಳಿಗೆಯಲ್ಲಿಯೇ ದಂಪತಿಗಳು ತೀರ ಅಪರಿಚಿತರಂತಾಗಿದ್ದರು.

ಕೊನೆಗೆ ಅವಳೇ ಮಾತನಾಡಿದಳು :

"ಬದುಕೆಂದರೆ ಎಷ್ಟು ಕೀಳು ! "

ದೃಢತೆಯಿಂದ ಹೇಳಿದಳವಳು. ಮಾತಿನಲ್ಲಿ ಸರಳತೆಯಿತ್ತು, ನಿರಾಸಕ್ತಿಯೂ ಇತ್ತು.

ಆದರೆ ಇದೊಂದು ತೆಗಳಿಕೆಯಲ್ಲ. ಈ ಮಾತುಗಳಲ್ಲಿ ತೆಗಳುವಾಗ ಇರಬೇಕಾದ ಆಸಕ್ತಿ ಇರಲಿಲ್ಲ. ಆ ಬಡ ಹೆಂಗುಸು ತನ್ನ ತಿಳುವಳಿಕೆಯ ಮಟ್ಟಕ್ಕನುಸರಿಸಿ ಆಲೋಚಿಸಿದಳು. ಆಲೋಚಿಸಿ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ತಾನೇ ಒಂದು ತೀರ್ಮಾನಕ್ಕೆ ಬಂದು, ಅದನ್ನು ಸ್ಪಷ್ಟವಾಗಿ ಹೇಳಿದಳು.

ಈ ತೀರ್ಮಾನವನ್ನು ನಿರೋಧಿಸುವುದು ಸತ್ಯಣ್ಣನಿಂದ ಆಗಲಿಲ್ಲ. ಏಕೆಂದರೆ ತನ್ನಿಂದ ತನ್ನನ್ನೇ ನಿರೋಧಿಸಿಕೊಳ್ಳುತ್ತಿರುವ ದಿಗಿಲು ಅವನಿಗೆ. ಆದ್ದರಿಂದ ಅವನು ಸುಮ್ಮನೆ ಸಾಗಿದ್ದ. ಅವಳೂ ಹೆಚ್ಚಿನ ಯಾವ ಭಾವವನ್ನೂ ವ್ಯಕ್ತಪಡಿಸದೆ ನಡೆದಳು.

"ನಾನು ಸತ್ತರೆ ಆದರಿಂದೇನಾಗುವುದು ?"

ಚಂದ್ರವ್ವ ಮತ್ತೆ ಆರಂಭಿಸಿದಳು. ಆದರೆ ಈ ಸಲ ಅವಳು ಸುದೀರ್ಘ ವಿಚಾರ ಮಾಡಿ, ಸಾವಕಾಶವಾಗಿ ಹೇಳಿದಳು. ಈ ಮಾತುಗಳಲ್ಲಿಯೂ ಯಾರ ಮೇಲೂ ಆಕ್ಷೇಪಿಸುವ ಮನಸ್ಸಿರಲಿಲ್ಲ. ಅವಳು ತನ್ನ ಜೀವನದ ಸಂಭವಗಳನ್ನು ನೆನಸಿಕೊಂಡು, ತನ್ನನ್ನು ತಾನೇ ನೋಡಿಕೊಂಡು, ಬಾಳಿನ ಬಣಕಗಳಿಂದ ಮುಕ್ತವಾಗಲು ಸಾಯುವುದೊಂದೇ ಉಪಾಯವೆಂಬ ನಿರ್ಧಾರಕ್ಕೆ ಬಂದಿದ್ದಳು.

ಸುಸ್ಪಷ್ಟವಾದ ಚಂದ್ರವ್ವನ ವಿಚಾರವು ಸತ್ಯಣ್ಣನಿಗೆ ಬಹಳ ನೋವನ್ನುಂಟುಮಾಡಿತು. ಕಣ್ಣು ಕುಣಿಕೆಗಳಲ್ಲಿ ನೀರೂರಿತು. ಅದು ಹೆಂಡತಿಗೆ ಕಾಣುವುದು ಅವಮಾನಕರವೆಂದು ಸತ್ಯಣ್ಣ ಭಾವಿಸಿದನೇನೋ! ಹೊರಳಿ ಕಣ್ಣೊರಸಿಕೊಂಡ. ಯಾಕೆಂದರೆ ಚಂದ್ರವ್ವ ಅಳುತ್ತಿರಲಿಲ್ಲ. ಕೊನೆಗೆ ಒಂದೆರಡು ಮಾತುಗಳನ್ನು ಆಡಬೇಕೆಂದು ಸತ್ಯಣ್ಣ ಸಂಕಲ್ಪ ಮಾಡಿದ:—

"ಅವನ ಹಣವನ್ನು ಕೊಡುವಷ್ಟಿಲ್ಲವೆ ನಮ್ಮಲ್ಲಿ?"

ಸತ್ಯಣ್ಣ ಕೇಳಿದ. ಧ್ವನಿಯು ಸರಳವಾಗಿತ್ತು. ಆ ಹೊತ್ತಿನಲ್ಲಿ ಇದಕ್ಕಿಂತಲೂ ತಿಳಿವಳಿಕೆಯ— ಅರ್ಥಪೂರ್ಣವಾದ ಪ್ರಶ್ನೆಯಲ್ಲದೆ- ಬೇರಾವ ಮಾತೂ ಅವನಿಗೆ ಹೊಳೆಯಲಿಲ್ಲ.

"ಕೊಟ್ಟು ಬಿಡುವುದು!"

"ಹೌದು; ಇದಲ್ಲದೆ ಬೇರೆಯೇನು ಸಾಧ್ಯ ?"

ಈ ಪ್ರಶ್ನೆಯನ್ನು ಕೇಳುವ ಮೊದಲೇ ಸತ್ಯಣ್ಣನ ದೃಷ್ಟಿಯು ತನ್ನ ಹೆಂಡತಿಯ ತಲೆಗೆ ಬಿದ್ದ ಕಲೆಯ ಮೇಲೆ ಬಿದ್ದಿತು. ಒಂದು ರೂಪಾಯಿಯಷ್ಟು ನಡುಬೈತಲಿನಲ್ಲಿ ನೆತ್ತಿಯ ಮೇಲೆ ಕೂದಲು ಹೋದ ಸ್ಥಳವದು. ಆರು ದುಡಿಗೆ ಸಂಜೆಯವರೆಗೆ ಕಲ್ಲು ಹೊತ್ತು, ಹೆಂಡತಿಯ ತಲೆಗೂದಲು ಹೋದ ಸಂಗತಿಯೇನೂ ಅವನಿಗರಿಯದ ವಿಷಯವಲ್ಲ. ಆದರೂ ಅವನು ಮನದಲ್ಲಿಯೇ ಅಂದುಕೊಂಡ:

"ಇದ್ದುದೆಲ್ಲವನ್ನೂ ಕಳೆದುಕೊಳ್ಳೋಣ. ಆ ಮೇಲಾದರೂ ಬುದ್ಧಿ ಕಲಿತು ಸರಿಯಾದ ದಾರಿಯನ್ನು ಹಿಡಿಯಬಹುದು ನಾವು. ಪಶ್ಚಾತ್ತಾಪ ಪಡದೆ ಮೋಕ್ಷವಿಲ್ಲ! ಪಾಪ ಮಾಡದೆ ಪಶ್ಚಾತ್ತಾಪ ಪಡುವುದು ಹೇಗೆ?"

ಸತ್ಯಣ್ಣ ಈ ನಿರ್ಧಾರಕ್ಕೆ ಬರುವಷ್ಟರಲ್ಲಿ, ಚಂದ್ರವ್ವನೂ ಒಂದು ನಿಶ್ಚಯವನ್ನು ತಲುಪಿದ್ದಳು.

ಎಲ್ಲವನ್ನೂ ಕೊಟ್ಟು ಕಳೆಯಬಹುದು. ಅದರಿಂದ ನಮ್ಮ ಮನೆಯಂತೂ ಹಾಳಾಗುವುದು. ಆದರೂ ಕಲಂಕ ಹೋಗದು. ಜನ ಕದ್ದದ್ದು ಕೊಟ್ಟರೆನ್ನುವರು! ಕೊಡಲಿಲ್ಲ, ಅವನ ಮನೆ ಮುಳುಗಿತು! ಇದಕ್ಕೇನು ದಾರಿ? ನನಗೆ ಉಳಿದುದೊಂದೇ ದಾರಿ.... !

ಗಂಡನ ಮುಖದ ಕಡೆಗೆ ಚಂದ್ರವ್ವನ ದೃಷ್ಟಿ ಹೋಯಿತು. 'ನಿನ್ನ ದೋಷದಲ್ಲಿ ನಾನೂ ಸಮಭಾಗಿ!' ಎಂದದು ಹೇಳುವಂತೆ ಇತ್ತು.

'ಪಾಪ! ಅವರಿಗೂ ಏಕೆ ಕಲಂಕ ಹಚ್ಚಬೇಕು ನಾನು?'

ಈಗಾಗಲೇ ಬಸಪ್ಪ ಇವರನ್ನು ಬಿಟ್ಟು ಮುಂದೆ ಓಡಿದ್ದ. 'ಅಲ್ಲಿಯೇ ಎಲ್ಲಿಯಾದರೂ ಹುಮ್ಮಣಿ ಬಿದ್ದಿದ್ದರೆ ಹೋದೀತಲ್ಲ' ಎಂಬ ಹೆದರಿಕೆ ಅವನಿಗೆ. ಇನ್ನೂ ಗುಡಿಸಲು ದೂರವಿದ್ದರೂ ಅವನ ದೃಷ್ಟಿಯೆಲ್ಲ ಅದರ ಕಡೆಗೇ ಕೇಂದ್ರೀಕೃತವಾಗಿತ್ತು. ಅವನಿರುವ ಸ್ಥಳದಿಂದ ಗುಡಿಸಿಲಿನ ಬಾಗಿಲು ಇನ್ನೂ ಸ್ಪಷ್ಟವಾಗಿ ಕಾಣಿಸುತ್ತಿರಲಿಲ್ಲ. ಅಷ್ಟು ಮಂಜು ಮುಸುಕಿದ್ದಿತು. ಅದರಲ್ಲಿಯೇ ಮನುಷ್ಯನ ಆಕಾರವೊಂದು ತನ್ನ ಗುಡಿಸಲಿನೊಳಗಿಂದ ಹೊರಬಿದ್ದು, ಹಿಂದೆ ಹೋದಂತೆ ಭಾಸವಾಯಿತು.

"ಯಾರವರು ?"

ಎಂದು ಸುಮ್ಮನೆ ಕೂಗಿದ ಬಸಪ್ಪ. ದನಿ ಕಂಪಿಸಿತು.

ಆ ನೆರಳು ಹಿಂದೆ ಹೊರಳಿ ನೋಡಿ ಮುಂದೆ ಸಾಗಿದಂತೆ ತೋರಿತು. ಬಸಪ್ಪನ ಕೈಕಾಲುಗಳೇ ತಣ್ಣಗಾದುವು. ನಿಂತಲ್ಲಿಯೇ ನಿಂತ. ಹೆಜ್ಜೆಗಳೇ ಎತ್ತದಾದುವು. ಅಷ್ಟರಲ್ಲಿ ಸತ್ಯಣ್ಣ ಅವನನ್ನು ಬಂದು ಕೂಡಿದ.

"ಏಕೆ ನಿಂತೆ?" ಎಂದು ಕೇಳಿದ.

ಬಸಪ್ಪ ಅದಕ್ಕೆ ಉತ್ತರವನ್ನೇನೂ ಕೊಡಲಿಲ್ಲ. ಏನು ಹೇಳಬೇಕೆಂಬುದು ತಿಳಿಯದಾಯಿತವನಿಗೆ. ಅವನ ಮನಸ್ಸು ಹೊಯ್ದಾಡಿತು, ಅಧೀರವಾಯಿತು. ಆದರೂ ಏನನ್ನೂ ಹೇಳಲಿಕ್ಕೆ ಆಗದು.

ಮೂವರೂ ಸೇರಿ ಬಸಪ್ಪನ ಬಾಗಿಲಿಗೆ ಬಂದರು. ಅವರ ಜೊತೆಯಲ್ಲಿ ಆ ಬೀದಿಯ ಕೆಲವು ಜನರೂ ಕೂಡಿದ್ದರು. ಅವರಿಗೆಲ್ಲ ನಡೆದ ಸಂಗತಿ ಏನೆಂಬುದನ್ನು ತಿಳಿಯಲು ಕುತೂಹಲ. ಆ ಬಡವರು ಹರಕು ಚಿಂದಿ ಧರಿಸಿದವರು. ಮುಖ ತೊಳೆಯದ— ರೊಜ್ಜು ಸೋರಿದ ಕಲೆಯ ಮುಖವುಳ್ಳ— ಮೀಸೆ ಮೂಡಿದ ಮುದುಕಿಯರೂ ಅವರಲ್ಲಿದ್ದರು. ಬಸಪ್ಪನ ಮಗನೂ ಇದೀಗ ಕಣ್ಣು

ಒರಸಿಕೊಳ್ಳುತ್ತ ಎದ್ದು ಗಾಬರಿಯಾಗಿ ಬಂದ. ಸತ್ಯಣ್ಣನೂ ಅವರಲ್ಲಿದ್ದ. ಬೆಳಗಿನ ಮಾತುಗಳೆಲ್ಲ ಅವನಿಗೆ ಗೊತ್ತು. ಏನಾಗುವುದೋ ಏನೋ—ಎಂಬ ಚಿಂತೆಯಲ್ಲಿ ಧಾವಿಸಿದ್ದ. ಹುಬ್ಬು ಗಂಟಿಕ್ಕಿ ಬಸಪ್ಪನ ಕಡೆಗೊಮ್ಮೆ ನೋಡುವ; ಅಸ್ತ-ವ್ಯಸ್ತವಾಗಿ ಬಿದ್ದ ಸಾಮಾನುಗಳ ಕಡೆಗೊಮ್ಮೆ ದೃಷ್ಟಿಸುವ.

ಗುಡಿಸಿಲಿನ ಬಾಗಿಲಲ್ಲಿ—ಒಳಮಗ್ಗಲು—ತೆರೆದ ಪೆಟ್ಟಿಗೆ ಬಿದ್ದಿದೆ. ಅದರೊಳಗಿನ ಅರಿವೆ, ಪಾತ್ರೆ, ಕಾಗದಗಳೆಲ್ಲ ಸುತ್ತಲೂ ಹರಡಿವೆ. ಹತ್ತೆಂಟು ರೂಪಾಯಿ ಬೆಲೆಬಾಳುವ ಒಂದೆರಡು ಸೀರೆಗಳು. ಮೂರು ನಾಲ್ಕು ಕುಪ್ಪಸ. ಹೋದ ಹೆಂಡತಿಯುವವ್ವ ತಲಿರುವ ಸೊಸೆಯ ಸ್ವತ್ತು. ಅಲ್ಲಿಯೇ ಎರಡು ತಾಟು, ನಾಲ್ಕುಬಟ್ಟಲು, ಎರಡು ಮೂರು ಒಡಕು ತಂಬಿಗೆಗಳೂ ಉರುಳಾಡುತ್ತಿದ್ದುವು. ಸಣ್ಣದೊಂದು ತಪ್ಪೇಲಿಯೂ ಡಬ್ಬು ಬಿದ್ದಿತ್ತು.

ತಾನು ಬಗೆದಂತೆ ಸಾಮಾನು ಈಗ ಬಿದ್ದಿಲ್ಲವೆಂದು ಬಸಪ್ಪನಿಗೆ ಎನಿಸಿತು. ಆದರೂ ಅವಸರದಿಂದ ಸೀರೆ-ಕುಪ್ಪಸಗಳನ್ನೆಲ್ಲ ಎತ್ತಿ ಹಮ್ಮಿಣಿಯನ್ನು ಹುಡುಕತೊಡಗಿದ.

ಇದ್ದುದೆಲ್ಲ ಎದುರಿಗೇ ಕಾಣುವಂತಿತ್ತು. ಪೆಟ್ಟಿಗೆಯಲ್ಲಿ ಬಾಗಿ ನೋಡಿದರೆ ಅದರಲ್ಲೇನೂ ಇರಲಿಲ್ಲ.

ನಿರಾಶೆಯಿಂದ ಚಂದ್ರವ್ವ-ಸತ್ಯಣ್ಣರಿಬ್ಬರೂ ನೈ ಕುಕ್ಕರಿಸಿದರು.

"ಇರುವುದು ಇಷ್ಟೇ ಸಾಮಾನು! ಇದರಲ್ಲಿ ಎಲ್ಲಿ ಸಿಗುವುದು?" ಎಂದು ನಡುಗುವ ಸ್ವರದಲ್ಲಿ ಬಸಪ್ಪ ಕೇಳಿ, ನಿಂತವರ ಕಡೆಗೆ ನೋಡಿದ. ದೃಷ್ಟಿಯಲ್ಲಿ ದೈನ್ಯವಿತ್ತು.

ಆತುರದಿಂದ ದೈವ ನಿರೀಕ್ಷಿಸುತ್ತಿತ್ತು, ಸತ್ಯನ ಬಾಯಿಂದ ಏನು ಬರುವುದೆಂಬುವನ್ನು. ಹಲವರು ಗೊಂದಲ್ಲಿ ಬಿದ್ದಂತಾಗಿದ್ದರು.

ಸ್ವಲ್ಪ ಹೊತ್ತು ಗಂಡ-ಹೆಂಡಿರಿಬ್ಬರೂ ಮೌನಗಿ ಕುಳಿತರು. ನ್ಯಾಯಶಾಸ್ತ್ರ, ನೀತಿಪ್ರಶ್ನೆ, ಹಕ್ಕು, ಬಾಧ್ಯತೆ ಮ ಇಂತಹವೇ ಆದ ಅನೇಕ ವಿಷಯಗಳು ಮುಖ್ಯವೆಂದೂ ಅವನ್ನು ಬಾಳಿನ ಪ್ರತಿಕ್ಷಣದಲ್ಲಿಯೂ ಆಲೋಚಿಸಬೇಕೆಂದೂ ಹಿರಿ ಅನುಭವಿಗಳ ಮಾತು ಅವರಿಗೆ ಗೊತ್ತಿದ್ದಿತೋ ಇಲ್ಲೋ ಹೇಳಲಾರೆ. ಆದರೂ ಸಾಧ್ಯವಾದಷ್ಟು ಮಟ್ಟಿಗೆ ಸತ್ಯವನ್ನೆ ಅವಲಂಬಿಸಿರಬೇಕೆಂದು ತದೇಕಚಿತ್ತದಿಂದ ಪೆಟ್ಟಿಗೆಯನ್ನೂ ಸಾಮಾನನ್ನೂ ನೋಡುತ್ತಿದ್ದರು. ನಿಜವಾಗಿಯೂ ಹೇಳಬೇಕೆಂದರೆ, ಆ ಜೀನಸುಗಳಲ್ಲಿ ಹಣದ ಹಮ್ಮಿಣಿಯನ್ನು ಹುಡುಕಬೇಕೆಂಬ ಯೋಚನೆ ಸಹ ಅವರಿಗುಂಟಾಗಲಿಲ್ಲ.

"ಎಷ್ಟು ಇತ್ತು ಹೇಳು.... ಕೊಟ್ಟು ತೀರುವೆ!" ಸತ್ಯಣ್ಣ ನುಡಿದ. ಹೆಂಡತಿಯ ಮುಖವನ್ನೊಮ್ಮೆ ನೋಡಿದ. ಗಂಡನ ದೃಷ್ಟಿ ಅವಳ ಕಡೆಗೆ ತಿರುಗಿದೊಡನೆಯೇ ಅವಳೂ ಕೈಗಳಿಂದ ಹಣೆ ಹಣೆ ಗಟ್ಟಿಸಿಕೊಂಡಳಾಕೆ. ನೀರುದುಂಬಿದ ಕಣ್ಣುಗಳಿಂದ ಮಗನ ಮೊಗವನ್ನು ನೋಡಿದಳು.

ಸತ್ಯಣ್ಣನ ದೃಷ್ಟಿಯೂ ಅತ್ತ ಸುಳಿಯಿತು. ಒಂದು ಕ್ಷಣ ಅವನ ಮನಸ್ಸೂ ಚಲಿಸಿತು. ಇಷ್ಟು ದಿನ ಕಷ್ಟಪಟ್ಟು ಮಗನಿಗಾಗಿ ಕೂಡಿಸಿದ ದ್ರವ್ಯವನ್ನೆಲ್ಲ ಈ ಕ್ಷಣದಲ್ಲಿ ಕಳೆಯಬೇಕಾಯಿತಲ್ಲ! ಕಳೆಯಲಿ ? ಕಳೆಯುವುದೆ ?

ಅಷ್ಟರಲ್ಲಿ ಚಂದ್ರವ್ವನ ಬಾಯಿಂದ ಉದ್ಗಾರವೊಂದು ಹೊರಟಿತು :

"ನಿನ್ನ ಕುತ್ತಿಗೆ ಕೊಯ್ದವ್ರೋ... ಮಗನೆ!"

"ಇನ್ನೊಬ್ಬರ ಮಕ್ಕಳ ಕುತ್ತಿಗೆ ಹೋದಾಗ ?"

ನೆರೆದವರಲ್ಲಿ ಯಾರಿಂದಲೋ ದನಿ ಬಂದಿತು. ನಿರ್ಭಾಗ್ಯರು, ಇದನ್ನಲ್ಲದೆ ಮತ್ತೇನು ಮಾಡಬಲ್ಲರು ?

ಒಬ್ಬನ ಘನತೆಯನ್ನು ನಿರ್ಧರಿಸುವಾಗ ಜನ ಅವನ ಹೊರಗಿನ ನಡತೆಯನ್ನು ನೋಡುತ್ತದೆ. ಮಾನವನ ಅಂತರಂಗದ ವಿಚಾರ ಅವರಿಗೆ ಹೇಗೆ ನಿಲುಕಬೇಕು ?

ಜನರಿಗೆ ಉತ್ತರ ಹೇಳಲಿಕ್ಕೆ ಸತ್ಯಣ್ಣನ ಹತ್ತಿರ ಏನೂ ಪ್ರಮಾಣವಿರಲಿಲ್ಲ. ಅದಕ್ಕಾಗಿಯೋ ಏನೋ, ಕೃತಜ್ಞತೆಯಿಂದಲೇ ಆ ದನಿ ಬಂದತ್ತ ನೋಡಿದ ಆತ.

ಕೃತಜ್ಞತೆಯನ್ನು ವ್ಯಕ್ತಪಡಿಸುವ ಗುಣ ಬಹಳ ದೊಡ್ಡದು. ಅದು ಎಲ್ಲರಿಗೂ ಇರಬೇಕಾದದ್ದೆ. ಆದರೆ ಅದು ಇರುವುದು ತೀರ ಕಡಿಮೆ ಜನರಿಗೆ. ಇಂಥ ಪ್ರಸಂಗದಲ್ಲಂತೂ ಅಪರೂಪ.

ಆದರೂ ಜನರ ಆ ಮಾತಿನಿಂದ ಸತ್ಯಣ್ಣನ ಭಾವನೆಗೊಂದು ಏಟು ಬಿದ್ದಿತು. ಅದು ಹೊರಳಿ ಇನ್ನೊಂದು ದಿಸೆಗೆ ಓಡಹತ್ತಿತು. ಕೇಳಿ ಹೆಂಡತಿಯ ಕಡೆಗೆ ನೋಡಿದ ಸತ್ಯಣ್ಣ. ಕಣ್ಣಲ್ಲಿ ಸಂಶಯ ಭಾವ ಸುಳಿಯಿತು. ಹಣೆಯ ಮೇಲೆ ಸಿರಗಳೆದ್ದುವು ತಲೆಯು ಕಾವೇರಿತು. ಹಲ್ಲುಕಡಿದ. ಮುಷ್ಟಿಗೆಗಳು ಗಟ್ಟಿಯಾಗಿ ಮುಚ್ಚಿದುವು

ಚಂದ್ರವ್ವ ಪತಿಯ ರೌದ್ರಾವತಾರವನ್ನೂ—ಅದರ ... ಭಯಂಕರತೆಯನ್ನೂ — ತಿಳಿದು ಅಂಜಲಿಲ್ಲ. ಅವನ ಕಣ್ಣ ... ಭಾವನೆಯನ್ನು ಕಂಡು ಹೆದರಿದಳು. ಆದರಿಂದ ನಿಶ್ಚೇಷ್ಟಿತಳಾಗಿ ಹೊರಳಿ ಹಿಂದೆಬಿದ್ದಳು.

ಸತ್ಯಣ್ಣ ಚಟ್ಟನೆ ಚೀರಿ ಒಮ್ಮೆಲೇ ಎದ್ದು ನಿಂತ. ತನ್ನ ದೊಡ್ಡವಾದ ಕೆಂಪು ಕಣ್ಣುಗಳನ್ನು ಸುತ್ತಲೂ ಹೊರಳಿಸಿ ನೋಡಿದ.

"ನನ್ನ ಮನೆ ಹಾಳಾಯಿತಪ್ಪಾ....!" ಎಂದು ಕೂಗಿ ಹುಚ್ಚು ಹಿಡಿದು ಎದ್ದು ನಿಂತ.

ಬಸಪ್ಪ ಏನೋ ಒಂದು ತಪ್ಪುಮಾಡಿದವನಂತೆ ಬೆಪ್ಪಾಗಿ ನಿಂತಿದ್ದ. ಕಣ್ಣು ಸಣ್ಣದು ಮಾಡಿ, ಹುಬ್ಬುಗಂಟಿಕ್ಕಿ ನಿರೀಕ್ಷಿಸುತ್ತಿದ್ದ. ಈ ಪ್ರಪಂಚವೇ ಒಂದು ಒಗಟಿನಂತೆ ಎನಿಸಿದ್ದಿತವನಿಗೆ. ಒಂದು ಕ್ಷಣ ಕಣ್ಣುಮುಚ್ಚಿ ತಲೆತೂಗುವ. ಮರುಕ್ಷಣದಲ್ಲಿ ಕೆರಳಿದ ಕಣ್ಣುಗಳಿಂದ ಲೋಕವನ್ನು ನಿಟ್ಟಿಸುವ. ಅವನ ಕಣ್ಣ ... ಬಿಡಲಾರದ ಒಗಟು ನೆಲೆನಿಂತಿತ್ತು.

ಹೊರಗೆ ಕ್ಷಣಕ್ಷಣಕ್ಕೂ ಮಂಜು ಹೆಚ್ಚುತ್ತಲೇ ಇತ್ತು.

ಕಿಮ್ಮತೀ ಮುತ್ತು

(ಸಣ್ಣ ಕತೆ) *

ಶ್ರೀ. ಶ್ರೀ. ಶಾ. ಚುಳಕಿ ಬಿ.ಎ. (ಆನರ್ಸ್). ವಿಜಾಪೂರ

卐

ಭಾವನಾತ್ಮಕಲೋಕದಲ್ಲಿ, ಯಾವ ಸಹಜವಸ್ತುವಿನ ಬೆಲೆಯೂ ಎಷ್ಟೊಂದು ಹೆಚ್ಚೇತೆಂಬುದನ್ನು ಲೆಕ್ಕಾಚಾರದಿಂದ ಹೇಳಲಿಕ್ಕೆ ಬರಲಾರದು. ಗೋವಿಂದನಿಗೆ ತನ್ನ ಹೆಂಡತಿಯ ಒಂದು ಮುತ್ತಿಗಾಗಿಯೂ ಎಷ್ಟೊಂದು ಹಣ-ವೇಳೆ-ಸಹನಶಕ್ತಿಗಳ ಬೆಲೆ ಕೊಡಬೇಕಾಯಿತು, ಗೊತ್ತೇ?

卐

ಪೋಸ್ಟರ್ ಗೋವಿಂದ ತನ್ನ ಕೆಲಸದಲ್ಲಿ ನಿರತನಾಗಿದ್ದ. ಎತ್ತರವಾದ ಸ್ಟೂಲಿನ ಮೇಲೆ ಕುಳಿತು, ತನ್ನ ಎದುರಿಗಿದ್ದ ಪತ್ರಗಳ ರಾಶಿಯಿಂದ ಒಂದೊಂದೇ ಪತ್ರ ತೆಗೆದು, ಅದರ ವಿಳಾಸ ನೋಡಿ ಆ ಆ ಖಾನೆಗೆ ಸೇರಿಸುತ್ತಿದ್ದ. ಕಣ್ಣಿನ ದೃಷ್ಟಿ ಪತ್ರಗಳ ವಿಳಾಸದ ಕಡೆಗೆ, ಕೈಯ ಓಟ ಖಾನೆಗಳ ಕಡೆಗೆ, ಮನಸ್ಸಿನ ಓಟ ಒಂದೊಂದಾಗಿ ಪತ್ರಗಳು ಕರಗಿದಂತೆ ಸಣ್ಣದಾಗುತ್ತ ಹೋಗುತ್ತಿದ್ದ ಪತ್ರಗಳ ರಾಶಿಯ ಕಡೆಗೆ. — ಹೀಗೆ ಯಂತ್ರದಂತೆ ನಡೆದಿತ್ತು ಅವನ ಕೆಲಸ. ಒಂದು ಪತ್ರದ ವಿಳಾಸವನ್ನೋದುತ್ತಿರುವಾಗ, ಅವನ ಕೈ ತಟ್ಟನೆ ನಿಂತು ಬಿಟ್ಟಿತು. Shri G. R. Desai, Post office. Bijapur. ತನ್ನದೇ ಆ ಪತ್ರ. ಮುದ್ರೆ ನೋಡಿದ; ಬಾಗಿಲುಕೋಟೆಯದು. 'ದೇಸಗತಿ ಇರದಿದ್ದರೆ ಅಷ್ಟೇ ಹೋಯಿತು, 'ದೇಸಾಯಿ' ಎಂಬ ಅಡ್ಡ ಹೆಸರಾದರೂ ಇದೆಯಲ್ಲ!' ಎಂಬ ಸಮಾಧಾನ ಮನಸ್ಸಿನಲ್ಲಿ ಮೂಡಿತು. ಅಲ್ಲಿಯೇ ಪತ್ರ ಒಡೆದ; ಅದು ಅವನ ಮಾವ ಗಣಪತಿರಾಯರದು :

"ಅಳಿಯ ಗೋವಿಂದರಾಯರಿಗೆ,
ಅನೇಕ ಆಶೀರ್ವಾದಗಳು.

ತಮವಾಯು ಇಲ್ಲಿ ಎಲ್ಲವೂ ಕ್ಷೇಮ. ಈಗ ಪತ್ರ ಬರೆಯಲು ಕಾರಣವೇನೆಂದರೆ, ಮನೆಯಲ್ಲಿ ಚಿ|| ಕು|| ಸೌ| ಗಂಗೂ ನಾಳಿನ ಮಂಗಳವಾರ ಮಂಗಳಾಗೌರಿಯ ವ್ರತವನ್ನಾಚರಿಸುವವಳಿದ್ದಾಳೆ. ಮೊದಲ ಮಂಗಳಾಗೌರಿಯಾದ್ದರಿಂದ ತಾವೂ ಬಂದರೆ ಒಳ್ಳೆಯದು— ಎಂದು ನಮ್ಮೆಲ್ಲರ ಆಶೆ. ಆದ್ದರಿಂದ ತಾವು ದಯವಿಟ್ಟು, ಮಂಗಳವಾರದೊತ್ತಿಗೆ ರಜೆ ತೆಗೆದುಕೊಂಡು ಬರಬೇಕು. ಸಾಧ್ಯವಿದ್ದಲ್ಲಿ ನಾಲ್ಕು ದಿನ ಹೆಚ್ಚಿಗೆ ರಜೆ ತೆಗೆದುಕೊಂಡು ಬಂದಲ್ಲಿ, ನಾಲ್ಕು ದಿನ ಹೆಚ್ಚಿಗೆ ಇರಲು ಆಗುತ್ತದೆ. ತಾವು ತಪ್ಪದೇ ಬರುವಿರೆಂದಾಶಿಸುತ್ತೇನೆ.

ಇತಿ ಆಶೀರ್ವಾದಗಳು.
ನಿಮ್ಮ ಮಾವ
ಗಣಪತಿರಾಯರು"

ಪತ್ರ ಮುಗಿದಾಗ ಗೋವಿಂದನಿಗೆನಿಸಿತು: 'ರಜೆ ಪಡೆದುಕೊಂಡು ಹೋಗಲೇ?' ಎಂದು. ಮುಖ ಮೇಲೆತ್ತಿ ಎದುರಿಗಿದ್ದ ಕ್ಯಾಲೆಂಡರನ್ನು ನೋಡಿದ. ಅಂದೇ ಸೋಮವಾರ. ನಿನ್ನೆಯ ದಿನ ರವಿವಾರವಾದ್ದರಿಂದ, ಟಪಾಲು ಬಿಟ್ಟಿರಲಿಲ್ಲ. "ಹೋದರೆ ನಾಳೆ ತಾನೇ ಹೋಗಬೇಕು? ಮುಂಜಾನೆ ೭—೩೦ರ ಲೋಕಲ್ಲಿಗೆ ಹೋದರೆ, ೧೧ ಘಂಟೆಗೆ ಊರಲ್ಲಿರಬಹುದೇನೋ ನಿಜ; ಆದರೆ ಒಂದು ಮಂಗಳಾಗೌರಿಯ ಪೂಜೆಗಾಗಿ ತಾನು ಇಲ್ಲಿಂದಲ್ಲಿಗೆ ರಜೆ ತೆಗೆದುಕೊಂಡು ಹೋಗುವುದೇ? ಅಲ್ಲದೆ ಮಂಗಳಾಗೌರಿಯ ಪೂಜೆಯಲ್ಲಿ ತನ್ನದೇನು ಕೆಲಸ? ಉಸವಿಲ್ಲದಿದ್ದರೂ, ಸುಮ್ಮನಾದರೂ ಹೋಗಬೇಕೆಂದರೆ, ರಜೆ ಸಿಕ್ಕಬೇಕಲ್ಲ! ತಿಂಗಳ ಕೊನೆಯ ದಿನಗಳು ಬೇರೆ. ಕೆಲಸ ಜಾಸ್ತಿಯಾಗುತ್ತದೆ. ರಜಾ ಬೇಡಿದರೆ, ಪೋಸ್ಟ್‌ಮಾಸ್ಟರ್ ಕೊಡಲಿಕ್ಕಿಲ್ಲ. ಹೋಗಲಿ, ಬಿಟ್ಟುಬಿಡೋಣ! ಮತ್ತೊಮ್ಮೆ ಯಾವಾಗಲಾದರೂ ಹೋದರಾಯಿತು" ಎಂದು ತನ್ನ ಕೆಲಸದಲ್ಲಿ ನಿರತನಾದ.

ಒಂದೊಂದೇ ಪತ್ರವನ್ನು ಖಾನೆಯಲ್ಲಿ ಸೇರಿಸುತ್ತಿದ್ದಂತೆಯೆ ಕೆಲಸದ ಭಾರ ಕಡಿಮೆ ಎನಿಸಿ, ಮನಸ್ಸಿಗೆ ಹಗುರೆನಿಸುತ್ತಿತ್ತು. ಇನ್ನು ಕೊನೆಯದಾಗಿ ಒಂದೇ ಉಳಿದಿತ್ತು. 'ಅದನ್ನೊಂದು ಖಾನೆಗೆ ಒಗೆದರೆ ಗೆದ್ದೆ!' ಎಂಬ ಸಮಾಧಾನದಿಂದ ಅದನ್ನೆತ್ತಿದ. ಅದನ್ನೆತ್ತಿ ವಿಳಾಸ ಓದಿದ. ತನ್ನದೇ ಓಲೆ. ಮೇಲಿನ ಮುದ್ರೆ ನೋಡಿದ. ಬಾಗಿಲುಕೋಟೆಯದೇ. ಗೋವಿಂದನಿಗೆ ಆಶ್ಚರ್ಯವಾಯಿತು, ಅವಸರದಿಂದ ಕವ್ಹರನ್ನು ಒಡೆದು ಓದಿದ. ಓಲೆ ಅವನ ನಲ್ಲೆ ಗಂಗೆಯದು :

"ಪ್ರಿಯ ಪತಿದೇವರಿಗೆ,
ಪ್ರಣಯದಾಸಿಯ ಪ್ರಣಾಮಗಳು........"

'ಶಹಬ್ಬಾಸ್' ಎಂದ ಗೋವಿಂದ. 'ಪ್ರಾಸಕ್ಕೆ ಅಡ್ಡಿಯಿಲ್ಲ' ಎಂದು ಸಂತೋಷದಿಂದ ಮತ್ತೊಮ್ಮೆ ಮೊದಲಿನಿಂದ ಓದತೊಡಗಿದ :

"ನಾನಿಲ್ಲಿಗೆ ಬಂದಂದಿನಿಂದಲೂ ನಿಮಗೆ ಪತ್ರ ಬರೆಯದೆ ಇದ್ದದ್ದಕ್ಕಾಗಿ ನಿಮ್ಮ ಕ್ಷಮೆ ಬೇಡುತ್ತೇನೆ. ನಿಮ್ಮ ಎರಡೂ ಓಲೆಗಳೂ ಕೈ ಸೇರಿದವು— ತಂದೆಯವರ ಮುಖಾಂತರ. ಆದರೆ ಪಾಪ,

---

* 'ಕಿಮ್ಮತೀ ಮುತ್ತು' ಎಂದರೆ 'ಬೆಲೆಬಾಳುವ ಮುತ್ತು' ಎಂದು ಅರ್ಥ. ಈ ಕಥೆಯು ಹೋರಾಟದಲ್ಲಿ ೨ನೆಯ ಬಹುಮಾನವನ್ನು ಪಡೆದಿದೆ.
ಸ. ಜ.

ಅವರು ಏನೂ ಅನ್ನಲಿಲ್ಲ. ನೀವು ಇನ್ನು ಮೇಲಾದರೂ ಬರೆಯುತ್ತ ಇರಿ. ನಾನೂ ಸಾಧ್ಯವಾದಲ್ಲಿ ಮನೆಗೆಲಸಗಳಲ್ಲಿ ತೆರವು ಮಾಡಿಕೊಂಡು ಬರೆಯುತ್ತೇನೆ.

ಈಗ ಪತ್ರ ಬರೆಯುವ ವಿಶೇಷ ಕಾರಣವೆಂದರೆ: ನಾಳಿನ ಮಂಗಳವಾರ, ಮಂಗಳಾಗೌರೀ ಪೂಜೆಯನ್ನು ಮಾಡುವ ವಿಚಾರವಿದೆ. ಊರಲ್ಲಿಯ ನಾಲ್ಕಾರು ಗೆಳತಿಯರಿಗೂ ಔತಣ ಕೊಟ್ಟಿದ್ದೇನೆ. ಈ ಪ್ರಸಂಗದಲ್ಲಿ ತಾವು ಇದ್ದರೆ ಅದಕ್ಕೆ ಹೆಚ್ಚಿನ ಶೋಭೆ ಬರುತ್ತದೆ. ಅದಕ್ಕಾಗಿ ತಪ್ಪದೇ ರಜಾ ತೆಗೆದುಕೊಂಡು, ಮಂಗಳವಾರ ಮುಂಜಾನೆ ಬರಬೇಕಾಗಿ ಪ್ರಾರ್ಥನೆ. ನನ್ನನ್ನು ನಿರಾಶೆಗೊಳಿಸಲಿಕ್ಕಿಲ್ಲವೆಂದು ನಂಬುತ್ತೇನೆ.

ಇತಿ ತಮ್ಮ ಚರಣದಾಸಿ

ಗಂಗಾ ''

ಪತ್ರವನ್ನೋದಿ ಮುಗಿಸಿ ಅದನ್ನು ಕಿಸೆಯಲ್ಲಿಟ್ಟುಕೊಂಡ. 'ಹೋಗಲೇ ಬೇಡವೇ ?' ಎಂಬ ಪ್ರಶ್ನೆ ಮತ್ತೆ ಬಂದಿತು. 'ಇಷ್ಟು ಪರಿಯಿಂದ ಬರೆದುಕೊಂಡಿದ್ದಾಳೆ ; ಹೋಗಿ ಬರಬೇಕು !' ಎಂದಿತು ಮನಸ್ಸು; ಆದರೆ ರಜೆ ಸಿಕ್ಕಬೇಕಲ್ಲ! 'ಕೇಳಿಯಾದರೂ ನೋಡೋಣ' ಎಂದು ಧೈರ್ಯಮಾಡಿ ಸ್ಟೂಲಿನಮೇಲಿಂದೆದ್ದ.

ಸಾವಕಾಶವಾಗಿ ಹೆಜ್ಜೆ ಇಡುತ್ತ ಪೋಸ್ಟ್‌ಮಾಸ್ತರರ ಹತ್ತಿರ ಹೋಗಿ, 'ಸರ್!' ಎಂದ. ಪೋಸ್ಟ್‌ಮಾಸ್ತರು ಕತ್ತೆತ್ತಿ ನೋಡಿ 'ಏನು ?' ಎಂದರು ಧ್ವನಿ ಸ್ವಲ್ಪ ಬಿರುಸಾಗಿತ್ತು. ಗೋವಿಂದನ ಅರ್ಧ ಬಲವೇ ಕುಗ್ಗಿದಂತಾಯಿತು. ಆದರೂ ಸಾವರಿಸಿಕೊಂಡು 'ಊರಿಂದ ಕಾಗದ ಬಂದಿದೆ ಸರ್!' ಎಂದ. ''ಬಂದರೆ?' ಪೋಸ್ಟ್‌ಮಾಸ್ತರ ಪ್ರಶ್ನೆ. ''ನಾಲ್ಕು ದಿನಗಳ ಮಟ್ಟಿಗೆ ಊರಿಗೆ ಬಾ" ಎಂದು ಬರೆದಿದ್ದಾರೆ. ಗೋವಿಂದ ಹೇಳಿದ. 'ಅದಕ್ಕೆ ರಜೆ ಬೇಕು ಅಹುದಲ್ಲೋ ?' ಪೋಸ್ಟ್‌ಮಾಸ್ತರು ಕೇಳಿದರು. 'ಹೌದು ಸರ್!' ರಜೆ ಸಿಕ್ಕೀತೆಂಬಾಶೆಯಿಂದ ಗೋವಿಂದ ಉತ್ತರವಿತ್ತ. 'ಇದು ನೋಡಿ ದೇಸಾಯಿ,' ಪೋಸ್ಟ್‌ಮಾಸ್ತರು ಹೇಳಿದರು : 'ಈಗ ತಿಂಗಳ ಕೊನೆಯ ದಿನಗಳು ಕೆಲಸ Heavy ಯಾಗಿರುತ್ತದೆ. ಆದ್ದರಿಂದ ರಜೆ ಕೊಡಲಿಕ್ಕೆ ಬರುವುದಿಲ್ಲ.' ಎಂದು ಹೇಳಿ ಕತ್ತು ಕೆಳಗೆ ಹಾಕಿದರು. ಗೋವಿಂದನಿಗೆ ನಿರಾಶೆಯಾಯಿತು.. ಆದರೂ ಕೊನೆಯ ಪ್ರಯತ್ನವೆಂದು "ನೋಡಿ ಸರ್! ನಾಲ್ಕು ದಿನಗಳ ಮಟ್ಟಿಗಾದರೂ ಕೊಡಿ; urgent ಇದೆ" ಎಂದು ದೈನ್ಯದಿಂದ ಕೇಳಿದ. ಪೋಸ್ಟ್‌ಮಾಸ್ತರು ಕತ್ತೆತ್ತಿ ನೋಡಿದರು. ಇವನ ದೈನ್ಯವಾಣಿ ಕೇಳಿ ಕರುಣೆಬಂದಿತೇನೋ! 'ಎಲ್ಲಿಗೆ ಬಾಗಿಲುಕೋಟೆಗೆ ತಾನೇ ಹೋಗುವುದು ?' ಎಂದು ಕೇಳಿದರು. ಅವರಿಗೂ ಗೊತ್ತು, ಗೋವಿಂದನ ಮಾವನೂರು ಬಾಗಿಲುಕೋಟೆ—ಎಂದು "ಹೌದು ಸರ್," ಎಂದು ದೇಶಾವರಿಯ ನಗೆನಗುತ್ತ ಗೋವಿಂದ ಉತ್ತರವಿತ್ತ. ಪೋಸ್ಟ್‌ಮಾಸ್ತರೂ ನಗುತ್ತ "ಇದು ನೋಡಿ ದೇಸಾಯಿ, ನೀವು ನಾಳೆ ಹೋಗಬಹುದು; ಆದರೆ ರಜೆ ಮಾತ್ರ ಮೂರೇ ದಿನದ್ದು ಕೊಡಲಾಗುವುದು. ಇಂದು ಸೋಮವಾರ ತಾನೇ? ಮಂಗಳವಾರ, ಬುಧವಾರ, ಗುರುವಾರ ....ಶುಕ್ರವಾರ ೧೧-೩ಂಕ್ಕೆ ನೀವು ಆಫೀಸಿನಲ್ಲಿ ಹಾಜರ್ ಇರಬೇಕು; ತಪ್ಪಿಸಿದರೆ ಜೋಕೆ" ಎಂದು ಗದ್ದರಿಸಿದರು. ''ಇಷ್ಟಾದರೂ ರಜೆ ಸಿಕ್ಕಿತಲ್ಲ" ಎಂದು ತೃಪ್ತಿಯಿಂದ 'Thank you sir' ಎಂದು ಹೇಳಿ ತಿರುಗಿ ತನ್ನ ಸ್ಥಳಕ್ಕೆ ಬಂದ.

ಗೋವಿಂದನಿಗೆ, ಪೋಸ್ಟ್‌ಮಾಸ್ತರೊಂದಿಗೆ ಅಷ್ಟು ಮಾತನಾಡಿ ರಜೆ ಪಡೆದುಕೊಂಡು ಬಂದದ್ದೆಂದರೆ ಒಂದು ವಿಜಯಯಾತ್ರೆ.



ಯನ್ನು ಮಾಡಿದಂತಾಗಿತ್ತು. ಮುಖದ ಮೇಲೆ ಬೆವರುಹನಿಯಾಡುತ್ತಿದ್ದರೂ, ರಜೆ ಸಿಕ್ಕಿದ್ದಕ್ಕಾಗಿ ಮೀಸೆಯ ಕೆಳಗೆ ಮುಗುಳುನಗೆಯಾಡುತ್ತಿತ್ತು. ಮೆಲ್ಲಗೆ ಕಿಸೆಯೊಳಗಿಂದ ಕರವಸ್ತ್ರವನ್ನು ತೆಗೆದುಕೊಂಡು ಮುಖ ಒರಸಿಕೊಂಡ, ತಿರುಗಿ ಕಿಸೆಯಲ್ಲಿ ಕರವಸ್ತ್ರ ಇಡಲು ಹೊರಟಾಗ, ಒಳಗಿಸೆಯೊಳಗಿನ 'ಪರ್ಸ್' ಕೈಗೆ ಹತ್ತಿತು. ಅದನ್ನು ಕಿಸೆಯೊಳಗಿಂದ ತೆಗೆದು zip ಸರಿಸಿ ನೋಡಿದ ಮೂಲೆಯಲ್ಲಿ ಬೆಳ್ಳಿಯ ಎಂಟಾಣೆಯ ನಾಣ್ಯವೊಂದು ಹಾಗೂ ಸುಮಾರು ಎಂಟಾಣೆಯಷ್ಟು ಚಿಲ್ಲರೆ ನಾಣ್ಯಗಳು ಕಾಣಿಸಿದುವು. ಗೋವಿಂದನಿಗೆ ಯೋಚನೆಗಿಟ್ಟುಕೊಂಡಿತು. ಪೋಸ್ಟ್‌ಮಾಸ್ಟರನ್ನು ಕೇಳಿ ರಜೆಯನ್ನೇನೋ ಪಡೆದುಕೊಂಡುದಾಯಿತು; ಆದರೆ ಜೇಬು ಖಾಲಿ! ಊರಿಗೆ ಹೋಗಬೇಕಾದರೆ ಹಣ ಬೇಡವೇ? ಗಾಡಿಯ ವೆಚ್ಚಕ್ಕೆ ಹಣಬೇಕು! ಇಲ್ಲಿಂದಲ್ಲಿಗೆ ಹೋಗಬೇಕಾದರೆ ಸಂಗೆಗೇನಾದರೂ ಹೂವು, ಅರಿವೆ— ಒಯ್ಯಬೇಡವೇ? ಹೋಗುವುದೇ ಆದಲ್ಲಿ, ಏನಿಲ್ಲೆಂದರೂ ಹತ್ತು ರೂಪಾಯಿಯಷ್ಟಾದರೂ ಬೇಕು. ಅಷ್ಟು, ಹಣ ಎಲ್ಲಿಂದ ತರಬೇಕು? ಹೋಗುವುದೇ ಬಿಟ್ಟರೆ? ಛೆ! 'ಬರ್ರಿ' ಎಂದು ಆಗ್ರಹದಿಂದ ಪತ್ರ ಬರೆದಿದ್ದಾಳೆ. ಅದೂ ಅಲ್ಲದೆ, ಪೋಸ್ಟ್‌ಮಾಸ್ಟರನ್ನು ಕೇಳಿ ರಜೆ ಪಡೆದುಕೊಂಡುದಾಗಿದೆ. ಈಗ ಹೋಗುವುದಿಲ್ಲ ಎಂದರೆ? ಛೇ, ಅದೇನಿಲ್ಲ! ಹೋಗಲೇ ಬೇಕು! ಹಾಗಾದರೆ ಹಣಕ್ಕೇನು ಗತಿ? ತನ್ನ colleague ರಂಗಸ್ವಾಮಿಯನ್ನು ಕೇಳಿನೋಡೋಣ — ಎಂದು ಎದ್ದ.

ರಂಗಸ್ವಾಮಿಯ ಟೇಬಲಿನ ಹತ್ತಿರ ಹೋದಾಗ, ಅವನೇನೋ ಕೆಳಗೆ ಮುಖಹಾಕಿ ಬರೆಯುತ್ತ ಕುಳಿತಿದ್ದ. ಗೋವಿಂದ ಸಾವಕಾಶವಾಗಿ ಅವನ ಹತ್ತಿರ ಹೋಗಿ "ರಂಗಸ್ವಾಮಿ!" ಎಂದ. ರಂಗಸ್ವಾಮಿ ಸ್ವಲ್ಪ ಗೋಣು ಮೇಲಕ್ಕೆತ್ತಿ "ಏನು ದೇಸಾಯಿ?" ಎಂದ. "ಏನಿಲ್ಲ ರಂಗಸ್ವಾಮಿ! ನಿನ್ನ ಹತ್ತಿರ ಒಂದು ಅರ್ಜಂಟ್ ಕೆಲಸ ಇತ್ತು!" ರಂಗಸ್ವಾಮಿಗೆ ಅನುಮಾನ ಬಂತು. ಆದರೂ ಅದನ್ನು ತೋರಗೊಡದೆ, "ಏನು ದೇಸಾಯಿ, ಹೇಳಿದರೆ, If possible I shall help you" ಎಂದ. "ಏನಿಲ್ಲ ನಾಳೆ ಅರ್ಜಂಟ್ ಆಗಿ ಊರಿಗೆ ಹೋಗಬೇಕಾಗಿದೆ, ಒಂದು ಹತ್ತು ರೂಪಾಯಿ ಬೇಕಾಗಿತ್ತು!" ಎಂದು ದೈನ್ಯದಿಂದ ಹೇಳಿದ. ರಂಗಸ್ವಾಮಿ ಕೈಯಲ್ಲಿದ್ದ ಲೆಕ್ಕಣಿಕೆಯನ್ನು ಟೇಬಲಿನ ಮೇಲಿಟ್ಟು, ಅದರ ಮೇಲೆ ಎರಡೂ ಕೈಗಳನ್ನೂರಿ ಹೇಳಿದ: "I am sory ದೇಸಾಯಿ, ತಿಂಗಳ ಕೊನೆಯ ದಿನಗಳು; ಅದ್ದರಿಂದ I am helplessಪಾ" ಎಂದ. ಗೋವಿಂದನಿಗೆ ನಿರಾಶೆಯಾಯಿತು. "ನೋಡಪ್ಪಾ, ಒಂದು ಹತ್ತು ರೂಪಾಯಿ ಕೊಡು. ನಾಳೆ ಸಂಬಳ ಬಂದ ಕೂಡಲೆ ಕೊಡತೀನಿ" ಎಂದ. ರಂಗಸ್ವಾಮಿಗೆ ಏನು ತಿಳಿಯಿತೋ ಏನೋ! "ಏನು ಬಾಗಿಲುಕೋಟೆಗೆ ಹೋಗೋದೇ?" ಎಂದ. 'ಹೌದು' ಎಂದ ಗೋವಿಂದ ಪೇಲವರಿ ನಗೆ ನಗುತ್ತ: "ಅದಕ್ಕೇನಪ್ಪಾ ಹತ್ತು ರೂಪಾಯಿ ಬೇಡಿದ್ದು!" "ಕೊಡುತ್ತೇನೆ" ರಂಗಸ್ವಾಮಿ ಹೇಳಿದ. ಗೋವಿಂದನ ಮುಖ ಅಗಲವಾಯಿತು. "ಆದರೆ ಒಂದು ಕಂಡಿಶನಿನ ಮೇಲೆ!" ಎಂದ, ರಂಗಸ್ವಾಮಿ. 'ಏನದು?' ಗೋವಿಂದ ಆತುರದಿಂದ ಕೇಳಿದ. "ಬಡ್ಡಿಯ ರೂಪದಲ್ಲಿ ಇಂದು ಸಂಜೆಗೆ ಎರಡು ರೂಪಾಯಿ ಕೊಡಬೇಕು." ಗೋವಿಂದನ ಮುಖ ಅಗಲವಾದದ್ದು ಸಪ್ಪಗಾಯಿತು. ಆದರೂ ಅದನ್ನು ತೋರಗೊಡದೆ, "ಅಲ್ಲೋ ಸ್ವಾಮೀ, ೧೦ ರೂಪಾಯಿಗೆ ಮೂರು ದಿನಕ್ಕೆ ಎರಡು ರೂಪಾಯಿ ಬಡ್ಡಿ ಅಂದರೇನೋ!" ಎಂದ. "ಹೌದೋ ಬಡ್ಡಿಯ ದರ ಪ್ರಸಂಗದ ಮೇಲೆ ಅವಲಂಬಿಸಿರುತ್ತದೆ" ಎಂದು ರಂಗಸ್ವಾಮಿ ನಕ್ಕ. ಗೋವಿಂದ ನಿರುಪಾಯನಾಗಿ "ಹೂಂ, ಆದರೆ ಬಡ್ಡಿಯ ರಕಮೂ ಸಾಲಾ ಕೊಡಬೇಕು" ಎಂದು ತನ್ನ ಟೇಬಲಿನ ಕಡೆಗೆ ನಡೆದ.

ಗೋವಿಂದ ಬಂದು ಕೋಟು ತೆಗೆದಿಟ್ಟು, ಇನ್ನೇನು ತನ್ನ ಕುರ್ಚಿಯ ಮೇಲೆ ಕೂಡ್ರುವವ. ಅಷ್ಟರಲ್ಲಿ ಪ್ಯೂನ್ ಬಂದು "ಸರ್ ನಿಮ್ಮನ್ನು ಸಾಹೇಬರು ಕರೆಯುತ್ತಾರೆ!" ಎಂದ. ಗೋವಿಂದನಿಗೆ ಗಾಬರಿಯಾಯಿತು 'ಮತ್ತೇನು ಆತಂಕ ಬಂತಪ್ಪಾ!' ಎಂದು ಎದ್ದು ಕೋಟುಹಾಕಿಕೊಂಡು, ಪೋಸ್ಟ್‌ಮಾಸ್ಟರರ ಕೋಣೆಯ ಕಡೆಗೆ ನಡೆದ. ಪೋಸ್ಟ್‌ಮಾಸ್ಟರು ಇವನು ಬಂದುದನ್ನು ಕಂಡು "ಇದು ನೋಡ್ರಿ ದೇಸಾಯಿ! ನಾಳೆ ನೀವು ರಜದ ಮೇಲೆ ಹೋಗುತ್ತೀರಲ್ಲ! ಅದಕ್ಕೂ ಮೊದಲು ನಾಳೆ ಮುಂಜಾನೆ ಇಷ್ಟು ಆಫೀಸಿಗೆ ಬಂದು, ಇದಿಷ್ಟು ಅಕಾವುಂಟು ಕರೆಕ್ಟ್ ಅದೆಯೋ ಹ್ಯಾಗೆ ನೋಡಿ, ಮಧ್ಯಾಹ್ನ ಗಾಡಿಗೆ ಹೋಗಿಬಿಡಿ!" ಎಂದು ಹೇಳಿದರು. ಗೋವಿಂದನ ಆಶೆಯ ಗೋಪುರ ಕಳಚಿಬಿದ್ದಂತಾಯಿತು. ತಾನು ಮರುದಿನ ಬೆಳಗ್ಗೆ ಲೋಕಲ್ಲಿಗೆ ಹೋಗಬೇಕೆಂದು ಮಾಡಿದ್ದ; ಆದರೆ ಮತ್ತೆ ಐದು ಘಂಟೆ ತಡವಾಗುವುದಲ್ಲ— ಎನ್ನಿಸಿತು. ಆದರೂ "ನಾಳೆ ಮಧ್ಯಾಹ್ನವಾದರೂ ಹೋಗಬಹುದಲ್ಲಾ, ಅಷ್ಟೇ ಸಾಕು!" ಎಂಬ ಸಮಾಧಾನದಿಂದ "ಆಗಲಿ ಸರ್!" ಎಂದು ತಿರುಗಿ ಬಂದ.

ಆಫೀಸನ್ನು ಬಿಟ್ಟಮೇಲೆ ರಂಗಸ್ವಾಮಿಯನ್ನು ಕರೆದುಕೊಂಡು ಹೋಗಿ, ಅವನಿಗಷ್ಟು 'ಬಡ್ಡಿ' ಕೊಟ್ಟು, ಹತ್ತು ರೂಪಾಯಿ ತೆಗೆದುಕೊಂಡು ಬಂದ. ಹಾದಿಯಲ್ಲಿ ಪೇಟೆಯಲ್ಲಿ ಹಾಯ್ದು ಅರಿವೆ ತೆಗೆದುಕೊಂಡು, ಹೂವಿನ ಪೇಟೆಯಲ್ಲಿ ಹಾಯ್ದು ಹೂ ತೆಗೆದುಕೊಂಡು, ಖಾನಾವಳಿಗೆ ಹೋಗಿ ಊಟಮಾಡಿಕೊಂಡು, ಬೇಗನೆ ಮನೆಗೆ ಬಂದ. ಹಾಸಿಗೆ ಹಾಸಿ ಮಲಗಬೇಕೆಂದರೆ, ಖೋಡಿ ನಿದ್ರೆಯೇ ಬರಲೊಲ್ಲದು. ಮಾರನೆಯ ದಿನದ ಸವಿಯನ್ನು ಯೋಚನೆಗಳಲ್ಲಿಯೇ ಸವಿಯತೊಡಗಿದ್ದ. ಅದು ಪ್ರತ್ಯಕ್ಷ ಅನುಭವಕ್ಕಿಂತಲೂ ಹೆಚ್ಚು ಸವಿಯಾಗಿತ್ತು, ಆ ಯೋಚನೆಗಳಲ್ಲಿ ಯಾವಾಗ ನಿದ್ರೆಹತ್ತಿತೋ— ಅವನಿಗೆ ಗೊತ್ತಾಗಲಿಲ್ಲ.

ಮಾರನೆಯ ದಿನ ಹುರುಪಿನಿಂದ 'ನಸುಕಿ'ನಲ್ಲಿ ಏಳು ಗಂಟೆಗೆ ಊರಿಗೆ ಹೋಗುವ ಸಿದ್ಧತೆಯಿಂದ Travelling Bag ನಲ್ಲಿ ಗಂಜಿ

ಬಟ್ಟೆ ಹಾಕಿಕೊಳ್ಳುತ್ತಿರುವಾಗ, ಮುನ್ನಾ ದಿನ ಪೋಸ್ಟ್‌ಮಾಸ್ಟರು ಹೇಳಿದ ಕೆಲಸ ನೆನಪಿಗೆ ಬಂತು. ಹೋಗಲಿಕ್ಕೆ ಬೇಸರು; ಆದರೆ ಹೋಗದೆ ಗತಿ ಇಲ್ಲ. ಹಾಗೆಯೇ ಎದ್ದು ಮುಖ ತೊಳೆದುಕೊಂಡು, ಮಾಡರ್ನ್ ರೆಸ್ಟೊರಂಟಿನಲ್ಲಿ ಚಹ ಕುಡಿದು, ಪೋಸ್ಟಿಗೆ ಬಂದಾಗ ಗಂಟೆ ೯-೩೦ ಆಗಿತ್ತು. ಸುಮಾರು ಎರಡು ತಾಸಿನ ವರೆಗೆ ಕೆಲಸ ತೀರಿಸಿಕೊಂಡು, ಖಾನಾವಳಿಗೆ ಹೋಗಿ ಊಟ ತಿಂದು ಮನೆಗೆ ಬಂದ. ಮನೆಯಲ್ಲಿ ಬಟ್ಟೆಬದಲಾಯಿಸಿ ಸ್ಟೇಶನಿಗೆ ಬರಬೇಕಾದರೆ ಗಂಟೆ ೧೨-೩೦ ಆಗಿತ್ತು.

ಗೋವಿಂದನಿಗೆ ಗಾಡಿ ಯಾವಾಗ ಬಂದೀತೋ ?— ಎಂದು ಆತುರ. ಆದರೆ ಅವನ ಆತುರ ಹೆಚ್ಚುತ್ತಿರುವಂತೆಯೇ ಗಾಡಿ ಹೆಚ್ಚು ಹೆಚ್ಚು ತಡಮಾಡಿದಂತೆ ಎನಿಸತೊಡಗಿತು. 'ಥೂ' ಹಾಳು ಎಂ. ಎಸ್. ಎಂ. ಗಾಡಿ ಒಮ್ಮೆಯೂ ವೇಳೆಗೆ ಸರಿಯಾಗಿ ಬರುವುದಿಲ್ಲ!' ಎಂದು ಸುಮಾರು ನೂರುಸಲ ಗಾಡಿಯನ್ನು ಶಪಿಸಿದ. ಕೊನೆಗೊಮ್ಮೆ ಪೋರ್ಟರ್ ಗಂಟೆ ಹೊಡೆದ. 'ಇನ್ನೇನು ಗಾಡಿ ಬಂತು' ಎಂದು ಜನ ಗಡಿಬಿಡಿಯಿಂದ ಏಳತೊಡಗಿದರು. ಗೋವಿಂದನೂ ಎದ್ದು ಮುಂದೆ ಬಂದ. ಹಾದಿಯಲ್ಲಿ ಯಾವನೋ ಒಬ್ಬ "ಗಾಡಿ ಈಗ ಹಿಂಚಿನಾಳ ಬಿಟ್ಟಿತು, ಅದರ ಗಂಟೆ ಇದು !" ಎಂದ. ಗೋವಿಂದ ನಿಂತಲ್ಲಿಯೇ ಕೈಚೀಲ ಕೆಳಗಿಟ್ಟು ಕುಳಿತುಬಿಟ್ಟ. ಪಾಪ ನಿರಾಶೆಯಾಯಿತು. ಆಗುವುದೂ ಸಹಜ. ಎಂದಿಲ್ಲದೆ ಇಂದು ಹೆಂಡತಿಯ ಊರಿಗೆ ಹೊರಟಿದ್ದಾನೆ; ಇಂದೂ ಗಾಡಿ ತಡಮಾಡಬೇಕೇ ?

ಕೊನೆಗೊಮ್ಮೆ ಗಾಡಿ ಬಂದಿತು. 'ತಡವಾಗಿಯಾದರೂ.... ಬಂದಿತಲ್ಲ!' ಎಂಬ ಸಮಾಧಾನದಿಂದ, ಗಾಡಿಯನ್ನೇರಿದ. ಗಾಡಿಯಲ್ಲಿ ಸಾಕಷ್ಟು ಗದ್ದಲವಿದ್ದರೂ, ಅದರ ಪರಿವೆಯೇ ಇರಲಿಲ್ಲ ಅವನಿಗೆ. ಡಬ್ಬಿಯೊಂದನ್ನು ಸೇರಿ ಅಂತೂ ಒಂದು ಮೂಲೆಯಲ್ಲಿ ಸ್ಥಳ ಹಿಡಿದು 'ಉಶ್' ಎಂದು ಕರವಸ್ತ್ರದಿಂದ ಮುಖದ ಮೇಲಿನ ಬೆವರನ್ನೊರಸಿಕೊಳ್ಳುತ್ತ ಕುಳಿತ. ಗಾಡಿ ಬಿಟ್ಟಿತು. ಗೋವಿಂದನ ಮನಸ್ಸು ಗಾಡಿಗಿಂತಲೂ ಹೆಚ್ಚು ವೇಗದಿಂದ ಓಡುತ್ತಿತ್ತು. ಅವನಿಗೆ ಉಳಿದುದರ ಪರಿವೆಯೇ ಇಲ್ಲ. ಹೊರಗೆ ಭರದಿಂದ ಗಾಳಿ ಬೀಸುತ್ತಿದ್ದರೆ, ಆವನು ಒಳಗೆ ಕುಳಿತು ಗಾಳಿಗೋಪುರಗಳನ್ನು ಕಟ್ಟುತ್ತಿದ್ದ.

ಗಾಡಿ ಒಂದೊಂದಾಗಿ ಸ್ಟೇಶನ್ನುಗಳನ್ನು ದಾಟಿತು. ಗೋವಿಂದನಿಗೆ ಆ ಕಡೆಗೆ ಲಕ್ಷ್ಯವೇ ಇರಲಿಲ್ಲ. "ಕೂಡಗಿ ಎಲಿ!" "ಕೂಡಗಿ ಎಲಿ!" ಎಂಬ ಕೂಗು ಅವನನ್ನೆಚ್ಚರಿಸಿತು. ಕಿಟಕಿಯಿಂದ ಹೊರಗೆ ನೋಡಿದ. ಗಾಡಿ ಕೂಡಿಗಿ ಸ್ಟೇಶನ್ನಿನಲ್ಲಿ ನಿಂತಿತ್ತು. ಹೊರಗೆ ಪ್ಲ್ಯಾಟ್‌ಫಾರ್ಮಿನ ಮೇಲೆ ಒಬ್ಬ ಹುಡುಗ, ಒಂದು ಬುಟ್ಟಿಯಲ್ಲಿ ವೀಳ್ಯದೆಲೆಯ ಕಟ್ಟುಗಳನ್ನು ಹಿಡಿದುಕೊಂಡು 'ಕೂಡಿಗಿ ಎಲಿ, ಕೂಡಿಗಿ ಎಲಿ!' ಎಂದು ಕೂಗುತ್ತಿದ್ದ. ಹಳದಿ ಮಿಶ್ರಿತ ಹಸಿರು ಬಣ್ಣದ ಎಳೆಯ ಚಿಗುರೆಲೆಗಳು. ಅವನ್ನು ನೋಡಿದೊಡನೆ ಗೋವಿಂದನ ಮನಸ್ಸಿನಲ್ಲಿ ಏನು ವಿಚಾರ ಮೂಡಿತೋ ಏನೋ; ಅವನನ್ನು ಕರೆದು, ನೂರು ಎಲೆ ತೆಗೆದುಕೊಂಡ. ಹುಡುಗನ ಕೈಯಲ್ಲಿ ಎಂಟಾಣೆಯಿಟ್ಟ. ಹುಡುಗ "ಚಿಲ್ಲರೆ ಇಲ್ಲ ರಾವಸಾಹೇಬ, ತರತೇನಿ" ಎಂದು ಹೇಳಿ ಹೋದ. ಗಾಡಿ ಬಿಟ್ಟಿತು. ಹುಡುಗ ಹಣಕೊಡಲು ಬರುವಷ್ಟರಲ್ಲಿ ಗಾಡಿ ಪ್ಲ್ಯಾಟ್‌ಫಾರ್ಮನ್ನು ದಾಟಿತ್ತು. ರೊಕ್ಕ ಹೋದುದಕ್ಕಾಗಿ ಅಸಮಾಧಾನವೆನಿಸಿದರೂ, ಚಿಗುರೆಲೆಗಳನ್ನು ಕಂಡು ಸಮಾಧಾನ ಹುಟ್ಟಿಕೊಂಡ.

ಮತ್ತೆ ಗೋವಿಂದನ ಮನಸ್ಸು ಅಂದಿನ ಸಂಜೆಯ ಮುಂಗನಸುಗಳನ್ನು ಕಟ್ಟಹತ್ತಿತು. ಗೋವಿಂದನಿಗೆ 'ತೆಲಗಿ' ಯು ನಿಲ್ದಾಣ ದಾಟಿದ್ದೇ ಗೊತ್ತಾಗಲಿಲ್ಲ. ಗಾಡಿ ಬಿಟ್ಟ ಮೇಲೆ 'ತೆಲಗಿ' ದಾಟಿತೆಂದು ತಿಳಿದು, ಅಲ್ಲಿ ಚಹ ತೆಗೆದುಕೊಳ್ಳಬೇಕಾಗಿತ್ತೆಂದು ನೆನಪಾಯಿತು. ಆದರೆ ಗಾಡಿ ಸ್ಟೇಶನ ದಾಟಿತ್ತು.

ಅಂತೂ, ಗೋವಿಂದನ ಮನಸ್ಸಿನ ವೇಗವನ್ನು ಮೀರಿಸದಿದ್ದರೂ, ತನ್ನ ನಿತ್ಯದ ವೇಗದಲ್ಲಿಯೇ ಗಾಡಿ ಬಾಗಿಲುಕೋಟೆಯನ್ನು

'ಬಗನ' ಬಾಲಾಮೃತ

ಮಕ್ಕಳ ಸಧೃಢತೆಗಾಗಿ 'ಬಗನ' ಬಾಲಾಮೃತ ವನ್ನು ಉಪಯೋಗಿಸಿರಿ.

ಮುಖ್ಯವಾದ ಮಕ್ಕಳ ಯಕೃತು ಮತ್ತು ಹೊಟ್ಟೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಮುಟ್ಟಿತು. ದೂರದಲ್ಲಿ ಕಾಣುವ ಬಸವೇಶ್ವರ ಕಾಲೇಜಿನ ಕಟ್ಟಡ ನೋಡಿಕೊಂಡು, ಸಮಾಧಾನದ ಮುಗುಳ್ನಗೆಯಿಂದ ಎದ್ದು ನಿಂತು, ತನ್ನ ಬಟ್ಟೆ-ಬರೆ ಸರಿಮಾಡಿಕೊಂಡ ಕೋಟಿನ ಮೇಲ್ಕಿಸೆಯಲ್ಲಿಯ ಚಿಕ್ಕ ಹಣಿಗೆಯೊಂದನ್ನು ತೆಗೆದುಕೊಂಡು, ಕನ್ನಡಿ ಇಲ್ಲದೆ ಕೂದಲನ್ನು ಬಾಚಿಕೊಂಡ ಗಾಡಿ ಸ್ಟೇಶನ್ನಿನಲ್ಲಿ ಇನ್ನೂ ಸಾವಕಾಶವಾಗಿ ನಿಲ್ಲುತ್ತಿರುವಂತೆಯೇ, ಅವಸರವಾಗಿ ಇಳಿದು ಮುಂದೆ ನಡೆದ. ಜನ ಹಾಗೆಯೇ ಇಳಿಯುತ್ತಿತ್ತು. ಗದ್ದಲದಲ್ಲಿ ಹಾಗೆಯೇ ನುಸುಳಿಕೊಂಡು ಮುಂದೆ ನಡೆದಿದ್ದ. ಅಷ್ಟರಲ್ಲಿ ಯಾರೋ 'ನಮಸ್ಕಾರ' ಎಂದ ಹಾಗಾಯಿತು. ತಿರುಗಿ ನೋಡಿದ; ತನ್ನ ಮಾವ ಗಣಪತಿರಾಯರು. 'ನಮಸ್ಕಾರ' ಎಂದು ಹಾಗೆಯೇ ಕೈ ಚೀಲ ಹಿಡಿದು ಕೈ ಎತ್ತಿ ನಮಸ್ಕರಿಸಿದ. ಗಣಪತಿರಾಯರು "ಬಂದಿರಿ, ತುಂಬಾ ಸಂತೋಷ. ನನ್ನ ಪತ್ರ ನಿನ್ನೆ ಮುಟ್ಟಿತೇ?" ಎಂದು ಕೇಳಿದರು. "ಹೂಂ ನಿನ್ನೆಯೇ ಮುಟ್ಟಿತು ಆದ್ದರಿಂದ ಇಂದು ಹೊರಟೆ. ಇದೋ ನೋಡಿ ನಿಮ್ಮ ಪತ್ರ!' ಎಂದು ಬಲಗೈಯೊಳಗಿನ ಟಿಕೆಟನ್ನು ಟಿಕೆಟ್ ಕಲೆಕ್ಟರನ ಕೈಯಲ್ಲಿಡುತ್ತಿದ್ದಂತೆಯೇ, ಎಡಗಿಸೆಯಿಂದ ಪತ್ರ ತೆಗೆದು ಅವರ ಕೈಯಲ್ಲಿಟ್ಟ. ಮಾವನವರು ಹಿಂದಿನಿಂದ ಪತ್ರ ನೋಡುತ್ತ ಬರುತ್ತಿರುವವರು "ಓಹೋ, ಗಂಗೂನೂ ಪತ್ರ ಬರೆದಿದ್ದಳೋ?" ಎಂದರು. ಗೋವಿಂದ ಗಾಬರಿಯಾಗಿ ಹಿಂದಿರುಗಿ ನೋಡಿದ. ಅವಸರದಲ್ಲಿ ಮರೆತು ತನ್ನಾಕೆಯ ಪತ್ರವನ್ನು ಮಾವನವರ ಕೈಯಲ್ಲಿ ಕೊಟ್ಟಿದ್ದ. ಗೋವಿಂದನ ಮುಖ ಪೆಚ್ಚಾಯಿತು "ಹೂಂ" ಎಂದು ಮುಂದೆ ನಡೆದ.

ಗಣಪತಿರಾಯರು ಟಾಂಗಾ ಗೊತ್ತು ಮಾಡಿ 'ವೆಂಕಟಪೇಟೆಗೆ' ಎಂದು ಹೇಳಿದರು. ಗೋವಿಂದನೂ ಟಾಂಗಾ ಹತ್ತಿ ಗಣಪತಿರಾಯರ ಮಗ್ಗುಲಲ್ಲಿ ಕುಳಿತ. ಅವನೇನೂ ಮಾತನಾಡಲಿಲ್ಲ. ರಾಯರೇ "ರಜಾ ಎಷ್ಟು, ನಾಲ್ಕು ದಿನದ್ದು ತೆಗೆದುಕೊಂಡಿರಿ ತಾನೇ?" ಎಂದು ಕೇಳಿದರು "ಇಲ್ಲ, ಮೂರೇ ದಿನದ್ದು ಸಿಕ್ಕಿತು; ಶುಕ್ರವಾರ ಮಧ್ಯಾಹ್ನ ಎಲ್ಲಿದ್ದರೂ ಹಜರ್ ಆಗಬೇಕು!" ಎಂದು ಸ್ವಲ್ಪ ಗಂಭೀರವಾಗಿಯೇ ಉತ್ತರಕೊಟ್ಟ. ರಾಯರು ಏನನ್ನೂ ಮಾತನಾಡಲಿಲ್ಲ. ಗೋವಿಂದನೂ ಸ್ವಲ್ಪ ಹೊತ್ತು ಸುಮ್ಮನಿದ್ದ. ಮಾವನವರೇ ಮಾತನಾಡಿಸಿ, ಮನೆಯ ವಿಷಯ ಏನಾದರೂ ಹೇಳಬಹುದೇನೋ ಎಂದಾಶಿಸಿದ್ದ. ಅವರು ಮಾತನ್ನೇ ಆಡಲಿಲ್ಲ. ಕೊನೆಗೆ ತಾನಾಗಿಯೇ ಕೇಳಿದ: "ಮನೆಯಲ್ಲಿ ಎಲ್ಲವೂ ಕ್ಷೇಮ ತಾನೆ?" ಮಾವನವರು 'ಹೂಂ'ಎಂದು ಸುಮ್ಮನಾದರು. ಗೋವಿಂದನಿಗೆ ಹೆಚ್ಚು ನಿರಾಶೆಯಾಯಿತು. ಮಾವನವರು ಗಂಗೆಯ ಬಗ್ಗೆ ಏನಾದರೂ ಹೇಳಬಹುದೆಂದಾಶಿಸಿದ್ದ. ಆದರೆ ಅವರು ಏನನ್ನೂ ಹೇಳಲಿಲ್ಲ. "ಹೋಗಲಿ, ಮನೆಗೆ ಹೋದ ಮೇಲೆ ಅವಳೇ ಭೆಟ್ಟಿಯಾಗುವಳಲ್ಲ" ಎಂದು ಸಮಾಧಾನ ಹಚ್ಚಿಕೊಂಡ.

ಟಾಂಗಾ ಬಂದು ಮನೆಯ ಮುಂದೆ ನಿಂತಿತು. ಮಾವನವರು ಮೊದಲು ಇಳಿದು, ಟಾಂಗಾವಾಲಾನಿಗೆ ರೊಕ್ಕ ಕೊಟ್ಟರು. ಗಂಗೆ ಬಾಗಿಲಿಗೆ ಬಂದಿರಬಹುದೆಂದು ಬಗೆದಿದ್ದ ಗೋವಿಂದನಿಗೆ, ಬಾಗಿಲು ಬರಿದಾಗಿದ್ದುದನ್ನು ಕಂಡು ಅಸಮಾಧಾನವೆನಿಸಿತು. ಟಾಂಗೆಯನ್ನು ಇಳಿದು ಮಾವನವರನ್ನು ಹಿಂಬಾಲಿಸಿದ. ಮನೆಯಲ್ಲಿ ಕಾಲಿಡುತ್ತಲೇ ಮಾವನವರು "ಏ ಗಂಗೂ, ನಿನ್ನ ಯಜಮಾನರು ಬಂದಿದ್ದಾರೆ ನೋಡೇ!" ಎಂದು ಕೂಗಿದರು. ಒಳಗಿನಿಂದ 'ಹೂಂ' ಎಂಬ ಸ್ವರ ಬಂದಿತೇ ಹೊರತು 'ಹೂಂ' ಗೊಟ್ಟ ವ್ಯಕ್ತಿಯ ಮುಖ ಹೊರಬೀಳಲಿಲ್ಲ. "ಹೋಗಲಿ, ಮುಖ ತೊಳೆದುಕೊಳ್ಳುತ್ತಿರಬಹುದು. ಕೋಣೆಗೆ ಹೋದ ಮೇಲೆ ತಾನೇ ಬರುವಳಲ್ಲ!" ಎಂದು ಗೋವಿಂದ ಕೋಣೆಯ ಕಡೆಗೆ ನಡೆದ. ಮಾವನವರು 'ಅಳಿಯದೇವರ'ನ್ನು ಕೋಣೆಯವರೆಗೆ ಕರೆದುಕೊಂಡು ಹೋಗಿ, ಒಳಗೆ ಕುಳ್ಳಿರಿಸಿ, "ಕೂಡ್ರಿ ಈಗ ಚಹಾ ಕಳಿಸಿಕೊಡುತ್ತೇನೆ. ನಾನು ಸ್ವಲ್ಪ ಹೊರಗೆ ಹೋಗಿ ಬರಬೇಕಾಗಿದೆ. ಕ್ಷಮಿಸಬೇಕು!" ಎಂದು ಹೇಳಿ "ಬೇಗ ಬರುತ್ತೇನೆ, ಸಂಯುಕ್ತ ಕರ್ನಾಟಕ ಬೇಕೇನು?" ಎಂದೆನ್ನುತ್ತ ಅವನ ಮುಂದೆ 'ಸಂಯುಕ್ತ ಕರ್ನಾಟಕ'ಇಟ್ಟು ಹೊರಗೆ ನಡೆದರು. ಮಾವನವರು, ತಮ್ಮ ಮಗಳ ಪ್ರವೇಶಕ್ಕೆ ಅನುವು ಮಾಡಿಕೊಡಲು ಕೋಣೆಯಿಂದ ಸರಿದರು— ಎಂಬ ಸಮಾಧಾನದಿಂದ, ಬೇಡವಾಗಿದ್ದರೂ ಟೇಬಲ್ ಮೇಲಿನ 'ಸಂಯುಕ್ತ ಕರ್ನಾಟಕ'ವನ್ನೆತ್ತಿದ. ಕಣ್ಣುಗಳು ಸಂಯುಕ್ತ ಕರ್ನಾಟಕದ ಮೇಲಿದ್ದರೂ, ಕಿವಿಗಳು ಬಾಗಿಲಕಡೆಗಿದ್ದವು. ಐದು ನಿಮಿಷಗಳಾದುವು. ಯಾರೂ ಬರುವ ಸುಳಿವು ಕಾಣಲಿಲ್ಲ. ಬೇಸರಿಕೆಯಿಂದ ಪೇಪರನ್ನು ಟೇಬಲಿನ ಮೇಲೆ ಒಗೆದು, ಕೋಟು ತೆಗೆದಿಟ್ಟು, ಅಲ್ಲಿಯೇ ಕಾಟಿನ ಮೇಲೆ ಉರುಳಿದ.

ಹೊರಗೆ ಯಾರೋ ಬಂದಂತೆ ಹೆಜ್ಜೆಯ ಸಪ್ಪಳ ಕೇಳಿಸಿತು. ಹಾಸಿಗೆಯ ಮೇಲೆ ಎದ್ದು ಕುಳಿತ. ಗೋವಿಂದನ ಕಿವಿ ನಿಮಿರಿ ನಿಂತುವು. ಮನಸ್ಸು ಉಲ್ಲಾಸಗೊಂಡಿತು. ಮುಖದ ಮೇಲೆ ಮುಗುಳ್ನಗೆಯಾಡತೊಡಗಿತು. ಬಾಯಿಯಿಂದ ಏನೋ ಶಬ್ದಗಳು ಸಾವಕಾಶವಾಗಿ ಹೊರಬೀಳುತ್ತಿದ್ದುವು. ಬಾಗಿಲನ್ನು ತೆರೆಯುವ ಸಪ್ಪಳವಾಯಿತು. 'ಇನ್ನೇನು ತನ್ನವಳು ಬಂದಳು!' ಎಂದು ಕಣ್ತೆರೆದ. ಆದರೇನು? ತೆರೆದ ಕಣ್ಣು ಮುಚ್ಚುವಂತಾಯಿತು. ಬಂದವಳು ತನ್ನಾಕೆಯಲ್ಲ– ತನ್ನಾಕೆಯ ಅಕ್ಕನ ಮಗಳು: ಎಂಟು ವರ್ಷದ ಹುಡುಗಿ ಶಾಲಿನಿ! ಎಡಗೈಯಲ್ಲಿ ತಟ್ಟೆಯೊಂದನ್ನೂ ಬಲಗೈಯಲ್ಲಿ ನೀರಿನ ತಂಬಿಗೆಯೊಂದನ್ನೂ ಹಿಡಿದುಕೊಂಡು, ಸಾವಕಾಶವಾಗಿ ಒಂದೊಂದೇ ಹೆಜ್ಜೆ ಇಡುತ್ತ ಬರುತ್ತಿದ್ದಳು. ಗೋವಿಂದನಿಗೆ ನಿರಾಶೆಯಾಯಿತು. ನಿರಾಶೆಯೊಡನೆ ಸಿಟ್ಟೂ ಬಂದಿತು. ಆದರೆ ಮಾಡುವುದೇನು? 'ಇದು ಮಾವನ ಮನೆ!' ಎಂದು ಅನಿವಾರ್ಯವಾಗಿ ಸಿಟ್ಟನ್ನು ನುಂಗಿಕೊಂಡು ಸುಮ್ಮನಾದ.

ಶಾಲಿನಿ ತಟ್ಟೆಯನ್ನು ಟೇಬಲಿನ ಮೇಲಿಟ್ಟು ನಿಂತುಕೊಂಡಳು. ನೋಡಿದ. ತಟ್ಟೆಯಲ್ಲಿ ಒಂದು ಪ್ಲೇಟಿನಲ್ಲಿ ಕರಿದವಲಕ್ಕಿ, ಒಂದು ಉಂಡಿ ಇದ್ದುವು. ಒಂದು ಕಪ್ಪಿನಲ್ಲಿ ಚಹ ಹಾಕಿ, ಮೇಲೆ ಬಸಿ.

ಯನ್ನು ಮುಚ್ಚಲಾಗಿತ್ತು. ಗೋವಿಂದನಿಗೆ ಅದೆಲ್ಲ ಆಗ ಬೇಡವಾಗಿದ್ದರೂ, 'ತೆಲಗಿ' ಸ್ಟೇಶನ್ನಿನ ಮೇಲೆ ಏನೂ ತಿನ್ನದ್ದರಿಂದ, ಹಸಿವೆಯಾಗಿತ್ತು. ಸಿಟ್ಟಿನಿಂದಲೇ ತಟ್ಟೆಯಲ್ಲಿಯ ಪ್ಲೇಟನ್ನು ಕೈಗೆತ್ತಿಕೊಂಡು, ಉಂಡಿಯ ಚೂರನ್ನು ಬಾಯಿಗಿಟ್ಟ. ತಿನಿಸೇನೋ ರುಚಿಯಾಗಿತ್ತು; ಆದರೆ ಅದೇ ತಟ್ಟೆಯನ್ನು ಆ ಹುಡುಗಿಯ ಬದಲು ತನ್ನಾಕೆ ತಂದಿದ್ದರೆ ಹೆಚ್ಚು ರುಚಿಯಾಗಬಹುದಾಗಿತ್ತೆನಿಸಿತು ಗೋವಿಂದನಿಗೆ. ಉಂಡಿಯ ಚೂರೊಂದನ್ನು ಶಾಲಿನಿಯ ಕೈಗಿಡುತ್ತ ಸಾವಕಾಶವಾಗಿ ಗೋವಿಂದ ಕೇಳಿದ: "ಶಾಲೂ, ಅವಳೆಲ್ಲಿ?" ಶಾಲಿನಿ ಕೇಳಿದಳು "ಯಾರು?" ಎಂದು. ಗೋವಿಂದನಿಗೀಗ ಪೇಚಾಟಕ್ಕಿಟ್ಟುಕೊಂಡಿತು. ಯಾರೆಂದು ಹೇಳಬೇಕು? ಹೆಸರು ಹೇಳಿದರೆ ಆ ಹುಡುಗಿ ಮನೆಯಲ್ಲಿ ಹೇಳಿಬಿಟ್ಟರೆ? ಆದರೂ ಸಾವರಿಸಿಕೊಂಡು, "ಅವಳೇ, ನಿಮ್ಮಪ್ಪನ ತಂಗಿ" ಎಂದ. ಶಾಲಿನಿ ನಗುತ್ತ 'ಗಂಗಕ್ಕನೇ?' ಎಂದಳು. ಗೋವಿಂದನಿಗೆ ತನ್ನ ಪ್ರಯತ್ನ ಸಫಲವಾಯಿತಲ್ಲ ಎಂದು ಸಂತೋಷವಾಯಿತು. 'ಹೂಂ ಅವಳೆ; ಅವಳೆಲ್ಲಿ?" ಎಂದ. 'ಅವಳು' ಶಾಲಿನಿ ಹೇಳಿದಳು: "ಅವಳು ಹೊರಗ ಕುಳಿತಿದ್ದಾಳೆ!" "ಹೊರಗೆ ಕುಳಿತಿದ್ದಾಳೆ" ಎಂಬ ಶಬ್ದ ಕಿವಿಗೆ ಬಿದ್ದ ಕೂಡಲೆ ಗೋವಿಂದನಿಗೆ ಆಕಾಶವೇ ಕಳಚಿಬಿದ್ದಂತಾಯಿತು. "ಹೊರಗೆ ಕುಳಿತಿದ್ದಾಳೆಂದರೆ?" ಗೋವಿಂದನ ಮನಸ್ಸಿನಲ್ಲಿ ಏನೇನೋ ಯೋಚನೆಗಳು ಮೂಡತೊಡಗಿದುವು. ಆದರೂ ಸಮಾಧಾನ ತಂದುಕೊಂಡು, "ಹೊರಗಿದ್ದರೆ ಅವಳನ್ನು ನಾನು ಕರೆದಿದ್ದೇನೆ ಬಾ ಎಂದು ಹೇಳು...." ಎಂದು ಹೇಳಿದ. ಪಾಪ ಆ ಹುಡುಗಿ ಸುಮ್ಮನಿರಬಾರದೆ? "ಹೂಂ ಹೂಂ! ಅವಳು ಬರುವ ಹಾಗಿಲ್ಲವಂತೆ! ಅವಳಿಗೆ ಮೂರು ದಿನಗಳ ರಜ" ಎಂದಿತು. ಗೋವಿಂದನ ಮೈ-ಮೇಲೆ ತಣ್ಣೀರು ಸುರುವಿದಂತಾಯಿತು. ಸಿಟ್ಟಿನಿಂದ ಎಡಗೈಯಲ್ಲಿದ್ದ ಕಪ್ಪಿನೊಳಗಿನ ಚಹಾ ಕುಡಿಯಲು ಹೋದ, ಚಹ ಬಿಸಿಯಾಗಿದ್ದಿತಾದ್ದರಿಂದ. ನಾಲಗೆ ಸುಟ್ಟಿತು. ಗೋವಿಂದನಿಗೆ ಮತ್ತಿಷ್ಟು ಸಿಟ್ಟು ಬಂದಿತು. ಆದರೇನು?

ಶಾಲಿನಿ, ಗೋವಿಂದನ ಚಹಾ ಕುಡಿಯುವುದಾದ ಮೇಲೆ ತಟ್ಟೆಯನ್ನು ತೆಗೆದುಕೊಂಡು ಹೋದಳು. ಗೋವಿಂದ ಸಿಟ್ಟಿನಿಂದ ಹಾಸಿಗೆಯ ಮೇಲೆ ಉರುಳಿದ. ಅವನಿಗೆ ಏನೂ ತೋಚದಂತಾಯಿತು. ತಾನೇನೋ ಗಾಳಿಗೋಪುರಗಳನ್ನು ಕಟ್ಟಿಕೊಂಡು ಬಂದಿದ್ದ– ರಜೆ ಪಡೆದುಕೊಂಡು. ಆದರೆ ಶಾಲಿನಿಯ ಒಂದೇ ಒಂದು ಶಬ್ದ, ಅವುಗಳನ್ನು 'ಉಫ್' ಎಂದು ಹಾರಿಸಿಬಿಟ್ಟಿತು. ಗೋವಿಂದ ಅತ್ತಿಂದಿತ್ತ, ಇತ್ತಿಂದತ್ತ ಹಾಸಿಗೆಯ ಮೇಲೆ ಹೊರಳಾಡತೊಡಗಿದ. ಮನಸ್ಸಿಗೆ ಸಮಾಧಾನವೆನಿಸಲೊಲ್ಲದು. ನಡುನಡುವೆ ಸಿಟ್ಟಿನಿಂದ ದವಡೆಕಚ್ಚುತ್ತಿದ್ದ. ಆದರೆ ಅದು ತನಗೆ ನೋವನ್ನುಂಟುಮಾಡುತ್ತಿದ್ದುದರಿಂದ, ಮತ್ತೆ ಅನಿವಾರ್ಯವಾಗಿ ಸುಮ್ಮಗಿರುತ್ತಿದ್ದ. ಅತ್ತೆಯವರು ಬಂದು ದೀಪ ಹಚ್ಚಿಟ್ಟು ಹೋದರು; ಗೋವಿಂದ ಸಿಟ್ಟಿನಿಂದ ಆತ್ತ ಮುಖ ಮಾಡಿ ಮಲಗಿದವ, ತಿರುಗಿ ಕತ್ತೆತ್ತಿ ನೋಡಲಿಲ್ಲ. ಹಾಗೆಯೇ ಮಲಗಿದ.

ಹಾಗೆಯೇ ಸುಮಾರು ಅರ್ಧ ತಾಸು ಮಲಗಿದ್ದ. ಏನೇನೋ ಯೋಚನೆಗಳು ತಲೆಯಲ್ಲಿ ಆಡತೊಡಗಿದ್ದುವು. 'ನಿದ್ದೆ ಹತ್ತಿತೇನು?' ಎಂಬ ಧ್ವನಿ ಅವನನ್ನೆಚ್ಚರಿಸಿತು. ತಿರುಗಿ ನೋಡಿದ. ತನ್ನಾಕೆ. ಬಾಗಿಲಲ್ಲಿ ನಿಂತಿದ್ದಳು. ಮುಖದಲ್ಲಿ ಮುಗುಳುನಗೆಯಿದ್ದರೂ ಅದು ಅವನನ್ನು ಆಕರ್ಷಿಸಲಿಲ್ಲ. ಸಿಟ್ಟಿನಿಂದ ಗೋವಿಂದ ಮಾತನ್ನೇ ಆಡಲಿಲ್ಲ. ಗಂಗೆಯೇ ಕೇಳಿದಳು: "ಯಾಕೆ ಸಿಟ್ಟು ಬಂದಿತೇನು?"

"ಇಲ್ಲ, ಸಂತೋಷ ಆಯಿತು!" ಸ್ವಲ್ಪ ಹೊತ್ತು ಸುಮ್ಮನಿದ್ದು ಸಿಟ್ಟಿನಿಂದಲೇ ಉತ್ತರವಿತ್ತ. ಗಂಗೆ ಸುಮ್ಮನಿರದೆ "ಅಲ್ಲ, ಇಷ್ಟು ಸಿಟ್ಟಿಗೆ ಬರಲಿಕ್ಕೇನು ಕಾರಣ?" ಎಂದು ಕೇಳಿದಳು. ಗೋವಿಂದನಿಗೆ ಮತ್ತಷ್ಟು ಸಿಟ್ಟು ಬಂದಿತು: "ಏನು ಕಾರಣ? ವಿನಾಕಾರಣ! ಅಲ್ಲ, ಹೀಂಗಿದ್ದರ ನನಗೆ ಬರ್‍ರಿ ಅಂತ ಮೊಳದುದ್ದ ಪತ್ರಾ ಯಾಕ ಬರೆಯಬೇಕಾಗಿತ್ತು?" ಗೋವಿಂದ ಕೇಳಿದ. ಗಂಗೆ ಶಾಂತಳಾಗಿಯೇ ಹೇಳಿದಳು. "ಅಲ್ಲ, ಅದೇನು ನನ್ನ ಕೈಯಾಗಿನ ಮಾತs? ನಿನ್ನೆ ಸಂಜೆಗೆ ಎಲ್ಲ ಗೆಳತಿಯರಿಗೆ ಹೇಳಿ ಬಂದೆ. ಅಪ್ಪ ಹೋಗಿ ಬ್ಯಾಂಡಿನವರಿಗೆ ಹೇಳಿಬಂದರು. ಅವ್ವ ಎಲ್ಲ ಅಡಿಗೆಯ ಸಿದ್ಧತೆ ಮಾಡಿದ್ದಳು. ಆದರೆ.... ಸುಡ್ಲಿ! ಇಂದು ಮುಂಜಾನೆ ನಸುಕಲೆ...."

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ.

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ
ಬರೆಯಿರಿ:

卐

ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ.

ಗಂಗೆ ಅರ್ಥಕ್ಕೇನೆ ಸುಮ್ಮಗಾದಳು. ಗೋವಿಂದನ ಬಾಯಿಂದಲೂ ಮಾತುಗಳು ಹೊರಡಲಿಲ್ಲ.

"ಹಾಂಗಾದರ, ನಾ ಇಂದ ರಾತ್ರೀಗಾಡಿಗೆ ತಿರುಗಿ ವಿಜಾಪುರಕ್ಕೆ ಹೋಗತೀನಿ" ಎಂದು ಸಿಟ್ಟಿನಿಂದಲೇ ಹೇಳಿದ.

"ಅಲ್ಲ" ಗಂಗೆ ಹೇಳಿದಳು "ಮತ್ತ ಅಪ್ಪನ ಮುಂದ ಮೂರು ದಿನಗಳ ರಜಾ ಅದ; ಶುಕ್ರವಾರ ಮುಂಜಾನೆ ಹೋಗತೀನಿ! — ಅಂತ ಹೇಳಿದಿರೆಂತಲ್ಲ!"

"ಹೌದು ಖರೆ, ಆದರ ಹೀಂಗ ಆಗೇದ ಅಂತ ನನಗೇನು ಗೊತ್ತು?" ಎಂದ ಗೋವಿಂದ.

ಮತ್ತೆ ಗಂಗೆ ಹೇಳಿದಳು: "ಅಪ್ಪನ ಮುಂದ ಹಾಂಗ ಹೇಳಿ, ಇನ್ನು ಈ ಹೊತ್ತೇ ಹೋಗೂದಂದರ ಅಸಹ್ಯ ಆಗೋದಿಲ್ಲs?"

ಗೋವಿಂದನಿಗೀಗ ಪೇಚಾಟಕ್ಕಿಟ್ಟುಕೊಂಡಿತು. ಇಂದೇ ರಾತ್ರಿ ಹೋದರೆ, ಮಾವನವರು ತನ್ನ ವಿಷಯವಾಗಿ ಬೇರೆ ತಿಳಿದುಕೊಳ್ಳಲಿಕ್ಕೆ ಅಸ್ಪದಕೊಟ್ಟಂತಾಗುತ್ತವೆ. ತಾನೇಕೆ ಮಾವನವರ ಮುಂದೆ 'ಮೂರು ದಿನಗಳ ರಜೆ ಇದೆ' ಎಂದು ಹೇಳಿದೆನೋ— ಎನಿಸಿತು ಗೋವಿಂದನಿಗೆ. ಗೋವಿಂದ ಸುಮ್ಮನಿದ್ದುದನ್ನು ಕಂಡು ಗಂಗೆ "ಮತ್ತs ಹ್ಯಾಂಗೂ ಅನಾಯಾಸ ರಜಾ ತೊಗೊಂಡು ಬಂದೀರಿ; ಖಾನಾವಳೀ ಕೂಳು ಬ್ಯಾಸರಿಕೆ ಬಂದsದ— ಅಂತ ಪತ್ರದಾಗ ಬರೀತೀರಿ. ಆತು ಮೂರು ದಿವಸ ಆರಾಮ ಉಂಡು-ತಿಂದು ಇದ್ದು ಹೋಗರೆಲ್ಲಾ!" ಎಂದಳು. ಗೋವಿಂದ ಅನಿವಾರ್ಯವಾಗಿ 'ಹೂಂ' ಎಂದ.

ಗೋವಿಂದ–ಗಂಗೆಯರು ಹಾಗೆಯೇ ಮಾತನಾಡುತ್ತ ಕುಳಿತಿದ್ದರು. ಆದರೆ ಶಿವಪೂಜೆಯಲ್ಲಿ ಕರಡಿಬಿಟ್ಟಂತೆ, ನಡುವೆ ಮಾವನವರು ಬರಬೇಕೆ? ಅಪ್ಪ ಬಂದುದನ್ನು ಕಂಡು ಗಂಗೆ ಎದ್ದು ಹೋದಳು. ಮಾವನವರು ಅಳಿಯದೇವರ ಕ್ಷೇಮ-ಸಮಾಚಾರವನ್ನು ವಿಚಾರಿಸಿ, ಮಾತುಬೆಳಸುತ್ತ ರಾಜಕೀಯ ವಿಷಯದತ್ತ ಹೊರಳಿದರು. ಗೋವಿಂದನಿಗೆ ಯಾವುದೂ ಬೇಡವಾಗಿತ್ತು. ಸುಮ್ಮನೆ ಮಾವನವರ ಮಾತಿಗೆ 'ಹೂಂ'ಗೊಡುತ್ತ ನಡೆದಿದ್ದ. ಕೊನೆಗೆ ತಲೆಬೇಸರೆದ್ದು "ಸಾಕುಮಾಡಿ, ಇನ್ನು ಆ ವಿಷಯಾನs" ಎಂದು ಹೇಳುವವ. ಅಷ್ಟರಲ್ಲಿ ಶಾಲಿನಿ 'ಅಪ್ಪ ಊಟಕ್ಕೆ ಕರೀತಾಳ' ಎಂದು ಕರೆದಳು. ಗೋವಿಂದನಿಗೆ 'ಗೆದ್ದೆ' ಎಂದೆನಿಸಿತು. ಮಾವನವರು ತಮ್ಮ ಮಾತನ್ನು ಅಲ್ಲಿಗೇ ಮುಗಿಸಿ, ಅಳಿಯದೇವರನ್ನೆಬ್ಬಿಸಿಕೊಂಡು ಊಟಕ್ಕೆ ಬಂದರು.

ಅಡಿಗೆಯ ಮನೆಯಲ್ಲಿ ಒಂದರ ಬದಿಗೊಂದು ಎರಡು ಮಣೆ ಹಾಕಲಾಗಿತ್ತು. ಮಣೆಗಳ ಮುಂಗಡೆ ಎರಡು ತಾಟುಗಳನ್ನು ಹಾಕಿದ್ದಾರೆ. ತಾಟಿನಲ್ಲಿ ಎಡಬದಿಗೆ ಉಪ್ಪು, ಲಿಂಬೆಯಹೋಳು, ಬಲಬದಿಗೆ ಮೆಂತೇದ ಹಿಟ್ಟು ಬಡಿಸಲಾಗಿತ್ತು. ಅಳಿಯದೇವರು ಕೈಕಾಲು ತೊಳೆದುಕೊಂಡು, ಮಾವನವರ ಬದಿಗೆ ಮಣೆಯ ಮೇಲೆ ಕುಳಿತರು. ಅತ್ತೆಯವರು ಬಿಸಿ ಅನ್ನ ಬಡಿಸಿದರು. ಮಾವನವರು ಅಳಿಯದೇವರಿಗೆ ಉಪಚಾರದ ಮಾತುಗಳನ್ನಾಡುತ್ತ, ಸ್ವಲ್ಪ ಹೆಚ್ಚಾಗಿಯೇ ಹಾಕಿಸಿದರು. ಖಾನಾವಳಿಯ ಕೂಳಿಗೆ ಬೇಸತ್ತ ಅಳಿಯದೇವರೂ, ಮಾವನವರ ಮನಸ್ಸು ಅತೃಪ್ತಗೊಳ್ಳದಂತೆ ನೋಡಿಕೊಂಡರು.

ಮಾವನವರು, ಊಟವಾದ ಮೇಲೆ ಅಳಿಯದೇವರನ್ನು ಕೋಣೆಯ ವರೆಗೆ ಕಳಿಸಿ, ತಾವು ತಿರುಗಿ ಬಂದರು. ಗೋವಿಂದ ಹಾಸಿಗೆಯ ಮೇಲೆ ಬಿದ್ದ. ನಿದ್ರೆಯೇ ಬರಲೊಲ್ಲದು. ಎರಡು ದಿನ ಹೇಗೆ ಕಳೆಯಬೇಕೆಂಬ ಯೋಚನೆಯಲ್ಲಿ, ಅವನಿಗೆ ಯಾವಾಗ ನಿದ್ರೆಹತ್ತಿತೋ ಗೊತ್ತಾಗಲಿಲ್ಲ.

ಅಂತೂ ಎರಡು ದಿನ ಕಳೆದ. ಮಾವನವರು ಅಳಿಯದೇವರಿಗೆ ಯಾವ ರೀತಿಯಿಂದಲೂ ಕೊರತೆಯಾಗದಂತೆ ನೋಡಿಕೊಳ್ಳುತ್ತಿದ್ದರು. ಗೋವಿಂದನಿಗೆ ಆಗಿದ್ದ ಕೊರತೆಯೆಂದರೆ ಒಂದೇ; ತನ್ನಾಕೆಯ ಮುಖದರ್ಶನ ಕೂಡ ಮೇಲಿಂದಮೇಲಾಗುತ್ತಿರಲಿಲ್ಲ. ನಾಚಿಕೆಯಿಂದಲೋ, ಎರಡನೆಯವರೇನಾದರೂ ಅಂದಾರೆಂಬ ಭಯದಿಂದಲೋ, ಗಂಗೂ ಮಾತ್ರ ಗೋವಿಂದನ ಕಡೆ ಹಾಯಲಿಲ್ಲ.

ಶುಕ್ರವಾರ ಬೆಳಗಿನಲ್ಲಿ ಎದ್ದು, ಗೋವಿಂದ ಮುಖ ತೊಳೆದುಕೊಂಡು, ತಲೆ ಬಾಚುತ್ತ ನಿಂತಿದ್ದ. ಬಾಗಿಲು ತೆರೆದ ಸಪ್ಪಳಾಯಿತು. ತಿರುಗಿ ನೋಡಿದ. ತನ್ನಾಕೆ! ಎಡಗೈಯಲ್ಲಿ ತಟ್ಟೆಯೊಂದನ್ನೂ ಬಲಗೈಯಲ್ಲಿ ತಂಬಿಗೆಯೊಂದನ್ನೂ ಹಿಡಿದುಕೊಂಡು ನಿಂತಿದ್ದಳು. ಅಂದೇ ಎರೆದುಕೊಂಡಿದ್ದಳಾದ್ದರಿಂದ, ಎಣ್ಣೆಯಿಂದ ಮಿಂಚುತ್ತಿದ್ದ ಬಾಚಿದ ಆ ಕಪ್ಪಾದ ಕೂದಲು, ಎಣ್ಣೆಗಪ್ಪಾದ ಆ ಹಣೆಯ ಮೇಲಿನ ಕೆಂಪು ಕುಂಕುಮ, ನಗೆಮುಖದಿಂದ ಕಾಣುತ್ತಿದ್ದ ಆ ಸಾಲಾದ ದಂತಪಙ್ಕ್ತಿಗಳು, ಕಾಡಿಗೆ ಹಚ್ಚಲ್ಪಟ್ಟ ಆ ನೀಲ ಕಣ್ಣುಗಳು. ಗೋವಿಂದ ಒಂದೇ ದೃಷ್ಟಿಯಿಂದ ಅವಳನ್ನು ನೋಡುತ್ತ ನಿಂತಿದ್ದ. ಗಂಗೆ ಸಾವಕಾಶವಾಗಿ ಬಂದು, ತಟ್ಟೆಯನ್ನು ಮೇಜಿನ ಮೇಲಿಟ್ಟು, ನಿಂತಳು. ಗೋವಿಂದ ಮಾತನಾಡಲಿಲ್ಲ. ಗಂಗೆಯೇ ಹೇಳಿದಳು: "ಅಪ್ಪ ಟಾಂಗಾ ತರಲಿಕ್ಕೆ ಸ್ಟ್ಯಾಂಡಿಗೆ ಹೋಗ್ಯಾನ" ಮುಗಿಲಿಗೆ ಮೂರೇ ಬೆರಳು ಅಂತರದಲ್ಲಿದ್ದ ಗೋವಿಂದನ ಮನಸ್ಸು ಒಮ್ಮಿಂದೊಮ್ಮೆ ಭೂಮಿಗಿಳಿಯಿತು. "ಯಾಕs ಅಂತೂ ಒಮ್ಮೆ ಹೊತ್ತು ಹಾಕಿದರs ಸಾಕಂತಾನೇನು ನಿಮ್ಮಪ್ಪ?" ಎಂದ ಗೋವಿಂದ ಸಿಟ್ಟಿನಿಂದ. ಗಂಗೆಗೆ ಕೆಡುಕೆನಿಸಿತು. ಅವಳೂ ಸಿಟ್ಟಿನಿಂದಲೇ "ಅವರ್ಯಾಕೆ ಹಾಂಗ ಅಂತಾರ; ನೀವೇ ಬಂದಾಗಿನ ದಿವದೂ ಒಂದೇ ಸವನೆ ಹೇಳಲಿಕ್ಕೆ ಹತ್ತೀರಿ: ನಾ ಶುಕ್ರವಾರ ಮುಂಜಾನೆ ಹೋಗಬೇಕು ಅಂತ. ಅದಕ್ಕ ಗಾಡೀ ತಪ್ಪ ಬಾರದು ಅಂತ ಟಾಂಗಾ ತರಲಿಕ್ಕೆ ಹೋದರೆ ಅದೂ ತಪ್ಪs" ಎಂದಳು. ಸಿಟ್ಟಿನಲ್ಲಿ ಗಂಗೆಯ ಮುಖ ಹೆಚ್ಚು ಚೆಲುವಾಗಿ ಕಂಡಿತು ಗೋವಿಂದನಿಗೆ. ಮುಖದಲ್ಲಿಯ ಸಿಟ್ಟಿನ ಕಳೆಯ ಬದಲು ಮುಗುಳ್ನಗೆ ಮೂಡಿತು; ಹಾಂಗೇನಿಲ್ಲಾ ಗಂಗಾ, ಈ ಹೊತ್ತು

ಅರ್ಜಂಟ್ ಆಗಿ ಹೋಗಲೇ ಬೇಕಾಗಿದೆ" ಎಂದ. ಗಂಗೆ ಮರು-ಮಾತನ್ನಾಡದೆ ಅವನ ಚಾದರು, ಟಾವೆಲ್ಲು, ಧೋತರ, ಒಂದೊಂದಾಗಿ ಮಡಿಸಿ ಚೀಲದಲ್ಲಿಡಹೋದಳು. ಚೀಲದಲ್ಲಿ ಗಂಜಿಯ ಅರಿವೆ ಕಂಡುವು. "ಇದೇನು ಗಂಜಿಯ ಅರಿವೆ ಹಾಕಿಕೊಳ್ಳಲಿಲ್ಲೇನು?" ಗಂಗೆ ಕೇಳಿದಳು. ಆಗ ಗೋವಿಂದ ಕೊಂಚ ಬಾಳೆಯ ತುಣುಕೊಂದನ್ನು ಬಾಯಿಗಿಡುತ್ತ ಹೇಳಿದ : "ಯಾರ ಜೋಡಿ ಗಂಜೀ ಅರಿವಿ ಹಾಕ್ಕೊಂಡು ಹೊರಗ ತಿರುಗ್ಯಾಡಬೇಕು ಅಂತ ಬಂದಿದ್ದೆನೊ, ಅವರೇ ಹೊರಗ ಕೂತ ಮ್ಯಾಲೆ, ನಾ ಒಳಗೇs ಕೂತೆ. ನಾ ಒಳಗ ಕೂತ ಮ್ಯಾಲೆ ಗಂಜೀ ಅರಿವಿ ಒಳಗ ಕೂಡುವು ಸಹಜ ಅದ!" ಅಂದ. ಗಂಗೆಯೂ ನಸುನಗುತ್ತ, ಅರಿವೆಗಳನ್ನು ಒಂದೊಂದಾಗಿ ಚೀಲದಲ್ಲಿ ಸೇರಿಸುವಾಗ, ಹೂವಿನ ಪುಡಿಕೆ, ಅರಿವೆ, ಚಿಗುರೆಲೆಯ ಕಟ್ಟು ಇವು ಕೈಗೆ ಹತ್ತಿದುವು. ಹೂವಿನ ಪುಡಿಕೆಯನ್ನು ಕೈಯಲ್ಲಿ ಹಿಡಿದು ಕೇಳಿದಳು : "ಇದೇನು ?" ಗೋವಿಂದನ ಮುಖ ಪೆಚ್ಚಾಯಿತು. ಅವನು ಹೂವಿನ ಪುಡಿಕೆಯನ್ನು ಕೊಡುವುದನ್ನೇ ಮರೆತಿದ್ದ. ಸಾವಕಾಶವಾಗಿ 'ಹೂ!' ಎಂದ. "ಅಯ್ಯ s ಆ ಹೊತ್ತೇ ಕೊಡಬಾರದೇನು? ಬಾಡಿಹೋಗ್ಯಾವೋ ಏನೋ!" ಎಂದಳು ಗಂಗೆ ಪುಡಿಕೆಯನ್ನು ಬಿಚ್ಚುತ್ತ. ಗೋವಿಂದ ಸುಮ್ಮನಿರದೆ, "ಹೂ ಬಾಡೂದಂತ! ನಿನ್ನ ಮುಖದ ದರ್ಶನ ಎರಡು ದಿನದಿಂದ ಇಲ್ಲದ್ದಕ್ಕ ನನ್ನ ಮುಖ ಬಾಡೇದ. ಅದು ಬಾಡೂದನಕಾ ಸಹಜ ಅದ!" ಎಂದ. ಗಂಗೆಯೂ ಗೋವಿಂದನ ಮಾತಿಗೆ ನಕ್ಕಳು; ಗೋವಿಂದನಿಗೆ ತೃಪ್ತಿ ಎನಿಸಿತು. ಅವಳ ಕೈಯಲ್ಲಿದ್ದ ಎಲೆಯ ಕಟ್ಟನ್ನು ನೋಡಿ ಗೋವಿಂದನಿಗೆ, ಕೂಡಿಗಿ ಸ್ಟೇಶನ್ನಿನಲ್ಲಿಯ ತನ್ನ ಗಾಳಿಗೋಪುರಗಳ ನೆನಪಾಯಿತು. "ಅಲ್ಲs" ಗೋವಿಂದ ಹೇಳಿದ : "ಮತ್ತ ಎರಡು ದಿನ ನಿನ್ನ ಕೈಯಿಂದ ಚಹಾ ಫರಾಳ ಕೊಡದಿದ್ದರೂ ಅಷ್ಟೇ! ಹೋಯಿತು; ಕಡೀಕ ಈ ಹೊತ್ತು ಒಂದು ಎಲೀ ಅರೆ ಮಡಿಚಿ-ಕೊಡಬಾರದೇ ?" ಗಂಗೆ 'ಹೂಂ' ಎಂದು ಮುಗುಳ್ನಗುತ್ತ, ಎಲೆಗೆ ಸುಣ್ಣ ಹಚ್ಚ ತೊಡಗಿದಳು. ಗೋವಿಂದ ಕಟ [illegible] ತುತ್ತನ್ನು ಒಮ್ಮೆ ತನ್ನ ಬಾಯಲ್ಲಿ, ಒಮ್ಮೆ ಅವಳ ಬ[illegible] ಇಡುತ್ತ ಪ್ಲೇಟನ್ನು ಖಾಲಿ ಮಾಡಿದ. ಇಬ್ಬರೂ ಕೂಡಿ ಚಹಾ ಕುಡಿದರು. ಗಂಗೆ ಅವನ ಕೈಯಲ್ಲೊಂದು ವೀಳ್ಯ ಕೊಟ್ಟು, ತಾನೊಂದನ್ನು ಹಾಕಿಕೊಂಡಳು. ಗೋವಿಂದ ಕೋಟು ಹಾಕಿ-ಕೊಳ್ಳುತ್ತ ಅವಳ ಮುಖದ ಕಡೆಗೆ ನೋಡಿದ. ಆ ಕೆಂಪಾದ ತುಟಿ-ಗಳಲ್ಲಿ ಏನು ಆಕರ್ಷಣೆ ಕಂಡಿತೋ ಏನೋ, ಅವಳನ್ನು ಬಲವಾಗಿ ಸೆಳೆದು ಅಪ್ಪಿ ಮುತ್ತಿಟ್ಟ. ಗಂಗೆ 'ಹೋಗ್ರೀ, ಇದೇನು ಚೆನ್ನ ?' ಎಂದು ಹಿಂದೆ ಸರಿದಳು. ಗೋವಿಂದ ನಗುತ್ತಲೇ ಹೇಳಿದ : "ಗಂಗಾ ನಿನ್ನದೂ ಭಾರೀ ಡಿಮ್ಯಾಂಡು ಮುತ್ತು ನೋಡು. ಒಂದು ಮುತ್ತಿಗಾಗಿ, ಮೂರು ದಿನ ರಜ ತೆಗೆದುಕೊಂಡು, ಹತ್ತು ರೂಪಾಯಿ ಖರ್ಚು ಮಾಡಿಕೊಂಡು, ಇಲ್ಲಿಗೆ ಬರಬೇಕಾಯಿತು!" ಗಂಗೆ ಅವನ ಮಾತಿಗೆ ಪ್ರತ್ಯುತ್ತರ ಕೊಡದೆ "ಹೂಂs" ಎಂದು ಮುಗುಳ್ನಗೆ ನಕ್ಕಳು. ಆ ಮುಗುಳ್ನಗೆಯಲ್ಲಿ ಮತ್ತೇನು ವಿಶೇಷ ಆಕರ್ಷಣೆ ಕಂಡಿತೋ ಏನೋ, ಆವೇಶದಿಂದ ಮತ್ತೊಮ್ಮೆ ಅವ-ಳನ್ನು ಬಲವಾಗಿ ಸೆಳೆದು ಅಪ್ಪಿ ಮುತ್ತಿಟ್ಟ.

ಎಷ್ಟು ಹೊತ್ತಿನ ವರೆಗೆ ಅವಳನ್ನು ಹಾಗೆ ಅಪ್ಪಿ ಹಿಡಿದಿದ್ದನೋ, ಹೊರಗೆ ಟಾಂಗಾದ ಹಾರ್ನು 'ಪೊಂ' ಎಂದಾಗಲೇ ಇಬ್ಬರಿಗೂ; ಎಚ್ಚರು.

ಇದೀಗ ಪ್ರಕಟವಾಗಿದೆ! ಅನುಪಮ್ಯ ಸಾಹಿತ್ಯ!

ಶ್ರೀ. ಮಿರ್ಜಿ ಅಣ್ಣಾರಾಯರ

ಜೈನಧರ್ಮ

ಡೇಮಿ ೮ ಆಕಾರದ ೧೦೦೦ ಪುಟಗಳು. ನೂರಾರು ಚಿತ್ರಗಳು. ಜೈನಧರ್ಮದ ಇತಿಹಾಸ, ತತ್ತ್ವಜ್ಞಾನ, ಸಂಸ್ಕೃತಿ ಸಾಹಿತ್ಯಗಳೆಲ್ಲದರ ಸಮಗ್ರ ವಿವೇಚನೆ ಈ ಒಂದು ಗ್ರಂಥದಲ್ಲಿಯೇ ಇದೆ. ಮೇಲಾಗಿ ಎಲ್ಲ ದರ್ಶನಗಳ ತುಲನಾತ್ಮಕ ಅಭ್ಯಾಸವೂ ಇದೆ.

ಕ್ರಯ: ೧೫-೦-೦. ರೂಪಾಯಿಗಳನ್ನು ಮನಿಯಾರ್ಡರಿಂದ ಕಳಿಸುವವರಿಗೆ ಅಂಚೆಯವೆಚ್ಚವಿಲ್ಲ.

ಮಿರ್ಜಿ ಅಣ್ಣಾರಾಯರು

ಪೊ : ಉಗಾರ ಬುದ್ರುಕ, ಜಿ. ಬೆಳಗಾಂವ

ಹೊಸ ಬೆಳಕು

(ಸಣ್ಣಕತೆ)*

ಶ್ರೀ. ನೆಂ. ಮು. ಜೋಶಿ, ಧಾರವಾಡ

卐

ಮಾನವನ ಜೀವನದಲ್ಲಿ ಕಾಮವೆಂಬುದು ಪ್ರಕೃತಿಸಿದ್ಧ; ಪ್ರೇಮವೆಂಬುದು ಸಂಸ್ಕೃತಿಸಾಧ್ಯ! ವೈಷಮ್ಯಪೂರ್ಣ ಪ್ರಕೃತಿ ಅಶಾಂತಿಕಾರಿ! ಸಂಯಮಪೂರ್ಣ ಪ್ರೇಮ ಸಮಾಧಾನಕಾರಿ! ಕಾಮದಿಂದ ಅಶಾಂತಳಾದ ಲೀಲಾಬಾಯಿ, ಪ್ರೇಮದ ಪಾಠದಿಂದ ಜೀವನದಲ್ಲಿ ಸುಖವನ್ನು ಕಂಡುಕೊಂಡಳು!

卐

ಗರ್ಲ್ಸ್ ಹಾಯ್‌ಸ್ಕೂಲಿನಲ್ಲಿ ಕ್ಲಾಸುಗಳು ನಡೆದಿದ್ದುವು. 'ಶಾಲೆ' ಎಂದ ಮೇಲೆ ಕೇಳುವುದೇನು! ಅಲ್ಲಿ ಸಂತೆಯ ಗದ್ದಲ ಕೂಡುವುದು ಖಂಡಿತ. ಶಾಲೆಯ ಹುಡುಗರೆಂದರೆ ಶುದ್ಧ ಮಂಗಗಳು! ಅದರಲ್ಲಿಯೂ ಹುಡುಗಿಯರ ಶಾಲೆ. 'Two watches two ladies never agree' ಎಂದು ಬಲ್ಲವರು ಹೇಳುತ್ತಾರೆ; ಅದು ಹದಿನಾರಾಣೆ ನಿಜ. ಎಳೆಯ ಹುಡುಗರ ಮನಸ್ಸಿಗೆ ಒಂದು ದಿಗ್ಬಂಧನವಿರುವುದಿಲ್ಲ. ಅದು ಕೇವಲ ಗಾಳಿಪಟ. ಮನಸ್ಸಿಗೆ ಬಂದಂತೆ ಹಾರಾಡುವುದು ಅದಕ್ಕೆ ಮೇರೆ ಇಲ್ಲ, ಸೀಮೆ ಇಲ್ಲ. ಆದರೆ ಆ ಗಾಳಿಪಟಕ್ಕೆ ಸರಿಯಾದ ಸೂತ್ರವಿದ್ದರೆ.... !

ಲೀಲಾಬಾಯಿ ದೇಶಪಾಂಡೆಯವರು ಆ ಶಾಲೆಯ ಹುಡುಗಿಯರಿಗೆ ಭದ್ರವಾದ ಸೂತ್ರದಂತಿದ್ದರು ಮ್ಯಾಟ್ರಿಕ್ ಕ್ಲಾಸಿಗೆ ಲೀಲಾಬಾಯಿಯವರು ಇಂಗ್ಲಿಶ್ ಕಲಿಸುತ್ತಿದ್ದರು. ಎಳ್ಳುಬಿದ್ದ ಸಪ್ಪಳವೂ ಸ್ಪಷ್ಟವಾಗಿ ಕೇಳಿಸುವಷ್ಟು ಶಾಂತತೆ ಅಲ್ಲಿ ನೆಲಸಿತ್ತು. ಕ್ಲಾಸಿನಲ್ಲಿಯ ಎಂಬತ್ತು ಹೆಣ್ಣುಕಣ್ಣುಗಳು, ಸಿಂಗದ ಕೈಗೆ ಬಿದ್ದ ಹರಿಣಾಂಗನೆಯ ನೆನಪು ಮಾಡಿ ಕೊಡುತ್ತಿದ್ದುವು. ಆ ಹುಡುಗಿಯರು. ಉಳಿದಾವ ಮಾಸ್ತರರಿಗೂ ಅಂಜುತ್ತಿರಲಿಲ್ಲ— ಜಪಾನು ಜಗತ್ತನ್ನೇ ಗೆಲ್ಲುವ ಘೋಷಣೆಯಾಡುತ್ತಿತ್ತು; ಆದರೆ ಆಟಮಿನ ದರ್ಶನಮಾತ್ರದಿಂದ, ಬಿಳಿಯ ಧ್ವಜವೇರಿಸಿ ದಾಸ್ಯ ಒಪ್ಪಿಕೊಂಡು ಬಿಟ್ಟಿತಲ್ಲವೇ? ಲೀಲಾಬಾಯಿಯವರು ಈ ವಿಷಯದಲ್ಲಿ 'ಆಟಮ್'ಗೆ ಪೂರ್ಣ ಸರಿತೂಗುತ್ತಿದ್ದರು. ಹುಡುಗಿಯರು ಇತರ ಮಾಸ್ತರರ ಎದುರಲ್ಲಿ ಗುಡುಗಾಡುತ್ತಿದ್ದವರು, 'ಲೀಲಾಬಾಯಿ ದೇಶಪಾಂಡೆ B.A. (Hons) B.T. (I Class)' ಎಂದಾಕ್ಷಣ ತಲೆ ಕೆಳಗೆ ಹಾಕುತ್ತಿದ್ದರು.

ಲೀಲಾಬಾಯಿಯವರು ಅಷ್ಟೊಂದು ಉಗ್ರವಾಗಿರಲಿಲ್ಲ! ಕ್ಲಾಸಿನ ಹುಡುಗಿಯರ ಮೇಲೆ ತಮ್ಮ ಸ್ವಾಮಿತ್ವ ಸ್ಥಾಪಿಸಿದ್ದು ಕೇವಲ ತಮ್ಮ ಗಾಂಭೀರ್ಯಪೂರ್ಣ ಮುಖಮುದ್ರೆಯಿಂದ, ಮಿತಭಾಷಣದಿಂದ, ತಮ್ಮ ತೇಜಸ್ಸಿನಿಂದ ತುಂಬಿದ ಸುಂದರ ಮುಖದಿಂದ. ನಿಜವಾಗಿಯೂ ಲೀಲಾಬಾಯಿಯವರ ಮುಖದಷ್ಟು ಸುಂದರ ಮುಖ, ಆ ಊರಮಟ್ಟಿಗಾದರೂ ನೋಡಲು ಸಿಕ್ಕಲಾರದು—ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ತುಂಬಿದ ಗೆನ್ನೆ, ಮಾಟವಾದ ಹಣೆ, ಹಣೆಯ ಸುತ್ತು ಇಳಿಬಿದ್ದ ರೇಶಿಮೆಯಂತಿರುವ ಅವರ ಉಂಗುರುಗೂದಲು, ವಿಸ್ತೃತವಾಗಿ ಬೆಳೆದಿರುವ ಎದೆ, ಆ ಆಕರ್ಷಕವಾದ ಕಣ್ಣುಗಳು, ಪುಟಗೊಟ್ಟ ಚಿನ್ನದಂತಿರುವ ಮೈಬಣ್ಣ— ಇವೆಲ್ಲ ಅವರನ್ನು ಬೇಲೂರ ಶಿಲಾಬಾಲಿಕೆಗೆ ಹೋಲಿಸಹಚ್ಚುತ್ತಿದ್ದುವು. ಲೀಲಾಬಾಯಿಯವರ ವಯಸ್ಸು ಮೂವತ್ತನ್ನು ದಾಟಿದ್ದರೂ, ಅದೇ ಅರಳಿದ ಚೆಲುವಿನಲ್ಲಿಯೇ ಕಂಗೊಳಿಸುತಿದ್ದಿತು ಅವರ ದೇಹಸೌಂದರ್ಯ. ಜಾರ್ಜೆಟ ಸೀರೆ ಉಟ್ಟು ಅವರು ಕ್ಲಾಸಿನಲ್ಲಿ ಬಂದರೆ, ಅವರ ಪ್ರತಿ ಅಂಗಾಂಗದ ಏರು ಇಳಿವು, ಸೌಂದರ್ಯಪೂರ್ಣವಾಗಿ ಕಂಗೊಳಿಸುತ್ತಿದ್ದುವು. ಇದೇ ಅವರ ವೈಶಿಷ್ಟ್ಯ. ನೋಡುವವರನ್ನು ಬೆರಗುಗೊಳಿಸುತ್ತಿತ್ತು. ಅವರು ಕೇವಲ ದೈಹಿಕಸೌಂದರ್ಯದಲ್ಲಿಯಷ್ಟೇ ಮೊದಲ ಕ್ರಮಾಂಕ ಪಡೆದಿರಲಿಲ್ಲ; ಬುದ್ಧಿಮತ್ತೆಯೂ ಅದರ ಜತೆಯಲ್ಲಿ ಸೇರಿಕೊಂಡಿತ್ತು.

ಕ್ಲಾಸಿನಲ್ಲಿ ಬಂದವರೇ ಲೀಲಾಬಾಯಿ ಕಥೆಯೊಂದನ್ನು ಓದತೊಡಗಿದರು. ಪುಸ್ತಕದ ಹೆಸರು "Fairy tales from turkey" ಕತೆಯ ಹೆಸರು 'God's Gift' (ದೇವರ ಕೊಡುಗೆ) ಎಂದು. ಕತೆ ಸರಾಗವಾಗಿ ಓಡುತ್ತಿತ್ತು. ಆದರೆ ನಡುವೆ ಒಂದು ಶಬ್ದ ಬಂತು. ಒಂದರೆನಿಮಿಷ ಲೀಲಾಬಾಯಿಯವರು ಓದನ್ನು ನಿಲ್ಲಿಸಿದರು. ಸರಾಗವಾಗಿ ಸಾಗುವ ನದಿಗೆ ಅಣೆಕಟ್ಟು ಕಟ್ಟಿದಂತಾಯ್ತು. ಹೆಚ್ಚಾದ ನೀರು ಹೊರಚೆಲ್ಲಲೇ ಬೇಕಲ್ಲವೇ? ಆ ಶಬ್ದಗಳ ಮೇಲಿಂದ ಅಲುಗದ ಅವರ ಕಣ್ಣುಗಳಂಚಿನಲ್ಲಿ ನೀರ ಹನಿಗಳು ಕಾಣಿಸಿಕೊಂಡುವು. ಮುಂದೆ ಕುಳಿತ ಹುಡುಗಿಯರಿಗೆ ಅದು ಕಾಣಿಸದೆ ಹೋಗಲಿಲ್ಲ. ಹುಡುಗಿಯರು ಏನೋ 'ರಹಸ್ಯ' ಎಂದು ಮನಸಲ್ಲಿಯೇ ತಿಳಿದುಕೊಂಡರು. ಆದರೆ ಒಳಗಣ ಧ್ವನಿಗೆ ಹೊರಬರುವುದು ಸಾಧ್ಯವಿರಲಿಲ್ಲ. ಲೀಲಾಬಾಯಿಯವರ ಗಾಂಭೀರ್ಯದ ಬೇಲಿಯು ಅಷ್ಟು ಭದ್ರವಾಗಿತ್ತು. ತಡೆಹಿಡಿದ ವಾಕ್ಯ ಅಷ್ಟೊಂದು ಗಹನವಾಗಿರಲಿಲ್ಲ :

ಒಬ್ಬ ಕುರುಬರ ಹುಡುಗ ನೀರುಕುಡಿಯುವುದಕ್ಕಾಗಿ ಬಾವಿಯಲ್ಲಿ ಇಳಿಯುತ್ತಾನೆ. ಅಲ್ಲಿ ಒಬ್ಬ ಕುರೂಪಿಯಾದ ರಾಕ್ಷಸಿ ಕಾಣಿಸಿಕೊಳ್ಳುತ್ತಾಳೆ. ಅವಳ ಒಂದು ಕೈಯಲ್ಲಿ ಒಬ್ಬ ಸುಂದರ

* ಮೇಲಾಟದಲ್ಲಿ ಮೂರನೆಯ ಬಹುಮಾನ ಪಡೆದ ಕತೆಯಿದು.

ಸಂ. ಜ.

ಯುವಕ, ಇನ್ನೊಂದು ಕೈಯಲ್ಲಿ ಒಬ್ಬ ಸುಂದರ ಯುವತಿ. ಆ ರಾಕ್ಷಸಿಗೆ ತಾನು ತುಂಬಾ ಸುಂದರಿ ಎನ್ನುವ ಹೆಮ್ಮೆ ಇರುತ್ತದೆ; ಲ್ಲಿ ನೀರು ಕುಡಿಯುವುದಕ್ಕೆ ಬಂದವರನ್ನೆಲ್ಲ, 'ಯಾರು ಸುಂದರರು?' ಎಂದು ಕೇಳುತ್ತಿರುತ್ತಾಳೆ. ಎಲ್ಲರೂ ಸತ್ಯ ಹೇಳುತ್ತಾರೆ, ಆ ರಾಕ್ಷಸಿಯ ಕೋಪಕ್ಕೆ ಬಲಿಬೀಳುತ್ತಾರೆ. ಈಗ ಕುರುಬರ ಹುಡುಗನಿಗೂ ಅದೇ ಪ್ರಶ್ನೆ ಕೇಳುತ್ತಾಳೆ ಆ ರಾಕ್ಷಸಿ: Which of us is the more beautiful, this youth, this rl or, I." (ನಮ್ಮಲ್ಲಿ ಯಾರು ಸುಂದರರು? ಈ ಯುವಕನೋ? ಯುವತಿಯೋ ಅಥವಾ ನಾನೋ?)

ಕುರುಬರ ಹುಡುಗ ಪೇಚಿನಲ್ಲಿ ಬೀಳುತ್ತಾನೆ. ಸತ್ಯ ಹೇಳಿದರೆ ಸಾಯುತ್ತಾನೆ; ಸುಳ್ಳಾಡಿದರೆ, ಮರಣಕ್ಕಂಜಿ ಸುಳ್ಳಾಡಿದ ಪಾಪ ಬರುತ್ತದೆ. ಆದರೂ ಹುಡುಗ ವಿಚಾರವಂತ, ವಿಚಾರಿಸಿ ಉತ್ತರ ಹೇಳಿಯೂಬಿಡುತ್ತಾನೆ:

"Whomsoever the heart loves is beautiful." (ಒಳ್ಹೃದಯದಿಂದ ಪ್ರೀತಿಸಲ್ಪಟ್ಟ ವಸ್ತು ಸುಂದರವಾಗಿರುತ್ತದೆ).

ಅವನು ಕೊಟ್ಟ ಉತ್ತರ ಸುಂದರವಾಗಿತ್ತು. ಆದರೆ ಆ ವಾಕ್ಯ ಲೀಲಾಬಾಯಿಯವರನ್ನು ಯೋಚನೆಗೆ ಈಡು ಮಾಡಿತ್ತು. ಅದೊಂದೇ ವಾಕ್ಯ ಅವರನ್ನು ತಡೆಹಿಡಿದು ನಿಲ್ಲಿಸಿತ್ತು. ಆ ಸ್ತಬ್ಧತೆ, ಅವರ ಗಾಂಭೀರ್ಯದ ಶಿಥಿಲತೆಗೆ ಎಡೆಮಾಡಿಕೊಟ್ಟಿತು. ಆ ಶಿಥಿಲತೆಯ ಉಪಯೋಗ ಪಡೆದುಕೊಂಡು, ಮೂಲೆಯಲ್ಲಿ ಕುಳಿತ ಕಿಡಿಗೇಡಿ ಮೇರಿ ಡಿಸೋಜ್ಹಾ ಎದ್ದುನಿಂತು, ಪ್ರಶ್ನೆಯನ್ನು ಕೇಳಿದಳು:

"ಮ್ಯಾಡಮ್, ಒಂದು ಪ್ರಶ್ನೆ."

"ಕೇಳು" ಪುಸ್ತಕದತ್ತ ಇದ್ದ ಮುಖವನ್ನು ಮೇಲಕ್ಕೆತ್ತದೆ ಲೀಲಾಬಾಯಿ ಉತ್ತರಿಸಿದಳು.

"ಪ್ರೇಮವಿವಾಹದ ನಂತರ ಗಂಡನಿಗೆ ಏನೋ ಆಗಿ ಅವನು ಕುರೂಪಿಯಾಗುತ್ತಾನೆ. ಆದರೆ Whomsoever the heart loves is beautiful ಎಂಬ ವಾಕ್ಯದ ಪ್ರಕಾರ ಆಗಲೂ ಆ ಹೆಂಡತಿಗೆ ಆ ವಿಕೃತಗಂಡ ಸುಂದರನಾಗಿಯೇ ಕಾಣಿಸುತ್ತಾನೆಯೆ?"

ತಾರುಣ್ಯದ ಹೊಸ್ತಿಲಲ್ಲಿ ಆಗಲೇ ಕಾಲಿರಿಸಿದ ಕ್ಲಾಸಿನ ಹುಡುಗಿಯರಿಗೆ, ಈ ತಮ್ಮ ಲೀಲಾಬಾಯಿಯವರ ಮೇಲಿನದೇ ಆದ ಪ್ರೇಮದೃಷ್ಟಾಂತ. ಅವರಲ್ಲಿ ತಡೆಹಿಡಿಯಲಸದ್ದ ನಗೆಯನ್ನು ಕೆರಳಿಸಿತು. ತತ್‌ಕ್ಷಣ ಕ್ಲಾಸಿನಲ್ಲಿ ಗೆರುಸೊಪ್ಪೆಯ ಘಟಘಟೆಯ ಪ್ರಾಳವಾಯಿತು. ಅದು ಆ ಹುಡುಗಿಯರ ನಗು. ಲೀಲಾಬಾಯಿಯವರ ಮುಖ ಉಗ್ರವಾಯಿತು. ಗೌರವಾಗಿದ್ದ ಅವರ ಮುಖ ಮತ್ತಿಷ್ಟು ಬಣ್ಣಕಟ್ಟಿತು. ಸಿಡಿಕಿಡಿಯಾಗಿ ಒದರಿದರು: "Silence" (ಶಾಂತರಾಗಿರಿ)

—ಘಟಘಟೆಯ ಪ್ರವಾಹವನ್ನು ಮಣ್ಣಿನ ಒಡ್ಡಿನಿಂದ ತಡೆಯಬಹುದೇ? ಲೀಲಾಬಾಯಿಯವರಿಗೆ ತಮ್ಮ ಐದು ವರುಷಗಳ ಸರ್ವಿಸಿನಲ್ಲಿ ಇಂತಹ ಪರಿಸ್ಥಿತಿಯನ್ನು ಎದುರಿಸುವುದು ಇದೇ ಮೊದಲು. ಹೊಸತಾಗಿ ಬಂದ ಅನುಭವ, ಮನುಷ್ಯನ ಹೃದಯವನ್ನು ಕಲಕಿಸಿ ಬಿಡುತ್ತದೆ. ಕೈಯಲ್ಲಿಯ ಪುಸ್ತಕವನ್ನು ಮುಚ್ಚಿ ಕ್ಲಾಸಿನಿಂದ ಹೊರಗೆ ನಡೆದು ಬಿಟ್ಟರು.

ಕ್ಲಾಸಿನಲ್ಲಿ ಮತ್ತೆ ಸ್ಮಶಾನಶಾಂತತೆ ವ್ಯಾಪಿಸಿತು. ನೀರನ್ನು ತಡೆಹಿಡಿದರೆ ಅದರ ಅಬ್ಬರ ಹೆಚ್ಚು. ನಡುವಿನ ಅಡ್ಡಗೋಡೆಯನ್ನೇ ತೆಗವಿದಾಗ? ಕ್ಲಾಸಿನಲ್ಲಿಯ ನಗು ಎಲ್ಲಿಯೋ ಮಾಯವಾಯಿತು; ಅದರೆಡೆಯಲ್ಲಿ ಯಾವುದೋ ಅಂಜಿಕೆ ವ್ಯಾಪಿಸಿತ್ತು. ಆದರೂ ಮೇರಿ ಡಿಸೋಜ್ಹಾಳ ಧೈರ್ಯಕ್ಕೆ ತಲೆದೂಗಿದರು. ಹೌದು. ಧೈರ್ಯವೇ ಸರಿ. ಲೀಲಾಬಾಯಿಯವರ ಸಂಸಾರದ ಮಾತನ್ನೇ ಉದಾಹರಣೆಯಾಗಿ ತೆಗೆದುಕೊಂಡು ಪ್ರಶ್ನೆಯನ್ನು ಕೇಳುವುದೆಂದರೆ ಸಾಮಾನ್ಯವೇ!

ಕ್ಲಾಸಿನಿಂದ ಹೊರಬಿದ್ದವರೇ ಲೀಲಾಬಾಯಿಯವರು, ನೇರವಾಗಿ ಟೀಚರ್ಸ್ ರೂಮಿನಲ್ಲಿ ಬಂದು ಕುಳಿತರು. ಅವರ ಮನಸ್ಸಿಗೆ ಶಾಂತಿ ಬೇಕಿತ್ತು. ಕ್ಲಾಸಿನಲ್ಲಿಯ ಘಟನೆ, ಅವರ ಮಾನಸಿಕ ಸರೋವರದ ಸ್ತಬ್ಧನೀರನ್ನು ಕಲಕಿಸಿತ್ತು. ಏನು ಮಾಡಿದರೂ ಮನಸ್ಸಿನ ಅಸ್ವಸ್ಥತೆ ಮಾಯವಾಗಲಿಲ್ಲ. ಹಾಗೆಯೆ ಎದ್ದು ತಣ್ಣೀರಿನಿಂದ ಮುಖ ತೊಳೆದುಕೊಂಡು, ತಲೆಗೂದಲನ್ನು ಸರಿಪಡಿಸುವುದಕ್ಕಾಗಿ ಕನ್ನಡಿಯ ಎದುರು ಬಂದು ನಿಂತರು. ತಮ್ಮ ಮುಖ ನೋಡಿ ತಾವೇ ದಿಗ್ಭ್ರಾಂತರಾದರು. ಅವರ ಮುಖದಿಂದ ಲಾವಣ್ಯ ಹೊರಸೂಸಿದಂತೆ ಕಾಣಿಸತೊಡಗಿತು; ಆದರೆ ಆ ಸುಂದರ ಪ್ರತಿಬಿಂಬವನ್ನು ಅವರಿಗೆ ನೋಡಲಾಗಲಿಲ್ಲ. ಅದು ತನ್ನ ಸದ್ಯಸ್ಥಿತಿಯನ್ನು ಅಣಕಿಸುವಂತೆ ತೋರಿತು. ಮನದ ಮೇಲೆ ಮಿದುಳಿನ ಸ್ವಾಮಿತ್ವ ತಪ್ಪಿತೇನೋ! ಇಲ್ಲವಾದರೆ ಅವರು ತಮ್ಮ ಪ್ರತಿಬಿಂಬಕ್ಕೆ ಅಣಕಿಸಿ ದೂರ ಸರಿಯುತ್ತಿರಲಿಲ್ಲ. ಪಾಪ, ನಿರ್ಜೀವ ಕನ್ನಡಿ! ಅದರೂ ಸೇಡು ತೀರಿಸಿಕೊಳ್ಳುವುದರಲ್ಲಿ ಕಡಿಮೆ ಇರಲಿಲ್ಲ. ಪುನಃ ಅಣಕಿಸಿಯೇ ಬಿಟ್ಟಿತು. ಲೀಲಾಬಾಯಿಯವರು ತಮ್ಮ ಸ್ಥಿತಿ ತೀರ ಅಸ್ವಸ್ಥವಾದಾಗ, ಆರಾಮ ಖುರ್ಚಿಯಲ್ಲಿ ಕುಳಿತು, ಮುಖದ ಮೇಲೆ ಅದೇ ಪುಸ್ತಕವನ್ನು ತೆರೆದು ಇಡಹೋದರು ದುರ್ದೈವಕ್ಕೆ ಅದೇ ಪಾಠ ತೆರೆಯಬೇಕೇ, ಅದೇ ವಾಕ್ಯ ಕುಣಿಯಬೇಕೇ?

"Whomsoever the heart loves is beautiful"

ಆದರೆ ಈ ಸಲ ಲೀಲಾಬಾಯಿಯವರಿಗೆ ಸಿಟ್ಟು ಬರಲಿಲ್ಲ. ತೆರೆದ ಪುಸ್ತಕದಿಂದ ಮುಖವನ್ನು ಮುಚ್ಚಿಕೊಂಡರು.

ನಿದ್ದೆ ಬಾರದಾಗ ಕಣ್ಣನ್ನು ಮುಚ್ಚಿ ಮಲಗಿದರೆ?—ಥಿಯೇಟರಿನಲ್ಲಿ ದೀಪವಾರಿಸಿದಂತೆ—ಚಿತ್ರಪಟ ಸುರುವಾಗಿ ಬಿಡುತ್ತದೆ. ಲೀಲಾಬಾಯಿಯವರ ಸ್ಮೃತಿಪಟಲದ ಮೇಲೆ ಅವರ ಗತಜೀವನದ ಚಿತ್ರಪಟ ಸುಳಿಯತೊಡಗಿತು:

"—ಆ ಘಟನೆ— ಮಧುರ ರಸನಿಮಿಷ! ಹಾಯಸ್ಕೂಲಿನಲ್ಲಿ ತಾವು ಮ್ಯಾಟ್ರಿಕಿನಲ್ಲಿ ಕಲಿಯುವ ದಿನ. ತಮ್ಮ ಕ್ಲಾಸಿನ ದೇಶಪಾಂಡೇ ಮಾಸ್ತರರು— ತಾನು ಅವರ ಪವಿತ್ರ ಪ್ರೇಮ.

ಪಾಠದಲ್ಲಿ ಸಿಲುಕಿದ್ದು, ಆ ಘಟನೆ ಮದುವೆಯಲ್ಲಿ ಪರಿಣಮಿಸಿತು. ನೋಡಿದ ಜನನೆಲ್ಲ 'ಲಕ್ಷ್ಮೀ-ನಾರಾಯಣರ ಜೋಡಿ, ರಾಧಾ-ಕೃಷ್ಣರ ಜೋಡಿ' ಎಂದು ಬೆರಳು ಕಚ್ಚುತ್ತಿದ್ದರು. ತಾವು ಊರಲ್ಲಿ ಸಾಯಂಕಾಲ ತಿರುಗಾಡಿ ಮನೆಗೆ ಬಂದರೆ, ಮನೆ-ಯಲ್ಲಿಯ ಕೆಲಸಗಿತ್ತಿ, ದೃಷ್ಟಿ ತೆಗೆದು ಬೆಂಕಿಯಲ್ಲಿ ಸಾಸಿವೆ ಕಾಳು ಒಗೆದರೆ, ಮನೆಯಲ್ಲಿ ಕಾಲಿಡಲಾಗದಷ್ಟು ಹೊಲಸು ವಾಸನೆ ಬರುತ್ತಿತ್ತು. ದೇಶಪಾಂಡೇ ಮಾಸ್ತರರು ಆದರ್ಶವಾದಿಗಳು, ತುಂಬಾ ಬುದ್ಧಿವಂತರು, ಸುಂದರರು. ಅವರಿಗೆ ಸಮಾನರ ಬಳಗದವರಾರೂ ಇರಲಿಲ್ಲ. ತನ್ನ ಸಹೃದಯ ಪೂರಿತ ಪ್ರೇಮ, ಅವರ ರುಕ್ಷ ಜೀವನದಲ್ಲಿ ಗಂಗೆಯ ಮಹಾಪೂರದಷ್ಟು ಸ್ಫುರಸ್ಸನ್ನು ಹುಟ್ಟಿಸಿತ್ತು. ಅರೆನಿಮಿಷವಾದರೂ ಅವರು ತನ್ನನ್ನು ಬಿಟ್ಟು ಕದಲುತ್ತಿರಲಿಲ್ಲ. ತಾನಾದರೂ ಎಲ್ಲಿ ? ಎರಡೂ ಕೈಗಳೂ ಕೂಡಿದಾಕ್ಷಣವೇ ಚಪ್ಪಾಳೆಯಲ್ಲವೇ ? ತನ್ನ ಮನೆ,—ಮನೆ ಅಲ್ಲ— ನಂದನ ವನ ! ಆ ಸುಖ ಆ ಶಾಂತಿ—

— ಆದರೆ ಆ ಸುಖ ಶಾಂತಿ, ಬಿರುಗಾಳಿಯ ಪೂರ್ವದ ಚಿಹ್ನೆಯೆಂದು ಆಗ ತನಗೆಲ್ಲಿ ಅರಿಯಿತ್ತು ? ಹಗಲು ಹೋದಾಕ್ಷಣ ರಾತ್ರಿಯಾಗುವುದು ಸೃಷ್ಟಿಯ ನಿಯಮ ಸರಿ. ಆದರೆ, ಬಂದ ಆ ಕಾಳ ರಾತ್ರಿ ಮತ್ತೆ ಸರಿಯದೆ ನಿಂತರೆ ? ತನ್ನ ಜೀವನದಲ್ಲಿ ಮತ್ತೆ ಹಗಲು ಯಾವಾಗ ? ಹತ್ತು ವರುಷದ ಹಿಂದಿನ ಪ್ರಸಂಗ : ಮದುವೆಯಾಗಿ ಮೂರು ವರ್ಷವೂ ಆಗಿರಲಿಲ್ಲ. ಆ ಸುಡುಗಾಡು ಗೋಕಾಕ ಪ್ರವಾಸ .... ಮೋಟಾರಿನ ಅಪಘಾತ ! ಒಂದು ಕಾಲು, ಒಂದು ಕೈ, ಮುಖಕ್ಕೆ ಗಾಯ ! ತನ್ನ ಗಂಡನಿಗಾದ ಈ ದೈನ್ಯಾವಸ್ಥೆ— ಒಂದು ಸಲ ತನ್ನ ಮನದಲ್ಲಿ, ಆತ್ಮಹತ್ಯೆಯ ವಿಚಾರವೂ ಬಂದಿತು. ಅಪಾಯದಿಂದ ಗುಣವಾಗದಿದ್ದರೆ ಬಾವಿ ಬೀಳುವೆನೆಂದು ಶಪಥವನ್ನು ಮಾಡಿದ್ದೆ. ಆದರೆ ವಿಸ್ಮೃತಿ ಮಾನಸಿಕ ರೋಗಕ್ಕೊಂದು ರಾಮಬಾಣ ಔಷಧವೆಂದು, ಅನಂತರ ತಿಳಿಯಿತು. ಪ್ರೇಮದ ಉದ್ವೇಗ ಬರುಬರುತ್ತ ಕಡಿಮೆಯಾಗತೊಡಗಿತು. ಗಂಡನ ಕುಂಟುದೇಹ, ವಿಕೃತಮುಖ— ಛೀ, ಏನೋ ಒಂದು ತರದ ಜುಗುಪ್ಸೆ ಹುಟ್ಟಿಸಿತು. ಬರುಬರುತ್ತ ಅವರ ವಿಷಯದಲ್ಲಿ ಅನಾದರ ಹೆಚ್ಚತೊಡಗಿತು. ಮುಖ ನೋಡುವುದಕ್ಕೂ ಮನಸ್ಸಾಗಲಿಲ್ಲ— ಮೈ ಮುಟ್ಟುವುದಂತೂ ದೂರ ಉಳಿಯಿತು. ಯಾವ ಸುಖ-ಸಂಪತ್ತುಗಳಿದ್ದರೇನು ?— ಆ ಹಸಿವು ! ಹಸಿವನ್ನು ಹಿಂಗಿಸಿಕೊಳ್ಳಬಹುದಿತ್ತು; ಆದರೆ ಹುಲಿ ಹಸಿವರೆ— "

ಭವಿಷ್ಯದ ಭೀಕರ ಭೂತ ಅವಳ ಮುಂದೆ ಥೈ ಥೈ ಕುಣಿದಾಡತೊಡಗಿತು. ತಾಸು ಮುಗಿದ ಗಂಟೆಯ ಸಪ್ಪಳವೂ ಅವಳಿಗೆ ಕೇಳಿಸಲಿಲ್ಲ. ಟೀಚರ್ಸ್ ರೂಮಿನಲ್ಲಿ ಇತರ ಮಾಸ್ತರರು ಬಂದ ಸಪ್ಪಳವಾದಾಗಲೇ ಅವಳಿಗೆ ಎಚ್ಚರು ಬಂದಿತು. ಲೀಲಾಬಾಯಿ ಮುಖದ ಮೇಲಿನ ಪುಸ್ತಕವನ್ನು ತೆಗೆದು ದೂರ ಸರಿಸಿದಳು. ಎದುರಿನಲ್ಲಿಯೇ ಮುಜುಮದಾರ್ ಮಾಸ್ತರರು ನಿಂತಿದ್ದರು. ತಮ್ಮನ್ನು ನೋಡಿದಾಗ ಮಾತನಾಡಿಸದೇ ಇರುವುದು ಸಭ್ಯತನಕ್ಕೆ ಸಲ್ಲದ ವಿಷಯವೆಂದು, ಮುಜುಮದಾರರು "ಏನು ಮನೆಯಲ್ಲಿ ನಿದ್ರೆ ಆಗಲಿಲ್ಲವೇ ? " ಎಂದು ತಮ್ಮ ಸರಲ-ಹಾಸ್ಯಯುಕ್ತ-ಶೈಲಿಯಲ್ಲಿ ಕುಶಲಪ್ರಶ್ನೆ ಮಾಡಿದರು.

ಲೀಲಾಬಾಯಿಯವರು ತಮ್ಮನ್ನು ಸಾವರಿಸಿಕೊಂಡು ಏಳಲಿಲ್ಲ; ಕುಳಿತಲ್ಲಿಯೇ ಕುಳಿತು " ಹೌದು " ಎಂದರು. ಮಾತು ಮುಗಿದೊಡನೆಯೆ ಮುಜುಮದಾರರು ಬೇರೆಯ ಕಡೆಗೆ ಹೊರಳಿದರು. ಆದರೆ ಲೀಲಾಬಾಯಿಯವರ ದೃಷ್ಟಿ ಅವರ ಮೇಲಿಂದ ಕದಲಲಿಲ್ಲ. ಬಿಕ್ಕೆ ಬೇಡುವವನಿಗೆ ಪಕ್ವಾನ್ನದ ಎಲೆಯನ್ನು ಮುಂದೆ ಮಾಡಿದರೆ ! ಹೌದು, ಒಂದು ವಿಷಯದಲ್ಲಿ ಲೀಲಾಬಾಯಿಯವರು ಬಿಕ್ಕೆಯವರೇ ಆಗಿದ್ದರು. ಗಂಡನ ವಿಕೃತಮುಖ, ಕುಂಟುದೇಹ ಅವರಲ್ಲಿ ಜುಗುಪ್ಸೆ ಹುಟ್ಟಿಸಿತ್ತು.

ಬೇಡದ ವಸ್ತುವನ್ನು ಆಹಾರದ ತಟ್ಟೆಯಲ್ಲಿ ಬಡಿಸಿದರೆ, ಕೆಲ ಹುಡುಗರು ಅದನ್ನು ಮುಟ್ಟುವುದಿಲ್ಲ. ಪಾಲಿಗೆ ಬಂದದ್ದೇ ಪಂಚಾಮೃತವೆನ್ನುವ ಸ್ವಭಾವ ಇವರದಲ್ಲ. ಕಾಜಿನ ಭರಣಿಯಲ್ಲಿ— ತೆಗೆಯಲು ಬಾರದ ಹಾಗೆ— ಭದ್ರವಾಗಿರಿಸಿದ ಹೋಳಿಗೆಯನ್ನು ಕಂಡಾದರೂ ಸಂತೋಷಪಟ್ಟಾರು; ಆದರೆ ಎಲೆಯಲ್ಲಿ ಬಡಿಸಿದ್ದನ್ನು ಕೈಯಿಂದ ಮುಟ್ಟರು. ಇಂಥವರ ಸಾಲಿಗೇ ಲೀಲಾಬಾಯಿಯವರೂ ಸೇರಿದ್ದರು.— ಆದರೆ ತೀರ ಹಸಿವಾದಾಗ— ಉಪವಾಸದಿಂದ ಸಾಯುವ ಜನವೂ ಇದ್ದಾರೆ ಅಥವಾ, ಭರಣಿಯನ್ನು ಒಡೆದು ಹೋಳಿಗೆಗೆ ಕೈ ಹಾಕುವ ಸಾಹಸಿಗಳೂ—

ಹತ್ತು ನಿಮಿಷಗಳ ಸೂಟಿ ಮುಗಿಯಿತು. ಶಾಲೆಯ ಜವಾನ ಘಂಟೆ ಬಾರಿಸಿ, ತನ್ನ ಕರ್ತವ್ಯವನ್ನು ನೆರವೇರಿಸಿದ. ಎಲ್ಲ ಮಾಸ್ತರರೂ ತಮ್ಮ ಕ್ಲಾಸಿಗೆ ಹೋದರು. ಆದರೆ ಲೀಲಾಬಾಯಿಯವರು ತಲೆ ನೋಯುತ್ತದೆಂದು ಹೇಳಿ, ಮನೆಯ ದಾರಿ ಹಿಡಿದರು. ನಡಿಗೆ ಮಾತ್ರ ಸಾವಧಾನವಾಗಿ ಸಾಗುತ್ತಿತ್ತು ; ಶೀಘ್ರತೆ ಆ ನಡಿಗೆಯಲ್ಲಿ ಬರಲು ಸಾಧ್ಯವಿರಲಿಲ್ಲ. ಶೀಘ್ರತೆಗೆ ಆಮಂತ್ರಣ ಕೊಡಲು ಮನೆಯಲ್ಲಿ ಆಕರ್ಷಕತೆ ಇರಲಿಲ್ಲ. ಲೀಲಾಬಾಯಿಯವರ ದಾಂಪತ್ಯ ಜೀವನದಲ್ಲಿ ಒಂದು ಬದಿ ಕಮರಿ ಹೋದಂತೆ ಭಾಸವಾಗುತ್ತಿತ್ತು. ದಾರಿಯುದ್ದಕ್ಕೂ, ನಡೆಯುತ್ತಿರುವಂತೆ ತಲೆತುಂಬ ಯೋಚನೆಗಳೇ !

"ಗಂಡನ ಅಪಘಾತದ ನಂತರ ಅವರು ಕೂಡಿಸಿಟ್ಟ ನಿಧಿಯಿಂದ ಕಾಲೇಜು ಕಲಿತಳು. ಬಿ. ಎ. ಆಯಿತು; ಬಿ. ಟಿ.ಯೂ ಆಯಿತು. ಮನೆಯಲ್ಲಿ ಕೂಡಿಸಿದ ನಿಧಿಯೂ ತೀರಿತು. ಆದರೂ ಒಂದು ವೃತ್ತಿಗೆ ಮಾರ್ಗವಾಯಿತು. ಕೆಲಸವೂ ಸಿಕ್ಕಿತು. ಕೈತುಂಬ ಸಂಬಳವೂ ಸಿಗತೊಡಗಿತು. ಇದೆಲ್ಲ ಮಾಡಿದ್ದು ಯಾರು? ಅವರು! ಹೌದು, ಮಾಡಿದರೇನಾಯಿತು ? ಅವರು ತನಗೆ ಕಲಿಸಿದರೇನಾಯಿತು ? ತಾವು ಇನ್ನು ದುಡಿದು ತರುವುದು ಸಾಧ್ಯವಿಲ್ಲವೆಂದು ಮನದಟ್ಟಾದ ಮೇಲೆಯೇ ತನಗೆ ಕಲಿಸಿದ್ದಾರೆ. ಇವರಲ್ಲಿ ಯಾವ ಪಾರಮಾರ್ಥ ? ಪಾರಮಾರ್ಥ ಇಲ್ಲವೇ ಇಲ್ಲ ! ಸ್ವಾರ್ಥವೇ ತುಂಬಿದೆ ! ತಮ್ಮ ಹೊಟ್ಟೆಪಾಡಿಗಾಗಿ ಈ ಪಾರಮಾರ್ಥದ

ರೋಗವನ್ನು ಧರಿಸಿದ್ದಾರೆ— ನಾನು ಈ ರೋಗಿಗೆ ಮರುಳಾಗಿ, ಈ ಕುಂಟವ್ಯಕ್ತಿಯನ್ನು ಆಮರಣ ಸಾಕಲೇ? ಅದರಿಂದ ತನಗಾವ ಸುಖ? ಸುಖ ಒಂದೇ. ಅಂಗಹೀನ ಗಂಡನ ದರ್ಶನ— ಆ ವಿಕೃತ ಮುಖದ ದರ್ಶನ."

ಲೀಲಾಬಾಯಿಯವರು ಇನ್ನೂ ವಿಚಾರಿಸುತ್ತಲೇ ಇದ್ದರು. ಆದರೆ ಬದಿಯಲ್ಲಿ ಕಾರು ಬಂದು ನಿಂತಿತು. ಒಳಗಿನಿಂದಲೇ ಕಾರಿನ ಡ್ರಾಯವ್ಹರ್ ಕೂಗಿ ಹೇಳಿದ :

"ಬಾಯಿಯವರೇ, ಒಂದು ಬದಿಯಿಂದ ಹೋಗಿರಿ. ರಸ್ತೆಯ ನಡುವೇ ಹೊಂಟೀರಲ್ಲ!"

ಲೀಲಾಬಾಯಿಯವರಿಗೆ ಆಗಲೇ ಎಚ್ಚರಗುಬಂದದ್ದು. ಮುಖ ಮೇಲಕ್ಕೆತ್ತಿ ನೋಡಿದರು. ಕಾರಿನಲ್ಲಿ ಕುಳಿತು ಒಂದು ಜೋಡಿ ವಾಯುವಿಹಾರಕ್ಕೆ ಹೊರಟಿತ್ತು. ಕೈಗೆ ಕೈ, ಮೈಗೆ ಮೈ ಅಂಟಿಸಿ-ಕೊಂಡು ಕುಳಿತ ಆ ದೃಶ್ಯವನ್ನು ಲೀಲಾಬಾಯಿಯವರಿಂದ ನೋಡಲಾಗಲಿಲ್ಲ. ಅವರ ಹೊಟ್ಟೆಯಲ್ಲಿ ಕರುಳು ಕಿತ್ತು ಬಂದಂತಾ-ಯಿತು. ಲೀಲಾಬಾಯಿ ದಾರಿಯ ಒಂದು ಬದಿಗೆ ಸರಿದರು; ಆದರೆ ಮನಸ್ಸು ದಂಪತಿಗಳತ್ತಲೇ ಇತ್ತು. ಅವರ ಒಳಗಿನ ಹಸಿವು ಪ್ರಜ್ವಲಿತವಾಗತೊಡಗಿತು. ಆದರೆ ಊಟ ಉಣ್ಣುವವನ ತಟ್ಟೆಯತ್ತ ನೋಡಿದರೆ, ಹಸಿವು ಹಿಂಗಬಹುದೇ?

ಲೀಲಾಬಾಯಿಯವರು ಮನೆಯ ಬಾಗಿಲಿಗೆ ಬಂದಾಕ್ಷಣ, ಮನೆಯ ಕೆಲಸಗಿತ್ತಿ ಸ್ವಾಗತಿಸಿದಳು. ಲೀಲಾಬಾಯಿಯವರು ನೇರವಾಗಿ ತಮ್ಮ ಕೋಣೆಗೆ ನಡೆದರು. ದೇಶಪಾಂಡೆ ಮಾಸ್ತರರು ಚಕ್ರದ ಖುರ್ಚಿಯಲ್ಲಿ ಕುಳಿತವರು, ತಮ್ಮ ಹೆಂಡತಿ ಬಂದದ್ದನ್ನು ತಿಳಿದು, ಒಂದೇ ಕೈಯಿಂದ ಖುರ್ಚಿಯ ಗಾಲಿಯನ್ನು ತಿರುಗಿಸಿ-ಕೊಳ್ಳುತ್ತ, ಕೋಣೆಗೆ ಬಂದರು. ಕೆಲಸಗಿತ್ತಿ ಅವರಿಗೆ ಸಹಾಯ ಮಾಡಿ, ಅವರನ್ನು ಬಾಯಿಯವರ ಕೋಣೆಗೆ ಕಳಿಸಿ, ತನ್ನ ಕೆಲಸಕ್ಕೆ—ಅಡುಗೆಯ ಮನೆಯ ಕಡೆಗೆ—ನಡೆದಳು. ಗಂಡ ತನ್ನ ಕೋಣೆಯಲ್ಲಿ ಬಂದದ್ದನ್ನು ನೋಡಿ ಲೀಲಾಬಾಯಿಗೆ ತುಂಬ ಆಶ್ಚರ್ಯವಾಯಿತು. ಗಂಡ ಹೆಂಡಿರ ಕೋಣೆಗಳು ಬೇರೆಯಾಗಿ ಬಹುದಿನಗಳಾಗಿದ್ದವು, ಈಗ ೭-೮ ದಿನಗಳಿಂದ ಲೀಲಾಬಾಯಿ ತನ್ನ ಗಂಡನ ಮುಖ ನೋಡುವುದನ್ನೂ ತಪ್ಪಿಸಿಕೊಂಡಿದ್ದಳು. ಹೆಂಡತಿಯ ಮನೋಗತವನ್ನು ಅನುಭವಗಳ ಮೇಲಿಂದ ಅರಿತ ದೇಶಪಾಂಡೇ ಮಾಸ್ತರರೂ, ಹೆಂಡತಿಯ ಮನಸ್ಸಿಗೆ ಬಾರದ ಕೆಲಸಕ್ಕೆ ಕೈಹಾಕುತ್ತಿರಲಿಲ್ಲ. ಪರಾವಲಂಬಿಗೆ ಹೊಟ್ಟೆತುಂಬಿದರಾ-ಯಿತು; ಅದೇ ದೊಡ್ಡದು!

ದೇಶಪಾಂಡೆ ಮಾಸ್ತರರು ಒಳಗೆ ಬಂದಕೂಡಲೆ, ಒಂದು ಸಲ ಲೀಲಾಬಾಯಿ ಅವರೆಡೆಯಲ್ಲಿ ತೀಕ್ಷ್ಣ ದೃಷ್ಟಿ ಬೀರಿ ಗುಡುಗಿದರು :

ಅಲ್ಪಾವಧಿಯಲ್ಲಿಯೇ ಪ್ರಖ್ಯಾತಿ ಪಡೆದು, ಕನ್ನಡ ನಾಡಿನಲ್ಲೆಲ್ಲ
ಉಪಯೋಗಿಸಲಾಗುತ್ತಿರುವ ಶ್ರೀ. ಗಲಗಲಿಯವರ

ನೂತನ ಕಿಸೆಯ ಕೈಪಿಡಿ ಮಾಲೆ

[ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ]

(೧)	ಭೂಮಿತಿ	೦—೬—೦	(೨)	ಗಣಿತ ರಹಸ್ಯ	೦—೬—೦
(೩)	ಆರೋಗ್ಯಶಾಸ್ತ್ರ	೦—೬—೦	(೪)	ಜಮಾಖರ್ಚು	೦—೬—೦
(೫)	ಶಾಸ್ತ್ರೀಯ ವಿಷಯ	೦—೬—೦	(೬)	ಪರೀಕ್ಷೆಯ ಗುಟ್ಟು	೦—೬—೦
(೭)	ಪ್ರಬಂಧ ಲೇಖನ	೦—೬—೦	(೮)	ವ್ಯಾಕರಣಛಂದೋಲಂಕಾರ	೦—೬—೦

(೯) ಭಾಷೆಯ ಅಂತರಂಗ ೦—೬—೦

ಸ್ವಲ್ಪದರಲ್ಲಿಯೇ ಸ್ವಾರಸ್ಯವಾಗಿ ವಿಷಯನಿರೂಪಣೆಯುಳ್ಳ ಇಂಥ ಪುಸ್ತಕಗಳು ಬೇರೆ ಇಲ್ಲ.
ಕಾರಣ ವಿದ್ಯಾರ್ಥಿಗಳು ಶ್ರೀ. ಗಲಗಲಿಯವರ ಕೃತಿಗಳನ್ನು ಕೊಂಡು
ಓದಿ ತೇರ್ಗಡೆಹೊಂದಲಡ್ಡಿಯಿಲ್ಲ. ಇಂದೇ
ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ವ್ಯಾಪಾರಿಗಳಿಗೆ ಧಾರಾಳ ಕಮೀಶನ್ !!

ಆಕಳವಾಡಿ ಬುಕ್-ಡಿಪೋ, ಧಾರವಾಡ

" ಏನು ಬೇಕಾಗೇನ ನಿಮಗ? ಒಳಗ ಕೆಲಸದಾಕಿ ಇದ್ದಾಳ! ಏನಾದರೂ ಬೇಕಾದರ ಅಲ್ಲೇ ಇಸಕೊಳ್ಳಿರಿ !

" ನನಗೇನೂ ಬೇಡ! ಒಂದೇ ಒಂದು ಪ್ರಾರ್ಥನೆ ಕೇಳು ! " ಒಂದು ಕೈಯಿಂದ ಕೋಣೆಯ ಬಾಗಿಲನ್ನು ಮುಚ್ಚುತ್ತಲೇ ದೀನ-ಸ್ವರದಲ್ಲಿ ದೇಶಪಾಂಡೆಯವರು ಉತ್ತರಿಸಿದರು.

ದೇಶಪಾಂಡೆಯವರು ಬಾಗಿಲನ್ನು ಮುಚ್ಚುತ್ತಿದ್ದುದನ್ನೂ " ಒಂದು ಪ್ರಾರ್ಥನೆ " ಎಂದು ಕೇಳಿಕೊಳ್ಳುತ್ತಿರುವುದನ್ನೂ ನೋಡಿ, ಲೀಲಾಬಾಯಿಯವರ ಹೆಣ್ಣುಹೃದಯ ಅಂಜಿತು. ಆದರೆ ಅಂಗಹೀನತೆಯನ್ನು ನೋಡಿ ಧೈರ್ಯದಿಂದಲೇ ಪ್ರಶ್ನೆ ಕೇಳಿದರು:

" ಏನು? ಬೇಗ ಹೇಳಿ ಮುಗಿಸಿರಿ! ನನಗೆ ತುಂಬಾ ಕೆಲಸವಿದೆ, ೭ ಘಂಟೆಗೆ ರೇಡಿಯೋದಲ್ಲಿ ನನ್ನ ಲೆಕ್ಚರ್ ಇದೆ. ನನಗೆ ಹೋಗಲೇ ಬೇಕಾಗಿದೆ ! "

" ಇನ್ನು ಮತ್ತೆ ತೊಂದರೆ ಕೊಡಬಯಸುವುದಿಲ್ಲ. ಶಾಂತ-ವಾಗಿ ಕೇಳು ! "

" .... "

" ನೋಡು; ಒಬ್ಬರ ಮೇಲೆ ಭಾರವಾಗಿರೋದು ಚೆನ್ನಾದುದಲ್ಲ ! "

" ಅದಕ್ಕೇನು ಮಾಡಬೇಕಂತೀರಿ ? "

" ನಾನು ಸರಿಯಾಗಿದ್ದಾಗಿನ ದಿನಗಳನ್ನು ಜ್ಞಾಪಿಸಿಕೊಳ್ಳು !"

" ವಿಧವೆ ಆದವಳು ತನ್ನ ಮುರುಬಿದ್ದಾಗಿನ ದಿನಗಳನ್ನು ಜ್ಞಾಪಿಸಿಕೊಂಡು ಅತ್ತರೇನು ಬರೋದು ? "

" ನೀನು ಹೇಳುವುದು ನಿಜ; ಆದರೆ ನನ್ನ ಅಪಘಾತವಾದ ಮೇಲೆ ನಾನು ಆಸ್ಪತ್ರೆಯಲ್ಲಿದ್ದೆ. ನೀನು ನನಗಾಗಿ ೩-೪ ತಿಂಗಳು ಕಣ್ಣೀರನ್ನು ಕೋಡಿಯಾಗಿ ಹರಿಸಿದ್ದೆ. ಆ ಅಪಾಯದಿಂದ ನಾನು ಜೀವದಿಂದ ಉಳಿಯದಿದ್ದರೆ, ಬಾಂವಿಯಲ್ಲಿ ಬಿದ್ದು ಸಾಯುವೆನೆಂದು ಪಣ ತೊಟ್ಟಿದ್ದೆ. "

" ನೀವನ್ನೋದೇನು ? ನಾನು ಈಗ ಹೋಗಿ ಭಾವಿಯಲ್ಲಿ ಬೀಳಲ್ಯಾ ? "

" ತ್ರಿಕಾಲಕ್ಕೂ ಆಗದು ! "

" ಮತ್ತೇನು ? "

" ಅಂದಿನ ಪ್ರತಿಜ್ಞೆ ಜ್ಞಾಪಿಸಿಕೊ, ಇಂದಿನ ನಿನ್ನ ನಡತೆಯನ್ನು ದಯವಿಟ್ಟು ವಿಮರ್ಶಿಸಿ ನೋಡು !"

" ನೆರೆಯ ಮಬ್ಬಿನಲ್ಲಿ ಮನುಷ್ಯ ಏನೇನೋ ಒದರಾಡುತ್ತಾನೆ. ಏರುಜವ್ವನವೂ ಒಂದು ಮಾದಕಪೇಯ. ಪ್ರೇಮಭರದಲ್ಲಿಯ ಪ್ರತಿಜ್ಞೆ ಅದು. ಒಬ್ಬ ಮನುಷ್ಯ ಸತ್ತಾಗ, ಎದೆ ಒಡೆದು-ಕೊಂಡು ಅಳುವ ಅವನ ಬಳಗವೇ, ಅವನ ವರ್ಷಶ್ರಾದ್ಧದ ದಿನ ನಗುತ್ತ ಕೆಲೆಯುತ್ತ ಊಟ ಮಾಡುವುದನ್ನು ನಾವು ನೋಡು-ತ್ತಿಲ್ಲವೇ ? "

" ನೀನು ಪ್ರತಿಜ್ಞೆ ಮಾಡಿದ್ದಕ್ಕೆ ನನ್ನ ಅಭ್ಯಂತರವಿಲ್ಲ, ಅದರಂತೆ ನಡೆಯಬೇಕೆನ್ನುವಷ್ಟು ಮೂರ್ಖನು ನಾನಲ್ಲ! ನನ್ನ ಗಾನ ಬೇರೆ ಬಳಗವೂ ಇಲ್ಲ. ನಿನ್ನನ್ನೇ ನಂಬಿದ್ದೇನೆ! "

" ನಿಮ್ಮನ್ನು ನಡುನೀರಲ್ಲಿ ಬಿಡಲಿಲ್ಲವಲ್ಲಾ. ಉಪವಾಸ ಕೆಡವಿದ್ದೇನೆಯೋ ? "

" ಹೊಟ್ಟೆ ಹೇಗೋ ತುಂಬುತ್ತದೆ; ಆದರೆ ಸ್ವಾರಸ್ಯವಿಲ್ಲ! ಸಂಸಾರರಥದ ಒಂದು ಗಾಲಿ ಮುರಿಯಿತು. ಆ ಗಾಲಿಯನ್ನು ಬೈದೇನು ಪ್ರಯೋಜನ? ಸರಿಯಾಗಿದ್ದಷ್ಟು ದಿನ ರಥ ಎಳೆಯಿತು; ನಡುವೆ ಮುರಿದದ್ದು ಅದರ ದೋಷವೇ ? "

" ಮುರಿದ ಗಾಲಿಯನ್ನು ಬೀಸಾಡಿ, ಬೇರೆ ಗಾಲಿ—" ಅರ್ಧಕ್ಕೆ ಗಾಬರಿಯಾಗಿ ಲೀಲಾಬಾಯಿ ತಡೆಹಿಡಿದರು. ದೇಶಪಾಂಡೆಯವರು " ಹೌದು ಹೊಸಗಾಲಿ ಹಾಕಬೇಕು; ಆದರೆ ಮೊದಲಿನ ಗಾಲಿ-ಯನ್ನು ದೂರ ಬೀಸಾಟಿದ ನಂತರ. ನಾನು ನನ್ನ ಕರ್ತವ್ಯವನ್ನು ನೆರವೇರಿಸಿದೆ. ' ಗಂಡ ಕುಂಟನಾಗಿ ಹೆಂಡತಿಯನ್ನು ಬಿಕ್ಕೆಗೆ ಕಳಿಸಿದ ' ಎಂಬ ಲೋಕಾಪವಾದ ಬಾರದ ಹಾಗೆ, ನಾನು ನಿನಗೆ ಕಲಿಸಿದೆ, ಒಂದು ಮಾರ್ಗಕ್ಕೆ ಹಚ್ಚಿದೆ. ಈಗ ನನಗೆ ಓಡಾಡಲೂ ಆಗದು; ನೀನೇ ಬಾಂವಿಯ ವರೆಗೆ——"

ಗದ್ಗದಕಂಠದಿಂದ ವಾಕ್ಯವನ್ನು ಅರ್ಧಕ್ಕೆ ಮುಗಿಸಿ, ದೇಶಪಾಂಡೆಯವರು ಖೋಲಿಯಿಂದ ಹೊರಗೆ ನಡೆದರು. ಲೀಲಾಬಾಯಿಯ-ವರು ತಮ್ಮ ಕೋಣೆಯಲ್ಲಿ ಕದಲದೇ ನಿಂತರು. ಗಂಡನ ಕೊನೆಯ ವಾಕ್ಯ ಅವರನ್ನು ವಿಚಾರಕ್ಕೆ ಗುರಿಮಾಡಿತು. ವಿಚಾರಿಸತೊಡ-ಗಿದರು:— ' ಹೊಸ ಗಾಲಿ, ಹಳೆಯ ಗಾಲಿ....ಬಾಂವಿಗೆ— ಛೇ ಮಾರ್ಗದಲ್ಲಿಯ ಮುಳ್ಳನ್ನು ತೆಗೆಯುವುದಕ್ಕೆ ವೇಳೆ ಹತ್ತದು; ಆದರೆ ತಾನು ವಿಧವೆಯಾದ ಮೇಲೆ, ಬೇರೆ ಸದ್ಗೃಹಸ್ಥರು ತನ್ನನ್ನು ಮದುವೆಯಾಗಲು ಮುಂದೆ ಬರುವರೇ ? ಯಾರಾದರೂ ಬಂದರೆ, ಅವರೆಲ್ಲರೂ ಚಾರಿತ್ರ್ಯ ಶುದ್ಧವಿಲ್ಲದವರೆಂದು ನಿರ್ದಾಕ್ಷಿಣ್ಯ-ವಾಗಿ ಹೇಳಬಹುದು—ಹೌದು! ಎಸೆದ ಎಂಜಲೆಲೆಯನ್ನು ತಿನ್ನಲು ಸಾಕಿದ ನಾಯಿಗಳಲ್ಲಿ ಬರುತ್ತವೆ? ಬೀದಾಡೀ ನಾಯಿಗಳೇ— '

— ತಾನು ವಿಧವೆಯಾದರೆ, ತನ್ನ ಸೌಂದರ್ಯಕ್ಕೆ ಮರುಳಾಗಿ ಮುಜುಮ್‌ದಾರರು ತನ್ನನ್ನು—ಛೇ ಅವರು ಈಗಾಗಲೇ ಸಪತ್ನೀ-ಕರು !— ವಿಚಾರ ಮಾಡುತ್ತಿರುವಂತೆ ಲೀಲಾಬಾಯಿಯವರ ಕಣ್ಣು ಮುಂದೆ ಮುಜುಮ್‌ದಾರ್ ಮಾಸ್ತರರ ಚಿತ್ರ ಸುಳಿಯಿತು: ಸಾಕ್ಷಾತ್ ಮದನನ ಮೂರ್ತಿ! ಎತ್ತರದ ನಿಲುವು, ಹರವಾದ ಎದೆ, ಆ ಮುಗುಳು ನಗೆಯ ಮುಖ, ನಿಷ್ಕಪಟ ಹೃದಯ. ಮುಜುಮ-ದಾರರು ಆ ಶಾಲೆಗೆ ಬಂದು ಕೇವಲ ನಾಲ್ಕು ತಿಂಗಳಾಗಿದ್ದುವು. ಅವರ ಮನೆತನದ ಸ್ಥಿತಿ ಲೀಲಾಬಾಯಿಯವರಿಗಷ್ಟೇ ಅಲ್ಲ; ಉಳಿ-ದಾವ ಮಾಸ್ತರರಿಗೂ ತಿಳಿದಿರಲಿಲ್ಲ. ಆದರೆ ಅವರ ಪತ್ನಿ ಸುಶಿಕ್ಷಿತೆ ಎಂಬುದನ್ನು ಅವರ ಬಾಯಿಂದಲೇ ಕೇಳಿದ್ದರು. ಮುಜುಮದಾರರ ಪತ್ನಿ M.B.B S. ಕೋರ್ಸಿಗೆ ಹೋಗಿ ಮೂರು ವರುಷ ಕಲಿತು ಅರ್ಧಕ್ಕೆ ತಿರುಗಿ ಬಂದಿದ್ದರಂತೆ. ' ಹಾಗೇಕೆ ? ' ಎಂದು ಒಂದು ಸಲ ಲೀಲಾಬಾಯಿಯವರು ಕೇಳಿದ್ದರು. " ನಾನು ಲಗ್ನವಾದ

ಮೇಲೆಯೇ ಅವಳನ್ನು ಡಾಕ್ಟರ್ ಕೋರ್ಸಿಗೆ ಕಳಿಸಿದ್ದೆ '' ಎಂದು ಮುಜುಮದಾರ್ ಮಾಸ್ತರರು ಉತ್ತರಿಸಿದ್ದರು. '' ಹಾಗಾದರೆ ಪೂರ್ತಿಯಾಗಿ ಕಲಿಸಲಿಲ್ಲವೇಕೆ ? '' ಎಂದು ಮರುಪ್ರಶ್ನೆ ಕೇಳಿದ್ದರು.

'' ತೊಟ್ಟಿಲು ಕಟ್ಟುವ ಸಮಯ— ''

ಅರ್ಧಕ್ಕೆ ಮಾತು ನಿಲ್ಲಿಸಿ ಮುಜುಮದಾರರು ಮನೆಯ ಕಡೆ ತೆರಳಿದ್ದರು.

ಶಾಲೆ ಬಿಟ್ಟಾಕ್ಷಣ ಮುಜುಮ್‌ದಾರರು ಉಳಿದೆಲ್ಲ ಮಾಸ್ತರರಂತೆ ಟೀಚರ್ಸ್ ರೂಮಿನಲ್ಲಿ ಹರಟೆ ಹೊಡೆಯುವುದಕ್ಕೆ ಕೂಡುತ್ತಿರಲಿಲ್ಲ. ಶಾಲೆ ಬಿಟ್ಟಗಂಟೆಯಾದಾಕ್ಷಣ, ಮನೆಯ ಕಡೆ ತೆರಳುತ್ತಿದ್ದರು. '' ಅಬ್ಬಾ ಎನಿದು ಪತ್ನೀಪ್ರೇಮ ? '' ಎಂದು ಲೀಲಾಬಾಯಿಯವರಿಂದ ಹಿಡಿದು ಎಲ್ಲ ಮಾಸ್ತರರೂ ಅವರನ್ನು ಚೇಷ್ಟೆ ಮಾಡುತ್ತಿದ್ದರು. ಒಂದು ದಿನ ಲೀಲಾಬಾಯಿ ಧೈರ್ಯಮಾಡಿ ಅವರನ್ನು ಕೇಳಿಯೇ ಬಿಟ್ಟಿದ್ದರು :

'' ನೀವು ಇಷ್ಟು ಪತ್ನಿಯ ಮೇಲೆ ಪ್ರೇಮ ಮಾಡುತ್ತೀರಲ್ಲಾ! ಅವಳು ಅಷ್ಟು ಸುಂದರಿಯಾಗಿದ್ದಾಳೆಯೇ ? ''

'' ಹೌದು, ನನ್ನ ದೃಷ್ಟಿಯಲ್ಲಂತೂ ಅವಳನ್ನು ಸರಿಹೋಲುವವರು ಯಾರೂ ಇಲ್ಲ! ''

ಮುಜುಮ್‌ದಾರರ ಉತ್ತರ ಕೇಳಿ ಲೀಲಾಬಾಯಿ ಒಳಗೊಳಗೇ ನಿರಾಶರಾಗಿ ಬಿಟ್ಟಿದ್ದರು. ಆದರೂ ಮುಜುಮ್‌ದಾರರ ಬಗೆಯ ಹುಚ್ಚು ಅವರ ತಲೆಯಿಂದ ಮಾಯವಾಗಿರಲಿಲ್ಲ. ಈಗಂತೂ ಗಂಡನ ಮಾತಿನಿಂದ ಅದು ಮತ್ತಷ್ಟು ಕೆರಳತೊಡಗಿತು. ಮತ್ತೆ ವಿಚಾರಿಸತೊಡಗಿದರು :

—ತಾನು ವಿಧವೆಯಾದ ಮೇಲೂ ಮುಜುಮ್‌ದಾರರು ತನ್ನನ್ನು ವರಿಸುವುದು ಸಾಧ್ಯವಿಲ್ಲ— ಬೇರೆ ಮಾರ್ಗ— ತಾನಾಗಿಯೇ ಈ ದೇಹ ಅಳಿದಿಗೆ—ಅಹುದು! ಪಕ್ವಾನ್ನದ ತಾಟನ್ನು ಬಡಿಸಿದರೆ, ಬೇಡವೆನ್ನುವ ಜನರಿದ್ದಾರೆಯೇ ?—''

'' ಇಲ್ಲ ''ಎಂದು ಅವರ ಮನಸ್ಸೇ ಉತ್ತರಿಸಿತು

ಅವರ ಮನಸ್ಸು ಕೂಡ ಲಂಚ ತಿಂದ ಗುಮಾಸ್ತನ ಹಾಗೆ ಆಗಿತ್ತು. ಮತ್ತೆ ಮತ್ತೆ ವಿಚಾರಮಾಡಿ ಕೊನೆಯ ನಿರ್ಧಾರಕ್ಕೆಯೇ ಬಂದರು.

ನೀಲಿ ಕಾಗದದ ಮೇಲೆ ನಕ್ಷೆ ತಯಾರಿಸಿದ ನಂತರ, ಮನೆ ಕಟ್ಟುವುದಕ್ಕೇನು ತಡ ? ಆದರಲ್ಲಿ ಏನಾದರೂ ಸಂಭವಿಸಿದರೆ, ಹೆಸರು ಹೇಳಲಿಕ್ಕಾದರೂ ಗಂಡನ ಇರುವು ಅವಶ್ಯವೆಂಬುದನ್ನು ನಿರ್ಧರಿಸುವುದಕ್ಕೂ ಅವರು ಮರೆಯಲಿಲ್ಲ.

ಲೀಲಾಬಾಯಿ ಒಂದು ಸಲ ಕೈಗಡಿಯಾರವನ್ನು ನೋಡಿಕೊಂಡರು. ಆರು ಹೊಡೆದಿತ್ತು. ಅಂದು ರೇಡಿಯೋದಲ್ಲಿ ತಮ್ಮ ಭಾಷಣವಿದ್ದುದನ್ನು ಜ್ಞಾಪಿಸಿಕೊಂಡು, ಮನೆಯಿಂದ ಹೊರಬಿದ್ದರು. ಅಂದೇ ತಮ್ಮ ಜತೆಯಲ್ಲಿ ರೇಡಿಯೋ ಸ್ಟೇಶನಿಗೆ ಬರಲು ಮುಜುಮ್‌ದಾರರನ್ನು ಕರೆದಿದ್ದರು. ಆದರೆ ಮುಜುಮ್‌ದಾರರು ಪತ್ನಿಯನ್ನು ಅಂದು ತವರ್ಮನೆಗೆ ಕಳಿಸುವುದಕ್ಕಾಗಿ ಸ್ಟೇಶನ್ನಿಗೆ—ಅದೇ ವೇಳೆಗೆ— ಹೋಗಬೇಕಾಗಿದ್ದುದರಿಂದ, ಕೊಂಚ ನೊಂದುಕೊಂಡಿದ್ದರು. ಅವರ ಜತೆಯಲ್ಲಿ ಬರೀ ಅಡ್ಡಾಡಿದುದರಿಂದಲೇ ಎಷ್ಟೋ ಶಾಂತಿ ಸಿಕ್ಕುತ್ತಿತ್ತು ಲೀಲಾಬಾಯಿಯವರಿಗೆ.

ರೇಡಿಯೋಕೇಂದ್ರ ತಲ್ಪಲು ಲೀಲಾಬಾಯಿಯವರಿಗೆ ತಡ ಹಿಡಿಯಲಿಲ್ಲ. ಅವರು ಅಲ್ಲಿಗೆ ಹೋದಾಗ ಆರುವರೆ ಹೊಡೆದಿತ್ತು. ಇನ್ನೂ ಅರ್ಧಗಂಟೆ ಕಾಲವಿದ್ದುದರಿಂದ, ಲೀಲಾಬಾಯಿ ಕೇಂದ್ರದ (Reliring Room) ವಿಶ್ರಾಂತಿಕೋಣೆಯಲ್ಲಿ ಹೋಗಿ ಕುಳಿತರು. ಅಲ್ಲಿ ಅವರ ಬದಿಯಲ್ಲಿಯೇ ಒಬ್ಬ ಕುರುಡಿಯೂ ಕುಳಿತಿದ್ದಳು. ಕುರುಡಿಯಾಗಿದ್ದಳಷ್ಟೇ ಅಲ್ಲ; ಮುಖವೂ ಸುಂದರವಾಗಿರಲಿಲ್ಲ. ಅಲ್ಲಲ್ಲಿ ಕಪ್ಪು ಕಲೆಗಳಿದ್ದುವು.

ಅವಳ ಬದಿಯಲ್ಲಿಯೇ ಹನ್ನೊಂದು ವರುಷದ ಹುಡುಗನಿದ್ದ. ಇಂಥವಳ ಬದಿಯಲ್ಲಿ ಕೂಡಲು ಲೀಲಾಬಾಯಿಯವರಿಗೆ ಕೊಂಚ ಕಡಿಮೆತನ ಎನಿಸಿತು. ಏನೋ ಒಂದು ವಿಧವಾದ ಜುಗುಪ್ಸೆಯುಂಟಾಯಿತು. ಅವರನ್ನು ಎಲ್ಲಕ್ಕೂ ಮಿಗಿಲಾಗಿ ಆಶ್ಚರ್ಯಗೊಳಿಸಿದ್ದು ಆ ಕುರುಡಿಯ ತುಂಬುಹೊಟ್ಟೆ.

''ಇಂತಹ ಅಸಹ್ಯ ಳ ದೇಹದ ಜತೆಯಲ್ಲಿ ರಮಮಾಣನಾದ ಆ ಪುರುಷನೆಷ್ಟು ಸುಂದರನಿರಬಹುದು ? '' ಎಂದು ಮನದಲ್ಲಿಯೇ ವಿಚಾರಿಸಿ ನಕ್ಕರು. ಅವರಿಗೆ ಒಮ್ಮೆಲೇ ಬೀರಬಲ್ಲನ ಕತೆಯು ನೆನಪಾಯಿತು. ಆ ಕತೆ '' ಲೈಂಗಿಕತೃಪ್ತಿ '' ಎಂದು ತಮಗೆ ಕೂಗಿ ಹೇಳಿದಂತೆ ಭಾಸವಾಯಿತು. ಲೀಲಾಬಾಯಿಯವರು ಅಂಜಿದರು. ತಾನೂ.... ಆ ವಿಷಯದಲ್ಲಿ ತಾನೂ........ಛೇ, ಹುಲಿ ಹಸಿದರೆ—

ಆ ಹೆಂಗುಸು ಕುರುಡಿಯಾಗಿದ್ದರೂ, ತೊಟ್ಟ ಬಟ್ಟೆಗಳು ಮಧ್ಯಮವರ್ಗದವರಿಗೆ ಒಪ್ಪುವಂಥವುಗಳಾಗಿದ್ದುವು. ಆ ಬಟ್ಟೆಗಳಿಗಾದರೂ ಕಿಮ್ಮತ್ತು ಕೊಡಲೆಂದು ಲೀಲಾಬಾಯಿ ಆ ಕುರುಡಿಯನ್ನು ಮಾತನಾಡಿಸಿದರು :

''ಅಕ್ಕಾ, ನಿಮ್ಮ ಹೆಸರೇನು ? ''

''ನನ್ನದೇ ? ಸುಲೋಚನೆ. ''

ಹೆಸರು ಕೇಳಿ ಲೀಲಾಬಾಯಿಯವರು ಅವಾಕ್ಕಾದರು. 'ಹೆಸರು ಭೀಮಸೇನ, ನೋಡುವುದಕ್ಕೆ ನರಪೇತಲು ' ಎಂದಂತಾಯಿತಲ್ಲ!— ಎಂದು ಉಕ್ಕಿಬರುವ ನಗುವನ್ನು ತಡೆದು ಮತ್ತೆ ಕೇಳಿದರು :

'' ಇಲ್ಲಿಗೇಕೆ ಬಂದಿರಿ ? ''

'' ಹಾಡು ಹೇಳುವುದಕ್ಕೆ ಬಂದಿದ್ದೆ. ಈಗ ಟಾಂಗಾ ಬಂದಾಕ್ಷಣ ಹೋಗುತ್ತೇವೆ ''

'' ಸಂತೋಷ, ಕಣ್ಣು ಕೊಡದಿದ್ದರೂ ದೇವರು ಸಂಗೀತ ಕಲೆ ಕೊಟ್ಟಿದ್ದಾನೆ. ದೇವರು ದೊಡ್ಡವ! ಹೊಟ್ಟೆಪಾಡಿಗೆ ಏನಾದರೂ ಕಲೆ ಕೊಟ್ಟಿದ್ದಾನೆ! ''

ಕುರುಡಿ ಸಿಡುಕಿನ ಧ್ವನಿಯಲ್ಲಿ ನುಡಿದಳು :

“ ನೀವು ಅನ್ಯಥಾ ಭಾವಿಸಿಕೊಳ್ಳಬೇಡಿ ನಾನು ಹೊಟ್ಟೆಪಾಡಿಗೆ ಹಾಡಲು ಬಂದಿಲ್ಲ. ನನಗೆ ಕೈತುಂಬ ಸಂಬಳ ತರುವ ಗಂಡನಿದ್ದಾನೆ. ನಾನು ಗರತಿ, ಹಾಡುವ ಬೀದಿಯ ಹೆಣ್ಣಲ್ಲ; ನಾನು ಹುಟ್ಟುಗುರುಡಿಯಲ್ಲ! ” ಎಂದು ಉತ್ತರಿಸಿ, ಹುಡುಗನ ಆಧಾರದಿಂದ ಕೋಣೆ ಬಿಟ್ಟು ಹೊರಟು ನಡೆದಳು.

ಕುರುಡಿಯ ಉತ್ತರ ಕೇಳಿ ಲೀಲಾಬಾಯಿಯವರು ಒಂದು ಸಲ ನಕ್ಕುಬಿಟ್ಟರು. ‘ ಕುರುಡಿಗೂ ಕೈತುಂಬ ಸಂಬಳ ತರುವ ಗಂಡ ನಿದ್ದಾನೆಯೇ ? ಹಾಗಾದರೆ ಅವನು ಇವಳಿಗಿಂತಲೂ ಹೆಚ್ಚು ಕುರೂಪಿಯಾಗಿರಲಿಕ್ಕೆ ಸಾಕು ! ’ ಎಂದೆಂದುಕೊಂಡರು.

* * *

ರೇಡಿಯೋ ಕಾರ್ಯಕ್ರಮ ಮುಗಿಸಿ ಲೀಲಾಬಾಯಿಯವರು ಹೊರಗೆ ಬಂದರು. “ ಇನ್ನೆಲ್ಲಿ? ” ಎಂದು ಅವರ ಮನಸ್ಸು ಕೇಳಿತು. ‘ ಖಂಡಿತವಾಗಿ ಈಗಲೇ ಮನೆಗೆ ಹೋಗುವುದು ಬೇಡ ! ’ ಎಂದು ಕೊಂಡರು. ಕೂಡಲೇ ಮುಜುಮ್‌ದಾರರ ನೆನಪು ಬಂದಿತು. ಸದಾಶಿವನಿಗೆ ಅದೇ—

ಒಂದು ಸಲ ಲೀಲಾಬಾಯಿಯವರ ಕಣ್ಣಮುಂದೆ ಆ ಕುರುಡಿಯ ಚಿತ್ರ ಸುಳಿಯಿತು. ಅವಳ ಆ ತುಂಬುಗರ್ಭಿಣಿಯ ಚಿಹ್ನೆ, ಆ ಚಿತ್ರ ಮರೆಯಾದಂತೆ ಅವರ ಸುಪ್ತಕಾಮ ಕೆರಳಿತು. ಕುರುಡಿಯೂ ಕೂಡ ತನ್ನ ಹಸಿವನ್ನು....

ಮುಜುಮ್‌ದಾರರ ಪತ್ನಿ, ಅಂದೇ ತವರು ಮನೆಗೆ ಹೋಗುತ್ತಾರೆಂಬ ಮಾತು ಅವರಿಗೆ ಗೊತ್ತಿತ್ತು. ಅವರು ಹೇಳಿದ ಪ್ರಕಾರ, ಈ ಹೊತ್ತಿಗೆ ಮುಜುಮ್‌ದಾರರು ಮನೆಯಲ್ಲಿ ಏಕಾಕಿ, ತಮ್ಮ ಮನಸ್ಸಿನಲ್ಲಿಯ ನಿರ್ಧಾರವನ್ನು ಜ್ಞಾಪಿಸಿಕೊಂಡರು. ಆ ನಿರ್ಧಾರಕ್ಕೂ ಮುಜುಮ್‌ದಾರರ ಪತ್ನಿಯ ತವರುಮನೆಯ ಪ್ರಯಾಣಕ್ಕೂ ಸರಿಹೋದದ್ದನ್ನೂ ಜ್ಞಾಪಿಸಿಕೊಂಡು, ಸಂತೋಷಪಟ್ಟರು. ‘ ಕೆಲಸಗಳು ಪೂರ್ತಿಯಾಗುವಂತಿದ್ದರೆ ಈ ರೀತಿ ಶುಭಶಕುನಗಳು ಜರುಗುತ್ತವೆ ! ’ ಎಂದು ಸಂತಸಪಟ್ಟರು. ಲೀಲಾಬಾಯಿಯವರು ಈಗ ಮನೆಯ ಕಡೆಗೆ ಹೊರಟಿರಲಿಲ್ಲ. ಅವರ ಕಾಲುಗಳು ಮುಜುಮ್‌ದಾರರ ಮನೆಯತ್ತ ಸಾಗಿದ್ದುವು. ನಡೆಯುತ್ತಿದ್ದಂತೆಯೇ ಒಂದು ಸಲ ಲೀಲಾಬಾಯಿಯವರು, ತಮ್ಮ ಪರ್ಸನ್ನು ತೆಗೆದು, ಒಳಗನ್ನಡಿಯಲ್ಲಿ ತಮ್ಮ ಮುಖ ನೋಡಿಕೊಂಡರು. ತಮ್ಮ ಸೌಂದರ್ಯಕ್ಕೆ ತಾವೇ ಮರುಳಾದರು.

— ರಸಭರಿತ ತೊಂಡೆದುಟಿ, ಬಾಗಿದ ಹುಬ್ಬು, ನೀಲ ಕಣ್ಣು, ತುಂಬು ಗಲ್ಲ—

‘ ಇಂತಹ ಸೌಂದರ್ಯ ತಾನಾಗಿಯೇ ಬಂದರೆ, ನಿರಾಕರಿಸುವ ಮೂರ್ಖರೂ ಇದ್ದಾರೆಯೇ ? ’ ಎಂದು ಒಂದು ಸಲ ತಮ್ಮನ್ನೇ ಕೇಳಿಕೊಂಡರು. ಈ ವಿಚಾರಗಳು ಮುಗಿಯುವ ಮೊದಲೇ ಅವರು, ಮುಜುಮ್‌ದಾರರ ಮನೆಯ ಮುಂಬಾಗಿಲಿಗೆ ಬಂದು ಬಿಟ್ಟಿದ್ದರು.

ಮನೆ ಮಾಳಮುರಡಿಯ ಕೊನೆಯ ಭಾಗದಲ್ಲಿ. ಮುಜುಮ್‌ದಾರರದೇ ಕೊನೆಯ ಮನೆ. ಆಗಲೇ ಕತ್ತಲೆ ಪಸರಿಸಿತ್ತು. ಮುಜುಮ್‌ದಾರರ ಮನೆಯ ಬಾಗಿಲು ಹಾಕಿತ್ತು. ಲೀಲಾಬಾಯಿಯವರೇನೋ ಬಾಗಿಲ ವರೆಗೆ ಬಂದರು, ಆದರೆ ಕೂಗಿ ಬಾಗಿಲು ತೆಗೆಸುವ ಧೈರ್ಯವಾಗಲಿಲ್ಲ. ಎದೆ ಬಡಿದುಕೊಳ್ಳುತ್ತಿತ್ತು, ಬೆವರು ಬಿಡಹತ್ತಿತ್ತು.

ಕೂಗಿ ಬಾಗಿಲು ತೆಗೆಸುವ ಧೈರ್ಯವಾಗದ್ದರಿಂದ, ಅವರು ಬದಿಯ ಕಿಟಕಿಯ ಬಳಿ ಸಾರಿದರು. ಒಳಗೆ ದೀಪ ಉರಿಯುತ್ತಿತ್ತು. ಒಳಗಿನ ದೃಶ್ಯ ನೋಡಿ ಲೀಲಾಬಾಯಿಯವರ ಪಿತ್ತ ನೆತ್ತಿಗೇರಿತು.

—ಮುಜುಮ್‌ದಾರರು ಮಂಚದ ಮೇಲೆ ಒಂದು ಹೆಣ್ಣಿನ ತಲೆ ಹಿಡಿದು, ಅವಳಿಗೆ ಕಪ್ಪಿನಲ್ಲಿ ಏನೋ ಕುಡಿಸುತ್ತಿದ್ದರು. “ಹೆಂಡತಿಯನ್ನು ತವರ್ಮನೆಗೆ ಕಳಿಸಿ ಇತ್ತ ಈ ವ್ಯವಹಾರವೇ ? ” ಎಂದು ಲೀಲಾಬಾಯಿಯವರಿಗೆ ಮೊದಲು ಸಿಟ್ಟು ಬಂತು. ತದನಂತರ ಬಂದದ್ದು ಸವತಿ ಮಾತ್ಸರ್ಯದ ಸಿಟ್ಟು. ಆದರೆ ಮಾಡಬೇಕೇನೆಂಬುದು ತಿಳಿಯಲಿಲ್ಲ. ಅಲ್ಲಿಯೇ ನಿಂತರು. ಒಳಗೆ ಸಂಭಾಷಣೆಗೆ ಮೊದಲಾಯಿತು. ಲೀಲಾಬಾಯಿ ಜಾಗ್ರತೆಯಿಂದ ಲಾಲಿಸಹತ್ತಿದರು. “ ನೀವೆಷ್ಟು ನನ್ನ ಸೇವೆ ಮಾಡುತ್ತಿದ್ದೀರಿ ? ”

“ ಮತ್ತಾರು ಮಾಡಬೇಕು ಹೇಳು ? ”

“ ಶಾಲೆಯಲ್ಲಿ ದಿನವೂ ದಣಿದು ಬರುತ್ತೀರಿ; ಮತ್ತೆ ಮನೆಯಲ್ಲಿ ನನ್ನ ಸೇವೆ ! ಅಡಿಗೆಯವಳನ್ನಾದರೂ ಇಡಿರಿ ಎಂದರೆ ಅದಕ್ಕೂ ನೀವು ಒಪ್ಪೋದಿಲ್ಲ ! ”

“ ಈ ಮನೆಯಲ್ಲಿ ನಮ್ಮಿಬ್ಬರ ನಡುವೆ ಮತ್ತೊಂದು ಹೆಣ್ಣು ಬೇಡ ನೋಡು ! ”

“ ಒಂದು ಮಾತು ಕೇಳಲೇ ? ”

“ ಏನು ? ”

“ ಕುರುಡುಹೆಂಡತಿ ಎಂದು ನಿಮಗೆ ಎಂದಾದರೂ ನನ್ನ ಬಗ್ಗೆ ಜುಗುಪ್ಸೆ ಹುಟ್ಟುತ್ತದೆಯೋ ?”

ಲೀಲಾಬಾಯಿಯವರ ಹೃದಯದಲ್ಲಿ ಕಾದ ಕಬ್ಬಿಣ ರಸ ಸುರುವಿದಂತಾಯ್ತು. ಕಿಟಕಿಯಲ್ಲಿ ಸ್ವಲ್ಪ ನಿರೀಕ್ಷಿಸಿ ನೋಡಿದರು. ಹೌದು ಅದೇ ಕುರುಡಿ ! ರೇಡಿಯೋ ಸ್ಟೇಶನ್ನಿನಲ್ಲಿ ಭೆಟ್ಟಿಯಾದವಳು ! ಅದೇ ಕುರೂಪಮುಖದ ಹೆಣ್ಣು. ಆದರೆ ಅದೇನು? ಆ ದೃಶ್ಯ ನೋಡಿಯಂತೂ ಲೀಲಾಬಾಯಿ ಬೆರಗಾದರು :

ಮುಜುಮ್‌ದಾರರು ಆ ಕುರುಡಿಯನ್ನು ಬರಸೆಳೆದು ಬಿಗಿದಪ್ಪಿ ಕೇಳಿದರು : “ ನನ್ನ ಸುಲೂ, ಇಂದೇಕೆ ಹೀಗೆ ಪ್ರಶ್ನೆ ಮಾಡುತ್ತಿ ? ”

“ ನನ್ನ ಸ್ವಾಮಿ, ನನಗೆ ಹೆದರಿಕೆಯಾಯಿತು. ನನ್ನ ರೂಪ ನೋಡಿ ಜನ ನಿಂದಿಸುತ್ತಾರೆ. ಅದರ ಪರಿಣಾಮದಿಂದ—”

ಅವಳ ತಲೆಯ ಮೇಲೆ ಕೈಯಾಡಿಸುತ್ತ ಮುಜುಮ್‌ದಾರರು ನುಡಿದರು:

"ಹುಚ್ಚೀ, ಪ್ರೇಮ ರೂಪದ ಮೇಲೆ ಅವಲಂಬಿಸಿದೆಯೇ? ನೀನು ಕಲಿತವಳು Whomsoever the heart loves is beautiful. ಮೇಲಾಗಿ ನೀನೇನು ಹುಟ್ಟು ಕುರೂಪಿಯೇ? ನೀನು ಡಾಕ್ಟರ್ ಆಗಿದ್ದರೆ, ಹೆಮ್ಮೆ ನನ್ನ ಪಾಲಿಗೆ ಬರುತ್ತಿತ್ತು. ಆದರೆ ಆ ಎಕ್ಸಪೆರಿಮೆಂಟಿನಲ್ಲಿ ಮುಖದ ಮೇಲೆ ಆಸಿಡ್ ಬಿದ್ದು ನೀನು ಕುರೂಪಿಯಾದರೆ, ಅದು ನಿನ್ನ ತಪ್ಪೇ?"

"ನಾನು ಧನ್ಯೆ! 'ಏಳೇಳು ಜನ್ಮದಲ್ಲಿ ನೀವೇ ನನ್ನ ಪತಿದೇವರಾಗಿರಿ' ಎಂದು ಬೇಡಿಕೊಳ್ಳುತ್ತಿದ್ದೇನೆ; ಆದರೂ ಜನ ನಿಂದೆಗೆ."

"ಹೌದು ನನಗೆ ಗೊತ್ತು! ಆದಕ್ಕೇ ನಾನು ಮನೆಗಾರನ್ನೂ ಕರೆತರುವುದಿಲ್ಲ. ಇಂದೆಯೆ ನನ್ನ ಶಾಲೆಯಲ್ಲಿಯ ಒಬ್ಬ ಸಹೋದ್ಯೋಗಿನಿ, ತನ್ನ ಜತೆಯಲ್ಲಿ ರೇಡಿಯೋಕೇಂದ್ರಕ್ಕೆ ಬರಹೇಳಿದ್ದಳು. ಆದರೆ ನಿನ್ನ ಹಾಡೂ ಇದ್ದುದರಿಂದ, ಅವಳಿಗೆ 'ಹೆಂಡತಿಯನ್ನು ತಮಾಷೆಗೆ ಕಳಿಸುವುದಿದೆ' ಎಂದು ಸುಳ್ಳಾಡಿ ತಪ್ಪಿಸಿಕೊಂಡೆ. ಸಮಾಜದ ನಿಂದೆ ನನಗೆ ಬೇಡವಾಗಿತ್ತು. ಕೇವಲ ನೀನೇ ನನ್ನ ಪ್ರಾಣ" ಎಂದು ಮತ್ತೆ ಬಿಗಿದಪ್ಪಿದರು.

ಹೊರಗೆ ನಿಂತು ನೋಡುತ್ತಿದ್ದ ಲೀಲಾಬಾಯಿಯವರ ಗಲ್ಲಗಳು ಒದ್ದೆಯಾಗಿದ್ದುವು. ಕೈಯಲ್ಲಿಯ ಕರವಸ್ತ್ರವೂ ಒದ್ದೆಯಾಗಿತ್ತು. ಕಣ್ಣಲ್ಲಿ ನೀರು ಹರಿಯುತ್ತಲೇ ಇತ್ತು. ಹೊಸ ನೀರು ಹಳೆಯ ನೀರನ್ನು ಕೊಚ್ಚಿಕೊಂಡು ಹೋಗುತ್ತಿತ್ತು. ಅಲ್ಲಿಂದ ಸರಿದು ರೋಡಿಗೆ ಬಂದರು. ಚೌಕಿಗೆ ಬಂದಾಗ, ಮನೆತನಕ ನಡೆದುಕೊಂಡು ಹೋಗುವಷ್ಟು ಅವರಲ್ಲಿ ತಾಳ್ಮೆ ಉಳಿದಿರಲಿಲ್ಲ. ಟಾಂಗಾ ಗೊತ್ತು ಮಾಡಿದರು.

* * * *

ಲೀಲಾಬಾಯಿ ಮನೆಗೆ ಬಂದಾಗ, ಕೆಲಸಗಿತ್ತಿ ಬಾಗಿಲನ್ನು ಮುಂದೆಮಾಡಿ ತನ್ನ ಮನೆಗೆ ಹೋಗಿದ್ದಳು. ಲೀಲಾಬಾಯಿ ನೇರವಾಗಿ ಗಂಡನ ಕೋಣೆಗೆ ಹೋದರು. ದೇಶಪಾಂಡೆಯವರು ಮಂಚದ ಮೇಲೆ ಮಲಗಿದ್ದರು. ಸಮೀಪದಲ್ಲಿಯೇ ದೀಪ ಉರಿಯುತ್ತಿತ್ತು. ಆ ಬೆಳಕಿನಲ್ಲಿ ಗಂಡನ ದೀನಮುದ್ರೆಯನ್ನೊಮ್ಮೆ ನೋಡಿದರು. ಒಳಗಿನ ಅಂತಃಕರಣ ಉಕ್ಕಿಬಂತು. ಹೋದವರೇ ಗಂಡನ ಪಾದದಡಿಯಲ್ಲಿ ಬಿದ್ದರು. ಅಳು ಜ್ವಾಲಾಮುಖಿಯಂತೆ ಸ್ಫೋಟವಾಯಿತು. ದೇಶಪಾಂಡೆಯವರು ಒಮ್ಮೆಲೆ ಎಚ್ಚತ್ತು ಎದ್ದು ಕುಳಿತರು. ತಮ್ಮ ಬದಿಯಲ್ಲಿ ಹೆಂಡತಿ ಕುಳಿತು ಅಳುತ್ತಿರುವುದನ್ನು ನೋಡಿದರು. ಆಶ್ಚರ್ಯವಾಯಿತು. ಲೀಲಾಬಾಯಿಯವರು ಬಿಕ್ಕುತ್ತ "ನನ್ನನ್ನು ಕ್ಷಮಿಸಿರಿ!" ಎಂದು ಉಸುರಿದರು.

ಒಂದು ಕೈಯಿಂದ ಅವಳ ತಲೆಗೂದಲನ್ನು ನೇವರಿಸುತ್ತಾ "ಕ್ಷಮೆ ಯಾಕೆ?" ಎಂದು ಕೇಳಿದರು. ಎಷ್ಟೋ ವರುಷಗಳ ನಂತರದ ಸ್ಪರ್ಶ, ಇಬ್ಬರಲ್ಲಿಯೂ ಹೊಸ ಸುಖದ ಕಲ್ಪನೆ ತಂದು ಕೊಡುತ್ತಿತ್ತು. ಲೀಲಾಬಾಯಿ ಎದ್ದು ಕುಳಿತು ಮೆಲ್ಲಗೆ ಎಂದಳು:

"ನನ್ನ ಜೀವನಕ್ಕೆ ಜ್ವರ ಬಂದಿತ್ತು"

"ಜ್ವರ ಬಂದಾಗ ಜನ ಔಷಧಿ ತೆಗೆದುಕೊಳ್ಳುತ್ತಾರೆ!"

"ಹೌದು ನನಗೂ ಔಷಧಿ ಸಿಕ್ಕಿತು. ತುಂಬಾ ಕಹಿ ಇತ್ತು, ಜ್ವರ ವಾಸಿಯಾಯಿತು!"

"ಔಷಧಿ ಕಹಿಯಾಗಿಯೇ ಇರುವುದು! ಮೇಲೆ ಸಕ್ಕರೆ ತಿನ್ನುತ್ತಾರೆ!"

"ನನಗೆ ಸಕ್ಕರೆ ಬೇಡ!"

"ಮತ್ತೇನು?"

"ಬೆಲ್ಲ...."

ಉರಿಯುತ್ತಿದ್ದ ದೀಪವನ್ನು ಲೀಲಾಬಾಯಿ ಸಣ್ಣಗೆ ಮಾಡಿದರು. ಅಲ್ಲಿ ಪಸರಿಸಿದ ನಸುಗತ್ತಲೆ, ಅವರ ಸಂಸಾರಕ್ಕೆ ಹೊಸ ಬೆಳಕು ಕೊಟ್ಟಿತು

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.

BOMBAY 14.

Sole Agents:—

M/s. Pranlal and Sons

Chemists, Druggists

Station Road. HUBLI

(H. O. Bangalore City)

ಕಾಣದಕೈ

(ಸಾಮಾಜಿಕ ತರಂಗರೂಪಕ)

ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

★

ಪಾತ್ರಗಳು :

ನಿವೇದಕ (ನಾಟಕದ ಸೂತ್ರಧಾರ)

ರಾಮಣ್ಣ (ಕಲ್ಲಹಳ್ಳಿಯ ಕರಣಿಕರ ಮಗ)
ಚಿನ್ನಪ್ಪ (ಕರಣಿಕರ ತರುಣ ರೈತ)
ಭೀಮಣ್ಣ (ಚಿನ್ನಪ್ಪನ ದೂರದ ಕಕ್ಕ)
ಹೊನ್ನಪ್ಪ (ಚಿನ್ನಪ್ಪನ ಮಾವ)
ನೀಲಮ್ಮ (ರೈತ ಚಿನ್ನಪ್ಪನ ಹೆಂಡತಿ)
ಇಂದಿರಾ (ರಾಮಣ್ಣನ ತಂಗಿ)
ತಾಯಿ I (ರಾಮಣ್ಣನ ತಾಯಿ)
ತಾಯಿ II (ನೀಲಮ್ಮನ ತಾಯಿ)

೧

ನಿವೇದಕ

ಕಾಣದಕೈ ! ಓ, ಕಾಣದಕೈ ಜಗತ್ತಿನಲ್ಲಿ ಎಂತೆಂತಹ ಕ್ರಾಂತಿ ಕಾರ್ಯಗಳನ್ನು ಮಾಡುತ್ತದೆ! ತಾನು ಕಾಣದಂತೆ ಮರೆಯಲ್ಲಿ ಇದ್ದುಕೊಂಡೇ ವ್ಯಕ್ತಿಯ ನಿಶ್ಚಿಂತಜೀವನದಲ್ಲಿಯೂ ಸಮಾಜದ ಶಾಂತಜೀವನದಲ್ಲಿಯೂ ಬಿರುಗಾಳಿಯನ್ನೆಬ್ಬಿಸಿ ಆಟವಾಡುತ್ತದೆ; ಆಟ ಸಾಕೆನಿಸಿದಾಗ, ಬಿರುಗಾಳಿಯನ್ನು ತಡೆಹಿಡಿದು, ಜೀವನ ತರಂಗಗಳನ್ನು ಶಾಂತವಾಗಿಸುತ್ತದೆ. ಎಲ್ಲ ಜೀವನಕಥೆಗಳನ್ನೂ ಜೀವನನಾಟಕಗಳನ್ನೂ ಈ ಕಾಣದಕೈಯೇ ನಿರ್ಮಿಸುವುದು. ಈ ರೂಪಕದಲ್ಲಿ ಹೆಣೆದುಕೊಂಡ ಕತೆಯೂ ಆ ಕಾಣದ ಕೈಯ ಸೂತ್ರದಾಟದ ಒಂದು ಬದುಕಿನಿಂದ ಬೆರೆತುದಾಗಿದೆ.

ಕಲ್ಲಹಳ್ಳಿಯ ಕರಣಿಕ ಕೃಷ್ಣರಾಯರಿಗೆ ರಾಮಣ್ಣ ಒಬ್ಬನೆ ಒಬ್ಬ— ಗಂಡುಸುಮಗ. ಅವನಿಗ ಇಪ್ಪತ್ತುನಾಲ್ಕು-ಇಪ್ಪತ್ತೈದು ವರ್ಷದ ವಯಸ್ಸು. ಹಳ್ಳಿಯೂರ ಕುಲಕರ್ಣಿಕೆ ಸಾಗಿಸುವಷ್ಟು ಅವನ ಅಕ್ಷರಶಿಕ್ಷಣವಾಗಿದ್ದಿತಾದರೂ, ಆ ಹಸುಮಗುವಿನ ಹೃದಯದ ರಾಮಣ್ಣನಿಗೆ, ಕುಲಕರ್ಣಿಕೆಗೆ ಇರಲೇಬೇಕಾದ ಬುದ್ಧಿಯ ಚಳಕ ಇರಲಿಲ್ಲ. ಆತನ ಸ್ವಭಾವ ಎಂತಹದೆಂಬುದನ್ನು ರಾಮಣ್ಣನ ತಾಯಿ, ತಂಗಿ ಇಂದಿರಕ್ಕ, ಅವರ ರೈತ ಚಿನ್ನಪ್ಪನ ಹೆಂಡತಿ ನೀಲಮ್ಮ ಕೂಡಿ ಕುಳಿತು ಮಾತನಾಡುತ್ತಲಿದ್ದಾರೆ:

ನೀಲಮ್ಮ :— ಏನ್ರಿ ಯವ್ವಾ! ನಿಮ್ಮ ರಾಮಣ್ಣವರೂ ಅಂದರ ಈ ಯುಗದ ಮನಿಸ್ಯಾರೇನೂ ಅಲ್ಲ ಬಿಡ್ರಿ ! ದೇವರಂಥಾ ಮನಸು ಅವರದು. ಯಾವ ಮಾತನೂ ಮುಚ್ಚೀ ಕಚ್ಚೀ ಆಡೂದಂದರ ಅವರಿಗೆ ಗೊತ್ತೇ ಇಲ್ಲ. ಅಂತೇ ನಮ್ಮ ಹಿರಿಯ, ಯಾವಾಗ ನೋಡಿದರೂ ರಾಮಣ್ಣವರನ್ನ ಹೊಗಳಿಹಾಡತಿರತಾನ. ಇವರ ಒಳ್ಳೇತನದ ಸಲವಾಗಿ ಮಾತಾಡದ ದಿನಾ ಅಂದರ ಒಂದೂ ಇರೂದಿಲ್ಲ ನೋಡ್ರಿ !

ತಾಯಿ :—ಮತ್ತ, ನಿನ್ನ ಗಂಡ ಚಿನ್ನಪ್ಪರೇ ಎಂಥಾವ ಅಂತೀ ? ಬಹಾಳ ಸರಳ ಸ್ವಭಾವದವ. ಅಂತs ಇಬ್ಬರ ಜೀವಕ್ಕ ಜೀವ ಹೊಂದೇದ. ಎಂದಾದರೂ ಮನ್ಯಾಗ, ಬ್ಯಾಳ್ಯಾಗ ಚೆಲ್ಲಬಿದ್ದರ ಸಾಕು; ಚಿನ್ನಪ್ಪ ಇಲ್ಲದs ಊಟಾನs ಅಂವಗ ರುಚೀ ಹತ್ತೂದಿಲ್ಲ. ಒಂದು ಕಥೀನs ಓದಲಿ, ಒಂದು ಪುರಾಣಾನs ಓದಲಿ, ನಾವು ಇಲ್ಲದಿದ್ದರೂ ನಡೀತದ; ಚಿನ್ನಪ್ಪ ಮಾತ್ರ ಮುಂದ ಬೇಕs ಬೇಕು. ಒಂದs ಜಾತಿಯವರು ಯಾಕ.... ಒಂದs ತಾಯಿ ಹೊಟ್ಯಾಗ ಹುಟ್ಟಿದ ಅಣ್ಣಾ, ತಮ್ಮಾ ಸುದ್ಧಾ ಇಷ್ಟು ಪ್ರೀತಿಂದs ಇರಲಾರರು ನೋಡು ನೀಲಾ!

ನೀಲಮ್ಮ :— ಈ ಹಾಲೂ ಸಕ್ಕರಿ ಕಡಿತನಕಾ ಕೂಡಿ ಬದಕಲಿ ಯವ್ವಾ! ಈ ಜನಮದಾಗ ಸುಕಾ ಅಂದರ ಏನು! ಆದs ಒಂದು ಪ್ರೀತಿ, ಗೆಣೆತನಾ! ಇವು ಇಲ್ಲದಿದ್ದರ, ಮನಸ್ಯಾನ ಬಾಳೇದಾಗ ಏನ ಹುರುಳ ಐತಿ? ಮತ್ತ ಈ ಪ್ರೀತಿಗೆ ಗೆಣೆತನಕ್ಕ ಜಾತೀ ಕುಲಾ ತೊಗೊಂಡು ಏನು ಮಾಡೂದೈತಿ! ನಮ್ಮ ಕುಲಾಚಾರದ್ಹಾಂಗ ನಾವು ಇರಬೇಕು; ನಿಮ್ಮ ಕುಲಾಚಾರದ್ಹಾಂಗ ನೀವು ಇರಬೇಕು! ಇವು ಪ್ರೀತಿ ಗೆಣೆತನಾ ಯಾಕ ಕೆಡಸಬೇಕರಿ! ನಮ್ಮ ತವರ ಮನ್ಯಾಗ, ಒಂದು ಹೋರಿಗೆ— ಸಾಕಿದ ನಾಯಿಗೆ— ಇಷ್ಟು ಪ್ರೀತಿ ಕೂಡೇತರಿ; ಅವು ಎರಡೂ ಒಂದನ್ನೊಂದು ಅಗಲಿ ಇರಲಾರವs ಒಲ್ಲವು. ಹೋರಿ ಇದ್ದಲ್ಲೇ ನಾಯಿ ಇರತೈತಿ; ನಾಯಿ ಇದ್ದಲ್ಲೇ ಹೋರಿ ಇರತೈತಿ! ನೋಡಿ ನಮಗೆಲ್ಲಾ ಮೋಜs ಅನಸತೈತಿ !

ತಾಯಿ :— ನೋಡವ್ವಾ ! ನಾಯಿ-ಹೋರೀ ನಡುವ ಇಷ್ಟು

ಪ್ರೀತಿ ಇದs ಅಂದ ಮ್ಯಾಲ, ರಾಮಣ್ಣ-ಚೆನ್ನಪ್ಪನ ನಡುವ ಪ್ರೀತಿ ಇರೋದೇನು ದೊಡ್ಡ ಮಾತು? ಇದೆಲ್ಲಾ ಅತು ನೋಡು ನೀಲಾ! ನಮ್ಮ ರಾಮಣ್ಣ ತೀರಾ ಸರಳ ಸ್ವಭಾವದ ಹುಡುಗ. ಇಂಥಾಂವಾ, ಇನ್ನ ಮುಂದ ಕುಲಕರ್ಣಿಕೀ ಹ್ಯಾಂಗ ಸಾಗಿಸಿಕೊಂಡು ಹೋಗತಾನೋ ಅಂತ ನನಗ ಚಿಂತಿ ಹತ್ತೇದ. ಕುಲಕರ್ಣಿಕೀ ಮಾಡಿ ಹೌದ ಅನಿಸಿಗೋಬೇಕಂದರ, ಅದಕ್ಕ ಬಹಳ ಕಿಡಿಗೇಡಿತನ ಬೇಕಾಗತsದ!

ಇಂದಿರಾ :— (ತುಂಟನಗೆ ನಗುತ್ತ) ನೋಡು ನೀಲವ್ವಾ ನಮ್ಮ ಅವ್ವನ ರೀತೀ! ಅದಾಕ್ತs ಅಪ್ಪನ್ನ ಕಿಡಿಗೇಡೀ ಅಂತ ಬೈದು ಬಿಟ್ಟಳು.

(ನೀಲಮ್ಮ ಗಟ್ಟಿಯಾಗಿ ನಗುವಳು ಇಂದಿರೆಯೂ ನಗುವಳು ಆಗ.)

ತಾಯಿ :— ಖೋಡಿಹುಡಿಗಿ! ಇಲ್ಲದ್ದೊಂದು ತಪ್ಪು ಹುಡುಕಿ ಹಿಡಿಯಾಕಿ ನೀನೂ! ನಿನ್ನಲ್ಲಿಯೂ ಕಿಡಿಗೇಡಿತನಾ ರಾಮಣ್ಣನೊಳಗ ಇಳಿದಿದ್ದರ, ನನಗ ಯಾವ ಚಿಂತೀನೂ ಇರಲಿಲ್ಲ. ಬಹಳ ಸರಳ ಹೃದಯದ ಹುಡುಗ ಅತ!

ಇಂದಿರಾ :— (ನಗುತ್ತ) ನೀಲವ್ವಾ, ನೀನು ರಾಮಣ್ಣ ಆಳೀತನಕ್ಕ ಹೋದದ್ದರ ಕಥೀ ಕೇಳಿಲ್ಲ ಕಾಣಸತsದ! ಅದೊಂದು ಮೋಜಿನ ಕಥಿ! ಮೊದಲನೇ ಸಾರೇನs ಆಳೀತನಕ್ಕಂತ ಮಾವನ ಮನಿಗೆ ಹೋಗ್ಯಾನ ಏನವ್ವಾ! ತಾ ಕೂತುಕೋತಿದ್ದ ಪಡಸಾಲೀ ಒಳಗ ಭಾಳ ಕಸಾ ಬಿದ್ದಿತ್ತಂತ; ಯಾರನರೇ ಕರದು ಗುಡಿಸಿ ಕೊಡಲಿಕ್ಕ ಹೇಳಬೇಕಿಲ್ಲೊ! ತಾನs ಎದ್ದು ಹಾಸಿದ ಜಮಖಾನೀ ಚಟಾಪಟಾ ಝಾಡಿಸಿ, ಘಳಿಗೀ ಮಾಡಿ ಇಟ್ಟನಂತ. ಮೂಲ್ಯಾಗ ಇದ್ದ ಕಸಬರಗೀ ತೊಗೊಂಡು, ಕಸಾ ಉಡುಗಲಿಕ್ಕ ಹತ್ತಿದನಂತ.

(ನೀಲಮ್ಮ ಗಟ್ಟಿಯಾಗಿ ನಗುವಳು.)

ಇಂದಿರಾ :— (ನಗುತ್ತಲೇ) ಇನ್ನೂ ಮುಂದ ಕೇಳು. ನಮ್ಮ ಅತ್ತಿಗಿ, ಒಳಗ ನಿಂತುಕೊಂಡೇ ಈ ಅವತಾರಾ ಎಲ್ಲಾ ನೋಡಿದಳಂತ. ತನ್ನ ತಾಯಿಯಾ ಹತ್ತರ ಹೋಗಿ, ಹೊಟ್ಟಿ ಹಿಡಿಸಲಾರದಷ್ಟು ನಕ್ಕೋತs, ಗಂಡನ ಈ ರೀತೀ ಹೇಳಿದಳಂತ. ಅವರು ಓಡತೋಡತs ಹೊರಗ ಬಂದು, ರಾಮಣ್ಣನ್ನ ಬಿಡಿಸಿ, ತಾವs ಕಸಾ ಗುಡಿಸಿ ಹಾಸಿಕೊಟ್ಟರಂತ! ಇಲ್ಲಿಗೆ ಬಂದ ಮ್ಯಾಲ, ನಮ್ಮ ಅತ್ತಿಗೀನs ಇದನ್ನೆಲ್ಲಾ ನಮ್ಮ ಮುಂದ ಹೇಳಿ ಹೇಳಿ ನಕ್ಕಳು.

(ಎಲ್ಲರೂ ನಗುವರು.)

ಇಂದಿರಾ :— ಆಗ ನಾನು ರಾಮಣ್ಣನ್ನ ಕೇಳಿದೆ : 'ಏನಪಾ ರಾಮಣ್ಣಾ! ಮಾವನ ಮನಿಗೆ ನೀ ಏನು ಆಳೀತನಕ್ಕ ಹೋಗಿದ್ದಿಯೋ ಕಸಾ ಬಳೀಲಿಕ್ಕೆ ಹೋಗಿದ್ದಿಯೋ?' ಅಂತ! ಅದಕ್ಕ ಅಂವ ಏನು ಅನಬೇಕು? 'ಕೂತ ಜಾಗಾದಾಗ ಕಸಾ ಬಿದ್ದದ್ದು ಕಾಣಿಸಿತು. ಕಸಬರಿಗೀ ತೊಗೊಂಡು ಗುಡಿಸಲಿಕ್ಕೆ ಹತ್ತಿದೆ. ಇದರೊಳಗ ವಿಶೇಷ ಏನದ?' ಅಂತ ಅಂದ.

(ಮತ್ತೆ ಎಲ್ಲರೂ ನಗುವರು. ನಗೆ ನಿಂತ ಮೇಲೆ)

ನೀಲಮ್ಮ :— ಪಾಪ, ಪಾಪ! ಇಂಥಾ ದೇವರಂಥಾ ಮನಸ್ಯಾರು ಎಲ್ಲಿ ಸಿಕ್ಕಾರ್ರೆವ್ವಾ! ನನ್ನ ಜೋಡೀ ಅಂತೂ ಎಷ್ಟು ಮಾತು, ಎಷ್ಟು ಕಥಿ! ನನ್ನೂ ಒಬ್ಬಾಕಿ ತಂಗೀ ಅಂತs ತಿಳಕೊಂಡು ಬಿಟ್ಟಾರ. ಮೊದಮೊದಲ ನನಗ, ಅವರ ಜೋಡೀ ಮಾತಾಡಬೇಕಂದರ ಜೀವ ಹೆದರತಿತ್ತು: ನಾಚಿ ಹುದಿಗಿಕೋತಿದ್ದೆ. ಬರಬರತs ಅವರ ಸ್ವಭಾವ ಗೊತ್ತಾತರಿ! ಬೆನ್ನಿಗೆ ಬಿದ್ದ ಅಣ್ಣನಿಗಿಂತಾ ಹೆಚ್ಚಂತ ತಿಳಕೊಂಡು, ಹೆದರಿಕಿ ಇಲ್ಲದs ನs ಮಾತಾಡತೀನಿ. ಆಗಾಗ ನಗಚಾಟಿಕೀ ಮಾಡತಾರ; ನಾ ಏನ ಬಿಡತೀನೇನ್ರಿ; ಮುಯ್ಯಿಗೆ ಮುಯ್ಯಿ ಮಟ್ಟಸೇ ಬಿಡತೀನಿ. ನಮ್ಮ ನಗಚಾಟಿಕೀ ಕಣ್ಣಾರೇ ಕಂಡು, ನಮ್ಮವ ಹಿರಿಹಿರಿ ಹಿಗ್ಗತಿರತಾನ; ಹಾಂಗs ಮುಗುಳನಗೀ ನಗತಿರತಾನ!

ತಾಯಿ :— ನಿಮ್ಮವನ? ಸರಿಹೋತು! ರಾಮಣ್ಣಾ ಅಂದರ, ಅಂವ ಒಬ್ಬ ಸಾಧುಪುರುಷಾ— ದೇವಮನಿಸ್ಯಾ— ಅಂತ ಪೂರ್ಣ ಖಾತ್ರೀಮಾಡಿಕೊಂಡುಬಿಟ್ಟ್ಯಾನ! ಅಂತs ರಾಮಣ್ಣನ ಮ್ಯಾಲ ನಿನ್ನ ಗಂಡನದು ಎಷ್ಟು ಭಕ್ತಿ....ಎಷ್ಟು ವಿಶ್ವಾಸ! ಯಜಮಾನಾ, ರೈತಾ ಅಂಬೂ ಭೇದಭಾವ, ಅವರೊಳಗ ಉಳಿದೇ ಇಲ್ಲ!

ನೀಲವ್ವ :— ಯವ್ವಾ, ಅಂವಗಷ್ಟs ಯಾಕರಿ? ನನಗೂ ಸುದ್ಧಾ ಹಾಂಗs ಅನಸತೈತಿ! ನಿಮ್ಮ ಮನಿಗೆ ಬಂದಾಗೆಲ್ಲಾ ನನಗ,

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ.ವಿ. ಪಂಡಿತ

ಮನೋಹರ { ನೀಲ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ : ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

' ನಂಜನಗೂಡು ಟೂತ್ ಪೌಡರು ' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ನನ್ನ ತವರಮನೀಗೆ ಬಂದಾಗ ಅನಸತೈತಿ ಯವ್ವಾ! ನಿಮ್ಮ ತಾಯಿನಾಗುವುತಿ, ಇಂದಿರಕ್ಕನ ತಂಗೀ ಪ್ರೀತಿ, ರಾಮಣ್ಣನವರ ಅಣ್ಣನ ನಡತಿ— ಇವನೆಲ್ಲಾ ನೋಡಿದಾಗ, ಹಿಂದಿನ ಜನಮ-ದೊಳಗ ನಾ ಯಾವ ಪುಣ್ಣೇ ಮಾಡಿದ್ದಿನೋ ಅಂತ ಅನಸತೈತಿ ನೋಡ್ರಿ!

(ಗಡಿಯಾರದಲ್ಲಿ ಸಂಜೆಯ ಆರುಗಂಟೆ ಹೊಡೆದ ಶಬ್ದ ಕೇಳುವುದು, ನೀಲಮ್ಮ ಒಂದು, ಎರಡು, ಮೂರು—ಎಂದು ಆರರ ವರೆಗೆ ಎಣಿಸಿ)

ನೀಲಮ್ಮ :— ಅಯ್ಯ! ಆರುಗಂಟೀ ಬಾರಿಸಿತಲ್ರೀ ಯವ್ವಾ! ನಾ ಇಲ್ಲಿ ಹೀಂಗs ಹರಟೀ ಹೊಡಕೊಂತs ಕುಂತೀನಿ; ಮನ್ಯಾಗ ಆ ಮುದಿಕಿ ಒಂದs ದುಡೀತಿರತೈತಿ! ಹೋಗ್ತೀನಿ ಇಂದಿರಕ್ಕಾ ಈಗ! ಸಂಜಿಗೆ ಮನ್ಯಾಗ ನೀರು ಇಲ್ಲ; ನಾಕು ಕೊಡಾ ಹಳ್ಳದಿಂದ ನೀರು ತರಬೇಕು!

ಇಂದಿರಾ :— ಅವ್ವಾ, ನೀಲಮ್ಮ ಹೋಗತಾಳಂತ ನೋಡು! ಆಕೀಗೆ ಏನೋ ಕೊಡಬೇಕಂತಿದ್ದೆಲ್ಲಾ!

ತಾಯಿ :— ಹೌದs ನೀಲಾ! ರಾಮಣ್ಣ ನಿನ್ನೆ ಸಂತಿಂದ ಬರೂ ಮುಂದ, ಏನೇನೋ ಫರಾಳದ ಜಿನಸಾ ತಂದಾನ. ನೀಲಮ್ಮ ಬಂದಾಗ ಆಕೀ ಕೂಡಾ ಚಿನ್ನಪ್ಪಗಷ್ಟು ಕೊಟ್ಟು ಕಳಿಸೂ... ಅಂತ ಹೇಳ್ಯಾನ.... ಇಗೋ, ಇವನ್ನ ತೊಗೊಂಡು ಹೋಗು!

ನೀಲಮ್ಮ :— ಬರತೀನ್ರಿ ನಾ ಇನ್ನ!

ತಾಯಿ :— ಇಂದಿರಾ (ಇಬ್ಬರೂ) ಆಗಲಿ, ಹೋಗಿ ಬಾ!

೨

(ಎತ್ತುಗಳು ಮೇವು ತಿನ್ನುವ ಸರಸರ ಸಪ್ಪಳ ಕೇಳಬೇಕು. ಪಸು 'ಅಂಬಾ" ಎಂದು ಕೂಗುವ ಸಪ್ಪಳ ಕೇಳಿಸಬೇಕು. ದೂರದಲ್ಲಿ ನಾಯಿ ಬೊಗಳುವ ಸಪ್ಪಳ ಕೇಳಿಸಬೇಕು.)

ನಿವೇದಕ :

ಚಿನ್ನಪ್ಪ ಕರಣಿಕರ ತೋಟ ಮಾಡಿವ ಒಕ್ಕಲಿಗ; ಹೊಸ ಹರಯದ ತರುಣ. ನೀಲಮ್ಮ ಆತನ ಚೆಲುವೆಯಾದ ಹೆಂಡತಿ; ಚಿನ್ನಪ್ಪನ ಸೋದರಮಾವನ ಮಗಳು. ಚಿಕ್ಕತನದಲ್ಲಿಯೆ ತಂದೆ ತೀರಿ ಹೋದುದರಿಂದ, ಚಿನ್ನಪ್ಪನ ತಾಯಿ ಮಗುವನ್ನು ಕರೆದು ಕೊಂಡು ಹೋಗಿ, ತನ್ನ ತವರೂರಲ್ಲಿ ನಿಂತುಕೊಂಡಿದ್ದಳು.— ಆದುದರಿಂದ ನೀಲಮ್ಮ ಚಿನ್ನಪ್ಪ ಒಂದೆ ಮನೆಯಲ್ಲಿ ಕೂಡಿ ಆಡಿ ಬೆಳೆದವರು. ಚಿಕ್ಕತನದ ಗೆಳೆತನ, ಮದುವೆಯಾದ ಮೇಲೆ ಪ್ರೇಮವಾಗಿ ಅರಳಿ ನಿಂತಿದ್ದಿತು. ಚಿನ್ನಪ್ಪ ಮದುವೆಯಾದ ಮೇಲೆ ತಾಯಿಯೊಂದಿಗೆ ಮತ್ತೆ ಕಲ್ಲಹಳ್ಳಿಗೆ ಬಂದು, ಕರಣಿಕರ ತೋಟವನ್ನು ಮಾಡಲುತೊಡಗಿದ್ದ. ಇದೀಗ ರಾತ್ರಿಯ ಹತ್ತುಗಂಟೆ. ಗಂಡ ಹೆಂಡತಿ ಕುಳಿತು ಮಾತನಾಡುತ್ತಲಿದ್ದಾರೆ :

ಚಿನ್ನಪ್ಪ :— (ಮೆಲುದನಿಯಲ್ಲಿ) ಅನ್ನಗ ನಿದ್ದಿ ಹತ್ತಿದ್ದೀತಲ್ಲಾ ನೀಲಾ ?

ನೀಲಮ್ಮ :— ಹತ್ತದೆ ಏನು ಮಾಡೀತು! ಮುದಕ ಮನೆಸ್ಯಾಳು : ಹಗಲೆಲ್ಲಾ ದುಡದು ದುಡದು ದಣದಿರತಾಳ! ಬ್ಯಾಡ ಬ್ಯಾಡ ಅಂತ ಎಷ್ಟು ಹೇಳಿದರೂ ಬಿಡೂದಿಲ್ಲ, ತಿರುಗಿ ನನಗs 'ನೀ ಏನೂ ಮಾಡಬ್ಯಾಡಾ: ಆರಾಮಾಗಿ ಮನೀಗೆ ಸೊಸಿಮುತ್ತಾಗಿ ಇರು; ಮುಂದ ಮೈಮುರೀ ದುಡಿಯೂದು ಇದ್ದs ಇರತೈತಲಾ!' ಅಂತಾಳ!

ಚಿನ್ನಪ್ಪ :— ಅಂತೂ....ಇಂತಾ ಅತ್ತಿ ನಿನಗ ಸಿಕ್ಕದ್ದು, ನಿನ್ನ ಯಾವುದೋ ಹಿಂದಿನ ಜನಮದ ಪುಣ್ಯೇ ನೋಡು!

ನೀಲಮ್ಮ :— ನನ್ನ ಪುಣ್ಯೇ ನನಗ ಬರೇ ಒಳ್ಳೇ ಅತ್ತೀನ್ನಷ್ಟs ಒದಗಿಸಿ ಕೊಟ್ಟಿಲ್ಲ!

ಚಿನ್ನಪ್ಪ :— ಮತ್ತ! ಮತ್ತೀನ ಕೊಟ್ಟೈತಿ ನಿನ್ನ ಪುಣ್ಯ?

ನೀಲಮ್ಮ :— ಮತ್ತೇನಂದರ ? ಹೆಂಗಸಿಗೆ ಏನೇನು ಒಳ್ಳೇದು ಬೇಕೋ ಅದನೆಲ್ಲಾ ಕೊಟ್ಟೈತಿ!

ಚಿನ್ನಪ್ಪ :— ಭಪ್ಪರೆ ಹುಡಿಗೀ! ಬಿಚ್ಚಮಾತು ಆಡಲಾಕ ಬರೂದೇ ಇಲ್ಲೇನು ನಿನಗ ?

ನೀಲಮ್ಮ :—ಬಿಚ್ಚಮಾತು ಆಡಲಾಕ ನಾವೇನು ತೆರಬಾಯಿ-ಗಂಡಸರೇನು ? ಹೆಂಗಸರಾಡೂ ಮಾತು ಎಲ್ಲಾ ಮುಚ್ಚು-ಮುಚ್ಚಾಗಿ ಇದ್ದರsನs ಮೋಜು ಇರತೈತಿ!

ಚಿನ್ನಪ್ಪ :— ಏನ ಬೆರಕಿ ಅದೀಯs ನೀನು ನೀಲೀ ? ಆಡಾದ್ತs ನನ್ನ ತೆರಬಾಯಿ ಅಂತ ಅಂದುಬಿಟ್ಟೆಲಾ!

ನೀಲಮ್ಮ :— ಇದ್ದ ಮಾತು ಇದ್ಹಾಂಗ ಆಡಲಾಕ ಅಂಜಿಕಿಯಾಕ ? ಗರತಿ ಹೆಂಗಸು ಗಂಡನ ಮುಂದ ತೆರಬಾಯಾಗಿ ಇದ್ದುಬಿಟ್ಟರ, ಅದರಾಗ ಸೊಗಸ ಏನೂ ಇರೂದಿಲ್ಲ. ಗಂಡಸು ತೆರಬಾಯಿ ಆಗೇ ಇರಬೇಕು; ಹೆಂಗಸು ಮುಚ್ಚುಮಾತಿನಾಕೇ ಆಗಿರಬೇಕು!

ಚಿನ್ನಪ್ಪ :— ಅಬಾಬಾಬಾ! ಇಷ್ಟರಾಗs ಒಳ್ಳೇ ಮಾತು ಕಲತೀದೀ ಬಿಡ ನೀನೂ! ಅಲ್ಲs, ಇದನೆಲ್ಲಾ ನಿನಗ ಯಾರು ಕಲಿಸಿ ಕೊಟ್ಟರೂ ಅಂತೀನಿ!

ನೀಲಮ್ಮ :— ಯಾರಂದರ ? ಮೀನಿನ ಮರಿಗೆ ಈಸ ಕಲಿಸಿದವರು!

ಚಿನ್ನಪ್ಪ :— ಶಾಬಾಸ್! ನಂದೂ ಪುಣ್ಣೇ ದೊಡ್ಡದs ನೋಡು ನೀಲೀ ? ನಿನ್ನಂತಾ ಹೇಣ್ತಿ ಸಿಕ್ಕೇದಿ! ಭೂಮಿತಾಯಿಯಂಥಾ ಅವ್ವ ಅದಾಳು! ರಾಮಣ್ಣನಂಥಾ ಜೀವದ ಗೆಳೆಯಾ ದೊರಕೀದಾನು! ಗೂಳ್ಯಾ— ಬಾಳ್ಯಾನಂಥಾ ಎತ್ತಿನ ಜೋಡೀ ಸಿಕ್ಕಾವು! ಕುಲಕರ್ಣ್ಯಾರ ತೋಟದಂಥಾ ಹಸನಕಟ್ಟ ಭೂಮಿ ಸಿಕ್ಕೈತಿ! ಒಕ್ಕಲಿಗ್ಯಾಗ ಇದಕಿಂತಾ ಹೆಚ್ಚಿಂದು ಇನ್ನೇನು ಬೇಕು ?

ನೀಲಮ್ಮ :— ನಿನಗ ಮಾತ್ರ ಇನ್ನೇನೂ ಬೇಕಾಗಿರಲಿಕ್ಕಿಲ್ಲ; ನನಗ ಮಾತ್ರ ಬೇಕಾದದ್ದು ಇನ್ನೂ ಐತಿ!

ಚಿನ್ನಪ್ಪ :— (ಕುತೂಹಲದಿಂದ) ಅದೇನs ನಿನಗ ಬೇಕಾದದ್ದು ?

ನೀಲವ್ವ :— (ನಾಚುತ್ತ) ಹುಂ, ಅವನ್ನೆಲ್ಲಾ ಬಾಯಿ-ಬಿಚ್ಚಿ ಹೇಳತಾರ ನಿನಗ !

ಚಿನ್ನಪ್ಪ :— ಓಹೋಹೋ ! ತಿಳದ್ಹಾಂಗ ಆತು ಬಿಡು ನಿನಗ ಬೇಕಾದದ್ದು ! ಆಗಾಗs ಬಿಕೂವುಂದ ಹಾಡತಿರತೀಯಲಾ : ' ಮಾಣಿಕದ ಹರಳು ಮಗ ಹೆಚ್ಚs ! ' ಅಂತ ! ಅದs ಹೌದಲ್ಲೋ ನಿನಗ ಬೇಕಾದದ್ದು ?

ನೀಲವ್ವ :— ಈಗ ಮತ್ತ ಅನಬೇಕಾಗತೈತಿ ನೋಡ ನನಗ, ' ಗಂಡಸರ್ಹಾಂಗ ಹೆಂಗಸರು ತೆರಬಾಯಿ ಇಲ್ಲ ! ' ಅಂತ !

ಚಿನ್ನಪ್ಪ :— ತಿಳದ್ಹಾಂಗ ಆತುಬಿಡs ನಿನ್ನ ಕರಳಬಯಕಿ ! ಹೆಣ್ಣs ಆಗಿ ಹುಟ್ಟೇದೀ ಅಂತ; ಮಗನ ಮಾರೀ ನೋಡೂ-ದೇನು ತಡಾ !

ನೀಲವ್ವ :— ಅದೆಲ್ಲಾ ಆತು ! ಈಗ ಒಂದು ಮಾತು ಕೇಳತೀನಿ: ನಿಮ್ಮ ಬೀಮಪ್ಪಕಾಕಾನ ಮನಿಮಂದಿ, ನಮ್ಮ ಜೋಡೀ ಹೀಂಗ್ಯಾಕ ನಡಕೋತಾರ? ಅವರ ಜೋಡೀ ಎಷ್ಟು ಒಳ್ಳೇರೀತಿಂದ ಇರಬೇಕೂ— ಅಂತ ಮಾಡಿದರೂ, ಎಲ್ಲಾರೂ ಸೇರಲಾರದ ದೀಡೀಮಾತs ಆಡತಿರತಾರ !

ಚಿನ್ನಪ್ಪ :— ನಾ ಇದರ ಕಾರಣಾ ಹೇಳಲ್ಯಾ ? ನಾವು ಇಲ್ಲಿಗೆ ಬರೂದs ತಡಾ; ರಾಮಣ್ಣಾ ತಮ್ಮ ಅಪ್ಪಗ ಹೇಳಿ, ತಮ್ಮ ತೋಟಾ ನಮಗ ಕೊಡಿಸಿದ. ಈ ತೋಟ ಹಿರಿ-ಹಿರ್ಯಾರ ಕಾಲದಿಂದ ನಮ್ಮ ಮನಿತನದವರs ಮಾಡಿಕೋತs ಬಂದಿದ್ದರಂತ. ನಾ ಸಣ್ಣಾಂವ ಇದ್ದಾಗಷ್ಟು ಇದು ನಮ್ಮ ಕೈ ತಪ್ಪಿತ್ತು. ಒಳ್ಳೇ ಆಯಕಟ್ಟಿನ ತೋಟ; ತಮ್ಮ ಕೈಬಿಟ್ಟು ನಮಗ ಸಿಕ್ಕಿತೂ ಅಂತ ಅವರು ಹೊಟ್ಟೀಕಿಚ್ಚು ಮಾಡತಾರ ! ಆದರೂ ಬೀಮಪ್ಪಕಾಕಾ ಏನೂ ಅಂಥಾ ಮನಿಶಾ ಅಲ್ಲ; ನನ್ನ ಜೋಡೀ ಪ್ರೀತಿಂದನs ನಡಕೋತಾನ !

ನೀಲವ್ವ :—ಅವನೂ ಸೆಚ್ಚಿಕ್ಯಾಂವ ಅಲ್ಲ ತೊಗೊ ! ಸೇದಾಕ ಚುಟ್ಟಾ ಬೇಕಾದಾಗಷ್ಟು ಸವಿ ಸವಿ ಮಾತಾಡಿಕೋತs ಬಂದು ಕೂಡತಾನ. ನೀನು, ನಿನ್ನ ರಾಮಣ್ಣಾ ಇಬ್ಬರೂ ಸರಳಮನಸಿ-ನವರು ! ಬೆಳ್ಳಗ ಕಂಡದ್ದನ್ನೆಲ್ಲಾ ಹಾಲs ಅಂತೀರಿ !

ಚಿನ್ನಪ್ಪ :—ಎಲ್ಲೀ ರಾಮಣ್ಣಾ....ಎಲ್ಲೀ ನಾನು ! ಅಳ್ಳೀಮರಕ್ಕ ಔಡಲಗಿಡಾ ಹೋಲಿಸಿ ಹೇಳತೀ ನೀನೂ ! ರಾಮಣ್ಣಾ ಅಂದರ ಒಬ್ಬ ಋಷೀ ಇದ್ದ್ಹಾಂಗ ಅದಾನು; ಅವನ ಸಂಪಕ್ಕ ಯಾರೂ ಬರಲಾಕ ಶಕ್ಯ ಇಲ್ಲ.

ನೀಲವ್ವ :—(ನಗುತ್ತ) ಯಾಕ ? ಇಂದ ಸವಿ ಸವೀ ಪಂಚಾಳ ಜೀನಸಾ ಕಳಿಸ್ಯಾರಂತ, ಈ ಕೊಂಡಾಟ ಸುರೂ ಆತೇನು ?

ಚಿನ್ನಪ್ಪ :— ಇದೇನ ಮಾತs ನಿಂದು ನೀಲೀ ? ನಿಮ್ಮಂತಾ ಹೆಂಗಸರಿಗೆ ಆತನ ವೈಮಾ ಹ್ಯಾಂಗ ಗೊತ್ತಾಗಬೇಕು ?

ನೀಲವ್ವ :— ಮೋಜಿಗೆ ಮಾತಾಡಿದರ ನೀ ಖರೇ ಅಂತs ತಿಳಕೊಂಬಿಟ್ಟೇನು ? ರಾಮಣ್ಣಾ ಒಬ್ಬರs ಯಾಕ ? ಅವರ ಮನಿ-ಯವರು ಎಲ್ಲಾರೂ ದೇವರಂತಾ ಮನಿಸ್ಯಾರು ಅದಾರು ! ಇರಲಿ, ನಾಳೆ ಬ್ಯಾಗನs ಎದ್ದು ತೋಟಕ್ಕ ಹೋಗಬೇಕಲ್ಲಾ ? ರಾತ್ರಿ ಬಾಳ ಆತು ಇನ್ನ ನಿದ್ದೀಮಾಡಿನ್ನ ! (ದೂರದಲ್ಲಿ ನಾಯಿಗಳ ಬೊಗಳಾಟ ಜಗಳಾಟ ಕೇಳುವುದು.)

೩

(ತೋಟದಲ್ಲಿ ನಳನಳ ನೀರು ಹರಿಯುವ ಸಪ್ಪಳ ಕೇಳಬೇಕು. ದೂರ-ದಲ್ಲಿ ಮೊಟ್ಟೆ ಹೊಡೆಯುವ ಸಪ್ಪಳವೂ, ಮೊಟ್ಟೆ ಹೊಡೆಯುವನ ಹಾಡಿನ ಧ್ವನಿಯೂ ಕೇಳಿಸಬೇಕು. ತೋಟದ ಮರಗಳಲ್ಲಿ ಕುಳಿತು ಕೂಗುವ ಪಕ್ಷಿ-ಕೋಟಿಗಳ ಕೂಗುಗಳೂ ಕೇಳಿಸುತ್ತಿರಬೇಕು.)

ನಿವೇದಕ :

ಚಿನ್ನಪ್ಪ ಬೆಳಗಿನಲ್ಲಿ ಬೇಗನೆ ಎದ್ದು ತೋಟದ ಕಡೆಗೆ ಬಂದಿ-ದ್ದಾನೆ. ತೋಟದಲ್ಲಿ ನಳನಳಿಸಿ ಬೆಳೆದ ಬೆಳೆಗಳನ್ನೆಲ್ಲ ಹಿಗ್ಗು-ಗಣ್ಣಿಂದ ನೋಡುತ್ತ ಸುತ್ತುತ್ತಲಿದ್ದಾನೆ. ಸುತ್ತುತ್ತ ಸುತ್ತುತ್ತ ಕಬ್ಬಿನ ತೋಟದ ಬಳಿಯಲ್ಲಿ ಬಂದು ನಿಂತಾಗ, ಅವನ ದಾಯಾದಿ ಭೀಮಪ್ಪಕಾಕಾ ಅವನನ್ನು ಮಾತನಾಡಿಸುತ್ತ ಬಂದ :

ಭೀಮಪ್ಪ :— (ಒಣಕೆಮ್ಮು ಕೆಮ್ಮುತ್ತ) ಯಾಕೋ ಚಿನ್ನಾ ? ಬೆಳಗ್ಗೆ ಎದ್ದವನs ತೋಟದ ಕಡೇನs ಬಂದ್ಹಾಂಗ ಕಾಣತೈತಿ ? ನಿಮ್ಮ ಯಜಮಾನ ರಾಮಣ್ಣ ದೊರೀ ಕಡೆ ಹೋದ್ಹಾಂಗ ಕಾಣೂ-ದಿಲ್ಲ ಇಂದ !

ಚಿನ್ನಪ್ಪ :— ಇಂದ ಆ ಕಡೆ ಹೋಗಲಿಲ್ಲೇಳ ಕಾಕಾ ! ತ್ವಾಟ-ದಾಗ ಒಂದೀಟು ಅವಸರದ ಕೆಲಸ ಇತ್ತs....ಅದಕ್ಕ, ಮುಂಜಾಲೇ ಎದ್ದವನs ಇಕಡೇ ಬಂದುಬಿಟ್ಟೆ.

ಭೀಮಪ್ಪ :— ಹಾಡಾತು ಬಿಡು ! ಈ ಬಾರೇ ಕಬ್ಬು ಮಾತ್ರ ಒಳೇ ಬೆಳೀ ಬೆಳದೈತಿ ನೋಡು ! (ಕೆಮ್ಮುತ್ತ) ಚುಟ್ಟಾ ಅದಾವೋ ಏನು.... ಬತ್ತೀ ಕಟ್ಟಿ ತಂಬಾಕು ಹಾಕಲ್ಯೋ ?

ಚಿನ್ನಪ್ಪ :— ಹೇ ! ಅದ್ಯಾಕ, ಚುಟ್ಟಾ ಅದಾವು ತೋಗೋ ! ರಾಮಣ್ಣಾ, ಈ ವರಸ ಎಂತಾದೋ— ಗೊಬ್ಬರಾ ತರಿಸಿಕೊಟ್ಟರು ! ನಾನೂ ನೋಡೇ ಬಿಡೂಣಂತ ಪುರಮಾಸೇ ಹಾಕಿಸಿದೆ; ಕಬ್ಬು ಬೆಳದೈತಿ ನೋಡು ಕಾಕಾ; ಒಂದೊಂದು ಕಬ್ಬಿನ ಗಳಾ, ಮನಿ-ಸ್ಯಾನ ಎತ್ತರಕ್ಕ ಉದ್ದ ಆಗೇತಿ !

ಭೀಮಪ್ಪ :— ಏನs ಅನ್ನು, ಬೆರಿಕೀ ಮಂದಿ ನೋಡು ಅವರು ! ನಿನ್ನ ಗೊಬ್ಬರ ಕರ್ಚು, ನಿನ್ನ ದುಡಿತ ! ಗೊಬ್ಬರಾ ತರಿಸಿ ಕೊಟ್ಟದ್ದಷ್ಟು ದೊಡ್ಡ ಉಪಕಾರ ! ಹ್ಯಾಂಗೂ ಬೆಳದ ಬೆಳೀ ಒಳಗ, ಸರಿಪಾಲಕ್ಕ ಮಾಲಕರಾಗಿ ಬಂದs ಬರತಾರು ! ಹಾಕಿದ ಗೊಬ್ಬರಕ್ಕಾಗಿ ಹೆಚ್ಚಿನ ನೀರೂ, ಹೆಚ್ಚಿನ ದುಡತಾ ಇರತೈತಂತ. ನಿನಗ ಹೆಚ್ಚಿನ ಪಾಲೇನೂ ಸಿಗೂ ಹಾಂಗಿಲ್ಲಾ ಏನಿಲ್ಲಾ ! (ಕೆಮ್ಮುತ್ತ) ಒಂದೀಟು ಕಡ್ಡೀ ಪೆಟಿಗೀ ತಾ ಇತ್ತ; ಬರೂಮುಂದ ಮನ್ಯಾಗ ಮರತs ಬಂದೀನಿ ನಾ !

ಚಿನ್ನಪ್ಪ:— ಅದ್ಯಾಕ, ನನ್ನ ಹತೀಲಿ ಐತಿ ತೋಗೊ! (ಕಡ್ಡೀ ಪೆಟ್ಟಿಗೆಯನ್ನು ಕೊಡುತ್ತ) ಕಾಕಾ! ಅವರಿಗೇನು ಅನ್ನೂ ಹಾಂಗಿಲ್ಲ ನಾವು! ತರಿಸಿಕೊಟ್ಟ ಗೊಬ್ಬರ ಖರ್ಚು ನನ್ನ ಅವರು ಕೇಳೇ ಇಲ್ಲ!

ಭೀಮಪ್ಪ:— ಇದರಾಗs ಇರೂದೋ ಎಲ್ಲಾ ನೋಡು! ನಾಕಾರು ರೂಪಾಯಿ ಕೈಯಿಂದs ಖರ್ಚು ಮಾಡಿದ್ಹಾಂಗ ಮಾಡಿ, ನಮ್ಮ ಮ್ಯಾಲ ಉಪಕಾರದ ಹೊರೀ ಹೊರಿಸಿದ್ಹಾಂಗ ಮಾಡೋದು! ನಮ್ಮನ್ನ ಸ್ವಾಮುರೀ ದುಡಿಸಿ, ಆದರ ಪಾಯಿದೇಕ ತಾವು ಮಾಲಕರಾಗೂದು (ಕಡ್ಡಿಯನ್ನು ಕೊರೆದು ಚುಟ್ಟವನ್ನು ಹೊತ್ತಿಸಿ ಸೇದಿ, ಕೆಮ್ಮಲು ತೊಡಗುವನು ಕೆಮ್ಮುತ್ತಲೇ) ಚುಟ್ಟಾ ಎಲ್ಲೀವೋ ಇವು? ತಂಬಾಕು ಬಲಿ ಹಡಾ ಪಾಡ್ಯಾರ ನೋಡು!

ಚಿನ್ನಪ್ಪ:— ಚುಟ್ಟಾ ಪಾಡ ಅದಾವಲ್ಲ? ಮೊನ್ನೆ ಮೊನ್ನೆ ರಾಮಣ್ಣ ಗದಗಿಗೆ ಹೋಗಿ ಬಂದರಲಾ....ಬರೂ ಮುಂದ, ನನಗ ಇರಲೀ ಅಂತ ಒಂದು ದೊಡ್ಡ ಬಂಡಲ್ಲs ತಂದು ಕೊಟ್ಟಾರ ನೋಡು! ನೀ ಉಳದ ಮಂದೀ ಮಾತು ಏನs ಹೇಳು ಕಾಕಾ! ಕುಲಕರ್ಣ್ಯಾರ ವಿಷಯಕ್ಕ ನಿನ್ನ ಮಾತು ಹೊಂದೂದಿಲ್ಲ. ಒಂದs ಗೊಬ್ಬರಕ್ಕ ಆರಿಪ್ಪತ್ತು ರೂಪಾಯಿ ಕಿಸ್ಮತ್ತು ಬಿತ್ತಂತ; ಆದರ ಒಂದs ಒಂದು ಪೈ ನನ್ನ ಕೇಳಲ್ಲ.... ರಾಮಣ್ಣ!

ಭೀಮಪ್ಪ:—ರಾಮಣ್ಣ, ರಾಮಣ್ಣ! ರಾಮಣ್ಣನ ಪವಾಡಾ ಎಷ್ಟು ಹೊಗಳಿದರೂ ನಿನಗ ಸಾಕಿಲ್ಲ ನೋಡಲೇ ಚಿನ್ನಾ! ಅದs ಒಂದು ಮಾತಿನ ಸಲುವಾಗಿ ನಿನಗ ಎಚ್ಚರಿಕೀ ಕೊಡಬೇಕೆಂತ ಬಾಳ ದಿನದಿಂದ ಮನಸಿನ್ಯಾಗ ಬಂದು ಬಂದು ಹೋಗತೈತೀ; ಆದರ ನಿನಗ ನಿನ್ನ ರಾಮಣ್ಣ ಹುಚ್ಚು ಹಿಡಿಸಿ ಬಿಟ್ಟಾನ (ಕೆಮ್ಮುವನು) ಹೇಳಿದರ ಹ್ಯಾಂಗೋ ಬಿಟ್ಟರ ಹ್ಯಾಂಗೋ ಅಂತ, ಇಲ್ಲೀತನಕಾ ನಾ ನಿನ್ನ ಮುಂದ ಬಾಯಿಬಿಟ್ಟಿಲ್ಲೇನಪಾ!

ಚಿನ್ನಪ್ಪ:— ಛೇ ಛೇ! ಹೀಂಗಂದರ ಹ್ಯಾಂಗಾದೀತು? ಹೇಳಬೇಕಾದ ಮಾತು ಹೇಳಲಾಕs ಬೇಕು! ನಿನ್ನ ಬಿಟ್ಟರ ನಮಗ ಬ್ಯಾರೇ ಹಿರ್ಯಾರು ಯಾರ ಅದಾರು ಹೇಳು!

ಭೀಮಪ್ಪ:— ಅವಶ್ಯs. ಹೇಳಿದೆನೋ! (ಕೆಮ್ಮುವನು) ನಿಮ್ಮ ಅವ್ವ.... ಅದೊಂದು ಅರಹುಚ್ಚಿಯಂಥಾದು! ನೀನೋ ಹೊಲಾ ತ್ವಾಟಾ ಅಂತ ಯಾವಾಗ ನೋಡಿದರೂ ಹೊರಗs ಇರತೀ! ನಿನ್ನ ಹೇಣತಿ ಏನಪಾ, ಮುದಿಕಿ ಅಲ್ಲಾ ಅದಿಕಿ ಅಲ್ಲಾ! ಇನ್ನs ಹರೇದ ಹುಡಿಗಿ! ಹೆಂಗಸರಿಗೆ ಸಿಕ್ಹಾಂಗs ಸ್ವಾತಂತ್ರ್ಯ ಕೊಡೂದೇನು ಪಾಡಲ್ಲ ಬಿಡು! ಎಡಗಣ್ಣೂ ಬಲಗಣ್ಣೂ ಅವರನ್ನ ನೋಡತಿರಬೇಕು! ನಿನ್ನ ಕಿವಿಗೂ ಏನೇನಾರೆ ಸುದ್ದಿ ಬಂದು ಮುಟ್ಟಿರಬೇಕು! (ಕೆಮ್ಮುವನು.)

ಚಿನ್ನಪ್ಪ:—ಸುದ್ದಿ ಗೋಳಿಗೇನು ಕಾಕಾ! ಹದಿನೆಂಟುಮಂದಿ ಹದಿನೆಂಟು ರೀತಿಯಿಂದs ಹುಟ್ಟಿಸತಿರತಾರ! ಕಣ್ಣಿದ್ದೂ ಕುರುಡ ಜನಾ! ಯಾವ ಮಾತಿಂದೂ ವಿಚಾರ ಇರೂದಿಲ್ಲಾ ಏನಿಲ್ಲಾ! ಯಾವುದನ್ನೂ ಒಳ್ಳೇ ರೀತಿಂದs ಇದ್ದದ್ದನ್ನ, ಸುಮ್ಮನs ಕಣ್ಣಿಂದ ನೋಡಲಾರದು!

ಭೀಮಪ್ಪ:—ಚಿನ್ನಾ, ನೀ ಏನಾದರೂ ಯಾಕ ಅನವ್ರೋಲ್ಲಿ! ನೀಲವ್ವನ ಸಲುವಾಗಿ ನನಗ ಹೆದರಿಕೀನs ಬರಲಾಕ ಹತ್ತೈತ್ಯೋ. ನೀ ಏನ ನನಗ ದೂರದವನs? ನಿನ್ನ ಮಾನಾ ಅಂದರ ನನ್ನ ಮಾನ; ನಿನ್ನ ಅಪಮಾನಾ ಅಂದರ ನನ್ನ ಅಪಮಾನ! ಅಲ್ಲೋ ಆ ರಾಮಣ್ಣ ನಿನ್ನ ಯಜಮಾನ ಆದಷ್ಟಕ್ಕ ಏನ ಆದ್ಹಾಂಗಾತು? ನಿನಗs ಅಂವಗs ಗೆಣೆತಾನ ಇದ್ದದರೂ ಏನಾತು? (ಕೆಮ್ಮುತ್ತಲೇ) ಹೆಂಗಸೂ ಗಂಡಸೂ ಅಂದ ಮ್ಯಾಗ, ಇದೂ ಹಾಂಗs ಇರಬೇಕು. ಅಲ್ಲಪಾ.... ಅಂವೇನ ಮುದಕs ತದಕs....ಇನ್ನೂ ಹರೇದ ಭಾರ ಏನಪಾ! ಹಂತವನ ಸಂಗತೀ ನಿನ್ನ ಹೇಣತೀ ಸಲಿಗಿ ಇಷ್ಟ್ಯಾಕಪಾ? ಮಾತ್ಯಾಕ, ಕತಿಯಾಕ, ನಗಚಾಟಿಕಿ ಯಾಕ? ಏನಪಾ ಇದು ಹುಡುಗಾಟಾ! ನನಗೇನೂ ಇದು ಸಂಪಾ ಕಾಣೂದಿಲ್ಲ ಬಿಡು!

ಚಿನ್ನಪ್ಪ:— ಇದರಾಗೇನು ತಪ್ಪು ಐತ್ಯೋ ಕಾಕಾ! ನಾ ನಿಮ್ಮ ಪಾರೋತಿ ಸಂಗತಿ ಮಾತಾಡೂದಿಲ್ಲೇನು? ರಾಮಣ್ಣ ನೀಲಾನ್ನ ಬೆನ್ನಲ್ಲಿ ಬಿದ್ದವಳ್ಹಾಂಗ ತಿಳಕೊಂಡಾನ! ಈ ಮಾತಿನಾಗ ಒಂದ ಎಳ್ಳಿನಷ್ಟೂ ನನಗ ಸಂಸೇ ಬರೂದಿಲ್ಲ ನೋಡು! ರಾಮಣ್ಣನ ಮನಸು ಅದೆಷ್ಟು ತಿಳೀಗಂಗೀ ಹಾಂಗ ಐತೀ ಅಂಬೂದನ್ನ ನಾ ಬಲ್ಲೆನಿ! ಆತನ ಸಲುವಾಗಿ ಅಂತರ, ನನಗ ಯಾವ ಸಂಸೇನೂ ಬರಲಾರದು; ತಿಳೀತs?

ಭೀಮಪ್ಪ:— ಹುಚ್ಚನ್ಹಾಂಗ ಮಾತಾಡತೀ ಆತು. (ಕೆಮ್ಮುತ್ತ) ಅಲ್ಲಲೇ ಚಿನ್ನಾ! ನೀ ಇನ್ನೂ ಹುಡಗ; ಸಂಸಾರದ ಕೆಟ್ಟ ಪೆಟ್ಟು ನಿನಗ ಇನ್ನೂ ಬಿದ್ದಿಲ್ಲ! ಅಲ್ಲಪಾ, ಹೀಂಗಿನು ಆಡೂ ಮಾತಲ್ಲ! ಲೋಕದ ರೀತೀ ಯಾರಿಂದ ಬಿಡಿಸಲಿಕ್ಕೆ ಆದೀತು ಹೇಳು! ಬೆಂಕೀ ಹತೀಲೆ ಬೆಣ್ಣೀ ಇಟ್ಟರ, ಅದು ಕರಗದs ಬಿಡತೈತೇ? ಒಳೇ ಅರಳಿಕೊಂಡು ಕಂಪು ಸೂಸೋ ಸಂಪಿಗೀ ಹೂವು ಕೈಯಾಗ ಸಿಕ್ಹಾಗ, ಮೂಸಿ ನೋಡಬೇಕಂತ ಯಾಂವಗ ಅನಸಾಕಿಲ್ಲ ಹೇಳು! ಹರೇದ ಹೆಣಮಗಳ ಜೋಡೀ ಹೆತ್ತ ತಂದಿ ಸುದ್ದಾ ಹೆಚ್ಚಿಗೆ ಮಾತಾಡಬಾರದಂತ ಶಾಸ್ತ್ರ ಐತಿ! ಈ ಶಾಸ್ತ್ರ ಏನು ಸುಳ್ಳಂತೀಯಾ? ಅಲ್ಲಪಾ! ರಾಮಣ್ಣನ ದೊಡ್ಡಸ್ತಿನಾ ಏನ ಹಚ್ಚೀದೀ ನೀನು? ಅವನೂ ನಮ್ಹಾಂಗs ಉಂಡುಡೂ ಮನಿಸ್ಯಾ; ಅಂವೇನ ದೇವರs.... ಸಾಧೂನs.... ಸಂನ್ಯಾಸೀ? ಅವಂದೇನಪಾ ಹೆಚ್ಚುಗಾರಿಕಿ? (ಗಟ್ಟಿಯಾಗಿ ಕೆಮ್ಮುತ್ತ) ನೋಡಪಾ! ನಿಂದೂ ಅವಂದೂ ಹಾಲೂ-ಹಣ್ಣಿನಂತಾ ಗೆಣೆತಾನಾ! ನಡವ – ಹೊರಗಿನವರು – ನಾವ್ಯಾಕಪಾ ಕೆಟ್ಟವರಾಗಬೇಕು?

ಚಿನ್ನಪ್ಪ:— (ಮರುಕದ ಧ್ವನಿಯಲ್ಲಿ) ಕಾಕಾ ನೋಡು! ನೀ ನಮ್ಮ ನೀಲಿಗೆ ಹೆಸರು ಎನs ಇಟ್ಟರೂ ತಾಳಿಕೊಂಡೇನು. ಆದರ

ರಾಮಣ್ಣನ ಹೆಸರಿಗೆ ಹೊಲಸು ಬಳಿಯೂದನ್ನ ನೋಡಿ ಕಸವಿಸಿ ಆಗತೈತಿ! ಇನ್ನೊನ್ನ್ಮ ಇಂಥಾ ಮಾತನ್ನ ನನ್ನ ಮುಂದ ಆಡ-ಬ್ಯಾಡ ತಿಳೀತs? ರಾಮಣ್ಣ ನಮ್ಮ-ನಿಮ್ಮೊಳಗಿನ ಮನಸ್ಯಾ ಅಲ್ಲ; ಖರೇ ಹೇಳಬೇಕಂದರ ಅಂವೊಬ್ಬ ಸಂತ....ಶರಣ....ಸಾಧೂ!

ಭೀಮಪ್ಪ :—ಗೊತ್ತೈತಿ ಬಿಡೋ! ಇಂತಾ ಕಾಮುಸಾಧುಗಳು ಲೋಕದಾಗ ಬೇಕಾದಷ್ಟು ಮಂದಿ! ಇನ್ನೊಂದು ಚುಟ್ಟಾ ತಾ ಇಲ್ಲೆ! (ಕೊರೆದು ಕಡ್ಡಿ ಹಚ್ಚಿ ಸೇದಿ ಕೆಮ್ಮುತ್ತ) ನೋಡು ಚಿನ್ನಾ! ಬರೇ ಸಾವಿರ ಸಾವಿರ ಮಾತು ಯಾಕ ಆಡಬೇಕು? ಅದರಿಂದ ಉಪಯೋಗರೇ ಏನ ಆಗೂದು? ಒಂದs ಒಂದು ಗಟ್ಟಿಮುಟ್ಟ ಮಾತು ಹೇಳತೀನಿ, ಕೇಳಲ್ಲೆ: ನೀಲವ್ವನ ಸಲುವಾಗಿ ರಾಮಣ್ಣನ ಮನಸು ತಿಳೀ ಏನೂ ಇಲ್ಲ. ನೀ ಬೇಕಾದರ ಪರೀಕ್ಷಾ ಮಾಡಿ ನೋಡೇನಪಾ! ನಾ ಕಣ್ಣಾರೆ ಕಂಡದ್ದೆಲ್ಲಾ ನಿನ್ನ ಮುಂದ ಹೇಳಬೇಕಂದರ, ನನ್ನ ಮನಸು ಒಲ್ಲೇ ಅಂತೈತಿ! ಈಗೇನೂ ನಾ ಹೆಚ್ಚಿಗೆ ಹೇಳೂದಿಲ್ಲ! ಮನಿಗೆ ಬೆಂಕಿ ಹತ್ತೂದಕ್ಕ ಮೊದಲs ನೋಡಿಕೊಂಡು ಬಾಳೇ ಮಾಡೂದು ಒಳ್ಳೇದು....ಎಲಾ! ಪೆಟಿಗ್ಯಾಗಿನ ಕಡ್ಡಿ ಎಲ್ಲಾ ತೀರ್‍ಯಾವಲೋ! ಹೋಗಲಿ ಬಿಡು. ನನಗೂ ಕೆಲಸ ಐತಿ. ಪಾರೀ ಹೊಲಕ್ಕ ಹೋಗಬೇಕು. (ಎದ್ದು ಹೋಗುವನು.)

ಚಿನ್ನಪ್ಪ :— (ತನ್ನೊಳಗೆ ತಾನೇ?) ರಾಮಣ್ಣ?.... ಛೇ! ದೇವರಂಥಾ ಮನಿಸ್ಯಾ! ನೀಲಾ.... ನನ್ನ ನೀಲಾ?....ಛೇ, ಆಕೀ ಮ್ಯಾಲ ಸಂಶಯ ತೋಗೋಬೇಕs? ಆದರ ಭೀಮಪ್ಪ ಕಾಕಾ.... ಅಂವ ಸುಳ್ಳು ಹೇಳೂ ಕಾರಣೇನು? ಇಂತಾ ಮಾತ ಸುಳ್ಳು ಹೇಳಲಾಕ....ಯಾರಿಂದರೇ ಆದೀತೇನು? ರಾಮಣ್ಣ ಗಂಡಸು!.... ನೀಲಿ ಹೆಂಗಸು!....ನಾನs ತಪ್ಪು ತಿಳಕೊಂಡೀನೋ ಏನ ಮಣ್ಣು! (ಕರುಣಾಧ್ವನಿಯಲ್ಲಿ ಪಿಟೀಲಿನ ಧ್ವನಿ)

೪

ನಿವೇದಕ

ಭೀಮಪ್ಪಕಾಕಾನ ಮಾತು ಚಿನ್ನಪ್ಪನಿಗೆ ವಿಷವನ್ನು ಕುಡಿಸದೆ ಬಿಡಲಿಲ್ಲ. ಮಾನವನ ಮಧುರವಾದ ಜೀವನವನ್ನು ಕೆಡಿಸಲಿಕ್ಕೆ ಸಂಶಯವಿಷದ ಒಂದು ಬಿಂದುವಾದರೂ ಸಾಕು; ಆದರೆ ಭೀಮಪ್ಪಕಾಕಾ ಚಿನ್ನಪ್ಪನ ಹೃದಯದಲ್ಲಿ ಸಂಶಯದ ಸಲೆಯನ್ನೇ ಪುಟಿಸಿಬಿಟ್ಟ. ರಾಮಣ್ಣ ಮತ್ತು ನೀಲವ್ವ ಇವರ ಶುದ್ಧ ಚಾರಿತ್ರ್ಯದ ಬಗೆಗೆ ಎಂದೂ ಸಂಶಯ ತೆಗೆದುಕೊಳ್ಳದೆ ಇದ್ದ ಚಿನ್ನಪ್ಪ, ಈಗ ಅಡಿಗಡಿಗೂ ಅವರ ನಡೆ-ನುಡಿಗಳನ್ನು ಸಂಶಯ ಭಾವದಿಂದಲೇ ನೋಡಲು ತೊಡಗಿದ. ಗಂಡನಲ್ಲಾದ ದೃಷ್ಟಿಯ ಬದಲಾವಣೆ, ಗರತಿಯಾದ ನೀಲವ್ವನಿಗೆ ತಿಳಿಯದಿರಲಿಲ್ಲ. ಆದರೆ ಮುಗ್ಧಭಾವದ ರಾಮಣ್ಣನಿಗೆ ಇದರ ಅರಿವು ಸ್ವಲ್ಪವೂ ಆಗಲಿಲ್ಲ. ಎಂದಿನಂತೆಯೆ ಪ್ರೀತಿತುಂಬಿದ ಹೃದಯದಿಂದಲೆ ಮಾತನಾಡುವನು. ರಾಮಣ್ಣನ ಪ್ರೀತಿಯ ಅರ್ಥವನ್ನು ಚಿನ್ನಪ್ಪನ ಶಂಕಿತಹೃದಯ ವಿಪರೀತವಾಗಿಯೆ ಭಾವಿಸಲು ತೊಡಗಿತು. ಮೊದಲಿನಂತೆ, ನೀಲವ್ವ-ರಾಮಣ್ಣ ಮಾತನಾಡುವುದನ್ನೂ ನಕ್ಕು-ನಲಿಯುವುದನ್ನೂ ಚಿನ್ನಪ್ಪ ಸಹಿಸಲಾರದೆ ಹೋದನಾದರೂ, ಯಾವುದೋ ಒಂದು ದಾಕ್ಷಿಣ್ಯಭಾವ, ಆ ಅಸಹನೆಯನ್ನು ಹೊರಗೆ ಕಾಣದಂತೆ ಹತ್ತಿಕ್ಕುತ್ತಿದ್ದಿತು. ಆದರೂ ಅವನ ಕರುಳುಗಳು ಒಳಗೊಳಗೇ ಕುದಿಯುತ್ತಿದ್ದುವು. ಚಿನ್ನಪ್ಪ ಇಂದು ರಾತ್ರಿ ತೋಟದಿಂದ ತಡಮಾಡಿ ಬಂದ. ದುಡಿದು ದಣಿದ ತಾಯಿ ಮಲಗಿ ನಿದ್ದೆಮಾಡುತ್ತಲಿದ್ದಾಳೆ. ಹಸಿವೆಯಾಗಿದ್ದರೂ ಗಂಡನ ದಾರಿಯನ್ನು ಕಾಯುತ್ತ ಕುಳಿತ ನೀಲವ್ವ, ಗಂಡ ಮನೆಗೆ ಬಂದೊಡನೆ ಆತುರದಿಂದ ಎದ್ದು, ಅವನ ಬಳಿಗೆ ಬಂದು ಕೇಳುವಳು:

ನೀಲವ್ವ:— ಯಾಕ, ಇಂದ ಇಷ್ಟ ತಡಾ ಆತು.... ಮನಿಗೆ ಬರಲಾಕ?

ಚಿನ್ನಪ್ಪ:— (ಬಿಗಿದಕಂಠದಲ್ಲಿ) ಏನೋ, ತಡಾ ಆತು!

ನೀಲವ್ವ:— ಯಾಕ? ಹಿಂಗ್ಯಾಕ ಮಕಾ ಬಾಡಿ ಬತ್ತಿ ಆಗೇತಿ? ಮೈಯಾಗ ಪಾಡ ಇಲ್ಲೇನು?

ಚಿನ್ನಪ್ಪ:— ಎಲ್ಲಾ ಪಾಡs! ಪಾಡ ಇರದs ನನಗೇನು ಧಾಡಿ ಆಗೇತಿ?

ನೀಲವ್ವ:— ಇದೇನಿದು ಇಂತಾ ಮಾತು! ಇತ್ತೀಚೆಗೆ ನೀ ಹಿಂಗ್ಯಾಕ ಮಾಡಲಾಕ ಹತ್ತೀದೀಯೋ ನನಗ ತಿಳಿದ್ಹಾಂಗ ಆಗೇತಿ! ಒಂದು ಪ್ರೀತೀ ಮಾತಿಲ್ಲಾ, ನಗೀ-ನಗಚಾಟಕಿಲ್ಲಾ! ಏನೂ ಹೇಳೂದಿಲ್ಲಾ.... ಏನೂ ಕೇಳೂದಿಲ್ಲಾ! ಇದೇನಿದು ಹೊಸಾ ರೀತೀ ಅಂತೀನಿ!

ಚಿನ್ನಪ್ಪ:— ಹುಂ! ಹೊಸಾ ರೀತಿಗೆ ಹೊಸಾ ರೀತಿ! ಇನ್ನ ಹಳೇರೀತಿ ಕಾಣೂದು ನಮ್ಮ ಹಣ್ಯಾಗೇನೂ ಬರದಿಲ್ಲ ಕಾಣತೈತಿ!

ನೀಲವ್ವ:— (ಬೆಚ್ಚಿದ ದನಿಯಲ್ಲಿ) ಇದೇನಿದು. ಇಂತಾ ಮಾತು? ಇಂತಾ ಮಾತಾಡೂ ಪರಸಂಗರೇ ಏನ ಬಂದೈತಿ ಈಗ? ಯಾವ ಮಾತಿನಾಗ ಕಡಿಮಿ ಆಗೇತಿ ನಮಗ? ಸುಮ್ಮ-ಸುಮ್ಮನs ಇಂತಾ ಕೆಟ್ಟ ಮಾತು ಆಡೂದು ಚೆಂದಲ್ಲ!

ಚಿನ್ನಪ್ಪ:— (ನಿಟ್ಟುಸಿರುಬಿಡುತ್ತ) ಚಂದಾ ಚಾಯ- ಎಲ್ಲಾ ಮುಗದು ಹೋತಿನ್ನ!

ನೀಲವ್ವ :— ನೀನs ಆಡತಿಯೋ ಈ ಮಾತು? ಏನು ಅನ್ಯಾಪದಾದರೂ ಗಾಳಿಗೀಳಿ ಮೈಯಾಗ ಸೇರಿಕೊಂಡೈತೊ? (ಅಳುವಧ್ವನಿ) ಯಾಕ ಇಂತಾ ಮಾತು? ಆಗಿರೂದರೇ ಏನೀಗ?

ಚಿನ್ನಪ್ಪ:— (ಸಿಡಿನುಡಿಯಲ್ಲಿ) ನೀಲೀ, ಈ ಸೋಗಿನ ಮಾತು ಸಾಕುಮಾಡಿನ್ನ! ಇಂದ ನಾ ಕುಲಕರ್ಣ್ಯಾರ ಮನಿಗೆ ಬಂದಾಗ, ನಡಮನ್ಯಾಗ ನೀನು, ಆ ರಾಮಣ್ಣ ಇಬ್ಬರs ಕೂತು ಏನೇನು ನಡಿಸಿದ್ದಿರಿ! ಇಬ್ಬರೂ ನಗತಿದ್ದಿರ್‍ಯಾಕ?

ನೀಲವ್ವ :— (ಸಮಾಧಾನ ತಂದುಕೊಂಡು) ಅಯ್ಯೋ ಶಿವನ ! ನಾನು, ಇಂದರಕ್ಕಾ ಇಬ್ಬರೂ ಕೂಡಿ ಪಗಡೀ ಆಡಿಕೋತs ಕೂತಿದ್ದಿವಿ. ರಾಮಣ್ಣಾವರು ನಮ್ಮ ಆಟಾ ನೋಡಿಕೋತs ಬಂದು ಕೂತಿದ್ದರು. ಒಳಗಿಂದs ಅವ್ವ ಇಂದಿರಕ್ಕನ್ನ ಯಾತಕ್ಕೋ ಕೂಗಿದರು. ಇಂದರಕ್ಕ ಎದ್ದು ಅವಸರವಸರದಿಂದ ಹೋಗೂ ಮುಂದ, ಕಾಲು ತೊಡಕಿ ಜೋಲಿ ಹೋಗಿ, ಬೀಳೂ ಹಾಂಗ ಮಾಡಿದರು. ಆದಕ್ಕ ರಾಮಣ್ಣಾ, ' ಸಾವಕಾಶs ಹೋಗವ್ವಾ ! ಬಿದ್ದು ಕೈಕಾಲು ಮುರಕೊಂಡರ, ನಾಳೆ ನಿನ್ನ ಗಂಡಗ ನಾವೇನು ಹೇಳೋಣು ! ' ಅಂತ, ನಗಿಚಾಟಿಕೀ ಮಾಡಿ ನಕ್ಕರು. ನನಗೂ ನಗೀ ಬಂತು; ನಕ್ಕೆ. ಇಂದರಕ್ಕ ಒಳಗ ಹೋದಾಗ, ನೀನೂ ಒಳಗ ಬಂದಿ, ಅಲ್ಲೇ ಹಾಸಿದ ಪಗಡೀ ಪಟ್ಟಿ ಇತ್ತು ನೋಡಲಿಲ್ಲೇನು ? ರಾಮಣ್ಣ ನಿನ್ನ ಬಾ ಅಂತ ಕರೆದರೂ ನೀ ಹಾಂಗs ಹೋದಿ ! ಅವರು ಎಷ್ಟು ಹಳಹಳಿಸಿದರಂತೀ !

ಚಿನ್ನಪ್ಪ :— ಹುಂ, ಹಳಹಳಿಸಿದ್ದಾರು ! ಹೊರತೋರಿಕೆಗೆ ಜನಾ ಬೇಕಾದ್ದು ಮಾಡತಾರ ! ಒಳಗ ಕೊಡತುಂಬಾ ಹೆಂಡ.... ಕೊಡದ ಬಾಯಿಗೆ ಮಾತ್ರ ಹಾಲಿನ ಕೆನಿ !

ನೀಲವ್ವ :— (ಗಾಬರಿಯಿಂದ) ಯಾರು ? ರಾಮಣ್ಣಾಗ ಆಡೂ ಮಾತs ಇವು !

ಚಿನ್ನಪ್ಪ :— ನೀಲೀ, ಅಣ್ಣಾ ಅಪ್ಪಾ ಅಂತ ಯಾಕ ಪಾಪದ ಮಟ್ಟೀ ಕಟಿಗೋಳತೀದಿ ? ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿದರೂ, ಕಣ್ಣು ತಗದ ಲೋಕ ಅದನ್ನ ನೋಡೇ ನೋಡತಿರತೈತಿ !

ನೀಲವ್ವ :— (ಅಳುತ್ತ) ಯಾರಿಗೆ ಏನ ಮಾತಾಡತೀ ಅಂಬೋದು ಬಂದಿಷ್ಟು ನೈವ್ಯಾಗ ಎಚ್ಚರಿರಲಿ !

ಚಿನ್ನಪ್ಪ :— ಎಚ್ಚರಾದ ಮ್ಯಾಲs ಈ ಮಾತು ಮಾತಾಡಲಾಕ ಹತ್ತೀನಿ ನೀಲೀ ! ಇಷ್ಟು ದಿನಾ ಎಚ್ಚರಿಲ್ಲದಾಗ, ಏನ ಮಾಡಿದ್ದೆಲ್ಲಾ ನಡದು ಹೋತು ! ಈಗ ಚೆಂದಾಗಿ ಎಚ್ಚತ್ತು ಕಣ್ಣು ತಗದೀನಿ. ಮೊನ್ನೆ ಚಾವಡ್ಯಾಗ ಕುಂತಾಗ, ನೀ ಮಾಡಿದ ಆಟಾ ಎಲ್ಲಾ ನಾನೂ ನೋಡಿದೆ, ಅಲ್ಲಿ ಕೂತ ಜನಾನೂ ನೋಡಿತು.

ನೀಲವ್ವ :— (ರೋಷ-ದುಃಖಗಳಿಂದ) ನಾ ಏನು ಆಟಾ ಮಾಡಿದೆ ? ಜನಾ ನೋಡಿದ್ದೇನು ?

ಚಿನ್ನಪ್ಪ :— ನೀಲೀ, ಅತ್ತು ಅಂಜಿಕೀ ತೋರಿಸಬ್ಯಾಡ ! ಆ ದಿನಾ ನೀವು ನಾಕೈದು ಜನಾ ಹೆಣ್ಣುಮಕ್ಕಳು ಕೂಡಿ ನೀರು ತರೂಮುಂದ, ಚಾವಡ್ಯಾಗ ನಾವು ಕುಂತಿದ್ದಿವಿಲ್ಲೋ ? ಅಲ್ಲೇ ರಾಮಣ್ಣನೂ ಇದ್ದನೋ ಇಲ್ಲೋ ? ಚಾವಡೀ ಮುಂದ ಹಾಯ್ದು ಹೋಗೋಮುಂದ, ಎಲ್ಲಾರ್‍ನೂ ಬಿಟ್ಟು ರಾಮಣ್ಣನ ಕಡೆ ನಕ್ಕೋತs ನೋಡಿದಿಯೋ ಇಲ್ಲೋ ನೀನು ?

ನೀಲವ್ವ :— ಅಯ್ಯೋ ದೇವರs ? ಇದೇನು ಮಾತಿದು ? (ಅಳುತ್ತ) ನಾನು ರಾಮಣ್ಣಾವರ ಕಡೇ ನೋಡೇ ಇಲ್ಲ. ಜೋಡೀ ಇದ್ದ ಹೆಂಗಸರು ಏನೇನೋ ನಗಿಚಾಟಿಕೀ ಮಾತಾಡತಿದ್ದರು. ಚಾವಡೀ ಹತ್ತೀಲೆ ಹಾದು ಹೋಗೋ ಮುಂದ, ನನ್ನ ಮಾರೀಮ್ಯಾಗ ಮೂಡಿದ ನಗೀ ಹಾಂಗs ಇದ್ದದ್ದು ಮಾತ್ರ ಖರೆ ! ಅಲ್ಲಾ, ಇದೇನು ಮಾತಿದು ! ರಾಮಣ್ಣ ಅಂದರ ದೇವರ ಅವತಾರ.... ಶಿವಶರಣಾ— ಅಂತ ನೀನs ಹೇಳತಿದ್ದಿಲ್ಲs ?

ಚಿನ್ನಪ್ಪ :— ನೀಲೀ ಇನ್ನ ಹೆಚ್ಚಿಗೆ ಮಾತಾಡಬ್ಯಾಡ ! ಇಂದಿನಿಂದ ನೀನು ಕುಲಕರ್ಣ್ಯಾರ ಮನಿಗೆ ಕಾಲು ಹಾಕೂ ಕಾರಣಿಲ್ಲ ! ತಿಳೀತೇನು ! (' ಅಯ್ಯೋ ಶಿವಶಿವಾ ! ' ಎಂಬ ಉದ್ಗಾರದೊಂದಿಗೆ ನೀಲವ್ವನ ಅಳುವು. ಪಿಟೀಲಿನ ಸ್ವರದ ಸಂವೇದಕ ಧ್ವನಿ.)

೫

ನಿವೇದಕ

ನಾಲ್ಕಾರು ದಿನಗಳಿಂದಲೂ ಚಿನ್ನಪ್ಪ ಮನೆಗೆ ಬಾರದೆ ಇದ್ದುದರಿಂದ ರಾಮಣ್ಣನಿಗೆ ಜೀವನದಲ್ಲಿ ಏನನೊ ಕಳೆದುಕೊಂಡಂತಾಗಿದೆ. ಆತನನ್ನು ಕಾಣಬೇಕೆಂಬ ಹಂಬಲು ಹೆಚ್ಚಿ, ತಾನೇ ಚಿನ್ನಪ್ಪನ ಮನೆಗೆ ಹೊರಟು ಬಂದಿದ್ದಾನೆ. ಚಿನ್ನಪ್ಪ ತೋಟದಿಂದ ಇನ್ನೂ ಮನೆಗೆ ಬಂದಿರಲಿಲ್ಲ. ಚಿನ್ನಪ್ಪನ ತಾಯಿಯೂ ಮನೆಯಲ್ಲಿ ಇರಲಿಲ್ಲ. ನೀಲವ್ವ ಜೋಳ ಹಸನು ಮಾಡುತ್ತ ಪಡಸಾಲೆಯಲ್ಲಿಯೇ ಕುಳಿತಿದ್ದಾಳೆ. ರಾಮಣ್ಣ ಎಂದಿನ ಸಲುಗೆಯ ಧ್ವನಿಯಲ್ಲಿಯೆ ನೀಲವ್ವನೊಂದಿಗೆ ಮಾತನಾಡುತ್ತಾನೆ:

ರಾಮಣ್ಣ :— ಏನು ನೀಲವ್ವಾ, ಚಿನ್ನ ಇನ್ನೂ ಮನಿಗೆ ಬಂದಿಲ್ಲೇನು ? ಎಷ್ಟು ಹೊತ್ತಾಗೇದಲಾ ?

ನೀಲವ್ವ :— (ಸಂಕೋಚಸ್ವರದಲ್ಲಿ) ಇನ್ನೂ ಬಂದಿಲ್ಲರಿ ! .... ಇಷ್ಟರೊಳಗs ಬರಬೇಕಾಗಿತ್ತು ....ಯಾಕ ಬಂದಿಲ್ಲೋ ಏನೋ !....ಏನಾರೇ ಕೆಲಸ ಇತ್ತೇನರಿ ?

ರಾಮಣ್ಣ :— ಕೆಲಸ ಯಾತರ ಕೆಲಸ ! ಈಗ ಐದಾರು ದಿನಾ ಆತು; ಅವನ ಮಾರೀನs ನೋಡಿಲ್ಲ ನಾನು ! ಮನೀಕಡೇ ಯಾಕ ಬಂದಿಲ್ಲೋ ಏನೋ ! ಅದನ್ನs ನೋಡಿಕೊಂಡು ಬರೂಣಂತ ನಾನು ಹೊರಟುಬಂದೆ.

ನೀಲವ್ವ :— (ಪಿಸುನುಡಿ) ಅಯ್ಯೋ ಪಾಪ ! (ಗಟ್ಟಿಯಾಗಿ) ತ್ವಾಟದಾಗೇನೋ ಕೆಲಸದ ಗಡಬಡಿ ಇರಬೇಕರಿ ! ಈಗ ನಾಕೈದು ದಿನಾ ಆತು.... ನನಗೂ ನಿಮ್ಮ ಮನೀಗೆ ಬರಲಾಕ ಆಗೇ ಇಲ್ಲ. ಮನಿಗೆಲಸದಾಗ ಬಿಡುವು ಸಿಕ್ಕೇ ಇಲ್ಲ; ಇಂದರಕ್ಕ ಏನು ಅಂತಾಳೋ ಏನೋ !

ರಾಮಣ್ಣ :— ಇನ್ನೇನು ಅಂತಾಳ.... ಯಾವಾಗಲೂ ನಿನ್ನ ಹೆಸರನs ಕನವರಸತಾಳ ! ಇರಲಿ, ನಾ ಬಂದಿದ್ದೆ— ಅಂತ ಚಿನ್ನಪ್ಪಗ ಹೇಳs ನೀಲವ್ವಾ ! ಊಟ ಆದ ಕೂಡಲೇ ಮನೀಕಡೇ ಬಾ ಅಂತ ಹೇಳೀನೀ ಅಂತ ಅಂವಗ ಹೇಳು....ತಿಳೀತೇನು ? ಈಗ ನಾ ಹೋಗತೀನಿ !

(ನಾಲ್ಕು ಹೆಜ್ಜೆ ನಡೆದು, ಹೊರಗಿನಿಂದ ಚಿನ್ನಪ್ಪ ಬರುವುದನ್ನು ಕಂಡು ಸಂಭ್ರಮದಿಂದ)

ರಾಮಣ್ಣ :— ಎಲಾ, ಚಿನ್ನ ಬಂದs ಬಿಟ್ಟಿಯಲಾ ! ಅಲ್ಲೋ, ಈಗ ಐದಾರು ದಿನಾ ಆತು, ನಿನ್ನ ಮುಖಾನs ಇಲ್ಲಲೋ ! ಇದೇನು ? ಹೀಂಗ್ಯಾಕಾಗೇದಂತ ನೋಡಲಿಕ್ಕೆ ಬಂದಿದ್ದೆ. ಇರಲಿ, ನಿನ್ನ ಊಟ ಆಗಿಲ್ಲೇನೊ! ಮೊದಲ ಊಟಾ ಮಾಡು ! ಆ ಮ್ಯಾಲ, ಕೆಲಸೇನೂ ಇಲ್ಲದಿದ್ದರ, ನಮ್ಮ ಮನೀಕಡೇನs ಬಂದು ಬಿಡು. ಒಂದು ಹೊಸಾ ಕಥೀ ಪುಸ್ತಕಾ ತರಸೀನೇನಪಾ ! ನಿನ್ನ ಮುಂದs ಓದಬೇಕಂತs ನಾ ಅದನ್ನ ಇನ್ನೂ ತೆರೆದು ಸುದ್ದಾ ನೋಡಿಲ್ಲ.

ಚಿನ್ನಪ್ಪ :— (ತಗ್ಗಿದ ದನಿಯಲ್ಲಿ) ಹ್ವಾಟದಾಗ ಕೆಲಸ ಭಾಳ ಬಿದ್ದೈತಿ; ಬರಲಿಕ್ಕೆ ತೆರವs ಸಿಕ್ಕಿಲ್ಲ ! ... ಹುಂ ! ಊಟಾಮಾಡಿ ಬರತೀನಿ, ನೀವು ನಡೀರಿ ! (ರಾಮಣ್ಣ ಹೋಗುವನು)

ಚಿನ್ನಪ್ಪ :— (ತನ್ನಲ್ಲಿ ತಾನೇ) ಮನೀಗೆ ಬರಲಾಕ ನೆವ್ವಾ ಎಂಥಾದು ತಗದಾನ ನೋಡು ಇಂವ ! ಮನ್ಯಾಗ ನಾ ಇಲ್ಲ; ಅವ್ವ ಇಲ್ಲ; ಒಳೀ ಸಂದು ನೋಡಿಕೊಂಡs ಬಂದಾನ! ಹೀಂಗಾಗದ್ಹಾಂಗ ನಾ ಏನ ಮಾಡಬೇಕೋ, ಯಾವುದೂ ಬಗೀ ಹರಿದ್ಹಾಂಗ ಆಗೇತಿ !

ನೀಲಮ್ಮ :—ಒಳಗ ಎಡೀ ಬಡಿಸಿ ಇಟ್ಟ ಬಂದೀನಿ ! ಕೈಕಾಲು ಮಾರೀ ತೊಳಕೊಂಡು ಊಟಾ ತೀರಿಸಬೇಕಿಲ್ಲೋ ?

ಚಿನ್ನಪ್ಪ :— ಯಾಕೋ ಮೈಯಾಗ ಇಂದ ನೆಟ್ಟಗಿಲ್ಲ; ಈಗೇನೂ ನಾ ಊಟಾ ಮಾಡೂದಿಲ್ಲ! ನಿನ್ನ ಊಟಾ ನೀ ತೀರಿಸು ಬೇಕಾದರ!

ನೀಲಮ್ಮ :— ಆತು, ನಿನಗ ಯಾವಾಗ ಬೇಕನಸತೈತಿ ಆವಾಗ ಉಣ್ಣುವಂತಿ ! ನಿಂದಾದ ಮ್ಯಾಲs ನಾನೂ ಉಣತೀನಿ. (ನಿಟ್ಟುಸಿರು ಬಿಡುವಳು)

ಚಿನ್ನಪ್ಪ :— (ಆಲೋಚಿಸಿದಂತೆ ಮಾಡಿ) ಆಂ....ಹಾಂಗಾದರ ನಡಿ ! ಹ್ವಾದಷ್ಟು ಈಗs ಉಂಡು, ಆ ಮ್ಯಾಗ ಮಲಕೊಂಡು ಬಿಡತೀನಿ! (ತನ್ನಷ್ಟಕ್ಕೆ ತಾನೇ) ಏನು ಊಟೋ ಏನೋ ! ಬೆಲ್ಲದ್ಹಾಲು ಸುದ್ದಾ ಬೇವಿನ ರಸಾ ಆಗೇತಿ ಬಾಯಿಗೆ ! ಅಯ್ಯೋ ನನ್ನ ಬಾಳೇನs ! (ಎದ್ದ ಹೋಗುವನು.)

೬

ನಿವೇದಕ

ನೀಲಮ್ಮನ ತವರೂರಲ್ಲಿ ಜಾತ್ರೆ, ಜಾತ್ರೆಗಾಗಿ ಎಲ್ಲರನ್ನೂ ಕರೆದುಕೊಂಡು ಹೋಗಲಿಕ್ಕೆಂದು ನೀಲಮ್ಮನ ತಂದೆ ಹೊನ್ನಪ್ಪ ಬಂದಿದ್ದಾನೆ. ಅಳಿಯನೊಂದಿಗೆ ಮಾಡನಾಡುತ್ತಲಿದ್ದಾನೆ :

ಹೊನ್ನಪ್ಪ :— ಎಲ್ಲಾರೂ ಜಾತ್ರಿಗೆ ಬರಬೇಕಪಾ ಚಿನ್ನಾ. ಈ ವರಸದ ಜಾತ್ರಿ ಬಾಳ ಜಡಕಲೀ ಆಗೂದೈತಿ. ಸಾವಿರ ರೂಪಾಯಿ ಪಟ್ಟೀ ಕೂಡಿಸ್ಯಾರ !

ಚಿನ್ನಪ್ಪ :— ಚೀ, ಚೀ, ಚೀ, ಚೀ ! ನನಗೇನ ಬರಲಾಕ ಆಗತೈತೆಪಾ ! ಒಂದಿಟೂ ಸವಡು ಇಲ್ಲ. ಒಂದs ಒಂದು ದಿನಾ ತ್ವಾಟಾ ಬಿಟ್ಟು ಬ್ಯಾರೇ ಕಡೆ ಹೋಗೂಹಾಂಗಿಲ್ಲ !

ಹೊನ್ನಪ್ಪ :— ಒಕ್ಕಲಿಗ್ಯಾಗ ಕೆಲಸ ಯಾವಾಗ ಇರೂದಿಲ್ಲ ಚಿನ್ನಾ ? ಇವ್ವದ್ವರೊಳಗs ಒಂದೆರಡು ದಿನಾ ತೆರವು ಮಾಡಿಕೊಂಡು ಬರಬೇಕಪಾ ! ಸಿರಗೂರಿನ ಪಾರಿಜಾತ ಆಟ ಬರೂದು ಐತಿ ! ಹೆಸರಾದ ಗಡಿಗೋಳ ಕುಸ್ತಿ ಆಗೂದೈತಿ ! ಕುಸ್ತಿ ಅಂದರ ನೀ ಜೀವಾ ಕಳಕೋತಿರತೀ ! ಅದಕ್ಕs ಏನಾರೇ ಎರಡು ದಿನಾ ಯವಸ್ತಾ ಮಾಡಿ ಬಂದು ಬಿಡ್ರೆಪಾ ಎಲ್ಲಾರೂ !

ಚಿನ್ನ :— ಅದೆಲ್ಲಾ ಖರೇ ಮಾವಾ ! ನನಗೇನೂ ಈಗ ಬರಲಾಕ ಆಗೂದಿಲ್ಲ ಬಿಡು !

ಹೊನ್ನಪ್ಪ :— ಹೀಂಗ ಹಟಾನs ಹಿಡದರ ನಾ ಏನು ಮಾಡಾಕ್ಲಿ ಹೇಳು ಚಿನ್ನಾ ! ಹೋಗಲಿ ನೀಲವ್ವನ್ನರೇ ಕಳಿಸತೀಯೋ ಇಲ್ಲೋ ?

ಚಿನ್ನಪ್ಪ :— (ನಿರಾಶವಾಗಿ) ಆಕಿನ್ನ....ಹುಂ, ಆಕಿನ್ನ ಕರಕೊಂಡು ಹೋಗು!...ಇನ್ನ ನಾಕ ದಿನಕ್ಕ.... ನಾನs ಆಕಿನ್ನ ಅಲ್ಲಿಗೆ ಕಳಿಸಬೇಕಂತ ಮಾಡಿದ್ದೆ. ಆತು, ಈಗ ನೀನs ಬಂದೀದೀಯಲಾ ಕರೀಲಾಕ! ಒಳ್ಳೇದs ಆತು! ಈಗ ಕರಕೊಂಡು ಹೋಗು ! ಕರೀಲಾಕ ನಾನs ಬರತೀನಂತ. ನಾ ಬರೂತನಕಾ ಆಕಿ ಅಲ್ಲೇ ಇರಲಿ !

ಹೊನ್ನಪ್ಪ :— (ಅತೃಪ್ತಿಯ ಧ್ವನಿಯಲ್ಲಿ) ಆತು ಬಿಡು ! ಎಲ್ಲಾರೂ ಬಂದಿದ್ದರ ಪಾಡಾಗತಿತ್ತು. ನೀ ಸವಡಿಲ್ಲಾ ಅಂತ ಹೇಳತಿ! ಇನ್ನೇನು ಮಾಡೂದು? (ನೀಲಮ್ಮ ಬಂದು ಹೇಳುವಳು).

ನೀಲಮ್ಮ :— ಅಪ್ಪಾ, ಅತ್ತೆವ್ವ ಊಟಕ್ಕ ಎಬ್ಬಿಸೂ ಅಂತ ಹೇಳಿದಳು. ಎರಡು ಮೂರು ಸಾರೇ ಬಂದು ನೋಡಿದೆ; ನಿಮ್ಮ ಮಾತೇನೋ ನಡದಿದ್ದೂ ಅಂತ ಸುಮ್ಮಗಿದ್ದೆ. ಏಳ್ರಿನ್ನ ಊಟಕ್ಕ!

ಹೊನ್ನಪ್ಪ:— (ನಗೆಯಾಟದ ಧ್ವನಿಯಲ್ಲಿ) ಊಟದ ಗಡಬಡೀ ಭಾಳ ನಡಿಸಿದೀಯಲ್ಲs ತಂಗೀ ! ನಿಮ್ಮ ಅತ್ತೆವ್ವ ಏನು ಹೋಳಿಗೀ ಮಾಡ್ಯಾಳೋ, ಶ್ಯಾಂವಿಗೀ ಬಸದಾಳೊ !

ನೀಲಮ್ಮ :— (ಒಣಗಿನ ಕಂಠದಿಂದ) ಏನೇನ ಮಾಡ್ಯಾಳೋ, ನೋಡಪಾ ಒಳಗ ಹೋಗಿ ! (ಮಾವ-ಅಳಿಯ ಇಬ್ಬರೂ ಎದ್ದು ಹೋಗುವರು.

ನೀಲಮ್ಮ :— (ಸ್ವಗತ) ಪಾಪ ! ನಮ್ಮಪ್ಪ ನಗಿಚಾಟಿಕೀ ನಡಿಸ್ಯಾನ ! ನನ್ನ ಕರಳಾನ ಸುದತ ಅಂವಗ ಹ್ಯಾಂಗ ತಿಳೀಬೇಕು ? ಈಗ ನಾನು ಅಪ್ಪನ ಜತಿಗೆ ಊರಿಗೆ ಹೋಗಬೇಕೋ, ಹೋಗದs ಇಲ್ಲೇ ಇದ್ದು ಬಿಡಬೇಕೋ ?.... ಹೋದರ ಹ್ಯಾಂಗ ಆದೀತು ?.... ಈ ಜಾತ್ರೀ ನೆವದಿಂದ ನಾಕುದಿನಾ ನಾ ಕಣ್ಣುಮರೀ ಆಗಿ ಹೋಗಿ ಬಿಟ್ಟರ, ಇಂವಗ ಇಲ್ಲೆ ಸಮಾಧಾನ ಆದೀ-

ಕೇನು ?... ಇಂಥಾ ಮನಸಿನ ಉರೀ ಒಳಗ, ಜಾತ್ರೀ ಸುಖಾ ನನಗೇನು ಸಿಕ್ಕೀತು....ಏನs ಆಗಲಿ, ಕೆಲವು ದಿನಾ ಕಣ್ಣಮರೀ ಆಗಿ ಆದರೂ ನೋಡೋಣು. (ನಿಟ್ಟುಸಿರು; ಅದರೊಂದಿಗೆ ಬಿಕ್ಕುವ ಅಳುವ ಶಬ್ದ)

೭

ನಿವೇದಕ

ಜಾತ್ರೆಗೆಂದು ಬಂದ ನೀಲಮ್ಮನನ್ನು— ನಾಲ್ಕು ತಿಂಗಳು ಕಳೆದರೂ—ಚಿನ್ನಪ್ಪ ಕರೆಯಲಿಕ್ಕೆ ಬರಲೇ ಇಲ್ಲ. ತಾನೂ ಬರಲಿಲ್ಲ. ಬೇರೆ ಯಾರನ್ನೂ ಕಳುಹಲಿಲ್ಲ. ಕಲ್ಲಹಳ್ಳಿಯ ಸುದ್ದಿಯೇನೂ ನೀಲಮ್ಮನಿಗೆ ತಿಳಿದಿಲ್ಲ. ಆದಕ್ಕಾಗಿ ನೀಲಮ್ಮ ಹಗಲಿರುಳೂ ದುಃಖಿಸುವಳು. ತಂದೆ-ತಾಯಿ ಎಷ್ಟು ಸಮಾಧಾನದ ಮಾತುಗಳನ್ನು ಹೇಳಿದರೂ ಆಕೆಯ ಮನಸ್ಸಿಗೆ ಶಾಂತಿಯಿಲ್ಲ. ಇದೀಗ ತಾಯಿ-ಮಗಳು ಕುಳಿತು ಮಾತನಾಡುತ್ತಲಿದ್ದಾರೆ :

ತಾಯಿ:—ಇದೇನs ನೀಲವ್ವಾ ! ದಿನದಿನಕ್ಕೂ ಒಣಗಿಕೋತ ನಡದಿ ! ಯಾವಾಗ ನೋಡಿದರೂ ಕಣ್ಣಾಗ ನೀರು ತಪ್ಪಿರೂದಿಲ್ಲ. ಒಂದs ಒಂದು ನಿಟ್ಟುಸಿರು ಬಿಟ್ಟರ, ವರಸದ ಕಸುವು ಕಡಿಮಿ ಆಗತೈತೀ ಅಂತ ಹೇಳತಾರ.... ನೀನು ನಿದ್ದೀ ಒಳಗ ಸುದ್ದಾ ಹಾಂಗs ನಿಟ್ಟುಸಿರು ಹಾಕತಿರತೀ ! ಹೀಂಗ ಮಾಡಬ್ಯಾಡs ನಂತಾಯಿ ! ಸಮಾಧಾನ ತಾಳವ್ವಾ !

ನೀಲಮ್ಮ :— (ಅಳುದನಿಯಲ್ಲಿ) ಏನ ಸಮಾಧಾನ ತಾಳೂದು ಯವ್ವಾ.... ಹ್ಯಾಂಗ ಸಮಾಧಾನ ತಾಳೂದು ! ನನ್ನ ಹಣೀಬಾರದಾಗ ದೇವರು ಇನ್ನಮ್ಯಾಗ ಸಮಾಧಾನಾ ಅಂಬೂದು ಬರದs ಇಲ್ಲೇನೋ ?

ತಾಯಿ :— ಹಿಂಗ್ಯಾಕ ಮಾಡಿದ್ದಾನು ಚಿನ್ನಪ್ಪ ? ಕರೀಲಾಕ ಯಾಕ ಬಂದಿರಲಿಕ್ಕಿಲ್ಲ ! ಅಲ್ಲೆ ನೀ ಇದ್ದಾಗ ಏನರೇ ಆಗಿತ್ತೇನ ?

ನೀಲವ್ವ :— ಏನ ಆಗಿತ್ತಂತ ಹೇಳಲೀ ಯವ್ವಾ ! ನಾ ಇಲ್ಲಿಗೆ ಬಂದೆನಲ್ಲಾ .... ಅದಕಿಂತಾ ಮೊದಲ ಒಂದು ತಿಂಗಳ ಹಿಡದೂ ಅವರ ಮನಸಿನ ಒಳಗ, ನನ್ನ ಸಲುವಾಗಿ ಸಂಶೇ ಹುಟ್ಟೇತೀ ಅಂತ ಅನಿಸಿತ್ತು. ತಲಾ ಬುಡಾ ಇಲ್ಲದ ಸಂಶೇ ಅದು ! ಅದನ್ನ ಹ್ಯಾಂಗ ತಗದು ಹಾಕಬೇಕೆಂಬೂದು ನನಗ ತಿಳೀದ್ಹಾಂಗಾತು. ತಿಂಗಳ ದಿನಾ ಅಂದರ, ಬೆಂಕ್ಯಾಗ ಬಿದ್ದ ಕೀಡೀ ಹಾಂಗ ಮಿಡಿಕ್ಯಾಡತs ಕಾಲಾ ಕಳೆದೆ. ಅಷ್ಟರೊಳಗs ಅಪ್ಪ ಜಾತ್ರಿಗೆ ಕರೀಲಾಕ ಬಂದ. ಕೆಲವು ದಿನಾ ಕಣ್ಣಮರೀ ಇದ್ದಾದರೂ ನೋಡೂಣೂ ಅಂತ ಇಲ್ಲಿಗೆ ಬಂದೆ ! ಯವ್ವಾ, ದೇವರು ನನ್ನ ಮ್ಯಾಗ ಆಕಾಶವ ಕೆಡ್ತೀನs ಚೆಲ್ಲ್ಯಾನ ! (ಗಟ್ಟಿಯಾಗಿ ಅಳುತ್ತ) ಇನ್ನ ನನಗ ಬದುಕು ಯಾತಕ್ಕ ಬೇಕು ಯವ್ವಾ ! ದೇವರು ನನಗ ಲಗೂನs ಸಾವು ತರಬೇಕು !

ತಾಯಿ :— ಹುಚ್ಚೀ ! ಹಾಂಗೆಲ್ಲಾ ಮಾತಾಡಬಾರದು ; ಒಳಿತು ಅನ್ನು ! ಸೂರ್ಯಾ ಚಂದ್ರನಂತವರಿಗೆ ಸುದ್ದಾ ಗ್ರಹಣ ಹಿಡೀತಾವಂತ, ಇನ್ನ ಮನಿಸ್ಯಾರ ಪಾಡೇನು ? ಅಳಬ್ಯಾಡ, ಸುಮ್ಮನಾಗು ! ದೇವರು ಎಲ್ಲಾದರೊಳಗಿಂದನೂ ಪಾರ ಮಾಡತಾನ; ಹುಂ, ಕಣ್ಣು ಒರಸಿಕೊ ! (ಒಮ್ಮೆಲೇ ಗಾಬರಿಗೊಂಡ ಧ್ವನಿಯಲ್ಲಿ) ಇದೇನs ನೀಲವ್ವಾ, ಮೈಮುಟ್ಟಿದರ, ಕಾದ ಹಂಚಿನಾಂಗ ಸುಡತೈತಿ ! ಉರೀ ಬಂದಾವೋ ಏನೋ ! ನಡಿಯವ್ವಾ ಒಳಗ; ಹಾಸಿಗೀಮ್ಯಾಗ ಮಲಕೋ ನಡಿ !

ನೀಲಮ್ಮ :— (ಅಳುದನಿಯಲ್ಲಿ) ಉರಿ !.... ಉರೀ !.... ಹುಂ, ಉರೀ ಬಂದಾವು.... ಎಲ್ಲಾ ಕಡೆಂದನೂ ಉರೀ ಎದ್ದು ಬಂದು ನನ್ನ ಮೈಯು, ಮನಸು, ಕರಳು— ಎಲ್ಲಾನೂ ಸುಡಲಾಕ ಹತ್ತ್ಯು ! ಯವ್ವಾ, ಮಲಗಿದರ ಕಣ್ಣಗಾಗೂ ಉರೀನs ಇದು !

ತಾಯಿ :— (ಕಂಪಿಸುವ ಕಂಠದಿಂದ) ನೀಲಾ, ನಿನ್ನ ಮರಗಾ ನಾ ನೋಡಲಾರೆ ತಾಯಿ ! ದೇವರs ದಯಾ ತೋರಿಸಬೇಕು ! ನಡಿಯವ್ವಾ, ಮಲಕೋ ನಡಿ ! ಉರಿ ಭಾಳ ಬಂದಾವು. (ನೀಲಮ್ಮ ಬಿಕ್ಕುತ್ತಲೇ ಮುಂದುವರಿದ ಶಬ್ದ)

೮

ನಿವೇದಕ

ನೀಲಮ್ಮನ ಜ್ವರ ಅತಿರೇಕಕ್ಕೆ ಹೋಗಲು, ಆಕೆಯ ಕಕ್ಕ ಚಿನ್ನಪ್ಪನನ್ನು ಕರೆಯಲಿಕ್ಕೆಂದು ಕಲ್ಲಹಳ್ಳಿಗೆ ಬಂದ. ಅವನೆದುರು ಚಿನ್ನಪ್ಪ ' ನಾನು ಬರಲಾರೆ; ನೀಲಿ-ರಾಮಣ್ಣರ ಸಂಬಂಧದ ಮಾತು ಗಟ್ಟಿಮುಟ್ಟಾಗಿ ನನಗ ತಿಳಿದು ಹೋಗೆಯ್ತು. ನೀಲೀ ಸಲುವಾಗಿಯಂತೂ ನನ್ನ ಮನಸು ಹೇಸಿ ಹೋಗೆಯ್ತು ! ಇನ್ನ ಆಕೀ ಮಾರಿ ನನಗ ಬ್ಯಾಡ; ನನ್ನ ಮಾರಿ ಆಕೀಗೆ ಬ್ಯಾಡ. ' ಎಂದು ನಿಷ್ಠುರವಾಗಿ ಹೇಳಿ, ಅವನನ್ನು ಹಾಗೆಯೇ ಕಳುಹಿದ. ಇದೆಲ್ಲ ಸುದ್ದಿ ರಾಮಣ್ಣನ ತಾಯಿಗೆ ತಿಳಿಯಿತು. ಅವರಿಗೆ ತುಂಬ ಅಸಮಾಧಾನ. ಇದೀಗ ಹಗಲು ಮೂರು ಗಂಟೆ, ನೆರೆಯೂರಿಗೆ ಹೋಗಿದ್ದ ರಾಮಣ್ಣ, ಮರಳಿ ಬಂದು ಹಸಿದು ಊಟಕ್ಕೆ ಕುಳಿತಿದ್ದಾನೆ. ತಾಯಿ ಊಟಕ್ಕೆ ನೀಡುತ್ತಲಿದ್ದಳು. ಇನ್ನೇನು, ರಾಮಣ್ಣ ಮೊದಲನೆಯ ತುತ್ತನ್ನು ಬಾಯಲ್ಲಿ ಹಾಕಿಕೊಳ್ಳುವವ; ಅಷ್ಟರಲ್ಲಿಯೆ ಅವನ ತಾಯಿ ಹೇಳತೊಡಗಿದಳು.

ತಾಯಿ :— ಪಾಪ, ನೀಲಮ್ಮಗ ಭಾಳ ಕಸಾರಕಿ ಅಂತ ನೋಡಪಾ ! ಚಿನ್ನಪ್ಪನ್ನ ಕರೀಲಿಕ್ಕಂತ ಆತನ ಚಿಕ್ಕಮಾವ ಬಂದಿದ್ದನಂತ.

ರಾಮಣ್ಣ :— ಅಯ್ಯೋ ಪಾಪ ! ಹಾಂಗಾದರ ಚಿನ್ನಪ್ಪ ಹೋದನೇನು ಊರಿಗೆ ?

ತಾಯಿ:— (ಒಂದು ಬಿಗುಹಿನ ಧ್ವನಿಯಲ್ಲಿ) ಇಲ್ಲ... ಹೋಗಲಿಲ್ಲ !

ರಾಮಣ್ಣ :— (ಆಶ್ಚರ್ಯದಿಂದ) ಏನು ? ಚಿನ್ನಪ್ಪ ಹೋಗಲಿಲ್ಲs !

ತಾಯಿ :— ಇಲ್ಲಪ್ಪಾ ! ಚಿನ್ನಪ್ಪ ನಿನ್ನ ಮ್ಯಾಲ ಒಂ ಅಪವಾದಾ ಹೊರಿಸ್ಯಾನಂತ !

ರಾಮಣ್ಣ :— (ಬೆರಗಿನ ಧ್ವನಿಯಲ್ಲಿ) ಅದೇನದು ?.... ನು ಅಪವಾದ ?

ತಾಯಿ :— ಏನೋ, ನೀಲಮ್ಮಗ...... ನಿನಗ ಸಮ್ಮಂಧ ಬೆಚ್ಚೈನಂತ ! ಅದಕ್ಕಾಗಿ ' ನೀಲೀ ಮುಖಾ ನನಗ ಬೇಕಾ-ಲ್ಲಾ ' ಅಂತ ಚಿನ್ನಪ್ಪ ಹೇಳಿ ಕಳಿಸಿಬಿಟ್ಟನಂತ !

ರಾಮಣ್ಣ :— (ಬೆರಗು ಗಾಬರಿಗಳಿಂದ) ಏನೂ ? ನೀಲಮ್ಮಗ ನನಗ ಸಂಬಂಧ ? ಚಿನ್ನಪ್ಪ ಹೀಂಗ ಅಂತಾನಂತs ? ಊಟ ಬಿಟ್ಟು ಸುಮ್ಮನೆ ಕೂಡುವನು.)

ತಾಯಿ :— ಹಿಂಗ್ಯಾಕ ಕೂತಿ ? ಊಟಾ ಮಾಡಲಾ !

ರಾಮಣ್ಣ :— (ಆವೇಶದ ಧ್ವನಿಯಲ್ಲಿ) ಈಗ ಊಟಾ ಮಾಡಲ್ಯಾ ಅವ್ವಾ ! ಎಲ್ಲಿದ್ದಾನ ಚಿನ್ನಪ್ಪ ಅಂವ ? (ದಿಗ್ಗನೆ ಎದ್ದು ಹೊರಡುವನು.)

ತಾಯಿ :— ಇದೇನೋ ! ಹೀಂಗ್ಯಾಕ ಎದ್ದು ನಡೆದ್ಯೋ ರಾಮಣ್ಣಾ ! (ಸ್ವಲ್ಪ ತಡೆದು ಪಶ್ಚಾತ್ತಾಪದ ಧ್ವನಿಯಲ್ಲಿ) ಅಯ್ಯೋ, ಹಸದು ಹಸದು ಬಂದಿದ್ದ. ನಾ ಯಾಕ ಈಗ, ಈ ಸುದ್ದೀ ಹೇಳಿದೆನೋ ನನ್ನ ನಾಲಿಗ್ಗೆ ಮುಳ್ಳು ಮುರೀಲಿ !

ರಾಮಣ್ಣ :— (ಆವೇಶದ ಧ್ವನಿಯಲ್ಲಿ) ಎಲ್ಲಿ ಚಿನ್ನಪ್ಪ ? ಎಲ್ಲಿ ಚಿನ್ನಪ್ಪ ? ಈಗ ಚಿನ್ನಪ್ಪ ಎಲ್ಲಿ ಇದ್ದರೂ ಹೋಗಿ ಕಾಣಬೇಕು ! ಅಯ್ಯೋ ! ನನ್ನ ಚಿನ್ನ, ನನ್ನ ಮ್ಯಾಲ ಇಂಥಾ ಅಪವಾದಾ ಹೊರಿಸಿದನ ? ಛೀ, ಎಂದೂ ಹೊರಿಸಿರಲಾರ ! ಎಂದೂ ಹೊರಿಸಿರಬಾರ ! ಅವನನ್ನೇ ಕೇಳ್ತೇನಿ ! ಚಿನ್ನಾ, ಚಿನ್ನಪ್ಪಾ ! ಚಿನ್ನಪ್ಪ ಎಲ್ಲಿದ್ದಾನ ? ಚಿನ್ನಾ ಚಿನ್ನಾ ಚಿನ್ನಾ ! (ಕರೆ ದೂರದಿಂದ ಕೇಳುತ್ತ ಹೋಗಬೇಕು. ಸಿಡಿಲಿನ ನಾದದ ಹಿನ್ನೆಲೆಯಲ್ಲಿ.)

೮

(ತೋಟದ ವಾತಾವರಣ.)

ನಿವೇದಕ

ಮನೆಯಲ್ಲಿ ಸಮಾಧಾನವೆನಿಸದ್ದರಿಂದ ಚಿನ್ನಪ್ಪ ತೋಟಕ್ಕೆ ಬಂದಿದ್ದಾನೆ. ಇನ್ನಾವುದರ ಕಡೆಗೂ ಆತನ ಲಕ್ಷ್ಯವೇ ಇಲ್ಲ. ಬಂದವನೇ ಗುಡಿಸಲಲ್ಲಿ ಹಾಸಿದ ಚಾಪೆಯ ಮೇಲೆ ಬಿದ್ದುಕೊಂಡಿದ್ದಾನೆ. ತನ್ನಲ್ಲಿ ತಾನೇ ಏನೋ ಗುಣಗುಣಿಸುತ್ತಲಿದ್ದಾನೆ. ಕಿವಿಗೊಟ್ಟು ಕೇಳಿರಿ :

ಚಿನ್ನಪ್ಪ :— (ಸ್ವಗತ) ನೀಲಿಗೆ ಖರೇ ಬಂದಾವಂತ; ಮೈಮ್ಯಾಗ ಎಚ್ಚರಿಲ್ಲಂತ !.... ಆಕಿ ಸಾಯಲಿ ! ಸತ್ತುಹೋಗ-ಬಿಡಲಿ ! ಆಕೀ ಮಾರಿ ಬ್ಯಾಡ ಇನ್ನ ನನಗ !.... ನೀಲಿ ಯಾವಾ-ಗಲೂ ನನ್ನ ನೆನಪುತಗದು ಬಡಬಡಿಸತಾಳಂತ !.... ಬಡಬಡಿಸಲಿ ! ಹಾಂಗs ಸಾಯೂತನಕಾ ಬಡಬಡಿಸಲಿ !.... ನನ್ನ ಮಾರೀ ನೋಡಬೇಕಂತಾಳಂತ !.... ಆಕಿಗೆ ನನ್ನ ಮಾರಿ ಯಾತಕ್ಕ ಬೇಕಂತೋ ! .... ಆಕಿ ಇದರಾಗ ಸಾಯಬಹುದೇನು ?.... ಸತ್ತsಹೋಗತಾಳೇನು ?.... ಹಾಂಗಾದರ ಇನ್ನ ಆಕೀ ಮಾರೀ ನಾನು ನೋಡೂಹಾಂಗs ಇಲ್ಲೇನು ?.... ಅಂ ?.... ನೋಡೂ-ಹಾಂಗಿಲ್ಲ.... ಅಯ್ಯೋ ! ಆಕೀ ಜೋಡೀ ಎಷ್ಟು ಸುಖದಿಂದ ನಾ ಇದ್ದಿನಲಾ ! ಸಣ್ಣಾಕಿದ್ದಾಗಿನಿಂದೂ ಆಕೀ ಮಮತಿ ನನ್ನ ಮ್ಯಾಗ ಭಾಳ !.... ಇಲ್ಲಿ ಬಂದಮ್ಯಾಲರೇ ಏನು ?.... ನಾ ಉಂಡರ ಆಕೀ ಊಟ.... ನಾ ತಿಂದರ ಆಕೀ ತಿನಸು ! ನಾ ನಕ್ಕರ ಆಕೀ ನಗೀ; ನನ್ನ ಮುಖಾ ಸಣ್ಣಗಾದರ ಆಕೀ ಮುಖಾ ಸಣ್ಣಗದು !.... ಅಂದ ಒಂದಿನಾ ಸಂತಿಗೆ ಹೋದಾಗ, ಜೋರಿನ ಮಳೀ ಆತು, ಹಾದ್ಯಾಗ ರಾತ್ರೀ, ವಸ್ತೀಮಾಡಬೇಕಾತು ! ಅಂದ ರಾತ್ರೆಲ್ಲಾ ನೀಲಿ ಚಡಪಡಿಸಿದಳಂತ— ಊಟಾ, ನಿದ್ದೀ ಒಂದೂ ಮಾಡಲಿಲ್ಲಂತ. ನಾ ಬಂದಮ್ಯಾಗ ಅವ್ವ ಹೇಳಿದಳು : ದೇಸಕ್ಕ ಹೊರತು ಆದಾಳ ನೋಡೋ ನಿನ್ನ ಹೇಣ್ತಿ - ಅಂತ !

ಇನ್ನೊಂದ ದಿನಾ ಸೀಗೀ ಹುಣ್ಣಿವಿ ! ದೇವರ ನೇವೇದ್ಯಕ್ಕಂತ ಬೇಕಾದ್ದೆಲ್ಲಾ ಮಾಡಿದ್ದಳು ಅವ್ವ ! ಅಂದ ನನಗ ಮೈಯಾಗ ಹಾಡಿದ್ದಿದ್ದಿಲ್ಲ; ಸವಿಕೂಳು ತಿನ್ನೂ ಹಾಂಗಿದ್ದಿದ್ದಿಲ್ಲ ! ....ನೀಲಿ ಆ ದಿನಾ, ಮಾಡಿದ ಅಡಿಗೀನ ತುತ್ತುಮಾಡಿ ಉಣಲಿಲ್ಲ !

ಆಕಿ ಕುಲಕರ್ಣ್ಯಾರ ಮನಿಗೆ ಹೋಗತಿದ್ದಳು !....ಯಾಕ ಹೋಗ-ತಿದ್ದಳು ? ನನಗ ಬೇಕಾದವರಂತ ಹೋಗತಿದ್ದಳು !....ನಾನs ಹೇಳಿದ್ದೆ ಅಂತ ಅವರೆಲ್ಲಾರ ಜೋಡೀ ಸಲಗಿಂದs ಇರತಿದ್ದಳು....! ನಮ್ಮ ಭೀಮಪ್ಪಕಾಕಾ ಸಂಭಾವಿತ ಮನಿಶ್ಯಾ ಏನು ?....... ನಾಡಾಗಿಲ್ಲದ ಕೆಟ್ಟ ಮನಿಶ್ಯಾ !.... ಹಾಂಗಾದರ ನೀಲಿ ? ಆಕಿ ಕೆಟ್ಟಾಕೆಂಬೂದು ನನಗ ಎಂದ ಕಂಡುಬಂದೈತಿ ?.... ಎಂದ ಕಂಡು ಬಂದೈತಿ ? ಅಂ ? ಎಂದ ಆಕಿ ಕೆಟ್ಟಕೆಲಸಾ ಮಾಡಿದ್ದನ್ನ ನಾ ನೋಡೇನಿ ? ಇಲ್ಲ....ಎಂದೂ ನೋಡಿಲ್ಲ !

(ದಿಗ್ಗನೆ ಎದ್ದು ಕುಳಿತು ಆವಿಷ್ಟನಾಗಿ ನುಡಿಯುವನು.)

ನೀಲಾ ! ನೀನು ಖರೇನಂದರೂ ಕೆಟ್ಟಿಲ್ಲ ಹೌದಲ್ಲೊ ? ಆ ರಾಮಣ್ಣ ನಿನ್ನ ಮೈಯನ್ನ ಮುಟ್ಟಿಲ್ಲ ಹೌದಲ್ಲೊ ?

(ಒಮ್ಮೆಲೆ ರಾಮಣ್ಣ ಅಲ್ಲಿ ಪ್ರವೇಶಿಸುವನು)

ರಾಮಣ್ಣ :— (ಆವೇಶದಲ್ಲಿಯೆ) ಚಿನ್ನಾ, ಏ ಚಿನ್ನಾ, ಇದೇನೋ ನಿನ್ನ ಮಂಕತನ? ಇದು ಎಂಥಾದನಾ ನನಗ ಸಿಡಿಲಿನ ಹೊಡತ ? (ಚಿನ್ನಪ್ಪ ಸುಮ್ಮನೆ ಇರುವನು. ರಾಮಣ್ಣ ಅಳುತ್ತ-ಅಳುತ್ತ) ಅಯ್ಯೋ ಚಿನ್ನಾ ! ನನ್ನ ತಂಗಿ ಇಂದಿರಕ್ಕನ ಕೂಡಾ ನನ್ನ ಹೋಲಿಸಿದ ಪಾಪಾ ಕಟಿಕೊಂಡೆಯಲ್ಲೋ ಚಿನ್ನಾ !

(ಚಿನ್ನಪ್ಪನ ನಿಟ್ಟುಸಿರು ಕೇಳುವುದು).

ಏ, ಚಿನ್ನ್ಯಾ, ನಾ ಎಂದೂ ನಿನ್ನ ಮ್ಯಾಲ ಸಿಟ್ಟಿಗೆದ್ದಿಲ್ಲ ! ನಿನ್ನ ಒಂಟಿ ಹೆಸರಿನಿಂದ ಕರೆದಿಲ್ಲ ! ಅಯ್ಯೋ ಚಿನ್ನ್ಯಾ ! ನೀಲಮ್ಮನ್ನ ನನ್ನ ಇಂದಿರಕ್ಕನ ಸರೀ ಅಂತ ತಿಳಿಕೊಂಡಿದ್ದೆನಲ್ಲೋ ! ನೀನು ನನ್ನನ್ನೂ ಕೊಂದಿ.... ಆಕಿನ್ನೂ ಕೊಂದುಬಿಟ್ಟೆ ಅಲ್ಲೋ ! ನೀ ಮನಿಶ್ಯಾ ಅಲ್ಲ, (ರೋಷದಿಂದ) ದನಾ ! ರಾಕ್ಷಸ ! ಭೂತ ! ಪಿಶಾಚಿ ! ಅಯ್ಯೋ ತಂಗೀ ನೀಲಮ್ಮಾ ! ನೀಲಮ್ಮಾ !

(ಅಳುತ್ತ ಚಿನ್ನನ ತೊಡೆಯ ಮೇಲೆ ತಲೆಯನ್ನಿಡುವನು. ಸ್ವಲ್ಪ ತಡೆದು ಚಿನ್ನಪ್ಪ ಕೂಗುವನು.)

ಚಿನ್ನಪ್ಪ :— (ನಡುಗುವ ಧ್ವನಿಯಲ್ಲಿ) ರಾಮಣ್ಣಾ !

ರಾಮಣ್ಣ :— ರಾಮಣ್ಣ ಸತ್ತುಹೋದ ! ಇನ್ನ ಚಿನ್ನಪ್ಪಗ ರಾಮಣ್ಣ ಇಲ್ಲ !

ಚಿನ್ನಪ್ಪ :— ರಾಮಣ್ಣಾ !

ರಾಮಣ್ಣ :— ಚಿನ್ನಾ !

ಚಿನ್ನಪ್ಪ :— ರಾಮಣ್ಣಾ ! ಏನೂ ತಿಳೀಲಾರದ ನಿನ್ನ ತಮ್ಮ ನಾನು ! ವಿಷವ್ಯಾಳ್ಳಿ ! ನನ್ನಿಂದ ದೊಡ್ಡ ತಪ್ಪಾತು ನಿಜ ! ಈ ತಪ್ಪನ್ನ ತಾಳಿಕೋಬೇಕು ನೀನು !

(ರಾಮಣ್ಣ ಒಮ್ಮೆಲೆ ಮೇಲಕ್ಕೆದ್ದು)

ರಾಮಣ್ಣ :— (ಕಳವಳದ ಧ್ವನಿಯಲ್ಲಿಯೆ) ನನ್ನ ಚಿನ್ನನ ನೂರು ತಪ್ಪುಗಳನ್ನೂ ನಾ ತಾಳಿಕೋತೀನಿ ! ಆದರ ನಾ ಹೇಳಿದ ಮಾತು ನೀ ಕೇಳ್ತೀಯಾ ?

ಚಿನ್ನಪ್ಪ :— (ಪಶ್ಚಾತ್ತಾಪದ ಧ್ವನಿಯಲ್ಲಿ) ಬೆಂಕೀ ಒಳಗ ಹಾರೂ ಅಂತ ನೀ ಹೇಳಿದರೂ ಹಾರಿಕೋತೀನಿ ರಾಮಣ್ಣಾ ! ಅಯ್ಯೋ ರಾಮಣ್ಣಾ! ನಿನ್ನ ಹೂವಿನಂತಾ ಎದೀನ, ಏನೂ ತಿಳೀದs ತುಳಿದು ಬಿಟ್ಟೆ ! ಪಾಪಿ ನಾನು ರಾಮಣ್ಣಾ !

ರಾಮಣ್ಣ :— ಚಿನ್ನಾ, ಈ ಮಾತನ್ನ ನೀನು ತಿಳಕೊಂಡು ಆಡತೀಯಾ ? ಹಾಂಗಾದರ ನನ್ನ ಮಾತು ಕೇಳು ! ನಾಳಿನ ದಿನಾನs ನೀನು ನೀಲಮ್ಮನ್ನ ನೋಡಲಿಕ್ಕೆ ಹೋಗಲಿಕ್ಕೇಬೇಕು ! ಈ ನನ್ನ ಮಾತನ್ನ ನಡಸತೀಯಾ ಚಿನ್ನಾ ?

ಚಿನ್ನಪ್ಪ :— ರಾಮಣ್ಣಾ ! ನಿನ್ನದೇವತನಾ ಗೊತ್ತಿದ್ದೂ ನಾನು ಮೋಸಕ್ಕ ಬಿದ್ದೆ ! ಇನ್ನಮ್ಯಾಲ, ನಿನ್ನ ಯಾವದs ಮಾತನೂ ಮೀರೂದಂದರ, ದೊಡ್ಡ ಪಾಪಾ ಅಂತ ತಿಳಿದೀನಿ !

ರಾಮಣ್ಣ :— (ಸಮಾಧಾನದ ಸ್ವರದಲ್ಲಿ) ಹಾಂಗಾದರ, ಮನೀಗೆ ನಡೀ ಚಿನ್ನಾ ! ನಂದೂ ಮುಂಜಾನಿಂದs ಊಟ ಆಗಿಲ್ಲ : ನೀನೂ ಊಟಾನs ಮಾಡಿಲ್ಲಂತ ! ನಮ್ಮ ಮನಿಗೆ ನಡಿ ! ಇಬ್ಬರೂ ಕೂಡೇ ಊಟಾ ಮಾಡೂಣಂತ !

ಚಿನ್ನಪ್ಪ :— ಅಯ್ಯೋ ಕುರುಡ ಚಿನ್ನಾ ! ರತ್ನಾನ ಕಾಡು-ಗಲ್ಲಂತ ತಿಳದಿದ್ದೆಲ್ಲೋ !

೧೦

(ನೀಲಮ್ಮನ ತವರುಮನೆಯಲ್ಲಿ ನೀಲಮ್ಮನ ನರಳುವ ಧ್ವನಿ ಕೇಳಿಸುತ್ತಿರಬೇಕು.)

ನಿವೇದಕ

ನೀಲಮ್ಮನ ತವರುಮನೆಯಲ್ಲಿ, ನೀಲಮ್ಮ ಹಾಸಿಗೆಯ ಮೇಲೆ ಬಿದ್ದುಕೊಂಡು ಜ್ವರದಿಂದ ಸಂಕಟ ಪಡುತ್ತಲಿದ್ದಾಳೆ. ನಾಲ್ಕು ತಾಸು ಹೊತ್ತು ಏರಿದೆ. ಬಿಸಿಲು ಹೆಚ್ಚಿದಂತೆ ನೀಲಮ್ಮನಿಗೆ ಸಂಕಟದ ತಳಮಳ ಹೆಚ್ಚಾಗಿದೆ. ತಾಯಿ–ತಂದೆ–ಬಳಗದವರೆಲ್ಲ ಬಳಿಯಲ್ಲಿಯೇ ಕುಳಿತಿದ್ದಾರೆ. ನೀಲಮ್ಮನ ಬಡಬಡಿಕೆಯ ಧ್ವನಿ ಕೇಳಿರಿ :

ನೀಲಮ್ಮ :— (ಜ್ವರದ ಆವೇಶಧ್ವನಿಯಲ್ಲಿ) ನನ್ನ ಚಿನ್ನ ಬಂದ !.... ನನ್ನ ದೊರೀ ಬಂದ !.... ಬರಲಿಲ್ಲs ಅಂವ ?.... ಇನ್ನs ಬರಲಿಲ್ಲ ?.... ಸರೀರಿ ನಾನs ಅಂವ ಇದ್ದಲ್ಲೆ ಹೋಗ-ತೀನಿ, ... ಹಾಹಾಹಾಹಾ ! (ನಗುವಳು)

ತಾಯಿ :— ಸುಮ್ಮಗs ಮಲಕೋ ನೀಲಾ ! ಒದರ್ಯಾಡ-ಬ್ಯಾಡಾ ! ಬಾಯಿ ಒಣಗಿಬರತೈತೆವ್ವಾ ! (ಮೈಮುಟ್ಟಿ ನೋಡಿ) ಅಯ್ಯೋ ಉರೀನs ! ಮೈಮ್ಯಾಗ ಜೋಳಾ ಇಟ್ಟರ, ಅಳ್ಳಾಗ-ತಾವ ನೋಡು !

ನೀಲಮ್ಮ :— ಜೋಳ !.... ನನ್ನ ಧಣೀ ನನ್ನ ಮನ್ಯಾಗ ಚೀಲದ ನಿಟ್ಟು ಹಚ್ಚ್ಯಾನ !.... ಏನು ?.... ಬಾಡಿ ಬಂತs ?...., ನನ್ನ ಕರೀಲಾಕ ಬಂದರು ?

ತಾಯಿ :— (ಅಳುತ್ತಳುತ್ತ) :— ಯಾರ ಬರತಾರವ್ವಾ ನಿನ್ನ ಕರೀಲಾಕ ! ಶಿವನs ಕರಕೊಂಡು ಹೊಂಟಾನ ನಿನ್ನ !

(ದೂರದಿಂದ ಯಾರೋ ಕೂಗಿದ ದನಿ ಕೇಳುವುದು— ‘ ಚಿನ್ನಪ್ಪ ಬಂದ ! ’)

(ಅನೇಕ ಧ್ವನಿಯಲ್ಲಿ ‘ ಓ ಚಿನ್ನಪ್ಪ ಬಂದ ! ’ ‘ ಚಿನ್ನಪ್ಪ ಬಂದ ! ’ ‘ ಚಿನ್ನಣ್ಣ ಬಂದ ! ’)

ತಾಯಿ:— ಅಂತೂ ಬಂದನs ಚಿನ್ನಪ್ಪ ! ನೀಲಾ ! ನಿನ್ನ ಚಿನ್ನ—ನಿನ್ನ ದೊರೀ— ಬಂದಾನ ನೋಡs ತಾಯಿಾ !

(ರಭಸದ ನಡಿಗೆಯಲ್ಲಿಯೆ ಚಿನ್ನಪ್ಪ ಒಳಗೆ ಬಂದು ನೀಲಾನ ಬಳಿಯಲ್ಲಿ ಕೂಡುವನು !)

ಚಿನ್ನಪ್ಪ:—(ಉಕ್ಕುವ ಹೃದಯದಿಂದ) ನೀಲಾ, ನಾ ಬಂದೀನಿ ನೋಡಿಲ್ಲೆ ! ಕಣ್ಣು ತಗದು ನೋಡು !

ನೀಲಾ:— (ಜ್ವರದ ಭರದಲ್ಲಿಯೆ) ಯಾರೂ ಬಂದಿಲ್ಲ ! ನನ್ನ ಚಿನ್ನ ಬರತಾನ.... ಮತ್ತ ಮತ್ತ ದೂರ ಹೋಗತಾನ !

ಚಿನ್ನಪ್ಪ:—ನೀಲಾ, ನಾ ನಿನ್ನ ಬಿಟ್ಟು ದೂರ ಹೋಗೂದಿಲ್ಲs! ನಿನ್ನ ಬದೀಲೇನs ಬಂದು ಕೂತುಕೊಂಡೀನಿ, ನೋಡಿಲ್ಲೆ! ಕಣ್ಣು ತೆರದು ನೋಡು !

ನೀಲಾ:—ಏನು ? ಯಾರು? ಅಯ್ಯೋ ಚಿನ್ನಾ ! (ಕೂಗುವಳು)

ಚಿನ್ನಪ್ಪ:— ಅಯ್ಯೋ ನೀಲಾ ! ನೀಲಾ ನೀವೊಂದು ಹೂವು ! ನೀನು ದೇವತಿ! ನಾನು ಪಾಪಿ! ನನ್ನ ಮುಖದ ಕಡೆ ನೋಡು ನೀಲಾ! (ಅಳುವ ದನಿಯಲ್ಲಿ) ಅತ್ತೆವ್ವಾ— ಮಾವಾ ! ನನ್ನಿಂದ ದೊಡ್ಡ ತಪ್ಪಾತು! ಎಲ್ಲಾರೂ ತಾಳಿ ಹೊಟ್ಟ್ಯಾಗ ಹಾಕಿಕೋಬೇಕು !

ನೀಲಮ್ಮನ ತಂದೆ:— ಇರಲಿ ಸುಮ್ಮನಾಗು ಚಿನ್ನಾ! ತಪ್ಪು ಮಾಡೂದು ಮಾಡಿಸೂದು ನಮ್ಮ ಕೈಯಾಗಿನ ಮಾತs? ಎಲ್ಲಾನೂ ಮಾಡೂದು ಆ ಕಾಣದ ಕೈ! ಆ ಕಾಣದ ಕೈಯೇ ನಿನ್ನ, ನೀಲಿನ್ನ ಅಗಲಿಸಿತ್ತು; ಇಂದ ಮತ್ತ ಅದೇ ಕಾಣದ ಕೈಯೇ ಒಂದುಗೂಡಿಸಿತು !

ಚಿನ್ನಪ್ಪ:—ಕಾಣದ ಕೈ!....ಅಬ್ಬಾ ಕಾಣದ ಕೈಯೇ! ನಿನಗ ಶರಣು ! ಸಾವಿರ ಬಾರಿ ಶರಣು ! ಕಾಣದ ಕೈ ! ಕಾಣದ ಕೈ !

ಸಾದರ ಸ್ವೀಕಾರ

卐

೧. **ನಡೆದು ಬಂದ ದಾರಿ** (ಕವನ ಸಂಕಲನ) ಬರೆದವರು ಶ್ರೀ. ಎಂ. ಗೋಪಾಲಕೃಷ್ಣ ಅಡಿಗ, ಮೈಸೂರು. ಇದರ ಪ್ರಕಾಶಕರೂ ಮೈಸೂರಿನ ಉಷಾಸಾಹಿತ್ಯಮಾಲೆಯವರೇ. ಕ್ರೌ. ಅ. ೧೦೫+೬ ಪುಟಗಳು. ಬೆಲೆ ೧-೮-೦.

೨. **ಭಾವಚಿತ್ರ** (ಸಾಮಾಜಿಕ ಕಾದಂಬರಿ). ಲೇಖಕರು ಶ್ರೀ. ಯು. ನಾರಾಯಣಭಟ್ಟರು. ಪ್ರಕಾಶಕರು ಹರ್ಷಮುದ್ರಣ ಪ್ರಕಟನಾಲಯ, ಪುತ್ತೂರು (ದ. ಕ.) ಕ್ರೌ. ಅ. ೫೮ ಪುಟಗಳು ಬೆಲೆ ೧-೦-೦.

೩. **ರಾಯಭಾರಿ** (ಹೊಸ ವಾರಪತ್ರಿಕೆ). ಸಂಪಾದಕರು ಶ್ರೀ. ಎಸ್. ಎಲ್. ನಾರಾಯಣಭಟ್ಟ, ಉಡುಪಿ. ಪ್ರಕಾಶಕರು ಶ್ರೀ. ಪನಗಲ ನಾಯಕ, ರಾಯಭಾರಿ ಕಾರ್ಯಾಲಯ, ಉಡುಪಿ. ಕ್ರೌ.ಫೋ. ೧೨ ಪುಟಗಳು. ಬೆಲೆ ಬಿಡಿ ಸಂಚಿಕೆಗೆ ೦-೨-೦.

೪. **ಕನ್ನಡಿಗ** (ವಾರಪತ್ರಿಕೆ). ಸಂಪಾದಕರು ಶ್ರೀ. ಎಚ್. ಎಸ್. ಮೋದಿ. ಪ್ರಕಾಶಕರು ವಿಶ್ವಭಾರತಿ ಪಬ್ಲಿಕೇಶನ್ಸ್ ಹುಬ್ಬಳ್ಳಿ ಕ್ರೌ ಫೋ. ೬ ಪುಟಗಳು. ಬಿಡಿಸಂಚಿಕೆಗೆ ೦-೧-೦.

೫. **ಅಮರನಾಥ್ಯ ತಂದೆ** (ಕವನ ಸಂಕಲನ) ಬೇರೆ ಬೇರೆ ಕವಿಗಳ ಕವನಗಳನ್ನು ಸಂಗ್ರಹಿಸಿದವರು ಶ್ರೀ. ಪ. ಸು. ಭಟ್ಟರು. ಪ್ರಕಾಶಕರು ಶ್ರೀ. ಕೆ. ವಿ. ಸುಬ್ಬಣ್ಣ, ಗೆಳೆಯರ ಗುಂಪು, ಶಿರಸಿ. ಕ್ರೌ. ಅ. ೬೪ ಪುಟಗಳು. ಬೆಲೆ ೧-೪-೦.

೬. **ರಸಾಯನಶಾಸ್ತ್ರ** (ವೈಜ್ಞಾನಿಕ ಗ್ರಂಥ). ಬರೆದವರು ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ.ಎಸ್‌ಸಿ, ಹೈದರಾಬಾದ್. ಪ್ರಕಾಶಕರು ಸತ್ಯಾಶ್ರಯ ಪ್ರಕಾಶನ ಮಂದಿರ, ಹೈದರಾಬಾದ್. ಕ್ರೌ. ಅ ೩೦೬ ಪುಟಗಳು. ಬೆಲೆ ೩-೮-೦.

೭. **ಉಮಾಬಾಯಿ ಕುಂದಾಪುರ** (ಷಷ್ಟ್ಯಬ್ದಿ ಸ್ಮಾರಕ ಗ್ರಂಥ) ಶ್ರೀಮತಿಯವರ ಜೀವನ ಮತ್ತು ಕಾರ್ಯಗಳ ವಿಚಾರದಲ್ಲಿ ಬೇರೆ ಬೇರೆ ಜನರು ಬರೆದ ಪರಿಚಯಾತ್ಮಕ ಲೇಖನಗಳ ಸಂಕಲನ. ಪ್ರಕಾಶಕರು ಭಗಿನೀಮಂಡಳ, ಹುಬ್ಬಳ್ಳಿ. ಡೆ ಅ. ೭೨ ಪುಟಗಳಲ್ಲದೆ ಹಲವು ಚಿತ್ರದ ಪುಟಗಳೂ ಇವೆ.

೮. **ನಾಲ್ಕು ನಾಡ ಪದಗಳು** (ಜಾನಪದ ಕವನ ಸಂಕಲನ) ಸಂಕಲನಕಾರರು ಮತ್ತು ಪ್ರಕಾಶಕರು ಶ್ರೀ. ಬಿ. ಎಸ್. ಗದ್ದಿಗೀಮಠ ಎಂ. ಎ., ಡಿ. ಪಿ. ಇ. ಡಿ. ಲಿಂಗರಾಜ ಕಾಲೇಜು, ಬೆಳಗಾಂವಿ. ಕ್ರೌ. ಅ. ೭೭ ಪುಟಗಳು. ಬೆಲೆ ೧-೦-೦.

(೧ನೆಯ ಪುಟದಿಂದ ಮುಂದುವರಿದುದು)

ಶ್ರೀ. ದಿವಾಕರರು ಮಂತ್ರಿಮಂಡಲಿಯಲ್ಲಿ ಇರಬೇಕಾಗಿದ್ದಿತೆಂದು ಹೇಳುವವರದು ಒಂದು ವಿಚಾರ; ಬಿಹಾರದಂತಹ ದೊಡ್ಡದೊಂದು ರಾಜ್ಯದಲ್ಲಿ ಕನ್ನಡಿಗರೊಬ್ಬರು, ರಾಜ್ಯಪಾಲರಾಗಿ, ಹೊಣೆಗಾರಿಕೆಯಿಂದ ಆಡಳಿತವನ್ನು ನಿರ್ವಹಿಸಿ, ಕನ್ನಡಿಗರ ಕರ್ತೃತ್ವಶಕ್ತಿಯನ್ನು ಪ್ರದರ್ಶಿಸಿ ತನ್ನ ನಾಡಿನ ಹೆಸರನ್ನು ಭಾರತೀಯರೆಲ್ಲರ ಕಣ್ಣೆದುರು ನಿಲ್ಲಿಸುವ ಆಗತ್ಯವೂ ತುಂಬ ಇದೆ—ಎನ್ನುವುದು ಇನ್ನೊಂದು ವಿಚಾರ. ಈ ವಿಚಾರದಲ್ಲಿಯೂ ಹುರುಳಿಲ್ಲದೆ ಇಲ್ಲ.

ಶ್ರೀಮಾನ್ ದಿವಾಕರರ ಇದುವರೆಗಿನ ಕಾರ್ಯವನ್ನು ವಿಶ್ಲೇಷಿಸಿ ನೋಡಿದರೆ, ಅವರು ಯಾವ ಸ್ಥಾನದಲ್ಲಿದ್ದರೂ ಕರ್ನಾಟಕದ ಹಿತಸಂಬಂಧವನ್ನು ಮರೆಯಲಾರರೆಂಬ ಮಾತು ಕಂಡುಬಾರದಿರದು. ಆದುದರಿಂದ, ಅವರಿಗೆ ವೈಯಕ್ತಿಕವಾಗಿ ದೊರೆತ ಸ್ಥಾನ-ಮಾನ-ಘನತೆಗಳಿಗಾಗಿಯೂ ನಾವು ಅಭಿಮಾನ ಪಡಲೇ ಬೇಕು. ಅವರ ಸ್ಥಾನ–ಮಾನ–ಘನತೆಗಳು ಹೆಚ್ಚಿದಂತೆಲ್ಲ, ಕನ್ನಡಿಗರ ಆಶೆ–ಆಕಾಂಕ್ಷೆಗಳ ಪೂರಯಿಕೆಗೆ ಹೆಚ್ಚಿನ ಬಲವು ದೊರೆತೀತು. ಗೆಲವು ದೊರೆಕಿಸಬೇಕಾದವನು ಮೊದಲು ಬಲವನ್ನು ಗಳಿಸಬೇಕಾಗುವುದೆಂಬುದನ್ನು ನಾವು ಅರಿತು ನಡೆಯಬೇಕಲ್ಲವೆ?

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು !
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ
ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ' ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವುವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಈಗ ತಾನೆ ಪ್ರಕಟಿಸಿದ 'ಆನಂದಕಂದರ' ತರಂಗರೂಪಕ ಸಂಕಲನ :

ಬೆಳವಡಿ ಮಲ್ಲಮ್ಮ

ಕ್ರಾ. ಅ. ೧೧೬ ಪುಟಗಳು. ಹೊಳಪಿನ ಕಾಗದ. ಬೆಲೆ ೧-೮-೦.

ಹೊಸತಾಗಿಯೆ ಹೊರಟ ಕವನ ಸಂಕಲನ

ಕಾರಹುಣ್ಣಿವೆ

ಇದರಲ್ಲಿ 'ಆನಂದಕಂದ'ರ ರಸವತ್ತಾದ ೫೨ ಕವನಗಳು ಸಂಕಲನಗೊಂಡಿವೆ. ವಿವಿಧ ಭಾವಗಳನ್ನು ವಿಸ್ತರಿಸಿದ ಸುಂದರವಾದ ಭಾವಗೀತಗಳು ! ಸಂಗೀತಗಾರರ ಕಾವ್ಯಗಾಯನ ಕಾರ್ಯಕ್ರಮಕ್ಕೆ ತುಂಬ ಸಹಕಾರಿಯಾದುವು !

ಕ್ರಾ. ಅ. ೧೨೮ ಪುಟಗಳು. ಅಂದವಾದ ಅಚ್ಚು. ಬೆಲೆ ೨-೦-೦.

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ

ರಾಜಯೋಗಿ

ಸುದರ್ಶನ

ಕವನ ಸಂಕಲನ

ವಿರಹಿಣಿ

ಒಡನಾಡಿ

ಕಥಾಸಂಕಲನ

ಬಡತನದ ಬಾಳು

ನಮ್ಮ ಬದುಕು

ಸಂಸಾರ ಚಿತ್ರ

ಮಾತನಾಡುವ ಕಲ್ಲು

ಇತರ ಗ್ರಂಥಗಳು

ಕರ್ನಾಟಕ ಜನಜೀವನ

ಜೀವನ ಚರಿತ್ರ

ಶ್ರೀ. ಬಸವಣ್ಣನವರು

ಅಲ್ಲದೆ ಶ್ರೀ. ಹುದ್ದಾರರ '**ಚಿತ್ರಕಲಾಪ್ರವೇಶ**'ವೂ ಚಾಡಿಯ ಚಾಣಕ್ಯನ '**ಜಾತೀಯಸಮಸ್ಯೆ**' '**ಕರ್ನಾಟಕ ಏಕೀಕರಣ**', ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೫ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೇ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ : **ಎಸ್. ಡಿ. ಧರಮಟ್ಟಿ, ಶ. ಪ್ರ. ಮಂದಿರ, ಧಾರವಾಡ.**

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar -3969-52.

ಜಯಂತಿ

ಜೂಲೈ ೧೯೫೨

ಸಂಪುಟ ೧೫

ಸಂಚಿಕೆ ೨

ಈ ಸಂಚಿಕೆಯಲ್ಲಿ:

ಮತ್ತೆ ಏಕೀಕರಣದ ಸೊಲ್ಲು (ಸಂಪಾದಕೀಯ)	ಸಂಪಾದಕರು	೪೧
ಪುಸ್ತಕ ವಿಮರ್ಶೆ (ವಿಮರ್ಶೆ)	ಶ್ರೀ. ಬಿ. ಪಿ. ಎಸ್. ರಾವ್	೪೩
ಬಿಚ್ (ಸಣ್ಣ ಕತೆ)	ಶ್ರೀ. ಅಶ್ವತ್ಥ, ಬನಾರಸ	೪೪
ಯಕ್ಷಗಾನ ಕತೆಗಳು ಮತ್ತು ಶೈಲಿ	ಶ್ರೀ. ಕೋ. ಶಿ. ಕಾರಂತ	೪೯
ನನ್ನ ಹೊಂದಾವರೆ (ಕವನ)	ಶ್ರೀ. ಚೆನ್ನವೀರ ಕಣವಿ	೫೩
ಸೌಭಾಗ್ಯವೆ ! (ಕವನ)	ಶ್ರೀ. ಸಿದ್ದಣ್ಣ ಮಸಳಿ	,,
ಶಿಕ್ಷಣದ ತತ್ತ್ವ (ಪ್ರಬಂಧ)	ಶ್ರೀ. ಶ್ರೀ. ಶಿ. ಖಾನೋಳಕರ	೫೪
ಲಚ್ಚಣ್ಣನ ಲಾಟರಿ (ಸಣ್ಣ ಕತೆ)	ಶ್ರೀ. ಚಿದಾನಂದ	೫೯
ಬೆಳಗು (ಕವನ)	ಶ್ರೀ. ಸಿ. ಎಂ. ದೇವೇಂದ್ರನಾಯಕ	೬೫
ಕರ್ನಾಟಕ ಶಾಕುಂತಲ ನಾಟಕ (ವಿಮರ್ಶೆ)	ಶ್ರೀ. ಎಸ್. ಎಸ್. ಬಸುಪಟ್ಟದ	೬೬
ಉಪಾಸನೆ ಮತ್ತು ವಿಜ್ಞಾನ	ಡಾ. ಎಂ. ಗೋಪಾಲಕೃಷ್ಣರಾವ್	೭೦
ದೃಷ್ಟಿಯ ಆಚೆ (ಸಣ್ಣ ಕತೆ)	ಶ್ರೀಮತಿ ಸುಶೀಲಾ ಕೊಪ್ಪರ	೭೩
ಸಾಹಿತ್ಯ ವಿಹಾರ (ಪರಿಚಯ-ವಿಮರ್ಶೆ)	....	೭೬

ಅಲ್ಲದೆ ನಾಡನಡೆ, ಸಾದರಸ್ವೀಕಾರ, ಕವನಗಳು.

JAYANTI

ಬೇರೆ ಬೇರೆ ಕಡೆಗಳಲ್ಲಿ ಜಯಂತಿಯ ಏಜಂಟರು

ಪುಣೆ

ಶ್ರೀ. ಎಸ್. ಎನ್. ರೊಟ್ಟಿ, ವಿಶ್ರಾಮಧಾಮ ನಂ. ೧೨೪೨, ಡೆಕ್ಕನ್ ಜೀಮಖಾನಾ, ಪುಣೆ ೪.

ಮಿರಜಿ

ಮೆ. ಎಸ್. ಎ. ಕುಲಕರ್ಣಿ ಆಂಡ್ ಸನ್ಸ್, ಕಾಂಟ್ರ್ಯಾಕ್ಟರ್ಸ್ ಆಂಡ್ ಕಮಿಶನ್ ಏಜಂಟ್ಸ್, ಮಿರಜ.

ನಿಪ್ಪಾಣಿ

ಶ್ರೀ. ಕೆ. ಎಸ್. ಬಳಗುರ್ಗಿ, ನ್ಯೂಜ್ ಪೇಪರ್ ಏಜಂಟ್ ಮತ್ತು ಬುಕ್‌ಸೇಲರ್ಸ್, ನಿಪ್ಪಾಣಿ.

ಬೆಳಗಾಂವಿ

ಕನ್ನಡ ಪುಸ್ತಕಾಲಯ, ಖಡೇ ಬಝಾರ್, ಬೆಳಗಾಂವಿ.

ಗೋಕಾಕ

ಶ್ರೀ. ಪಿ. ಎಂ. ಶಿರಗಾಂವಕರ್, ನ್ಯೂಜ್ ಏಜಂಟ್.

ಸವದತ್ತಿ

ಶ್ರೀ. ಜಿ. ಎಲ್. ದೊಡ್ಡಮನಿ, ನ್ಯೂಜ್ ಏಜಂಟ್.

ಧಾರವಾಡ

ರೈಲ್ವೇ ಸ್ಟೇಶನ್ ಬುಕ್‌ಸ್ಟಾಲ್, ಧಾರವಾಡ.

ಹುಬ್ಬಳ್ಳಿ

ಶ್ರೀ. ವಿ. ಕೆ. ಗೋಖಲೆ, ಕಂಬಾಯಿಂಡ್ ನ್ಯೂಜ್ ಏಜನ್ಸಿ.

ಹಾವೇರಿ

ಶ್ರೀ. ಜಿ. ಆರ್. ಮಹಾರಾಜಪೇಟ್, ನ್ಯೂಜ್ ಏಜಂಟ್.

ರಾಣೆಬೆನ್ನೂರು

ಶ್ರೀ. ಕೆ. ವಿ. ಹನಗೋಡಿಮಠ, ನ್ಯೂಜ್ ಏಜಂಟ್.

ಹಾನಗಲ್ಲ

ಶ್ರೀ. ಸು. ಲ. ಅಕ್ಕಿವಳ್ಳಿ, ನ್ಯೂಜ್ ಏಜಂಟ್.

ಶಿಗ್ಗಾಂವಿ

ಶ್ರೀ. ಡಿ. ಜಿ. ಕುಲಕರ್ಣಿ, ವಿದ್ಯಾರಣ್ಯ ನ್ಯೂಜ್ ಏಜನ್ಸಿ.

ಮುಂಡರಿಗಿ

ಶ್ರೀ. ಬಿ. ವಿ. ಕೊಪ್ಪಳ, ಸರಸ್ವತೀ ಪುಸ್ತಕಾಲಯ.

ವಿಜಾಪುರ

ಮ್ಯಾನೇಜರ್ ಯುನಿಕ್ ಸ್ಪೋರ್ಟ್ಸ್, ನ್ಯೂಜ್ ಏಜಂಟ್ಸ್.

ಗುಳೇದಗುಡ್ಡ

ಶ್ರೀ. ಸಂಗಪ್ಪ ಶಿವಸಂಗಪ್ಪ ಹುನಗುಂದ, ನ್ಯೂಜ್ ಏಜಂಟ್.

ತೆಲಗಿ

ಶ್ರೀ. ಹು. ಬ. ಕತ್ತಿ, ನ್ಯೂಜ್ ಏಜಂಟ್.

ಜಮಖಂಡಿ

ಶ್ರೀ. ಅಶೋಕ ಆರ್. ಕೋವಾಡಕರ 'ನಾವೆಲ್ಟೀ ಸ್ಟೋರ್ಸ್', ಜಮಖಂಡಿ.

ಕುಮಟಾ

ಶ್ರೀ. ಎಸ್. ವಿ. ಕಾಮತ, ಬುಕ್ ಸೇಲರ್ಸ್ ಮತ್ತು ಸ್ಟೇಶನರ್ಸ್.

ಶಿರಸಿ

ಶ್ರೀ. ಎನ್. ಕೆ. ಭಗತ್, ನ್ಯೂಜ್ ಏಜಂಟ್.

ಶಿವಮೊಗ್ಗಾ

ಶ್ರೀ. ಎಂ. ನಾಗಪ್ಪಸೆಟ್ಟಿ ನ್ಯೂಜ್ ಏಜಂಟ್ ಮತ್ತು ಬುಕ್‌ಸೇಲರ್.

ಮಂಗಳೂರು

ಶ್ರೀ. ಎಂ. ದಾಸಪ್ಪ ಕಾಮತ, ನ್ಯೂಜ್ ಏಜಂಟ್.

ಪುತ್ತೂರು

ಶ್ರೀ. ಎಂ. ಶಂಕರನಾರಾಯಣ ಪೈಯ್ಯರು, ನ್ಯೂಜ್ ಏಜಂಟ್.

ಲಕ್ಷ್ಮೇಶ್ವರ

ಶ್ರೀ. ಈಶ್ವರ ರಾಮಚಂದ್ರ ಚವ್ಹಾಣ, ನ್ಯೂಜ್ ಏಜಂಟ್.

ಜಯಂತಿ

ಸಂ. ೧೫. ಸಂಚಿಕೆ ೨.

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ.

★

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು :
ಶ್ರೀ. ಡಿ. ಶರತ್‌ಕುಮಾರ

★

ಪ್ರಕಾಶಕರು :
ಶ್ರೀ. ಎಮ್. ಎ. ಮೆಳ್ಳಿಗಟ್ಟಿ

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

●

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

卐

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

★

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

★

ಮತ್ತೆ ಏಕೀಕರಣದ ಸೊಲ್ಲು

ಕರ್ನಾಟಕ ಏಕೀಕರಣದ ಮಾತುಕತೆ ಈಗ ಕನ್ನಡ ನಾಡಿನ ಜನಸಾಮಾನ್ಯರಲ್ಲಿ ಕೇಳುತಿಲ್ಲವಾದರೂ, ಕೇಂದ್ರ ಶಾಸನಸಭೆಗೆ ಆರಿಸಿಹೋದ ಮತ್ತು ಮುಂಬಯಿ ರಾಜ್ಯದ ಶಾಸನಸಭೆಗೆ ಆರಿಸಿ ಹೋದ ಸದಸ್ಯ ಧುರೀಣರು, ಏಕೀಕರಣದ ವಿಷಯಕ ಮಾತುಕತೆಯನ್ನು ಎತ್ತುತ್ತಿರುವುದು ಆಶ್ಚರ್ಯದ ಮತ್ತು ಸಮಾಧಾನದ ಸಂಗತಿಯಾಗಿದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಕೂಡ ಎಂದೂ ತೋರಿಸದ—ಕರ್ನಾಟಕ ಏಕೀಕರಣದ ವಿಷಯಕ—ಆಸ್ಥೆಯನ್ನು ಇಂದು ತೋರಿಸತೊಡಗಿದುದು, ಬೆರಗುಗೊಳಿಸುವಂತಹ ವಿಷಯವಾಗಿದೆ. ‘ಕರ್ನಾಟಕ ಏಕೀಕರಣ!’ ‘ಕರ್ನಾಟಕ ಏಕೀಕರಣ’ ಎಂದು ಜನಸಾಮಾನ್ಯನೆಲ್ಲ ಉತ್ಕಟಭಾವನೆಯಿಂದ ಕಳವಳದ ಕೂಗು ಚಟುವಟಿಕೆಗಳನ್ನು ನಡೆಯಿಸುತ್ತಿದ್ದಾಗ, ಉಪೇಕ್ಷೆ ಔದಾಸೀನ್ಯಗಳಿಂದಲೇ ಇದ್ದು ಬಿಡುತ್ತಿದ್ದ ನಮ್ಮ ಕಾಂಗ್ರೆಸ್ ನಾಯಕರು, ಇಂದು ಜನಸಾಮಾನ್ಯರೆಲ್ಲ ನಿರಾಶೆಯಿಂದ ಏಕೀಕರಣದ ಮಾತೆತ್ತದೆ ಮೌನಿಗಳಾಗಿರುವಾಗ, (ಕಾಂಗ್ರೆಸ್ ಧುರೀಣರೇ) ಏಕೀಕರಣದ ಕುರಿತು ಹೆಚ್ಚಾಗಿ ಚಟುವಟಿಕೆ ನಡೆಯಿಸಿದಂತೆ ಪ್ರದರ್ಶಿಸುತ್ತಿರುವುದು, ಅನೇಕರಿಗೆ ವಿಚಿತ್ರವೂ ಸಂಶಯಾಸ್ಪದವೂ ಎನಿಸುವುದು ಸಹಜವಾಗಿದೆ.

ನಮ್ಮ ಮುಂದಾಳುಗಳ ಮನಸ್ಸನ್ನು ವಿಶ್ಲೇಷಣ ಮಾಡಿ ನೋಡಿದರೆ, ಅವರ ಏಕೀಕರಣದ ಕೂಗು—ಚಟುವಟಿಕೆಗಳಿಗೆ ಕಾರಣಗಳು ಕಂಡುಬಾರದಿರವು. ಕೇಂದ್ರ ಮತ್ತು ಮುಂಬಯಿ ಶಾಸನ ಸಭೆಗಳಲ್ಲಿ ಇರುವ ಕನ್ನಡ ಮುಂದಾಳುಗಳಲ್ಲಿ, ಕರ್ನಾಟಕ ಏಕೀಕರಣದ ಬಗ್ಗೆ ಪ್ರಾಮಾಣಿಕವಾದ ನಿಷ್ಠೆಯುಳ್ಳವರು ಒಬ್ಬಿಬ್ಬರು ಇಲ್ಲದೆ ಇಲ್ಲ. ಅವರು ಎಲ್ಲಿಯೆ ಇರಲಿ, ಎಂದಿನಿಂದಲೂ ಏಕೀಕರಣದ ಬಗ್ಗೆ ತಮ್ಮಲ್ಲಿರುವ ಉತ್ಕಟತೆಯನ್ನು ಸಕ್ರಿಯವಾಗಿ ಹೊರಗೆ ಹಾಕುತ್ತ ಬಂದಿದ್ದಾರೆ. ಉದಾಹರಣೆಗಾಗಿ, ಮೊದಲಿನಿಂದಲೂ ಮುಂಬಯಿ ಶಾಸನಸಭೆಯಲ್ಲಿದ್ದ ಶ್ರೀ. ದೊಡ್ಡಮೇಟಿ ಅಂದಾನೆಪ್ಪನವರ ಹೆಸರನ್ನೂ, ಹೊಸತಾಗಿ ಕೇಂದ್ರ ಶಾಸನ ಸಭೆಗೆ ಆರಿಸಿಹೋದ ಶ್ರೀ. ದಾತಾರ ಬಳವಂತರಾಯರ ಹೆಸರನ್ನೂ ಮುಂಬೈ ಮೇಲ್ಮನೆಯ ಅಧ್ಯಕ್ಷರಾದ ಮಾನ್ಯ ಹುಕ್ಕೇರಿಕರರ ಹೆಸರನ್ನೂ ಇಲ್ಲಿ ಉಲ್ಲೇಖಿಸಬಹುದು. ಇವರು ಎಂದಿನಿಂದಲೂ ಕರ್ನಾಟಕ ಏಕೀಕರಣದ ವಿಷಯದಲ್ಲಿ ಉತ್ಕಟ ಶ್ರದ್ಧೆಯಿರುವವರು. ಇಂದು ಕೂಡ ಆ ಶ್ರದ್ಧೆಯನ್ನು ಇರಿಸಿಕೊಂಡು ಕಾರ್ಯಮಾಡುವವರು.

ಹಿಂದೆಯೂ ಇವರು ತಮ್ಮ ಏಕೀಕರಣದ ಆತುರವನ್ನು ಇದ್ದ ಸ್ಥಳದಿಂದಲೇ ಪ್ರಕಟಿಸುತ್ತಿದ್ದರು. ಆಗ ವ್ಯಿಕ್ಕ ಜೊತೆಗಾರರ ಉಪೇಕ್ಷೆ-ಔದಾಸೀನ್ಯಗಳು ಅವರ ಆತುರದ ಕಾವಿಗೆ ತಣ್ಣೀರೆರಚಿ ಅದನ್ನು ನಿಷ್ಕ್ರಿಯವನ್ನಾಗಿಸುತ್ತಿದ್ದುವು. ಆದರೆ ಇಂದು ಅವರೆಲ್ಲರ ಮನಃಸ್ಥಿತಿಯಲ್ಲಿ ಬದಲಾವಣೆಯಾದುದರಿಂದ, ಅವರೂ ಏಕೀಕರಣದ ಮಾತನ್ನು ಅನಿವಾರ್ಯವಾಗಿ ಎತ್ತಿಹಿಡಿಯಬೇಕಾಗಿದೆ. ಚುನಾವಣೆಗಿಂತ ಮೊದಲು ಶಾಸನಸಭೆಗಳಲ್ಲಿಯೂ ಕಾಂಗ್ರೆಸ್‌ಸಮಿತಿಯಲ್ಲಿಯೂ ಬೇರೆ ಬೇರೆ ಸ್ಥಾನಗಳನ್ನು ಪಡೆದುಕೊಂಡು ಕುಳಿತ ಮುಂದಾಳುಗಳು, ವೈಯುಕ್ತಿಕ ಸ್ವಾರ್ಥಸಾಧನೆ, ಕರ್ತವ್ಯವಿಮುಖತೆ ಇವುಗಳಿಂದ ನಾಡಿಗರ ಪ್ರೀತಿ-ವಿಶ್ವಾಸಗಳನ್ನೂ ಕಳೆದುಕೊಂಡರು; ಸರಕಾರದ ಪ್ರೀತಿ-ವಿಶ್ವಾಸಗಳನ್ನೂ ಕಳೆದುಕೊಂಡರು. ಆದುದರಿಂದ ಅವರಿಗೆಲ್ಲ ವೈಯುಕ್ತಿಕ ಸ್ವಾರ್ಥಸಾಧನೆಗೆ ಅವಕಾಶವೇ ಇಲ್ಲದಂತಾಯಿತು. ಇನ್ನೂ ಒಂದು ಮಾತೆಂದರೆ, ಚುನಾವಣೆಯ ಪರಿಣಾಮವಾಗಿ ಕರ್ನಾಟಕದಲ್ಲಿಯೂ ವಿರೋಧಿಪಕ್ಷಗಳು ತಲೆಯೆತ್ತಿ, ಜನತೆಯ ಜೀವಾಳದ ಸಮಸ್ಯೆಯಾದ

ಕರ್ನಾಟಕ ಏಕೀಕರಣಸಾಧನೆಯ ಗುರಿಯನ್ನೇ ತಮ್ಮ ಪಕ್ಷದ ಪ್ರಚಾರಕ್ಕಾಗಿ ಉಪಯೋಗಿಸಿಕೊಳ್ಳಲು ತೊಡಗಿದರು. ಆ ಸಂದರ್ಭದಲ್ಲಿ ನಮ್ಮ ಕಾಂಗ್ರೆಸ್ ಧುರೀಣರಿಗೆ ಕರ್ನಾಟಕ ಏಕೀಕರಣದ ಕೂಗಿನ ಮಹತ್ವವು ಇನ್ನೂ ಹೆಚ್ಚಾಗಿ ಗೊತ್ತಾಯಿತು. ಎಂತಲೇ ತಾವೂ ಪ್ರಯತ್ನಪಟ್ಟು, ಅಖಿಲಭಾರತ ಕಾಂಗ್ರೆಸ್ಸಿನ ಚುನಾವಣೆಯ ಘೋಷಣೆಯಲ್ಲಿ ಭಾಷಾನುಗುಣ ಪ್ರಾಂತರಚನೆಯ ಆಶ್ವಾಸನವು ಪ್ರಕಟವಾಗುವಂತೆ ಮಾಡಿದರು. ಪ್ರಚಾರ ಮಾಡುವಾಗ 'ಏಕೀಕರಣ ಕಾರ್ಯವು ತಮ್ಮಿಂದಲೇ ಸಾಧ್ಯ!' ಎಂಬ ಮಾತನ್ನು ಗಟ್ಟಿಮುಟ್ಟಾಗಿ ಹೇಳಲು ತೊಡಗಿದರು.

ಚುನಾವಣೆ ಮುಗಿಯಿತು. ಅಖಿಲ ಭಾರತದ ರಾಜಕೀಯ ಪರಿಸ್ಥಿತಿಯ ಪರಿಣಾಮವೆನ್ನಿ— ಚುನಾವಣೆಗೆ ನಿಂತ ವ್ಯಕ್ತಿಗಳ ಪ್ರಚಾರದ ಪರಿಣಾಮವೆನ್ನಿ— ಕರ್ನಾಟಕದಲ್ಲಿಯೂ ಹೆಚ್ಚಾಗಿ ಕಾಂಗ್ರೆಸ್ ಮುಂದಾಳುಗಳೇ ಆರಿಸಿ ಬಂದರು; ಇಷ್ಟೇ ಇಲ್ಲ, ಈ ಮೊದಲು ಶಾಸನಸಭೆಗಳಲ್ಲಿ ಇದ್ದವರೇ ಆರಿಸಿ ಬಂದರು. ಜನತೆಯ ವಿಶ್ವಾಸವನ್ನಂತೂ ಮೊದಲೇ ಕಳೆದುಕೊಂಡವರು; ಮಂತ್ರಿಮಂಡಲ ರಚನೆಗೊಳುವಾಗ ನಡೆದ ಘಟನೆಗಳಿಂದ, ಬರಲಿರುವ ಸರಕಾರದ ವಿಶ್ವಾಸದಲ್ಲಿಯೂ ತಾವು ಉಳಿಯಲಾರೆವೆಂಬ ಮಾತನ್ನು ಕಂಡುಕೊಂಡರು. ಮುಂಬೈ ಮಂತ್ರಿಮಂಡಲಿಯಲ್ಲಿ ಕರ್ನಾಟಕಕ್ಕೆ ಒಂದೆ ಒಂದು ಸ್ಥಾನವು ಹೇಗೋ ದೊರೆತುದಂತೂ ಇವರನ್ನು ತುಂಬ ಗಾಬರಿಗೊಳಿಸಿತು. ಎಂತಲೇ ಜನತೆಯ ವಿಶ್ವಾಸವನ್ನಾದರೂ ಗಳಿಸಿಕೊಳ್ಳಬೇಕೆಂದು ಹೂಡಿದ ಇವರ ರಾಜಕಾರಣ ಬುದ್ಧಿ, ಏಕೀಕರಣದ ಮಾತು-ಕತೆಗಳನ್ನು ರಭಸದಿಂದ ಮುಂದುವರಿಸಲು ಹಚ್ಚಿದೆ. ಮುಂಬೈ ಅಸೆಂಬ್ಲಿಯಲ್ಲಿ ನಮ್ಮ ಮುಂದಾಳುಗಳಿಗೆ ಇನ್ನೊಂದೆರಡು ಮಂತ್ರಿಸ್ಥಾನಗಳು ದೊರೆತಿದ್ದರೆ, ಏಕೀಕರಣದ ಸುದ್ದಿ ಗಾಳಿಯಲ್ಲಿಯಾದರೂ ಸುಳಿಯುತ್ತಿದ್ದಿತೇನೊ ನೋಡಬಹುದಾಗಿತ್ತು. ಈಗ ಏಕೀಕರಣದ ಬಗ್ಗೆ ಆವೇಶದಿಂದ ಮಾತನಾಡುವವರೇ— ಮಂತ್ರಿಸ್ಥಾನ ದೊರೆತಿದ್ದರೆ— ಅಖಂಡ ಭಾರತದ ಹಿತದ ಉಪದೇಶವನ್ನು ಕನ್ನಡಿಗರಿಗೆ ಹೇಳಿ, ಸದ್ಯ ಏಕೀಕರಣದ ಮಾತನ್ನೆತ್ತುವುದು ರಾಷ್ಟ್ರೀಘಾತಕವಾದ ಪಾಪ—ಎಂದು ಹೇಳಬಹುದಾಗಿತ್ತು. ನಿಜವಾದ ನಿಷ್ಠೆಯುಳ್ಳ ಏಕೀಕರಣವಾದಿಗಳು, ಪಕ್ಷದ ಶಿಸ್ತಿನ ಸಂರಕ್ಷಣೆಯ ಕಾರಣದ ಮೂಲಕ ತಮ್ಮ ಬಾಯನ್ನು ಮುಚ್ಚಿಕೊಂಡಿರಬೇಕಾಗುತ್ತಿತ್ತು.

ಸರಿ! ಯಾವುದೇ ಕಾರಣವಿರಲಿ! ನಮ್ಮ ನಾಡಿನ ನಾಯಕರೇ ಏಕೀಕರಣದ ಗುಲ್ಲನ್ನು ಎಬ್ಬಿಸಿದುದು ನಿಜವಾದ ಸಂಗತಿ, ಒಂದು ಸಂತೋಷದ ಸಂಗತಿಯೆಂದರೆ, ಕರ್ನಾಟಕ ಏಕೀಕರಣ ವಿಚಾರದಲ್ಲಿ ಕೂಲಂಕಷವಾದ ತಿಳುವಳಿಕೆಯಿದ್ದವರು ಶಾಸನಸಭೆಗಳಲ್ಲಿ ಇದ್ದಾರೆ. ಇವರು ಭಾರತದ ಪ್ರಮುಖ ನಾಯಕರೆದುರು, ಕನ್ನಡಿಗರಿಗಿರುವ ಏಕೀಕರಣದ ಆವಶ್ಯಕತೆಯನ್ನು ಪರಿಣಾಮಕಾರಿಯಾಗಿ ಮಂಡಿಸುವ ಸಾಮರ್ಥ್ಯವುಳ್ಳವರಾಗಿದ್ದುದು ಸಮಾಧಾನದ ಸಂಗತಿಯಾಗಿದೆ. ಏಕೀಕರಣದ ವಿಚಾರದಲ್ಲಿ ನಿಜವಾದ ನಿಷ್ಠೆಯಿರುವ ನಮ್ಮ ಶಾಸನಸಭಾ ಸದಸ್ಯರು, ಇದಕ್ಕಾಗಿ ಯಾವಾಗಲೂ ಹೋರಾಡಿಯೇ ಹೋರಾಡುವರು. ಮಿಕ್ಕ ಸದಸ್ಯರೂ ಅವರಿಗೆ ಗಟ್ಟಿಮನದಿಂದ ಬೆಂಬಲವಾಗಿ ನಿಂತರೆ, ಕರ್ನಾಟಕದ ಏಕೀಕರಣ ಕೇವಲ ಕನಸಿನ ಮಾತಾಗಿ ಏನೂ ಉಳಿಯಲಾರದು. ನಮ್ಮ ನಾಡಿನ ಪರಿಸ್ಥಿತಿಯನ್ನು ನೋಡಿದರೆ, ಏಕೀಕರಣಕ್ಕಾಗಿ ಜನತೆಯ ಚಟುವಟಿಕೆಗಳಾವುವೂ ಬೇಕಿಲ್ಲ; ನಮ್ಮ ಜನತೆಯ ಪ್ರತಿನಿಧಿಗಳಾಗಿ ಹೋದ ಶಾಸನ ಸಭಾಸದಸ್ಯರು ಬೇರೆ ಬೇರೆ ಶಾಸನ ಸಭೆಗಳಲ್ಲಿ ಕಾವಿನ ಚಟುವಟಿಕೆ ನಡೆಯಿಸಿದರೆ ಸಾಕು. ನಮ್ಮ ಗುರಿ ಸಾಧಿಸುವುದು. ಕನ್ನಡಿಗರಿಗೆ ನಿಜವಾದ ಸ್ವಾತಂತ್ರ್ಯ ದೊರೆತಂತಾಗುವುದು. ವೈಯಕ್ತಿಕ ಸ್ವಾರ್ಥದ ಬಲೆಗೆ ಬಿದ್ದುಬಿಟ್ಟರೆ, ಈ ನಮ್ಮ ಪ್ರತಿನಿಧಿಗಳಿಂದ ಏಕೀಕರಣದ ಗುರಿಯನ್ನು ಸಾಧಿಸುವುದೂ ಆಗುವುದಿಲ್ಲ. ಜನತೆಯ ಮುಂದಾಳುಗಳಾಗಿ ಇನ್ನು ಮುಂದೆ ಉಳಿಯುವ ಆಶೆಯೂ ಅವರಿಗಿಲ್ಲ.

ನಮ್ಮ ಚಂದಾದಾರರ ಬಳಗದಲ್ಲಿ:

ಸೋದರ ಸೋದರಿಯರೆ, ಜಯಂತಿಯ ಕಾರ್ಯ ಮಹತ್ತ್ವವೆಂತಹದೆಂಬುದನ್ನು, ಬಹುದಿನಗಳಿಂದಲೂ ಅದನ್ನು ನೋಡುತ್ತಿರುವ ತಾವು ಚೆನ್ನಾಗಿ ಮನವರಿಕೆ ಮಾಡಿಕೊಂಡಿದ್ದೀರಿ. ಸದ್ಯದ ಆರ್ಥಿಕ ಸಂಕಷ್ಟದಿಂದ ಅದನ್ನು ಪಾರುಮಾಡಿ ಅದರ ದಾರಿಯನ್ನು ಸುಗಮಗೊಳಿಸಲು ನಿಮ್ಮ ನೆರವು ಅತ್ಯಂತ ಅಗತ್ಯದ್ದಾಗಿದೆ. ಒಬ್ಬೊಬ್ಬರು ಒಬ್ಬೊಬ್ಬರಂತೆ ಹೊಸ ಚಂದಾದಾರರನ್ನು ಒದಗಿಸಿಕೊಟ್ಟರೆ, ಖಂಡಿತವಾಗಿ ಜಯಂತಿಯ ಆರ್ಥಿಕ ಸಮಸ್ಯೆ ಪರಿಹಾರವಾಗುವುದು. ಇಷ್ಟೊಂದು ಸಣ್ಣ ನೆರವೇ ಜಯಂತಿಗೆ ಸಂಜೀವಿನೀ ಶಕ್ತಿಯಾಗಿ ಪರಿಣಮಿಸಬಲ್ಲದು. ನಮ್ಮ ಚಂದಾದಾರ ಬಂಧುಗಳು ಈ ಸಂಗತಿಯನ್ನು ಮನದಂದು, ಈ ವರ್ಷದ ಜಯಂತಿಯ ಚಂದಾದಾರರ ಬಳಗ ಬೆಳೆಯುವಂತೆ ಸಹಕರಿಸಬೇಕಾಗಿ ಬೇಡಿಕೆ.

ಜಯಂತಿಯ ಹಳೆಯ ಸಂಚಿಕೆಗಳು ಕೆಲವು ಮಾರಾಟಕ್ಕೆ ದೊರೆಯುವುವು. ಅವೆಲ್ಲ ಅತ್ಯುತ್ತಮ ಕಥೆ, ಕವನ, ಏಕಾಂಕ, ಹರಟೆ, ಪ್ರಬಂಧಗಳಿಂದ ಕೂಡಿ ಇದ್ದು ವಾಚನಾಲಯಗಳಲ್ಲಿ ಸಂಗ್ರಹಿಸಿಡಲು ಯೋಗ್ಯವಾಗಿವೆ. ಮೂಲ ಬೆಲೆಯ ಮೇಲೆ ೧೦ಕ್ಕೆ ೨೫ರಂತೆ ಕಡಿಮೆ ಮಾಡಿ ಪೂರಯಿಸಲಾಗುವುದು. ಬೇಕಾದವರು ಕೂಡಲೆ ಪತ್ರವ್ಯವಹಾರ ಮಾಡಬೇಕು.

— ಸಂಪಾದಕರು.

ನಡೆದು ಬಂದ ದಾರಿ

(ಕವನ ಸಂಗ್ರಹ)

'ವಿ: ಶ್ರೀ. ಗೋಪಾಲಕೃಷ್ಣ ಅಡಿಗರು. ಪ್ರಕಾಶಕರು : ಉಷಾಸಾಹಿತ್ಯ ಮಾಲೆ, ಮೈಸೂರು. ಬೆಲೆ ೧-೦-೦.

ಇದೀಗ ಶ್ರೀ. ಗೋಪಾಲಕೃಷ್ಣ ಅಡಿಗರ ಮೂರನೆಯ ಕವನ-ಸಂಕಲನ. ೪೭ ಭಾವಗೀತಗಳನ್ನೊಳಗೊಂಡು, ಅಂದವಾದ ರಕ್ಷಾಕಟ್ಟುಗಳಿಂದ ಕೂಡಿ ಹೊರಗೆ ಬಂದಿದೆ.

ಸಂಕಲನದಾದಿಯಲ್ಲಿ ಚಿಕ್ಕದೊಂದು ಚರ್ಚಾತ್ಮಕವಾದ ಮುನ್ನುಡಿಯನ್ನು 'ಸಹೃದಯರಿಗೆ' ಎಂಬ ತಲೆಬರೆಹದ ಕೆಳಗೆ ಬರೆದು, ಕನ್ನಡ ಕವಿತೆಯ ಹೊಸ ಮಾರ್ಗವನ್ನು ಕುರಿತು ಕೆಲವೊಂದು ಮಾತುಗಳನ್ನು ಹೇಳಿರುವರು. ಈ ಸಂಕಲನಕ್ಕೆ 'ನಡೆದು ಬಂದ ದಾರಿ' ಎಂದು ಹೆಸರಿಡಲು ಎರಡು ಕಾರಣಗಳನ್ನು ಅವರು ಇದರಲ್ಲಿ ಹೇಳಿದ್ದಾರೆ: 'ಸಂಕಲನದ ಮೊದಲನೆಯ ಪದ್ಯದ ಹೆಸರನ್ನೇ ಕೊಟ್ಟು ಕೈತೊಳೆಕೊಂಡದ್ದು— ಒಂದು ; ಈವರೆಗೆ ನಾನು ಕವನರಚನೆ ಮಾಡಿದ ರೀತಿಯಲ್ಲಿ ಬಹುಶಃ ಇನ್ನು ಮುಂದೆ ಮಾಡಲಾರೆ—ಎಂಬುದರ ಸೂಚನೆ ಇನ್ನೊಂದು.'

ಹಿಂದೆ ಬರೆದಂತೆ ಇನ್ನು ಮುಂದೆ ಏಕೆ ಬರೆಯಲಾರರು—ಎಂಬುದಕ್ಕೆ ಕಾರಣವನ್ನೂ ಹೇಳಿದ್ದಾರೆ: 'ನಮ್ಮ ದೇಶಕ್ಕೆ ಸ್ವತಂತ್ರ್ಯ ಬರುವ ತನಕ ಇದ್ದ ವಾತಾವರಣ ಈಗ ಸಮೂಲ ಪರಿವರ್ತನಗೊಂಡಿದೆ. ಸ್ವಾತಂತ್ರ್ಯಸಂಗ್ರಾಮದ ಉತ್ಸಾಹ ಉದ್ವೇಗ ಆದರ್ಶ ನಿರವತತೆಯ ಹೋರಾಟ ಮುಗಿದು, ಈಗ ನಮ್ಮ ಮನಸ್ಸು ಮತ್ತೆ ನೆಲಕ್ಕೆ ಇಳಿದಿದೆ!....' ಎಂಬೀ ಕಾರಣವನ್ನು ಹೇಳಿ, 'ಆದ ಕಾರಣ ಹೊಸ ನಾಲಗೆ, ಹೊಸ ನುಡಿಕಟ್ಟು ಅಪುಗೊಳ್ಳಬೇಕಾಗಿದೆ. ಈಗ ಬರೆಯುತ್ತಿರುವ ಕವಿಗಳೆಲ್ಲ ಈ ಕುರಿತು ಯೋಚನೆ ಮಾಡಬೇಕಾದ್ದು ಅನಿವಾರ್ಯ.... ನಮ್ಮ ಹಿರಿಯ ಕವಿಗಳ ದಾರಿಯದಲ್ಲಿ ನಡೆಯುವುದರಿಂದಲೂ ಅಷ್ಟು ಕವಿತೆ ಬಂದೀತೆಂಬ... ಆದರೆ ಅದಕ್ಕೆ ಜೀವಕೊಡುವ ಸತ್ವವಾಗಲಿ, ಹೊಸ ಸಮನ್ವಯಿ ವಾಣಿಯಾಗುವ ಸಾಮರ್ಥ್ಯವಾಗಲಿ, ಖಂಡಿತ ಬರಲಾರದು' ಎಂಬ ಖಂಡಿತದ ಮಾತುಗಳನ್ನು ಬರೆದಿದ್ದಾರೆ.

ತರುಣರ ಈ ಮಾತು ಸತ್ಯವಾಗಿ ಕಾಣಬಹುದಾದರೂ ಸಂಪೂರ್ಣವರೆಗೂ ಆದುದಲ್ಲ. ಆದರಲ್ಲಿ ಸ್ವಂತದ ಅಭಿಪ್ರಾಯವನ್ನು ಪ್ರತಿಪಾದಿಸಬೇಕಾಗೇ ... ಅಭಿಮಾನದ ಆವೇಶವೂ ಬೆರೆತುಕೊಂಡಿದೆ. ...ದೆ.

ಯಾವ ಕಾಲದ ಹೊಸ ಕವಿಗಳೂ ಹೊಸತಾಗಿ ಮುಂದೆ ಬಂದಾಗ, ಶ್ರೀ. ಅಡಿಗರಂತಹ ಮಾತುಗಳನ್ನೇ ಸಾರುತ್ತ ಹೊರಟಿರುತ್ತಾರೆ. ತಾವು ಇಂದು ಬರೆಯುತ್ತಿರುವುದು ಮುಂದಿನ ಕಾಲದ ಬರುವ ಕವಿಗಳಿಗೆ ಹಳೆಯದಾಗಿಯಾಗಿ ಕಾಣುವುದೆಂಬುದನ್ನು ಅವರು ಮರೆತೇ ಬಿಟ್ಟಿರುತ್ತಾರೆ. ಕವಿಗಳ ಕೃತಿಗಳ ತೊರಸನ್ನಿವೇಶಗಳಲ್ಲಿ, ಆ ಆ ಕಾಲದ ಜನಜೀವನದ ಜನಭಾವನೆಯ ನೈಮಿತ್ತಿಕ ಚಿತ್ರಗಳು ಯಾವಾಗಲೂ ಮೂಡಿಯೇಮೂಡುತ್ತವೆ. ಕಾಲಬದಲಾದಂತೆ ಆ ನೈಮಿತ್ತಿಕ ಚಿತ್ರಗಳು ಹಳೆಯವುಗಳಾಗಿ ತೋರಬಹುದು—ಇಷ್ಟೇ. ಕಾವ್ಯವು ಜನಾಂಗದ ರಾಜಕೀಯ ಆರ್ಥಿಕ ವಿಷಯಗಳನ್ನಷ್ಟೇ ಅವಲಂಬಿಸಿ ನಿರ್ಮಿತಿಯಾಗುವುದಿಲ್ಲ. ಅದು ಹೃದಯರಾಜ್ಯಕ್ಕೆ ಸೇರಿದ್ದು. ರಸ-ಭಾವಗಳನ್ನು ನಿರ್ಮಾಣ ಮಾಡುವುದು ಅದರ ಗುರಿ. ಹೃದಯಧರ್ಮ, ರಸಭಾವಗಳು ಶಾಶ್ವತವಾದುವುಗಳು. ಕಾಲದ ಬದಲಾವಣೆ ಅವುಗಳ ಮೇಲೆ ಯಾವ ಪರಿಣಾಮವನ್ನೂ ಮಾಡಲಾರದು. ಪ್ರೀತಿ,ಭಕ್ತಿ,ವಾತ್ಸಲ್ಯ,ಉತ್ಸಾಹ,ದುಃಖ,ಹಾಸ್ಯ, ಭೀತಿ, ಹೇಸಿಕೆ, ನಾಚಿಕೆ, ತಿರಸ್ಕಾರ— ಮೊದಲಾದ ಹೃದಯ ಸಂವೇದನೆಗಳು ಯಾವಾಗಲೂ ಒಂದೇ ರೀತಿ. ಇವುಗಳನ್ನುಂಟು ಮಾಡುವ ಪರಿಸರ ಮಾತ್ರ ಹೊಸಕಾಲದಲ್ಲಿ ಕಾಣಬಹುದಷ್ಟೆ. ಹೃದಯಸಂವೇದನೆಗಳೆ ಕವನಗಳಿಗೆ ಮೂಲವಸ್ತುವಾಗಬಹುದೇ ಹೊರತು, ಕಾಲಿಕ ಪರಿಸರಗಳು ಪ್ರಮುಖ ಮೂಲಧನವಾಗಲಾರವು. ಇಂದಿನ ಇಪ್ಪತ್ತನೆಯ ಶತಮಾನದಲ್ಲಿಯೂ ಮಹಾಭಾರತ ರಾಮಾಯಣಗಳು ರಸಾನಂದವನ್ನುಂಟುಮಾಡುತ್ತವೆ. ಜೀವನಕ್ಕೆ ಸ್ಫೂರ್ತಿಯನ್ನು ಕೊಡುತ್ತವೆ. ಅದರಲ್ಲಿಯ ಪಾತ್ರಗಳ ಸುಖ-ದುಃಖ ನಮ್ಮ ಸಹಾನುಭೂತಿಯನ್ನು ಸಹಜವಾಗಿ ಸೆಳೆದುಕೊಳ್ಳುತ್ತವೆ. ಹಾಗೆ ಇರದೆ ಹೋಗಿದ್ದರೆ, ಅವು ಇದುವರೆಗೆ ಬದುಕಿಕೊಂಡು ಇರಲು ಶಕ್ಯವೇ ಇರಲಿಲ್ಲ. ಇಲ್ಲಿ ಉದಾಹರಣೆಗಾಗಿ ಭಾರತ-ರಾಮಾಯಣಗಳನ್ನು ಹೆಸರಿಸಲಾಗಿದೆ ಹೊರತು, ಯಾವ ಭಾಷೆಯ ಯಾವ ಕಾಲದ ಒಳ್ಳೆಯ ಕಾವ್ಯಗಳನ್ನೂ ಈ ನಿಯಮಕ್ಕೆ ಅನ್ವಯಿಸಿ ಹೇಳಬಹುದು. ಹಳೆಯ ಹಿರಿಯರ ಮಕ್ಕಳೇ ಹೊಸ ತರುಣರು. ಲೋಕದ ಸುಖ-ದುಃಖದ ಅನುಭವ ಇಬ್ಬರಿಗೂ ಒಂದೇ ಬಗೆಯದಾಗಿರುವುದು.

ಶ್ರೀ. ಅಡಿಗರು ತಮ್ಮ ಮುನ್ನುಡಿಯಲ್ಲಿ ತಾರುಣ್ಯದ ಉತ್ಸಾಹದ ಆವೇಶದ—ಇನ್ನೂ ಕೆಲವು ವಿಧಾನಗಳನ್ನು ಮಂಡಿಸಲು ಹೊರಟಿದ್ದಾರೆ: '.... ಆ ಸಂಪ್ರದಾಯದ ಸತ್ತ್ವ ಈಗ ತೀರಿದೆ (ರೋಮ್ಯಾಂಟಿಕ್). ಅದಕ್ಕೆ ಅವನತಿ ಬಂದಿದೆ. ಅದರ ದೋಷಗಳೆಲ್ಲ ಈಗ ಎದ್ದು ಕಾಣಹತ್ತಿವೆ. ನೆಲದ ಮೇಲೆ ಕಾಲೂರಿ ನಿಂತೇ ನಕ್ಷತ್ರವನ್ನು ಹುಡುಕುತ್ತಿದ್ದುದು ಈಗ ನೆಲಬಿಟ್ಟು ಮೇಲೇರಿ, ವೇದಾಂತದ ಮಂಜಿನಲ್ಲಿ ಮರೆಯಾಗಿ ಹೋಗುತ್ತಿದೆ. ಶಬ್ದಗಳು ಅರ್ಥದ ಸ್ಥಾನವನ್ನು ಆಕ್ರಮಿಸುತ್ತಿವೆ. ಪ್ರತಿಯೊಂದು ಭಾವವೂ

ಅನುಭವವೂ ಅತಿ ಸರಳವಾಗಿ ಸತ್ಯದಿಂದ ದೂರದೂರ ಹೋಗುತ್ತಲಿವೆ! ...'' ಇತ್ಯಾದಿಯಾಗಿ ಬರೆದಿರುವ ಮಾತುಗಳು ವಿಮರ್ಶಕರ ಕಣ್ಣಿಗೆ ಏಕಪಕ್ಷೀಯವಾದ ಮಡುಕಿನ ಮಾತುಗಳೆಂದು ಕಂಡರೆ ಅದು ಆಶ್ಚರ್ಯವೇನೂ ಅಲ್ಲ. 'ಸತ್ಯದಿಂದ ದೂರ ದೂರ ಹೋಗುತ್ತಲಿವೆ' ಎಂದು ಮಿಕ್ಕವರ ಪ್ರಾಮಾಣಿಕತನದ ಮೇಲೆ ಕೊಡಲಿಯೆತ್ತುವ ಈ ತರುಣ ಕವಿಗಳು, ತಮ್ಮ ಸತ್ಯದ ಕಲ್ಪನೆಯ ಪ್ರಾಮಾಣಿಕತನದ ಬಗೆಗೆ ಸಂಪೂರ್ಣ ವಿಚಾರಮಾಡಿದಂತೆ ಕಾಣುವುದೇ ಇಲ್ಲ.

ಇನ್ನೊಂದು ಕಡೆಗೆ '' ಈ ದೃಷ್ಟಿಯಿಂದ ನಾವು ಆಧುನಿಕ ಇಂಗ್ಲಿಷ್ ಕಾವ್ಯದ ಪ್ರಸಿದ್ಧ ಕವಿಗಳಾದ ಈಲಿಯಟ್ ಆಡೆನ್ ಮುಂತಾದವರಿಂದ ನಾವು ಇನ್ನು ಮುಂದೆ ಸ್ಫೂರ್ತಿಪಡೆಯಬೇಕಾದ್ದು ಅತ್ಯಗತ್ಯ!' ಎಂದು ಹೇಳಿದ್ದಾರೆ. ಕನ್ನಡಿಗರೆಲ್ಲ ಯಾವಾಗಲೂ ಇನ್ನೊಬ್ಬರ ಸ್ಫೂರ್ತಿಯಿಂದಲೇ ಬದುಕಬೇಕೆ ? ಎಂತಹ ಸಾಂಸ್ಕೃತಿಕ ಗುಲಾಮಗಿರಿಯಿದು? ಕನ್ನಡಿಗರಿಗೆ ಕಣ್ಣುಗಳಿಲ್ಲವೆ ? ಕಿವಿಗಳಿಲ್ಲವೇ ? ಮನಸ್ಸಿಲ್ಲವೆ ? ಹೃದಯವಿಲ್ಲವೇ ? ಬುದ್ಧಿಯಿಲ್ಲವೇ ? ಅವರಿಗೊಂದು ಜೀವನವಿಲ್ಲವೇ? ಆ ಜೀವನ ವಿಷಯಕ ಸಂವೇದನೆಗಳನ್ನು ಅನುಭವಿಸುತ್ತಿಲ್ಲವೇ ? ಅವರಿಗೆ ಸ್ವತಂತ್ರ ಪ್ರತಿಭೆಯಿಲ್ಲವೆ? ಇವೆಯೆಂದು ಒಪ್ಪಿದರೆ, ಅವರು ಇನ್ನೊಬ್ಬರ ಸ್ಫೂರ್ತಿಗೆ ಶರಣುಹೋಗಬೇಕಾದ ಕಾರಣವಿಲ್ಲ. ಇಲ್ಲವೆಂದು ಒಪ್ಪಿದರೆ, ಅವರು ಕಾವ್ಯನಿರ್ಮಿತಿಕಾರ್ಯವನ್ನು ಬಿಟ್ಟುಬಿಡಬೇಕು. ಇನ್ನೊಬ್ಬರ ಕೈಯಿಂದಲೇ ಉಂಡು ಬದುಕುವ ಪರಾವಲಂಬಿಗಳಿಂದ ಯಾವ ಮಹತ್ತ್ವದ ಕಾರ್ಯನಾದೀತು ?

ಇಲ್ಲಿ ಇವೆಲ್ಲ ಮಾತುಗಳನ್ನು ವಿವರಿಸಿ ಬರೆದಿರುವುದು ಶ್ರೀ. ಅಡಿಗರೊಬ್ಬರಿಗಾಗಿ ಅಲ್ಲ. ಶ್ರೀ ಅಡಿಗರಂತೆಯೆ ಮಾತನಾಡುವ ತರುಣ ಸಾಹಿತ್ಯಿಕರು, ಈಗ ನಮ್ಮ ನಾಡಿನಲ್ಲಿ ಬಹಳ ಜನರು. ಅವರೆಲ್ಲರೂ ತಾವಾಡುವ ಆವೇಶದ ಮಾತುಗಳನ್ನು ಕುರಿತು ವಿವೇಕದ ತೂಕದ ಬುದ್ಧಿಯಿಂದ ತೂಗಿನೋಡಿ ವಿಚಾರಮಾಡಬೇಕೆಂಬ ಹಾರಯಿಕೆಯಿಂದ, ಮುನ್ನುಡಿಯ ವಿಮರ್ಶೆಯನ್ನು ಸ್ವಲ್ಪ ಲಂಬಿಸಬೇಕಾಯಿತು. ಕ್ಷಮಿಸಿ.

ಸಂಕಲನದ ಮೊದಲನೆಯ ಕವಿತೆ 'ನಡೆದುಬಂದ ದಾರಿ' ಎಂಬುದು. ಈ ಕವಿತೆಯ ಪಲ್ಲವಿ 'ನಡೆದು ಬಂದ ದಾರಿ ಕಡೆಗೆ ತಿರುಗಿಸಬೇಡ ಕಣ್ಣ — ಹೊರಳಿಸಬೇಡ !' ಎಂದು. ಕವಿತೆಯ ಭಾಷೆಯಲ್ಲಿ ಒಂದು ತೇಜವಿದೆ. ಆದರೆ ಪ್ರಾಸಾನುಪ್ರಾಸಗಳ ಮೋಹದ ಮೂಲಕ, ಅರ್ಥಸ್ಪಷ್ಟತೆಯಿಲ್ಲದೆ ಕವಿತೆಯೊಂದು ಒಗಟಿನಂತೆ ಆಗಿಬಿಟ್ಟಿದೆ. ಅಲ್ಲದೆ ಈ ಕವಿಯಲ್ಲಿ ಹುದುಗಿದ ಕವಿಯ ತತ್ತ್ವಾನುಸಂಧಾನವೂ ಚರ್ಚಾಸ್ಪದವಾಗಿದೆ. ಮಾನವ ಮುಂದುವರಿದು ತನ್ನ ಗುರಿಯನ್ನು ಸಾಧಿಸಬೇಕೆನ್ನೋ ನಿಜ; ಆದರೆ ಮುಂದುವರಿಯಲು ಬೇಕಾದ ಶಕ್ತಿ-ಯುಕ್ತಿಗಳನ್ನು ಸಂಪಾದಿಸಬೇಕಾದರೆ, ನಡೆದ ದಾರಿಯ ಅನುಭವಗಳನ್ನು ನೆನಪಿಟ್ಟುಕೊಂಡೇ ಮುಂದುವರಿಯಬೇಕಾಗುವುದು. ಭೂತಕಾಲದ ಬಲವಿಲ್ಲದವನು, ವರ್ತಮಾನದಲ್ಲಿ ಬರುವ ಎಡರು-ತೊಡರುಗಳನ್ನು ಎದುರಿಸಲಾರದೆ, ಕಂಗೆ[ಟ್ಟು] ನಿಂತಲ್ಲಿ ನಿಂತುಬಿಡಬಹುದು. ಹೀಗೆ ನಿಂತುಕೊಂಡವನು ಮುಂ[ದು]ವರಿಯನು. ಗುರಿಯನ್ನು ಸಾಧಿಸುವ ಸುಂದರ ಭವಿಷ್ಯ ಅವನಿ[ಗಿಲ್ಲ]ದುದು. ಈ ಕವಿತೆಯಲ್ಲಿ ಕವಿ ಹೇಳುವ ತತ್ತ್ವಸಂದೇಶ ಅಭ್ರ[ಮ]ಪೂರ್ಣವಾಗಿದೆ.

ಮಿಕ್ಕ ಸಂಕಲನದಲ್ಲಿ ೧೪ನೆಯ ಕವಿತೆಯಿಂದ ೩೨ನೆಯ ಕವಿತೆ[ಯ] ವರೆಗಿನ ೩೨, ದಾಂಪತ್ಯ ಜೀವನದ ರತಿ, ಹಾಸ, ದುಃಖ, ಸುಖ[ದ] ವಿಷಯಗಳನ್ನು, ಒಳಗೊಂಡಿದ್ದು ಮಿಕ್ಕೆಲ್ಲ ಕವಿತೆಗಳು ಕ[ವಿ] ಅಭಿಪ್ರಾಯದಂತೆ ಹೊಸ ಮಾರ್ಗದ ಭಾವಗೀತಗಳಾ[ಗಿವೆ]. ಅವೆಲ್ಲವುಗಳಲ್ಲಿ ಹೆಚ್ಚಾಗಿ, ನಮ್ಮ ನಾಡಿನಲ್ಲಿ ಅವತರಿಸಿದ ಸಾಮ[ಾ]ಜಿಕ ಅವನತಿಯ ವಿಚಾರದಲ್ಲಿ ಕವಿಯು ಬಿಟ್ಟ ಕುತ್ತು ಸುರು ನಿ[ಟ್ಟು]ಸಿರುಗಳೇ ಕಂಡುಬರುತ್ತವೆ. 'ಗಾಂಧಿ' ಎಂಬ ಹೆಸರಿನ ನೀಳ್ಗ[ವನ]ದಲ್ಲಿಯ ಭಾವಪರಿಪುಷ್ಟಿ ಪರಿಣಾಮಕಾರಿಯಾಗಿದೆ. ಆದರೆ ಉದ್ದ[ಕ್ಕೂ] ರೂಪಕದ ಧ್ವನಿಯಿಟ್ಟುಕೊಂಡೇ ಸಾಗಿದುದರಿಂದ, ಈ ಕವಿತೆ[ಯ] ಅರ್ಥದ ಮೇಲೂ ಅಸ್ಪಷ್ಟತೆಯ ದಪ್ಪಗಿನ ತೆರೆ ಬಿದ್ದುಕೊಂಡಿ[ದೆ].

'ಇಂದು ನಮ್ಮ ನಾಡು' ಎಂಬ ಕೊನೆಯ ಮೂರು ಕ[ವನ]ಗಳು, ನಮ್ಮ ನಾಡಿನ ದುಃಸ್ಥಿತಿಯ ಚಿತ್ರವನ್ನು ಕಲಾತ್ಮಕವಾ[ಗಿ] ಮೂಡಿಸಿಕೊಂಡಿವೆ. 'ಓ ನನ್ನ ಜನವೇ!' 'ಹೊಸಗನ್ನ[ಡ] ಹಾಡು' ಎಂಬ ಕವನಗಳು, ಕವಿಯ ಕನ್ನಡ ನಾಡಿನ ವಿಷಯ[ಕ]ವಾದ ಪ್ರೀತಿ, ವಿಶ್ವಾಸ, ಕಳವಳಗಳನ್ನು ಪ್ರಕಟಿಸುವಂತಹ[ವಾ]ಗಿವೆ. 'ರಾಜ್ಯ ಬಂದರೇನು ?' 'ಇಂಡಿಯನ್ ರಿಪಬ್ಲಿಕ್' 'ನನ್ನ ಅವತಾರ' ಮೊದಲಾದುವು, ನಮ್ಮ ಸ್ವಾತಂತ್ರ್ಯೋ[ತ್ತರ] ಭಾರತದಲ್ಲಿ ಮೂಡಿನಿಂತ ಅಧಿಕಾರಮೋಹದ ದುಷ್ಪರಿಣಾಮ[ದ] ವಾಸ್ತವ-ವ್ಯಂಗ್ಯಚಿತ್ರಗಳಾಗಿವೆ. 'ಪುಷ್ಪಕವಿಯ ಪರಾಕು' ಎಂಬುದು, ಒಂದು ಬಗೆಯ ಕವಿಯ ವ್ಯಕ್ತಿತ್ವದ ಸುಂದರ ವಿಡಂ[ಬನೆ]ಯಿಂದ ಕೂಡಿದೆ.

ಶ್ರೀ. ಅಡಿಗರ ಕವನಗಳ ಭಾಷೆಯಲ್ಲಿ ಎಲ್ಲಿ ನೋಡಿದ[ರೂ] ಒಂದು ರಭಸ ಕಾಣುತ್ತದೆಯಾದರೂ, ಅರ್ಥಸ್ಪಷ್ಟತೆಗಾಗಿ [ಹುಡು]ಕುರಿಸಬೇಕಾದ ಎಡೆಗಳು, ಅಲ್ಲಲ್ಲಿ ಓದುಗರನ್ನು ನಿಲ್ಲಿಸಿಬಿಡುವ[ವು]. ಸುಂದರ ಭಾವನೆಗಳ ಉದಯಗಳನ್ನು ಕಾಣುತ್ತೇವಾದ[ರೂ] ಪ್ರಾಸಾನುಪ್ರಾಸಗಳ ತೊಡರಿನಲ್ಲಿ ಸಿಕ್ಕಿಕೊಂಡ ಅವುಗಳ ವಿಕ[ಲ] ಪೂರ್ಣತೆ ಕಣ್ಣಿಗೆ ಬೀಳುವುದು ಕೆಲವು ಕವನಗಳಲ್ಲಿ ಮಾ[ತ್ರ]. ಮುನ್ನುಡಿಯಲ್ಲಿ ಈ ಕವಿಗಳು ಹಿರಿಯ ಕವಿಗಳ ಮೇಲೆ ಮಾ[ಡಿದ] 'ಶಬ್ದಗಳು ಅರ್ಥದ ಸ್ಥಾನವನ್ನು ಆಕ್ರಮಿಸುತ್ತವೆ' ಎಂ[ಬ] ದೋಷವು, ಇಲ್ಲಿಯ ಕವನಗಳಿಗೂ ಅನ್ವಯಿಸುತ್ತದೆ. ದಾಂಪ[ತ್ಯ] ಗೀತಗಳಲ್ಲಿ ರತಿಭಾವಕ್ಕಿಂತ ಕಳವಳವು ಚಿತ್ರಿತವಾ[ಗಿದೆ]. [ಅ]ವಲ್ಲಿ ಗೀ[ತ]ಗಳು ಹೆಚ್ಚು ಪರಿಣಾಮಕಾರಿಯಾಗಿವೆ. ಎಂತೇ[ಆ]ಕೀ 'ಸ[ತ್ಯ] ಮೋಹದ ಮೂರ್ತಿ' ಒಡೆದು ಬಿದ್ದ ಕೊಳಲು, ಮೊ[ದಲ]ಾದ ಕವ[ನ]ಗಳು ವಾಚಕರ ಮನಸ್ಸನ್ನು ಹೆಚ್ಚಿಗೆ ಹಿಡಿಯಬಹುದು.

—ಬಿ. ಪಿ. ಎಸ್. ರಾವ್.

"ಬಿಚ್"

(ಸಣ್ಣ ಕತೆ)

ಶ್ರೀ. ಅಶ್ವತ್ಥ, ಬನಾರಸ

★

ನಾವು ಒಳ್ಳೆಯವೆಂದು ಮಾಡಿದ ಕೆಲಸಗಳೆಷ್ಟೋ ಅಳಿಗೆಲಸಗಳೆಂದು ತಿಳಿದುಬಂದು, ನಮ್ಮನ್ನು ಕಳವಳಕ್ಕೆ ಗುರಿಯಾಗಿಸುವುವು. ಗೈರೋಲಾ ಪಾಪ, ಲೋಕಕಲ್ಯಾಣದ ಸದಿಚ್ಛೆಯಿಂದಲೇ ಹುಚ್ಚುನಾಯನ್ನು ಕೊಲಿಸಿದ, ಆದರೆ....!

—××●××—

ಆ ಸಂಜೆ, ನನ್ನ ಸ್ನೇಹಿತರು ಪ್ರೊಫೆಸರ್ ಗೈರೋಲಾರವ-ರೊಡನೆ ಮಾಮೂಲುಹರಟೆ ಹೊಡೆದುಕೊಂಡು ಬರಬೇಕೆಂದು ಹೋದಾಗ, ಅವರು ಬಂಗಲೆಯ ಮುಂದೆ ಗೇಟಿನ ಬಳಿಯೇ ನಿಂತಿದ್ದರು. ಅವರ ಕೈಯಲ್ಲಿ ದೊಡ್ಡ ಲಾಠಿ ಇತ್ತು. ಸಾಮಾನ್ಯ-ವಾಗಿ ನಸುನಗು ತುಳುಕುತ್ತಿರುವ ಮುಖದಲ್ಲಿ ಕೊಂಚ ಆತಂಕ-ವಿದ್ದಂತಿತ್ತು. ಕಣ್ಣುಗಳಲ್ಲಿ ನಸು ಕೋಪವನ್ನೂ ಕಂಡೆನೋ ಏನೋ!

"ಏನು ಯಮಧರ್ಮರಾಯನ ಹಾಗೆ ನಿಂತುಬಿಟ್ಟಿದೀರಲ್ಲ? ಯಾವ ಬಡಪಾಯಿಗೆ ಗ್ರಹಚಾರ ಕಡಿಮೆಯಾಗಿದೆ?" ಸಲಿಗೆ-ಯಿಂದ ಅವರ ವಿನೋದವನ್ನು ಕೆದಕಲು ಯತ್ನಿಸಿದೆ. ಆದರೆ ಸಫಲವಾಗಲಿಲ್ಲ.

"ಬನ್ನಿ, ಬನ್ನಿ. ನೋಡಿ, ನನ್ನ ಸೋದರಳಿಯನ್ನ ಹುಚ್ಚು ನಾಯಿ ಕಚ್ಚಿಬಿಟ್ಟಿದೆ!"

"ಆ!"

"ಹೂಂ. ಈಗ ತಾನೆ ಆಸ್ಪತ್ರೆಗೆ ಕಳಿಸಿದೆ–ನಮ್ಮ ತಂದೆಯ ಜತೇಲಿ. ನಮ್ಮ ಚಂದು ಇಷ್ಟು ಹೊತ್ತಾದರೂ ಆಟದಿಂದ ಬಂದಿಲ್ಲ–ತುಂಟ ಹುಡುಗ. ಅವನೆಲ್ಲಿ ಎತ್ತಲೋ ಯಾವಾಗಲೋ ಬಂದು ಕಚ್ಚಿಸಿಕೊಂಡುಬಿಡ್ತಾನೋ ಅಂತ ಹೆದರಿಕೆಯಾಗಿದೆ. ಇಲ್ಲೇ ನಿಂತಿದೀನಿ, ಸುತ್ತಮುತ್ತ ನೋಡ್ತಾ. ಮಕ್ಕಳ ಸ್ಕೂಲಿಗೆ ಆಳನ್ನೂ ಅಟ್ಟಿದೀನಿ."

ಅವರ ಮನೆ ರಸ್ತೆ ಚೌಕದ ಬಳಿ. ನಾಲ್ಕು ಕಡೆಗಳಲ್ಲೂ ದೂರದವರೆಗೂ ನೋಡುವುದು ಸಾಧ್ಯವಾಗಿತ್ತು.

"ಹಾಗೇ? ಮತ್ತೆ ಈ ನಾಯಿ....?" ಎನ್ನುತ್ತ ಅತ್ತಿತ್ತ ನೋಡಿದೆ.

"ಹಾಳಾದ್ದು ಯಾವುದೋ ಬೀದಿಯ ಬಿಚ್, ಇಲ್ಲೇ ಸುತ್ತ ಮುತ್ತ ಎಲ್ಲೋ ಇದೆ. ಕಚ್ಚಿದಾಗ ನಾನೂ ವರಾಂಡದಲ್ಲಿ ನಿಂತಿದ್ದೆ. ಅಗೋ, ಆ ಜೋಳದ ಹೊಲದೊಳಕ್ಕೆ ಓಡಿಹೋಗಿ ಮರೆಸಿಕೊಂಡು ಬಿಡತು. ಈಗ ಎಲ್ಲಿ ಹೋಗಿರಬಹುದೋ ಕಾಣೆ. ಇಲ್ಲೇ ಹೊರಗೆ ಬಂದರೂ ಬಂದೀತು ಅಂತ ಕಾದಿದೀನಿ."

"ಕಚ್ಚಿದ್ದು ಎಲ್ಲಿ?" ರಸ್ತೆಯ ಆಚೆಗೆ ದೂರದಲ್ಲಿ ದಟ್ಟವಾಗಿ ಬೆಳೆದಿದ್ದ ಎತ್ತರವಾದ ಪೈರಿನ ಕಡೆಗೆ ಕಣ್ಣನ್ನು ಹೊರಳಿಸುತ್ತ ಕೇಳಿದೆ.

"ಅಗೋ, ಅಲ್ಲೇ ಆ ಸಣ್ಣ ಸೇತುವೆ ಇದೆಯಲ್ಲ; ಅದರ ಬಳೀಲೇ. ಕಾಲೇಜಿನಿಂದ ಬರ್‍ತಾ ಇದ್ದಾಗ, ಏನೋ ಕಾಗದ ಕೈಯಿಂದ ಹಾರಿ ಆ ಮೋರಿ ಕಡೆಗೆ ಹೋಯ್ತಂತೆ. ಅಲ್ಲಿಗೆ ಇಳಿದು ಕಾಗದಾನ ಕೈಗೆ ತಗೊಂಡ ಹೊತ್ತಿನಲ್ಲಿ, ಆ ಸೇತುವೆ ಒಳಗಿನಿಂದ ಓಡಿ ಬಂದು ಕಚ್ಚಿಬಿಟ್ಟಿತಂತೆ. ಕೂಗಿಕೊಂಡ. ನಾವು ಇನ್ನೂ ಯಾರು ಯಾರೋ ಓಡಿ ಹೋಗೋ ಹೊತ್ತಿಗೆ ಆ ಬಿಚ್ ತಪ್ಪಿಸಿಕೊಂಡು ಬಿಡ್ತು. ಹುಡುಗನ ಕಾಲಿನ ಮೀನಖಂಡದ ಮೇಲೆ ನಾಲ್ಕೂ ಹಲ್ಲುಗಳು ಊರಿ ರಾಮಾರಕ್ತ ಸುರೀತಾ ಇತ್ತು."

"ಛೀ, ಪಾಪ!" ನಾನು ಹತ್ತಿರದ ರಸ್ತೆಯ ಪಕ್ಕದಲ್ಲಿದ್ದ ಉದ್ದವಾದ ಸೇತುವೆಯ ಕತ್ತಲೆಯ ತೂತಿನ ಕಡೆಗೆ ನೋಡುತ್ತ ಧ್ವನಿಯನ್ನು ಎಳೆದು ಹೇಳಿದೆ.

"ಹುಂ, ಎಲ್ಲ ದುರದೃಷ್ಟ. ಇನ್ನು ಹದಿನಾಲ್ಕು ಇಂಜಕ್ಷನ್ ಚುಚ್ಚಿಸಿಕೊಳ್ಳಬೇಕು. ಹಾಗೂ ಏನೋ ಎಂತೋ ಹೇಳೋದ-ಕ್ಕಾಗೋದಿಲ್ಲ."

"ಹೌದು."

"ಎಂಥಾ ನಾಯಿ ಕಚ್ಚಿದರೂ ಪಾಡೇ. ಇನ್ನು ಹುಚ್ಚು ನಾಯಿ ಅಂದಮೇಲೆ ಇನ್ನೂ ಹೆಚ್ಚು ಆತಂಕ."

"ನಿಜ."

ನನ್ನ ಕಣ್ಣು ಹಾಗೇ ದೂರದಲ್ಲಿ ಬರುತ್ತಿದ್ದ ಬಿಳಿಯ ನಾಯಿ-ಯೊಂದರ ಕಡೆಗೆ ಹೋಯಿತು:

"ಅಗೋ ಅಲ್ಲೊಂದು...." ಆಕಡೆಗೆ ಕೈ ತೋರಿಸಿದೆ.

"ಛೀ, ಅದಲ್ಲ! ಈ ಹುಚ್ಚು ನಾಯಿ ಕಂದು ಬಣ್ಣದ್ದು!"

"ಇದೂ ಎಂಥಾದ್ದೋ ಯಾರಿಗೆ ಗೊತ್ತು?" ನಾನು ಆಧೈರ್ಯದಿಂದ ಅನುಮಾನಿಸಿದೆ.

"ಉಹುಂ. ಇದು ಹುಚ್ಚಲ್ಲ. ಅದರ ಬಾಲ ನೋಡಿ: ಸುತ್ತಿ-ಕೊಂಡಿಲ್ಲವೆ?"

"ಆದರೆ?"

"ಹುಚ್ಚು ನಾಯಿ ಬಾಲ ಭೂಮಿ ಕಡೆಗೆ ಇಳಿದು ನೆಟ್ಟಗಿರುತ್ತೆ ಅಂತ ಪ್ರೊಫೆಸರ್ ಚಕ್ರವರ್ತಿ ಅವೊತ್ತು ಟೇಬಲ್‌ನಲ್ಲಿ ಹೇಳಿದ್ದನ್ನ ಮರೆತುಬಿಟ್ಟಿರ–ಹುಚ್ಚುನಾಯಿಗಳ ಮಾತು ಬಂದಾಗ?"

"ಅಯ್ಯೋ, ಅದೇನು ಮಾತು ಬಿಡಿ. ಅವೊತ್ತೇ ನಾವೆಲ್ಲ ಗೇಲಿ ಎಬ್ಬಿಸಲಿಲ್ಲವೆ?"

"ಉಹುಂ, ಉಹುಂ. ಹಾಗಲ್ಲ. ಅವರು ಹೇಳಿದ್ದು ಸರಿ. ಇವತ್ತು ನಾನೇ ಕಣ್ಣಾರ ಕಂಡೆ."

"ಆಹಾ !"

"ಹೂಂ, ರಾವ್‌ಜೀ! ಅದರ ಬಾಲ ಎಷ್ಟು ನೆಟ್ಟಗೆ ನೆಲದ ಕಡೆಗೆ ಬಗ್ಗಿತ್ತು ಅಂತೀರಾ ?"

"ಅಲ್ಲವೆ ?" ನನಗೂ ಅಷ್ಟಿಷ್ಟು ನಂಬಿಕೆ ಬರುತ್ತಿತ್ತು.

"ನನ್ನಿಂದ ತಗೊಳ್ಳಿ–ಇವತ್ತು. ನಂಗೆ ಪೂರ್ತಿಯಾಗಿ ಭರವಸೆ ಬಂದಿದೆ. ಅವರ ಮಾತು ಹಾಸ್ಯಾಸ್ಪದವಾದದ್ದೇನಲ್ಲ — ಖಂಡಿತವಾಗಿ."

ನಾನು ವಿರೋಧಿಸಲಿಲ್ಲ. ಇರಬಹುದೆಂದು ಸುಮ್ಮನಿದ್ದು ಬಿಟ್ಟೆ. ಯಾರು ಕಂಡವರು, ಎಂತೆಂತಹ ವಿಚಿತ್ರವಿದೆಯೆಂದು? ಪ್ರೊಫೆಸರ್ ಚಕ್ರವರ್ತಿಯವರು ಬಹಳ ಲೋಕಾನುಭವದವರೆನ್ನುವುದು ನಮಗೆ ಯಾವಾಗಲೋ ಮನದಟ್ಟಾಗಿತ್ತು. ವಿಚಿತ್ರ ವಿಷಯಗಳನ್ನು ಸಂಗ್ರಹಿಸಿ ಹೇಳುವುದರಲ್ಲಿ ಅವರು ಬಹಳ ನಿಸ್ಸೀಮರು. ಎಷ್ಟೋ ವೇಳೆ ನಮಗೆ ದಂಗುಬಡಿಯುವಂತಹ ವಿಷಯಗಳನ್ನು ಹೇಳಿದ್ದರು; ದಂಗು ಒಡೆಯುವಂತೆಯೇ ನಿಶ್ಚಿತಪಡಿಸಿಯೂ ಇದ್ದರು. ಆದುದರಿಂದ ಅವ. ಮಾತೆಂದರೆ ನಮಗೆಲ್ಲ ಬಹಳ ಆಸಕ್ತಿ, ಹಾಗೇ ಗೌರವ. ಆದರೂ ಹುಚ್ಚುನಾಯಿಯ ಬಾಲದ ಬಗ್ಗೆ ಅವರು ಮಾಡಿದ್ದ ಸಿದ್ಧಾಂತ ನಮ್ಮ ಹೊಟ್ಟೆಯನ್ನು ಹುಣ್ಣಾಗಿಸಿದ್ದಿತು–ನಗುವಿನಿಂದ. ಹುಚ್ಚುಹುಚ್ಚಾಗಿ ನಕ್ಕು ಅವರ ರೇಗಿಗೆ ಗುರಿಯಾಗಿದ್ದೆವು. ಈಗ ಇದೂ ನಿಶ್ಚಯವಾಗಿ ಹೋಗಬೇಕೇ!

ಹಾಗೇ ಹುಚ್ಚುನಾಯಿಯಿಂದ–ಈ ಹಿಂದೂ ವಿಶ್ವವಿದ್ಯಾನಿಲಯದ ಆವರಣದಲ್ಲೇ ನಾಯಿಗಳ ಬಾಹುಳ್ಯಕ್ಕೆ ನಮ್ಮ ಮಾತು ತಿರುಗಿತು.

"ಅಬ್ಬಬ್ಬ! ಏನು ಹರಿ ನಾಯಿ ಇಲ್ಲಿ. ಬೀದಿ ಬೀದಿಗೂ ನಾಲ್ಕಾರು. ಹೇಳೋರು ಕೇಳೋರು, ದಿಕ್ಕು ದಿವಾಣ ಏನೂ ಇಲ್ಲ. ಬೀದಿನಾಯಿಗಳು ಅಂತ ಬಂಡಿಗೆ ತುಂಬಿಕೊಂಡು ನೀರಲ್ಲಿ ಮುಳುಗಿಸೋದಕ್ಕೆ ಮುನಿಸಿಪಾಲಿಟಿ ಗಿನಿಸಿಪಾಲಟಿಯೂ ಇಲ್ಲ ಇಲ್ಲಿ. ಯಥೇಚ್ಛವಾಗಿ ಈ ನಾಯಿ ಹಿಂಡುಗಳು. ಎಲ್ಲೆಲ್ಲೂ ಅವೇ. 'ಮೇಟಿಂಗ್ ಸೀಸನ್' ನಲ್ಲಂತೂ ದೇವರೇ ಗತಿ. ಅವುಗಳ ಬೊಗಳು–ಜಗಳಗಳಲ್ಲಿ ನಮಗೆ ಎಷ್ಟು ನಿದ್ರಾಭಂಗವೋ. ಈ ವರ್ಷವಂತೂ ಬಹಳ ಫಜೀತಿಯಾಯ್ತು" ಗೈರೋಲ ಗೊತ್ತಿದ್ದ–ವಿಷಯವನ್ನೇ ಒತ್ತೊತ್ತಿ ಹೇಳಿದರು.

"ಹೌದು, ಹೌದು" ನಾನೂ ಧ್ವನಿ ಕೂಡಿಸಿದೆ.

"ನಾನು ಆ 'ವಾಚ್ ಅಂಡ್ ವಾರ್ಡ್' ಆಫೀಸರ್ ಸನ್ನಾಲರಿಗೆ ಅರ್ಜಿನೂ ಕೂಡ ಹಾಕಿದೆ... ಏನಾದರೂ ಮಾಡಿ ಈ ವಿಚಾರದಲ್ಲಿ ಅಂತ."

"ಹೂಂ, ಅಂದ ಹಾಗೇ, ಅವರು ಒಂದು ನೋಟೀಸನ್ನೂ ಕಳಿಸಿದ್ದರಲ್ಲ—ಯಾವತ್ತೋ, 'ಬೀದಿ ನಾಯಿಗಳನ್ನೆಲ್ಲ ಹಿಡಿದು ಹಾಕ್ತೀವಿ. ನಾಯಿಗಳನ್ನು ಇಟ್ಟುಕೊಂಡಿರೋರು ಅವುಗಳ ಕತ್ತಿಗೆ ಪಟ್ಟಿ ಹಾಕಿರಬೇಕು. ಇಲ್ಲದಿದ್ದರೆ ಅವನ್ನು ಒಯ್ಯಲಾಗುತ್ತೆ' ಅಂತ? ಅದೇನಾಯ್ತು ?"

"ಏನಾಯ್ತು! ಇಲ್ಲಿ ಎಲ್ಲ ಆಗೋ ಹಾಗೇ. ಯಾರೂ ಒಂದು ನಾಯಿಯನ್ನೂ ಹಿಡಿದುಕೊಂಡು ಹೋಗಲಿಲ್ಲ. ಈ ನೋಟೀಸು ಬಂದ ಕೂಡಲೇ ಎಂಥೆಂಥ ನಾಯಿಯೋ ಎಲ್ಲೆಲ್ಲಿತ್ತೋ ಎಲ್ಲದರ ಕತ್ತಿಗೂ ನಮ್ಮ ಬೀದಿ ಹುಡುಗರು ಒಂದೊಂದು ಪಟ್ಟಿ ಹಾಕಿ ಬಿಟ್ಟರು. ಆಯ್ತಲ್ಲ!"

"ಹ್ಞ! ಹಾಗೇಂತ ನೀವೇನು ವ್ಯಸನಪಡಬೇಕಾಗಿಲ್ಲ. ನೋಟೀಸಿಗೇ ನಿಂತು ಹೋಯ್ತು ಅಂತ ಕಾಣುತ್ತೆ ಕಾರ್ಯಕ್ರಮ. ಅಧಿಕಾರಿಗಳು ನಮ್ಮ ಬೀದೀಲೂ ಯಾವುದೊಂದು ನಾಯಿಯ ತಂಟೆಗೂ ಹೋದಂತಿಲ್ಲ. ನೋಟೀಸಿಗೇ ಹೆದರಿಕೊಂಡು ನಾಯಿಗಳು ಓಡಿ ಹೋಗುತ್ತವೆ ಅಂದುಕೊಂಡರೋ ಏನೋ!"

"'ಅಹಿಂಸಾ ಪರಮೋಧರ್ಮಃ' ಅಲ್ಲವೆ? ಈ ಸಂಸ್ಥೆಯ ನೂರಾರು ದೊರೆಗಳಲ್ಲಿ ಯಾವ ಮಹನೀಯ ಬೇಡ ಅಂದನೋ, ಹೇಳೋರು ಯಾರು? ಅಥವಾ ಬರೀ ಸೋಮಾರಿತನವೋ! ಅಂತೂ ನಾಯಿಗಳಿಗೆ ಒಳ್ಳೇ ಕಾಲ ಬಿಡಿ. ನಮ್ಮ ದೇಶದ ಜನಸಂಖ್ಯೆಯ ಹಾಗೇ ಇವುಗಳ ಸಂಖ್ಯೆಯೂ ಬೆಳೀತಾ ಇದೆ. ಇವಕ್ಕೇನು ಕೆಲಸ? ಹೇಗೆ ಹೇಗೋ ಹೊಟ್ಟೆಗಷ್ಟು ಹಾಕಿಕೊಳ್ಳೋದು, 'ಮೇಟ್' ಆಗೋದು, ಮರಿ ಹಾಕೋದು; 'ಮೇಟ್' ಆಗೋದು, ಮರಿ ಹಾಕೋದು; ಅಷ್ಟೆ. ಹುಂ, ಇವನ್ನ ಯಾಕೆ ಯೋಚಿಸಬೇಕು, ಜನವೇ ಈ ವಿಚಾರದಲ್ಲಿ ಇವುಗಳ ಹಾಗಿರೋವಾಗ—ಲೆಕ್ಕಾಚಾರವಿಲ್ಲದೆ ?"

"ನಿಜ."

"ಇನ್ನೇನು ಮರಿ ಹಾಕೋ ಸೀಸನ್ ಬಂತು ಅಂದರೆ, ಎಲ್ಲೆಲ್ಲೂ ಕೀಯ ಪೀಯ ಅಂತ ಆ ಹಾಳು ಮರಿ ಮುಂಡೇವೇ. ಬೀದಿ ಹುಡುಗ ಒಬ್ಬೊಬ್ಬನ ಕೈಲೂ ಒಂದೊಂದು. ಈ ಹುಡುಗರ ಹೊಡೆತವೋ ಬಡಿತವೋ, ಎಳೆದಾಟವೋ ಚಿತ್ರಹಿಂಸೆ. ನೋಡೋದಕ್ಕಾಗೋದಿಲ್ಲ. ಮತ್ತೆ ಅವಕ್ಕೆ ಇನ್ನು ಹಾಲೋ ನೀರೋ ರೊಟ್ಟಿಯೋ, ಅನ್ನವೋ, ಮನೆಯೋರಿಗೆಲ್ಲ ಫಜೀತಿ. ಖರ್ಚು ಬೇರೆ, ಈ ರೇಷನ್ ಕಾಲದಲ್ಲಿ. ಈ ಕಷ್ಟಕ್ಕೆ ಪ್ರತಿಫಲವಾಗಿ ಅವುಗಳ ಹೊಲಸು ಬಳಿಯೋದು. ಹೀಗೆ ನಾವೇ ಬೆಳೆಸಿದ್ದರಲ್ಲಿ ಯಾವ ಯಾವುದೋ ಹುಚ್ಚುಗಿಚ್ಚಾಗಿ, ಇಗೋ ಈಗ ಆದ ಹಾಗೆ ನಾವು ಕಚ್ಚಿಸಿಕೊಂಡು ಪರದಾಡೋದು ಬೇರೆ. ಅತ್ಮಹತ್ಯೆ. ಸಾಕಪ್ಪಾ ಸಾಕು!" ಗೈರೋಲ ಉದ್ದವಾಗಿ ನಿಟ್ಟುಸಿರನ್ನು ಬಿಟ್ಟರು.

ನಾನೂ ಇಲ್ಲಿಯ ನಾಯಿ ಬಾಹುಳ್ಯವನ್ನು ಕಂಡುಕೊಂಡಿದ್ದೆ. ಆದರೆ ವಿಷಯ ಇಷ್ಟೊಂದು ವಿಷಮಾವಸ್ಥೆಯಲ್ಲಿದೆಯೆಂದುಕೊಂಡಿರಲಿಲ್ಲ. ಸ್ನೇಹಿತರ ಮಾತುಗಳನ್ನು ಕೇಳುತ್ತ ನನಗೂ ಸ್ಥಿತಿ ಭಯಂಕರವಾಗಿದೆಯೆನ್ನಿಸಿತು. ಅವರ ಮಗು ಸಣ್ಣ ಚಂದುವಿನ ಬಗ್ಗೆ ನಿಜವಾಗಿಯೂ ಬಹಳ ಕಳವಳವಾಯಿತು.

“ ಬನ್ನಿ, ಮಗು ಬರೋ ದಾರೀಲೇ ಸ್ಕೂಲಿನ ಕಡೆಗೆ ಹೋಗೋಣ ” ಎಂದು ಸೂಚಿಸಿ ಹೆಜ್ಜೆಯಿಟ್ಟೆ. ಅವರೂ ಮಾತಿಲ್ಲದೆ ನನ್ನೊಡನೆ ಹೊರಟರು.

ನಾವು ನಾಲ್ಕಾರು ಹೆಜ್ಜೆ ಇಟ್ಟಿದ್ದೆವೋ ಇಲ್ಲವೋ, ಗೈರೋಲ: “ಅಗೋ ನೋಡಿ, ಆ ನಾಯಿ ! ” ಎಂದರು. ನಿಜ. ಹೊಲದೊಳಗಿನಿಂದ ಕಂದು ಬಣ್ಣದ ಬಡಕಲ ನಾಯಿಯೊಂದು ಹೊರಗೆ ಬಂದಿತು. ಚೌಕದ ಕಡೆಗೆ ಬರುತ್ತಿತ್ತು. “ ನೋಡಿ ಬಾಲ ! ” ಗೈರೋಲ ನೆನಪು ಕೊಟ್ಟರು. ನಿಜ ! ಬಾಲ ಸುಮಾರಾಗಿ ನೇರವಾಗಿ ಇಳಿಬಿದ್ದಿತ್ತು ! “ ಹಾಳು ಮುಂಡೇದು, ಆ ಸೇತುವೆ ಹತ್ತಿರದಲ್ಲೇ ಕಾದುಕೊಂಡಿರೋದಕ್ಕೆ ಬರ್‍ತಾ ಇದೆ ಅಂತ ಕಾಣುತ್ತೆ. ಆದಕ್ಕೆ ಒಳ್ಳೆ ಜಾಗ ಸಿಕ್ಕಿದ ಹಾಗಾಯ್ತು—ಕಾದಿದ್ದು ಮತ್ತೆ ಮತ್ತೆ ಯಾರನ್ನಾದರೂ ಕಚ್ಚಿ ಆಹುತಿ ತಗೊಳ್ಳೋದಕ್ಕೆ! ” ಗೈರೋಲರವರ ಕೈಯಲ್ಲಿ ಲಾಠಿ ಇದ್ದರೂ, ಲಾಠಿ ಪ್ರಹಾರಕ್ಕಾಗಿ ಅವರು ನಾಯಿಯನ್ನು ಬೆನ್ನಟ್ಟದೆ, ನಾವು ನಿಂತಲ್ಲಿಂದಲೇ ಕಲ್ಲುಗಳನ್ನು ಜೋರಾಗಿ ಬೀರಿದರು.

“ ಹತ್ತಿರ ಹೋಗಿ ಹೊಡೆದರೇ ಸರಿಯಲ್ಲವೆ ? ತನ್ನಿ ದೊಣ್ಣೆ.”

“ ಬೇಡ, ಬೇಡ. ಹುಚ್ಚ ನಾಯಿ ಮೊದಲೇ; ಏನಾದರೂ ನಮಗೆ ಅಪಾಯವಾದೀತು. ಈ ದೊಣ್ಣೆ ಆತ್ಮರಕ್ಷಣೆಗೆ. ಅದನ್ನು ಕೊಲ್ಲೋದಕ್ಕೆ ಆಳುಗಳನ್ನು ಕಳಿಸಿ ಅಂತ ಸನ್ಯಾಲರಿಗೆ ಹೇಳಿ ಕಳುಹಿಸೋಣ ” ಗೈರೋಲ ಲಾಠಿಯನ್ನು ಕೊಡಲಿಲ್ಲ. ನಾಯಿ ಕಲ್ಲೇಟಿಗೆ ಸಿಕ್ಕದೆ ಮತ್ತೆ ಪೈರಿನೊಳಕ್ಕೇ ಓಡಿಹೋಯಿತು. ನಾವು ಸ್ಕೂಲಿನ ಕಡೆಗೆ ಹೊರಟೆವು.

“ ಹುಚ್ಚುನಾಯಿ ಜೊಲ್ಲು ಸುರಿಸುತ್ತಂತಲ್ಲ. ಆದರ ದೃಷ್ಟಿಯೇ ಒಂದು ತರಹ ಇರುತ್ತಂತೆ ? ” ನಾನು ಸೂಚನೆಗಳ ಪ್ರಸ್ತಾಪ ತೆಗೆದೆ.

“ ಜೊಲ್ಲು ಸುರೀತಾ ಇತ್ತೋ ಏನೋ. ದೃಷ್ಟಿ ವಿಚಾರ ಅಷ್ಟು ದೂರದಿಂದ ಹೇಗೆ ನಿರ್ಧರಿಸೋದಕ್ಕೆ ಆಗುತ್ತೆಯೋ ? ”

ನಾನು ಸುಮ್ಮನಾದೆ.

ನಾವು ಹೆಚ್ಚು ಹೋಗಬೇಕಾಗಲಿಲ್ಲ. ದಾರಿ ತಿರಿಗಿದಲ್ಲಿ ಆಳು ಚಂದುವನ್ನು ಎತ್ತಿಕೊಂಡೇ ಎದುರಿಗೆ ಬಂದ. ಕಳೆದೇ ಹೋಗಿದ್ದು ಪುನಃ ಸಿಕ್ಕದ ಮಗುವೋ ಎನ್ನುವಂತೆ, ತಂದೆ ಮಗುವನ್ನು ಎತ್ತಿಕೊಂಡು ತಬ್ಬಿ ಮುತ್ತಿಟ್ಟು ಆಳಿಗೆ “ ಲೋ ಬೇಗ ಕರೆದುಕೊಂಡು ಹೋಗೋ ! ಮನೇಲಿ ಎಲ್ಲ ಆತಂಕಪಟ್ಟುಕೋತಾ ಇದ್ದಾರೆ. ಮತ್ತೆ ಪುಟ್ಟ ಯಜಮಾನರನ್ನು ಎಲ್ಲಾದರೂ ಹೊರಗೆ ಬಿಟ್ಟೀಯೆ. ಕೋಪಾನ ” ಎಂದು, ಚಂದುವಿಗೆ “ ಮರಿ, ಹೊರಗೇ ಬರಬೇಡವಮ್ಮಾ. ಹುಚ್ಚು ನಾಯಿ ಎಲ್ಲೆಲ್ಲೂ ಓಡಾಡ್ತಾ ಇದೆ, ಕಚ್ಚಿಬಿಡುತ್ತೆ. ಆಂ ? ಗೊತ್ತಾಯ್ತೆ ? ” ಎಂದರು. ಅನಂತರ ನನ್ನ ಕಡೆಗೆ ತಿರುಗಿ “ ಆ ಸನ್ಯಾಲರ ಮನೆಗೆ ನಾವೇ ಹೋಗಿ ಬರೋಣ. ಏನಂತೀರಿ ? ಕೂಡಲೇ ಆಳುಗಳನ್ನು ಕಳಿಸಿ ಅಂತ ಒತ್ತಾಯ ಮಾಡೋಣ. ಅವರು ಬಂದರೆ ಪೂರ್ತಿ ಕತ್ತಲೆ ಆಗೋದರಲ್ಲೇ ಆ ಹಾಳು ಹುಚ್ಚುನಾಯಿ ಗತಿಗೆ ಕೊನೆಗಾಣಿಸಬಹುದು ! ” ಎಂದರು. ನಾನೂ ಒಪ್ಪಿದೆ.

ಶ್ರೀ. ಸನ್ಯಾಲರು ಆಗತಾನೆ ಆಫೀಸಿನಿಂದ ಬಂದಿದ್ದರು. ಗೈರೋಲರಿಗೂ ಅವರಿಗೂ ಸ್ವಲ್ಪ ಬಳಕೆಯಿತ್ತು. ಪೀಠಿಕೆಯಿಲ್ಲದೆ ಗೈರೋಲ ವಿಷಯವನ್ನು ಭಯಂಕರವಾಗಿ ಬಣ್ಣಿಸಿದರು. ಸನ್ಯಾಲರು ಗಾಬರಿಯಾದವರೆಂದು ಹೇಳಲೇಬೇಕಾಗಿಲ್ಲ. ಕೂಡಲೇ ಆಳನ್ನು ಕರೆದು “ ಚೌಕಿದಾರರ ಪೈಕಿ ನಾಲ್ಕು ಜನ ಲಾಠಿ ಸಮೇತ ಓಡಿಬರಬೇಕು ಅಂತ ಹೇಳೋ ! ಓಡು, ಬೇಗ ! ” ಎಂದು ತಾಕೀತು ಮಾಡಿದರು. ಸನ್ಯಾಲರ ಮನೆಗೆ ಅರ್ಧ ಫರ್ಲಾಂಗಿನಲ್ಲೇ ವಿಶ್ವವಿದ್ಯಾನಿಲಯದ ಆವರಣದ ಒಂದು ಗೇಟು. ಅದರ ಪಕ್ಕದಲ್ಲೇ ಇದ್ದ ಸಣ್ಣ ಮನೆಗಳಲ್ಲಿ ಕೆಲವು ಕಾವಲುಗಾರರು ವಾಸವಾಗಿದ್ದರು. ಸನ್ಯಾಲರ ಮನೆಯಲ್ಲಿ ಹೊತ್ತಿಗೆ ಸರಿಯಾಗಿ ತಯಾರಾಗಿದ್ದ ಚಹವನ್ನು ನಾವು ಹೀರುವಷ್ಟರಲ್ಲಿ, ಕಾವಲಿನವರು ಯಮದೂತರಂತೆ ಇದಿರಿಗೆ ಕಾಣಿಸಿಕೊಂಡರು. “ ನಡೀರಿ. ನಾವೂ ಬರ್‍ತೀವಿ. ಪ್ರೊಫೆಸರ್ ಸಾಹೇಬರ ಮನೆ ಹತ್ತಿರ ಹುಚ್ಚು ನಾಯಿ ಸುಳಿದಾಡ್ತಾ ಇದೆಯಂತೆ. ಬಡಿದು ಹಾಕಬೇಕು ” ಸನ್ಯಾಲರು ಎದ್ದರು. ನಾವೂ ಹೊರಟೆವು.

ನಮ್ಮ ದಳ ಗೈರೋಲರ ಮನೆಯ ಹತ್ತಿರಕ್ಕೆ ಬರುವ ಹೊತ್ತಿಗೆ ಸೂರ್ಯ ಮುಕ್ಕಾಲು ಮುಳುಗಿದ್ದ. ಬೀಳ್ಕೊಳ್ಳುವ ಹೊಂಬೆಳಕು ತಂಗಾಳಿಯಲ್ಲಿ ತೋಳನ್ನಾಡಿಸುತ್ತಿದ್ದ ಮರಬೆಳೆಗಳ ಕೊಂಬೆಗಳನ್ನು ಕಡೆಯ ಬಾರಿಗೆ ಅಪ್ಪಿ ಮುದ್ದಿಸುತ್ತಿತ್ತು. ಹಕ್ಕಿಗಳು ಗೂಡುಗಳಲ್ಲಿ ಮರಿಗಳನ್ನು ಸೇರಿ ಚಿಲಪಿಲದ ಮರಿಗಳಿಗೆ ಗುಟುಕುಕೊಡುತ್ತಿದ್ದುವು. ವಿಶ್ವವಿದ್ಯಾನಿಲಯದ ಆವರಣದ ಹುಲ್ಲುಗಾವಲುಗಳಲ್ಲಿ ಮೇಯುವುದಕ್ಕೆ ಬಂದಿದ್ದ ಸುತ್ತು ಹಳ್ಳಿಯ ಹಸುಎಮ್ಮೆಗಳು, ಧೂಳಿನ ಸುಳಿಗಳನ್ನೆಬ್ಬಿಸುತ್ತ ಗೆಲುವ ನಡಿಗೆಯಿಂದ ತಮ್ಮ ಕರುಗಳಲ್ಲಿಗೆ ಹಿಂದಿರುಗುತ್ತಿದ್ದುವು. ದಿನದ ವ್ಯವಹಾರ ಮುಗಿಯುತ್ತಿತ್ತು. ಚೌಕದ ಬಳಿಗೆ ಬರುತ್ತಿದ್ದ ನಾಲ್ಕು ಮಕ್ಕಳ ಗುಂಪೊಂದನ್ನು ಕಂಡು ಗೈರೋಲ ಗಾಬರಿಯಾಗಿ “ ಏ, ಮುನ್ನೀ, ಮುನ್ನಾ—ಇಲ್ಲಿ ಯಾಕೆ ಇದೀರಿ ? ಹುಚ್ಚು ನಾಯಿ ಇದೆ ಅಂತ ಗೊತ್ತಿಲ್ಲವೆ ? ಕಡಿಸಿಕೋಬೇಕೇನು ? ಹದಿನಾಲ್ಕು ಇಂಜಕ್ಷನ್ ಚುಚ್ಚುತಾರೆ ಡಾಕ್ಟರು—ಒಬ್ಬೊಬ್ಬರಿಗೂ. ನಡೀರಿ. ಓಡಿಹೋಗಿ ಮನೆಗೆ ! ಹುಂ ! ” ಎಂದು ಕೂಗಿ ಎಚ್ಚರಿಸಿದರು. ಮಕ್ಕಳು ದಿಕ್ಕಾಪಾಲಾಗಿ ಓಡಿಹೋದುವು.

ನಮ್ಮಲ್ಲೇ ಸಮಾಲೋಚನೆಯಾಗಿ ಸನ್ಯಾಲರ ಸೂಚನೆಯಂತೆ ಕಾವಲುಗಾರರು ಮತ್ತು ಸನ್ಯಾಲರ ಆಳು ಹೊಲವನ್ನು ಸುತ್ತುಗಟ್ಟಿದರು. ನಾವು ರಸ್ತೆಯ ಚೌಕದಲ್ಲಿ ನಿಂತು ನೋಡುತ್ತಿದ್ದೆವು. ಗೈರೋಲರ ಲಾಠಿ ಸನ್ಯಾಲರ ಆಳಿಗಾಗಿತ್ತು. ನಾವು ಮೂವರೂ ರಸ್ತೆ ರಿಪೇರಿಯ ರಾಶಿಕಲ್ಲನ್ನು ಕೈ ತುಂಬ ಆರಿಸಿಕೊಂಡೆವು. ಇಷ್ಟು ಹೊತ್ತಿಗೆ ಹತ್ತಿರದ ಮನೆಯವರೂ ಕೆಲವರು ನಮ್ಮನ್ನು ಕೂಡಿ ನಮ್ಮಂತೆಯೇ ಸಿದ್ಧರಾದರು. ಕಾವಲುಗಾರರು ಜೊಲ-

ಹೊಲಕ್ಕೆ ಅಲ್ಲಲ್ಲಿ ಕಲ್ಲು ಬೀಸಿದರು. ಒಳಗೆ ಯಾವ ಚಲನೆಯ ಸೂಚನೆಯೂ ಗೊತ್ತಾಗಲಿಲ್ಲ. ಅಷ್ಟು ಇಷ್ಟು ಹೊತ್ತಾಯಿತು. ಹೊಲಕ್ಕೆ ಕಲ್ಲು ಬೀಳುತ್ತಲೇ ಇತ್ತು. ನಾಯಿಯ ಸುಳಿವಿಲ್ಲ. "ಹುಚ್ಚು ನಾಯಿ. ಒಂದೇ ಕಡೆ ಎಲ್ಲಿರುತ್ತೆ ? ಎಲ್ಲಿ ಹೋಯ್ತೋ ಏನೋ !" ಸನ್ಯಾಲರು ಅನುಮಾನಿಸಿದರು. "ಇಲ್ಲ, ಇಲ್ಲ. ಇಲ್ಲಿಲ್ಲೇ ಹೊಂಚು ಹಾಕ್ತಾ ಇರುತ್ತಂತೆ. ಕಂಡೋರೆಲ್ಲ ಹೇಳ್ತಾರೆ. ಈ ಸಂಜೆಯಂತೂ ನಾನೇ ಕಂಡಿದೀನಿ" ಗೈರೋಲರಿಗೆ ಇನ್ನೂ ನಿರಾಸೆಯಾಗಿರಲಿಲ್ಲ.

"ಹೌದು, ಹೌದು" ಇತರರೂ ಕೆಲವರು ಧ್ವನಿಕೂಡಿಸಿದರು.

"ಸರಿ, ಹಾಗಾದರೆ."

"ಏನಾದರೂ ಈಗಲೇ ತೀರಿಸಿಬಿಡಬೇಕು. ಹಾಗೇ ಬಿಡೋದು ತೀರ ಅಪಾಯ" ಗೈರೋಲ ಒತ್ತಿದರು.

"ಸಿಕ್ಕಲಿ" ಸನ್ಯಾಲ್ ಪೂರ್ತಿಮಾಡಿದರು.

ಫಲವಿಲ್ಲದೆ ನಿಮಿಷಗಳು ಕಳೆದಂತೆಲ್ಲ ನಮ್ಮಲ್ಲಿ ಮಾತು ಬೆಳೆದು ಚರ್ಚೆಗೆ ಮೊದಲಾಗುವುದರಲ್ಲಿತ್ತು. ಅಷ್ಟರಲ್ಲೇ ನಮಗೆಲ್ಲ "ಕಯ್! ಕಯ್!" ಶಬ್ದ ಕೇಳಿಸಿತು. ತಟ್ಟನೆ ನಮ್ಮ ದೃಷ್ಟಿ ಹೊಲದ ಕಡೆಗೆ ಹೋಯಿತು.

"ಕೇಳಿದಿರಾ! ಎಲ್ಲೋ ಒಂದು ಏಟು ತಗಲಿತು, ಈಗ!" ಗೈರೋಲ ಗೆಲವಿನಿಂದ ಹೇಳುತ್ತಿದ್ದಂತೆಯೇ, ಅದೇ ಕಂದು ನಾಯಿ ಹೊಲದಿಂದ ಹೊರಬಿದ್ದು, ನಾವಿದ್ದ ಚೌಕದ ಕಡೆಗೆ ಧಾವಿಸಿತು. ನಮ್ಮ ಕೈಗಳಿಂದ ಎಷ್ಟು ಬಾಣಗಳು ಹೋದುವೋ ಏನೋ. ನಾಯಿಗೆ ನಾಲ್ಕಾರು ಪೆಟ್ಟು ಬಿದ್ದಿರಬೇಕು. ಅದು ಕುಯ್ ಕುಯ್‌ಗುಟ್ಟುತ್ತ ದಿಕ್ಕೆಟ್ಟು ಅತ್ತಿತ್ತ ಓಡಿತು, ನಿಂತಿತು ಮತ್ತೆ ಓಡಲು ನೋಡಿತು. ಆದರೆ ಈವರೆಗೆ ಕಾವಲುಗಾರರು ಸುತ್ತುಗಟ್ಟಿದ್ದರು. ನಾಲ್ಕಾರು ಏಟುಗಳು ಒಮ್ಮೆಲೇ ಬಿದ್ದುವು. ಪ್ರಾಣಿ ಕಿರಿಚುತ್ತ ಬಿದ್ದುಬಿಟ್ಟಿತು. ಇನ್ನೂ ನಾಲ್ಕಾರು ಏಟು ನಾಯಿಯ ಸ್ವರ ನಿಂತುಹೋಯಿತು. ನಾವು ಹತ್ತಿರ ಹೋಗಿ ಅದರ ಮುರಿದ ದೇಹವನ್ನೂ, ಒಡೆದ ತಲೆಯನ್ನೂ ಸುರಿವ ರಕ್ತವನ್ನೂ ಕಿರಿದ ಹಲ್ಲನ್ನೂ ಕಂಡು, ಅದು ಸತ್ತಿತೆಂದು ನಿಶ್ಚಯಮಾಡಿಕೊಂಡೆವು.

"ಬ್ಲಡಿ ಬಿಚ್! ಸದ್ಯ, ಹಾಯಾಗಿ ಉಸಿರು ಬಿಡಬಹುದು. ಮಕ್ಕಳು, ಮರಿ—ಎಲ್ಲರಿಗೂ ಎಷ್ಟು ದಿಗಿಲಾಗಿತ್ತು!" ಗೈರೋಲ ಅದನ್ನು ನೋಡುತ್ತ ಪರಿಹಾರದ ನಿಟ್ಟುಸಿರನ್ನು ಬಿಟ್ಟರು.

"ನೀವು ಮನಸ್ಸು ಮಾಡಿದ್ದು ಒಳ್ಳೇದಾಯ್ತು ಗೈರೋಲ" ಯಾರೋ ಹೇಳಿದರು.

"ಸನ್ಯಾಲ್‌ಜಿ ಬಹಳ ಮುತುವರ್ಜಿ ವಹಿಸಿ ಸಹಾಯಮಾಡಿದರು" ಗೈರೋಲ ಹೇಳಿದರು.

ಇತರರೂ ಸನ್ಯಾಲರಿಗೆ ಧನ್ಯವಾದವನ್ನರ್ಪಿಸಿ, ನಮಗೆ ನಮಸ್ಕಾರ ಹೇಳಿ ಹೋದರು. ಗೈರೋಲ ಕಾವಲುಗಾರರಿಗೆ "ಬಹಳ ಒಳ್ಳೇ ಕೆಲಸಮಾಡಿದಿರಿ, ಕೊಳ್ಳಿ" ಎಂದು ಹೇಳಿ ಎರಡು ರೂಪಾಯಿ ಬಹುಮಾನವನ್ನು ಕೊಟ್ಟರು. ಸನ್ಯಾಲರು "ಇದರ ದೇಹಾನ ದೂರ ತಗೊಂಡು ಹೋಗಿ ಎಲ್ಲಾದರೂ ಹೂತು ಬಿಡಿ. ಗೊತ್ತಾಯ್ತೆ ?"

ಎಂದು ಅಪ್ಪಣೆ ಮಾಡಿದರು.

"ಬನ್ನಿ ಸನ್ಯಾಲ್‌ಜಿ, ಸ್ವಲ್ಪ ನಮ್ಮ ಮನೇಲಿ ಕೂತುಕೊಳ್ಳೋಣ. ಬನ್ನಿ ರಾವ್‌ಜಿ" ಗೈರೋಲ ಆಹ್ವಾನಿಸಿದರು.

ಅವರ ಮನೆಗೆ ಹೋದೆವು. ಅದೇ ನಾಯಿ ಫಜೀತಿಯ ಚರ್ಚೆಯ ಮಧ್ಯೆ ಹಲ್ವ, ಬಿಸಿಬಿಸಿ ಪಕೋಡ, ಚಹಗಳ ಉಪಚಾರವಾಯಿತು. ಬೀದಿಯ ನಾಯಿಗಳಿಗೆಲ್ಲ ಬೇಗಲೇ ಗತಿಕಾಣಿಸುವುದಾಗಿ ಸನ್ಯಾಲರು ನಿರ್ಧರಿಸಿ ಮಾತು ಕೊಟ್ಟರು. ನಾವು ಗೈರೋಲರ ಮನೆಯಿಂದ ಹೊರಬಿದ್ದಾಗ ಏಳೂವರೆ ಗಂಟೆಯಾಗಿತ್ತು. ಕೃಷ್ಣ ಪಕ್ಷದ ಕತ್ತಲೆ. ಡಿಸೆಂಬರ್ ಚಳಿ ಕೊರೆಯುತ್ತಿತ್ತು. ಗೈರೋಲ ಓವರ್‌ಕೋಟನ್ನು ಹಾಕಿಕೊಂಡು ಬೆತ್ತ, ಟಾರ್ಚ್‌ಗಳನ್ನು ತೆಗೆದುಕೊಂಡು ಸ್ವಲ್ಪ ದೂರ ನಮ್ಮೊಡನೆ ಬರಲು ಹೊರಟರು.

ಮೂವರೂ ಮಾತನಾಡುತ್ತ ರಸ್ತೆಗೆ ಬಂದಾಗ, ನಮ್ಮ ಕಿವಿ ನೆಟ್ಟಗಾಯಿತು. 'ಕುಯ್! ಕುಯ್!' ಸಣ್ಣ ಕುನ್ನಿಗಳ ಕೂಗು! ಕುಗ್ಗು ಕೂಗು! ತಟ್ಟನೆ ನಿಂತು ಆಲಿಸಿದೆವು. ಚೌಕದ ಕಡೆಯಿಂದ ಬರುತ್ತಿತ್ತು. "ಏನ್ರೀ ಇದು!" ಸನ್ಯಾಲ್ ಕೇಳಿದರು. ನಾವು ಸುಮ್ಮನೆ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡೆವು. ನಾಲ್ಕು ಮಾರು ನಡೆದು ಚೌಕಕ್ಕೆ ಬಂದೆವು. ಸೇತುವೆಯ ಒಳಗಿನಿಂದ ಬರುತ್ತಿತ್ತು ಶಬ್ದ! ಸಂಕಟದ ಶಬ್ದ! ಗೈರೋಲ ಬೇಗ ಬೇಗ ಚರಂಡಿಗೆ ಇಳಿದರು. ನಾವೂ ಮೌನವಾಗಿ ಹಿಂಬಾಲಿಸಿದೆವು. ಅವರು ಸೇತುವೆಯ ಕನ್ನದ ಬಳಿ ನಿಂತು ಬಗ್ಗಿ, ಟಾರ್ಚ್‌ನ್ನು ಅಮುಕಿದರು.

ಆ ಬೆಳಕಿನಲ್ಲಿ ಕಂಡುವು—ಎರಡು ಎಳೆಯ ಅನಾಥ ಕುನ್ನಿಗಳು! ಒಂದರ ಮೇಲೊಂದು ಬಿದ್ದು ಒದ್ದಾಡುತ್ತ ಚಳಿಯಲ್ಲಿ ನಡುಗುತ್ತ ಕೂಗಿಕೊಳ್ಳುತ್ತಿದ್ದುವು. ಬಿಸಿ ಹಾಲಿನ, ಬೆಚ್ಚನೆಯ ಎದೆಯ ತಾಯಿಯನ್ನು ನಾವು ಮಣ್ಣು ಮಾಡಿದ್ದೆವು.

"ಅಯ್ಯೋ, ಎಂಥ ಕೆಲಸವಾಯ್ತು! ತನ್ನ ಮರಿಗಳನ್ನು ಏನು ಮಾಡ್ತಾರೋ! ಅಂತ ಹೆದರಿ ಕಚ್ಚಿತು ಕಣ್ರಿ ಅದು, ಪಾಪ! ಹುಚ್ಚು ಗಿಚ್ಚು ಏನೂ ಇಲ್ಲ. ನಂಗೇ ಬಂದಿತ್ತು ಹುಚ್ಚು. ಛೀ!" ಗೈರೋಲ ವಿವರಿಸಿದರು—ಅನಾವಶ್ಯಕವಾಗಿ.

ನಾವು ಮಾತಾಡುವಂತಿರಲಿಲ್ಲ.

—o—

ಯಕ್ಷಗಾನ ಕಥೆಗಳು ಮತ್ತು ಶೈಲಿ

ಶ್ರೀ. ಕೋಟ ಶಿವರಾಮ ಕಾರಂತರು, ಪುತ್ತೂರು

☆

ಶುದ್ಧ ಯಕ್ಷಗಾನದ ವೇಷ, ಭೂಷಣ, ಶೈಲಿ ಇವೆಲ್ಲ ಜಾವಾ ನೃತ್ಯನಾಟಕಗಳ ಶೈಲಿಗಿಂತ ಕಡಿಮೆ-ಯಿಲ್ಲದ ಸೊಗಸನ್ನು ಬೀರುತ್ತವೆ. ಅದರಲ್ಲಿಯೂ ಪುರುಷವೇಷಗಳು ಅತಿ ಮನೋಹರವಾಗಿರುವುವು!

☆

ಯಕ್ಷಗಾನ ಪ್ರಬಂಧಕಾರರು ತಮ್ಮ ಕಥಾವಸ್ತುಗಳನ್ನು ಹೆಚ್ಚಾಗಿ ಮಹಾಭಾರತದಿಂದಲೋ, ಭಾಗವತದಿಂದಲೋ, ರಾಮಾಯಣದಿಂದಲೋ ಆರಿಸಿಕೊಂಡಿದ್ದಾರೆ. ಪಾಮರ ಜನ-ವರ್ಗಕ್ಕೆ ಅತಿಮಾನವ, ದೇವ-ದಾನವರಿರುವ ಕಲ್ಪನಾಲೋಕ ರುಚಿಸುವಷ್ಟು, ವಾಸ್ತವಿಕ ಜೀವನದ ಕಥೆಗಳು ರುಚಿಸುವುದಿಲ್ಲ. ಅದ್ಭುತ, ಭಯಾನಕ ಘಟನೆಗಳು ಅವರನ್ನು ತೇಲಿಸಿದಷ್ಟು ಉಳಿದುವು ತೇಲಿಸುವುದಿಲ್ಲ. ಅಲ್ಲದೆ ಭಾಗವತ, ರಾಮಾಯಣಗಳು ಪಾಮರರ ಪಾಲಿನ—ಜನಸಾಮಾನ್ಯರ ಪಾಲಿನ—ವೇದಗಳೇ ಆಗಿಸಿಬಂದಿವೆ. ಅವರ ಭಕ್ತಿಭಾವನೆಗಳಿಗೂ, ಧಾರ್ಮಿಕ ಶ್ರದ್ಧೆ-ಗಳಿಗೂ, ನಂಬಿಕೆಗೂ— ಇಂತಹ ಕಥೆಗಳು ತೀರ ಮೆಚ್ಚುಗೆ-ಯಾಗುತ್ತವೆ. ಆದುದರಿಂದ, ಬಯಲಾಟದವರು ಪ್ರದರ್ಶಿಸುವ ಪ್ರಸಂಗಗಳೆಲ್ಲ ಇಂತಹವು. ಅಲ್ಲದೆ, ಇಂತಹ ಕಥೆಗಳ ಪ್ರದರ್ಶ-ನಕ್ಕೆ ಸಾಮಾನ್ಯ ನಾಟಕದ ರೂಪಕ್ಕಿಂತ ಬಯಲಾಟದ ರೂಪವು ಅನುಕೂಲವಾಗಿದೆ. ಮೇಲಿನ ಕಥೆಗಳಲ್ಲದೆ, 'ಚಿತ್ರಸೇನ ಕಾಳಗ' 'ರತ್ನಾವತಿ ಕಲ್ಯಾಣ' ಮೊದಲಾದಂತಹ ಕಥೆಗಳೂ ಕೆಲವಿವೆ. ಇತ್ತೀಚೆಗಿನ ಕವಿಗಳು ಅಕ್ಬರ್, ಪ್ರತಾಪಸಿಂಹ, ರಾಜಸಿಂಹ ಅಷ್ಟೇ ಅಲ್ಲ–ಎರಡನೆಯ ಮಹಾಯುದ್ಧದ ಹಿಟ್ಲರ್, ಗೋರಿಂಗ-ರನ್ನೂ ತಂದು ಯಕ್ಷಗಾನ ಪ್ರಬಂಧರಚನೆ ಮಾಡಿದ್ದಾರೆ. ಅವು-ಗಳನ್ನು ತಾಳಮದ್ದಲೆಯ ರೂಪದಲ್ಲಿ ಆಡುತ್ತಾರೆಯೇ ಹೊರತು ಅವುಗಳ ಪ್ರಯೋಗ ಬಯಲಾಟಕ್ಕೆ ಬಂದಿಲ್ಲ. ಬಯಲಾಟದ ರಂಗವು ನಿಜಕ್ಕೂ, ವಾಸ್ತವಿಕ ಚಿತ್ರಣಕ್ಕಿಂತ ಬೇರೆಯಾಗಿರುವ ಕಲ್ಪನಾಸೃಷ್ಟಿಗೂ, ಕಲ್ಪನಾಲೋಕದ ಚಿತ್ರಣಕ್ಕೂ, ಬಹು ಅನು-ಕೂಲಿಸಿ ಬಂದಿದೆ. ಈ ದೃಷ್ಟಿಯಿಂದ ಬಯಲಾಟದವರು ಬಳಸುವ ಉಡುಗೆ, ಅಲಂಕಾರಗಳು, ಬಹು ವಿಶೇಷವಾದುವು. ಮುಖ-ವರ್ಣಿಕೆಗಳು (Make-up) ತುಂಬ ಸುಂದರವಾದುವುಗಳು. ಪುರಾಣಯುಗದ ದೇವ, ದಾನವ, ಅತಿಮಾನವರನ್ನು ಚಿತ್ರಿಸು-ವಾಗ ಇವರು ಬಳಸುವ ವೇಷ-ಭೂಷಣಗಳು "ಅತಿ"ತ್ವದ ಕಲ್ಪನೆಯನ್ನು, (The idea of superman) ಚೆನ್ನಾಗಿ ಕೊಡಬಲ್ಲವು. "ಇದು ಮಾನವಲೋಕವಲ್ಲ, ದೇವಲೋಕ, ಗಂಧರ್ವಲೋಕ, ದಿವ್ಯಲೋಕ" ಎಂಬ ನವಸೃಷ್ಟಿಯನ್ನೇ ಮಾಡುವಂತಹವು.

ಉಳಿದ ಹಿನ್ನೆಲೆಗಳನ್ನು ಕಲ್ಪಿಸುವುದಕ್ಕೆ ಬಯಲಾಟದವರಿಗೆ ರಂಗಸ್ಥಳದ ಹಿಂದೆ ತೆರೆಗಳಿಲ್ಲ, ದೃಶ್ಯಾವಳಿಗಳಿಲ್ಲ, ಅವುಗಳನ್ನೆಲ್ಲ ಪ್ರೇಕ್ಷಕರೆ ಊಹಿಸಬೇಕು. ಅವರು ಬಳಸುವ ತೆರೆಯು ಒಂದು ಸಾಮಾನ್ಯವಾದ ಬಟ್ಟೆ. ರಂಗಸ್ಥಳಕ್ಕೆ ಹೊಸ ಪಾತ್ರ ಬರುವ ಮೊದಲು ಅವನನ್ನು ಮರೆಮಾಡಿ, ಸ್ವಲ್ಪ ಸ್ವಲ್ಪವಾಗಿ ತೋರಿಸಿ ಪರಿಚಯಮಾಡಿ ಕೊಡುವುದಕ್ಕಷ್ಟೇ ಅದು ಸಹಾಯಕವಾಗಿದೆ. ಆ ತೆರೆಯು ತಿರುಗಿ ಬೀಳುವುದಿಲ್ಲ. ವೇಷಧಾರಿಗಳು, ಹಿಂದೆ ನಿಂತಿರುವ ಜನಸಂದಣಿಯಲ್ಲಿ ಮರೆಯಾಗಿ ಹೋಗುತ್ತಾರೆ. ಆದರೆ ಆ ವೇಷಗಳ ವೈಖರಿ, ಸುತ್ತಲಿನ ಸಾಮಾನ್ಯ ಜನಗಣವನ್ನು ಪ್ರತ್ಯೇಕಿಸಿಬಿಟ್ಟು, ಪ್ರೇಕ್ಷಕನ ಕಣ್ಣು ರಂಗಸ್ಥಳದಲ್ಲಿಯೇ ವೇಷ ಇರುವಷ್ಟು ಕಾಲವೂ ಉಳಿಯುವಂತೆ ಮಾಡುತ್ತದೆ.

ರಂಗಸ್ಥಳದ ಬೆಳಕು, ಎರಡು ಎಣ್ಣೆಯ ದೀವಟಿಗೆಗಳು ಮಾತ್ರ. ಮೇಲೆ ನಕ್ಷತ್ರ ತುಂಬಿದ ಬಾನೇ ಚಪ್ಪರ. ಸುತ್ತಲಿನ ಕತ್ತಲೇ ರಂಗಸ್ಥಳಕ್ಕೆ ಆವರಣ. ಈ ಎಣ್ಣೆಯ ದೀಪದ ಮಂಜುಬೆಳಕು, ಮುಂಬರುವ ಇಲ್ಲಿಯ ವೇಷಗಳನ್ನು ಕಾಣುವಾಗ, ಒಂದು ವಿಚಿತ್ರವಾದ ಭ್ರಮೆಯನ್ನು ಹುಟ್ಟಿಸುತ್ತದೆ. ನಮ್ಮ ಮನಸ್ಸನ್ನು ರಂಗಸ್ಥಳಕ್ಕೆ ಎಳೆದೊಯ್ಯುತ್ತದೆ. ಇದಕ್ಕಿಂತ ತೀಕ್ಷ್ಣವಾದ ಗ್ಯಾಸ್ ದೀಪಗಳನ್ನು ಈಗೀಗ ಉರಿಸುತ್ತಾರಾದರೂ, ಆ ಬೆಳಕು, ಇಂತಹ ಭ್ರಮೆಯನ್ನು ಹುಟ್ಟಿಸಲಾರದು. ದೀವಟಿಗೆಯ ಬೆಳಕು ಗೂಢ-ಲೋಕವನ್ನು ತೋರಿಸಬಲ್ಲ ಮಂಜುಬೆಳಕು.

ಯಕ್ಷಗಾನದ ವೇಷಭೂಷಣಗಳ ಶುದ್ಧವಾದ, ಸೊಗಸಾದ ಸ್ವರೂಪವನ್ನು ಕಾಣಬೇಕಾದರೆ, ನಾವು ಉಡುಪಿಯ ಉತ್ತರ ಭಾಗಕ್ಕೇನೆ ಹೋಗಿ ನೋಡಬೇಕು. ದಕ್ಷಿಣಭಾಗದ ಜನರು ಆಡುವ ಆಟಗಳನ್ನು ನೋಡಿದರೆ, ಈ ಸಂಬಂಧವಾದ ರಸಜ್ಞತೆ ಅವರಿಂದ ನಷ್ಟವಾದಂತೆ ಕಾಣುತ್ತದೆ. ಅಲ್ಲದೆ, ದಕ್ಷಿಣ ಕನ್ನಡಕ್ಕೆ


ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ತಾಗಿರುವ ಮಲಬಾರಿನ ಕೆಲವು ವೇಷ-ಭೂಷಣಗಳ ರೀತಿ, ಅಲ್ಲಿಯ ವೇಷಗಳ ವೈಶಿಷ್ಟ್ಯವನ್ನು ಹಾಳುಮಾಡಿದೆ. ಕಥಕ್ಕಳಿಯ ಕೃಷ್ಣ, ಪ್ರಹ್ಲಾದರನ್ನು ಕಂಡವರಿಗೆ, ರಾವಣನ ಮುಖಕ್ಕೂ ಇವರ ಮುಖಕ್ಕೂ ಸೌಂದರ್ಯದ ಅಂತರ ತೋರುವುದೇ ಇಲ್ಲ. ಅಲ್ಲಿ ರಾವಣ ಹೇಗೆ ರಾಕ್ಷಸನೋ ಪ್ರಹ್ಲಾದ-ಕೃಷ್ಣರೂ ಅಂತೆಯೇ! ಕನ್ನಡ ಮತ್ತು ಕೇರಳ ಪ್ರಾಂತಗಳು ಸಮೀಪವಾಗಿವೆ ಎಂಬುದರಿಂದ, ಕಥಕ್ಕಳಿಯ ಶೈಲಿಯಿಂದ ಯಕ್ಷಗಾನವೂ, ಯಕ್ಷಗಾನದಿಂದ ಕಥಕ್ಕಳಿಯೂ ಎರವು ಕೊಂಡಿದೆ—ಎಂಬ ಸಂದೇಹವನ್ನು ನಾವು ಪಡಬೇಕಾದ ಅವಕಾಶವಿಲ್ಲ. ಎರಡೂ ಸ್ವತಂತ್ರವಾಗಿ ಬೆಳೆದು ಬಂದುವು.

ಶುದ್ಧ ಯಕ್ಷಗಾನದ ವೇಷ, ಭೂಷಣ, ಶೈಲಿಯು ಜಾವಾ ನೃತ್ಯ ನಾಟಕಗಳ ಶೈಲಿಗಿಂತ ಕಡಿಮೆಯಿಲ್ಲದ ಸೊಗಸನ್ನು ಬೀರುತ್ತದೆ. ಅದರಲ್ಲಿಯೂ ಪುರುಷವೇಷಗಳು ಅತಿ ಮನೋಹರವಾದುವು. ವೇಷಧಾರಿಗಳು ಒಳಗೊಂದು ಕವಚ ಚಲ್ಲಣ—ಸೌಕರ್ಯಕ್ಕಾಗಿ—ತೊಡುತ್ತಾರೆ. ಆಮೇಲೆ ಅದನ್ನು ಮರೆಯಿಸುವ ಉಡುಗೆಗಳಿವೆ. ಸಂಪೂರ್ಣ ಕೈಯುಳ್ಳ ಹಸುರು ಇಲ್ಲವೆ ಕೆಂಪು ಅಂಗಿ ಮೈಗೆ; ಉಡುವುದಕ್ಕೆ ಕೆಂಪು, ಕಪ್ಪು, ಕಿತ್ತಳೆ ಈ ಮೂರು ಬಣ್ಣಗಳ ಅಥವಾ ಇವುಗಳಲ್ಲಿ ಎರಡರ ಚೌಕಳಿ ವಸ್ತ್ರವನ್ನು ವೀರಕಚ್ಚೆಯಾಗಿ ಬಿಗಿಯುತ್ತಾರೆ. ನಡುವಿಗೆ ಬಿಗಿದ ವಸ್ತ್ರವು ಮೊಣಗಂಟಿಗೆ ಸಮೀಪ ತುಂಬಿ ಅಗಲವಾಗಿದ್ದು, ವ್ಯಕ್ತಿಗೆ ದಪ್ಪವನ್ನು ಕೊಟ್ಟು, ತಿರುಗಿ ಪಾದದ ಬಳಿಯಲ್ಲಿ ಕಿರಿದಾಗುತ್ತದೆ. ಇದರ ಮೇಲೆ ನಾನಾವಿಧದ ಅಲಂಕಾರಗಳಿವೆ. ಪುರುಷ ವೇಷವು ರಾಕ್ಷಸ ವೇಷವಾದರೆ, ಆತ ಉಡುವ ಬಟ್ಟೆ ಇನ್ನಷ್ಟು ಕಡುಪು ಚೌಕಳಿ. ಅದರ ಚೌಕಗಳೂ ದೊಡ್ಡವು. ಆತ ಕೊರಳಿಂದ ಕಾಲಿನ ತನಕ ತೂಗುವ ಕೆಂಪು ಬಿಳಿಯ ಅರಿವೆಗಳ ಶಾಲು ಧರಿಸುತ್ತಾನೆ. ನಡುವಿಗೆ ರತ್ನಖಚಿತವಾಗಿ ಕಾಣಿಸುವ ಪಟ್ಟಿಯಿದೆ. ಅದರಿಂದ ಎದುರುಗಡೆ ವಿಚಿತ್ರಾಕಾರದ ಜೋತಾಡುವ ಪದಗಳಿವೆ. ಜಾಬರಿಗಳಿವೆ. ಎದೆಯನ್ನು ಗುಣಾಕಾರದ ಗುರುತಿನಂತೆ—ಸಂಪೂರ್ಣ ಮುಚ್ಚುವಷ್ಟು ದೊಡ್ಡದಾದ, ಅರಸಿನ ಬಣ್ಣದ ತಳದ ಮೇಲೆ ಕನ್ನಡಿ ಚೂರುಗಳನ್ನು ಅಂಟಿಸಿ ಮಾಡಿದ, ಒಂದು ಅಲಂಕಾರವಿದೆ. ಭುಜಕ್ಕೆ ಭುಜಕೀರೀಟಿ, ಕೊರಳಿಗೆ ಸರಗಳು. ಇವುಗಳಲ್ಲಿ ಎರಡು ಪ್ರಭೇದಗಳಿವೆ ರಾಕ್ಷಸ ಪಾತ್ರಗಳು ತೊಡುವ ಅಲಂಕಾರ ಬೇರೆ. ವೀರ ಇಲ್ಲವೆ ಲಲಿತ ಪಾತ್ರಗಳು ತೊಡುವ ಅಲಂಕಾರ ಬೇರೆ. ಅವರ ನಡುಪಟ್ಟಿಯೂ ಬೇರೆ, ಭುಜ ಕೀರೀಟವೂ ಬೇರೆ, ಎದೆಯ ಅಲಂಕಾರವೂ ಬೇರೆ. ಈ ಎಲ್ಲಾ ಅಲಂಕಾರಗಳನ್ನು ನಮ್ಮ ಹಳೆಯಗಾಲದ ಗುಡಿಗಾರರು ಕಾಪಟೆಯ ಮರದಿಂದ ಕೆತ್ತಿ, ಜೋಡಿಸಿ, ಅವುಗಳ ಮೇಲೆ ಬಣ್ಣ-ಬಣ್ಣದ ಗಾಜಿನ ಚೂರುಗಳನ್ನಿಟ್ಟು ಮಾಡುತ್ತಿದ್ದರು. ದೀವಟಿಗೆಯ ಮಂಜು ಬೆಳಕಿನಲ್ಲಿ ಅವುಗಳ ಬೆಡಗು, ಮಿರುಗು ಅಷ್ಟಿಷ್ಟಲ್ಲ.

ಧರ್ಮರಾಯ, ಕೌರವ, ಅಪವಾದಕ್ಕೆ ಭೀಮ ಇಷ್ಟು ಮಂದಿ, ಅಥವಾ ಇತರ ರಾಜರುಗಳು, ಉನ್ನತವಾದ, ರತ್ನಖಚಿತವಾಗಿ ಕಾಣಿಸುವ ಕಿರೀಟ ತೊಡುತ್ತಾರೆ. ಈ ಕಿರೀಟಗಳ ಆಕಾರ ನಮ್ಮ ಶಿಲ್ಪಗಳಲ್ಲಿ ಕಾಣಿಸುವುದಕ್ಕಿಂತ ವಿಚಿತ್ರವಾಗಿದೆ. ಕಿವಿಯ ಎದುರುಗಡೆ ಕಿವಿಯನ್ನು ಮರೆಯಿಸುವ ಎರಡು ದೊಡ್ಡ ಕರ್ಣಕುಂಡಲಗಳಿರುತ್ತವೆ. ರಾಕ್ಷಸಪಾತ್ರಗಳಿಗೆ ಬೇರೆಯೆ ತೆರದ ಕಿರೀಟವಿದೆ. ಆ ಕಿರೀಟಗಳ ಹಿಂದೆ ನೃತ್ತಾಕಾರವಾದ ಅಲಂಕೃತ ಪ್ರಭಾವಳಿಯಿದೆ. ಇವುಗಳ ಮಟ್ಟಿಗೆ ಈ ಕಿರೀಟಗಳಿಗೂ ಕಥಕ್ಕಳಿ ಕಿರೀಟಗಳಿಗೂ ಸಾಮ್ಯವಿದೆ. ಈ ಕಿರೀಟಕ್ಕಿಂತ ಚೆಲುವಿನ ಇನ್ನೊಂದು ಶಿರೋಭೂಷಣವೆಂದರೆ ವೀರರು ತೊಡುವ "ಮುಂಡಾಸು!" ಉತ್ತರಕನ್ನಡದವರು ಇದನ್ನು "ಪೊಗಡಿ" ಎನ್ನುತ್ತಾರೆ. ಪಾತ್ರದ ಹಿರಿಮೆಗೆ ಸಮನಾಗಿ ಇದರ ಗಾತ್ರವಿರುತ್ತದೆ. ತಲೆಯ ಅಲಂಕಾರದ ಹಿಂದೆ ಇದನ್ನು ಧರಿಸುತ್ತಾರೆ; ಇದು ಇಡಿಯ ತಲೆಯನ್ನು ಮುಚ್ಚುವಷ್ಟಿದ್ದು, ಒಂದರಿಂದ ಎರಡಡಿ ಎತ್ತರದ ತನಕ ನಿಲ್ಲುತ್ತದೆ. ಹೃದಯದಂತೆ ಆಕಾರ ಇದರದು. ಇದನ್ನು ಬಿಳಿಯ ಇಲ್ಲವೆ ಕಪ್ಪು ವಸ್ತ್ರಗಳಿಂದ ಮುಚ್ಚಿ, ಜರತಾರಿ ಲಾಡಿಗಳಿಂದ ಬಿಗಿದು, ಮುಖದಿಂದ ಹೊರಡುವ ಕಿರಣಗಳಂತೆ ಅಲಂಕರಿಸುತ್ತಾರೆ. ನಕುಲ, ಸಹ

ದೇವತೆಂತಹರಿಗೆ ಸಣ್ಣ ಮುಂಡಾಸವಾದರೆ, ಶಲ್ಯ-ಕರ್ಣರಿಗೆ ಸುಮಾರು ಮೂರು ಅಡಿ ವ್ಯಾಸವುಳ್ಳ ಮುಂಡಾಸು. ಗಯನಂಥ ಒಬ್ಬ ಗಂಧರ್ವ ಬಂದರೆ, ಅವನ ಕಿರೀಟ ದೊಡ್ಡದಾಗಿದ್ದು, ಅರ್ಧ ಕೋರೆಯಾಗಿ. ಅಲಂಕಾರಕ್ಕೆ ಕೆಂಚಳಿಲಿನ ಬಾಲದ ಕುಚ್ಚನ್ನು ಕಟ್ಟುತ್ತಾರೆ. ವೇಷದ ಬೆಡಗು ನೋಡಬೇಕಾದರೆ ಶಲ್ಯ, ಕರ್ಣ, ಕಿರಾತ, ಗಂಧರ್ವರಂತಹ ಪಾತ್ರಗಳನ್ನು ನೋಡಬೇಕು. ಅವರ ಈ ಮುಂಡಾಸುಗಳನ್ನು ಕಂಡರೆ, ನಮ್ಮೆದೆಯಲ್ಲಿ ಪುಳಕವುಂಟಾಗುತ್ತದೆ. "ಎಂತಹ ಸುಂದರವಾದ ಕಲ್ಪನೆ! ಎಂತಹ ಅತಿಮಾನವತೆಯ ಸೃಷ್ಟಿ!" ಎಂಬ ಭಾವನೆ ಉಂಟಾಗುತ್ತದೆ. ಇನ್ನು ಬೆನ್ನಿನ ಭಾಗ ಮರೆಯಿಸಲು, ಕಿರೀಟ ಹಾಕುವವರು ತಲೆಗೂದಲು ಬಿಡುತ್ತಾರೆ; ಮುಂಡಾಸದವರು ಹಿಂದೊಂದು ತೆರೆಯನ್ನು ತೂಗಿಕೊಳ್ಳುತ್ತಾರೆ.

ಬಹು ಹಿಂದಿನಿಂದ ಮುಖಕ್ಕೆ ಅರಸಿನ ಬಣ್ಣದ ಅರದಳವನ್ನು ಅರೆದು ಹಚ್ಚಿ ಬಣ್ಣ ಕೊಟ್ಟುಕೊಳ್ಳುವ ಸಂಪ್ರದಾಯ ಬಂದಿದೆ. ಸುಂಜು ಬೆಳಕಿನಲ್ಲಿ ಇದು "ಮುಖ ಅರಿಸಿನವಾಗಿದೆ" ಎಂಬ ಭಾವನೆಯನ್ನು ಹುಟ್ಟಿಸುವುದಿಲ್ಲ. ಗ್ಯಾಸ್ ದೀಪ ಹಚ್ಚಿದರೆ ಮಾತ್ರ ಆ ಹುಳುಕು ಹೊರಗೆ ಬರುತ್ತದೆ. ಪಾತ್ರಗಳು ತುಟಿ, ಹುಬ್ಬು ಮಾಡಿಸಿಕೊಳ್ಳುತ್ತಾರೆ. ಮುಖಕ್ಕೆ ದಪ್ಪವಾದ ಮೀಸೆ ಕಟ್ಟಿಕೊಳ್ಳುತ್ತಾರೆ. ಕಿರಾತ, ಗಂಧರ್ವರಿಗೆ ಇನ್ನಷ್ಟು ದಪ್ಪಗಿನ ಮೀಸೆಗಳಿರುತ್ತವೆ.

ಅತಿಕಷ್ಟವಾದ ಮತ್ತು ಅರ್ಥಪೂರ್ಣವಾದ---ಮುಖವರ್ಣಿಕೆಯೆಂದರೆ ರಾಕ್ಷಸ ವೇಷಗಳದು ; ಮತ್ತು ಅದರಂತಿರುವ ಚಂಡಿ, ನಾರಸಿಂಹಾದಿ ವೇಷಗಳದು. ಈ ಮುಖವರ್ಣಿಕೆ ಕಾಣುವವರಿಗೆ, ಹತ್ತೆಂಟು ಬಣ್ಣಗಳಿಂದ ಕೂಡಿದ, Mask ಅಥವಾ ಮುಖವಾಡವಾಗಿ ಕಾಣುತ್ತದೆ. ಕಪ್ಪು, ಕೆಂಪು, ಹಸಿರು---ಈ ಮೂರು ಬಣ್ಣಗಳಿಂದ ಮುಖಕ್ಕೆ ಮೂಲಲೇಪನ ಮಾಡಿಕೊಳ್ಳುತ್ತಾರೆ, ಕಣ್ಣುಗಳು ಹುಬ್ಬಿನ ಮೇಲುಗಡೆ ಬರೆಯುತ್ತಕ್ಕವು. ಮೂಗು—ಹತ್ತಿಯಿಂದ ಏರಿಸಲ್ಪಡುತ್ತದೆ. ಬಾಯಿ ವಿಸ್ತಾರಗೊಳ್ಳುತ್ತದೆ ಅನಂತರ ಅಕ್ಕಿಯ ಹಿಟ್ಟನ್ನು ಅರೆದು, ತೊಟ್ಟು ತೊಟ್ಟಾಗಿ, ಸಾಲಾಗಿ, ಮುಖದ ಮೇಲಿರಿಸಿ, ಮುಳ್ಳಿನಂತೆ ಬೆಳೆಸಿಕೊಂಡು—ಮುಖಕ್ಕೆ ಇನ್ನಷ್ಟು ಘೋರತೆ ಬರುವಂತೆ ಮಾಡುತ್ತಾರೆ. ಜಾವಾ, ಚೀನಾ, ಜಪಾನುಗಳ ನಾಟಕಗಳಲ್ಲಿ ಬಳಸುವ ರಾಕ್ಷಸ ಮುಖವಾಡಗಳಿಗಿಂತ ಹೆಚ್ಚಿನ ರೌದ್ರಸೌಂದರ್ಯವನ್ನು—ಈ ರೀತಿ ಬರೆದು ಕೊಳ್ಳುವ ಮುಖವಾಡ—ತೋರಿಸುತ್ತವೆ. ಒಬ್ಬ ಚತುರನಾದ ರಾಕ್ಷಸ ವೇಷಧಾರಿಯು, ಒಂದೊಂದು ರಾಕ್ಷಸಪಾತ್ರಕ್ಕೂ ಭಿನ್ನ ಭಿನ್ನವಾದ ರೌದ್ರ ಮುಖವರ್ಣಿಕೆಯನ್ನು ಮಾಡಿಕೊಳ್ಳಬಲ್ಲ. ಚಂಡಿ—ನಾರಸಿಂಹರ ಮುಖವರ್ಣಿಕೆಯೂ, ನಾಲಗೆ, ಕಣ್ಣುಗಳೂ ಇದು ನಾಟಕ ಎಂದರಿತೇ ನೋಡುವೆವಾದರೂ, ನೋಡುವ ನಮ್ಮೆದೆಯನ್ನು ಕತ್ತರಿಸಬಲ್ಲಂತಹವು. ನಮ್ಮ ಕಲಾವಿದರು ಶುದ್ಧಯಕ್ಷಗಾನ ಶೈಲಿಯ ವೇಷ, ಭೂಷಣ, ಮುಖವರ್ಣಿಕೆಗಳನ್ನು ಅಭ್ಯಸಿಸಿ, ಅದರ ಚೆಲುವಿಗೆ, ಕಲಾಸೌಂದರ್ಯಕ್ಕೆ ಮರುಳಾಗಬಹುದು. ಅನೇಕ ಪಾಶ್ಚಾತ್ಯ ಕಲಾವಿದರು ಇದನ್ನು ಕಂಡು ಮೆಚ್ಚಿದ್ದಾರೆ, ಬೆರಗಾಗಿದ್ದಾರೆ. ಆದರೆ ಮಂಗಳೂರು ಪ್ರಾಂತ ಬಲ್ಲಾಗಲಿ, ಚಿತ್ರದುರ್ಗ, ಕೋಲಾರಗಳಲ್ಲಾಗಲಿ— ನಾವು ಈ ಬಗೆಯ ಪಾತ್ರಸೌಂದರ್ಯವನ್ನು ಎಂದೂ ಕಾಣಲಾರೆವು.

ಯಕ್ಷಗಾನದಲ್ಲಿರುವ ಈಗಣ ಕೊರತೆಯೆಂದರೆ, ಅದರಲ್ಲಿಯ ಸ್ತ್ರೀವೇಷಗಳು, ಹಾಸ್ಯಗಾರರು: ಯಾವ ಸ್ತ್ರೀವೇಷವೂ ಪುರುಷನ ರೂಪಿಗೆ ತಕ್ಕ ಕಲಾಸೌಂದರ್ಯವುಳ್ಳದ್ದಾಗಿಲ್ಲ. ಬದಲು ಅವರುಡುವ ಉಡುಗೆ, ತೊಡುಗೆ ನಿತ್ಯಜೀವನದ ಸೀರೆ ಸಾಮಾನ್ಯದ ಉಡುಗೆ-ತೊಡುಗೆಗಳಾಗಿವೆ. ಹಾಸ್ಯದ ಉಡುಗೆಗೂ, ಉಳಿದ ಯಕ್ಷಗಾನ ಪಾತ್ರಗಳ ಕಲ್ಪನಾಸೃಷ್ಟಿಗೂ ಏನೊಂದೂ ಸಂಬಂಧ ಕಾಣುವುದಿಲ್ಲ. ಹಿಂದಣ ದಿನಗಳಲ್ಲಿ ಹಸುಮನಾಯಕನಿಗೆ ಒಂದು ಮುಂಡಾಸು, ಬಿಳಿಯ ಕಸೆಕಟ್ಟುವ ನಿಲುವಂಗಿಯಿತ್ತು. ಅದೊಂದು ಬಗೆಯಾಗಿ ಕಾಣುತ್ತಿತ್ತು. ಈಗಿನವರು ಬಾಬಯ್ಯನ ಹಬ್ಬದ ಹುಲಿಯ ಮುಂದಿನ ಕೋವಿಹಿಡಿಯುವ ಬೇಟೆಗಾರನಂತೆ ಚಲ್ಲಣ ತೊಟ್ಟು, ಹಳಕು ಹ್ಯಾಟ್ ಧರಿಸಿ ಬಂದರೂ ಬಂದರೇ—ನಮ್ಮಲ್ಲಿಯ ಪರಿಶೀಲನ ಗುಣ, ಸಂಸ್ಕಾರ, ನಷ್ಟಗೊಳ್ಳುತ್ತಿದೆ ಎಂಬುದಕ್ಕೆ ಇದು ಸಾಕ್ಷಿ. ಅಲ್ಲದೆ ಇನ್ನೊಂದು ವ್ಯಥೆಯ

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE
TONIC FOR ORAL
ADMINISTRATION IN ALL RUNDOWN
CONDITIONS OF HEALTH

Biological Laboratory

The Zandu Pharmaceutical Works, Ltd.
BOMBAY 14.

Sole Agents:—

M/s. Pranlal and Sons
Chemists, Druggists
Station Road. HUBLI

(H. O. Bangalore City)

ಮಾತೆಂದರೆ, ಈಗೀಗ ನಮ್ಮ ನಾಟಕಕಂಪನಿಗಳನ್ನೊ ಸಿನಿಮಾ ವೇಷಗಳನ್ನೊ ಕಂಡು, ಆ ವೇಷ-ಭೂಷಣಗಳ ಅನುಕರಣೆ ಮಾಡಿ ಬಯಲಾಟದ ಸೊಬಗನ್ನು ಹಾಳುಮಾಡುತ್ತಲೂ ಬಂದಿದ್ದಾರೆ. ಅನೇಕ ಕಡೆಗಳಲ್ಲಿ, ಗುಡಿಗಾರರ ವಿಶೇಷ ಕೈವಾಡವಾದ, ಮರದ ಅಲಂಕಾರಗಳನ್ನು ಕಿತ್ತೆಸೆದು, ಬದಲಿಗೆ ಬಣ್ಣದ ಗಾಜಿನ ಮಣಿಗಳ ಇಲ್ಲವೆ ನಳಿಗೆಗಳ ಅಲಂಕಾರ ತೊಡಲು ತೊಡಗಿದ್ದಾರೆ. ಗುಡಿಗಾರನ ಅಲಂಕಾರದಲ್ಲಿ ನಾವು ಯಾವ ಚಿತ್ರಕೆಲಸ, ರೂಪ, ಪ್ರತಿರೂಪ (Pattern) ಗಳನ್ನು ಕಾಣುತ್ತೇವೆಯೋ, ಅವು ಈ ಹೊಸ ಅನುಕರಣೆಗಳಲ್ಲಿಲ್ಲ.

ಬಯಲಾಟದ ಶೈಲಿಗೆ ಸಂಬಂಧಿಸಿದ ಬೇರೊಂದು ಮಾತು ಹೇಳುವಲ್ಲಿ, ಅದು ಅಲ್ಲಿನ ಪಕ್ಕವಾದ್ಯ, ಗದ್ಯ, ಹಾಡುಗಾರಿಕೆ ಇವುಗಳಿಗೆ ಸಂಬಂಧಿಸಿದ್ದು. ಇವುಗಳಲ್ಲಿಯೂ ಉತ್ತರ–ದಕ್ಷಿಣಕನ್ನಡ ಜಿಲ್ಲೆಗಳ ಬೇರೆ ಬೇರೆ ಭಾಗಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸ ಎದ್ದು ಕಾಣುತ್ತದೆ. ಬಡಗಣ ಯಕ್ಷಗಾನ ಭಾಗವತರು ಕಂಚಿನ ತಾಳ ಹಿಡಿದು ಹಾಡುತ್ತಾರೆ. ಚಿಕ್ಕದೂ, ದಪ್ಪನೆಯದೂ—ಆದ ಈ ತಾಳವು ಒಳ್ಳೆಯ ನಾದವನ್ನು ಕೊಡುತ್ತದೆ. ತೆಂಕಣದ ಭಾಗವತರು ತಾಳದ ಬದಲು ಜಾಗಟೆಯನ್ನೇ ಹಿಡಿಯುತ್ತಾರೆ. ಜಾಗಟೆ ಬಾರಿಸುವುದಕ್ಕೆ ಜಿಂಕೆಯ ಕೊಂಬಿನ ಒಂದು ತುಂಡನ್ನು ಉಪಯೋಗಿಸುತ್ತಾರೆ. ಕಾಲಪ್ರಸ್ತಾರದ ಕೊನೆಗೆ ಕೋಲನ್ನು ಜಾಗಟೆಗೆ ಅಮುಕಿ ಹಿಡಿದು ಸದ್ದುಮಾಡುವ ವಾಡಿಕೆಯುಂಟು. ಆ ಸದ್ದು ಮಾತ್ರ ಭಿನ್ನಶ್ರುತಿಯಲ್ಲಿ ಹೊರಟು ಅಪಸ್ವರ ಮಾಡುತ್ತದೆ. ಶುದ್ಧ ಯಕ್ಷಗಾನದಲ್ಲಿ ಹಾಡುವ ಗದ್ಯವು ಸ ಶ್ರುತಿಬದ್ಧವಾಗಿರುತ್ತದೆ. ಅದಕ್ಕೂ ಒಂದು ರಾಗವಿರುತ್ತದೆ. ಹ ಕಥೆಯ ಗದ್ಯವು ಶ್ರುತಿಬದ್ಧವಾಗಿರುವಂತೆಯೇ ಯಕ್ಷಗಾನ ಗದ್ಯವೂ ರಾಗಭರಿತ, ಶ್ರುತಿಬದ್ಧವಾಗಿದೆ. ಈಗಿನ ಅನೇ ಅರ್ಥಧಾರಿಗಳು ಶ್ರುತಿಯನ್ನು ಬಿಟ್ಟು ಬರಿಯ ಉಪನ್ಯಾಸದಂ ಮಾತನಾಡುತ್ತಾರೆ. ಶ್ರುತಿಬದ್ಧವಾದ ಹಾಡು, ಶ್ರುತಿಯಿಲ್ಲ ಮಾತು ಇವು ಒಂದರೊಡನೊಂದು ಸಮನಾಗಿ ಬೆರೆಯುವುದಿಲ್ಲ ಈ ದೃಷ್ಟಿಯಿಂದ ಉತ್ತರಭಾಗದಲ್ಲಿ ರೂಢಿಯಲ್ಲಿರುವ ಹಳೆಯ ಸಂಪ್ರದಾಯ ಕಿವಿಗೆ ಎಷ್ಟೋ ಹಿತವಾಗಿರುತ್ತದೆ.

ಪಕ್ಕವಾದ್ಯಗಳಲ್ಲಿಯೂ ಬೇರೆ ಬೇರೆ ಊರುಗಳಲ್ಲಿ ಉಪ ಯೋಗಿಸುವ ಮದ್ದಲೆ, ಚಂಡೆಗಳು ಕುಸು ವ್ಯತ್ಯಾಸವುಳ್ಳವು ಗಳಾಗಿವೆ. ಕಥಕ್ಕಳಿಯವರು ಬಳಸುವ ಚಂಡೆಗೂ ದಕ್ಷಿಣಕನ್ನಡ ಮಂಗಳೂರು ಪ್ರಾಂತ್ಯದ ಚಂಡೆಗೂ ಉಡುಪಿ ಪ್ರಾಂತ್ಯ ಚಂಡೆಗೂ ಅವು ಹೊರಡಿಸುವ ನಾದದಲ್ಲಿ ವ್ಯತ್ಯಾಸವಿದೆ. ಅದರಂ ತೆಯೇ ಮದ್ದಲೆಗಳಲ್ಲಿಯೂ ತಾರತಮ್ಯವಿದೆ. ಉಡುಪಿಯ ಉತ್ತರಭಾಗದ ಮದ್ದಲೆ ಸಪೂರವೂ, ನೀಳವೂ ಆದದ್ದು. ಅದ ನಾದ ಎರಡು ಮೂರು ಮೈಲುಗಳ ದೂರಕ್ಕೂ ಕೇಳಿಸುವಂಥದ ಆದರಿಂದ ಹೊರಡುವ ಧ್ವನಿತರಂಗವೂ ಬೇರೆ. ಮಂಗಳೂ ಪ್ರಾಂತದ ಮದ್ದಲೆ ಆಕಾರದಲ್ಲಿ ಸಾಮಾನ್ಯ ದಕ್ಷಿಣಾದಿಯ ಮೃದಂ ದಂತಿರುತ್ತದೆ; ಅದರ ಬಡಿತವೂ ಬೇರೆ. ಯಕ್ಷಗಾನದಲ್ಲಿ ಸಾಮಾ ನ್ಯವಾಗಿ ಒಂದೊಂದು ಕಡೆಯವರು ತಮ್ಮಲ್ಲಿ ರೂಢಿಯಾಗಿ ಬಂದಿ ರುವ ಮೃದಂಗ, ಚೆಂಡೆಗಳನ್ನು ಉಪಯೋಗಿಸುವುದರೊಡನೆ ಭಿನ್ನ ನಾದತರಂಗಗಳನ್ನು ಕೊಡಬಲ್ಲ. ಇತರ ಮದ್ದಲೆಗಳನ್ನು ಬಳಸುವುದರಿಂದ ಲಾಭವಿದೆ. ಅವರಲ್ಲಿ ಹೆಚ್ಚಾಗಿ ಬಾರಿಸು ರೀತಿ—ವೀರರಸಕ್ಕೆ ರೌದ್ರಕ್ಕೆ ಅನುಕೂಲಿಸುವ ಘನ ಗಂಭೀ ಘೋರನಾದತರಂಗ, ಅಂದರೆ ತಾಳಗಕ್ಕೆ ಅದು ಅನುಕೂಲವಾ ಹಿಮ್ಮೇಳವಾಗುತ್ತದೆ. ಶೋಕರಸದ, ಇಲ್ಲವೆ ಲಾವಣ್ಯ ಹಾಡುಗಳನ್ನು ಹಾಡುವಾಗ, ಈ ಧ್ವನಿ ಹೆಚ್ಚಾಗುತ್ತದೆ; ಮಾರ್ದ ಮೂಡುವುದಿಲ್ಲ. ಕೆಮ್ಮಣ್ಣು ನಾರಣಪ್ಪಯ್ಯನಂಥ ಒಟ್ಟಾನೊ ಕಲಾವಿದ ಮಾತ್ರ ರಸಭಾವಕ್ಕೆ ತಕ್ಕಂತೆ ಮೃದಂಗವನ್ನಾಗಲಿ ಚೆಂಡೆಯನ್ನಾಗಲಿ, ಮಿದುವಾಗಿ, ಕಠೋರವಾಗಿ, ಲಲಿತವಾ ಕರ್ಕಶವಾಗಿ ತನ್ನಿಚ್ಛೆ ಬಂದಂತೆ ನಡೆಸಬಲ್ಲ. ವಾದ್ಯದ ಮೇ ಇಷ್ಟು ಹತೋಟಿಯುಳ್ಳ ಕಲಾವಿದನನ್ನು ಕಾಣುವುದು ತೀ ಅಪೂರ್ವ.

ಯಕ್ಷಗಾನದಲ್ಲಿ ಪ್ರಚಾರವಾಗಿರುವ ಶೈಲಿಗಳು, ಸಂಪತ್ತು ವೇಷ-ಭೂಷಣಗಳು ಇನ್ನೂ ಹೆಚ್ಚು ಅಭಿವೃದ್ಧಿಯನ್ನು ಹೊಂ ಬಲ್ಲವು. ಅತ್ಯಮೂಲ್ಯವಾದ ಕಲಾಸಂಪತ್ತನ್ನು ಒದಗಿಸಬ ಯೋಗ್ಯತೆಯೆಲ್ಲ ಅವುಗಳಲ್ಲಿ ತುಂಬಿಕೊಂಡಿದೆಯೆಂದು ಹೇ ವಿರಮಿಸುತ್ತೇನೆ.

ನನ್ನ ಹೊಂದಾವರೆ

ಶ್ರೀ. ಚೆನ್ನವೀರ ಕಣವಿ, ಧಾರವಾಡ

卐

ನನ್ನ ಕನಸಿನ ಹೊನ್ನ ತಾವರೆಯು ಹೂವರಳಿ
  ಎನ್ನ ಬೊಗಸೆಯೊಳಿಂದು ಕಂಗೊಳಿಸಿದೆ !
ಎನ್ನಿನಿಯ ಭಾವಗಳ ಮಧುರ ಮಕರಂದವೂ
  ಮೃದುಲ ದಲದಲಗಳಲಿ ಪರಿಮಳಿಸಿದೆ !

ಮಾನಸ ಸರೋವರದ ಶಾಂತಿಸೌಖ್ಯಾಭೋಗ
  ಸಕಲ ಸೌಂದರ್ಯದೀ ಮೊಗ್ಗಿಯಾಗಿ
ನೇಹನೇಸರನೊಂದು ಮೀಸಲದ ಕಿರಣದೆಡೆ
  ಮೊಗವ ಚಾಚಿದೆ ಸೊಗಕೆ ಕಳಸವಾಗಿ.

ಹಲವಾರು ಹೂವುಗಳ ಅಂದಚೆಂದವದಿರಲಿ
  ಸೌಗಂಧವೇ ಇದರ ಸೌಭಾಗ್ಯವು ;
ಕಂಡ ಕಣ್ಣಿಗೆ ತಂಪು ಎದೆಗೆ ಕುಂದದಲಂಪು
  ನಕ್ಷತ್ರಗಂಗಳಕ್ಷಯದ ಒಲವು !

ಎದೆಗೆದೆಯು ತುಂಬಿಸುವ ರಂಬಿಸುವ ಝೇಂಕಾರ—
  ಹಲವು ಹಂಬಲವಿಲ್ಲಿ ಹಣ್ಣಾಗಿವೆ ;
ಬಿಸಿಲೊ ಬೆಳದಿಂಗಳವು, ಕಾಡೊ ನಂದನವನವು—
  ಮಧುರಮಿಲನದೊಳೆಲ್ಲ ಜೇನಾಗಿವೆ !

ಆವ ಚೆಲುವಿನ ದಿವ್ಯಸಾನ್ನಿಧ್ಯವನು ಬಯಸಿ
  ಜೀವವನವರತವೂ ಹುಡುಕುತಿತ್ತೊ
ಸತ್ಯ ಸೌಂದರ್ಯಗಳ ಹತ್ತುಗಡಿಯನು ಸಡಕಿ
  ಅಂತರಂಗದೊಳಿಂತು ಮಿಡುಕುತಿತ್ತೊ.

ಅಂಥ ಪಂಥದ ಮುದ್ದುಮೊಗವನಪ್ಪಿತು ಗೆಲವು—
  ಬಾಳ ಬೀದಿಗೆ ಬೆಳಕು ನುಗ್ಗಿಬಂತು !
ಹೊಂಗೆಳತಿ ಸಂಗಾತಿ ಪ್ರೇಮಕುಂಡಜ್ಯೋತಿ
  ನಿನ್ನ ಜೊತೆಯೊಳು ಬಾಳು ತುಂಬಿ ಬಂತು !

ಸೌಭಾಗ್ಯವೆ ಬರಲಿ !

ಶ್ರೀ. ಸಿದ್ದಣ್ಣ ಮಸಳಿ, ಧಾರವಾಡ

卐

ಇಂದಾದರು ಮುಂದಾದರು ಎಂದಾದರು ಇರಲಿ !
  ಮನೆಮನೆಯಲಿ ನಗೆಯರಳಲಿ ಸೌಭಾಗ್ಯವೆ ಬರಲಿ

ಹಳೆ ಬಾಳಿನ ಕೊಳೆ ಹೋಗಲಿ ಹಸನಾಗಲಿ ಬಾಳು
  ಮೈ ಮನಸೂ ಹೊಸದಾಗಲಿ ಕಹಿ ದುಃಖವ ಹೂಳು!
ಮನ ಮೂಡಲ ಭೂರಂಗದಿ ಉಷೆ ಬರಲೀ ಕುಣಿದು
  ಕಣ್ಣಂಚಿನ ಸಿರಿಮಿಂಚಿನ ಎರಡಾರತಿ ಹಿಡಿದು.
ಮಾಯಾಂಗನೆ ಮರೆಯಾಗಲಿ ಅಮರಾಂಗನೆ ಬರಲಿ
  ಸುಖಸ್ಪರ್ಶದಿ ಮೈಮರೆಯಿಸಿ ಮಧುರಸವನೆ ತರಲಿ!
ಕೈಕಂಕಣ ಮೈ ಅರಿಸಿಣ ಸಿರಿಕುಂಕುಮ ಹಣೆಗೆ
  ಮಾಂಗಲ್ಯದ ಕರಿಮಣಿಸರ-ಸೊಬಗೀಯಲಿ ಉಷೆಗೆ

ಬಾನ್-ಹಂದರ, ರವಿ-ಚಂದಿರ ನಕ್ಷತ್ರದ ಸೇಸೆ
  ಶಿವ-ಪಾರ್ವತಿ, ಶ್ರೀಭಾರತಿ ಮೈದೋರುವ ಆಶೆ.
ಮೈ ಕೈಗಳ ಆಲಿಂಗನ ಪುಟಿಪುಟಿಗಳ ಕೂಟ
  ಕಣ್-ಮನಗಳು ಜೋಂಪಿಸಲಿ ಅಧರಾಮೃತದೂಟ.
ಕರಿಕುರುಳಲಿ ಘಮಘಮಿಸಲಿ ಹೂಮಾಲೆಯ ಸುರುಳಿ
  ಜೇನಿರುಳಿನ ಸಂಗೀತಕೆ ಸವಿಗೊರಲಿನ ಮುರಲಿ.
ಎರಡೆದೆಗಳ ಹಿರಿಯಾಶೆಗೆ ಕವಿ ಹಾಡುವ ಪಕ್ಷಿ
  ಶಿವ-ಮಂಗಲ ಸಮ್ಮಿಲನಕೆ ತಾಯ್-ಹಾಲಿನ ಸಾಕ್ಷಿ

ಇಂದಾದರು ಮುಂದಾದರು ಎಂದಾದರು ಇರಲಿ—
  ಮನೆಮನೆಯಲಿ ನಗೆಯರಳಲಿ ಸೌಭಾಗ್ಯವೆ ಬರಲಿ !

ಶಿಕ್ಷಣದ ತತ್ತ್ವ

ಶ್ರೀ. ಶ್ರೀ. ಶಿ. ಖಾನೋಳಕರ, ಪುಣೆ

★

ಒಂದೊಂದು ಮಗುವಿನ ಮನಸ್ಸೂ ಒಂದೊಂದು ಬಗೆಯ ವ್ಯಕ್ತಿತ್ವದ ಪ್ರತಿನಿಧಿಯಾಗಿರುವುದು. ಆ ವ್ಯಕ್ತಿತ್ವವಿಶೇಷದ ಕಲ್ಪನೆಯಿಲ್ಲದೆ, ಎಲ್ಲರನ್ನೂ ಒಂದೆ ಮಾನದಂಡದಿಂದ ಅಳೆದು, ಒಂದೆ ಬಗೆಯ ಶಿಕ್ಷಣ ಕೊಡುವೆನೆಂದರೆ, ಅದು ನಿರರ್ಥಕಶ್ರಮವೆನಿಸುವುದು!

★

ನಾನು ಎಂದಿನಂತೆ ಮುಂಜಾವಿನಲ್ಲಿ ತಿರುಗಾಡಿ ಬರುತ್ತಿದ್ದೆ. ನನ್ನ ಗೆಳೆಯರಾದ ಶೀನಪ್ಪನ ಮನೀ ಸಮೀಪ ಬಂದೆ. ಅವರ ಹುಡುಗ ತಿರಕಪ್ಪ, ದೊಡ್ಡ ದನಿಯಿಂದ ಅಳುತ್ತಲಿದ್ದ. ಒಳಗೆ ಹೋದೆ. ಶೀನಪ್ಪ ಒಂದು ಚಿಮಟಿ ನಶ್ಯ ಮೂಗಿನೊಳಗೆ ಏರಿಸುತ್ತಾ "ಬರ್ರಿ" ಅಂತ ನನ್ನ ಸ್ವಾಗತ ಮಾಡಿದರು. "ಹುಡುಗ ಯಾಕ ಅಳತಾನ?" ಅಂತ ಕೇಳಿದೆ. "ಗಣಿತ ಬರೋದಿಲ್ಲ. ನೊನ್ನಿನ ಪರೀಕ್ಷಾದೊಳಗ ನೂರರ ಪೈಕಿ ಹತ್ತು ಮಾರ್ಕ್ಸ್ ಸಿಕ್ಯಾವ. ಆದ್ದರಿಂದ ಸ್ವಲ್ಪ ಮನೀ ಒಳಗ ಕಲಿಸಲಿಕ್ಕೆ ಹತ್ತೇನಿ. ಏನು ಮಾಡಿದರೂ ಗಣಿತ ಅವನ ತಲ್ಯಾಗೇ ಹೋಗೋದಿಲ್ಲ. ಏನು ಮಾಡಬೇಕು? (ಹುಡುಗನಿಗೆ) ಏಳು ಕತ್ತೀ, ನಿನ್ನ ಪಾಟೀ ತಗೊಂಡು! ನಾ ಸಾಯೋತನಕಾ ನಿನಗ ಗಣಿತ ಬರೋದಿಲ್ಲ. ಎರಡು ಕಪ್ಪು ಚಹಾ ಮಾಡಲಿಕ್ಕೆ ಹೇಳು, ರಾಯರು ಬಂದಾರ!" ಹುಡುಗ ಕಣ್ಣು ಒರಿಸುತ್ತ ಒಳಗೆ ಹೊರಟುಹೋದ.

ಶೀನಪ್ಪನ ಗಣಿತ ಕಲಿಸುವ ತತ್ತ್ವವೆಂದರೆ ಒಂದೇ ಒಂದು ತತ್ತ್ವ. ತಪ್ಪಿದರೆ ಕಪ-ಕಪಾಳ ಹೊಡೆಯೋದು, ಉತ್ತರ ಬರೋತನಕಾ. ಇದೇ ತತ್ತ್ವ ನಮ್ಮ ಮಾಸ್ತರದು. ಮಾಸ್ತರರು ಗಣಿತದೊಳಗೆ ಪಾರಂಗತರಿರಬಹುದು. ಭಾಸ್ಕರಾಚಾರ್ಯರಷ್ಟು ನಿಷ್ಣಾಂತರಿರಬಹುದು. ಆದರೆ ಗಣಿತವನ್ನು ಕಲಿಸುವದು ಯಾರಿಗೆ? ಹುಡುಗನಿಗೆ. ಅಂದಮೇಲೆ, ಹುಡುಗನೆಂದರೆ ಏನೆಂಬದನ್ನೂ ಮಾಸ್ತರರು ಅರಿತಿರಬೇಕಾಗಿರುವದು. ಕಲ್ಲಿನೊಳಗೆ ಮೂರ್ತಿಯನ್ನು ಕಟೆಯುವವನು, ಮೊದಲು ಅಭ್ಯಾಸ ಮಾಡುವದೆಂದರೆ, ಕಲ್ಲಿನದು. ತಾನು ಮನಸ್ಸಿನಲ್ಲಿ ಹಿಡಿದ ಮೂರ್ತಿಯು ಈ ಕಲ್ಲಿನಲ್ಲಿ ಬರುವುದೋ? ಬಿಳೀ ಸಂಗಮವರೀ ಕಲ್ಲಿನಲ್ಲಿ ಲಕ್ಷ್ಮಿಯ ಮೂರ್ತಿಯನ್ನು ಸುಂದರವಾಗಿ ಕಟೆಯಬಹುದು. ಅದು ಸುಂದರವಾಗಿಯೂ ಕಾಣಿಸಬಹುದು. ಆದರೆ ಭೀಮಸೇನನ ಮೂರ್ತಿಗೆ ಸ್ವಲ್ಪ ಕಪ್ಪು ಕಲ್ಲೇ ಬೇಕು. ಉಗ್ರಮೂರ್ತಿಯನ್ನು ತೋರಿಸಲು ಬಂಡೆಗಲ್ಲೇ ಯೋಗ್ಯವಾದದ್ದು. ಅದರಂತೆಯೇ ಶಿಕ್ಷಕರು ಕಲಿಸುವ ವಿಷಯದ ಚಿತ್ರ ಹುಡುಗನ ಮನಸ್ಸಿನ ಮೇಲೆ ಮೂಡುವದಾದರೆ, ಹುಡುಗನ ಮನಸ್ಸೆಂದರೇನು? ಹುಡುಗನ ವಯಸ್ಸೇನು? ಅವನ ಚಟುವಟಿಕೆಗಳಾವವು? ಆಯಾ ವಯಸ್ಸಿನಲ್ಲಿ ಅವನ ಮತಿಸ್ಸು ಯಾವ ವಿಷಯಗಳನ್ನು ಎಷ್ಟರ ಮಟ್ಟಿಗೆ ಗ್ರಹಣ ಮಾಡುವಷ್ಟು ಬಲಿತದ್ದಿರುವದೆಂಬುದೂ ಸಹ ಶಿಕ್ಷಕರಿಗೆ ಗೊತ್ತಿರಬೇಕಾಗುವದು ಅವಶ್ಯವಾದ ಮಾತಲ್ಲವೇ? ಒಂದೇ ಮಾತಿನಲ್ಲಿ ಹೇಳಬೇಕಾದರೆ, ಶಿಕ್ಷಕರಿಗೆ ತಾವು ಕಲಿಸುವ ವಿಷಯದಲ್ಲಿ ಪಾರಂಗತತೆಯು ಬೇಕು; ಆದರೆ ವಿದ್ಯಾರ್ಥಿಯ ಮಾನಸಶಾಸ್ತ್ರವೂ ಸ್ವಲ್ಪಮಟ್ಟಿಗಾದರೂ ಗೊತ್ತಿರಬೇಕು. ಅಂದರೇನೇ ಶಿಕ್ಷಣವು ಸುಖವಾಗಿಯೂ ಪರಿಣಾಮಕಾರಕವಾಗಿಯೂ ಸಾಗುವದು. ಇಲ್ಲವಾದರೆ "ಎತ್ತು ಏರೀಗೆ ಎಳೀತು, ಕೋಣ ಕೆರೀಗೆ ಎಳೀತು" ಎಂಬಂತೆ, ಶಿಕ್ಷಣದ ಬಂಡಿಯು ನಡುವೇ ನಿಂತು ಹೋಗುವಲ್ಲಿ ಸಂದೇಹವಿಲ್ಲ.

ಯಾವ ಕಡೆಗೆ ನೋಡಿದರೂ ಇದೇ ಸ್ಥಿತಿಯೇ ಕಂಡುಬರುವದು. ಶಾಸ್ತ್ರದ ನಿಯಮಗಳೆಲ್ಲಾ ಅನುಭವದಿಂದ ಸಿದ್ಧವಾದವುಗಳೆಂಬುದು ನಿಜವೇ ಆಗಿದೆ. ಆದರೆ ಆಯಾ ಶಾಸ್ತ್ರಗಳ ನಿಯಮಗಳನ್ನು ಹಚ್ಚಿ ನೋಡುವಾಗ, ನಾವು ಅವುಗಳನ್ನು ಯಾರಿಗೆ ಹಚ್ಚುತ್ತೇವೆಂಬುದನ್ನೂ (ಅಂದರೆ ಆಯಾ ವ್ಯಕ್ತಿಯ ವ್ಯಕ್ತಿಮತ್ವವನ್ನೂ) ನೋಡುವದವಶ್ಯ. ವೈದ್ಯಕಶಾಸ್ತ್ರದ ಉದಾಹರಣೆಯನ್ನು ನೋಡುವಾ: ನನಗೊಮ್ಮೆ ಬಹಳ ಕೆಮ್ಮು ಬರಹತ್ತಿತು. ರಾತ್ರಿ ಹತ್ತರಿಂದ ಮುಂಜಾನೆ ನಾಲ್ಕರ ವರೆಗೆ, ಬೆಳ್ಳಬೆಳತನಕ ಜಾಗರಣೆಯಾಗುತ್ತಿತ್ತು. ಕಚೇರಿಯ ಕೆಲಸ ಬೇರೆ, ಕಲ್ಲಿನಂತೆ ಎದೆಯ ಮೇಲೆ. ಮೂರು ನಾಲ್ಕು ಮಂದಿ ಡಾಕ್ಟರರ ಕಡೆಗೆ ಹೋಗಿ, ಕೆಲವು ಕಡೆ ಸಿಹೀ, ಕೆಲವು ಕಡೆ ಕಹೀ ಔಷಧ ಕುಡಿದೆ. ಗುಣವಾಗಲಿಲ್ಲ. ಎಲ್ಲರ ಉಪಯೋಗಕ್ಕೆ ಬರಲೆಂದು ಸಿದ್ಧಮಾಡಿದ ಸಿದ್ಧೌಷಧಿಗಳನ್ನೂ ಕುಡಿದೆ. ಹೀಗೇ ಒಂದು ತಿಂಗಳಾದ ಮೇಲೆ ಒಬ್ಬ ಡಾಕ್ಟರರ ಕಡೆಗೆ ಹೋದೆ. ಅವರು ಬರಮಾಡಿಕೊಂಡು, ನನ್ನ ಇಡೀ ಇತಿಹಾಸವನ್ನೇ ಬರೆಯಹತ್ತಿದರು. ನೀವು ಎಲ್ಲಿಯವರು, ನಿಮ್ಮ ವಯಸ್ಸು, ಹೆಂಡತಿ, ಮಕ್ಕಳು ಎಷ್ಟು ಮಂದಿ, ಯಾವ ಕೆಲಸವನ್ನು ಮಾಡುತ್ತೀರಿ? ಮುಂತಾದ್ದು. ಆಮೇಲೆ ಆ ಕೆಮ್ಮಿನ ಇತಿಹಾಸವಾಯಿತು. ದೊಡ್ಡ ದೊಡ್ಡ ಗ್ರಂಥಗಳನ್ನು ತೆಗೆದು ನೋಡಿದರು. ಇತಿಹಾಸವನ್ನು ಹೇಳುವಾಗ ನಾನು ಹೇಳಿದ್ದು: ಕೆಮ್ಮು ಬರುವ ಮುಂಚೆ ೭-೮ ದಿನ ಜಾಗರಣೆಯಾಯಿತು. ಗಣಪತಿಯ ಉತ್ಸವ. ಆ ಮೇಲೆ ಮನೆಗೆ ಬಂದು ಒಂದು ಅರ್ಧಾ ತಂಬಿಗೆ ನೀರು ಕುಡಿದು ಮಲಗಿಕೊಳ್ಳುತ್ತಿದ್ದೆ. ಆಮೇಲೆ— "ಇನ್ನು ಮೇಲೆ ನನಗೆ ಏನೂ ಹೇಳಬೇಡಿರಿ" ಎಂದು ಡಾಕ್ಟರರು ಗುಂಡು ಹೊಡೆದಂತೆ ನುಡಿದರು. ಒಂದು ಬಾಟ್ಲಿಯೊಳಗೆ ಔಷಧ

ತುಂಬಿ ಕೊಟ್ಟರು. “ ಇಷ್ಟು ತಕ್ಕೊಂಡರೂ ಗುಣವಾಗದಿದ್ದರೆ, ನೋಡೋಣಂತೆ ” ಅಂದರು. ಎರಡು ಸಾರೆ ಔಷಧ ಕುಡಿದೆ; ಅವತ್ತು ರಾತ್ರಿ ಕೆಮ್ಮು ಬರಲೇ ಇಲ್ಲ— ಬಂತು, ಎರಡೇ ಸಾರೆ. ಎರಡನೆಯ ದಿವಸ ಕೆಮ್ಮು ನಿಂತೇಹೋಯಿತು. ಹೇಳುವ ತಾತ್ಪರ್ಯವೇನೆಂದರೆ ಸದ್ಯದ ಪರಿಸ್ಥಿತಿಯಲ್ಲಿ ಎಲ್ಲರೂ, ಯಾವ ವಿಷಯದಲ್ಲಿ ಪಾರಂಗತರಾದರೂ, ಮನುಷ್ಯಶಾಸ್ತ್ರದಲ್ಲಿ ಪಾರಂಗತರಿರುವುದಿಲ್ಲ. ಶಿಕ್ಷಣದಲ್ಲಿಯಂತೂ ಈ ತತ್ತ್ವವನ್ನು ಕಂಡುಹಿಡಿಯದೇ ಕಲಿಸುವವರೇ ಬಹುತರವಾಗಿ ಎಲ್ಲ ಶಿಕ್ಷಕರು. ತಮ್ಮ ವಿಷಯವಾಯಿತು, ತಾವಾಯಿತು, ಹೆಚ್ಚಿನ ಉಸಾಬರಿ ನಾವೇಕೆ ಮಾಡಬೇಕು? ಬೇಕಾದರೆ ಕಲಿತಾರು, ಬೇಡವಾದರೆ ಬಿಟ್ಟಾರು ಅನ್ನುವ ಶಿಕ್ಷಕರೇ ನೂರಕ್ಕೆ ೯೯ ಮಂದಿ. ಆದ್ದರಿಂದ ಶಿಕ್ಷಣದ ಪ್ರಗತಿಯು ಅಷ್ಟಕ್ಕಷ್ಟೇ ಆಗುವುದು. ಆದ್ದರಿಂದಲೇ ವಿದ್ಯಾರ್ಥಿಯ ಹೊತ್ತು, ಆಯುಷ್ಯ ವ್ಯರ್ಥವಾಗಿ ಹೋಗುವದು. ಶಿಕ್ಷಕರಿಗೆ ಅದೇ ಅದೇ ಮಾತು ಹತ್ತತ್ತು ಸಲ ಕಲಿಸಬೇಕಾಗುವುದು. ಅವರು ಪಟ್ಟ ಶ್ರಮಕ್ಕೂ ಬೆಲೆಯಿಲ್ಲದಂತಾಗುವುದು. ಇಲ್ಲಿ ಮನಸ್ಸಿನಲ್ಲಿ ಹಿಡಿಯುವ ಮುಖ್ಯ ಮಾತೇನೆಂದರೆ ತಿರುಕಪ್ಪನಿಗೆ ಗಣಿತ ಕಲಿಸಬೇಕೆಂಬ ಇಚ್ಛೆ ಇದ್ದರೆ, ಕಲಿಸುವವರಿಗೆ ತಿರುಕಪ್ಪನ ಜ್ಞಾನವೂ ಬೇಕು; ಗಣಿತಜ್ಞಾನವಂತೂ ಇರಲೇಬೇಕು.

ತಿರುಕಪ್ಪನೆಂದರೊಬ್ಬ ಹುಡುಗ–ಒಂದು ಆತ್ಮ–ಜೀವಾತ್ಮ. ಪ್ರತಿಯೊಬ್ಬ ಮಾನವನಲ್ಲಿ ತನ್ನದೊಂದು ವಿಶಿಷ್ಟ ಶಕ್ತಿಯಿರುವುದುಂಟು. ಆ ಆತ್ಮಶಕ್ತಿಯಿಂದಲೇ ಅವನು ಮಾನವನಿದ್ದರೂ ಒಂದು ವಿಶೇಷ ವ್ಯಕ್ತಿ. ಈ ದೇಹದಲ್ಲಿರುವ ಚಿಚ್ಛಕ್ತಿಯೇ ಅವನ ಜೀವಾಳ. ಈ ದೇಹ ಎಂದರೇನು ? ಮಾನವನ ಕೋಟ್ಯವಧಿ ಜೀವಾಣು (Cell) ಗಳಿಂದ ನಿರ್ಮಿತವಾದ ಅಗಾಧವಾದ ಗೂಢ ಸಂಸ್ಥಾನ. ಪ್ರತಿಯೊಂದು ಜೀವಾಣುವೆಂದರೊಂದು ಆಯಾ ಮಾನವನ ಗುಣಗಳ ಅರ್ಕವಿದ್ದಂತೆ. ಅದರಲ್ಲಿ ಮಾನವನ ದೇಹದ ಮತ್ತು ಆತ್ಮದ ಗುಣಗಳು ಬೀಜರೂಪದಲ್ಲಿ ಅಡಕವಾಗಿರುವವು. ಜೀವಾಣುಗಳ ಸಮೂಹವೇ ಇಂದ್ರಿಯ. ಕಣ್ಣು, ಮೂಗು, ಕಿವಿ, ಪಚನೇಂದ್ರಿಯಗಳು, ಕೈಕಾಲು, ಹೃದಯ— ನೋಡಿದಲ್ಲೆಲ್ಲ ಜೀವಾಣುಗಳ ಪ್ರತ್ಯೇಕವಾದ ಸಮುದಾಯ. ಇವೆಲ್ಲ ಸಮುದಾಯಗಳಿಗೆ — ಇಂದ್ರಿಯಗಳಿಗೆ ದೇವದತ್ತ ಶಕ್ತಿಯುಂಟು. ವಿಶೇಷ ಶಕ್ತಿ. ಕಣ್ಣಿನಿಂದ ನೋಡುವದು, ಕಿವಿಯಿಂದ ಕೇಳುವದು, ಪಚನೇಂದ್ರಿಯಗಳಿಂದಲೇ ಪಚನಮಾಡುವದು. ಒಂದರಿಂದಾಗುವ ಕಾರ್ಯ ಮತ್ತೊಂದರಿಂದಾಗುವಂತಿಲ್ಲ. ರಕ್ತವೆಲ್ಲ ಮೈಯ ತುಂಬ ಹರಿದಾಡುವದು. ಅದು ಆದರ ವಿಶೇಷ ಕಾರ್ಯ. ಹರಿದಾಡುವದು ಅದರ ವಿಶೇಷ ಶಕ್ತಿ. ಹೀಗಿದೆ ಈ ದೇಹವೆಂಬ ಮಹಾ ಸಂಸ್ಥಾನ. ಈ ಸಂಸ್ಥಾನವನ್ನು ನಡಿಸಿ ನೂರು ವರ್ಷದ ವರೆಗೆ ಇರುವಂತೆ ಸ್ಥಿರತೆಯಿಂದಲೂ ಧೈರ್ಯದಿಂದಲೂ ಆಳುವ ಅರಸೆಂದರೆ ಆತ್ಮ. ಆತ್ಮವಲ್ಲಿಯ ಗುಣಗಳು ಪೂರ್ವಸಂಸ್ಕಾರದಿಂದಲೂ, ವಂಶದಿಂದಲೂ, ಶಿಕ್ಷಣದಿಂದಲೂ ಬರುವದುಂಟು. ಈ ಗುಣಗಳು ಪ್ರತಿಯೊಬ್ಬನಿಗೆ ಬೇರೆ ಬೇರೆ. ಪ್ರತಿಯೊಬ್ಬನ ಆತ್ಮವೂ ಬೇರೆ ಬೇರೆ ಇರುವಂತೆ, ಎಲ್ಲರ ದೇಹಗಳೂ ಬೇರೆ ಬೇರೆ. ಒಂದರಂತೆ ಮತ್ತೊಂದಿಲ್ಲ. ಅದೇ ಮಾನವನ ವಿಶೇಷ.

ಶಿಕ್ಷಣಕ್ಕೂ ಇದಕ್ಕೂ ಏನು ಸಂಬಂಧ ? ಅದನ್ನೇ ಹೇಳುವದಿದೆ. ವಿಶಿಷ್ಟವಾದ ಆತ್ಮವು ತನ್ನ ಕಾರ್ಯವನ್ನು ನಡೆಸುವ ರೀತಿಯು ಬಹಳ ಚಮತ್ಕೃತಿಯುಳ್ಳದ್ದು. ಬಾಹ್ಯ ಪದಾರ್ಥಗಳ ಸಂಸ್ಕಾರಗಳನ್ನು ಮನಸ್ಸು ಹಿಡಿಯುವದು. ಬುದ್ಧಿಯು ಅವುಗಳನ್ನು ವಿಂಗಡಿಸಿ, ಇದು ಹಿತಕರ, ಇದು ಹಿತಕರವಲ್ಲವೆಂಬುದನ್ನು ನಿರ್ಣಯಿಸುವದು. ಈ ಶಕ್ತಿಯು ಕಡಿಮೆಯಿದ್ದವನಿಗೆ “ ಬುದ್ಧಿಯಿಲ್ಲದವನು ” ಎಂಬ ಬಿರುದು. ಅದರಂತೆಯೇ ಬಾಹ್ಯ ವಸ್ತುಗಳ ಸಂಸ್ಕಾರಗಳು ಮನಸ್ಸಿನ ಮೇಲೆ ಆದಂತೆ, ಭಾವನಾಶಕ್ತಿಯೂ ಜಾಗೃತವಾಗಿ ಬುದ್ಧಿಗೆ ನಡನಡುವೆ ದಾರಿ ತೋರಿಸುವದು. ಇಷ್ಟೆಲ್ಲ ಕಾರಭಾರವು ನಡೆಯುತ್ತಲಿರುವಾಗ, ಆತ್ಮವು ನಿರ್ಣಯಿಸಿ ತನ್ನ ಕಾರ್ಯಕ್ಕೆ ಮೊದಲು ಮಾಡುವದು. ದಾರಿಯಿಂದ ಹೋಗುತ್ತಿರುವಾಗ ಒಬ್ಬ ಹುಡುಗ ಹೊರಟಿದ್ದ. ಅವನ ಮೇಲೆ ಮೋಟಾರು ಹಾಯಿತು ; ಕಡಲಂತೆ ಸಪ್ಪಳವಾಯಿತು. ಗೊಂದಲ ಬಹಳವಿದ್ದುದರಿಂದಲೂ ನಾನೂ ಬಹು ದೂರ ಇದ್ದುದರಿಂದಲೂ ಎಲ್ಲವೂ ನನಗೆ ಕಾಣಿಸಲಿಲ್ಲ. ಏನು ಆಗಿದೆ ಎಂಬ ಲವಲವಿಕೆ ಮಾತ್ರ ನನ್ನಲ್ಲಿ ಹುಟ್ಟಿತು. ನಾನು ಲಗುಬಗೆಯಿಂದ ಹೋಗಿ ನೋಡಿದೆ. ಹುಡುಗ ಹತ್ತು ಹನ್ನೆರಡು ವಯಸ್ಸಿನವು. ನನ್ನ ಎದೆ ಕರಗಿತು. ಸತ್ತನೋ ಎಂಬ ಭೀತಿಯಿಂದ ಎದೆ ನಡುಗಹತ್ತಿತು ಹುಡುಗನ ಕಾಲು ಸಿಕ್ಕಿ ಅದರ ಎಲಬು ಮುರಿದಿತ್ತು. ಅಷ್ಟೇ ಆನಂದವಾಯಿತು. ಹುಡುಗನ ಮೋರೆಗೆ ಪೆಟ್ಟು ತಾಗಿತ್ತು. ಅದರಿಂದ ರಕ್ತ ಹರಿಯುತ್ತಿತ್ತು. ನನಗಂತೂ ದುಃಖದ ಆವೇಶಬಂತು. ಹುಡುಗ ‘ನೀರು, ನೀರು’ ಅನ್ನುತ್ತಿತ್ತು. ಸಮೀಪದಲ್ಲಿದ್ದ ಹಾಟೇಲಿನಿಂದ ನೀರು ತಂದುಕೊಟ್ಟೆ. ಹುಡುಗ ಆ ನೀರು ಕುಡಿದಿದ್ದರಿಂದ ಸ್ವಲ್ಪ ಹೊತ್ತು ತನ್ನ ನೋವನ್ನು ಮರೆತ. ನಾನೂ ದುಃಖವನ್ನು ಮರೆತೆ. ಗಾಡಿಯವನು ತನ್ನ ವಸ್ತ್ರದಿಂದ ಅವನ ಕಾಲನ್ನು ಕಟ್ಟಿ, ಮೋರೆಯ ಮೇಲೆ ಕೈಯಾಡಿಸಿ, ಗಾಡಿಯನ್ನು ಆಸ್ಪತ್ರೆಗೆ ಹೊರಡಿಸಿದ. ಸಂತೋಷ !

ಶಿಕ್ಷಣಕ್ಕೂ ಮಾನಸ ಶಾಸ್ತ್ರಕ್ಕೂ ಅತ್ಯಂತ ನಿಕಟವಾದ ಸಂಬಂಧವಿದೆ. ಶಿಕ್ಷಕರು ಕಲಿಸುವದೆಂದರೂ ! ಬಾಹ್ಯ ಪದಾರ್ಥಗಳ ಯಥಾರ್ಥ ಕಲ್ಪನೆಗಳನ್ನು ವಿದ್ಯಾರ್ಥಿಯ ಮನಸಿನ ಮೇಲೆ ಮೂಡಿಸಿ ಅವರ ಬುದ್ಧಿಗೆ ಜಾಗೃತಿಯನ್ನುಂಟು ಮಾಡಿ ಯಾವದು, ಬರೋಬರಿ, ಯಾವದು ತಪ್ಪು–ಎಂಬದರ ತಿಳಿವಳಿಕೆ ಮಾಡಿಕೊಡುವದು. ಪದಾರ್ಥಗಳ ಕಲ್ಪನೆಗಳು ಮುಂಚೆ; ಅವುಗಳ ಸಂಬಂಧ ಮುಂದೆ. ಇದೇ ಶಿಕ್ಷಣಕಾರ್ಯ. ಆದ್ದರಿಂದ ಹುಡುಗನ ವಯಸ್ಸಿಗೆ ತಕ್ಕಂತೆ ಅವರ ಮನಸ್ಸಿನ ಮೇಲೆ ಪರಿಣಾಮವನ್ನು ಮಾಡಬೇಕಾಗುವದು. ಸರ್ವಸಾಧಾರಣ ೫ ರಿಂದ ೮, ೮ ರಿಂದ ೧೨, ೧೨ ರಿಂದ ೧೬, ೧೬ ರಿಂದ ೨೫ ರ ವರೆಗೆ ಕಾಲಖಂಡಗಳನ್ನು ಮಾಡಬಹುದು.

ಈ ಎಲ್ಲ ಕಾಲಖಂಡಗಳಲ್ಲಿ ಹುಡುಗನ ಎಲ್ಲ ಶಕ್ತಿಗಳು—ಬುದ್ಧಿ ಭಾವನೆ, ಸ್ಮರಣಶಕ್ತಿ, ಧಾರಣಾಶಕ್ತಿ ಇವೆಲ್ಲ—ಅರ್ಧಜಾಗೃತ ಸ್ಥಿತಿಯಲ್ಲಿಯೇ ಇರುವವು. ಆ ಶಕ್ತಿಗಳಿಗೆ ಯೋಗ್ಯವಾದ ಚಾಲನೆ-ಯನ್ನು ಕೊಟ್ಟು, ಅವುಗಳಿಗೆ ವಿಶೇಷ ರೂಪವನ್ನು ಕೊಡುವದೇ ಶಿಕ್ಷಣದ ಕಾರ್ಯವೆಂದು ಹೇಳಬಹುದು.

ನಾನು ಸಣ್ಣವನಿರುವಾಗ, ಎಲ್ಲರೂ ಹೋಗುವ ಹಾಗೆ ನಾನೂ ಸಾಲೆಗೆ ಹೋಗುತ್ತಿದ್ದೆ. ಶಿಕ್ಷಕರೋ ಪಾಪ! ಐದರಿಂದ ಎಂಟು ರೂಪಾಯಿ ಪಗಾರದ ಶಿಕ್ಷಕರು! ದಪ್ಪನ್ನ ಉದ್ದ ಕೋಟು ಮೈಗೆ! ಒಳಗೊಂದು ಬಾರಾಬಂಡಿ. ಕಾಲೊಳಗೆ ಇತ್ತು ಇತ್ತು, ಇಲ್ಲ ಇಲ್ಲ. ಅವರ ಶಿಕ್ಷಣವೂ ಅಷ್ಟಕ್ಕಷ್ಟೇ. ಕೆಲವರು ನಾಲ್ಕನೆಯ ಇಯತ್ತಾ ಪಾಸಾಗಿದ್ದರು. ಇವರು ಅ ಆ ಇಂಕಿ— ಮೊಗ್ಗಿ ಕಲಿಸುವವರು. ೧ನೆಯ ೨ನೆಯ ಇಯತ್ತೆಗಳಿಗೆ ೩ನೆಯ ೪ನೆಯ ೫ನೇ ಇಯತ್ತೆಗಳಿಗೆ ಮುಂದೆ ಸ್ವಲ್ಪ ಕಲಿತವರು; ಆದರೆ ಅದನ್ನೇ ಕಲಿ-ಕಲಿಸಿ ಅನುಭವ ಪಡೆದವರು. ಅವೇ ಪುಸ್ತಕ, ಅದೇ ಗಣಿತ, ಅವರೇ ಶಿಕ್ಷಕರು. ಹೊಸದು ಏನೂ ಇಲ್ಲ. ಒಂದು ವಿಷಯದ ಮೇಲೆ ಒಂದು ಪುಸ್ತಕವನ್ನು ಕೊಂಡರೆ ಸಾಕು, ಶಿಕ್ಷಣ ಮುಗಿಯುವವರೆಗೂ ಅದರ ಉಪಯೋಗವಾಗುತ್ತಿದ್ದಿತು. ಇಂಥ ಪರಿ-ಸ್ಥಿತಿಯಲ್ಲಿದ್ದ ಶಿಕ್ಷಕರು, ಹೆಡ್‌ಮಾಸ್ತರರು ಹೇಳಿದಂತೆ ಕಲಿಸು-ವವರು. ತಮ್ಮ ಕೈಗಂಟು ಹಾಕುವದಂತೂ ಒತ್ತಟ್ಟಿಗಿರಲಿ, ಹೆಡ್‌ಮಾಸ್ತರರನ್ನು ಒಲಿಸುವದರಲ್ಲಿಯೇ ತಮ್ಮ ಪರಿಶ್ರಮದ ಪೂರ್ತಿಯಾಗುತ್ತಿತ್ತು ಅವರದು. ಆಗ ಮಾನಸಶಾಸ್ತ್ರವೂ, ಮಾಂಟೆಸರಿ ಪದ್ಧತಿಯೂ ಅವರ ಕನಸು-ಮನಸಿನಲ್ಲಿಯೂ ಕೂಡ ಇರಲಿಲ್ಲ. ಹುಡುಗನೆಂದರೋ! ಹುಡುಗನೆಂದರೆ ಒಬ್ಬ ಹುಚ್ಚು ಮುಂಡೆಗಂಡ! ಅವನಿಗೆ ಸಿಟ್ಟುಮಾಡಿ (ಪ್ರೇಮವಲ್ಲ) ಹೊಡೆದು ಬಡಿದು ಅವನ ತಲೆಯೊಳಗೆ ಪುಸ್ತಕಗಳಲ್ಲಿದ್ದದ್ದನ್ನು ತುಂಬಿ, ಅವನ ಪರೀಕ್ಷೆ ಮಾಡಿಸಿ (ಇನ್‌ಸ್ಪೆಕ್ಟರರ ಕಡೆಯಿಂದ) ಅವನನ್ನು ಮೇಲಿನ ಇಯತ್ತೆಗೆ ಅಟ್ಟುವವನಷ್ಟೇ ಅವರ ಕರ್ತವ್ಯವಾಗಿತ್ತು! ಹುಡುಗನ ದೇಹ? ಮನಸ್ಸು? ಆತ್ಮ? ಇವುಗಳ ಮೇಲೆ ತಾವು ಕಲಿಸುವದರ ಪರಿಣಾಮ? ಶಿಕ್ಷಣದ ಧ್ಯೇಯ? ಶಿಕ್ಷಣದ ರೀತಿ? ಇವೆಲ್ಲ ನಮಗೆ ಗೊತ್ತಿಲ್ಲ. ಸರಕಾರದವರಿಂದ ನೇಮಿಸಿದ ಪುಸ್ತಕದೊಳಗಿನ ವಾಚನ, ಇತಿಹಾಸ, ಭೂಗೋಲ, ಕವಿತೆ, ಲೆಕ್ಕ, ಬರುತ್ತವೆಯೋ ಇಲ್ಲವೋ ನೋಡಿರಿ. ಅದರೊಳಗೇ ನಮ್ಮ ಮತ್ತು ನಮ್ಮ ಹುಡುಗರ ಪರೀಕ್ಷೆ; ಇಲ್ಲದ ಉಸಾಬರಿಗೆ ನಾವು ಹೋಗುವವರಲ್ಲ. ಆಗ ಈಗಿನ ಹಾಗೆ ಯಾವ ಸೌಕರ್ಯಗಳೂ ಇದ್ದಿರಲಿಲ್ಲ. ವರ್ತಮಾನ ಪತ್ರಗಳೂ ಇದ್ದಿರಲಿಲ್ಲ. ಮಾಸಿಕಗಳೂ ಇದ್ದಿರಲಿಲ್ಲ. ಅವರಾದರೂ ಪಾಪ! ಏನು ಮಾಡಬೇಕು? ಏನು ಹೊಸದು ಹೇಳಬೇಕು! ತಮ್ಮ ಹುಡುಗರು ಪಾಸಾದ-ರೆಂದರೆ, ಅವರಿಗೆ ಅದೇ ಒಂದು ಹಬ್ಬ!

ಬರುಬರುತ್ತ, ಮಾಂಟೇಸರಿ, ಕಿಂಡರ್‌ಗಾರ್ಟನ್ ಪದ್ಧತಿಗಳು ಈ ದೇಶದಲ್ಲಿ ಬರಹತ್ತಿದವು. ಆದ್ದರಿಂದ ಹುಡುಗರ ಕಡೆಯಿಂದ ಬಾಯಿಪಾಠ ಮಾಡಿಸುವದನ್ನು ಬಿಟ್ಟು, ಅವರಿಗೆ ಪ್ರತಿಯೊಂದು ವಿಷಯವನ್ನು ತಿಳಿಸಿ ಹೇಳುವದಕ್ಕೆ ಪ್ರಾರಂಭವಾಯಿತು. ಇತಿ-ಹಾಸದಂಥ ಸುಂದರವಾದ ವಿಷಯವನ್ನು ಪಾಠ ಮಾಡಿಸಿ ಹುಡುಗರ ತಲೆಯೊಳಗೆ ಜಡಿಯುವದು ನಿಂತು ಹೋಗಿ, ಇತಿಹಾಸದ ಸಂಗತಿಗಳ ಸುತ್ತಲೂ ಇರುವ ಪರಿಸ್ಥಿತಿಯನ್ನು ತಿಳಿಹೇಳಿ, ಆಯಾ ಪರಿಸ್ಥಿತಿಯಲ್ಲಿ ಆಯಾ ವ್ಯಕ್ತಿಗಳು ಹೇಗೆ ಆಯಾ ಕೃತ್ಯಗಳನ್ನು ಮಾಡಲು ಪ್ರಯತ್ನ ಮಾಡಿದರೆಂಬದನ್ನೂ ತಿಳಿಹೇಳುವ ಪ್ರವೃತ್ತಿಯುಂಟಾಯಿತು ಶಿಕ್ಷಕರಲ್ಲಿ. ಹುಡುಗರಲ್ಲಿಯೂ—ಶಿಕ್ಷಕರ ಬೆದರಿಕೆ ಕಡಿಮೆಯಾದ್ದರಿಂದ–ಅವರೂ ತರತರದ ಪ್ರಶ್ನೆಗಳನ್ನು ಕೇಳಿ ಶಿಕ್ಷಕರಿಂದ ಎಷ್ಟೋ ಮಾತುಗಳನ್ನು ಕಲಿಯಹತ್ತಲು ಪ್ರಾರಂಭವಾಯಿತು. ಕಲಿಸುವ ರೀತಿಯು ಬದಲಾದಂತೆ ಹುಡುಗರ ಮನಸ್ಸೂ ಗಾಢವಾಗಿ ಅಭ್ಯಾಸ ಮಾಡುವ ಪ್ರವೃತ್ತಿಯುಳ್ಳದ್ದಾಗಿದೆಯೆಂದು ಹೇಳುವದವಶ್ಯವಿಲ್ಲ. ಯಾವ ಸಾಲೆಯಲ್ಲಿಯೂ ಯಾವ ಇಯತ್ತೆಯಲ್ಲಿಯೂ ಈಗ ಇವುಗಳನ್ನು ನೋಡಬಹುದು. ಇದೆಲ್ಲ ಏತರ ಪರಿಣಾಮ? ಇದೆಲ್ಲ ಮಾನಸಶಾಸ್ತ್ರಾಭ್ಯಾಸದ ಪರಿಣಾಮ. ಹುಡುಗನೆಂದರೆ ಬರಿ ದೇಹವಲ್ಲ; ಅದೊಂದು ಆತ್ಮ. ಅವನಿಗೆ ಹೇಗೆ ವಿಚಾರಶಕ್ತಿಯಂತೆ ಭಾವನಾಶಕ್ತಿಯೂ ಇರುವದು. ಯಾವದೊಂದು ವಿಷಯವನ್ನು ಬರೀ ಪಾಠಮಾಡಿಸುವದಕ್ಕಿಂತ ಅವನ ಬುದ್ಧಿಶಕ್ತಿಯನ್ನು ಚೇತನಗೊಳಿಸಿ, ಅದರ ಮುಂದಿಟ್ಟರೆ, ಅದು ತನ್ನಷ್ಟಕ್ಕೆ ತಾನೇ ತಿಳಿವಳಿಕೆಯನ್ನುಂಟು ಮಾಡುವ-ದೆಂಬದರ ಅರಿವು ಆದದ್ದರಿಂದಲೇ ಈ ಪರಿಣಾಮಗಳಾಗಿ, ಹುಡುಗನ ಮನಸ್ಸಿನ ಮೇಲೆ ವಿಶೇಷತಃ ಸ್ಮರಣಶಕ್ತಿಯ ಮೇಲೆ ಬಹಳ ಭಾರ ಹಾಕದೆ, ವಿಷಯಗಳ ತಿಳಿವಳಿಕೆ ಹೆಚ್ಚಾಗತೊಡಗಲು ಸೌಕರ್ಯಗಳೂ ಹೆಚ್ಚಾದುದರಿಂದ ಜ್ಞಾನವು ತಿಳಿಯಾಗಿ ಬರಹತ್ತಿತು.

ಲಾರ್ಡ್ ರೆಡಿಂಗರಿಗೆ ಒಬ್ಬರು ಕೇಳಿದರು : 'ನಿಮ್ಮ ಬ್ರಿಟಿಶ್ ಸಾಮ್ರಾಜ್ಯವು ಇಡೀ ಜಗತ್ತನ್ನೇ ವ್ಯಾಪಿಸಿದ್ದರ ಕಾರಣವೇನು?' ಎಂದು. ಅದಕ್ಕೆ ಅವರು ಉತ್ತರ ಕೊಟ್ಟದ್ದು : "ನಾವು ನಮ್ಮ ಮಕ್ಕಳಿಗೆ ಎರಡೇ ತತ್ತ್ವಗಳನ್ನು ಪ್ರಯತ್ನದಿಂದ ಕಲಿಸುತ್ತೇವೆ. ಅವು ಕರ್ತವ್ಯ (ತತ್ಪರತೆ) ಮತ್ತು ಶಿಸ್ತು. (Duty and disciplins)," ಇವು ನಮ್ಮಲ್ಲಿ ಪೂಜಿ. ಆದ್ದರಿಂದಲೇ ನಮಗೆ ಸ್ವರಾಜ್ಯ ಸಿಕ್ಕರೂ ನಮಗೆ ಸುಖವಿಲ್ಲದಂತಾಗಿದೆ. ಹುಡು-ಗರಿಗೆ ವಿಷಯಗಳನ್ನು ಕಲಿಸುವದರ ಮೊದಲು ಸದಾಚಾರ (manners) ವನ್ನು ಕಲಿಸುವದವಶ್ಯವಾದದ್ದು. ಶಿಕ್ಷಕರಂತೆ ಹುಡುಗರು. ಶಿಕ್ಷಕರೇ ಹತ್ತರ ಬದಲಾಗಿ ಹನ್ನೊಂದಕ್ಕೆ ಸಾಲೆಗೆ ಬಂದರೆ, ಹುಡುಗರು ಹನ್ನೆರಡಕ್ಕೆ ಬರುವರು. ಅದೇ ಶಿಕ್ಷಕರು ತಪ್ಪದೇ ಹತ್ತರ ಗಂಟೆ ಹೊಡೆಯುತ್ತಲೇ ವರ್ಗದೊಳಗೆ ಕಾಲಿಟ್ಟರೆ, ಹುಡುಗರು ಒಂಭತ್ತು ಗಂಟೆಗೇ ಬಂದು ಕೂಡುವರು. ಶಿಕ್ಷಕರು ಸ್ವಚ್ಛವಾಗಿದ್ದರೆ ಹುಡುಗರೂ ಹಸನಾದ ವಸ್ತ್ರಗಳನ್ನು ಧರಿಸುವರು. ಶಿಕ್ಷಕರು ಸ್ನಾನ ಮಾಡಿಯೇ ಬಂದರೆ, ಹುಡುಗರ ಮೇಲೆಯೂ ಅದರ ಪರಿಣಾಮವಾಗುವದರಲ್ಲಿ ಸಂದೇಹವಿಲ್ಲ.

ಯುಜಂತಿ

ಯಥಾ ರಾಜಾ ತಥಾ ಪ್ರಜಾ— ಅದರಂತೆಯೇ ಯಥಾ ಗುರು-ಥಾಶಿಷ್ಯ : !

ಮನಸ್ಸೆಂಬದು ಏನು ? ವಿಚಾರ ಹುಟ್ಟುವಂತಹ ಸ್ಥಾನವೆಲ್ಲಿ ? ಎಂಬುದರ ಬಗ್ಗೆ ಮಾನಸಶಾಸ್ತ್ರಜ್ಞರಲ್ಲಿಯೂ, ಶರೀರಶಾಸ್ತ್ರಜ್ಞ-ರಲ್ಲಿಯೂ ಇನ್ನೂ ಸಂದೇಹವಿದೆ. ವ್ಯವಹಾರದ ಮಟ್ಟಿಗೆ ಹೇಳುವ-ದೇನೆಂದರೆ: ಮನಸ್ಸೆಂಬದು ಮಿದುಳಿನಲ್ಲಿದೆ. ಮಿದುಳು ತಲೆ-ಬುರುಡೆಯಲ್ಲಿದೆ. ಮಿದುಳಿನಲ್ಲಿ ನಮ್ಮ ನರಗಳೆಲ್ಲವೂ ಕೂಡಿ ಇವೆ. ಅಲ್ಲಲ್ಲಿ ಮಿದುಳಿನ ಭಾಗಗಳಲ್ಲಿ ಜ್ಞಾನತಂತುಗಳ ಗಂಟಿನ ಆಧಾರವಿದೆ. ಒಂದೊಂದು ಆಧಾರಕ್ಕೆ ಒಂದೊಂದು ಶಕ್ತಿಯಿದೆ. ಆ ಭಾಗವನ್ನು ಕಡಿಯುವದರಿಂದ ಆಯಾಶಕ್ತಿಯು ನಾಶವಾಗುವದುಂಟು. ತಲೆಯ ಮುಂಭಾಗದ ಹತ್ತಿರ ಗಣಿತಶಕ್ತಿ; ಹಿಂಭಾಗದ ಹತ್ತಿರ ಸ್ಮರಣಶಕ್ತಿ; ಮಧ್ಯದಲ್ಲಿ ಭಾವನಾ ಶಕ್ತಿ—ಪ್ರೇಮ ಶಕ್ತಿ. ಅಲ್ಲಿಯ ಒಂದು ಆಧಾರವನ್ನು ಕಡಿದರೆ, ಅಥವಾ ಯಾವದಾದ ರೊಂದು ಕಾರಣದಿಂದ ಅದಕ್ಕೆ ಅಪಾಯವಾದರೆ, ಆ ಶಕ್ತಿಯೇ ಹೋಗುವದು. ಅದರಂತೆಯೇ ನಮ್ಮ ಜ್ಞಾನೇಂದ್ರಿಯಗಳಿಂದ ಅನೇಕ ಸೂಕ್ಷ್ಮವಾದ ತಂತುಗಳು ಮಿದುಳಿನಲ್ಲಿ ಕೂಡಿ ಇವೆ. ಕಣ್ಣಿಂದ, ಕಿವಿಯಿಂದ, ಮೂಗಿನಿಂದ, ತೊಗಲಿನಿಂದ, ನಾಲಗೆ-ಯಿಂದ ಅನೇಕ ತಂತುಗಳ ಜಾಲವು ಒಟ್ಟಾಗಿ, ನಮ್ಮ ಮಿದುಳಿಗೆ ಸೇರಿವೆ. ಅವುಗಳ ಆಧಾರವನ್ನೇ ಕಡಿದು ಬಿಟ್ಟರೆ, ಕಣ್ಣುಗಳಿದ್ದೂ ರೂಪವು ತೋರದು. ಕಿವಿಗಳಿದ್ದೂ ಕೇಳುವದಶಕ್ಯ. ಮೂಗೋ,—ಕೊಯ್ದು ಹಾಕಬೇಕಾದ ಆವಶ್ಯಕತೆಯಿಲ್ಲ. ಮೂಗಿನಿಂದ ಹೋಗಿ ಮಿದುಳಿನಲ್ಲಿ ಒಟ್ಟಾಗಿರುವ ಆಧಾರ (Centre) ಕ್ಕೆ ಧಕ್ಕೆ ತಗಲಿ ತೆಂದರೆ ಸಾಕು, ಮೈತುಂಬ ಅತ್ತರನ್ನು ಬಡಿದುಕೊಂಡರೂ ಸು (ಕು) ವಾಸನೆ ಬರುವದಿಲ್ಲ. ನಶ್ಯವನ್ನು ಹಗಲೂ ಹನ್ನೆರಡು ತಾಸು ಮೂಗಿನಲ್ಲಿ ಸೇರಿಸುವಂತಹ ಮಹನೀಯರಿಗೆ (ನನಗೂ) ಕೆಟ್ಟವಾಸನೆ ಉದ್ದವಾಸನೆ, ಯಾವ ವಾಸನೆಯೂ ಬಡಿಯುವ-ದಿಲ್ಲ. ಸ್ಪರ್ಶದ ಮಾತೂ ಅದೇ. ಸುಡುಸುಡುವ ಚಹಾ ಕಾಲ ಮೇಲೆ ಬಿದ್ದಿದೆಯೆಂದು ತಿಳಿದುಕೊಳ್ಳುವಾ. (ಹೆಣ್ಣುಮಕ್ಕಳಿಗೆ ಪಟಕ್ಕನೇ ಹೊಳೆಯುವದು.) ಕಾಲು ಉರಿಯ ಹತ್ತುತ್ತದೆ. ಅಲ್ಲಿ ಕಾಲಿನಲ್ಲಿ ಬಹಳ ವ್ಯತ್ಯಾಸವಾಗಿರುವದಿಲ್ಲ. ಆದರೆ ಆ ವ್ಯತ್ಯಾ-ಸವು ಮಿದುಳಿನ ಆಧಾರಕ್ಕೆ ತಗಲಿ,ಆ ಆಧಾರದಲ್ಲಿ ನೋವು ಉತ್ಪನ್ನ-ವಾಗುವದು, ಕಾಲಿನಲ್ಲಿ ಅಲ್ಲ. ಆದರಿಂದಲೇ ಇದನ್ನು ತಿಳಿ-ದವರು (ತಿಳಿಯದವರೂ ಕೂಡ) ಏನಾದರೊಂದು ದೊಡ್ಡ ಗಾಯ ವಾಗಲಿ ನೋವಾಗಲಿ ಆಗಿರುವಾಗ, ತಲೆಗೆ ಪಟಪಟನೆ ತಣ್ಣೀರು ಎರಚುವದುಂಟು. ಮೂಲರೋಗದಲ್ಲಿ ಮಿದುಳು ಸುಪ್ತಸ್ಥಿತಿ-ಯಲ್ಲಿರುವದರಿಂದ, ಎಲ್ಲ ಜ್ಞಾನವೂ ನಿಂತು ಹೋಗುವದು. ಆ ರೋಗಿಯನ್ನು ಎಚ್ಚರಿಸಬೇಕಾದರೆ ಮೋರೆ ತುಂಬ, ಮೈತುಂಬ, ಕಣ್ಣುತುಂಬ, ತಲೆತುಂಬ ನೀರು ಉಗ್ಗುವ ಉಪಾಯವು ನಡೆ-ಯುತ್ತದೆಂಬವನ್ನು ಆಸ್ಪತ್ರೆಗಳಲ್ಲಿ ನೋಡಬಹುದು. ಹುಚ್ಚರ ಆಸ್ಪತ್ರೆಯಲ್ಲಿಯಂತೂ ಮಿದುಳಿನಲ್ಲಿ ಕಾವು ಹೆಚ್ಚಾಗಿ ಹೋದಾಗ, ರೋಗಿಯನ್ನು ಒಂದು ಕೋಣೆಯಲ್ಲಿ (ಬತ್ತಲೆ) ಹಾಕಿ, ಸುತ್ತುಕಡೆ-ಗಿರುವ ಜಾಳಿಗೆಗಳಿಂದ ಮೈತುಂಬ ನೀರು ಉಗ್ಗುವದುಂಟು ! ಒಟ್ಟಿಗೆ ಮನಸ್ಸೆಂಬದು ಮಿದುಳಿನಲ್ಲಿ, ಜ್ಞಾನೇಂದ್ರಿಯಗಳ ಆಧಾರ-ಗಳು ಮಿದುಳಿನಲ್ಲಿ ಎಂಬುವ ಮಾತನ್ನು ಶಿಕ್ಷಕರು ಮರೆಯತಕ್ಕ-ದ್ದಲ್ಲ. ಹುಡುಗರನ್ನು ಶಿಕ್ಷಿಸುವಾಗ ಪಟಕ್ಕನೇ ತಲೆಯ ಮೇಲೆ ಬಡಿಯತಕ್ಕದ್ದಲ್ಲ. ವಿಚಾರ ಹೊರಡದಿದ್ದಲ್ಲಿ '' ತಲೆ ತುರಿಸು '' ಎಂಬ ಮಂತ್ರವನ್ನು ಹುಡುಗರ ಮೇಲೆ ಬಡಬೇಕೇ ಹೊರತು ಜ್ಞಾನಮಂದಿರದಂತಿರುವ ತಲೆಗೆ ಏನೂ ಬಾಹ್ಯ ಧಕ್ಕೆಯನ್ನು ಕೊಡಬಾರದು.

ಇಷ್ಟೆಲ್ಲ ಸಂಸಾರ ತಿರುಕಪ್ಪನಲ್ಲಿವೆ ಎಂಬುದು ನಿರ್ವಿವಾದವಾದ ಮಾತು. ಇಂಥ ಪ್ರಪಂಚವುಳ್ಳ ಹುಡುಗನ ದೇಹಕ್ಕೂ ಮನಸ್ಸಿಗೂ ಒಂದು ರೂಪವನ್ನು ಕೊಟ್ಟು, ಅವನ ಸುಪ್ತಸುಗುಣಗಳನ್ನು ಬೆಳೆ-ಸುವದೇ ಶಿಕ್ಷಕರ ಗುರಿಯಾಗಬೇಕು. ಚಿಕ್ಕ ಹುಡುಗನಲ್ಲಿ ಈ ಎಲ್ಲ ಶಕ್ತಿಗಳು ಬೀಜರೂಪವಾಗಿರುವವು. ಈ ಶಕ್ತಿಗಳನ್ನೆಲ್ಲ ಬಲಿಸಿ ಹುಡುಗನನ್ನು ತನ್ನ ಕುಟುಂಬಪೋಷಣೆಗೂ ಸಮಾಜಸೇವೆಗೂ ಯುಕ್ತನನ್ನಾಗಿ ಮಾಡುವದು ಶಿಕ್ಷಣದ ಉದ್ದೇಶ. ಹುಡುಗರಲ್ಲಿ-ರುವ ಮುಖ್ಯ ಗುಣವೆಂದರೆ ಉತ್ಸಾಹ. ಅವರ ಮೈಯಲ್ಲಿ ಮನಸ್ಸಿ-ನಲ್ಲಿ ಹಿಡಿಯದಷ್ಟು ಉತ್ಸಾಹ, ಅವರಲ್ಲಿ ತುಂಬಿ ತುಳುಕಿ ಹೊರ-ಹೊಮ್ಮುತ್ತಲಿರುವದು. ಕಣ್ಣಿನಲ್ಲಿ ನೋಡುವ ಉತ್ಸಾಹ, ಕಿವಿ-ಗಳಲ್ಲಿ ಕೇಳುವ ಉತ್ಸಾಹ, ಅಂಗಾಂಗಗಳಲ್ಲಿ ಓಡಿ ಆಡುವ ಉತ್ಸಾಹ. ಮನಸ್ಸಿನಲ್ಲಿ ಲವಲವಿಕೆಯ ಹರಹು. ಆತ್ಮದಲ್ಲಿ ಧೈರ್ಯ ಪ್ರೇಮ-ಗಳ ಸಂಗಮ. ಯಾವದಾದರೊಂದು ಕೆಲಸ ಮಾಡುವ ರೀತಿಯನ್ನು ಹೇಳುವದರ ಮೊದಲೇ ಆ ಕಾರ್ಯವನ್ನು ಮಾಡಿಬಿಡುವದು ಹುಡುಗರ ರೀತಿ. ತಿಳಿಯಲಿ ತಿಳಿಯದೆ ಇರಲಿ '' ತಿಳೀತು ಬಿಡಿರಿ ನೀವು ಹೇಳೋದು!'' ಅಂದೇ ಬಿಡುವರು ಹುಡುಗರು. ''ಇದನ್ನು ಮಾಡುತ್ತೀ ಏನು ?'' ಎಂದು ಕೇಳುವಷ್ಟರಲ್ಲಿ ಮಾಡೇಬಿಡುವರು ತಮ್ಮ ಉತ್ಸಾಹದಿಂದ, ಹತ್ತು ಇಂದ್ರಿಯಗಳಲ್ಲಿ ಹಂಚಿ ಹೋಗಿರುವ

೫೫ ವರ್ಷಗಳಿಂದ ಅನುಭವಪಟ್ಟ

ಕರ್ಕರೆ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ :—

ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಉತ್ಸಾಹವನ್ನು ಒಂದೇ ಒಂದು ವಿಷಯದ ಮೇಲಾಗಲಿ, ಒಂದೇ ಕಾರ್ಯದ ಮೇಲಾಗಲಿ. ಒಟ್ಟು ಗೂಡಿಸಿ, ಆ ಕಾರ್ಯವನ್ನು ಪೂರ್ಣತೆಯಿಂದ ಸೊಗಸಾಗಿಯೂ ಸುಂದರವಾಗಿಯೂ ಮಾಡುವದು ಶಿಕ್ಷಣದ ಕಾರ್ಯವಾಗಿರುವದರಿಂದ, ಯಾವ ಯಾವ ಹುಡುಗರಲ್ಲಿ ಯಾವ ಯಾವ ಕಾರ್ಯ ಮಾಡುವ ಶಕ್ತಿಗಳಿರುವವೋ ಅವುಗಳನ್ನು ಕಂಡುಹಿಡಿದು ಬೆಳೆಸುವದರಲ್ಲಿ ಶಿಕ್ಷಕರ ಕೌಶಲ್ಯವಿರುವದು. ಯಾವದಾದರೊಂದು ಔಷಧ ಮಾಡಿ ಕೊಡುವಾಗ, ಕಂಪೌಂಡರ ಕಡೆಗೆ ನೋಡಿರುವಿರೋ? ಕಪಾಟಿನಲ್ಲಿಟ್ಟ ಬಾಟ್ಲಿಗಳಿಂದ ತರತರದ ಔಷಧಗಳನ್ನು ಹಾಕಿ ಬೇರೊಂದು ಔಷಧವನ್ನು ಕಂಪಾವುಂಡರರು ಮಾಡುತ್ತಾರೆ. ಒಂದು ಬಾಟ್ಲಿಯಿಂದ ಒಂದು ಚಮಚೆ, ಒಂದು ಬಾಟ್ಲಿಯಿಂದ ಅರ್ಧ ಚಮಚೆ, ಒಂದರಿಂದ ಒಂದೇ ಹನಿ, ಒಂದರಿಂದ ಎರಡೇ ಹನಿ-ಹೀಗೆ ತೆಗೆದುಕೊಂಡು ಅವುಗಳನ್ನು ಕೂಡಿಸಿ, ಅದರೊಳಗೆ ಒಂದೇ ಚಮಚೆ ಯಾವುದಾದರೊಂದು ಪುಡಿ ಹಾಕಿ ಅರೆದರೆಂದರೆ ಒಂದು ಔಷಧವು ಸಿದ್ಧವಾಗುತ್ತದೆ. ಒಂದೊಂದು ಔಷಧವನ್ನು ಸುರುವಿದ ಕೂಡಲೆ, ಅದರ ಬಣ್ಣವು ಬದಲಾಗುತ್ತಿರುತ್ತದೆ. ಕಟ್ಟಕಡೆಗೆ ತಯಾರಾಗುವದು ಬೇರೆ. ಅದರ ಬಣ್ಣ ಬೇರೆ, ಅದರ ರುಚಿ ಬೇರೆ, ಅದರ ಗುಣವೇ ಬೇರೆ. ಅದರಂತೆ ದೇವರಾದರೂ ಪ್ರತಿಯೊಬ್ಬರ ಆತ್ಮದಲ್ಲಿ ಬೇರೆ ಬೇರೆ ಗುಣ-ದುರ್ಗುಣಗಳನ್ನು ಬೆರೆಸಿರುವನು. ಒಬ್ಬ ಹುಡುಗನಿಗೆ ಆಟದ ಮೇಲೆಯೇ ಪ್ರಾಣ; ಒಬ್ಬನಿಗೆ ಚಿತ್ರ ತೆಗೆಯುವದೆಂದರೊಂದು ಹುಚ್ಚು. ಒಬ್ಬನಿಗೆ ಏಕಾಂತದಲ್ಲಿ ಕುಳಿತು ವಿಚಾರ ಮಾಡುವದೇ ಒಂದು ಚಟ. ಒಬ್ಬನಿಗೆ ಪಾಠ ಮಾಡುವದರಲ್ಲಿ ಮೇಲು. ಒಬ್ಬನಿಗೆ ಗಣಿತವೆಂದರೆ ಪೂಜಿ (ನಾನು). ಹೀಗಿರುವದರಿಂದ, ಶಿಕ್ಷಕರು ಆಯಾ ಹುಡುಗನಲ್ಲಿರುವ ವಿಶೇಷವಾದ ಒಲವನ್ನು ಕಂಡುಹಿಡಿದು, ಅವನ ಮನಸ್ಸನ್ನು ಅದೇ ವಿಷಯದಲ್ಲಿ ನುರಿಯುವಂತೆ ಮಾಡುವದವಶ್ಯವಾದದ್ದು. ಶಿಕ್ಷಕರು ತಲೆ ಒಡೆದರೂ ಒಡೆದುಕೊಂಡರೂ ನನಗೆ ಗಣಿತ ಬರಲಿಲ್ಲ. ಅದರಂತೆ ಕೆಲವರ ಗೋಣು ಕೊಯ್ದರೂ ಗಾಯನ ಬರುವದಿಲ್ಲ. ದೇವರು ಆ ಔಷಧದ (ಗುಣದ) ಹನಿಗಳನ್ನು ಹಾಕಿಯೇ ಇಲ್ಲದಿದ್ದರೆ, ಆ ವಿಷಯಗಳು ಹೇಗೆ ಬರುವವು ?

ಎಲ್ಲ ಮಾತುಗಳಲ್ಲಿ ಹೆಚ್ಚಿನ ಮಾತೆಂದರೆ, ಶಿಕ್ಷಕರು ತಮ್ಮ ವಿಷಯದ ಮೇಲಿದ್ದಷ್ಟು ಪ್ರೇಮವನ್ನು ತಮ್ಮ ಹುಡುಗರ ಮೇಲೆಯೂ ಮಾಡುವದವಶ್ಯ. ಪ್ರೇಮವೆಂದರೆ ತನ್ಮಯತೆ. ಗುರು ಎಂಬದಕ್ಕೆ ಎರಡು ಅರ್ಥಗಳುಂಟು. ಒಂದು ವಿದ್ಯಾಗುರು, ಎರಡನೆಯದು ತಂದೆ. ತಂದೆಯು ತನ್ನ ಮಕ್ಕಳ ಮೇಲೆ ಮಾಡುವಷ್ಟೇ ಪ್ರೀತಿಯನ್ನು, ತಮ್ಮ ವಿದ್ಯಾರ್ಥಿಗಳ ಮೇಲೆಯೂ ಮಾಡಬೇಕು. ಮಾಡುವದು ಸಾಧ್ಯವಿಲ್ಲದಿದ್ದರೆ, ಕಡೆಗೆ ಪ್ರೀತಿಯನ್ನು ತೋರಿಸಬೇಕು. ಅಮೇರಿಕದ ಒಬ್ಬ ಡಾಕ್ಟರರಾದ ಅಲೆಕ್ಸಿಸ್ ಕ್ಯಾರೆಲ್ಲ (ನೋಬಲ ಪಾರಿತೋಷಕ) ರವರು ಪ್ರೀತಿಯಿಂದ ಎಲ್ಲ ವಿಷಯಗಳೂ ಅಮೃತವಾಗುವವೆಂದು ಹೇಳಿರುವರು. ಅವರು ದೊಡ್ಡ ಶಸ್ತ್ರವಿಶಾರದರಿದ್ದರು. ಅವರ ಶಸ್ತ್ರಕ್ರಿಯೆಗಳು ಯಶಸ್ವಿಯಾಗಲಿಕ್ಕೆ ಕಾರಣವೇನೆಂಬದಕ್ಕೆ ಅವರು ಅಂದದ್ದು : "ನಾನು ನನ್ನ ರೋಗಿಗಳ ಮೇಲೆ ಪ್ರೀತಿ ಮಾಡುತ್ತೇನೆ. ಅವರ ರೋಗಗಳನ್ನೂ ಅವರ ದೇಹಗಳನ್ನೂ ಆತ್ಮಾದರದಿಂದ ಕೊಯ್ಯುತ್ತೇನೆ. ಆದ್ದರಿಂದ ರೋಗಿಗಳಿಗೆ ಯಾವ ತೊಂದರೆಯಾಗದಂತಾಗಿ, ಅವರ ಮನಸ್ಸಿನಲ್ಲಿ ಹರ್ಷವುಂಟಾಗುತ್ತದೆ. ಮನಸ್ಸು ಆನಂದದಿಂದ ತುಂಬಿತೆಂದರೆ ಗಾಯವು ಮಾಯುವದು ಯಾವ ಗಿಡದ ತೊಪ್ಪಲ ? ಹುಡುಗನೆಂದರೆ ಸಾಲೆಯ ಫೀ ತುಂಬಿ ಬಡಿದಷ್ಟು ಬಡಿಸಿಕೊಂಡು, ಬಂದದ್ದು ಕಲಿಯುವ ಯಂತ್ರವಲ್ಲ. ಅದೊಂದು ಜೀವ. ಅದಕ್ಕೂ ಆತ್ಮವುಂಟು. ಅದೂ ಸೂರ್ಯಕಿರಣಗಳಿಗೆ ಕಮಲಗಳರಳುವಂತೆ ಪ್ರೀತಿಯ ಆತ್ಮವನ್ನು ನೋಡಿದ ಕೂಡಲೇ ಅರಳುವದು. ಇಬ್ಬರ ಆತ್ಮಗಳೂ ಅರಳಿದವೆಂದರೆ, ಸಹಾನುಭವ ಉಂಟಾಗುವದು. ಸಹಾನುಭೂತಿಯಿಂದ ಹೇಳಿದ ವಿಷಯಗಳು ಸುಲಭವಾಗಿ ಮನಸ್ಸಿನಲ್ಲಿ ಮೂಡುವವು. ಇಮರ್ಸನ್ ಎಂಬ ಅಮೇರಿಕದ ಸಾಧುಗಳು ಈ ಆತ್ಮಪ್ರೇಮದ ವಿಷಯದಲ್ಲಿ ಹೀಗೆ ಬರೆದಿರುವರು : "ಇಬ್ಬರ ಆತ್ಮಗಳು ಒಂದುಗೂಡಿ ಪ್ರೇಮಮಯವಾದವೆಂದರೆ, ಒಬ್ಬರ ವಿಚಾರಗಳು ಇನ್ನೊಬ್ಬರ ಆತ್ಮದಲ್ಲಿ ಕೂಡಿ ಹೋಗುವದಕ್ಕೆ ಸುಲಭವಾಗುವದು." ನಾನು ಇತ್ತೀಚೆ ಸಂಗೀತ ಕಲಿಯಬೇಕೆಂದು ಒಬ್ಬ ಪಂಡಿತರ ಕಡೆಗೆ ಹೋದೆನು. ಅವರೆಂದರೆ ಜಮದಗ್ನಿಯ ಅವತಾರ! ಒಂದು ಸ್ವರ ತಪ್ಪಿದರೆ ಹತ್ತು ಕಿಡಿಗಳನ್ನು ಬಿಡುತ್ತಿದ್ದರು. ಕಲಿಯುವವರೆಲ್ಲರೂ ಸಾಲೆಯ ಹುಡುಗಿಯರು. ಅವರ ಮಧ್ಯದಲ್ಲಿ ನಾನೊಬ್ಬ ಮುದುಕ! ಅಯ್ಯೋ ಅಂದೆ! ನನಗೇನೂ ಸಂಗೀತ ಇವರಿಂದ ಸಾಧ್ಯವಿಲ್ಲನೆಂದು ಮನದಟ್ಟಾಯಿತು. ಎಂಟು ಹತ್ತು ದಿವಸಗಳಾದವು. ಒಂದು ದಿವಸ ಅವರೇ ನನ್ನನ್ನು ಮಾತಾಡಿಸಿ ಕೆಲವು ಸ್ವರಗಳನ್ನೂ, ತಾಲಗಳನ್ನೂ, ಹಾಡುಗಳನ್ನೂ ಪ್ರೇಮದಿಂದ ಕಲಿಸಿದರು-ಪ್ರೇಮದಿಂದ! ಅಷ್ಟು ಪ್ರೇಮದಿಂದ. ನನಗೆ ನನ್ನ ತಂದೆಯವರ ನೆನವಾಗಿ, ಕಣ್ಣಿನಿಂದ ನೀರು ಬೀಳಹತ್ತಿತು. ಅವತ್ತು ಕಲಿಸಿದ್ದು ನನಗೆ ಸುಲಭವಾಗಿ ಬರಹತ್ತಿತು. ನಾನೂ ಶಿಕ್ಷಕನಿದ್ದೆ. ನನ್ನ ಪ್ರೀತಿ ಹುಡುಗರ ಮೇಲೆ. ಅವರ ಪ್ರೀತಿಯೂ ನನ್ನ ಮೇಲೆ ಇತ್ತು. ಆದ್ದರಿಂದ ನಾನು ಸೊಟ್ಟಾಗಿಯೂ ಡೊಂಕಾಗಿಯೂ ಕಲಿಸಿದ್ದರೂ, ಈಗಲೂ ಆ ಹುಡುಗರು ನನ್ನನ್ನು ಸ್ಮರಿಸುತ್ತಾರೆ. ಆದ್ದರಿಂದ ಶಿಕ್ಷಕರು ತಮ್ಮ ಹುಡುಗರ ಆತ್ಮಗಳಲ್ಲಿ ಪ್ರೇಮವನ್ನುಂಟು ಮಾಡಬೇಕು. ಅವರನ್ನು ಆದರದಿಂದ ನೋಡಬೇಕು. ಹುಡುಗರೆಂದರೆ ಮಲ್ಲಿಗೆ ಹೂ!!!

ಲಚ್ಚಣ್ಣನ ಲಾಟರಿ

(ಸಣ್ಣ ಕತೆ)*

' ಚಿದಾನಂದ

卐

ಅಡಿಗೆಯವನಾದ ಲಚ್ಚಣ್ಣ ಸಿರಿ[illegible]ಬ ಆಸೆಯಿಂದ ಲಾಟರಿ ಹಾಕುತ್ತಿರುವಾಗ, ಹತ್ತಿದ್ದ ಲಾಟರಿ ಕನಸಿನ ಗಂಟಾಯಿತು. ಆದರೆ ತಾಯಿಗೆ ಅವನು ಕೊಟ್ಟ ಪ್ರಾಮಾಣಿಕತಾ ಪಾಲನೆಯ ವಚನ, ಅವನ ಕನಸಿನ ಗಂಟನ್ನು ನನಸಿನ ಭಾಗ್ಯವನ್ನಾಗಿ ಮಾಡಿತು!

卐

ವಸಂತಕಾಲದ ಒಂದು ಮಧ್ಯಾಹ್ನ, ಊಟಮಾಡಿ ಹಾಯಾಗಿ ಒರಗಿಕೊಂಡಿದ್ದೆನು. ನಿದ್ದೆಯ ಒತ್ತಡವು ಕಣ್ಣುರೆಪ್ಪೆಗಳ ಮೇಲೆ ಹೆಚ್ಚಾದುದರಿಂದ, ಅವು ಮುಚ್ಚುತ್ತಲಿದ್ದುವು. ಇನ್ನೇನು ಸ್ವಪ್ನ ಲೋಕದಲ್ಲಿ ಕಾಲಿಡುವವನಿದ್ದೆನು. ಅಷ್ಟರಲ್ಲಿ ವಾಸ್ತವಲೋಕದ ಕರೆಯೊಂದು ಹಠಾತ್ತಾಗಿ ಬಂದು ನನ್ನನ್ನು ಬಡಿದೆಬ್ಬಿಸಿತು. "ಯಾರವರು ?" ಎನ್ನುತ್ತ ತುಂಬ ಸಿಟ್ಟಿನಿಂದಲೇ ಎದ್ದು ಬಂದೆನು. ಅಂಚೆಯಾಳು ಬಾಗಿಲಲ್ಲಿ ನಿಂತು ನನ್ನನ್ನು ಹೆಸರು ಹಿಡಿದು ಕೂಗುತ್ತಿದ್ದ. ಅವನನ್ನು ನೋಡಿ ನನ್ನ ಕೋಪವು ಅರ್ಧವಿಳಿದಿತ್ತು. ಆದರೂ "ಏನು ?" ಎಂದು ಕ್ರುದ್ಧನಾಗಿಯೇ ಕೇಳಿದೆನು. "ತಂತಿ" ಎಂದು ಸವಿನಯದ ಕಾರದ ಮುನಸ್ಸಿನಿಂದಲೇ ಹೇಳಿ, ಕಾಗದದ ಒಂದು ಭಾಗದಲ್ಲಿ ಒಂದು ಸಣ್ಣ ಸೀಸಕಡ್ಡಿಯ ತುಂಡಿನಿಂದ ನನ್ನ ಅಂಕಿತವನ್ನು ಗೀಚಿಸಿಕೊಂಡು, ಅಂಟುಹಚ್ಚಿದ ಸಣ್ಣ ಲಕ್ಕೋಟೆಯೊಂದನ್ನು ನನ್ನ ಕೈಗಿತ್ತು, ಅವನು ತಾನು ಬಂದ ದಾರಿ ಹಿಡಿದ.

ನಾನು ಮರಳಿ ನನ್ನ ಸ್ಥಳಕ್ಕೆ ಬಂದು ಸ್ವಲ್ಪ ಧೈರ್ಯದಿಂದಲೇ ಲಕ್ಕೋಟೆಯನ್ನು ಒಡೆದು ತಂತಿಯನ್ನು ಓದಿದೆನು. ಓದಿ ದಿಙ್ಮೂಢನಾದೆನು. ನಾನು ಸ್ವಪ್ನದಲ್ಲಿರುವೆನೋ ವಾಸ್ತವದಲ್ಲಿರುವೆನೋ— ಎಂಬುದನ್ನು ತಿಳಿಯುವುದೇ ಕಠಿಣವಾಯಿತು. ಅದಕ್ಕಾಗಿ ನನ್ನನ್ನು ಸ್ವಲ್ಪ ನಾನೇ ಚಿವುಟಿಕೊಂಡೆನು. ತಂತಿಯನ್ನು ಹೊರಳಿಸಿ ಹೊರಳಿಸಿ ನೋಡಿದೆನು. ಅದು ಮುಂಬಯಿಯಿಂದ ಬಂದಿತ್ತು. ಅದನ್ನು ಕಳುಹಿದವರ ಅಂಕಿತವಲ್ಲದೆ, ಅವರ ಪೂರ್ಣ ವಿಳಾಸವೂ ಅದರಲ್ಲಿ ಇತ್ತು. ಅದರಲ್ಲಿ ಇಷ್ಟೇ ಬರೆಯಲಾಗಿತ್ತು :

'ದೊಡ್ಡ ಲಾಟರಿ ! ಬೇಗ ಬಾ ! ನಿಲ್ದಾಣದಲ್ಲಿ ಕಾದಿರುತ್ತೇನೆ.
—ಲಚ್ಚು '

ತಂತಿಯಲ್ಲಿ ಬರೆದ ಸಂಗತಿಯನ್ನು ನಾನು ಹತ್ತಿಪ್ಪತ್ತು ಸಲ ಓದಿದೆನು. ಅದು ಯಾವಾಗ ಮುಂಬಯಿ ಬಿಟ್ಟಿತು ? ನಮ್ಮ ಊರನ್ನು ಯಾವಾಗ ತಲುಪಿತು ?— ಇದನ್ನೆಲ್ಲ ನೋಡಿದೆನು, ನನ್ನ ವಿಳಾಸವನ್ನೂ ಲಚ್ಚಣ್ಣನ ವಿಳಾಸವನ್ನೂ ಸೂಕ್ಷ್ಮವಾಗಿ ಪರೀಕ್ಷಿಸಿದೆನು. ಲಕ್ಕೋಟೆಯ ಮೇಲಿನ ಅಂಚೆಯ ಮುದ್ರೆಗಳನ್ನು ಚೆನ್ನಾಗಿ ಪರಿಶೀಲಿಸಿದೆನು. ಎಲ್ಲ ಸರಿಯಾಗಿದ್ದುವು. "ಇದರಲ್ಲೇನೂ ಮೋಸವಿಲ್ಲ" ಎಂದು ಹೇಳುತ್ತಿದ್ದುವು. ಆದರೂ ಒಂದು ಸಂಶಯ— ಒಂದು ಅಜ್ಞಾತಭಯ— ನನ್ನನ್ನು ಆವರಿಸಿದ್ದುವು.

ಆದರೆ ಈ ಭಯವಾಗಲಿ ಸಂಶಯವಾಗಲಿ ಬಹಳ ಹೊತ್ತು ನಿಲ್ಲಲಿಲ್ಲ. ಇವುಗಳಿಗಿಂತಲೂ ತೀವ್ರವಾದ ಆನಂದ-ಆಶ್ಚರ್ಯ-ವಿಷಾದಗಳು ಒಂದರಹಿಂದೆ ಒಂದು ಬಂದು, ನನ್ನ ಅಂತರಂಗವನ್ನು ಆಕ್ರಮಿಸಿದುವು. "ಅಂತೂ ಲಚ್ಚಣ್ಣ ಬದುಕಿರುವನಲ್ಲ !" ಎಂದು ಆನಂದವಾದರೆ, "ಅವನಿಗೆ ಮತ್ತೆ ಲಾಟರೀ ಹತ್ತಿತೇ ?" ಎಂದು ಆಶ್ಚರ್ಯವೂ "ಮತ್ತೇಕೆ ಅವನಿಗೆ ಲಾಟರೀ ಹತ್ತಿತಪ್ಪಾ !" ಎಂದು ವಿಷಾದವೂ ಉಂಟಾಗುತ್ತಿದ್ದುವು.

ಹೀಗೆ ಭಾವನೆಗಳ ತಾಕಲಾಟವು ನಡೆದಿರುವಾಗಲೇ, ಹಿಂದೊಮ್ಮೆ ಇಂತಹದೇ ಒಂದು ತಂತಿ-ಬಂದು ಲಚ್ಚಣ್ಣನ ಜೀವನದಲ್ಲಿಯೇ- ಆದೇಕೆ ನಮ್ಮ ಊರಲ್ಲಿಯೇ- ಒಂದು ದೊಡ್ಡ ಕೋಲಾಹಲವನ್ನು ಉಂಟು ಮಾಡಿ ಹೋದ ನೆನಹು ನನ್ನ ಕಣ್ಣಮುಂದೆ ಬಂದು ನಿಂತಿತು.

ಈಗ ಐದು ವರುಷಗಳ ಹಿಂದಿನ ಮಾತು: ಆಗ ಲಚ್ಚಣ್ಣ ನಮ್ಮ ಊರಲ್ಲಿಯೇ ಇದ್ದ. ಲಾಟರೀ ಹುಚ್ಚು ಅವನ ತಲೆಗೆ ಹೆಚ್ಚಾಗಿ ಹಿಡಿದ ಕಾಲವದು. ಒಂದುದಿನ ಬೆಳಗ್ಗೆ ನಮ್ಮ ಊರಿಗೆ ಒಂದು ತಂತಿ ಬಂದಿತು. ಆ ತಂತಿಯ ಪ್ರಕಾರ ಲಚ್ಚಣ್ಣನು ಕೊಂಡ ಲಾಟರೀ ಟಿಕೇಟಿಗೆ ಎಂಭತ್ತು ಸಾವಿರ (೮೦೦೦೦) ರೂಪಾಯಿಗಳು ದೊರೆತಿದ್ದುವು. ಕೇಳುವುದೇನು ? ಕೂಡಲೆ ಲಚ್ಚಣ್ಣನ ದೈವವೇ ತೆರೆಯಿತು. ಲಚ್ಚಣ್ಣನ ಜಾಣತನವನ್ನು ಸಾಹಸವನ್ನು ದೃಢ ನಿಶ್ಚಯವನ್ನು, ದೈವವನ್ನು ಇನ್ನೂ ಏನೇನೋ ಗುಣಗಳನ್ನು ಇದ್ದದ್ದು ಇಲ್ಲದ್ದು ಎಲ್ಲವನ್ನೂ ಕೂಡಿಸಿ, ಜನ ಅವನನ್ನು ಹೊಗಳಹತ್ತಿತು. ಲಚ್ಚಣ್ಣನೆಂಬ ಒಬ್ಬ ವ್ಯಕ್ತಿ ಇದ್ದನೆಂಬುದನ್ನು ಅರಿಯದವರು ಕೂಡ ಈಗ ಅವನ ತೀರ ಪರಿಚಯದವರೂ, ಹಿತೈಷಿಗಳೂ, ಆಪ್ತಮಿತ್ರರೂ ಆದರು. ಕನ್ಯಾಪಿತೃಗಳಂತೂ ಲಚ್ಚಣ್ಣನನ್ನು ತಮ್ಮ ಅಳಿಯನನ್ನಾಗಿ ಮಾಡಿಕೊಳ್ಳಲು ಸ್ಪರ್ಧೆಯನ್ನೇ ನಡೆಯಿಸಿದರು. ಲಚ್ಚಣ್ಣನು ಅಂಗ-

* ಜಯಂತಿ ಕತೆಗಳ ಮೇಲಾಟದಲ್ಲಿ ೬ನೆಯ ಕ್ರಮಾಂಕ ಪಡೆದ ಕತೆಯಿದು. —ಸಂ.

ಲಾಚಿ ಬೇಡಿಕೊಂಡರೂ ಒಂದು ಕಾಸನ್ನು ಬಿಚ್ಚುವುದಿರಲಿ, ಅವನ ಕಡೆಗೆ ಕಣ್ಣೆತ್ತಿ ಕೂಡ ನೋಡದವರೂ, ಈಗ ಅವನು ಬೇಡ-ಬೇಡವೆಂದರೂ ಅವನ ಕಿಸೆಯಲ್ಲಿ ನೋಟುಗಳನ್ನೇ ತುಂಬ ಹತ್ತಿದ್ದರು. ಇನ್ನು ಲಚ್ಚಣ್ಣನನ್ನು ಆದರಿಸಿ ಚಹಾಪಾನಕ್ಕೆ ಕರೆಯದವರಂತೂ ಇರಲೇ ಇಲ್ಲ. ಅಂತೂ ಒಂದು ರಾತ್ರಿ ಕಳೆದು ಇನ್ನೊಂದು ರಾತ್ರಿ ಬರುವಷ್ಟರಲ್ಲಿ, ಲಚ್ಚಣ್ಣ ನಮ್ಮ ಊರಿನ ಒಬ್ಬ ಗಣ್ಯ ವ್ಯಕ್ತಿಯಾಗಿದ್ದ. ಪವಾಡ ಪುರುಷನಾಗಿದ್ದ. ನೋಡಿದಲ್ಲೆಲ್ಲ, "ಲಾಟರೀ ಲಚ್ಚಣ್ಣನವರು" ಎಂಬ ಹೆಸರು ದುಮುದುಮಿಸುತ್ತ-ಲಿತ್ತು. ಇಲ್ಲಿಯ ವರೆಗೂ ಅನಾಮಧೇಯನೆನಿಸಿದ್ದ "ಲಚ್ಚ್ಯಾ" ಈಗ ಒಂದೇ ದಿನದಲ್ಲಿ ಧೀಮಂತನೂ ಶ್ರೀಮಂತನೂ ಆದ "ಲಕ್ಷ್ಮಣರಾಯ"ನಾಗಿಬಿಟ್ಟ.

ಆದರೆ ದೈವಗತಿಯು ವಿಚಿತ್ರವಲ್ಲವೇ? ಮತ್ತೊಂದು ದಿನ ಇನ್ನೊಂದು ತಂತಿ-ಬಂದಿತು. ಈ ಎರಡನೆಯ ತಂತಿಯ ಪ್ರಕಾರ ಮೊದಲು ಕಳುಹಿದ ತಂತಿ ಪ್ರಮಾದದಿಂದ ಬಂದದ್ದಾಗಿತ್ತು. ಟಿಕೀಟಿನ ಅಂಕಿಯಲ್ಲಿಯ ಒಂದು ಸೊನ್ನೆಯು ವ್ಯವಸ್ಥಾಪಕರ ಕಣ್ಣು ತಪ್ಪಿಸಿ ಸ್ಥಾನಾಂತರ ಮಾಡಿದ್ದುದೇ ಈ ಪ್ರಮಾದಕ್ಕೆ ಕಾರಣವಾಗಿತ್ತು. ಈಗ ಸೊನ್ನೆ ತಾನು ಇರಬೇಕಾಗಿದ್ದ ಸ್ಥಳಕ್ಕೆ ಹೋಗಿ, ಲಚ್ಚಣ್ಣನು ಪಡೆಯಬೇಕಾದ ಹಣಕ್ಕೆ ಸೊನ್ನೆಯನ್ನು ಕೊಟ್ಟಿತ್ತು.

ಸರಿ. ಹಿಮಾಲಯದ ಎತ್ತರಕ್ಕೆ ಹೋದ ಲಚ್ಚಣ್ಣ ಒಮ್ಮೆಲೇ ಪಾತಾಳವನ್ನು ಕಂಡ. ಭವಿಷ್ಯ ಕಾಲದ ಅದ್ಭುತ ರಮ್ಯ ಕನಸು-ಗಳಲ್ಲಿ ಮೈಮರೆದವನು, ವರ್ತಮಾನ ಕಾಲದ ಕೂರಲಗನ್ನು ಅಪ್ಪು-ವಂತಾಯಿತು. "ನಮಗೆ ಹೀಗಾಗುವುದೆಂದು ಮೊದಲೇ ಎನಿಸಿತ್ತು. ಲಚ್ಚ್ಯಾನಂಥ ಬೀದಿಯ ಭಿಕಾರಿಗೆ ಲಾಟರೀ ಸಿಗುವದೆಂದರೆ? ಹೂಂ, ಈಗ ಆದದ್ದೇ ಒಳಿತಾಯಿತು!" ಎಂದು ಕೆಲವರೆಂದರೆ "ಲುಚ್ಚ್ಯಾ ಸೂಳೀಮಗ, ತನಗೆ ಲಾಟರೀ ಸಿಕ್ಕಿತು ಎಂದು ಸುದ್ದೀ ಹಬ್ಬಿಸಿ ಮಂದಿಯ ಕಡೆಯಿಂದ ರೊಕ್ಕ ಎಬ್ಬಿಸುವ ಹಂಚಿಕೆ ಮಾಡಿದ್ದ. ಆದರೆ ನಮ್ಮ ಪೂರ್ವಜರು—'ಸತ್ಯಕ್ಕೆ ಸಾವಿಲ್ಲ ಸುಳ್ಳಿಗೆ ಸುಖವಿಲ್ಲ' ಎಂಬ ಗಾದೆಯನ್ನು ಸುಮ್ಮನೇ ಮಾಡಿಟ್ಟಿರುವರೇ? ಇಂಥವರಿಗೆ ಹೀಗೇ ಆಗಬೇಕು ಆಗಬೇಕು ಏಕೆ? ಆಗೇ ಆಗುತ್ತದೆ!" ಎಂದು ಹಲವರು ಮಾತನಾಡಿದರು. ಅಂತೂ ಲಚ್ಚಣ್ಣ ಉಪಹಾಸಕ್ಕೆ ಗುರಿಯಾದ. ಕೆಲಕೆಲವರಂತೂ ಅವನಿಗೆ ಕೇಳಿಸುವಂತೆಯೆ "ಲಾಟರೀ ಲಚ್ಚ್ಯಾ ಹೋಗಿ ಲಾಟರೀ ಲುಚ್ಚ್ಯಾ ಆದ ನೋಡು!" ಎಂದು ಮಾತನಾಡುತ್ತಿದ್ದರು. ಲಚ್ಚಣ್ಣನ ಪರಿಸ್ಥಿತಿ ಶೋಚನೀಯವಾಯಿತು. ಜೀವನವು ಬೇಸರದ್ದಾಯಿತು. ಒಂದು ದಿನ ಇದ್ದಕ್ಕಿದ್ದಂತೆ ಲಚ್ಚಣ್ಣ ಮಾಯವಾದ. ನಮ್ಮ ಊರಲ್ಲಿ ಮಾತ್ರ 'ಲಚ್ಚಣ್ಣನ ಲಾಟರೀ' ಎಂಬ ಹೊಸ ಗಾದೆ ಬಳಕೆಯಲ್ಲಿ ಬಂದಿತು.

ಅಂದಿನಿಂದ ಇಂದಿನ ವರೆಗೆ ಲಚ್ಚಣ್ಣನ ಸುದ್ದಿಯೇ ಇರಲಿಲ್ಲ. ಆದುದರಿಂದ, ಇಂದಿನ ತಂತಿಯನ್ನು ಓದಿ 'ಲಚ್ಚಣ್ಣ ಜೀವಂತ ಇರುವನಲ್ಲ!' ಎಂದು ಮನಸ್ಸಿಗೆ ಆನಂದವೆನಿಸುತ್ತಿದ್ದರೂ, ಆ ತಂತಿಯನ್ನು ನಂಬಲು ಭಯವಾಗುತ್ತಿತ್ತು. ಮನಸ್ಸಿನಲ್ಲಿ ಇಪ್ಪತ್ತೆಂಟು ಪ್ರಶ್ನೆಗಳು ಹುಟ್ಟಲಾರಂಭಿಸಿದ್ದುವು. "ತಂತಿಯನ್ನು ಲಚ್ಚಣ್ಣನೇ ಮಾಡಿರಬಹುದೇ? ಅವನಿಗೆ ಲಾಟರೀ ಹತ್ತಿದರೆ ನಾನೇಕೆ ಹೋಗಬೇಕು? ತಂತಿಯನ್ನು ಓದಿದರೆ, 'ಲಾಟರೀ ಲಚ್ಚಣ್ಣನಿಗೆ ಹತ್ತಿದೆಯೋ ನನಗೇ ಹತ್ತಿದೆಯೋ?' ಎಂಬುದು ಸ್ಪಷ್ಟವಾಗುವುದಿಲ್ಲವಲ್ಲ? ಆದರೂ ನಾನು ಎಂದೂ ಲಾಟರಿ ಹಾಕಿಯೇ ಇಲ್ಲ. ಅಂದಮೇಲೆ ಅವನಿಗೇ ಅದು ಹತ್ತಿರಬೇಕು ಎಂದು ನಾನು ತರ್ಕಿಸಿದರೆ ತಪ್ಪಾಗಲಿಕ್ಕಿಲ್ಲವಲ್ಲವೇ? ಈಗ ನಾನು ಮುಂಬಯಿಗೆ ಹೊರಡುವುದು ವಿಹಿತವೋ, ಅಲ್ಲವೋ? ಇದರಲ್ಲಿ ಮೋಸವೇನಾದರೂ ಇರಲಿಕ್ಕಿಲ್ಲವೇ?" ಹೀಗೆ ಎದ್ದ ನಾನಾ ತರದ ಪ್ರಶ್ನೆಗಳು ನನ್ನನ್ನು ಮೂಢನನ್ನಾಗಿ ಮಾಡಿದುವು. ಹಾಗೆಯೇ ವಿಚಾರಿಸುತ್ತ ಕುಳಿತಿರುವಾಗ, ನನ್ನ ಕಣ್ಣುಗಳು ಮತ್ತೆ ತಾವಾಗಿಯೇ ಮುಚ್ಚಿದುವು

೨

ನಾನು ಕಣ್ಣು ತೆರೆದಾಗ ಸಂಜೆಯಾಗುತ್ತ ಬಂದಿತ್ತು. ಮನಸ್ಸಿನಲ್ಲಿ ಒಂದು ನಿರ್ಧಾರವಾದ ಹಾಗೆ, ಏನೋ ಒಂದು ಉತ್ಸುಕತೆ ಮೈಯಲ್ಲಿ ತುಂಬಿದಂತಾಗಿತ್ತು. ಎದ್ದು ಲಗುಬಗೆಯಿಂದ ಮುಖ ಮಾರ್ಜನ ಮಾಡಿಕೊಂಡು, ನಾಲ್ಕು ಅರಿವೆಗಳನ್ನು ಒಂದು ಕೈಚೀಲದಲ್ಲಿ ತುರುಕಿಕೊಂಡು, ನನ್ನಾಕೆಗೆ ನಡೆದ ಸಂಗತಿಯನ್ನೆಲ್ಲ ಅರುಹುವ ಒಂದು ಓಲೆಯನ್ನು ಅಂಚೆಗೆ ಹಾಕಿ, ಮುಂಬಯಿಗೆ ಹೋಗುವ ಮೇಲುಗಾಡಿಯನ್ನು ಹಿಡಿಯಲು ನಿಲ್ದಾಣಕ್ಕೆ ನಡೆದೆನು. ನಾನು ಹೋಗುವುದಕ್ಕೂ ಗಾಡಿಯು ಬರುವುದಕ್ಕೂ ಸರಿ-ಹೋಯಿತು. ಟಿಕೀಟು ಪಡೆದು ಅವಸರದಿಂದ ಒಂದು ಡಬ್ಬಿಯಲ್ಲಿ ನುಗ್ಗಿದೆನು, ಗಾಡಿಯು ಸಿಳ್ಳುಹಾಕಿ ಮುಂದೆ ಸಾಗಿತು.

ನನಗೆ ಕೂಡಲಿಕ್ಕೆ ಸ್ಥಳವು ದೊರೆಯಬೇಕಾದರೆ ಎರಡುಮೂರು ನಿಲ್ದಾಣಗಳು ದಾಟುವವರೆಗೆ ಕಾಯಬೇಕಾಯಿತು. ಒಂದು ಸ್ಥಳವನ್ನು ಹಿಡಿದು ಕುಳಿತಮೇಲೆ ಕೂಡ ಮನಸ್ಸಿಗೆ ನೆಮ್ಮದಿ ಉಂಟಾಗಲಿಲ್ಲ. ಆ ನುಗ್ಗಾಟದಲ್ಲಿ ಸಿಕ್ಕು "ನಾನೇಕೆ ಇಲ್ಲಿ ಬಂದೆನಪ್ಪಾ!" ಎಂದು ಉದ್ಗಾರವನ್ನು ತೆಗೆಯುವಂತಾಯಿತು. "ನರಕವೆಂಬುದು ಯಮಲೋಕದಲ್ಲಿದೆ. ಪಾಪಮಾಡಿದವರು ತೀರಿಕೊಂಡನಂತರ ಅಲ್ಲಿ ಅವರಿಗೆ ಅದನ್ನು ಅನುಭವಿಸಬೇಕಾಗುತ್ತದೆ." ಎಂದು ಹೇಳುವವರು, ನಮ್ಮ ಮೂರನೆಯ ವರ್ಗದ ಮೇಲುಗಾಡಿಯ ಡಬ್ಬಿಯಲ್ಲಿ ಕುಳಿತು ಒಮ್ಮೆ ಪ್ರವಾಸ ಮಾಡಿದರೆ "ನರಕವಾಸವೆಂಬುದು ಭೂಲೋಕದಲ್ಲಿಯೇ ಇದೆ, ಉಗಿಬಂಡಿಯ, ಅದರಲ್ಲಿಯೂ ದಕ್ಷಿಣಭಾರತದ ಉಗಿಬಂಡಿಯ, ಮೂರನೆಯ ವರ್ಗದ ಡಬ್ಬಿಯಲ್ಲಿ ಕುಳಿತು ದೂರದ ಪ್ರವಾಸವನ್ನು ಕೈಕೊಳ್ಳುವ ಪಾಪಕೃತ್ಯವನ್ನು ಮಾಡಿದವರಿಗೆ ಅದು ಲಭಿಸಿಯೇ ತೀರುತ್ತದೆ." ಎಂದು ಸಾರಿ ಹೇಳಿ, ತಮ್ಮ ಮೊದಲಿನ ಅಭಿಪ್ರಾಯವನ್ನು ಖಂಡಿತವಾಗಿ ಬದಲಿಸುತ್ತಾರೆಂದು ನನಗೆ ಅನಿಸಿತು.

ಆದರೂ ನಿರ್ವಾಹವಿಲ್ಲದೆ ಆ ನರಕವಾಸವನ್ನು ಅನುಭವಿಸುತ್ತ ಕುಳಿತು ಸುತ್ತಲೂ ನೋಡಿದೆನು. ಪರಿಚಯದ ಮುಖವು ಒಂದೂ ಕಾಣಲಿಲ್ಲ. ನನ್ನ ಎದುರಿನ ಕಿಂಡಿಯಲ್ಲಿ ದೃಷ್ಟಿಯನ್ನು ದಾಟಿಸಿದೆ. ದೃಷ್ಟಿಯೆಲ್ಲ ಹಿಂದೆ ಓಡುತ್ತಿತ್ತು. ಗಾಡಿಯು ಮುಂದೆ ಓಡುತ್ತಿತ್ತು. ಅದನ್ನು ನೋಡುತ್ತ ನನ್ನ ವಿಚಾರವೂ ಓಡಲಾರಂಭಿಸಿತು. ಆದರೆ ಅದು ಎಷ್ಟು ಓಡಿದರೂ ಲಚ್ಚಣ್ಣನನ್ನು ದಾಟಿ ಮುಂದೆ ಹೋಗುವುದಾಗಲಿಲ್ಲ. ಅದರಿಂದ ಲಚ್ಚಣ್ಣನನ್ನು ಮಧ್ಯಬಿಂದುವನ್ನಾಗಿ ಇಟ್ಟುಕೊಂಡು, ಅವನ ಸುತ್ತಲೂ ನನ್ನ ವಿಚಾರವು ವರ್ತುಳಾಕಾರದಲ್ಲಿ ಓಡಲಾರಂಭಿಸಿತು.

ಹೀಗೆ ವಿಚಾರವು ಓಡುತ್ತಿರುವಾಗ, ನನ್ನ ಆಗಮನವನ್ನು ಅರುಹುವ ತಂತಿಯನ್ನು ಲಚ್ಚಣ್ಣನಿಗೆ ನಾನು ಕಳುಹದೇ ಇದ್ದದ್ದು ಥಟ್ಟನೇ ಹೊಳೆಯಿತು. "ಇನ್ನು ಏನು ಮಾಡಬೇಕು? ಲಚ್ಚಣ್ಣನು ಈಗ ಎಲ್ಲಿ ಇರಬಹುದು? ಏನು ಮಾಡುತ್ತಿರಬಹುದು? ಇಲ್ಲಿಯವರೆಗೂ ಅವನು ಮುಂಬಯಿಯಲ್ಲಿದ್ದನೇ? ಅಲ್ಲಿ ಇದ್ದು ಏನು ಮಾಡುತ್ತಿದ್ದ? ಈಗ ಲಾಟರಿಯು ಅವನಿಗೆ ಎಲ್ಲಿಂದ ದೊರೆಯಿತು?" ಎಂಬ ಪ್ರಶ್ನೆಗಳು ಆ ನೆನಪಿನ ಹಿಂದಿನಿಂದಲೇ ಬಂದುಬಿಟ್ಟವು. ಇವುಗಳನ್ನು ವಿಚಾರಿಸುತ್ತಿರುವಾಗ, ಒಂದು ಮಾತು ನನ್ನನ್ನು ಆಶ್ಚರ್ಯಗೊಳಿಸಿತು. ಅದೆಂದರೆ: ಲಾಟರಿ ಬಗ್ಗೆ ಲಚ್ಚಣ್ಣನಲ್ಲಿದ್ದ ಅದಮ್ಯವಾದ ಅಖಂಡವಾದ ಆಸಕ್ತಿ. ನಮ್ಮ ಊರಲ್ಲಿ ಲಚ್ಚಣ್ಣ ಇದ್ದಾಗ, ಅವನು ಲಾಟರಿ ಹಾಕುತ್ತಿದ್ದರೂ ನನಗೆ ಅದರ ಬಗ್ಗೆ ಜುಗುಪ್ಸೆಯಾಗಲಿ ಆಶ್ಚರ್ಯವಾಗಲಿ ಎನಿಸಿರಲಿಲ್ಲ. ಆದರೆ ಈಗಲೂ ಅದು ಅವನಲ್ಲಿ ಜಾಗೃತವಾಗಿರುವುದನ್ನು ನೋಡಿ ಆಶ್ಚರ್ಯವಾಗಿತ್ತು.

ಲಚ್ಚಣ್ಣನು ನಮ್ಮ ಊರಲ್ಲಿದ್ದಾಗ ಲಾಟರೀ ಹಾಕುವುದಕ್ಕೆ ಒಂದು ಕಾರಣವಿತ್ತು. ಅದನ್ನು ಅವನು ಯಾರ ಮುಂದೆಯೂ ಆಡಿ ತೋರಿಸಿದ್ದಿಲ್ಲ. ಆದರೂ ಅದನ್ನು ನಾನು ಅರಿತಿದ್ದೆನು. ಅದನ್ನು ಲಚ್ಚಣ್ಣನ ಬಾಲ್ಯಜೀವನವನ್ನು ಸೂಕ್ಷ್ಮವಾಗಿ ನಿರೀಕ್ಷಿಸುವವರೆಲ್ಲರೂ ಅರಿಯಬಹುದಾಗಿತ್ತು. ನಾನು ಮಾತ್ರ ಲಚ್ಚಣ್ಣನಿಗಿದ್ದ ಲಾಟರೀ ಹುಚ್ಚನ್ನು, ಅವನ ಜೀವನದಲ್ಲಿ ಉಂಟಾದ ಆಶಾಭಂಗದ ಫಲವೆಂದು ತಿಳಿದಿದ್ದೆನು.

ಲಚ್ಚಣ್ಣ ಸಣ್ಣವನಿದ್ದಾಗಲೇ ಅವನ ತಂದೆ ತೀರಿಕೊಂಡಿದ್ದರು. ತಾಯಿಯು ಉದರನಿರ್ವಾಹಕ್ಕಾಗಿ ಒಬ್ಬ ಸಿರಿವಂತರ ಮನೆಯಲ್ಲಿ ಅಡುಗೆ ಮಾಡುವ ಪ್ರಸಂಗ ಬಂದಿತ್ತು. ಆಗಾಗ ತಾಯಿಯನ್ನು ಹಿಂಬಾಲಿಸಿ ಅಲ್ಲಿ ಹೋದ ಲಚ್ಚಣ್ಣ, ಆ ಸಿರಿವಂತರ ಮಕ್ಕಳನ್ನು ನೋಡಿ, ತನಗೂ ಅಂತಹ ಬಟ್ಟೆ-ಬರೆಗಳು ಬೇಕೆಂದೂ ಅಂತಹ ಆಟಿಗೆಗಳು ಬೇಕೆಂದೂ ಹಟ ಮಾಡುತ್ತಿದ್ದ. ಲಚ್ಚಣ್ಣನ ತಾಯಿಯು "ನೀನು ಹೋದ ಜನ್ಮದಲ್ಲಿ ಪುಣ್ಯ ಮಾಡಿ ಬಂದಿಲ್ಲ, ಆದ್ದರಿಂದ ಅವು ನಿನಗೆ ಸಿಗುವದಿಲ್ಲ. ನಾವು ಬಡವರು. ನಾವು ಪಾಪ ಮಾಡಿ ಹುಟ್ಟಿದವರು. ಅದಕ್ಕಾಗಿ ಆ ಸಿರಿವಂತರ ಒಡವೆಗಳಿಗೆ ಆಸೆಪಡಬಾರದು. ನೀನೂ ಬೇಕಾದರೆ ದೈವವು ಸಂತೃಪ್ತನಾದ ದೇವರು, ನೀನು ದೊಡ್ಡವನಾದ ಮೇಲೆ ನಿನ್ನನ್ನು ಶ್ರೀಮಂತನನ್ನಾಗಿ ಮಾಡಬಹುದು!" ಎಂದು ಅವನನ್ನು ಸಮಾಧಾನ ಪಡಿಸುತ್ತಿದ್ದಳು. ಲಚ್ಚಣ್ಣನಿಗೆ ಇದೆಲ್ಲ ಅರ್ಥವಾಗುತ್ತಿದ್ದಿಲ್ಲ. ಆ ಹುಡುಗರಂತೆ ತಾನೂ ಇಲ್ಲವೇ?— ಎಂದಮೇಲೆ ಅಂತಹ ಆಟಿಗೆಗಳು ತನಗೇಕೆ ಸಿಗಬಾರದು?— ಎಂಬುದೇ ಅವನ ಪ್ರಶ್ನೆಯಾಗಿತ್ತು. ಹೀಗೆ ಲಚ್ಚಣ್ಣನು ಅಸಮಾಧಾನಗೊಂಡು ಹಟ ಮಾಡಿ, ಒಮ್ಮೊಮ್ಮೆ ತನ್ನ ತಾಯಿಯನ್ನು ಬಹಳ ಪೀಡಿಸುತ್ತಿದ್ದ. ಆಗ ಅವಳು ನಾಲ್ಕು ಏಟು ಕೊಡುತ್ತಿದ್ದಳು. ಲಚ್ಚಣ್ಣ ಅತ್ತು ಅತ್ತು ನಿದ್ದೆ ಹೋಗುತ್ತಿದ್ದ. ಇನ್ನೂ ಎಷ್ಟೋ ಸಲ, ಅವರ ತಾಯಿ ಅವನನ್ನು ಥಳಿಸಿದಾಗ, ನಮ್ಮ ತಾಯಿಯು ಓಡಿಹೋಗಿ ಲಚ್ಚಣ್ಣನನ್ನು ತಬ್ಬಿಕೊಂಡು, ನಮ್ಮ ಮನೆಗೆ ಕರೆದುಕೊಂಡು ಬಂದು, ಅವನಿಗೆ ಏನಾದರೂ ತಿನ್ನಲಿಕ್ಕೆ ಕೊಟ್ಟು ರಮಿಸುತ್ತಿದ್ದುದು ನನಗೆ ಈಗಲೂ ನೆನಪಿದೆ.

ಮುಂದೆ ಲಚ್ಚಣ್ಣನೂ ನಾನೂ ಕೂಡಿಯೇ ಸಾಲೆಗೆ ಹೋಗುತ್ತಿದ್ದೆವು. ಅತನು ಆಗಾಗ ರೊಕ್ಕವನ್ನು ತಂದು ಏನಾದರೂ ತಿನ್ನುವ ವಸ್ತುಗಳನ್ನು ಕೊಂಡುಕೊಳ್ಳುತ್ತಿದ್ದ. ನನಗೂ ಕೊಡುತ್ತಿದ್ದ. "ಈ ರೊಕ್ಕ ಎಲ್ಲಿಯದು?" ಎಂದು ಕೇಳಿದರೆ "ತಾಯಿ ಕೊಟ್ಟಳು" ಎಂದು ಹೇಳುತ್ತಿದ್ದ.

ಇಬ್ಬರೂ ಇಂಗ್ಲೀಷ್ ಸಾಲೆಯ ಕಟ್ಟೆಯನ್ನು ಏರಿದೆವು. ತನ್ನ ಮಗನು ಒಬ್ಬ ದೊಡ್ಡ ಅಧಿಕಾರಿಯಾಗುತ್ತಾನೆ. ಶ್ರೀಮಂತನಾಗುತ್ತಾನೆ— ಎಂದು ಅವನ ತಾಯಿ ಕನಸು ಕಾಣುತ್ತಿದ್ದಳು. ಲಚ್ಚಣ್ಣನೂ ಬಹಳ ಮೇಧಾವಿಯಾಗಿದ್ದ.

ಒಂದು ದಿನ ಲಚ್ಚಣ್ಣನ ತಾಯಿ ಅಡುಗೆಗೆ ಇದ್ದ ಶ್ರೀಮಂತರ ಮನೆಯಲ್ಲಿ, ಚಂದ್ರಹಾರವೊಂದು ಕಳುವಾಯಿತು. ಅದರ ಆರೋಪವು ಲಚ್ಚಣ್ಣನ ತಾಯಿಯ ಮೇಲೆ ಬಂದಿತು. ಆ ಅಪವಾದ ಬಂದ ದಿನದಿಂದ ಲಚ್ಚಣ್ಣನ ತಾಯಿ ಹಾಸಿಗೆ ಹಿಡಿದಳು. ಮುಂದೆ ಚಂದ್ರಹಾರವು ಆ ಸಿರಿವಂತರ ಮನೆಯ ಅಂಗಳದಲ್ಲಿಯೇ ದೊರೆಯಿತು. ಆದರೆ ಲಚ್ಚಣ್ಣನ ತಾಯಿ ಮಾತ್ರ ಅದು ದೊರೆತ ಸ್ವಲ್ಪೇ ದಿನಗಳಲ್ಲಿ ತನ್ನ ಇಹಲೋಕಯಾತ್ರೆಯನ್ನು ಮುಗಿಸಿದಳು. ಊರವರೆಲ್ಲ ಮರುಗಿದರು. ಲಚ್ಚಣ್ಣ ಪರದೇಶಿಯಾದ.

ವಾರದ ಮನೆ ಅವನ ಉಪಜೀವನಕ್ಕೆ ಆಧಾರವಾಯಿತು. ನಮ್ಮ ಪಡಸಾಲೆ ಅವನ ನಿದ್ರೆಗೆ ಆಸರವಾಯಿತು. ದಿನಗಳು ಉರುಳಿದುವು. ಲಚ್ಚಣ್ಣನ ದುಃಖದ ಗಾಯ ಮಾಯಲಾರಂಭಿಸಿತು.

ಅವನ ತಾಯಿ ಸತ್ತನಂತರ, ಲಚ್ಚಣ್ಣನಲ್ಲಿ ಎಷ್ಟೋ ಬದಲಾವಣೆಯಾಯಿತು. ಆದರೆ ತಾನೂ ಶ್ರೀಮಂತನಾಗಬೇಕೆಂಬ ಇಚ್ಛೆಯು ಮಾತ್ರ ಹಾಗೇ ಉಳಿದಿತ್ತು—ಎಂಬುದನ್ನು, ಲಚ್ಚಣ್ಣನು ಲಾಟರಿ ಹಾಕಲಿಕ್ಕೆ ಮೊದಲುಮಾಡಿದ. ಕೂಡಲೇ ನಾನು ತಿಳಿದುಕೊಂಡೆನು. ನಾನು ಚೇಷ್ಟೆಯಲ್ಲಿ "ಇದೇನು ಹುಚ್ಚು ಲಚ್ಚಣ್ಣಾ? ಲಾಟರಿ ಎಂದಾದರೂ ಎಲ್ಲರಿಗೂ ಹತ್ತುವುದೇ?" ಎಂದು ಕೇಳಿದಾಗ, 'ಎಲ್ಲರಿಗೂ ಹತ್ತದಿದ್ದರೆ ಇಲ್ಲ; ನನಗೇಕೆ ಹತ್ತಬಾರದು?'—

ಉಳಿದವರು ಶ್ರೀಮಂತರಾಗಿ ಸುಖಪಡುವಾಗ, ನಾನೇಕೆ ಶ್ರೀಮಂತನಾಗಬಾರದು ? ” ಎಂದು ನನಗೇ ಪ್ರಶ್ನಿಸುತ್ತಿದ್ದ. ಅದಕ್ಕೆ ನಾನು “ ದುಡಿದು ದುಡ್ಡು ಗಳಿಸು! ಯಾರು ಬೇಡವೆನ್ನುತ್ತಾರೆ ? ” ಎಂದು ಹೇಳಿದರೆ, “ ಜಗತ್ತಿನಲ್ಲಿ ಪ್ರಾಮಾಣಿಕತನದಿಂದ ದುಡಿದು ಎಷ್ಟು ಜನ ಶ್ರೀಮಂತರಾಗಿದ್ದಾರೆ ? ” ಎಂದು ನನ್ನನ್ನೇ ಕೇಳುತ್ತಿದ್ದ .

ಲಚ್ಚಣ್ಣನ ಈ ಲಾಟರಿ ಹುಚ್ಚು, ನಮ್ಮ ಊರನ್ನು ಬಿಟ್ಟು ಅವನನ್ನು ಓಡಿಸಿತ್ತು. ಇಂದು ಬಂದ ತಂತಿಯನ್ನು ಓದಿ ಅವನ ಈ ಹುಚ್ಚು ಇನ್ನೂ ಬಿಡದಿರುವುದನ್ನು ಕಂಡು “ ಅವನು ಊರನ್ನು ಬಿಟ್ಟು ಓಡಿದರೂ, ಈ ಹುಚ್ಚು ಅವನನ್ನು ಬಿಟ್ಟು ಓಡಲಿಲ್ಲವಲ್ಲ ! ” ಎಂದು ಆಶ್ಚರ್ಯವನ್ನೂ, ಅದಕ್ಕೂ ಹೆಚ್ಚಾಗಿ ವಿಷಾದವನ್ನೂ ಪಟ್ಟೆನು.

ನನ್ನ ವಿಚಾರ ಹೀಗೆ ತಿರುಗುತ್ತಲೇ ಇತ್ತು. ಗಾಡಿಯು ಓಡುತ್ತಲೇ ಇತ್ತು. ನನ್ನ ಕಣ್ಣುಗಳು ಯಾವಾಗ ಮುಚ್ಚಿದುವೋ ನನಗೆ ತಿಳಿಯಲೇ ಇಲ್ಲ.

೩

ನಾನು ಕಣ್ಣು ತೆರೆದಾಗ ಚೆನ್ನಾಗಿ ಬೆಳಗಾಗಿತ್ತು. ಗಾಡಿಯು ಪುಣೆಯ ನಿಲ್ದಾಣದಲ್ಲಿ ನಿಂತಿತ್ತು. ಮುಂಬಯಿ ಗಾಡಿ ಬಂದಿತ್ತು. ನಾನು ಈ ಗಾಡಿಯಿಂದ ಇಳಿದು ಆ ಗಾಡಿಯನ್ನು ಹತ್ತಿದೆ. ಅಲ್ಲಿಯೇ ಪ್ರಾತರ್ವಿಧಿಗಳನ್ನು ತೀರಿಸಿ, ಸೃಷ್ಟಿಸೌಂದರ್ಯವನ್ನು ನೋಡುತ್ತ ಕುಳಿತೆ.

ವ್ಹಿ. ಟಿ. ಯಲ್ಲಿಳಿದಾಗ, ನನ್ನ ಹೆಗಲ ಮೇಲೆ ಯಾರೋ ಕೈಯಿಟ್ಟರು. ಹೊರಳಿ ನೋಡಿದೆ; ನನಗೆ ಗುರುತೇ ಸಿಕ್ಕಲಿಲ್ಲ. ಕೈಯಿಟ್ಟವರು “ ಗುರುತು ಸಿಗಲಿಲ್ಲವೇ ? ” ಎಂದು ನಕ್ಕರು. ನಾನು “ ಲಚ್ಚಣ್ಣಾ !” ಎಂದೆ. ಲಚ್ಚಣ್ಣಾ ನನ್ನನ್ನು ಗಟ್ಟಿಯಾಗಿ ಅಪ್ಪಿಕೊಂಡ. ನಾನು ಅವನ ಮೇಲೆ ಪ್ರಶ್ನೆಗಳ ಮಳೆಯನ್ನೇ ಸುರಿಸಿದೆ. ಇಬ್ಬರೂ ಮಾತನಾಡುತ್ತ ಹೊರಗೆ ಬಂದೆವು.

ನಮಗಾಗಿ ಒಂದು ಕಾರು ಹೊರಗೆ ಕಾದಿತ್ತು. ನಾವು ಇನ್ನೂ ನಮ್ಮ ಕ್ಷೇಮಸಮಾಚಾರದ ಮಾತುಗಳನ್ನು ಮುಗಿಸಿರಲಿಲ್ಲ. ಅಷ್ಟರಲ್ಲಿ ಅದು ನಮ್ಮನ್ನು ಒಂದು ಭವ್ಯವಾದ ಪ್ರಾಸಾದದ ಮುಂದೆ ಇಳಿಸಿತು. ಅದರ ಕೈದೋಟದಲ್ಲಿ ಹಾಯ್ದು, ನಾವು ಒಳಗೆ ಹೋದೆವು.

ಇಲ್ಲಿಯವರೆಗೂ ಲಚ್ಚಣ್ಣ ತನ್ನ ಬಗ್ಗೆ ಅಷ್ಟಕ್ಕಷ್ಟೇ ಹೇಳುತ್ತ ಬಂದಿದ್ದ. ಈಗ ನಾನು “ ಇದೆಲ್ಲ ಏನು ಲಚ್ಚಣ್ಣ ? ನನಗೆ ನಿನ್ನ ವಿಷಯವೆಲ್ಲವೂ ಏನೋ ಅದ್ಭುತವಾಗಿಯೇ ಕಾಣುತ್ತಿದೆ. ಎಲ್ಲವನ್ನೂ ಬಿಡಿಸಿ ಹೇಳಬಾರದೇ ? ” ಎಂದು ಸ್ವಲ್ಪ ಹಟದಿಂದಲೇ ಕೇಳಿದೆ. ಲಚ್ಚಣ್ಣ ನಗುತ್ತ “ ಮೊದಲು ಉಪಾಹಾರವಾಗಲಿ ” ಎಂದ. ನಾನು “ ಅದೇನಿಲ್ಲ. ಮೊದಲು ನಿನ್ನ ಕತೆಯನ್ನೆಲ್ಲ ವಿಸ್ತರಿಸಿ ಹೇಳು. ಇಲ್ಲದಿದ್ದರೆ ನನಗೆ ಉಪಾಹಾರವೇ ಬೇಡ! ” ಎಂದು ಪಟ್ಟು ಹಿಡಿದೆ. ಲಚ್ಚಣ್ಣ ನಕ್ಕು ತನ್ನ ಕತೆ ಹೇಳಲಾರಂಭಿಸಿದ :

“ ನನ್ನ ಲಾಟರೀ ಪುರಾಣ ನಿನಗೆ ಗೊತ್ತಿರಬೇಕು. ಅಂದು ನಾನು ಊರು ಬಿಟ್ಟದ್ದೂ ನಿನಗೆ ನೆನಪಿರಬೇಕು. ನಾನು ಆತ್ಮಹತ್ಯೆಯನ್ನು ಮಾಡಿಕೊಳ್ಳುವ ನಿರ್ಧಾರದಿಂದಲೇ ಹೊರಟೆನು. ಕೈಯಲ್ಲಿ ಒಂದು ಬ್ಯಾಗು ಇತ್ತು. ಕಿಸೆಯಲ್ಲಿ ೨೫ ರೂಪಾಯಿಗಳೂ ಇದ್ದವು. ನಿಲ್ದಾಣಕ್ಕೆ ಬಂದು ಟಿಕೀಟು ಕೇಳಿದೆ “ ಎಲ್ಲಿ ? ” ಎಂಬ ಪ್ರಶ್ನೆ ಬಂತು. ಕಿಸೆಯಲ್ಲಿ ಕೈಹಾಕಿದೆ; ಐದು ರೂಪಾಯಿಯ ಒಂದು ನೋಟು ಸಿಕ್ಕಿತು. ಅದನ್ನು ಮುಂದಿಟ್ಟು “ ಇದು ಎಲ್ಲಿಯವರೆಗೆ ಒಯ್ಯುವುದೋ ಅಲ್ಲಿ ” ಎಂದು ಹೇಳಿದೆ. ಟಿಕೀಟು ಕೊಡುವವ ಹುಳು ಹುಳು ನನ್ನ ಮುಖವನ್ನೇ ನೋಡಹತ್ತಿದ. ಗಾಡಿ ಸಿಳ್ಳುಹಾಕಿ ಅವನನ್ನು ಎಚ್ಚರಿಸಿತು. ನಾನು ಲಗುಬಗೆಯಿಂದ ಟಿಕೀಟು ತೆಗೆದುಕೊಂಡು ಗಾಡಿಯ ಕಡೆಗೆ ಓಡಿದೆ.

ಕೂಡಬೇಕೆಂದು ಅತ್ತಿತ್ತ ನೋಡಿದರೆ ಎಲ್ಲೂ ಸ್ಥಳವೇ ಇರಲಿಲ್ಲ ನಾನೂ ಹಾಗೇ ನಿಂತೆ. ನಿಲ್ದಾಣಗಳು ದಾಟಿದಂತೆಲ್ಲ ಜನ ತುಂಬುತ್ತಲೇ ಇತ್ತು. ನನ್ನ ಸ್ಥಿತಿಯನ್ನು ನೋಡಿ, ನನ್ನ ಹತ್ತಿರವೆ ಕುಳಿತ ಒಬ್ಬ ವ್ಯಕ್ತಿಗೆ ಏನೋ ಕನಿಕರ ಬಂತು. ಅವನು ಸ್ವಲ್ಪ ಸರಿದು ನನಗೆ ಸ್ಥಳಮಾಡಿಕೊಟ್ಟ. ಅಲ್ಲಿಯೇ ನನ್ನ ಬ್ಯಾಗು ಇಟ್ಟುಕೊಂಡು ಕುಳಿತೆ. ಗಾಡಿಯು ಜೋಗುಳಹಾಡಿ ತೊಟ್ಟಿಲುತೂಗುತ್ತಿತ್ತು. ಎಲ್ಲರೂ ನಿದ್ರೆಮಾಡುತ್ತಿದ್ದರು. ನಾನೂ ತೂಕಡಿಸಹತ್ತಿದೆ.

“ ಟಿಕೀಟು ಮಿಸ್ಟರ್ ” ಎಂಬ ದನಿ ನನ್ನನ್ನು ಎಚ್ಚರಿಸಿತು. ಅವನಿಗೆ ನನ್ನ ಟಿಕೀಟು ತೋರಿಸಿದೆ. “ ನೀವು ಇಳಿಯಬೇಕಾದದ್ದು ಇಲ್ಲಿಯೇ ” ಅವನು ಹೇಳಿದ. ನಾನು ನಿದ್ದೆಗಣ್ಣಿನಲ್ಲಿಯೇ ನನ್ನ ಬ್ಯಾಗನ್ನು ತೆಗೆದುಕೊಂಡು ಇಳಿದು ನಿಂತೆ. ಗಾಡಿಯು ಮುಂದೆ ಸಾಗಿತು.

ಏನು ಮಾಡಬೇಕೆಂಬುದನ್ನು ನಿಶ್ಚಯಿಸಿಕೊಂಡೇ ಬಂದಿದ್ದೆ. ಆದ್ದರಿಂದ ಆ ನಿಲ್ದಾಣದ ಕೊನೆಯ ಒಂದು ಬೆಂಚಿನ ಮೇಲೆ ಕುಳಿತು ನನ್ನ ಬ್ಯಾಗು ತೆರೆದೆ. ಒಳಗೇ ನನ್ನ ಸಾಮಾನುಗಳೇ ಕಾಣಲಿಲ್ಲ. ಹಾಗೆಯೆ ಕೈಯಾಡಿಸಿದೆ. ಕಾಗದದ ಕಟ್ಟುಗಳ ಕಂಡುವು. “ ಇದೇನಪ್ಪಾ ? ” ಎನ್ನುತ್ತ ಅಲ್ಲಿಂದ ಎದ್ದು ತುಸ ಬೆಳಕಿನಲ್ಲಿ ನೋಡಿದೆ; ನೋಡಿ ದಂಗು ಬಡಿದೆ. ಆ ಬ್ಯಾಗಿನ ತುಂಬ ಬರೇ ನೋಟಿನ ಕಟ್ಟುಗಳೇ ಇದ್ದುವು. ನಾನು ಆನಂದದಿಂದ ಪುಟಿದೆದ್ದೆನು. “ ನನ್ನನ್ನು ಹಾಸ್ಯಮಾಡಿದ ಜನಕ್ಕೆ ಚೆನ್ನಾಗಿ ಇನ್ನು ಕೈತೋರಿಸುತ್ತೇನೆ. ” ಎಂದು ನಮ್ಮ ಊರ ಕಡೆಗೆ ಗಾಡಿಯನ್ನು ವಿಚಾರಿಸಿದೆನು. ಇನ್ನು ಅರ್ಧ ತಾಸಿನಲ್ಲಿ ಅದು ಬರುವುದಿತ್ತು. ನಾನು ಒಳ್ಳೇ ಹರುಷದಿಂದ ಅತ್ತಿತ್ತ ಅಡ್ಡಾಡುತ್ತ “ ಯಾವಾಗ ಗಾಡಿ ಬರುವುದೋ ” ಎಂದು ಚಡಪಡಿಸಲಾರಂಭಿಸಿದೆನು.

ಗಾಡಿ ಬಂದಿತು. ಈಸಾರೆ ಇಂಟರ್ ವರ್ಗದಲ್ಲಿ ಕುಳಿತೆನು. ನನಗೆ ಕೂಡಲಿಕ್ಕೆ ಸ್ಥಳದೊರೆಯಿತು.

ನನ್ನ ದೇಹವು ಗಾಡಿಯಲ್ಲಿತ್ತು. ನನ್ನ ಮನಸ್ಸು ಮಾತ್ರ ಆಗಲೇ ನಮ್ಮ ಊರನ್ನು ಸೇರಿತು. ಊರಲ್ಲಿ ನಾನು ಈಗ ಮತ್ತೆ ಗಣ್ಯವ್ಯಕ್ತಿಯಾಗಿದ್ದೆ. ಪವಾಡಪುರುಷನಾಗಿದ್ದೆ. 'ಪ್ರಮದಾಮನ ಪ್ರಮೋದ'ನಾಗಿದ್ದೆ. ಆದರೆ ಆ ಕಣ್ಣುಗಳು....ಕಣ್ಣು....ಗಳು." ಲಚ್ಚಣ್ಣ ತಡವರಿಸಹತ್ತಿದ. ನಾನು "ಏನು? ಏನು ಲಚ್ಚಣ್ಣಾ ಹೀಗೇಕೆ?" ಎಂದೆ. ಆವನು ಸ್ವಲ್ಪ ಹೊತ್ತು ಸುಮ್ಮನಿದ್ದು ನುಡಿಯಲಾರಂಭಿಸಿದ:

"ಇಂದು ಎಲ್ಲವನ್ನೂ ಹೇಳಿಬಿಡುತ್ತೇನೆ ಕೇಳು. ನಾನು 'ಆ ಕಣ್ಣುಗಳು' ಎಂದೆನಲ್ಲ— ಅದನ್ನೇ ಈಗ ಹೇಳುತ್ತೇನೆ ಕೇಳು.

ನಿಮಗೆಲ್ಲ ನನ್ನ ತಾಯಿ ತೀರಿಕೊಂಡಿರುವಳೆಂಬುದು ಗೊತ್ತು. ಆಕೆ ಹೇಗೆ ತೀರಿಕೊಂಡಳು, ಯಾಕೆ ತೀರಿಕೊಂಡಳು—ಎಂಬುದು ಚೆನ್ನಾಗಿ ಗೊತ್ತಿಲ್ಲ.

ನಮ್ಮ ತಾಯಿಯ ಮೇಲೆ ಚಂದ್ರಹಾರದ ಕಳವಿನ ಅಪವಾದ ಬಂದದ್ದು ನಿನಗೆ ನೆನಪಿರಬಹುದು. ಆದನ್ನು ನಮ್ಮ ತಾಯಿ ಕದ್ದಿರಲಿಲ್ಲ. ನಾನು ಕದ್ದಿದ್ದೆ. ಇದನ್ನು ತಿಳಿದು ಆವಳು ಎದೆಯೊಡೆದುಕೊಂಡಳು. ಹಾಸಿಗೆ ಹಿಡಿದಳು. ನಾನು ಕದ್ದಿರಬೇಕೆಂದು ಆವಳಿಗೆ ನಿಶ್ಚಯವಾಗಿತ್ತು. ಆದರೆ ನನ್ನನ್ನು ಆಕೆ ಕೇಳಲಿಲ್ಲ. ಆಕೆಯ ಮನಃಸ್ಥಿತಿಯೇ ಬೇರೆಯಾಗಿತ್ತು. ಆದನ್ನು ನೋಡಿ ಗಾಬರಿಯಾದೆ. ನನ್ನ ತಾಯಿಯ ಸ್ವಭಾವ ನನಗೆ ಗೊತ್ತಿತ್ತು. ನನ್ನ ತಂದೆ ಬಡವನಾದರೂ ಬಹಳ ಮರ್ಯಾದಸ್ಥ. ಜೀವಹೋದರೂ ಮಾನವನ್ನು ಕಳೆದುಕೊಳ್ಳುವವನಲ್ಲ. ನನ್ನ ತಾಯಿ, ಈ ವ್ರತದಲ್ಲಿ ನನ್ನ ತಂದೆಗಿಂತಲೂ ಒಂದು ತೂಕ ಹೆಚ್ಚಿದ್ದಳು. ನನ್ನ ದುರ್ನಡತೆಯನ್ನು ನೋಡಿ ಅವಳಿಗೆ ಆಘಾತವಾಗಿತ್ತು. ಬದುಕುವ ಇಚ್ಛೆಯು ಮಾಯವಾಗಿತ್ತು. ಇದನ್ನು ತಿಳಿಯಲು ನನಗೆ ಬಹಳ ಹೊತ್ತು ಹಿಡಿಯಲಿಲ್ಲ. ನಾನು ಕೂಡಲೇ ನನ್ನ ತಪ್ಪನ್ನು ಆವಳ ಮುಂದೆ ಒಪ್ಪಿಕೊಂಡು, ಆ ಹಾರವನ್ನು ಆವರ ಅಂಗಳದಲ್ಲಿ ಒಗೆದು ಬಂದೆನು.

ನನ್ನ ತಾಯಿ ಮಾತ್ರ ಸಾವನ್ನೇ ಬಯಸಿದಳು. ಅವಳು ಸಾಯುವಾಗ ಏನನ್ನೋ ಹೇಳಬೇಕೆನ್ನುತ್ತಿದ್ದಳು. ಆದರೆ ಅವಳ ಬಾಯಿ ಹೋಗಿತ್ತು. ನಾಲಗೆಯು ಹೇಳಬೇಕಾದ ಮಾತುಗಳನ್ನು ಅವಳ ಕಣ್ಣುಗಳು ಹೇಳುತ್ತಿದ್ದುವು— ಎನ್ನುವದಕ್ಕಿಂತ, ನನ್ನ ಎದೆಯ ಎಲುವಿನ ಮೇಲೆ ಅವಳ ಮಾತುಗಳನ್ನು ಕೊರೆಯುತ್ತಿದ್ದುವು ಎಂದು ಹೇಳುವುದೇ ಯೋಗ್ಯ. ಅಷ್ಟು ಆ ಕಣ್ಣುಗಳಲ್ಲಿ ಶಕ್ತಿಯಿತ್ತು. ತೇಜಸ್ಸಿತ್ತು. ತೀಕ್ಷ್ಣತೆ ಇತ್ತು.

ಆ ಕಣ್ಣುಗಳು ಏನು ಹೇಳುತ್ತವೆಂಬುದು ಉಳಿದವರಿಗೆ ತಿಳಿಯದಿದ್ದರೂ ನನಗೆ ಮಾತ್ರ ತಿಳಿದಿತ್ತು. ನಾನು ನನ್ನ ಜೀವವಿರುವ

ಅಲ್ಪಾವಧಿಯಲ್ಲಿಯೇ ಪ್ರಖ್ಯಾತಿ ಪಡೆದು, ಕನ್ನಡ ನಾಡಿನಲ್ಲೆಲ್ಲ
ಉಪಯೋಗಿಸಲಾಗುತ್ತಿರುವ ಶ್ರೀ. ಗಲಗಲಿಯವರ

ನೂತನ ಕಿಸೆಯ ಕೈಪಿಡಿ ಮಾಲೆ

[ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ]

(೧)	ಭೂಮಿತಿ	೦—೬—೦	(೨)	ಗಣಿತ ರಹಸ್ಯ	೦—೬—೦
(೩)	ಆರೋಗ್ಯಶಾಸ್ತ್ರ	೦—೬—೦	(೪)	ಜಮಾಖರ್ಚು	೦—೬—೦
(೫)	ಶಾಸ್ತ್ರೀಯ ವಿಷಯ	೦—೬—೦	(೬)	ಪರೀಕ್ಷೆಯ ಗುಟ್ಟು	೦—೬—೦
(೭)	ಪ್ರಬಂಧ ಲೇಖನ	೦—೬—೦	(೮)	ವ್ಯಾಕರಣಛಂದೋಽಲಂಕಾರ	೦—೬—೦

(೯) ಭಾಷೆಯ ಅಂತರಂಗ ೦—೬—೦

ಸ್ವಲ್ಪದರಲ್ಲಿಯೇ ಸ್ವಾರಸ್ಯವಾಗಿ ವಿಷಯನಿರೂಪಣೆಯುಳ್ಳ ಇಂಥ ಪುಸ್ತಕಗಳು ಬೇರೆ ಇಲ್ಲ.
ಕಾರಣ ವಿದ್ಯಾರ್ಥಿಗಳು ಶ್ರೀ. ಗಲಗಲಿಯವರ ಕೃತಿಗಳನ್ನು ಕೊಂಡು
ಓದಿ ತೇರ್ಗಡೆಹೊಂದಲಡ್ಡಿಯಿಲ್ಲ. ಇಂದೇ
ನಿಮ್ಮ ಪ್ರತಿಗಳನ್ನು ತರಿಸಿಕೊಳ್ಳಿರಿ.

ವ್ಯಾಪಾರಿಗಳಿಗೆ ಧಾರಾಳ ಕಮೀಶನ್ !!

ಆಕಳವಾಡಿ ಬುಕ್-ಡಿಪೋ, ಧಾರವಾಡ

ವರೆಗೂ ಇನ್ನೊಬ್ಬರ ಒಡವೆಯನ್ನು ಅವರ ಅಪ್ಪಣೆಯಿಲ್ಲದೆ ಸ್ಪರ್ಶಿಸುವುದಿಲ್ಲವೆಂದು ನಿರ್ಧರಿಸಿದೆ. ನನ್ನ ಈ ನಿರ್ಧಾರ ಅವಳಿಗೆ ತಿಳಿಯಿತೇನೋ:- ನನ್ನನ್ನು ಮುಂದೆ ಕರೆದು ತನ್ನ ಕೈ ಚಾಚಿದಳು. ನಾನು ಕಣ್ಣೀರು ಸುರಿಸುತ್ತ ಅವಳ ಕೈಮೇಲೆ ಕೈ ಹಾಕಿದೆ. ಅವಳು ಒಂದು ನಿಟ್ಟುಸಿರು ಬಿಟ್ಟು ನನ್ನನ್ನು ಒಮ್ಮೆ ಕಣ್ತುಂಬ ನೋಡಿದಳು. ನೋಡುತ್ತಿರುವಂತೆಯೇ ಅವಳ ಪ್ರಾಣಪಕ್ಷಿ ಹಾರಿತು.

ನನಗೆ ನನ್ನ ತಾಯಿಯ ಆ ಕಣ್ಣುಗಳು ಒಮ್ಮೆಲೇ ಕಾಣಲಾರಂಭಿಸಿದುವು. ನನ್ನಲ್ಲಿ ದ್ವಂದ್ವ ಪ್ರಾರಂಭವಾಯಿತು. ನನ್ನ ದೈವ ಈಗ ತೆರೆದು ನಿಂತಿತ್ತು. ನಾನು ಒಂದೇ ಕ್ಷಣದಲ್ಲಿ ಶ್ರೀಮಂತನಾಗುತ್ತಿದ್ದೆನು. ಏನಿಲ್ಲೆಂದರೂ ಆ ಬ್ಯಾಗಿನಲ್ಲಿ ೧೦ ಸಾವಿರ ರೂ.ಗಳ ನೋಟು ಇದ್ದುವು. ನನ್ನ ಬಾಲ್ಯದ ಆಕಾಂಕ್ಷೆ—ನನ್ನ ಜೀವನದ ಮಹತ್ತ್ವಾಕಾಂಕ್ಷೆ ಕೈಗೂಡುವುದರಲ್ಲಿತ್ತು. ಅದರೆ ಆ ಕಣ್ಣುಗಳು ನನ್ನನ್ನು ಪ್ರತಿಬಂಧಿಸಿದುವು. ಅವುಗಳ ತೇಜಸ್ಸನ್ನು ನಾನು ತಡೆಯದಾದೆನು. ಅವುಗಳಲ್ಲಿ ವ್ಯಕ್ತವಾಗುತ್ತಲಿದ್ದ ಮರುಕ, ವಿಷಾದಗಳು ನನ್ನ ಕರುಳನ್ನು ಕೊರೆದುವು. ಕೂಡಲೆ “ತಾಯೀ, ನಿನ್ನ ಮಗನು ಕೃತಘ್ನನಾಗುವುದಿಲ್ಲ. ನಿನಗೆ ಕೊಟ್ಟ ವಚನವನ್ನು ಮುರಿಯುವುದಿಲ್ಲ.” ಎಂದು ಮನಸ್ಸಿನಲ್ಲಿಯೇ ಬೇಡಿಕೊಂಡೆನು. ಮುಂದಿನ ನಿಲ್ದಾಣದಲ್ಲಿಯೇ ಇಳಿದೆನು.

‘ಆ ಬ್ಯಾಗು ಯಾರದಿರಬಹುದು—ಎಂಬುದನ್ನು ಹೇಗೆ ಗೊತ್ತುಹಚ್ಚಬೇಕು!’ ಎನ್ನುವುದು ನನಗೆ ತಿಳಿಯದಾಯಿತು. ಅದನ್ನು ಪರೀಕ್ಷಿಸಹತ್ತಿದೆ. ಅದು ನನ್ನ ಬ್ಯಾಗಿನಂತೆಯೇ ಇತ್ತು. ಅದರ ಮೇಲೆ ಏನೂ ಅಕ್ಷರಗಳು ಇರಲಿಲ್ಲ. ಇಂಥವರದೆಂದು ಹೇಳುವ ಗುರುತೂ ಇರಲಿಲ್ಲ. ಅದನ್ನು ತೆಗೆದು ಮತ್ತೊಮ್ಮೆ ನೋಡಿದೆ. ಒಳಗೆ ಒಂದು ಕಾಗದ ಕಂಡಿತು. ಅದನ್ನು ತೆರೆದು ನೋಡಿದೆ. ಅದರಲ್ಲಿ ಆ ನೋಟುಗಳ ನಂಬರು ಮತ್ತು ಒಂದು ವಿಳಾಸ ಕಂಡುಬಂದುವು. ಅದನ್ನೇ ಆಧಾರವಾಗಿಟ್ಟುಕೊಂಡು ಮುಂಬಯಿ ಗಾಡಿ ಹತ್ತಿದೆ.

ಮುಂಬಯಿಯಲ್ಲಿ ಆ ವಿಳಾಸವನ್ನು ಹೇಳಲು, ಟ್ಯಾಕ್ಸಿಯವನು ಒಂದು ಭವ್ಯ ಪ್ರಾಸಾದದ ಮುಂದೆ ನನ್ನನ್ನು ತಂದು ಇಳಿಸಿದ. ನಾನು ಕೈದೋಟವನ್ನು ದಾಟಿ ಒಳಗೆ ಹೋದೆ. ಪಡಸಾಲೆಯಲ್ಲಿ ಒಬ್ಬ ಯುವತಿ, ಒಂದು ಕನ್ನಡಿಯ ಮುಂದೆ ನಿಂತು ಹಾಡುತ್ತಿದ್ದಳು. ನನ್ನ ಪ್ರತಿಬಿಂಬವನ್ನು ಕನ್ನಡಿಯಲ್ಲಿ ನೋಡಿ, ಅಪ್ರತಿಭಳಾಗಿ ಬಾಗಿಲಿಗೆ ಬಂದು “ಏನು ಬೇಕು?” ಎಂದು ಕೇಳಿದಳು. ನಾನು ಕ್ಷಣಹೊತ್ತು ಆ ಚೆಲುವೆಯನ್ನು ದಿಟ್ಟಿಸಿದೆ. ಆನಂತರ ನನ್ನ ಕಿಸೆಯಲ್ಲಿಯ ವಿಳಾಸ ತೆಗೆದು “ಈ ಹೆಸರಿನವರು ಇರುವರೇ?” ಎಂದು ಕೇಳಿದೆ. ಅವಳು ಯಾರನ್ನೋ ಕೂಗಿ ಕರೆದಳು.

ಹೊರಗೆ ಬಂದ ವ್ಯಕ್ತಿಯನ್ನು ನೋಡಿ ನಾನು ಮೂಢನಾದೆ. ಗಾಡಿಯಲ್ಲಿ ನನ್ನ ಹತ್ತಿರವಿದ್ದ ಸಭ್ಯಗೃಹಸ್ಥ ಇವನಾಗಿರಲಿಲ್ಲ. ನನಗೆ ಏನು ಮಾಡಬೇಕೆಂಬುದು ತಿಳಿಯಲಿಲ್ಲ. ನಾನು ಕನ್ನಡದಲ್ಲಿ ತಡವರಿಸಹತ್ತಿದೆ. ಕೊನೆಗೆ ಧೈರ್ಯ ತಂದುಕೊಂಡು ನನ್ನ ವಿಳಾಸದಲ್ಲಿಯ ಹೆಸರನ್ನು ಉಚ್ಚರಿಸಿ, ಇಂಗ್ಲೀಷಿನಲ್ಲಿ “ಅವರು ನೀವೇಯೋ” ಎಂದು ಕೇಳಿದೆ. ಅವನು ನಕ್ಕು “ಏಕೆ? ಇನ್ನೂ ಸಂಶಯ ಬರುತ್ತದೆಯೋ?” ಎಂದು ಕೇಳಿ, ಅಲ್ಲಿ ತಗುಲಿಸಿದ ಹಲಗೆಯ ಕಡೆಗೆ ಬೊಟ್ಟು ಮಾಡಿದರು.

ನಾನು ಉಸಿರ್ಗರೆದು ಅವರ ಮುಂದೆ ಆ ಬ್ಯಾಗಿನಲ್ಲಿ ನನಗೆ ಸಿಕ್ಕ ಚೀಟಿಯನ್ನಿಟ್ಟು, ಆ ಬ್ಯಾಗನ್ನು ತೆರೆದು ತೋರಿಸಿದೆ. ಅವರು ಅವಾಕ್ಕಾದರು. ಕೂಡಲೇ ಫೋನು ಇದ್ದಲ್ಲಿ ಓಡಿದರು. ಯಾರನ್ನೋ ಕೂಗಿದರು. ನಾನು ಮಾತ್ರ ನಿಶ್ಚಲನಾಗಿ ಆ ಚೆಲುವೆಯನ್ನೇ ನೋಡುತ್ತ ನಿಂತು ಬಿಟ್ಟಿದ್ದೆ. ಅವಳು “ಇದೇನು ನಡೆದಿದೆ?” ಎಂಬುದು ತಿಳಿಯದೆ ಕಲ್ಲಿನ ಗೊಂಬೆಯಂತೆ ನಿಂತಿದ್ದಳು.

ಅವರು—ಆ ಚೆಲುವೆಯ ತಂದೆ— ಬಂದು, ನನ್ನ ಬೆನ್ನ ಮೇಲೆ ಅಂತಃಕರಣದಿಂದ ಕೈಯಾಡಿಸಿದಾಗ, ನಾನು ಎಲ್ಲಿರುವೆನೆಂಬ ಕಲ್ಪನೆ ಬಂದಿತು. ಅವರು ಆದರದಿಂದ ನನ್ನನ್ನು ಒಳಗೆ ಕರೆದುಕೊಂಡು ಹೋದರು. ಅವಳು ನನ್ನನ್ನೇ ನೋಡುತ್ತ ಮಾಯವಾದಳು.

ಅಂದಿನಿಂದ ನಾನು ಅವರ ಮನೆಯಲ್ಲಿಯೇ ಇದ್ದೇನೆ.” ಲಚ್ಚಣ್ಣ ಉಸಿರು ಎಳೆದುಕೊಳ್ಳುವುದಕ್ಕೆ ಸ್ವಲ್ಪ ತಡೆದ. ನಾನು ತೆರೆದ ಬಾಯನ್ನು ಮುಚ್ಚಿದೆ.

ಅಷ್ಟರಲ್ಲಿ ಲಚ್ಚಣ್ಣ ಮತ್ತೆ ಹೇಳತೊಡಗಿದ್ದ :

“ಈಗ ನಾನು ಕಾಲೇಜು ವಿದ್ಯಾರ್ಥಿ. ನನ್ನ ಮದುವೆ ಗೊತ್ತಾಗಿದೆ. ಅದಕ್ಕಾಗಿ ನಿನ್ನನ್ನು ಕರೆಯಕಳುಹಿದ್ದು........”

ನನಗೆ ಗಾಬರಿಯಾಯಿತು. ಇದೇನು ಮೋಸವಪ್ಪಾ ಎನಿಸಿತು. ತಡೆಯದೇ ಕೇಳಿದೆ :

“ಮತ್ತೆ, ದೊಡ್ಡ ಲಾಟರೀ ಎಂದು ತಂತೀ ಕಳಿಸಿದ್ದು....?”

ನನ್ನನ್ನು ಅರ್ಧಕ್ಕೆ ತಡೆದು ಲಚ್ಚಣ್ಣ ಹೇಳಿದ :

“ನಿನ್ನ ತೊಡಕು ನನಗೆ ತಿಳಿದಿದೆ. ಅದನ್ನೇ ಈಗ ಬಿಡಿಸುವವನಿದ್ದೆ” ಎಂದು ಮುಗುಳುನಗೆಯಿಂದ “ಊರ್ಮಿಳಾ” ಎಂದ.

“ಬಂದೆ” ಕೋಮಲಸ್ವರವೊಂದು ಕೇಳಿಸಿತು.

ನಾನು ಬಾಗಿಲ ಕಡೆಗೆ ನೋಡಿದೆ. ಎರಡು ನಿಮಿಷಗಳಲ್ಲಿಯೇ ಕೈಯಲ್ಲಿ ಉಪಾಹಾರದ ತಬಕವನ್ನು ಹಿಡಿದುಕೊಂಡು, ಮನೋಹರಿಯೊಬ್ಬಳು ಮಂದಗಮನದಿಂದ ಬಂದಳು.

“ನೋಡು ನನ್ನ ಲಾಟರೀ” ಲಚ್ಚಣ್ಣ ನುಡಿದ.

ನನಗೆ ಅರ್ಥವಾಗಲೇ ಇಲ್ಲ. ಅವನೇ ಹೇಳಿದ :

“ಪ್ರೇಮವೆಂಬುದು ಲಾಟರಿಯ ಹಾಗೆ ಎಲ್ಲರಿಗೂ ಸಿಗುವ ವಸ್ತುವಲ್ಲವಷ್ಟೇ? ಅಂದಮೇಲೆ ನನಗೆ ಎಂಥ ದೊಡ್ಡ ಲಾಟರೀ ಸಿಕ್ಕಿದೆ ಎಂಬುದನ್ನು ತಿಳಿಯಬೇಕಾದರೆ ಅವಳನ್ನು ಕೇಳು !”

ನಾನು ಊರ್ಮಿಳೆಯ ಕಡೆಗೆ ನೋಡಿದೆ.

ಅವಳು ಲಚ್ಚಣ್ಣನನ್ನು ಕಡೆಗಣ್ಣಿನಿಂದ ನೋಡುತ್ತ “ಲಾಟರೀ ಸಿಕ್ಕದ್ದು ಅವರಿಗಲ್ಲ ; ನನಗೆ” ಎಂದಳು.

ಲಚ್ಚಣ್ಣ ಘೊಳ್ಳನೇ ನಕ್ಕ. ನಾನು ಮುಗುಳುನಗೆ ಬೀರಿದೆ.

— ಬೆಳಗು —

ಶ್ರೀ. ಸಿ. ಎಂ. ದೇವೇಂದ್ರ ನಾಯಕ,

ಕೋಳಿ ಕುಕೂ ಎಂದು ಕೂಗಿ ಜಗದ ಬೆಳಗ ಸಾರಿತು!

ಅಂಧಕಾರವಳಿದು ಇಳೆಗೆ
ಬೆಳಕು ಹರಿದು ಬರುತಿರೆ—
ಜಗದ ನಿದ್ರೆ ಮುಗಿಯಲದಕೆ
ಇರುಳ ತೆರೆಯು ಸರಿದಿರೆ—
ಬಾನ ಚಿಕ್ಕೆ ಭೂಮಿಗಿಳಿದು
ಮೊಗ್ಗೆಗಳಲಿ ಅಡಗಿರೆ—
  ಕೋಳಿ ಕುಕೂ ಎಂದು ಕೂಗಿ
  ಜಗದ ಬೆಳಗ ಸಾರಿತು! ೧

ನಿಶೆಯು ಜಗದಿ ತೊಲಗಿ ತಾನು
ಕಾಡ ಗುಹೆಯಲಡಗಿರೆ—
ಹಕ್ಕಿ ಬಳಗವೆದ್ದು ಒಡನೆ
ಉದಯರಾಗವೆನುತಿರೆ—
ತುಂಬಿಬಳಗವೆಲ್ಲ ಮಲರ
ಬಂಡ ಬಳಿದುಕೊಳುತಿರೆ—
  ಕೋಳಿ ಕುಕೂ ಎಂದು ಕೂಗಿ
  ಜಗದ ಬೆಳಗ ಸಾರಿತು! ೨

ಫಲದ ಬಯಕೆಗೆಂದು ಬಳ್ಳಿ-
ಗುಡಿಯು ಹೀಚುತಿರಲು—
ತನಿಯ ಗಾಳಿ ಸುಳಿದು ಲಲ್ಲೆ-
ಯಾಟವಾಡುತಿರಲು—
ಬಳ್ಳಿಗುಡಿಗಳೆಲ್ಲ ತೂಗಿ
ಪ್ರಣಯದೃಷ್ಟಿ ಹರಡಲು—
  ಕೋಳಿ ಕುಕೂ ಎಂದು ಕೂಗಿ
  ಜಗದ ಬೆಳಗ ಸಾರಿತು! ೩

ಅಳಿಗಳೊಲವಿಗಾಗಿ ಮೊಗ್ಗೆ-
ಯರಳಿ ಮುದದಿ ನಿಂದಿರೆ—
ತುಂಬಿ ಬಳಗವೆಲ್ಲ ಒಲಿದು
ಮೇಲೆ ಸುತ್ತಿ ಸುಳಿದಿರೆ—
ಮಧುರ ಸುಮಗಳೆಲ್ಲ ನಲಿದು
ಪ್ರಣಯದಾಟ ಹೂಡಿರೆ—
  ಕೋಳಿ ಕುಕೂ ಎಂದು ಕೂಗಿ
  ಜಗದ ಬೆಳಗ ಸಾರಿತು! ೪

ಮನಕೆ ಹೊಸತು ಹುರುಪನಿತ್ತು
ತಂಬೆಲರದು ತೀಡಿರೆ—
ತೋಳಸೆರೆಯನುಳಿದು ಲಲನೆ
ಪತಿಗೆ ನಮನ ಕೊಡುತಿರೆ—
ಮುಂಗುರಳನು ಬೆಡಗಿನಲ್ಲಿ
ತಿದ್ದಿ ತೀಡುತಿದ್ದಿರೆ—
  ಕೋಳಿ ಕುಕೂ ಎಂದು ಕೂಗಿ
  ಜಗದ ಬೆಳಗ ಸಾರಿತು! ೫

ತಾಯಿಹಕ್ಕಿ ಎದ್ದು ತನ್ನ
ರೆಕ್ಕೆ ಕೊಡಹುತಿರಲು—
ಪುಟ್ಟ ಹಕ್ಕಿ ಬಾಯಿ ಬಿಟ್ಟು
ಗುಟುಕ ಕೇಳುತಿರಲು—
ಹಕ್ಕಿ ದಿಕ್ಕ ಬಗೆದು ಹಾರಿ
ಹೋಗಂಪನಿತರಲ್ಲಿಯೆ—
  ಕೋಳಿ ಕುಕೂ ಎಂದು ಕೂಗಿ
  ಜಗದ ಬೆಳಗ ಸಾರಿತು! ೬

ತಿಳಿಯ ಕೊಳದಿ ಮಿಂದು ಉಷೆಯು
ನೀಲವಸನ ಧರಿಸಿರೆ—
ಮುಡಿಗೆ ಹೂವ ಮುಡಿದು ನಯದಿ
ಹರುಷದಾಳಿ ನಿಂದಿರೆ—
ರಾಗ-ರಾಗ ಬೆರಸಿ ಹಣೆಗೆ
ತಿಲಕವಿಟ್ಟುಕೊಳುತಿರೆ—
  ಕೋಳಿ ಕುಕೂ ಎಂದು ಕೂಗಿ
  ಜಗದ ಬೆಳಗ ಸಾರಿತು! ೭

ಕೋಳಿ ಕುಕೂ ಎಂದು ಕೂಗಿ
ಜಗದ ಬೆಳಗ ಸಾರಿತು!
ಇರುಳನಾಳಿ ಮೆರೆದ ಕರಿಯ
ಕತ್ತಲೆ ಹೌಹಾರಿತು!
ಉದಯಗಿರಿಯನೇರಿ ಹೊರಟ
ರವಿಯ ಧ್ವಜವು ಏರಿತು!
  ಕೋಳಿ ಕುಕೂ ಎಂದು ಕೂಗಿ
  ಜಗದ ಬೆಳಗ ಸಾರಿತು! ೮

— ಬೆಳ್ಳಿ —

ಶ್ರೀ. ಎಸ್. ಶ್ರೀನಿವಾಸನ್, ಬಡಗೇರಿ

ರತ್ನರಸವ ನಿಲಿಸಿ ಬಾನು
ಕುಣಿಯುತಿರುವುದೆ—
ಮಂದಾರದ ಕುಸುಮವರಳಿ
ನಗುತಲಿರುವುದೆ!! ॥ ೧ ॥

ಅಳುವ ಮನಕೆ ಜೇನನುಣಿಸಿ
ಜೀವ ತಣಿಸಿತು;
ತಂಪನುಂಡ ಗಗನದಲ್ಲಿ
ರಂಗು ತುಳುಕಿತು. ॥ ೨ ॥

ಅಚ್ಚ ನೀಲಿ ಅಚೆಗಟ್ಟಿ
ಕಾಂತಿ ಹೊಮ್ಮಿದೆ;
ರಾಗವೆರಚಿ ಕರೆದು ಇಳೆಗೆ
ನೀರ ಚಿಮ್ಮಿದೆ ॥ ೩ ॥

ಸುತ್ತ ನೋಡೆ ಗೊಂಚಲಾದ
ಚಿನ್ನಚುಕ್ಕೆಯು!
ತಾರೆ ಮಾಲೆಯಲ್ಲಿ ಹೆಣೆದ
ವಜ್ರದೀಪ್ತಿಯು! ॥ ೪ ॥

ಕಾಂತಿ ಮಿರುಗಿದಂತೆ ಜೀವ
ಮೌನವಡೆವುದು—
ಹೊಸತು ಕಂಡು ಕೇಡ ಜರೆದು
ವಿಶ್ವ ಮೆರೆವುದು. ॥ ೫ ॥

ಇಳಿದ ಕಿರಣ ಸೆಳೆದು ಮನವ
ತಟ್ಟಿ ತೂಗಿದೆ—
ಸೃಷ್ಟಿ ಪುಣ್ಯದಲ್ಲಿ ಮುಳುಗಿ
ಮೂಕವಾಗಿದೆ. ॥ ೬ ॥

ಕೋಟಿ ತಾರೆ ಸೊಬಗನುಂಡು
ಮಾಯವಾದುವು;
ತೆರೆಯು ಕಂಡು ಹಿಗ್ಗಲೆಂದು
ನಾಕದಭಯವು ॥ ೭ ॥

ಹೃದಯ ಮುಟ್ಟಿ ಮಲಿನ ತೊಳೆದು
ಭೀತಿ ಕಳೆವುದು;
ಬೆಳ್ಳಿ ನಿಂದು ಬಿಮ್ಮನೆಂದು
ಬೆಳಗ ಕರೆವುದು ॥ ೮ ॥

"ಕರ್ನಾಟಕ ಶಾಕುಂತಲ ನಾಟಕ"

ಶ್ರೀ. ಎಸ್. ಎಸ್. ಬಸುಪಟ್ಟದ, ಎಮ್. ಎ., ಬೆಳಗಾಂವಿ

ಸಂಸ್ಕೃತ ಶಾಕುಂತಲ ನಾಟಕದ ಸೌಂದರ್ಯವನ್ನು ಕನ್ನಡಿಗರಿಗೆ ಕನ್ನಡದಲ್ಲಿ ಒದಗಿಸಿಕೊಡಬೇಕೆಂದು ಹಲವು ಜನರು ಪ್ರಯತ್ನಿಸಿದ್ದುಂಟು. ಅವರಲ್ಲಿ ದಿವಂಗತ ಬಸವಪ್ಪಶಾಸ್ತ್ರಿಗಳ ಪ್ರಯತ್ನ ಹೆಚ್ಚು ಕೃತಾರ್ಥವಾಗಿದೆ. ಅದರಲ್ಲಿರುವ ಕೊರತೆ ಎಂತಹದು?

ಕವಿಶೇಖರ ಕಾಲಿದಾಸನ ಕೃತಿ 'ಶಾಕುಂತಲ'ಕ್ಕೆ ನಾಟ್ಯಸೃಷ್ಟಿಯಲ್ಲಿ ಯಾವ ಸ್ಥಾನ-ಸನ್ಮಾನವಿದೆ ಎಂಬುದನ್ನು ಎತ್ತಿ ತೋರಿಸಲು ಭಾರತದ ಪಂಡಿತಮಂಡಲಿ— ರಸಿಕಸಂಕುಳದಲ್ಲಿ ತೋರಿಬರುವ ಮುತ್ತಿನಂತಹ ಮಾತು "ಕಾವ್ಯೇಷು ನಾಟಕಂ ರಮ್ಯಂ ತತ್ರಾಪಿ ಚ ಶಕುಂತಲಾ" ಎಂಬುದೇ ನಿದರ್ಶನ. ತನ್ನ ವಿಶ್ವಸಾಮಾನ್ಯ ಗುಣಗಳಿಂದ 'ಶಾಕುಂತಲ' ನಾಟಕವು ಪ್ರಪಂಚವನ್ನೇ ಮೆಚ್ಚಿಸಿತು. ಪಾಶ್ಚಾತ್ಯರಿಗೆ ಮೊದಲು ಎಂದರೆ ೧೭೮೯ರಲ್ಲಿ ಸರ್ ವಿಲಿಯಮ್ ಜೋನ್ಸರವರ ಭಾಷಾಂತರದಿಂದ ಇದು ಪರಿಚಿತವಾಗಿ ಮೆಚ್ಚಿಗೆ ಪಡೆಯಿತು. ಅಂದಿನಿಂದ ಅದರ ಖ್ಯಾತಿ— ಅದರ ವ್ಯಾಪ್ತಿ ಮತ್ತಷ್ಟು ಹೆಚ್ಚಿ ಪ್ರಪಂಚದ ನಾನಾ ಭಾಷೆಗಳಲ್ಲಿ ರೂಪುಗೊಂಡು ನಿಂತಿತು. ಜರ್ಮನಿಯ ಕವಿವರ ಗೈಟೆಯಿಂದ:

"......................

Woulds't Thou the earth and heaven itself. In one sole name,combine? I name thee O Sakuntala, and all at once is said"— ಎಂಬೀ ಬಗೆಯ ಮೆಚ್ಚುಗೆಯ ಬಿರುದು ಬಾವಲಿ ಪಡೆದು ನಿಂತಿದೆ. ಪ್ರಪಂಚ ಪ್ರಖ್ಯಾತವಾದ ಇಂತಹ ಕೃತಿ ಕನ್ನಡದಲ್ಲಿ ಮೊದಲು ಭಾಷಾಂತರವಾಗಿ ರೂಪುಗೊಂಡು ನಿಂತುದು ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ. ದಿ. ಬಸವಪ್ಪಶಾಸ್ತ್ರಿಗಳು "ಕರ್ನಾಟಕ ಶಾಕುಂತಲ" ಎಂಬ ಹೆಸರಿನಿಂದ ಭಾಷಾಂತರಿಸಿದರು. ಅದೇ ಕಾಲಾವಧಿಯಲ್ಲಿ ಉತ್ತರಕರ್ನಾಟಕದಲ್ಲಿ ದಿ. ಚೂರಮರಿ ಶೇಷಗಿರಿರಾಯರ ಅನುವಾದ ಕೃತಿಯೂ ರೂಪುಗೊಂಡಿತು. ಕನ್ನಡಜನ ಇವೆರಡನ್ನೂ ಮೆಚ್ಚಿತು; ಇದಕ್ಕೆ ನಿದರ್ಶನ— ರಂಗಸ್ಥಳದ ಮೇಲೆ ಹಲವು ಸಲ ಬಂದ ಇವುಗಳ ಅಭಿನಯದ ಪ್ರಯೋಗ. ಬರುಬರುತ್ತ ಶ್ರೀ. ವೈನಾಪುರದ ಹಾಗೂ ಇನ್ನಿತರರ ಭಾಷಾಂತರ ಕೃತಿಗಳೂ ಬೆಳಕಿಗೆ ಬಂದುವು. ವೈನಾಪುರರ ಕೃತಿಯಲ್ಲಿ ಒಂದು ಬಗೆಯ ಭಾಷಾಶುದ್ಧಿ-ಸೌಷ್ಠವ ಇಲ್ಲ. ಚೂರಮರಿಯವರವರಲ್ಲಿಯೋ, ಉತ್ತರ ಕರ್ನಾಟಕದ 'ದೇಸಿ' ನುಡಿಯು ಕೆಚ್ಚಿದೆ; ಆದರೆ ವ್ಯಾಕರಣದ ಸೌಷ್ಠವವಿಲ್ಲ. ಇವೆಲ್ಲಕ್ಕಿಂತಲೂ ಬಸವಪ್ಪಶಾಸ್ತ್ರಿಗಳ 'ಶಾಕುಂತಲ'ವು ಕನ್ನಡದಲ್ಲಿ ಬಂದ ಒಳ್ಳೆಯ ಭಾಷಾಂತರ ಕೃತಿ.

ಭಾಷಾಂತರ ಕಾರ್ಯ ತುಂಬಾ ಬಿಕ್ಕಟ್ಟಿನದು; ಸಾಮಾನ್ಯವಾಗಿ ತಿಳಿದುಕೊಂಡಷ್ಟು ಸುಲಭವಲ್ಲ. ಅದನ್ನು ಯಶಸ್ವಿಯಾಗಿ ನಿರ್ವಹಿಸುವುದೆಂದರೆ ಖಡ್ಗಧಾರೆಯ ಮೇಲೆ ಹೆಜ್ಜೆ ಇಟ್ಟಂತೆ; ಮುಳ್ಳುಮೊನೆಯ ಮೇಲೆ ಹೆಜ್ಜೆಯಾಡಿದಂತೆ. ತುಂಬಾ ತೂಕದ ನಡಿಗೆ ಬೇಕು. ಮೂಲಕ್ಕೆ ಭಂಗ ಬಂದಿರಬಾರದು; ಮೂಲದ ಸೌಂದರ್ಯ ಅಚ್ಚಳಿಯದೆ ಬಂದಿರಬೇಕು. ಅನುವಾದಿತ ಕೃತಿಯ ಸೋಲುಗೆಲವುಗಳನ್ನು ನಿರ್ಣಯಿಸಬೇಕಾದರೆ, ಭಾಷಾಂತರ ಹೊಂದಿದ ಕೃತಿಯಲ್ಲಿರಬೇಕಾದ ಮುಖ್ಯವಾದ ನಾಲ್ಕಂಶಗಳನ್ನು ಗಮನದಲ್ಲಿ ಇರಿಸಿಕೊಂಡು ಸಾಗಬೇಕು:

(೧) ಭಾವಕ್ಕೆ— ರಸಕ್ಕೆ ಬಾಧೆ ಬರದಂತೆ ನೋಡಿಕೊಳ್ಳುವುದು.

(೨) ಮೂಲಚಿತ್ರ (ದೃಶ್ಯ) ಮಸುಳಿಸದೆ, ಅದು ಕಣ್ಣಿಗೆ ಕಟ್ಟುವಂತೆ ಅನುವಾದಿಸುವುದು.

(೩) ಮೂಲದಲ್ಲಿಯ ಮಹತ್ತ್ವದ ಭಾಗವಾವುದನ್ನೂ ಬಿಟ್ಟಿರಬಾರದು.

(೪) ಹೊಸದೇನಾದರೂ ಬಂದಿದ್ದರೆ ಮೂಲಕ್ಕೆ ವಿರೋಧವಾಗದೆ ಪೋಷಕವಾಗಿ ಬಂದಿರಬೇಕು.

ಈ ನಾಲ್ಕೂ ಅಂಶಗಳಿಗೂ ಒರೆಹತ್ತಿ ನಿಂತ ಭಾಷಾಂತರಕೃತಿಯು ಸಾಹಿತ್ಯಲೋಕದಲ್ಲಿ ಉತ್ತಮ ಕಲಾಕೃತಿಯಾಗಿ ನಿಲ್ಲುತ್ತದೆಂದು ಹೇಳಬಹುದು.

ಬಸವಪ್ಪ ಶಾಸ್ತ್ರಿಗಳ "ಕರ್ನಾಟಕ ಶಾಕುಂತಲ" ನಾಟಕವು ಕಾಲಿದಾಸನ 'ಶಾಕುಂತಲ'ದಂತೆ ಗದ್ಯ-ಪದ್ಯ ಮಿಶ್ರಿತವಾದ ರೀತಿಯಲ್ಲಿ ಹೇಳಲ್ಪಟ್ಟಿದೆ. ಇಲ್ಲಿಯ ಗದ್ಯ ಹಾಗು ಪದ್ಯಭಾಗಗಳು

ಮೂಲಕ್ಕೆ ಒರೆಹಚ್ಚಿ ನಿಲ್ಲುತ್ತವೆಯೋ ಹೇಗೆಂಬುದನ್ನು ನೋಡಬೇಕು. ಗದ್ಯದ ಮಟ್ಟಿಗಂತೂ ಭಾಷಾಂತರ ತುಂಬ ಚೆನ್ನಾಗಿದೆ. ಗದ್ಯದ ಶೈಲಿಯಲ್ಲಿ ಬಿಗುಹಿದೆ, ಓಜಸ್ಸಿದೆ; ತೇಜಸ್ಸಿದೆ. ಹೊಸಗನ್ನಡದ ಪ್ರೌಢವತ್ತಾದ ಭಾಷೆಯಲ್ಲಿ (Classical style) ನಿರೂಪಿತವಾಗಿದೆ. ಗದ್ಯಕ್ಕಿಂತ ಪದ್ಯಭಾಗದಲ್ಲಿ ಮಾತ್ರ ಭಾಷಾಂತರದ ಸಮಸ್ಯೆ ಏಳುತ್ತದೆ. ಕಾವ್ಯದ ಭಾಗವು ತುಂಬಾ ತೊಡಕಿನದು; ಶಬ್ದ ಹಾಗು ಅರ್ಥಗಳೆರಡಕ್ಕೂ ಇಲ್ಲಿ ಪ್ರಾಧಾನ್ಯವಿದೆ. ಅರ್ಥದಲ್ಲಿ ವಾಚ್ಯಾರ್ಥವಂತೂ ಸರಿಯೇ; ಆದರೆ ಅಲ್ಲಿ ಮೂಲದಂತೆ ವ್ಯಂಗ್ಯಾರ್ಥವೂ ಧ್ವನಿಗೊಡುತ್ತಿರಬೇಕು. ಹೀಗೆ ಮಾಡುವಾಗ ಭಾಷಾಂತರಕಾರರು ಕೆಲವೊಂದು ಶಬ್ದವನ್ನು ಹೆಚ್ಚಿಗೆ ಹಾಕುವುದು ಅನಿವಾರ್ಯವಾಗುತ್ತದೆ. ಶಬ್ದಗಳಲ್ಲಿಯ ಈ ಬಗೆಯ ಹೆಚ್ಚು-ಕಡಿಮೆ ಬಳಕೆಯು, ಪದ್ಯದಲ್ಲಿ ಪ್ರಾಸ ಕೂಡಿಸುವಲ್ಲಿಯೂ ಮತ್ತು ಪದ್ಯ ಪೂರ್ತಿಗೊಳಿಸುವ ಕಾರ್ಯದಲ್ಲಿಯೂ ಕಂಡುಬರುತ್ತದೆ. ಏನೇ ಆಗಲಿ, ಪದ್ಯಪಾದಗಳ ಪರಿಮಿತಿಯಲ್ಲಿಯೇ ಮಾತು ಮುಗಿಯುವಂತಾಗಬೇಕು. ಹೆಚ್ಚೂ ಆಗಿರಬಾರದು, ಕಡಿಮೆಯೂ ಆಗಿರಬಾರದು. ಆದರೆ ಹಿತಮಿತದ ಪ್ರಯೋಗ ತಪ್ಪಿದರೆ, ಕಾವ್ಯದ ಮೂಲಸೌಂದರ್ಯಕ್ಕೆ ಕುಂದು ಬಂದಾಗ, ಅದೇ ದೋಷವಾಗಿ ನಿಲ್ಲುತ್ತದೆ. ಬಸವಪ್ಪಶಾಸ್ತ್ರಿಗಳು ಕವಿಗಳೇ ಆಗಿದ್ದುದರಿಂದ, ಕವಿ ಕಾಳಿದಾಸನ ಹೃದಯ ಅವರಿಗೆ ತೀರ ಹತ್ತಿರದ್ದಾಗಿತ್ತು. ಅಂತೆಯೇ ಅವರು ಅನುವಾದಿಸಿದ ಪದ್ಯಗಳೂ ಮೂಲಪದ್ಯಗಳಂತೆಯೇ ಹೃದ್ಯವಾಗಿವೆಯೆಂದು ಹೇಳಬಹುದು. ಸಂಸ್ಕೃತದಲ್ಲಿಯ ತಮ್ಮ ಅಸಾಧಾರಣವಾದ ಪಾಂಡಿತ್ಯ ಹಾಗು ರಸಿಕತೆಯ ಮೂಲಕ, ಮೂಲ ಶಾಕುಂತಲದ ರಸಗ್ರಹಣಮಾಡಿ, ಕನ್ನಡಭಾಷೆಯ ಮೇಲಿದ್ದ ತಮ್ಮ ಪಾಂಡಿತ್ಯಪೂರ್ಣವಾದ ಪ್ರಭುತ್ವದಿಂದ ಅದನ್ನು ಅನುವಾದಿಸಿದರು. ಪದ್ಯಭಾಗದಲ್ಲಿ ಇವರು ಉಪಯೋಗಿಸಿದ ವೃತ್ತವೆಂದರೆ 'ಖ್ಯಾತಕರ್ಣಾಟಕ' ವೃತ್ತಗಳು. 'ಚಂಪೂಕಾವ್ಯ'ದಲ್ಲಿ ತೋರಿಬರುವ ಆ "ಆರುವೃತ್ತಗಳೇ" ಇಲ್ಲಿ ಕಾಣುವುವಲ್ಲದೆ 'ಕಂದ'ವೂ ಪದ್ಯಭಾಗದಲ್ಲಿ ಕಾಣುತ್ತದೆ. ಆದರೆ ಶ್ರೀ. ರೈನಾಪುರರೋ ಕಾಳಿದಾಸನುಪಯೋಗಿಸಿದ ವೃತ್ತಗಳನ್ನೇ ಬಳಸಿದಂತಿದೆ. ಶಾಸ್ತ್ರಿಗಳ ಭಾಷಾಂತರ ಕಾರ್ಯ ಒಳ್ಳೆಯದಾಗಿ ಬಂದುದನ್ನು ಎತ್ತಿತೋರಿಸಲು ಒಂದೆರಡು ಪದ್ಯಗಳನ್ನಿಲ್ಲಿ ಉದಾಹರಿಸಬಹುದು :

" ದರ್ಭೈರರ್ಧಾವಲೀಢೈಃ ಶ್ರಮವಿವೃತಮುಖಭ್ರಂಶಿಭಿಃ
ಕೀರ್ಣವರ್ತ್ಮಾ
ಪಶ್ಯೋದಗ್ರಪ್ಲುತತ್ವಾದ್ವಿಯತಿ ಬಹುತರಂ, ಸ್ತೋಕ-
ಮುರ್ವ್ಯಾಂ ಪ್ರಯಾತಿ."

ಎಂಬೀ ಪದ್ಯವನ್ನು ಶಾಸ್ತ್ರಿಗಳು

" ಕೊರಲಂ ತಾಂ ಕೊಂಕುಗೆಯ್ಯುತ್ತಡಿಗಡಿಗೊಡನೈತರ್ಪ
ತೇರಲ್ಲಣಾಂ ನ-
ಚ್ಚಿರೆ ನೋಟಂ ಬಾಣಪಾತಕ್ಕಗಿದಪಕಿಸುತಂ ಪೃಷ್ಠಮಂ
ಮಾರ್ಗದೊಳ್ ತೀ-
ವಿರೆ ನೀಡಂ ಬಿಟ್ಟ ಬಾಯಿಂ ಶ್ರಮದುದಿರ್ವರೆ ಮೆಲ್ದಿರ್ದ
ದರ್ಭಾಂಕುರಂಗಳ್
ಧರೆಯಲ್ಲೋರೊರ್ಮೆ ಕಾಲಿಟ್ಟಹಹ ನಿರುಕಿಸೈ ಬಾನೊಳೇ
ಪಾರಿಪೋಕುಂ "

ಎಂದು ಉಚಿತವಾದ ರೀತಿಯಲ್ಲಿ ಭಾಷಾಂತರಿಸಿದ್ದಾರೆ. ಮೂಲದ ಜೀವಂತಚಿತ್ರವೇ ಇಲ್ಲಿ ಮೈದಾಳಿನಿಂತಂತಿದೆ. ಇದರಂತೆಯೇ

" ಯಾಸ್ಯತ್ಯದ್ಯ ಶಕುಂತಲೇತಿ ಹೃದಯಂ, ಸಂಸ್ಪೃಷ್ಟ-
ಮುತ್ಕಂಠಯಾ
ಕಂಠಸ್ತಂಭಿತ ಬಾಷ್ಪವೃತ್ತಿ ಕಲುಷಶ್ಚಿಂತಾಜಡಂ ದರ್ಶನಮ್
ವೈಕ್ಲವ್ಯಂ ಮಮ ತಾವದೀ ದೃಶಮಹೋ ಸ್ನೇಹಾ-
ದರಣ್ಯೌಕಸಃ
ಪೀಡ್ಯಂತೇ ಗೃಹಿಣಃ ಕಥಂ ನು ತನಯಾ, ವಿಶ್ಲೇಷ
ದುಃಖೈರ್ನವೈಃ "

ಎಂಬ ಮತ್ತೊಂದು ಮೂಲಪದ್ಯವನ್ನು

" ಕಳವಳವಾಂತುದೆನ್ನೆರ್ದೆ ಶಕುಂತಳೆ ಪೋದಪಳೆಂದು
ಕಂಠಮುಂ
ಮ್ಮಾಳಿಸುವುದೊತ್ತು ವಶ್ರುಭರದಿಂ ಜಡಮಾದುದು ದೃಷ್ಟಿ
ಚಿಂತೆಯಿಂ.

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ.

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ

ಬರೆಯಿರಿ :

卐

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ
ಮನೋಹರ { ನೀಲಿ } ಹೇರ್ ಆಯಿಲ್
ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ನುಣುಪಾಗಿ ಬೆಳೆಸುತ್ತದೆ. ಬಾಲನೆರೆಗೆ ಪ್ರತಿಕ್ರಿಯೆ.
ಗರ್ಭಾಶಯಕ್ಕೆ { ಜೀವನಿ } ಟಾನಿಕ್
ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.
ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.
ಸದ್ವೈದ್ಯ ಶಾಲಾ, ನಂಜನಗೂಡು.
' ನಂಜನಗೂಡು ಟೂತ್ ಪೌಡರು ' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರ್ಖಾನೆ.

ದಳಲಿನಿತಾಗೆ ಕಾಡಮನುಜಂಗೆನಗಂ ಕಡುನೇಹದಿಂದಮಿ-
ನ್ನುಳಿದ ಗೃಹಸ್ಥರಾತ್ಮಭವೆಯಂ ಕಳುಪುತ್ತ ಕಟಿಂತಳಲ್ವರೋ!"

ಎಂಬುದಾಗಿ ಭಾಷಾಂತರಿಸಿದ್ದಾರೆ. ಮೂಲದ ಅರ್ಥವೇನೋ ಇಲ್ಲಿ ಬಂದಿದೆ. ಆದರೆ ಮೂಲದಲ್ಲಿಯ "ಅರಣ್ಯೌಕಸಃ" ಎಂಬಲ್ಲಿ ಧ್ವನಿಗೊಡುತ್ತಿರುವ ಅರ್ಥ "ಕಾಡಮನುಜ" ಎಂಬುದರಲ್ಲಿ ಅಷ್ಟು ಸಮುಚಿತವಾಗಿ ಬಂದಿಲ್ಲವೇನೋ ಎಂದೆನ್ನಿಸುತ್ತದೆ. ಆದರಂತೆಯೇ ಪ್ರಸ್ತಾವನೆಯಲ್ಲಿಯ ಕೊನೆಯ ಪದ್ಯವು :—

"ತವಾಸ್ಮಿಗೀತರಾಗೇಣ ಹಾರಿಣಾ ಪ್ರಸಭಂ ಹೃತಃ
ಏಷ ರಾಜೇವ ದುಷ್ಯಂತಃ ಸಾರಂಗೇಣಾತಿರಂಹಸಾ"

ಕನ್ನಡದಲ್ಲಿ :

"ಅಂಗನೆ ಹೃತನಾದೆಂ ಹೃದ
ಯಂಗೊಳ್ವೀ ನಿನ್ನ ಗೀತರಾಗದೊಳೀಗಳ್ ॥
ತುಂಗಜವ ವೇಗಶಾಲಿ ಕು-
ರಂಗದೆ ಹೃತನಾದ ತೆರದೊಳೀ ದುಷ್ಯಂತಂ"

ಈ ರೀತಿಯಾಗಿ ಅನುವಾದಿತವಾಗಿದೆ. ಇಲ್ಲಿ ಮೂಲಪದ್ಯದಲ್ಲಿದ್ದ 'ಸಾರಂಗ'ದ ಅರ್ಥ-ಧ್ವನಿಗಳು ಅನುವಾದಿತ ಪದ್ಯದಲ್ಲಿರುವ "ಕುರಂಗ" ಎಂಬುದರಲ್ಲಿ ಬಂದಿರುವಂತೆ ತೋರುತ್ತಿಲ್ಲ. ಆದರೆ ಅರ್ಥಪರ್ಯಾಯ ಮಾತ್ರ ಇದೆಯೆಂದು ಹೇಳಬಹುದು. 'ಸಾರಂಗ' ಎಂಬುದರಲ್ಲಿ ಸೂಚಿತವಾಗುವ ಧ್ವನ್ಯರ್ಥ—ದ್ವಂದ್ವಾರ್ಥ('ಜಿಗರೆ' ಹಾಗೂ 'ಸಾರಂಗ' ಎಂಬ ರಾಗ) 'ಕುರಂಗ' ಎಂಬ ಶಬ್ದಗುಂಮ್ಮಟದಲ್ಲಿ ಪ್ರತಿಧ್ವನಿಗೈಯುತ್ತಿಲ್ಲವೆಂಬುದಿಲ್ಲ.

ನಾಟಕದಲ್ಲಿ ಮೊದಲನೆಯ ಪದ್ಯವಾದ, ಪ್ರಾರಂಭದಲ್ಲಿ ಬರುವ ಆ ಮಂಗಳಶ್ಲೋಕವು ಮೂಲಕೃತಿಯಲ್ಲಿ :

"ಯಾ ಸೃಷ್ಟಿಃ ಸ್ರಷ್ಟುರಾದ್ಯಾ ವಹತಿ ವಿಧಿಹುತಂ, ಯಾ ಹವಿ-
ರ್ಯಾ ಚ ಹೋತ್ರೀ
ಯೇ ದ್ವೇ ಕಾಲಂ ವಿಧತ್ತಃ ಶ್ರುತಿವಿಷಯಗುಣಾ ಯಾ ಸ್ಥಿತಾ
ವ್ಯಾಪ್ಯ ವಿಶ್ವಮ್
ಯಾಮಾಹುಃ ಸರ್ವಬೀಜಪ್ರಕೃತಿರಿತಿ ಯಯಾ ಪ್ರಾಣಿನಃ
ಪ್ರಾಣವಂತಃ
ಪ್ರತ್ಯಕ್ಷಾಭಿಃ ಪ್ರಪನ್ನಸ್ತನುಭಿರವತು ವಸ್ತಾಭಿರಷ್ಟಾ-
ಭಿರೀಶಃ" ಹೀಗೆ

ಮಾತುಮಾತಿನಲ್ಲಿ 'ಧ್ವನಿ'ಯುಕ್ತವಾಗಿ— ಅರ್ಥವತ್ತಾಗಿ ರೂಪುಗೊಂಡಿದ್ದು ಭಾಷಾಂತರದಲ್ಲಿ :

"ಆವುದು ಧಾತುಸೃಷ್ಟಿಗೆ ಮೊದಲ್ ಹುತಹವ್ಯಮನಾಂಪು
ದಾವುದಿ-
ನ್ನಾವುದು ಹೋತೃ ಶಬ್ದಗುಣಮಾವುದವಾವುವು
ಕಾಲಕರ್ತೃಗಳ್
ಆವುದುಸಿರ್ ಜಗಕ್ಕುಸಿರ್ವರಾವುದ ಭೂತಕುಲ ಪ್ರಧಾನಮೆಂ
ದಾವೊಡಲೆಂಟರಿಂದೆ ಮೆರೆವೀಶನೊಡರ್ಚುಗೆ ನಿಮ್ಮ-
ಭೀಷ್ಟಮಂ" ಎಂಬೀ

ತೆರನಾಗಿ ರೂಪುಗೊಂಡಿದೆ. ಮೂಲಪದ್ಯದ 'ಯಾ ಸೃಷ್ಟಿಃ ಸ್ರಷ್ಟುರಾದ್ಯಾ' ಎಂಬ ಮಾತು ಮೂರು ಬಗೆಯ ಅರ್ಥಗಳನ್ನೊಳಗೊಂಡಿದೆ: (೧) ಅಷ್ಟಪ್ರಕೃತಿಯಲ್ಲಿ ಒಂದು ಅಂಶ—ನೀರು; (೨) ಕಾಳಿದಾಸನ 'ಶಾಕುಂತಲ' ನಾಟಕವು. ಜಗತ್ತಿನಲ್ಲಿ ಮೊದಲು ರೂಪುಗೊಂಡ ಉತ್ತಮ ನಾಟಕವದು; (೩) ಶಕುಂತಲೆಯ ಪಾತ್ರವೂ ಸಾಹಿತ್ಯಸೃಷ್ಟಿಯಲ್ಲಿ ಅತ್ಯುನ್ನತ ಸ್ಥಾನದಲ್ಲಿ ನಿಂತದ್ದು ಎಂಬುದಾಗಿಯೂ ಅರ್ಥವ. ಹೀಗೆ ಮೂರು ಬಗೆಯಿಂದ ಮುಪ್ಪುರಿಗೊಂಡು ನಿಂತ ಅರ್ಥವಿವರಣೆಯು 'ಆವುದು ಧಾತು ಸೃಷ್ಟಿಗೆ ಮೊದಲ್' ಎಂಬ ಮಾತಿನಲ್ಲಿ ಮೂರ್ತಿಮತ್ತಾಗಿ ನಿಂತಿಲ್ಲವೇನೋ ಎಂದೆನ್ನಿಸುತ್ತದೆ.

'ವಿಧಿಹುತಂ ಯಾ ಹವಿಃ' ಎಂಬಲ್ಲಿ ಒಂದು ರೀತಿಯಿಂದ ಶಕುಂತಲೆಯೇ ಆಗಿದ್ದಾಳೆ. ಕಣ್ವಾಶ್ರಮದಲ್ಲಿ ಹಾಗೂ ಮರೀಚಿ-ಕಶ್ಯಪರ ಆಶ್ರಮದಲ್ಲಿ ಪರಿಶುದ್ಧವಾದ ('ವಿಧಿಹುತಂ') ಜೀವ ಅದು ಶಕುಂತಲೆಯದು. 'ವಿಧಿ'ಯ ಧ್ವನ್ಯರ್ಥವೇ ಇಲ್ಲಿ 'ಹುತಹವ್ಯಂ' ಎಂಬ ಮಾತಿನಲ್ಲಿ ಹೊರಡುವುದಿಲ್ಲ.

"ದ್ವೈಕಾಲಃ" ಎಂಬ ಮಾತಿನಲ್ಲಿ ಹುದುಗಿದ ದ್ವಂದ್ವಾರ್ಥ ಸೂರ್ಯ-ಚಂದ್ರರು ಅಲ್ಲದೆ ಅಭ್ಯುದಯ ಮತ್ತು ಅವನತಿ (Fortune and Misfortune) ಸಮುಯದ ವಿವರಣೆ 'ಕಾಲ-ಕರ್ತೃಗಳ್' ಎಂಬಲ್ಲಿ ಹೊರಡುವುದಿಲ್ಲ. ಇಲ್ಲಿ ಮೂಲದಲ್ಲಿಯ 'ದ್ವೈ' (ಎರಡು) ಎಂಬರ್ಥವೇ ಹೊರಡದೆ, ಹಲವು ಎಂಬರ್ಥ ಹೊರಡುತ್ತದೆ....'ಗಳ್' ಪ್ರತ್ಯಯದ ಜೋಡಣೆಯಿಂದ.

'ಸರ್ವ ಬೀಜ ಪ್ರಕೃತಿಃ' ಎಂಬಲ್ಲಿ ಸ್ತ್ರೀಲಿಂಗದ ಅರ್ಥವಿದೆ. 'ಆಕಾಶವೇ ತಂದೆ; ಪೃಥ್ವಿಯೇ ತಾಯಿ' ಎಂಬ ಮಾತಿನ ಧ್ವನಿಯೂ ಇಲ್ಲಿ ಅಡಗಿದೆ. ಸ್ತ್ರೀಯೇ ಪ್ರಕೃತಿ-ಪೃಥ್ವಿ. ಅವಳಿಂದಲೇ ಎಲ್ಲವೂ ಸೃಷ್ಟಿ, ತಾಯ್ತನ ಅವಳ ನೈಸರ್ಗಿಕಗುಣ. ಆದರೆ ಈ ಅರ್ಥವು, ಭಾಷಾಂತರದಲ್ಲಿ ಬಂದು 'ಭೂತಕುಲ ಪ್ರಧಾನ'ದಲ್ಲಿ ಪುಲ್ಲಿಂಗದ ಧ್ವನಿಹೊರಡುವುದರಿಂದ, ಬರುವುದಿಲ್ಲ.

ಕಣ್ವಮುನಿಗಳ ಧರ್ಮಾರಣ್ಯಕ್ಕೆ ಆನೆಯೊಂದು ಓಡಿಬರುತ್ತದೆ ಎಂಬುದನ್ನು ಆಶ್ರಮವಾಸಿಗಳು ಹೇಳುವ ಈ ಪ್ರಸಿದ್ಧ ಪದ್ಯವನ್ನು ನೋಡಬಹುದು:

"ತೀವ್ರಾಘಾತ ಪ್ರತಿಹತ ತರುಸ್ಕಂಧಲಗ್ನೈಕದಂತಃ
ಪಾದಾಕೃಷ್ಟ ವ್ರತತಿ ವಲಯಾ ಸಂಗಸಂಜಾತಪಾಶಃ
ಮೂರ್ತೋ ವಿಘ್ನಸ್ತಪಸ ಇವನೋ ಭಿನ್ನ ಸಾರಂಗಯೂಥಃ
ಧರ್ಮಾರಣ್ಯಂ ಪ್ರವಿಶತಿ ಗಜಃ ಸ್ಯಂದನಾಲೋಕ ಭೀತಃ" ಇದರ

ಭಾಷಾಂತರವು ಬಸವಪ್ಪಶಾಸ್ತ್ರಿಗಳ ಕೃತಿಯಲ್ಲಿ ಹೀಗಿದೆ:

"ಪರವುತ್ತಂ ಪುಲ್ಲೆಗುಂಪಂ ಪದಕೆ ತೊಡರ್ದ ಪೆರ್ಬಳ್ಳಿಗಳ್
ಪಾಶದಂತೊ|
ಪ್ಪಿರೆ ನೊಡಲ್ ಪೊಯ್ಲ ಬಲ್ಪಿಂ ಮುರಿದ ಮರದ
ಪೆರ್ಗೊಂಬಿನೊಳ್ ಕೊಂಬದೊಂದಂ-||
ಟಿರೆ ಧರ್ಮಾರಣ್ಯಮಾರ್ಗಂಬಿಡಿದುರದೆ ತಪೋವಿಘ್ನವೇ
ಮೂರ್ತಿವೆತ್ತಂ|
ತಿರೆ ಸೊರ್ಕಾಂತಾನೆಯೈತಂದಪುದು ನೃಪರಥಾಲೋಕದಿಂ-
ದಂಜುತೀಗಳ್" ||

ಬಸವಪ್ಪಶಾಸ್ತ್ರಿಗಳು ಇಲ್ಲಿ ಹೊಸ ವಿಷಯವಾವುದನ್ನೂ ಸೇರಿಸುವ ಗೋಜಿಗೆ ಹೋಗಿಲ್ಲ. ಮೂಲ ಪದ್ಯದ ಮೊದಲನೆಯ ಸಾಲಿನಲ್ಲಿ ವ್ಯಕ್ತವಾಗುವ ಒಂದರ (ಆನೆಯ) ಗತಿ ಹಾಗೂ ಮಗುದೊಂದರ (ಗಿಡದ) ಸ್ಥಿತಿ ಇವುಗಳ ಸಂಘರ್ಷಣೆ ಮಾತ್ರ ಬಂದಿಲ್ಲ. ಗತಿ ಹಾಗೂ ಸ್ಥಿತಿಗಳ ತಿಕ್ಕಾಟದ ಧ್ವನಿ ಭಾಷಾಂತರದಲ್ಲಿ ಹೊರಡುತ್ತಿರುವುದಿಲ್ಲ. ಹೌದು, ವಿಚಾರದ ರೀತಿಯಲ್ಲಿ ಹಿಡಿತವಿದೆಯೆಂಬುದು ಒಪ್ಪತಕ್ಕ ಮಾತೇ. ಅದರಂತೆ ಮೂಲಪದ್ಯದ ಎರಡನೆಯ ಸಾಲಿನಲ್ಲಿ ಧ್ವನಿಗೊಡುವ ಕ್ಷುದ್ರ-ಕ್ಷುಲ್ಲಕರ ನಾಶ ಕೂಡ (ಕ್ರಿಆ), ಪ್ರಗತಿಪಥದಲ್ಲಿ ಸಾಗುವವರಿಗೆ ಒಂದು ವಿಧದಲ್ಲಿ ಪಾಶವೆಂಬ ಧ್ವನಿ, ಭಾಷಾಂತರದಲ್ಲಿ ಬಂದಿಲ್ಲ. ಸಣ್ಣ ಪದಾರ್ಥಗಳ (ಬಳ್ಳಿಗಳ) ವಿನಾಶವೇ ಮುನ್ನುಗ್ಗುವ ಜೀವಕ್ಕೆ (ಆನೆಯ ಕಾಲಿಗೆ) ಪಾಶವಾಗಿ ನಿಂತಿದೆ. ಆದರೆ ಈ ಪದ್ಯದಲ್ಲಿ ತೋರಿಬರುವ 'ಪೊಯ್ಲ ಬಲ್ಪಿಂ'; 'ಮುರಿದ ಮರದ' ಇವುಗಳಲ್ಲಿ ಕಂಡುಬರುವ ಓಜಸ್ವೀ ರೀತಿ ಮೂಲದಂತೆ ಸ್ಫುಟವಾಗಿದೆ. ಮೂಲದ ಯಥಾವತ್ತಾದ ಚಿತ್ರವಿದೆಯಿಲ್ಲಿ.

ಶಾಕುಂತಲ ನಾಟಕದ ವಿವಿಧ ಪ್ರಕಟಣೆಗಳು ತಲೆಯೆತ್ತಿರುವುದರಿಂದಲೇ ಹೆಚ್ಚಾಗಿ ಈ ರೀತಿಯ ಗೊಂದಲವುಂಟಾಗಿದೆ ಎಂದು ಹೇಳಬಹುದು. ಏನೇ ಇರಲಿ, ಭಾಷಾಂತರಕೃತಿಗೆ ಎಲ್ಲಿಯೂ ಕಪ್ಪು ಬಂದಿಲ್ಲ; ಕೊಂಚ ಕೊರತೆ ಮಾತ್ರ ಕಂಡುಬರುತ್ತವೆ. ಆದರೆ ಅದು ಸಾಮಾನ್ಯವಾಗಿ ಎಲ್ಲ ಅನುವಾದಿತ ಕೃತಿಗಳಲ್ಲಿ ಕಂಡುಬರತಕ್ಕದ್ದೇ ಆಗಿದೆ. ಅಂತೂ ಬಸವಪ್ಪಶಾಸ್ತ್ರಿಗಳು ಕನ್ನಡಕ್ಕೆ ಕೊಟ್ಟ ಶ್ರೇಷ್ಠ ಕಾಣಿಕೆಯಾಗಿದೆ ಅವರ 'ಕರ್ಣಾಟಕ ಶಾಕುಂತಲ ನಾಟಕ'.

'ಬಗನ' ಬಾಲಾಮೃತ

ಮಕ್ಕಳ ಸಧೃಢತೆಗಾಗಿ 'ಬಗನ' ಬಾಲಾಮೃತವನ್ನು ಉಪಯೋಗಿಸಿರಿ.

ಪುಷ್ಟವಾದ ಮಕ್ಕಳ ಯಕೃತ್ ಮತ್ತು ಹೊಟ್ಟೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರಿನ' ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ 'ಟೊನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಉಪಾಸನೆ ಮತ್ತು ವಿಜ್ಞಾನ

(ವೈಚಾರಿಕ ಪ್ರಬಂಧ)

ಡಾ. ಎಂ. ಗೋಪಾಲಕೃಷ್ಣರಾಯರು ' ಕಲಿಯುಗ ' ಸಂಪಾದಕರು

卐

ಜಗತ್ತಿನಲ್ಲಿಯ ಯಾವ ಆಧ್ಯಾತ್ಮಿಕ ಮತ-ಪಂಥಗಳೂ, ಒಂದಿಲ್ಲೊಂದು ಬಗೆಯ ಉಪಾಸನೆಯನ್ನು ಒಪ್ಪಿಕೊಂಡಿವೆ. ಭೌತಿಕ ವಿಜ್ಞಾನ ಇಂತಹ ಉಪಾಸನೆಗಳನ್ನು ಬೀಳುಗಳೆಯುತ್ತಿದೆ. ಹಾಗಾದರೆ ಉಪಾಸನೆಯಲ್ಲಿ ಹುರುಳೇನೂ ಇಲ್ಲವೆ?

卐

ಭಾರತೀಯ ಸನಾತನಿಗಳಲ್ಲಿ ಅನೇಕ ದೇವ-ದೇವತೆಗಳ ಉಪಾಸನೆಗಳು ಬಹು ಪುರಾತನ ಕಾಲದಿಂದಲೂ ಪ್ರಚುರವಾಗಿವೆ. ವಿವಿಧ ಉಪಾಸಕರು ವಿವಿಧ ಧ್ಯೇಯಸಿದ್ಧಿಗಾಗಿ ವಿಶಿಷ್ಟ ದೇವರ ಉಪಾಸನೆಯನ್ನು ಮಾಡುತ್ತಿದ್ದರು. ಮತ್ತು ಏಕಾಗ್ರತೆಯಿಂದ ವಿಧಿಪೂರ್ವಕವಾಗಿ ಮಾಡಿದ ಉಪಾಸನೆಗಳಿಂದ ನಿಶ್ಚಿತವಾಗಿ ಪುರಾತನರು ಇಷ್ಟಪ್ರಾಪ್ತಿಯನ್ನು ಪಡೆಯುತ್ತಿದ್ದರೆಂದು ಪುರಾಣೇತಿಹಾಸಗಳು ಸಾರುತ್ತವೆ. ವಿಧಿವೈವಿಧ್ಯ, ಧ್ಯೇಯವೈವಿಧ್ಯಕ್ಕನುಸರಿಸಿ ಉಪಾಸನೆಗೆ ಯಜ್ಞ, ಹೋಮ, ಹವನ, ವ್ರತ, ಜಪ, ತಪ, ಯೋಗ ಎಂಬ ವಿವಿಧ ಹೆಸರುಗಳೂ ಬಂದಿವೆ.

ವಿಜ್ಞಾನಯುಗವು ಉದಯಿಸಿದಾಗಿನಿಂದ ಭಾರತೀಯರಲ್ಲಿ ಉಪಾಸನಾಸಾಧನದ ವಿಷಯದಲ್ಲಿ, ಆಸ್ಥೆ ಕಡಿಮೆಯಾಗುತ್ತ ಬಂತು. ಭೌತಿಕವಾದ ಒಂದು ಕಾರ್ಯದ ಸಿದ್ಧಿಗಾಗಿ, ನಿಶ್ಚಲವಾಗಿ ಒಂದು ಕಡೆಗೆ ಕೂತು ಉಪಾಸನೆ ಮಾಡುವುದೆಂದರೆ, ಅಮೆರಿಕೆಯಲ್ಲಿಯ ಒಂದು ವೃಕ್ಷವನ್ನು ಬೆಳೆಸಲು ಭಾರತದಲ್ಲಿ ನೀರೆರೆದಂತೆ ಶತಮೂರ್ಖತನವೆಂದು ವಿಜ್ಞಾನಭಕ್ತರು ಹೀಯಾಳಿಸಲಾರಂಭಿಸಿದರು. ' ಮಕ್ಕಳು ಬೇಕಾದರೂ ಉಪಾಸನೆ; ಮಳೆ ಬೇಕಾದರೂ ಉಪಾಸನೆ; ಸಂಪತ್ತು ಬೇಕಾದರೂ ಉಪಾಸನೆ; ಶ್ರೇಯಸ್ಸು ಬೇಕಾದರೂ ಉಪಾಸನೆ !! ಇದಕ್ಕಿಂತ ಹೆಚ್ಚಿನ ಮೂರ್ಖತನ ಬೇರೆ ಇದೆಯೆ?' ಎಂದು ಉಪಾಸಕರನ್ನು ಹಾಸ್ಯಗೈಯ್ಯುವವರು ಅನೇಕರಾಗಿದ್ದಾರೆ.

ಮತ್ತೆ ಆಧುನಿಕ ವಿಜ್ಞಾನದ ತತ್ತ್ವಗಳೂ ತಿಳಿಯದೆ, ಪುರಾತನ ಉಪಾಸನೆಗಳ ತಿರುಳೂ ತಿಳಿಯದೆ, ಹಿಂದಿನದನ್ನು ಬಿಡುವ ಧೈರ್ಯವೂ ಇಲ್ಲದೆ, ಇಂದಿನದನ್ನೇ ನಂಬುವ ಸ್ಥೈರ್ಯವೂ ಇಲ್ಲದೆ ಭಾರತೀಯರು ತ್ರಿಶಂಕುಸ್ಥಿತಿಯಲ್ಲಿ ತತ್ತರಿಸುತ್ತಿರುವುದರಲ್ಲಿ ಆಶ್ಚರ್ಯವೇನು ? ಇಂತಹ ಸಂಕ್ರಾಂತಿಕಾಲದಲ್ಲಿ ಸ್ವಾಭಿಮಾನಿಗಳೂ ಸತ್ಯಪ್ರಿಯರೂ ಆಗಿರುವ ಕೆಲವು ಭಾರತೀಯರು " ಉಪಾಸನೆಯು ನಿಷ್ಪ್ರಯೋಜಕವೇ? ತಮ್ಮ ಇಷ್ಟಸಿದ್ಧಿಗಾಗಿ ಉಪಾಸನೆಗಳನ್ನು ಅವಲಂಬಿಸುತ್ತಿದ್ದ ಸಾಧುಸತ್ಪುರುಷರೆಲ್ಲರೂ ಅಂಧಶ್ರದ್ಧಾಳುಗಳೇ? ಆ ಉಪಾಸನಾವಿಧಾನಗಳಲ್ಲಿ ನಿಜವಾಗಿಯೂ ಏನಾದರೂ ತಥ್ಯವಿದ್ದರೆ ಈಗಲೂ ಅವು ಫಲದಾಯಿಯಾಗಬೇಕಲ್ಲವೇ? " ಎಂದು ಪ್ರಶ್ನೆಗಳ ಮಳೆಯನ್ನೆ ಸುರಿಸುವರು. ಕೆಲವರು ಇನ್ನೂ ಸ್ಪಷ್ಟವಾಗಿ ' ಉಪಾಸನೆಯಿಂದ ಬಡತನ ನೀಗುವುದೇ ? ಉಪಾಸನೆಯಿಂದ ರೋಗ ಪರಿಹಾರವಾಗುವುದೇ ? ಉಪಾಸನೆಯಿಂದ ಯುದ್ಧವನ್ನು ಗೆಲ್ಲಬಹುದೇ ? ' ಎಂದೂ ಕೇಳುವರು. ಮತ್ತೆ ಭಾರತೀಯ ಪುರಾತನ ಸಾಧನ, ಸಂಸ್ಕೃತಿಗಳನ್ನು ಉಳಿಸಿಕೊಳ್ಳುವ ಮತ್ತು ಅವನ್ನು ವಿಶಾಲವಿಶ್ವದಲ್ಲಿ ಬೆಳಗುವ ಹಟವುಳ್ಳವರು, ಮೇಲ್ಕಂಡ ಪ್ರಶ್ನೆಗಳಿಗೆ ಸಪ್ರಮಾಣವಾದ ಉತ್ತರವನ್ನು ಕೊಡಲೇಬೇಕು.

ಆ ಪ್ರಶ್ನೆಗಳಿಗೆ ಉತ್ತರ ಕೊಡಲು ಯತ್ನಿಸುವ ಮೊದಲು ಅಂತಹ ಉಪಾಸಕರು ಈಗ ಯಾರಾದರೂ ಇರುವರೇ ? ಇದ್ದರೆ ಅವರು ತಮ್ಮ ಉಪಾಸನಾಬಲದಿಂದ ಪ್ರತ್ಯಕ್ಷವಾದ ಘಟನೆಗಳನ್ನು ಮಾಡಿ ತೋರಿಸುತ್ತಿರುವರೇ ? ಎಂಬುದನ್ನು ನೋಡಿಕೊಳ್ಳುವುದು ಒಳಿತು. ಇಪ್ಪತ್ತನೆಯ ಶತಮಾನದ ಭಾರತೀಯ ಗಣ್ಯ ಯೋಗಿಗಳಲ್ಲಿ ಒಬ್ಬರಾಗಿದ್ದ ಅಂತರರಾಷ್ಟ್ರೀಯ ಕೀರ್ತಿಶಾಲಿಗಳಾಗಿದ್ದ ದಿವಂಗತ ಪಂಡಿತ ತಾರಾನಾಥರಾಯರು ಒಳ್ಳೇ ಪ್ರಭಾವಿಯಾದ ಸೂರ್ಯೋಪಾಸಕರಾಗಿದ್ದರು. ಅವರು ತಮ್ಮ ಉಪಾಸನಾಬಲದಿಂದ ಮಧುಮೇಹ, ಬಿಳುಪು (ಶ್ವೇತಕುಷ್ಠ), ಉನ್ಮಾದಗಳನ್ನು ಗುಣಪಡಿಸುತ್ತಿದ್ದುದನ್ನು ಪ್ರತ್ಯಕ್ಷವಾಗಿ ನೋಡಿದವರು ನಾವು ಲಕ್ಷಾವಧಿ ಜನರಿದ್ದೇವೆ. ಅಮೆರಿಕೆಯಲ್ಲಿ ಯೋಗಶಾಲೆಯನ್ನು ನಡೆಯಿಸುತ್ತಿದ್ದ ಶ್ರೀಯೋಗೇಂದ್ರರು ಉಪಾಸನಾಬಲದಿಂದ ತಮ್ಮ ಶರೀರದ ಬೇಕಾದ ಅವಯವವನ್ನೂ ಇಚ್ಛಾನುಸಾರ ನಿಷ್ಕ್ರಿಯಗೊಳಿಸುತ, ಮುಮ್ಮಡಿ ಆಕಾರಕ್ಕೆ ಹಿಗ್ಗಿಸುವ ಮತ್ತು

ಕುಗ್ಗಿಸುವ ಪ್ರಯೋಗಗಳನ್ನು ಮಾಡಿ ತೋರಿಸುತ್ತಿದ್ದರು. ಅಂತಹ ಪ್ರಯೋಗಗಳ ವೈಜ್ಞಾನಿಕತೆಯನ್ನು ಮನಗಂಡು, ಕ್ಯಾಲಿಫೋರ್ನಿಯದ ಸರ್ಜನ್ ಡಾಕ್ಟರ್ ಜಾನ್ ಫಾಕ್ಸ್ ಅವರು, ಯೋಗೇಂದ್ರರ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದಿದ್ದಾರೆ. ಇಂಗ್ಲಂಡಿನ ಡಾಕ್ಟರ್ ಕರ್ನರ್ ಎಂಬವರು, ಒಬ್ಬ ಯೋಗಿಯೊಡನೆ ಹಿಮಾಲಯದಲ್ಲಿ ಪ್ರವಾಸಿಸುತ್ತಿರುವಾಗ, ಆ ಯೋಗಿಯು ತನ್ನ ಉಪಾಸನಾಬಲದಿಂದ, ಹೂಗಳಿಂದ ಪ್ರಫುಲ್ಲವಾದ ಒಂದು ಗಿಡವನ್ನು ಕ್ಷಣಮಾತ್ರದಲ್ಲಿ ಕಮರಿಸಿ ತೋರಿಸಿದನೆಂದೂ, ಒಂದು ಮನುಷ್ಯಶವವನ್ನು ಒಂದೆರಡು ನಿಮಿಷಗಳ ಮಟ್ಟಿಗೆ ಮಾತ್ರ ಉಜ್ಜೀವಿಸಿದನೆಂದೂ 'ಸ್ವರಾಜ್ಯ' ಪತ್ರಿಕೆಯಲ್ಲಿ ವಾರ್ತೆಯನ್ನು ಲಕ್ಷಾವಧಿ ಜನರು ಓದಿರಬಹುದಷ್ಟೆ! ಪಾಶ್ಚಾತ್ಯ ದೇಶಗಳಲ್ಲಿ ಮೋಹಿನೀ ಮತ್ತು ಆಕರ್ಷಣವಿದ್ಯೆ (ಹಿಪ್ನಾಟಿಜಂ ಮತ್ತು ಮ್ಯಾಗ್ನೆಟಿಜಂ) ಗಳಿಂದ ಅದ್ಭುತವಾಗಿ ರೋಗಚಿಕಿತ್ಸೆಗಳನ್ನು ನಡೆಸುವಲ್ಲಿ ಗೆಲವನ್ನು ಪಡೆಯುತ್ತಿದ್ದಾರೆ. ಭಾರತದಲ್ಲಿ ಮಂತ್ರಚಿಕಿತ್ಸೆಯಿಂದ ಚೇಳಿನ, ಹಾವಿನ ವಿಷಗಳನ್ನು ಇಳಿಸುವವರಿದ್ದಾರೆ. ಪಂಡಿತ ತಾರಾನಾಥರಾಯರು, ಚೇಳುಕಡಿಸಿಕೊಂಡ ನೂರಾರು ಜನರಿಗೆ ಮಂತ್ರದಿಂದ ಗುಣಪಡಿಸಿದುದನ್ನು ನಾವು ನೋಡಿದ್ದೇವೆ. ಚಳಿಜ್ವರದಲ್ಲಿ ಮಂತ್ರದಿಂದ ಖರೆ ಚಳಿಯನ್ನು ಪರಿಹರಿಸಿದುದನ್ನು ನಾವು ಕಂಡಿದ್ದೇವೆ. (ಮಂತ್ರದಿಂದ ಜ್ವರ ಪರಿಹಾರವಾದುದನ್ನು ನಾವಿನ್ನೂ ನೋಡಿಲ್ಲ.)

ಮೇಲ್ಕಂಡ ಹಲವು ನಿದರ್ಶನಗಳಿಂದ ಒಂದು ಸಂಗತಿಯು ಮನವರಿಕೆಯಾಗುವುದು: ಅದೆಂದರೆ, ದೃಶ್ಯವಸ್ತುಗಳ ಸಹಾಯವಿಲ್ಲದೆ ಉಪಾಸನಾಬಲದಿಂದಲೆ ಶರೀರದ ರೋಗ-ರುಜಿನಗಳ ನಿರೋಧ ನಿವಾರಣೆಗಳೂ, ಭೌತಿಕವಸ್ತುಗಳ ಉತ್ತೇಜನ ನಾಶಗಳೂ ಆಗುವುದು ಸಾಧ್ಯವಿದೆ ಎಂಬುದಾಗಿದೆ. ಇಂತಹ ನಿದರ್ಶನಗಳನ್ನು ಕಟ್ಟುಕಥೆಯೆಂದೂ ಹುಸಿಬುರುಡೆಯೆಂದೂ ವಿಜ್ಞಾನಭಕ್ತರು ಹಾಸ್ಯಮಾಡುತ್ತಿದ್ದ ಕಾಲವೊಂದಿತ್ತು. ಆದರೆ, ಪ್ರಾಮಾಣಿಕರಾದ ವಿಜ್ಞಾನಿಗಳಿಗೆ ತಮ್ಮ ಭೌತಶಾಸ್ತ್ರಗಳ ದೃಷ್ಟಿಗೆ ನಿಲುಕದ ಕೆಲವು ಅದ್ಭುತಗಳು ಜಗತ್ತಿನಲ್ಲಿ ನಡೆಯುತ್ತಿವೆಯೆಂದೂ ಮನುಷ್ಯನಲ್ಲಿಯು ಅನೇಕ ಸುಪ್ತಶಕ್ತಿಗಳ ಅರಿವು ತಮಗಿನ್ನೂ ಆಗಿಲ್ಲವೆಂದೂ ಗೊತ್ತಾಗಿದೆ.

ಆಧುನಿಕ ವಿಜ್ಞಾನದ ಆಕಲನಶಕ್ತಿಗೆ ಮೀರಿ ನಡೆದ ಕೆಲವು ಸಂಗತಿಗಳನ್ನು 'ಆರ್ಮ್ ಚೇರ್ ಸೈನ್ಸ್' ಎಂಬ ವೈಜ್ಞಾನಿಕ ಪತ್ರಿಕೆಯಲ್ಲಿ ಹೀಗೆ ವರ್ಣಿಸಲಾಗಿದೆ:—ತಿಬೇಟಿನ ಒಂದು ಗುಪ್ತಭಾಗದಲ್ಲಿ, ಒಂದು ಸಂನ್ಯಾಸಿಗಳ (ಲಾಮಾಗಳ) ಮಂದಿರವಿದೆ. ಅಲ್ಲಿಯ ಸಂನ್ಯಾಸಿಗಳು, ತಮಗೆ ಬೇಡವಾದವರು ಯಾರಾದರೂ ಆ ಮಂದಿರಕ್ಕೆ ಬರುತ್ತಿರುವುದನ್ನು ಕಂಡರೆ, ಕೂಡಲೆ ಅವರನ್ನು ನಾಶಪಡಿಸುವ ಒಂದು ಉಪಾಯವನ್ನು ಮಾಡಿದ್ದಾರೆ. ಅಲ್ಲಿ ದ್ವಾರಪಾಲನಕ್ಕೆ ನಿಂತ ಸಂನ್ಯಾಸಿಯು, ಒಂದು ವಿಚಿತ್ರವಾದ ಧ್ವನಿಯನ್ನು ಹೊರಡಿಸುವನು. ಅದು ಪರ್ವತಪ್ರದೇಶದಲ್ಲಿ ಭಯಂಕರವಾದ ಪ್ರತಿಧ್ವನಿ ಮತ್ತು ವಾತಾವರಣದಲ್ಲಿ ತೀಕ್ಷ್ಣವಾದ ಸ್ಪಂದನವನ್ನು ಹುಟ್ಟಿಸಿ, ಆ ಬೇಡವಾದ ವ್ಯಕ್ತಿಯನ್ನು ಕೊಂದು ಬಿಡುತ್ತದೆ.

ಒರಟಾದ ಮತ್ತು ತೊಡಕು ತೊಡಕಾದ ಶಬ್ದಸಮುಚ್ಚಯಗಳಿಂದ, ಒಬ್ಬನನ್ನು ಹುಚ್ಚನನ್ನಾಗಿ ಮಾಡಬಹುದು. ಆ ಶಬ್ದಗಳನ್ನು ಅತಿ ತೀವ್ರವಾದ ಸ್ಪಂದನಗಳಿಂದ ಉಚ್ಚರಿಸಿದರೆ, ಮರಣವೂ ಸಂಭವಿಸುವುದೆಂದು ಕಂಡುಬಂದಿದೆ.

ಅತ್ಯಂತ ಗಟ್ಟಿ ಮತ್ತು ಬಿರುಸಾದ ದಪ್ಪವಾದ ಉಕ್ಕು ಕೂಡ ಅತಿ ಸೂಕ್ಷ್ಮವಾದ ಸ್ಪಂದನಗಳನ್ನು ವಿಶಿಷ್ಟ ಕ್ರಮದಲ್ಲಿ ಕೆರಳಿಸಿದರೆ ಪುಡಿಪುಡಿಯಾಗಿ ಬೀಳುವುದು. ಪಿಕ್ರಿಕ್ ಆ್ಯಸಿಡ್ ಮತ್ತು ನೈಟ್ರೊಗ್ಲಿಸರಿನ್ ಪ್ರಕ್ಷೇಪಣದಿಂದ ಉಂಟಾದ ಧ್ವನಿಯಿಂದ, ಗುಡ್ಡಗಾತ್ರದ ವಸ್ತುಗಳನ್ನು ಮುರಿಯಬಹುದೆಂದು ಈಗ ವಿಜ್ಞಾನಕ್ಕೆ ತೋರಿಬರುತ್ತಿದೆ. ಇಂತಹ ಅದ್ಭುತವಾದ ಪ್ರಕ್ಷೇಪಣ, ಸ್ಪಂದನಗಳಿಂದ ಕೆಲವು ವಿಧದ ಕಿರಣಗಳು ಪ್ರಜ್ವಲಿಸಿ, ಅವುಗಳಿಂದ ಪ್ರಾಣಿಗಳು ಸತ್ತು ಹೋಗಬಹುದು. ಈ ಜ್ಞಾನದ ಉಪಯೋಗದಿಂದ ಯುದ್ಧದಲ್ಲಿ ಮಾರಣರಶ್ಮಿಗಳನ್ನು ಬೀರುವ ಪ್ರಯತ್ನಕ್ಕೂ ವಿಜ್ಞಾನಿಗಳು ಕೈಹಾಕಿದ್ದಾರೆ.

ಎರಡನೆಯ ಮಹಾಯುದ್ಧದ ಪ್ರಾರಂಭದ ಪೂರ್ವದಲ್ಲಿ (೧೯೩೮ರ ಮಾರ್ಚನಲ್ಲಿ) ಅಟ್ಲಾಂಟಿಕ ಮಹಾಸಾಗರದಲ್ಲಿ 'ಆ್ಯಂಗ್ಲೊ ಆಸ್ಟ್ರೇಲಿಯನ್' ಎಂಬ ಬ್ರಿಟಿಶರ ಹಡಗು ಅದೃಶ್ಯವಾಗಿ ಬಿಟ್ಟಿತು. ಅದರಲ್ಲಿ ಎರಡು ರೇಡಿಯೊ ಟ್ರಾನ್ಸ್‌ಮೀಟರ್ ಇದ್ದು, ೩೮ ಜನರೂ ಇದ್ದರು. ಹಡಗು ಗಟ್ಟಿಮುಟ್ಟಾಗಿತ್ತು. ಮಹಾಸಾಗರವೂ ಶಾಂತವಾಗಿತ್ತು. ಅಪಘಾತವಾಗಿದ್ದರೆ ಅದರಲ್ಲಿಯ ಜನರು ಕೂಡಲೆ ರೇಡಿಯೊದಿಂದ ತಿಳಿಸಬಹುದಾಗಿತ್ತು. ಸಾಗರವನ್ನೆಲ್ಲ ಸುತ್ತಾಡಿ ಹುಡುಕಿದರೂ ಅದು ಸಿಕ್ಕಲಿಲ್ಲ.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಮೇಧಾವಿಗಳಾದ ವಿಜ್ಞಾನಿಗಳು, ಅದರ ಅದೃಶ್ಯತೆಗೆ ಪರಮಾವಧಿ ಸ್ಪಂದನದ ಕಾರಣವನ್ನೆ ಅನ್ವಯಿಸಬೇಕೆಂದು ಈಗ ಒಪ್ಪುತ್ತಿದಾರೆ. ಹಡಗಿನ ದೇಹದಲ್ಲಿಯ ಸ್ಪಂದನ ಮತ್ತು ಸಾಗರದ ಅಲೆಗಳಲ್ಲಿಯ ಸ್ಪಂದನವು ಪರಸ್ಪರಪೂರಕವಾಗಿ ಒನ್ಮ್ಮೆಲೆ ತೀವ್ರ ಪರಮಾವಧಿ ಸ್ಪಂದನವು ಕೆರಳಿ, ಹಡಗು ಭಸ್ಮೀಭೂತವಾಗಿರಬೇಕೆಂದು ಅವರು ಕಲ್ಪಿಸಿದ್ದಾರ.

(ಆರ್ಟ್ ಚೇರ್ ಸ್ಟೇನ್ಸ್ ೧೯೬೯ ಜನೆವರಿ).

ಇಂತಹ ವಿಚಿತ್ರ ಸ್ಪಂದನಗಳು ಪ್ರಕೃತಿಯಲ್ಲಿ, ವಿಜ್ಞಾನಕ್ಕಿನ್ನೂ ತಿಳಿಯದ ಯಾವುದೋ ನಿಯಮಗಳಿಗನುಸರಿಸಿ, ಸಂಭವಿಸುತ್ತಿ-ರುತ್ತವೆಂದು ಪ್ರಸಿದ್ಧ ವಿಜ್ಞಾನಿಯಾದ ಆರ್ಥರ್ ಫ್ಯಾನ್ಸರ್ ಹೇಳುತ್ತಾನೆ. ಆ ವಿಚಿತ್ರ ನಿಯಮಗಳು ಭಾರತೀಯ ಪುರಾತನ ಮಂತ್ರದ್ರಷ್ಟಾರರಿಗೆ ತಿಳಿದಿದ್ದವೆಂದು ಹೇಳಲು ಅಡ್ಡಿಯೇನು ? ಮಂತ್ರಗಳನ್ನು ವಿಶಿಷ್ಟ ರೀತಿಯಿಂದ ಪಠಿಸಿದರೆ, ಅಥವಾ ಸ್ಮರಿಸಿದರೆ ಅಥವಾ ಚಿತ್ತವನ್ನು ಶರೀರದ ವಿವಿಧ ಕೇಂದ್ರಗಳಲ್ಲಿ ಏಕಾಗ್ರ. ಗೊಳಿಸಿದರೆ ಅಥವಾ ವಿಶಿಷ್ಟ ಯೋಗಾಸನಗಳಿಂದ ಶರೀರದ ವಿಶಿಷ್ಟ ನರಗುಚ್ಛಗಳಲ್ಲಿ ಒತ್ತಡ ತರುವುದರಿಂದ ತನುಮನಗಳಲ್ಲಿ ಪ್ರಬಲವಾದ ಸ್ಪಂದನಗಳನ್ನು ಉತ್ಪಾದಿಸಬಹುದು. ನಾಭಿನಾಡ್ಯಾಂ ಕಾಯವ್ಯೂಹಜ್ಞಾನಂ । ಕೂರ್ಮನಾಡ್ಯಾಂ ಸ್ಥೈರ್ಯಮ್ (ಪಾತಂಜಲ ಯೋಗಸೂತ್ರ). ಅಲ್ಲದೆ ಆ ಅಂತಃಸ್ಪಂದನಗಳಿಂದ ಬಾಹ್ಯ ವಾತಾವರಣದಲ್ಲಿಯ ಸ್ಪಂದನಗಳನ್ನೂ ಮಾರ್ಪಡಿಸಬಹುದೆಂದು ಪುರಾತನರು ಅನುಭವದಿಂದ ಮನಗಂಡಿರಲೇಬೇಕು.

ನೋಬೆಲ್ ಬಹುಮಾನವನ್ನು ಪಡೆದ ಅಲೆಕ್ಸಿಸ್ ಕ್ಯಾರೆಲ್ ನಂತಹ ವಿಚಾರಿಗಳು, 'ಮನುಷ್ಯನ ತೀವ್ರವಾದ ವಿಚಾರತರಂಗಗಳು ವಿಶ್ವದ ವಾತಾವರಣದಲ್ಲಿಯ ಸ್ಪಂದನಗಳನ್ನೂ ಪ್ರಕ್ಷೋಭ-ಗೊಳಿಸಬಲ್ಲವು' ಎನ್ನುತ್ತಾನೆ. ಸ್ವಾಮಿ ವಿವೇಕಾನಂದರು, 'ನಮ್ಮ ನಿಷ್ಠೆಯ ವಿಚಾರಗಳಾವವೂ ನಾಶವಾಗವು; ಮನುಷ್ಯನು ಅಳಿದರೂ ಅವನ ನಿಷ್ಠಾತರಂಗಗಳು ವಿಶ್ವಸ್ಪಂದನಗಳನ್ನೆಲ್ಲ ಕಲಕಿ ಬೇರೊಬ್ಬ ನಿಷ್ಠಾವಂತನಲ್ಲಿ ಪ್ರಕಟವಾಗಿಯೇ ತೀರುವವು ' ಎಂದಿದ್ದಾರೆ. ಮನುಷ್ಯನ ವಿಭೂತಿತ್ವವು ವಿಶ್ವವನ್ನೇ ತನ್ನಲ್ಲಿ ಕೇಂದ್ರೀಕರಿಸಬಲ್ಲದೆಂದು ತತ್ತ್ವಜ್ಞಾನಿ ಜೆ ಎಸ್. ಹಾಲ್ಡೇನರು ಹೇಳುತ್ತಾರೆ. ಸಾರಾಂಶವೇನೆಂದರೆ : ಮನುಷ್ಯನೆಂದರೆ ಪ್ರತಿಯೊಬ್ಬನೂ ತನ್ನ ದೇಹದುರ್ಗದಲ್ಲಿ ಬಂಧಿಸಲ್ಪಟ್ಟ ಜೀವಿಯಲ್ಲ. ಆದರೆ ಅವನು ಸೂಕ್ಷ್ಮ ಶರೀರದಲ್ಲಿಯ ನಾಡೀತಂತುಗಳ ಮೂಲಕ, ಕ್ಷಣ-ಕ್ಷಣಕ್ಕೂ ವಿಶ್ವವಾತಾವರಣದಲ್ಲಿ ಕೆರಳುವ ಸ್ಪಂದನಗಳ ಆದಾನ ಪ್ರದಾನ ಮಾಡಬಲ್ಲ ವಸುಧೈವ ಕುಟುಂಬಿಯೇ ಆಗಿದ್ದಾನೆ. ಆಧುನಿಕ ವಿಜ್ಞಾನ ಸಮ್ರಾಟರಾದ ಐನ್‌ಸ್ಟೀನ್‌ರ ಸಂಬಂಧವಾದ (ರಿಲೇಟಿವಿಟಿ)ವೂ ಅದೇ ವಿಶ್ವಸಂಬಂಧದ ಸನಾತನ ತತ್ತ್ವವನ್ನೆ ಪುಷ್ಟೀಕರಿಸುತ್ತದೆ.

ಮತ್ತೆ ಉಪಾಸನೆ ಎಂದರಾದರೂ ಏನು ? ಶಬ್ದಶಃ ಉಪ-ಆಸ ಎಂದರೆ ' ಸಾನ್ನಿಧ್ಯ ' ಎಂದರ್ಥವಾಗುವುದು. ಯಾವಾಗಲೂ ಧ್ಯೇಯದ ಸಾನ್ನಿಧ್ಯದಲ್ಲಿಯೇ ಇರುವುದಕ್ಕೇ ನಿಜವಾದ ಉಪಾಸನೆ ಎಂದು ಅನ್ವರ್ಥಕವಾದ ಹೆಸರು. ಸಾಧಕರು ಪ್ರಾಥಮಿಕಾವಸ್ಥೆಯಲ್ಲಿ ಧ್ಯೇಯದಲ್ಲಿ ಚಿತ್ತವನ್ನು ಕೇಂದ್ರೀಕರಿಸಲಾರರೆಂದು ಉಪಾಸನೆಯಲ್ಲಿ ಕೆಲವು ಮಂತ್ರಗಳ ಪಠನವನ್ನೋ—ವಿಶಿಷ್ಟ ರೀತಿಯಿಂದ ತಂತ್ರಶಾಸ್ತ್ರಕ್ಕನುಸರಿಸಿ ಅಂಗವಿನ್ಯಾಸ, ಆಸನಗಳನ್ನೋ ಮಾಡಬೇಕಾಗುವುದು. ಅವೆಲ್ಲವುಗಳ ಗುರಿ ಒಂದೇ : ಧ್ಯೇಯ ಸ್ಮರಣ ಮತ್ತು ಮನಸಾ ಧ್ಯೇಯಸಾನ್ನಿಧ್ಯವೇ ಆಗಿದೆ.

ಹೀಗೆ ಮನಸ್ಸನ್ನು ಧ್ಯೇಯವಿಚಾರಗಳಿಂದ ಪರಮಾವಧಿ ಸ್ಪಂದನಗೊಳಿಸಿದಾಗ ಆ ಸ್ಪಂದನವು ಮೊದಲು ಸಾಧಕನ ತನು-ಮನಗಳನ್ನು ಶುದ್ಧೀಕರಿಸುವುದು. ಶರೀರದಲ್ಲಿಯ ರಾಸಾಯನಿಕ ಸ್ಥಿತಿಯೆ ಧ್ಯೇಯ ವಿಚಾರಗಳಿಂದ ಪರಿವರ್ತನಗೊಳ್ಳುತ್ತದೆ. ತತ್ತ್ವ-ಜ್ಞಾನಿ ಜೇಮ್ಸ್ ಜೀನ್ಸ್‌ರ Thoughts are Things ಎಂದರೆ, ವಿಚಾರಗಳು ಕೂಡ ಭೌತಿಕ ವಸ್ತುಗಳಂತೆ, ಪ್ರಕೃತಿಯ ಮೇಲೆ ಪರಿಣಾಮ ಮಾಡುವವೆಂಬ ಮಾತೂ ಭಾರತೀಯ ಪುರಾತನ 'ಯೋಯಚ್ಛ್ರದ್ಧಃ ಸಏವಸಃ' ಎಂಬ ಮಾತೂ ಒಂದೇ ಅರ್ಥವುಳ್ಳವುಗಳಾಗಿವೆ. Virtue and vice are the products o blood-chemistry ಎಂದರೆ ಸದ್ಗುಣ-ದುರ್ಗುಣಗಳು ರಕ್ತದ ರಾಸಾಯನಿಕ ಸ್ಥಿತಿಯ ಪರಿಣಾಮಗಳಾಗಿವೆ ಎಂದು ಡಾ। ಸಿಗ್‌ವಿಾಸ್ಟರ್ ಹೇಳುತ್ತಾರೆ.

ಮೇಲಿನ ವಿವೇಚನೆಯನ್ನೆಲ್ಲ ಒಪ್ಪಿದರೆ, ಉಪಾಸನೆಯಿಂದ ಬಾಹ್ಯ ಜಗತ್ತಿನಲ್ಲಿಯೂ ಕ್ರಾಂತಿಯನ್ನುಂಟು ಮಾಡಬಹುದೆಂದು ಒಪ್ಪಲೆಬೇಕು. ಹಾಗಾದರೆ ಉಪಾಸನೆಯಿಂದ ಬಡತನವೇಕೆ ನೀಗಬಾರದು ? ರೋಗವೇಕೆ ಪರಿಹಾರವಾಗಬಾರದು? ಯುದ್ಧಸ್ತಂಭವೇಕಾಗಬಾರದು ? ನಿಷ್ಠೆಯಿಂದ ಅನುಸರಿಸಿದರೆ ಆಗಲೇಬೇಕೆಂದು ಶ್ರೀಅರವಿಂದರ ವಾಣಿಯಿದೆ.

ದೃಷ್ಟಿಯ ಆಚೆ ಅಥವಾ ವಿಜ್ಞಾನದ ಈಚೆ

(ಸಮಸ್ಯಾತ್ಮಕ ಸಣ್ಣಕತೆ)

ಶ್ರೀಮತಿ ಸುಶೀಲಾ ಕೊಪ್ಪರ, ಜಯಪೂರ

卐

ಸನಾತನ ಸಾಂಪ್ರದಾಯಿಕರೆದುರು ಇಂದು ವಿಜ್ಞಾನ ಎಂತೆಂತಹ ವಿಚಿತ್ರ
ಸಮಸ್ಯೆಗಳನ್ನು ತಂದೊಡ್ಡುತ್ತದೆ? ನಾರಾಯಣರಾಯರ ಮಗಳೇ
ಆದ ಸುಲೋಚನೆಯು ಸೊಸೆಯಾಗಿ ಬರಲು ನಿಂತುದು,
ಸಾಂಪ್ರದಾಯಿಕ ಮನಸ್ಸಿನ ಮೇಲೆ ಎಂತಹ ಏಟು!

卐

ಡಾಕ್ಟರ್ ಮಾಧವರಾಯರ ಕಾರು, ಸಪ್ಪಳವಿಲ್ಲದೆಯೇ ಅವರ ಆಸ್ಪತ್ರೆಯ ವಿಶಾಲವಾದ ಆವಾರದಲ್ಲಿ ನಿಂತೊಡನೆ, ಆಸ್ಪತ್ರೆಯ ವಾತಾವರಣವೆಲ್ಲ ಕೂಡಲೆ ಗಂಭೀರವಾಯಿತು. ಆಳು ಓಡುತ್ತ ಬಂದು ಮಿಲಿಟರಿ ಸಲಾಮು ಹೊಡೆದು, ಕಾರಿನ ಬಾಗಿಲನ್ನು ತೆರೆದ. ಡಾಕ್ಟರು ತಮ್ಮ ಸ್ಟೆಥೊಸ್ಕೊಪಿನ ಪುಟ್ಟ ತೊಗಲಿನ ಪಾಕಿಟನ್ನು ಕೈಯಲ್ಲಿ ಹಿಡಿದುಕೊಂಡು, ಆಸ್ಪತ್ರೆಯ ಪಾವಟಿಗೆಗಳನ್ನು ಏರುವಾಗ, ಆಸಿಸ್ಟಂಟ್ ಡಾಕ್ಟರರೊಡನೆ ಅಕಾರಣವಾಗಿ ಹಲ್ಲು ಕಿರಿಯುತ್ತಿರುವ ನರ್ಸ್ ಒಮ್ಮೆಲೆ ಗಂಭೀರಳಾಗಿ, ಕೆಲಸದ ವಿಷಯವಾಗಿ ಮಾತನಾಡುವವರಂತೆ ನಟಿಸಿದಳು. 'ಈ ಸ್ಟೆಥೊಸ್ಕೋಪಿನಿಂದ ನಿಮ್ಮ ಹೃದಯದ ಆಳವನ್ನೂ ಅಳೆಯಬಲ್ಲೆ' ಎಂಬಂತೆಯೋ ಏನೋ—ಅವರಿಬ್ಬರ ಕಡೆಗೊಮ್ಮೆ ನೋಡಿ ಡಾಕ್ಟರರು, ತಮ್ಮ ಕೈಯಲ್ಲಿಯ ಆ ಪಾಕೀಟನ್ನು ಬಗಲಲ್ಲಿಟ್ಟು, ತಮ್ಮ ತಲೆಯ ಮೇಲಿನ ಹ್ಯಾಟು ಕೈಯಲ್ಲಿ ಹಿಡಿದುಕೊಂಡು, ನೇರವಾಗಿ ತಮ್ಮ ಕೋಣೆಗೆ ಸಾಗಿದರು.

ಸಲಾಮು ಹೊಡೆದ ಆಳು ಅವರ ಖುರ್ಚಿಯ ಹಿಂದೆ ಇದ್ದ ಸ್ವಿಚ್ಚಿನಿಂದ ಫ್ಯಾನು ತಿರುಗಿಸಿದ. ಫ್ಯಾನು ಜೋರಾಗಿ ತಿರುಗಿದೊಡನೆ ನುಣುಪಾಗಿ ಬಾಚಿದ ಡಾಕ್ಟರ್‌ಸಾಹೇಬರ ಕೂದಲುಗಳು ಸ್ವಲ್ಪವೇ ಅಲುಗಾಡ ಹತ್ತಿದುವು. ಆ ಅಲುಗಾಟವೆಂದರೆ ಕರಿ ಮತ್ತು ಬಿಳಿ ಕೂದಲುಗಳ ತುಮುಲಯುದ್ಧದಂತೆಯೇ— ನೋಡುವವರಿಗೆ— ಕಾಣಿಸುತ್ತಿತ್ತು. ಕರಿ ಕೂದಲುಗಳು 'ತಾವು ಡಾಕ್ಟರಸಾಹೇಬರ ಸೌಂದರ್ಯದ ರಾಶಿ; ಡಾಕ್ಟರರ ಕೀರ್ತಿ ಧನ ಎಲ್ಲವೂ ತಮ್ಮಿಂದಲೇ ದೊರೆತದ್ದು!' ಎಂದು ಸಾಧಿಸುತ್ತಿದ್ದರೆ, ಬಿಳಿ ಕೂದಲುಗಳು 'ತಾವು ಡಾಕ್ಟರರ ಅನುಭವದ ನಿಶಾನೆ' ಎಂದು ಜಂಬಕೊಚ್ಚುತ್ತಿದ್ದುವು. ಈ ಯುದ್ಧವು ಡಾಕ್ಟರಸಾಹೇಬರಿಗೆ ಗೊತ್ತಿಲ್ಲದೆಯೇ ಸಾಗಿತ್ತು. ಅವರು ನಿಧಾನವಾಗಿ ತಮ್ಮ ಮೇಜಿನ ಮೇಲಿದ್ದ ಕಾಗದ ಪತ್ರಗಳನ್ನು ನೋಡಿ ಆಚೆಗೆ ಸರಿಸಿ, ಬದಿಗಿದ್ದ ಒಂದು 'ಎಕ್ಸರೇ' ಪಟವನ್ನು ನಿರೀಕ್ಷಿಸುವುದಕ್ಕಾಗಿ ಕೈಯಲ್ಲಿ ತೆಗೆದುಕೊಂಡರು. ಅಷ್ಟರಲ್ಲಿ ಆಳು ಟಪಾಲು ತಂದಿಟ್ಟು ಹೋದ. ಆ ಪಟವನ್ನು ಬದಿಗಿಟ್ಟು ಡಾಕ್ಟರು ಟಪಾಲಿಗೆ ಕೈ ಹಾಕಿದರು. ಅದರಲ್ಲಿಯ ಕಾಗದ-ಪತ್ರಗಳನ್ನು ನಿರೀಕ್ಷಿಸುವಾಗ, ಅದರಲ್ಲಿ ಅವರ ಕೈಗೊಂದು ಲಗ್ನಪತ್ರಿಕೆ ಬಂತು. ವಿಶೇಷತಃ ಡಾಕ್ಟರ್‌ಸಾಹೇಬರಿಗೆ ಲಗ್ನಪತ್ರಿಕೆಯಂಥ ಆಮಂತ್ರಣ ಪತ್ರಿಕೆಗಳನ್ನು ಓದಲು ವೇಳೆಯೇ ಇರುತ್ತಿದ್ದಿಲ್ಲ. ಆದರೆ ಇಂದಿನ ಈ ಲಗ್ನಪತ್ರಿಕೆ ವಿಶೇಷ ಸುಂದರವಾಗಿತ್ತು. ಪತ್ರಿಕೆಯ ಮೇಲುಹೊದಿಕೆಯ ಚಿತ್ರ ಅವರ ಮನಸ್ಸನ್ನು ಆಕರ್ಷಿಸಿತ್ತು. ಒಳಗಡೆ ನೋಡಲಾಗಿ, ಅಂದವಾದ ರೀತಿಯಲ್ಲಿ ವಧೂ—ವರರ—ಭಾವಚಿತ್ರಗಳು ಮುದ್ರಿಸಲ್ಪಟ್ಟಿದ್ದುವು. ವಧು ಏನು ಅವರಿಗೆ ಅಪರಿಚಿತ ಹುಡುಗಿಯಲ್ಲ. ಅವಳ ತಂದೆ ಈಗೆರಡು ದಿವಸಗಳ ಹಿಂದೆಯೇ ಔಷಧಕ್ಕಾಗಿ ಬಂದಾಗ, ಮದುವೆಯ ನಿಶ್ಚಯದ ಮಾತನ್ನೂ ಹೇಳಿದ್ದರು. ಮನೆಯವರೆಗೆ ಬಂದು ವಿಶೇಷ ಆಗತ್ಯದ ಆಮಂತ್ರಣವನ್ನೂ ಕೊಡುವವರಿದ್ದರು. ತಮ್ಮ ಕೆಲಸದ ಗಡಿಬಿಡಿಯಲ್ಲಿ 'ವರ ಯಾರು? ಯಾವ ಊರು?' ಎಂಬ ಪ್ರಶ್ನೆಗಳನ್ನು ಮಾತ್ರ ಡಾಕ್ಟರರು ಕೇಳಿರಲಿಲ್ಲ. ಆದರೆ ಲಗ್ನಪತ್ರಿಕೆ ಓದಿ ಆ ಭಾವಚಿತ್ರಗಳನ್ನು ನೋಡಿದಾಕ್ಷಣ, ಅವರು ಆಶ್ಚರ್ಯಚಕಿತರಾದರು. ಅವರರಿಯದೆ ಅವರ ಕಣ್ಣುಗಳು ಸಣ್ಣಗಾದುವು. ಅವರ ಫೋಟೊ ಹಿಡಿದ ಕೈ, ಬದಿಗಿದ್ದ ಟೇಬಲ್-ಲ್ಯಾಂಪಿನ ಹತ್ತಿರ ಹೋಯಿತು. ಅವರ ಮನಸ್ಸು ಹದಿನೆಂಟು ವರ್ಷಗಳ ಹಿಂದೆ ಓಡಿತು :

ಆಗ ಮಾಧವರಾಯರಿನ್ನೂ ಕೀರ್ತಿಯ ಶಿಖರವನ್ನು ಮುಟ್ಟಿರಲಿಲ್ಲ. ಅವರೆಡೆಗೆ ಬರುತ್ತಿದ್ದ ಎಷ್ಟೋ ರೋಗಿಗಳ ಜತೆಯಲ್ಲಿ

ಹರಟುವುದಕ್ಕೆ ಸಾಕಷ್ಟು ಸಮಯ ದೊರಕುತ್ತಿತ್ತು.

ಒಮ್ಮೆ ದೇಸಾಯಿ ರಾಮರಾಯರೆಂಬ ಗೃಹಸ್ಥರು, ಯಾವುದೋ ಕ್ಷುಲ್ಲಕ ಬೇನೆಗಾಗಿ ಅವರೆಡೆಗೆ ಬಂದಿದ್ದರು. ಅವರ ಮುಖದ ಮೇಲಿನ ಯಾವುದೋ ಒಂದು ಆಕರ್ಷಕ ಶಕ್ತಿ ಡಾಕ್ಟರರ ಮನಸ್ಸನ್ನು ಸೆಳೆದಿತ್ತು. ಚತುರತನದಿಂದ ಮೆತ್ತಗಿನ ಮಾತಿನಿಂದಲೇ ಬೇನೆಯನ್ನು ಹೋಗಲಾಡಿಸುವ ಡಾಕ್ಟರರ ಸ್ವಭಾವ ರಾಮರಾಯರಿಗೂ ಹಿಡಿಸಿರಬಹುದು. ಆದರಿಂದಲೇ ಅವರು ಮೊದಲ ಭೆಟ್ಟಿಯಲ್ಲಿಯೇ ರೋಗಿ ಡಾಕ್ಟರರ ಸಂಬಂಧವನ್ನು ಮರೆತು, ಗೆಳೆಯರಾದರು. ಮುಂದೆ ಮಾಧವರಾಯರು ರಾಮರಾಯರ 'ಫ್ಯಾಮಿಲಿ' ಡಾಕ್ಟರರಾದರು.

ರಾಮರಾಯರ ಮನೆಯ ಉದಾಸೀನ ವಾತಾವರಣದ ಕಾರಣವನ್ನು ಮಾಧವರಾಯರು ಸ್ವಲ್ಪ ದಿನಸಗಳಲ್ಲಿಯೇ ಅರಿತರು. "ಇಂಥ ವಿಜ್ಞಾನ ಯುಗದಲ್ಲಿ ಮಕ್ಕಳಿಗಾಗಿ ಹಂಬಲಿಸುವ ಕಾರಣವಿಲ್ಲ. ನಿಮ್ಮ ಹೆಂಡತಿಗೆ ಏನಾದರೂ ಚಿಕಿತ್ಸೆ ಮಾಡಿಸಿರಿ!" ಎಂಬ ಸಲಹೆಯನ್ನು ಕೊಟ್ಟಿದ್ದರು.

ಆಗ ರಾಮರಾಯರು "ನನಗೇನೂ ಅಷ್ಟು ಮಕ್ಕಳ ಹಂಬಲವಿಲ್ಲ. ಯಾವ ಮಕ್ಕಳು ಈಗಿನ ದಿವಸಗಳಲ್ಲಿ ಮುಪ್ಪಿನತನದಲ್ಲಿ ಸೇವೆ ಮಾಡುವರು? ಶ್ರಾದ್ಧ-ಪಕ್ಷಗಳಲ್ಲಿಯಂತೂ ನನಗೆ ವಿಶ್ವಾಸವೇ ಇಲ್ಲ. ಏತಕ್ಕಾಗಿ ಮಕ್ಕಳು? ಏನು ಫಲ? ಆದರೆ— ನನ್ನ ಹೆಂಡತಿಯ ಉದಾಸೀನತೆಯನ್ನು ಕಳೆಯಲಿಕ್ಕೆ-ಅವಳು ಸಂತೋಷವಾಗಿರಲಿಕ್ಕೆ-ಒಂದು ಮಗುವು ಮಾತ್ರ ಬೇಕಿತ್ತು ಎನ್ನಿಸುವುದು. ಅದನ್ನು ನೋಡಿ ಸಂತೋಷ ಪಡುವ ಆಶೆ" ಎಂದರು ಖಿನ್ನರಾಗಿ.

"ಇದುವರೆಗೆ ಯಾರಾದರೂ ಡಾಕ್ಟರರಿಂದ ನಿಮ್ಮ ಹೆಂಡತಿಯನ್ನು ಪರೀಕ್ಷಿಸಿದ್ದೀರಾ? ಏನಾದರೂ ಉಪಾಯ ಮಾಡಿದ್ದೀರಾ?" ಎಂದರು ಮಾಧವರಾಯರು.

"ಅಯ್ಯೋ! ಸಾವಿರಗಟ್ಲೆ ಖರ್ಚುಮಾಡಿ ತರಶರದ ಉಪಾಯ ಮಾಡಿಯೂ ನಿರರ್ಥಕವಾದಾಗಿನಿಂದ, ನನ್ನ ಹೆಂಡತಿ ತೀರ ಉದಾಸೀನಳಾದಳು. ಅದಕ್ಕೂ ಮುಂಚೆ ಆದೀತೆಂಬ ಆಶೆಯಲ್ಲಿಯೇ ಸುಖವಾಗಿದ್ದೆವು" ಎಂದು ಮಾಡಿದ ಉಪಾಯಗಳ ವರದಿ ಓದಿದರು ರಾಮರಾಯರು.

ಮಾಧವರಾಯರು ಸ್ವಲ್ಪ ಹೊತ್ತು ವಿಚಾರ ಮಾಡಿ, ಏನೋ ಹೊಳೆದವರಂತೆ ಒಮ್ಮೆಲೆ ರಾಮರಾಯರನ್ನು ನೋಡಿದರು. ರಾಮರಾಯರು ಸ್ವಲ್ಪ ಆಶೆಯಿಂದ "ನೀವೇನಾದರೂ ಹೊಸ ಉಪಾಯವನ್ನು ಸೂಚಿಸುವಿರಾ?" ಎಂದರು ಚೇಷ್ಟೆಯ ಸ್ವರದಿಂದ.

"ನಿಮ್ಮ ಒಪ್ಪಿಗೆ ಇದ್ದರೆ ನಿಮ್ಮನ್ನೇ ಪರೀಕ್ಷಿಸುವ ವಿಚಾರವಿದೆ" ಎಂದರು ಡಾಕ್ಟರರು— ಗಂಭೀರತೆಯಿಂದ.

ರಾಮರಾಯರ ಮುಖ ಸ್ವಲ್ಪ ಇಳಿದಂತಾಯಿತು. ಅದನ್ನು ಅರಿತೇ ಡಾಕ್ಟರರು ಅವರಿಗೆ ಸಮಾಧಾನ ಹೇಳಿ, ತಪಾಸು ಮಾಡುವ ಒಂದು ದಿನವನ್ನೂ ಅವರಿಗೆ ಹೇಳಿದರು. ರಾಮರಾಯರು ಒಪ್ಪಿಗೆಯನ್ನಿತ್ತರು.

ಮಾಧವರಾಯರು ಎಣಿಸಿದಂತೆಯೇ ಅವರಿಗೆ ರಾಮರಾಯರಲ್ಲಿ ದೋಷ ಕಂಡುಬಂದಿತು. ಅದನ್ನು ಅವರು ಎಷ್ಟೇ ಸೌಮ್ಯವಾದ ಭಾಷೆಯಲ್ಲಿ ರಾಮರಾಯರಿಗೆ ತಿಳಿಸಿದರೂ, ಅದರ ಪರಿಣಾಮ ರಾಮರಾಯರ ಮೇಲೆ ಆಗದಿರಲಿಲ್ಲ.

ಒಂದು ದಿವಸ ರಾಮರಾಯರು "ನನ್ನ ದೋಷ ನನಗೆ ತಿಳಿದಾಗಿನಿಂದ, ನನ್ನ ಹೆಂಡತಿಯ ಎದುರಿಗೆ ನನಗೆ ಮುಖ ಎತ್ತಲೂ ನಾಚಿಕೆ ಎನಿಸುವದು. ಅವಳಿಗೆ ಗೊತ್ತಿಲ್ಲದಿದ್ದರೂ ನಾನೊಬ್ಬ ಅರೋಪಿಯಂತೆ ನನಗೆನಿಸುವುದು. ಇದಕ್ಕೂ ಮುಂಚೆ 'ನಾವು ಒಂದು ಬಡ ಅನಾಥ ಮಗುವನ್ನು ದತ್ತಕ ಮಾಡಿಕೊಳ್ಳೋಣ. ಒಂದು ಅನಾಥ ಮಗುವಿಗೆ ಶಿಕ್ಷಣಕೊಟ್ಟು ಮುಂದೆ ತಂದೆಂತಾಗುವದು. ನಮ್ಮ ಕೈಯಿಂದ ಒಂದು ಸತ್ಕಾರ್ಯವಾದರೂ ಆಗುವುದು' ಎಂದು, ನನ್ನ ಹೆಂಡತಿ ತೀರ ಉದಾಸೀನಳಾದಾಗ ಸಮಾಧಾನ ಹೇಳುತ್ತಿದ್ದೆ. ದತ್ತಕ ವಿಷಯ ಬಂದಾಗೆಲ್ಲ ನನ್ನ ಹೆಂಡತಿ ಸಿಡುಕಿನಿಂದಲೇ ಉತ್ತರ ಕೊಡುತ್ತಿದ್ದಳು: 'ಹುಂ— ಎಲ್ಲಿಯದಾದರೂ ತಂದರೆ ಅದು ನಮ್ಮದಾಗಬಲ್ಲದೆ?' ಎಂದು. "ಆದರೆ ಈಗ ಸಮಾಧಾನ ಹೇಳುವ ಧೈರ್ಯವೂ ನನ್ನಲ್ಲಿ ಮಾಯವಾಗಿದೆ" ಎಂದು ತಮ್ಮ ದುಃಖವನ್ನು ತೋಡಿಕೊಂಡರು.

ಇದೇ ಸಮಯವನ್ನು ಸಾಧಿಸಿ "ಅದೂ ನಿಜವೇ ರಾಮರಾಯರೇ! ನೀವು ನಿಮ್ಮ ಹೆಂಡತಿಗಾಗಿ ಮಗುವನ್ನು ಬಯಸುತ್ತೀರಿ. ನಿಮ್ಮದಲ್ಲದಿದ್ದರೂ ಅವರಿಗಾಗಿ ಮಗುವನ್ನು ಹುಟ್ಟಿಸುವುದು ವಿಜ್ಞಾನದಿಂದ ಸಾಧ್ಯವಿದೆ. ನಿಮ್ಮಿಬ್ಬರದೂ ಅಲ್ಲದ ಹೊರಗಿನ ಮಗುವಿಗಿಂತ, ಅವರದೊಬ್ಬರದಾದರೂ ಆದ ಮಗು ನಿಮಗೆ ಸಮೀಪವಲ್ಲವೆ?" ಎಂದು ತಮ್ಮ ಮಾತಿನ ಪರಿಣಾಮವನ್ನು ಅವರ ಮುಖದ ಮೇಲೆ ನಿರೀಕ್ಷಿಸಿದರು ಡಾಕ್ಟರ್ ಸಾಹೇಬರು.

"ನೀವೆನ್ನುವುದರ ಅರ್ಥ ನನಗಾಗಲಿಲ್ಲ" ಎಂದು ಏನೋ ಮಾತನಾಡಲು ಯತ್ನಿಸಿದರು. ಅವರ ನಾಲಗೆ ಅವರಿಗೆ ಸಹಕಾರ ಮಾಡಲಿಲ್ಲ. ಪೃಥ್ವಿಯ ಜತೆಗೆ ತಾವೂ ತಿರುಗಿದಂತೆ ಅವರಿಗೆ ಭಾಸವಾಯಿತು. ಮುಖವನ್ನು ಎಷ್ಟೇ ನಿರ್ವಿಕಾರವಾಗಿಡಬೇಕೆಂದು ಪ್ರಯತ್ನಿಸಿದರೂ ಅದು ಡಾಕ್ಟರರ ಎದುರಿಗೆ ಸಫಲ ಹೊಂದಲಿಲ್ಲ.

ಹೀಗಾಗುವುದು ಸ್ವಾಭಾವಿಕವೇ ಎಂದರಿತ ಡಾಕ್ಟರರು ಮಾತ್ರ ಅತ್ತ ಲಕ್ಷ್ಯಕೊಡದೆ "ವಿಚಾರ ಮಾಡಬಹುದು. ಈಗಲೇ ಹೇಳಬೇಕೆಂದಿಲ್ಲ." ಎಂದರು. "ಬಹಳ ಹೊತ್ತು ಗೊಂದಲದಲ್ಲಿ ಹಾಕಬೇಡಿರಿ ಡಾಕ್ಟರಸಾಹೇಬರೇ! ನಿಮ್ಮ ವಿಚಾರವನ್ನು ತಿಳಿಸಿಬಿಡಿರಿ" ಎಂದು ರಾಮರಾಯರು ಇಲ್ಲದ ಧೈರ್ಯವನ್ನು ತಂದುಕೊಂಡು ಅವರನ್ನೇ ನೋಡಿದರು.

ಯಾವ ಶಬ್ದಗಳಲ್ಲಿ ರಾಮರಾಯರಿಗೆ ತಿಳಿಸಬೇಕೆಂಬ ವಿಚಾರ-ಗಳು, ಮಾತಿನಲ್ಲಿ ಚತುರರಾದ ಡಾಕ್ಟರರನ್ನು ಸಹ ಗೊಂದಲ-ಕ್ಕಿಡಿಸಿದುವು. ಸ್ವಲ್ಪ ನಿಧಾನವಾಗಿ ಹೇಳತೊಡಗಿದರು:

"ಇದು ನೋಡಿರಿ! ಗರ್ಭದತ್ತಕದ ಮಾತು ನಮಗೇನೂ ಹೊಸದಲ್ಲ. ಪುರಾಣಾದಿ ಕಾಲದಿಂದಲೂ ಬಂದದ್ದು. ಅದರಲ್ಲಿಯೂ ನಮ್ಮ ಮಹಾಭಾರತದಲ್ಲಿಯಂತೂ ಎಷ್ಟು ಉದಾಹರಣೆಗಳು....". ಎಂದು ತಮ್ಮ ಡಾಕ್ಟರಿಕೆಯ ಮಾತನ್ನು ಬಿಟ್ಟು ಮಹಾಭಾರತ-ಕ್ಕನೇ ಕೈ ಹಾಕಿದರು ಡಾಕ್ಟರ್ ಸಾಹೇಬರು.

"ಆ ಯುಗಕ್ಕೂ ಈ ಯುಗಕ್ಕೂ ಅಂತರವಿದೆ ಡಾಕ್ಟರ್ ?" ಎಂದರು ರಾಮರಾಯರು.

"ಯುಗ-ಯುಗಕ್ಕೆ ಯುಗದ ಅಂತರವಿದ್ದರೂ, ವಿಷಯ ಮಾತ್ರ ಬದಲಾಗಿಲ್ಲ. ಅದರ ರೂಪ ಮಾತ್ರ ಬದಲಾಗಿದೆ ಅಷ್ಟೆ. ಆಗ ಪ್ರತ್ಯಕ್ಷ ಗರ್ಭದ ದಾನವಾದರೆ, ಈಗ ಟ್ಯೂಬಿನಿಂದ. ಅಲ್ಲದೆ ಪ್ರಸಂಗ ಬಂದಾಗ ನಾವು ಬ್ಲಡ್ ಬ್ಯಾಂಕಿನಿಂದ ರಕ್ತ ಹಾಕುವು-ದಿಲ್ಲವೇ ?" ಎಂದು ಮುಖ್ಯ ವಿಷಯವನ್ನು ಮಾತಾಡಿ ಮುಗಿಸಿ ಬಿಟ್ಟರು ಡಾಕ್ಟರು.

ಆ ವಿಷಯದ ಸವಿಸ್ತರ ಮಾಹಿತಿಯನ್ನು ತಮ್ಮ ತಲೆಯಲ್ಲಿ ತುಂಬಿಕೊಂಡು, ಆ ವಿಷಯವು ಯಾರಿಗೂ ತಿಳಿಯದೆ ಗುಪ್ತ-ವಾಗಿರುವುದೆಂಬ ಭರವಸೆಯನ್ನು ಡಾಕ್ಟರರಿಂದ ಪಡೆದು, ಮುಂದಾ-ಗುವ ಮಗುವನ್ನು ಮುದ್ದಿಡುವ ಮಡದಿಯನ್ನು ಒಂದು ಕಣ್ಣಿ-ನಿಂದಾದರೆ– ಸಶಕ್ತ, ಕುಲ-ಶೀಲವಂತನಾದ ಪುರುಷನನ್ನು ಮತ್ತೊಂದು ಕಣ್ಣಿನಿಂದ ನೋಡುತ್ತ ಮನೆಯ ದಾರಿ ಹಿಡಿದರು ರಾಮರಾಯರು. ಮುಂದೆ ಸ್ವಲ್ಪ ದಿವಸಗಳಲ್ಲಿಯೇ ವಿಜ್ಞಾನ ಚಿಕಿತ್ಸೆಯಾಯಿತು. ಜಗತ್ತಿನ ದೃಷ್ಟಿಯಲ್ಲಿ ರಾಯರ ಸಂಡತಿ ಗರ್ಭವತಿಯಾದಳು. ಸುಲೋಚನೆಯು ರಾಮರಾಯರ ಮಗಳಾ-ದಳು.

ರಾಮರಾಯರೂ ಅವರ ಹೆಂಡತಿಯೂ ಮಗಳಾದ ಸುಲೋಚ-ನೆಗೆ ಹೀನು ಬಂದರೂ ಮಧ್ಯರಾತ್ರಿಯಲ್ಲಿ ಮಾಧವರಾಯರನ್ನು ಕರೆಯಿಸುತ್ತಿದ್ದರು. ಆಗಿನಿಂದಲೂ ಈಗ ಹದಿನೆಂಟು ವರ್ಷಗಳಲ್ಲಿ ಸುಲೋಚನೆಯು ಬರಿಯ ಪ್ಯಾಯಿಂದಾಡಿ– ಫ್ರಾಕ್ ಹಾಕಿ-ಕೊಂಡು– ಅವರ ಕಿಸೆಯಲ್ಲಿಯ ಚಾಕಲೇಟಗಳನ್ನು ಹುಡುಕಿ-ಪರಕಾರ ಉಟ್ಟು ಮೆರೆದು–ಜಾರ್ಜೆಟ್ ಸೀರೆ ಉಟ್ಟು–ಬಿಂಕದಿಂದ ಎರಡೂ ಹೆರಳುಗಳನ್ನು ಹಿಂದೊಮ್ಮೆ ಮುದೊಮ್ಮೆ ಮಾಡುತ್ತ ನಗುತ್ತ ಡಾಕ್ಟರರ ಚೇಷ್ಟೆ ಮಾಡಿ–ರಜತ ಪಟದ ಮೇಲಿನ ಚಿತ್ರ-ದಂತೆ ಅವರ ಕಣ್ಣ ಮುಂದೆ ಹಾಯ್ದು ಲಗ್ನಪತ್ರಿಕೆಯ ಫೊಟೊದಲ್ಲಿ ಸೇರಿಬಿಟ್ಟಳು.

ಡಾಕ್ಟರರು ಮತ್ತೆ ಮತ್ತೆ ದಿಟ್ಟಿಸಿ ಕಣ್ಣುಗಳನ್ನು ಅಗಲವಾಗಿಸಿ, ಸಣ್ಣವಾಗಿಸಿ. ವಧೂವರರ ಚಿತ್ರಗಳನ್ನು ಮತ್ತೊಮ್ಮೆ ನಿರೀಕ್ಷಿಸಿದರು. ಅವಳಂತೆಯೇ ಇದ್ದ ಅವನ ಕಣ್ಣು ಮೂಗು ಬಾಯಿಗಳನ್ನು ನೋಡಿ ಅವರಿಗೆ ಆಶ್ಚರ್ಯವಾಯಿತು. ಪಂಗ್ತಿನ ಕಾಗದದ ಮೇಲಿನ ಆ ವರನ ತಂದೆಯ ಹೆಸರನ್ನು ಮತ್ತೊಮ್ಮೆ ಓದಿದರು. ಹದಿನಾಲ್ಕು ಹದಿನೈದು ವರ್ಷಗಳ ಹಿಂದೆ ಆ ಊರಿನಿಂದ ವರ್ಗ-ವಾಗಿ ಎರಡನೆಯ ಊರಿಗೆ ಹೋಗಿದ್ದ ನಾರಾಯಣರಾಯರ ನೆನಪು ಅವರಿಗೆ ನಿಚ್ಚಳವಾಗಿ ಬಂದಿತು. ವರನ ತಂದೆಯಾಗಿದ್ದ ನಾರಾಯಣರಾಯರು, ತಮಗರಿಯದೆ ಸುಲೋಚನೆಯ ತಂದೆಯೂ ಆಗಿದ್ದರು. ವರ ಅವಳಿಗೆ ನಿಜವಾಗಿ ಅಣ್ಣ; ಈಗ ಕೈಹಿಡಿಯ-ಲಿರುವ ಪತಿ. 'ಇದು ದೃಷ್ಟಿಯ ಆಟ ವಿಜ್ಞಾನದ ಕುಚೆ' ಎಂದು ನಿಟ್ಟುಸಿರು ಬಿಟ್ಟು, ತಮ್ಮ ಕೆಲಸದಲ್ಲಿ ಮಗ್ನರಾದರು, ಡಾಕ್ಟರು.

ಇದೀಗ ಪ್ರಕಟವಾಗಿದೆ! ಅಮೌಲ್ಯ ಸಾಹಿತ್ಯ!

ಶ್ರೀ. ಮಿರ್ಜಿ ಅಣ್ಣಾರಾಯರ

ಜೈನದರ್ಶನ

ಡೇಮಿ ೮ ಆಕಾರದ ೧೦೦೦ ಪುಟಗಳು. ನೂರಾರು ಚಿತ್ರಗಳು. ಜೈನಧರ್ಮದ ಇತಿಹಾಸ, ತತ್ತ್ವಜ್ಞಾನ, ಸಂಸ್ಕೃತಿ ಸಾಹಿತ್ಯಗಳೆಲ್ಲದರ ಸಮಗ್ರ ವಿವೇಚನೆ ಈ ಒಂದು ಗ್ರಂಥದಲ್ಲಿಯೇ ಇದೆ. ಮೇಲಾಗಿ ಎಲ್ಲ ದರ್ಶನಗಳ ತುಲನಾತ್ಮಕ ಅಭ್ಯಾಸವೂ ಇದೆ.

ಕ್ರಯ: ೧೫-೦-೦. ರೂಪಾಯಿಗಳನ್ನು ಮನಿಯಾರ್ಡರಿಂದ ಕಳಿಸುವವರಿಗೆ ಅಂಚೆಯವೆಚ್ಚವಿಲ್ಲ.

ಮಿರ್ಜಿ ಅಣ್ಣಾರಾಯರು

ಪೊ: ಉಗಾರ ಬುದ್ರುಕ, ಜಿ. ಬೆಳಗಾಂವ

ಸಾಹಿತ್ಯವಿಹಾರ

★

ಮುನ್ನುಡಿ

ಈ ವರ್ಷ ಈ ವಿಭಾಗವನ್ನು ಪುನಃ ಪ್ರಾರಂಭಿಸಬೇಕೆಂದಿದ್ದೇವೆ. ಇದೀಗ ನಮ್ಮ ಸಾಹಿತ್ಯಪ್ರಪಂಚ ಬೆಳೆಯುತ್ತ ನಡೆದಿದೆ. ದಿನ-ದಿನಕ್ಕೂ ಹೊಸ ಹೊಸ ಸಾಹಿತ್ಯಿಕರು ಸಾಹಿತ್ಯಕ್ಷೇತ್ರದಲ್ಲಿ ಕಾಣಿಸಲು ತೊಡಗಿದ್ದಾರೆ. ಇದೀಗ ವೈಚಾರಿಕ ಸಂಕ್ರಮಣಕಾಲವಾದುದರಿಂದ, ಹಲವರು ಹಲವು ಬಗೆಯ ರಾಜಕೀಯವಾದಗಳನ್ನೂ ಸಾಮಾಜಿಕ ವಿಚಾರಗಳನ್ನೂ ತಮ್ಮ ತಮ್ಮ ಸಾಹಿತ್ಯದ ಮುಖಾಂತರ ಬೆಳಕಿಗೆ ತರುತ್ತಲಿದ್ದಾರೆ. ಈ ವಾದ-ವಿಚಾರಗಳ ಪ್ರಚಾರದ ಕಾಕಲಾಟಗಳ ಮೂಲಕ, ಹೆಚ್ಚಾಗಿ ಸಾಹಿತ್ಯವೆಂದು ನಮ್ಮ ಕಣ್ಣೆದುರು ಬರುವ ಕೃತಿಗಳಲ್ಲಿ, ಸಾಹಿತ್ಯದ ಮುಖ್ಯ ಜೀವಾಳವಾಗಿರುವ ಸತ್ಯ-ಸೌಂದರ್ಯಗಳೇ ಮರೆಯಾಗಿ ಬಿಟ್ಟಿರುತ್ತವೆ. ಪ್ರಾಕೃತ ಜನರ ಮನಸ್ಸನ್ನು ವಿಕಾರಗೊಳಿಸುವಂತಹ ಲೈಂಗಿಕವಾಙ್ಮಯವೂ 'ಮನೋವಿಶ್ಲೇಷಣ' ಎಂಬ ದೊಡ್ಡ ಹೆಸರಿನ ಕೆಳಗೆ ಬಂದು ನಮ್ಮ ಸಾಹಿತ್ಯಪ್ರವಾಹದಲ್ಲಿ ಸೇರಲು ತೊಡಗಿದೆ. ಸಾಹಿತ್ಯದ ಮುಖ್ಯ ವಾಹಕವಾದ ಭಾಷೆಯ ವಿಚಾರದಲ್ಲಿಯೂ ಇಂದಿನ ಸಾಹಿತ್ಯ ವಿವಾದಕ್ಕೆ ಕಾರಣವಾಗಿದೆ. ವಿಜ್ಞಾನ ಸಾಧನಗಳು ಬೆಳೆಯುತ್ತ ನಡೆದಂತೆಲ್ಲ ನಮ್ಮ ಸಾಹಿತ್ಯತಂತ್ರಗಳೂ ವಿವಿಧ-ಸ್ವರೂಪವನ್ನು ಪಡೆಯುತ್ತ ನಡೆದಿವೆ. ಇಂತಹ ಈ ಕಾಲದಲ್ಲಿ ಪ್ರಾಚೀನಾರ್ವಾಚೀನ ಸಾಹಿತ್ಯಗಳ ವಿವಿಧಾಂಗಗಳನ್ನೂ ಕೂಲಂಕಷವಾಗಿ ಅಭ್ಯಾಸ ಮಾಡಿದ ವಿಶಾರದರು, ಇಂದಿನ ಹಿಂದಿನ ಸಾಹಿತ್ಯಗಳನ್ನು ಪರಿಶೀಲಿಸಿ ವಿಮರ್ಶಿಸಬೇಕಾದುದು ಅತ್ಯಗತ್ಯದ ವಿಷಯವಾಗಿದೆ. ಅಂತಹ ವಿಶಾರದರ ಸಾಹಿತ್ಯವಿಮರ್ಶೆ-ವಾದ-ಚರ್ಚೆಗಳಿಗೆಲ್ಲ ಈ ವಿಭಾಗದಲ್ಲಿ ಎಡೆಗೊಡಲಾಗುವುದು. ಬೇರೆಯವರಿಂದ ಬಾರದೆ ಹೋದಾಗಲೆಲ್ಲ ಜಯಂತಿಯ ಸಾಹಿತ್ಯಿಕ ಪ್ರತಿನಿಧಿಗಳು ಈ ವಿಭಾಗದಲ್ಲಿ ಬರೆಯುತ್ತಲಿರುವರು.

ಗ್ರಂಥ-ಪತ್ರಿಕೆಗಳಲ್ಲಿ ಅಡಕವಾದ ಸಾಹಿತ್ಯವನ್ನಲ್ಲದೆ ಇಂದು ನುಗ್ಗಿ ಮುಂದೆ ಬರುತ್ತಿರುವ ಚಿತ್ರವಾಣಿ, ಆಕಾಶವಾಣಿ, ರಂಗಭೂಮಿಗಳ ಸಾಹಿತ್ಯಚರ್ಚೆಯನ್ನೂ ಈ ವಿಭಾಗದಲ್ಲಿ ಮಾಡಬಹುದು. ಪರಪ್ರಾಂತದ ಮತ್ತು ಪರದೇಶಗಳ ಪ್ರಮುಖ ಭಾಷೆಯ ಸಾಹಿತ್ಯಪ್ರಪಂಚದಲ್ಲಿ ನಡೆದಿರುವ ನವೀನ ಪ್ರಯತ್ನ-ಪ್ರಯೋಗಗಳನ್ನೂ ಚಟುವಟಿಕೆಗಳನ್ನೂ ಈ ವಿಭಾಗದಲ್ಲಿ ಪರಿಚಯ ಮಾಡಿಕೊಡಬಹುದು; ಗುಣಾವಗುಣಗಳ ವಿಮರ್ಶೆಯನ್ನೂ ಮಾಡಬಹುದು.

ಕನ್ನಡದಲ್ಲಿ ಆಗಿ ಹೋಗಿರುವ, ಈಗಜೀವಿಸಿರುವ ಸಾಹಿತ್ಯಿಕರ ಪ್ರತ್ಯಕ್ಷ ಸಂಬಂಧ ಬಂದು, ಅವರ ವೈಯಕ್ತಿಕ ವೈಶಿಷ್ಟ್ಯಗಳೇನಾದರೂ ಕಂಡುಬಂದಿದ್ದರೆ, ಅವುಗಳ ನೆನಪುಗಳನ್ನು ಬರೆದು ಕಳುಹಿದರೆ,— ವ್ಯಕ್ತಿಯ ವಿಧ್ವಂಸಕ ಟೀಕೆಗಳಿಲ್ಲದೆ ಇದ್ದಲ್ಲಿ— ಅಂತಹ ನೆನಪುಗಳಿಗೂ ಈ ವಿಭಾಗದಲ್ಲಿ ಅವಕಾಶಕೊಡಲಾಗುವುದು.

ಕನ್ನಡಿಗರ ಪ್ರಾಚೀನ ಪರಂಪರೆಗಳನ್ನು ಸಂಶೋಧಿಸಿ, ಅವುಗಳನ್ನು ಸರಿಯಾದ ಪ್ರಮಾಣಗಳಿಂದ ಮಂಡಿಸಿ ಖಂಡಿಸಿ ಬರೆದ ಸಾಂಸ್ಕೃತಿಕ-ವಿಚಾರಗಳಿಗೂ ಈ ವಿಭಾಗದಲ್ಲಿ ಸ್ವಾಗತವುಂಟು. ಅದರಂತೆಯೆ ವ್ಯಾಕರಣ, ಛಂದಸ್ಸು, ಅಲಂಕಾರ, ರಸ–ಭಾವ ವಿಚಾರಗಳ ಪರಿಚಯ–ಚರ್ಚೆಗಳಿಗೂ ಈ ವಿಭಾಗದಲ್ಲಿ ಎಡೆಯುಂಟು.

ಈ 'ಸಾಹಿತ್ಯವಿಹಾರ'ದ ವಿಭಾಗವು ವಾಚಕರಿಗೆ ಪ್ರಯೋಜನಕಾರಿಯೆನಿಸಬೇಕಾದರೆ, ಸಾಹಿತ್ಯಾಭ್ಯಾಸಿಗಳ ಸಹಕಾರ ನಮಗೆ ಅವಶ್ಯವಾಗಿಬೇಕು. ಕನ್ನಡನಾಡಿನ ಎಲ್ಲ ಸಾಹಿತ್ಯಾಭ್ಯಾಸಿಗಳಿಂದಲೂ ಅಂತಹ ಸಹಕಾರ ದೊರೆಯಬೇಕೆಂಬ ಅಪೇಕ್ಷೆಯಿದೆ.

ಇಂದಿನ ವಿಮರ್ಶಾಪ್ರಪಂಚ

ಸಾಹಿತ್ಯಪ್ರಪಂಚದಲ್ಲಿ ವಿಮರ್ಶೆಗಿರುವ ಮಹತ್ತ್ವದ ಸ್ಥಾನವನ್ನು, ಎಲ್ಲ ಸುಶಿಕ್ಷಿತ ಜನರೂ—ಎಲ್ಲ ದೇಶಗಳಲ್ಲಿಯೂ—ಒಪ್ಪಿಕೊಂಡಿದ್ದಾರೆ. ಆದರೆ ವಿಮರ್ಶಕನ ವಿಮರ್ಶೆಯನ್ನು ನಂಬುಗೆಯ ನೋಟದಿಂದ ನೋಡುವವರ ಸಂಖ್ಯೆ ತೀರ ಕಡಿಮೆ. ಈ ಮಾತಿಗೆ ನಮ್ಮ ಕನ್ನಡ ಜನತೆಯೇನೂ ಹೊರತಾಗಿ ಇಲ್ಲ. ಸಕ್ಕರೆ ಸಿಹಿಯೆಂಬುದನ್ನು ಅರಿತವರು, ಅದರ ಮಿಕ್ಕ ಯಾವ ಗುಣಗಳ ಕಡೆಗೂ ನೋಡದೆ, ಸಕ್ಕರೆಯನ್ನು ಹೊಗಳುತ್ತ ಹೋಗುವರು. ಅದೇ ಸಕ್ಕರೆಯನ್ನು ಹೆಚ್ಚಾಗಿ ತಿಂದು ಅಜೀರ್ಣ ಮಾಡಿಕೊಂಡವರೋ, ಎಂದೂ ಸಕ್ಕರೆಯ ಮುಖವನ್ನು ಕಾಣದವರೋ, ಸಕ್ಕರೆಯ ಮಹತ್ತ್ವವನ್ನೂ ಸವಿಯನ್ನೂ ಬೀಳುಗಳೆದು ನುಡಿಯಬಹುದು. ಇದು ಜನಸಾಮಾನ್ಯರ ಸಾಮಾನ್ಯ ಲಕ್ಷಣ. ಆದರೆ, ಕುತೂಹಲ ಬುದ್ಧಿಯ ಸಂಶೋಧಕನೊಬ್ಬ ಸಕ್ಕರೆಯ ಸಿಹಿಯನ್ನರಿತುಕೊಂಡು, ಸಾಮಾನ್ಯ ಜನರು ಸಕ್ಕರೆಗೆ ಕೊಡುತ್ತಿರುವ ಮಹತ್ತ್ವದ ಕಡೆಗೆ ದೃಷ್ಟಿಯನ್ನು ಕೊಟ್ಟು, ಅದನ್ನು ಯಾವ ರೀತಿಯಲ್ಲಿ—ಯಾವ ಪ್ರಮಾಣದಲ್ಲಿ—ಯಾವ ಪದಾರ್ಥದೊಂದಿಗೆ— ಯಾವ ಕಾಲದಲ್ಲಿ ಬಳಸಿದರೆ, ಜನರ ಜೀವನಸ್ವಾಸ್ಥ್ಯಕ್ಕೆ ಸುಖಸಮಾಧಾನಗಳಿಗೆ ಉಪಯುಕ್ತವಾದೀತೆಂಬುದನ್ನು ಕುರಿತು ವಿಚಾರ ಮಾಡುವನು.

ಇದಕ್ಕಾಗಿ ವಿವಿಧ ಪ್ರಯೋಗಗಳನ್ನು ನಡೆಯಿಸಿ ಬಗೆಬಗೆಯ ಅನುಭವಗಳನ್ನು ಹೊಂದುವನು. ತಾನು ಪಡೆದ ವಿವಿಧಾನುಭವಗಳನ್ನು ಜನರಿಗೂ ವಿಶ್ಲೇಷಿಸಿ ಹೇಳಲು ತೊಡಗುವನು. ಈ ಅನುಭವಗಳಲ್ಲಿ ಸಕ್ಕರೆಯ ಗುಣದ ವಿವರಣೆಯೂ ಇರುವುದು; ಅವಗುಣದ ವಿವರಣೆಯೂ ಇರುವುದು. ಆದರೆ ಈ ಸಂಶೋಧಕನು ಹೇಳಿದ ಅನುಭವದಲ್ಲಿ ಸಕ್ಕರೆಯ ಅವಗುಣದ ವಿವರಣೆಯಿರುವುದನ್ನು ಕೇಳಿದ ಸಕ್ಕರೆಯ ಕೇವಲ ಅಭಿಮಾನಿಗಳು, ಗುಣದ ವಿವರಣೆಯನ್ನು ಮರೆತು 'ಈತ ಸಕ್ಕರೆಯ ವಿರೋಧಿ' ಎಂದು ಗುಲ್ಲೆಬ್ಬಿಸುವರು. ಅದರಂತೆಯೆ ಗುಣದ ವಿವರಣೆಯನ್ನು ಕೇಳಿದ ಸಕ್ಕರೆಯ ಕೇವಲ ವಿರೋಧಿಗಳು 'ಓಹೋ! ಇವನೂ ಸಕ್ಕರೆಯನ್ನು ಮೆಚ್ಚುವವರ ಪಕ್ಷಕ್ಕೆ ಸೇರಿದವನು' ಎಂದು ಕೂಗಾಡುವರು. ನಿಜವಾಗಿ ನೋಡಿದರೆ, ಆ ಸಂಶೋಧಕ ಸಕ್ಕರೆಯ ಕೇವಲ ಪಕ್ಷಪಾತಿಯೂ ಅಲ್ಲ; ಕೇವಲ ಸಕ್ಕರೆಯ ವಿರೋಧಿಯೂ ಅಲ್ಲ. ಗುಣಾವಗುಣಗಳನ್ನು ತಿಳಿದುಕೊಂಡು, ಯೋಗ್ಯರೀತಿಯಿಂದ ಅದನ್ನು ಬಳಸಿದರೆ ಆರೋಗ್ಯಕ್ಕೆ ಅನುಕೂಲವಾಗಬಹುದೆಂಬುದನ್ನು ತಿಳುಹಲು ಮುಂದೆ ಬಂದವ. ಅದರಂತೆಯೆ ಸಿಹಿ ಎನಿಸಿದುದೆಲ್ಲ ಸಕ್ಕರೆಯಲ್ಲವೆಂಬ ಮಾತನ್ನೂ, ವ್ಯಾಪಾರೀದೃಷ್ಟಿಯಿಂದ ಉತ್ಪಾದಕರು ಸಕ್ಕರೆಯೊಂದಿಗೆ ಬೆರಸಿದ ಅನಿಷ್ಟವಸ್ತುಗಳಾವುವೆಂಬುದನ್ನೂ, ಲೋಕಕ್ಕೆ ತಿಳುಹಿಕೊಡಲು ನಿಂತವ. ಇಂತಹನನ್ನು ಜನಸಾಮಾನ್ಯರೆಲ್ಲ ಸಂದೇಹದೃಷ್ಟಿಯಿಂದ ನೋಡಲು ತೊಡಗಿದರೆ, ಆ ಸಂಶೋಧಕನ ವಿಶ್ಲೇಷಣಾತ್ಮಕ ಬುದ್ಧಿ, ಅನುಭವಗಳಿಗೆ ಸಮಾಜದಲ್ಲಿ ಏನು ಬೆಲೆ ಸಿಕ್ಕೀತು? ಹಾಗೆಯೆ ಅಂತಹ ಆ ಬುದ್ಧಿ-ಅನುಭವಗಳು ನಿರುಪಯುಕ್ತವಾದಲ್ಲಿ, ಸಮಾಜವು ಪ್ರಗತಿಪಥದಲ್ಲಿ ಹೇಗೆ ಸಾಗಬೇಕು?

ಸಕ್ಕರೆಯನ್ನು ತಯಾರಿಸಿದವನ ಶ್ರಮವೂ ಪ್ರಶಂಸನೀಯವಾದದ್ದೇನೋ ಸರಿಯೆ! ಆದರೆ ಉತ್ಪಾದಕನ ಅಸಾಮರ್ಥ್ಯದಿಂದಲೋ ಅಜಾಗರೂಕತೆಯಿಂದಲೋ ಸಕ್ಕರೆಯ ಹದಿನಾರಾಣೆ ಗುಣವು ಇಳಿಯದಿರುವಾಗ, ಈ ಸಕ್ಕರೆಯಲ್ಲಿ ಇಂತಿಂತಹ ದೋಷಾಂಶಗಳು ಉಳಿದುಕೊಂಡಿವೆ; ಆದಕ್ಕಾಗಿಯೆ ಈ ಸಕ್ಕರೆ ಸಿಹಿಯೆನಿಸಿದರೂ ನಸುವೆ ಹುಳಿತನ ಬಂದಿದೆಯೆಂದೊ, ಅಡ್ಡವಾಸನೆ ಬಂದಿದೆಯೆಂದೋ, ನಿಪುಣನಾದ ಸಂಶೋಧಕ ಹೇಳುವನು. ಅದರಂತೆಯೆ ಋತುಮಾನಕ್ಕನುಗುಣವಾಗಿ ಇದರ ರುಚಿ-ವಾಸನೆಗಳು ವಿಕೃತಿಹೊಂದುತ್ತ ಹೋಗುವುವೆಂಬುದನ್ನೂ ಮುಂಗಂಡು ಹೇಳಬಲ್ಲವನಾಗಿರುವನು. ಇದರ ಸೂಕ್ಷ್ಮತೆಯನ್ನು ಕಾಣದ ಜನಸಾಮಾನ್ಯರು, ಅದರ ಇಂದಿನ ಸ್ಥೂಲ ಸಿಹಿತನವೊಂದನ್ನೇ ಮೆಚ್ಚಿ, ಅದರ ಪಕ್ಷವಹಿಸಿ ಬಡಿದಾಡಲು ತೊಡಗಿದರೆ, ಸಂಶೋಧಕ ವೃತ್ತಿಯನ್ನು ಕೈಕೊಂಡು ಕಾರ್ಯಮಾಡಬೇಕೆಂಬ ಅಪೇಕ್ಷೆ ಯಾವ ಮನುಷ್ಯನಿಗೆ ಉಂಟಾದೀತು?

ಸದ್ಯ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ವಿಮರ್ಶಕರಿಗೆ ಇಂತಹ ದುರವಸ್ಥೆ ಬಂದು ಕುಳಿತಿದೆ. ಒಳ್ಳೆಯ ಮಾತುಗಳನ್ನು ಹೆಚ್ಚಾಗಿ ಹೇಳಿದರೆ, ಲೇಖಕ–ವಿಮರ್ಶಕರಿಬ್ಬರೂ ಪರಸ್ಪರಪ್ರಶಂಸಾಸಂಘದ ಸದಸ್ಯರಾಗಿರಬೇಕೆಂಬ ಅನುಮಾನಕ್ಕೆ ಪಾತ್ರರಾಗುವರು. ದೋಷವಿದ್ದುವುಗಳನ್ನು ಎತ್ತಿ ತೋರಿಸಿದರೆ, ಪೂರ್ವಗ್ರಹದೂಷಿತ ಮನಸ್ಸನೆಂಬ ಹಳಿವಿಗೆ ವಿಮರ್ಶಕ ಗುರಿಯಾಗಬೇಕಾಗುವುದು. ಇನ್ನು ಕೃತಿ ನಿರ್ಮಾತೃಗಳೂ ತಂತಮ್ಮ ಕೃತಿಗಳನ್ನು ವಿಮರ್ಶಕರ ಕೈಗೆ ... ಕೇವಲ ತಮ್ಮ ಕೃತಿಗಳ ಪ್ರಶಂಸೆಯನ್ನು ಅಪೆ... ಶಂಸೆ ಸಿಕ್ಕದೆ ತೂಕದ ವಿಮರ್ಶೆ ಕಂಡು ಬಂ... ವರು ಸಹಿಸಲಾರರು. ವಿಮರ್ಶಕರನ್ನೆ ಬುದ್ಧಿಗೇಡಿಗಳೆಂದು ಬೈಯುತ್ತ ಹೊರಡುವರಿಷ್ಟೇ ಅಲ್ಲ; ಆ ಬೈಗುಳನ್ನು ಬರೆಹಗಳಲ್ಲಿಯೂ ಮೂಡಿಸುತ್ತ ಹೊರಡುವರು. ಹೀಗೆ ಮಾಡುವುದಕ್ಕಿಂತ ಅಂತಹ ಪ್ರಶಂಸಾಕಾಂಕ್ಷಿಗಳಾದ ಲೇಖಕರು, ವಿಮರ್ಶಕರ ಕಡೆಗೆ ತಮ್ಮ ಕೃತಿಗಳನ್ನು ಕಳುಹದಿರುವುದೇ ನೆಟ್ಟಗೆ. ನಿಜವಾದ ವಿಮರ್ಶಕರಿರುವರು– ಎಂಬ ಭಾವನೆಯಿದ್ದರೆಯೆ ಅಂತಹರ ಕಡೆಗೆ ತಮ್ಮ ಕೃತಿಗಳನ್ನು ಕೊಡಬೇಕು. ಅಂತಹರು ವಿಮರ್ಶೆಮಾಡಿದಾಗ, ತಮಗೆ ಪ್ರತಿಕೂಲವೆಂದು ಕಂಡುಬಂದಾಗ, ಜನತೆಯ ಕಡೆಗೆ ಕೃತಿಯನ್ನು ಒಪ್ಪಿಸಿ, ಸುಮ್ಮಗೆ ಇದ್ದು ಬಿಡಬೇಕು. ನಾಡಿನ ಹೆಚ್ಚು ಜನ ರಸಿಕರು ಕೃತಿಯನ್ನು ಪುರಸ್ಕರಿಸಿದರೆ, ಆ ಕೃತಿಯ ಬೆಲೆ ತಾನಾಗಿಯೆ ತಿಳಿದಂತಾಗುವುದು. ಆಗ ವಿಮರ್ಶಕನ ಅಜ್ಞಾನವೋ ಪಕ್ಷಪಾತ ಬುದ್ಧಿಯೋ, ಸಹಜವಾಗಿಯೆ ಬಯಲಿಗೆ ಬಂದಂತಾಗುವುದು. ಆದುದರಿಂದ ತಮಗೆ ಅನುಕೂಲವೆನಿಸದ ವಿಮರ್ಶೆ ಬಂದಾಗ, ಲೇಖಕರು ಸಂಯಮಿಗಳಾಗಿ ವರ್ತಿಸಬೇಕು. ಹಾಗೆ ವರ್ತಿಸದ ಲೇಖಕನಿಗೆ ತನ್ನ ಸಾಹಿತ್ಯದ ಗುಣದ ಬಗ್ಗೆ ತನಗೇ ವಿಶ್ವಾಸವಿಲ್ಲವೆಂದು ತಿಳಿಯಬೇಕಾಗುವುದು.

ವಿಮರ್ಶೆ–ವಿಮರ್ಶಕರ ವಿಷಯದಲ್ಲಿಯ ಈ ತಪ್ಪು ತಿಳಿವಳಿಕೆಯ ಮೂಲಕವೇ ಜಯಂತಿಯಲ್ಲಿ ಗ್ರಂಥವಿಮರ್ಶೆಯ ವಿಭಾಗವನ್ನು ಪರಿಮಿತಗೊಳಿಸಬೇಕಾಯಿತು. ನಮ್ಮಂತೆಯೆ ಇಂದು ಹಲವು ಜನ ಪತ್ರಿಕಾಸಂಪಾದಕರಿಗೆ ನಿರ್ದಾಕ್ಷಿಣ್ಯ ವಿಮರ್ಶೆಗಳನ್ನು ಬರೆಯುವ ಮನಸ್ಸು ಇಲ್ಲದುದನ್ನು ನಾವು ನೋಡುತ್ತಿರುವೆವು. ಹೀಗಾದುದು 'ಕನ್ನಡದಲ್ಲಿ ನಿಜವಾದ ವಿಮರ್ಶಕರು ಇಲ್ಲವೆ ಇಲ್ಲ!' ಎಂದು ಕೂಗು ಏಳುವುದಕ್ಕೆ ಕಾರಣವಾಗಿದೆ. ನಿಜವಾದ ವಿಮರ್ಶೆಯೆಂದರೆ, ಕೃತಿಯ ಪಕ್ಷಪಾತಿಗಳು ಬರೀ ಅದರ ಪ್ರಶಂಸೆಗೆ ಹೇಳುವರು. ಕೃತಿಯನ್ನು ಮೆಚ್ಚದೆ ಇರುವವರು, ಅದರ ಬೈಗುಳಿಗೆ ಹೇಳುವರು. ಸಪ್ರಮಾಣವಾಗಿ ಸಮತೂಕದಿಂದ ಬರೆದ ಗುಣಾವಗುಣಗಳ ವಿವರಣೆಯನ್ನೊಳಗೊಂಡ ವಿಮರ್ಶೆ ಇಂದು ವಿಮರ್ಶೆಯೆ ಎನಿಸಿಕೊಳ್ಳದಂತಾಗಿದೆ.

ಬೇಕಾದವರು ಇಂದು ಪತ್ರಿಕೆಗಳ ಸಂಪಾದಕರಾಗಬಹುದಾದುದರಿಂದ, ಪದ್ಧತಿಯಂತೆ ಪತ್ರಿಕೆಗೆ ಬರುವ ಸಾಹಿತ್ಯಕೃತಿಗಳನ್ನು ಬೇಕಾದವರು ವಿಮರ್ಶಿಸುವ ಸಾಹಸಮಾಡಲು ಮುಂದುವರಿವ

ಕಾಲವಿದು. ತಾನು ವಿಮರ್ಶೆ ಮಾಡಲು ಕೈಗೆ ತೆಗೆದುಕೊಂಡಿರುವ ಕೃತಿಗಳಲ್ಲಿ ಅಡಕವಾಗಿರುವ ವಿಷಯಗಳಲ್ಲಿ, ತನ್ನ ಸ್ವಂತದ ಪ್ರಾವೀಣ್ಯ ಎಷ್ಟು ಮಟ್ಟಿಗಿದೆಯೆಂಬುದರ ನಂಬುಗೆಯಿಲ್ಲದೆ ವಿಮರ್ಶೆಗೆ ಕೈಯಿಕ್ಕುವುದು ತಪ್ಪು. ಈ ಬಗೆಯ ತಪ್ಪುಗಳಾಗದಂತೆ ವಿಮರ್ಶಕರು ಜಾಗ್ರತರಾದರೆ, ಕನ್ನಡದಲ್ಲಿಯೂ ವಿಮರ್ಶೆ ಮೇಲಿನ ಮಟ್ಟವನ್ನು ಮುಟ್ಟಬಹುದು. ಕೃತಿನಿರ್ಮಾತೃಗಳೂ ಪತ್ರಿಕಾಸಂಪಾದಕರೂ ಅಲ್ಲದ ಕೇವಲ ವಿಮರ್ಶಕರಿಂದಲೇ ಸಾಹಿತ್ಯ ವಿಮರ್ಶೆಯ ಕಾರ್ಯ ಹೆಚ್ಚು ಸಮಂಜಸ ರೀತಿಯಿಂದ ಆದೀತೆಂದು ನಮ್ಮ ಅಭಿಪ್ರಾಯ; ಆದರೆ ಅಂತಹ ವಿಮರ್ಶೋದ್ಯಮಿಗಳ ಸಂಖ್ಯೆ ನಮ್ಮಲ್ಲಿ ಸಾಕಷ್ಟು ಇಲ್ಲದಿರುವುದು ವಿಷಾದದ ಸಂಗತಿಯಾಗಿದೆ. ನಮ್ಮ ಕಡೆಗೆ ಯಾವುದೊಂದು ಸಾಹಿತ್ಯಕೃತಿ ವಿಮರ್ಶೆಗೆಂದು ಬಂದಿರಲಿ, ಬಾರದೆ ಇರಲಿ; ಆ ಕೃತಿಯು ವಿಮರ್ಶಾಯೋಗ್ಯವೆಂದು ಎನಿಸಿದರೆ, ಅದರ ವಿಮರ್ಶೆಯನ್ನು ಯಾರೂ ಉಚಿತ ವಿಮರ್ಶೆಮಾಡಿ ಬರೆದು ಕಳುಹಬಹುದು. ಅಂತಹ ವಿಶೇಷ ವಿಮರ್ಶೆಗಳಿಗೂ ಈ ವಿಭಾಗದಲ್ಲಿ ಅವಕಾಶ ಕೊಡಲಾಗುವುದು.

—ಸಂಪಾದಕರು

ಈ ಷಟ್‌ಪದಿ ಅಪೂರ್ವವೇ?

ಕ. ಸಾ. ಪರಿಷತ್ತಿನ ಮುಖಪತ್ರಿಕೆಯಾದ 'ಕನ್ನಡ ನುಡಿ'ಯ ಕಳೆದ ಫೇಬ್ರುವರಿ ಸಂಚಿಕೆಯಲ್ಲಿ, ಶ್ರೀ. ಪಾಂ. ಭೀ. ದೇಸಾಯಿ ಎಂ. ಎ. ನೀಲಗಿರಿ ಅವರು 'ಸಾಹಿತ್ಯಸಂಶೋಧನ— ಒಂದು ಅಪೂರ್ವ ಷಟ್‌ಪದಿ' ಎಂಬುದೊಂದು ಪುಟ್ಟ ಬರೆಹವನ್ನು ಬರೆದು, ಸಾಹಿತ್ಯಾಭ್ಯಾಸಿಗಳ ಕುತೂಹಲವನ್ನು ಕೆರಳಿಸಿದ್ದಾರೆ. ಅದರಲ್ಲಿ ಅವರು, 'ಧಾರವಾಡ ಜಿಲ್ಲೆಯ ಅಮ್ಮಿನಭಾವಿ ಗ್ರಾಮದ ಬಸ್ತಿಯ ಛಾವಣಿಯಲ್ಲಿ ಕಟ್ಟಿದ ಒಂದು ಶಿಲಾಶಾಸನದಲ್ಲಿ ಅಪೂರ್ವವಾದ ಒಂದು ಷಟ್‌ಪದಿ ಪದ್ಯವು ಕಾಣಿಸಿಕೊಳ್ಳುತ್ತದೆ!' ಎಂಬುದಾಗಿ ಬರೆದು, ಅದರ ಛಂದೋರೂಪ ಕುರಿತು ಸಂದಿಗ್ಧಭಾವದವರಾಗಿ, ಚರ್ಚೆ ಮಾಡಿದ್ದಾರೆ. ಏಕೆಂದರೆ ಆ ಪದ್ಯವನ್ನು ಶಿಲಾಶಾಸನದಲ್ಲಿ 'ಷಟ್‌ಪದಿ' ಎಂದು ಹೆಸರಿಸಲಾಗಿದ್ದು, ಪ್ರಚಾರದಲ್ಲಿರುವ ಆರು ಷಟ್‌ಪದಿಗಳಲ್ಲಿಯ ಯಾವುದೊಂದರ ಲಕ್ಷಣಕ್ಕೂ ಅದು ಹೊಂದುವುದಿಲ್ಲ. ಆ ಪದ್ಯವು ಯೆಂದರೆ ಖಿಲವಾದ ಭಾಗವು ಹೋಗಿ :

'ಹರಪಾದಾಂಬುಜ ಭೃಂಗಂ
ಪರನಾರೀ ಜನ ದೂರಂ
.... ||
.... ಜಾತರೂಪಂ
ಸರಸತಿ ಗಣಭಕ್ತಂ [ತಾಂ]
ನರಪಮ್ಮಂ ನೆಗರ್ದನೀ ಧರೆಯೊಳಗೆ !"

ಈ ರೀತಿಯಲ್ಲಿ ಉಳಿದುಕೊಂಡಿದೆಯೆಂದು ಶ್ರೀ ಪಾಂ. ಭೀ. ದೇಸಾಯಿಯವರು ತಮ್ಮ ಲೇಖನದಲ್ಲಿ ಉದ್ಧರಿಸಿರುವರು.

ಅಹುದು, ಕೇವಲ ಮಾತ್ರಾಗಣಬದ್ಧವಾಗಿ ಇಂದು ಪ್ರಚಾರದಲ್ಲಿರುವ ಆರು ಷಟ್ಪದಿಗಳಲ್ಲಿ ಯಾವ ಷಟ್ಪದಿಗೂ ಈ ಷಟ್‌ಪದಿ ಹೋಲುವುದಿಲ್ಲ. ಆದರೆ ಈ ಶಿಲಾಲೇಖದಲ್ಲಿಯ ಷಟ್‌ಪದಿಯು, ಪ್ರಚಲಿತ ಆರು ಷಟ್ಪದಿಗಳು ಹುಟ್ಟುವುದಕ್ಕಿಂತ ಮೊದಲು, ಕನ್ನಡದಲ್ಲಿ ಒಂದೊಂದಾಗಿ ಬಳಕೆಯಲ್ಲಿರಬಹುದಾದ 'ಷಟ್‌ಪದಿ'ಯ ಲಕ್ಷಣಕ್ಕೆ ಸಂಪೂರ್ಣವಾಗಿ ಹೊಂದುತ್ತಿದೆಯೆಂದು ಹೇಳುವಂತಿದೆ. ಆ ಪೂರ್ವಷಟ್ಪದಿಯು ನಿಯಮಿತ ಮಾತ್ರಾಗಣ ನಿಬದ್ಧವಾದುದಿರದೆ, ಅಂಶಗಣಗಳಾದ ವಿಷ್ಣು-ರುದ್ರಗಣ ನಿಬದ್ಧವಾದುದಿರುವುದು. ನಾಗವರ್ಮನು ತನ್ನ ಛಂದಸ್ಸಿನಲ್ಲಿ ಒಂದೆ ಒಂದು ಷಟ್ಪದಿಯನ್ನು ಹೇಳಿ, ಅದರ ಲಕ್ಷಣವನ್ನು ಹೀಗೆ ವಿವರಿಸಿದ್ದಾನೆ :

ಮುಂದರ ಧರಗಣ-
ಮೊಂದಿರೆ ಕಡೆಯೊಳ್
(ಬಂದಿರ್ಕಾರಂತ್ಯದೊಳ್)
ಕುಂದದೆ ನೆಲಸುಗೆ ಮದನಹರಂ ||
ಇಂದು ನಿಭಾನನೆ
ಮುಂದಣ ತೆರನೀ
ಯಂದಮೆಯಾಗಲೆ ಷಟ್ಪದಿ ಕೇಳ್ ||

ಈ ಲಕ್ಷಣಪದ್ಯವು ಷಟ್ಪದಿಯಾಗಿದೆಯಷ್ಟೇ ಅಲ್ಲ; ಪ್ರಚಾರದಲ್ಲಿರುವ ಶರಷಟ್‌ಪದಿಯ ಲಕ್ಷಣವನ್ನು ಇದಕ್ಕೆ ಅನ್ವಯಿಸಲು ಬರುವಂತಿದೆ. ಆದುದರಿಂದಲೇ ಈ ಪದ್ಯವು, ನಾಗವರ್ಮನ ತರುವಾಯದ ಪ್ರತಿಕಾರರಲ್ಲಿ ಪಾಠಾಂತರ ಹೊಂದುತ್ತ ನಡೆದಂತೆ ಕಾಣುತ್ತದೆ. ದಿವಂಗತರೆ. ಕಿಟೆಲ್ ಅವರು ಸಂಪಾದಿಸಿ ಪ್ರಕಟಿಸಿದ ಛಂದಸ್ಸಿನಲ್ಲಿ ಈ ಪಾಠಾಂತರಿತ ಪದ್ಯವೇ ಶರಷಟ್ಪದಿಯ ಲಕ್ಷಣಪದ್ಯವಾಗಿ ಅಚ್ಚಾಗಿದೆ. ಕನ್ನಡ ವೃತ್ತಗಳ ಹೆಸರನ್ನು ಹೇಳುವಾಗ ನಾಗವರ್ಮನು :

" ಮದನವತಿಯಕ್ಕರಂ ಚೌ-
ಪದಿ ಗೀತಿಕೆಯೇಳೆ ತಿವದಿಯುತ್ಸಾಹಂ ಷಟ್-
ಪದಿಯಕ್ಕರಿಕೆ ಕರಂ ಚೆ-
ಲ್ವೊದವಿದ ಛಂದೋವತಂಸ........"

ಎಂದು ಹೇಳಿರುವುದನ್ನು ನೋಡಿದರೆ, 'ತಿವದಿ' 'ಚೌಪದಿ'ಗಳಂತೆ ಷಟ್‌ಪದಿಯೂ ಒಂದೆ ಒಂದು ಇದ್ದಿತೆಂದು ತೋರುವುದು. 'ತಿವದಿ' ಅಂಶಗಣಬದ್ಧ ವೃತ್ತವಾದುದರಿಂದ, ಅದರ ಇಮ್ಮಡಿಯಾದ ಷಟ್ಪದಿಯೂ ಅಂಶಗಣಬದ್ಧವೃತ್ತವಾಗಿಯೆ ಇದ್ದಿತು. ಎಂತಲೇ ನಾಗವರ್ಮನು ಷಟ್ಪದಿಯ ಲಕ್ಷಣವನ್ನು ಹೇಳುವಾಗ, ನಿಯಮಿತ ಮಾತ್ರಾಗಣಗಳನ್ನು ಹೇಳದೆ, ಅಂಶಗಣಗಳ ಎಣಿಕೆಯನ್ನು ಹೇಳಿದ್ದಾನೆಂಬುದು, ಮೇಲಿನ ಷಟ್ಪದಿ ಲಕ್ಷಣ ಪದ್ಯದಿಂದ ಅಭಿವ್ಯಕ್ತವಾಗುವುದು.

ಇನ್ನು ಅಂಶಗಣಗಳು ನಿಯಮಿತ ಮಾತ್ರೆಗಳಿಂದ ಕೂಡಿರದೆ, ಅವುಗಳನ್ನು ಹೇಳುವಾಗ ಒಂದು ಲಯವನ್ನು ಇರಿಸಿಕೊಂಡು, ಗಣಾಕ್ಷರಗಳನ್ನು ಎಳೆದಾಡಿ ಲಯಕ್ಕೆ ಸರಿಹೊಂದಿಸಿಕೊಳ್ಳ ಬೇಕಾಗುವುದೆಂಬುದನ್ನು ಬೇರೆಯಾಗಿ ಹೇಳಲೇಬೇಕಾಗಿಲ್ಲ. ಕನ್ನಡದ ಶುದ್ಧ ಜಾನಪದ ವೃತ್ತವಾದ ಸಾಂಗತ್ಯವು ಈ ಮಾತಿಗೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

ನಾಗವರ್ಮನ ಷಟ್ಪದಿಯ ಲಕ್ಷಣದಂತೆ, ಷಟ್ಪದಿಯ ಪದ್ಯಾರ್ಧ ಆರು ವಿಷ್ಣುಗಣ ಕೊನೆಗೊಂದು ರುದ್ರಗಣ ಇವುಗಳಿಂದ ಕೂಡಿ-ರುವುದು. ವಿಷ್ಣುಗಣವು ೮ ಬಗೆಯುದಾಗಿರುವುದು; ರುದ್ರಗಣವು ೧೬ ಬಗೆಯುದಾಗಿರುವುದು. (ಬಗೆಗಳನ್ನು ಛಂದಸ್ಸಿನಲ್ಲಿ ನೋಡಿರಿ) ನಾಗವರ್ಮನ ಷಟ್ಪದಿ ಲಕ್ಷಣಪದ್ಯವು ಷಟ್ಪದಿಯ ಲಕ್ಷ್ಯಪದ್ಯವೂ ಆಗಿರುವುದು. ಈ ಷಟ್ಪದಿಯನ್ನು ಅಂಶಗಣದ ರೀತಿಯಂತೆ ತಾಳದಲ್ಲಿ ಹೇಳಬೇಕಾದರೆ, ಹೀಗೆ ಎಳೆದೆಳೆದು ಹೇಳ ಬೇಕಾಗುವುದು:

"ಮಂದಾರಾ ಧರಗಾಣಾ
ಮೊಂದೀರೆ ಕಡೆಯೋೞ್
ಕುಂದಾದೇ ನೆಲಸೂಗೆ ಮದನಾಹರಂ ॥
ಇಂದೂ ನೀಭಾನಾನೇ
ಮುಂದಾಣಾ ತಿರನೀೕೕ
ಯಂದ್ಯಾಮೋ ಯಾಗ್ಯಲೇ ಷಟ್ಪಾದೀ ತೇೞ್॥

ಈ ರೀತಿಯನ್ನು ತಿಳಿದುಕೊಂಡರೆ ಸಾಕು. ಅಮ್ಮಿನಭಾವಿಯ ಶಿಲಾಶಾಸನದಲ್ಲಿಯ ಷಟ್ಪದಿಯೆಂದರೆ ಎಂತಹ ಷಟ್ಪದಿಯೆಂಬುದು ಕಣ್ಣಿಂದ ತಾನೇ ಗೊತ್ತಾಗುವುದು. ಈ ಷಟ್‌ಪದಿಯ ಲಘುಚರಣ-ಗಳಲ್ಲಿ ಎರಡೆರಡು ವಿಷ್ಣುಗಣಗಳಿವೆ. ದೀರ್ಘಚರಣದಲ್ಲಿ ಎರಡು ವಿಷ್ಣುಗಣಗಳಿದ್ದು ಕೊನೆಗೊಂದು ರುದ್ರಗಣವಿದೆ. ಚೌಕಕಂಸದಲ್ಲಿ ತೋರಿಸಿದ 'ತಾಂ' (೫ನೆಯ ಪಾದದ ಕೊನೆಗೆ) ಎಂಬ ಅಕ್ಷರವು ಮೂಲದಲ್ಲಿ ಇರಲಾರದು. ಅದನ್ನು ಶಿಲಾಶಾಸನದ ವಾಚಕರು ಸೇರಿಸಿರಬಹುದು. 'ಸರಸತಿ' 'ಗಣಭಕ್ತಂ' ಇವೆರಡೂ ಪದಗಳೂ ವಿಷ್ಣುಗಣಗಳಾಗಿವೆ. ನಾಲ್ಕನೆಯ ಚರಣದ ಕೊನೆಯಲ್ಲಿರುವ 'ಜಾತರೂಪಂ' ಎಂಬುದು ಮೂಲದಲ್ಲಿ ಇನ್ನೇನೋ ಇರಬಹುದಾಗಿದೆ. ಏಕೆಂದರೆ 'ಜಾತರೂಪಂ' ವಿಷ್ಣುಗಣಕ್ಕೆ ಸೇರಿದುದಲ್ಲ; ರುದ್ರಗ-ಣಕ್ಕೆ ಸೇರಿದುದು.

ಇಷ್ಟೆಲ್ಲ ವಿಚಾರಮಾಡಿ ನೋಡಿದಾಗ, ಶಿಲಾಶಾಸನದ ಈ ಷಟ್ಪದಿಯು ಅಪೂರ್ವ ಷಟ್ಪದಿಯಾಗಿರದೆ, ನಾಗವರ್ಮನ ಕಾಲದ ಪೂರ್ವಷಟ್ಪದಿಯೇ ಆಗಿರುವುದೆಂಬ ಸಂಗತಿ ಸ್ಪಷ್ಟವಾಗಿ ಕಂಡು-ಬರುವುದು. ಏನೇ ಇರಲಿ, ಈ ಷಟ್‌ಪದಿಯು ಕನ್ನಡ ಷಟ್‌ಪದಿಯ ಇತಿಹಾಸದ ಮೇಲೆ ಬೆಳಕನ್ನು ಕೆಡಹುವ ಅಪೂರ್ವಕಾರ್ಯ ಮಾಡಿದೆಯೆಂಬುದು ಮಾತ್ರ ಖಂಡಿತವಾದ ಮಾತು.

—ಬೆಟಗೇರಿ ಕೃಷ್ಣಶರ್ಮ

ಬೆಳವಲ ಒಕ್ಕಲಿತಿ

(ಒಂದು ಸಲ್ಲಾಪ) 'ಆನಂದಕಂದ'

ಬುತ್ತೀ ತಗೊಂಡು ಹೋಗ್ತೇನಿ ಹೊಲಕ—ನಾ
ಬತೇನಿ ಹೊತ್ತು ಮುಣಗುದಕ.......
ಬುತ್ತೀ ತಗೊಂಡು ಹೋಗ್ತೇನಿ ಹೊಲಕ ! ॥ಪಲ್ಲವಿ॥
ಹೋಳೀ ದಂಡೀ ಮ್ಯಾಗs ನಮ್ಮ ಹೊಲಾ....
ಬೆಳೆದು ನಿಂತೈತಿ ಬಿಳಿಜ್ವಾಳ ನಿಲಾ....
ತೆನಿಗಾಳು ಮುತ್ತಿನ ಗೊಂಚಲಾ....
ಅವನ್ನs ನೋಡ್-ನೋಡಿ ಹಿಗ್ಗಿ ಹಾಡುದಕ—
ಬುತ್ತೀ ತಗೊಂಡು ಹೋಗ್ತೇನಿ ಹೊಲಕ ! ೧
ಹೊಳೀ ಬದಿಯಾಗs ಅವರಿಯ ಸಾಲಾ....
ಬದನೀ ಮಡಿಯಾಗ ಮಿಡಿಗಯಿ ಭಾಳಾ....
ಕಡ್ಲೀ ಸುಲಗಾಯಿ ಸವಿ-ಸವಿ ಕಾಳಾ....
ಕುಸಿಬೀ ಹೂವೀನ ಕುಸರೆಷ್ಟು ನಾಜೂಕ—
ಬುತ್ತೀ ತಗೊಂಡು ಹೋಗ್ತೇನಿ ಹೊಲಕ ! ೨
ದುಡಿಯೂ ಎತ್ತು ಎರಡು ಚಿನ್ನಾ-ರನ್ನಾ....
ದಿನಾ ತಿಂತಾವ ಹೊಡಿಹಸರನ್ನಾ....
ಅವು ತಿಂದಷ್ಟು ಹೆಚ್ಚು ನಮಗನ್ನಾ....
ನಾ ನೋಡ್ತೇನಿ ಅವನ್ನs ಚಣಚಣಕ—
ಬುತ್ತೀ ತಗೊಂಡು ಹೋಗ್ತೇನಿ ಹೊಲಕ ! ೩
ಕಟ್ಟಿ ಮೇಯುತಾವ ಎರಡು ಹೋರಿ....
ಕೊಂಡು ತಂದಾನೌ ಜಾತ್ರ್ಯಾಗ ದೊರಿ....
ಬೆಲೀ ತಿಂದಾವವ್ವಾ ಅವು ಭಾರಿ....
ನಾನs ತೋರ್‌ಸಾಕೆ ದಿನಾ ನೀರವಕ—
ಬುತ್ತೀ ತಗೊಂಡು ಹೋಗ್ತೇನಿ ಹೊಲಕ ! ೪
ದುಡದು ದುಡದು ಹಸಿದ ನನ್ನ ದೊರಿ....
ನೋಡ್ತs ಇರತಾನ ನಾಬರೂ ದಾರಿ....
ನನ್ನ ಬುತ್ತೆಂದರವಗ ಸಕ್ಕsರಿ....
ನಾನs ನೀಡ್ತೇನ ಕುಂತು ಮುಂದs ಉಣ್ಣಾಕ—
ಬುತ್ತೀ ತಗೊಂಡು ಹೋಗ್ತೇನಿ ಹೊಲಕ ! ೫
ಉಳದಿರತೈತಿ ಹೊತ್ತು ಕೈಮಾರಾ....
ಆವಾಗs ಬೆಳಸಿ ತೈಯಾರಾ....
ಕುಂತು ತಿಂತೀವ ನಾವೆಡರಾ ಬದರಾ....
ಏನು ರುಚಿಯವ್ವಾ ಬಿಳಿಜೋಳ ಫಲಕ—
ಬುತ್ತೀ ತಗೊಂಡು ಹೋಗ್ತೇನಿ ಹೊಲಕ ! ೬
ಆಡ್ತೀವs ಕೂಡಿ ಏನೋ ಮಾತಾ....
ಮಾಡ್ತೀವs ಬದಿಕಿನs ಬೇತಾ....
ನೋಡ್ತೇವs ಪ್ರೀತಿಯಿಂದ ಕೂತಾ....
ನಾಚಿಕಿ ಬರತೈತಿ ಮುಂದಿಂದೆಲ್ಲಾ ಹೇಳಾಕ—
ಬುತ್ತೀ ತಗೊಂಡು ಹೋಗ್ತೇನಿ ಹೊಲಕ ! ೭

ನಾಡನಡೆ

(ಕಾಲಭೈರವ)

●

ಹೊರನಾಡಿನ ಕನ್ನಡಿಗರು

ಹೊರನಾಡಿಗೆ ಹೋದ ಕನ್ನಡಿಗರು ಕನ್ನಡಿಗರಾಗಿ ಉಳಿಯುತ್ತಿರಲಿಲ್ಲವಿಷ್ಟೇ ಅಲ್ಲ; ತಾವು ಕನ್ನಡಿಗರೆಂದು ಹೇಳಿಕೊಳ್ಳಲೂ ನಾಚುತ್ತಲಿದ್ದರು. ಇಂತಹ ಕಾಲ ಕಳೆದು ಹೋಗಿ ಬಹಳದಿನಗಳೇನೂ ಆಗಿಲ್ಲ. ಎಂತಲೇ ಹದಿನಾರಾಣೆ ಕನ್ನಡಿಗರಾಗಿ ಇದ್ದವರೂ ಕಾರಣಾಂತರದಿಂದ ಪರಪ್ರಾಂತಗಳಿಗೆ ಹೋಗಿ, ತಿರುಗಿ ತವರೂರಿಗೆ ಬರುವಾಗ ಕನ್ನಡತನವನ್ನು ಕಳೆದುಕೊಂಡೇ ಬರುತ್ತಲಿದ್ದರು. ಇಂದು ಕರ್ನಾಟಕದಲ್ಲಿದ್ದು ಅನ್ಯಭಾಷಾಭಾಷಿಗಳಾಗಿದ್ದ ಮನೆತನಗಳು, ಮೂಲದಲ್ಲಿ ಅಚ್ಚ ಕನ್ನಡ ಮನೆತನಗಳಾಗಿ ಇದ್ದುದನ್ನು ಕಂಡು ಹಿಡಿಯಬಹುದಾಗಿದೆ. ಇಂದು ಕಾಲ ಬದಲಾಗಿದೆ. ಕನ್ನಡಿಗರು ಎಲ್ಲಿ ಹೋಗಿ ಇದ್ದರೂ ತಾವು ಕನ್ನಡಿಗರೆಂದು ಹೇಳಲು ನಾಚಿಕೊಳ್ಳುವುದಿಲ್ಲವಿಷ್ಟೇ ಅಲ್ಲ; ಹೆಮ್ಮೆಪಟ್ಟುಕೊಳ್ಳುತ್ತಲಿದ್ದಾರೆ. ಕಾಲವೈಪರೀತ್ಯದಿಂದ-ಕನ್ನಡಿಗರೆನಿಸಿಕೊಳ್ಳುವವರಿಗೆ-ಬಹು ದಿನಗಳ ವರೆಗೆ; ತಮ್ಮ ನಾಡಿಗಿದ್ದ ಉಜ್ವಲ ಇತಿಹಾಸ-ಸಂಸ್ಕೃತಿ ಮಾಹಾತ್ಮ್ಯದ ಜ್ಞಾನವೇ ಇರಲಿಲ್ಲ. ಸಾಹಿತ್ಯ ರಾಶಿರಾಶಿಯಾಗಿ ಇದ್ದರೂ, ಅದು ಅವರ ಅಜ್ಞಾನದ ತೆರೆಯಲ್ಲಿ ಮರೆಯಾಗಿ ಹೋಗಿದ್ದಿತು. ನೆರೆಯ ನಾಡಿಗರೆಲ್ಲ ತಂತಮ್ಮ ಸಾಹಿತ್ಯ-ಇತಿಹಾಸ-ಸಂಸ್ಕೃತಿಗಳ ಪರಂಪರೆಯನ್ನು ಮೆರೆಯಿಸಿ ಜಂಭ ತೋರಿಸುತ್ತಿದ್ದುದರಿಂದ, ಅಂತಹ ವೈಭವ ತಮಗಿಲ್ಲವೆಂದು ಕಂಡು, ಕನ್ನಡಿಗರೆಂದು ಕರೆಯಿಸಿಕೊಳ್ಳಲೂ ಕನ್ನಡಿಗರಾಗಿಯೇ ಉಳಿಯಲೂ ಹಿಂಜರಿಯುತ್ತಿದ್ದರು. ಇಂದು ಕನ್ನಡಿಗರ ಭವ್ಯವಾದ ಇತಿಹಾಸ, ಸ್ಪೃಹಣೀಯವಾದ ಸಾಹಿತ್ಯ, ಆದರ್ಶವಾದ ಸಂಸ್ಕೃತಿಗಳು ಬಯಲಿಗೆ ಬಂದುದರಿಂದ, ಹೊರನಾಡಿಗೆ ಹೋದರೂ ಕನ್ನಡಿಗರಾಗಿಯೆ ಉಳಿಯಲು ಹವಣಿಸುತ್ತಲಿದ್ದಾರೆ; ಕನ್ನಡತನದ ಹೆಮ್ಮೆಯನ್ನು ಹೊರನಾಡಿನಲ್ಲಿ ಮೆರೆಯಿಸಲು ಮುಂದುವರಿಯುತ್ತಲಿದ್ದಾರೆ. ಕನ್ನಡನಾಡಿನ ಅಂತರಂಗಿಕ ಬಲ-ಸಂವರ್ಧನೆಗೆ ಇದು ಹಿತ್ಯಕರವಾದ ಸಂಗತಿಯೇ ಸರಿ! ಹೊರನಾಡುಗಳಲ್ಲಿ ಕನ್ನಡಿಗರು ತಮ್ಮ ಕೀರ್ತಿಧ್ವಜವನ್ನು ಮೆರೆಯಿಸಿದರೆ, ಒಳನಾಡಿನಲ್ಲಿ ಸಂಘಟನೆ ಹೆಚ್ಚುವುದು. ಆತ್ಮವಿಶ್ವಾಸ ಬೆಳೆಯುವುದು.

ಕನ್ನಡಿಗರ ಸತ್ತ್ವ–ಮಹತ್ತ್ವಗಳು

ಕನ್ನಡನಾಡಿನ ನೆಲದ ಗುಣವೊ, ನೀರಿನ ಗುಣವೊ, ವಾತಾವರಣದ ಗುಣವೋ! ಯಾವಾಗಲೂ ಗುಣಪೂರ್ಣ ವ್ಯಕ್ತಿಗಳ ಬೆಳೆ ಇಲ್ಲಿ ಬಂದೇ ಬರುತ್ತಲಿದೆಯೆಂಬುದನ್ನು ಐತಿಹಾಸಿಕ ಘಟನೆಗಳು ಸಾರಿಹೇಳುತ್ತಲಿವೆ. ಇತಿಹಾಸದ ಮಾತು ಹೋಗಲಿ, ಇಂದಿನ ಕಾಲದಲ್ಲಿಯೂ ಅಖಿಲಭಾರತೀಯ ಮಹತ್ತ್ವವನು ಪಡೆದಿರುವ ಕನ್ನಡಿಗರು ಭಾರತ ದೇಶದ ತುಂಬ ಹರಡಿಕೊಂಡು ಇರುವರು. ಅಂತರ ರಾಷ್ಟ್ರೀಯ ಕೀರ್ತಿಗೆ ಪಾತ್ರರಾಗಿರುವ ಮಾನ್ಯ ಬೆನಗಲ್ಲ ನರಸಿಂಗರಾಯರೂ, ಸೇನಾಪತಿ ಕರಿಯಪ್ಪನವರೂ, ಮಾನ್ಯ ಎಂ. ವಿಶ್ವೇಶ್ವರಯ್ಯನವರೂ ಶ್ರೀ ಕರಮರಕರ ದತ್ತರಾಯರೂ ಶ್ರೀ ದಿವಾಕರ ರಂಗರಾಯರೂ ಅಚ್ಚಕಚ್ಚಿನ ಕನ್ನಡಿಗರೆಂದು ಬೇರೆ ಹೇಳಬೇಕಾಗಿಲ್ಲ. ದಿಲ್ಲಿಯ ಕೇಂದ್ರ ಸರಕಾರದ ಬೇರೆ ಬೇರೆ ಶಾಖೆಗಳಲ್ಲಿಯೂ ಮುಂಬೈ-ಮದ್ರಾಸ-ಹೈದರಾಬಾದ ರಾಜ್ಯಗಳಲ್ಲಿಯೂ ಹೊಣೆಗಾರಿಕೆಯ ಸ್ಥಾನಗಳಲ್ಲಿದ್ದು ಹೆಸರು ಪಡೆದ ಕನ್ನಡಿಗರು ಬೇಕಾದಷ್ಟು ಜನರು. ಇವರೆಲ್ಲ ತಮ್ಮ ಕಾರ್ಯಗೌರವದಿಂದ ಕರ್ನಾಟಕದ ಮಹತ್ತ್ವವನ್ನು ಹೆಚ್ಚಿಸಿದ್ದಾರೆ. ಔತ್ತರೇಯ ಸಂಗೀತದಲ್ಲಿಯೂ ಅಂತಃ ಪ್ರಾಂತಿಯಖ್ಯಾತಿಯನ್ನು ಪಡೆದ ಸಂಗೀತವಿದ್ವಾಂಸರು ಕನ್ನಡಿಗರಲ್ಲಿ ಹಲವು ಜನರಿದ್ದಾರೆ. ಇವರನ್ನೆಲ್ಲ ಒಳನಾಡಿನ ಕನ್ನಡಿಗರು ಗೌರವಭಾವನೆಯಿಂದ ನೋಡಲೇಬೇಕು. ನಮ್ಮ ಗೌರವಭಾವನೆ, ಹೊರನಾಡಿನಲ್ಲಿದ್ದು ಕಾರ್ಯಮಾಡುವ ಕನ್ನಡಿಗರಿಗೆ ಹೆಚ್ಚಿನ ಉತ್ಸಾಹ-ಬಲಗಳನ್ನು ಕೊಡುವುದು. ಅವರ ಉತ್ಸಾಹ-ಬಲಗಳು ಹೆಚ್ಚಿದಂತೆ, ಹೊರನಾಡಿನಲ್ಲಿ ಅವರ ಕಾರ್ಯದ ಬೆಲೆ ಹೆಚ್ಚುವುದು. ಅವರ ಕಾರ್ಯದ ಬೆಲೆ ಹೆಚ್ಚಿದಂತೆ ಕರ್ನಾಟಕದ ಕೀರ್ತಿ ಪ್ರಭೆ ಬೆಳಗತೊಡಗುವುದು.

ಹೊರನಾಡಿನ ಕನ್ನಡಿಗರಲ್ಲಿ ಸಂಘಟನೆ

ಇತ್ತೀಚೆಗೆ ನಾಲ್ಕಾರು ವರ್ಷಗಳಿಂದ ಹೊರನಾಡಿನ ಕನ್ನಡಿಗರು ತಮ್ಮ ಸಂಘಟನಾಬಲವನ್ನು ಬೆಳೆಯಿಸುವ ಸದುದ್ದೇಶದಿಂದ, ಸ್ಥಾಯಿಯಾದ ಸಂಘವೊಂದನ್ನು ಏರ್ಪಡಿಸಿಕೊಂಡಿದ್ದಾರೆ. ಆ ಸಂಘವು ಪ್ರತಿವರ್ಷವೂ ಹೊರನಾದಿನ ಪ್ರಸಿದ್ಧನಗರವೊಂದರಲ್ಲಿ ಹೊರನಾಡ ಕನ್ನಡಿಗರ ಸಮ್ಮೇಳನ'ವೊಂದನ್ನು ಏರ್ಪಡಿಸುತ್ತಿರುತ್ತದೆ. ಈ ವರ್ಷದ ಸಮ್ಮೇಳನವು ಇದೇ ಜುಲೈ ೬ನೆಯ ತಾರೀಖಿನಂದು ದಕ್ಷಿಣ ಹೈದರಾಬಾದಿನಲ್ಲಿ ಮಾನ್ಯ ಕರಮರಕರ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಸೇನಾಪತಿ ಕಾರಿಯಪ್ಪನವರನ್ನು ಮೊದಲುಮಾಡಿಕೊಂಡು—ಹೊರನಾಡಿನಲ್ಲಿರುವ—ಅನೇಕ ಜನ ಕನ್ನಡ ಪ್ರಸಿದ್ಧ ವ್ಯಕ್ತಿಗಳು ಅಲ್ಲಿಗೆ ಬರಲಿದ್ದಾರೆ. ಅದೇ ಸಮ್ಮೇಳನದ ಕಾಲದಲ್ಲಿ ಹೊರನಾಡಿನ ಕನ್ನಡಿಗರೆಲ್ಲ ಸೇರಿ ಶ್ರೀಮಾನ್ ಮಾಸ್ತಿ ವೆಂಕಟೇಶ ಐಯ್ಯಂಗಾರ್ ಅವರ ಅರುವತ್ತು ವರ್ಷ ಪೂರ್ತಿಯ ಉತ್ಸವನ್ನು ನೆರವೇರಿಸಿ, ಅವರಿಗೆ ತಮ್ಮ ಮನ್ನಣೆಯನ್ನು ಸಲ್ಲಿಸಲಿದ್ದಾರೆ. ಪರಪ್ರಾಂತಗಳಲ್ಲಿ ಕನ್ನಡಿಗರ ಇಂತಹ ಉತ್ಸವ ಪ್ರದರ್ಶನಗಳು ಆಗಾಗ ನಡೆಯಬೇಕಾದುದು ಅತ್ಯಗತ್ಯದ ಸಂಗತಿಯಾಗಿದೆ. ಈ ಸಮ್ಮೇಳನವು ಯಶಸ್ವಿಯಾಗಿ ನಡೆದು ಹೊರನಾಡಿನಲ್ಲಿ ಕರ್ನಾಟಕದ ಹೆಸರನ್ನು ಮೆರೆಯಿಸಲಿ!

ಸಾದರ ಸ್ವೀಕಾರ

★

೯. **ರಾಷ್ಟ್ರಭಾಷಾ ಸ್ವಯಂಬೋಧಿನಿ** (ಹಿಂದಿ ಶಿಕ್ಷಕ) ಬರೆದವರು:-ಶ್ರೀ. ಜಿ ಡಿ. ವೈಸಾಳೇ ಮತ್ತು ಶ್ರೀ ಎಸ್. ವಿ. ಭಟ್ಟ ಅವರು. ಪ್ರಕಾಶಕರು: ರಾಮಾಶ್ರಯ ಬುಕ್‌ಡಿಪೊ, ಧಾರವಾಡ. ಕ್ರಾ. ಅ. ೨೬೬ ಪುಟಗಳು. ಬೆಲೆ ೨-೪-೦

೧೦. **ಕಳ್ಳರ ಕೈಚಳಕ ಅಥವಾ ಪೋಲೀಸರ ಕಣ್ಣಿಗೆ ಇಂಗು** (ಪತ್ತೇದಾರಿ ಕಾದಂಬರಿ) ಬರೆದವರು ಶ್ರೀ. ರಮೇಶ.. ಧಾರವಾಡದ ಪ್ರತಿಭಾ ಗ್ರಂಥಮಾಲೆಯ ಪ್ರಕಾಶನ. ಕ್ರಾ. ಅ ೯೪೪ ಪುಟಗಳು. ಬೆಲೆ ೧-೪-೦

೧೧. **ಪರಾವಲಂಬಿ** (ಸಾಮಾಜಿಕ ಕಾದಂಬರಿ) ಬರೆದವರು ಶ್ರೀ. ಜನಾರ್ದನ ಗುರಿಕಾರರು. ಪ್ರಕಾಶಕರು:ಪ್ರತಿಭಾ ಗ್ರಂಥಮಾಲೆ ಧಾರವಾಡ. ಕ್ರಾ. ಅ. ೩೨೨ ಪುಟಗಳು ಬೆಲೆ ೩-೮-೦.

೧೨. ಶ್ರೀಮದ್ ಭಗವದ್ಗೀತಾಸಾರ ಸಂಕೀರ್ತನೆ (ಕಿರುಹೊತ್ತಿಗೆ) ಲೇಖಕರು ಶ್ರೀ. ಎಂ. ಎಸ್. ಸುಬ್ಬಣ್ಣ. ದೊರೆಯುವ ಸ್ಥಳ: ಸತ್ಯಶೋಧನ ಪುಸ್ತಕ ಭಾಂಡಾರ, ಕೋಟೆ, ಬೆಂಗಳೂರು. ಚಿಕ್ಕ ಪುಟಗಳು ೧೬. ಬೆಲೆ ೦-೩-೦

೧೩. **ಫಲಸಂಚಯ** (ನಾಟಕ) ಬರೆದವರು ಶ್ರೀ. ಎನ್. ಎಸ್. ವೀರಪ್ಪ ಬಿ. ಎಸ್‌ಸಿ. (ಆನರ್ಸ್), ಬಿ. ಟಿ. ಮೈಸೂರು. ವಿ. ವಿ. ನಿಲಯ ಮೈಸೂರು. ಪ್ರಕಾಶಕರು ಸರ್ವೋದಯ ಸಾಹಿತ್ಯಮಂದಿರ, ವಿಹಾರಿ ವಿಲಾಸ, ರಾಮಮಂದಿರ ರಸ್ತೆ, ಮೈಸೂರು. ಕ್ರಾ. ಅ. ೨೨ ಪುಟಗಳು. ಬೆಲೆ ೦-೬-೦.

೧೪. **ಮದರಾಸಿನ ಕರ್ನಾಟಕ ಸಂಘದ** ವಾರ್ಷಿಕ ವರದಿ. ಕಾರ್ಯದರ್ಶಿಗಳು ಶ್ರೀ. ಕೆ. ವೈ. ನಾರಾಯಣರಾವ್ ಮತ್ತು ಎನ್. ಆರ್. ಬಾಕೂರರು. ೧೬. ವೀರಾಸ್ವಾಮಿ ಸೆಟ್ಟಿ ಬೀದಿ ಎಗ್ಮೋರ್, ಮದರಾಸು. ಕ್ರಾ. ಅ. ೪೦ ಪುಟಗಳು.

ಕರ್ನಾಟಕತ್ವವನ್ನು ಪರಿಪೋಷಿಸಲು ಮದರಾಸಿನಲ್ಲಿ ಹಲವು ಬಗೆಯ ಚಟುವಟಿಕೆಗಳನ್ನು ನಡೆಯಿಸಿರುವ ಈ ಸಂಘದ ಕಾರ್ಯವು, ಕನ್ನಡಿಗರೆಲ್ಲರಿಗೂ ಇಷ್ಟವಾದುದಾಗಿದೆ. ಸಂತೋಷ.

೧೫. **ಮುಂಬಯಿ ರಾಜ್ಯದಲ್ಲಿ ಹಿಂದೀ** (ಪರಿಚಯಾತ್ಮಕ ಕಿರುಹೊತ್ತಿಗೆ) ಮುಂಬಯಿ ಸರಕಾರದ ಪ್ರಸಿದ್ಧೀಶಾಖೆಯ ಪ್ರಕಟನೆ. ಕ್ರಾ. ಅ. ೩೬ ಪುಟಗಳು. ಬೆಲೆ ೦-೧-೦

೧೬. **ಆಯುರ್ವೇದೀಯ ಪ್ರಥಮಚಿಕಿತ್ಸೆ** (ವೈದ್ಯಕ ಗ್ರಂಥ) ಲೇಖಕರು ವೈದ್ಯ ಬುರ್ಲಿ ಮಧ್ವಾಚಾರ್ಯರು. ಪ್ರಕಾಶಕರು: ಆಯುರ್ವೇದ ಸೇವಾಕುಲ ಪ್ರಕಾಶನ, ಬಾಗಿಲಕೋಟೆ. ಕ್ರಾ. ಅ. ೧೦೪ ಪುಟಗಳು. ಬೆಲೆ ೧-೪-೦.

೧೭. **ಬಣ್ಣದ ಚೆಂಡು** (ಕವನ ಸಂಕಲನ). ಶ್ರೀ. ಡಿ. ಎಸ್. ಕರ್ಕಿ ಮತ್ತು ಎಸ್. ಡಿ. ಇಂಚಲ ಅವರ ಕವನಗಳು. ಪ್ರಕಾಶಕರು ಶ್ರೀ. ಬ. ಗಂ. ತುರಮರಿ ಬಿ. ಎ., ಬಿ. ಟಿ. ಉದಯ ಸಾಹಿತ್ಯಪ್ರಕಾಶನ, ಬೆಳಗಾಂವಿ. ಕ್ರಾ. ಅ. ೩೪ ಪುಟಗಳು. ಬೆಲೆ ೦-೫-೦.

೧೮. **ಗುಕ್ಕ ಇತರ ಕಥೆಗಳು** (ಕಥಾಸಂಕಲನ) ಶ್ರೀ. ಕುಲಕರ್ಣಿ ಬಿಂದುಮಾಧವರು ಲೇಖಕರು. ಬಾದಾಮಿಯ ಶಾಂತಿ ಸಾಹಿತ್ಯಮಾಲೆಯ ಪ್ರಕಾಶನ. ಕ್ರಾ. ಅ. ೯೬ ಪುಟಗಳು. ಬೆಲೆ ೧-೦-೦

೧೯. **ಪರಿಹಾರ** (ಸಾಮಾಜಿಕ ಕಾದಂಬರಿ) ಲೇಖಕರು ಶ್ರೀ. ದತ್ತಾತ್ರೇಯ ಕುಲಕರ್ಣಿ. ಧಾರವಾಡದ ಲಲಿತಸಾಹಿತ್ಯ ಮಾಲೆಯ ೩೩ನೆಯ ಕುಡಿ ಕ್ರಾ. ಅ. ೧೩೨ ಪುಟಗಳು. ಬೆಲೆ ೨-೦-೦.

೨೦. **ರಾಜಾ ಪುರೂರವ** (ಕಾಲಿದಾಸನ ವಿಕ್ರಮೋರ್ವಶೀಯ ಕಾವ್ಯದ ಕಥಾಸಂಗ್ರಹ). ಬರೆದವರು ಶ್ರೀ. ಗೋವಿಂದ ವೆಂಕಟೇಶ ಚುಳುಕಿಯವರು. ಧಾರವಾಡದ ಲಲಿತ ಸಾಹಿತ್ಯ ಮಾಲೆಯ ೩೨ನೆಯ ಕುಡಿ. ಕ್ರಾ. ಅ. ೧೨೪ ಪುಟ. ಬೆಲೆ ೧-೮-೦.

೨೧. **ಶರಣರ ಅನುಭಾವದ ವಿಚಾರಗಳು** (ಕಿರುಹೊತ್ತಿಗೆ) ಬರೆದವರು ಶ್ರೀ. ಶಂಕರ ಪಾಟೀಲ, ಚಿತ್ರದುರ್ಗ. ಪ್ರಕಾಶಕರು ವೀರಶೈವ ತರುಣಸಂಘ, ಗದಗ. ಫೂ. ಕ್ಯಾ. ಅ. ೪೦ ಪುಟಗಳು. ಬೆಲೆ ?

೨೨. **ಬಲಿ-ವಾಮನ** (ಗೀತರೂಪಕ) ಬರೆದವರು ಶ್ರೀ. ಜಿ. ಆರ್. ಪಾಂಡೇಶ್ವರ, ದೇಶಪಾಂಡೇನಗರ, ಹುಬ್ಬಳ್ಳಿ. ಕ್ರಾ. ೧೬ದ ೨೪ ಪುಟಗಳು. ಬೆಲೆ ೦-೬-೦

೨೩. **ಮಕ್ಕಳ ರಾಮಾಯಣ** (ಚಿಕ್ಕವರಿಗಾಗಿ) ಲೇಖಕರು ಶ್ರೀ. ಭಾಲಚಂದ್ರ ವೆಂಕಟೇಶ ಫಾಣೇಕರ, ಸಮಾಜ ಪುಸ್ತಕಾಲಯ, ಧಾರವಾಡ. ಕ್ರಾ. ಅ. ೬೬ ಪುಟಗಳು ಬೆಲೆ ೦-೧೦-೦

೨೪. **ಅರ್ಥಶಾಸ್ತ್ರಪರಿಚಯ** (ಆರ್ಥಿಕ ವಿಜ್ಞಾನಗ್ರಂಥ) ಬರೆದವರು ಶ್ರೀ. ಎನ್. ವಿ. ಮುಜುಮದಾರ ಬಿ. ಎ. (ಆನರ್ಸ್) ಧಾರವಾಡ. ಪ್ರಕಾಶಕರು ಶ್ರೀ. ಎನ್. ಟಿ. ಕುಲಕರ್ಣಿ, ಲಕ್ಷ್ಮೀ ನಾರಾಯಣನ ಗುಡಿಯ ಹತ್ತಿರ, ಧಾರವಾಡ. ಕ್ರಾ. ಅ. ೧೭೨ ಪುಟಗಳು. ಬೆಲೆ ೨-೪-೦

೨೫. **ನಮ್ಮ ನಾಡು.** (ಕನ್ನಡನಾಡಿನ ಪರಿಚಯಾತ್ಮಕ ಗ್ರಂಥ) ಬರೆದವರು ಶ್ರೀ. ರೇ. ಸಿದ್ದಪ್ಪ. ಮೈಸೂರಿನ ಉಷಾ ಸಾಹಿತ್ಯಮಾಲೆಯ ಪ್ರಕಟನೆ. ಕ್ರಾ. ಅ. ೧೦೪ ಪುಟಗಳು. ಬೆಲೆ ೧-೪-೦

೨೬. **ಚೇತನ** (ಕನ್ನಡ ಹೊಸ ಮಾಸಪತ್ರಿಕೆ). ಸಂಪಾದಕರು ಶ್ರೀ. ಶಂಕರ ಹೆಜ್ಮಾಡಿ ಅವರು. ಪ್ರಕಾಶಕರು 'ಚೇತನ' ಪಬ್ಲಿಕೇಶನ್, ಭಾವ್ ಮ್ಯಾನ್ಶನ್, ೩ ನೆಯ ಮಾಳಿಗೆ. ಪಿಟ್ಸ್ ಸ್ಟ್ರೀಟ್, ಮುಂಬಯಿ ೧. ಕ್ರಾ. ೧/೮ದ ೨೮ ಪುಟಗಳು. ವಾರ್ಷಿಕ ಚಂದಾ ೩-೦ ೧. ಬಿಡಿಸಂಚಿಕೆಗೆ ೦-೪-೦

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯುಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು ! ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

‘ ಆನಂದಕಂದ ’ ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವುವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಈಗ ತಾನೆ ಪ್ರಕಟಿಸಿದ ‘ ಆನಂದಕಂದರ ’ ತರಂಗರೂಪಕ ಸಂಕಲನ :

ಬೆಳವಡಿ ಮಲ್ಲಮ್ಮ

ಕ್ರಾ. ಅ. ೧೧೩ ಪುಟಗಳು. ಹೊಳಪಿನ ಕಾಗದ. ಬೆಲೆ ೧-೮-೦.

ಹೊಸತಾಗಿಯೆ ಹೊರಟ ಕವನ ಸಂಕಲನ

ಕಾರಹುಣ್ಣಿವೆ

ಇದರಲ್ಲಿ ‘ಆನಂದಕಂದ’ರ ರಸವತ್ತಾದ ೫೨ ಕವನಗಳು ಸಂಕಲನಗೊಂಡಿವೆ. ವಿವಿಧ ಭಾವಗಳನ್ನು ವಿಸ್ತರಿಸಿದ ಸುಂದರವಾದ ಭಾವಗೀತಗಳು ! ಸಂಗೀತಗಾರರ ಕಾವ್ಯಗಾಯನ ಕಾರ್ಯಕ್ರಮಕ್ಕೆ ತುಂಬ ಸಹಕಾರಿಯಾದುವು !

ಕ್ರಾ. ಅ. ೧೨೮ ಪುಟಗಳು. ಅಂದವಾದ ಅಚ್ಚು. ಬೆಲೆ ೨-೦-೦.

ಸದ್ಯ ನಮ್ಮಲ್ಲಿ ದೊರೆಯುವ ‘ ಆನಂದಕಂದ ’ರ ಬೇರೆ ಗ್ರಂಥಗಳು

ಕಾದಂಬರಿ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	**ಬಡತನದ ಬಾಳು**	**ಕರ್ನಾಟಕ ಜನಜೀವನ**
ಸುದರ್ಶನ	**ನಮ್ಮ ಬದುಕು**	ಜೀವನ ಚರಿತ್ರ
ಕವನ ಸಂಕಲನ	**ಸಂಸಾರ ಚಿತ್ರ**	**ಶ್ರೀ. ಬಸವಣ್ಣನವರು**
ವಿರಹಿಣಿ	**ಮಾತನಾಡುವ ಕಲ್ಲು**	
ಒಡನಾಡಿ		

ಅಲ್ಲದೆ ಶ್ರೀ. ಹುದ್ದಾರರ ‘ **ಚಿತ್ರಕಲಾಪ್ರವೇಶ** ’ವೂ ಜಾಡಿಯ ಚಾಣಕ್ಯನ ‘ **ಜಾತೀಯಸಮಸ್ಯೆ** ’ ‘ **ಕರ್ನಾಟಕ ಏಕೀಕರಣ** ’, ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೫ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೇ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ : **ಎಸ್. ಡಿ. ಧರಮುಟ್ಟಿ, ಶ. ಪ್ರ. ಮಂದಿರ, ಧಾರವಾಡ.**

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar -4110—52.

ಆಗಸ್ಟ್
೧೯೫೨

ಸಂಪುಟ
೧೫

ಸಂಚಿಕೆ
೩

ಈ ಸಂಚಿಕೆಯಲ್ಲಿ:

★

ನಿಯಮೋಲ್ಲಂಘನ (ಕವನ)	ಶ್ರೀ. ಚೆನ್ನವೀರ ಕಣವಿ ಎಂ. ಎ.	೮೧
ಮೂಲ ಶಿಕ್ಷಣದ ಣೋಡಿಯಾಟ (ಸಂಪಾದಕೀಯ)	ಸಂಪಾದಕರು	೮೨
ನಾಡನಡೆ (ಪ್ರಾಸಂಗಿಕ ಟಿಪ್ಪಣಿ)	' ಕಾಲಭೈರವ '	೮೪
ಭಾಗೀರಥಿ (ಗೀತರೂಪಕ)	' ಆನಂದಕಂದ '	೮೫
ಯಕ್ಷಗಾನದಲ್ಲಿ ನೃತ್ಯ ಮತ್ತು ಸಂಗೀತ (ಪರಿಚಯ)	ಶ್ರೀ. ಕೋ. ಶಿವರಾಮ ಕಾರಂತರು	೯೩
ಮದುವೆಗಾಗಿ ಪರೀಕ್ಷೆ (ಅನುವಾದಿತ ಕಥೆ)	' ಸಂಗೀತ್ ' ಕೂಡ್ಲಿಗಿ	೯೬
ಮನೆಗೆ ನಡೆದಿರುವಾಗ (ಕವನ)	ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ.	೧೦೩
ಸಂತೋಷವೆಂದರೇನು ? (ಪ್ರಬಂಧ)	ಶ್ರೀ. ಎ. ಎಸ್. ರಾಮಕೃಷ್ಣ, ಮಣಿಪಾಲ	೧೦೪
ಆರ್ಥಿಕ ಅನರ್ಥ ಯೋಜನೆ (ಜೀವನಚಿತ್ರ)	ಶ್ರೀ. ಎನ್. ಕೆ. ಕುಲಕರ್ಣಿ ಎಂ ಎ., ಬಿ.ಟಿ.	೧೦೭
ಪುಸ್ತಕ ವಿಮರ್ಶೆ	ಸಂಪಾದಕರು ಮತ್ತು ಬಿ.ಬಿ ಎಸ್. ರಾವ್	೧೧೧
ಸಾಹಿತ್ಯವಿಹಾರ (ಸಾಹಿತ್ಯಿಕ ಟಿಪ್ಪಣಿಗಳು)	ವಿವಿಧ ಲೇಖಕರು	೧೧೪
ಸಾದರ ಸ್ವೀಕಾರ	ಮೇಲೋಲೆಯ ಪುಟ	೨

JAYANTI

ಸಾದರ ಸ್ವೀಕಾರ

೨೭. **ಮಧುದೀಪಿಕಾ** (ವೈದ್ಯಕ ಗ್ರಂಥ) ಬರೆದವರು ಮತ್ತು ಪ್ರಕಾಶಕರು : ಶ್ರೀ. ಪಾಣಾಜೆ ವೈದ್ಯ ಶಂಕರನಾರಾಯಣ ಭಟ್ಟರು. ವೈತೋಟ, ದಕ್ಷಿಣ ಕನ್ನಡ ಜಿಲ್ಲಾ. ಕ್ರೌ. ಅ. ೨೮ ಪುಟಗಳು. ಬೆಲೆ ೦-೮-೦.

೨೮. **ಇವೆತ್** (ಅನುವಾದಿತ ಕಾದಂಬರಿ). ಗಾಯ್‌ದ. ಮೊಪಾಸಾ ಅವರ ಕಾದಂಬರಿಯನ್ನು ಶ್ರೀ. ಸಿ. ವೆಂಕೋಬಾಚಾರ್ಯ ಬಿ ಎ., ಬಿ ಟಿ. ಅವರು ಅನುವಾದಿಸಿದ್ದಾರೆ. ಹುಬ್ಬಳ್ಳಿಯ ಆನಂದಗ್ರಂಥಮಾಲೆಯ ೩ನೆಯ ವರ್ಷದ ೨ನೆಯ ಕುಸುಮ. ಕ್ರೌ ಅ ೧೨೦ ಪುಟಗಳು. ಬೆಲೆ ೧-೧೨-೦.

೨೯. **ಸ್ನೈಮನ್ನನ ತಂದೆ** (ಕಥಾಸಂಕಲನ) ಮೊಪಾಸಾ ಮತ್ತು ಬೇರೆ ಸಂಥಾಪಿಕರ ಕತೆಗಳನ್ನು ಶ್ರೀ. ಸಿ. ವೆಂಕೋಬಾಚಾರ್ಯರು ಅನುವಾದಿಸಿ ಸಂಕಲಿಸಿದ್ದಾರೆ. ಆನಂದ ಗ್ರಂ.ಮಾಲೆಯ ೨ನೆಯ ವರ್ಷದ ೩ನೆಯ ಕುಸುಮ. ಕ್ರೌ. ಅ. ೧೪೨ ಪುಟಗಳು. ಬೆಲೆ ೧-೧೨-೦

೩೦. **ಪ್ರೊಜೆಕ್ಷನ** (ಪತ್ರಿಕಾಪದ್ಧತಿ ಸಂಸಾರ ಚಿತ್ರಗಳು). ಲೇಖಕರು ಶ್ರೀ ತಿ ಪಿನ್ನನ್ನ. ಸಂಗಿತ ಗ್ರಂಥಮಾಲೆಯ ೨ನೆಯ ವರ್ಷದ ೪ನೆಯ ಕುಸುಮ. ಕ್ರೌ.ಅ.೧೦೪ ಪುಟಗಳು. ಬೆಲೆ ೧-೮ ೦.

೩೧. **ಹಿಮಾಚಲ ಪ್ರವಾಸ** (ಪ್ರವಾಸವೃತ್ತ) ಲೇಖಕರು ಶ್ರೀ. ಎಚ್. ಆರ್. ನಾಗರಾಜರಾಯರು. ಪ್ರಕಾಶಕರು: ಪ್ರಸಾದ ಪಬ್ಲಿಕೇಶನ್, ೫೧ ಉತ್ತರಾದಿ ಮಠದ ಬೀದಿ, ಚಿಕ್ಕಪೇಟೆ, ಬೆಂಗಳೂರು ೨. ಕ್ರೌ.ಅ. ೧೦೪ ಪುಟಗಳು. ಬೆಲೆ ೧-೮-೦.

೩೨. **ಕರ್ನಾಟಕ ಗ್ರಂಥಾಲಯ ಸಂಘ, ಧಾರವಾಡ.** (ಮುಂಬಯಿ ಕರ್ನಾಟಕ ಗ್ರಂಥಾಲಯ ಸಮ್ಮೇಳನದ ಕಾರ್ಯಕಲಾಪಗಳು ಮತ್ತು ವರದಿ) ಪ್ರಕಾಶಕರು : ಡಾ. ಕೆ. ಎಸ್. ಕಮಲಾಪುರ, ಕಾರ್ಯದರ್ಶಿ ಕರ್ನಾಟಕ ಗ್ರಂಥಾಲಯ ಸಂಘ, ಧಾರವಾಡ. ಡೆ. ಅ. ೩೪ ಪುಟಗಳು.

೩೩. **ತಮಿಳು ಪಾಠಗಳು** (ತಮಿಳು ಸಾಹಿತ್ಯ ಪರಿಚಯ) ಲೇಖಕರು : ಶ್ರೀ. ಎಸ್. ರುದ್ರಪತಿ ಎಂ. ಎ. ಪ್ರಕಾಶಕರು: ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು. ಕ್ರೌ.ಅ. ೩೮೪ ಪುಟಗಳು. ಬೆಲೆ ೩-೪-೦.

೩೪. **ಗುರುದೇವ** (ಇಂಗ್ಲಿಷ್-ಕನ್ನಡ ಪತ್ರಿಕೆ). ಸಂಪಾದಕರು : ಎನ್. ಜಿ ಮೈಸೂರುಮಠ ಬಿ. ಎ. (ಆನರ್ಸ್). ಪ್ರಕಾಶಕರು : ಅಧ್ಯಕ್ಷ ಗುರುದೇವ ಸಾಹಿತ್ಯ ಸಮಿತಿ, ಹುಬ್ಬಳ್ಳಿ. ಡೆ. ೪೭೮ ಪುಟಗಳು.

೩೫. **ಷಟ್ಪದಿ ವಂಶ ವಿಕಾಸ** (ಛಂದೋವಿಚಾರ). ಲೇಖಕರು ಬಸವಪ್ಪ ಚೆನ್ನಪ್ಪ ಪಟ್ಟೇದ, ನಿವೃತ್ತ ಸುಪರ್‌ವೈಜ ಸ್ಕೂಲ ಬೋರ್ಡ್, ಬೆಳಗಾಂವಿ. ಪ್ರಕಾಶಕರು : ಶ್ರೀ. ಬಿ. ಪಟ್ಟೇದ, ಹುಕ್ಕೇರಿ, ಜಿಲ್ಲಾ ಬೆಳಗಾಂವಿ. ಕ್ರೌ ಅ. ೧೬ ಪುಟಗ ಬೆಲೆ ಗೊತ್ತಿಲ್ಲ.

೩೬. **Anuvrati Sangha** (ಪರಿಚಯ ಪುಸ್ತಕ) ಸಂ ಪ್ರಮುಖರು ಆಚಾರ್ಯ ಶ್ರೀ ತುಲಸೀರಾಮಜಿ. ವಿಳಾಸ : ಅಣ ವ್ರತಿ ಸಮಿತಿ, ೩ ಪೋರ್ತುಗೀಜ್ ಚರ್ಚ ಸ್ಟ್ರೀಟ್, ಕಲಕತ್ತಾ ಪ್ರೂ. ಕ್ರಾ. ಅ. ೨೬ ಪುಟಗಳು.

೩೭. **ನಾಳಿನ ಹಣ್ಣು** (ಕವನಸಂಕಲನ) ಕವಿ : ಶ್ರೀಮಾ ನೆಗಳೂರ ರಂಗನಾಥರು. ಪ್ರಕಾಶಕರು : ಆನಂದ-ಮಧು-ವಿಜ ಬಂಧು, ಸಾಧನಕೇರಿ, ಧಾರವಾಡ. ಕ್ರೌ. ಅ. ೪೪ ಪುಟಗ ಬೆಲೆ ೦-೧೫-೦.

೩೮ **ನಮ್ಮ ರಾಜ್ಯಘಟನೆ** (ಪರಿಚಯಾತ್ಮಕ ಪಠ್ಯಪುಸ್ತಕ) ಬರೆದವರು : ಗಲಗಲಿಯವರು. ಪ್ರಕಾಶಕರು : ಆಕಳವಾ ಬುಕ್‌ಡಿಪ್ಪೊ, ಧಾರವಾಡ ಕ್ರೌ.ಅ ೬೨ ಪುಟಗಳು. ಬೆಲೆ ೦-೧೨ ೦

೩೯ **ಮನ್ನೂ ಮದುವೆ** (ಸಾಮಾಜಿಕ ಕಾದಂಬರಿ). ಲೇಖಕರು : ಶ್ರೀ. ಎಂ. ಜಿ. ವೆಂಕಟೇಶಯ್ಯ ಎಂ. ಎ., ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಬೆಂಗಳೂರು, ಚಿಕ್ಕಪೇಟೆ ಕ್ರೌ. ಅ. ೧೪೮ ಪುಟಗಳು. ಬೆಲೆ ೨-೦-೦.

೪೦. **ಚಿತ್ರಾ** (ಹೊಸ ಚಲಚ್ಚಿತ್ರ ಮಾಸಪತ್ರಿಕೆ). ಸಂಪಾದಕರು : ಶ್ರೀ. ಬಿ. ಪರ್ವತರಾಯ. ಮತ್ತು ಶ್ರೀ. ಎಸ್. ಎನ ಜೋಗಳೇಕರ್ ಬಿ. ಎ. (ಆನರ್ಸ್), ಬಿ. ಕಾಮ್. ಅವರು ಪ್ರಕಾಶಕರು: ಚಿತ್ರಾ ಕಾರ್ಯಾಲಯ, ಹುಬ್ಬಳ್ಳಿ. ಕ್ರೌ. ೪೦ ಪುಟಗಳು. ವಾರ್ಷಿಕ ಚಂದಾ ೫-೮-೦. ಬಿಡಿ ಸಂಚಿಕೆ ೦-೮ ೦

೪೧. **ನವರತ್ನದ ಕಡಗ** (ಕಥಾಸಂಕಲನ) ಲೇಖಕಿಯ ಶ್ರೀಮತಿ ಶಾರದಾ ಜಡೆ. ಹುಬ್ಬಳ್ಳಿಯ ಸರ್ವೋದಯ ಸಾಹಿ ಮಾಲೆಯ ನಾಲ್ಕನೆಯ ವರ್ಷದ ನಾಲ್ಕನೆಯ ಪುಷ್ಪ. ಕ್ರೌ. ೬೬ ಪುಟಗಳು. ಬೆಲೆ ೦-೮-೦.

೪೨ **ಪಂಚವಾರ್ಷಿಕ ಯೋಜನೆ** (ಸಂಕ್ಷಿಪ್ತ ಪರಿಚಯ ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯ ಪ್ರಕಟನೆ. ಡೆ. ಅ ೮೮ ಪುಟಗಳು ಬೆಲೆ ೦-೪-೦.

೪೩ **ಹೂವಿನ ಹುಡುಗಿ** (ಕಿರುಕಾದಂಬರಿ) ಮೂಲ ತೆಲುಗು ಲೇಖಕರು : ಶ್ರೀ. ಕೊಡಲಿ ಲಕ್ಷ್ಮೀನರಸಿಂಹರಾವ್. ಪ್ರಕಾಶಕ ಮನೋಹರ ಗ್ರಂಥ ಭಾಂಡಾರ, ಧಾರವಾಡ. ಕ್ರೌ.ಅ. ೯೮ ಪುಟಗಳು. ಸಾದಾ ಪ್ರತಿಗೆ ೧-೦-೦. ಉತ್ತಮ ಪ್ರತಿಗೆ ೨-೦-೦.

(ಕವ್ಹರ ೩ನೆಯ ಪುಟ ನೋಡಿ.

ಜಯಂತಿ

ಸಂ. ೧೫. ಸಂಚಿಕೆ. ೩

ಕುಟುಂಬಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮಾ

ವ್ಯವಸ್ಥಾಪಕರು
ಶ್ರೀ. ಡಿ. ಶರತ್‌ಕುಮಾರ

ಪ್ರಕಾಶಕರು :
ಶ್ರೀ. ಎಮ್. ವಿ. ಮೆಳ್ಳಿಗಟ್ಟಿ.

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ನಿಯಮೋಲ್ಲಂಘನ!

ಶ್ರೀ. ಚೆನ್ನವೀರ ಕಣವಿ ಬಿ. ಎ. (ಆನರ್ಸ್) **ಧಾರವಾಡ**

★

‘ ಸುಖ ’ ಎಂದು ನಿಡುಸುಯ್ದು ಹುಯ್ಯಲಿಡುತಿದೆ ಗಾಳಿ
ಜಗದ ಆರ್ದ್ರತೆಯನ್ನೆ ಹೀರಿ ಹೀರಿ!
ಮೂಡಗಾಳಿಗೆ ಬಾನ ಮೊಗ ಒಡೆದು, ಬಿಳಿಬೂದಿ
ಬಳಿದಂತೆ ತೋರುತಿದೆ ಮೇರೆ ಮೀರಿ. ॥ ೧ ॥

ತರುಲತಾದಿಗಳಲ್ಲಿ ಚಿಗುರಿಲ್ಲ ಹೊಗರಿಲ್ಲ—
ಅಸ್ಥಿಪಂಜರವಾಗಿ ನವೆಯುತಿಹವು;
ಎಲ್ಲೊ ಅಂಗೈಯಗಲ ಹಸಿರು ಕಂಡರೆ ಸಾಕು
ಮನದ ಆಶೆಗಳಲ್ಲಿ ಸೇರುತಿಹವು. ॥ ೨ ॥

ಏನು ಬಾನೋ, ಎನಿತು ದೂರವಿದ್ದಂತಿಹುದು.
ನಮಗು ಅದಕೂ ಮಾತುಕತೆಯೆ ಇಲ್ಲ;
ಒಂದು ಮೋಡವೆ? ಮಿಂಚೆ? ಮಳೆಯೆ? ಕಾಮನಬಿಲ್ಲೆ?—
ಚಳಿಗಾಲಕೇ ಕೊಂಚ ಬುದ್ಧಿಯಿಲ್ಲ. ॥ ೩ ॥

ಕ್ಷಾಮಡಾಮರ ಬಡಿದ ನಿರ್ವಾಸಿತರ ತೆರದಿ
ಒಣಗಿದೆಲೆಗಳ ರಾಶಿ ಭಣಗುಟ್ಟಿವೆ!
ಮೈಕೊರೆವ ಚಳಿಗಾಳಿ ನಿಷ್ಕರುಣದಲಿ ದಾಳಿ-
ಗೈಯೆ ತರಗೆಲೆ ಮತ್ತೆ ಮೊರೆಯುತ್ತಿವೆ. ॥ ೪ ॥

ಹೇಮಂತ ಋತುವಿಂಗೆ ಸಾಮಂತರಾಜರೊಲು
ಸೂರ್ಯಚಂದ್ರರು ನಡುಗಿ ಉಡುಗುತಿಹರು;
ಧೀಮಂತ ವರ್ಷಋತು ಗುಡುಗು ಹಾಕುವವರೆಗೆ
ಬರಿಯ ನಾಮಾಂಕಿತರೆ ಮೆರೆಯುತಿಹರು. ॥ ೫ ॥

ಮೂರು ತಿಂಗಳ ಹಿಂದೆ ಮಳೆರಾಯ ಹಗಲಿರುಳು
ಧಾರಿಣಿಗೆ ತನಿಸುಧೆಯ ಗರೆಯುತಿದ್ದ,
ಹರುಷದಾವೇಶದಲಿ ಹೊನಲು ಧುಮ್ಮಿಕ್ಕಿರಲು
ಪ್ರೇಮಗೀತಗಳೆನಿತೊ ಹಾಡುತಿದ್ದ. ॥ ೬ ॥

ಮಳೆಗಾಲವೈತರಲು ನನ್ನ ಕವಿತೆಯ ನವಿಲು
ನೂರು ಕಣ್ಣನು ತೆರೆದು ನರ್ತಿಸುವುದು;
ಭಾವಚಾತಕ ಹೊಚ್ಚ ಹೊಸಮಳೆಯ ತಂಬನಿಯ
ಜೇಂಬನಿಯ ಗುಟುಕರಿಸಿ ನರ್ತಿಸುವುದು. ॥ ೭ ॥

ಎಂದು ಬರುವದೊ ಕಾಲ, ನನ್ನಿನಿಯ ಮಳೆಗಾಲ
ವಿರಹ ವೈಶಾಖವನು ದಾಟಿಸೀತೆ?
ಏನು ಋತುರಂಗಣವೊ ವಿಧಿನಿಯಮಬಂಧನೆಯೊ
ಒಮ್ಮೆಯಾದರು ತಪ್ಪಿ ನಡೆಯದೇಕೆ? ॥ ೮ ॥

ಸಂಪಾದಕೀಯ

★

ಮೂಲಶಿಕ್ಷಣದ ಮೋಡಿಯಾಟ

ಇಂದು ನಮ್ಮ ನಾಡಿನಲ್ಲಿಯ ಪ್ರಾಥಮಿಕ ಶಿಕ್ಷಣಶಾಲೆಗಳೆಲ್ಲ ಮೂಲಶಿಕ್ಷಣ ಶಾಲೆಗಳಾಗಿ ಮಾರ್ಪಡಲು ತೊಡಗಿವೆ. ಇಂದಿನ ರಾಜ್ಯಸರಕಾರದ ಗುರಿ, ಪ್ರಾಥಮಿಕ ಶಾಲೆಗಳಲ್ಲೆಲ್ಲ ಮೂಲಶಿಕ್ಷಣ ಕ್ರಮವನ್ನೇ ಪ್ರಾರಂಭಿಸಬೇಕೆಂಬುದಾಗಿದೆ. ಇದಕ್ಕೆ ಕಾರಣವೆಂದರೆ, ವಿಸ್ತ್ರಲಿತವಾದ ನಮ್ಮ ಸಾಮಾಜಿಕ ಪರಿಸ್ಥಿತಿಯನ್ನು ಹೊಸ ಕಾಲಕ್ಕನುಗುಣವಾದ ಒಂದು ಬಗೆಯಲ್ಲಿ ತಿದ್ದಬೇಕೆನ್ನುವುದು. ಇಂದು ನಮ್ಮ ಸಮಾಜವು ಹೊಸರೀತಿಯಿಂದ ಸುಸಂಘಟಿತವಾಗಬೇಕಾಗಿದೆಯೇನೋ ಸರಿ; ಆದರೆ ಅದಕ್ಕೆ ಸದ್ಯ ರೂಢಿಯಲ್ಲಿ ಬರಲಿರುವ ಬಂದಿರುವ ಮೂಲಶಿಕ್ಷಣಕ್ರಮವು ಪ್ರಯೋಜನಕಾರಿಯಾಗಬಲ್ಲದೇ ಎಂಬುದು ಸಂದೇಹದ ವಿಷಯವಾಗಿದೆ.

ಸಮಾಜದ ಘಟಕವಾದ ವ್ಯಕ್ತಿಯ ವಿಕಾಸಕ್ಕೆ ಅನ್ನ ಜ್ಞಾನಗಳೆರಡೂ ಅತ್ಯಂತ ಅಗತ್ಯವಾಗಿವೆಯೆಂಬ ಮಾತನ್ನು ಯಾರೂ ಒಪ್ಪಬೇಕಾದ ಸಂಗತಿ. ವ್ಯಕ್ತಿಗೆ ಅನ್ನಸಂಪಾದನೆಗಾಗಿ ವೃತ್ತಿಶಿಕ್ಷಣ ಬೇಕಾಗುವುದು, ಜ್ಞಾನಸಂಪಾದನೆಗಾಗಿ ಅಕ್ಷರಶಿಕ್ಷಣ ಬೇಕಾಗುವುದು. ಮೂಲಶಿಕ್ಷಣ ಇವೆರಡನ್ನೂ ಸಮನ್ವಯಗೊಳಿಸಿ, ಒಂದೆ ಕಾಲದಲ್ಲಿ ಎರಡನ್ನೂ ಕಲಿಸಬೇಕೆಂಬ ಮಹೋದ್ದೇಶದಿಂದ ಮುಂದೆ ಬಂದುದಾಗಿದೆ. ಈ ಮಹೋದ್ದೇಶದ ಹಿಂದೆ ಇರುವ ಸದಿಚ್ಛೆ-ಪ್ರಾಮಾಣಿಕತೆಗಳ ವಿಷಯದಲ್ಲಿ ಎರಡು ಮಾತಿಲ್ಲ; ಆದರೆ ಇದು ಯಶಸ್ವಿಯಾಗಿ ಕಾರ್ಯಕಾರಿಯಾಗುವುದೆಂಬ ಭಾವನಾತ್ಮಕ ನಂಬುಗೆಯನ್ನು ಬುದ್ಧಿವಂತರು ಒಪ್ಪಿಕೊಳ್ಳುವಂತಿಲ್ಲ. ಏಕೆಂದರೆ ಈ ನಂಬುಗೆಯನ್ನು ನಿಜವಾಗಿ ಮಾಡಿ ತೋರಿಸುವಂತಹ ಸಾಮಾಜಿಕ-ರಾಜಕೀಯ ಪರಿಸ್ಥಿತಿಗಳು ನಮ್ಮಲ್ಲಿ ಇಲ್ಲ.

ನಮ್ಮ ಹಿಂದಿನ ಸಮಾಜರಚನೆಯಲ್ಲಿ ವ್ಯಕ್ತಿಯ ಜನ್ಮದೊಂದಿಗೆ ಆತನ ವೃತ್ತಿಯೂ ಬೆನ್ನುಹತ್ತಿ ಬರುತ್ತಿದ್ದಿತು. ಒಕ್ಕಲಿಗನ ಮಗ ಒಕ್ಕಲಿಗನಾಗುತ್ತಿದ್ದ; ಉದ್ಯಮಕಾರಿಯ ಮಗ ಉದ್ಯಮಕಾರಿಯಾಗುತ್ತಿದ್ದ; ವರ್ತಕನ ಮಗ ವರ್ತಕನಾಗುತ್ತಿದ್ದ; ಕರಣಿಕನ ಮಗ ಕರಣಿಕನಾಗುತ್ತಿದ್ದ. ಅನ್ನಕ್ಕಾಗಿ ಬೇರೆಯ ವೃತ್ತಿಶಿಕ್ಷಣ ಪಡೆಯುವ ಆವಶ್ಯಕತೆಯು ಅವರಿಗಿರುತ್ತಿರಲಿಲ್ಲ. ಹುಟ್ಟಿದ ಮನೆಯ ವಾತಾವರಣದಲ್ಲಿ, ಈ ವೃತ್ತಿಶಿಕ್ಷಣವು ಅವರಿಗೆ ಸಹಜವಾಗಿ ಸಿಕ್ಕುಬಿಡುತ್ತಿದ್ದಿತು. ಆದುದರಿಂದ ಅಂದಿನ ಬಾಲಕರಿಗೆ ಜ್ಞಾನಸಂಪಾದನೆಯ ಸಾಧನವಾದ ಅಕ್ಷರ ಶಿಕ್ಷಣ ಕೊಡಲಿಕ್ಕೆ ಮಾತ್ರ ಪಾಠಶಾಲೆಗಳ ಆವಶ್ಯಕತೆಯಿರುತ್ತಿದ್ದಿತು. ಎಂತಲೇ ಅಂದಿನ ಪಾಠಶಾಲೆಗಳೆಂದರೆ ಕೇವಲ ಅಕ್ಷರಶಿಕ್ಷಣ ಕೊಡುವ ಕಾರ್ಯವನ್ನು ಮಾತ್ರ ಮಾಡುತ್ತಿದ್ದುವು.

ಭಾರತಕ್ಕೆ ಬ್ರಿಟಿಷರು ಬಂದ ಮೇಲೆ, ಅವರು ಇಲ್ಲಿ ನಡೆಯಿಸಿದ ಆಡಳಿತದ ಧೋರಣದಿಂದಾಗಿ, ಭಾರತದ ವೃತ್ತಿಮೂಲ ಜಾತಿಪದ್ಧತಿಯ ಸಮಾಜರಚನೆ ತಲೆಕೆಳಗಾಗಿ ಹೋಯಿತು. ಬ್ರಿಟಿಷರು ಬಾರದೆ ಹೋಗಿದ್ದರೂ, ವಿಜ್ಞಾನಯುಗದ ಇಂದಿನ ಜಾಗತಿಕ ಪರಿಸ್ಥಿತಿಯ ಒತ್ತಾಯ, ಈ ಬದಲಾವಣೆಯನ್ನು ಮಾಡಿಯೆ ಮಾಡುತ್ತಿದ್ದಿತು. ಆಗಿರುವ ಬದಲಾವಣೆಗಾಗಿ ನಾವು ಇನ್ನೊಬ್ಬರ ಮೇಲೆ ತಪ್ಪು ಹೊರಿಸಬೇಕಾಗಿಲ್ಲ; ಮನನೊಂದುಕೊಳ್ಳಲೂ ಬೇಕಾದಲ್ಲ. ಆದರೆ ಪರಾಧೀನ ಭಾರತದಲ್ಲಿ ಬ್ರಿಟಿಷರು ಸಮಾಜವ್ಯವಸ್ಥೆಯನ್ನು ಕಲಮಲಕು ಮಾಡಿಬಿಟ್ಟರಷ್ಟೇ ಹೊರತು, ವ್ಯಕ್ತಿ-ವ್ಯಕ್ತಿಗಳಿಗೂ ಅನ್ನ ದೊರೆಯುವಂತೆ ತಕ್ಕ ವೃತ್ತಿಯ ಯೋಜನೆಯನ್ನೇನೂ ಮಾಡಲಿಲ್ಲ. ಇದಿಷ್ಟನ್ನೆ ಮಾಡಿಬಿಡಲಿಲ್ಲ; ಭಾರತವನ್ನು ತಮ್ಮ ಸಾಮಾನುಗಳನ್ನು ಮಾರುವ ಪೇಟೆಯನ್ನಾಗಿ ಮಾಡಿಕೊಂಡು, ಭಾರತದ ವೃತ್ತಿ-ವ್ಯವಸಾಯಗಾರರನ್ನು ನಿರುದ್ಯೋಗಿಗಳನ್ನಾಗಿ ಮಾಡಿದರು. ಎಲ್ಲರಲ್ಲಿಯೂ ಸರಕಾರಿ ನೌಕರಿಯ ಮೋಹವನ್ನು ಹುಟ್ಟಿಸಿ, ಎಲ್ಲರಿಗೂ ಕೇವಲ ಅಕ್ಷರಶಿಕ್ಷಣದ ಆಶೆಯನ್ನು ಹಚ್ಚಿದರು. ಅಂತಹ ಪಾಠಶಾಲೆಗಳನ್ನೇ ದೇಶದ ಗ್ರಾಮಾಂತರಗಳಲ್ಲಿ ಕೂಡ ತೆಗೆದರು. ಜನ್ಮತಃ ಬಂದ ವೃತ್ತಿಗಳು ಇಲ್ಲದಂತಾದುವು; ಶಾಲೆಗಳು ಬರಿ ಅಕ್ಷರಶಿಕ್ಷಣ ಕೊಡಲು ತೊಡಗಿದುವು. ಅಕ್ಷರಶಿಕ್ಷಣದ ಗುರಿ ಸರಕಾರದ ನೌಕರಿಗಳು. ನೌಕರಿಯ ಸಂಖ್ಯೆಯು ಪರಿಮಿತ; ಕಲಿತವರ ಸಂಖ್ಯೆ ಅಪರಿಮಿತ. ತಮ್ಮ ಸಿದ್ಧವಸ್ತುಗಳ ಮಾರಾಟದಿಂದ ವೃತ್ತಿಗಳನ್ನು ಕೊಂದರು. ಅಕ್ಷರಶಿಕ್ಷಣದ ಮೂಲಕ ಬಹುಜನರನ್ನು ನಿರುದ್ಯೋಗದಲ್ಲಿ ಕೊಳೆಯಲು ಹಚ್ಚಿದರು. ಈ ಕುಟಿಲ ರಾಜಕಾರಣಕ್ಕಾಗಿ ಮಾತ್ರ ಬ್ರಿಟಿಷರ ಮೇಲೆ ಯಾವಾಗಲೂ ತಪ್ಪಿನ ಹೊರೆಯನ್ನು ಹೊರಿಸಲೇಬೇಕಾಗುವುದು.

ಆರ್ಥಿಕ ಸ್ವಾವಲಂಬನವಿಲ್ಲದೆ ರಾಜಕೀಯ ಸ್ವಾತಂತ್ರ್ಯವೆಂದೂ ಸಾಧ್ಯವಾಗದೆಂಬ ಮಾತನ್ನು ಆಧುನಿಕ ಭಾರತದ ನಾಯಕರು ಹೇಳುತ್ತ ಬಂದರು. ಮಹಾತ್ಮಾ ಗಾಂಧಿಯವರು ಈ ತತ್ತ್ವವನ್ನು ಕಾರ್ಯತಃ ಪ್ರಚಾರದಲ್ಲಿ ತಂದು, ಭಾರತೀಯರಿಗೆ ಆರ್ಥಿಕ ಸ್ವಾತಂತ್ರ್ಯದ ಮಹತ್ತ್ವವನ್ನು ಪ್ರತ್ಯಕ್ಷವಾಗಿ ತೋರಿಸಿದರು. ಅವರು ಭಾರತದಲ್ಲಿ ಕಟ್ಟಬೇಕೆಂದಿರುವ ನೂತನ ಸಮಾಜದ ಆದರ್ಶವೇ ಒಂದು ಬೇರೆ ಬಗೆಯದಾಗಿ ಇದ್ದುದರಿಂದ, ಅಂತಹ ಸಮಾಜದ ನಿರ್ಮಿತಿ ಸಂಸ್ಥಿತಿಗಳಿಗೆ, ವೃತ್ತಿ ಮತ್ತು ಅಕ್ಷರಜ್ಞಾನಗಳೆರಡನ್ನೂ ಮಾಡಿಕೊಡಬಹುದಾದ ಮೂಲಶಿಕ್ಷಣ ಕ್ರಮವನ್ನು ಪ್ರಚಾರದಲ್ಲಿ ತರಬೇಕೆಂದು ಸಾರಿದರು. ಆದರೆ ಮಹಾತ್ಮರ ಜೀವನದ ಕೊನೆಯೊಂದಿಗೆ ಅವರ ನೂತನ ಸಮಾಜರಚನೆಯ ಕಲ್ಪನೆಯು ಕೊನೆಯೂ ಆಗಿಹೋಗಿದೆ. ನಮ್ಮ ಕಾಂಗ್ರೆಸ್ಸೂ ಕಾಂಗ್ರೆಸ್ ಸರಕಾರಗಳೂ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬೇರೆ ಬೇರೆ ದಾರಿಯನ್ನೇ ಹಿಡಿದು ಬಿಟ್ಟಿವೆ. ದೇಶವನ್ನಾಳುವ ಅಧಿಕಾರಸೂತ್ರಗಳು ತಮ್ಮ ಕೈಯಲ್ಲಿರಬೇಕೆಂಬ ಹಂಬಲನ್ನು ಮಾತ್ರ ಅಪ್ಪಿ ಹಿಡಿದುಕೊಂಡಿವೆ ಹೊರತು, ಭಾರತೀಯ

ನವಸಮಾಜದ ಪುನರ್ಘಟನೆಯ ಕಾರ್ಯದತ್ತ ತಾತ್ವಿಕ ಪ್ರಾಮಾಣಿಕ ಬುದ್ಧಿಯಿಂದ ಮನಸ್ಸು ಹಾಕುತ್ತಿಲ್ಲ. ಮಹಾತ್ಮರ ಸಮಾಜನಿರ್ಮಿತಿಯ ಕಲ್ಪನೆಯಂತೂ, ಇಂದಿನ ಕಾಂಗ್ರೆಸ್ಸಿಗರ-ಆಡಳಿದ ಸೂತ್ರಧಾರಿಗಳ—ಕನಸಿನಲ್ಲಿಯೂ ಸುಳಿಯುವಂತಿಲ್ಲ. ಆದರೆ ಮಹಾತ್ಮರ ಮಾರ್ಗಾನುಯಾಯಿಗಳು ತಾವು ಇದ್ದೇವೆಂಬ ಭ್ರಾಂತಿಯನ್ನು ಜನರಲ್ಲಿ ಜಾಗೃತವಾಗಿ ಇಟ್ಟಿರಲು, ಕೆಲವೊಂದು ಗೌಣವಿಭಾಗಗಳನ್ನು ತಮ್ಮ ವಿಚಾರಗಳಿಗೆ ತೇಪೆಹಚ್ಚಿಕೊಳ್ಳಲು ತೊಡಗಿದ್ದಾರೆ. ಈ ಮೂಲಶಿಕ್ಷಣಕ್ರಮವನ್ನು ಜನತೆಯಲ್ಲಿ ಜಾರಿಗೊಳಿಸುವ ವಿಚಾರವೆಂದರೆ, ಇನ್ನೊಂದು ಅಂತಹ ತೇಪೆಯು. ಜನಸಾಮಾನ್ಯರಿಗಷ್ಟೇ ಏಕೆ, ಬಹುಜನ ಸುಶಿಕ್ಷಿತ ನಾಗರಿಕರಿಗೂ ಈ ಶಿಕ್ಷಣಕ್ರಮ ಒಪ್ಪಿಗೆಯೆನಿಸುತ್ತಿಲ್ಲವಾದರೂ, ಅಂತಹದೋ ಒಂದು ಹಟದಿಂದ ಈ ಶಿಕ್ಷಣಕ್ರಮವನ್ನು ನಾಡಿನ ಜನತೆಯ ಮೇಲೆ ಹೇರಲಾಗುತ್ತಿದೆ. ತಾನು ಮನಸಾರೆ ಒಪ್ಪದ ತತ್ವವನ್ನು ಇನ್ನೊಬ್ಬರು ಪಾಲಿಸಬೇಕೆಂದು ಒತ್ತಾಯ ಪಡಿಸುವುದು ಇದೆಲ್ಲಿಯ ರೀತಿ?

ಸರಕಾರ ಇಂದು ನೂಲುವ ನೇಯುವ ಗಿರಣಿಗಳಿಗೆ ಸಹಾಯ ಸಹಕಾರ ಕೊಡುತ್ತಲಿದೆ; ತಾನೇ ಗಿರಣಿಗಳನ್ನು ಸ್ಥಾಪಿಸಿ ಬೆಳೆಯಿಸುವ ವಿಚಾರದಲ್ಲಿಯೂ ಇದೆ. ಹೀಗಿರುವಾಗ ಕೈನೂಲು-ನೂಲಿನ ಬಟ್ಟೆಗಳನ್ನು ಕೇಳುವವರಾರು? ಕೊಳ್ಳುವವರಾರು? ನಮ್ಮ ಮೂಲಶಿಕ್ಷಣದ ಶಾಲೆಗಳಲ್ಲೆಲ್ಲ ನೂಲುವ ನೇಯುವ ವೃತ್ತಿಶಿಕ್ಷಣವೇ ಪ್ರಧಾನ ವಿಷಯವಾಗಿದೆ. ಮೂಲಶಿಕ್ಷಣ ಶಾಲೆಗಳಲ್ಲಿ ಪ್ರತಿವರ್ಷವೂ ಇದಕ್ಕಾಗಿ ಲಕ್ಷಗಟ್ಟಲೆ ಬೆಲೆಯ ಹತ್ತಿ ಹಾಳಾಗುತ್ತಲಿದೆ. ನೂಲುವ ನೇಯುವ ಸಲಕರಣೆಗಳಿಗಾಗಿಯೂ ಲಕ್ಷಗಟ್ಟಲೆ ರೂಪಾಯಿಗಳು ವೆಚ್ಚವಾಗುತ್ತಲಿವೆ. ಹಣದ ವೆಚ್ಚ ಮಾತ್ರ ನಿಜ. ಆ ಶಾಲೆಯಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ವೃತ್ತಿಶಿಕ್ಷಣ ಅಕ್ಷರಶಿಕ್ಷಣ ಎರಡರಲ್ಲಿ ಒಂದೂ ಸರಿಯಾಗಿ ದೊರೆಯದೆ, ಅವರು ಏತಕ್ಕೂ ಬಾರದ ಬೆಂಡುಗಳಾಗಿಯೇ ಶಾಲೆಗಳಿಂದ ಹೊರಬೀಳುತ್ತಾರೆ? ಅವರು ಕಲಿತ ಕೈನೂಲು ಕೈನೇಗೆಯ ವೃತ್ತಿಗಳಿಗೆ ಇಂದಿನ ಸರಕಾರದಲ್ಲಿಯೂ ಸಮಾಜದಲ್ಲಿಯೂ ಯಾವ ಬೆಲೆಯಿದೆ? ಇಲ್ಲವೆಂದ ಮೇಲೆ ಈ ವೃತ್ತಿ ಅವರ ಹೊಟ್ಟೆಯನ್ನು ಹೇಗೆ ತುಂಬೀತು.

ಇನ್ನು ಈ ಮೂಲಶಿಕ್ಷಣಶಾಲೆಗಳಲ್ಲಿ ಕಲಿಸುವ ಅಧ್ಯಾಪಕರ ಕಡೆಗೆ ಕಣ್ಣು ಬಿಟ್ಟು ನೋಡಿದರೆ, ಯಾರಿಗೂ ಹೃದಯದಲ್ಲಿ ತಳಮಳ ಎನಿಸದೆ ಇರದು. ಅವರಿಗೆ ಈ ಶಿಕ್ಷಣಕ್ರಮದಲ್ಲಿ ಪ್ರಾಮಾಣಿಕವಾದ ಶ್ರದ್ಧೆ ಇಲ್ಲವೇ ಇಲ್ಲ. ಎಲ್ಲರೂ ಇದನ್ನು ತಿರಸ್ಕರಿಸಿ ಹಾಸ್ಯ ಮಾಡುವುದನ್ನು ಎಲ್ಲೆಲ್ಲಿಯೂ ನೋಡಬಹುದು. ಸಂಬಳಕ್ಕಾಗಿ ಏನಾದರೂ ಮಾಡಬೇಕಾದುದರಿಂದ, ಅವರು ಇದನ್ನೇ ಒಪ್ಪಿಕೊಂಡು, ಈ ಶಿಕ್ಷಣವನ್ನೇ ಕೊಡುವ ನಾಟಕವನ್ನು ನಡೆಯಿಸುವರು. ಮೇಲಿಂದ ಬಂದ ಶಿಕ್ಷಣಾಧಿಕಾರಿಗಳು, ಈ ನಾಟಕ ಪ್ರದರ್ಶನ ನೋಡಿಯೋ ನೋಡದೆಯೋ— ಎಲ್ಲವೂ ಚೆನ್ನಾಗಿ ನಡೆದಿದೆಯೆಂದು ಸರಕಾರಕ್ಕೆ ತಿಳಿಸುವರು. ಈ ಅಧಿಕಾರಿವರ್ಗಕ್ಕೂ ಈ ಮೂಲಶಿಕ್ಷಣದ ವಿಚಾರದಲ್ಲಿ ಶ್ರದ್ಧೆಯಿರುವುದು ಅಷ್ಟರಲ್ಲಿಯೇ ಇದೆ. ಇಂದಿನ ಪ್ರಾಥಮಿಕ ಶಾಲೆಗಳೆಂದರೆ, ಗಾಂಭೀರ್ಯವೇ ಉಳಿದಿಲ್ಲ; ಕೇವಲ ಹುಡುಗಾಟದ ಮನೆಗಳಾಗಿವೆ. ರಾಜ್ಯ ಸರಕಾರ ತನ್ನ ಆಡಳಿತದ ಪ್ರಗತಿಯ ವರದಿಯಲ್ಲಿ ಮೂಲಶಿಕ್ಷಣದ ಪ್ರಚಾರದ ಭವ್ಯವಾದ ಅಂಕಿಸಂಖ್ಯೆಗಳನ್ನು ಕೊಟ್ಟು ಡೊಳ್ಳು ಬಾರಿಸುತ್ತದೆ. ಸದ್ಯದ ಆದರ ಪೊಳ್ಳುತನದ ಕಡೆಗೆ ಸಕಾಲದಲ್ಲಿ ಸರಿಯಾಗಿ ಸರಕಾರಗಳು ಲಕ್ಷ್ಯಕೊಡದೆ ಹೋದರೆ, ಮುಂಬರುವ ತಲೆಮಾರಿನ ಮನಸ್ಸು-ಬುದ್ಧಿಗಳ ವಿಕಾಸದ ಮಟ್ಟವೇ ಇಳಿದು ಹೋಗುವುದರಲ್ಲಿ ಸಂದೇಹವಿಲ್ಲ. ಇದು ಮೂಲಶಿಕ್ಷಣ ಕ್ರಮದ ದೋಷವಲ್ಲ; ಅನುಚಿತ ಪರಿಸ್ಥಿತಿಯಲ್ಲಿ ಅನಧಿಕಾರಿಗಳಾದ ಜನರಿಂದ ಅವ್ಯವಸ್ಥಿತವಾಗಿ ಸಾಗಿದ ನಾಟಕೀಯ ಪ್ರಚಾರಕ್ರಮದ ದೋಷವಾಗಿದೆ.

ಇಂದು ನಮ್ಮ ಸಮಾಜದ ಪುನರ್ಘಟನೆಯಾಗಬೇಕಾಗಿದೆ ಯೇನೋ ಸರಿಯೆ! ಆದರೆ ಅದು ಯಾವ ಬಗೆಯಲ್ಲಿ ಆಗಬೇಕೆಂಬ ಆದರ್ಶದ ನಿಶ್ಚಿತಕಲ್ಪನೆ ನಮ್ಮ ಸರಕಾರಗಳಿಗೂ ಇಲ್ಲ; ಸಮಾಜನಾಯಕರಿಗೂ ಇಲ್ಲ. ಪ್ರತಿಯೊಂದು ವಿಷಯವೂ ಕುರುಡ ಹಗ್ಗ ಹೊಸೆದಂತೆ ನಡೆದಿದೆ. ಕುರುಡ ಹಗ್ಗವನ್ನು ಮುಂದೆ ಮುಂದೆ ಹೊಸೆದೇ ಹೊಸೆಯುತ್ತಾನೆ; ಹೊಸೆದುದನ್ನೆಲ್ಲ ಮೇಕೆ ತಿಂದು ಹಾಕುತ್ತಲಿದೆ. ಮೂಲ ಶಿಕ್ಷಣದ ಪರಿಸ್ಥಿತಿಯೂ ಹೀಗೆಯೆ ಆಗಿದೆ. ಇದಕ್ಕಾಗಿ ಪ್ರಾಥಮಿಕ ಶಾಲೆಗಳಿವೆ; ಶಿಕ್ಷಕರ ಶಾಲೆಗಳಿವೆ; ಶಿಕ್ಷಣಾಧಿಕಾರಿಗಳ ಉಚ್ಚ ಶಿಕ್ಷಣ ಕೇಂದ್ರಗಳಿವೆ. ಎಲ್ಲವೂ ಇವೆ; ಆದರೆ ವಿದ್ಯಾರ್ಥಿಗಳಿಗೆ ಮಾತ್ರ ಯಾವ ಬಗೆಯ ಸಂಸ್ಕಾರವೂ ದೊರೆಯದಂತಾಗಿದೆ. ಈ ದುಃಸ್ಥಿತಿ ಹೋಗುವಂತೆ ನಾವು ಏನಾದರೂ ಮಾಡಬೇಕಲ್ಲವೆ? ಶಿಕ್ಷಣಕ್ರಮವನ್ನೇ ಬದಲಿಸಬೇಕು ಒಂದು; ಇಲ್ಲವೆ ಮೂಲ ಶಿಕ್ಷಣಕ್ರಮವನ್ನು ಎಲ್ಲರೂ ಪ್ರಾಮಾಣಿಕ ಶ್ರದ್ಧೆಯಿಂದ ನೋಡಬೇಕು ಒಂದು. ಎರಡೂ ಇಲ್ಲದಿದ್ದರೆ ಗೋವಿಂದ!

ಜಯಂತಿಯ ಅಭಿಮಾನಿಗಳಲ್ಲಿ :

ಸದ್ಯದ ಆರ್ಥಿಕ ದುಃಸ್ಥಿತಿಯು ಜಯಂತಿಯ ದಾರಿಯೆದುರು ಬಲವಾದ ತಡೆಗಳನ್ನು ಒಡ್ಡುತ್ತ ಹೊರಟಿದೆ. ಕನ್ನಡಿಗರೆಲ್ಲರೂ ಜಯಂತಿಯ ಚಿರಜೀವಿತ್ವದ ಕಡೆಗೆ ದೃಷ್ಟಿಯಿತ್ತು ನೆರವನ್ನು ಕೊಡಬೇಕು. ನಾವು ಧರ್ಮವಾಗಿ ಯಾರನ್ನೂ ಹಣ ಕೇಳುವುದಿಲ್ಲ. ಐದು ರೂಪಾಯಿಗಳನ್ನು ವರ್ಷಕ್ಕೆ ಕೊಟ್ಟು ಚಂದಾದಾರರಾಗಿರಿ. ನಿಮ್ಮ ಪರಿಚಿತರನ್ನೂ ಚಂದಾದಾರನ್ನಾಗಿ ಮಾಡಿಕೊಟ್ಟು ಸಹಕರಿಸಿರಿ. ಐದು ರೂಪಾಯಿ ಬೆಲೆಗೆ ಎಷ್ಟೊಂದು ಬೆಲೆಯ ಸಾಹಿತ್ಯ ತಮ್ಮ ಮನೆಗೆ ಬರುವುದೆಂಬುದರ ಅನುಭವ ತೆಗೆದುಕೊಳ್ಳಿರಿ.

—ಸಂಪಾದಕರು

ನಾಡುನಡೆ

ಬಾನುಲಿಕಟ್ಟೆಯ ಹಳೆಯ ನಿರ್ದೇಶಕರು

ಧಾರವಾಡದ ಬಾನುಲಿಕಟ್ಟೆಯ ಪ್ರಾರಂಭದಿಂದಲೂ ನಿರ್ದೇಶಕ ಅಧಿಕಾರಿಗಳಾಗಿ ಕಾರ್ಯ ಮಾಡಿದ ಶ್ರೀಮಾನ್ ಎನ್. ಡಿ. ವಾಕನೀಸ ಅವರು, ಕಳೆದ ತಿಂಗಳಲ್ಲಿ ಧಾರವಾಡವನ್ನು ಬಿಟ್ಟು ಕಾಲಿಕತ್ತದ ಬಾನುಲಿಕೇಂದ್ರದ ನಿರ್ದೇಶಕ ಸ್ಥಾನಕ್ಕೆ ವರ್ಗವಾಗಿ ಹೋದರು. ಶ್ರೀಮಾನ್ ವಾಕನೀಸರು ಧಾರವಾಡದ ಕೇಂದ್ರ ಸಂಚಾಲಕರಾಗಿ ಮಾಡಿದ ಪ್ರಾರಂಭಕಾರ್ಯವು ತುಂಬ ಮಹತ್ತ್ವದುದಾಗಿದೆ. ಕನ್ನಡಿಗರಲ್ಲದ ಶ್ರೀಮಾನ್ ವಾಕನೀಸರಿಗೆ ಕರ್ನಾಟಕದ ಪರಿಚಯವಿರಲಿಲ್ಲ. ಕನ್ನಡಿಗರಿಗೆ ಬಾನುಲಿಯೆಂದರೆ ಹೇಗಿರುವುದೆಂಬುದು ಗೊತ್ತಿರಲಿಲ್ಲ. ಇಂತಹ ಸಮಯದಲ್ಲಿ ಶ್ರೀಮಾನ್ ವಾಕನೀಸರು, ಉತ್ತರ ಕರ್ನಾಟಕದ ನಗರ-ಗ್ರಾಮಗಳನ್ನು ಸುತ್ತಾಡಿದರು. ಬಾನುಲಿಯ ಕಾರ್ಯಕ್ರಮಗಳಿಗೆ ಬೇಕಾಗುವಂತಹ ಸಂಗೀತಗಾರರು, ನಟರು, ವಿದ್ವಾಂಸರು, ವಾಗ್ಮಿಗಳು ಎಲ್ಲೆಲ್ಲಿ ಯಾರು ಯಾರಿದ್ದಾರೆಂಬುದನ್ನು ಗೊತ್ತುಹಚ್ಚಿದರು. ಎಲ್ಲರೊಂದಿಗೂ ಸವಿಯಾದ ಮಾತನಾಡಿ, ತಮ್ಮ ಬಾನುಲಿಕಟ್ಟೆಯ ಕಡೆಗೆ ಆಕರ್ಷಿಸಿಕೊಂಡರು. ಕನ್ನಡದ ಭಾಷೆ ಸಂಸ್ಕೃತಿಗಳು ಅಪರಿಚಿತವಾಗಿದ್ದರೂ, ಇಲ್ಲಿಗೆ ಬಂದಮೇಲೆ ಆಸ್ಥೆಯಿಂದ ಅವುಗಳನ್ನು ಪರಿಚಯಮಾಡಿಕೊಂಡರು. ಕಾರ್ಯಕ್ರಮಗಳು ಯಶಸ್ವಿಯಾಗುವಂತೆ ಏನೇನು ಮಾಡಬೇಕೆಂಬುದರ ಬಗ್ಗೆ ಆಗಾಗ ಬಲ್ಲವರೊಂದಿಗೆ ವಿಚಾರವಿನಿಮಯ ನಡೆಯಿಸುತ್ತಿದ್ದರು. ಎಂತಲೇ ಸ್ವಲ್ಪಕಾಲದಲ್ಲಿಯೆ ಶ್ರೀ. ವಾಕನೀಸರು ಕನ್ನಡಿಗರೆಲ್ಲರ ಆತ್ಮೀಯ ಭಾವಕ್ಕೆ ಪಾತ್ರರಾಗಿದ್ದರು.

ಧಾರವಾಡದ ಬಾನುಲಿಕಟ್ಟೆಯಿಂದ ಬಿತ್ತರಗೊಳ್ಳುವ ಕಾರ್ಯಕ್ರಮಗಳೆಲ್ಲ ವೈಶಿಷ್ಟ್ಯಪೂರ್ಣವೂ ಜನಪ್ರಿಯವೂ ಆಗಬೇಕೆಂದು ಶ್ರೀ. ವಾಕನೀಸರ ಹಂಬಲ. ಇದಕ್ಕಾಗಿ ಹಗಲೆನ್ನದೆ ಇರುಳೆನ್ನದೆ ದುಡಿಯುತ್ತಲಿದ್ದರು. ಎಂತಲೇ ಇಲ್ಲಿಯ ಕಾರ್ಯಕ್ರಮಗಳು, ಮಿಕ್ಕ ಇಂತಹ ಬಾನುಲಿಕಟ್ಟೆಗಳಿಂದ ಬಿತ್ತರಗೊಳ್ಳುವ ಕಾರ್ಯಕ್ರಮಗಳಿಗಿಂತ ಉತ್ತಮತರಗತಿಯವಾಗಿವೆಯೆಂಬ ಖ್ಯಾತಿಯನ್ನು ಪಡೆದುವು. ಕರ್ನಾಟಕದ ಸಂಸ್ಕೃತಿ ಪ್ರದರ್ಶಕವಾದ ಕನ್ನಡಿಗರ ಹಬ್ಬ-ಹರಿದಿನಗಳ ವಿಶೇಷಕಾರ್ಯಕ್ರಮಗಳು, ಕನ್ನಡಿಗರ ಮನ್ನಣೆಗೆ ವಿಶೇಷ ಪಾತ್ರವಾದುವು. ಕರ್ನಾಟಕದಲ್ಲಿರುವ ಜಾನಪದ ಸಾಹಿತ್ಯ ವೈವಿಧ್ಯವನ್ನು ಬಾನುಲಿಕಟ್ಟೆಯ ಮೂಲಕ ಬಿತ್ತರಿಸಲೂ ಇವರು ವಿಶೇಷ ಪ್ರಯತ್ನಮಾಡಿದರು. ಸರಕಾರದ ಆಡಳಿತದ ರೀತಿಗನುಸಾರವಾಗಿ ಇವರು ಬೇರೆ ಕಡೆಗೆ ವರ್ಗವಾಗಿ ಹೋದರಾದರೂ, ತಮ್ಮ ವೈಶಿಷ್ಟ್ಯಪೂರ್ಣವಾದ ಮಧುರ ಸ್ವಭಾವದ ಮೂಲಕ, ಅನೇಕರ ಮನದಲ್ಲಿ ಬಹುಕಾಲದವರೆಗೆ ತಮ್ಮ ಪರಿಚಯದ ನೆನಪು ಉಳಿಯುವಂತೆ ಮಾಡಿಹೋಗಿರುವರು. ಶ್ರೀ. ವಾಕನೀಸರಂತಹ ಕರ್ತವ್ಯನಿಷ್ಠ ಪ್ರಾಮಾಣಿಕ ಅಧಿಕಾರಿಗಳು, ಎಲ್ಲಿಗೆ ಹೋದರೂ ತಮ್ಮ ಕಾರ್ಯ-ಸ್ನೇಹಗಳ ಮೂಲಕ ಲೋಕ-ಪ್ರೀತಿಯನ್ನು ಪಡೆದೇ ಪಡೆಯುವರು. ಅವರ ಕರ್ತವ್ಯನಿಷ್ಠೆ ಅವರ ಜೀವನಕ್ಕೆ ಯಶಸ್ಸು-ಶ್ರೇಯಸ್ಸುಗಳನ್ನು ಕೊಡುವುದೆಂಬುದರಲ್ಲಿ ಸಂದೇಹವಿಲ್ಲ.

ಇಂದು ಬಂದ ಹೊಸ ನಿರ್ದೇಶಕರು

ಶ್ರೀಮಾನ್ ರಾಮಚಂದ್ರನ್ ಎಂಬವರು ಈಗ ಧಾರವಾಡದ ಬಾನುಲಿಕಟ್ಟೆಗೆ ನಿರ್ದೇಶಕ ಅಧಿಕಾರಿಗಳಾಗಿ ದಯೆಮಾಡಿಸಿದ್ದಾರೆ. ಮದ್ರಾಸ ಪ್ರಾಂತ್ಯದಲ್ಲಿ ಹುಟ್ಟಿಬೆಳೆದವರಾದುದರಿಂದ, ಕನ್ನಡ ಭಾಷೆ ಇವರಿಗೆ ಅಷ್ಟೊಂದು ಅಪರಿಚಿತವಾದುದಾಗಿ ಇರಲಿಕ್ಕಿಲ್ಲ. ಸಂಗೀತಶಾಸ್ತ್ರವನ್ನು ಚೆನ್ನಾಗಿ ಅರಿತುಕೊಂಡವರಂತೆ. ಆ ಶಾಸ್ತ್ರದ ವಿಷಯವನ್ನೊಳಗೊಂಡ ಗ್ರಂಥವೊಂದನ್ನೂ ಇಂಗ್ಲಿಷ್ ಭಾಷೆಯಲ್ಲಿ ಬರೆದಿದ್ದಾರಂತೆ. ದಿಲ್ಲಿಯ ಕೇಂದ್ರ ಆಕಾಶವಾಣಿಯಲ್ಲಿದ್ದು ಕೆಲಸ ಮಾಡಿ ಬಂದವರಾದುದರಿಂದ, ಆಕಾಶವಾಣಿಯ ಕಾರ್ಯದ ಅನುಭವವು ಇವರಿಗೆ ಚೆನ್ನಾಗಿ ಇರಲು ಸಾಕು. ಅದಕ್ಕನುಗುಣವಾಗಿ ಧಾರವಾಡದ ಬಾನುಲಿಕಟ್ಟೆಯ ಏರ್ಪಾಡನ್ನು ತಮ್ಮ ಅನುಭವ–ಧೋರಣೆಗಳಿಗೆ ತಕ್ಕಂತೆ ತಿದ್ದಲು ರಭಸದಿಂದ ಪ್ರಯತ್ನ ನಡೆಯಿಸಿದ್ದಾರೆಂದೂ ಕೇಳಿದ್ದೇವೆ. ಆದರೆ ದಿಲ್ಲಿಯಂತಹ ಭವ್ಯ-ರಾಜಧಾನಿ ನಗರದ ದೃಷ್ಟಿಯಿಂದ ನೋಡಿದರೆ, ಧಾರವಾಡ ನಗರದ ಪುಟ್ಟ ಬಾನುಲಿಕಟ್ಟೆಯೂ ಇದರ ಕಾರ್ಯಕಲಾಪಗಳೂ ಸಂಪೂರ್ಣವಾಗಿ ಸುಧಾರಣೆಗೊಳ್ಳಲಿಕ್ಕೆ ಇನ್ನೂ ಕೆಲವು ಕಾಲ ಹೋಗಬೇಕೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಧಾರವಾಡದ ಬಾನುಲಿಕಟ್ಟೆಯ ಕಾರ್ಯಕ್ರಮಗಳೆಲ್ಲ ಲೋಕ-ಪ್ರಿಯವಾಗಬೇಕಾದರೆ, ಬರೀ ಕೇಂದ್ರದ ಅಧಿಕಾರಿಗಳು ಏನು ಮಾಡಿದರೂ ಅದು ಸಾಧ್ಯವಾಗದು. ನಮ್ಮಲ್ಲಿಯ ಕಲಾವಿದರು ತಮ್ಮ ಅಭ್ಯಾಸ–ಅನುಭವಗಳನ್ನು ಹೆಚ್ಚಿಸಿಕೊಂಡು ಕಲೆಯಲ್ಲಿ ಅಭಿಜ್ಞತೆಯನ್ನು ತೋರಿಸತೊಡಗಿದಾಗಲೇ ನಮ್ಮ ಕಾರ್ಯ-ಕಲಾಪಗಳೆಲ್ಲ ಜನಪ್ರಿಯವಾದಾವು. ಕಾರ್ಯಕ್ರಮಗಳನ್ನು ಒಳ್ಳೆಯವನ್ನಾಗಿಸಬೇಕೆಂದು ಕೇಂದ್ರದ ಅಧಿಕಾರಿಗಳು ಕರ್ನಾಟಕದ ಹೊರಗಿನ ಕಲಾವಿದರನ್ನು ಕರೆಯಿಸಲು ತೊಡಗಿದರೆ, ಕನ್ನಡ ಬಾನುಲಿಕೇಂದ್ರವೆಂದು ಬೇರೆಯಾಗಿ ನಮಗೆ ಏತಕ್ಕೆ ಬೇಕು ? ಅದರಂತೆ ನಮ್ಮ ಕಲಾವಿದರೆಲ್ಲ ಹಾಡಿದ್ದನ್ನೇ ಹಾಡುವ ಕೆಸುವಾಯದಾಸರಾಗಿಯೆ ಉಳಿದುಬಿಟ್ಟರೆ, ಕನ್ನಡ ಬಾನುಲಿ-ಕಟ್ಟೆಯ ಕಾರ್ಯಕ್ರಮಗಳೆಲ್ಲ ಲೋಕಪ್ರಿಯವಾಗಬೇಕು ಹೇಗೆ ? ಈ ವಿವೇಕವನ್ನು ಕೇಂದ್ರವನ್ನು ಸುಧಾರಿಸಬೇಕೆನ್ನುವ ಅಧಿಕಾರಿಗಳೂ ಅರಿತುಕೊಳ್ಳಬೇಕು; ನಮ್ಮ ಕನ್ನಡ ಕಲಾವಿದರೂ ಅರಿತುಕೊಳ್ಳಬೇಕು.

(೧೨೦ನೆಯ ಪುಟಕ್ಕೆ ಮುಂದುವರಿಯುವುದು)

ಭಾಗೀರಥಿ

ಅರ್ಥಾತ್

ಗಂಗಾವತರಣಮ್

(ಗೀತರೂಪಕ)

★

‘ ಆನಂದಕಂದ ’

ಪಾತ್ರಪರಿಚಯ

ನಿರೂಪಕ (ನಾಟಕದ ಸೂತ್ರಧಾರ)
ದಿಲೀಪ (ಸೂರ್ಯವಂಶದ ದೊರೆ)
ಭಗೀರಥ (ದಿಲೀಪನ ಮಗ)
ಭಾಗೀರಥಿ (ಸುರಗಂಗಾ)
ಸುದಕ್ಷಿಣಾ (ಭಗೀರಥನ ತಾಯಿ)
ಯಮುನಾ } ನದೀಸುಂದರಿಯರು
ಶರಯೂ }
ಸರಸ್ವತೀ }

★

೧

ವೃಂದಗೀತ

ಜಯಸುರಗಂಗೇ, ಪುಣ್ಯತರಂಗೇ,
ಪಾಪರಜೋ ಭಂಗೇ—
ಪಾಪರಜೋ ಭಂಗೇ !
ಜಯ ಜಯ ಗಂಗೇ ಸುರಕುಲಸಂಗೇ,
ಪಾವನ ಧವಲಾಂಗೇ— ತಾಯೇ
ಪಾವನ ಧವಲಾಂಗೇ !!

ನಿನ್ನಾಗಮನಕೆ ಪರಿತಪಿಸುತಲಿದೆ
ಭಾರತ ಭೂಹೃದಯ—
ಭಾರತ ಭೂಹೃದಯ;
ನಿನ್ನ ಸ್ಪರ್ಶನಕೆ ಕಾತರಗೊಂಡಿದೆ
ಧರಣೀ ಜನವಲಯ— ತಾಯೇ
ಧರಣೀ ಜನವಲಯ !!

(ದೂರದಲ್ಲಿ ಹೊಳೆಗಳು ಮೊರೆಯುವ ಹರಿಹಿಂಗದ ಸಪ್ಪಳ ಕೇಳುತ್ತಿರಬೇಕು. ಅದರೊಂದಿಗೆ ಹಿನ್ನೆಲೆಯಲ್ಲಿ ಸಾರಂಗಿಯು ಮಂಗಲಸ್ವರಗಳನ್ನು ಆಲಾಪಿಸುತ್ತಿರಬೇಕು.)

ನಿರೂಪಕ

ರಾಮಾಯಣದಲಿರುವ ರೋಮಹರ್ಷಕ ಕಥೆಯು :
ಸೂರ್ಯವಂಶದ ಸಗರರಾಜ— ಭೂಜನ ತೇಜ—
ನೂರನೆಯ ಅಶ್ವಮೇಧವನು ತೊಡಗಿರಲಂದು,
ಎಂದಿನಂತೆಯೆ ಯಜ್ಞದಶ್ವವನು ಅಮರೇಂದ್ರ
ಕೆಳಲೋಕದಲ್ಲಿರುವ ಕಪಿಲಋಷಿಯಾಶ್ರಮದಿ
ಮರೆಯಿಸಿಟ್ಟ.

ದೊರೆಯ ಕಿರಿಯರಸಿ ಸುಮತಿಕೆಯ ಅರವತ್ತು ಸಾವಿರ ಕುಮಾರರು ಜನ್ನಗುದುರೆಯನ್ನರಸುತ್ತ,
ಕೆಳಲೋಕದಲಿ ಕಪಿಲನಾಶ್ರಮದಿ ಇದ್ದುದನು
ತಿಳಿದು ಕೆಳಗಿಳಿದು ಕಪಿಲನ ಕೆಣಕೆ, ಮುನಿರಾಯ
ಮುನಿದು ಬಿಟ್ಟ.

ಮುನಿದು ಕೋಪಾಗ್ನಿಯಲಿ ಸಗರಪುತ್ರರನೆಲ್ಲ
ಶಪಿಸಿ ಸುಟ್ಟ.

ಯಜ್ಞ ಕೊನೆಗಾಣದಿರೆ, ಸಗರನವ ಕಳವಳದಿ
ಮೊರೆಯನಿಟ್ಟ.

ತನ್ನ ಮೊಮ್ಮಗ ಅಂಶುಮಂತನನು ಕುದುರೆಯನು
ತರಲೆಂದು ಕಳುಹಿದನು; ದಾರಿಯಲಿ ನಾರದನು
ಅಂಶುಮಂತನಿಗೆ ಗುರಿಸಾಧಿಸುವ ಸುವಿವೇಕ
ಹೇಳಿಕೊಟ್ಟ.

ಅಂಶುಮಂತನು ಹೋಗಿ ಮುನಿಯ ಮನ ಸಂತವಿಸೆ,
ಮುನಿಯೊಲಿದು ಮೆಚ್ಚಿ ಯಜ್ಞಾಶ್ವವನ್ನಾತನಿಗೆ
ಮರಳಿಕೊಟ್ಟ.

‘ ದೇವಗಂಗೆಯು ಬಂದು ಧರೆಗೆ ಹರಿಸಲು ನಿನ್ನ
ತಾತದಿರಿಗುಂಟು ಸದ್ಗತಿಯು, ಅಲ್ಲದೆ ಇಲ್ಲ! ’
ಎಂದು ಎಚ್ಚರಿಕೆಯಿಟ್ಟ !

ಸುರಗಂಗೆಯನ್ನು ಧರೆಗಿಳಿಸಲಾ ನರಪಾಲ
ಸಿರಿಯನೆಲ್ಲವನುಳಿದು ಸಾರಿದನು ತಪಕೆ
ಸಾರಿದನು ತಪಕೆ;

ಅಂಶುಮಂತನ ಸುತ ದಿಲೀಪನೂ ಅದಕೆಂದೆ
ಮಗ ಭಗೀರಥನನ್ನು ಅರಸುಪಟ್ಟಕೆ ನಿಲಿಸಿ
ಸೇರಿದನು ಬನವ....
ಕೈಕೊಂಡುವ್ರತವ.

ಇದೊ, ಕೇಳಿ ! ಇದೊ, ಕೇಳಿ ! ಆ ದಿಲೀಪನು ಗೈವ
ಸುರನದಿಯ ಸ್ತುತಿಯ :

ದಿಲೀಪ:

(ಬೀಭಾಸ ರಾಗದ ವಿಲಂಬಿತ ಗತಿಯಲ್ಲಿ ಗಂಗಾಪ್ರಾರ್ಥನೆ ಕೇಳುವುದು)

ಜಯ ಸುರಗಂಗೇ, ಪುಣ್ಯತರಂಗೇ
ಪಾಪರಜೋಭಂಗೇ!
ಜಯ ಜಯ ಗಂಗೇ ಸುರಕುಲಸಂಗೇ
ಪಾವನ ಧವಲಾಂಗೇ-- ಗಂಗೇ! ॥ ಪಲ್ಲವಿ ॥

ನಿನ್ನಾಗಮನಕೆ ಪರಿತಪಿಸುತಲಿದೆ
ಭಾರತ ಭೂಹೃದಯ—
ನಿನ್ನ ಸ್ಪರ್ಶನಕೆ ಕಾತರಗೊಂಡಿದೆ
ಧರಣೀ ಜನವಲಯ!
ಇಳಿದು ಬಾ, ತಾಯೆ ಇಳಿದು ಬಾ!
ಇಳಿದು ಬಾಬಾರೆ, ನಮ್ಮ ನೆಲ ಸಾರೆ,
ನಿನ್ನ ನೀರು ನೀರೇ?
ಜಗಕೆಲ್ಲ ಮುಕ್ತಿ ಕೊಡುವಂಥ ಶಕ್ತಿ ತುಂ-
ಬಿರುವ ಸುಧಾಧಾರೆ!
ಜಯಸುರಗಂಗೇ ಪುಣ್ಯತರಂಗೇ
ಪಾಪರಜೋಭಂಗೇ....ಪಾವನಧವಲಾಂಗೇ!

(ಕೊನೆಯ ಸಾಲಿನ ಏರಿಕೆಯ ಧ್ವನಿ ದೂರದೂರ ಹೋಗುತ್ತ ಅಡಗಬೇಕು.)

೨

(ಹಿನ್ನೆಲೆಯಲ್ಲಿ ಹೊಳೆಗಳು ಹರಿಯುವ ಸಪ್ಪಳ)

ನಿರೂಪಕ

ಓ! ಇವರಾವ ದೇವಿಯರು ಮೂವರಿಹರು?
ಭುವಿಯನೊಗೆಯುತ್ತ ಚೆಲ್ಲಾಟದಲ್ಲಿಹರು!
ಮರುಳೆನಗೆ ಇವರು ಸುರಲೋಕದವರಲ್ಲ;
ಭರತವರ್ಷದೊಳಿರುವ ತೊರೆವೆಣ್ಗಳಿಲ್ಲ!
ಸೂರ್ಯಪುತ್ರಿಯು ಯಮುನೆ-ಶರಯೂ-ಸರಸ್ವತೀ
ಸರಿತೆಯರು ಆಟಗಳನಾಡುತಿಹರಿಲ್ಲಿ—
ಕುಣಿಕುಣಿದು ಗೀತಿಸುವ ನಲ್ವಾಡ ಕೇಳಿ!

(ಕುಣಿತದ ಗೆಜ್ಜೆಗಳ ಸಪ್ಪಳಿನೊಂದಿಗೆ, ಮೂವರ ಸಮ್ಮಿಲಿತ ಧ್ವನಿಯಲ್ಲಿ ಗೀತವು ಕೇಳಿಸುವುದು.)

ಯಮುನಾ-ಶರಯೂ-ಸರಸ್ವತಿ :

ಸಾಗುವೆವು ಮುಂದೆ ಸಾರುವೆವು—ನಾವು
ಸಾಗರರಾಜನ ಸೇರುವೆವು....
ಸಾಗುವ ದಾರಿಯ ತೀರದ ಹೊಲ-ನೆಲ
ಜಾಗರಿಸುತ ಸಿರಿ ಹೇರುವೆವು. ॥ ಪಲ್ಲವಿ ॥

ಥಕಥಕ್ಕ ಥೈಥಕ್ಕ— ಥಕಧಿಮಿ ಧಿಮಿಧಿಮಿ
ಥೈಥಕ್ಕ ಥಕಥಕ್ಕ ತಧಗಿಣತಾ!
ತೆರೆಗಳ ತೇಲಾಟ— ನಮ್ಮ ಕೈಕೋಲಾಟ
ನಮ್ಮಯ ನಡಿಗೆಯೆ ನಲ್ಗುಣಿತ! ॥ ೧ ॥

(ಯಮುನೆಯೊಬ್ಬಳೇ)

ಅಡಿಗಡಿಗರಸನ ಹುಡುಕಿದೆವೆ....

(ಶರಯೂ ಒಬ್ಬಳೇ)

ಕಾಣದಿರಲು ಮುಂದೆ ಪುಡುಕಿದೆವೆ....

(ಸರಸ್ವತಿಯೊಬ್ಬಳೇ)

ನಮಗಾವ ತಡೆಯಿಲ್ಲ, ನಮಗಾರ ತಡೆಯಿಲ್ಲ.
ನಡೆದೋಡಿ ನಲ್ಲನ ತೊಡಕಿದೆವೆ!
ಥಕಥಕ ಥೈಥಕ್ಕ ಧಿಮಿಧಿಮಿ ತಕಧಿಮಿ
ಥೈಥೈ ಥೈಥಕ್ಕ ತಧಗಿಣತಾ....
ತೆರೆಗಳ ತೇಲಾಟ— ನಮ್ಮ ಕೈ ಕೋಲಾಟ
ನಮ್ಮ ಮುಂಬರಿತವೆ ಸಿರಿಗುಣಿತ— ಓ!
ನಮ್ಮ ಮುಂಬರಿತವೆ ಸಿರಿಗುಣಿತ! ॥ ೨

(ಕುಣಿತವನ್ನು ನಿಲ್ಲಿಸಿ ಎಲ್ಲರೂ ಉಲ್ಲಾಸ-ಉತ್ಸಾಹದ ನಗೆಯನ್ನು ನಗುವರು. ಅಗಲೇ ದೂರದಿಂದ ದಿಲೀಪನ ಗಂಗಾಸ್ತೋತ್ರವು ಕೇಳಿಸುವದು

" ಇಳಿದು ಬಾಬಾರೆ, ನಮ್ಮ ನೆಲ ಸಾರೆ,
ನಿನ್ನ ನೀರು ನೀರೇ....
ಜಗಕೆಲ್ಲ ಮುಕ್ತಿ ಕೊಡುವಂಥ ಶಕ್ತಿ
ತುಂಬಿರುವ ಸುಧಾಧಾರೇ....!
ಜಯಸುರಗಂಗೇ ಪುಣ್ಯತರಂಗೇ
ಪಾಪರಜೋಭಂಗೇ....
ಪಾವನಧವಲಾಂಗೇ! "

ಶರಯೂ

(ಅಚ್ಚರಿ ಚಕಿತ ಧ್ವನಿಯಲ್ಲಿ)

ಕೇಳು ಯಮುನೆ, ಕೇಳೆ ನೀ ಸರಸ್ವತೀ ಇದೇನೆ?
ಗೋಳು ಹಾಡು ಯಾರದಿದು—? ಕೇಳಲಿಲ್ಲವೇನೇ....
ಕೇಳಲಿಲ್ಲವೇನೇ?

ಯಮುನಾ

(ಸ್ವರವು ಗುರುತಿನದೆನಿಸಿದ ಭಾವದಿಂದ)

ಓಹೋ! ನಮ್ಮ ಕುಲದ ದೀಪ ದೊರೆ ದಿಲೀಪನೀತನೇ!
ನೋವನೂಡುತಿಹನು ಮನಕೆ, ಏನೊ ಇವನ ಯಾತನೆ..
ಏನೊ ಇವನ ಯಾತನೆ!

ಸರಸ್ವತಿ

(ಎಲ್ಲವನ್ನೂ ಬಲ್ಲ ಪ್ರೌಢತೆಯ ಭಾವದಿಂದ)

ಗೊತ್ತಿಲ್ಲವೇ ತಂಗೆ, ಯಮುನೆ ನಿನಗೆ?
ತಪಸಿಗೆಂದಾತ ಬಂದಿಹನಡವಿಗೆ.
ಗತಿಯಿರದೆ ಪಿತೃಗಣವು
ಪ್ರೇತರೂಪದೊಳಿಹುದು.
ಅವರನುದ್ಧರಿಸಲಿಕೆ ಬೇಕಮರಗಂಗೆ...
ಅಮರಗಂಗೆ...ಬರಲುಬೇಕು ಧರೆಗೆ!

ಯಮುನೆ

ಅಯ್ಯೊ, ನಾನದೆಂಥ ಮರುಳು! ತವುರವಾಸ್ತ ಮರೆತೆನೇ....
ನನ್ನ ಹಾಸ, ನನ್ನ ಲಾಸ ಸುಖದಲ್ಲಿಯೆ ಬೆರೆತೆನೆ!
ತವುರಿನಳಲು ನನ್ನ ಅಳಲು, ಅದನು ತವಿಸಬೇಕು...
ಅದಕೆ ನಾನು ಸುರಗಂಗೆಯ ಇಳೆಗೆ ಕರೆಯಬೇಕು!
ಶರಯು, ನೀನು ಬರಲೆ ಬೇಕು ನನ್ನ ನೆರವಿಗಾಗಿ;
ಸರಸ್ವತಿಯ ಬೇಡಿಕೊಳುವ ಸುರಲೋಕಕೆ ಹೋಗಿ!

(ಮೂವರೂ ನದೀಸುಂದರಿಯರು, ಹರಿಯುವ ಹೊನಲಿನ ಸಪ್ಪಳವೊಂದಿಗೆ ರಂಗದಿಂದ ಮೇಲಕ್ಕೇರಿ ಹೋಗುವ ಹಾರಿಕೆಯ ಧ್ವನಿ ಕಳಿಸಬೇಕು)

೩

ನಿರೂಪಕ

ತಂದೆ ತಪಸಿಗೆ ತೆರಳೆ, ಮಗ ಭಗೀರಥನು,
ರಾಜ್ಯದಾಳಿಕೆಯ ಜನಮೆಚ್ಚೆ ನಡೆಸಿಹನು.
ಆದರೂ ಪಿತೃಗಣದ ಚಿಂತೆಯಾತನನು
ಕೆಣಕಿ ಕೆರಳಿಸುತಲಿದೆ ಹೃದಯ-ಮನಗಳನು.
ಇದೊ, ಇಂದು ಅರಮನೆಯ ಏಕಾಂತ ಮಂದಿರದಿ
ಕುಳಿತಿಹನು ಕಂದಿ-ಕುಂದಿರುವ ಇಳಿಮೊಗದಿ.
ಬಂದಿಹಳು ಮಗನೆಡೆ ಸುದಕ್ಷಿಣಾ ದೇವಿ;
ಕಂದನನು ಸಂತವಿಸುತಿಹಳು ಮೈದಡವಿ:

ಸುದಕ್ಷಿಣಾ

ಏನಿದೇನಿದು ಮಗು ಭಗೀರಥ,
ಮ್ಲಾನವಾಗಿದೆ ಸಿರಿಮೊಗ....
ಏನು ಯೋಚನೆ? ರವಿಕುಲದ ಮ-
ರ್ಯಾದೆಯೇಕಿದೆ ಮೌನಿಗ?

ಭಗೀರಥ

(ವಿಷಣ್ಣ ಭಾವದಿಂದ]

ರಾಜ್ಯವೆಲ್ಲವು ಹದುಳ ತಾಯೇ,
ಪೂಜ್ಯ ಪ್ರಜೆಗಳು ನೆಮ್ಮದಿ!
ಎಲ್ಲ ಸರಿಯಿದೆ ಆದರೇನೌ
ಇಲ್ಲ ನನಗಾ ಸುಖನಿಧಿ!
ರವಿಕುಲದ ಪಿತೃಗಣವು ದುರ್ಗತಿ-
ಭವದ ನರಕದಿ ಬಿದ್ದಿರೆ....
ಸವಿಯು ತೋರುವುದೆಂತು ರಾಜ್ಯದ
ವಿಭವ ನನಗೆನಿತಿದ್ದರೆ!
ಸುರನದಿಯು ಧರೆಗಿಳಿಯದಿದ್ದರೆ
ಪಿತೃಗಳಿಗೆ ಗತಿಯಿಲ್ಲ—
ಯಾರ್ಕ ತಪವೂ ಅವಳ ಬರಿಸ-
ಲಶಕ್ತವಾಗಿದೆಯಲ್ಲಾ!

ಸುದಕ್ಷಿಣಾ

[ತನ್ನೊಳಗೆ ತಾನೆ]

ಅಯ್ಯೋ, ಏನನ್ಯಾಯ ಸೃಷ್ಟಿಕರ್ತನದು,
ಲೋಕ ಕತ್ತಲೆ-ಬೆಳಕಿನಿಂದ ಬೆರೆತಿಹುದು.
ಸಾರ್ವಭೌಮನನು ಸಹ ಚಿಂತೆ ಬೆಂಬಿಡದು....
ಸವಿಯೂಟದೆಡೆಯಲ್ಲಿ ಕಹಿಯನಿಕ್ಕುವುದು!
ರವಿವಂಶದೀ ಚಿಂತೆಗಂತವಿರದೇ....
ನಮ್ಮ ಪಿತೃಕುಲವು ಸದ್ಗತಿಗೇರದೇ?

[ಕಂಪಿಸುವ ಕಂಠದಿಂದ ಏರುದನಿಯಲ್ಲಿ]

ತಾಯೆ, ಶ್ರೀ ಸುರಗಂಗೆ ಭೂಮಿಗಿಳಿಯೇ....
ನಮ್ಮ ಕುಲಕಂಟಿರುವ ಕೊಳೆಯ ತೊಳೆಯೇ!
ಇಳೆಯ ನೀಸಿಳೆಯ ಇಳೆಗಿಳಿಯ ಸ್ವರ್ಗಂಗೇ....
ನೆಲದವರ ಪಾಪರಜ ಕಳೆಯ ಭವಗಂಗೇ!

[ಎದೆಯನ್ನದುರಿಸುವ ಗುಡುಗಿನ ಮೊಳಗು. ಅದು ಶಾಂತವಾದ ಮೇಲೆ ಅಶರೀರವಾಣಿ:]

"ಗಂಗೆಯನ್ನು ತರುವ ಮರ್ಮ ನಿನ್ನ ಮಗನೆ ಬಲ್ಲ....
ಅವನ ತಪವೆ ಬೇಕು, ಅಲ್ಲದಿರಲು ಗಂಗೆಯಿಲ್ಲ!"



ಸುದಕ್ಷಿಣಾ

(ಸಂಭ್ರಮ ಭಾವದಿಂದ)

ಅಶರೀರವಾಣಿಯಿದು, ಅಶರೀರ ವಾಣಿಯಿದು !
ನನ್ನ ಮೈ-ಮನಗಳನು ಜುಮ್ಮೆನಿಸುತಿಹುದು !

(ಸಂತೋಷದ ಸನ್ನದಿತ ಸ್ವರದಲ್ಲಿ)

ಧನ್ಯ ಧನ್ಯ ಭಗೀರಥನ ತಾಯಿ ನಾನು ಧನ್ಯ !
ನನ್ನ ಮಗನು ಸೂರ್ಯವಂಶನೃಪರ ಪೂರ್ವಪುಣ್ಯ !

(ಮಗನತ್ತ ತಿರುಗಿ)

ಕೇಳಿದೆಯಾ ದೈವವಾಣಿ, ಕ್ಷಾತ್ರಕುಲ ಶಿರೋಮಣಿ !
ಏಳು ಏಳು ನಿನಗೊಲಿವಳು ದಿಟವು ಸುರತರಂಗಿಣಿ !
ಬನಕೆ ತೆರಳಿ ಗಂಗೆಗಾಗಿ ನಿನ್ನ ತಪವು ನಡೆಯಲಿ....
ಮನೆಯೊಳಿರ್ದ್ದ ನನ್ನ ತಪವು ಮಗನ ಹದುಳ ಪಡೆಯಲಿ !

ಭಗೀರಥ

ನಿನ್ನ ಬಸಿರಿನ ಪುಣ್ಯಫಲವಿದು
  ನನ್ನ ಭಾಗ್ಯವೆ ಭಾಗ್ಯವು !
ಬಾನ ನುಡಿಯಿದು ನನ್ನ ನೀ ತೆರ
  ಜಾಗರಿಸಿಪುದು ಯೋಗ್ಯವು !
ಭೋಗಿಯಾಗಿಯೆ ಬೇಡಿದರೆ
  ಸುರಗಂಗೆಯೊಲಿಯುವಳೇನು ?
ಯೋಗಿಯಾಗಲು ಪೋಗುವೆನು ಬನ-
  ಕಿಂದು ತಪಸಿಗೆ ನಾನು !

ಸುದಕ್ಷಿಣಾ

ಹೋಗಿ ಬಾ, ಹೋಗಿ ಬಾ, ಗುರಿಯುನ್ನು ಗಳಿಸು !
ತಾಯಿ ಬಸಿರಿನ ಹೆಸರ ಎಂದೆಂದು ಉಳಿಸು !

ಭಗೀರಥ

ನಮನ ಸಾಸಿರ ಬಾರಿ ನಮನ ತಾಯೇ....
ಹರಕೆಗೈಯನ್ನಿರಿಸಿ ನನ್ನ ಬಲ ಕಾಯೆ !

ಸುದಕ್ಷಿಣಾ

ಮಂಗಲವು ಮಂಗಲವು ಶುಭ ಮಂಗಲ !
ಮಂಗಲವು ಸಂತತವು ಜಯ ಮಂಗಲ !

೪

(ಹೊಳೆಗಳು ಹೂನಲಿಡುವ ಸಪ್ತ್ರುಳದ ಹಿನ್ನೆಲೆಯಲ್ಲಿ)

ನಿರೂಪಕ

ಸುರಲೋಕದಿ ಸುರಗಂಗೆಯ ಮುಂಗಡೆ
ಶರಯು ಸರಸ್ವತಿ ಯಮುನೆಯರು,
ಕರುಣೆಯ ಕೋರಲು ಗಂಗಾಮಾತೆಯ
ಮಹಿಮೆಯ ಕೊಂಡಾಡುತಲಿಹರು :

(ಹೊಳೆಯ ತರಂಗದ ಶಬ್ದ, ನೀರ್ವಕ್ಕಿಗಳ ಕಲಕಲಾಟ ಕೇಳುತ್ತಿರಬೇಕು.)

ಯಮುನಾ- ಶರಯೂ- ಸರಸ್ವತಿ :

(ಭೈರವೀ ರಾಗಿಣಿಯಲ್ಲಿ ಗಂಭೀರ ವಿಲಂಬಿತ ಲಯದಲ್ಲಿ)

ಅಮರ ತರಂಗಿಣಿ, ಚಿರಕಲ್ಯಾಣೀ
  ವರುಣರಾಜ್ಯರಾಣೀ— ನೀ
  ವರುಣರಾಜ್ಯರಾಣೀ !
ನಮನ ನಿನಗೆ ಶುಭ ಮಹಿಮಾಮಾಲಿನಿ
  ನೀನೆ ವೇದವಾಣಿ—ತಾಯೇ
  ನೀನೆ ವೇದವಾಣಿ ! ‖ ಪಲ್ಲವಿ ‖
ನಿನ್ನ ಬಿಂದುವೊಂದೊಂದು ಪಾತಕದ
  ವೃಂದವಡಗಿಸುವುದೆ....
ನಿನ್ನ ಕೃಪೆಯಿಂದ ಸ್ವರ್ಗವಾನಂದ-
  ಕಂದವೆನಿಸುತಿಹುದೇ !
ಜಯಗಂಗೇ ! ಸುಖಸಂಗೆ !! ವಿಮಲಾಂಗಿ !!! ‖ ೧ ‖

ಗಂಗಾದೇವಿ :

ಏನು ಬಂದಿಹಿರಿ ? ತಂಗೆಯರೆ ಸುಖವೇ ?
ಮಾನವರ ಸಂತಾನವೆಲ್ಲ ಸುಖಮುಖವೆ ?

ಯಮುನಾ :

ಏಕೆ ಅರಿಯದರಂತೆ ಕೇಳುವೆ—
  ತಾಯೆ ನಿನಗಿದು ತಕ್ಕುದೇ ?
ಸೂರ್ಯವಂಶದ ಸುಖದ ರಾಜ್ಯದಿ
  ದುಃಖಶರಧಿಯು ಉಕ್ಕಿದೆ !
ಅಂದೆ ಹೋಗಿಹ ಅಂಶುಮಂತನು
  ರಾಜ್ಯವನು ಬಿಟ್ಟಡವಿಗೆ....
ತಂದೆಯಂತೆಯೆ ದೊರೆ ದಿಲೀಪನು
  ನೀರ ನೀಡಿದ ಪೊಡವಿಗೆ !
ದೊರೆಭಗೀರಥನಿಂದು ವೈರಾಗಿಯಾಗಿ..
ತಪವ ನಡೆಸಿಹ ತಾಯೆ, ನಿನ್ನೊಲುಮೆಗಾಗಿ.

ಶರಯೂ:

ಎನಿತು ಉಗ್ರತಪ, ಎನಿತು ಉಗ್ರತಪ !
  ದಿನಕರವಂಶಜನಲ್ಲವೆ ಜನಪ ?
ಧರೆಯ ಹಿರಿಹಿರಿ ತೊರೆಗಳೆಲ್ಲ ಬತ್ತಿಹವು,
ತರು-ಲತಾ-ಸಸ್ಯಕುಲ ಸುಗಿದು ಸತ್ತಿಹವು !
ಬಾಯಾರಿ ಜೀವಗಳು ಜಲವನರಸುತಿವೆ...
ಬಿಸಿಲ ಕಾಹಿಂಗೆ ಕಂಗೆಟ್ಟು ಮರುಗುತಿವೆ.
ಎನಿತು ಉಗ್ರತಪ, ಎನಿತು ಉಗ್ರತಪ !
  ದಿನಕರವಂಶಜನಲ್ಲವೆ ಜನಪ ?

ಸರಸ್ವತಿ

ಭಗೀರಥನ ತಪದ ಬಲಕೆ ಬ್ರಹ್ಮನೊಲಿದು ಬಂದಿಹ;
ರಮೆಯ ಸಹಿತ ಶ್ರೀಹರಿಯು ಗರುಡರಾಜ ತಂದಿಹ.
ನಂದಿಯೇರಿ ಚಂದ್ರಮೌಳಿ ಮುಂದೆ ಬಂದು ನಿಂದಿಹ,
ಯಾರು ಬಂದರೇನು ತಾಯೆ, ದೊರೆಯು ತಪದಿ ಸಂದಿಹ!

ಗಂಗಾ

ಏನು ಬೇಕೆಂತವನಿಗೇನು ಬೇಕು ?

ಯಮುನಾ

ನೀನು ಧರೆಗಿಳಿದು ಬಂದರೆ ಅವಗೆ ಸಾಕು !

ಸರಸ್ವತಿ

ರವಿಕುಲದ ಪಿತೃವನದಿ ನೀ ಹರಿಯಬೇಕು;
ಅವರ ಪಾತಕಕೋಟಿಯನು ತರೆಯಬೇಕು !

ಗಂಗಾ

ಆಯಿತಾಯಿತು ನಾನು ಧರೆಗಿಳಿದು ಬರುವೆನು;
ನನ್ನ ವಹಿಸುವ ಶಕ್ತಿ ಧರೆಯೊಳೆಲ್ಲಿಹುದು ?
ತಂಗಿ, ಯಮುನಾಸರಿತೆ ನೀನೆ ಹೋಗು;
ನಿನ್ನ ಕುಲದರಸನ ತಪೋವನಕೆ ಸಾಗು !
ನಾನು ಬರಲಿಹ ವಾರ್ತೆಯನ್ನವನಿಗೊರೆಯೆ...
ನನ್ನ ವಹಿಸುವ ಶಕ್ತಿ ಎಲ್ಲಿದೆಯೊ ಅರಿಯೆ !

ಯಮುನಾ–ಶರಯೂ–ಸರಸ್ವತಿ :

ಧನ್ಯಧನ್ಯರು ನಾವು ! ಧನ್ಯಧನ್ಯವು ಧರಣಿ
ಧನ್ಯೆ ಗಂಗಾಮಾತೆ, ತ್ರಿಭುವನಪೂತೇ ! ಸ್ವರ್ಗಸಂಭೂತೇ !

ಗಂಗಾ

ಪುಣ್ಯಾತ್ಮನಾದೊರೆಯು ಅವನ ಧನ್ಯತೆಯನ್ನು
ಕೊಂಡಾಡಿರಿನ್ನು....ಕೊಂಡಾಡಿರಿನ್ನು !
(ಮತ್ತೆ ಮೂವರೂ ಕೂಡಿ ಗಂಗೆಗೆ ಪ್ರಾರ್ಥನೆ ಸಲ್ಲಿಸುವರು.)
ಅಮರತರಂಗಿಣಿ ಚಿರಕಲ್ಯಾಣೀ,
ವರುಣರಾಜ್ಯರಾಣೀ....ನೀ
ವರುಣ ರಾಜ್ಯರಾಣೀ !
ನಮನ ನಿನಗೆ ಶುಭನುಹಿಮಾಮಾಲಿನಿ
ನೀನೆ ವೇದವಾಣೀ—ದೇವೀ
ನೀನೆ ಜ್ಞಾನದಾನೀ !
(ಹಾಡಿನ ಧ್ವನಿಯು ಕೊನೆಕೊನೆಗೆ ದೂರದೂರ ಸರಿಯುತ್ತ ಮಂದಮಂದವಾಗಿ ಮುಗಿಯಾಗಬೇಕು.)

ಜಿ

ನಿರೂಪಕ :

ಅಮರಗಂಗೆಯು ಕೊಟ್ಟ ಸಂದೇಶವನು ಕೊಂಡು,
ಯಮುನೆ ಶರಯೂ–ಸರಸ್ವತಿಯರನ್ನೊಡಗೊಂಡು,
ಇಳಿದು ಬಂದಳು ಇಳಾತಳಕೆ. ಯಮುನೆಯು ಜತೆಯ
ಕೆಳದಿಯರನೊಂದೆಡೆಗೆ ನಿಲಿಸಿ, ತಾನೊಬ್ಬಳೇ
ನೃಪ ಭಗೀರಥನು ತಪನಿಂದ ಆಶ್ರಮದೆಡೆಗೆ
ಬಂದು ನಿಂದಿಹಳು;
ತಪದ ತೇಜದ ನಡುವೆ ಪ್ರತಿಪ್ರಭಾಕರನಂತೆ
ತೊಳಗುತ ಸಮಾಧಿಯೊಳು ಕುಳಿತಾ ಭಗೀರಥನ
ಬಳಿಸಾರಿ, ಕಂಡು, ಹೃದಯವು ಹಿಗ್ಗಿ, ಅಚ್ಚರಿಯು
ಮನವಮುಸುಕೆ, ನುಡಿವಳಿದೊ ಕೇಳಿ ಕೇಳಿ :

ಯಮುನಾ :

(ಹೊಳೆಯು ಹರಿಯುವ ಸಪ್ಪಳದ ಹಿನ್ನೆಲೆಯಲ್ಲಿ)
ಓಹೊ ! ಎಂತಹದು ನೃಪನೀ ತಪೋಮಹಿಮೆ ?
ಈ ತಪಸ್ಸಿಗೆ ಶಂಕರನ ತಪವೆ ಉಪಮೆ !
(ಹೆಚ್ಚಿದ ಅಚ್ಚರಿಯ ಬಗೆಯಿಂದ)
ಇದೊ, ಇಲ್ಲಿ ಮೂಡಿಹುದು ಶ್ರೀವಿಷ್ಣು ಪಾದ !
ಅದೊ, ಅಲ್ಲಿ ಕಾಣುತಿದೆ ಬ್ರಹ್ಮನ ಹಸಾದ !
ಶಿವನ ಭಸಿತದ ಭಸ್ಮ ಬಿದ್ದಿರುವುದಿಲ್ಲಿ....
ಇಂಥ ಪಾವನದೆಡೆಯು ಇರುವುದಿನ್ನೆಲ್ಲಿ ?
(ನಸುವೆ ತಡೆದು)
ಭರತವರ್ಷದ ತುಂಬ ನೋಡಿದಲ್ಲೆಲ್ಲಾ
ದುರ್ಭಿಕ್ಷ-ದುರ್ದಶೆಯು ತುಂಬಿರುವುದಲ್ಲಾ !
ಇಲ್ಲಿ ನೋಡಿದರದರ ಸುಳಿವೊಂದು ಇಲ್ಲ....
ಪ್ರಕೃತಿ ಶನ್ನಯ ಚೆಲುವ ತುಂಬಿರುವುದೆಲ್ಲ !
(ಪ್ರಕೃತಿ ಸೌಂದರ್ಯಸೂಚಕ ಪಶುಪಕ್ಷಿಗಳ ಕೂಜನ ಕೇಳಿಸಬೇಕು. ಸ್ವಲ್ಪ ತಡೆದು ಮತ್ತೆ ಯಮುನಾದೇವಿ ಮಾತನಾಡುವಳು :)
ಇವನೆಲ್ಲ ಕೊಂಡು ನಾನೇನ ಮಾಡುವೆನು ?
ಮೊದಲು ಈತನನು ತಪದಿಂದೆಬ್ಬಿಸುವೆನು !
(ಭಗೀರಥನನ್ನು ಕುರಿತು)
ದೊರೆ, ಭಗೀರಥ ! ದೊರೆ, ಭಗೀರಥ !
ನಾನು ಯಮುನಾದೇವಿಯು;
ಕಣ್ತೆರೆ ದೊರೆ, ನಾನು ಬಂದಿಹೆ,
ನಿನ್ನ ಕುಲಸಂಭಾವ್ಯೆಯು !
(ಭಗೀರಥನು ಕಣ್ದೆರೆಯದೆ ಕುಳಿತಿರಲು, ಯಮುನೆ ಕಾತರಭಾವದಿಂದ ದನಿಯನ್ನೆತ್ತರಿಸಿ ಕೂಗುವಳು.)
ಇದೇನು ? ನಿಸುಕಲೊಲ್ಲನಿವ, ಅದೆಂಥದೋ ದೃಢವ್ರತ!
ನಿಧಾನವೇನ ಕಾಣೆನಾನದಾವುದಿದಕೆ ಸತ್ಪಥ !
ಪದೇಪದೇ ಮಹೋಚ್ಚಕಂಠವೆತ್ತಿ ಕರೆವೆ ಕೂಗುತ :
ಭಗೀರಥಾ, ಭಗೀರಥಾ, ಭಗೀರಥಾ, ಭಗೀರಥಾ !
(ಕೊನೆಯ ನಾಲ್ಕು ಸಂಬೋಧನಪದಗಳನ್ನು, ರಾಗೋಚಿತವಾದ ನಾಲ್ಕು ಬೇರೆ ಬೇರೆ ಸ್ವರಸ್ಥಾನಗಳನ್ನು ಕೊಟ್ಟು ಹೇಳಬೇಕು. ಯಮುನೆಯ ಕರೆ ನಿಂತೊಡನೆ, ಸಮಾಧಿಯನ್ನು ಇಳಿಸಿದ ರೇಚಕನಿಶ್ವಾಸದ ಸಪ್ಪಳ ಕೇಳಿಸಬೇಕು.)



ಭಗೀರಥ

ಯಾರೆನ್ನ ಕರೆದವರು ಎಚ್ಚರಿಸಿದವರು ?
ಯಾರದೋ ಹೆಣ್ಣುದನಿ ! ಎಲ್ಲಿಹರದಾರು ?

ಯಮುನಾ

ಅಹುದಣ್ಣ, ನಾನಿನ್ನ ಕುಲದ ಹೆಮ್ಮಗಳು,
ನಿನ್ನನೆಬ್ಬಿಸಲೆಂದೆ ಇಲ್ಲಿ ಬಂದವಳು !

ಭಗೀರಥ

ಯಾರು ? ಯಮುನಾದೇವಿ ! ನೀನೇತಕಿಲ್ಲಿ ?

ಯಮುನಾ

ನಿನ್ನ ತಪ ಕಡೆಯಲಿಕೆ ಬಂದಿರುವೆನಿಲ್ಲಿ !

ಭಗೀರಥ

ತಪಕೆಡಿಸೆ ಬಂದೆಹೆಯ ? ಇಂದ್ರಕಳುಹಿದನೆ ?

ಯಮುನಾ

ನಿನ್ನ ಕುಲಜೆಯು, ನಿನ್ನ ತಪವ ಕೆಡಿಸುವೆನೆ ?

ಭಗೀರಥ

ಅಂತಿರಲು ನೀನೆನ್ನ ಕೂಗಿದೆಯದೇಕೆ ?
ಧ್ಯಾನದಿಂದೆನ್ನ ಜಾಗರಿಸಿದೆಯದೇಕೆ ?

ಯಮುನಾ

ಸುರಗಂಗೆಯ ಸಂದೇಶವನೊಂದನು
ಅರುಹಲು ಬಂದಿಹೆನು !

ಭಗೀರಥ

ಒರೆಯೊರೆ ತಾಯೇ ಆಕೆಯ ಕರುಣವು
ನನಗೆ ದೊರೆಯದೇನು ?

ಯಮುನಾ

ದೊರೆಯೇ ಗಂಗೆಯು ಕರುಣಾಸಾಗರೆ
ಶಂಕಿಸದಿರು ನೀನು !

ಭಗೀರಥ

ಒರೆಯೊರೆ ತಾಯೇ ಸಿರಿಗಂಗೆಯ ಸಂ-
ದೇಶ ವಚನಗಳನು !

ಯಮುನಾ

ಅಂತಾದೊಡರಸ ಕೇಳಿಂತು ದೇವಿಯ ವಾಣಿ :
ಇಳೆಗಿಳಿದು ಬರುವಳಂತೆ.... ಆದರೆ....
ಇಳೆಗಿಳಿದು ಬರುವಳಂತೆ !

ಭಗೀರಥ

ನಿನ್ನ ಮಾತಿನೆಳೆಯೊ ಭೀತಿಯನು ಹುದುಗಿಸಿಹೆ
ಏಕೆ ಸಂಶಯದ ನಂತೆ ! – ಹೇಳೆನೀ
ಏನೆಂದಳಾ ಮಹಂತೆ ?

ಯಮುನಾ

ದೊರೆಯೆ ಕೇಳು, ನಿನ್ನ ತಪದ ಪ್ರಾರ್ಥನೆಯನ್ನು ಕೇಳಿದೆ;
ಸುರಲೋಕವ ಸಾರಿ, ಗಂಗೆಯಲ್ಲಿ ಕೃಪೆಯ ಕೋರಿದೆ.
ಧರೆಗೆ ಬರುವೆನೆಂದಳವಳು, ಇಳಿದು ಬರುವಳಂತೆ....
ಅವಳನು ನಿರ್ವಹಿಪ ಶಕ್ತಿ ಧರೆಯೊಳಿಲ್ಲವಂತೆ !

ಭಗೀರಥ

ಸುರಧುನಿಯ ನಿರ್ವಹಿಪ ಶಕ್ತಿ....
ಅರಿಯಲಿಕೆ ಇನ್ನಾವ ಯುಕ್ತಿ ?
(ಮತ್ತೆ ಯಾವ ಮಾತೋ ನೆನಪಿಗೆ ಬಂದಂತಾಗಿ)
ಇನ್ನಾವ ಯುಕ್ತಿ ?.... ಇನ್ನಾವ ಯುಕ್ತಿ ?
ಎಲ್ಲವನು ಸಾಧಿಸಲು
ತಪವೊಂದೆ ಶಕ್ತಿ !.... ತಪವೊಂದೆ ಶಕ್ತಿ !
(ನಿಶ್ಚಯದ ಉತ್ಸಾಹಧ್ವನಿಯಲ್ಲಿ)
ಮತ್ತೆ ತಪಸಿಗೆ ತೊಡಗಿ ನಡೆಯುವೆ
ಸತ್ಯಶಕ್ತಿಯ ನಾನು....
ವ್ಯರ್ಥವಾಗದು ತಪವು, ಗಂಗೆಯು
ಅಂದೆ ಬರಲಿನ್ನೇನು ?

(ಒಮ್ಮೆಲೆ ಗುಡುಗಿನ ಸಪ್ಪಳವು ಕೇಳುವುದು. ಅದು ನಿಂತ ಮೇಲೆ ಅಶರೀರವಾಣಿಯ ಗಂಭೀರಧ್ವನಿ ಕೇಳಿಸುವುದು.)

“ ಇನ್ನು ಬೇಡ ಜಪ ! ಇನ್ನು ಬೇಡ ತಪ !
ಇನ್ನು ಬೇಡ ವ್ರತ-ಯೋಗ !
ನಿನ್ನ ತಪಕೆ ಒಲಿದಿರುವಳು ಶ್ರೀಹರಿ–
ಬ್ರಹ್ಮ-ಮಹೇಶ್ವರರೀಗ !
ಇಳಿದು ಬರಲಿ ದೇವಗಂಗೆ, ಹರಿಯ ಪದವು ಹಿಡಿವುದು;
ನಳಿನಭವನ ಕಮಂಡಲವು ಅವಳ ರಭಸ ತಡೆವುದು !
ಶಿವನ ಜಟಾಜೂಟ ಗಂಗೆಗಾಗಿ ಕಾಯುತಿರುವುದು—
ಇವನೆಲ್ಲವ ಮೀರಿ ನಿನ್ನ ತಪದ ಮಹಿಮೆ ನಿಲುವುದು !
ತಪದ ಶಕ್ತಿಯರಿವು ಗಂಗೆಗಾಗಲಿಂದು ಸುವ್ರತ....
ಬರಲಿ ಗಂಗೆ, ಬರಲಿ ಗಂಗೆ, ಕಡಿಯೊ ನೀ ಭಗೀರಥ !”

ಭಗೀರಥ

ಯಮುನೆ ಕೇಳಿದೊ ಕೇಳು ದೈವವಾಣಿ !
ಇನ್ನು ಬಾರದೆ ಇಹಳೆ ವರುಣಾರಾಣಿ ?
ಇದೊ ಇದೋ ಅವಳನ್ನು ಕೂಗಿ ಕರೆವೆ....
ಇದೆ ಎಡೆಯೊಳಿಲ್ಲಿ ಬರಮಾಡಿಕೊಳುವೆ !

ಯಮುನಾ

(ಸಂತೋಷಪ್ರಸಿಯಲ್ಲಿ)

ಆನಂದವು, ಆನಂದವು, ಆನಂದವು ಪ್ರಿಯಬಂಧು !
ನೀನಾಹ್ವಾನಿಸು ಬರುವಳು ಭೂತಲಕಾ ಸುರಸಿಂಧು !
ಆನಂದವು, ಆನಂದವು
ಆನಂದವು ಪ್ರಿಯಬಂಧು !

ಭಗೀರಥ

(ಕೈಮುಗಿದು ನಿಂತು, ಪ್ರಾರ್ಥನೆಯ ಗಂಭೀರ ಭಾವದಲ್ಲಿ)

ಇಳಿಯೆ ಸ್ವರ್ಗಂಗೆ, ಇಳಿಯೆ ಭದ್ರಾಂಗೆ !
ಇಳೆಗೆ ಧುಮುಕಿ ಬಾರೇ !
ನಿನ್ನ ಶುಚಿಯನ್ನು, ನಿನ್ನ ರುಚಿಯನ್ನು
ನೆಲದವರಿಗೆ ತೋರೆ !
ಗಗನದೊಡಲೊಡೆದು ಸಾರೆ !
ತಾರೆಯೊಡಗೊಂಡು ಬಾರೆ !
ಮುಗಿಲ ಭೇದಿಸುತ ನೀರೇ,
ಜಗದ ಖರ್ಪರವ ತೂರೇ...!
ಶಿವನ ಜಡೆಯುಡಿದು, ಹಿಮದ ಗಿರಿಯೊಡೆದು
ಮೇಲುವಿಳಿದು ಬಾರೇ....
ತಡೆವ ತಡೆ ಜಡಿದು, ಹಿಡಿವ ಕಡೆ ಕಡಿದು,
ಭರತ ವರ್ಷ ಸಾರೆ !
ಜಯಗಂಗೇ....ಸುತರಂಗೇ....ವಿಮಲಾಂಗೇ !

(ಗಗನದಿಂದ ಧುಮುಕುವ ಗಂಗಾಪ್ರವಾಹದ ರಭಸದ ಶಬ್ದ ಕೇಳಿಸಬೇಕು. ಜೊತೆಯಲ್ಲಿಯೆ ಗುಡುಗು-ಸಿಡಿಲಿನ ಧ್ವನಿಯೂ ಕೇಳುತ್ತಿರಬೇಕು. ಬಳಿಕ ನೀಶಬ್ದ.)

ಗಂಗಾ

(ಭಗೀರಥನೆದುರು ಪ್ರತ್ಯಕ್ಷಳಾಗಿ ನಿಂತು)

ಬಂದಿಹೆನು ಬಂದಿಹೆ—ಭಗೀರಥ !
ಕಂದೆರೆಯುತ ನೋಡಿಲ್ಲಿ ॥ ಪಲ್ಲ ॥
ನೀನೇ ತೋರಿಸು ನಾನು ಸಾಗುವಾ
ತಾಣಗಳವು ಎಲ್ಲೆಲ್ಲಿ ?
ಬಂದಿಹೆನು ಬಂದಿಹೆ—ಭಗೀರಥ
ಕಂದೆರೆಯುತ ನೋಡಿಲ್ಲಿ !

ಭಗೀರಥ

ಬಂದೆಯೋ ಬಂದೆಯೋ ಬಂದೆಯೋ ತಾಯೇ !
ವಂದನವು ವಂದನವು ದಯೆದೋರಿ ಕಾಯೇ !
ಬಂದೆಯಾ ನೀನೆನ್ನ ಮೊರೆ ಕೇಳಿದೆ....
ಇಂದೆನ್ನ ಬಾಳ್ಗೆ ತೃಪ್ತಿಯ ನೀಡಿದೆ !
ಕೋಟಿ ನಮನವು ನಿನಗನಂತ ನಮನ !
ದಾಂಟಿಸಾ ದುರಿತದಿಂದೆನ್ನ ಪಿತೃಗಳನ !

‘ ಬಗನ ’ ಬಾಲಾಮೃತ

ಮಕ್ಕಳ
ಸಧೃಢತೆಗಾಗಿ
‘ ಬಗನ ’
ಬಾಲಾಮೃತ-
ವನ್ನು ಉಪ-
ಯೋಗಿಸಿರಿ.

ಮುಖ್ಯವಾದ
ಮಕ್ಕಳ
ಯಕೃತು
ಮತ್ತು
ಹೊಟ್ಟೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ ‘ ಗ್ರಾಯಿಪ್ ಹೀಲರಿನ ’
ಅಂಶವೂ ಇರುವದರಿಂದ, ಇದು ಮಕ್ಕಳ
ಉತ್ತಮ ‘ ಟೊನಿಕ್ಕು ’ ಇರುವದು.

THE NATIONAL PHARMACIES &
PHARMACEUTICALS Ltd. DHARWAR.

೫೫ ವರ್ಷಗಳಿಂದ ಅನುಭವಪಟ್ಟ
ಕರ್ಶೀ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ :—
ಗಣೇಶ ರಾಮಚಂದ್ರ ಕರ್ಶಿ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ಗಂಗಾ

(ವರದಾನದ ಪ್ರಸನ್ನಭಾವದಲ್ಲಿ)

ಅಂತಾಗಲಿ, ಅಂತಾಗಲಿ, ಅಂತಾಗಲಿ, ಭೂಪಾಲಾ !
ಎಂತಿದೆ ತೋರಿಸು ನಡೆನಡೆ— ನಿನ್ನವಂಶ ಪಾಪಕುಲ ?
ಅಂತಾಗಲಿ ಅಂತಾಗಲಿ ಭೂಪಾಲಾ ! ‖ ಪಲ್ಲವಿ ‖
ಜಹ್ನು ಮುನಿಯೂ ತನ್ನ ತಪದ
ಉನ್ನತಿ ನೀಡಿರುವನಿಂದು !
ನನ್ನ ಬಲವು ಬೆಳೆದಿರುವುದು,
ಹರಿವುದೆಲ್ಲಿ ಹೇಳ.... !
ಅಂತಾಗಲಿ, ಅಂತಾಗಲಿ, ಅಂತಾಗಲಿ ಭೂಪಾಲಾ ‖ ೧ ‖

ಭಗೀರಥ

(ಕೃತಕೃತ್ಯತೆಯ ಸಂಭ್ರಮದಲ್ಲಿ)

ಧನ್ಯ ಧನ್ಯವು ನನ್ನ ರವಿವಂಶವೆಲ್ಲಾ ....
ಜಾಹ್ನವಿಯು ಭಾರತಕೆ ಬರಮಾಡಿತಲ್ಲಾ !

ಯಮುನಾ

ರವಿಕುಲಜಳೇ ಯಮುನೆ ನಾನು ಧನ್ಯ !
ತಾಯೆ, ನೀ ದಯೆದೋರಿ ಬಂದುದಿದು ಪುಣ್ಯ !
ನನ್ನ ಶತವಂದನೆಯ ಸ್ವೀಕರಿಸು ಮಾತೇ,
ಬಿನ್ನಹವ ನನ್ನದೊಂದನು ಸಲಿಸು ಪ್ರೀತೆ !

ಗಂಗಾ :

ನಿನ್ನ ಬಿನ್ನಹವೇನು ಅರುಹು ತಂಗೆ !

ಯಮುನಾ :

ಇನ್ನು ನಾ ನಿನ್ನ ನಗಲಿರಲಾರೆ ಗಂಗೆ !
(ಸಲುಗೆಯ ಧ್ವನಿಯಲ್ಲಿ)
ನಿನ್ನೊಂದಿಗಿರುವೆನೇ ನಿನ್ನೊಡನೆ ಬೆರೆವೆನೇ
ನಿನ್ನೈಕ್ಯದ ಗತಿಯ ಬೇಳೆಸುವೆನೇ !

ಗಂಗಾ

ಅಂತಾಗಲಿ, ಕರೆಯುವೆ ನಾ ಮುಂದೆ....
ಸಂತೋಷದಿ ನನ್ನೊಂದೂವೆಯೆಂದೆ ‖ ಪಲ್ಲ॰
ನನ್ನ ನಿನ್ನ ಸಂಗಮದೆಡೆ ಲೋಕದಿ
ಪುಣ್ಯತೀರ್ಥವೆನಿಸುವುದೇ....
ನನ್ನ ಹೆಸರೊಡನೆ ನಿನ್ನ ಹೆಸರದೂ
ಮನ್ನಣೆಯೊಳು ಮೆರೆಯುವುದೇ ‖ ೧

[ಭಗೀರಥನಿಗೆ]

ಹೋಗೆ ಭಗೀರಥ ನಿನ್ನ ತಪದ ಫಲವೆಂದೇ
ಸುರಲೋಕವನ್ನುಳಿದು 'ಧರಣಿಗಿಳಿದಂದೆ !
ಇನ್ನು ನಾ ಸುರಗಂಗೆಯಲ್ಲ-ಭಾಗೀರಥೀ
ನನಗಿನ್ನು ಹೊಸ ಹೆಸರು, ಇದುವೆ 'ಭಾಗೀರಥೀ' !

ಭಗೀರಥ

ಧನ್ಯೆ ಭಾಗೀರಥೀ, ಧನ್ಯೆ ಭಾಗೀರಥೀ !
ಪುಣ್ಯಜಲವಾಹಿನೀ ಭಾರತದ ಭಾಗ್ಯರಥಿ !
ಇದೊ, ಇಂತು ಬಾರೇ !
ನನ್ನೊಡನೆ ಸಾರೇ !
ನನ್ನೊಡನೆ ಸಾರೇ !

[ಮಹಾನದಿಯು ರಭಸದಿಂದ ಪ್ರವಹಿಸುವ ಶಬ್ದ ಕೇಳಿಸಬೇಕು.]

ಜನವೃಂದದ ಗಂಗಾಸ್ತೋತ್ರ

[ದೂರದಿಂದ ಕೇಳಿಸಬೇಕು.]

ಪಾಪಾಪಹಾರಿ ದುರಿತಾರಿ ತರಂಗಧಾರಿ
ಶೈಲಪ್ರಚಾರಿ ಗಿರಿರಾಜ ಗುಹಾವಿದಾರಿ
ಝೇಂಕಾರ ಕಾರಿ ಗಿರಿರಾಜ ರಜೋಪಹಾರಿ
ಗಾಂಗಂ ಪುನಾತು ಸತತಂ ಶುಭಕಾರಿವಾರಿ !

ಶಾಂತಿಃ ಶಾಂತಿಃ ಶಾಂತಿಃ

ಯಕ್ಷಗಾನದಲ್ಲಿ ನೃತ್ಯ ಮತ್ತು ಸಂಗೀತ

ಶ್ರೀ. ಶಿವರಾಮ ಕಾರಂತರು, ಪುತ್ತೂರು

★

ಯಕ್ಷಗಾನದಲ್ಲಿ ಸಂಗೀತ-ನೃತ್ಯಗಳು ಪ್ರಧಾನಾಂಗಗಳು. ಸಂಗೀತವು ಮಾರ್ಗಪದ್ಧತಿಯದಲ್ಲವಾದರೂ, ಭಾಗವತರ ಮತ್ತು ನಟರ ಗಮಕಪದ್ಧತಿಯಿಂದ ಜೀವಪೂರ್ಣವಾಗಿ ಇರುತ್ತದೆ. ಇದರಲ್ಲಿಯ ನರ್ತನದ ರೀತಿವೈವಿಧ್ಯ, ಯಾವ ಭಾವವನ್ನೂ ಪೋಷಿಸಿ ತೋರಿಸಬಲ್ಲದು.

卐

ಯಕ್ಷಗಾನ ಕಥಾಪ್ರದರ್ಶನದಲ್ಲಿ ಆದರ ನಾಟಕದ ಭಾಗದಿಂದ ...ವು ಗದ್ಯಭಾಗವನ್ನು ಮರೆತುಬಿಟ್ಟಲ್ಲಿ, ಆದರ ಸಂಗೀತ ಮತ್ತು ...ತ್ಯಭಾಗಗಳು ಎಷ್ಟು ಪ್ರಧಾನವೆಂಬುದು ನಮಗೆ ಒಡೆದು ಕಾಣು...ದೆ. ನಾಟಕಪೋಷಣಕ್ಕೆ ಅವೇ ಮುಖ್ಯ ಸಾಧನಗಳಾಗಿ ...ವಿವೆಯೆಂದು ಆಗ ಕಾಣಿಸುತ್ತದೆ. ಮೊದಲು ಅದರ ಗಾನ ...ಯನ್ನೇ ಕುರಿತು ವಿಮರ್ಶಿಸಿ, ಅನಂತರ ನೃತ್ಯಭಾಗವನ್ನು ...ತು ಚರ್ಚಿಸುವ. ಈ ಸಮಯದಲ್ಲಿ ಯಕ್ಷಗಾನ ಒಂದು ...ನಪದ ಗೀತಸಂಪ್ರದಾಯ, ಅದು 'ಹಾಡುಗಬ್ಬ' ಎಂದು ...ದಿರಬೇಕು. ಹಾಡುಗಬ್ಬಗಳಲ್ಲಿ ಅರ್ಥ-ಭಾವಗಳ ಪ್ರತಿಪಾದನೆಗೆ ...ಯ ಸಾಹಿತ್ಯವೊಂದೇ ಸಾಧನವಲ್ಲ. ಸಂಗೀತವೂ ಆ ಕೆಲಸ ...ಡುತ್ತದೆ. ಯಕ್ಷಗಾನದ ಕವಿಗಳು ಉದ್ದಾಮ ಕವಿಗಳು ಎನ್ನ...ರೆ. ಅಲ್ಲಿಯ ಸಾಹಿತ್ಯಾಂಶ ದುರ್ಬಲವಾದುದು. ಆದರೆ ...ಳದ ಗೀತಭಾಗದಿಂದ ಅವರು ರಸಪೋಷಣೆಯ ಕೆಲಸವನ್ನು ...ಮ ಯಶಸ್ವಿಯಾಗಿ ಸಾಧಿಸಿದವರು.

ನಾವು ಮಾರ್ಗಪದ್ಧತಿಯ ಗೀತಗಳಾದ— ದಕ್ಷಿಣಾದಿ, ಉತ್ತ...ದಿಗಳನ್ನು ಪರಿಶೀಲಿಸಿದರೆ,— ಅಲ್ಲಿಯ ಪ್ರಬಂಧಗಳಲ್ಲಿ ಪ್ರಕಟ...ಗಿರುವ ಭಾವ ರಸಗಳ ಸಂಖ್ಯೆ, ಜಾತಿಗಳು ಮಿತವಾದುವು. ...ಲಸೀದಾಸ, ಸೂರದಾಸ, ಕ್ಷೇತ್ರಯ್ಯ, ತ್ಯಾಗರಾಜ, ಪುರಂದರ...ಸರು ತಮ್ಮ ಜೀವನಲಹರಿಯಾಗಿದ್ದ— ಶೋಕ, ಭಕ್ತಿ, ಶಾಂತಿ...ಗಳನ್ನೇನೋ ಚೆನ್ನಾಗಿ ಚಿತ್ರಿಸಿದ್ದಾರೆ. ನೂರಾರು ರಾಗಗಳಿರು...ಗಲೂ ಚಿತ್ರಿಸಿದ ಭಾವರಸಗಳು ಇವೇ. ಆದರೆ ಯಕ್ಷಗಾನವು, ...ಟಕತ್ವೆ ಬಳಕೆಗೊಂಡ ಗೀತಜಾತಿಯಾದುದರಿಂದ, ಆ ಹಾಡು...ಗಳ ಕರ್ತೃಗಳು, ಹಾಡುಕವಿಗಳು, ಮಾನವನ ಉಕ್ಕು, ಸೊಕ್ಕು, ...ಷ್ಟು, ಶೌರ್ಯ, ಹರ್ಷ, ಮತ್ಸರ— ಇಂಥ ರಸಗಳಿಗೂ ಪ್ರಕಟ...ನೆ ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಅವರು ಸಾಧಿಸಿದ ...ಶಸ್ಸು ಅಪೂರ್ವ.

ಯಕ್ಷಗಾನಪ್ರಬಂಧಕಾರರು, ಸಂಗೀತಶಾಸ್ತ್ರದ ಇಲ್ಲವೆ ಸಾಹಿತ್ಯಶಾಸ್ತ್ರದ ಆಳವಾದ ಪರಿಚಯವಿಲ್ಲದವರಾದರೂ, ಕಲೆಯ ಮುಖ್ಯ ಧರ್ಮವಾದ ರಸಪ್ರತಿಪಾದನೆಯ ಕೆಲಸವನ್ನು ಚೆನ್ನಾಗಿ ಮಾಡಿದ್ದಾರೆ. ಸಂಗೀತದಲ್ಲಿ Rhythm ಅಥವಾ ತರಂಗಿತತೆಯ ಶಕ್ತಿಯನ್ನು ಅರಿತು, ಅದೊಂದರ ಬಲದಿಂದಲೇ ಅವರು ಈ ಕೆಲಸ ನಿರ್ವಹಿಸಿದರು. ಮಾತ್ರೆಗಳ, ನಾದಪ್ರವಾಹಗಳು, ಅಕ್ಷರದ ಕರ್ಕಶ, ಮೃದು ಉಚ್ಚಾರಗಳು— ಇಂಥವನ್ನೇ ತರಂಗ ತರಂಗವಾಗಿ ಪೋಣಿಸಿ, ತಾಳಕ್ಕೆ ಹೊಂದಿಸಿ, ಉಕ್ಕು ಬಂದಾಗ ಉಕ್ಕಿ ಕೂಗಿ, ಕೋಪವಾದಾಗ ಕೋಪಕ್ಕೂ, ಹಾಸ್ಯ ಮಾಡಿದಾಗ ಚೇಷ್ಟೆಗೂ, ಶೃಂಗಾರಕ್ಕೂ, ಶೋಕಕ್ಕೂ— ಜೀವನದ ಪ್ರತಿಯೊಂದು ರಸಭಾವಕ್ಕೂ ಪ್ರಕಟಣೆ ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ನೋಡುವಲ್ಲಿ— ಬರಿಯ ಶೋಕಪ್ರಧಾನಭಾವಗಳನ್ನೇ ಪ್ರಕಟಿಸಿದ ಮಾರ್ಗಪದ್ಧತಿಯ ಪ್ರಬಂಧಕಾರರೂ ಈ ಜಾನಪದ ಕವಿಗಳಿಂದ ಅರಿತುಕೊಳ್ಳಬಹುದಾದ ಅಂಶ ಬಹಳವಾಗಿದೆ.

ಇನ್ನು ಈ ಯಕ್ಷಗಾನ ಭಾಗವತರುಗಳು ಅವನ್ನು ಹಾಡುವಾಗಲೂ ಬರಿಯ ರಾಗ ತಾಲಗಳಿಂದ ಹಾಡುವವರಲ್ಲ. ಅಲ್ಲಿಯ ಭಾವವನ್ನು ತುಂಬಿಸಿಕೊಂಡು— ನಗು, ಕೋಪ, ದುಃಖಗಳಿಂದ ತಾವೂ ಆವಿಷ್ಟರಾಗಿ ಹಾಡುವವರು. ಅವರು ಸಿಟ್ಟು, ಕೋಪ ತೋರಿಸುವಾಗ— ಧ್ವನಿಯೇರಿಸಿ, ಮಾತಿನಿಂದ ಹೇಳುವ ಜೋರಿನಲ್ಲಿ— ಸ್ವರಭಾರದಿಂದ— ಇತರ ರೀತಿಯ ಗದ್ಯರೀತಿಯಿಂದ ಹಾಡುತ್ತಾರೆ. ಇಲ್ಲೊಂದು ಉದಾಹರಣೆಗಳನ್ನು ನಿಮ್ಮ ಮುಂದಿರಿಸುತ್ತೇನೆ. ... ರಾಮಚಂದ್ರ, ಶೂರ್ಪನಖಿಯ ಬೆನ್ನ ಮೇಲೆ 'ಅವಳ ... ಕೂಯ್ಯ' ಎಂದು ಬರೆದು ಕಳುಹಿದಾಗ, ಆ ಬರೆಹವನ್ನು ಓದಿ ಹಿಗ್ಗುವ ಹಾಡಿನ ರಚನೆ ಪರಿಶೀಲಿಸಿರಿ :

"ಅಣ್ಣನಾಜ್ಞೆಯ ನೋಡಿ ಲಕ್ಷ್ಮಣ। ತನ್ನ ಮನದಲಿ ತಾನೆ ನಗುತಲಿ ಕನ್ನೆ ಪತ್ರಿಯ ... ಬಾ— ಮೋಹನ್ನ ... ॥"

ಇಲ್ಲಿ ಪ್ರತಿ ಏಳು ಮಾತ್ರೆಗಳ ಗುಂಪಿನಲ್ಲೂ ಮೊದಲಿನ ...

ಮಾತ್ರೆಗಳು ಏರಿ, ಅನಂತರದ ನಾಲ್ಕು ಮೆಲುವಾಗಿ ಇಳಿದು-ಆರುಬಾರಿ ಬಂದ ಬಳಿಕ— 'ಮೋಹನ್ನ ಕಾರೀ....' ಎಂದು ತೀರಿ ನಿಡಿದಾಗಿ ಸರಿಯುತ್ತದೆ. ಈ ರಚನೆ ಲಕ್ಷ್ಮಣನ ಹಿಗ್ಗು-ನಗುಗಳನ್ನು ಎಷ್ಟು ಚೆನ್ನಾಗಿ ತೋರಿಸುತ್ತಲಿಲ್ಲ !

ಶೂರ್ಪನಖಿಯು ಮಾಯಾಸುಂದರಿಯಾಗಿ ರಾಮನನ್ನು ಮೋಹಿಸಲು ಬಂದ ಬೆಡಗನ್ನು, ಯಕ್ಷಗಾನ ಕವಿ ಚಿತ್ರಿಸುವ ಬಗೆ ನೋಡಿರಿ. ಈ ಎಲ್ಲ ಸಂದರ್ಭಗಳಲ್ಲಿ ನೀವು ಹಾಡಿನ ಅರ್ಥ ಮರೆತು ಬರಿಯ ತರನಾನ ಹಾಡಿದರೆ— ಅದರ ತರಂಗಿತತೆಯ ಪರಿಣಾಮ ತಿಳಿದೀತು. 'ಭರದಿಂದ ಬಂದಳಬ್ಜಲೋಚನೇ | ರಾಮಚಂದ್ರ ಹೇಳಿದಂಥ ಮಾತಿನಂದವನ್ನು ಬಣ್ಣಿಸುತ್ತ ಕನ್ನಡಿಯನ್ನು ತೆಗೆದು ನೋಡುತಾ | ಮೊಗವು ಚೆನ್ನಾಗಿಹುದೆಂದತಿ ನಗಾಡುತಾ"

ಈಗ ಶೂರ್ಪನಖಿಯು ನಾಸಿಕಚ್ಛೇದನಗೊಂಡವಳಾಗಿ ದುಃಖ-ಕೋಪಗಳಿಂದ ಕಿಡಿಕಾರುತ್ತ ಲಂಕೆಗೆ ಧಾವಿಸುತ್ತಿರುವ ಚಿತ್ರವನ್ನು ಪರಿಶೀಲಿಸಿ ಈ ಹಾಡು ತೀವ್ರಗತಿಯಿಂದ ಸರಿಯುತ್ತದೆ:

"ರಾಘವ ಮಾಡಿದ ಮಾಟಕೇ
ತಮ್ಮ | ಲಕ್ಷ್ಮಣ ನೋಡಿದ ನೋಟಕೆ |
ಮೂಗು ಮೊಲೆಯ ಕೊಯ್ದ ಕೋಪಕ್ಕೆ |
ತಾನು | ಸಾಗುವೆ ಲಂಕಾದ್ವೀಪಕ್ಕೆ !"

ಈ ಹಾಡಿನಲ್ಲಿ ಮಾತುಗಳು ದೊಡ್ಡ ಗರಗಸದ ಹಲ್ಲುಗಳ ಆಕಾರದಂತೆ ಹರಿತವಾಗಿ ಏರಿ ಇಳಿದು-ವಾಕ್ಯದ ಕೊನೆ ನಿಡಿದಾಗಿ ಮೇಲೆ ಚಾಚುತ್ತದೆ. ತಿರುಗಿ ಇನ್ನೊಂದು ಬಾರಿ ಅದೇ ಗತಿಯಿಂದ ಕತ್ತರಿಸುವಂತೆ ಮುಂದುವರಿದು ತಿರುಗಿ ನಿಲ್ಲುವುದು. ಚರಣದ ಕೊನೆಗೆ ತನ್ನ 'ವೀರ'ವನ್ನೆಲ್ಲ ಚಕ್ರನೆ ಚಿಮ್ಮುವುದು.

ಶೋಕ, ಕರುಣದಂಥ ಇತರ ರಸಗಳ ಪ್ರತಿಪಾದನೆಯಲ್ಲಿ ಹಾಡು ವಿಲಂಬಿತಗತಿಯಿಂದ, ನೋವನ್ನು ಎಳೆದೆಳೆದು ಚಿತ್ರಿಸುವ ತರಂಗಿತರೂಪದಿಂದ ಪ್ರಕಟಗೊಳ್ಳುವುದು.

ಸೀತೆ— ಮಾಯಾಮೃಗವು ರಾಕ್ಷಸನ ಬೊಬ್ಬೆಹೊಡೆದುದನ್ನು ಕೇಳಿ— ರಾಮನಿಗಿರುವ ಅಪಾಯ ನೆನೆದು— ಆತುರ, ದುಃಖ ಪ್ರಕಟಿಸುವ ಹಾಡನ್ನು ನೋಡಿ:

(ಆದಿತಾಳ)

ಮುಗುದ ಕೇಳಿದೆನಯ್ಯ | ಮೃಗವಲ್ಲ ರಾಕ್ಷಸರು ರಘುವೀರನನು ಹೋ ಹೋ ! ಕೊಲ್ಲುವರೇನೈ ಜಗದೇಕವೀರ ಕೂಗುವ ಧ್ವನಿಃ ಕೇಳಿತ ಮಿಗುವರಿಯಿತು ಕಾರ್ಯ | ನೋಡಿ ಬಾರಯ್ಯ....

ಕೊನೆಯ 'ನೋಡಿ ಬಾರಯ್ಯ !' ಎನ್ನುವ ಮಾತು ಬಿಕ್ಕಿ ಬಿಕ್ಕಿ ಅಳುವಂತಹ ಧ್ವನಿತರಂಗವೇ ಆಗಿಬಿಡುತ್ತದೆ.

ಕೋಪಕ್ಕೆ ಉದಾಹರಣವಾಗಿ— ಸೀತೆಯನ್ನು ಒಯ್ಯುವ ದಾರಿಗೆ ಅಡ್ಡವಾಗಿ ಬರುವ ಜಟಾಯುವಿನ ಒಂದು ಹಾಡನ್ನು ಉದಹರಿಸುತ್ತೇನೆ :

(ಆದಿತಾಳ)

ಎಲ್ಲಿಗೆ ವೈವೆಯೊ ಸೀತೆಯ ?
ಬಿಡು | ಕಳ್ಳರಕ್ಕಸ ಜಗನ್ಮಾತೆಯ ||
ಒಳ್ಳಿತೆ ನಿನಗೆ ಈ ರೀತಿಯ
ಕಂಡೆ-| ನಲ್ಲ ನಾ ನಿನ್ನ ವಿಘಾತಿಯ ||

ಯಕ್ಷಗಾನದ ಹಾಡುಗಳಿಗೆ ಹೆಚ್ಚಿನ ಜೆಂಬಲ ತಾಲ. ನೃತ್ಯ-ಕ್ಕಾಗಿ ಅವು ರೂಪಿಸಲ್ಪಟ್ಟವು. ಇವುಗಳ ಎಡೆ-ಎಡೆಯಲ್ಲಿ ಕಂದ ಷಟ್ಪದಿ, ವೃತ್ತಗಳನ್ನು ಹಾಡುವುದುಂಟು. ಅದು ಕಥೆಯ ಸಂದ ಸೆರಗು ಕೂಡಿಸಲು. ಭಾಗವತ ಆ ಹಾಡನ್ನು ಹಾಡಿ– ಮಾತಿನಿಂ ಮುಂದಿನ ಅಂಶ ತಿಳಿಸಲು ಸಹಾಯವಾಗುವಂತಹವು.

ಇಲ್ಲಿಯ ಕುಣಿತವು ತಾಲಪ್ರಧಾನವಾದದ್ದು — ಎಂದ ಅಲ್ಲಿಯೂ ತರಂಗಿತತೆಯೇ ಅದರ ಜೀವಾಳವಾಗಿದೆ. ಅಲ್ಲಿ ನಾಟ್ಯ ಇಲ್ಲವೆ ನಟನೆಯ ಅಂಶ ಕಡಿಮೆ. ಕಥಕ್ಕಳಿ, ಭರತನಾಟ್ಯಗಳ ಕಾಣುವ ಹಾವ, ಮುಖಭಂಗಿಗಳು ವಿಶೇಷವಾಗಿಲ್ಲ. ಇಲ್ಲವೆನ್ನುವ ದಕ್ಕೆ ಆಕ್ಷೇಪವಾಗಿ ಒಂದೆರಡು ಕಡೆ ತೋರಿಸುವುದುಂಟು ರಾವಣನು ಬೆಳಗ್ಗೆದ್ದು ಮುಖಮಜ್ಜನ ಮುಗಿಸಿ, ಶಿವಲಿಂಗದೆದು ಅರ್ಘ್ಯಪಾದ್ಯಗಳನ್ನು ನಡೆಸುವ ದೃಶ್ಯಗಳನ್ನು ಮಾತ್ರ ತೋರಿಸು ತ್ತಾರೆ. ಉಳಿದುದೆಲ್ಲ ತರಂಗಿತತೆಯಿಂದಲೇ ಪ್ರಕಟವಾಗುತ್ತ "ಎಲ್ಲ ಕುಣಿತಗಳು ತಾಲಗತಿಗೆ ತಕ್ಕಂತಿರುವುವೇ ? ಹಾಗಿದ್ದ ಇದೊಂದರಲ್ಲಿ ಹೆಚ್ಚೇನಿದೆ?" ಎನ್ನಬಹುದು ನೀವು. ಭಾವ-ರಸಗಳ ತಾಲ, ತರಂಗ ಹೊಂದಿಸುವುದಕ್ಕೂ ಆ ಹೊಂದಿಕೆಯಿಲ್ಲದೆ-ತಾಲಬದ್ಧವಾಗಿ ಕುಣಿಯುವುದಕ್ಕೂ— ವ್ಯತ್ಯಾಸವಿದೆ. ಯಕ್ಷಗಾ ನೃತ್ಯದಲ್ಲಿ ತರಂಗಿತತೆ ಮೂರು ಬಗೆಗಳಿಂದ ಪ್ರಕಟವಾಗುತ್ತದೆ.

(೧) ಪದಗತಿ. (Foot movements).

(೨) ರಂಗಸ್ಥಳದಲ್ಲಿ ನಲಿಯುವ ದಾರಿಯ ಚಿತ್ರ. (Choreography).

(೩) ಶರೀರದ ಬಾಗು, ಕೈಯ ಕುಲುಕು, ಕತ್ತಿನ ಗತ್ತು– ಇವೆಲ್ಲ ಕೂಡಿದ ಇನ್ನೊಂದು ಅಂಗ.

ಈ ಮೂರರ ಸೇರುವಿಕೆಯಿಂದ ಯಾವುದೇ ರಸವನ್ನಾಗ ಚಿತ್ರಿಸುವ ಕೆಲಸ ಮಾಡಬಹುದಾಗಿದೆ. ಉಳಿದ ನಾಟ್ಯಶಾಸ್ತ್ರ ಗಳಂತೆ ಒಂದೊಂದು ಮಾತಿಗೆ ಒಂದೊಂದು ಭಾವ, ಹಾ (Gesture), ಮುದ್ರೆ ತೋರಿಸುವುದಿಲ್ಲ; ಒಂದು ಹಾಡಿನ ಒಟ್ಟ ರಸಭಾವವನ್ನು ಕುಣಿತದಲ್ಲಿ ಸಾಧಿಸುವುದು ಸಂಪ್ರದಾಯವಾಗಿದೆ ಅದರಲ್ಲಿ— ಮುಖ್ಯವಾಗಿ ಯಕ್ಷಗಾನ ನರ್ತಕರು, ವಾದ್ಯಗಾರರು ಬೆಳಸಿಕೊಂಡು ಬಂದಿರುವ ರಸಭಾವಗಳು— 'ವೀರ ಮತ್ತು ಶೃಂಗಾರಗಳೆರಡೇ ಎಂದರೂ ತಪ್ಪಿಲ್ಲ. ಶೋಕ, ಕರುಣೆ, ಭಯಾನಕ, ಬೀಭತ್ಸಗಳನ್ನು ಅವರು ಸಾಧಿಸುತ್ತಲಿಲ್ಲ. ಆದರೆ ಅವೆಲ್ಲವನ್ನೂ ಹಾಡುವ ಹಾಡು ಸಾಧಿಸಿದೆ; ಅದಕ್ಕೆ ಹೊಂದಿ ಸಾಗುವ ನೃತ್ಯ ಖಂಡಿತಕ್ಕೂ ತೋರಿಸಬಹುದಾದುದೇ. ಇಂಥೆಲ್ಲ ಯಕ್ಷಗಾನ

ತ್ರಗಳು ಗದ್ಯವನ್ನೆ ಬಳಸಿ ಬಿಡುತ್ತಾರೆ. ಸನ್ನಿವೇಶಕಲೆ ಯಕ್ಷ- ನ; ಎಂದರೆ ಗೀತ, ನೃತ್ಯ, ಗದ್ಯ ಎಲ್ಲ ಬೇರೆ ತರಹದ ಕಲೆ. ದರಿಂದ— ಒಂದರ ಬೆಳವಣಿಗೆ ಇನ್ನೊಂದರ ಮೃತ್ಯುವಾಗಿ ದೀತು.

ಇನ್ನೂ ಒಂದು ಸಂಗತಿಯಿದೆ : ನಮ್ಮ ಯಕ್ಷಗಾನ ಪ್ರಸಂಗ- ನ್ನು ಪರಿಶೀಲಿಸಿದಲ್ಲಿ, ಅವುಗಳ ಕಥಾವಿಷಯಗಳಲ್ಲಿ ಪ್ರಧಾನ -ಕಾಳಗ, ಮತ್ತು ಪರಿಣಯ. ಮಾನವನ ಮೂಲಸ್ವಭಾವಕ್ಕೆ , ಶೃಂಗಾರರಸಗಳು ಒಗ್ಗಿದಷ್ಟು ಉಳಿದ ರಸಗಳು ಒಗ್ಗಲ್ಲ. ದರಿಂದ 'ವೀರ' ರಸಕ್ಕೆ ಬೇಕಾದ ನೃತ್ಯ ಯಕ್ಷಗಾನದಲ್ಲಿ ಚೆನ್ನಾಗಿ ವಿಕಾಸಹೊಂದಿದೆ.

ತ್ರವನ್ನು ರಂಗಸ್ಥಳಕ್ಕೆ ತರುವಾಗಲೇ ಪಾತ್ರಪರಿಚಯ ನಿಂದಾಗುವಂತೆ ಕುಣಿತದಿಂದಾಗುತ್ತದೆ. ಭಾಗವತನು ಬರುವ ಯ— ಶೌರ್ಯ-ಪೌರುಷಗಳನ್ನೇ ಕುಣಿತದಲ್ಲಿ ತೋರಿಬರುವಂತೆ ಡುತ್ತಾನೆ. ಹಾಗೆಯೇ ಕಾಳಗ ಸಮ್ಮುಖವಾದಾಗ ಅದರ ಗೇ ಬೆಡಗು. ಇಬ್ಬಿಬ್ಬರು ನಿಂತು, ಒಬ್ಬನಾದ ಬಳಿಕ ಒಬ್ಬ ತನ್ನ ಷವನ್ನು ಕುಣಿದು ತೋರಿಸುವ ಬಗೆ ಬಹು ಚೆನ್ನಾದದ್ದು. ನ್ನೊಬ್ಬರು ಅಟ್ಟುವ ಬಗೆಯೂ ಸುಂದರವಾದುದು. ತೀರ ವಾಗಿ ಕಾಣುವಾಗ— ಕುಣಿತದ ಹೆಜ್ಜೆ 'ಮಿದುವೆ' ಎನಿಸಿದರೂ—ಮೃದಂಗ-ಚಂಡೆಗಳ ಧ್ವನಿಗೆ ಕಿವಿಗೊಟ್ಟಾಗ, ನಡೆಗಿಂತ ಹೆಚ್ಚಿನ ವೇಗ ಮನೋಭಾವದಲ್ಲಿ ಪ್ರೇರಿತವಾಗು- ಇದು ಏರಿ ಏರಿ ಹೋಗುವಾಗಲೇ ಅತ ಜಿಗಿದು ಮೊಣ- ಅಗಲಕ್ಕೆ ಬಗ್ಗಿಸಿ ಕುಳಿತಿರುವುದುಂಟು; ಭಗೀರಥನಂತೆ ಲಮೇಲೆ ಗಂಭೀರವಾಗಿ ನಿಲ್ಲುವುದುಂಟು. ಕುಳಿತಲ್ಲಿಂದ ನಿಂತು ನಲಿವುದುಂಟು. ಆಗ ಅವರ ಕೈಯ ಸಮತೋಲ- ಬೀಸುವಿಕೆ, ಹಸ್ತಚಲನೆ, ಕತ್ತಿನ ಕುಲುಕು— ವೀರರಸಕ್ಕೆ ಕೊಡುತ್ತದೆ. ಕದನದ ಭರವೇರಿದಾಗ— ಥಟ್ಟನೆ ಮುಂದ- ರಿ, ಗಿರಗಿರನೆ ಬುಗರಿಯಂತೆ ರಂಗಸ್ಥಳವನ್ನೆ ತುಂಬಿಸುತ್ತ ುವ ಒಂದು ನೃತ್ಯದ ವೈಖರಿ ತುಂಬ ಚೆಲುವಿನದು. ಅಂಥೆಲ್ಲ ನಗಳಲ್ಲಿ ಉಟ್ಟ ಉಡುಗೆ ತೊಡುಗೆಯ ಬೆಡಗಂತು ಅತ್ಯಧಿಕ. ಗಾನ ಹುಟ್ಟಿದುದೇ ಕಾಳಗಕ್ಕಾಗಿ ! ಕರ್ಣಾರ್ಜುನರ ಕಾಳಗ, ನಾತನ ಕಾಳಗ, ವಾಲಿಸುಗ್ರೀವರ ಕಾಳಗ, ಕೃಷ್ಣಾರ್ಜುನರ , ಹಂಸಧ್ವಜನ ಕಾಳಗ— ಎಲ್ಲವೂ ಕಾಳಗಗಳೇ. ಕಥೆ— ಯವಾದರೂ— ಕಾಳಗವಿಲ್ಲದೆ ಪರಿಣಯ ಆಗದೇ ಆಗದು.

ಕ್ಷಗಾನ ಕುಣಿತದಲ್ಲಿ ಶೃಂಗಾರರಸವೂ ಪ್ರತಿಪಾದನೆಗೊಳ್ಳು ತ್ತದೆ— ಎಂದೆ. ಆದರೆ ಶೃಂಗಾರದ ಕುಣಿತವೆಲ್ಲ ಸ್ತ್ರೀಪಾತ್ರದ ಸೊತ್ತು, ವೀರರಸಕ್ಕೆ ಗಂಡುಸು ಅಧಿಕಾರಿಯಾದಂತೆ. ಈ ಸ್ತ್ರೀ ಪಾತ್ರಧಾರಿಗಳು ಗಂಡುಸರೇ ಎಂದು ಹೇಳಬೇಕಾಗಿಲ್ಲ. ಅವರ ಕುಣಿತದಲ್ಲಿ ಶರೀರವಿನ್ಯಾಸ ಹೆಚ್ಚಿದೆ. ಮೈಯ, ಕೈಯ, ಕತ್ತಿನ ಬಳುಕಾಟ, ಲಾವಣ್ಯ, ಲಾಸ್ಯಗಳ ಚಿತ್ರಣಕ್ಕೆ ಅನುಕೂಲವಾಗಿ ಬಂದಿವೆ. ಇನ್ನೂ ಪ್ರಸಂಗದಲ್ಲಿ ಭೀಷ್ಮವಿಜಯದ "ಅಂಬೆ" ಯಂಥ ಪಾತ್ರವಿದ್ದರೆ ಒಲಿಯಲು ಹೋಗಿ, ತಿರಸ್ಕೃತಳಾಗಿ, "ಒಲಿದರೆ ನಾರಿ, ಮುನಿದರೆ ಮಾರಿ" ಯಾಗುವ ಸಂದರ್ಭವಿದೆ. ಆಗ ಇದೇ ಕುಣಿತವನ್ನು ಹಾವಿನ ಗಮನದಂತೆ ಬೆಳಸಿ, ತೀವ್ರತೆ ಹೆಚ್ಚಿಸಿ, ಕೋಪದ ಭ್ರಮೆ ಕಲ್ಪಿಸುವುದುಂಟು. ಇದೂ ಚೆನ್ನಾಗಿ ಕಾಣುವ ಭಾಗವೇ.

ಹಾಸ್ಯರಸಕ್ಕೆ ಕುಣಿತವಿಲ್ಲವೆ ?— ಎಂದು ಕೇಳಿದರೆ, ಅದಕ್ಕೂ ಇದೆ. ಆದರೆ ಅದೂ ಬಾಯಿಮಾತುಗಾರಿಕೆಯಿಂದ ಕುಂಠಿತವಾಗಿ ಬಂದ ಅಂಶ, ಬಯಲಾಟದ ಹನುಮನಾಯಕ— ರಂಗಸ್ಥಳದಲ್ಲಿ ನಡೆಯುವಾಗ, ತೇಲಿ ಹೋಗುವಾಗ, ಲಘುಚಿತ್ತವೃತ್ತಿಯ ನೃತ್ಯಗತಿ ತೋರಿಸುತ್ತಾರೆ. ಅದರಂತೆ ವೀರರಸದ ಅಣಕವಾಡುವವರೂ ಉಂಟು.

ಯಕ್ಷಗಾನದ ಪಕ್ಕವಾದ್ಯಗಳಾದ ಚಂಡೆ, ಮದ್ದಲೆಗಳು ವೀರ- ರಸಕ್ಕೆ ತುಂಬ ಪಳಗಿ ಬಂದಿವೆ. ಆದರೆ ನುರಿತವರು ಅದನ್ನು— ಚಂಡೆಯನ್ನು ಸಹ— ಶೃಂಗಾರ, ದುಃಖ, ಮೊದಲಾದ ಭಾವಗಳಿಗೆ ಮೇಳವಾಗಿಸಬಲ್ಲರು. ಆದರೆ ಸಾಮಾನ್ಯರು, ಕಸಬುದಾರರು; ತಾಲಜ್ಞಾನವುಳ್ಳವರಾದರೂ ರಸಜ್ಞಾನವುಳ್ಳವರಲ್ಲ. ಈ ಕೊರತೆ ಮಾರ್ಗಪದ್ಧತಿಯ ಹಿಮ್ಮೇಳದವರಲ್ಲಿ ಅತಿಶಯವಾಗಿದೆ.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಮದುವೆಗಾಗಿ ಪರೀಕ್ಷೆ

(ಸಣ್ಣ ಕತೆ)*

ಅನುವಾದಕ : ‘ ಸಂಗೀತ್ ’

ಆನಂದರಾಯರ ವರಪರೀಕ್ಷಣದ ರೀತಿ ವಿಲಕ್ಷಣವಾದುದು. ಕೊನೆಗೂ ಶೇಖರ ಅವರ ಪರೀಕ್ಷೆಯಲ್ಲಿ ಉತ್ತೀರ್ಣನಾದ.

★

“ ತಮ್ಮನ್ನ ಅಯ್ಯಾ ಅವರು ಬರಬೇಕೆನ್ನುತ್ತಿದ್ದಾರ್ರಿ ”

ಶೇಖರ ಬರೆಯುತ್ತಿದ್ದ ಕಾಗದವನ್ನು ಮುಗಿಸಿ, ಅದನ್ನು ಸರಿಯಾದ ಸ್ಥಳದಲ್ಲಿಟ್ಟು ತಲೆ ಎತ್ತಿದ. ತನ್ನ ಕೆಲಸ ನಿರ್ವಹಿಸಿ ಕೊಂಡು ಹೋಗಿದ್ದ ಅಪ್ಪಣ್ಣ.

“ ಈ ‘ ಬಾ ’ ಎಂಬೋದು ಗಂಟೆಗೆ ಹತ್ತು ಸಲ ಆಗೋ-ಹಾಗಿದೆಯೇ ಈ ದಿನ ! ” ಎಂದುಕೊಂಡ ಗುಮಾಸ್ತಾ-(ಕಾರಕೂನ) ಶೇಖರ. ಟಿ. ಎಸ್. ಓ. ಆನಂದರಾಯರು ಬಹಳ ಒಳ್ಳೆಯವರೆಂದು ಪ್ರತೀತಿ. ಆತನ ಒಳ್ಳೆಯತನ ಶೇಖರನಿಗೆ ಗೊತ್ತು ಇದೆ— ಚೆನ್ನಾಗಿ. ಸಾಮಾನ್ಯ ಪರಿಸ್ಥಿತಿಗಳಲ್ಲಿ ಗುಮಾಸ್ತರನ್ನು ಗಡಿಬಿಡಿಮಾಡುವ ರೀತಿ ಅಲ್ಲ. ಅಂತಹ ಅವಸರದ ಕೆಲಸ-ವಿದ್ದರೇ ವಿನಾ ಗುಮಾಸ್ತನನ್ನು ಕೋಣೆಯೊಳಕ್ಕೆ ಕರಿಯಿಸಿ ಕೊಳ್ಳುವುದಿಲ್ಲ. ಇಷ್ಟು ದಿನಗಳವರೆಗೂ ಶೇಖರನಿಗೆ ಈ ಕರೆಗಳ ಅಭ್ಯಾಸ ಹೆಚ್ಚಾಗಿ ಇರಲಿಲ್ಲ. ಆದರೆ ನಿನ್ನೆಯಿಂದ ಮಾತ್ರ ಆಫೀಸರು ಆತನನ್ನು ಪದೇ ಪದೇ ಕೋಣೆಗೆ ಕರೆಯಿಸುತ್ತಿದ್ದಾನೆ.

ಬೆಳಗ್ಗೆ ಎರಡು ಸಲ ಕರೆಯು ಕಳಿಸಿದ್ದು ಅವಸರದ ಕಾರ್ಯ-ಕ್ಕೇನೂ ಅಲ್ಲ. ಮೊದಲನೆಯ ಸಲ ಏನೋ ಡ್ರಾಫ್ಟಿಂಗ್ ದೋಷ ವನ್ನು ತೋರಿಸಲಿಕ್ಕೆ; ಸರಿಪಡಿಸೆಂದು ಹೇಳಲಿಕ್ಕೆ. ಆ ವಿಷಯ-ಗಳನ್ನು ಮಾರ್ಜಿನ್‌ನಲ್ಲಿ ನೋಟ್ ಮಾಡಿದರೆ ಸಾಲದೇ? ಆದರೆ ತನ್ನನ್ನು ಪ್ರತ್ಯೇಕವಾಗಿ ಕರೆಯಿಸಿ ಹೇಳಿದ್ದಾನೆ......

“ ಈ ಡ್ರಾಫ್ಟ್ ಹೀಗೇನೇ ಬರೀಬೇಕಾದ್ದು ? ಕೆಲಸ ಸ್ವಲ್ಪ ಆಲೋಚಿಸಿ ಮಾಡಬಾರದೇ ?....”

ಎರಡನೆಯ ಸಲ ಮತ್ತಿಷ್ಟು Silly ಆಗಿತ್ತು.

“ Current returns ಎಲ್ಲಾ ಬಂದಿವೆಯೇ ? ”

“ ಬಂದಿವೆ ಸರ್ ”

“ Consolidate ಮಾಡೀಯಾ ? ”

“ ಮಾಡೀನಿ ಸರ್ ! ”

“ ಫಾರಮ್ಸು ಸಿದ್ಧವಾಗಿವೆಯೇ ರಿಟರ್ನ್ ಹಾಕಲಿಕ್ಕೆ ? ”

“ ಆಗಿವೆ ಸರ್ ! ”

“ ಆದರೆ, ಇನ್ನೂ ರಿಟರ್ನ್ ಏಕೆ ತಯಾರಾಗಲಿಲ್ಲ ? ”

“ ಆಗಿಹೋಗಿದೆ....ನಿಮ್ಮ ದಸ್ಕತ್ತಿಗೆ ಕಳಿಸುತ್ತೇನೆ. ”

“ ಸ್ವಲ್ಪ ತ್ವರೆ ಪಡುತ್ತಿರಬೇಕು ಶೇಖರ್, ಕೆಲಸಗಳಲ್ಲಿ ರಿಟರ್ನ್ಸ್ ಹೋಗದಿದ್ದರೆ, ನೋಡಿದೆಯಾ, ಹೆಡ್ ಆಫೀಸಿನಿಂ ಟೆಲಿಗ್ರಾಮ್ ರಿಮೈಂಡರ್ಸ್—ಅದರೂ, ಆಲಸ್ಯವೇತಕ್ಕೆ ಆಗ ಬೇಕು ? ”

“ ರಿಟರ್ನ್ಸ್ ಸೆಂಟರ್ಸ್‌ಗಳಿಂದ ನಿನ್ನೆಯೇ ಬಂದಿವೆ....”

“ ಆ ವಿಷಯ ನನಗೆ ತಿಳಿಯದೆ ?... ಸರಿಯೆ, ಆದರ ನಿನ್ನ ನಾನು ಕೇಳಬೇಕಾದ ಸಂದರ್ಭ ಬರಬಾರದು........ಹೋ ವೇಗವಾಗಿ ಪೂರ್ತಿಮಾಡು. ಅವಸರವೇನೂ ಇಲ್ಲ—ಳು-ಶಾಂತ ವಾಗಿ ಮಾಡು....ಆದರೂ........”

ಶೇಖರ ತನ್ನೊಳಗೆ ತಾನೇ ನಕ್ಕುಬಿಟ್ಟ....ಆತನ ಛಾಂದಸ ತನಕ್ಕೆ.

ಈಗ ಮೂರನೆಯ ಕರೆ....ಶೇಖರ ಎದ್ದು ಹೊರಟ.

ಆನಂದರಾಯರು ತಲೆ ತಗ್ಗಿಸಿಕೊಂಡು ಏನೋ ತೀವ್ರಗತಿ ಯಲ್ಲಿ ಬರೆಯುತ್ತಲಿದ್ದಾರೆ. ಶೇಖರ ಬಂದದ್ದನ್ನು ಅವರ ಗಮನಿಸಲೇ ಇಲ್ಲ. ನಾಲ್ಕೈದು ನಿಮಿಷ ಶೇಖರ ಹಾಗೆಯೆ ನಿಂತಿದ್ದ,

ಇಷ್ಟರಲ್ಲಿ ಅವರು ತಲೆಯೆತ್ತಿ “ಎಷ್ಟು ಹೊತ್ತಾಯ್ತು ಬಂದು?” ಅಂದರು.

“ ಈಗಲೇನರೀ .... ”

“ ಏನು ಬಂದದ್ದು ? !!

“ ಕರೆದಿರಂತೆ ? ”

“ ಓಹೋ !.... ಅದೋ ? ನಿನ್ನೇನೋ ಕೇಳೋಣಾ ಅಂದು ಕೊಳ್ಳುತಿದ್ದೇನೆ. ಅದೇನಂದ್ರೆ— ನಿನಗೆ ಷಾರ್ಟ್‌ಹ್ಯಾಂಡ್ ಬರುತ್ತದೋ ? ”

“ ಬರೋದಿಲ್ಲ, ಟೈಪೇ ಆಗಲಿ, ಷಾರ್ಟ್‌ಹ್ಯಾಂಡ್ ಕಲಿಯ ಲಿಲ್ಲ.”

“ ಅರೆ.... ಹೆಂಗಸರು ಸಹ ಕಲಿತುಕೊಳ್ಳುತ್ತಿರುವ ಕಾಲದಲ್ಲಿ ನೀನು....ಸರಿ ! ಏನ್ಮಾಡೋದು ? ನಮ್ಮ ಕರೆಸ್ಪಾಂಡೆನ್ಸಿಗೆ ನೆಟ್ಟಗಿರುತ್ತದೆ ಎಂದುಕೊಂಡೆ. ಸರಿ ! ನೀನು ಹೋಗು....”

ಶೇಖರನಿಗೆ ಸ್ವಲ್ಪ ಬೇಸರವಾಯಿತು. ಇಷ್ಟರ ‘ಮಟ್ಟಿನ ಪ್ರಶ್ನೆಗಾಗಿ ಇಷ್ಟು ಉಪೋದ್ಘಾತವೂ ಇಷ್ಟು ಉಪಸಂಹಾರವೂ ಏನೆಂದು ? ‘ ಮುದಿತನ ಬರುತ್ತಿದೆಯಲ್ಲವೆ... ಛಾಂದಸತನ ಬೆಳೀತಾ ಇದೆ ’ ಎಂದುಕೊಂಡ ಸ್ವಲ್ಪ ಹೊತ್ತಿಗೆ.

---

* ‘ ಮೂಲ ತೆಲುಗು ಕಥೆ ’ ಶ್ರೀ. ಇಚ್ಛಾಪುರದ ಜಗನ್ನಾಥ-ರಾಯರು ಬರೆದುದು. — ಲೇ.

ಆನಂದರಾಯರಿಗೆ ನಲವತ್ತೈದು ವರುಷಗಳಿಗೆ ಕಡಿಮೆ ಇರಲಿಲ್ಲ. ಆದಕಾರಣ ಶೇಖರನ ಉತ್ಸಾಹಕ್ಕೆ ಸ್ವಲ್ಪ ಬಲ ಬಂದಿತು. ಸ್ವಲ್ಪ ನೆರೆತ ಕೂದಲು, ಆಳತೆಗೆ ಸ್ಥೂಲಕಾಯ, ಚೆನ್ನಾಗಿ ಬೆಳೆದ ಮೀಸೆಗಳು, ಗೋಲ್ಡುರಿಮ್ಸ್ ಸುಲೋಚನಗಳು, ಬಿಳಿಯ ಧೋತರದ ಮೇಲೆ ಬಿಳಿಯ ಷರ್ಟ್— ಇವೆಲ್ಲ ಆತನ ಆಕೃತಿಯನ್ನು ಬಹಳ ಅಭಿಮಾನಯುತವಾಗಿ ಮಾಡುತ್ತಿದ್ದುವು. ಪ್ರಕಾಶಮಯವಾದ ಕಣ್ಣುಗಳು, ಸಾಧಾರಣವಾಗಿ ಸದಾ ಇರುವ— ಮುಖದಲ್ಲಿ ಕಾಣುವ ನಗು, ಆತನನ್ನು ಒರ್ವ ದಯಾಮಯನನ್ನಾಗಿ ತೋರ್ಪಡಿಸುತ್ತವೆ.

ಶೇಖರ ತನ್ನ ಸೀಟಿನಲ್ಲಿ ಕುಳಿತು, ಆತನ ಆಕೃತಿಗೂ ತನ್ನ ವಿಷಯವಾಗಿರುವ ಪ್ರವರ್ತನೆಗೂ ಇರುವ ವೈರುಧ್ಯವನ್ನು ಕುರಿತು ಆಲೋಚಿಸುತ್ತಿದ್ದನು. ಏನಾದರೂ ಆಗಲಿ, ಯಾವುದೋ ಅಸಾಧ್ಯವಾದ ಕಾರಣವು ಆತನ ಪ್ರವರ್ತನೆಗೆ ಹಿನ್ನೆಲೆಯಾಗಿದೆಯೋ? ಅಥವಾ, ಇದು ಬರಲಿರುವ ವೃದ್ಧಾಪ್ಯಕ್ಕೆ, ಛಾಂದಸತ್ವಕ್ಕೆ—ನಾಂದೀಮಾತ್ರವೋ? ಬಹುಶಃ ಈ ದಿನದಿಂದ ಆತನು ತನಗೆ ತಿಳಿಯದಂತೆ ಮುದಿತನದ ಸರಹದ್ದಿನಲ್ಲಿ ಕಾಲಿಡುತ್ತಿರುವನು. ಅದರ ಫಲಿತಾಂಶವು ಮೊದಲ ಸಲ ತನ್ನ ಮೇಲೆ ಬಿದ್ದಿರುತ್ತದೆ!

ಒಮ್ಮೆ ತನ್ನ ಆಲೋಚನೆಗಳಿಗೆ ತಾನೇ ನಕ್ಕು ಗುಮಾಸ್ತೆ ಶೇಖರನು ಲೇಖಿನಿ ತೆಗೆದುಕೊಂಡು, ಕಾಲಮುಗಳನ್ನು ತುಂಬಲು ಮೊದಲುಮಾಡಿದ. ಗಡಿಯಾರವು ಮೂರು ಹೊಡೆಯಿತು.

ಅಪ್ಪಣ್ಣನನ್ನು ಕರೆದು, ಟೀ ತರಿಸಿಕೊಂಡು ಕುಡಿದು, ಮತ್ತೂ ಕೆಲಸದಲ್ಲಿ ಹೊಕ್ಕ. ಆಯಿದಾದ ಮೇಲೆ, ಹೋಗೋಣವೆಂದು ಎದ್ದು, ಕಾಗದಗಳನ್ನೆಲ್ಲ ತಿದ್ದಿಟ್ಟುಕೊಳ್ಳುತ್ತಿದ್ದರೆ, ಆನಂದರಾಯರು ಮತ್ತೂ ಕರೆದರು....

ಸುತ್ತಲೂ ಇದ್ದ ಗುಮಾಸ್ತರೆಲ್ಲ ಹೋಗಿಬಿಡುತ್ತಿದ್ದಾರೆ. ಆನಂದರಾಯರ ಹಯಾಮಿನಲ್ಲಿ, ಗುಮಾಸ್ತರು ಆಯಿದಾದ ನಂತರ ಆಫೀಸಿನಲ್ಲಿ ಇರಬೇಕಾಗಿದ್ದಿಲ್ಲ.

"ರಿಟರ್ನುಗಳೆಲ್ಲ ಹಾಕಿದೆಯಾ ಶೇಖರ?"

"E ಫಾರಮ್ ಅರವತ್ತಾಲ್ಕುಬಿಟ್ಟು ಉಳಿದುವು ಹಾಕೀನರಿ."

"ಮನೆಗೆ ಹೋಗಿಬಿಡ್ತಿದ್ದೀಯಾ?"

"ನೀವು ಇರೂ ಅಂದ್ರೆ........"

ಆ ಮಾತು ಅನ್ನಬೇಕೆಂದು ಶೇಖರನು ಅಂದುಕೊಳ್ಳಲಿಲ್ಲ; ಆದರೆ, ಗುಮಾಸ್ತನಲ್ಲಿ ಮೂರ್ತೀಭವಿಸಿದ ದಾಸ್ಯವೃತ್ತಿಯು ಅವನಿಂದ ಆ ಮಾತನ್ನು ಆಡಿಸಿತು.

ಆನಂದರಾಯರು ಕುರ್ಚಿಯಿಂದ ಎದ್ದು, "ಸರಿ!....ಹೊರಡು" ಎಂದರು. ಬದುಕಿದೆನಲೆ ಎಂದು ಶೇಖರ ಮನೆಗೆ ದಾರಿ ತೆಗೆದ.

*   *   *

ಶೇಖರನು ಸಾಮಾನ್ಯಕುಟುಂಬಕ್ಕೆ ಸೇರಿದವನು. ಅಣ್ಣ ವೆಂಕಟರಾಯ, ಉಪಾಧ್ಯಾಯನಾಗಿ ಕೆಲಸ ಮಾಡುತ್ತಿದ್ದಾನೆ ಎಲಿಮೆಂಟರೀ ಸ್ಕೂಲಿನಲ್ಲಿ. ಕೊಡೋ ಅರುವತ್ತೈದು ರೂಪಾಯಿಗಳಲ್ಲಿ—ಮಕ್ಕಳಿಲ್ಲವಾದ್ದರಿಂದ—ನಾಲ್ಕುಮಂದಿ ಬದುಕೇವಿ ಎನಿಸಿಕೊಳ್ಳುತ್ತಿದ್ದರು. ಶೇಖರನನ್ನು ದೊಡ್ಡಪ್ಪ, ಮಕ್ಕಳಿಲ್ಲದೆ, ಅಭಿಮಾನದಿಂದ ಇಂಟರ್ ವರೆಗೂ ಓದಿಸಿದ. ಅಲ್ಲಿಗೆ ಆತನಿಗೇ ಶಕ್ತಿಸಾಲದೆ, ಬಿಟ್ಟುಬಿಟ್ಟ ಓದು.

ಅಣ್ಣನಿಗೆ ಜೋಡಾಗಿದ್ದರೆ ಸ್ವಲ್ಪ ಸಂಸಾರವನ್ನು ಸರಿಯಾಗಿ ತಿದ್ದಿಟ್ಟುಕೊಳ್ಳಬಹುದೆಂದು, ಶೇಖರನು ಗುಮಾಸ್ತನಾಗಿ ಸೇರಿದನು. ಸರ್ವಿಸ್ ಕಮೀಷನ್ ಪ್ಯಾಸಾಗಿ, ನಾನಾ ಶ್ರಮಗಳನ್ನು ಪಟ್ಟು ತನ್ನ ಡಿವಿಜನ್‌ನೊಳಗೆ ಹಾಕಿಸಿಕೊಂಡು, ಅಣ್ಣನಿಗೆ ಸಹಾಯ ಮಾಡುತ್ತಿದ್ದಾನೆ. ಇಪ್ಪತ್ತೆರಡು ವರುಷಗಳ ವಿಯಸ್ಸಾಗಿ, ದ್ದರೂ ಜೀವನವೆಂದರೆ ಚೆನ್ನಾಗಿ ಅರ್ಥವಾಗದ ಅಮಾಯಕನಾತ.

ಆಫೀಸರರನ್ನು ಕುರಿತು ಆಲೋಚಿಸಿಕೊಳ್ಳುತ್ತ ಅಮನಸ್ಕನಾಗಿ ಮನೆಗೆ ಬಂದು ಕುರ್ಚಿಯಲ್ಲಿ ಕುಸಿದುಬಿದ್ದ. ಬೆಳಗಿನಲ್ಲೇ ಹೊರಡುವುದು, ಈಗ ಬರುವುದು. ಇನ್ನೂ, ದುರದೃಷ್ಟಕ್ಕೆ ತಕ್ಕಂತೆ, ಶೇಖರನ ಮಿದುಳು ಯಂತ್ರವಾಗಿದ್ದಿಲ್ಲ.

ಅತ್ತಿಗೆ ಕಾಫೀ ತಂದುಕೊಡುತ್ತ........"ಹಾಗಿದ್ದೀ....ಏನು?" ಅಂದಳು.

"ಕೆಲಸ ಹೆಚ್ಚುಮಾಡಿ...." ಎಂದು, ಕಾಫೀ ತೆಗೆದುಕೊಂಡು, "ಅಣ್ಣ ಬರಲಿಲ್ಲ?" ಅಂದ.

"ಬರೋದಿಲ್ಲೇಳು....ಇನ್ಸ್‌ಪೆಕ್ಟರವರ ಮಗಳಿಗೆ ಪ್ರೈವೇಟ್ ಹೇಳು ಅಂದಾರಂತೆ. ಇವತ್ತಿನಿಂದ ಸಾಯಂಕಾಲ ಅಲ್ಲಿ ಒಂದು ಗಂಟೆಯ ಕೆಲಸ!"

ಗ್ಲಾಸು ತೆಗೆದುಕೊಂಡು ಅತ್ತಿಗೆ ಒಳಕ್ಕೆ ಹೋಗಿಬಿಟ್ಟಳು. ಶರ್ಟು ಹಿಕ್ಕಿಕೊಂಡು, ವಿಶ್ರಾಂತಿಗಾಗಿ ಊರೊಳಗೆ ಹೋದ ಶೇಖರ.

ಆ ಹೊತ್ತು ಅವನು ಬಹಳ ಸೋತುಹೋಗಿದ್ದ. ನಿಧಾನವಾಗಿ ಊರ ಹೊರಗೆ ಹೋಗಿ, ಒಣಗಿ ಹೋಗಿದ್ದ ನದಿಯ ಉಸುಕಿನ ದಿಬ್ಬಗಳಲ್ಲಿ ನಡೆದು ನಡೆದು ಸಾಕಾಗಿ, ಜನರ ಕಣ್ಣಿಗೆ ಬೀಳದಂತೆ ಒಂದು ಕಡೆ ಏಕಾಂತವಾಗಿ ನಿರ್ಮಲ ವಾತಾವರಣದಲ್ಲಿ ಕುಳಿತುಕೊಂಡ.

ಆ ಅಪೂರ್ವ ಏಕಾಂತವು ಅವನಲ್ಲಿಯ ವ್ಯಕ್ತಿತ್ವವನ್ನು ಬಯಲಿಗೆ ತಂದಿತು. ಇಲ್ಲಿಯ ವರೆಗೂ ಯಾವುದೋ ತಿಳಿಯದ ಲಘುತ್ವವನ್ನು ಅವನು ಹೊಂದುತ್ತಿದ್ದನು. ದೂರದಲ್ಲಿ ಕಾಣುತ್ತಿದ್ದ ಪರ್ವತಗಳೂ, ಹಸುರಾದ ಗಿಡಗಳೂ, ಒಣಗಿದ ನದಿಯೂ, ಕಣ್ಣಿಗೆ ಕಾಣಿಸುವ ವರೆಗೂ ಇದ್ದ ನಿರ್ಮಾನುಷತ್ವವೂ ಶೇಖರನನ್ನು ಮೈಮರೆಯಿಸುತಿದ್ದುವು.

ಆಫೀಸೂ, ಆಫೀಸರೂ, ಇತರ ಪ್ರಪಂಚವೂ, ತಿಂಗಳಿಗೆ ಎಪ್ಪತ್ತು ರೂಪಾಯಿಗಳೂ, ವಾರ್ತಾಪತ್ರಿಕೆಗಳೂ, ಎಲ್ಲವೂ ಏನೋ ಮೂರ್ಖತನದುದಾಗಿ ಅವನಿಗೆ ಕಾಣಿಸುತ್ತಿದ್ದುವು. ಒಂದುಸಾರಿ

ಅವನಿಗೆ ಹೃದಯವೆಲ್ಲಾ ಹಗುರಾಯಿತು. ಬಹಳ ಹೊತ್ತು ಅಲ್ಲಿ ಕುಳಿತು, ತನ್ನ ಆಲೋಚನಾಪ್ರವಾಹವನ್ನು ಅಡ್ಡಿಯಿಲ್ಲದೆ ಹೋಗಬಿಟ್ಟನು..... ...

ಹಠಾತ್ತಾಗಿ ಅವನಿಗೆ ಒಂದು ಸಂದೇಹವು ಮೂಡಿತು.........

"ಜೀವನದಲ್ಲಿ ನಾನು ಸಾಧಿಸಿದ್ದೇನು? ಸಾಧಿಸಲು ಹೋಗುವು-ದಾದರೂ ಏನು?" ಅಂತ.

ಉತ್ತರಕ್ಕಾಗಿ ತಡಕಾಡಿದ. ಏನೂ ದೊರೆಯಲಿಲ್ಲ. ತಿನ್ನು-ವುದು, ತಿರುಗುವುದರಿಂದ ಪೂರ್ವಾರ್ಬ್ದಗಳು ಕಳೆದುವು. ಈಗ ಆಫೀಸರ್ ಹೇಳಿದ ಕೆಲಸ ಮಾಡುವುದೂ, ಆ ದಾಸ್ಯದ ಫಲವಾಗಿ ಪ್ರಭುತ್ವವು ಕೊಡುವ ನಾಣ್ಯಗಳನ್ನು ತಿನ್ನುವುದೂ–ಅವನ ದೈನಂದಿನ ಜೀವಿತದ ಭಾಗಗಳು. ಅವೇ ಜೀವನ ಪರಮಾರ್ಥಗಳು.

" ಈ ಅಂಕಿ ಹೇಗೆ ಬಂದಿತು ?"

" ಈ ರಿಟರ್ನ್ ಇಷ್ಟು ಅಲಕ್ಷ್ಯವೇಕಾಯಿತು ? "

" ಆ ಡ್ರಾಫ್ಟ್ ಬರೆದೀಯಾ ? "

" ಆ ಕಾಗದಗಳನ್ನ ಇನ್ನೂ ದಸ್ಕತ್ತಿಗೆ ಕೊಟ್ಟಿಲ್ಲೇಕೆ ? "

ಇಂತಹವೇ ಆದ ಇನ್ನೂ ಕೆಲವು ಪ್ರಶ್ನೆಗಳಿಗೆ ತಲೆಬಾಗಿ ಸಮಾ ಧಾನ ಹೇಳೋದು ತನ್ನ ವಿಧಿ. ಬಜಾರಿನಲ್ಲಿ ರೇಷನ್ ಡಿಪೋ ಇಟ್ಟು ಮಾರುತಿದ್ದ ವ್ಯಾಪಾರಿ, ನಿರಕ್ಷರಕುಕ್ಷಿಯಾದರೂ, ಬಂದೊ ಡನೆ ಆಸನವನ್ನು ನೀಡಿ ಆದರಿಸುವ ಆಫೀಸರ್, ಗುಮಾಸ್ತ ಬಂದು ನಿಂತರೆ " ಏಕೆ ? " ಎಂದು ಕೇಳೋ ಹೊತ್ತಿಗೆ, ಕಾಲವು ಕಳೆದು ಹೋಗುತ್ತದೆ.

ಈ ದಿನ, ಉದಾಹರಣೆಗೆ, ತನ್ನ ಕೆಲಸ ಹೇಗಿತ್ತು ಆಫೀಸಿನಲ್ಲಿ?

ಕಾಲಿಂಗ್‌ಬೆಲ್, " ಬರ್ತಿದ್ದೀನಿ ದೇವ್ರು....! " ಅಪ್ಪಣ್ಣನ ಕಂಠ.

" ಶೇಖರನನ್ನು ಈಗ ಬಾ ಅನ್ನು " ಆಫೀಸರ್.

" ತಮ್ಮನ್ನ ರಾಯರು ಬಾ ಅಂತಿದ್ದಾರ್ರೀ " ಅಪ್ಪಣ್ಣ.

ಒಂದು, ಎರಡು—ಹತ್ತು....ಎಷ್ಟು ಸಾರಿಯಾದರೂ ಎದ್ದು, ಕೈಯೊಳಗಿನ ಕೆಲಸ ಬಿಟ್ಟು ಹೋಗಬೇಕಾದದ್ದೆ. ಮಾನವತ್ವ-ವನ್ನು ಮರೆತು ಅಧಿಕಾರವನ್ನು ಚಲಾಯಿಸುತ್ತಿದ್ದರೆ, ಆತ್ಮಾಭಿ-ಮಾನವನ್ನೂ ಮರೆತು ತಲೆಬಾಗಿಸಿ ಇರಬೇಕಾದ್ದೇ....

ಶೇಖರನಿಗೆ ಅಳು ಬಂದಿತು. ಇದಕ್ಕೆ ಮೊದಲು ಅವನಿಗೆ ಈ ರೀತಿ ಆತ್ಮಪರೀಕ್ಷೆಮಾಡಿಕೊಳ್ಳುವ ಅವಕಾಶ ದೊರೆತಿರಲಿಲ್ಲ. ತನ್ನ ನಿಜಸ್ಥಿತಿ ನೋಡಿಕೊಂಡರೆ ಹೀಗೆ ಇದೆ....

ಬೆಳ್ದಿಂಗಳು ಪೂರ್ಣವಾಗಿ ಬಂದಿದೆ. ಅರ್ಥವ್ಯಥಿತ ಹೃದಯ ದಿಂದ ಶೇಖರ ಮನೆಗೆ ಮರಳಿದ.

* * *

ಮರುದಿನ ಮಾಮೂಲಾಗಿ ಕಳೆದು ಹೋಗುತ್ತದೆಂಬ ಆಶೆಯಿಲ್ಲ ಶೇಖರನಿಗೆ....ಯಾವ ನಿಮಿಷದಲ್ಲಿ ಆಫೀಸರಿನ ಮೇಲೆ ತಿರುಗಿ ಬೀಳುವೆನೋ—ಎಂದು ಅವನನ್ನೊಂದು ಅನುಮಾನ ಪೀಡಿಸು-ತ್ತಿತ್ತು.

ಬೆಳಿಗ್ಗೆ ಹತ್ತು ಆಗುವ ಹೊತ್ತಿಗೆ ಹೋಗಿ ತನ್ನ ಸೀಟಿನಲ್ಲಿ ಕುಳಿತುಕೊಂಡ. ಆ ದಿನ ಆನಂದರಾಯರು ಕ್ಯಾಂಪು ಹೋಗಿ ದ್ದಾರೆಂಬ ತಿಳುವಳಿಕೆ ಅವನಿಗೆ ಬಹಳ ಸಂತೃಪ್ತಿಯನ್ನುಂಟು ಮಾಡಿತು.

ಅಂಕಿಗಳನ್ನು ಕಾಲಮುಗಳಲ್ಲಿ ಹಾಕುತ್ತ, ಸರಿನೋಡುತ್ತ, ಕೂಡುತ್ತ ಕಳೆಯುತ್ತ ಕೆಲಸಮಾಡುತ್ತಿದ್ದ ಶೇಖರ. ಆ ರಿಟರ್ನ್ ಆಗಿಹೋದರೆ, ಇನ್ನೂ ಅರ್ಜೆಂಟ್ ರಿಟರ್ನುಗಳೆಲ್ಲ ಸಿದ್ಧವಾದಂತೆ.

ಎರಡಾಯಿತು. ಹಾಕಬೇಕಾದ ರಿಟರ್ನುಗಳೆಲ್ಲ ಪೂರ್ತಿ ಯಾದುವು. ಇನ್ನು ಡ್ರಾಫ್ಟುಗಳನ್ನು ಬರೆಯಬೇಕು. ಸ್ವಲ್ಪ ಕಾಫಿ ಕುಡಿದು ಬಂದರೆ ?

ಅವನಿಗೆ ಅಡ್ಡಿಯೇನೂ ಕಾಣಲಿಲ್ಲ. ಹೋದ.

ಹೋಟಲಿನಲ್ಲಿ ಯಾರೋ ಸ್ನೇಹಿತರು ಕಣ್ಣಿಗೆ ಬಿದ್ದರು. ಅವ-ರೊಡನೆ ಮಾತನಾಡಿ ತಿರುಗಿ ಬರುವ ಹೊತ್ತಿಗೆ ಮೂರಾಯಿತು.

ಆ ಹೊತ್ತು ಅಯಿದು ಗಂಟೆ ಆಗುವಷ್ಟಕ್ಕೆ ಒಂದು ಪೇಜು ಮಾತ್ರ ಬರೆದ....ಇನ್ನೂ ಒಂದು ಡ್ರಾಫ್ಟು ಸಹ ಪೂರ್ತಿ ಆಗಲಿಲ್ಲ.

ಮನೆಗೆ ಹೋಗೋಣವೆಂದು ಎದ್ದ. ಆ ದಿನ ಅವನಿಗಿದ್ದ ಸ್ವಾತಂತ್ರ್ಯವೂ, ಸ್ವೇಚ್ಛೆಯೂ ಅವನಿಗೆ ಅಮಲೇರಿಸಿದುವು. ಮರುದಿನ ಆನಂದರಾಯರು ಬಂದರೆ, ಈ ಸ್ವೇಚ್ಛೆಯಿಲ್ಲದೆ ಹೇಗೆ ಇರುತ್ತದೋ ಎಂಬ ಆಲೋಚನ ಮಾತ್ರದಿಂದ ಕೂಡ ಅವನ ಮನಸ್ಸು ವಿಕಲತೆ ಹೊಂದುತ್ತಿತ್ತು.

ಆ ಸಾಯಂಕಾಲ ಅವನು ಮರಳಿ ಏಕಾಂತಸ್ಥಳಕ್ಕೆ ಹೋಗಿ ಕೆಲವು ನಿಮಿಷಗಳನ್ನು ಕಳೆದನು....ಪೂರ್ಣ ರಜಾದಿನದಂತೆ ಇದ್ದಿತವನಿಗೆ ಆದಿನ.

ಮರುದಿನ ಆಫೀಸಿನಲ್ಲಿ ಟಿ. ಯಂಸ್. ಓ. ಪ್ರತ್ಯಕ್ಷವಾದ; ಮತ್ತೆ ಕರೆಗಳು....

" ನಿನ್ನೆಯ ಕೆಲಸ ಬಾಕಿ ಏಕೆ ಇದೆ? ಒಂದು ಉತ್ತರ ಕೂಡ ಡ್ರಾಫ್ಟು ಮಾಡಿಲ್ಲ. ಆಟವಾಡಿದೆಯೋ ಏನು ?"

ಶೇಖರ ವಿವರ್ಣನಾದ. ನಿನ್ನೆ ತಾನು ಅನುಭವಿಸಿದ ಸ್ವೇಚ್ಛೆಗೆ ಬಡ್ಡಿಸಹಿತ ಛೀಮಾರಿ ಆಗುವಂತಿದ್ದಿತು.

" ನಿನ್ನೆ ಮೈಯೊಳಗೆ ಸ್ವಲ್ಪ ನೆಟ್ಟಗಿದ್ದಿಲ್ಲರಿ. ಅದಕ್ಕೆ ಮಾಡಲಿಕ್ಕೆ ಆಗಲಿಲ್ಲ. ಈದಿನ ಪೂರ್ತಿಮಾಡುತ್ತೇನೆ."

" ಈ ದಿನ ಮಾಡಬೇಕಾದುವು ?— ನಾಳೆಗೆ ವಾಯಿದಾ ಹಾಕುತ್ತೀ. ಹುಡುಗರಿಗೆ ಕೆಲಸಕೊಟ್ಟು ಸುಧಾರಿಸಿಕೊಳ್ಳುವುದು ಕಷ್ಟ! ಹೋಗಲಿ, ಉಪಕಾರ ಮಾಡೋಣವೆಂದು ನಿನಗೆ ಇಲ್ಲಿ ಉದ್ಯೋಗ ಕೊಟ್ಟೆ. ನನ್ನ ಕೆಲಸಕ್ಕೆ ಮೋಸಮಾಡಿ—"

" ಈ ದಿನ ಹೇಗಾದರೂ ಪೂರ್ತಿಮಾಡ್ತೀನಿ ! "— ಶೇಖರನ ಮನಸ್ಸು ಬಹಳ ಬಾಧೆಪಡುತ್ತಿತ್ತು. ಒಂದು ಸಾರಿ ತಿರುಗಿ ಬೀಳೋಣವೆಂದು ಎನಿಸಿತು ಅವನಿಗೆ. ಆದರೆ.... " ಸರಿಯೇ— ಆದರೆ, ಕೆಲಸದ ವಿಷಯದಲ್ಲಿ ಇನ್ನು ಜಾಗ್ರತೆಯಾಗಿರಬೇಕು."

" ಒಳ್ಳೇದು ! "

ಅವನು ನೀರಸವಾಗಿ ಸೀಟಿನ ಬಳಿಗೆ ಕದಲಿ, ಲೇಖನಿಯನ್ನು ತೆಗೆದುಕೊಂಡ. ಬಹಳ ತೀವ್ರಗತಿಯಲ್ಲಿ ಬರೆಯುತ್ತಿದ್ದ.

ಎರಡಾಗುವುದರೊಳಗೆ ಬಾಕಿ ಉಳಿದ ಕೆಲಸವು ಬಹಳ ಮಟ್ಟಿಗೆ ಮುಗಿದಿತ್ತು. ಲೇಖನಿಯನ್ನು ಕೆಳಗಿಟ್ಟು, ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು, ಅಪ್ಪಣ್ಣನನ್ನು ಟೀಗೆ ಕಳಿಸಿದನು. ಇಷ್ಟರಲ್ಲಿ ಆನಂದರಾಯರು ಅವನ ಸೀಟಿನ ಬಳಿಗೆ ಬಂದರು. ಸ್ಪ್ರಿಂಗಿನಂತೆ ಎದ್ದು ನಿಂತ ಶೇಖರ.

" ಎಲ್ಲಿಯ ವರೆಗೂ ಆಗಿದೆ ? "

" ಇನ್ನು ಒಂದಾದರೆ, ನಿನ್ನೆಯ ಕೆಲಸ ಪೂರ್ತಿ ಆಗುತ್ತದೆ ಸಾರ್. "

ಆನಂದರಾಯರು ಡ್ರಾಫ್ಟ್‌ಗಳನ್ನು ತೆಗೆದು ನೋಡಿದರು. ಅವರ ಮುಖದಲ್ಲಿ ಸ್ವಲ್ಪ ಸಂತೃಪ್ತಿ ಕಾಣಿಸಿತು.

" ನನಗೆ ಗೊತ್ತೋ, ನೀನು ಕೆಲಸ ಮಾಡಬಲ್ಲೆಯೆಂದು ! ಮೈಗಳ್ಳತನ ಎಂಬೋದಿದೆಯಲ್ಲ— ಅದು ಮಹಾ ದರಿದ್ರ ಅಂತ ತಿಳಕೋ.... ಎಷ್ಟು ಮೈಬಗ್ಗಿಸಿ ಕೆಲಸಮಾಡಿದರೆ, ಅಷ್ಟು ಫಲ. ಸರಿ... ಆದರೆ. "

ಅವರು ಹೋಗಿಬಿಟ್ಟರು. ಆ ಆಗಮನವೇತಕ್ಕೋ ಶೇಖರನಿಗೇನೂ ಅರ್ಥವಾಗಲಿಲ್ಲ. ಟೀ ಕುಡಿದು ಮತ್ತೆ ಲೇಖನಿ ತೆಗೆದ.

ಐದು ಹೊಡೆಯುವ ಹೊತ್ತಿಗೆ ಎರಡು ದಿನಗಳ ಕೆಲಸ ಪೂರ್ತಿಮಾಡಿ, ಬೆರಳು ಮುರಿದುಕೊಂಡು, ಸಂತೃಪ್ತಿಯಿಂದ ಆಫೀಸರ್ ಕೋಣೆಯೊಳಕ್ಕೆ ನಡೆದ ಶೇಖರ. ಅಲ್ಲಲ್ಲಿ ಕೆಲವು ಲೋಪಗಳನ್ನು ತೋರಿಸಿದರೂ, ಒಟ್ಟಿನ ಮೇಲೆ ಬಹಳ ಅಸಂತೃಪ್ತಿಯನ್ನು ಪ್ರಕಟಿಸಲಿಲ್ಲ ಆಫೀಸರ್. ಅವುಗಳನ್ನು ಫೇರ್‌ಕಾಪಿಯಿಂಗ್‌ಗೆ ಕೊಡುತ್ತಿದ್ದಾಗ, ಟೆಲಿಗ್ರಾಂ ಪ್ಯೂನ್ ಬಂದ. ಶೇಖರನ ಎದೆ ಡಬ್ಬೆಂದಿತು.

ಯಾವ ವಿಚಾರವೂ ಇಲ್ಲದೆ, ಆಫೀಸರ್ ಟೆಲಿಗ್ರಾಂ ತೆಗೆದುಕೊಂಡು ಓದಿ, ಶೇಖರನಿಗೆ ಓದಲು ಕೊಟ್ಟರು......... ಅದು ಡಿ. ಎಸ್. ಓ. ಅವರಿಂದ, ಯಾವುದೋ ರಿಪೋರ್ಟು ರಿಟರ್ನ್ ಟಪಾಲಿನಲ್ಲಿ ಕಳಿಸೆಂದು ಇದ್ದಿತು.

" ಏನು ಮಾಡೋಣ ? "— ಆಫೀಸರ್.

ಶೇಖರ ತಬ್ಬಿಬ್ಬಾದ.... " ನಿಮ್ಮ ಇಷ್ಟ ! "

" ರಾತ್ರಿ ಸ್ವಲ್ಪ ಮನೆಗೆ ಬಾ.... ಡಿಕ್ಟೇಟ್ ಮಾಡ್ತೀನಿ. ಟೈಪು ಮಾಡುವೆಯಂತೆ. ಉಂಡೊಡನೆ ಬಾ ! "

ಬೇರೆ ಗುಮಾಸ್ತ ಶೇಷಗಿರಿಯನ್ನು ಬಾಯೆನ್ನಬಾರದೆ— ಅಂದುಕೊಂಡ. ಆ ಮಾತನ್ನೇ ಕೇಳೋಣವೆಂದುಕೊಂಡ.... ಆದರೆ, ಗುಮಾಸ್ತ— ಆಫೀಸರ್‌ನ್ನ ಹೇಗೆ ಕೇಳುತ್ತಾನೆ ?

" ಹಾಗೇ ಆಗಲಿ, " ಎಂದ ಹತಾಶನಾಗಿ.

ಆನಂದರಾಯರ ಮೇಲೆ ಮಾತ್ರ ಬಹಳ ಕೋಪ ಬಂದಿತು. ಯಾವ ಮಾತ್ರಕ್ಕೂ ಧನವಿದ್ದಿದ್ದರೆ, ಈ ದರಿದ್ರದ ಉದ್ಯೋಗವನ್ನು ತಕ್ಷಣವೆ ಬಿಟ್ಟು, ಬೇರೆ ಏನು ಮಾಡಬಹುದಾಗಿದ್ದರೂ ಸುಖವಾಗಿರುತ್ತಿತ್ತು. ಹಗಲೆಲ್ಲಾ, ಗೌರವವಿಲ್ಲದ ಪರಿಸರಗಳಲ್ಲಿ ವಿಶ್ರಾಂತಿಯಿಲ್ಲದೆ, ಬರೆಯುವ ಉಪಕರಣಗಳೊಡನೆ ತಾನೊಂದು ಉಪಕರಣವಾಗಿ ಕೆಲಸಮಾಡುವುದು.... ಈ ದಿನ ರಾತ್ರಿ ಕೂಡ ವಿಶ್ರಾಂತಿಯಿಲ್ಲದೆ ಅವರ ಮನೆಗೆ ಹೋಗಿ ಕೆಲಸ ಮಾಡಬೇಕು ! ಗುಮಾಸ್ತ !

" ಎಂಟಕ್ಕೆ ಬರ್ತೀನಿ "

ನೀರಸ ಹೃದಯದವನಾಗಿ ಹೊರಗೆ ನಡೆದ.

* * * *

ರಾತ್ರಿ ಎಂಟು ಗಂಟೆಗೆ ಸರಿಯಾಗಿ, ಆನಂದರಾಯರ ಕೋಣೆಯಲ್ಲಿ ಕುಳಿತು ಶೇಖರನು, ಹೇಳುವುದನ್ನೆಲ್ಲಾ ಟೈಪು ಮಾಡುತ್ತಿದ್ದ. ಡಿ. ಎಸ್. ಓ. ಗೆ ಕೊಡೋ ರಿಪೋರ್ಟಿನಲ್ಲಿ ಸ್ವಂತ ತಪ್ಪುಗಳನ್ನು ಮುಚ್ಚಿಕೊಳ್ಳುವುದಕ್ಕಾಗಿ ಅವರು ಪಡುವ ಕಷ್ಟಗಳನ್ನೂ, ಅಧಿಕಾರಿಗಳ ಅಂತರ್ವಿಷಯಗಳನ್ನೂ ಗಮನಿಸಿ, ನಡುನಡುವೆ ನಗುತ್ತ ಕೆಲಸ ಸಾಗಿಸುತ್ತಿದ್ದ. ಯಾವಾಗ ಈ ಕೆಲಸ ಪೂರ್ತಿ ಆಗುತ್ತದೆಯೋ, ಹೋಗಿ ಹಾಯಾಗಿ ತನ್ನ ಮನೆಯಲ್ಲಿ ಯಾವಾಗ ಮಲಗಿಕೊಂಡೇನೋ— ಎಂದು ಅವನ ಮನದ ತಳಮಳ.

ಒಂಬತ್ತು ಆಗುವುದಕ್ಕೆ ಸರಿಯಾಗಿ, ಡಿಕ್ಟೇಷನ್ ನಿಲ್ಲಿಸಿ ಆನಂದರಾಯರು " ಶಶೀ " ಎಂದು ಕೂಗಿದರು. ಒಳಗಿನಿಂದ "ಏನು ?" ಎಂದು ಪ್ರತಿಪ್ರಶ್ನೆ.

" ಕಾಫೀ ಆಗಿದ್ರೆ ತೆಗೆದುಕೊಂಡು ಬಾಮ್ಮಾ ! "

ಶಶಿ ಕಾಫಿಯನ್ನು ಎರಡು ಕಪ್ಪುಗಳಲ್ಲಿ ತಂದು ಟೇಬಲ್‌ಮೇಲೆ ಇಡುತ್ತಿದ್ದರೆ, ಶೇಖರನಿಗೆ ಸಣ್ಣ ಷಾಕ್ ಹೊಡೆದಂತಾಯಿತು.... ಬೇಜಾರೆಲ್ಲಾ ಹೋಗಿ ಒಂದು ಸಾರಿ ಮನಸ್ಸೂ ತಾನೂ—animate ಆದರು.

ಕಾಫಿ ಪೂರ್ತಿಮಾಡಿದಮೇಲೆ, ಶಶಿ ಮತ್ತೆ ಬಂದು ಕಪ್ಪುಗಳನ್ನು ತೆಗೆದುಕೊಂಡು ಹೋಗಿಬಿಟ್ಟಳು. " ಎಷ್ಟು ಸೌಂದರ್ಯ ! " ಎಂದುಕೊಂಡು, ಶೇಖರ ಮತ್ತೆ ಕಷ್ಟದಿಂದ ಕೆಲಸದಲ್ಲಿ ಮನಸನ್ನು ಚೆಲ್ಲಿದನು.

ರಾತ್ರಿ ಮನೆಗೆ ತಿರುಗಿ ಬರುವಾಗ, ಅವನು ಗೇಟುದಾಟುವ ವರೆಗೂ ಬಹಳ ಸಲ ಹಿಂದಿರುಗಿ ನೋಡುತ್ತಲೇ ಇದ್ದ.

ರಾತ್ರಿ ಹತ್ತೂವರೆ ಆಯಿತು. ಶೇಖರ ಮನೆಗೆ ಬರುವುದಕ್ಕೆ ಆಲಸ್ಯವಾಗಿ ಬಂದು, ಎಲ್ಲರನ್ನು ಎಬ್ಬಿಸುವುದೇಕೆಂದು, ಅವನು ಗಲಾಟೆಯಿಲ್ಲದೆ ಕೋಣೆಯೊಳಕ್ಕೆ ಹೋಗಿ ಮಲಗಿಕೊಂಡ. ಅಣ್ಣ ಅತ್ತಿಗೆ ಏನೋಮಾತನಾಡಿಕೊಳ್ಳುತ್ತಿದ್ದರು.

"ಆ ಸೀರೆ ಈಗೇತಕ್ಕೆ? ಆಗ ಅವಸರವಿದ್ದು ಹೇಳಿದೆ ಬೇಕೆಂದು. ಹತ್ತಿರ ಹಣ ಸಿದ್ಧವಾಗಿದ್ದಿಲ್ಲ. ಸುಮ್ಮನಾದಿರಿ. ಮೈದುನಗೆ ಸರಿಯಾದ ಬಟ್ಟೆಗಳಿಲ್ಲ. ಪಾಪ, ಆಫೀಸಿನಲ್ಲಿ ಹೇಗೆ ತಿರುಗಾಡ್ತಾನೆ? ಎಲ್ಲಾ ಆದ ಮೇಲೆ ನೋಡಿಕೊಬಹುದೇಳ್ರಿ !"

"ಸ್ವಲ್ಪ ಸಾಲ ತೆಗೆದುಕೊಳ್ತೀನೇಳು........ನಿಜ. ಅವನಿಗೆ ಬಟ್ಟೆಗಳಿಲ್ಲ. ಏಕೆಂದು ಕೇಳಿಲ್ಲ. ಅವನ ಸಂಬಳವನ್ನೂ ನಾವು

ಸಾಲ ತೀರಿಸಲಿಕ್ಕೆ ಉಪಯೋಗಿಸುತ್ತಿದ್ದೇವೆ. ಈ ಸಾರಿ ಅವನ ಸಂಬಳ ಅವನ ಬಟ್ಟೆಗಳಿಗೇ ಬಿಟ್ಟರೆ ಸರಿ.''

ಶೇಖರನ ಎದೆ ಝಲ್ಲೆಂದಿತು. ಮನೆಯಲ್ಲಿ ಇಷ್ಟು ಕಾರ್ಪಣ್ಯ. ದಿಂದ ಬದುಕು ಶ್ರಮಪಡುತ್ತಿದ್ದಾರೆಂಬುದು ಅವನಿಗೆ ತಿಳಿಯದು.

''ಅದು ಅಲ್ಲದೆ—ಇನ್ನು ಅವನ ಮದುವೆಯ ಮಾತು ನೋಡ-ದಿದ್ದರೆ ಹೇಗೆ? ಅದಕ್ಕೆ ಹಣ ಬೇಕು. ಆಗಲೇಳಿರಿ......ಹೇಗೋ ಮಾಡೋಣ. ನಮ್ಮ ಪ್ರಯತ್ನದ ಮೇಲೆ ನಾವು ಇರಬೇಕಲ್ಲವೆ? ''

ಶಶಿರೇಖಾ! ಟೈಪರೈಟರು! ಕಾಫೀ ಕಪ್ಪು! ಶೇಖರನಿಗೆ ಒಮ್ಮೆಲೆ ನೆನಪಿಗೆ ಬಂದುವು. ಆದರೆ ತನಗೂ ಶಶಿರೇಖೆಗೂ ನಡುವೆ ಬಹಳ ಅಂತಸ್ತುಗಳಿದ್ದುವು.

ತಾನು, ಆ ಹೊತ್ತಿಗೆ ಬತ್ತಕ್ಕಾಗಿ ಬದುಕುತ್ತಿದ್ದ ಗುಮಾಸ್ತ.. ಆ ಮೇಲೆ, ಸ್ವಲ್ಪವೂ ಭೂಮಿ ಇಲ್ಲದ ದರಿದ್ರ.

ಅವರು ಪೂರ್ವಾಪರಕಾಲದಲ್ಲಿ ಗುಮಾಸ್ತರಾಗಿರಬಹುದು; ಆದ-ರೀಗವರು ಆಫೀಸರ್.... ಇಪ್ಪತ್ತುಸಾವಿರ ನಗದು; ಆ ಮೇಲೆ ಭೂಮಿಗೀಮಿ ಇದ್ದ ಧನವಂತರು!

ಆದರೆ, ಏನಾದರೂ ಅದೃಷ್ಟಕ್ಕೆ ತಕ್ಕಂತೆ.......

ತನ್ನ ಮೂರ್ಖತನಕ್ಕೆ ತಾನೇ ನಕ್ಕುಬಿಟ್ಟ, ಕಣ್ಣು ಮುಚ್ಚಿದ ಶೇಖರ. ಬೆಳಗಾಗುವ ವರೆಗೂ ಅವನು ಕನಸು ಕಾಣುತ್ತಿದ್ದ.

ಮರುದಿನ ಮಾಮೂಲಾಗಿ ಆಫೀಸಿಗೆ ಹೋಗುವ ಹೊತ್ತಿಗೆ, ರಾತ್ರಿಯ ಆಲೋಚನೆಗಳೆಲ್ಲ ಮರಳಿ ಬಂದುವು. ಆನಂದವಾಯು-ರೆಂದರೆ ಅವನಿಗೆ ಈರ್ಷೆ, ಕೋಪಗಳು ಸಹಜವಾಗಿ ಪ್ರಾರಂಭವಾಗು-ತ್ತಿದ್ದುವು. ತಾನು ಅವರೆಲ್ಲರಿಗಿಂತ ಎಷ್ಟೋ ಮೆಟ್ಟಲು ಕೆಳಗೆ ಇರುವೆನೆಂಬ ಭಾವನೆ, ಅವನಲ್ಲಿ ತೀವ್ರ ಸಂತಾಪವನ್ನುಂಟು-ಮಾಡುತ್ತಿದ್ದಿತು.

ವಿದ್ಯಾರ್ಥಿಯಾಗಿದ್ದಾಗ, ನಾಟಕಗಳಲ್ಲಿ ಶೇಖರನಿಗೆ ಆಫೀಸರಿನ ಪಾತ್ರಗಳನ್ನೂ ಯುವರಾಜರ ಪಾತ್ರಗಳನ್ನೂ ಕೊಡುತ್ತಿದ್ದರು. ಸಣ್ಣವನಿದ್ದಾಗ ಅವನ ಜಾತಕವನ್ನು ನೋಡಿ, ಅವನಿಗೆ ರಾಜ-ಯೋಗವಿದೆಯೆಂದು ಹೇಳಿದ್ದರಂತೆ. ಅದು ನಿಜವೇ ಆಗಿ, ಅದಕ್ಕೆ ಅಂತ್ಯವೂ ಆಗಿ, ಇಂದಿಗೆ ತಿರುಗಿ ಗುಮಾಸ್ತಗಿರಿಗೆ ಇಳಿದು ಜಾರಿಬಿದ್ದಿದ್ದಾನೆ.

ಒಮ್ಮೆಲೆ ಮುಂದಿನ ಪಿಜನ್ ಹೋಲ್ಸು, ಫೈಲುಗಳು, ಪೇಡು ಗಳೂ ಟ್ರೇಗಳೂ ಅವನನ್ನು ಸತ್ಯ ನೈಜ ಸ್ಥಿತಿಗೆ ಎಳೆದುಕೊಂಡು ಬಂದುವು. ಲೇಖನಿ ತೆಗೆದ.

ಆದರೆ ಲೇಖನಿ ನಾಗಲೊಲ್ಲದು. ಬಡತನವೂ, ಆತ್ಮಗೌರವನ್ನು ಕೊಂದುಕೊಂಡ ಗುಮಾಸ್ತರ ದೈನ್ಯವೂ, ತನ್ನ ಜೀವನವೂ, ಶಶಿ-ರೇಖೆಗೂ ತನಗೂ ನಡುವೆ ಇರುವ ದೂರವೂ—ಇವೆಲ್ಲ, ಅವನ ಮನಸ್ಸನ್ನು ಕ್ಷೋಭಿಸುತ್ತಿದ್ದುವು.

ಕಾಲಿಂಗ್ ಬೆಲ್.

" ಬಂದೆ ದೇವ್ರು. "

'' ಶೇಖರನನ್ನ ಕರೆ! ''

ಅಪ್ಪಣ್ಣ ಬಂದು ಆಫೀಸರ್ ಆಜ್ಞೆಯನ್ನು ಒಪ್ಪಿಸಿದ. ಶೇಖರ ಕುರ್ಚಿಯಿಂದ ಏಳಲಿಲ್ಲ. ಆಫೀಸರು ತನ್ನನ್ನು ಅವಮಾನಿಸುತ್ತಿದ್ದಂತೆ ಭಾವಿಸಿದ. ಈ ಕೆಲಸ ಸಣ್ಣದಿದ್ದರೂ, ಸ್ಲಿಪ್ ಬರೆಯದೆ, ತನ್ನನ್ನು ಏಕೆ ಬರಹೇಳಬೇಕು?

ಆದರೆ, ಅಂತರಂಗವು ಅವನಿಗೆ ಪುಸ್ತಕತನದ ಔಷಧವನ್ನು ಹಾಕುತ್ತಿದೆ. ಅವರಿಗೇಕೆ ಸಿಟ್ಟು ಬರಿಸಬೇಕು? ಏನೋ ದೊಡ್ಡಾತ....ಏನಾದರೂ, ಆಫೀಸರ್—.

ಅವನ ದೌರ್ಬಲ್ಯ ಅವನನ್ನು ಜಯಿಸಿತು. ಎದ್ದು ಆಫೀಸರ ಕೋಣೆಯೊಳಕ್ಕೆ ಹೋದ. ಅವರು ಸ್ವಲ್ಪ ಕೋಪದಿಂದ ನೋಡಿ: '' ಈ ಡ್ರಾಫ್ಟ್ ಏನಿದು? '' ಎಂದರು.

ಶೇಖರನ ಮುಖ ಕಳೆಗುಂದಿತು. ಅದರ ತುಂಬ ಬಹಳ ತಪ್ಪುಗಳನ್ನು ಗುರುತು ಮಾಡಿದ್ದರು.

'' ಹೀಗೇನು ಡ್ರಾಫ್ಟ್ ಮಾಡೋದು? ''

ಗುಮಾಸ್ತೆಗೆ ಕೋಪ ಪಾದರಸದಂತೆ ಏರುತ್ತಿತ್ತು. ಪರಿಸ್ಥಿತಿಗಳು ಅವನನ್ನು ಹಿಡಿದು ತಡೆಯುತ್ತಿದ್ದುವು. ಅವನು ಮೌನ-ವಾಗಿ ಸುಮ್ಮನಿದ್ದ.

'' ಸ್ವಲ್ಪ ಕಣ್ಣು ಉಪಯೋಗಿಸು. ನಡೆ! ''

ಕಷ್ಟದಿಂದ ಹಿಂತಿರುಗಿದ ಆಫೀಸರ ಕೋಣೆಯಿಂದ ಶೇಖರ. ಹೆಜ್ಜೆಹೆಜ್ಜೆಗೂ ಭಾರದಲ್ಲಿ ಹೆಚ್ಚುತ್ತಿದೆ ಅವನ ಹೃದಯ. ಎಷ್ಟು ನಿಕೃಷ್ಟವಾದುದು ತನ್ನ ಜೀವನ!

ಕಾಗದದ ಮೇಲೆ ಲೇಖನಿಯನ್ನಿಡಲಾರದೆ ಹೋದ. 'ಕಣ್ಣುಗಳನ್ನುಪಯೋಗಿಸಬೇಕು!' ಎಷ್ಟು ಅಧಿಕಾರ! ಇದಕ್ಕಿಂತ ಶಾಲೆಯ ಉಪಾಧ್ಯಾಯರ ಕೆಲಸ ಎಷ್ಟು ನಯ! ಗೌರವ ಕೊಟ್ಟು, ಗೌರವ ತೆಗೆದುಕೊಳ್ಳುವುದಾದರೂ ಅವರಿಗೆ ತಿಳಿಯುತ್ತದೆ.

ಗಡಿಯಾರವು ತಿರುಗುತ್ತಿದೆ. ಅವನ ಮನಸ್ಸಿನಲ್ಲಿ ಆಲೋಚ-ನೆಗಳು ನೂರಾರು ಸಹಸ್ರಾರು ಆದುವು.

ಎರಡು ಹೊಡೆಯಿತು.

ಮತ್ತೆ ಕಾಲಿಂಗ್ ಬೆಲ್. ಸ್ವಲ್ಪ ಸಮಯದಲ್ಲಿ ಅಪ್ಪಣ್ಣನ ಕೂಗು.

ಷೆಲ್ಫಿನೊಳಗಿಂದ ಬಿಳಿಯ ಕಾಗದ ತೆಗೆದ ಶೇಖರ, ಉದ್ರೇಕ-ವನ್ನು ಹತ್ತಿಕ್ಕಿ ಬರೆದ:

'' ಗೌರವ ಕೊಟ್ಟು, ಗುಮಾಸ್ತರನ್ನು ಸಹ ಮನುಷ್ಯರನ್ನಾಗಿ, ಪರಿಸ್ಥಿತಿಗಳಿಗೆ ಬಾಗಿದ ಅಭಾಗ್ಯರನ್ನಾಗಿ, ಗುರುತಿಸಲಾರದ ನಿಮ್ಮ ಪ್ರವರ್ತನೆಗೆ ಆತ್ಮಸ್ಮೃತಿ ಸೂಚನೆಯಾಗಿ, ನನ್ನ ರಾಜೀನಾಮೆ ದಾಖಲು ಮಾಡುತ್ತಿದ್ದೇನೆ

ನಾವೆಲ್ಲರೂ ಹೊರಟು ಮಾನವರು. ಆಮೇಲೆ ಉದ್ಯೋಗಸ್ಥರೂ. ಕೇವಲ ಪದವಿ ನಿಮ್ಮನ್ನು ಮಾನವಾತೀತರನ್ನಾಗಿ ಮಾಡಿದೆ. ಬಹಳ ವಿಚಾರ ಮಾಡತಕ್ಕ ತಪ್ಪನ್ನು ತಾವು ನಿಜವೆಂದು ಭಾವಿ-ಸುತ್ತಿರುವಿರಿ.

ಸಿಮಗಿದ್ದಂತೆ ನಮಗೂ ಸಂಸಾರಗಳು, ಗೌರವಿಸುವವರು, ಎಲ್ಲಾ ಇವೆ. ಈ ವಿಷಯವನ್ನು ನೀವು ಎಷ್ಟು ತ್ವರಿತವಾಗಿ ಗ್ರಹಿಸುತ್ತೀರೋ ಅಷ್ಟು ಒಳ್ಳೆಯದು. ದಯಮಾಡಿ ನನ್ನ ರಾಜೀನಾಮೆಯನ್ನು ಸ್ವೀಕರಿಸಿರಿ........"

ಆದರೆ, ಮತ್ತೆ ಅವಸರ ಪಡುವುದೇತಕ್ಕೆಂದು, ಶೇಖರ ಬರೆದುದನ್ನು ಜೇಬಿನಲ್ಲಿಟ್ಟ. ಆಫೀಸರ ಕೋಣೆಯೊಳಕ್ಕೆ ಹೋದ.

"ಬರೋದಿಷ್ಟು ಆಲಸ್ಯವೇಕೆ ?"

"ಕೆಲಸದಲ್ಲಿದ್ದೆ."

"ಇನ್ನೂ ಆ ರಿಟರ್ನ್ ಪೂರ್ತಿ ಆಗಲಿಲ್ಲ ?"

"ಇಲ್ಲ."

"ಕಾರಣ ?"

"ಸ್ವಲ್ಪ ಆಗಿದೆ!"

"ಉಳಿದದ್ದು ?"

"ಆಗುತ್ತದೆ."

"ಬೆಳಗಿನಿಂದ ನಿದ್ರೆ ಮಾಡ್ತಿದ್ದೀಯಾ ?"

"ಇದು ಆಫೀಸೆಂದು ಬಲ್ಲೆ !"

"ಮತ್ತೆ ?"

"ಮೈಯಲ್ಲಿ ನೆಟ್ಟಗಿಲ್ಲದೆ...."

"ಸಾಕೇಳು ವೇಷಗಳು.... ತಲೆ ತಿರುಗುತ್ತೇನು, ಹಾಗೆ ಜವಾಬು ಕೊಡ್ತೀ !"

"ನೀವು ಸ್ವಲ್ಪ ಗೌರವದಿಂದ ಮಾತಾಡ್ತೀರಾ ?"

"ನೀನು ಯಾರೆದುರು ಮಾತಾಡ್ತಿದ್ದಿಯೋ ಗೊತ್ತೇನು ?"

"ಗೊತ್ತು. ಇನ್ನೊಬ್ಬ ಮನುಷ್ಯನೊಡನೆ !"

ಮತ್ತೆ ಕಾಲಿಂಗ್ ಬೆಲ್, ಸ್ವಲ್ಪ ಸಮಯದಲ್ಲಿ ಅಪ್ಪಣ್ಣನ ಕೂಗು.

"ಕಣ್ಣು ಕಾಣಿಸಿದರೆ, ಇನ್ನೂ ಸ್ವಲ್ಪ ಗೌರವವಾಗಿ ಮಾತಾಡ್ತೀ"

"ಮತ್ತೊಮ್ಮೆ ಹೇಳ್ತಿದ್ದೀನಿ. ಗೌರವದಿಂದ ಮಾತಾಡ್ರಿ"

"ಅಬ್ಬ ! ಗೌರವ ! ದೊಡ್ಡ ಮಾತುಗಳು ಬಂದಿವೆಯೋ !"

"ಮಾನವತ್ವದಲ್ಲಿ ನಂಬಿಕೆಯಿದ್ದರೆ, ಅದು ಚಿಕ್ಕಮಕ್ಕಳಿಗೆ ತಿಳಿಯುವ ಮಾತು !"

"ಕವಿತ್ವ ಕಟ್ಟಿಟ್ಟು ನಡೆ ಆಚೆಗೆ !"

"ಬಾಯಿಮುಚ್ಚಿಕೊಂಡು, ಕೂತುಕೊಳ್ಳಿ.... ಈ ಉತ್ತರವನ್ನು ತಿಳಿದುಕೊಂಡು ಈ ಸಾರಿ, ನಿಮ್ಮ ಸಾಹುಕಾರರಿಗೆ ಕೊಡೋ ಗೌರವದಿಂದ ನನ್ನ ನೋಡದೆ ಹೋದರೆ, ಎಂಥಹ ಫಲಿತಾಂಶಗಳು ತೋರಿಯುತ್ತವೆಯೋ ಆಲೋಚಿಸಿಕೊಳ್ಳಿ ! ಇನ್ನು ಮಾತು ಬೆಳೆಸದಿರೋ, ಜಾಗ್ರತೆ, ನಮಸ್ಕಾರ !"

ಶೇಖರ ಹಿಂದಿರುಗಿ ಹೋಗಿ ಬಿಡ್ತಿದ್ದ. ಆನಂದರಾಯರು ಒಂದು ಸಲ "ಶೇಖರ" ಎಂದು ಕೂಗಿದರು. ಕೇಳಿಸಿಕೊಳ್ಳದೇನೇ ಶೇಖರ ಮನೆಯ ದಾರಿ ಹಿಡಿದ.

* * * *

ಶೇಖರ ಸೀದಾ ಮನೆಗೆ ಬಂದ. ಉದ್ರೇಕದಿಂದ ಅವನ ರಕ್ತನಾಳಗಳೆಲ್ಲ ತೀವ್ರವಾಗಿ ಕೆಲಸ ಮಾಡುತ್ತಿದ್ದುವು.

"ಏನು? ಇಷ್ಟು ಬೇಗನೆ ಬಂದು ಬಿಟ್ಟೇ?" ಅತ್ತಿಗೆ ಕೇಳಿದಳು.

"ಉದ್ಯೋಗಕ್ಕೆ ರೆಜಿಗ್ನೇಷನ್ ಕೊಟ್ಟೆ !"

ಆಕೆ ದಿಗ್ಭ್ರಾಂತಳಾದಳು.

"ಏನಿದು ಶೇಖರ ? ಹಾಸ್ಯ ಮಾಡುತ್ತಿದ್ದೀಯಾ ?"

"ಇಲ್ಲ ಅತ್ತಿಗೀ, ದನದಂತೆ ನೋಡುವವರ ಹತ್ತಿರ ಏನು ಕೆಲಸ ಮಾಡೋಂತೀದಿ ? ಮಾತುಗಳನ್ನ ದುಬಾರಿ ಆಡಿದ ಟಿ. ಯಸ್. ಓ. ಬಹಳ ಕಾಲದ ವರೆಗೂ ಸಹಿಸಿದೆನು. ಇಂದು ತಡೆಯಲಾಗಲಿಲ್ಲ !"

"ಅವಸರ ಪಟ್ಟೆ ಶೇಖರ ! ಈ ಊರಿಗೆ ನಿನ್ನ ಹಾಕಿಸಿದ್ದು ಅವರೇ ಅಲ್ಲವೆ ? ದೊಡ್ಡವರ ಮೇಲೆ ಅಷ್ಟು ವೇಗವಾಗಿ ತಿರುಗಿ ಬೀಳುವರೆ ?"

ಶೇಖರ ತಲೆಯನ್ನು ತಗ್ಗಿಸಿದ.

"ಸರಿ ಬಿಡು. ಏನೋ ಆಯಿತು ! ಹೇಗಾದರೂ ಬದುಕಿಕೊಳ್ಳೋಣ ! ವ್ಯಥೆ ಪಡಬೇಡ !"

ಅತ್ತಿಗೆ ಶೇಖರನನ್ನು ಆಲೋಚನೆಗಳಲ್ಲಿ ಕೆಡಹಿದಳು. ಆನಂದರಾಯರ ಒಳ್ಳೆಯ ಸ್ವಭಾವವೂ, ಮೊದಲು ತಾನು ಆ ಊರಿಗೆ ಉದ್ಯೋಗದಲ್ಲಿ ಬರಲಿಕ್ಕೆ ಆದ ಅವರ ಸಹಾಯವೂ, ತನ್ನ ಮನೆಯಲ್ಲಿಯ ಪರಿಸ್ಥಿತಿಯೂ ಅವನನ್ನು ಆಲೋಚಿಸುವಂತೆ ಮಾಡಿದುವು.

ಈ ಉದ್ಯೋಗ ಹೋದರೆ ಅಣ್ಣ ಎಷ್ಟು ಕಷ್ಟಪಡಬೇಕು ಮತ್ತೆ? ಆನಂದರಾಯರಿಗೆ ಕ್ಷಮಾಪಣೆ ಕೇಳಿಕೊಂಡರೆ ?

ಛೀ....ಅಷ್ಟಕ್ಕಿಂತ ನೀಚವಾದುದೇನಿರುತ್ತೆ ? ಒಂದು ಸಲ ತನ್ನ ಗೌರವವನ್ನು ಆ ರೀತಿ ಕಳೆದುಕೊಂಡರೆ, ಜನ್ಮದಲ್ಲಿ ಇನ್ನು ತಲೆ ಎತ್ತಬೇಕಾಗಿಲ್ಲ.

ವೆಂಕಟರಾಯ ಎಲ್ಲಾ ಕೇಳಿದ. "ಸ್ವಲ್ಪ ದುಡುಕಿದೆಯೇನೋ ! ಸರಿ ! ಹೋಗಲಿಬಿಡು ! ಏನೋ ಆಗಿದೆಯಲ್ಲಾ, ನೋಡೋಣ...." ಎಂದು ಮಾತ್ರ ಅಂದ.

ಆದರೆ ಶೇಖರ ಬಹಳ ವಿಚಾರಿಸಿದ ತನ್ನ ದುಡುಕಿಗೆ. ರಾಜೀನಾಮೆ ಕೊಡದೇ ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು — ಎಂದುಕೊಂಡ. ಅಣ್ಣನು, ಅತ್ತಿಗೆಯೂ ಏನೂ ಅನ್ನಲಾರದೆ ಈ ರೀತಿ ಸುಮ್ಮನೆ ಇದ್ದಾರೆಂದು ಅವನಿಗೆ ಗೊತ್ತು.

ರಾತ್ರಿ ಭೋಜನಾನಂತರ, ಮೂವರೂ ವರಾಂಡದಲ್ಲಿ ಕುಳಿತುಕೊಂಡು ಏನೋ ಸುದ್ದಿಗಳನ್ನು ಹೇಳಿಕೊಳ್ಳುತ್ತಿದ್ದರು. ಅಂದಿನ ಪ್ರಸಂಗವು ಬಾರದಂತೆಯೇ ಸಂಭಾಷಣವು ಸಾಗಿಹೋಗುತ್ತಿತ್ತು. ಹೊರಗೆ "ಶೇಖರ !" ಎಂಬ ಕೂಗು ಕೇಳಿಸಿತು. ಅವಸರದಲ್ಲಿ ಹೋಗಿ ಬಾಗಿಲು ತೆರೆದ ಶೇಖರ. ಆನಂದರಾಯರು ನಗುತ್ತ ಒಳಕ್ಕೆ ಬಂದರು.

ಎಲ್ಲರೂ ಬೆರಗಾದರು.

"ನಮಸ್ಕಾರರೀ ರಾಯರೇ" ಎಂದು ವೆಂಕಟರಾಯರು ಅವರನ್ನು

ಒಳಕ್ಕೆ ಕರೆದುಕೊಂಡುಹೋಗಿ ಕೂಡಿಸಿದರು. ಶೇಖರ ಬಹಳ ನಾಚಿಕೊಂಡಿದ್ದ; ಆ ಕ್ಷಣದಲ್ಲಿ ಅವರು ಬಹಳ ಹೃದಯವೈಶಾಲ್ಯವನ್ನು ಪ್ರದರ್ಶಿಸಿದ್ದಾರೆಂದು ಗ್ರಹಿಸಿದ.

"ನೀವು ಈ ರೀತಿ ದಯಮಾಡಿಸಿದ್ದು ಬಹಳ......"

ಏನೆನ್ನಬೇಕೋ ತಿಳಿಯದೆ ನಿಂತುಬಿಟ್ಟ ವೆಂಕಟರಾಯ.

"ವಿಶೇಷವೇನೂ ಇಲ್ಲೇಳ್ರಿ....ನಿಮ್ಮ ಶೇಖರನಿಗೆ ಈ ದಿನ ನನ್ನ ಮೇಲೆ ಬಹಳ ಕೋಪ ಬಂದಿದೆ. ಮತ್ತೆ, ನಾನೂ ದುಡುಕಿದರೆ ಹೇಗೆ?" ಆನಂದರಾಯರು ನಗುತ್ತಲಿದ್ದರು. ಅಲ್ಲಿ ಎಲ್ಲರೂ ಮುಗುಳ್ನಗೆಯುವರಾಗಿ ಕಾಣಿಸುತ್ತಿದ್ದರು.

"I am sorry! ಉದ್ರೇಕವನ್ನು ತಡೆಯಲಾರದೆ ಹೋದೆ. ಕ್ಷಮಿಸಿರಿ." ಎಂದ ಶೇಖರ.

"ಅದೇನು ಬೇಕಾಗಿಲ್ಲೇಳು! ನೀನಾರೀತಿ ಉದ್ರೇಕವನ್ನು ತಡೆದುಕೊಂಡರೆ, ಮದುವೆ ಅವ್ರೂ ಹೇಗೆ ಆಗುತ್ತವೆ?"

ಎಲ್ಲರೂ ಕಕ್ಕಾಬಿಕ್ಕಿಯಾದರು.

"ನಿಜವಾಗಿ ಶೇಖರನನ್ನೇ ಪ್ರತ್ಯೇಕವಾಗಿ ಚಿತ್ರಹಿಂಸೆಪಡಿಸಿದೆ. ವೆಂಕಟರಾಯರೆ, ಆತನಿಗೆ ಕೋಪ ಬಂದರೆ ತಪ್ಪೇನಿದೆ?"

ತಮ್ಮ ಮಾತನ್ನು ಮುಂದುವರಿಸಿದರು ರಾಯರು:

"ಆತನ ತಾಳ್ಮೆಯನ್ನು ಪರೀಕ್ಷಿಸಿದೆ. ನೋಡಿದಿರಾ, ಸ್ವಲ್ಪ ಆತ್ಮಗೌರವವುಳ್ಳ ಮನುಷ್ಯ ಎಲ್ಲಿಯವರೆಗೂ ಹೊಡೆತ ತಿಂತಾ ಇರುತ್ತಾನೋ ಅಲ್ಲಿಯವರೆಗೂ ನೋಡಿದೆ. ಸರಿಯಾಗಿ ನುಡಿದ. ತನ್ನ ಗೌರವವನ್ನು ಕಾಯ್ದುಕೊಳ್ಳಲಿಕ್ಕೆ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟ.

ಮನುಷ್ಯನಲ್ಲಿ ಮುಖ್ಯವಾದುದು ಆತ್ಮಗೌರವವೇ ಅಲ್ಲವೆ, ವೆಂಕಟ್ರಾಯರೆ? ಸಾಮರ್ಥ್ಯವಿದೆ. ಸಾಧ್ಯವಾಗುವತನಕ ಜಗಳವಾಡದ ಸ್ವಭಾವವಿದೆ. ಸಂದರ್ಭ ಬಂದರೆ, ಏನಾದರೂ ಮಾಡಿ ಆತ್ಮಗೌರವವನ್ನು ಕಾಯ್ದುಕೊಳ್ಳುವ ಪೌರುಷವಿದೆ.... ಅಸ್ತಿಗಳು ಏತಕ್ಕರಿ ಇನ್ನ?"

ಎಲ್ಲರೂ ಕೇಳುತ್ತಿದ್ದಾರೆ. ಆನಂದರಾಯರು ಅ ಆ ಇ ಈ ಪಾಠದಾಗಿ ಹೀಗೆ ಆಡುತ್ತಿದ್ದಾರೋ, ಅವರ ಉದ್ದೇಶವೇನೋ—ಯಾರಿಗೂ ಬೋಧವಾಗಲಿಲ್ಲ. ಸಂದಿಗ್ಧತೆಯಿಂದ ಅವರ ಮುಖವನ್ನು ನೋಡುತ್ತಿದ್ದರು.

"ಹೋಗಲಿ ಅಂದರೆ! ಆಫೀಸು ಬಾಟಿದ ಮೇಲೆ ನೋಡಿದಿರಾ ಎಷ್ಟು ಗೌರವಿಸಿದನೋ? ಶೇಖರ, ನೀನೆಂದರೆ ನನಗೆ ಬಹಳ ಒಳ್ಳೆಯ ಅಭಿಪ್ರಾಯವಿದೆಯೋ!"

ಆನಂದರಾಯರು ಬಹಳ ಉಲ್ಲಾಸದಿಂದ ಇದ್ದಂತೆ ಕಾಣಿಸುತ್ತಿದ್ದರು. "ಸರಿಯೋ. ಅವಶ್ಯನೇನರಿ. ನಿಮ್ಮ ಗೋತ್ರ ಪ್ರವರ ಹೇಳ್ರಿ."

ಅರ್ಥವಾಗದೆ ನೋಡುತ್ತ ವೆಂಕಟರಾಯರು ಹೇಳಿದರು,

"ಬದುಕಿಸಿದಿರಿ. ಇನ್ನು ಅಸ್ಸಲು ವಿಷಯಕ್ಕೆ ಬರೋ[ಣ]. ತಿಥಿ, ವಾರ, ನಕ್ಷತ್ರ, ಅದ್ಭುತವಾಗಿವೆ. ನವಾರದೊ[ಳಗೆ] ನಿಮ್ಮ ಹುಡುಗನಿಗೆ— ಅಂದರೆ ನಿಮ್ಮ ತಮ್ಮನಿಗೆ ನನ್ನ ಹು[ಡುಗಿ] ಶಶಿರೇಖೆಯನ್ನು ಕೊಡುತ್ತೇನೆಂದು ಹೇಳಲು ಬಂದೆ. ಹುಡು[ಗಿ]ಯನ್ನು ಹುಡುಗ ನೋಡಿದ್ದಾನೆ....ನಮ್ಮ ಕಡೆ ಎಲ್ಲರಿ[ಗೂ] ಇಷ್ಟವೆ. ಇನ್ನು ನೀವಿದ್ದೀರಿ."

* * *

ಮತ್ತೆ ಕೆಲವು ದಿನಗಳಲ್ಲಿ ಶೇಖರನ ಮದುವೆ ಆಗಿ ಹೋಯಿ[ತು]. ಆಶೀರ್ವದಿಸುತ್ತಿದ್ದ ಅತ್ತಿಗೆಯೊಡನೆ "ನೋಡಿದೆಯಾ ಅತ್ತಿ[ಗೆ], ಅಂದು ದುಡುಕಿದೆಯೆಂದೆ. ಆ ದುಡುಕು ಇಲ್ಲದಿದ್ದರೆ..." ಎಂದ ಶೇಖರ.

"ಶಶಿ ನಮ್ಮವಳಾಗುತ್ತಿದ್ದಿಲ್ಲ" ಎಂದು ಪೂರ್ತಿ ಮಾಡಿ[ದಳು] ಅತ್ತಿಗೆ.

ZANDU
PROTOCASEN
Whole Casein Hydrolysate
PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH
Biological Laboratory
The Zandu Pharmaceutical Works, Ltd.
BOMBAY 14.
Sole Agents:—
M/s. Pranlal and Sons
Chemists, Druggists
Station Road. HUBLI
(H. O. Bangalore City)

ಮನೆಗೆ ನಡೆದಿರುವಾಗ:

(ಒಂದು ಅನುಭವಚಿತ್ರಣ)

ಶ್ರೀ. ಎಚ್. ಜಿ. ಉಪಾಧ್ಯಾಯ, ಎಂ.ಎ. ಹೈದರಾಬಾದ

卐

ದಿನದ ಗೆಯ್ಮೆಯ ಮುಗಿಸಿ ಮನೆಗೆ ಹೊರಟಿರುವಾಗ,
ಜೊತೆಯ ಗೆಳೆಯರ ಕೂಡ ಮಾತು ಬೆಳೆದಿರಲು:—
ಅವರಿವರ ಕಾವ್ಯಕೃತಿಯರ್ಥವನ್ನು ಮಥಿಸುತ್ತ
ನವತತ್ತ್ವರತ್ನಗಳ ಹುಡುಕುತ್ತಲಿರಲು.

ದಿನದಂತೆ ಬಂದು ನಿಂತಿತ್ತು ಒಯ್ಯುವ ಬಸ್ಸು
ದಿನದಂತೆಯೇ ಅದನು ಹತ್ತಲೆಳಸಿ—
ಹಿಡಿದು ಕಂಬವ ನಾನು ಒಳಗೆ ನುಗ್ಗುವ ಮುನ್ನ
ಬಸ್ಸು ಓಡಿತು ಪೂರ್ಣಗತಿಯ ಬಳಸಿ. ೨

ಹಿಡಿದ ಹಿಡಿತವು ಸಡಿಲಿ, ಒಡನೆ ಜಾರಿತು ಕಾಲು;
ತಡೆಯುದಲೆ ತೂಕವನು ಬಿದ್ದೆ ನೆಲಕೆ;
ತ್ರಾಣವದು ಉಡುಗಿತ್ತು, ಪ್ರಾಣ ನಡು-ನಡುಗಿತ್ತು
ಪಯಣವ್ಹೋದಂತಿತ್ತು ಪರಲೋಕಕೆ ! ೩

ಕಣ್ಗೆ ಕತ್ತಲೆಯಡಸಿ ಮಣ್ಣೊಳಗೆ ಹೊರಳುತ್ತ
ಬಣ್ಣಿಸಲು ಬಾರದಿಹ ಯಾತನೆಯೊಳಿರಲು—
ಸುತ್ತೆಲ್ಲ ಶೂನ್ಯತೆಯು ಆವರಿಸಿ ಬಂದಿತ್ತು
ನನ್ನ ಇರವಿನ ಅರಿವು ಅಳಿಯುತಿರಲು. ೪

ಮತ್ತೆ ಅರೆಗಳಿಗೆಯೊಳು ಎಚ್ಚೆತ್ತುಕೊಂಡೆ ನಾ
ಸತ್ತವನು ಎದ್ದಂತೆ ಎದ್ದುನಿಂತೆ;
ನನ್ನ ನೋವಿಗೆ ಮರುಗಿ ಬಳಸಿದ್ದಿತಾಗಲೇ
ಕನಿಕರದ ಮಾತುಗಳ ಜನಪ ಸಂತೆ ! ೫

ಏನೊಂದ ಬಗೆಯುದಲೆ ಮುಂದಾರಿಯನೆ ನಿರುಕಿ
ನಿಟ್ಟಿಸುತ ನಡೆಯಿಸಿದ ಬಸ್ಸಿನವ ಅಂತೆ—
ತನ್ನ ಬೆಂಬದಿಯೊಳೇ ನಡೆದ ಕೋಲಾಹಲವ
ಕೇಳದೆಯೆ ಹೊರಟಿದ್ದ ಕಿವುಡನಂತೆ ! ೬

ಅಂದೆಯೇ ತೊಟ್ಟ ಹೊಸ ಉಣ್ಣೆಯುಡುಗೆಯು ಮಾಸಿ
ಅಂದಗೆಟ್ಟಿತು ಕೆಂಬಿ ಧೂಳಿಯಿಂದೆ;
ಮುಂದೆ ಬಂದನು ಒಬ್ಬ ಜೊತೆಯ ಮಿತ್ರನು ನೊಂದು
ಒರಸಲಾ ಧೂಳಿಯನು ಕೈಗಳಿಂದೆ ! ೭

ನಸುನಗುತ ನಾ ನುಡಿದೆ : 'ಏಕೆ ಶ್ರಮ? ಬಿಡುಬಿಡ್ರಿ,
ಅಗಸನಿಗೆ ಕೊಡಲೆಲ್ಲ ಸ್ವಚ್ಛವಹುದು !
ನೀವು ತೋರಿದ ಕರುಣೆ, ನಿಮ್ಮ ಮರುಕದ ಮಾತು
ಮರಸಿಹವು ನನಗಾದ ನೋವನಿಂದು ! " ೮

ಅನಿತರೊಳೆ ಮತ್ತೊರ್ವ ಗೆಳೆಯ ಬಳಿಗೈತಂದು
ನುಡಿದ ನನ್ನ ವಿಕಾರ ನೋಡಿ ನೊಂದು :
" ಪೆಟ್ಟು ಬಲವಾಯಿತೆ ? ಗಾಯವಾಯಿತ್ತೇ ಏನು ?
ಡ್ರೈವರಿನಿಗಿರುವುದೇ ಹೃದಯವೆಂಬುದದು ? " ೯

ಗಂಭೀರ ಮುಖಮುದ್ರೆಯಿಂದೆ ನುಡಿದೆನು ನಾನು :
' ಪೆಟ್ಟೇನೊ ತಗುಲಿಹುದು ಬಲುದೊಡ್ಡದು !
ಆದರೂ ಈ ನನ್ನ ದೇಹಸಾಮರ್ಥ್ಯವು ಇಂದು
ಗಾಯವಾಗದ ಹಾಗೆ ನೋಡಿಕೊಂಡಿಹುದು ! ' ೧೦

ಜನುಮಕೆಳೆದಾ ದೇವನೊಲುಮೆಯೊಂದಿರುತಿರಲು
ಹೆತ್ತ ತಾಯಿಯು ಹೊಟ್ಟೆ ತಣ್ಣಗಿರಲು-
ಮೃತ್ಯುರಾಕ್ಷಸ ಎನಿತು ರೋಷ ತೋರಿದರೇನು ?
ಆದರಿಂದ ನಮಗಿಲ್ಲ ಭೀತಿಯುರುಲು ! ೧೧

ಬಾಳ ಬಲ್‌ದಾರಿಯಲಿ ನಾವೆಲ್ಲ ಪಯಣಿಗರು,
ಕಾಲವೆಂಬುದು ಕ್ರೂರಚಾಲಕನು ಅಹುದು;
ಎನಿತೆನಿತು ಕುತ್ತಗಳು ಬರಲಿಹವೊ ಬದುಕಿನಲಿ !
ಎದೆಗೆಡದೆ ಸಹಿಸುವವ ಧೀರನಹುದು ! ೧೨

ಅದಕೆಂದೆ ಬೇಡುವೆ ಜಗತ್ಪಾಲಕನೆ ನಿನ್ನ
ಅಡಿಯೊಳೊಂದೇ ಒಂದು ವರವನಿಂದು;
ತನುವನುಕ್ಕಿನ ಮಾಡು, ಮನವನುಕ್ಕಿನಮಾಡು,
ಕಾಲರಕ್ಕಸನೇಟು ಸಹಿಸಲೆಂದು !

ಸಂತೋಷವೆಂದರೇನು ?

ಬರೆದವರು : ಶ್ರೀ. ಎ. ಎಸ್. ರಾಮಕೃಷ್ಣ, ಮಣಿಪಾಲ

卐

ಸಂತೋಷದಿಂದ ಇರಬೇಕೆಂದು ಪ್ರತಿಯೊಂದು ಜೀವಿ ಬಯಸುತ್ತದೆ. ಆದರೆ ಸಂತೋಷದ ನೆಲೆ-ಬೆಲೆಗಳನ್ನು ಅರಿತುಕೊಂಡು ನಡೆಯುವವರು ಅಪೂರ್ವ. ಜೀವನದಲ್ಲಿ ತೃಪ್ತಿಯೇ ಸಂತೋಷದ ಮೂಲ; ಅತೃಪ್ತಿಯೇ ಅಸಂತೋಷದ ಮೂಲ !

★

'ನಾವು ಬಯಸಿದುದನ್ನು ಪಡೆದಾದ ಮೇಲೆ ಉಂಟಾಗುವ ಭಾವವೇ ಸಂತೋಷ;' ಇಷ್ಟಾಪೂರ್ತಿಯಾದಾಗ ಸಂತೋಷ-ಎಂದು ಹೇಳುವುದುಂಟು. ಹಾಗೇ ಬಯಸಿದುದನ್ನು ಪಡೆಯಲು ನಡೆಸುವ ಸಾಧನೆಯು ಕೂಡ ಸಂತೋಷಜನಕವಾಗಬಹುದು. ಮೃತ್ಯುವನ್ನಪ್ಪುತಿರುವ ದೇಶಭಕ್ತನು, ತಾನು ನಾಡಿನ ಸ್ವಾತಂತ್ರ್ಯಕ್ಕಾಗಿ ಪ್ರಾಣತ್ಯಾಗ ಮಾಡುತ್ತಿರುವುದನ್ನು ನೆನೆದು ಆನಂದವನ್ನನುಭವಿಸುತ್ತಾನೆ. ಮತಕ್ಕಾಗಿ ಬಲಿಯಾಗುತ್ತಿರುವವನು ಎಂತಹ ಚಿತ್ರಹಿಂಸೆಗೊಳಗಾದರೂ ಅದೇ ಅವನಿಗೆ ಹರ್ಷದಾಯಕವಾಗುತ್ತದೆ. ಇನ್ನು ಸತ್ಯವನ್ನರಸುವುದರಲ್ಲಿ ತಾತ್ವಿಕನು ಆನಂದವನ್ನನುಭವಿಸಿದರೆ, ಕಲಾಭಿಮಾನಿಗೆ ಸೌಂದರ್ಯದರ್ಶನದಿಂದ ಉತ್ಕಟ ಆನಂದವು ಲಭಿಸಬಹುದು. ಹಾಗೆ ನೋಡಿದರೆ ಪ್ರತಿಯೊಂದು ಜೀವಿಯೂ ತನ್ನದೆ ಮಾರ್ಗದಲ್ಲಿ ಸಂತೋಷವನ್ನರಸುತ್ತಲೇ ಇರುತ್ತದೆ. "ಎಲ್ಲ ರಾಜಕೀಯ ಘರ್ಷಣೆಗಳು, ಮತ ಸಂಪ್ರದಾಯಗಳು, ಕಾವ್ಯ ನಿರ್ಮಾಣ, ವೈಜ್ಞಾನಿಕ ಕುತೂಹಲಗಳ ಹಿನ್ನೆಲೆಯಲ್ಲಿ ಸಂತೋಷವೆಂದರೇನೆಂಬ ಪ್ರಶ್ನೆಯನ್ನು ಬಗೆಹರಿಸುವ ಪ್ರಶ್ನೆಯನ್ನು ಬಗೆಹರಿಸುವ ಪ್ರಯತ್ನವು ಕಾಣಬರುವುದು.

ಸಮಾಜದಲ್ಲಿನ ನಾನಾ ಮಟ್ಟದ ಜನರು ಸಂತೋಷವನ್ನು ಕಾಣುವ ಬಗೆಯನ್ನು ಕುರಿತು ವಿವೇಚಿಸೋಣ : 'ಸಂತೋಷವೆಂಬುದು ಒಂದು ಮಾನಸಿಕ ಸ್ಥಿತಿ' ಎನ್ನುತ್ತಾರೆ. ಆದರೆ ದೈಹಿಕ ಕೊರತೆಗಳ ನಿವಾರಣೆಯಾಗದೆ ಮಾನಸಿಕ ಸಂತೋಷವು ಉಂಟಾಗುವುದು ಸಾಧ್ಯವೇ—ಎಂಬ ಪ್ರಶ್ನೆಯೊಂದಿದೆ. ಶರೀರ ಅನಿವಾರ್ಯಗಳಾದ ಅವಶ್ಯಕತೆಗಳೇ ಲಭಿಸದಿರುವಾಗ, ಯಾವ ಉದಾತ್ತ ಯೋಚನೆಯೂ ಮೂಢಲಾರದೆನಿಸುತ್ತದೆ.

ಹೇರಳವಾಗಿ ಉಳ್ಳವನಿಗೂ ಸುಖವಿಲ್ಲದಿರಬಹುದು; ಆತನು **ಸಂತೋಷವನ್ನು** ಕಾಣದೆ ಹೋಗಬಹುದು. ಆದರೆ, ಹೊಟ್ಟೆಗಿಲ್ಲದವನು ಅಸುಖಿಯಾಗಲೇಬೇಕು—ಆತನಿಗೆ **ಸಂತೋಷವು** ಬೇಡವಾದುದಕ್ಕಾಗಿಯಲ್ಲ; ಅದು ದೊರೆಯಲಾರದುದಕ್ಕಾಗಿ. ದೈಹಿಕ ಸುಖಸಾಧನಗಳಿದ್ದ ಮಾತ್ರಕ್ಕೆ ಆನಂದವು ಲಭಿಸಿದಂತಾಗಲಿಲ್ಲವೆಂಬುದು ನಿಜವಾದರೂ, ತೀವ್ರವಾದ ದೈಹಿಕ ವೇದನೆಗಳ ನಿವಾರಣೆಯಾಗದೆ ಸಾಮಾನ್ಯರಿಗೆ ಸಂತೋಷ ಲಭಿಸದು.

ಬಡತನದ ದವಡೆಯಲ್ಲಿ ಸಿಕ್ಕಿ ತತ್ತರಿಸಿಹೋಗಿರುವವನು ದೈಹಿಕ ಅವಶ್ಯಕತೆಗಳಿಗಿಂತ ಹೆಚ್ಚಿನ ವಿಚಾರಗಳಿಗೆ ಗಮನಕೊಡದಿರುವುದು ಸಹಜ. ಹಸಿವಿನ ಕೌನೆರಳು ಕಾಡುತ್ತಿರುವಾಗ ಹೊಟ್ಟೆಯನ್ನು ತಣಿಸುವ ಹಂಬಲಕ್ಕೇ ಪ್ರಾಮುಖ್ಯತೆಯಲ್ಲದೆ, ಉಳಿದುದೆಲ್ಲ ಹುಸಿಯೆನಿಸಲಾರದೆ ? ಹಸಿದವರಿಗೆ ದೇವರು ಕೂಡ ಅನ್ನದ ರೂಪದಲ್ಲಿ ಕಾಣಿಸುತ್ತಾನೆಂದು ಗಾಂಧೀಜಿಯವರು ಹೇಳುತ್ತಿದ್ದುದುಂಟು. ಎಂದಮೇಲೆ ಇಂಥವರಿಗೆ **ಸಂತೋಷ**-ವೆಂದರೇನು....ಎಂದು ಕೇಳುವಲ್ಲಿ ಉತ್ತರವು ಸುಲಭವಾಗಿದೆ. ಬದುಕಿನ ಪ್ರಾಮುಖ್ಯ ಅವಶ್ಯಕತೆಗಳು ದೊರೆತುದರಿಂದ ಉಂಟಾಗಬಹುದಾದ ತೃಪ್ತಿಯೇ ಒಂದು ಆನಂದ. ಹಸಿವೆಯಡಗುವುದರಿಂದಲೇ ಅನೇಕರು ಸಂತೋಷವನ್ನು ಕಾಣುತ್ತಾರೆ. ಈ ಬಗೆಯ ಸಂತೋಷವಾದರೂ ಲಭಿಸದಿರುವ ವ್ಯಕ್ತಿಗಳು ಸಮಾಜದಲ್ಲಿ ಹೆಚ್ಚುತ್ತ ಬಂದಿದ್ದಾದರೆ ಅಂಥ ಪರಿಸ್ಥಿತಿಯು ಸಮಾಜದ ಎಲ್ಲರ ಸಂತೋಷಕ್ಕೂ ಮಾರಕವಾಗಬಹುದು. ಹಸಿವೆಯ ಜ್ವಾಲೆಯು ಸಂಪೂರ್ಣವಾಗಿ ಅಡಗಿರುವ ಯಾವುದೇ ಸಮಾಜದಲ್ಲಿ ಸಂತೋಷವಿರುವುದಾದರೆ, ಅದು ಕ್ಷಣಿಕವಾದುದೆನ್ನಬೇಕು. ಆದ್ದರಿಂದಲೇ ಸರಕಾರವೂ ಸಮಾಜವೂ ಈ ವಿಷಯದಲ್ಲಿ ತುಂಬ ಜಾಗರೂಕತೆ ವಹಿಸುತ್ತಾರೆ.

[ಕೆಲವೆಡೆ ಪ್ರೊ. Humayun Kabir ಅವರ ಲೇಖನಗಳ ನೆರವನ್ನು ಪಡೆಯಲಾಗಿದೆ.]

ಆರ್ಥಿಕ ಸ್ಥಿತಿಯಲ್ಲಿ ತೀರ ಕೆಳಮಟ್ಟದವರೆನ್ನಿಸಿಕೊಳ್ಳುವವರು ಸಂತೋಷವನ್ನು ಕಾಣುವ ರೀತಿಯನ್ನು ಕುರಿತು ಸ್ಥೂಲವಾಗಿ ವಿವೇಚಿಸಿದ್ದಾಯಿತು. ಇನ್ನು ಅವರಿಗಿಂತ ಮೇಲ್ಪಟ್ಟದವರೆನ್ನಿಸಿಕೊಳ್ಳುವ ಮಧ್ಯಮ ವರ್ಗದ ಜನರ ವಿಚಾರ ಪರಿಶೀಲಿಸಬೇಕು. ಅವರ ಕುರಿತು ಸಂತೋಷವೆಂದರೇನೆಂದು ಸುಲಭವಾಗಿ ನಿರ್ದೇಶಿಸಲಾಗುವುದಿಲ್ಲ.

ಮಧ್ಯಮ ವರ್ಗದವರಿಗೆ ಆಶೆ ಆಕಾಂಕ್ಷೆ ಆದರ್ಶಗಳು ಬೇಕಾದಂತೆ ಇರುತ್ತವೆ. ರಾಜಕೀಯ, ಮತ, ಕಲೆ, ತತ್ತ್ವಗಳಲ್ಲಿ ಒಂದು ರೀತಿಯ ಮೃದುವಾದ ಆಸಕ್ತಿಯಿರುತ್ತದೆ. ಇವರಿಗೆ ಆರ್ಥಿಕ ಅಡಚಣೆಗಳು ಇಲ್ಲವೆಂದಲ್ಲ. ಆದರೆ ಅನ್ನವೇನೋ ಇದೆ. ದಾರಿದ್ರ್ಯ ಇವರನ್ನು ಕಾಡುತ್ತಿರುವುದಿಲ್ಲ. ಈ ಮಾತು ಸದ್ಯದ ಪರಿಸ್ಥಿತಿಯಲ್ಲಿ ಹುಸಿಯಾಗಿ ಕಾಣಬಹುದು. ಮಧ್ಯಮವರ್ಗದವರೆನ್ನಿಸಿಕೊಳ್ಳುವ ಎಷ್ಟೋ ಮಂದಿ ಬಡತನದಲ್ಲಿ ಮುಳುಗಿರುವುದನ್ನು ಕಾಣಬಹುದು. ಆದರೆ ಒಂದು ಮಾತು: ಇಂಥವರು ದುರ್ಗತಿಯಲ್ಲಿದ್ದರೂ ಕೂಡ ತಾವು ಕೆಳಮಟ್ಟದವರೆನ್ನಿಸಿಕೊಳ್ಳಲು ಇಷ್ಟಪಡಲಾರರು. ಮತ್ತೆಯೂ ಮಧ್ಯಮವರ್ಗದವರೆಂದು ಕರೆಯಿಸಿಕೊಳ್ಳಲು ಇವರಿಗೆ ಹಂಬಲ. ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಮುಡಿಸಿಯೇ ತೀರಬೇಕೆಂಬ ಛಲವು ಮಧ್ಯಮವರ್ಗದವರಲ್ಲಿರುವುದು ಸಾಮಾನ್ಯ. ದೈಹಿಕ ಅವಶ್ಯಕತೆಗಳ ಪೂರೈಕೆಯಾದ ಮಾತ್ರಕ್ಕೆ ಇವರಿಗೆ ಆನಂದ ದೊರೆಯದು. ಹಸಿವೆಯ ಜ್ವಾಲೆಗೆ ಈಡಾಗದಿದ್ದಾಗ ಕೂಡ ಎಷ್ಟೋ ಸುಖಸಾಧನಗಳ ಅಭಾವವಿದ್ದಂತೆ ಎನಿಸುವುದು.

ಮಧ್ಯಮ ವರ್ಗದವರು ಹಿಂದಿರುಗಿ ನೋಡುವುದಕ್ಕಿಂತ, ಸಮಾಜವೆಂಬ ಏಣಿಯ ಮೇಲಿನ ಮೆಟ್ಟಲುಗಳ ಕಡೆಗೇ ಲಕ್ಷ್ಯಗೊಡುವುದು ಹೆಚ್ಚು. ಈ ಮನೋಭಾವವು ಅವರ ಪ್ರಗತಿಗೆ ಸಾಧನವಾಗಬಲ್ಲುದಾದರೂ, ಅದರಿಂದ ಅವರಿಗೆ ಸಂತೋಷವು ಪೂರ್ಣವಾಗಿ ಲಭಿಸಲಾರದು. ತೃಪ್ತಿಯಿದ್ದರೆ ತಾನೆ ಸಂತೋಷ ಲಭಿಸುವುದು? ಮೇಲ್ಪಟ್ಟದವರ ಜೀವನಕ್ರಮದ ಅರಿವು ಇವರಿಗೆ ಉಂಟಾಗಿರುವುದರಿಂದ, ತಮ್ಮ ಬಾಳಿನ ಕೊರತೆಗಳ ಕುರಿತಾಗಿ ಸದಾ ಜಾಗೃತರಿರುವುದರಿಂದ, ಮಧ್ಯಮ ವರ್ಗದವರಲ್ಲಿ ಅನೇಕರಿಗೆ ಅಸ್ಖಲಿತ ಆನಂದಾನುಭವ ದೊರೆಯದೆ ಹೋಗಲೂಬಹುದು.

ಕೆಳಮಧ್ಯಮವರ್ಗದವರೆನ್ನಿಸಿಕೊಳ್ಳುವವರು ಭೌತಿಕಸೌಖ್ಯದ ಮಟ್ಟವನ್ನುಳಿಸಿಕೊಳ್ಳುವುದಕ್ಕಾಗಿ ಭದ್ರತೆಯ ಕುರಿತು ಹಾತೊರೆಯುತ್ತಾರೆ. ಆದ್ದರಿಂದ ನೌಕರಿಯಲ್ಲಿ ಭದ್ರತೆ, ಕೌಟುಂಬಿಕ ಜೀವನದಲ್ಲಿ ಭದ್ರತೆ, ಸಮಾಜದಲ್ಲಿ ಭದ್ರತೆ–ಹೀಗೆ ಭದ್ರತೆಯುಂಟಾದ ಸ್ಥಿತಿಯೇ ಮಧ್ಯಮವರ್ಗದವರಿಗೆ ಸಂತೋಷದಾಯಕವಾಗಬಹುದು. ಜೀವನದಲ್ಲಿ ಉತ್ಕರ್ಷಹೊಂದುವ ಹಂಬಲು ಮಧ್ಯಮವರ್ಗದವರನ್ನು ಸದಾ ಕಾಡುತ್ತಿರುವುದುಂಟು. ಆದರೆ ಮೇಗೆಯನ್ನು ಪಡೆಯಹೋಗಿ ತನ್ನಲ್ಲಿರುವುದನ್ನು ಕೂಡ ಎಲ್ಲಿ ಕಳೆದುಕೊಳ್ಳಬೇಕಾಗುವುದೋ ಎಂಬ ಅಂಜಿಕೆಯೊಂದು ಇವರಿಗೆ ತಡೆಯಾಗುವುದು. ಹೇರಳವಾಗಿ ಉಳ್ಳವರು ಏನನ್ನೂ ಪಣವಿಡಲು ಸಿದ್ಧರಿರಬಹುದು; ಆದರೆ ಇರುವುದೇ ಅಲ್ಪವಾದರೆ, ಇರುವ ಭಾಗ್ಯವೇ ಸಾಕೆಂದು ಅದಕ್ಕೇ ಅಂಟಿಕೊಂಡಾರು. ಆದುದರಿಂದ ಮಧ್ಯಮವರ್ಗದವರಿಗೆ ಬದಲಾವಣೆಯೆಂದರೆ ಅಂಜಿಕೆಯಿದೆ. ಇದ್ದುದರಲ್ಲೇ ಸಂತೋಷವನ್ನು ಕಾಣುವುದು ಅವರಿಗೆ ಲೇಸೆನಿಸುತ್ತದೆ.

ಮಧ್ಯಮವರ್ಗದವರಿಗೆ ಸಂತೋಷದ ಇನ್ನೊಂದು ಉಗಮಸ್ಥಾನವಿದೆ. ಅದು ಅವರ ಸಾಂಸಾರಿಕಜೀವನ. ದರಿದ್ರನಿಗೆ ಸಂಸಾರವೆಂಬುದು ಕೊರಳಿಗೆ ಕಟ್ಟಿದ ಕೊರಡಿನಂತಾಗಬಹುದು. ಸಂಸಾರದಿಂದ ಅವನ ಕಷ್ಟಗಳು ಇಮ್ಮಡಿಯಾಗುತ್ತವೆ, ತನಗೆ ಪ್ರಿಯರಾದವರನ್ನು ಸೌಖ್ಯದಲ್ಲಿಡಲು ಅಶಕ್ತನಾದೆನಲ್ಲ –ಎಂದು ಪರಿತಪಿಸುವವನಿಗೆ ಸಂತೋಷವೆಲ್ಲಿಂದ ಬರಬೇಕು? ಆದರೆ ಜೀವನಾಧಾರದ ಸಮಸ್ಯೆಯನ್ನು ಬಗೆಹರಿಸಿಕೊಂಡವನಿಗೆ ಸಂಸಾರವು ಅನಂತಸುಖವನ್ನು ನೀಡಬಲ್ಲುದು. ಪತ್ನೀ-ಪುತ್ರರ ಅಕ್ಕರೆಯೇ ಒಂದು ಆನಂದ. ಮನಃಪೂರ್ವಕವಾಗಿ ಪ್ರೀತಿಯನ್ನು ನೀಡಿ ಪಡೆಯುವುದಕ್ಕಿಂತ ಹೆಚ್ಚಿನ ಸಂತೋಷ ಬೇರೇನಿದೆ? ಹೊರಗಣ ಜಗತ್ತಿನಲ್ಲಿ ತನ್ನ ಅಪ್ರಾಮುಖ್ಯತೆಯನ್ನು ಅರಿತಾತನಿಗೆ ತನ್ನ ಸಂಸಾರದ ಆವರಣದೊಳಗೆ ಒಂದು ಬಗೆಯ ಗಣ್ಯತೆ ದೊರೆತ ಅನುಭವವುಂಟಾಗಿ ಅದರಿಂದ ಸಂತೋಷವೆನಿಸುತ್ತದೆ. ಹೊರಗಿನ ಜಗತ್ತಿನಲ್ಲಿ ಆತ ಸಾಗರದಲ್ಲೊಂದು ಹನಿಯಿದ್ದಂತೆ. ಅಲ್ಲಿ "ಆತನು ಸಮಾಜದ ಉತ್ಪಾದನೆಯ ಹಾಗೂ ಹಂಚುವಿಕೆಯ ಕಾರ್ಯಕ್ಕೆ ಸಂಬಂಧಿಸಿದ ಒಂದು ಅಂಶಮಾತ್ರವೋ" ಎನ್ನುವ ಮಟ್ಟಿಗೆ 'ಅಗಣ್ಯವ್ಯಕ್ತಿಯಾಗಿರುತ್ತಾನೆ' ಸಂಸಾರದೊಳಗೆ ಹಾಗಲ್ಲ. ಅಲ್ಲಿ ಅವನೊಬ್ಬ ಗಂಡ–ತಂದೆ–ಅಣ್ಣ–ತಮ್ಮ ಅಥವಾ ಮಗ ಎನ್ನಿಸಿಕೊಂಡಿರುತ್ತಾನೆ. ಅಲ್ಲಿ ಅವನ ಆತ್ಮಗೌರವವು ಸುಲಭವಾಗಿ ತಲೆಯೆತ್ತಿ ನಿಲ್ಲುತ್ತದೆ. ಸಂಸಾರದಲ್ಲಿನ ಆಸೆ, ಭರವಸೆ, ಕನಸುಗಳು ಅವನ ಬದುಕನ್ನು ಹಗುರಾಗಿಸುತ್ತವೆ. ತನ್ನ ಮಕ್ಕಳ ಭವಿಷ್ಯಕ್ಕಾಗಿ ವ್ಯವಸ್ಥೆ ಮಾಡಲುತೊಡಗಿ ವ್ಯಕ್ತಿಯು ಜೀವನದಲ್ಲಿ ತನಗುಂಟಾದ ಕಟುವಾದ ಸೋಲುಗಳನ್ನು ಮರೆಯಲು ಯತ್ನಿಸುತ್ತಾನೆ. ತನ್ನಲ್ಲಿದ್ದ ಬಯಕೆಗಳನ್ನು ತನ್ನ ಮಕ್ಕಳ ಮೂಲಕ ತೀರಿಸಿಕೊಂಡು ಸಾಫಲ್ಯಹೊಂದಲು ಯತ್ನಿಸುತ್ತಾನೆ. ತನ್ನ ಮನೋರಥಗಳೆಲ್ಲ ಕೂಡಲೆ ಕೈಗೂಡದಿದ್ದರೂ ಅವುಗಳೆಲ್ಲ ಈಡೇರುವ ಆಶೆಯೊಂದಿರುವುದರಿಂದ ಆತ ಸಂತೋಷವಾಗಿರಲು ಸಾಧ್ಯವಿದೆ.

ಇದು ಸಾಂಸಾರಿಕ ಜೀವನದ ಮಾತಾಯಿತು. ಇನ್ನು ಸಮಾಜದಲ್ಲಿ ಸಂತೋಷವನ್ನು ಕಾಣುವ ಬಗೆಯನ್ನು ವಿವೇಚಿಸಬಹುದು. ಸಾಹಚರ್ಯವೆಂಬುದು ಮಾನವನ ಸಹಜ ಪ್ರವೃತ್ತಿ. ತಮ್ಮ ಸಂತೋಷದಲ್ಲಿಯೂ ದುಃಖದಲ್ಲಿಯೂ ಇತರರು ಸಹಭಾಗಿಗಳಾಗಬೇಕೆಂದು ಬಯಸುವುದು ಸಾಮಾನ್ಯ. ತನ್ನಂತೆಯೇ ಆಶೆ-ಆದರ್ಶಗಳಿರುವ ಇತರರ ಸಾಹಚರ್ಯವನ್ನು ಬಯಸಿ, ತನ್ನ ಆಸಕ್ತಿ

ಯನ್ನು ಸಂಸಾರವೆಂಬ ಸಂಕುಚಿತ ವರ್ತುಲದಲ್ಲಿ ಮಾತ್ರ ಇರಗೊಡದೆ ಹೊರಹೊಮ್ಮಿ ಬೆಳೆಯುವಂತೆ ಮಾಡಿದಾಗ ವ್ಯಕ್ತಿಯು ಸಂತೋಷವು ಬೆಳೆಯಬಲ್ಲುದು. ಸಹಕಾರಭಾವದಿಂದ ಸಮಾಜದಲ್ಲಿ ಕಾರ್ಯ ಪ್ರವೃತ್ತರಾಗಿ, ಮಧ್ಯಮವರ್ಗದವರು ಸಂತೋಷವನ್ನು ಪಡೆಯುವುದು ಸುಲಭಸಾಧ್ಯ.

ಇನ್ನು, ಸಮಾಜದಲ್ಲಿ ಮೇಲ್ಪಟ್ಟವರೆನ್ನಿಸಿಕೊಳ್ಳುವ ಶ್ರೀಮಂತರ ಕುರಿತು ಎರಡು ಮಾತು. ಆರ್ಥಿಕ ಸಂಪತ್ತು ವಿಪುಲವಾಗಿದ್ದು, ಭೋಗಸಾಮಗ್ರಿಗಳು ಹೇರಳವಾಗಿದ್ದು, ಅಧಿಕಾರ ದರ್ಪಗಳಿರುವವರನ್ನೆಲ್ಲ ಮೇಲ್ಪಟ್ಟವರೆಂದು ಪರಿಗಣಿಸುವುದು ರೂಢಿಯಾಗಿ ಹೋಗಿದೆ. ಹೀಗೆ ಗುರುತಿಸುವಾಗ ಮಾನವನಲ್ಲಿರಬೇಕಾದ ಇತರ ಯೋಗ್ಯತೆಗಳನ್ನು ಗಮನದಲ್ಲಿಟ್ಟುಕೊಳ್ಳುವುದು ಕಡಮೆ. ಆ ಮಾತಿರಲಿ.

ಬಯಸಿದ ಸುಖಸಾಮಗ್ರಿಗಳು ದೊರೆಯದಿರುವಾಗ ಅಸಮಾಧಾನಪಡುವರಾದರೂ, ಅವುಗಳು ತುಂಬಿದ್ದ ಮಾತ್ರಕ್ಕೆ ಶ್ರೀಮಂತರೆಲ್ಲರೂ ಸುಖಿಗಳಾಗಲಾರರು. ಸಂತೋಷವೆಂದರೆ ಒಂದು ಮಾನಸಿಕ ಸ್ಥಿತಿಯೆಂದು ಹೇಳಿದುದನ್ನು ಇಲ್ಲಿ ಗಮನಿಸಬೇಕಾಗುತ್ತದೆ. ಅತೃಪ್ತಿ-ಮತ್ಸರಗಳೆಂಬ ಕಾಟಗಳಿಂದ ಮನಸ್ಸು ಪಾರಾಗಬೇಕಾದರೆ, ಸುಖಸಾಮಗ್ರಿಗಳೂ ಅಪಾರ ಧನಸಂಗ್ರಹವೂ ಸಹಾಯಕವಾಗಲಾರವು.

ಒಂದು ರೀತಿಯಿಂದ ನೋಡಿದರೆ ಶ್ರೀಮಂತರಾಗಲೀ ಮಧ್ಯಮವರ್ಗದವರಾಗಲೀ ತಮ್ಮ ಸಾಂಸಾರಿಕ ಹಾಗೂ ಸಾಮಾಜಿಕ ಜೀವನದಲ್ಲಿ ಸಂತೋಷವನ್ನು ಕಾಣುವ ಬಗೆ ಬಹಳ ಮಟ್ಟಿಗೆ ಒಂದೇ ಎಂದು ಹೇಳಬೇಕು. ಮೇಲ್ಪಟ್ಟವರೆನಿಸಿಕೊಳ್ಳುವವರಿಗೂ ಭದ್ರತೆಯ ಹಂಬಲವಿದ್ದೇ ಇರುತ್ತದೆ. ಅಷ್ಟೇ ಅಲ್ಲ; ಈ ಕ್ರಾಂತಿಕಾರಿ ಯುಗದಲ್ಲಿ ಅದು ಭೀತಿಯೆನಿಸಿಕೊಳ್ಳುವಂತಾಗಿದೆ. ಪ್ರಾಮಾಣಿಕ ತ್ಯಾಗಬುದ್ಧಿಯುಳ್ಳ ಶ್ರೀಮಂತರು, ಇತರರ ಸಂತೋಷವನ್ನು ವೃದ್ಧಿಗೊಳಿಸಿ ತಾವೂ ಸುಖಿಗಳಾಗುತ್ತಾರೆ. ಆದರೆ ಆ 'ಇತರರು' ತಮ್ಮ ವರ್ಗದವರೇ ಆಗಿರಬೇಕೆಂಬ ಚಿತ್ತವೃತ್ತಿ ಮಾತ್ರ ಅಪಾಯಕರವಾದುದು. ಉಳಿದೆಲ್ಲ ವರ್ಗದವರೂ ತಕ್ಕಷ್ಟಾದರೂ ಸಂತೋಷವಾಗಿದ್ದರೆ ಮಾತ್ರ ಶ್ರೀಮಂತರ ಸಂತೋಷ ಚಿರವಾಗಬಲ್ಲುದು. ಮಾತ್ರವಲ್ಲದೆ "In an ugly and unhappy world the richest man can purchase nothing but ugliness and unhappiness" ಎಂದು ಬರ್ನಾರ್ಡ್ ಷಾ ಹೇಳಿರುವುದನ್ನು ಕಡೆಗಣಿಸುವಂತಿಲ್ಲ.

ಈ ತನಕ ಸಂತೋಷದ ಕುರಿತು ವಿವೇಚಿಸುವಾಗ ಸಂತೋಷಕ್ಕೂ ಸುಖಾನುಭವಕ್ಕೂ ಒಂದೇ ಅರ್ಥವನ್ನು ಕಲ್ಪಿಸಿದ್ದಾಗಿದೆ. ಆದರೆ ತಾತ್ತ್ವಿಕರು ಇದನ್ನೊಪ್ಪಲಾರರೋ ಏನೋ! ಸಂತೋಷವುಂಟಾದ ಮಾತ್ರಕ್ಕೆ ಅದನ್ನು ಸೌಖ್ಯವೆನ್ನುವಂತಿಲ್ಲ ಎನ್ನುತ್ತಾರೆ. ಹಾಗಾದರೆ ಇಲ್ಲಿ ನಾವು ವಿವೇಚಿಸಿರುವುದು ಸೌಖ್ಯವನ್ನುಂಟುಮಾಡುವ ಸಂತೋಷದ ಕುರಿತಾಗಿ ಎಂದು ಭಾವಿಸೋಣ. ಹಾಗೆ ಸೌಖ್ಯವನ್ನುಂಟು ಮಾಡದ 'ಸಂತೋಷ'ಕ್ಕೆ ಬೇರೆ ಒಂದು ಪದವನ್ನೇ ಹುಡುಕುವುದೊಳ್ಳೆಯದು. ವಿಷಯಾಸಕ್ತನಿಗೆ ಉಂಟಾಗುವ ಅನುಭವಗಳಲ್ಲಿ ಹುದುಗಿರುವುದು ಮುಂದೆ ಅಸೌಖ್ಯವನ್ನುಂಟು ಮಾಡಬಹುದಾದ ವಿಷಬೀಜಗಳು. ಅವನದು ಸಂತೋಷವಲ್ಲ. ಒಂದು ವೇಳೆ ಅದನ್ನು ಸಂತೋಷವೆಂದು ಕರೆದರೂ, ಅದು ಕೂಡ ಕ್ಷಣಿಕವಾದುದು; ಶಾಶ್ವತವಾದ ಸಂತೋಷವನ್ನು ಅಳಿಸುವಂಥದು.

ಇನ್ನು, ವ್ಯಕ್ತಿಯು ಪಡೆಯುವ ಶಿಕ್ಷಣಕ್ಕೂ ಅವನು ಜೀವನದಲ್ಲಿ ಕಾಣುವ ಸಂತೋಷಕ್ಕೂ ಬಹಳವಾದ ಸಂಬಂಧವಿದೆ. ಭಾರತೀಯ ಶಿಕ್ಷಣ ತಜ್ಞರೊಬ್ಬರು 'ಸಂತೋಷಲಾಭಕ್ಕಾಗಿ ಶಿಕ್ಷಣ' ಎಂಬುದರಕುರಿತು ಚರ್ಚಿಸುತ್ತಾ, ಸುಶಿಕ್ಷಿತರಿಗಿಂತ ಶಾಲೆ ಕಾಲೇಜುಗಳ ಶಿಕ್ಷಣವಿಲ್ಲದ ಸಾಮಾನ್ಯರೇ ಹೆಚ್ಚು ಸಂತೋಷವಾಗಿರುತ್ತಾರೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದಕ್ಕೆ ಕಾರಣವೇನೆಂದರೆ ಸುಶಿಕ್ಷಿತ ವರ್ಗದವರಲ್ಲಿ ಸಾಮಾನ್ಯವಾಗಿರುವ ಅತೃಪ್ತಿ. ಆ ಅತೃಪ್ತಿ ಸಾಕ್ರಟೀಸನಲ್ಲಿದ್ದ ಅತೃಪ್ತಿಯಲ್ಲ. ಐಹಿಕ ಸುಖ ಎಷ್ಟಿದ್ದರೂ ಸಾಲದೆನ್ನಿಸುವ ಅತೃಪ್ತಿ; ಒಂದಾದರೆ ಇನ್ನೊಂದನ್ನು ಪಡೆಯಬೇಕೆನಿಸುವ ಲಾಲಸೆ; ಇದ್ದುದಕ್ಕಾಗಿ ಸಂತೋಷ ಪಡುವ ಬದಲಿಗೆ ಇಲ್ಲದುದಕ್ಕಾಗಿ ವೇದನೆಪಡುವ ಮನೋಭಾವ. ಈ ದೋಷಗಳು ಎಲ್ಲ ವರ್ಗದವರಲ್ಲೂ ಇರಬಹುದಾದುವು. ಆದರೆ ಸುಶಿಕ್ಷಿತರಲ್ಲಿ ಇವು ಹೆಚ್ಚಾಗಿರಲು ಕಾರಣವಿದೆ. ಶಿಕ್ಷಣವು ಹಲವು ಸುಖವಸ್ತುಗಳ ಪರಿಚಯ ಮಾಡಿಸಿಕೊಟ್ಟಿರುತ್ತದೆ. ಅಶಿಕ್ಷಿತರಿಗೆ ಈ ಅನುಭವ ಅಷ್ಟೊಂದು ಇರುವುದಿಲ್ಲ. ಆದ್ದರಿಂದಲೇ ಅವರು ಸುಲಭವಾಗಿ ಸುಖಿಗಳಾಗುತ್ತಾರೆ. ಆಧುನಿಕ ವಿದ್ಯಾಭ್ಯಾಸವು ಬೇಕೆನ್ನಲು ಕಲಿಸುತ್ತಿದೆ. 'ತೇನ ತ್ಯಕ್ತೇನ ಭುಂಜೀಥಾ' ಎಂಬ ಸೊಲ್ಲಿನ ಬೆಲೆಯನ್ನು ತಿಳಿಸುತ್ತಿಲ್ಲ. 'ಬ್ರಹ್ಮನು ಈ ಬೇಕು ಬೇಕೆನ್ನುವ ಜನವನ್ನು ಏಕಾಗಿ ಸೃಷ್ಟಿಸಿದನೊ'—ಎಂದು ಕೊರಗುವಂತಾಗಿದೆ. ಶಿಕ್ಷಣಕ್ರಮದಲ್ಲಿ ಸುಧಾರಣೆಯುಂಟಾಗಿ, ಇಂದ್ರಿಯಜನ್ಯವಾದ ಸಂತೋಷಕ್ಕಿಂತಲೂ ಬುದ್ಧಿಜನ್ಯವಾದ ಸಂತೋಷವೇ ಶ್ರೇಯಸ್ಕರವಾದುದೆಂದು ತಿಳಿಯುವಂತಾದರೆ, ಎಷ್ಟೋ ಸಾಮಾಜಿಕ ಜಾಡ್ಯಗಳು ಮಾಯವಾದಾವು. ಸಹಜವಾಗಿ ಸಂತೋಷದಿಂದಿರುವ ವ್ಯಕ್ತಿಯು ಹೇಗೆ ನೀರೋಗಿಯೋ, ಎಲ್ಲರೂ ಸಂತೋಷದಿಂದಿರುವಾಗ ಸಮಾಜ ಜೀವನವೂ ನಿರ್ಮಲವಾಗಿರುತ್ತದೆ. ಆ ಸ್ಥಿತಿ ಸಂಭವನೀಯವಲ್ಲವೆನಿಸುವುದೇ ಒಂದು ಅಸಂತೋಷ.

ಆರ್ಥಿಕ ಅನರ್ಥಯೋಜನೆ

ಅರ್ಥಾತ್

ಬುಡಮೇಲಾದ ಬಜೆಟ್ಟು

(ಒಂದು ಜೀವನಚಿತ್ರ) *

ಶ್ರೀ. ಎನ್. ಕೆ. ಕುಲಕರ್ಣಿ, ಎಂ.ಎ., ಬಿ.ಟಿ. ಧಾರವಾಡ

卐

ಪಾತ್ರವರ್ಗ

ಗಂಡ (ಗಜಾನನ) **ಹೆಂಡತಿ** (ಕಮಲಕ್ಕ) **ಮಿತ್ರ** (ಹಯವದನ)

ಸ್ಥಳ

(ಗಜಾನನರಾಯರ ಮನೆಯ ಪಡಸಾಲೆ)

ಶ್ರೀ

ಗಂಡ:— ಅಲ್ಲs, ಹೀಂಗ ತರಗಾಬರಗಾ ಖರ್ಚು ಮಾಡಲಿಕ್ಕೆ ಯಾರು ಹೇಳಿದ್ರು ನಿನಗ ?

ಹೆಂಡತಿ :— ಏನದು, ತರಗಾಬರಗಾ ಖರ್ಚು ಅಂದರೇನದು ? ಮನಿಗೆ ಕಾಯಂ ಸ್ಟೇನಲೆಸ್ಸಿನ ಸಾಮಾನು ಮಾಡಿದರ, ತರಗಾ ಬರಗಾ ಏನದು ?

ಗಂಡ :— ಹೌದs, ರೇಶನ್ನಿನ ರೊಕ್ಕಾ ನೀವೊಯ್ದು ಸ್ಟೇನ-ಲೆಸ್ ಭಾಂಡಿಗೆ ಹಾಕಿದರ, ರೇಶನ್ನಿಗೇನು ಮಾಡಂತೀ ? ಸ್ಟೇನ-ಲೆಸ್ ಭಾಂಡೀ ಅಂದರೇನು ಪಾಂಡವರ ಅಕ್ಷಯಪಾತ್ರಿ ಅಂತ ಮಾಡೀಯೇನು ?

ಹೆಂಡತಿ :— ಸಾಕು, ನೀವು ಇಲ್ಲಿಲ್ಲದ್ದ ಆಡಲಿಕ್ಕೆ ಬರಬ್ಯಾಡ್ರಿ.

ಗಂಡ :— ಹಾಂಗಾದರ ಈಗ ರೇಶನ್‌ಗೆ ಏನು ಮಾಡಂತೀ, ಹೇಳು !

ಹೆಂಡತಿ :— ಏನಿಲ್ಲ. ರೇಶನ್ನಿಗೆ ಬ್ಯಾರೇ ರೊಕ್ಕಾ ಕೊಡ್ರಿ ಅಂತೀನಿ.

ಗಂಡ :— ಅಲ್ಲ, ನೀ ಹೀಂಗ 'ಮಿಸ್ ಅಪ್ರೋಪ್ರಿಯೇಶನ್' ಮಾಡಕೋತ ಹೋದರ, ನಮ್ಮ ಬಜೆಟ್ಟಿನ ಹಣೇಬರಹ ಏನು ಅಂತೀನಿ. ಅಲ್ಲಾ, ಹಣಾ ಯಾವಕ್ಕ ಸ್ಯಾಂಕಶನ್ ಮಾಡಿರತಾವ ಅವಕ್ಕ ಖರ್ಚು ಮಾಡೋದು ಬಿಟ್ಟು, ಒಂದು ಹೆಡ್ಡಿನೊಳಗಿನ ಹಣಾ ಇನ್ನೊಂದು ಹೆಡ್ಡಿಗೆ ಖರ್ಚು ಮಾಡೋದಂದರ ? ನೀ ನನ್ನ ಹಾಂಗ ಸರಕಾರೀ ನೌಕರಿಯೊಳಗಿದ್ದರ, ಹೀಂಗ ಹಣದ ಅಪವ್ಯಯ ಮಾಡೋದಕ್ಕ ಸರಕಾರದವರು ನಿನ್ನ ಮ್ಯಾಲ ಖಟ್ಲೆ ಹಾಕತಿದ್ದರು ತಿಳೀತಿಲ್ಲೋ ಖಟ್ಲೆ !

ಹೆಂಡತಿ:— ಭಲೋ ಆಗತಿತ್ತು ! 'ಖಟ್ಲೆ ತುಂಬಿದಮ್ಯಾಲೆ ಕ್ಷಣಮಾತ್ರವಿರಲಿಲ್ಲ' ಅಂತ ದಾಸರು ಹೇಳಿದ್ಹಾಂಗ, ಸುಸೂತ್ರ ಕಣ್ಣಾರ ಮುಚ್ಚಿ ಬಿಡತಿದ್ದೆ.

ಗಂಡ:— ಹುಂ! ಪುರಂದರದಾಸರು 'ಖಟ್ಲೆ' ಅಂದಿಲ್ಲ, 'ಕಟ್ಲೆ' ಅಂದಾರ. ಕ—ಖ ದೊಳಗಿನ ಅಂತರ ಕೂಡಾ ತಿಳಿವೊಲ್ಲದಲ್ಲಾ ನಿನಗ!

ಹೆಂಡತಿ:— ಸಾಕು, ಸುರುವಾತಿಲ್ಲೋ ನಿಮ್ಮ ಕಲಿತಹರಟಿ ! ನೀವು ಹೀಂಗ ಮಾತಿಗೆ ಬಾರದ ಹರಟೀ ಹೊಡಿಯೋದು ಮಾತ್ರ ಅಪವ್ಯಯ ಅಲ್ಲೇನೊ !

ಗಂಡ:— ಮಾತಿನ ಅಪವ್ಯಯಕ್ಕೂ ರೊಕ್ಕದ ಅಪವ್ಯಯಕ್ಕೂ ಬಹಳ ಅಂತರದ. ನೋಡು, ಮನೆತನಾನs ಆಕು, ಸರಕಾರನs ಆಕು, ಮುಂದಿನ ಯೋಜನಾದ ಪ್ರಕಾರ ಪ್ರಪಂಚಮಾಡ ಬೇಕಾಗತದ.

ಹೆಂಡತಿ:— ಬಹಳ ನಿಮ್ಮ ಯೋಜನಾ.... ಹೇಳೋಹಾಂಗಿಲ್ಲ! ಎರಡು ರೂಪಾಯಿಗೆ ಒಂದು ಹುಣಸೀಹಣ್ಣು ಆದಾಗ, ವರ್ಷದ ಹುಣಸೀಹಣ್ಣು ತಂದು ಹಾಕರಿ ಅಂತ ಹಾಲುವರದಿ. ಕಡಿಕೂ ನನ್ನ ಮಾತೇನೂ ಕೇಳಲಿಲ್ಲ ಈಗ ತಿಂಗಳಾ ಎರಡು ರೂಪಾಯಿ ಹುಣಸೀಹಣ್ಣಿಗೆ ಹಾಳುಮಾಡತೀರಲ್ಲಾ !

ಗಂಡ:— ಹೌದು. ಹುಣಸೀಹಣ್ಣಿನ ಖಾತೇದ ಬಜೆಟು ಖರ್ಚಾಗೋತನಕಾ ಹುಣಸೀಹಣ್ಣು ತಿನಬೇಕ್ಕದ್ದು !

ಹೆಂಡತಿ:— ಆಮ್ಯಾಲೆ ?

ಗಂಡ:— ಆ ಮ್ಯಾಲೆ ಬರೀ ಬೆಲ್ಲ !

ಹೆಂಡತಿ:— ಅಯ್ಯ ನನ ಸುಡ್ಲಿ !

ಗಂಡ:— ಹಾಹಾ ! ನಗಬ್ಯಾಡಾ! ನನ್ನ ಮಾತಾದರೂ **ಕೇಳಿಲ್ಲ**. ಮಹಾತ್ಮಾಜಿಯವರ ಜೀವನ ಚರಿತ್ರ ಓದೀಯೇನು ? **ಅವರು ನಾಲಗೆಯ** ನಿಗ್ರಹ ಸಾಧಿಸಬೇಕೂ ಅಂತ, ಒಮ್ಮೊಮ್ಮೆ **ಒಂದೊಂದು** ಕ್ಷಾರ ಬಿಟ್ಟುಕೊಡತಿದ್ದರು ಅಂದರ ಒಮ್ಮೆ **ಉಪ್ಪಿಲ್ಲದೆ** ಊಟಾಮಾಡೋದು, ಒಮ್ಮೆ ಹುಳಿ ಇಲ್ಲದೆ ಊಟಾ-**ಮಾಡೋದು**, ಒಮ್ಮೆ ಖಾರ ಇಲ್ಲದೆ ಊಟಾ ಮಾಡೋದು.......

ಹೆಂಡತಿ:— ಆದರ ನಿಮ್ಮ ಹಾಂಗ ರೇಶನ್ ಇಲ್ಲದೆ ಊಟಾ **ಮಾಡೂ** ಅಂತೇನು ಅಂದಿಲ್ಲವಲ್ಲ.

ಗಂಡ:— ಹೌದು, ಮತ್ತ ಅದ ಮಾತಿಗೆ ಬರತೀ ಹೌದು?

ಹೆಂಡತಿ:— ಮತ್ತ ಹಾಂಗಾರ ಈಗೇನು ಮಾಡಂತೀರಿ.

ಗಂಡ:— ನನ್ನ ಸ್ಯಾಂಕಶನ್ ಇಲ್ಲದ ನೀ ಸ್ಟೇನಲೇಸ್ ಪಾತ್ರೀ ಖರೀದಿ ಹ್ಯಾಂಗ ಮಾಡಿದಿ ? explanation ಕೊಡು !

ಹೆಂಡತಿ:— ನಿಮ್ಮ ಕಚೇರೀ ಭಾಷಾದಾಗ ಮಾತಾಡಿದರ **ನನಗೇನು ತಿಳಿಯೋದಿಲ್ಲ**. 'ಮುಂದಿನ ಯೋಚನಿ ಮುಂದಿನ **ಯೋಚನಿ**' ತಮಗs ಇಲ್ಲ ಮುಂದಿನ ಯೋಚನಿ.

ಗಂಡ:— ಏನಿಲ್ಲ ಮುಂದಿನ ಯೋಚನಿ ? ನಾ ಯಾವಾಗಲೂ ನನ್ನ ಸೆಡ್ಯೂಲ್ ಪ್ರಕಾರನs ಕೆಲಸಾ ಮಾಡತೀನಿ, ಗೊತ್ತದನೊ ಇಲ್ಲೊ ? ನಮ್ಮ ಪ್ರಪಂಚದ ಪಂಚವಾರ್ಷಿಕ ಯೋಜನೆಯ ಪ್ರಕಾರ ನಡುವರುಸಕೊಳ್ಳಾಕಂತ—

ಹೆಂಡತಿ:— ಸಾಕು, ನಿಮ್ಮ ಪಂಚವಾರ್ಷಿಕ ಯೋಜನಾ ! ತಿರುಗಿ ಮಳಿಗಾಲ ಬಂತು; ವರ್ಷದ ಉಪ್ಪಿನಕಾಯಿ, ಗುಳಂಬಾ ಹಾಕಿಡತೀನಿ ಅಂದರ, ಎಲ್ಲಾನೂ ಹತ್ತಿ ಹಾಯಗೊಡವೊಲ್ಲರಿ

ಗಂಡ:— ಹೌದs ನಾನಾದರೂ ಏನು ಮಾಡಲಿ ? ನನ್ನ ಬಜೆಟ್‌ನೊಳಗ ಉಪ್ಪಿನಕಾಯಿಗೆ ಸ್ಯಾಂಕಶನ್ ಇಲ್ಲಾ !

ಹೆಂಡತಿ:— ಇದs ನಿಮ್ಮ ಥಡ್ಡಕಸಾ ಅಂತ ಹೇಳೋದು! **ವರ್ಷದ** ಉಪ್ಪಿನಕಾಯಿ ಮಾಡಿಟ್ಟುಗೊಂಡರ, ಒಂದೊಂದು ದಿವಸ **ಪಲ್ಯಾಕಾಯಿ** ಇಲ್ಲದಿದ್ದರೂ ನಡಿಯೋದಿಲ್ಲೇನು ? ಈ ಶಾಣ್ಯಾ-ತನಾ ಒಮ್ಮ್ಯಾರ ವಿಚಾರಮಾಡೀರೇನು ?

ಗಂಡ:— ಹೌದs! ಆದರ ಪ್ರತಿದಿವಸ ಪಲ್ಯಾಕಾಯಿ ಬೇಕs **ಬೇಕೂ** ಅಂತ ನನ್ನ ಅಭಿಪ್ರಾಯ ಅದ ಇಲ್ಲಾ! ಅಭಿಪ್ರಾಯ ಇಷ್ಟೇ ಅಲ್ಲಾ 'ಹೆಚ್ಚು ಕಾಯಿಪಲ್ಯಾ ತಿನ್ನಿರಿ!' ಅಂಬೋ ತತ್ತ್ವದ ಮುಂದಾಳು ಇದ್ದೇನಿ ನಾನು.

ಹೆಂಡತಿ:— ಹೌದು, ಭಾಳ ಅಮಾದಾನಾಗಿ ಕಾಯಿಪಲ್ಯಾ ತಂದು ಹಾಕತೀರಿ ಹೇಳೊಹಾಂಗಿಲ್ಲ ! ಮೊನ್ನೆ ನಮ್ಮ ಅಪ್ಪ ಬಂದಾಗ, ಒಂದಿಷ್ಟು ಬಟಾಟಿ-ಉಳ್ಳಾಗಡ್ಡಿ ತರಿಸಿಕೊಡ್ರೀ ಅಂದರ **ಮಾರೀ** ಇಷ್ಟುಹಡತರಾ ಮಾಡಿದಿರಿ.

ಗಂಡ :— ಹ– ಹ– ! ಇಲ್ಲೇ ತಪ್ಪತೀ ನೋಡು ನೀನು! **ಅಲ್ಲs**, "ಹೆಚ್ಚು ಕಾಯಿಪಲ್ಯಾ ತಿನ್ನಿರಿ' ಅಂದರ ಬರೇ ಹಸಿರು **ಕಾಯಿಪಲ್ಯಾ** ತಿನ್ನರಿ ಅಂತ ನನ್ನ ಅರ್ಥ. ಬಟಾಟಿಯೊಳಗೇನಿರತದ Vitamins ಉ ? **ತಿಂದ ಬಟಾಟಿಲ್ಲಾ ತಲೆಯೊಳಗ ಹೋಗ್ತಾ** ಹೊರತಾಗಿ ದೇಹಕ್ಕ ಆರೋಗ್ಯ ಆದ ಏನು ಅದರಿಂದ? '**ಹುಲ್ಲೊ**ಂ **ಬಿಟ್ಟು ಬೇಕಾದ್ದು** ಹಸರು ಪಲ್ಯಾ ತಿನ್ನರಿ, **ಅದು ದೇಹಕ್ಕೆ ಆರೋ**ಗ್ಯ ಅಂತ **ನಮ್ಮ** ಮುಂದಾಳುಗಳೆಲ್ಲಾ **ಹೇಳೋದಿಲ್ಲೇನು** ?

ಹೆಂಡತಿ :— ಮತ್ತ ಮಾವಿನಕಾಯಿನೂ ಹಸರs ಇರತಾವ ಅವನ್ಯಾಕ ತರಬಾರದು ?

ಗಂಡ :— ಬರೇ ಹಸರಿದ್ದರ ಆತೇನು ? **ಖೋಡಿ** ಹ ಎಷ್ಟಿರತಾವ ಅದು **ಗೊತ್ತದ** ಏನು ?

ಹೆಂಡತಿ :— ಹಾಂಗಾರ **ವರ್ಷದ** ಹಪ್ಪಳಾ-**ಸಂಡಿಗೀನೂ** ಹ ಇರತಾವೇನು ? **ಅವಕ್ಯಾಕ** ನಿಮ್ಮ **ಸ್ಯಾಂಕಶನ್ನೊ ಪೆನ್‌ಶನ್ನೊ**-ಅದನ್ನ ಕೊಡಬಾರದು ?

ಗಂಡ :— ಹ– ಹ ! ಸ್ವಲ್ಪ **ಸೂಕ್ಷ್ಮಬುದ್ಧಿಯೇನಾರ** ಅ ಏನು ನಿನಗ ? ಅಲ್ಲs, ಮೊದ್ಲs **ಥಂಡೀದಿವಸ**, **ಕಾಲಾಗ**ಮೆಟ್ಟ ನಿನ್ನ ಚಪ್ಪಲಿ ಸುದ್ಧಾ ಬುರಸಗಟ್ಟಿರತಾವ! **ಅಂಥಾದ್ದ**ರೊಳಗ ಹಪ್ಪಳಾ ಸಂಡಿಗಿ ಹಾಡೇನಾದೀತು ಕಲ್ಪನಾ ಅದ ಏನು ನಿನಗ ಬುರಸಗಟ್ಟಿದ ಹಪ್ಪಾ ಳ ಕರದು ಹಾಕಿದರ, ಮನಿಗೆ ಬಂದ ಅತಿಥಿಗ ಫಜೀತಿ ಏನಾದೀತು— ಕಲ್ಪನಾ ಅದ ಏನು ನಿನಗ **?**

ಮಿತ್ರ :— (ಪ್ರವೇಶಿಸಿ) **ನಾಯೇನು ಅತಿಥಿಯಾಗಿ** ಬಂದಿಲ್ಲಪ ಮಾರಾಯಾ !

ಗಂಡ :— ಬಾರೋ ಹಯವದನಾ, ಒಳೇ ಯೋಗ್ಯ ಹೊತ್ತಿ ಹೇಳಿ ಕಳಿಸಿದವರ ಹಾಂಗ ಬಂದಿ ಬಾ !

ಹೆಂಡತಿ :— ಖರೆ ! ಅಂಥಾಂಗ ದ್ರೌಪದೀ ಆಪತ್ತಿಗೆ ಶ್ರೀಕೃಷ್ಣ ಬಂದ್ಹಾಂಗ ಬಂದ್ರಿ.

ಮಿತ್ರ :— ಏಲಾ ! ಅಂದರ ನಡಿಸೀದೀಯರೇ ಏನೊ ಗಜಾನನಾ ?

ಸಂಸ್ಕೃತ ಸಮಾಜಕ್ಕೆ

ವಿಡಂಬನ, ಹಾಸ್ಯ, ನಗು—ಬೇಕಷ್ಟೆ ?

ಹಾಗಾದರೆ "ಗಾಳಿಗುಡುರಿ" ಎನ್ನು ಓದಿರಿ!

(ಹನ್ನೆರಡು ಲಲಿತ ಪ್ರಬಂಧಗಳ ಸಂಕಲನ)

ಶ್ರೀಮಾನ್ ಗೋಕಾಕರ ಮುನ್ನುಡಿಯೂ ಇದೆ.

ಲೇಖಕರು :— ಶ್ರೀ. ಬಿ. ಆರ್. ವಾಡಪ್ಪಿ

ಬೆಲೆ : ೧–೪–೦ ಮಾರಾಟಗಾರರು

ಮನೋಹರ ಗ್ರಂಥಭಾಂಡಾರ, ಧಾರವಾಡ

ಗಂಡ :— ಅಲ್ಲಪಾ, ರೇಶನ್ನಿಗಂತ ರೊಕ್ಕಾ ಕೊಟ್ಟರ, ಆ ರೊಕ್ಕದ್ಲೆ ಇವಳು ಸ್ಟೇನಲೆಸ್ ಪಾತ್ರೀ ಖರೀದಿ ಮಾಡಿದರ ಮಾಡ ಬೇಕೇನಪಾ ?

ಹೆಂಡತಿ:—ಅಲ್ರೆಪಾ, ಎಂದೂ ಸಿಗದಂಥಾ ಭಾಂಡೀ ಸೋವೀ ಯೊಳಗ ಸಿಕ್ಯಾಗ, ಮನೀಗೆ ಶ್ರಾಪ್ಯಾ ಹೌದಲ್ಲೊ ?

ಗಂಡ :— ಅಲ್ಲಪಾ, ಮನೀಗೆ ರೇಶನ್ನ ಹರಕತ್ತೊ ಭಾಂಡೀ ಹರಕತ್ತೊ ?

ಮಿತ್ರ :— ರೇಶನ್ನ ತರಲಿಕ್ಕೆ ಮಾತ್ರ ಚೀಲ ಹರಕತ್ತು !

ಹೆಂಡತಿ :— ಚೀಲೇನು ಬಿಡ್ರಿ, ಮಳೀಗೊಂದು ಘೂಟ-ಕ್ಕೊಂದು ಆವ. ಅಲ್ಲಾ ನೀವಃ ನೋಡ್ರಿ, ಕಲ್ಲಿನಂಥಾ ಎರಡು ರಾತೇಲಿ ತೊಗೊಂಡೀನಿ, ಮೂರು ರೂಪಾಯಿಗೆ (ಭಾಂಡಿ ಸಪ್ಪಳ) ! ನೋಡ್ರಿ, ಎರಡೂ ಹೊತ್ತು ಹಾಲು ಹಾಕಿಸಿ-ಕೊಳ್ಳಿಕ್ಕೆ ಸುಸರೀ ಸಾಮಾನಾದವೋ ಇಲ್ಲೋ ನೀವಃ ಹೇಳ್ರಿ !

ಗಂಡ :— ಸುಸರೀ ಸಾಮಾನೆಲ್ಲಾ ಖರೆ; ಆದರೆ ರೇಶನ್ ಇಲ್ಲದ ಮ್ಯಾಲೆ ಏನಮಾಡಬೇಕಂದಿ ? ನನ್ನ ವಿಧಿಬಂದು ಮೊದಲ ತಿಳಕೊಂಡು ಮಾತಾಡು.

ಹೆಂಡತಿ :— ಆ ವಿಧಿ ನಿಮ್ಮ ಬೆನ್ನು ಬಿಟ್ಟದೆಲ್ಲಿ ? ಹೀಂಗ ಸಾಮಾನಾ ಮಾಡೀದರ ಆಗತಾವ. ಯಾಕ್ರೆಪಾ ಹಯವದನ-ರಾಯರ!

ಮಿತ್ರ :— ಹೌದು ಕಮಲಕ್ಕಾ, ನಿಮ್ಮ ಮಾತು ಅಗ್ದಿ ಬರಾ-ಬರಿ. ಅದರೊಳಗ ಸ್ಟೇನಲೆಸ್ ಪಾತ್ರಿ ಅಂದರ ನಿಮ್ಮ stainless ಹೃದಯದ ದ್ಯೋತಕ! ಅಗ್ದಿ ಬರಾಬರಿ ಅತು.

ಗಂಡ :— ಯೇ ಏನು ಬರಾಬರೀನೊ ಸ್ವಲ್ಪ ವಿಚಾರಮಾಡಿ ಮಾತಾಡು.

ಮಿತ್ರ :— ಅಲ್ಲೋ, ಗಜಾನನಾ, ಅಂದರ ರೇಶನ್ ರೊಕ್ಕಾ ರೇಶನ್‌ಗೇ ಖರ್ಚಮಾಡಬೇಕು ಅಂಬೋ ನಿನ್ನ ತತ್ತ್ವ ನನಗ ಮಾನ್ಯ ಅದ. ಅಂದರ ಕಮಲಕ್ಕಾ, ತತ್ತ್ವದ ದೃಷ್ಟಿಯಿಂದ ಗಜಾನನನ ಮಾತು ಬರಾಬರಿ! ಅಂದರ ಕಮಲಕ್ಕಾ, ವ್ಯವಹಾರದ ದೃಷ್ಟಿಯಿಂದ ನಿಮ್ಮ ಮಾತು ಅಗದೀ ಬರಾಬರಿ.

ಗಂಡ :— ಯೇ (ಚಿವುಟುವನು).

ಮಿತ್ರ.— (ಮೆಲ್ಲಗೆ) ಅಲ್ಲೋ, ಅಂದರ ತತ್ತ್ವದ ದೃಷ್ಟಿ ಯಿಂದ ನಿನ್ನ ಮಾತು ಬರಾಬರೀನೊ!

ಕಮಲಕ್ಕಾ :— ಏನದು ?

ಮಿತ್ರ :— ಏನಿಲ್ಲಾ, ನೀವು ಚಹಾಕ್ಕಿಟ್ಟು ಬರ್ರಿ ಕಮಲಕ್ಕಾ! ಬೇಕಾರ ಹೊಸಾ ಭಾಂಡೀ ಮುಹೂರ್ತ ಆಗಿ ಬಿಡ್ಲಿ....ವ್ಯವಹಾ-ರದ ದೃಷ್ಟಿಯಿಂದ ನಿಮ್ಮ ಮಾತು ಬರಾಬರಿ! ಚಹಾಕ ಇಟ್ಟು ಬರ್ರಿ ಕಮಲಕ್ಕಾ!

ಗಂಡ:— ವ್ಯವಹಾರ! ಯೇ ಹಯವದನಾ, ವ್ಯವಹಾರ ಬುದ್ಧಿಯೇನಾರ ಅದ ಏನು ನಿನಗ? ರೇಶನ್ ಇಲ್ಲಿದ್ದರ ಏನು ಮಾಡಂದಿ ?

ಮಿತ್ರ:— ಅಲ್ಲಪ್ಪಾ, ಮಹಾತ್ಮಾಜಿಯವರು ೨೧ ದಿವಸ ಉಪವಾಸ ಮಾಡಿದರಂತ, ರೇಶನ್ ಇಲ್ಲದ ನಿನಗ ಒಂದು ವಾರ ಉಪವಾಸ ಮಾಡಲಿಕ್ಕೆ ಆಗೋದಿಲ್ಲೇನು ?

ಕಮಲಕ್ಕ:— (ಒಳಗಿನಿಂದಲೆ) ಅಂ ? ಛಲೋ ಹೇಳಿದಿರಿ ನೋಡ್ರಿ ಹಯವದನರಾಯರ! (ಮುಂದೆ ಬಂದು) ಅಲ್ಲಾ, ನನಗ ಮಾತಿಗೊಮ್ಮೆ ಮಹಾತ್ಮರ ದೃಷ್ಟಾಂತಕೊಡತಿರತಾರ. ಈಗ ಛಲೋ ಹೇಳಿದಿರಿ.

ಗಂಡ:— ಛಲೋ ಹೇಳಿದರು ಹೌದಲ್ಲೋ? ತಯಾರಾಗು ಹಾಂಗಾರ ಒಂದುವಾರ ಲಂಘನಾ ಮಾಡಲಿಕ್ಕೆ!

ಹೆಂಡತಿ:— ಯಾರು ಬ್ಯಾಡಂತಾರ ?

ಮಿತ್ರ:— ಓಹೋ, ಯಾರು ಬ್ಯಾಡಂತಾರ? ಲಂಘನಂ ಪರಮೌಷಧಂ.

ಹೆಂಡತಿ:— ಹಯವದನರಾಯರ, ನೀವು ಬಂದಿರಿ ಭಾಳ ಛಲೋ ಆತು. ಇಲ್ಲದಿದ್ದರ ಹೀಂಗs ಹಾಕ್ಯಾಡತಿದ್ದರು ನೋಡ್ರಿ ನನ್ನ ಜೋಡಿ.

ಗಂಡ:— ಅಲ್ಲ, ಹಾಕ್ಯಾಡತಿದ್ದರು ಅಂದರೇನದು ?

ಮಿತ್ರ:— ಅಲ್ಲೋ ಗಜಾನನಾ, ನಿನ್ನ ಜಗಳಾದರೂ ಏನಪಾ ಅದು?

ಗಂಡ:— ಅಲ್ಲಪಾ, ನಾಹೇಳೋದು; ನಮ್ಮ ಯೋಜನಾದ ಪ್ರಕಾರ ನಾಷ್ಟ ಖರ್ಚ ಮಾಡತಕ್ಕದ್ದು ಅಂತ. ಈಗ ನೋಡು ಪಂಚವಾರ್ಷಿಕ ಯೋಜನಾದ ಪ್ರಕಾರ, ಮೂರು ವರ್ಷಾದರೂ ಇನ್ನೂ Maternity. ಮುಂದ ಹಾಕೀನಿ.

ಮಿತ್ರ:— ಹಾಂಗಾದರ ಥೇಟ ಥಡ್ಡ ಇದ್ದೀ ನೀನು.

ಗಂಡ:— ಯಾಕೇನಂತೀಯೋ ?

ಮಿತ್ರ:— ನನ್ನ ದಶವಾರ್ಷಿಕ ಯೋಜನಾದ ಪ್ರಕಾರ ಪ್ರತಿ ವರುಷನೂ ಒಂದು ಪಂಚಾಂಗ ಇರಲೇಬೇಕೂ ಅಂತ.

ಗಂಡ:— (ಜೋರಿನಿಂದ ನಗುವನು.)

ಮಿತ್ರ:— ಹಾಂ ! ನಗಬ್ಯಾಡಾ ಕೇಳಲ್ಲೆ. ಅಂದರ ಇದರರ್ಥ ಏನು ? ಪ್ರತಿವರುಷನೂ Maternity ಗೆ ಮುಂಚೆ ಮೂರು ತಿಂಗಳು, ಆಮ್ಯಾಲೆ ಮೂರು ತಿಂಗಳು ಮನೆತಗಿಯೋದು. ಆ ಥಾ ರ್ ತ್ ಸಕುಟುಂಬ-ಸಪರಿವಾರಸಮ್ಮ ತೌರಮನೀಗೆ Maternityಗೆ ಕಳಿಸತಕ್ಕದ್ದು. ಹೀಂಗ ವರುಷಕ್ಕೆ ಆರು ತಿಂಗಳ ಮನೀ ತಗದರ, ಆರು ತಿಂಗಳ ಪಗಾರ ಕೈಯೊಳಗ ಉಳೀತಿಲ್ಲೊ ?

ಗಂಡ :— ಯೇ ಹುಚ್ಚಾ, ಅಲ್ಲೋ ಉಳಿದ ಆರು ತಿಂಗಳ, ಈ ವಾನರಸೇನಾಕ್ಕ ಖರ್ಚ ಪೂರೈಸೋದು ಅಂದರ ?

ಮಿತ್ರ:—ಲೆಕ್ಕಾಹಾಕಿ ನೋಡು ನೀನು! ಆರುತಿಂಗಳ ವಾನರ-ಸೇನಾದ ಖರ್ಚ ಹಿಡದರೂ, ಮುಂದಿನ ಆರುತಿಂಗಳ ಮನ್ಯಾಗ ಸಿಳ್ಳ ಕೂಡಾ ಇರೋದಿಲ್ಲ; ಎಷ್ಟು ಖರ್ಚು ಉಳೀತಿತ್ಲ್ಲ ?

ಕಮಲಕ್ಕ :— ಅಯ್ಯಯ್ಯ ! ನಿಮ್ಮ ಯೋಜನಾ ಮಾತ್ರ ಇವರಿಗಿಂತಾ ದೊಡ್ಡದು ಕಾಣಸ್ತದಲ್ಲಾ ! ಯಾಕಂದರ ನಿಮ್ಮ

ಉಳಿತಾಯ ಅಂದರ ಶೌರಮನಿಗೆ ಹೆಗ್ಗಣ ಹತ್ತಿದ್ಹಾಂಗೆ.

ಗಂಡ:— ಹ- ಹ- ಹ! ನೋಡು ಮತ್ತ ಹಯವದನನ ಯೋಜನಾ ಒಳ್ಳೇದೋ ನನ್ನ ಯೋಜನಾ ಒಳ್ಳೇದೋ?

ಕಮಲಕ್ಕ:— ಸಾಕು, ಇಬ್ಬರೂ ಮಹಾ ಪಂಡಿತರs ಇದ್ದೀರಿ. ಅಂತೂ ಒಬ್ಬರೇನು ಖರೇ ಉಳಿತಾಯದ ಉಪಾಯ ಹೇಳಲಿಲ್ರಿ!

ಗಂಡ:— ಹೇಳೇನಲ್ಲ, ಇನ್ನೂ ಮೊನ್ನೆ ಮೊನ್ನೆ ಹತ್ತು-ಸಾವಿರಕ್ಕ ಇನ್ಶ್ಯೂರನ್ಸ್ ಇಳಿಸೇನಿ ಅಂತ.

ಕಮಲಕ್ಕ:— ಆದರದು ಸಿಗಬೇಕೆಂದ?

ಗಂಡ:— ಇವೊತ್ತs ನನಗ ಏನಾರ ಆದರ, ನಾಳೇ ಸಿಗತದ. ನಿನ್ನ ನಾಮಿನಿ ಅಂತ ಮಾಡೇನಿ,

ಕಮಲಕ್ಕ:—ಏನಾರ ಕೇಳಿದ ಕೂಡಲೆ ಇಂಥಾನs ಅವಲಕ್ಷಣ ಮಾತು! ಅದೇನೋ ಅಂತಾರಲ್ಲಾ, ಕೈತೋರಿಸಿ ಅವಲಕ್ಷಣ ನುಡಿಸಿಗೊಂಬೂದು ಯಾರು ಹೇಳ್ಯಾರ. ಥಣ್ಣಗ ಒಳಗ ಹೋಗೋದು ಗುಣಾ ಕಾಣಸ್ತದ.... ಇವರ ಯೋಜನಾ ಅಂತ ಯೋಜನಾ!....

ಗಂಡ:— ಅಲ್ಲs ಬಂದಾರೀ ಬಾ ಇಲ್ಲೆ.... ನೋಡೊ ಹಯ-ವದನಾ, ಇಲ್ಲಾ ಖರೋಖರ ನಾಯೇನು ಯೋಜನಾ ಮಾಡೇನಿ, ನಾಯೇನ ಉಳಿತಾಯ ಮಾಡೇನಿ ಅಂಬೋದನ್ನ ಹೇಳ್ಳಿಕ್ಕೆ ಹೋದರ ನೋಡೊ, ಅವಲಕ್ಷಣಂತ! ಏನ ಹೇಳಬೇಕಪಾ ಈ ಹೆಂಗಸರಿಗೆ ಹೀಂಗ ಮಾತಾಡೇದರ! ಹೌದ, ಇವೊತ್ತ ನಿನಗ. ವಾಗತ್ಯ ಅನಿಸಿದರೂ, ನಾಳೆ ಹತ್ತು ಸಾವಿರ ರೂಪಾಯಿ ಕೈಗೆ ಹತ್ತಿದವ್ಯಾಲೆ ಹ್ಯಾಂಗ ಹಾಯ ಅನಸ್ತದ ನೋಡು. ಯಾಕೋ. ಹಯವದನಾ?

ಹಯವದನ:— ಅಲ್ಲ ಕಮಲಕ್ಕ ಒಳಗ ಚಹಾಕ್ಕ ಇಡಲಿಕ್ಕೆ ಹೋಗಳಾಂತ ಕಾಣಸ್ತದ. ನೀಯಾಕ ಅವರ್ನ ತಡೀತಿ? ಕಮಲಕ್ಕಾ ನೀವು ಒಳಗ ಹೋಗರಿ.

ಕಮಲಕ್ಕ:— ಅಲ್ಲಾ, ಬರೂ ಪಗಾರದಾಗ ನಂದಲ್ಲಾ ಅಂತ ತಿಂಗಳಾ ಒಂದು ಹತ್ತು ರೂಪಾಯಿನಾರ ನನ್ನ ಕೈಯಾಗ ಹಾಕರಿ— ಉಳಿಸಿಡತೇನಿ ಅಂತಂದರ, ಅವನ್ನ ಕಿವೀಮ್ಯಾಲಾರs ಹಕ್ಕೋತಾ-ರೇನು ನೋಡರಿ?

ಹಯವದನ:— ಬರಾಬರಿ!

ಗಂಡ:— ಯೇ ಏನು ಬರಾಬರಿನೊ? ಇಕೀಕಡೆ ೧೦ ರೂ. ದಂತೆ ಇಟ್ಟರ, ಇಕಿ ಏನು ಬ್ಯಾಂಕಿನವರ ಹಾಂಗ ತೀಕಡಾ ಮೂರರಂತೆ ಬಡ್ಡಿ ಕೊಡತಾಳೇನು?

ಹಯವದನ:— ಬರಾಬರಿ.

ಕಮಲಕ್ಕ:—ಏನ ಬರಾಬರಿ ಹಯವದನ ರಾಯರ? ಅಲ್ಲಾ ಬ್ಯಾಂಕಿನಾಗಂತ ಇಡೋದು; ಇಡೋ ಪುರಸತ್ತಿಗಿಲ್ಲದ ತೆಗೊಂಡು ಬಿಡೋದು, ಹತ್ತರ ಚೆಕ್‌ಬುಕ್ ಇದ್ದದ್ದಕ್ಕ ಬ್ಯಾಂಕಿನಾಗ ರೊಕ್ಕ ಇದ್ದಾಂಗಾತೇನು? ಅದs ನಮ್ಮ ಕಡೇ ಅಂತ ಕೊಟ್ಟರ, ಅನಾವು ಬರಲಿ ಆಪತ್ತು ಬರಲಿ, ಅಪದ್ಧನಾ ಅಂತ ಇರೂದಿಲ್ಲೇನು?

ಹಯವದನ:— ಬರಾಬರಿ, ಬರಾಬರಿ. ನೀವು ಒಳಗಹೋಗ್ರಿ!

ಗಂಡ:— ಏನ ಬರಾಬರೀನೊ, ಏನು ಬರಾಬರಿ?

ಹಯವದನ:— ಅಲ್ಲಾ ಒಳಗ ಚಹಾಕ್ಕ ಇಡಲಿಕ್ಕೆ ಹೋಗ. ತೀನಿ ಅಂದರು; ಬರಾಬರಿ ಅಂದೆ.

ಗಂಡ:— ಹೂಂ! ಚಹಾ ಅಂದಗಳಿಗ್ಗೆ ಬರಾಬರಿ ಅನಸ್ತ ಮತ್ತೇನು ಬುರಬುರಿ ಅನಸಬೇಕೇನು?

ಕಮಲಕ್ಕ:— ಅಲ್ಲಾ, ಸುಳ್ಳ ಯಾಕ ಬಡದಾಡತೀರಿ. ನನಗ ಒಳಗ ಗುಡ್ಡಘಡತರಾ ಕೆಲಸ ಒಟ್ಟೇದ; ಅದಕ್ಕ ಹೋಗತೀನಿ.

ಹಯವದನ:— (ನಿಟ್ಟುಸಿರುಬಿಟ್ಟು) ನೀನಾರ ಹೇಳ ಮಾರಾಯಾ! ಮನಿಗೆ ಬಂದ ಅತಿಥಿಗೆ ಒಂದು ಕಪ್ಪು ಚಹಾನಾರ.

ಕಮಲಕ್ಕ:— ಹಯವದನರಾಯರ, ಅಡ್ಡ ವ್ಯಾಳ್ಯಾದಾ ಎಂಥಾ ಅತಿಥಿಗಳು ಬಂದರೂ ಚಹಾ ಮಾಡೋಹಾಂಗಿಲ್ಲಾ ಅಂತ ಮೊನ್ನೆ ಠರಾವಾಗೇದ.

ಗಂಡ:—ಅಂದರ, ಜುಲುಮಿಂದ ಚಹಾ ಮಾಡಿಕೊಟ್ಟು ಅವ ಹೊಟ್ಟೀ ಕೆಡಸಬ್ಯಾಡಾ-ಅಂತ ನಾ ಹೇಳಿದೆ.

ಕಮಲಕ್ಕ:—ಹಯವದನರಾಯರ, ನಾ ಹೇಳ್ತೇನಿ ಕೇಳ್ರಿ. ಮೊನ್ನೆ ಪೋಲೀಸ ಪುಟ್ಟಕ್ಕ ಬಂದಿದ್ದರ—

ಹಯವದನ:— ಅಂ? ಪುಟ್ಟಕ್ಕ ಪೋಲೀಸ ಇದ್ದಾರೇನು!

ಕಮಲಕ್ಕ:— ಅಂದರ ಅವರ ಮನೀಯವರು ಪೋಲೀಸ ಖಾತೇದಾಗಿಲ್ಲೇನು?

ಹಯವದನ:— ಅದಕ್ಕ ಪೋಲೀಸ ಅಂತ ಅಡ್ಡ ಹೆಸರು ಬಂತs!

ಕಮಲಕ್ಕ:— ಹೂಂ. ಕೇಳ್ರಿ ಹೇಳ್ತೀನಿ. ಪೋಲೀಸ ಪುಟ್ಟಕ್ಕ ಬಂದರ, ಅಪರೂಪಧಾಂಗ ಬಂದಾರಂತ ಹೇಳಿ ಒಂದು ಕಪ್ಪು ಚಹಾ ಮಾಡಿ ಕೊಟ್ಟರ, 'ಗಂಡಸರು ಬಂದಾಗಷ್ಟs ಮಾಡಬೇಕು— ಹೆಂಗಸರು ಬಂದರ ಯಾಕ ಚಹಾ!' ಅಂತ ನನ್ನ ಜೋಡಿ ಬಡದಾಡಲಿಕ್ಕೆ ಹತ್ತಿದರು.

ಹಯವದನ:— ಅಲ್ಲಾ, ಕಮಲಕ್ಕಾ ಅತಿಥಿ ಅಂದರ ಪುಲ್ಲಿಂಗಂತs ಯಾಕ? ಪುಂಸ್ತ್ರೀಲಿಂಗ ಅನಲಿಕ್ಕೆಏನೂ ಅಡ್ಡಿ-ಯಿಲ್ಲಾ. ಹಾಂಗಂದರೂ ಪಾಪ ಮಡೀ ಜನರು ಬಂದರ—

ಕಮಲಕ್ಕ:— ಅಯ್ಯಯ್ಯ! ನೀವು ಎತ್ತೆತ್ತಲಾಗೋ ಹೊಳ್ಳಿಸಿದಿರೆಲ್ಲಾ ಗಾಡೀ! ಒಟ್ಟೇನು ಚಹಾದ ವ್ಯಾಳ್ಯಾಕ್ಕ ಬಂದರ, ಅದ-ರಾಗs ಒಂದು ಬಸಿ ಕೊಡತಕ್ಕದ್ದಲ್ಲಾ ಹೊರತಾಗಿ, ಮತ್ತ ಸ್ಟೋವ ಹೊತ್ತಿಸೋ ಹಾಂಗಿಲ್ಲಾ ಅಂತ ನಿರ್ಣಯ ಆಗೇದ.

ಹಯವದನ:— ಹೌದೇನಪಾ ಗಜಾನನಾ?

ಗಜಾನನ:— ಹೌದಪಾ ಹಯವದನಾ!

ಹಯವದನ:— ಒಳ್ಳೇದು ಬರ್ತೀನಿ ಹಾಂಗಾರ. ಕಮಲಕ್ಕಾ ಬರ್ತೀನಿ.

ಗಂಡ:— ಏನ? ಬಂದ ಅತಿಥಿನ್ನ ಹಾಂಗs ಕಳಿಸಿಬಿಟ್ಯಾ!

(೧೧೫ನೆಯ ಪುಟ ನೋಡಿರಿ)

ತಮಿಳು ಪಾಠಗಳು

ಸಂಪಾದಕರು ಶ್ರೀ. ಎಸ್. ರುದ್ರಪತಿ, ಎಂ. ಎ. ಅವರು. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ೨೮ನೆಯ ಪ್ರಕಟಣೆ. ಬೆಲೆ ೧-೪-೦.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಆನರ್ಸ್ ಪರೀಕ್ಷೆಗೆ ತಮಿಳನ್ನು ದ್ವಿತೀಯ ದ್ರಾವಿಡಭಾಷೆಯಾಗಿ ತೆಗೆದುಕೊಂಡು ಓದುವ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಈ ತಮಿಳು ಪಾಠಗಳ ಸಂಕಲನವನ್ನು ಸಿದ್ಧಗೊಳಿಸಿದ್ದಾರೆ. ಸಂಪಾದಕರು ತಮ್ಮ ಬಿನ್ನಹ'ದ ಕೊನೆಯ ಮಾತಾಗಿ 'ಕನ್ನಡ ಆನರ್ಸ್ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಈ ಸಂಕಲನ ಯೋಜಿತವಾಗಿದ್ದರೂ ತಮಿಳು ಓದುವ ಆಶೆಯುಳ್ಳ ಇತರ ಕನ್ನಡಿಗರಿಗೂ ಇದರಿಂದ ಕೊಂಚಮಟ್ಟಿಗಾದರೂ ಸಹಾಯವಾದರೆ, ನನ್ನ ಶ್ರಮ ಸಾರ್ಥಕ ವೆಂದು ಭಾವಿಸುತ್ತೇನೆ.' ಎಂದು ಬರೆದಿದ್ದಾರೆ.

ತಮಿಳುಲಿಪಿ ಕನ್ನಡಿಗರಿಗೆ ತೀರ ಅಪರಿಚಿತವಾದುದಲ್ಲದೆ, ಕನ್ನಡ ಲಿಪಿಯಿಂದ ತೀರ ಪ್ರತ್ಯೇಕವಾಗಿ ರೂಪುಗೊಂಡುದು. ಆದುದರಿಂದ ತಮಿಳುಲಿಪಿ ಗೊತ್ತಿಲ್ಲದ ಬಹುಜನ ವಾಚಕರಿಗೆ ಒಮ್ಮೆಲೆ ಈ ಸಂಕಲನದ ಉಪಯೋಗವಾಗುವಂತೆ ಇಲ್ಲ. ಕನ್ನಡ ಪ್ರೌಢ ವಿದ್ಯಾಭ್ಯಾಸಿಗಳಿಗಾಗಿ ಈ ಸಂಕಲನವು ಅಣಿಗೊಂಡಿದೆಯಾದರೂ ಪ್ರೌಢವಿದ್ಯಾರ್ಥಿಗಳಲ್ಲಿಯೂ ತಮಿಳುಲಿಪಿಯ ಪರಿಚಯವಿರುವವರು ಹನಿರಕ್ಕೆ ಒಬ್ಬರಾದರೂ ಸಿಕ್ಕುವರೋ ಇಲ್ಲವೋ! ವಿದ್ಯಾರ್ಥಿಗಳಲ್ಲದವರಿಗಂತೂ ತಮಿಳುಲಿಪಿಯ ಪರಿಚಯವಿರುವ ಸಂಭವ ತೀರ ಕಡಿಮೆ. ಆದುದರಿಂದ, ಈ ಸಂಕಲನ ಪ್ರಾರಂಭದಲ್ಲಿ, ಲಿಪಿಪರಿಚಯದ ಭಾಗವೊಂದನ್ನು ಸೇರಿಸಿದ್ದರೆ, ಹೆಚ್ಚು ಅನುಕೂಲವಾಗುತ್ತಿದ್ದಿತು. ಇದೊಂದೇ ಪುಸ್ತಕವನ್ನು ಕೊಂಡು ತಮಿಳು ಸಾಹಿತ್ಯದ ಪರಿಚಯ ಮಾಡಿಕೊಂಡೇನೆಂದರೆ, ಲಿಪಿ ಗೊತ್ತಿಲ್ಲದವನಿಗೆ ಸಾಧ್ಯವೆನಿಸಿದ ಮಾತಾಗುವುದು.

ದ್ರಾವಿಡಭಾಷಾಜಾತಿಗಳಲ್ಲಿ ತಮಿಳಿಗಿರುವಷ್ಟು ಸಾಹಿತ್ಯಪುರಾತನತ್ವ ಬೇರೆ ಭಾಷೆಗಳಿಗಿಲ್ಲ. ಆದುದರಿಂದ ಯಾವ ದ್ರಾವಿಡ ವರ್ಗದ ಭಾಷಾವಿದ್ಯಾರ್ಥಿಯೂ ತಮಿಳುಭಾಷೆಯ ಕೂಲಂಕಷ ಪರಿಚಯಮಾಡಿಕೊಳ್ಳದೆ ತನ್ನ ಭಾಷಾಭ್ಯಾಸದಲ್ಲಿ ಪೂರ್ಣತೆಯನ್ನು ಪಡೆಯಲಾರ. ತಮಿಳುಭಾಷೆಯ ಅಭ್ಯಾಸ ಹೆಚ್ಚುತ್ತ ಹೋದಂತೆ, ಕನ್ನಡ ಶಬ್ದಗಳ ಮೂಲರೂಪಗಳ ಮೇಲೆ ಬೆಳಕು ಬೀಳುತ್ತ ಹೋಗುವುದೆಂಬುದು ಖಂಡಿತವಾದ ಮಾತು. ಆದುದರಿಂದ ಕನ್ನಡ ವಿದ್ಯಾರ್ಥಿವರ್ಗ ತಮಿಳು ಸಾಹಿತ್ಯದ ಪರಿಚಯಮಾಡಿಕೊಳ್ಳಬೇಕಾದುದು ಅತ್ಯಾವಶ್ಯಕ. ಅಂತಹ ವಿದ್ಯಾರ್ಥಿವರ್ಗ, ಮೊದಲು ತಮಿಳುಲಿಪಿಯನ್ನು ಚೆನ್ನಾಗಿ ಪರಿಚಯಮಾಡಿಕೊಂಡು, ಆ ಮೇಲೆ ಈ ಪುಸ್ತಕದಿಂದ ಪ್ರಯೋಜನವನ್ನು ಪಡೆಯಬಹುದಾಗಿದೆ.

ಮೊದಲಿನ ೪೬ ಪುಟಗಳಲ್ಲಿ ಅಡಕವಾದ ಪೀಠಿಕಾ ಭಾಗವು, ತಮಿಳು ವಾಙ್ಮಯದ ಸ್ಥೂಲ ಪರಿಚಯವನ್ನು ಕನ್ನಡಿಗರಿಗೆ ಚೆನ್ನಾಗಿ ಮಾಡಿಕೊಡಬಲ್ಲದು. ಇದೆಲ್ಲವೂ ಕನ್ನಡದಲ್ಲಿಯೇ ಇರುವುದರಿಂದ, ತಮಿಳುಲಿಪಿಯ ಅಪರಿಚಿತತೆಯು ಯಾವ ತಡೆಯನ್ನೂ ಉಂಟುಮಾಡಲಾರದು. ತಮಿಳು ಸಾಹಿತ್ಯದಲ್ಲಿ ಕಾಲಾನುಸಾರವಾಗಿ ವಿಭಾಗ ಮಾಡಿದ ಸಂಘಕಾಲ (ಕ್ರಿ. ಶ. ಪೂ), ಬೌದ್ಧ-ಶ್ರಮಣರ ಕಾಲ (ಕ್ರಿ. ಶ. ೧೦೧–೬೦೦), ಸಮಯಾಚಾರ್ಯರ ಕಾಲ (ಕ್ರಿ. ಶ. ೭೦೦-೯೦೦), ವೈಷ್ಣವ ಆಳ್ವಾರುಗಳು (೬೦೦–೮೦೦) ಮಧ್ಯಕಾಲದ ಕವಿಗಳು–ಇವೆಲ್ಲ ವಿಷಯಗಳನ್ನು ಪರಿಚಯ ಮಾಡಿಕೊಟ್ಟಿದ್ದು, ಕೊನೆಗೆ ತಮಿಳು ಛಂದಸ್ಸಿನ ವಿಶದ ಪರಿಚಯವನ್ನು ವಿವರಿಸಲಾಗಿದೆ. ಆ ಮೇಲೆ ಬೇರೆ ಬೇರೆ ತಮಿಳು ಕವಿಗಳ–ಕವಯಿತ್ರಿಯರ—ಚಿಕ್ಕ ಪರಿಚಯಗಳೊಂದಿಗೆ, ಅವರವರ ಕಾವ್ಯಭಾಗಗಳ ಸಂಕಲನಗಳನ್ನು ಕೊಡಲಾಗಿದೆ. ತಮಿಳು ಸಾಹಿತ್ಯದಲ್ಲಿ ಸೀಮಾಪುರುಷರಾಗಿ ಮೆರೆದ ಎಲ್ಲ ಕೃತಿಕಾರರ ಪರಿಚಯವನ್ನೂ ಮಾಡಿಕೊಟ್ಟಿರುವುದು ಸಂತೋಷದ ಸಂಗತಿ. ಗ್ರಂಥದ ಕೊನೆಯಲ್ಲಿ ತಮಿಳು ಪದಗಳಿಗೆ ಕನ್ನಡದಲ್ಲಿ ಅರ್ಥವನ್ನು ಹೇಳುವ 'ನಿಘಂಟು' ಇದೆ. ಆದರೆ ಇದರಲ್ಲಿಯ ತಮಿಳುಪದಗಳು ತಮಿಳು ಲಿಪಿಯಲ್ಲಿಯೇ ಅಚ್ಚಾದುದರಿಂದ, ಲಿಪಿ ಬಾರದವರಿಗೆ ಇದರ ಉಪಯೋಗವೂ ಅಷ್ಟೊಂದು ಆಗುವುದಿಲ್ಲ. ಈ ಪದಗಳ ತಮಿಳು ಉಚ್ಚಾರಗಳನ್ನು ಕನ್ನಡ ಲಿಪಿಯಲ್ಲಿಯೂ ಮುದ್ರಿಸಿ ಅವುಗಳಿಗೆ ಅರ್ಥಗಳನ್ನು ಕೊಟ್ಟಿದ್ದರೆ, ಹೆಚ್ಚು ಪ್ರಯೋಜನವಾಗುತ್ತಿತ್ತು. ಅದರಂತೆಯೆ ಸಂಕಲನಗೊಂಡ ಕೃತಿ ವಿಭಾಗಗಳನ್ನೂ ಕನ್ನಡ ಲಿಪಿಯಲ್ಲಿ ಓದಲು ಅನುಕೂಲವಾಗುವಂತೆ ಮಾಡಿದ್ದರೆ, ಲಿಪಿಯನ್ನು ಕಲಿಯುವ ಶ್ರಮವಿಲ್ಲದೆ, ತಮಿಳು ಸಾಹಿತ್ಯ ಭಾಗವನ್ನು, ವಿದ್ಯಾರ್ಥಿಗಳಲ್ಲದವರಿಗೂ ಪರಿಚಯಮಾಡಿಕೊಳ್ಳಲಿಕ್ಕೆ ಸುಲಭವಾಗುತ್ತಿತ್ತು.

ಪೀಠಿಕೆ–ಕವಿಪರಿಚಯಗಳು ಕನ್ನಡದಲ್ಲಿಯೆ ಇರುವುದರಿಂದ, ಅದಷ್ಟು ಭಾಗವನ್ನಾದರೂ ಓದಿ ಪ್ರಯೋಜನ ಪಡೆಯಬಹುದಾಗಿದೆ. ತಮಿಳು ಲಿಪಿಯನ್ನು ಬಲ್ಲವರಿಗೆ ಸಂಪೂರ್ಣ ಪುಸ್ತಕ ಪ್ರಯೋಜನಕಾರಿಯಾಗಬಹುದಾಗಿದೆ. ಕೆಲವೇ ಪುಟಗಳ ಇಂತಹದೊಂದು ಗ್ರಂಥ ಹೊರಟರೂ, ಕನ್ನಡಿಗರೆಲ್ಲರಿಗೂ ಇದರಿಂದ ಪ್ರಯೋಜನ ಸಿಕ್ಕದಿರುವುದು ಅತೃಪ್ತಿಯ ಸಂಗತಿಯಾಗಿದೆ.

—ಸಂಪಾದಕ

ನಾಲ್ಕು ನಾಡಪದಗಳು

(ಜನಪದ ಕಥನಕವನ)

ಸಂಕಲನಕಾರರು ಪ್ರೊ. ಬಿ. ಎಸ್. ಗದ್ದಿಗೀಮಠ ಎಂ. ಎ., ಬಿ. ಟಿ., ಪಿಎಚ್.ಡಿ. ಲಿಂಗರಾಜ ಕಾಲೇಜು, ಬೆಳಗಾಂವಿ. ಬೆಲೆ ೧-೦-೦. ಜಾನಪದ ಕಾವ್ಯ ಮಾಲೆಯ ೧ನೆಯ ಗ್ರಂಥ.

ಇದರಲ್ಲಿ ಸಂಕಲನಕಾರರ ತಂದೆಯವರಿಂದ ರಚಿತವಾದ ನಾಲ್ಕು ಜಾನಪದ ಕಥನಕವನಗಳಿವೆ. ಎಲ್ಲವೂ ಮುಗ್ಧಶಿವಭಕ್ತರ ಕಥಾವಸ್ತುಗಳಿಂದ ಕೂಡಿವೆ. ಮೊದಲನೆಯದು 'ಬಿಜ್ಜಮಹಾದೇವಿ' ಎಂಬ ಶಿವಶರಣೆಯ ಕಥೆ ಎರಡನೆಯದು 'ಬೇಡರ ಕಣ್ಣಯ್ಯ'ನ ಕಥೆ. ಮೂರನೆಯದು 'ಕೋಳೂರು ಕೊಡಗೂಸಿ'ನ ಕಥೆ. ನಾಲ್ಕನೆಯದು ಕುರುಬರ ಗೊಲ್ಲಾಳನ ಕಥೆ.

ಎಲ್ಲ ಕಥೆಗಳೂ ಕನ್ನಡ ಜಾನಪದ ವೃತ್ತವಾದ ತ್ರಿಪದಿಯಲ್ಲಿವೆ. ಜಾನಪದ ಜೀವನದಲ್ಲಿ ತ್ರಿಪದಿಛಂದಸ್ಸು ತುಂಬ ವ್ಯಾಪಕವಾದ ಸ್ಥಾನವನ್ನು ಪಡೆದಿದೆ; ಬೇರೆಬೇರೆ ಸಂದರ್ಭಗಳಲ್ಲಿ ಹೇಳುವ ಧಾಟಿಗಳ ಮೂಲಕ, ವಿವಿಧ ರೂಪವನ್ನೂ ಪಡೆದುನಿಂತಿದೆ. ಸಾಮಾನ್ಯವಾಗಿ ನಮ್ಮ ನಾಡಿನ ಹೆಂಗುಸರು ಹೇಳುವ ಬೀಸುವ ಕುಟ್ಟುವ ಹಾಡುಗಳೂ, ಜೋಗುಳಗಳೂ ಸೋಬಾನೆ ಪದಗಳೂ ತ್ರಿಪದಿಯಲ್ಲಿ ಇರುವುವಲ್ಲದೆ, ಗಂಡುಸರು ಹೇಳುವ ಹಂತಿಯ ಹಾಡು, ಬಂಡಿಹೊಡೆಯುವಾಗಿನ ಹಾಡು, ಯಾತದಿಂದ ನೀರೆತ್ತುವಾಗಿನ ಹಾಡು, ಹೋಳಿಯ ಹಾಡು ಇವೆಲ್ಲ ತ್ರಿಪದಿವೃತ್ತಗಳಲ್ಲಿಯೆ ರಚಿತವಾದುವುಗಳಿರುವುವು ಪ್ರಸ್ತುತ ಗ್ರಂಥದಲ್ಲಿಯ ನಾಲ್ಕು ಕಥನಕವನಗಳೂ ಹಂತಿಹೊಡೆಯುವಾಗಿನ ಹಾಡಿನ ಧಾಟಿಯಲ್ಲಿ ರಚಿತವಾಗಿವೆ.

ಹಂತಿಯ ಹಾಡುಗಳನ್ನು ಹೇಗೆ ಹೇಳುವರೆಂಬುದನ್ನು ನಮ್ಮ ಹಳ್ಳಿಯ ಜನರಿಗೆ ಹೊಸತಾಗಿ ಹೇಳಿಕೊಡಬೇಕಾದುದೇನೂ ಇಲ್ಲ; ಆದರೆ ಹಳ್ಳಿಯ ಜೀವನಕ್ಕೆ ತೀರ ಅಪರಿಚಿತರಾಗಿರುವ ನಗರವಾಸಿಗಳಿಗೆ, ಹಂತಿಯ ಹಾಡುಗಳನ್ನು ಹೇಳುವ ಪದ್ಧತಿಯು ಅಪರಿಚಿತವಾಗಿರುವುದು. ಇಂತಹರಿಗಾಗಿ ಇಲ್ಲಿ ಅದರ ವಿವರಣೆ ಅಗತ್ಯವಿದೆ.

ಸುಗ್ಗಿಯ ಕಾಲದಲ್ಲಿ ಧಾನ್ಯದ ರಾಶಿಗಳನ್ನು ಒಕ್ಕಬೇಕಾದಾಗ, ಕಣದಲ್ಲಿ ತೆನೆಗಳನ್ನೋ ತೆನೆಯ ಹುಲ್ಲನ್ನೋ ಹರಡಿ, ಹಂತಿಯಾಗಿ ಎತ್ತುಗಳನ್ನು ಕಟ್ಟಿ, ಅವುಗಳಿಂದ ಹಲವು ಗಂಟೆಗಳ ಕಾಲ ತುಳಿಸುವುದು ನಮ್ಮ ಪರಂಪರೆಯ ಪದ್ಧತಿಯಾಗಿದೆ. ರಾಶಿ ದೊಡ್ಡದಾಗಿರುವಂತೆ ಹೆಚ್ಚುಹೆಚ್ಚು ಎತ್ತುಗಳ ಹಂತಿಯನ್ನು ಕಟ್ಟಬೇಕಾಗುವುದು. ಈ ಹಂತಿಗಳನ್ನು ನಡೆಯಿಸುವವರು, ತಮ್ಮ ಬೇಸರಕಳೆದುಕೊಳ್ಳಲಿಕ್ಕೆಂದೋ ಮನೋರಂಜನೆಗೆಂದೋ ಹಾಡುಗಳನ್ನು ಹೇಳುವರು. ಇವು ಬಿಡಿ ತ್ರಿಪದಿಗಳಾಗಿಯೂ ಇರುವುವು; ತ್ರಿಪದಿಯಲ್ಲಿ ಹೆಣಿಕೆಗೊಂಡ ಕಥನಕವನಗಳಾಗಿಯೂ ಇರುವುವು. ಈ ಹಾಡುಗಳನ್ನು ಇಬ್ಬರು ಹಾಡುವರು. ಮೊದಲನೆಯವನು ತ್ರಿಪದಿಯ ಮೊದಲ ಚರಣವನ್ನೂ **ಎರಡನೆಯ ಚರಣದ ಮೂರು ಗಣಗಳನ್ನೂ ಕೂಡಿಸಿ ಪೂರ್ವಾರ್ಧವಾಗಿ ಹೇಳುವನು ಎರಡನೆಯವನು, ಎರಡನೆಯ ಚರಣದ ನಾಲ್ಕೂ ಗಣಗಳನ್ನೂ ಮೂರನೆಯ ಕಿರಿಯ ಚರಣವನ್ನೂ ಉತ್ತರಾರ್ಧವಾಗಿ ಹೇಳುವನು. ಬಿಡಿತ್ರಿಪದಿಯಾಗಿದ್ದರೆ, ಮೂರು ಮೂರು ಸಲ, ನಾಲ್ಕು ನಾಲ್ಕು ಸಲ ಹಾಗೆಯೆ ಹೇಳಿ, ಕೊನೆಗೆ 'ಹುಲುಲಿಗೋ'** ಎಂಬ ಉತ್ಸಾಹದ ಉದ್ಗಾರದೊಂದಿಗೆ ಮುಗಿಸುವರು; ಆ ಮೇಲೆ ಬೇರೆ ತ್ರಿಪದಿಯನ್ನು ಪ್ರಾರಂಭಿಸುವರು. ಅವರು ಹೇಳುವ ರೀತಿಗೆ ಉದಾಹರಣೆ:

ಒಬ್ಬ :—

ಕಲ್ಲಾs ಕಡಬನ ಮಾಡಿ ಮುಳ್ಳs ಶಾವಿಗಿ ಮಾಡಿ ಬನ್ನಿಯ ಎಲಿಯಾs ಪತರೋಳ್ಯೋ ||

ಇನ್ನೊಬ್ಬ :—

ಬನ್ನಿಯ ಎಲಿಯಾs ಪತರೋಳ್ಯೋ ಪಾಂಡವರು ಉಂಡೂ; ಕಳದಾರೋ ವನವಾಸೋ !

ಇಬ್ಬರೂ ಸೇರಿ :—

'ಓ ಹುಲುಲ್ಲಿಗೋ !'

ಬಿಡಿ ಪದಗಳಿದ್ದರೆ ಹೀಗೆ. ಕಥನಕವನಗಳಿದ್ದರೆ ಇದೇ ರೀತಿಯಲ್ಲಿ ಒಂದರ ಮುಂದೊಂದರಂತೆ ತ್ರಿಪದಿಗಳನ್ನು ಹೇಳುವರು. ಒಂದು ಬಗೆಯ ಜಾನಪದ ರಾಗ; ಏಳು ಮಾತ್ರೆಗಳ ಲಯದ ನಡಿಗೆ. ಅವರ ಆ ಹಾಡುಗಳ ಇಂಪು, ಹಂತಿಯ ಎತ್ತುಗಳ ದುಡಿತದ ದಣಿವನ್ನೂ ಹಿಂಗಿಸುತ್ತಿರಬಹುದು.

ಶಿವಶರಣರ ಕಥೆಗಳು ಗೊತ್ತಿರುವವರಿಗೆ ಇಲ್ಲಿಯ ಕವನಗಳಲ್ಲಿಯ ಯಾವ ಕಥೆಯೂ ಹೊಸದೆಂದು ಎನಿಸದಿರಬಹುದು. ಆದರೆ ಆ ಕಥೆಗಳನ್ನು ವಿವರಿಸುವ ಕವಿಯ ಕೆಚ್ಚುಗನ್ನಡದ ರೀತಿ ಎಲ್ಲರಿಗೂ ಹೊಸದೆನಿಸುವಂತಹದು. ಇಲ್ಲಿ ಸಂಕಲಿತವಾದ ಕವನಗಳ ಭಾಷೆಯ ರೀತಿ ಕೆಚ್ಚುಗನ್ನಡತನವನ್ನು ಅಲ್ಲಲ್ಲಿ ಕಳೆದುಕೊಂಡುದೂ ಉಂಟು. ಇದಕ್ಕೆ ಕಾರಣ ಸಂಪಾದಕರ ನಾಗರಿಕ ಅಭಿರುಚಿಯ ಸಂಪಾದನ ಕ್ರಮವೆ ಆಗಿರಬಹುದು. ಕಲಿತ ಕನ್ನಡಿಗ, ಜಾನಪದ ಕವಿಯ ಭಾಷೆಯನ್ನು ವ್ಯಾಕರಣದ ಸರಿಗೆ ಹಚ್ಚಿ ತಿದ್ದುವ ಕೆಲಸಕ್ಕೆ ಕೈ ಹಾಕಲಾಗದು. ಹೀಗೆ ಮಾಡಿದರೆ, ಭಾಷಾಶೈಲಿಯಲ್ಲಿ ವಿಷಮತೆ ತಲೆದೋರಿ, ಜಾನಪದ ಸಹಜಸೌಂದರ್ಯಕ್ಕೆ ಕೊರತೆಯುಂಟಾಗುವುದು. ಉದಾಹರಣೆಗಾಗಿ ಮೊದಲನೆಯ ಕವನದ **ಮೊದಲ** ಪದ್ಯವನ್ನೇ ತೆಗೆದುಕೊಳ್ಳೋಣ. ಅದು ಇಲ್ಲಿ ಹೀಗೆ ಸಂಪಾದಿತವಾಗಿದೆ:

" ಬಿಜ್ಜ ಮಹಾದೇವಿಯು, ಉಜ್ವಳ ಶಿವಶರಣೆಯು
ಸಜ್ಜೆಯೊಳು ಶಿವನು ಕೂಸಾಗಿ | ಮಲಗಿರಲು
ಸಜ್ಜಾಗುಣತಿನಿಸಿ ಸಲುಹಿದಳು ! "

ಮೂಲ ಜಾನಪದ ಕವಿಯು, ಈ ಬಗೆಯ ಶೈಲಿಯಲ್ಲಿ ಎಂದೂ ಬರೆದಿರಲಾರ. ಹೀಗವನು ಬರೆದಿದ್ದರೆ, **ಹಂತಿಯ** ಹಾಡಿನ ಪದ್ಧತಿಯಲ್ಲಿ ಹಾಡಲಿಕ್ಕೂ ಹಿಡಿತಡೆಯಾಗುತ್ತದೆ. ಜಾನಪದ ರೀತಿಯಲ್ಲಿ ಮೇಲಿನ ಪದ್ಯ ಸ್ವಲ್ಪ ಹೆಚ್ಚುಕಡಿಮೆ ಹೀಗೆ ಇರಬಹುದಾಗಿದೆ:

ಬಿಜ್ಜಮಹಾದೇವಿ— ಉಜ್ವಳ ಶಿವಶರಣೆ

ಸಜ್ಜಾಗಸ ಶಿವನೇ ಕೂಸಾಗಿ । ಮಲಗ್ಯಾನು
ಸಜ್ಜಾಗುಣಕಿನಿಸಿಕ ಸಲಸ್ಯಾಕೋ ॥

ಎರಡರಲ್ಲಿಯು ವ್ಯತ್ಯಾಸವನ್ನೂ ವಿಮರ್ಶಕರು ಕಂಡು ಹಿಡಿಯು-ವುದು. ಈ ಸಂಕಲನದಲ್ಲಿಯು ಎಲ್ಲ ಜಾನಪದ ಪದ್ಯಗಳಲ್ಲಿಯೂ ಪಾದಕರು ತಮ್ಮ ನಾಗರಿಕ ಕೈಯನ್ನಾಡಿಸಿ, ಜಾನಪದ ಶೈಲಿಯ ಂದರ್ಯಕ್ಕೆ ಕೊರತೆಯನ್ನುಂಟುಮಾಡಿದ್ದಾರೆಂದು ವಿಷಾದ-ದ ಹೇಳಬೇಕಾಗಿದೆ.

ಈ ಕಥನಕವನಗಳ ಕರ್ತೃಗಳಾದ ಕೈ. ವಾ. ಸಾವಳಿಗೆಯ್ಯ ಯ್ಯ ಗದಿಗಿಮಠ ಅವರು, ಓದು-ಬರೆಹಗಳನ್ನು ಸ್ವಲ್ಪವೂ ದವರೆಂದು ಸಂಪಾದಕರು ಹೇಳಿರುವರು. ' ಕುರಿತೋದದೆ ಕಾವ್ಯಪ್ರಯೋಗ ಪರಿಣತರ್ ' ಎಂದು ನೃಪತುಂಗನಿಂದ ಗಳಿಸಿಕೊಂಡ ಕನ್ನಡಿಗರ ಬಳಗಕ್ಕೆ ಸೇರಿದವರು ಈ ಕವಿಗಳು. ನೋಟಕ್ಕೆ ಇಲ್ಲಿಯ ಕವನಗಳು ಹಳ್ಳಿಗರವಾಗಿ ತೋರುವು-ತೂ ಕಾವ್ಯಸತ್ತ್ವದ ದೃಷ್ಟಿಯಿಂದ ನೋಡಿದರೆ, ಯಾವ ನಾಗ-ಕವಿಯ ಕೃತಿಯ ಎದುರೂ ಇವು ತಲೆತಗ್ಗಿಸುವಂತಿಲ್ಲ. ಪ್ರತಿ-ಂದು ಕವನದಲ್ಲಿಯೂ ಭಕ್ತಿಯು ಸ್ಥಾಯಿಭಾವವಾಗಿ ರುವುದು. ವಾತ್ಸಲ್ಯ, ಕರುಣ, ಅದ್ಭುತ, ಮುಗ್ಧತೆಗಳು ಾರಿಗಳಾಗಿ ಭಕ್ತಿಭಾವವನ್ನು ಉದ್ದೀಪಿಸುವುವು. ಒಂದೊಂದು ಕವನವನ್ನೂ ಒಂದೊಂದು ಜಾನಪದ ಖಂಡಕಾವ್ಯವೆಂದು ವಂತೆ ಇವು ಲಕ್ಷಣವಿಶುದ್ಧವಾಗಿವೆ.

ಲ್ಲಿ ಬರುವ ಭಾವನಾಚಿತ್ರಗಳೂ ವಾಸ್ತವವರ್ಣನೆಗಳೂ ಯಸ್ಪರ್ಶಿಯಾಗಿವೆ. ಬಿಜ್ಜಮಹಾದೇವಿ ಶಿವನ ಇರವಿಗಾಗಿ ಳುವ ಈ ಬಣ್ಣನೆಯನ್ನು ನೋಡಿ:

" ಡೋಗಿ ಬಟ್ಟಲ ಹಿಡಿದು, ಹೋಗಿ ಜಗದೊಳು ತಿರಿದು,
ಜೋಗ್ಯಾಗಿ ಬೂದಿ ಮೈತುಂಬ । ಬಡಕೊಂಡು
ಹೀಗಿದ್ದರ ನಾನು ಸಹಿಸುವೆನೆ ? ॥ "

" ಹಾವಿನಾಭರಣಗಳು ಯಾವ ಕಾಣದಿ ಉಂಟು ?
ಸಾವ ಬಯಸುವರೆ ಹೆಡೆಹಿಡಿದು । ತರವಲ್ಲ
ಹಾವ ಗೂಡೇಕೆ ಹುಡುಗಾಟ ? ॥ "

" ಸುಡಗಾಡ ವಾಸವದು ಕಡೆಗಾಲ ಜೀವನಿಗೆ
ಎಡೆಯಾಗುದೈತಿ ಕಡೆಗೊಮ್ಮೆ । ನಾನಿದ್ದು
ಸುಡುಗಾಡ ವಾಸ ನಿನಗೇಕೆ ? "

" ತೊಗಲ ಹೊದ್ದಿದಿ ದೇವ, ನಗುತಿದೆ ಜಗವೆಲ್ಲ
ತೆಗೆದಿಡೋ ರೂಪ ಒಪ್ಪುವದೆ ? । ಶಿವಲಿಂಗ
ಮಗುವಾದರೆನಗೆ ತೊಡಿಸುವೆನು ! "

ನಗೆ ಶಿವನು ಮಗುವಾದರೆ ತಾನು ಆ ಮಗುವನ್ನು ಹೇಗೆ ಸಿ-ಪಾಲಿಸುವಳೆಂಬುದನ್ನು ಈ ಮುಂದಿನ ಪದ್ಯಗಳಲ್ಲಿ ದ್ದಾಳೆ:

"ಗುಂಡಿಯದಾ ಮುಂಡಾಸ ಗೊಂಡೆಗಳ ಗರಿಯುಂಟು
ತೊಂಡಲುಮುತ್ತಿನ ತುರಾಯಿ । ಚೆಲುವಂಗಿ
ಗುಂಡಂಚ ಪಂಜೆ ಮುತ್ತಚ್ಚಿ ॥ "

"ರಂಜಣಿಗಿ ಅಗ್ಗಣಿಗಿ ಮಂಜುಮರಿಯುಲು ಕಾಸಿ
ನಂಜುಂಡ ನಿನ್ನ ಎರೆಯುವೆನು । ಮಗನಾಗು
ಕೆಂಜೆಡೆಯ ಒಕ್ಕಿ ಹೆಡಸೊಗೆದು ॥ "

"ಮುಂಚ್ಯಾಮರೆ ಮಾಡ್ಯಾಣಿಸಿ, ಎಚ್ಚರದಿ ಸಲಹುವೆನು
ಹೆಚ್ಚೇಕೆ ಶಿವನೆ ಮಗುವಾಗು । ಎಣಿಯಾರು
ಇಚ್ಛೆಯುಲಿ ನೀನು ಮಗನಾಗಿ ॥ "

ಹೀಗೆ ಉದಾಹರಣೆಗಳನ್ನು ಕೊಡುತ್ತ ಹೋದರೆ, ವಿವಿಧ ವರ್ಣನೆಗಳಿಗೆ ಮಾದರಿಗಳೆಂದು ಇಡಿಯ ಕಥನಕವನಗಳನ್ನೆ ಉದಾಹರಿಸುವ ಸಂದರ್ಭ ಬಂದೀತು. ಬೇಡರ ಕನ್ನಯ್ಯ, ಗೊಲ್ಲಾಳ ಇವರ ಕಥನಕವನಗಳಂತೂ ರಸಘಟ್ಟಿಗಳು. ಇವು-ಗಳನ್ನು ಸಂಪೂರ್ಣವಾಗಿ ಓದಿಯೇ ಸವಿಯನ್ನು ಸವಿಯಬೇಕು. ಬೇಡರ ಕನ್ನಯ್ಯನ ರೂಪದ—ಗುಣದ—ವರ್ಣನೆಯ ಪದ್ಯಗಳನ್ನೆರಡನ್ನು ನೋಡಿ :

"ಕಣ್ಣು ಗುಲಗಂಜೇನ, ಬಣ್ಣ ಕಾಮೋಡೇನ
ಬೆನ್ನ ಮೈಕಟ್ಟು ಹುರಿಯೇನ ಕನ್ನನಿಗೆ
ನುಣ್ಣನ್ನ ವಿಭೂತಿ ಬೆಡಗೇನ ॥ "

"ಬಿಲ್ಲುವಿದ್ಯೆಯ ಬಂಟ ಹುಲ್ಲುಬೀಜಕೆ ಗುರಿಯು
ಮಲ್ಲ ವಿದ್ಯೆಯೊಳು ಭೀಮಯ್ಯ । ಕನ್ನಯ್ಯ
ಬಿಲ್ಲಭೂಪತಿಯು ಹಾದೇನೊ ! ॥ "

ಕನ್ನಯ್ಯನ ಬಿಲ್ಲುಗಾರಿಕೆಯು ಬಲ್ಮೆಯೆಂತಹದು? ಹುಲ್ಲಬೀಜಕ್ಕೆ ಕೂಡ ಗುರಿತೊಡೆಯುವಂತಹದು. ಇಲ್ಲಿಯ ಪಡೆಮಾತಿನ ಬೆಡಗನ್ನು ನೋಡಿ ಇಂತಹ ಬೆಡಗು ಎಲ್ಲೆಲ್ಲಿಯೂ ಕಾಣುವುದು.

ಈ ಕವನಸಂಕಲನವನ್ನು ಪ್ರಕಟಿಸಿ ಸಂಪಾದಕರು ಕನ್ನಡ ಸಾಹಿತ್ಯದೇವಿಗೊಂದು ಹೊಸ ತೊಡಿಗೆ ತೊಡಿಸಿದ್ದಾರೆ. ಇನ್ನೂ ಇಂತಹ ಜಾನಪದ ಕಾವ್ಯಗಳನ್ನು ಪ್ರಕಟಿಸಿ ಬೇರೆ ತೊಡಿಗೆಗಳನ್ನೂ ತೊಡಿಸಲಿದ್ದಾರೆ. ಮೂರುಸಾವಿರ ಪದ್ಯಕ್ಕೆ ಮಿಕ್ಕುವ ಜಾನಪದ ಮಹಾಭಾರತವೊಂದನ್ನೂ ಶ್ರೀ. ಬಿ ಎಸ್. ಗದ್ದಿಗಿಮಠ ಅವರು ಸಂಗ್ರಹಿಸಿದ್ದಾರಂತೆ. ಅದನ್ನೂ ಅವರು ಬೆಳಕಿಗೆ ತರಬೇಕೆನ್ನುವ ವಿಚಾರದಲ್ಲಿದ್ದಾರೆ. ಕನ್ನಡ ರಸಿಕರೂ ಕರ್ನಾಟಕದ ಸಾಂಸ್ಕೃತಿಕ ಸಂಸ್ಥೆಗಳೂ, ಈ ಜಾನಪದ ಕಾವ್ಯಮಾಲೆಯ ಕುಸುಮಗಳು ಬೇಗಬೇಗನೆ ಅರಳುವಂತೆ ಸಂಪಾದಕರಿಗೆ ಅನುಕೂಲತೆಯನ್ನು ಒದಗಿಸಿಕೊಡಬೇಕೆಂದು ನಮ್ಮ ಹಾರಯಿಕೆ. ಶ್ರೀ. ಬಿ. ಎಸ್. ಗದ್ದಿಗಿಮಠ ಅವರು, ಇನ್ನು ಮುಂದಿನ ಗ್ರಂಥಗಳನ್ನು ಸಂಪಾದಿಸು-ವಾಗ, ಜಾನಪದ ದೃಷ್ಟಿಯನ್ನಿರಿಸಿಕೊಂಡೇ ಸಂಪಾದಿಸಬೇಕೆಂದು ನಮ್ಮ ವಿನಯದ ಬೇಡಿಕೆ.

—ಬಿ. ಪಿ. ಎಸ್. ರಾವ್.

ಸಾಹಿತ್ಯವಿಹಾರ

卐

ಭಾಗೀರಥಿ

(ಗೀತರೂಪಕ)

ಈ ಸಂಚಿಕೆಯಲ್ಲಿ ಪ್ರಕಟವಾದ 'ಭಾಗೀರಥಿ' ಗೀತರೂಪಕವು ಕಳೆದ ತಿಂಗಳ ೭ನೆಯ ದಿನಾಂಕ ರಾತ್ರಿ ೯-೧೫ ರಿಂದ ೧೦-೩೦ರ ವರೆಗೆ, ಧಾರವಾಡದ ಆಕಾಶವಾಣಿಯಿಂದ ಬಿತ್ತರಗೊಂಡಿತು. ಇದರಲ್ಲಿಯ ಎಲ್ಲ ಪದ್ಯಗಳಿಗೆ ಭಾವೋಚಿತ ರಾಗಗಳನ್ನು ಹೊಂದಿಸಿ ಕೊಟ್ಟವರು, ಆಕಾಶವಾಣಿ ಕೇಂದ್ರದಲ್ಲಿ ಮುಖ್ಯ ಸಂಗೀತ ಕಲಾವಿದರಾದ ಶ್ರೀಮಾನ್ ದೇಶಪಾಂಡೆ ಗುರುರಾಯರು. ಶ್ರೀಮಾನ್ ಕೆ. ಜಿ. ಹಲಸಿಗಿ ಬಿ ಎ ಅವರು, ಈ ರೂಪಕಪ್ರದರ್ಶನಕ್ಕೆ ಸಂಘಟಕರಾಗಿ ಇದ್ದರು. ಗೀತರೂಪಕವಾದುದರಿಂದ, ಉತ್ತರ ಕರ್ನಾಟಕದ ಕೆಲವು ಸುಪ್ರಸಿದ್ಧ ಸಂಗೀತ ವಿದ್ವಾಂಸರೂ ಹಲವು ಉದಿತೋದಿತ ಸಂಗೀತಗಾರರೂ ಇದರಲ್ಲಿ ಭಾಗವಹಿಸಿದ್ದರು. ಸಂಗೀತವಿದುಷಿ ಶ್ರೀಮತಿ ಗಂಗೂಬಾಯಿ ಹಾನಗಲ್ಲ ಅವರು ಇದರಲ್ಲಿಯ ಪ್ರಮುಖ ಪಾತ್ರವಾದ 'ಸುರಗಂಗೆ'ಯ ಪಾತ್ರವನ್ನು ನಿರ್ವಹಿಸಿದುದು ವಿಶೇಷವಾದ ಸಂಗತಿ. ಶ್ರೀಮಾನ್ ನಾರಾಯಣ ರಾವ್ ಮಜುಮದಾರರು ದಿಲೀಪನ ಪಾತ್ರವನ್ನೂ ಶ್ರೀಮಾನ್ ಬಸವರಾಜ ಮನಸೂರರು ಭಗೀರಥನ ಪಾತ್ರವನ್ನೂ ತೆಗೆದುಕೊಂಡಿದ್ದರು. ಕುಮಾರಿ ಕೃಷ್ಣಾ ಹಾನಗಲ್ಲ, ಕುಮಾರಿ ಶಾರದಾ ಹಾನಗಲ್ಲ, ಕುಮಾರಿ ಸರೋಜಿನಿ ನಾಡಕರ್ಣಿ, ಕುಮಾರಿ ವನಮಾಲಾ ದೇಶಪಾಂಡೆ ಇವರು ಕ್ರಮವಾಗಿ ಯಮುನಾ, ಶರಯೂ, ಸರಸ್ವತಿ, ಸುದಕ್ಷಿಣಾ ಪಾತ್ರಗಳನ್ನು ವಹಿಸಿಕೊಂಡಿದ್ದರು. ಧಾರವಾಡ ಆಕಾಶವಾಣಿ ಕೇಂದ್ರದವರು ಈ ಗೀತರೂಪಕವನ್ನು ಧ್ವನಿಮುದ್ರಿಕೆಗಳನ್ನಾಗಿ ಅಣಿಗೊಳಿಸಿದ್ದಾರೆ. ಈ ಗೀತರೂಪಕವನ್ನು ಸಾಹಿತ್ಯಕದೃಷ್ಟಿಯಿಂದ ವಿಮರ್ಶೆ ಮಾಡಿ ಕಳುಹಿದಲ್ಲಿ, ಒಳ್ಳೆಯವೆಂದು ತೀರ್ಪುಗೊಂಡ ಮೊದಲಿನೆರಡು ವಿಮರ್ಶೆಗಳನ್ನು ಮುಂದಿನ ಸಂಚಿಕೆಯ ಈ ಸಾಹಿತ್ಯವಿಹಾರದಲ್ಲಿ ಪ್ರಕಟಿಸಲಾಗುವುದು. ವಸ್ತು-ರಚನೆ, ಪಾತ್ರಪೋಷಣೆ, ಭಾಷಾಶೈಲಿ, ಛಂದೋವೈವಿಧ್ಯ ಮೊದಲಾದುವುಗಳ ವಿಚಾರ ವಿಮರ್ಶೆಯಲ್ಲಿ ಬಂದಿರಬೇಕು. ವಿಮರ್ಶೆ ಜಯಂತಿಯ ಒಂದು ವರೆ ಮುದ್ರಿತ ಪುಟವನ್ನು ಮೀರಬಾರದು.

ಸಂ. ಜ. ಧಾ.

ಶ್ರೋತೃಗಳೊಬ್ಬರ ಸಂತೋಷಪ್ರದರ್ಶನ

('ಭಾಗೀರಥಿ' ರೂಪಕವನ್ನು ಬಾನುಲಿಯಲ್ಲಿ ಕೇಳಿದ ಶ್ರೋತೃಗಳೊಬ್ಬರು ಜಯಂತಿಯ ಸಂಪಾದಕರಿಗೆ ಬರೆದ ಪತ್ರ.)

"ಪ್ರಿಯ ಸಂಪಾದಕರೆ,

ಜುಲೈ ೭ನೆಯ ತಾರೀಖಿನ ರಾತ್ರಿ ೯|| ಗಂಟೆಯಿಂದ ೧೦|| ಗಂಟೆಯ ವರೆಗೆ ನಾನು ಸಾಹಿತ್ಯ-ಸಂಗೀತಗಳ ಮಧುರ ಮಿಶ್ರಣದ ರಸಾನ್ನವನ್ನುಂಡು ಆನಂದದಲ್ಲಿ ಈಜಾಡಿದೆ. ನನಗಾದ ಆನಂದವನ್ನು ಜನರೆದುರು ಪ್ರದರ್ಶಿಸಲು ನಿಮ್ಮ ಜಯಂತಿ ನೆರವು ಕೊಡುವುದೆಂದು ಆಶೆಯಿರಿಸಿಕೊಂಡಿದ್ದೇನೆ.

ನಾನು ಆ ದಿನ ಧಾರವಾಡದ ಆಕಾಶವಾಣಿ ಕೇಂದ್ರದ ಕಾರ್ಯಕ್ರಮಪತ್ರಿಕೆಯನ್ನೇನೂ ನೋಡಿರಲಿಲ್ಲ. ನನ್ನ ನಿತ್ಯದ ಪದ್ಧತಿಯಂತೆ ಇಂಗ್ಲಿಷಿನಲ್ಲಿಯ ಸುದ್ದಿಗಳನ್ನು ಕೇಳುವುದಕ್ಕಾಗಿ ರೇಡಿಯೊ ಯಂತ್ರವನ್ನು ಎಚ್ಚರಿಸಿದ್ದೆ. ಸುದ್ದಿಗಳು ಮುಗಿದುವು. ಕೂಡಲೆ ಧಾರವಾಡದ ಕಾರ್ಯಕ್ರಮ ಸೂಚಕನು 'ಭಾಗೀರಥಿ' ಗೀತನಾಟಕವಿದೆಯೆಂದು ಸಾರಿದುದರಿಂದ, ಕುತೂಹಲಗೊಂಡು ರೇಡಿಯೋ ಯಂತ್ರವನ್ನು ನಿಲ್ಲಿಸದೆ, ಕೇಳಲು ಕುಳಿತೆ. ಪಾತ್ರ ವಹಿಸಿದವರ ಹೆಸರುಗಳನ್ನು ಕೇಳುತ್ತ ಹೋದಂತೆ ನನ್ನ ಆತುರ ಇನ್ನಿಷ್ಟು ಹೆಚ್ಚಾಯಿತು. ಶ್ರೀಮತಿ ಗಂಗೂಬಾಯಿ ಹಾನಗಲ್ಲ ಅವರು ಪಾತ್ರ ವಹಿಸಿರುವರೆಂಬುದು ನನಗೆ ಆಶ್ಚರ್ಯವನ್ನೂ ಉಂಟುಮಾಡಿತು. ತುಂಬ ಮನಸ್ಸುಗೊಟ್ಟೇ ಕೇಳುತ್ತ ಕುಳಿತೆ. ಮೊದಲನೆಯ ಪ್ರಾರ್ಥನಾಪದ್ಯದ ಸಮೂಹಸಂಗೀತದ ಮಾಧುರ್ಯವೇ ನನ್ನ ಮೈಯಲ್ಲಿ ಪುಲಕವನ್ನು ಉಂಟುಮಾಡಿತು. ನಿರೂಪಕನು ವಿವರಿಸಿದ ಪೂರ್ವಕಥೆಯು, ನಾಟಕವನ್ನು ತಿಳಿದುಕೊಳ್ಳಲಿಕ್ಕೆ ನನಗೆ ಬಹಳ ಸಹಾಯವನ್ನು ಮಾಡಿತು.

ದಿಲೀಪನ ತಪಸ್ಸೂಚನೆ, ಗಂಗಾಪ್ರಾರ್ಥನೆಗಳಾದ ತರುವಾಯ, ಯಮುನಾ-ಶರಯೂ-ಸರಸ್ವತೀ ನದೀಕನ್ಯೆಕೆಯರು ಕುಣಿಯುತ್ತ ಹಾಡಿದ 'ಸಾಗುವೆವು ನಾವು ಸಾರುವೆವು' ಎಂಬ ಹಾಡು, ನನ್ನ ಮನಸ್ಸನ್ನೆಲ್ಲ ಸೂರೆಗೊಂಡಿತು. ಮೂರೂ ನದಿಗಳ ಸಂಭಾಷಣೆಯ ರಾಗವೈವಿಧ್ಯ, ಸಂಗೀತದ ಹಬ್ಬವಾಯಿತು.

ಮುಂದಿನ ಭಾಗದಲ್ಲಿ ಭಗೀರಥನ ತಾಯಿ—ಸುದಕ್ಷಿಣೆಯ ಹಾಡುಗಾರಿಕೆ ಭಾವಪೂರ್ಣವಾಗಿತ್ತು. ಭಗೀರಥನ ಹಾಡು ಮಾತ್ರ ಆ ಪಾತ್ರದ ವೈಶಿಷ್ಟ್ಯಕ್ಕೆ ತಕ್ಕುದಾಗಿರಲಿಲ್ಲವೆಂದು ಹೇಳಲು ವಿಷಾದವೆನಿಸುತ್ತದೆ.

ಮೂರೂ ನದಿಗಳು ಸೇರಿ ಗಂಗಾನದಿಯ ಸ್ತೋತ್ರವನ್ನು ಮಾಡಿದ ಭೈರವೀರಾಗದಲ್ಲಿಯ ಹಾಡು: 'ಅಮರ ತರಂಗಿಣಿ ಚಿರಕಲ್ಯಾಣೀ ವರುಣರಾಜ್ಯರಾಣೀ' ಎಂಬುದು ನನ್ನ ಕಿವಿಯಲ್ಲಿ ಈಗಲೂ ಉಳಿದುಕೊಂಡಿದೆ. ಗಂಗೆ ಮತ್ತು ಮೂರೂ ನದಿಗಳ ಸಂಭಾಷಣಭಾಗವೆಂದರೆ, ಸಂಗೀತದ ದೃಷ್ಟಿಯಿಂದ ಅದೊಂದು ರಸತರಂಗಿಣಿ. ಯಮುನೆಯ ಪಾತ್ರವಹಿಸಿದವರ ಭಾವೋತ್ತೇಜಕ ಗೀತಪದ್ಧತಿಯನ್ನು ಎಷ್ಟು ಪ್ರಶಂಸಿಸಿದರೂ ಕಡಿಮೆ.

ಕೊನೆಯ ಭಾಗದಲ್ಲಿ ಯಮುನೆ-ಭಗೀರಥರ ಸಂಭಾಷಣ ಸಂಗೀತವೂ ಚೆನ್ನಾಗಿದ್ದಿತೆಂದೇ ಹೇಳಬೇಕು. ಆದರೆ, ಯಮುನೆಯ

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ.

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ ಬರೆಯಿರಿ :

卐

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ.

...ಸ್ವರಸಂಗೀತದ ಮುಂದೆ ಭಗೀರಥನ ಒಡಕುದನಿಯು ಸಂಗೀತ ...ಷ್ಟಿ ಭಾವದ ಅಭಾಸಕ್ಕೆ ಕಾರಣವಾಯಿತು.

ಭಗೀರಥನ ಗಂಗಾಪ್ರಾರ್ಥನೆ ಸಂಗೀತದೃಷ್ಟಿಯಿಂದ ಅಲ್ಲದೆ ...ೋದರೂ, ಸಾಹಿತ್ಯದೃಷ್ಟಿಯಿಂದ ಆಕರ್ಷಕವೆನಿಸಿತು. ಭಗೀರಥ—...ಂಗಾ ಸಂಭಾಷಣದಲ್ಲಿಯೂ ಸಂಗೀತ ವಿಷಮಭಾವವನ್ನು ಹುಟ್ಟಿ...ತು. ಗಂಗೆಯ ಪಾತ್ರವಹಿಸಿದವರ ಶುದ್ಧ ಮಧುರ ಸಂಗೀತ...ದುರು, ಭಗೀರಥನ ಬಿರುದನಿಯ ಹಾಡಿಕೆ ಕಳೆಗೇಡಿಯಾಗಿ ...ಂಡಿತು. ಆದರೂ ಕೊನೆಯ ವರೆಗೂ ನಾಟಕವನ್ನು ಆಸ್ಥೆಯಿಂದ ...ಳಿದೆ; ಬಹಳ ಆನಂದ ಪಟ್ಟೆ. ಈ ಮಾದರಿಯ ಗೀತನಾಟಕ ...ಳಿದುದು ನಾನು ಮೊದಲನೆಯ ಸಾರೆ. ಇಂತಹ ನಾಟಕ...ಳನ್ನು ಆಕಾಶವಾಣಿಯವರು ಆಗಾಗ ಬಿತ್ತರಿಸುತ್ತಿದ್ದರೆ, ತುಂಬ ...ಪ್ರಯೋಜನವಾಗುವುದು. ಸಾಹಿತ್ಯ ಎಂದರೆ ಸಾಹಿತ್ಯದ ...ಸೌಂದರ್ಯ ಸವಿಯಲು ಸಿಕ್ಕುವುದು; ಸಂಗೀತಪ್ರಿಯರಿಗೆ ಸಂಗೀತ ...ವೈವಿಧ್ಯವೂ ಕೇಳಲಿಕ್ಕೆ ದೊರೆಯುವುದು.

ಈ ನನ್ನ ಪತ್ರವನ್ನು ಪ್ರಕಟಿಸಬೇಕೆಂದು ನನ್ನ ಇಚ್ಛೆ. ಆದರೆ ಪ್ರಕಟಿಸುವುದಾದಲ್ಲಿ ನನ್ನ ನಿಜವಾದ ಹೆಸರನ್ನು ಪ್ರಕಟಿಸಬೇಡಿರಿ. —ಸಂಗೀತಪ್ರಿಯ ' ಎಂದು ಹಾಕಬಹುದು.

ತಮ್ಮ

............"

ಈ ಕಾಗದ ಬರೆದ ಸ್ನೇಹಿತರು, ಸಂಗೀತದೃಷ್ಟಿಯಿಂದ ಮಾತ್ರ ಈ ಗೀತರೂಪಕವನ್ನು ವಿಮರ್ಶಿಸಿದ್ದಾರೆ. 'ವಿಮರ್ಶಿಸಿದ್ದಾರೆ' ಎನ್ನುವುದಕ್ಕಿಂತ 'ಮನವಾರೆ ಪ್ರಶಂಸಿಸಿದ್ದಾರೆ' ಎಂದು ಹೇಳುವುದೇ ಒಳ್ಳೆಯದು. ಈ ಗೀತರೂಪಕ ಬಹಳ ಜನ ಶ್ರೋತೃಗಳಿಗೆ ಮೆಚ್ಚಿಕೆಯೆನಿಸಿದ್ದರೆ, ಧಾರವಾಡದ ಆಕಾಶವಾಣಿಯ ಅಧಿಕಾರಿಗಳು ಅಭಿನಂದನೆಗೆ ಪಾತ್ರರೇ ಸರಿ! ಆದರೆ ಇಂತಹ ನಾಟಕಗಳ ಸವಿಯನ್ನು ಸಂಪೂರ್ಣವಾಗಿ ಸವಿಯುವಂತಹ ರಸಿಕತೆ ನಮ್ಮಲ್ಲಿಯ ಬಹುಸಂಖ್ಯಾಕರಲ್ಲಿ ಇನ್ನೂ ಒಡಮೂಡಬೇಕಾಗಿದೆ. ಇಂತಹ ನಾಟಕಗಳಲ್ಲಿ ಸಾಹಿತ್ಯ, ಸಂಗೀತದ ಸಹಾಯದಿಂದ ಕಳೆಗೊಳ್ಳಬೇಕಾಗಿರುವುದು. ಸಾಹಿತ್ಯದ ತಿಳಿವಳಿಕೆಯಿಲ್ಲದ ಬಹುಜನರಿಗೆ, ಇದರಲ್ಲಿಯ ಸಾಹಿತ್ಯ-ಸಂಗೀತಗಳೆರಡರ ಬೆಲೆಯೂ ತಿಳಿಯದೆ ಬೇಸರವನ್ನುಂಟುಮಾಡುವ ಸಂಭವವೂ ಇದೆ. ಈ ಬಗೆಯ ನಾಟಕಗಳನ್ನು ಕೇಳಿದ ರಸಿಕ ವಿಮರ್ಶಕರು ಸಾಹಿತ್ಯ-ಸಂಗೀತಗಳೆರಡರ ದೃಷ್ಟಿಯಿಂದಲೂ ವಿಮರ್ಶೆಮಾಡಿ, ಆಗಾಗ ಜನರ ಕಣ್ಣೆದುರು ಇರಿಸುತ್ತ ಹೋಗುವುದರಿಂದ, ಇವುಗಳ ವೈಶಿಷ್ಟ್ಯವೇನೆಂಬುದು ಅವರಿಗೆ ತಿಳಿದೀತು. ಮೇಲಿನ ಪತ್ರ ಬರೆದ ನಮ್ಮ ಸ್ನೇಹಿತರು, ಇಂತಹ ತಿಳಿವಳಿಕೆಗೆ ಸಹಾಯವಾಗುವಂತೆ, ಸವಿಗಾರರಾಗಿ ಪತ್ರ ಬರೆದು ಹೊಸ ಉಪಕ್ರಮವನ್ನು ಮಾಡಿದ್ದಾರೆ. ಎಂತಲೇ ಅವರ ಪತ್ರವನ್ನು ಜಯಂತಿಯಲ್ಲಿ ಪ್ರಕಟಿಸಲಾಗಿದೆ.

ಸಂ. ಜ. ಧಾ.

(೧೧೦ನೆಯ ಪುಟದಿಂದ ಮುಂದುವರಿದುದು)

ಕಮಲಕ್ಕ :— ಮತ್ತ, ವಾರದಾಗ ಆರು ಪೌಂಡು ಸಕ್ರಿ ಖರ್ಚಾಗತೇತಿ ಅಂತ ತಿವಿದು ಮಾತಾಡೂ ಮುಂದ ಹ್ಯಾಂಗ ?

ಗಂಡ :— ಅಂತೂ ಹಾಂಗಾರ Austieity-measures ಸುರು ಮಾಡಿದೀ ಅನ್ನು ?

ಕಮಲಕ್ಕ :— ಸಾಕು ನೀವು ಇಲ್ಲದ್ದ ರಿಟರಿಟ ಹಚ್ಚಬ್ಯಾಡ್ರಿ. ಇಬ್ಬರ ನಡುವೆ ಒಂದು ಕಪ್ಪು ಚಹಾಕ್ಕ ಇಟ್ಟೇನಿ; ಸೋಸಿಗೊಂಡು ಬರತೇನಿ ತಡೀರಿ. (ಎನ್ನುತ್ತ ಒಳಗೆ ಹೋಗುವಳು.)

ಗಂಡ :— ಆದರ ಚಹಾದ ವ್ಯಾಳ್ಯಾಕ್ಕ ಬಂದಾನಂತ ಒಂದು ಬಸೀನಾರ ಕೊಡಲಿಕ್ಕೆ ಬರತಿತ್ತು.

ಕಮಲಕ್ಕ :— (ಚಹದ ಕಪ್ಪು ಬಸಿ ಸಪ್ಪಳ ಮಾಡುತ್ತ) ಒಂದು ಕಪ್ಪಿನಾಗ ಎರಡು ಬಸಿ ಚಹಾ ಇರತದ ಗೊತ್ತಿಲ್ಲೇನು! ನಿಮಗ ಕಪ್ಪು, ನನಗ ಬಸಿ.

ಗಂಡ :— ದಾಂಪತ್ಯ ಅಂದರ ಕಪ್ಪು ಬಸಿ ಕೂಡಿಧಾಂಗ ಇರಬೇಕು ನೋಡು.

ಕಮಲಕ್ಕ :— ಕಪ್ಪು ಬಸಿ ಬಡದಾಡಿದರ ಏನು ಹಣೇಬರಹ ಆಗತದ ನೋಡ್ರೀ ಆತು! (ನಗುತ್ತ ಚಹ ಕುಡಿಯುತ್ತಿರುವಾಗ).

ಮುಗಿದುದು

ಉತ್ತರ ರಾಮಕಥೆ

ಆದಿಕಾವ್ಯವೆನಿಸಿದ 'ವಾಲ್ಮೀಕಿ ರಾಮಾಯಣ'ವು ಸಂಸ್ಕೃತ ಭಾಷೆಯಲ್ಲಿದೆ. ಆದರಂತೆ, ಸರಸವಾದ ಕನ್ನಡದ, 'ಬಾಲಕಾಂಡದಿಂದ ಯುದ್ಧಕಾಂಡದವರೆಗಿನ" ತೊರವೆಯ ನರಹರಿಯ ಗ್ರಂಥವು (ರಚಿತವಾದಂದಿನಿಂದ ಇಂದಿನ ತನಕ) ಮನೆಮನೆಗಳಲ್ಲೂ, **ಬಿಡುಹೊತ್ತಿನ** ಸದುಪಯೋಗಕ್ಕೂ ಜ್ಞಾನಾಭಿವೃದ್ಧಿಗೂ ಬಳಸುತ್ತಿರುವುದೆಂಬುದು ಪ್ರತ್ಯೇಕ ಬರೆಯಬೇಕಿಲ್ಲ. ಆದರೆ, ಅದೇನೋ ಕಾರಣಾಂತರದಿಂದ ಅದರೊಂದಿಗೆ 'ಉತ್ತರಕಾಂಡ'ವು ದೊರೆಯುವುದಿಲ್ಲ, ರಚಿಸಿಲ್ಲ! ಅದು ಕಾರಣದಿಂದ, ಯೋಗೀಂದ್ರನೆಂಬವನು ಕುಸುಮಷಟ್ಪದಿಯಾಗಿಯೂ, ತಿರುಮಲೆ ವೈದ್ಯನು ಭಾಮಿನೀಷಟ್ಪದಿಯಾಗಿ ಒಂದು ಸಾವಿರ ಪದ್ಯಗಳಲ್ಲೂ, ನಾರಾಯಣ ಕವಿಯು ಇದೇ ಧಾಟಿಯಲ್ಲಿ ಎರಡು ಸಾವಿರ ಪದ್ಯಗಳಲ್ಲೂ ರಚಿಸಿದ್ದಾರೆ. ಇಲ್ಲಿ ಹೇಳಿದ ಮೊದಲನೆಯ ಗ್ರಂಥವು ಈದೀಗ ಧಾರವಾಡದ ಕನ್ನಡ ಸಂಶೋಧನಾ ಸಂಸ್ಥೆಯಿಂದ ಪ್ರಕಟವಾಗಲಿಕ್ಕಿದೆಯೆಂದು ತಿಳಿದು ಬರುತ್ತಿದೆ. ಹಾಗೂ ಎರಡನೆಯ ಗ್ರಂಥವಾದರೋ, ಮೈಸೂರಲ್ಲಿ ಹಲವರುಷಗಳ ಹಿಂದೆಯೇ ಪ್ರಕಟಿತವಾಗಿದೆ. ಆದರೂ, ಆ ತೊರವೆ ರಾಮಾಯಣದ ಗಾಂಭೀರ್ಯ ಹಾಗೂ ಸರಸತೆಯೊಂದಿಗೆ ಕಥಾವಿಸ್ತರಣವನ್ನೂ ಕೈಗೊಂಡವನೆಂದರೆ, ನಾರಾಯಣ ಕವಿಯೆಂದು ಧಾರಾಳವಾಗಿ ಹೇಳಬಹುದು. **ಅದೇ 'ಉತ್ತರ ರಾಮಕಥೆ'ಯೆಂಬ ಉತ್ತರಕಾಂಡ ರಾಮಾಯಣವು.**

ಶ್ರೀಮಾನ್ 'ರಾಷ್ಟ್ರಕವಿ,' ಎಂ. ಗೋವಿಂದ ಪೈ (ಮಂಜೇಶ್ವರ), ಅವರೊಮ್ಮೆ ಹೀಗೆಂದರು: "ಈ ಗ್ರಂಥವು ವಿರಳವಾಗಿ ದೊರೆಯುವುದು, ಮಂಜೇಶ್ವರದಲ್ಲೇ ೮-೧೦ ಪ್ರತಿಗಳಿವೆ, ಇತ್ತೀಚೆಗೆ ಪಾಣೆಮಂಗಳೂರು, ಕಟಪಾಡಿಗಳಲ್ಲೂ ಇದೆಯೆಂದು ತಿಳಿದಿದೆ. ಇದು ತನಗೆ ವಿಸ್ಮಾಪನವಾಗಿತ್ತು!" ಪರಂತು, ೧೯೫೦ನೆ ಇಸವಿಯಲ್ಲಿ ನಮ್ಮ ನೆರೆಯಲ್ಲೊಂದು ಪ್ರತಿ ದೊರಕಿತು, ಅದರ ಕಾಗದಪ್ರತಿಮಾಡಲು ನನಗೆ ಒದಗಿತು. ಅದು ಶಿಥಿಲವಾದುದರಿಂದ, ಶ್ರೀ. ಗೋವಿಂದ ಪೈಯವರಿಂದಲೇ ಇನ್ನೊಂದು ಪ್ರತಿಯನ್ನು ಎರವಲಾಗಿ ತಂದು ಸಂಪ್ರತಿಸಿದೆನು. ಆದರೂ, ಈ ಗ್ರಂಥದ (ಹಾಗೂ ಇನ್ನಿತರ ಅಪ್ರಕಟಿತ ಗ್ರಂಥಗಳ) ತಾಳೆಯೋಲೆಯ ಪ್ರತಿಗಳು ಬೇರೆಡೆಯಲ್ಲಿ ಸಿಕ್ಕುತ್ತವೆಯೋ ಎಂದು ಹುಡುಕುತ್ತಿದ್ದೆ. ಇದೀಗಲೋ, ಪಾವಂಜೆಯಲ್ಲಿರುವ ಬ್ರ. ಶ್ರೀ. ದ್ವಿವೇದಿ........ ....ಶಾಸ್ತ್ರಿಯವರಲ್ಲಿ ಇನ್ನೊಂದು ಈ ಗ್ರಂಥದ ಪ್ರತಿ ದೊರಕಿತು! ಅಂತೂ, ಮೂರು ಪ್ರತಿಗಳ ಪರಿಶೀಲನೆಯಾಯ್ತು! ಈ ಅಮೌಲ್ಯ ಗ್ರಂಥವನ್ನು ಕನ್ನಡ ಸಂಸ್ಥೆ ಹಾಗೂ ಪ್ರಕಾಶಕರು ಯಾರಾದರೂ ಅಚ್ಚುಮಾಡಿಸುವ ಮಹದೌದಾರ್ಯವನ್ನು ತಾಳುವಲ್ಲಿ, ಆ ಬಗ್ಗೆ ಯಥಾಶಕ್ತಿ ಹಾಗೂ ಯಥಾಮತಿ ನೆರವಾಗುವಂತೆ **ಈ ನನ್ನಿಣಿಕೆಯನ್ನು ವಿನಂತಿಸುತ್ತೇನೆ.**

ಈಗಣಪ್ರತಿಯು— 'ಸನ್ ೧೮೪೩ನೆಯ ಇಸವಿ ನ್ಯಾ ದಶಂಬ್ರ ತಾರೀಖು ೨೦ನೆಯ ಶೋಭಕೃತುಸಂವತ್ಸರದ ಮಾರ್ಗಶಿ ಬ. ೧೪ ಯು ಬುಧವಾರ'ದಂದು 'ಮೂಳೂರು' ದೇವಳದ ಬರೆದುದು. ಇದರಲ್ಲೂ ಅಲ್ಲಲ್ಲಿ ಸಂಪ್ರತಿಕಾರನ ಕೈತಪ್ಪುಗಳು ಪ್ರಮಾದಗಳೂ ಇಲ್ಲದಿಲ್ಲವಾದರೂ, ಬಹುತೇಕದಲ್ಲಿವೆ.

ಇತ್ತೀಚೆಗೆ ಬೆಂಗಳೂರ 'ಶರಣಸಾಹಿತ್ಯ' ಗ್ರಂಥಮಾಲೆಯ ಪ್ರಕಟಿತವಾದ 'ಆದಿತ್ಯಪುರಾಣದ'ದ ಒಂದನೆಯ ಭಾಗದಲ್ಲಿ ಗ್ರಂಥದ ಅಚ್ಚಿನ ಬಗ್ಗೆ ಪ್ರಾರ್ಥಿಸಿಯದೆ, ಇದಲ್ಲದೆ, ಕನ್ನ ಸಾಹಿತ್ಯ ಪರಿಷತ್ತಿನ ಪತಿಯಿಂದ ಇದರ ಪ್ರಕಾಶನದ ಬ ತಕ್ಕಷ್ಟು ಪತ್ರವ್ಯವಹಾರವಾಗಿತ್ತು, ಇದು ಮಾತ್ರವಲ್ಲ, 'ಜೀವ ಮಾಸಪತ್ರಿಕೆಯಲ್ಲೂ ಉಲ್ಲೇಖಿಸಿದೆ! ಒಟ್ಟಾರೆ, ಇಂತಹ ಕನ್ನ ಬೆಳೆಯು ಹಾಗೂ ಸ್ವಾರಸ್ಯದ ಗ್ರಂಥಗಳ ಕುರಿತು ಔದಾಸೀನ್ಯ ಪ್ರಬಲವಾಗಿ ಹರಡಿದೆಯೆಂಬುದರಲ್ಲಿ ಸಂಶಯವಿಲ್ಲ. ಇನ್ನಾದರೂ ಕರ್ನಾಟಕದ ಏಕತೆಯ ದಿನಗಳು ಸಮಸಮೀಪಿಸುತ್ತಿವೆ. ಇಂತ ಸುಸಂಧಿಯಲ್ಲಿ ಪ್ರತಿಯೊಬ್ಬ ಕನ್ನಡಿಗನೂ ಓದಿ ಆನಂದಿಸಬೇಕಾ ಇಂತಹ ಗ್ರಂಥಗಳ ಪ್ರಕಾಶನವಾಗಬೇಕೆಂದೂ, ಹಾಗಾಗಲೆಂದು ಆಶಿಸುವೆನು.

— ವೆಂಕಟರಾಯಾಚಾರ್ಯ, ಕುಳಾ

ಕಾದಂಬರಿಗಳೂ ಕತೆಗಳೂ

(ಸಿಂಹಾವಲೋಕನ)

ಶ್ರೀ. ಕೆ. ಎಸ್. ಶಮಾರ್, ವಿದ್ವಾನ್ ಕಾಸರಗೋಡು

ಕನ್ನಡನಾಡಿನ ಸುಪ್ರಸಿದ್ಧ ಪತ್ರಿಕೆಯಾದ ಜಯಂತಿ ಒದಗಿಸಿಟ್ಟ 'ಸಾಹಿತ್ಯವಿಹಾರ'ದಲ್ಲಿ ಈ ಒಂದು ವಿಚಾರವೆತ್ತಿ ಪ್ರಚಲಿತವಾತಾವರಣದಲ್ಲಿ ತಲೆಯೆತ್ತಿದ ಕತೆ-ಕಾದಂಬರಿಗಳ ನೆಲೆಯನ್ನು ಒಂದಿಷ್ಟು ವಿಚಾರಿಸಿ— ಮುಂದೆ ಜಯಂತಿಯು ಅನುವಿತ್ತ ಕೆಲವು ಉತ್ತಮ ಹಾಗೂ ತದ್ವಿಪರೀತವಾದ ಕತೆ-ಕಾದಂಬ ಗಳನ್ನೂ— ಪತ್ರಿಕೆಗಳನ್ನೂ ಪ್ರತ್ಯೇಕ-ಪ್ರತ್ಯೇಕವಾಗಿ ಕಾ ಬೇಕೆಂದಿರುವೆನು—

ನಮ್ಮ ಜನತೆಯು, ನಮ್ಮ ಪಥವಿಡಿದೇ ಮುಂದೆಬರಲಿರು ನಮ್ಮ ಕಿರಿಯರ ಭವ್ಯಭಾವಿಗಾಗಿ ನಾವು ಸಂಪಾದಿಸಬೇಕಾ ಹಲವು ಸಂಪತ್ತುಗಳಲ್ಲಿ 'ಸಾಹಿತ್ಯ'ವೂ ಒಂದು ಹಿರಿದಾದ ಸಂಪ ತ್ತೆಂಬುದನ್ನು ನಾವು ಮರೆಯಬಾರದು. ಹಿಂದಿನ ಸಾಹಿತ್ಯವೆ ಮುಂದಿನವರ ಜೀವನಕ್ಕಿರುವ ಒಂದು ದರ್ಪಣವಾಗಿದೆ. ತಮ್ಮ ತಮ್ಮ— ತಮ್ಮ ಒಳ್ಳಿತುಗಳನ್ನೂ— ಉನ್ನತ್ಯವನತಿಗಳನ್ನೂ ನೋಡಿ ಜೀವನದಲ್ಲಿ ಸುಧಾರಿತ ಪಂಥವನ್ನು ಸಾಗೊಳಿಸಲು ಸಮರ್ಥವಾಗಿದೆ, ಸಾಹಿತ್ಯವೆನ್ನುವುದರಲ್ಲಿ ಎರಡು ಮಾತಿಲ್ಲ. ಹೆಚ್ಚೇಕೆ ಸಾಹಿತ್ಯವು ಜೀವನದ ರಾಜಮಾರ್ಗ. ಅದನ್ನು ಇಂದಿನೊಡ ಬೆರೆಸಿ ನೋಡಿ, ನಾಳಿನ ನಮ್ಮ ಮಂದಿಯನ್ನು ಆರೋಗ್ಯದಲ್ಲಿರಿಸಲಿರುವ ಒಂದು ಘನವಸ್ತುವಾಗಿದೆ ಸಾಹಿತ್ಯವು.

ಅಂತಹ ಸಾಹಿತ್ಯಗರ್ಭದಲ್ಲೇ ಕಥೆ-ಕಾದಂಬರಿಗಳೂ ಹುದುಗಿವೆ. ಯಾವುದೋ ಒಂದು ಸುವರ್ಣಯುಗದಲ್ಲಿ ವೇದಾದಿಗಳೂ, ಪುರಾಣಾದಿಗಳು ಸಾರಿದ ಸತ್ಯವನ್ನು- ತಿಳಿವನು ಇಂದು ಈ ಕಾದಂಬರಿಗಳು ನೀಡಬೇಕಾಗಿದೆ ಕಾದಂಬರಿಯುಗವೆಂದು ಹೆಸರಾಂತ ಈ ಕಾಲವು ಹಿತವನ್ನು ನೀಡಬೇಕಾಗಿದೆ— ಮುಂದಿಯ ಕಣ್ಣನ್ನು ಅರಳಿಸಿ, ಸತ್ಯದ ಹೊನಲನ್ನು ಕಣ್ಣಲ್ಲಿ ಹಾಯಿಸಬೇಕಾಗಿದೆ. ಮುಂದಿಯು ಸಮಾಜದ- ಸಂಸಾರದ- ಹಾಗೂ ವೈಯಕ್ತಿಕವಾದ ಹೊಣೆಗಾರಿಕೆಯನ್ನರಿತು ಅದರ ಸೌಂದರ್ಯಕ್ಕೆ- ಭವ್ಯಭಾವಿಗೆ ತನ್ನನ್ನು ಧಾರೆಯೆರೆಯಬೇಕು; ಇಲ್ಲವೆ ಜೀವನದ ಸಹಾನುಭಾವಿಯಾಗಬೇಕು. ಹೀಗಾದರೆ ಮಾತ್ರ ಸಾಹಿತ್ಯಗರ್ಭೋದಿತಗಳಾದ ಈ ರತ್ನಗಳು ಜೀವಂತಸತ್ಯಗಳಾಗಿ ಬಾಳುವವು.

ಕಾದಂಬರಿ-ಕತೆಗಳಿಗೆ ಒಂದು ಚೆಲುವಾದ ಇತಿವೃತ್ತಬೇಕು. ಇತಿವೃತ್ತವನ್ನು ಹೆಣೆದ ಯೋಗ್ಯವಾದ ಭಾಷೆಯು ಆಕರ್ಷಕ ಶೈಲಿಯಿಂದ ಕೂಡಬೇಕು. ರಸನಿಷ್ಯಂದಿಯಾದ ಹಲವಾರು ಸನ್ನಿವೇಶಗಳಿಂದ- ಸಂಭಾಷಣೆಗಳಿಂದ ಕಳೆವೆತ್ತು, ಕಾದಂಬರಿಯು ಹೃದಯವನ್ನು ಬೆಳಗಬೇಕು. ಆ ಹೃದಯವು ಜೀವನದ ನೈತಿಕ, ಧಾರ್ಮಿಕ, ಸಾಮಾಜಿಕ ವಿಚಾರಗಳಲ್ಲಿ ಸಹಾಯಿಯಾಗಿದ್ದು, ಸಮಾಜದ ಅನ್ಯಾಯ- ಅನೀತಿಗಳನ್ನು ಖಂಡಿಸಿ ಸಮಾಜಘಟಕರ ಹೃದಯಗಳನ್ನು ಸತ್ಯದಮಾತುಗಳಿಂದ ತಟ್ಟಬೇಕು. ಸಂಕುಚಿತ ಹೃದಯಗಳನ್ನು ತೆರೆದು ವಿಶಾಲಮನೋಭಾವನೆಯ ತಳಹದಿಯನ್ನು ಹಾಕಬೇಕು. ಹಾಗಾದರೆ ಮಾತ್ರ ಎಂದಿನಿಂದಲೋ ಅನುಸ್ಯೂತವಾಗಿ ಹರಿದುಬಂದ ಜೀವನದೊಡನೆ ಸಾಹಿತ್ಯವೂ ಬಾಳಬಹುದು. ಇಲ್ಲವಾದರೆ, ಇಂದು ಹುಟ್ಟಿ ನಾಳೆ ಮಾಯವಾಗುವವು. ಅಂತಹ ಅನುಭವರಾಶಿಗಳೇ ನಮಗಿಂದು ಆಧಾರವಾಗಿವೆ. ಎಷ್ಟೋ ಕಾದಂಬರಿಗಳು ಈ ಕಾದಂಬರಿಯುಗದಲ್ಲಿ ದಿನೇ ದಿನೇ ಉದಿಸುವವು, ಅವುಗಳಲ್ಲಿ ಕೆಲವು ಮಾತ್ರ ಜೀವನದೊಡನೆ ಬೆರೆತು ಹೃದಯವನ್ನು ತಟ್ಟಿ ಇಂದೂ ಸ್ಮರಣೆಯಲ್ಲುಳಿದು ದಾರಿಗಂಬದಂತೆ ಸರಿದಾರಿಯನ್ನು ಸಾರುತ್ತಿವೆ. ಉಳಿದುವುಗಳು, ಚಲಚ್ಚಿತ್ರವು ಮಿಂಚಿ ನಿಮಿಷದಲ್ಲಿ ಮರೆಯಾಗುವಂತೆ ಕ್ಷಣದಾಗುವವು. ಯಾವ ಉಪಯೋಗಕ್ಕೂ ಬೀಳದೆ ಕೇವಲ ವ್ಯಾಪಾರದೃಷ್ಟಿಯಿಂದ ಉಳಿದಂತಾಗುವುವು. ಹಾಗಾಗಬಾರದು ಸಾಹಿತ್ಯ. ಚಿರಂತನವಾಗಿ ಉಳಿಯಬೇಕು. ಜೀವನವನ್ನು ತುಂಬಬೇಕು.

ಈಗೀಗ ಬೆಳಕುಕಾಣುತ್ತಿರುವ ಕೆಲವು ನವೀನ ಕಾದಂಬರಿಗಳ ಹೃದಯವನ್ನು ನಾವಿಲ್ಲಿ ಕಾಣಬಹುದು.

ಜೀವನವು ನವರಸಭರಿತವು. ರಸಹೀನವಾಗಿ ಜೀವನವಿಲ್ಲ. ಅಂತೆಯೆ ಜೀವಿಯ ಸೃಷ್ಟಿಯೂ ರಸಾನುಗುಣವಾಗಿಯೆ ಹರಿಯ-

ನಿಮಗೆ ದೊರೆತಿವೆಯೆ?

ಈಚಿನ ಸುಧಾರಿಸಿದ ಆವೃತ್ತಿಗಳು

卐 ನೂತನ ಗಣಿತ 卐

● ೧ನೆಯ ವರ್ಗಕ್ಕಾಗಿ	೦-೬-೦	(ಭೂಮಿತಿ, ಜಮಾಖರ್ಚು, ಆಲೇಖ ಸಹ)	
● ೨ನೆಯ ,,	೦-೮-೦	● ೫ನೆಯ ವರ್ಗಕ್ಕಾಗಿ	೦-೧೪-೦
● ೩ನೆಯ ,,	೦-೧೦-೦	● ೬ನೆಯ ,,	೧-೦-೦
● ೪ನೆಯ ,,	೦-೧೨-೦	● ೭ನೆಯ ,,	೧-೧೨-೦

ಸುಧಾರಿಸಿದ ಕೃತಿಗಳನ್ನು ತಮಗೆ ನೀಡಲು ಸಂತೋಷವೆನಿಸುತ್ತದೆ. ಪ್ರಾ. ಶಾ. ಪ್ರ. ಪ. ಪರೀಕ್ಷೆಗೆ ಬೀಜಗಣಿತದ ವಿಷಯವಿದ್ದುದು ಗೊತ್ತಿದೆಯೆ? ೭ನೆಯ ಗಣಿತವು ಎಲ್ಲ ವಿಭಾಗಗಳನ್ನೂ ಒಳಗೊಂಡು ಹೊರಟಿದೆ. ಸಂಗ್ರಹದಿಂದ ಈಗಲೆ ಪಡೆಮುಕೊಳ್ಳಿರಿ.

ಆಕಳವಾಡಿ ಬುಕ್‌ಡಿಪೊ, ಧಾರವಾಡ

ಬಲ್ಲುದೆಂಬುದು ಖಂಡಿತವೇ ಸರಿ! ಜೀವನಾನುಭವವು ಚಿತ್ರಿತವಾಗುವ ಕತೆ-ಕಾದಂಬರಿಗಳಲ್ಲಿ ಯಾವುದೊಂದು ರಸಪ್ರವೇಶವೂ ಮಿತಿ-ತಪ್ಪಿರಬಾರದು. ಆಹಾರವು ಷಡ್ರಸಮಯವಾದರೂ—ಮೆಚ್ಚಿಕೆಗೆ—ಮನಸ್ಸಿನ ಒಪ್ಪಿಗೆಗೆ— ಆರೋಗ್ಯಕ್ಕೆ— ಪಾತ್ರವಾದ ಕೆಲವೊಂದು ರಸಗಳ ಸೇವನೆಯು ಪ್ರಮುಖವಾಗಿದೆ. ಈ ತತ್ತ್ವದಂತೆಯೆ ಜೀವನಕ್ಕೆ— ನಮ್ಮ ಭಾವಿಗೆ ನೆರವಾಗುವ— ಮುಂದಿನ ಜನತೆಗೆ ಪ್ರತಿಬಿಂಬವಾಗಿ ಕಾಣಬೇಕಾದ ಸಾಹಿತ್ಯವು ಉಚಿತವಾದ ಇತಿವೃತ್ತದ ಬಂಧದಲ್ಲಿದ್ದು ಯೋಗ್ಯರಸಾವೇಶದ ಸೇರಿಕೆಯಲ್ಲಿದ್ದು, ಹೃದಯಾವರ್ಜಕವಾಗಿ ರೂಪಿತವಾಗಬೇಕು. ಜೀವನಕ್ಕೆ ಆರೋಗ್ಯವು ಹೇಗೆ ಮುಖ್ಯವೋ ಅಂತೆಯೆ ಜನಜೀವನಕ್ಕೂ ಸಾಂಸ್ಕೃತಿಕರೂಪವಾದ ಆರೋಗ್ಯವು ಬೇಕು. ಅದು ಉತ್ತಮವಾದ ಸಾಹಿತ್ಯಪಂಥದಲ್ಲೇ ಸಿಗುವುದು.

ಜೀವನವು ದಿನದಿಂದ ದಿನಕ್ಕೆ ಪ್ರಗತಿಪರವಾಗಿಯೆ ಸಾಗುತ್ತಿದೆ. ಕಾಲನ ಹೊಡೆತಕ್ಕೆ ಜೀವನದ ಭಾಗಗಳಲ್ಲಿ ವೈವಿಧ್ಯಪೂರ್ಣವ್ಯತ್ಯಾಸವು ತಲೆದೋರುತ್ತಿದೆ. ಬೆಳೆಯಲಿರುವ ಸ್ಥಿತಿಗೆ ಇದೊಂದು ನಿಜವಾದ ಕಾರಣ. ಭಾಷೆಯಲ್ಲಾಗಲಿ, ಜೀವನದಲ್ಲಾಗಲಿ, ಅಥವಾ ಯಾವುದೇ ಒಂದು ಬೆಳೆಯತಕ್ಕ ವಸ್ತುವಿನಲ್ಲೇ ಆಗಲಿ ವ್ಯತ್ಯಾಸವು ತಲೆದೋರಬೇಕು. ಹೀಗಾದರೇನೇ ಅದು ವಿವಿಧಮುಖವಾಗಿ ಸಾಗಿ ಬೆಳೆಯುವುದು.

ಇಂದಿನ ಕತೆ-ಕಾದಂಬರಿಗಳೂ ಪ್ರಗತಿಪಂಥಕ್ಕೆ ಮುನ್ನುಗ್ಗಿವೆ. ನೈತಿಕ ಸಾಮಾಜಿಕ, ಧಾರ್ಮಿಕ, ರಾಜಕೀಯ, ಲೈಂಗಿಕ ಇವುಗಳಿಂದ ಸಾಲುಗಟ್ಟಿ ಮುಂಬರುತ್ತವೆ. ಅದೊಂದು ಬಗೆಯ ವಾತಾವರಣದ ಬಿಗುವಿನಿಂದ ಭಯಂಕರವಾದ ಆಂದೋಲನಗಳು ಇವುಗಳಲ್ಲಿ ಕ್ರಾಂತಿಯನ್ನೆಬ್ಬಿಸಿವೆ. ಸಾಹಿತ್ಯಕ್ಷೇತ್ರಕ್ಕೂ, ರಾಜಕೀಯ ಕ್ಷೇತ್ರಕ್ಕೂ ತುಂಬಾ ಅಂತರವಿದೆ. ಅವುಗಳ ಧೋರಣೆಯು—ಕಾರ್ಯಭಾಗವು—ದ್ವಿಮುಖವಾಗಿಯೆ ಸಾಗುತ್ತಿದೆ. ಆದರೂ ರಾಜಕೀಯದ ಹಾಗೂ ಆರ್ಥಿಕದ ಅನುಭಾವಗಳು ಆಯ್ದುಕೊಂಡ ಕಥಾಭಾಗದಲ್ಲಿ ನುಸುಳಿ ಬರಬಹುದೇ ಹೊರತು ಪ್ರಧಾನ ಭಾಗವನ್ನು ವಹಿಸಬಾರದು. ಇದರಿಂದ ನಿಜವಾದ ಸಾಹಿತ್ಯಧೋರಣೆಯು ಕುಸಿದು ಬೀಳುವುದು. ಕುಸಿಯದೆ ಅದು ರುಚಿರವಾಗಿ ಬಾಳಬೇಕಾದರೆ, ನೈತಿಕ—ಧಾರ್ಮಿಕ ವಿಚಾರಗಳಿಂದ ತುಂಬಿದ ಜೀವನದ ಯಥಾರ್ಥ ಚಿತ್ರಗಳು ಕತೆ—ಕಾದಂಬರಿಗಳಲ್ಲಿ ಮೂಡಬೇಕು. ನಮ್ಮ ಮುಂದಿಯ ಸುಖದುಃಖಗಳು, ನಮ್ಮ ದೇಶದ ವಿವಿಧ ಮುಖದ ಜನಜೀವನ—ಇವು ರಸಭರಿತವಾಗಿ ರೂಪಿತವಾಗಬೇಕು.

ಇನ್ನೊಂದುಬಗೆಯವುಗಳೆಂದರೆ: ಶೃಂಗಾರಮಯಜೀವನದ ವಿಲಾಸಚಿತ್ರಗಳು. ಮಾನವಪ್ರಗತಿಗೆ ಇಂತಹ ಸಾಹಿತ್ಯಸೃಷ್ಟಿಯು ಅಗತ್ಯವಿದೆಯೆಂಬ ಸ್ಪಷ್ಟೀಕರಣವು ಈಗ ಇದೆ. ಕೆಲವು ವಿಚಾರಗಳನ್ನು ಮುಂದಿಯು ಮುಚ್ಚುಮರೆಯಾಗಿರಿಸಿಕೊಂಡುದರಿಂದಲೇ ಜೀವನವು ಅನೈತಿಕವಾಗಿ ಸಾಗುತ್ತಿದೆಯೆಂದೂ, ಇಂತಹ ಲೈಂಗಿಕ ವಿಚಾರಗಳ ಆದ್ಯಂತ ಚಿತ್ರವು ಪ್ರತಿಯೊಬ್ಬನ ಅರಿವಿಗೆ ಬರಬೇಕೆಂದೂ, ಹಾಗಾದರೇನೇ ಜೀವನವು ಉನ್ನತಿಗೆ ಬರಬಹುದೆಂದೂ ಈ ಧೋರಣೆಯ ತತ್ತ್ವವಿರಬಹುದು. ಇದು ಸರಿಯಲ್ಲವೆಂಬುದು ನಮ್ಮ ವಾದವಲ್ಲ. ಇದರಲ್ಲೂ ಸತ್ಯಾಂಶವಿದೆ. ಜೀವನದ ಸರ್ವತೋಮುಖವಾದ ಬೆಳವಣಿಗೆಗೆ ಇಂತಹ ವಿಚಾರಗಳ ಅರಿವು ಚಿಕ್ಕಂದಿನಲ್ಲೇ ಬರಬೇಕೆಂಬುದನ್ನು ಒಪ್ಪಬಹುದು. ಈ ಅರಿವಿನಿಂದಲೇ ಅತ್ಯಾಚಾರಗಳೂ, ವಿಶೇಷ ಪ್ರಣಯಾಸಕ್ತಿಯೂ, ಸ್ತ್ರೀ-ಪುರುಷರೆಂಬ ವಿಭಿನ್ನಭಾವನೆಯ ಮನೋಭಿಪ್ರಾಯವೂ ತೊಲಗಬಹುದೆಂಬುದನ್ನು ನಾವು ಒಪ್ಪಿಕೊಳ್ಳದಿರಲು ನಿವಾರ್ಹವೇ ಇಲ್ಲ. ಆದರೆ ಇಂತಹ ಉದಾತ್ತ ಭಾವನೆಗಳನ್ನು ನಮ್ಮ ಮುಂದಿಗೆ ನೀಡಬೇಕೆಂದು ಬಗೆದಿದ್ದ ಕೆಲವು ಕಾದಂಬರಿಗಳೂ, ಕತೆಗಳೂ ಹೇಯವಾದ-ಅಗತ್ಯವಿಲ್ಲದ-ತ್ಯಾಜ್ಯವಾದ-ವಿಚಾರಗಳನ್ನು-ಪ್ರಚೋದನಾತ್ಮಕ ಸನ್ನಿವೇಶಗಳ-ಪ್ರಚೋದಾತ್ಮಕವಾದ ಉದ್ರಿಕ್ತ ಶೈಲಿಯಲ್ಲಿ ಹಾಕುತ್ತಿವೆಯೆಂಬುದು ನಾಚಿಕೆಯ ವಿಷಯವು. ಶೃಂಗಾರರಸದ ಅಂಶವು ಜೀವನದಲ್ಲಿ ಬಂದಾಗ, ಹಿತವಾಗಿ-ಮುದ್ದಾಗಿ—ದೋಷವಿಲ್ಲದ ಸರಣಿಯಲ್ಲಿ ಸಾಗಬೇಕು. ಕಾಲಿದಾಸ ಭವಭೂತಿಗಳಂತಹ ಲೋಕವಿಖ್ಯಾತ ಶೃಂಗಾರಕವಿಗಳೂ ಶೃಂಗಾರರಸವೇ ಪ್ರಧಾನವಾದ ಕಾವ್ಯ-ನಾಟಕಗಳನ್ನು ಬರೆದಿದ್ದಾರೆ. ಶೃಂಗಾರದ ಯೋಗ್ಯತೆಯನ್ನರಿತು-ಸಹೃದಯ ಹೃದಯವು ಒಣಿಪಂತೆ ಶಿಷ್ಟವಾಗಿ-ಹಿತವಾಗಿ-ಮುದ್ದಾಗಿ ಆ ರಸವನ್ನು ನೀಡಿದ್ದಾರೆ. ಜನತೆಯು ಅಂತಹ ಕವಿಗಳನ್ನೂ-ಕಾವ್ಯಗಳನ್ನೂ ಇಂದಿನವರೆಗೂ ಗೌರವದಿಂದ ಸ್ವಾಗತಿಸುವುದೇ ಅದಕ್ಕೆ ಸಾಕ್ಷಿ. ಆದರೆ ಈಗ ಬರುತ್ತಿರುವ ಕೆಲವು ಕಾದಂಬರಿಗಳಲ್ಲಿ ಕಾಣುವ ಶೃಂಗಾರವರ್ಣನೆ ವಿಟ-ಚೇಟರ ಪರಾಕ್ರಮ, ಸೂಳೆಯ ಜೀವನ, ವಿಧವೆಯ ಬಾಳಿನ ಹೊಸತಿನಲ್ಲಿ ಕಾಲಿಕ್ಕುವ ಚೇತನ; ಇವು ಮಾರ್ಮಿಕವಾಗಿ ಚಿತ್ರಿತವಾಗಿರುವವು. ಮಾತ್ರವಲ್ಲ. "ಅವನು ಅವಳ ನಿರಿಗೆ ಕೈಹಾಕಿದ ಆಕೆಯು ರವಕೆಯ ತುದಿಗಂಟನ್ನು ಬಿಚ್ಚಿದಳು" "ಅವನು ಅವಳನ್ನು ಅನಾಮತ್ತಾಗಿ ಎತ್ತಿ ಮಲಗಿಸಿದನು. ಆಕೆಯ ಹಾಲಿನ ತೆನೆಯಂತಹ ಎದೆಯನ್ನು ಅರ್ಧವಾಗಿ ಹರಿದ ರವಕೆಯ ಎಡೆಯಿಂದ ಕಂಡು ಉತ್ತೇಜಿತನಾದ. ರವಿಕೆಯ ಗಂಟು ಬಿಚ್ಚಿದ..." ಇನ್ನೂ ಏನೇನೋ! ಅಶ್ಲೀಲಮಾತುಗಳು—ಚುಂಬನದ ವಿಚಾರ ಬಂದಾಗ "ಅವನು ಮುತ್ತಿಟ್ಟ"ಎಂದು ಹೇಳಿ ವಿರಮಿಸಲಾಗಬಹುದಲ್ಲ, "ಕೆನ್ನೆ, ತುಟಿ, ಕುತ್ತಿಗೆ, ಕಿವಿ, ಮೂಗು ಇನ್ನೂ ಏನೇನೋ ಯಾವುಯಾವುದೋ ಕಡೆಗಳಲ್ಲಿ ಮುತ್ತಿನ ಸುರಿಮಳೆ—"ಎಂದು ಮೊದಲಾಗಿ ಬರೆಯುವುದು ಇದು ಪ್ರಗತಿಯಲ್ಲ. ಇಂತಹವುಗಳನ್ನು ಹೀಗೆಲ್ಲಾ ಬರೆದು ಅದೇಕೆ ಕೆಡಿಸಬೇಕೋ, ಕೆಡಬೇಕೋ ನಾನರಿಯೆನು. ಇದು ಸರ್ವಥಾ ನ್ಯಾಯವಲ್ಲ! ಆ ವಿಚಾರಗಳು ನಮಗೆ ಬೇಡವಾಗಿವೆ. "ಅವನು ಕಾಮಪರವಶನಾದ. ಅವಳು ಅವನ ಇಚ್ಛೆಗೆ ವಿರೋಧವಾಗಲಿಲ್ಲ. ಅವರು ಒಂದಾದರು"

ಎಂದಿಷ್ಟು ಗರೂ ಹೇಳಿ ಮುಗಿಸುವ ಬದಲು—''ಅನನುಭವಿಗಳಾದ ತೀರ ಎಳೆಯ ಪ್ರಾಯದ ಭವ್ಯಭಾವಿಯ ಪ್ರಜೆಗಳಿಗೆ ಸಾಗುವ ಈ ಪಾತಕ್ರಮವು ಏನೇನೂ ಚೆನ್ನಾಗಿಲ್ಲ"ಎಂಬುದನ್ನು ಮನಗಾಣಬೇಕು ಳೆಯ ತರುಣ–ತರುಣಿಯರ ಜೀವನವು ಕುಸಿಯಬಾರದು. ಇಂತಹ ಪಾತನಗಳು ಚೇತನಗಳಲ್ಲ.....

ಇಂತಹ ಲೈಂಗಿಕವಿಚಾರಪೂರಿತ ಕಾದಂಬರಿಗಳಿಗೆ ಸ್ವಾಗತವು ಮಂದಿಯಿಂದ ಧಾರಾಳವಾಗಿ ಸಿಗಬಹುದು. ಆದರೆ ಅದರೆಡೆಯಲ್ಲೇ ಮಂದಿಗೆ ಅನುಚಿತವಾದ ವಿಚಾರಗಳನ್ನೆತ್ತಿ, ಬೋಧಿಸುವ ಅಪರಾಧವೂ ಇದೆಯೆಂಬುದನ್ನು ಯಾರೂ ಮರೆಯಬಾರದು. ಸಾಹಿತ್ಯದೃಷ್ಟಿಯಿಂದಾಗಲಿ, ಕಾದಂಬರಿಯ ಸ್ಥಾನಮಾನಗಳಿಂದಾಗಲೀ ಬರುತ್ತಿರುವ ಪ್ರೌಢರ ವಿಮರ್ಶೆಗೆ ನಾವು ಬೆದರಬೇಕಾಗಿಲ್ಲ. ನಿರ್ಮಲಮನಸ್ಸಿನ ಮೇಲೆ ಚಿರವಾಗಿ ಉಳಿಯುವ ಮಸಿಬಣ್ಣ ತರುವ ಹೇಯಭಾವನೆಯನ್ನುಂಟುಮಾಡಿದ ದೋಷಕ್ಕೆ ಬೆದರಬೇಕು. ಆದ್ದುದರಿಂದಲೆ ಈ ತೆರನಾದ ಅಶ್ಲೀಲಶಬ್ದಗಳನ್ನು ಪಯೋಗಿಸಿ ಬರೆವಮಾರ್ಗಕ್ಕೆ ಖಂಡನೆಬೇಕು.

"ಸಿಹಿಯು– ಬಹುರುಚಿ ಆದರೆ ಆದಕ್ಕೆ ಮಿತಿಯಿದೆ. ಅದು ಅತಿಯಾದರೆ ಪರಿಣಾಮವು ಒಳಿತಾಗದು" ಎಂಬ ಸತ್ಯವನ್ನು ನಾವು ಕಾಣಬೇಕು.

ಅಂತೂ ಸಾಹಿತ್ಯವು ಪ್ರಗತಿಪಂಥಕ್ಕೆ ಕಾಲಿಡುವುದೆಂದರೆ— ಜಗಜೀವನದ ಯಥಾರ್ಥನಿರೂಪಣೆಯಿಂದಲೂ, ಸಮಾಜದ ಹಿತು·ಕೆಡುಕಗಳ ವಿಮರ್ಶೆಯಿಂದಲೂ, ಉದಾತ್ತವಾದ ನೂತನ ವಿಚಾರಗಳಿಂದಲೂ ಸೇರಿದ್ದು,—ನಾಗರಿಕ ಅನಾಗರಿಕ ಜೀವನಕ್ಕೆ ಚೇತನ– ಮತ್ತು ಬೆಳಕನ್ನೀವಂತೆ ಮುಂಬರಬೇಕು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ.ವಿ. ಪಂಡಿತರ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

ಮಗಳ ಮದುವೆ

'ಆನಂದ ಕಂದ'ರ ರಸಪೂರ್ಣ ಸಾಮಾಜಿಕ ಕಾದಂಬರಿ

ಶರತ್‌ಪ್ರಕಾಶನ ಮಂದಿರದ ಮೂರನೆಯ ಕುಸುಮವಾದ ಈ ಸಾಮಾಜಿಕ ಕಾದಂಬರಿಯು, ಒಂದೆರಡು ವಾರಗಳಲ್ಲಿಯೆ ಕನ್ನಡಿಗರ ಕಣ್ಣು ಮುಂದೆ ಬರಲಿದೆ.

ಉತ್ತರ ಕರ್ನಾಟಕದ ಜನಜೀವನದ ಚಿತ್ರವನ್ನು ಕಣ್ಣೆದುರು ಕಟ್ಟುವಂತಹ ಈ ಕಾದಂಬರಿಯು ಮಾದರಿ ತೀರ ಹೊಸಂತಿಯದಾಗಿದೆ.

ಬೇಕಾದವರು ಮೊದಲೆ ಕಾಗದ ಬರೆದು ಬೇಡಿಕೆ ಕಳುಹಬೇಕು-

ಶರತ್ ಪ್ರಕಾಶನ ಮಂದಿರ, ಮಾರ್ಕೆಟ್ ಧಾರವಾಡ

ಕುಮಟಾದಲ್ಲಿ ನಮ್ಮ ಏಜಂಟರು

ದಿ ಫೋರಮ್ ಏಜನ್ಸೀಸ್, ಏಜಂಟ್ಸ್

ಗುಡಗೇರಿಯಲ್ಲಿ ನಮ್ಮ ಏಜಂಟರು

ಶ್ರೀ. ಪಿ. ಎನ್. ಹುಲಕೋಟಿ, ನ್ಯೂಜ್ ಏಜಂಟ್

(೮೪ನೆಯ ಪುಟದಿಂದ ಮುಂದುವರಿದುದು)

ಭಾರತ–ಕಾಶ್ಮೀರದ ತೊಡಕು ಬಗೆಹರಿಯಿತೆ?

ರಾಜಕಾರ್ಯದಲ್ಲಿ ಯಾವುದಾದರೊಂದು ತೊಡಕು ಏಳುವುದು ತಡವಿಲ್ಲ; ಬಿಟ್ಟಿತೆಂದು ತಿಳಿಯುವುದೂ ತಡವಿಲ್ಲ. ಒಬ್ಬರ ಮನಸ್ಸಿನಂತೆಯೇ ತೊಡಕನ್ನು ಬಗೆಹರಿಸಬೇಕೆಂದರೆ, ಅದೆಂದೂ ಬಗೆಹರಿಯುವುದಿಲ್ಲ. ಶಾಂತಿಯ ದಾರಿ ಬೇಕೆಂದರೆ ಇಬ್ಬರೂ ಸ್ವಲ್ಪ ಸ್ವಲ್ಪ ನಿಲುವೆಯನ್ನು ಬದಲು ಮಾಡಿಕೊಂಡು, ಒದಗಿರುವ ತೊಡಕನ್ನು ಬಗೆಹರಿಸಿಕೊಳ್ಳಬೇಕಾಗುವುದು; ಒಂದು ಪಕ್ಷದವರು ತಮ್ಮ ಹಟವನ್ನೇ ಸಾಧಿಸಿಕೊಳ್ಳಬೇಕೆಂದರೆ ಯುದ್ಧ–ಕಲಹಗಳಂತಹ ಅಶಾಂತಿಯ ದಾರಿಯನ್ನು ಹಿಡಿಯಬೇಕಾಗುವುದು. ಇದರಲ್ಲಿ ಬಲವಿರುವವರಿಗೆ ಜಯವು ಕಟ್ಟಿಟ್ಟ ಮಾತು; ಆದರೆ ಆ ಜಯವು ಸುಖಪೂರ್ಣವಾದ ಜಯವಲ್ಲ. ಆದುದರಿಂದಲೇ ರಾಜಕಾರ್ಯ, ಯಾವಾಗಲೂ ಎರಡು ಪಕ್ಷಗಳಲ್ಲಿ ಸವಿಯಾದ ಒಪ್ಪಂದವಾಗುವ ದಾರಿಯನ್ನು ಹೇಳುತ್ತಿರುವುದು. ಈ ಸವಿಯಾದ ಒಪ್ಪಂದಕ್ಕಾಗಿ ಎರಡು ಪಕ್ಷಗಳವರೂ ಅಲ್ಪ ಸ್ವಲ್ಪ ತಮ್ಮ ಹಟವನ್ನು ಬಿಟ್ಟುಬಿಡಲೇಬೇಕಾಗುವುದು. ಭಾರತ–ಕಾಶ್ಮೀರಗಳಲ್ಲಾದ ಒಪ್ಪಂದದ ವಿಚಾರವನ್ನೂ ನಾವು ಈ ರಾಜಕಾರ್ಯತತ್ತ್ವದ ದೃಷ್ಟಿಯಿಂದಲೇ ವಿಚಾರಮಾಡಬೇಕಾಗುವುದು. ಭಾರತ ರಾಜ್ಯಘಟನೆಯ ದೃಷ್ಟಿಯಿಂದ ನವಕಾಶ್ಮೀರ ಒಂದೆರಡು ವಿಶಿಷ್ಟ ಅಧಿಕಾರಗಳನ್ನು ಅಪೇಕ್ಷಿಸುತ್ತದೆ ನಿಜ. ಈಗ ಭಾರತ, ಹಿರಿಯತನದಿಂದ ವರ್ತಿಸಿ, ಕಿರಿಯ ಕಾಶ್ಮೀರದ ಆ ಅಪೇಕ್ಷೆಗಳನ್ನು ಪೂರಯಿಸಿ ತನ್ನೊಳಗೆ ಕೂಡಿಸಿಕೊಳ್ಳಬೇಕೋ? ಪೂರಯಿಸಲಾರೆನೆಂದು ಕೆನ್ನೆಗೆರಡು ಹೊಡೆದು ಒತ್ತಾಯದಿಂದ ಅಧೀನದಲ್ಲಿಟ್ಟುಕೊಳ್ಳಬೇಕೋ? ರೂಢಿಯ ಒಂದು ಉದಾಹರಣೆಯನ್ನೇ ತೆಗೆದುಕೊಳ್ಳೋಣ. ಸಿಗರೇಟು ಸೇದುವ ತಮ್ಮನನ್ನು ಸಿಗರೇಟು ಸೇದದ ಅಣ್ಣ ಏನುಮಾಡಬೇಕು? ಹೊಡೆದು ಮನನೋಯಿಸಿ ಹೊರಗಟ್ಟಬೇಕೋ? ಉಪಾಯದಿಂದ ದನಿಸಿ ಕರೆದು ಮನವೊಲಿಸಿ ಮನೆಯಲ್ಲಿ ಕರೆದುಕೊಳ್ಳಬೇಕೋ? 'ನೀನು ಸಿಗರೇಟು ಸೇದಿದರೆ ಸೇದಿಕೊಳ್ಳು; ನನಗದರ ವಾಸನೆ ಸೇರುವುದಿಲ್ಲ, ಆದುದರಿಂದ ಆ ವಾಸನೆಯ ದುಷ್ಪರಿಣಾಮ ನನಗೆ ಆಗದಂತೆ ನೀನು ವರ್ತಿಸು!' ಎಂದು ಒಪ್ಪಂದಮಾಡಿಕೊಳ್ಳುವನು. ಆಗ ಅಣ್ಣನ ವಿಷಯದಲ್ಲಿ ತಮ್ಮನ ಆದರ ಹೆಚ್ಚಿ, ಸಿಗರೇಟು ಸೇದುವುದನ್ನು ನಿಲ್ಲಿಸಿಯೂ ಬಿಡಬಹುದು ಆತ. ಅದನ್ನು ಬಿಟ್ಟು 'ನೀನು ಸಿಗರೇಟು ಸೇದುವುದಾದರೆ ನಮ್ಮ ಮನೆಯಲ್ಲಿರಬೇಡ!' ಎಂದು ದುಷ್ಟ ಮಾತುಗಳನ್ನಾಡಿದರೆ, ತಮ್ಮನಲ್ಲಿ ಅಣ್ಣನ ವಿಷಯಕ್ಕೆ ಆದರ ಹೇಗೆ ಹುಟ್ಟೀತು? ಭಾರತ-ಕಾಶ್ಮೀರಗಳಲ್ಲಿಯ ಘಟನಾತ್ಮಕ ತೊಡಕು ಬಿಟ್ಟಿದೆಯೆಂದರೆ ಹೀಗೆಯೇ ಬಿಟ್ಟಿದೆ. ಕಾಶ್ಮೀರಕ್ಕೆ ಪ್ರತ್ಯೇಕ ಧ್ವಜವಿರಬೇಕೆಂದುದನ್ನು ಭಾರತ ಒಂದು ಕರಾರನ್ನು ಹಾಕಿ ಒಪ್ಪಿಕೊಂಡಿತು. ಕಾಶ್ಮೀರವು ರಾಜನನ್ನು ಅಧಿಕಾರಚ್ಯುತಮಾಡುವೆನೆಂದರೆ ಭಾರತ ಸರಕಾರ ಸುಮ್ಮಗೆ ಇದ್ದಿತು. ನಮ್ಮ ರಾಜ್ಯ ಪ್ರಮುಖನನ್ನೂ ನಾವೇ ಆರಿಸಿಕೊಳ್ಳುವೆನೆಂದು ಹೇಳಿದುದನ್ನು 'ಅದಕ್ಕೆ ನಮ್ಮ ರಾಷ್ಟ್ರಾಧ್ಯಕ್ಷರ ಒಪ್ಪಿಗೆ ಪಡೆಯಬೇಕು!' ಎಂದು ಭಾರತ ಸರಕಾರ ಹೇಳಿ ಒಪ್ಪಿಸಿತು. ಹೀಗಾಗಿದೆ ಕಾಶ್ಮೀರ-ಭಾರತಗಳ ತೊಡಕಿನ ನಿರ್ಣಯ, ಇದರಲ್ಲಿ ಸೋತವರಾರು? ಗೆದ್ದವರಾರು? ಇಬ್ಬರೂ ಸ್ವಲ್ಪ ಸೋತರು. ಇಬ್ಬರೂ ಸ್ವಲ್ಪ ಗೆದ್ದರು. ಭಾರತ ಸರಕಾರದ ವಿರೋಧಿಪಕ್ಷ ಭಾರತಸರಕಾರ ಸೋತಿತೆಂದು ಕೂಗು ಎಬ್ಬಿಸಿದೆ. ಕಾಶ್ಮೀರ ಸರಕಾರದ ವಿರೋಧಿಪಕ್ಷ ಕಾಶ್ಮೀರ ಸೋತಿತೆಂದು ಕೂಗು ಎಬ್ಬಿಸಿದೆ. ಎಲ್ಲವೂ ರಾಜಕಾರಣ ಚದುರಂಗದಾಟ.

ನಿರ್ಭೀತರಾದ ಕಳ್ಳರ ಕೈಚಳಕ

ಮುಂಬಯಿ ರಾಜ್ಯದಲ್ಲಿ– ಅದರಲ್ಲಿಯೂ ಕರ್ನಾಟಕ ಪ್ರದೇಶದ ನಗರಗಳಲ್ಲಿ ಕಳ್ಳರ ಹಾವಳಿ ವಿಪರೀತ ಹೆಚ್ಚಿಕೊಂಡಿದೆ. ಪತ್ರಿಕೆಯಲ್ಲಿ ನಿತ್ಯವೂ ಪ್ರಕಟವಾಗಿ ಬರುವ ಸುದ್ದಿಗಳನ್ನು ನೋಡಿದರೆ ಕಳವಿನ ಸುದ್ದಿಗಳಿಗೆ ಕೊರತೆಯೆ ಇರುವುದಿಲ್ಲ. ಮನೆಗಳನ್ನು ಕೀಲಿ ಹಾಕಿ ಒಂದೆರಡು ದಿನಗಳ ಮಟ್ಟಿಗೂ ಬೇರೆಯ ಕಡೆಗೆ ಹೋಗಲು ಪಟ್ಟಣಗಳ ಜನರಿಗೆ ಧೈರ್ಯವಿಲ್ಲವಾಗಿದೆ. ಸಾಮಾನ್ಯವಾಗಿ ಮಧ್ಯಮತರಗತಿಯ ಕುಟುಂಬಗಳ ಮೇಲೆಯೆ ಕಳ್ಳರ ದೃಷ್ಟಿ ವಿಶೇಷವಾಗಿರುವುದು. ಸದ್ಯದ ಆರ್ಥಿಕ ದುಃಸ್ಥಿತಿಯಿಂದ ಸಂಕಟಗ್ರಸ್ತವಾಗಿರುವ ಮಧ್ಯಮತರಗತಿಯ ಕುಟುಂಬಗಳು, ಕಳ್ಳರ ಭೀತಿಯಿಂದ ನಡುಗುತ್ತಿರುವುವು. ಇರುವ ನಾಲ್ಕು ಪಾತ್ರೆ ಪಡಗಗಳು ಹೋಗಿಬಿಟ್ಟರೆ, ಹೊಸತಾಗಿ ಕೊಳ್ಳುವ ಸಾಮರ್ಥ್ಯ ಉಳಿದಿಲ್ಲ ಅವುಗಳಿಗೆ. ಇಂದು ಕಳ್ಳರ ದೃಷ್ಟಿಯಿಂದ ಹೊರತಾದ ಮಧ್ಯಮತರಗತಿಯ ಮನೆತನಗಳೇ ಉಳಿದಿಲ್ಲವೆಂದು ಹೇಳುವಷ್ಟು, ಕಳ್ಳರ ಹಾವಳಿ ವ್ಯಾಪ್ತಿಯನ್ನು ಪಡೆದು ನಿಂತಿದೆ. ನಮ್ಮ ರಾಜ್ಯಸರಕಾರ ಸಂರಕ್ಷಣೆಯ ನೆಪದಿಂದ ಪೋಲೀಸರ ಸಂಖ್ಯೆಯನ್ನು ವಿಸ್ತರಿಸಿಯೆ ವಿಸ್ತರಿಸುತ್ತಲಿದೆ. ಆದರೆ ಪೋಲೀಸರು ಪಹರೆ ಮಾಡುತ್ತಿರುವ ಭಾಗದಲ್ಲಿಯೆ ಕಳ್ಳರು ತಮ್ಮ ಕೈಚಳಕ ನಡೆಯಿಸುತ್ತಿರುವ ಉದಾಹರಣೆಗಳು ಹಲವಾರು ಉಂಟು. ಈ ಕಳ್ಳರ ಹಾವಳಿಯಿಂದ ಜನತೆಯನ್ನು ಮುಕ್ತಮಾಡುವ ಹೊಣೆ ಸರಕಾರದ್ದಲ್ಲವೆ? ಪೋಲೀಸರು ಮನವಾರೆ ತಮ್ಮ ಕರ್ತವ್ಯಮಾಡುತ್ತಲಿದ್ದರೆ, ಕಳ್ಳರ ಹಾವಳಿ ತಗ್ಗಲಾರದೆ? ತಮ್ಮ ಆಡಳಿತದ ಪ್ರಗತಿಯ ಪವಾಡವನ್ನು ಸಂಪುಟಸಂಪುಟವಾಗಿ ಬರೆದು ಪ್ರಚಾರ ಮಾಡುವ ಮುಂಬಯಿ ಸರಕಾರಕ್ಕೆ, ಈ ಕಳ್ಳರ ಹಾವಳಿಯನ್ನು ತಗ್ಗಿಸಲಿಕ್ಕೆ ಆಗಬಾರದೆ? ಜನತೆಯನ್ನು ನಿರ್ಭಯವಾಗಿ ಇರಿಸುವುದು ಸರಕಾರಗಳ ಮೊದಲನೆಯ ಕರ್ತವ್ಯ. ಆದರೆ ಮುಂಬಯಿ ರಾಜ್ಯದಲ್ಲಿರುವ ಜನತೆಗೆ ನಿರ್ಭಯರಾಗಿ ಬಾಳಲು ಬರುವಂತಿಯೆ?

೪೪. **ಪುರಂದರದಾಸರ ಕೀರ್ತನೆಗಳು** (ಭಾಗ ೧-೨) ಪ್ರಕಾಶಕರು : **ಉಪಾಧ್ಯಾಯ ಪ್ರಕಟನಾಲಯ, ಗೋಪಾಲಕೃಷ್ಣ ಸ್ವಾಮಿಯ ಗುಡಿ ಬೀದಿ ಚಿಕ್ಕಪೇಟೆ– ಬೆಂಗಳೂರು** ಸಿಟಿ. ಕ್ರಾ. ೮. ೩೨ **ಪುಟಗಳು. ಬೆಲೆ** ೦-೬-೦, ೦-೬-೦.

೪೫. **ಜಯಗೀತ** (ಕವನಸಂಕಲನ) ಕವಯಿತ್ರಿ : ಶ್ರೀಮತಿ ಜಯದೇವೀಬಾಯಿ ಲಿಗಾಡೆಯವರು. ಕನ್ನಡ **ಕೋಟಿ** ಪ್ರಕಾಶನ ಸೊಲ್ಲಾಪುರ. ರೊ. ೧೬ ದ ೪೮ ಪುಟಗಳು. ಬೆಲೆ ೧-೮-೦.

೪೬. **ಜೀವನಲತೆ** (ಕವನಸಂಕಲನ) ಕವಿ: ಶ್ರೀ. ಪು. ಹ. ಆಚಾರ್ಯ, ಕನ್ನಡ ಪಂಡಿತ ಮುನಿಸಿಪಲ್ ಹೈಸ್ಕೂಲ್, ಚೆನ್ನಗಿರಿ. ಪ್ರಕಾಶಕರು : ಶ್ರೀ. ಕೆ. ವಿ. ರಾವ್ ವಿದ್ಯಾಲಯ ಸ್ಟೋರ್ಸ್, ಉಜಿರೆ (ದ. ಕ. ಜಿಲ್ಲಾ) ಕ್ರಾ. ೮. ೩೬ ಪುಟಗಳು. ಬೆಲೆ ೦-೮-೦.

೪೭. **ಗ್ರಾಮಾಭ್ಯುದಯ ಮತ್ತು ಸಹಕಾರ** (ಮಾಸಪತ್ರಿಕೆಯ ವಾರ್ಷಿಕ ವಿಶೇಷ ಸಂಚಿಕೆ). ಸಂಪಾದಕರು ಶ್ರೀ. ಕೆ. ಸಿ. ಚೌಡಪ್ಪ ರೆಡ್ಡಿ ಬಿ. ಎ. ಪ್ರಕಾಶಕರು : ರೂರಲ್ ಡೆವಲೊಪ್‌ಮೆಂಟ್ ಆಫ್ ಮೈಸೂರು. ಕ್ರಾ. ೧೬ದ ೮೦ ಪುಟಗಳು.

೪೮. **ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ** (ವಾರ್ಷಿಕ ವರದಿ. ತಾ. ೧-೪-೫೧ ರಿಂದ ೩೧-೩-೫೨ ರ ವರೆಗೆ). ಸಂಚಾಲಕರು : ಶ್ರೀ. ನರಸಿಂಹ ದಾಬಡೆಯವರು. ಮುಖ್ಯ ಕೇಂದ್ರ ಅದವಟಗಿ ಗ್ರಾಮದಲ್ಲಿದೆ. ಡೆ. ೮. ೨೦ ಪುಟಗಳು.

೪೯. **ಬಾಳುವೆಯ ಪಾಡಿನಲ್ಲಿ** (ಸಾಮಾಜಿಕ ಕಾದಂಬರಿ). ಬರೆದವರು : ಶ್ರೀ. ಜೆ. ರಾಘವೇಂದ್ರಾಚಾರ್, ಮೈಸೂರಿನ ಉಷಾ ಸಾಹಿತ್ಯ ಮಾಲೆಯ ೩೩-೩೪ನೆಯ ಪ್ರಕಟನೆ. ಕ್ರಾ. ೮. ೬೭೪ ಪುಟಗಳು. ಬೆಲೆ ೩-೪-೦.

No. 38

೩೦,೦೦೦ ರೂಪಾಯಿಗಳು

Tele : 'GOOD LUCK'
Phone 29

ಸರಿಯಾಗಿರುವ ೨೦ ಚೌಕಂಗಳಿಗೆ ಸಮಾನವಾಗಿ ಬಹುಮಾನ ಹಂಚಲಾಗುವುದು.

ಎಲ್ಲ ಬಹುಮಾನಗಳೂ ವಿಶ್ವಾಸಾರ್ಹವಾದುವುಗಳು :—

೧೫೦೦ ರೂಪಾಯಿ: ಪ್ರತಿಯೊಂದು ಸರಿಯಾದ ಉತ್ತರಕ್ಕೆ. ೧೫೦ ರೂಪಾಯಿ: ಮೊದಲಿನೆರಡು ಸಾಲಿನ ಅಂಕೆಗಳು ಸರಿಯಾಗಿರುವ ಉತ್ತರಗಳಿಗೆ ೭೫ ರೂಪಾಯಿ : ಮೊದಲನೆಯ ಒಂದು ಸಾಲಿನ ಅಂಕಿಗಳು ಸರಿಯಾಗಿರುವ ಉತ್ತರಕ್ಕೆ.

೨ ರಿಂದ ೧೬ರ ವರೆಗೆ, ಚೌಕದಲ್ಲಿ ಅಂಕಿಗಳನ್ನು ತುಂಬಬೇಕು. ಅಡ್ಡ, ಉದ್ದ, ಓರೆಯ ಮನೆಗಳಲ್ಲಿಯ ಅಂಕಿಗಳ ಒಟ್ಟು ೩೮ ಆಗಬೇಕು. ಒಂದು ಮನೆಯಲ್ಲಿ ಬಳಸಿದ ಸಂಖ್ಯೆಯನ್ನು ಇನ್ನೊಂದು ಮನೆಯಲ್ಲಿ ಬಳಸಲಾಗದು.

ಉತ್ತರ ಕಳುಹಬೇಕಾದ ಕೊನೆಯ ತಾ. ೩೦-೩-೫೨. ನಿರ್ಣಯದ ತಾ. ೧೦-೯-೫೨.

ಪ್ರವೇಶ ಧನ : ಒಂದು ಉತ್ತರಕ್ಕೆ ೧ ರೂ. ಅಥವಾ ಮೂರು ರೂಪಾಯಿಗಳಿಗೆ ನಾಲ್ಕು ಉತ್ತರಗಳು. ೮ ಉತ್ತರ ಕಳುಹುವವರು ೫ ರೂ. ಕಳುಹಬೇಕು.

ನಿಯಮಗಳು : ಸಾದಾ ಕಾಗದದಲ್ಲಿ ಬೇಕಾದ ಚೌಕುಗಳನ್ನು ಮಾಡಿ, ಅಂಕಿಗಳನ್ನು ತುಂಬಿ, ಪ್ರವೇಶ ಧನದೊಂದಿಗೆ ಕಳುಹಬೇಕು. ಚೌಕದ ಜೊತೆಯಲ್ಲಿ ಪ್ರವೇಶಧನ ಕಳುಹಿದ M. O. ರಸೀದಿಯನ್ನಾಗಲಿ, ಬ್ಯಾಂಕ್ ಡ್ರಾಫ್ಟ್ ರಸೀದಿಯನ್ನಾಗಲಿ ಇರಿಸಬೇಕು. ಆಫೀಸಿಯಲ್ ಉತ್ತರದ ಚೌಕವನ್ನು ಬುಲಂದ ಶಹರದ ಬ್ಯಾಂಕಿನಲ್ಲಿ ಸೀಲ್ ಮಾಡಿ ಇರಿಸಲಾಗಿದೆ.

ಕಳೆದ ಸಲದ ಪರಿಣಾಮ
ಒಟ್ಟು 34

15	10	4	5
14	1	11	8
3	16	6	9
8	7	13	12

ಚೌಕದ ಮನೆಗಳಲ್ಲಿ ಇಂಗ್ಲಿಷ್ ಅಂಕಿಗಳನ್ನೇ ಬಳಸಬೇಕು. ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು. ನಿಮ್ಮ ವಿಳಾಸವನ್ನು ಮನಿಯಾರ್ಡರ್ ರಸೀದಿಯ ಮೇಲೆ ಬರೆಯಬೇಕು. ಮೇಲೆ ಕಾಣಿಸಿದ ಬಹುಮಾನದ ಹಣವನ್ನು, ಸರಿಯಾಗಿರುವ ಉತ್ತರಗಳಿಗೆ ಸಮನಾಗಿ ಹಂಚಲಾಗುವುದು.

ಪರಿಣಾಮ ಬೇಗನೆ ತಲುಪಬೇಕೆಂದಿದ್ದರೆ, ನಿಮ್ಮ ವಿಳಾಸ ಬರೆದ ಅಂಚೆಯ ಕವರನ್ನು ಕಳಿಸಿರಿ. ಮ್ಯಾನೇಜರರ ನಿರ್ಣಯವೇ ಕೊನೆಯ ಮತ್ತು ಸರಿಯಾದ ನಿರ್ಣಯ. ನಿಮ್ಮ ಚೌಕಗಳನ್ನು ಪ್ರವೇಶಧನದೊಂದಿಗೆ ಕೆಳಗಿನ ವಿಳಾಸಕ್ಕೆ ಕಳಿಸಬೇಕು.

PHŒNIX CORPORATION REGD. (44.)
BULANDSHAHR, U. P.

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು ! ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ' ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವುವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಈಗ ತಾನೆ ಪ್ರಕಟಿಸಿದ 'ಆನಂದಕಂದರ' ತರಂಗರೂಪಕ ಸಂಕಲನ :

ಬೆಳವಡಿ ಮಲ್ಲಮ್ಮ

ಕ್ರಾ. ಅ. ೧೧೬ ಪುಟಗಳು.   ಹೊಳಪಿನ ಕಾಗದ.   ಬೆಲೆ ೧-೮-೦.

ಹೊಸತಾಗಿಯೆ ಹೊರಟ ಕವನ ಸಂಕಲನ

ಕಾರಹುಣ್ಣಿವೆ

ಇದರಲ್ಲಿ 'ಆನಂದಕಂದ'ರ ರಸವತ್ತಾದ ೫೨ ಕವನಗಳು ಸಂಕಲನಗೊಂಡಿವೆ. ವಿವಿಧ ಭಾವಗಳನ್ನು ವಿಸ್ತರಿಸಿದ ಸುಂದರವಾದ ಭಾವಗೀತಗಳು ! ಸಂಗೀತಗಾರರ ಕಾವ್ಯಗಾಯನ ಕಾರ್ಯಕ್ರಮಕ್ಕೆ ತುಂಬ ಸಹಕಾರಿಯಾದುವು !

ಕ್ರಾ. ಅ. ೧೨೮ ಪುಟಗಳು.   ಅಂದವಾದ ಅಚ್ಚು.   ಬೆಲೆ ೨-೦-೦.

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	**ಬಡತನದ ಬಾಳು**	**ಕರ್ನಾಟಕ ಜನಜೀವನ**
ಸುದರ್ಶನ	**ನಮ್ಮ ಬದುಕು**	ಜೀವನ ಚರಿತ್ರ
ಕವನ ಸಂಕಲನ	**ಸಂಸಾರ ಚಿತ್ರ**	**ಶ್ರೀ. ಬಸವಣ್ಣನವರು**
ವಿರಹಿಣಿ	**ಮಾತನಾಡುವ ಕಲ್ಲು**	
ಒಡನಾಡಿ		

ಅಲ್ಲದೆ ಶ್ರೀ. ಹುದ್ದಾರರ '**ಚಿತ್ರಕಲಾಪ್ರವೇಶ**'ವೂ ಚಾಡಿಯ ಚಾಣಕ್ಯನ '**ಜಾತೀಯಸಮಸ್ಯೆ**' '**ಕರ್ನಾಟಕ ಏಕೀಕರಣ**', ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೫ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೇ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ : **ಎಸ್. ಡಿ. ಧರಮುಟ್ಟಿ, ಶ. ಪ್ರ. ಮಂದಿರ, ಧಾರವಾಡ.**

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar - 4137—52.

ಸಪ್ಟಂಬರ್
೧೯೫೨

ಸಂಪುಟ
೧೫

ಸಂಚಿಕೆ
೪

ಈ ಸಂಚಿಕೆಯಲ್ಲಿ:

★

ಜಾತ್ಯತೀತ ಭಾವನೆಯ ಜೊಳ್ಳುತನ (ಸಂಪಾದಕೀಯ) ಸಂಪಾದಕರು ೧೨೧

ಸಾಹಿತ್ಯವಿಹಾರ ('ಭಾಗೀರಥಿ' ಗೀತನಾಟಕದ ವಿಮರ್ಶೆ) ಶ್ರೀ. ಕೆ. ಎಸ್. ಶರ್ಮ, ಶಾರದಗೋಡು ೧೨೩

ಬೆಂದಹೃದಯ (ಸಾಮಾಜಿಕ ನಾಟಕ) ಶ್ರೀ. ಬೆಟಗೇರಿ ಕೃಷ್ಣಶರ್ಮ, ಧಾರವಾಡ ೧೨೫

ಶ್ರೀ ಶಾರದಾದೇವಿ (ಜೀವನ ಪರಿಚಯ) ಶ್ರೀ. ಪ್ರ. ಮ ಗಲಗಲಿ, ಹುಬ್ಬಳ್ಳಿ ೧೩೭

ಜಗವಿದೊಂದು ಕಲೆಯ ಬೀಡು! (ಕವನ) ಶ್ರೀ. ಸಿ ಎಂ. ದೇವೇಂದ್ರನಾಯಕ ೧೪೨

ಒಲವೇ ಗೆಲವು (ಕವನ) ಶ್ರೀ. ಬಾಳು ಬಿ. ಉಪಾಧ್ಯೆ, ಶಮನೇವಾಡಿ ,,

ಅವಳೇ ಇವಳು (ಸಣ್ಣ ಕತೆ) ಶ್ರೀ. ಎಲ್. ವಿ. ಸೂರಣಗಿ, ಧಾರವಾಡ ೧೪೩

ನಾಟಕ (ಸಾಹಿತ್ಯತಂತ್ರ ವಿಚಾರ) ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ. ೧೪೮

ಮರಣೋತ್ತರ ಕರ (ಆರ್ಥಿಕ ಪ್ರಬಂಧ) ಶ್ರೀ. ವಾಂ. ಭೀ. ಜೋರಾಪುರ, ಜಬಲ್‌ಪುರ ೧೫೧

ಅಜಂತಾ (ಅನುವಾದಿತ ಕಥೆ) ಶ್ರೀ. ಬಿಂದುಮಾಧವ ಕುಲಕರ್ಣಿ, ಬಾದಾಮಿ ೧೫೫

ಪುಸ್ತಕ ವಿಮರ್ಶೆ ('ಸಂಜೆಯ ಸವಿ') ಶ್ರೀ. ಬಿ. ಪಿ. ಎಸ್. ರಾವ್ ೧೫೮

ನಾಡನಡೆ (ಪ್ರಾಸಂಗಿಕ) 'ಕಾಲಭೈರವ' ೧೬೦

ಸಾದರಸ್ವೀಕಾರ.... .... ಕವರ್ ೩ನೆಯ ಪುಟ

❀ JAYANTI ❀

ಸಾದರ ಸ್ವೀಕಾರ

卐

೫೦. **ಭೂಮಿತಾಯಿ**. (ಏಕಾಂಕ ನಾಟಕ ಸಂಕಲನ). ಬರೆದವರು ಶ್ರೀ. ಲಿಂಗಸಗೂರು ವಿಠ್ಠಲರಾಯರು. ಪ್ರಕಾಶಕರು ಶ್ರೀ. ಜೆ. ಕೆ. ಪ್ರಾಣೇಶಾಚಾರ್ಯರು, ಸತ್ಯಾಶ್ರಯ ಪ್ರಕಾಶನ ಮಂದಿರ, ಹೈದರಾಬಾದ್. ಕ್ರಾ. ೮. ೧೦೨ ಪುಟಗಳು. ಬೆಲೆ ೧-೦-೦.

೫೧. **ಜೈನ ಧರ್ಮ** (ಪರಿಚಯಾತ್ಮಕ ಬೃಹದ್ಗ್ರಂಥ) ಲೇಖಕರು ಶ್ರೀ. ಮಿರ್ಜಿ ಅಣ್ಣಾರಾಯರು. ಪ್ರಕಾಶಕರು ಶಾಂತಿ ಸೇವಾಸದನ, ಸೇಡಬಾಳ, ಜಿಲ್ಲಾ ಬೆಳಗಾಂವಿ. ದೆ. ೮. ೪೪+೯೧೪ ಪುಟಗಳು. ಬೆಲೆ ೧೫-೦-೦ ಚಿತ್ರದ ಪುಟಗಳು ಪ್ರತ್ಯೇಕವಾಗಿವೆ.

೫೨. **ತುಂಡುಹೊಲಗಳ ಸಂಯೋಜನೆ** (ಬರಲಿರುವ—ಮುಂಬಯಿ ಸರಕಾರದ ವಿಧಾಯಕ ಯೋಜನೆಯೊಂದರ ಪರಿಚಯದ ಕಿರುಹೊತ್ತಗೆ.) ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯ ಪ್ರಕಟನೆ. ಡೆ. ೮. ೨೦ ಪುಟಗಳು.

ಸಾರ್ವಜನಿಕ ಹಿತದ ದೃಷ್ಟಿಯಿಂದ ರಾಷ್ಟ್ರೀಯ ಸರಕಾರಗಳು ನಿರ್ಮಿಸುತ್ತಿರುವ ಯೋಜನೆಗಳೂ ಕಾಯಿದೆಗಳೂ ವ್ಯಕ್ತಿಗಳ ಸ್ವಾರ್ಥಕ್ಕೆ ಅಡ್ಡಗೋಡೆಯನ್ನು ಒಡ್ಡುವುದು ಸ್ವಾಭಾವಿಕ. ನಮ್ಮಲ್ಲಿ ಪ್ರಜಾಪ್ರಭುತ್ವದ ಸರಕಾರಗಳು ಏರ್ಪಟ್ಟಿವೆಯೇನೋ ಸರಿ; ಆದರೆ ಪ್ರಜೆಗಳೆನಿಸಿಕೊಳ್ಳುವ ಜನಸಾಮಾನ್ಯರಲ್ಲಿ, ಪ್ರಜಾಪ್ರಭುತ್ವದ ವಿಶಾಲದೃಷ್ಟಿಯಿನ್ನೂ ಮೂಡಿಲ್ಲ. ಆದುದರಿಂದ, ವೈಯಕ್ತಿಕ ಸ್ವಾರ್ಥಗಳ ಮೇಲೆ ಏಟುಹಾಕಬಹುದೆನಿಸುವಂತಹ ಯೋಜನೆಗಳ ಬಗೆಗೂ ಕಾಯಿದೆಗಳ ಬಗೆಗೂ ಅತೃಪ್ತಿ-ಸಂತಾಪಗಳ ಗುಲ್ಲು ಏಳುತ್ತಿರುವುದನ್ನು ದೇಶದ ತುಂಬ ಕಾಣುತ್ತಲಿದ್ದೇವೆ. ಮುಂಬಯಿ ಸರಕಾರದ ತುಂಡುಹೊಲಗಳ ಸಂಯೋಜನೆಯ ಯೋಜನೆಯೂ ಕೆಲವೊಂದು ವ್ಯಕ್ತಿಗಳ ಸ್ವಾರ್ಥಕ್ಕೆ ತೊಂದರೆಯನ್ನುಂಟು ಮಾಡಬಹುದು. ಆದುದರಿಂದ ಈ ಯೋಜನೆಯ ವಿಷಯದಲ್ಲಿಯೂ ಜನಸಾಮಾನ್ಯರಲ್ಲಿ—ವಿಶೇಷವಾಗಿ ರೈತವರ್ಗದಲ್ಲಿ—ಅಸಂತುಷ್ಟಿ ಅತೃಪ್ತಿಗಳು ತಲೆದೋರದೆ ಇರವೆಂದು ನಮ್ಮ ಊಹೆ. ಮುಂಬಯಿ ಸರಕಾರ, ಈ ಯೋಜನೆಯ ಹಿತಪರಿಣಾಮವನ್ನು ಎಲ್ಲ ಜನರಿಗೂ ಮೊದಲೇ ಸರಿಯಾಗಿ ತಿಳಿಸುವ ಕಾರ್ಯವನ್ನು ದಕ್ಷತೆಯಿಂದ ಮಾಡಬೇಕು. ಇದಕ್ಕೆ ಬರೀ ಇಂತಹ ಪ್ರಕಟನೆಗಳನ್ನು ಹೊರಡಿಸುವುದಕ್ಕಿಂತ, ತಜ್ಞ ಪ್ರಚಾರಕರನ್ನು ನಿಯಮಿಸಿ, ಎಲ್ಲರಿಗೂ ಪ್ರತ್ಯಕ್ಷವಾದ ತಿಳುವಳಿಕೆಯನ್ನು ಉಂಟುಮಾಡಿಕೊಡುವುದು ಒಳ್ಳೆಯದು.

೫೩. **ವಿಜಾಪುರ ವಿಭಾಗದ ಬಸ್ಸುಗಳ ವೇಳಾಪತ್ರಿಕೆ** ಮುಂಬೈ ಸ್ಟೇಟ್ ರೋಡ್ ಟ್ರಾನ್ಸಪೋರ್ಟ್ ಕಾರ್ಪೋರೇಶನ್ನವರಿಂದ ಪ್ರಕಟಿಸಲ್ಪಟ್ಟದು. ಡೆ. ೮. ೪೦ ಪುಟ. ಬೆಲೆ ೦-೪-೦.

ವೇಳಾಪತ್ರಿಕೆಯೇನೋ ಸಾರ್ವಜನಿಕರಿಗೆ ಉಪಯುಕ್ತವಾಗುವಂತೆ ಪ್ರಕಟವಾಗಿದೆ. ಆದರೆ ವೇಳಾಪತ್ರಿಕೆಗೆ ಸರಿಯಾಗಿ ಬಸ್ಸುಗಳ ಓಡಾಟ ನಿಯಮಿತವಾಗಿ ನಡೆಯದಿರುವುದು ಅನುಭವದ ಸಂಗತಿಯಾಗಿದೆ. ವೇಳಾಪತ್ರಿಕೆಗೆ ಸರಿಯಾಗಿ ನಡೆದುಕೊಳ್ಳುವಂತಹ ಸಾಮರ್ಥ್ಯ ನಮ್ಮ ಮುಂಬಯಿ ಎಸ್. ಟಿ. ಕಾರ್ಪೋರೇಶನ್ನಿಗೆ ಇದುವರೆಗೂ ಬಂದಿಲ್ಲ. ಆ ಸಾಮರ್ಥ್ಯ ಬಂದ ಮೇಲೆ ಈ ವೇಳಾಪತ್ರಿಕೆ ಪ್ರಯೋಜನಕಾರಿಯಾಗಬಹುದೇನೋ ನೋಡಬೇಕು. ಯಾಕೆಂದರೆ ಬಸ್ಸುಗಳು ತಮ್ಮ ಪ್ರಾರಂಭದ ಸ್ಥಳವನ್ನೇನೋ ವೇಳೆಗೆ ಸರಿಯಾಗಿ ಬಿಡಬಹುದು; ಆದರೆ ನಿಯಮಿತ ಸ್ಥಳವನ್ನು ಸರಿಯಾದ ವೇಳೆಗೆ ತಲ್ಪುವುದೆಂಬುದರ ಭರವಸೆ ಸ್ವಲ್ಪವೂ ಇಲ್ಲ. ಇದು ಎಸ್. ಟಿ. ಬಸ್ಸಿನ ಪ್ರಯಾಣಿಕರ ಬಹುಜನರ ಅನುಭವವಾಗಿದೆ.

ZANDU

PROTOCASEN

Whole Casein Hydrolysate

PALATABLE AND POWERFUL NUTRITIVE TONIC FOR ORAL ADMINISTRATION IN ALL RUNDOWN CONDITIONS OF HEALTH

Biological Laboratory

The Zandu Pharmaceutical Works, Ltd.

BOMBAY 14.

Sole Agents:—

M's. Pranlal and Sons

Chemists, Druggists

Station Road. ***HUBLI***

(H. O. Bangalore City)

ಜಯಂತಿ

ಸಂ. ೧೫. ಸಂಚಿಕೆ. ೪

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು :

ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು

ಶ್ರೀ. ಡಿ. ಶರತ್‌ಕುಮಾರ

ಪ್ರಕಾಶಕರು :

ಶ್ರೀ. ಎಮ್. ವಿ. ಮೊಳ್ಳಿಗಟ್ಟಿ.

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

★

ಜಾತ್ಯತೀತ ಭಾವನೆಯ ಜೊಳ್ಳುತನ

ಭಾರತವು ಅನೇಕ ಕುಲ, ಜಾತಿ, ಮತ, ಪಂಥ, ಧರ್ಮಗಳನ್ನು ಅನುಸರಿಸುವ ಜನರಿಂದ ಕೂಡಿರುವುದರಿಂದ, ಸ್ವತಂತ್ರಭಾರತದ ಸರಕಾರವು, ಯಾವುದೇ ಒಂದು ಕುಲ-ಜಾತ್ಯಾದಿ ಜನರ ಮನೋಭಾವನೆಯಿಂದ ತನ್ನ ಆಡಳಿತವನ್ನು ನಡೆಯಿಸಲಾಗದೆಂದು ನಿರ್ಣಯಿಸಿಕೊಂಡಿದೆ. ಹೊಸತಾಗಿ ರೂಪುಗೊಂಡ ಭಾರತದ ರಾಜ್ಯಘಟನೆಯು, ಭಾರತ ರಾಷ್ಟ್ರವನ್ನು 'ಸೆಕ್ಯೂಲರ್ ಸ್ಟೇಟ್' ಎಂದರೆ 'ಲೌಕಿಕ ರಾಜ್ಯ' ಎಂದು ಸಾರಿ ಹೇಳಿದೆ. 'ಲೌಕಿಕ' ಎಂಬುದರ ಅರ್ಥ, ಯಾವುದೇ ಭಾವನಾತ್ಮಕವಾದ ಧರ್ಮ-ಮತ-ಪಂಥಗಳ ವಿಚಾರಗಳಿಗೆ ಎಡೆಗೊಡದಂತಹದು— ಕೇವಲ ಐಹಿಕ ಜೀವನದ ವಿಚಾರವನ್ನು ಮಾತ್ರ ಇಟ್ಟುಕೊಂಡುದು— ಎಂದು ಅರ್ಥ.

ತನ್ನದು 'ಲೌಕಿಕ ರಾಜ್ಯ' ಎಂದು ಕರೆದುಕೊಳ್ಳುವುದರ ಬಗೆಗೆ ಭಾರತಕ್ಕೆ ವಿಶೇಷಕಾರಣಗಳು ಇಲ್ಲದೆ ಇಲ್ಲ. ಇಂದು ಸಮತಾವಾದಿ ಧೋರಣೆಯನ್ನು ಅನುಸರಿಸಿದ ರಾಷ್ಟ್ರಗಳನ್ನಷ್ಟು ಬಿಟ್ಟು, ಮಿಕ್ಕ ರಾಷ್ಟ್ರಗಳ ಸರಕಾರಗಳು, ಒಂದಿಲ್ಲೊಂದು ಧರ್ಮ-ಮತ-ಪಂಥಗಳನ್ನು ಪುರಸ್ಕರಿಸುತ್ತಲಿವೆ. ಪಾಕಿಸ್ತಾನದಂತಹ ರಾಷ್ಟ್ರಗಳಂತೂ ಧರ್ಮ-ಮತ-ಪಂಥಗಳ ಅಭಿಮಾನ ಭಾವನೆಯನ್ನೇ ಪ್ರಧಾನವಾಗಿ ಇರಿಸಿಕೊಂಡು ಆಡಳಿತವನ್ನು ನಡೆಯಿಸುತ್ತಿವೆ. ಮುಸಲ್ಮಾನ್, ಕ್ರಿಸ್ತ, ಯಹುದೀ, ಬೌದ್ಧ ಧರ್ಮಗಳು ಏಕಮುಖವಾಗಿ ಸಾಗಿ, ಒಂದೇ ಒಂದು ಬಗೆಯ ಆಧ್ಯಾತ್ಮಿಕ ತತ್ತ್ವವನ್ನು ಎತ್ತಿ ಹಿಡಿಯುತ್ತಿರುವುದರಿಂದ, ಆ ಆ ಧರ್ಮದ ಅನುಯಾಯಿಗಳು ಬಹುಸಂಖ್ಯಾಕರಿರುವ ರಾಷ್ಟ್ರಗಳ ಸರಕಾರಗಳು, ಆ ಆ ಧರ್ಮ-ಪಂಥಗಳನ್ನು ಪುರಸ್ಕರಿಸಿ ಸಂರಕ್ಷಿಸುತ್ತಿರುವುದರಲ್ಲಿ ಅಂತಹ ಕಠಿನ ಸಮಸ್ಯೆಗಳಾವುವೂ ಏಳಲಾರವು. ಆದರೆ ಭಾರತದಲ್ಲಿಯ ಧರ್ಮ-ಮತ-ಪಂಥಗಳ ಪರಿಸ್ಥಿತಿಯು ಬೇರೆ ವಿಶಿಷ್ಟರೀತಿಯದಿದೆ.

ಭಾರತದಲ್ಲಿ ಒಂದೇ ಒಂದು ವೈದಿಕ ಪರಂಪರೆಯವರು ಬಹುಸಂಖ್ಯಾಕರಾಗಿ ಇರುವರೆಂದು ಹೊರನೋಟಕ್ಕೆ ಕಾಣಬಹುದು. ಆದರೆ ಪುರಾತನ ಭಾರತದಲ್ಲಿ ಆಧ್ಯಾತ್ಮಿಕ ಲೋಕದಲ್ಲಿ ಅನೇಕ ಪ್ರಯೋಗ-ಸಂಶೋಧನೆಗಳು ನಡೆದು, ಹಲವಾರು ಆಧ್ಯಾತ್ಮಿಕ ಮತ-ಪಂಥಗಳು ತಲೆದೋರಿವೆಯಲ್ಲದೆ, ರಾಷ್ಟ್ರದ ಪರಾಧೀನ ರಾಜಕೀಯ ಜೀವನದ ಮೂಲಕ ಹೊರದೇಶಗಳ ಮತ-ಧರ್ಮಗಳ ಜನರು ಹಿಂಡು-ಹಿಂಡಾಗಿ ಬಂದು ನೆಲಸಿ ಭಾರತವನ್ನೇ ತಮ್ಮ ತಾಯಿನಾಡನ್ನಾಗಿ ಮಾಡಿಕೊಂಡಿದ್ದಾರೆ; ಇಷ್ಟೇ ಅಲ್ಲ, ಬ್ರಿಟಿಷರ ಆಡಳಿತದಲ್ಲಿರುವ ಧಾರ್ಮಿಕಧೋರಣೆಯ ಮೂಲಕ, ವೈದಿಕಧರ್ಮದ ಹಲವು ಜನರು ಅನ್ಯಧರ್ಮವನ್ನು ಸ್ವೀಕರಿಸಿಯೂ ಇದ್ದಾರೆ. ಇನ್ನೂ ಒಂದು ವಿಚಿತ್ರವಾದ ಸಂಗತಿಯೆಂದರೆ, ವಂಶಾನುಗತ ಉದ್ಯೋಗ-ವ್ಯವಸಾಯಗಳ ಮೂಲಕ, ಮೂಲ ಭಾರತೀಯರಲ್ಲಿ ಜಾತಿ-ಜಾತಿಗಳ ವ್ಯವಸ್ಥೆಯೊಂದು ತಲೆದೋರಿದ್ದುದು, ಈಗಲೂ ಅದು ಪ್ರಚಾರದಲ್ಲಿದೆಯಲ್ಲದೆ, ಭಾರತದ ಜನತಾ-ಸಂಘಟನೆಯ ಕಾರ್ಯಕ್ಕೆ ಬಗೆಬಗೆಯ ರೀತಿಯಿಂದ ಅದು ಒಡ್ಡುವಂತಹದಾಗಿದೆ. ಇವೆಲ್ಲ ಕಾರಣಗಳ ಮೂಲಕ, ಭಾರತರಾಷ್ಟ್ರವು ತನ್ನ ಆಡಳಿತದಲ್ಲಿ ಜಾತಿ-ಕುಲ-ಮತ-ಧರ್ಮಗಳಾವುವಕ್ಕೂ ಪುರಸ್ಕಾರ ಕೊಡದಿರುವ ವಿಚಾರವನ್ನು ಇರಿಸಿಕೊಂಡಿದೆ. ಕೇವಲ ಲೌಕಿಕ ಸುಖ-ಶಾಂತಿಸ್ಥಾಪನೆಯನ್ನೇ ತನ್ನ ಆಡಳಿತದ ಗುರಿಯನ್ನಾಗಿ ಮಾಡಿಕೊಂಡಿದೆ.

'ಸೆಕ್ಯುಲರ್ ಸ್ಟೇಟ್' ಎಂಬುದಕ್ಕೆ ಬದಲಾಗಿ ನಮ್ಮ ನಾಡಿನಲ್ಲಿ 'ಜಾತ್ಯತೀತ ರಾಷ್ಟ್ರ' ಎಂಬ ಮಾತನ್ನು ಬಹುಜನರು ಬಳಸುತ್ತಲಿದ್ದಾರೆ. ಆದರೆ 'ಜಾತ್ಯತೀತ'

ಎಂಬ ಪದವು 'ಸೆಕ್ಯುಲರ್' ಎಂಬ ಪದದಲ್ಲಿಯ ಅರ್ಥವನ್ನು ಪರಿಪೂರ್ಣವಾಗಿ ಕೊಡಲಾರದು. 'ಲೌಕಿಕ' 'ಐಹಿಕ' ಎಂಬ ಪದಗಳಲ್ಲಿಯೆ ಅದರ ಅರ್ಥ ತುಂಬಿಕೊಂಡಿದೆ. ಆದುದರಿಂದ, 'ಜಾತ್ಯತೀತ ರಾಷ್ಟ್ರ' ಎಂಬ ಮಾತನ್ನು ನಾವು ಬಳಸುವುದು ಉಚಿತವೆನಿಸದಿಷ್ಟೇ ಅಲ್ಲ; ಜನರಲ್ಲಿ ತಪ್ಪು ಭಾವನೆಯನ್ನು ಹುಟ್ಟಿಸುವಂತಹದಿರುವುದು.

'ಜಾತಿ' ಎಂಬ ಮಾತಿಗೆ ಒಂದು ವಿಶಿಷ್ಟವಾದ ಅರ್ಥವಿರುವುದು ಅನು ಹುಟ್ಟಿದ ಮನೆತನದ ವೃತ್ತಿಯ ಸೂಚಕವಾಗಿ. ದೆಯೇ ಹೊರತು, ಆ ಮನೆತನವು ಪುರಸ್ಕರಿಸುತ್ತಿರುವ ಧರ್ಮ-ಮತ-ಪಂಥಗಳನ್ನು ಸೂಚಿಸಲಾರದು. ಉದಾಹರಣೆಗಾಗಿ 'ಕುರುಬ' ಇದೊಂದು ವೃತ್ತಿಪ್ರಧಾನವಾಗಿರುವ ಜಾತಿಸೂಚಕ ಪದ. ಇದರಂತೆಯೆ ಬಡಿಗ, ಕಮ್ಮಾರ, ಬಣಜಿಗ, ಗವಳಿಗ, ನೇಕಾರ, ಜೋಯಿಸ, ಅರ್ಚಕ— ಇತ್ಯಾದಿ ಕೇವಲ ಜಾತಿಸೂಚಕ ಪದಗಳನ್ನು ಹೇಳಬಹುದು. ಇಂತಹ ಜಾತಿಗಳಿಂದ ಅತೀತವಾಗಿರುವ ರಾಷ್ಟ್ರವೆಂದು ಹೇಳುವುದರಲ್ಲಿ ಯಾವ ಮಹತ್ತ್ವವಿದೆ? ಇಂತಹ ಪರಂಪರಾಗತವೃತ್ತಿಯ ಜಾತಿಗಳು ಪ್ರತಿಯೊಂದು ರಾಷ್ಟ್ರದಲ್ಲಿಯೂ ಇವೆ. ರಾಜಕೀಯ ಕ್ಷೇತ್ರದಲ್ಲಿ ಇಂತಹ ಜಾತಿಗಳು ಯಾವ ತೊಡಕನ್ನೂ ಉಂಟುಮಾಡಲಾರವು. ಹುಟ್ಟಿದ ಮನುಷ್ಯನು ತನ್ನ ಹೊಟ್ಟೆ ತುಂಬಿಕೊಳ್ಳಬೇಕಾದರೆ, ಯಾವುದಾದರೊಂದು ಕಾಯಕವನ್ನು ಎಂದರೆ ವೃತ್ತಿಯನ್ನು ಕೈಕೊಳ್ಳಲೇ ಬೇಕಾಗುವುದು. ಹಿಂದಿನ ಕಾಲದಲ್ಲಿ ಅವು ವಂಶಾನುಗತವಾಗಿ ನಡೆಯುತ್ತಿದ್ದುವು; ಇಂದು ಹಾಗೆ ನಡೆಯಲಿಕ್ಕಿಲ್ಲ....ಇಷ್ಟೆ! ಇಂದು ವೃತ್ತಿಗಳು ವ್ಯಕ್ತಿನಿಷ್ಠವಾಗಿ ನಡೆಯಬಹುದಾದರೂ, ಆ ಆ ವ್ಯಕ್ತಿಗಳ ಗುಂಪು ಸೇರಿ ತಮ್ಮದೊಂದು ಜಾತಿಯನ್ನಲ್ಲದೆ ಹೋದರೂ ವರ್ಗವನ್ನು ಮಾಡಿಕೊಳ್ಳುವವೆಂಬುದು ಪ್ರತ್ಯಕ್ಷಾನುಭವದ ಸಂಗತಿಯಾಗಿದೆ. ಗಿರಣೀ ಕೂಲಿಕಾರ ಸಂಘ, ಮೋಟಾರ್ ಡ್ರಾಯ್ವರುಗಳ ಸಂಘ, ಅಂಚೆಯ ಕೆಲಸಗಾರರ ಸಂಘ, ರೈತರ ಸಂಘ, ನೇಕಾರರ ಸಂಘ ಮೊದಲಾದ ಸಂಸ್ಥೆಗಳನ್ನು ನೋಡಿದರೆ, ಇವೆಲ್ಲ ಹೊಸ ಕಾಲದ ಜಾತೀಯ ಭಾವನೆಯಿಂದ ನಿರ್ಮಿತವಾದುವುಗಳೆಂದೇ ಹೇಳಬಹುದು. ಇವೆಲ್ಲ ಸಂಸ್ಥೆಗಳು, ತಮ್ಮ ತಮ್ಮ ಸದಸ್ಯರ ವೃತ್ತಿ-ವ್ಯವಸಾಯಗಳು ಸುಸಂಘಟಿತವಾಗುವಂತೆಯೂ ಲಾಭಕಾರಿಯಾಗುವಂತೆಯೂ ಮಾಡಿಯಲೇ ಬೇಕಾಗುವುದು. ಮಾನವಸ್ವಭಾವಕ್ಕನುಗುಣವಾಗಿ, ಪ್ರತಿಯೊಬ್ಬನಿಗೂ ತಾನು ಕೈಕೊಂಡ ವೃತ್ತಿ-ವ್ಯವಸಾಯಗಳ ವಿಷಯದಲ್ಲಿ ಅಭಿಮಾನ-ವಿಶ್ವಾಸಗಳಿರುವುದು ಸಹಜವೆ. ಆದುದರಿಂದಲೇ ಒಂದೇ ಒಂದು ವೃತ್ತಿಯನ್ನು ಕೈಕೊಂಡವರಲ್ಲಿ ಆತ್ಮೀಯತೆ ಬೆಳೆದು, ಅವರದೊಂದು ವರ್ಗವಾಗುವುದರಲ್ಲಿ ಆಶ್ಚರ್ಯವಿಲ್ಲ. ಇಂತಹ ವರ್ಗಗಳೆಂದರೆ ಹೊಸ ಕಾಲದಲ್ಲಿ ನಿರ್ಮಿತವಾದ ಒಂದು ಜಾತಿಯೆಂದೇ ಹೇಳಬೇಕಾಗುವುದಲ್ಲವೆ?

ಇನ್ನು ಆಧ್ಯಾತ್ಮಿಕ ಮತ-ಪಂಥ-ಧರ್ಮಗಳ ವಿಚಾರ. ಇವು ಐಹಿಕ ಜೀವನಕ್ಕಾಗಿ ಒಪ್ಪಿಕೊಂಡ ವ್ಯವಹಾರಧರ್ಮದ ನಿಯಮಗಳಲ್ಲಿ ವಿಶಿಷ್ಟವಾದ ಯಾವ ವ್ಯತ್ಯಾಸಗಳೂ ಇಲ್ಲ. ಇಷ್ಟೇ ಅಲ್ಲ, ಆ ವ್ಯವಹಾರಧರ್ಮಕ್ಕನುಸಾರವಾಗಿ ಆ ಆ ಮತ-ಪಂಥಗಳ ಅನುಯಾಯಿಗಳಾದ ವ್ಯಕ್ತಿಗಳು ಆಚಾರವನ್ನು ಇರಿಸಿಕೊಂಡರೆ, ರಾಜಕೀಯ ಆಡಳಿತಕ್ಕೂ ಸಮಾಜದ ಶಾಂತಿಗೂ ಸಹಕಾರ ದೊರೆಕೀತೇ ಹೊರತು ಪ್ರತಿಕಾರವೇನೂ ಉಂಟಾಗದು. ಹೀಗಿರುವಾಗ, ಈ ಮತ-ಪಂಥಗಳನ್ನೇ ಜಾತಿಯೆಂಬ ಹೆಸರಿನಿಂದ ಕರೆದರೂ, ಇಂತಹ ಜಾತಿಗಳಿಂದ ನಮ್ಮ ರಾಜಕಾರ್ಯಕ್ಕೆ ಯಾವ ಬಾಧೆಯು ಬಂದೀತು? ಮತ-ಪಂಥಗಳ ಭಾವನೆ ಈಗಿರುವುದಕ್ಕಿಂತ ತೀಕ್ಷ್ಣವಾಗಿರುವ ಕಾಲದಲ್ಲಿಯೂ ನಮ್ಮಲ್ಲಿ, ಸರ್ವಸಮದೃಷ್ಟಿಯಿಂದ ಆಳಿದ ಏಕಧರ್ಮನಿಷ್ಠ ಆಡಳಿತಗಳೂ ಐತಿಹಾಸಿಕ ಕಾಲದಲ್ಲಿ ಬೇಕಾದಷ್ಟು ಆಳಿ ಹೋಗಿವೆ. ಆ ಕಾಲದಲ್ಲಿ ಜಾತಿ-ಜಾತಿಗಳಲ್ಲಿಯೂ ಮತ-ಮತಗಳಲ್ಲಿಯೂ ಯಾವ ಮನಸ್ತಾಪವೂ ಇಲ್ಲದೆ, ಎಲ್ಲರೂ ಒಂದೆ ನಾಡಿನಲ್ಲಿ ಪ್ರೀತಿಯಿಂದ ಕೂಡಿಕೊಂಡಿದ್ದು, ಸಮಾಜದ ಸುಖಶಾಂತಿಗೆ ಕಾರಣರಾಗಿದ್ದ ಉದಾಹರಣೆಗಳೇ ಹೆಚ್ಚಾಗಿವೆ.

ಇವೆಲ್ಲ ವಿಷಯಗಳನ್ನು ನೋಡಿದರೆ, ಕೇವಲ ಜಾತಿಭಾವನೆಯೂ ಮತೀಯ ಭಾವನೆಯೂ, ಐಹಿಕ ಸುಖಜೀವನದ ಧ್ಯೇಯವನ್ನಿರಿಸಿಕೊಂಡು ಪ್ರಾಮಾಣಿಕ ರೀತಿಯಿಂದ ನಡೆಯಿಸುವ ಆಡಳಿತಕ್ಕೆ ಯಾವ ತಡೆಯನ್ನೂ ಉಂಟುಮಾಡಲಾರವೆಂಬುದು ಸ್ಪಷ್ಟವಾಗುತ್ತಲಿದೆ. ನಿಜವಾಗಿ ನೋಡಿದರೆ, ಇಂದು ಅಧಿಕಾರಪ್ರಿಯರಾದ ಮಹತ್ತ್ವಾಕಾಂಕ್ಷಿ ವ್ಯಕ್ತಿಗಳು ಕೆಲವರು, ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುವುದಕ್ಕೆ ಬೇಕಾಗುವ, ವೈಯಕ್ತಿಕ ಬಲವನ್ನು ಬೆಳೆಯಿಸಿಕೊಳ್ಳುವುದಕ್ಕಾಗಿ, ಜಾತಿ-ಮತಗಳ ಭಾವನೆಯನ್ನು ಮುಂದೆ ತರುತ್ತಿದ್ದಾರೆ ಹೊರತು, ನಿರುಪದ್ರವಿಗಳಾದ ಜಾತಿ-ಮತಗಳು ಯಾವ ಕೆಡುಕನ್ನೂ ಮಾಡಲಾರವು. 'ಜಾತ್ಯತೀತ' 'ಜಾತ್ಯತೀತ' ಎಂದು ಕೂಗಿ— ಕೈಯಲ್ಲಿರುವ ಅಧಿಕಾರ ಬಲದಿಂದ— ಹಳೆಯ ರೀತಿಯ ಜಾತಿ ಪದ್ಧತಿಯನ್ನು ನಷ್ಟಪಡಿಸಬಹುದಿಷ್ಟೆ! ಇದು ನಷ್ಟವಾದರೂ ಹೊಸ ರೀತಿಯ ಜಾತಿಗಳು ನಿರ್ಮಾಣವಾಗುತ್ತಲೇ ಇರುವುವು. ಅಧಿಕಾರಲುಬ್ಧವಾದ ಅಪ್ರಾಮಾಣಿಕ ಆಡಳಿತಕ್ಕೆ ಈ ಹೊಸ ಜಾತಿಗಳು ತೊಂದರೆಯನ್ನು ಕೊಟ್ಟೇ ಕೊಡುವುವು. ಇದನ್ನು ಬಿಟ್ಟು ಹೀಗೂ ಹೇಳಬಹುದು: ಅಧಿಕಾರಲುಬ್ಧರಾದ ವ್ಯಕ್ತಿಗಳು ಈ ಹೊಸ ಜಾತಿಗಳ ಬಲವನ್ನು ಪಡೆದುಕೊಂಡು, ಎಂತಹ ಪ್ರಾಮಾಣಿಕ ಆಡಳಿತಕ್ಕೂ ತಡೆಯನ್ನೊಡ್ಡಬಹುದು.

ವಿಜ್ಞಾನಪ್ರಧಾನವಾದ ಇಂದಿನ ಜೀವನದಲ್ಲಿ ಮತನಿಷ್ಠೆಗೂ ಉಳಿಗಾಲವಿಲ್ಲ; ವಂಶಾನುಗತ ಜಾತಿಗೂ ಉಳಿಗಾಲವಿಲ್ಲ. ಆದರೆ, ಸ್ವಾರ್ಥ-ಅಧಿಕಾರಲಾಲಸೆ-ಅಪ್ರಾಮಾಣಿಕತೆಗಳಿಗೆ ಮಾತ್ರ ಯಾವಾಗಲೂ ಅಳಿಗಾಲವಿಲ್ಲ. ಇವು ತಲೆಯೆತ್ತಿ ನಿಂತುಕೊಂಡು ರಾಜಕೀಯ ಶಾಂತಿಗೂ ಪೀಡೆ ಕೊಡುತ್ತವೆ; ಸಮಾಜಶಾಂತಿಗೂ ತಡೆಯನ್ನು ತಂದೊಡ್ಡುತ್ತವೆ. ಅವಕ್ಕೆ ಅಳಿಗಾಲ ಬರುವಂತೆ ಸರಕಾರ ಏನಾದರೂ ಮಾಡಬಲ್ಲದೆ?

—ಸಂಪಾದಕ.

ಸಾಹಿತ್ಯವಿಹಾರ

‘ ಭಾಗೀರಥಿ ’ ಗೀತರೂಪಕವನ್ನು ವಿಮರ್ಶಿಸಿ ಬೇರೆ ಬೇರೆ ನಾಲ್ಕೈದು ಜನರಿಂದ ಬರೆಹಗಳು ಬಂದಿವೆ. ಬಂದುವುಗಳಲ್ಲಿ ಉತ್ತಮ ವಿಮರ್ಶೆಯೆಂದು ತೀರ್ಮಾನಗೊಂಡ ಒಂದು ಲೇಖನವನ್ನು ಪ್ರಕಟಿಸಲಾಗಿದೆ. ‘ ತರುಣ ವಿಮರ್ಶಕ ’ ಎಂಬ ಮುಚ್ಚುಹೆಸರಿನಿಂದ ಬಂದಿರುವ ಇನ್ನೊಂದು ವಿಮರ್ಶೆಯೂ ತುಂಬ ಚೆನ್ನಾಗಿದೆ ಆದರೆ ಸ್ಥಳಸಂಕೋಚದ ಮೂಲಕ ಅದನ್ನು ಪ್ರಕಟಿಸಲಿಕ್ಕೆ ಸಾಧ್ಯವಿಲ್ಲವೆಂದು ಸದ್ಯ ತಡೆದು ಹಿಡಿಯಬೇಕಾಗಿದೆ. ಮುಂದಿನ ತಿಂಗಳ ಸಾಹಿತ್ಯವಿಹಾರಕ್ಕಾಗಿ ಈ ತಿಂಗಳಲ್ಲಿ ಪ್ರಕಟವಾಗಿರುವ ಯಾವ ಲೇಖನವನ್ನೂ ಕುರಿತು ವಿಮರ್ಶೆ ಬರೆದು ಕಳುಹಬಹುದು. ಒಳ್ಳೆಯ ವಿಮರ್ಶೆಯನ್ನು ಪ್ರಕಟಿಸಲಾಗುವುದು.

ಸಂ. ಜ.

●

ಭಾಗೀರಥಿ ಅರ್ಥಾತ್ ಗಂಗಾವತರಣಂ

(ಗೀತರೂಪಕ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ ‘ವಿದ್ವಾನ್,’ ಕಾಸರಗೋಡು

★

ಧಾರವಾಡದ ಬಾನುಲಿಕಟ್ಟೆಯಿಂದ ಬಿತ್ತರಗೊಂಡ, ಶ್ರೀ ...ಂಪಕಂದರ ತನ್ನದೇ ಆದ ವಿಶಿಷ್ಟವಿಚಾರಪಥದಿಂದ ಕಳೆಗೊಂಡ, ...ೀರಥನ ಅನಂತ ಪ್ರಯತ್ನಗಳ ಫಲವಾಗಿ ಭೂಲೋಕಕ್ಕೆ ಆಪ...ಸಿದ ಸ್ವರ್ಗಂಗೆಯ ಉದಾತ್ತ ಚಿತ್ರಣದಿಂದ ರೂಪುಗೊಂಡ, ...ದು ಗೀತರೂಪಕ “ ಭಾಗೀರಥಿ ”.

...ಶ್ರೋತೃಗಳೊಬ್ಬರ ಹೃದಯವನ್ನು ಸೂರೆಗೊಂಡ ಈ ಸಂಗೀತ-ತರಂಗಿಣಿಯು, ವಾಚಕನ ಹೃದಯವನ್ನೂ — ಕಥನಕೌಶಲ, ...ುರಚನೆ, ಉದ್ಬುದ್ಧ ಭಾಷಾಶೈಲಿಗಳಿಂದ ಸೆರೆಹಿಡಿಯದೆ ಬಿಡ...ರದೆಂಬುದನ್ನು ಖಂಡಿತವಾಗಿ ಹೇಳಬಹುದು. ಸಾಹಿತ್ಯ-ಸಂಗೀತ ...ಮಧುರ ಮಿಲನದಿಂದ ಜತೆಗೊಂಡು ಸುಮಧುರ ಕಂಠದಿಂದ ...ನಪೂರ್ಣವಾಗಿ ರಸಭಾವಗಳ ತರಂಗಗಳಿಂದ ಚಿಮ್ಮಿ—ಮೊರೆ...ದಿದ ಈ ರೂಪಕವು ‘ ವಾಚಕ ’ನನ್ನು ಕಾಣುವುದು ಕೇವಲ ...ರೂಪಣೆ ಮತ್ತು ಕಥನಕೌಶಲದಿಂದ. ಸನ್ನಿವೇಶಕ್ಕೆ ಅನು...ವಾದ, ರಸಭರಿತ ಧಾಟಿಯಿಂದ— ಗಾಯಕನ ಮಧುರ ಕಂಠ...ದ ಇಳಿದು ಬಂದ ಭಾಗೀರಥಿಯು, “ ಸಾಹಿತ್ಯವಿಮರ್ಶೆ ”ಯ... ಬಂದಾಗ ಸಾಗುವ ಗತಿ ಬೇರೆ. ಶ್ರಾವಕನ ಹೃದಯವು ...ದ ಸವಿಯನ್ನು ವಾಚಕನು ವಸ್ತುರಚನೆ-ಕಥನಕೌಶಲ...ಕ್ಕನುಗುಣವಾದ ಶಬ್ದರಚನೆ, ಪಾತ್ರಪೋಷಣೆ ಮೊದಲಾದುವು...ದ ಸವಿದು— ಹೃದಯದಲ್ಲೇ ರಂಗವನ್ನು ರೂಪಿಸಬೇಕಾಗಿದೆ. ...ಪಲ ಗೀತರೂಪದಿಂದ ಹರಿವ ನಾಟಕಗಳಲ್ಲಿ ಕೆಲವೆಡೆ— ...ಚಕನ ದೃಷ್ಟಿಗೆ ನಿಲುಕುವ ವಿಚಾರಗಳ ಶೈಥಿಲ್ಯವಿದ್ದರೂ— ...ಧುರ ಕಂಠದ-ಹೃದಯಾವರ್ಜಕ ಧಾಟಿಯ ಮಧುರ ಮೇಳನ...ದ. ಆ ಶೈಥಿಲ್ಯವು ಕಾಣದಾಗಲು ಎಡೆಯದೆ. ಆದರೆ ... ಅನಂಪಕಂದರ ಭಾಗೀರಥಿಯು ಶ್ರೋತೃಗಳ ಮನವನ್ನು ...ದಂತೆ, ಉಳಿದ ಸಾಹಿತ್ಯಿಕ ದೃಷ್ಟಿಯ ವಿಚಾರಗಳಲ್ಲೂ ಊನ...ಗದೆ— ಹಿರಿದಾಗಿದೆಯೆಂದು ಹೇಳಲು ಸಂದೇಹವೇ ಇಲ್ಲ.

ವೃಂದಗೀತದಿಂದ ಮೊರೆದ ಪುಣ್ಯತರಂಗೆ ಸುರಗಂಗೆಯ ಸ್ತುತಿಯನ್ನೇ ಮುಂದಿರಿಸಿದಾಗ— ಕೇಳುವ ಕೊಳಗಳ ಹೊಸಲಿನ ಮಧುರ ನಿನಾದದಲ್ಲೇ ‘ ನಿರೂಪಕನು ’ ಪ್ರಸ್ತಾವನೆಯನ್ನಾರಂಭಿಸಿ— ಸಗರ ರಾಜನ ಅಶ್ವಮೇಧವನ್ನು ಸೂಚಿಸಿ— ಆ ಮೂಲಕವಾಗಿ ಹರಿವ ಕತೆಯನ್ನು ಸುರುತ್ತ, ಸಗರಪುತ್ರರ ಪುಣ್ಯಲೋಕ ಪ್ರಾಪ್ತಿಗಾಗಿ ಗಂಗೆಯನ್ನೇ ಭೂಲೋಕಕ್ಕೆ ತರುವ ಯತ್ನದಲ್ಲಿ ಲೀನರಾದ ಅಂಶುಮಂತ- ದಿಲೀಪರ ತಪೋಯಾತ್ರೆಯನ್ನು ಉಸುರುತ್ತ— “ ಭಗೀರಥನ ವಿಶ್ವಪ್ರಯತ್ನದಿಂದ ” ಭೂಮಿಗಿಳಿದ ಸ್ವರ್ಗಂಗೆಯ ನಿರ್ಮಲ ಕತೆಯನ್ನು ರಸವತ್ತಾಗಿ ಕವಿಗಳು ರೂಪಿಸಿದ್ದಾರೆ. ಇದಕ್ಕಾಗಿ ಅನುಗೊಳಿಸಿದ ಶರಯೂ, ಯಮುನಾ, ಸರಸ್ವತಿಯರ ಮೇಳನವನ್ನು, ಭಗೀರಥನೆಡೆ ಬಂದು ಮಗನನ್ನು ಎಚ್ಚರಿಸಿ— ಹರಸಿ ಕಳುಹುವ ಮಾತೆ— ಸುದಕ್ಷಿಣೆಯ ಚಿತ್ರಣವನ್ನು— ಭಗೀರಥನ ಅಚಲ ತಪದೆಡೆ ಬಂದು ಹೃದಯವನ್ನು ತಟ್ಟುವ ಅಮೃತವಾಣಿ ಯಮುನೆಯ ಸನ್ನಿವೇಶವನ್ನು — ಕವಿಗಳು ಕಥಾಭಾಗದ ಅಪೂರ್ವ-ಹಾಗೂ-ಅನ್ಯಾದೃಶ ಜೀವಕಳೆಗೆ ಸಹಾಯಕವಾಗಿ ಅನುಗೊಳಿಸಿರುತ್ತಾರೆ.

ಸ್ವರ್ಗಂಗೆಗಾಗಿ ಯತ್ನಿಸಿದ ಭಗೀರಥನ ಯತ್ನವು ನ್ಯಾಯವಾಗಿದೆ, ಉದಾತ್ತ ಕುಟುಂಬದ ಸರ್ವೋತ್ಕೃಷ್ಟ ಚಿತ್ರವಾಗಿದೆ. ಯೆಂಬದನ್ನು ತೋರುವುದಕ್ಕಾಗಿಯೆ ಅಂಶುಮಂತ-ದಿಲೀಪರು ಮಾಡಿದ ಯತ್ನವನ್ನು ಇಲ್ಲಿ ಕಾಣಿಸಲಾಗಿದೆ. “ ತಂದೆಯಂತೆ ಮಗ ”ನೆಂಬ ಲೋಕನ್ಯಾಯದ ಯಥಾರ್ಥಚಿತ್ರಣವು ಯುಕ್ತವಾಗಿ ನಿರೂಪಿತವಾಗಿದೆ ಈ ರೂಪಕದಲ್ಲಿ! ಸ್ವರ್ಗಂಗೆಯ ಸ್ತುತಿಯಲ್ಲೇ ನಿಂತ— ಆಕೆಯ ಪ್ರಾಪ್ತಿಗಾಗಿರುವ ನಿಶ್ಚಲಯತ್ನದ ಬೇಡಿಕೆಯ ಸ್ತುತಿಯಲ್ಲೇ ನಿಂತ— ದಿಲೀಪನ ಆಶೆಯನ್ನು ಭಗೀರಥನು ಮರೆಯದೆ ಫಲವಾಗಿಸಿದನು. ಆದುದರಿಂದಲೇ ಆತನ ಯತ್ನವು ಪುತ್ರಕರ್ತವ್ಯ ಹಾಗೂ ಮಾನವಯತ್ನ ಈ ಉಭಯ ದೃಷ್ಟಿಯಿಂದಲೂ ಬೆಳಗಿನಿಂತಿದೆ ಅಂತಹ ಬೆಳಕು ಭಗೀರಥನ ಯತ್ನದಲ್ಲಿ ತೋರಲೆಂದೇ ಈ ಸನ್ನಿವೇಶವು ರಚಿತವಾಗಿದೆ. ಶರಯೂ, ಯಮುನಾ, ಸರಸ್ವತಿಯರ ಶುಭಾಕಾಂಕ್ಷೆಯು ಸೂರ್ಯವಂಶದತ್ತ ಸಾಗಿ— ಮುಂದೆ ಭಗೀರಥನ ಯತ್ನಾನುಕೂಲೆಯಾಗಿ ಗಂಗೆಯ ಅವತರಣಕ್ಕಾಗಿ ಯತ್ನಿಸಿ ಆ ವಂಶದ ಗೌರವವನ್ನು

ಕಾಪಾಡಬೇಕಾದರೆ, ಆ ವಂಶವು ಅದೆಷ್ಟು ಪವಿತ್ರವಿರಬೇಕು? ಅಂತಹ ಪಾವಿತ್ರ್ಯಸಾಧನೆಗಾಗಿಯೆ ಈ ಪುಣ್ಯತರಂಗಿಣಿಯರ ಯೋಗ್ಯ ಸಮಾವೇಶವಾಗಿದೆ. ಮಾನವ ಜೀವನದ ಕಾರ್ಯ-ಸಾಧನೆಯು ಗಂಗೆಯ ಅವತರಣಕ್ಕೆಂದಾದರೆ— ವಿಖ್ಯಾತೆಯರಾದ ತರಂಗಿಣಿಯರ ಯತ್ನವೂ ಸಹಾನುಭಾವಿಯಾಗಿದೆ. ಮಾನವ ಜೀವನದಂತೆ ತರಂಗಿಣಿಯರ ನಿರ್ಮಲ ಚಾರಿತ್ರ್ಯಕ್ಕೆ ರೂಪುಗೊಟ್ಟು ಮಾನವಜೀವನವನ್ನು ಜಪುಗಳಲ್ಲೂ ತುಂಬಬೇಕಾದರೆ, ಆ ಮೂಲಕ ಸ್ತ್ರೀ ಚಾರಿತ್ರ್ಯದ ಉತ್ಕೃಷ್ಟ ಭಾವನೆಯನ್ನು ಸಾರಬೇಕಾದರೆ, ಕವಿ-ಹೃದಯವು ಪ್ರಕೃತಿಮಯವಿರಬೇಕು! ವಿಶಾಲವಿರಬೇಕು! ಅಂತಹ ಸ್ತ್ರೀಪಾತ್ರಗಳಿಂದಲೇ ಸಹೋದರಭಾವನೆಯ ಉದಾತ್ತ ತತ್ತ್ವವೂ ನಿರೂಪಿತವಾಗಿದೆ. ರಸಕ್ಕನುಗುಣವಾದ ಧಾಟಿಯಲ್ಲೂ ಸೊಗಸನ್ನು ಕಾಣಬಹುದು. 'ದಿಲೀಪನ ಹೃದ್ಗತವಾದ ಭಾವವನ್ನು ತೋರಿದಾಡುವ'' ನಿನ್ನಾಗಮನಕೆ ಪರಿತಪಿಸುತಲಿದೆ ಭಾರತ ಭೂ-ಹೃದಯ;....." ಈ ಭಾಗವು ಹೃದಯಾವರ್ಜಕವಾಗಿದೆ. ಉಚಿತವಾದ ಸಮಾವೇಶದಿಂದ ಮಿರುಗಿನಿಂತಿದೆ. ಇನ್ನೊಂದೆಡೆ ''ಸಾಗುವ ದಾರಿಯ ತೀರದಹೊಲ-ನೆಲ ಜಾಗರಿಸುತ ಸಿಂ ಪೇರುವೆವು" ಎಂದು ಕಾಣುವಾಗ, ಜೀವನದ ವಿಶಾಲ ಭಾವವು ಒಡಮೂಡಿ ನಿಂತಂತಾಗುತ್ತದೆ. ಮತ್ತೊಂದೆಡೆ ಸುದಕ್ಷಿಣೆಯು ದುಃಖಭರಿತಳಾಗಿ ಏರುದನಿಯಲ್ಲಿ ''ತಾಯೆ, ಶ್ರೀಮಾಗಂಗೆ,... ನೀಬಿಡವರ ಪಾಪದಜ ಕಳೆಯೆ ಭವಭಂಗೇ" ಎಂದು ಹೇಳುವಾಗ, ಏರುದನಿಗೆ ಅನುಕೂಲವಾದ, ಮನೋವೇಧಕ ಭಾವಪೂರ್ಣವಾದ ''ಏ'' ಕಾರಶ್ರವಣವು ರಾಗಪುಂಜಿತವಾಗಿದೆ. ಹಾಡುವಾಗ ಇದರ ಸೊಗಸು ಪುಲಕವನ್ನು ಎಬ್ಬಿಸದಿರದು. ಮಗುದೊಂದೆಡೆ 'ಮನೆಯೊಳಿರ್ದ ನನ್ನ ತಪವು ಮಗನ ಹದುಳ ಪಡೆಯಲಿ'' ಎಂಬುದಿದು ವೀರಮಾತೆಯ ಹೃದಯದ ಚಿತ್ರ. ಗಂಗೆಯೊಡನೆ ಸೇರೆಯಿಡುವ ಶರಯೂ ನದಿಯ ಪರಾರ್ಥಸಾಧನಾಭಿಲಾಷೆಯು ಜೀವನಕ್ಕೊಂದು ಆದರ್ಶ. ಆದುದರಿಂದಲೆ ಇಲ್ಲಿ ಸಾಹಿತ್ಯದ ಸದುದ್ದೇಶವು ಸಫಲವಾಗಿದೆ. ಮುಂದುವರಿದಾಗ ನಾವು ಕಾಣುವುದು ''ಯಮುನೆ-ಭಗೀರಥರ'' ಸಂಭಾಷಣೆಯ ಸ್ವಾರಸ್ಯವನ್ನು. ನಾಂದಿ ಗಂಗಾವತರಣದ ಒಳಿತ ಯಮುನೆಯು ಸಲುಗೆಯಿಂದ ''ನಿನ್ನೊಂದಿಗಿರುವೆನೇ ನಿನ್ನೊಡನೆ ಬೆರೆವೆನೇ ನಿನ್ನೊಳೈಕ್ಯದ ಗತಿಯು ಬೇಕೆನುವೆನೇ!" ಎಂದು ಹೇಳುವಾಗ, ವಾಚಕನೇ ಉದಾತ್ತಚಿತ್ರಣದ ಸ್ವಾರಸ್ಯದ ಪರಿಸಮಾಪ್ತಿಯಲ್ಲಿ ಆನಂದಿತನಾದರೆ, ಮಧುರನಾದದಿಂದ ಮರುಳಾದ ಶ್ರಾವಕನೇನು ಮಾಡುವನೋ!

ಭಾಷಾಶೈಲಿಗಳ ಕುರಿತು ಒಂದು ಮಾತು: ಪರಿಪಕ್ವವಾದ ಭಾಷೆಯೆಡೆಯಲ್ಲಿ ರಸಾನುಗುಣ ಶೈಲಿಯು, ಸ್ತ್ರೀ ಪಾತ್ರ–ಪುರುಷಪಾತ್ರಗಳೆಂಬ ಭೇದವನ್ನರಿಸಿಯೆ ಶಬ್ದರಚನೆಯಲ್ಲಿ ತೋರಗಿದೆಯೆಂಬುದಿದು ಹೆಮ್ಮೆಯ ಮಾತು. ಆದರೆ ಹೆಚ್ಚಾಗಿ ಸಂಸ್ಕೃತ ಪದಗಳು ಅಲ್ಲಲ್ಲಿ ತುಂಬಿದ್ದು, ಕೇವಲ ಕನ್ನಡ ಬಲ್ಲವರಿಗೆ ಅರ್ಥವಾಗಲು ತೊಡಕಾಗಬಹುದು ಎಂಬುದನ್ನಿಲ್ಲಿ ಹೇಳದಿರಲು ನಿರ್ವಾಹವಿಲ್ಲ.

ಸುಪ್ರಸಿದ್ಧ ಕಥೆಯಾದುದರಿಂದ, ಕಥಾಜ್ಞಾನಕ್ಕೆ ಏನೂ ತೊ
ಗದು

ಅಕ್ಷರವನ್ನು ಕಲಿಸುವೆಡೆ–ಬೇಡಿಕೆಯನ್ನು ಮುಂದಿರಿಸು
ಸಂಭಾಷಣೆಯು— ಜಲಗಾವಡೆ-ಛಂದಸ್ಸಿನ ರೀತಿಯು ಏರಿಳ
ಸಂಭಾಷಣೆ- ಪ್ರಾರ್ಥನೆಗಳ ಕಡೆಗಳಲ್ಲಿ ಛಂದೋಗ
ಹಾಯಾಗಿ ಹಾರಿದರೆ, ಅಕ್ಷರವನ್ನು ಕಲಿಸುವೆಡೆ ಶಬ್ದ
ಛಂದೋನುಗುಣವಾಗಿ ಹಾರಿ ಮುಂಬರುತ್ತವೆ. ಯಮುನೆ
ಗಂಗೆಯ ಸಂದೇಶವನ್ನು ಭಗೀರಥನಲ್ಲಿ ಬಂದು ಸಾರುವೆಡೆ
ಇದಕ್ಕೆ ಸಾಕ್ಷಿ! 'ರಗಳೆ'ಯ ರೂಪಾಂತರದಂತೆ ಕಾಣುವ
ಹಾಡುಗಳು, ಪ್ರಾಸವೊದಲಾದುವನ್ನು–ವಿಶೇಷ ಲಕ್ಷ್ಯದಲ್ಲಿ
ಹಾಡುಗಾರಿಕೆಯ ತಾಳ–ಲಯ ಮೊದಲಾದುವನ್ನು ಲಕ್ಷ್ಯದ
ಸಿಯೆ ಸಾಗಿರಬೇಕೆಂದೆನಿಸುತ್ತದೆ. ಅಂತೂ ಉತ್ತಮ ನಾಟ
ಭಾವಪೂರ್ಣ ನಿಲುವಿನಲ್ಲಿ ಬೇಗಲನುಕೂಲವಾದ ''ಪದಾವತ
ಗಳಿಂದಲೂ, ಮನುಷ್ಯನಿಶ್ವಾಸಕಸದೃಶಪದಗಳಿಂದಲೂ" ಛಂ
ಮಿರುಗಿದೆ. ಮನಸ್ಸಿನ ಯಥಾರ್ಥ ಚಿತ್ರಗಳನ್ನು–ಅನುಭವಗ
ಮತ್ತೊಬ್ಬರೊಡನೆ ಹೇಳಿಸುವಾಗ ಯಾವ ಬಗೆಯ ಭಾಷೆಯ
ನಾವು ಮಾತುಗಾರಿಕೆಯ ಸಂದರ್ಭದಲ್ಲಿ ಉಪಯೋಗಿಸುತ್ತೇ
ಅದೇ ಬಗೆಯ ಕ್ರಮವು ಭಾಗೀರಥಿಯನ್ನು ಅಲಂಕರಿಸಿದೆ.—

ಭಾಗೀರಥಿಯ ಈ ಕಥಾಭಾಗದಲ್ಲಿ ಕವಿಗಳು ಅನುಗೊ
ನದೀಪಾತ್ರಗಳೂ, ಕಥಾವತರಣಕ್ಕಾಗಿ ಅಲ್ಲಲ್ಲಿ ಅನುಗೊ
ನಿರೂಪಕನ ಕಥನ ಕೌಶಲವೂ— ನಿಜವಾಗಿ ಭಾಗೀರಥಿಯ
ಬೆಳಗಿದೆಯೆನ್ನಲು ಅಡ್ಡಿಯಿಲ್ಲ. ಕಥಾಭಾಗವು ಸೂಕ್ಷ್ಮ
ಹದವಂತೆ ನಿರೂಪಕನೇ ಭೂತ-ಭವಿಷ್ಯ ಕಥೆಗಳನ್ನು ಹೇಳು
ಗಲೂ ನಾವು ಬೇಸರಿಯದೆ ಕೇಳುವುದಿದು, ಶ್ರೀ ಆನಂದಕಂದ
ರೂಪಿಸಲ್ಪಟ್ಟ ನಿರೂಪಕನ ಜಾಣ್ಮೆ!

ಭಾಗೀರಥೀ ಪ್ರಾಪ್ತಿಗಾಗಿರುವ ಭಗೀರಥನ ಯತ್ನವೇ ಪ್ರಧಾ
ವಾಗಿದ್ದ ಈ ಕಥಾಭಾಗವನ್ನು, ಸಗರಪುತ್ರರ ಅಶ್ವಮೇಧ ಯ
ದಿಂದಲೇ ಆರಂಭಿಸಿ, ಒಂದೂ ಬಿಡದೆ ಮುಗಿಸುತ್ತ ''ಗಂ
ಯಮುನಾ'' ಸಂಗಮದ ಪುಣ್ಯಕಥನವನ್ನು ಸಾರಿದ ಈ ಗಿ
ರೂಪಕವು, ಒಂದು ಅತಿ ವಿಸ್ತೃತ ಕಥೆಯ ನೂತನ ಸೂಕ್ಷ್ಮ
ಯಾಗಿದೆ! ಭಗೀರಥನ ಪ್ರವೇಶಕ್ಕೆ, ವ್ಯಕ್ತಿ ಚಾರಿತ್ರ್ಯಕ್ಕೆ
ಬರಬಹುದಾದ– ಗತಚಿತ್ರವನ್ನು– ವಂಶಕಥನವನ್ನು ಉಚಿತವಾ
ಗಿಯೆ ಅನುಗೊಳಿಸಿದ ಶ್ರೀ. 'ಆನಂದಕಂದರ' ಈ ಭಾಗೀರಥಿ
ಹೃದಯಾವರ್ಜಕವಾಗಿದೆಯೆನ್ನಲು ಅಡ್ಡಿಯಿಲ್ಲ! ನಾಟಕೀ
ದೃಷ್ಟಿಯಲ್ಲೂ ಸಂದರ್ಭಕ್ಕೆ ಅನುಗುಣವಾದ ನೇಪಥ್ಯರಚನೆಯ
ಉಚಿತಪಾತ್ರ ಸಮಾವೇಶದಲ್ಲೂ ಈ ರೂಪಕವು ಹಿಂದುಳಿಯ
ದಾಗಿದೆಯೆಂದು ಹೇಳಲು ಏನೂ ಅಡ್ಡಿಯಿಲ್ಲ! ಇಂತ
ರೂಪಕಗಳು ಆಗಿಂದಾಗ್ಗೆ ಬಾನುಲಿಯಲ್ಲಿ ಬಿತ್ತರಗೊಂಡರೆ, ನಿ
ನಾಗಿ ಜನತೆಯು ಆನಂದ ಪಡೆಯಬಲ್ಲದೆಂಬುದರಲ್ಲಿ ಸಂಶಯವಿ

ಸಂಸ್ಕಾರವೇ ಜೀವನದ ಬೆಳಕು!

ಬೆಂದ ಹೃದಯ

(ಸಾಮಾಜಿಕ ತರಂಗರೂಪಕ)

ಡಾ. ಬೆಟಗೇರಿ ಕೃಷ್ಣಶರ್ಮ, ಧಾರವಾಡ

★

—: ಪಾತ್ರವಿವರಣೆ :—

ನಿವೇದಕ :— (ನಾಟಕದ ಸೂತ್ರಧಾರ).

ರಂಗಣ್ಣಕಾಕಾ :— (ಹಳ್ಳಿಯೂರಿನ ಒಬ್ಬ ಗೃಹಸ್ಥ)
ಶ್ಯಾಮಣ್ಣ :— (ರಂಗಣ್ಣಕಾಕಾನ ಅಣ್ಣನ ಮಗ)
ಮುದಕಪ್ಪ :— (ತೋಟ ಮಾಡಿದ ಒಕ್ಕಲಿಗ)
ರತ್ನಾಬಾಯಿ :— (ಶ್ಯಾಮಣ್ಣನ ಹೆಂಡತಿ)
ಗಂಗಾಬಾಯಿ :— (ರತ್ನಾಬಾಯಿಯ ಅಕ್ಕ)
ಸಕರೆವ್ವ :— (ಮುದಕಪ್ಪನ ಹೆಂಡತಿ)

ಅಲ್ಲದೆ ನಾಲ್ಕು ಜನ ಹಳ್ಳಿಯ ರೈತರು; ಮತ್ತು ಅಂಚೆಯಾಳು.

೧

ನಿವೇದಕ :

ಕನ್ನಡ ನಾಡಿನಲ್ಲಿಯ ಚಿಕ್ಕ ಪಟ್ಟಣದ ಹತ್ತಿರದ ಹಳ್ಳಿಯೊಂದು. ಂಗರಾಯರು ಆ ಊರ ದೇಶಪಾಂಡೆಯರ ಮನೆತನಕ್ಕೆ ಸೇರಿ-ವರು. ಶ್ಯಾಮು, ರಂಗರಾಯರ ಅಣ್ಣನ ಮಗ. ಚಿಕ್ಕತನದಲ್ಲಿಯೆ ಂದೆ-ತಾಯಿಗಳನ್ನು ಕಳೆದುಕೊಂಡಿದ್ದ. ಶ್ಯಾಮುನನ್ನು ರಂಗ-ಯರೇ ತಂದೆ-ತಾಯಿ ಆಗಿ ಸಾಕಿ-ಸಲಹಿ ದೊಡ್ಡವನನ್ನಾಗಿ ಾಡಿದ್ದಾರೆ. ರಂಗರಾಯರದು ತುಂಬ ದೊಡ್ಡ ಮನಸ್ಸು. ಊರ ನರಿಗೆ ಒಂದಿಲ್ಲೊಂದು ಬಗೆಯಿಂದ ಉಪಕಾರ ಮಾಡುವವರು. ದುದರಿಂದಲೇ ಜನರೆಲ್ಲರೂ ಅವರನ್ನು 'ರಂಗಣ್ಣಕಾಕಾ' ಕಾಕಾ' ಎಂದು ಪ್ರೀತಿಯಿಂದ ಕರೆಯುವರು. ಶ್ಯಾಮುನ ೇಲಂತೂ ರಾಯರ ಪ್ರೀತಿ ಬಹಳ. ಅವನಿಗೆ ಸಾಕಷ್ಟು ಕಲಿಸಿ-ರು; ವರ್ಷದ ಹಿಂದೆ ಒಳ್ಳೆಯ ಮನೆತನ ನೋಡಿ ಮದುವೆಯನ್ನೂ ಾಡಿದರು. ಇದೀಗ ಶ್ಯಾಮು ಹಳ್ಳಿಯಲ್ಲಿಯ ತನ್ನ ತೋಟಕ್ಕೆ ಂದಿದ್ದಾನೆ. ತೋಟ ಮಾಡಿದ ರೈತ ಮುದಕಪ್ಪನೂ ಆತನ ಂಡತಿ ಸಕರೆವ್ವನೂ ತೋಟದ ಗುಡಿಸಿಲ ಮುಂದೆ ಕುಳಿತಿದ್ದಾರೆ.

(ತೋಟದ ವಾತಾವರಣವನ್ನು ಸೂಚಿಸುವ ಹಕ್ಕಿಪಕ್ಕಿಗಳ ಕೂಗು-ಚುಕುಗಳು, ಎತ್ತುಗಳ ಕೊರಳಲ್ಲಿ ಕಟ್ಟಿದ ಹುರಿಗೆಜ್ಜೆ-ಕಿರುಗಂಟೆಗಳ ಪ್ಪಳ— ಆಗಾಗ ಕೇಳಿಸುತ್ತಿರಬೇಕು)

ಮುದಕಪ್ಪ:— ಎಲಾ, ಸಣ್ಣರಾಯರು ಬಂದರಲಾ ಇಂದ ಪ್ಪಟ್ಟದ ಕಡೆ! ಶರಣರೀ ಯಪ್ಪಾ, ಬರ್ರಿ ಬರ್ರಿ! ಏ ಕಂಬಳೀ ಂದು ಹಾಸs ಗಡಾನ!

ಸಕರೆವ್ವ :— (ಎದ್ದು ಒಳಗೆ ಹೋಗು-ಹೋಗುತ್ತಲೇ) ರಾಯರು ಈಗ ಶ್ಯಾಟಕ್ಕ ಬಾರದs ಏನ ಮಾಡತಾರು! ಸಂಸಾರ ಬಿದ್ದೈತಿ ಕೆಲಸ್ಯಾಗ! (ತಿರುಗಿ ಬಂದು ಕಂಬಳಿಯನ್ನು ಕೊಡಹಿ ಹಾಸಿ) ಕುಂತುಗೊಳ್ರಿ ಶ್ಯಾಮಣ್ಣಾ!

ಶ್ಯಾಮು :— ಈಗ ಕೂತುಗೊಳ್ಳಲಿಕ್ಕೆ ಸವಡು ಇಲ್ಲ; ಲಗೂನs ಮನಿಗೆ ತಿರಿಗಿ ಹೋಗಬೇಕು. ಏನಾದರೂ ಚೆಲೋ ಪಲ್ಲೆ ತಗದುಕೊಡು! ಮತ್ತ....ಸಕರೆವ್ವಾ, ನೀ ಮನೀಕಡೆ ಬಾ! ಬರೂ ಮುಂದ, ಒಂದು ಇಪ್ಪತ್ತು ಮೂವತ್ತು ಬಾಳೀಯೆಲೀ ತೊಗೊಂಡು ಬಾ!

ಸಕರೆವ್ವ:— ಕಾಕಾನವರು– ನಿಮ್ಮ ಹೇಣತಿನ್ನ ಕರಕೊಂಡು ಬಂದರೇನ್ರಿ?

ಶ್ಯಾಮು :— (ಕಿರುನಗೆ ನಗುತ್ತ) ಹುಂ, ಬಂದರಲಾ! ಮೂರು ತಾಸು ರಾತ್ರಿ ಆದ ಮ್ಯಾಲ ಬಂದರು. ಬರುವಾಗ ಹಾದಿ-ಯೊಳಗ, ಬಂಡೀಗಾಲೀ ಹಲ್ಲೊಂದು ಮುರಿದು ಬಿತ್ತಂತ! ಹಾಂಗs ಮೆಲ್ಲಕ ಸಾಗಿಸಿಕೊಂಡು ಬಂದು, ಹಾದೀಮ್ಯಾಗಿನ ಹಳ್ಳಿಯೊಳಗ ಅದನ್ನ ಸರಿಮಾಡಿಸಿಕೊಂಡು ಹೊರಟುಬರಬೇಕಾದರ, ಮೂರು ತಾಸು ರಾತ್ರಿ ಆತು. ನನಗ ಹಾದೀ ನೋಡಿ ನೋಡಿ ಸಾಕಾಗಿ ಹೋತು!

ಸಕರೆವ್ವ:— ಕೇಳಿದೇನೋ ಹಿರ್ಯಾ ಶ್ಯಾಮಣ್ಣನ ಮಾತು? ಹಾದೀ ನೋಡಿ ನೋಡಿ ಸಾಕಾಗಿ ಹೋತಂತ! (ನಗುತ್ತ) ಅಂತೂ ಬಂದರೇಳ್ರಿ ಶ್ಯಾಮಣ್ಣಾ! ಹಾದೀ ನೋಡಿದ್ದಕ್ಕ ಹುಸೀ ಏನೂ ಹೋಗಲಿಲ್ಲ!! ಹೇಣ್ತೀ ಮಾರೀ ನೋಡೂ ಹಬ್ಬದ ಸಂವಿ ಸಿಕ್ಕು-ಬಿಟ್ಟೈತನ್ರಿ!

ಮುದಕಪ್ಪ:— ಏ! ಮುದಿಕಿ ಆದರೂ ನೀ ನಿನ್ನ ಹುಡು-ಗಾಟಾ ಬಿಡವೊಲ್ಲಿ ನೋಡು!

ಸಕರೆವ್ವ:— ಏ! ನಾ ಮುದಿಕೀ? ನೋಡ್ರಿ ಶಾಮಣ್ಣಾ; ನಾ ಮುದಿಕ್ಯಂತ! ನಾ ಯಾಕ ಮುದಿಕಿ ಆಗಲಿ; ನಿನಗ ಮಾತ್ರ, ಹುಟ್ಟಿದ ಹನ್ನೆರಡನೇ ದಿನಾನs ನಿಮ್ಮ ಅಪ್ಪಾ ಅವ್ವಾ 'ಮುದಕಾ' ಅಂತ ಹೆಸರಿಟ್ಟು, ಹುಡಗ ಇದ್ದಾಗs ಮುದಕನ್ನ ಮಾಡಿಬಿಟ್ಟಾರ!

(ಶ್ಯಾಮಣ್ಣನು ನಗುವನು. ಮುದಕಪ್ಪನೂ ನಗುವನು.)

ಮುದಕಪ್ಪ:— ರಾಯರ, ಯಾವಾಗ ನೋಡಿದರೂ ಇಕೀವು ಹಿಂತಾ ಮೆಣಸಿನಕಾಯಿ ಮುರದಂತಾ ಮಾತs ನೋಡ್ರಿ! ಈ ಖಾರದ ಮುದ್ದಿಗೆ—ಇವರ ಅಪ್ಪಾ ಅವ್ವಾ 'ಸಕ್ಕರಿ' ಅಂತ ಹ್ಯಾಂಗ ಹೆಸರಿಟ್ಟಾರೋ ಏನೋ! ಇಕೀ ಜೋಡೀ ಬಾಳೇ ಸಾಗಿಸಿಕೊಂಡು ಹೊಂಟೇನೀ ಅಂದಮ್ಯಾಲೆ, ನಾನೂ ಎಂಟೆದೀ ಬಂಟನs ಏನ್ರಿ!

ಸಕರೆವ್ವ:— ಓ, ಓ, ಓ! ಇವನ ಬಂಟತನಕ್ಕ ಬಾಸಿಂಗಾ ಕಟ್ಟಲಿ! ನಿನ್ನ ಬಂಟತನಾ ಈ ಸಣ್ಣರಾಯರಿಗಷ್ಟು ಕಲಿಸಿಕೊಡು; ಹೊಸಾ ಹೇಣ್ತೀ ಗಂಡ ಆಗಿ ಸಂಸಾರ ಮಾಡವರದಾರು!

ಮುದಕಪ್ಪ:— ನಿಲ್ಲಸು ನಿನ್ನ ಹರದಾರಿ ಉದ್ದದ ಹರಟೀ ಮಾತು! ಹೋಗು, ತ್ವಾಟದಾಗ ಹೋಗಿ, ಏನಾದರೂ ಕಾಯಿ-ಪಲ್ಲೆ ತಂದುಕೊಡು! ರಾಯರಿಗೆ ಹೊತ್ತಾಗತೈತಂತ!

ಸಕರೆವ್ವ:— ಅದಕೆಷ್ಟು ಹೊತ್ತು ತಗೊ; ಈಗ ಹೋಗಿ ತಂದು ಕೊಡತೀನಿ!

ಮುದಕಪ್ಪ:— ಅಂತೂ ರಾಯರ....ನೀವು ದೊಡ್ಡವರಾದಿರಿ; ಕಲಿತು ಶಾಣ್ಯಾರಾದಿರಿ; ಕೈತುಂಬಾ ಸಂಬಳಾ ತರೂ ಕೆಲಸಾ ಹಿಡಿದಿರಿ; ಮದಿವಿ ಆತು; ಹೆಣ್ತೀ ಮನಿಗೆ ಬಂದಳು! ಇನ್ನೇನು ಎಲ್ಲಾ ಪಾಡ ಆತು ಬಿಡ್ರಿ! ರಂಗಣ್ಣಕಾಕಾನ ಚಿಂತಿ ತಪ್ಪಿತಿನ್ನ! ಇನ್ನ ನೀವು ಆ ದೇವರಂತಾ ಮನಿಶಾನ್ನ ಎಲ್ಲಾ ರೀತಿಂದನೂ ಒಳ್ಳೆತಾಗೀ ನೋಡಿಕೊಂಡು ಹೋಗಬೇಕು!

ಶಾಮಣ್ಣ:— ಇದನ್ನ ನೀ ಹೇಳಿಕೊಡಬೇಕೇನು ನನಗ—ಮುದಕಪ್ಪಾ! ನಮ್ಮ ಕಾಕಾನs ನನಗ ತಾಯಿ; ನಮ್ಮ ಕಾಕಾನs ನನಗ ತಂದಿ; ನಮ್ಮ ಕಾಕಾನs ನನಗ ದೇವರು! ಆವರ ದೊಡ ಮನಸಿನ ನೆರವು ನನಗ ಇಲ್ಲದಿದ್ದರ, ನಾ ಒಬ್ಬ ಮನುಷ್ಯ ಆಗಿ ಬಾಳತಿದ್ದೆನೇ ಈ ಲೋಕದಾಗ? ನನಗ ಎಲ್ಲಾರಿಗಿಂತಾ ಹೆಚ್ಚಿನವರು ನನ್ನ ರಂಗಣ್ಣಕಾಕಾ!

ಸಕರೆವ್ವ:— ಯಾರ ಅಲ್ಲ ಅಂದಾರ್ರೀ ಶಾಮಣ್ಣಾ ನಿಮ್ಮ ಮಾತು! ಅಣ್ಣ-ತಮ್ಮರ ಮಕ್ಕಳನ್ನ ಹೊಟ್ಟೀ ಮಕ್ಕಳಿಗಿಂತಾ ಹೆಚ್ಚು ತಿಳಕೊಂಡು ಸಾಕಿ ಸಲವವರು, ಈ ಕಾಲದಾಗ ಎಲ್ಲಿ ಸಿಗತಾರ್ರಿ! ನಿಮ್ಮದೇನೂ ಹಿಂತಾ ಇದ್ದುಳ್ಳ ಮನಿತನಾನೂ ಅಲ್ಲರಿ! ಹಿರ್‍ಯಾರು ಮಾಡಿದ ಸಾಲದ ಬಡ್ಡೀ ತೀರಸೂದರೊಳಗ, ನಿಮ್ಮ ತಂದಿಗೆ ಸಾಕು-ಸಾಕಾಗಿ ಹೋಗಿತ್ತರಿ! ಅಂತಾದರಾಗ ಆ ಗುದ್ದವ್ವನ ಬ್ಯಾನೀ ಬಾಯಿಗೆ ಇಬ್ಬರೂ ಬಲೀ ಆದರು! ಆಗ ನೀವು ಇನ್ನೂ ಮೂರು ವರಸದ ಹಸುಗೂಸು ಇದ್ದಿರಿ ಶಾಮಣ್ಣಾ!

ಮುದಕಪ್ಪ:— ಅದನೆಲ್ಲಾ ನೆನಪ ತಗೀಬ್ಯಾಡ ಬಿಡs ಈಗ!

ಸಕರೆವ್ವ:— ನಿಂದೊಂದು ಮಾತs ನೋಡು! ನೆನಪು ತಗ ಬ್ಯಾಡಂದರ ಹ್ಯಾಂಗ ಕೇಳೀತು! ಒಳ್ಳೇ ಕಾಲ ಬಂದಾಗ, ಕಳ ಹೋಗಿರೂ ಕಷ್ಟದ ನೆನಪು ಹಾಂಗs ಉಕ್ಕಿ ಉಕ್ಕಿ ಬರತಾ ನೋಡ್ರಿ ಶ್ಯಾಮಣ್ಣಾ! ಮೊದಲ ದಿನಾನs ನಿಮ್ಮ ತಂದಿ ಹೋಗಿದ್ದರು. ಮರದಿನ ಮದ್ಯಾನ್ನಕ್ಕ ಅಂದರ, ನಿಮ್ಮ ತಾಯಿ ಕೊನೀ ಉಸುರು ಬಡಕೋಳ್ಯಾಕ ಹತ್ತಿತ್ತು. ಆಗ ನಾ ಅ ಇದ್ದಿನಿ ರಾಯರ! ಇದ್ದಾದರೂ ನಾವೇನು ಮುಟ್ಟಿತಟ್ಟಿ ಮಾಡ ದೈತೇನ್ರಿ! ಎಲ್ಲಾನೂ ರಂಗಣ್ಣಕಾಕಾ ಅವರs ಮಾಡಬೇಕ ನಿಮ್ಮ ತಾಯಿ ಬದುಕೂ ಆತೇನೂ ಇಲ್ಲದ್ದನ್ನ ತಿಳಕೊಂ ರಂಗಣ್ಣವರು ಸಣ್ಣಮುಖಾ ಮಾಡಿಕೊಂಡು ಕಣ್ಣೀರು ಹಾಕ ಹಾಸಿಗೀ ಹತ್ತೀಲೇನs ಕುಂತುಬಿಟ್ಟಿದ್ದರ್ರಿ! (ಆಳುದನಿ ಯಲ್ಲಿ) ಅವ ಅವರು ನಿಮ್ಮಕಡೆ ಕೈಮಾಡಿ ತೋರಿಸಿದರ್ರಿ! ನಾ ಹೋಗಿ ನಿಮ್ಮ ಹತ್ತಿಲಿ ಇಳಿಸಿದೆ. ರಂಗಣ್ಣವರು ನಿಮ್ಮನ್ನ ತಮ್ಮ ತೊ ಮ್ಯಾಲ ಕೂಡಿಸಿಕೊಂಡರು. ಅವ್ವಾ ಅವರು, ನಿಮ್ಮ ಮೈ ಮೆಲ್ಲಗs ಕೈ ಆಡಿಸಿ ಹೇಳಿದರು: 'ಈ ಕೂಸಿನ ಹೊರಿಯ ನಿಮ್ಮ ಮ್ಯಾಲ ಒಪ್ಪಸೀನಿ!' ಅಂತ. ರಂಗಣ್ಣವರು ಆಗ ಏ ಮಾತಾಡಲಿಲ್ಲರಿ! 'ಅತಿಗೀ' ಅಂತ ದೊಡ್ಡದನಿ ತೆಗದು ಅಳ ಹತ್ತಿದರು. ಆಗs ನಿಮ್ಮ ಅವ್ವಾ ಅವರ ಜೀವದ ಹಕ್ಕಿ ಹೋತರಿ! ಬಂಗಾರದಂಥಾ ಮನಿಶಾಳು ಯಪ್ಪಾ ನಿಮ್ಮ ಅ ಅಕೀ ಹೆಸರನ್ನ ತಂಸತ್ತಿನೊಳಗ ನೆನೀಬೇಕು!

ಶ್ಯಾಮು:— ನನಗ ಯಾವ ನೆನಪೂ ಇಲ್ಲ ನೋಡು ಸಕರೆವ ನಮ್ಮ ಕಾಕಾ, ನನಗ ನನ್ನ ತಂದೀ-ತಾಯಿ ನೆನಪು ಕೂ ಎಂದೂ ಆಗದ್ಹಾಂಗ ಸಾಕಿ ಸಲಹ್ಯಾರ!

ಮುದಕಪ್ಪ:— ಅದೇನೂ ಸುಳ್ಳಲ್ಲ ರಾಯರ! ನೋಡ ಆ ಯಾಳೇದಾಗ ರಂಗಣ್ಣಕಾಕಾ ಏನು ಮುದಕರಲ್ಲ, ತದಕರ ಇನ್ನs ಇಪ್ಪತ್ತೊಂದು ಇಪ್ಪತ್ತೆರಡು ವರಸದ ವಯ. ನಿ ತಾಯಿಗೆ ಕೊಟ್ಟ ವಚನಾ ಪಾಲಿಸಬೇಕಂತೋ ಏನೋ....ಯಾ ಬೇಕಾದಷ್ಟು ಯೇಳಿದರೂ ಮದಿವೀ ಸುದ್ದಾ ಮಾಡಿಕೋಲಿ ಮದಿವೀ ಮಾಡಿಕೊಂಡರ ತಮ್ಮ ಸಂಸಾರದ ಲಂಪಟದೊ ನಿಮ್ಮ ಕಡೆ ಅಲಕ್ಷ ಆದೀತಂತ ಹಾಂಗs ಉಳದುಬಿಟ್ಟರು!

ಸಕರೆವ್ವ:— ಯಪ್ಪಾ ನೋಡ್ರಿ! ನಿಮ್ಮ ಸಲುವಾಗಿ ಅ ಮನುತಾ ಅಂದರ....ಅಷ್ಟು ಇಷ್ಟು ಅಂತ ಅಳತೀ ಮಾಡಿ ಹೇ ಮಾತಲ್ಲರಿ ಅದು! ತ್ವಾಟಕ್ಕ ಬಂದಾಗೆಲ್ಲಾ ನಿಮ್ಮ ಶಾಣೇತ ಸುದ್ದೀ ಮಾತs ಮಾತರಿ! ಇನ್ನೇನು ಬಿಡ್ರಿ! ಮನಿಗೆ ಸ ಬಂದಳು....ಅವರು ಕೈಬಾಯಿ ಸುಟಗೊಳ್ಳೂದು ತಪ್ಪಿದ್ಹಾಂಗಾ ನಾ ಕಾಯಿಪಲ್ಲೀ ತರಲಿಕ ಹೋಗಿ ಬರತೀನ್ರಿ; ಈಗ ಬ ರೊಟ್ಟಿ ಬೇಯೂ ಯಾಳೇದಾಗಂದರ ಬಂದುಬಿಡತೀ (ಹೋಗುವಳು).

ಮುದಕಪ್ಪ:— (ಕೂಗಿ) ಆ ಮೂಲೀ ಮಡ್ಯಾಗ ಒಳೇ ಎ ಸುದ್ದ ಬಡನೀಕಾಯಿ ಆಗ್ಯಾವ ನೋಡು! ಅವನ್ನೂ ಅ

ಂಡು ಬಾ! (ಶ್ಯಾಮುನನ್ನು ಉದ್ದೇಶಿಸಿ) ಮತ್ತ ನೋಡ್ರಿ ಸುರ! ನಿಮ್ಮ ಕಾಕಾ ಅವರು ಬಾಳ ಶ್ಯಾಣ್ಯಾರ್ರಿ! ಅಂತಽ ತ್ರ ಹಿರ್ಯಾರು ಮಾಡಿದ ಸಾಲಾ ಎಲ್ಲಾ ಮುಟ್ಟಸಿಬಿಟ್ಟರು. ರಾಗ ಎಲ್ಲಿ ಬೇಕಾದಲ್ಲಿ ಕೇಳ್ರಿ — ರಂಗಣ್ಣಕಾಕಾ ಅಂದರ ಂಗಽ ಜನಾ ಹೊಗಳಿ ಹಾಡತಾರ! ಎಲ್ಲಾರಿಗೂ ಅವರಿಂದ ಕಾರ! ಮತ್ತ ನಮ್ಮ ರೈತ ಜನರಿಗೆ ಎಂದಾದರೂ ಮನಸು ಯುವಂಥಾ ಮಾತು ಆಡ್ಯಾರೇನು? ಕೇಳಬ್ಯಾಡ್ರಿ!

ಶ್ಯಾಮು :— ಇಂಥಾ ಚಿಕ್ಕಪ್ಪ ನನಗ ಸಿಕ್ಕದ್ದು ನನ್ನ ಪೂರ್ವ-ದ ಪುಣ್ಯ ಮುದಕಪ್ಪಾ!

ಮುದಕಪ್ಪ:— ಅದಾತರಿ ರಾಯರ! ಈಗ ನಿಮ್ಮ ಹೆಂಗ-ಒಬ್ಬರಽ ಬಂದಾರೋ? ಏನು.... ಜೋಡಿ ಅಂತ ಇನ್ನ್ಯಾ-ರೂ ಬಂದಾರೋ?

ಶ್ಯಾಮು :— ಹುಂ! ಇನ್ನೊಬ್ಬರು ಬಂದಾರ. ನನ್ನ ಡ್ತಿ ಹಿರೀ ಅಕ್ಕ ಒಬ್ಬಾಕಿ ಇದ್ದಾಳೇನಪಾ! ಅತ್ತೀ ಮನ್ಯಾಗ ಂದಿಕಿ ಆಗದೇ ಇದ್ದದ್ದರಿಂದ, ಆಕಿ ತನ್ನ ತವರ ಮನ್ಯಾಗಽ ಳ! ಈಗ ಆಕಿನಽ ಇಲ್ಲಿಗೆ ಜೋಡಾಗಿ ಬಂದಾಳ!

ಮುದಕಪ್ಪ :— ಪಾಡಾತು ಬಿಡ್ರಿ! ಎಲ್ಲಾ ಹೊಸಾ ; ಒಬ್ಬಾಕೀ ಹೆಣ್ಣಮಗಳ ಕಡಿಂದಽ ತೂಗಿಸಿಕೊಂಡು ಗೂದು ಹ್ಯಾಂಗ ಆದೀತು? ಈಗ ಜೋಡಿಗೆ ಅಕ್ಕನಽ ಳಂದವ್ಯಾಗ ಕಟಕಟೀನಽ ತಪ್ಪಿಹೋತು! ಇಲ್ಲಿ ನಿಮಗರ ಕಡಿಮಿ ಆಗೇತಿ! ಇಲ್ಲೇ ಮಾಡಿಕೊಂತ, ತಂಗೀ ಪರಪಂಚೀ ಡಿಕೊಂತಽ, ಅವರು ಇಲ್ಲೇ ಇರವೊಲ್ಲರ್‍ಯಾಕ ಬಿಡ್ರಿ!

ಶ್ಯಾಮು :— ಅದೇನು ಬಿಡು, ಏನಾದರೂ ಆದೀತು! ! ಹೇಳದ್ಹಾಂಗ ಸಕರೆವ್ವ ಬ್ಯಾಗನಽ ಬಂದಽಬಿಟ್ಟಳಲ್ಲಾ!

ಸಕರೆವ್ವ :— ತಡಾಯಾಕ ಆಗಬೇಕ್ರಿ! ನಿಮ್ಮ ಪುಣ್ಣೇದಿಂದ ದಾಗ ಕಾಯಿಪಲ್ಲೆ ಬೇಕಾದಷ್ಟು ಬೆಳದೈತಿ! ಹಿಡಿದ ಹಿಡೀ ನಽ ತುಂಬತೈತ್ರಿ! ನಿಮ್ಮ ಚೀಲಾ ಕರ್‍ರಿ ಇಲ್ಲೆ, ತುಂಬಿ ತೀನಿ!

ಶ್ಯಾಮು:— ಇದೇನವ್ವಾ, ಹೊರಲಾರದಷ್ಟು ತಂದಽ ಬಿಟ್ಟದ್ದೀ-! ಇರಲಿ, ನಾ ಹೋಗತೀನಿ; ನೀನು ಬಾಳೀಯೆಲೀ ಮಾತ್ರ ದಽ ತೊಗೊಂಡು ಬಾ, ಗೊತ್ತಾತೇನು?

ಸಕರೆವ್ವ:— ತರತೀನಿ ಬಿಡ್ರಿ! ಮನಗಂಡಽ ಒಂದು ಪೆಂಡೀ ಕೊಂಡು ಬರತೀನಿ!

(ಶ್ಯಾಮಣ್ಣ ಹೊರಟುಹೋಗುವನು.)

೨

ನಿವೇದಕ

ಶ್ಯಾಮಣ್ಣನ ಹೊಸ ಸಂಸಾರ ರಸಮಯವಾಗಿ ಮುಂದುವರೆ-. ನಿತ್ಯವೂ ಹತ್ತುಗಂಟೆಗೆ ಊಟ ಮುಗಿಸಿ, ಸೈಕಲ್ಲಿನ ಮೇಲಿಂದ ಪಟ್ಟಣದಲ್ಲಿಯ ತನ್ನ ಕಚೇರಿಯ ಕೆಲಸಕ್ಕೆ ಹೋಗು-ವನು ಶ್ಯಾಮು. ಮುಂದೆ ಸಂಜೆಯ ಆರುಗಂಟೆಗೆ ಮರಳಿ ಮನೆಗೆ ಬರುವ. ಮನೆಯ ಎಲ್ಲ ಮೇಲ್ವಿಚಾರಣೆಯನ್ನೂ ರಂಗಣ್ಣ ಕಾಕಾ ನೋಡಿಕೊಳ್ಳುವರು. ಶ್ಯಾಮುನಿಗೆ ಯಾವುದರ ಚಿಂತೆಯೂ ಇಲ್ಲ.

(ರಾತ್ರಿ ೧೦ಗಂಟೆ ಹೊಡೆದ ಗಡಿಯಾರದ ಸಪ್ಪಳ ಕೇಳಿಸಬೇಕು)

ಓ, ಇದೀಗ ರಾತ್ರಿಯ ಹತ್ತುಗಂಟೆ. ನೂತನ ದಂಪತಿಗಳಾದ ಶ್ಯಾಮು, ಅವನ ಹೆಂಡತಿ ರತ್ನಾ ತಮ್ಮ ಶಯನಗೃಹದಲ್ಲಿ ಕುಳಿತು ಮಾತನಾಡುತ್ತಲಿದ್ದಾರೆ:—

ಶ್ಯಾಮು :— ಯಾಕ? ಮಾತಾಡವೊಲ್ಲಿ?

ರತ್ನಾ :— (ಸುಮ್ಮನೆ ಇರುವಳು)

ಶ್ಯಾಮು :— ಅಲ್ಲಾ, ಬಂದು ನಾಕು ದಿನಾ ಆತು. ಇನ್ನೂ ನೀನು ನಿನ್ನ ನಾಚಿಕೀ— ಸಂಕೋಚ— ಬಿಡವೊಲ್ಲೇನು?

ರತ್ನಾ :— (ತಗ್ಗಿದ ಧ್ವನಿಯಲ್ಲಿಯೆ) ಇಲ್ಲ್ಯಾತರ ನಾಚಿಕಿ? ಆದರೂ ನಿಮ್ಮ ಕೂಡಾ ಮಾತಾಡಬೇಕಾದರ, ಇನ್ನೂ ನನಗ ಹೆದರಿಕಿ ಹೆದರಿಕಿ ಅನಿಸತಽದ!

ಶ್ಯಾಮು:— ಅದು ಖರೇನಽ ಅನ್ನು! ಆದರ, ಮೊದ-ಮೊದಲು ಗಂಡಂದಿರ ಕೂಡಾ ಮಾತಾಡಲಿಕ್ಕೆ ಹೆಂಡಂದಿರಿಗೆ ಹೆದರಿಕಿ ಅನಿಸ ತಽದಂತ; ಆ ಮ್ಯಾಲ ಮುಂದ ದಿನಾ ಹೋದ್ಹಾಂಗ, ಹೆಂಡಂದಿರ ಕೂಡಾ ಮಾತಾಡಲಿಕ್ಕೆ ಗಂಡಂದಿರಿಗೆ ಹೆದರಿಕಿ ಹೆದರಿಕಿ ಅನಿಸತಽ-ದಂತ! ಅನುಭವಿಕರು ಹೇಳತಿರತಾರ!

ರತ್ನಾ :— (ಸಹಜಸ್ವರದಲ್ಲಿ) ಹೋಗರೀ ನಿಮ್ಮದೊಂದು ಇಲ್ಲದ್ದಽ ಮಾತು! ಗಂಡಂದಿರು ಎಂದಾದರೂ ಹೆಂಡಂದಿರಿಗೆ ಹೆದರತಾರೇನು?

ಶ್ಯಾಮು:— ಹೆದರದೇ ಏನುಮಾಡತಾರ ಪಾಪ! ಹೆಂಗಸರು ಗಂಡಸರಿಗೆ ಹೆದರೂದು ಅದೊಂದು ಸೋಗು; ಆದರ ಗಂಡಸರು ಹೆಂಗಸರಿಗೆ ಹೆದರೂದಂದರ ಅದು ಸಂಪೂರ್ಣ ಸತ್ಯ!

ರತ್ನಾ :—ಅದೆಲ್ಲಾ ನನಗ ಗೊತ್ತಿಲ್ಲ. ನಾವು ಮಾತ್ರ ಗಂಡಸ-ರಿಗೆ ಹೆದರಲೇ ಬೇಕಾಗತಽದ. ಪಾಪ! ಈಗ ನಮ್ಮ ಅಕ್ಕನ ಹಣೀಬಾರಾ ನೋಡೂದಿಲ್ಲಽ? ಇಲ್ಲದ ಹರಲೀ ಹೊತ್ತು, ಹೊರಗ-ಹಾಕಿಸಿಕೊಂಡು, ತವರ ಮನೀ ಒಳಗ ಬಂದು ಆಯುಷ್ಯಾ ತಗೀ-ಬೇಕಾಗೇದ!

ಶ್ಯಾಮು :— ಅಂದರ! ಇನ್ನ ಗಂಡನ ಮನೀಗೆ ನಿಮ್ಮ ಅಕ್ಕ ಹೋಗೂಹಾಂಗಽ ಇಲ್ಲೇನು?

ರತ್ನಾ: ಊಹುಂ! (ತಡೆದು) ಆಕೆಲ್ಲಾ ಹೋಗಲಿಕ್ಕೆ ಸಿದ್ಧಳಿದ್ದಾಳ; ಆದರ ಅವರು ಮನ್ಯಾಗ ಕರಕೋಬೇಕಲ್ಲಾ! ಅಲ್ಲದ್ದು ಸಲ್ಲದ್ದು ಅಪವಾದ ಹೊರಿಸಿ ಹೊರಗಹಾಕ್ಯಾರ ಅತ್ತೀಮನಿಯವರು! ಈಗ ಆರೇಳು ವರ್ಷದಿಂದ ತವರ ಮನ್ಯಾಗಽ ಇದ್ದುಬಿಟ್ಟಾಳ! ಆಕೀ ಗಂಡ, ತಿರಿಗಿ ಇನ್ನೊಂದು ಮದಿವೀ ಸುದ್ದಾ ಮಾಡಿಕೊಂಡು ಬಿಟ್ಟಾನ!

ಶ್ಯಾಮು :— ಪಾಪ, ಪಾಪ! ಹೀಂಗಾದರ ಹೆಣ್ಣುಮಕ್ಕಳ

ಜೀವನ ಕಠಿಣನೀ ಆದ! ಆಯ್ತು, ಒಂದು ರೀತಿಯಿಂದ ನಿನಗ ಅನುಕೂಲ ಆದ್ಹಾಂಗನೀ ಆತು– ಅನ್ನು!

ರತ್ನಾ :— ಅಂದರೇನು?

ಶ್ಯಾಮು :— ಅಂದರೇನೂ—ಅಂದರ! ಅತ್ತೀ ಮನಿಗೆ ಬಂದ ಕೂಡಲೆ ನೀನನೀ ದುಡಿಬೇಕಾಗತಿತ್ತು; ಈಗ ನಿಮ್ಮ ಅಕ್ಕ ಜೊತಿಗೆ ಬಂದದ್ದರಿಂದ, ನಿನ್ನ ದುಡಿಯೂ ಜವಾಬ್‌ದಾರೀ ತಪ್ಪಿತು! ಎಲ್ಲಾ ಅವರ ಮ್ಯಾಲ ಒಪ್ಪಿಸಿ, ನಿನಗ ಚೆಕ್ಕಂದಾ ಹೊಡೀಲಿಕ್ಕೆ ಚೆಲೋ ಆಯ್ತು!

ರತ್ನಾ :— ಯಾಕ? ನಾ ಏನು ಮನಿಗೆಲಸಾ ಮಾಡಲಿಕ್ಕೆ ಹಿಂಜರೀತೀನಂತ ತಿಳಿದೀರೇನು? ಆದರ, ನಮ್ಮ ಗಂಗಕ್ಕನ ಪ್ರೀತಿ ಮೊದಲಿಂದನೀ ನನ್ನ ಮ್ಯಾಲ ಭಾಳ; ಅಂತನೀ ಎಲ್ಲೆಲ್ಲೂ ಹೋಗಲಿಕ್ಕೆ ಒಪ್ಪಿಕೊಳ್ಳದಾಕಿ, ನನ್ನ ಕೂಡಾ ತಾನಾಗೇ ಬರತೀನಂತ ಒಪ್ಪಿಕೊಂಡು ಬಂದಾಳ! ಒಂದನೀ ಒಂದು ಮನಿಗೆಲಸಾ ನನಗ ಮಾಡಗೊಡೂದಿಲ್ಲ; ಎಲ್ಲಾನೂ ತಾನನೀ ಮುಂದ ಬಿದ್ದು ಮಾಡತಾಳ! ಅದಕ್ಕನೀ ನನಗ—ಗಂಗಕ್ಕಾ ಅಂದರ ಜೀವಪ್ರಾಣ! ನಮ್ಮ ಅವ್ವನ್ನ ಸುದ್ಧಾ ನಾ ಅಷ್ಟು ಹಚಿಕೊಂಡಿಲ್ಲ!

ಶ್ಯಾಮು :— ಆಯ್ತುಬಿಡು! ನಿನಗನೀ ಬೇಕಂದಮ್ಯಾಲ, ಮನ್ಯಾಗ ಹಿರೀ ಮನಿಶಾಳಾಗಿ ಇಲ್ಲೀ ಇದ್ದುಬಿಡಲಿ! ಪಾಪ, ನೊಂದಜೀವ! ಎಲ್ಲಿ ಸಮಾಧಾನ ಅನಿಸತನೀದೋ ಅಲ್ಲೆ ಇರಬೇಕು.

ರತ್ನಾ :— ಅದಾತು!....ನಿಮ್ಮ ಕಾಕಾ ಇದ್ದಾರಲಾ....ಅವರು ಮೊದಲಿಂದಲೂ ಮದಿವೀ ಮಾಡಿಕೊಂಡನೀ ಇಲ್ಲೇನು?

ಶ್ಯಾಮು :— ಇಲ್ಲ!

ರತ್ನಾ :— ಅದ್ಯಾಕ? ಎಂಥಾ ಒಳ್ಳೇ ಮನಿಶಾರಿದ್ದಾರ; ಮದಿವೀ ಯಾಕ ಮಾಡಿಕೊಂಡಿಲ್ಲ? ಹೀಂಗನೀ ಇಂದ, ನಾನು ಗಂಗಕ್ಕ ಕೂತುಕೊಂಡು ಮಾತಾಡತಿರುವಾಗ, ಇದರ ಬಗೆ ಮಾತು ಹೊರಟಿತ್ತು! ಅದಕನೀ ಕೇಳಿದೆ. ಯಾಕ ಮಾಡಿಕೊಂಡಿಲ್ಲ ಅವರು ಮದಿವಿ?

ಶ್ಯಾಮು :— ನೋಡು, ಈ ಮಾತಿನ ಬಗ್ಗೆ ಅವರನ್ನ ನಾ ಎಂದೂ ಕೇಳಿಲ್ಲ. ಮೊದಲಿನಿಂದಲೂ ಒಂದು ರೀತಿಂದನೀ ವ್ರತನಿಷ್ಠರ ಹಾಗಿದ್ದಾರ ನಮ್ಮ ಕಾಕಾ! ಅದರೊಳಗ ಈಗಂತೂ ಅವರು ಮಹಾತ್ಮರ ಪರಮಭಕ್ತರು! ಮಹಾತ್ಮರ ಮಾತುಗಳನ್ನೆಲ್ಲಾ ತಮ್ಮ ಆಚರಣಿಯೊಳಗ ಇಳಿಸಬೇಕಂತ ಹಗಲಿರುಳೂ ಅವರ ಪ್ರಯತ್ನ!

ರತ್ನಾ :— ಅದೆಲ್ಲಾ ಆತಲಾ! ಅವರು ಮದಿವೀಮಾಡಿಕೊಳ್ಳದೇ ಇದ್ದದ್ದಂದರ, ಒಂದು ಆಶ್ಚರ್ಯದ ಸಂಗತೀನನೀ ಅನಿಸೂಹಾಂಗದ!

ಶ್ಯಾಮು :— ನಮ್ಮಂಥಾ ಸಾಮಾನ್ಯ ಮನಸಿನ ಜನಕ್ಕ ಈ ಮಾತು ಆಶ್ಚರ್ಯದ್ದು ಅನಿಸೂದು ಸ್ವಾಭಾವಿಕನೇ ಅನ್ನು! ನಮ್ಮ ತೋಟಾಮಾಡಿದ ಹಳೇ ರೈತ— ಮುದಕಪ್ಪಾ ಅಂತ ಇದ್ದಾನ; ಅವನೇ ಒಂದು ಸಲ ನನಗ ಹೇಳಿದ್ದ ಈ ವಿಷಯ: ನಮ್ಮ ರಂಗಣ್ಣಕಾಕಾ, ತಮ್ಮ ಸೋದರಮಾವನ ಮಗಳನ್ನ ಬಹಾಳ ಪ್ರೀತಿಸತಿದ್ದರಂತ; ಆ ಹುಡುಗೀ ಪ್ರೀತಿಯೂ ಇವರ ಮ್ಯಾಲ ಬಹಾಳ ಇತ್ತಂತ! ಮದಿವೀ ಮಾಡಿಕೊಂಡಿದ್ದರ, ಆ ಹುಡುಗಿನ್ನನೀ ಮಾಡಿಕೋಬಹುದಾಗಿತ್ತಂತ! ಆದರ ಆ ಸೋದರಮಾವ, ನಮ್ಮ ಮನೀ ಆಗಿನ ಪರಿಸ್ಥಿತೀ ನೋಡಿ, ತನ್ನ ಮಗಳನ್ನ ಇವರಿಗೆ ಕೊಡಲಿಕ್ಕೆ ಒಪ್ಪದೆ, ಬ್ಯಾರೇ ವರನ್ನ ಹುಡಿಕಿ ಮದಿವೀಮಾಡಿಕೊಟ್ಟನಂತ! ಮದಿವಿ ಆಗಿ ಒಂದು ವರ್ಷ ತುಂಬೂದರೊಳಗ, ಆ ಹುಡುಗಿ ಮನೋರೋಗದಿಂದ ತೀರಿಹೋದಳಂತ! ಮುಂದ ನಮ್ಮ ರಂಗಣ್ಣಕಾಕಾ ಮದಿವೀಸುದ್ದೀನನೀ ಎತ್ತಿಲ್ಲಂತ! ನಮ್ಮ ರೈತ ಹೇಳಿದ ಮಾತು. ಎಷ್ಟು ಖರೇನೋ ಎಷ್ಟು ಸುಳ್ಳೋ! ನಾ ಅದರ ವಿಚಾರನೇ ಎಂದೂ ಮಾಡಿಲ್ಲ! ನಿಮಗ ಹೆಂಗಸರಿಗೂ ಇಲ್ಲದ ಕಾರಭಾರ ಬಹಳ ಬೇಕು ನೋಡು! ನಾ ದೊಡ್ಡವ ಆಗಿ ತಿಳೀಲಿಕ್ಕಹತ್ತಿ ಇಷ್ಟುದಿನಾ ಆದರೂ, ನಾ ನಮ್ಮ ರಂಗಣ್ಣಕಾಕಾನ ಮದಿವೀ ಸಂಬಂಧದ ವಿಚಾರ ಮಾಡಿಲ್ಲ; ನೀವು ಇನ್ನೂ ಬಂದು ನಾಕುದಿನಾ ಆಗೇದೋ ಇಲ್ಲೋ, ಅಷ್ಟರೊಳಗನೀ ಇದೆಲ್ಲಾ ಮಾತಿನ ವಿಚಾರಾ ನಡಿಸೀರಿ!

ರತ್ನಾ :— ನೀವು ಗಂಡಸರು, ಗಂಡಸರ್ಹಾಂಗ ಇದ್ದೀರಿ; ನಾವು ಹೆಂಗಸರು, ಹೆಂಗಸರ್ಹಾಂಗ ಇದ್ದೀವಿ!

ಶ್ಯಾಮು :— ಗಂಡಸರೇನು, ಹೆಂಗಸರೇನು— ಇಬ್ಬರೂ ಮನುಷ್ಯರನೀ ಅಲ್ಲ! (ಗಡಿಯಾರ ಹನ್ನೊಂದುಗಂಟೆ ಹೊಡೆಯುವುದು). ಅಬ್ಬಾ, ಆದಾಗಲೇ ಹನ್ನೊಂದು ಹೊಡೀತು! ಯಾಕ ಇಂದ ಇನ್ನೂ ನಿದ್ದಿ ಬಂದಿಲ್ಲೇನು? ಮಲಕೋ ಇನ್ನ; ನಾ ನಾಳೆ ಲಗೂನನೀ ಎದ್ದು ಕಚೇರೀ ಕೆಲಸಕ್ಕ ಹೋಗಬೇಕಾಗೇದ. ನಾಳೆ ಶನಿವಾರ; ಮುಂಜಾನೆ ಆದ ಕಚೇರಿ! ಸರಿ! ಹುಂ, ಆ ದೀಪಾ ಸಣ್ಣದು ಮಾಡು!

(ಒಳರ ಅಡಿಗೆಯ ಮನೆಯಲ್ಲಿ ಬೆಕ್ಕುಗಳು ಜಗಳವಾಡುತ್ತಿರುವ ಶಬ್ದ ಕೇಳಿಸುತ್ತಿರಬೇಕು !)

೩

ನಿವೇದಕ :

ಇಂದು ರವಿವಾರ. ಹಗಲು ನಾಲ್ಕು ಗಂಟೆಯಾಗಿದೆ. ಕಚೇರಿಗೆ ರಜೆಯ ದಿನವಾದರೂ, ಶ್ಯಾಮಣ್ಣ ಯಾವುದೋ ಕೆಲಸಕ್ಕಾಗಿ ಪಟ್ಟಣಕ್ಕೆ ಹೋಗಿದ್ದಾನೆ. ಆತನ ಹೆಂಡತಿ ರತ್ನಾ, ಮನೆಯಲ್ಲಿರಲಿಲ್ಲ. ರಂಗಣ್ಣಕಾಕಾ ಪಡಸಾಲೆಯಲ್ಲಿ ಕುಳಿತುಕೊಂಡು ತಕಲಿಯಿಂದ ನೂಲು ತೆಗೆಯುತ್ತಿರುವರು. ನೂಲುತೆಗೆಯುತ್ತಲೇ ಮೆಲ್ಲಗೆ ಕನಕದಾಸರ ಕೀರ್ತನವನ್ನು ಹಾಡುತ್ತಲಿದ್ದಾರೆ :

ರಂಗಣ್ಣ :—

ನನ್ನಿಂದ ನಾನೇ ಜನಿಸಿ ಬಂದೆನೆ ದೇವಾ!
ನಿನ್ನ ಪ್ರೇರಣೆಯಿಂದ ನಡೆದು ನುಡಿದ ಮೇಲೆ,
ನನ್ನದೆ ತಪ್ಪೋ ನಿನ್ನದೆ ತಪ್ಪೋ ಪರಮಾತ್ಮಾ!
ನನ್ನಿಂದ ನಾನೇ ಜನಿಸಿ ಬಂದೆನೆ ದೇವಾ! ‖ ಪಲ್ಲವಿ ‖

ಗಂಗಕ್ಕ :— (ಒಮ್ಮೆಲೇ ಹೊರಗೆ ಬಂದು) ಚಹಾ ಆಗೇದ; ಇಲ್ಲೇ ತಂದುಕೊಡಲೇನು ?

ರಂಗಣ್ಣ :— ಅಂ ? ಏನು ಚಹಾನ ?....ಅಂ, ರತ್ನಾಬಾಯಿ ಮನ್ಯಾಗ ಇಲ್ಲೇನು ?

ಗಂಗಕ್ಕ:—ಆಕಿ ಮನ್ಯಾಗ ಇಲ್ಲ; ಮುತಾಲಿಕರೋ ಯಾರೋ ...ದ್ದಾರಂತಲ್ಲಾ ! ಅವರ ಮನೀ ಹೆಣ್ಣುಹುಡುಗರು ಬಂದು, ...ರಿಶಿಣಾ-ಕುಂಕುಮಕ್ಕಂತ ಕರಕೊಂಡು ಹೋಗ್ಯಾರ ! ಆಗ ನೀವು ...ಡ್ಡಾಗಿದ್ದಿರಿ ! ನನಗೂ ಬಾ ಅಂತ ಕರೆದರು; ಆದರ ನಿಮಗ, ...ದ್ದವ್ಯಾಲ ಚಹಾ ಮಾಡಿಕೊಡೂದಿತ್ತಂತ ನಾ ಮನ್ಯಾಗs ...ಳಿದೆ !

ರಂಗಣ್ಣ :— ಛೀ ಛೀ ! ನೀವೂ ಹೋಗಬಹುದಾಗಿತ್ತಲ್ಲಾ ! ...ಹಾದ್ದೇನು ? ಬಂದವ್ಯಾಲ ಮಾಡಿಕೊಟ್ಟರೂ ಆಗತಿತ್ತು ! ...ಲ್ಲದೆ, ಇಲ್ಲೀತನಕಾ ನಮಗ ಮಾಡಿಕೊಡುವರರೇ ಯಾರಿದ್ದರು ? ...ಮ್ಮದು ನಾವೇ ಮಾಡಿಕೊಂಡು ಕುಡಿಯೂದು ನನಗೇನೂ ...ಸಾಮಾತೇನೂ ಅಲ್ಲಾ— ಏನಲ್ಲಾ !

ಗಂಗಕ್ಕ :— ಹೇ, ಹಾಂಗ ಹ್ಯಾಂಗ ಆದೀತು; ಇಷ್ಟುದಿನದ ...ನಕ ಒಂದು ನಿರ್ವಾಹನs ಇದ್ದಿಲ್ಲ. ಈಗ ಮನ್ಯಾಗ ನಾವು ...ಂಗಸರು ಬಂದೀವಿ ಅಂದವ್ಯಾಲ, ನೀವ್ಯಾಕ ಕೈಬಾಯಿ ಸುಟ್ಟು... ...ಳ್ಳೂದು ? ಇಲ್ಲೇ ತರಲಿ ಹೌದಲ್ಲೋ ಚಹಾ ?

ರಂಗಣ್ಣ :— ಹುಂ....ಅಂ....ಹುಂ ! ಇಲ್ಲೇ ತಂದು ಕೊಟ್ಟು ...ಡ್ರಿ !

(ಗಂಗಕ್ಕ ಚಹ ತರಲು ಒಳಗೆ ಹೋಗುವಳು)

ರಂಗಣ್ಣ :—

ಸ್ಥಿತಪ್ರಜ್ಞಸ್ಯ ಕಾ ಭಾಷಾ, ಸಮಾಧಿಸ್ಥಸ್ಯ ಕೇಶವ ! ।
ಸ್ಥಿತಧೀಃ ಕಿಂ ಪ್ರಭಾಷೇತ ಕಿಮಾಸೀತ ವ್ರಜೇತ ಕಿಂ ॥

(ಮೆಲುದನಿಯಲ್ಲಿ ಶ್ಲೋಕವನ್ನು ಹೇಳುತ್ತಿರುವಾಗಲೇ ಗಂಗಕ್ಕ ಚಹ ...ದುಕೊಂಡು ಬರುವಳು).

ಗಂಗಕ್ಕ :— ತೊಗೊಳ್ರಿ ಇದನ್ನ !.... ಹೆಂಗಸರು ಮಾಡಿದ ...ಹಾ....ಇದೇನು ನಿಮಗ ಸೇರತದೋ ಇಲ್ಲೋ ಯಾರಿಗ್ಗೊತ್ತು !

ರಂಗಣ್ಣ :— ಚಹಾದೊಳಗ ಸೇರೂದೇನು ಬಿಡೂದೇನು ? ...ಒಂದು ಮಾತಂದರ, ಈಗಿನ ದಿವಸದೊಳಗ ಚಹಾ ಯಾಂಗೆ ...ಡಲಿಕ್ಕೆ ಬರೂದಿಲ್ಲ ? ಅದರೊಳಗ ನಿಮ್ಮ ಮನಿಯೊಳಗಂತೂ ...ಕ್ಕ ನಾಲ್ಕೈದು ಸಾರೇ ಚಹಾ ಆಗತದ ! ಅಂದವ್ಯಾಲ ...ಮ್ಮ ಚಹಾ ಚೆಲೋ ಆಗಲಿಕ್ಕೇ ಬೇಕು !

ಗಂಗಕ್ಕ :— ಕುಡಿದು ನೋಡಿ ಹೇಳ್ರಲಾ !

ರಂಗಣ್ಣ :— (ಕುಡಿದು) ಸೊಗಸಾಗಿ ಮಾಡಿದ್ದೀರಿ ಚಹಾ ! ...ನೋಡ್ರೀ, ಎಲ್ಲಾ ಉಪಾಧೀನೂ ಬಿಟ್ಟರೂ, ಈ ಚಹಾದ್ದೊಂದು ...ಉಪಾಧಿ ಮಾತ್ರ ಇದುವರೆಗೂ ಬಿಡವೊಲ್ಲದು ನನ್ನ !

ಗಂಗಕ್ಕ :— ಅದೇ ಅಂದೆ ನಾನೂ ! ನೀವೆಲ್ಲಾ ಗಾಂಧೀ ಮಂದಿ ! ನೀವು ಹ್ಯಾಂಗ ಚಹಾ ಬಿಟ್ಟಿಲ್ಲಾ ಅಂತ ನನಗ ಆಶ್ಚರ್ಯ ಅನಿಸಕ್ವದ !

ರಂಗಣ್ಣ :— (ಕುಡಿದು ಮುಗಿಸಿ) ನಿಮಗ ಆಶ್ಚರ್ಯ ಅನಿಸೂದು ಬಿಡ್ರಿ ; ನನ್ನದು ನನಗ ಸುದ್ಧಾ ಆಶ್ಚರ್ಯ ಅನಿಸತದ ! ಸಣ್ಣ ಸಣ್ಣ ಮಾತಿನೊಳಗ ಸುದ್ಧಾ ಮನಸ್ಸನ್ನ ಸಂಪೂರ್ಣ ಸ್ವಾಧೀನದೊಳಗ ಇರಿಸಿಕೊಳ್ಳೂದು ಕಠಿಣ ಆಗತದ ಒಂದೊಂದು ವಿಷಯದೊಳಗ ಅಂದರ, ಮನುಷ್ಯ ಪೂರಾ ದುರ್ಬಲ ಆಗಿ ಬಿಡತಾನ ! ಚಹಾದ ವ್ಯಸನ ನನ್ನನ್ನ ದುರ್ಬಲನನ್ನಾಗಿಸಿ ಬಿಟ್ಟದ !

ಗಂಗಕ್ಕ :— ಹಾಂಗ ನೋಡಿದರ, ನೀವೆಲ್ಲೆ ಹೆಚ್ಚು ಸಾರೆ ತೊಗೋತೀರಿ ಬಿಡ್ರಿ ! ಮುಂಜಾನೆ ಒಂದು ಅರ್ಧಾ ಕಪ್ಪು, ಈಗ ಒಂದು ಅರ್ಧಾ ಕಪ್ಪು ! ಅಂತಲೇ ನಿಮ್ಮ ಪ್ರಕೃತಿ ಎಷ್ಟು ಚೆಲೋ ಉಳದದ ನೋಡ್ರಿ ! ಅಲ್ಲಾ, ಈಗ ನಿಮಗ ವಯಸ್ಸು ಎಷ್ಟು ?

ರಂಗಣ್ಣ :— ನನಗ ವಯಸ್ಸ ?... ನಲವತ್ತೆರಡು ತುಂಬಿ ನಲವತ್ತು ಮೂರು ನಡೀತದ !

ಗಂಗಕ್ಕ :— ಹೂಂ ! ನಲವತ್ತು ಮೂರು ನಡೀತದಲ್ಲ ? ನೋಡ್ರಿ, ಮಂದೀ ಕಣ್ಣಿಗೆ ನಿಮಗ ಇಷ್ಟು ವಯಸ್ಸಾದ ಹಾಂಗ ಕಾಣೂದೇ ಇಲ್ಲ ! ಇನ್ನೂ ಮೂವತ್ತೈದೋ ಮೂವತ್ತಾರೋ ವರ್ಷ ಆಗಿರಬಹುದೂ ಅಂತ ಅನಿಸತದ !

ರಂಗಣ್ಣ :— (ಮೆಲುನಗೆ ನಗುತ್ತ) ಇರಬಹುದು.... ಒಬ್ಬೊಬ್ಬರ ಪ್ರಕೃತಿ ಗುಣ ! ರತ್ನಾಬಾಯಿ ಯಾವಾಗ ಬರ-ತಾಳಂತ ತಿರುಗಿ ?

ಗಂಗಕ್ಕ :— ಸಂಜೆಗೆ ಬರತಾಳ ಆಕಿ ! ನನಗೂ ಒಳಗ ಒಬ್ಬಾಕಿನs ಕೂತು ಕೂತು ಬ್ಯಾಸರಿಕಿ ಬಂದಿತ್ತs ! ಅದಕ್ಕs ಏನೇನೋ ನಿಮ್ಮ ಜೋಡಿ ಮಾತು ಬೆಳಸಿದೆ !

ರಂಗಣ್ಣ :— ಅದರೊಳಗ ಏನು ತಪ್ಪದ ಗಂಗಾಬಾಯಿ ನೀವು ನಮ್ಮ ರತ್ನಾನ ಅಕ್ಕ ! ಹೊರಗಿನವರೇನು ? ಮನಿಯವರಾಗಿ ಬಂದ ಮ್ಯಾಲ, ಮಾತಿಗೆ ಕಥಿಗೆ ಏನು ಬಂದದ ? ಅಂತೂ ನೀವು ರತ್ನಾಗ ಜೋಡಾಗಿ ಬಂದಿರಿ, ಭಾಳ ಒಳ್ಳೇದಾತು ! ಇಲ್ಲದಿದ್ದರ, ಎಲ್ಲಾ ಹೊಸದು... ಅನನುಭವಿಕ ಹುಡುಗಿ.... ಆಕಿಗೆ ತ್ರಾಸ ಆಗತಿತ್ತು !

ಗಂಗಕ್ಕ :— ನಂದೇನು ಬಿಡ್ರಿ ; ನಾ ಏನು ಕಡೇತನಕಾ ಇರುವಾಕೇನು ?

ರಂಗಣ್ಣ :— ಸಾಧ್ಯ ಇದ್ದರ, ಕಡೆತನಕಾ ಇಲ್ಲೇ ಇದ್ದರಾದರೂ ತಪ್ಪೇನು ? ಅಕ್ಕಾ ತಂಗೀ ಜೋಡಾಗಿ ಇರತೀರಿ !

ಗಂಗಕ್ಕ :— ಅಕ್ಕ, ತಂಗಿ ! (ನಿಟ್ಟುಸಿರು ಬಿಟ್ಟು) ತಂಗಿಗೆ ಅಕ್ಕನಿಗಿಂತಾ ಹೆಚ್ಚಿನ ಜೋಡು ಆದ ! ಆ ಜೋಡಿನ ಮುಂದ ನನ್ನದೇನು ಬೆಲಿ ಆಕಿಗೆ ! ನಾ ಮಾತ್ರ ಎಲ್ಲಿ ಇದ್ದರೂ ಒಂಟಿ-ಯಾಗೇ ಇರೂದು ನನ್ನ ದೈವದೊಳಗ ಬರದದ (ಕಣ್ಣೀರು ಸುರಿಸುವಳು.)

ರಂಗಣ್ಣ:— ಛೀ, ಛೀ! ಪಾಪ! ನೊಂದ ಜೀವ! ನಿಂತೀದೀರಿ ಯಾಕ? ಕೂತುಗೊಳ್ರಿ, ಗಂಗಾಬಾಯಿ! ನೋಡ್ರಿ, ಒಂಟಿತನಾ ಜೋಡುತನಾ ಎಲ್ಲಾ ಮನಸಿನ ಭಾವನಾದ ಪರಿಣಾಮ! ನಮ್ಮ-ನಮ್ಮವರು ಅಂತ ಬೇಕಾದಷ್ಟು ಜನಾ ಇರತಾರ! ಅವರೇ ನಮ್ಮ ಜೊತೀ— ಅಂತ ಪ್ರೇಮದಿಂದ ನಡಕೊಂಡರ ಆಯ್ತು; ಆದರಿಂದ ಮನುಷ್ಯ ತಾನೂ ಸಮಾಧಾನದಿಂದ ಇರತಾನ; ಇನ್ನೊಬ್ಬರಿಗೂ ಸಮಾಧಾನ ಕೊಡತಾನ!

ಗಂಗಕ್ಕ:— ನಿಮ್ಮ ಮಾತು ಖರೇ ಅದ! ಅಲ್ಲಾ, ಒಂದು ಮಾತು ನಿಮ್ಮನ್ನ ಕೇಳಲ್ಯಾ?

ರಂಗಣ್ಣ:— ಕೇಳಬಹುದು, ಅದಕೇನು?

ಗಂಗಕ್ಕ:— ನೀವು ಮದಿವೀ ಮಾಡಿಕೊಂಡೇ ಇಲ್ಲಂತ; ಅದ್ಯಾಕ?

ರಂಗಣ್ಣ:— ಉಂ........ನಾನು?.... ಮದಿವೇ?.... ಮಾಡಿಕೊಂಡಿಲ್ಲ ನಿಜ! ಏನೋ, ನನ್ನ ಜೀವಮಾನದೊಳಗ ಮದಿವೀ ಪ್ರಸಂಗ ಕೂಡಿಬರಲಿಲ್ಲ!

ಗಂಗಕ್ಕ:— ಅಲ್ಲ, ಗಂಡಸರು ಮದವಿ ಇಲ್ಲದ ಇರತಾರ ಹ್ಯಾಂಗ ಅಂತ! ನಮ್ಮ ಊರೊಳಗ— ಮೊನ್ನೆ ಮೊನ್ನೆ ಒಬ್ಬರು—ಐವತ್ತೈದು ವರ್ಷದ ಮುದುಕರು, ಮೂರನೇ ಮದಿವೀ ಮಾಡಿಕೊಂಡರು!

ರಂಗಣ್ಣ:— ಮಾಡಿಕೊಂಡಿದ್ದಾರು......ಪುಣ್ಯವಂತರು!

ಗಂಗಕ್ಕ:— ಅಲ್ಲಾ, ನಾ ಅನ್ನೋದಂದರ, ನೀವೂ ಯಾಕ ಮದವೀ ಮಾಡಿಕೋಬಾರದೂ ಅಂತ! ನಿಮಗೇನು ಆಗಬಾರದ ವಯಸ್ಸು ಆಗಿಲ್ಲ!

ರಂಗಣ್ಣ:—(ನಗುತ್ತ) ನನ್ನ....ಈಗ ಯಾವುದಾದರೂ ಹೆಣ್ಣು ಮೆಚ್ಚಿ ಮದಿವೀ ಮಾಡಿಕೋ ಬಹುದಂತೀರಿ?

ಗಂಗಕ್ಕ:—ನಿಮ್ಮನ್ನ....ಮೆಚ್ಚಂಥಾ ಹೆಣ್ಣು ಯಾವ್ದದು? ರತ್ನಾನ ಮದಿವೀ ಆಗ, ನಿಮ್ಮನ್ನ ನೋಡಿದಾಗ ನನಗ ಅನಿಸಿತು. ಈ ಮೊದಲ ನನ್ನ ಮದಿವಿ ಆಗದಿದ್ದರ ಎಷ್ಟು ಚೆಲೋ ಆಗತಿತ್ತೊ— ಅಂತ!

ರಂಗಣ್ಣ:— ಗಂಗಾಬಾಯಿ! ಆಡತಾಡತ ಮಾತು ದೂರ ಹೋಯ್ತು! ನೀವು ಎದ್ದು ನಿಮ್ಮ ಕೆಲಸಕ್ಕ ಒಳಗ ಹೋಗ್ರಿನ್ನ!

ಗಂಗಕ್ಕ:— ಸುಳ್ಳಲ್ಲ, ನಾ ಇಲ್ಲಿಗೆ ಬಂದದ್ದು ತಂಗಿಗೆ ಜೋಡಾಗಿ ಅಂತಲ್ಲ! ನಿಮಗ ಜೋಡಾಗಿ........

ರಂಗಣ್ಣ:— (ಕ್ರೋಧದಿಂದ) ಗಂಗಾಬಾಯಿ!

ಗಂಗಕ್ಕ:— ಇದರೊಳಗ ಸಿಟ್ಟಿಗೇಳುವಂಥಾದೇನದ? ಇದೇ ಈಗ ನೀವೇ ಹೇಳಿದಿರಲಾ: 'ನಮ್ಮ-ನಮ್ಮವರು—ಅಂತ ಬೇಕಾದಷ್ಟು ಜನಾ ಇರತಾರ! ಅವರೇ ನಮ್ಮ ಜೊತೆ—ಅಂತ ಪ್ರೇಮದಿಂದ ನಡಕೊಂಡರ ಆಯ್ತು' ಅಂತ! ಅಂದಮ್ಯಾಲ ನಾ ಹೀಂಗ ಮಾತಾಡಿದ್ದರೊಳಗ ತಪ್ಪೇನದ?

ರಂಗಣ್ಣ:— ನಿಮ್ಮಂಥಾ ನಾಚಿಕೆಗೆಟ್ಟ ಹೆಂಗಸರನ್ನ ನಾನು ಎಲ್ಲಿಯೂ ನೋಡಿಲ್ಲ! (ಸಿಟ್ಟಿನಿಂದ) ಇನ್ನು ಬಾಯಿ ಮುಚ್ಚಿ ಸುಮ್ಮನ ಮರ್ಯಾದೆಯಿಂದ ಎದ್ದು ಹೋಗ್ರಿ! ಚೆನ್ನಾಗಿ ಗೊತ್ತಾತು.......ನಿಮ್ಮನ್ನ ನಿಮ್ಮ ಗಂಡ ಯಾಕ ಬಿಟ್ಟಾನ....... ಅಂಬೂದು!

ಗಂಗಕ್ಕ:— (ಸಹಜಸ್ವರದಲ್ಲಿಯೆ) ಅದು ಗೊತ್ತಾದರ ಆಗ-ಪೊಲ್ಲದ್ಯಾಕ! ಈಗ ನೀವು ನನ್ನ ಮಾತು ಕೇಳ್ರಿ! ಅದರೊಳಗ ಇಬ್ಬರಿಗೂ ಸುಖ-ಸಮಾಧಾನ ಅದ! ಕೇಳದಿದ್ದರ, ನನ್ನ ಸ್ತ್ರೀ ಶಕ್ತಿ ಎಂಥಾದದ ಅಂಬೂದನ್ನ ತೋರಿಸಿಬಿಡತೀನಿ ನಿಮಗ!

ರಂಗಣ್ಣ:— ಮಾನಗೇಡಿ ಹೆಂಗಸು! ಈಗ ನಮ್ಮ ಮನಿತನದ ಮಾನಾ ಉಳಿಸಿಕೊಳ್ಳಲಿಕ್ಕಂತ ಸುಮ್ಮಕ ಕೈಕಾಯಬೇಕಾಗೇದ! ನಿಮ್ಮಂಥವರು ಮನಿಯೊಳಗ ಇರೂದಂದರ, ಆ ಮನೀ ನರಕಾ ಮಾಡಿ ಇಡುವವರು! ಆಯ್ತು, ಶ್ಯಾಮು ಮರಳಿ ಬರಲಿ! ನಾಳಿನ ದಿನಾನ ನಿಮ್ಮನ್ನ ಇಲ್ಲಿಂದ ಅಟ್ಟಿಬಿಡಲಿಕ್ಕೆ ಹೇಳತೀನಿ!

ಗಂಗಕ್ಕ:— ಯಾರು ಯಾರನ್ನ ಅಟ್ಟಿಬಿಡತಾರೋ ನೋಡತೀನಿ ನಾನೂ! (ಅಣಕದ ಧ್ವನಿಯಿಂದ) ರಾಯರ, ನೀವು ಹೆಣ್ಣಿನ ಮಾರೀ ಕಾಣದ ಗಂಡಸರು! ನಾನು ಹರೆಯದ ಹೆಂಗಸು! ಲೋಕ ಯಾರನ್ನ ಸಂದೇಹದೃಷ್ಟಿಯಿಂದ ನೋಡೀತು ಅಂಬೂದರ ಎಚ್ಚರಿರಲಿ ನಿಮಗ! ಹೆಣ್ಣಿನ ಕೈಯೊಳಗಿಂದ ಪಾರಾಗೂದಂದರ, ಹಂಜಿಯಿಂದ ನೂಲು ತಗದ್ಹಾಂಗ ಸುಲಭ ವಿಷಯಾ ಅಂತ ತಿಳಕೋಬ್ಯಾಡ್ರಿ! ನಿಮ್ಮ ಶಾಮಣ್ಣನ ಮುಂದ ನೀವೂ ಹೇಳ್ರಿ; ನಾನೂ ಹೇಳತೀನಿ....ಯಾರ ಮಾತನ್ನ ಅವ ನಂಬತಾನೋ ಪರೀಕ್ಷಾ ಮಾಡಿಬಿಡಿರಿ! (ರಭಸದಿಂದ ಎದ್ದು ಹೊರಟು ಹೋಗುವಳು).

ರಂಗಣ್ಣ:— (ನಿಟ್ಟುಸಿರುಗರೆದು........ಸಾವಕಾಶವಾಗಿ) ಅಂ! ಎಂಥಾ ಪ್ರಸಂಗ ಇದು?........ಲೋಕ ಹಿಂಗೂ ಇರತದ ಅಲ್ಲ? ನಾನು ಹೆಣ್ಣಿನ ಮಾರೀ ಕಾಣದ ಗಂಡಸು! ಆಕಿ ಹರೆಯದ ಹೆಂಗಸು!....ಲೋಕ ನನ್ನನ್ನೇ ಸಂದೇಹ ದೃಷ್ಟಿಯಿಂದ ನೋಡಬಹುದೇ?....ನನ್ನ ಪ್ರೀತಿಯ ಶ್ಯಾಮುನೂ ನನ್ನ ಮಾತನ್ನ ನಂಬಲಿಕ್ಕಿಲ್ಲ? ಅಂ, ನಂಬಲಿಕ್ಕಿಲ್ಲ? ನಂಬದೆ ಹೋದರ.... ಮುಂದ? ಆಯ್ಯೊ! ನರಕ! ಜೀವಂತ ನರಕ! ಜೀವಂತ ನರಕ!!

೪

ನಿವೇದಕ

ಅರಿಸಿಣ-ಕುಂಕುಮಕ್ಕೆ ಹೋಗಿದ್ದ ರತ್ನಾಬಾಯಿ ಮರಳಿ ಮನೆಗೆ ಬಂದಾಗ ದೀಪ ಹಚ್ಚುವ ವೇಳೆ. ರಂಗಣ್ಣಕಾಕಾ, ನಿತ್ಯದಂತೆ ತೋಟದ ಕಡೆಗೆ ತಿರುಗಾಡಲು ಹೋಗಿದ್ದರು. ಗಂಗಕ್ಕ ನಡುಮನೆಯಲ್ಲಿ ಅಸ್ತವ್ಯಸ್ತ ರೀತಿಯಿಂದ ಬಿದ್ದುಕೊಂಡಿರುವಳು. ರತ್ನಾ ಬಂದವಳೇ ಕೇಳುವಳು:

ರತ್ನಾ:— ಯಾಕ ಗಂಗಕ್ಕಾ, ಮಲಕೊಂಡು ಬಿಟ್ಟೇದಿ?

ಗಂಗಕ್ಕ:— (ಮಾತಿಲ್ಲ).

ರತ್ನಾ:— ಗಂಗಕ್ಕಾ, ಗಂಗಕ್ಕಾ !....ಯಾಕs ಮೂರೂ ಸಂಜಿ ಮಲಗಿ ಬಿಟ್ಟೀದಿ? ಮನ್ಯಾಗ ದೀಪಾ ಸುದ್ಧಾ ಹಚ್ಚಿಲ್ಲಲಾ!

ಗಂಗಕ್ಕ:— (ಅಳುಧ್ವನಿಯಲ್ಲಿ) ನಾನು ನಾಳಿನ ದಿನಾನs ಊರಿಗೆ ಹೋಗತೀನವ್ವಾ ರತ್ನಾ!

ರತ್ನಾ:— ಯಾಕs ಅಕ್ಕಾ....ಹೀಂಗ್ಯಾಕ ಅಂತೀ? ಊರಿಗೆ ಹೋಗೂ ಮಾತ್ಯಾಕ ಈಗ?

ಗಂಗಕ್ಕ:— (ರೋಷದ ಅಳುವಿನೊಂದಿಗೆ) ಈ ಮನ್ಯಾಗ, ಹೆಣ್ಣುಮಕ್ಕಳು ಮರ್ಯಾದಿಯಿಂದ ಇರೂದು ಕಠಿಣ ಅದ.... ರತ್ನಾ! ನನಗ ಈ ಮನ್ಯಾಗ ಒಂದು ಘಳಿಗಿ ಸುದ್ಧಾ ನಿಲ್ಲೂ ಮನಸ್ಸಿಲ್ಲ! ನಾಳೆಯು ದಿನಾನs ಹೋಗಿಬಿಡತೀನಿ!

ರತ್ನಾ:— ಇದೇನು ಮಾತs ಗಂಗಕ್ಕಾ! ಈಗ ಆದದ್ದರೆ ಏನು ಅಂಥಾದು?

ಗಂಗಕ್ಕ:— ಆದದ್ದರೇ ಏನಂತ ಕೇಳತೀಯಾ? ಇನ್ನೇನು ಆಗೂದು ಉಳಿತsದ! ಆ ಮದಿವೀ ಕಾಣದ ನಿಮ್ಮ ಮುದಿಮಾವ ಇದ್ದಾನಲಾ....ಗೋಮುಖ ವ್ಯಾಘ್ರ! ಆತನ ಕೈಯೊಳಗಿಂದs ಮಾನವಂತ ಹೆಣ್ಣುಮಕ್ಕಳು ಪಾರಾಗಿ ಉಳಿಯೂದು ಕಠಿಣ ಕಾಣಿಸತsದ! ಮೊದಲs ನನ್ನ ಮ್ಯಾಲ ಇಲ್ಲದ ಸಲ್ಲದ ಅಪವಾದ! ಅದರೊಳಗ ಇಂಥಾ ಪೋಕರಿ ಗಂಡಸರು ಹತೀಲೆ ಇದ್ದರ ತೀರೇ ಹೋತು! ನಾ ಒಲ್ಲೆ ನಮ್ಮವ್ವಾ! ನಾಳೀ ಹೊಂಟು ಬಿಡತೀನಿ ನಾನು!

ರತ್ನಾ:— ಏನಂತೀಯs ನೀನು ಅಕ್ಕಾ? ಊರ ಮುಂದೆಲ್ಲಾ ರಂಗಣ್ಣ ಕಾಕಾನ ಒಳ್ಳೇತನಾ ಕೊಂಡಾಡತಾರಲ್ಲs?

ಗಂಗಕ್ಕ:— ಕೊಂಡಾಡವರು ಕೊಂಡಾಡಿಕೋ ಒಲ್ಲರ್ಯಾಕ! ನನಗ ಬಂದ ದುರನುಭವ ಅವರಿಗೆ ಬಂದಿದ್ದರ, ಈ ರಂಗಣ್ಣ ಕಾಕಾನ ಮಂಗಣ್ಣತನಾ ಜಗಜ್ಜಾಹೀರಾಗಿ ಬಿಡತಿತ್ತು. ಈಗ ಆ ಕೆಲಸಾ ಮಾಡಿ, ನಾ ಯಾಕ ಕೆಟ್ಟತನಾ ಕಟಿಕೋಬೇಕು? ಸುಮ್ಮನs ನಾನೇ ಹೊರಟು ಹೋಗತೀನಿ!

ರತ್ನಾ:— ಅವರು ಊರಿಂದ ಬರಲಿ; ಆದ ಮಾತು ಅವರ ಮುಂದ ಹೇಳೊಣ! ಅವರs ಏನ ಮಾಡತಾರೋ ಮಾಡಿಬಿಡಲಿ!

ಗಂಗಕ್ಕ:— (ಅಳುದನಿಯಲ್ಲಿ) ಬ್ಯಾಡವ್ವಾ ನಂತಾಯಿ, ಯಾರ ಮುಂದೂ ಹೇಳೋದು ಬ್ಯಾಡಾ! ಆ ಕಾಕಾ-ಮಗನ ನಡುವ ಕೆಟ್ಟತನಾ ಹುಟ್ಟಸಿದ ಹರಲಿ ನನ್ನ ತಲೀ ಮ್ಯಾಲ ಬರೂದು ಬ್ಯಾಡಾ! ನನ್ನ ದುರ್ದೈವಾ ನನ್ನ ಉಡ್ಯಾಗ ಕಟಿಕೊಂಡು, ನಾ ನಮ್ಮ ಮನೀಗೆ ಹೋಗಿ ಬೀಳತೀನಿ!

ರತ್ನಾ:— ಅಲ್ಲs ಗಂಗಕ್ಕಾ, ನೀ ಈಗ ಹೊರಟು ಹ್ಯಾದರ ನಾ ಒಬ್ಬಾಕೀ ಇಲ್ಲಿ ಏನು ಮಾಡಲಿ ಹೇಳು! ನನಗ ಅಡಿಗಿ ಬರೂದಿಲ್ಲ, ಅಂಬಲಿ ಬರೂದಿಲ್ಲ! ಮನೀ ಕೆಲಸಾ ಹ್ಯಾಂಗ ಮಾಡಬೇಕಂಬೂದು ಗೊತ್ತಿಲ್ಲ! ಹೀಗಿರುವಾಗ (ಅಳುತ್ತ) ನಾ ಇಲ್ಲೆ ಏನು ಮಾಡಬೇಕಂತೀ ನೀನs ಹೇಳು!

ಗಂಗಕ್ಕ:— ಮನಿಗೆಲಸಾ, ಅಡಿಗೀ-ಅಂಬಲೀ ಒತ್ತಟ್ಟಿಗಿರಲಿ ರತ್ನಾ! ನಿನ್ನ ವಿಷಯಕ್ಕ ಮತ್ತೂ ಒಂದು ಚಿಂತಿ ನನ್ನ ಕರಳು ಕೊರೀಲಿಕ್ಕೆ ಹತ್ತೇದ. ನಿನ್ನ ಗಂಡ ಮುಂಜಾನೆ ಹತ್ತುಗಂಟೇಕ್ಕ ಕೆಲಸಕ್ಕ ಹೋದವರು, ತಿರಿಗಿ ಬರಲಿಕ್ಕೆ, ರಾತ್ರಿ ಏಳೋ ಎಂಟೋ ಆಗತsದ! ಒಬ್ಬಾಕೀ ಈ ಮನ್ಯಾಗ ನೀನು ಇರುವಾಕಿ! ಈ ರಂಗಣ್ಣ ಕಾಕಾನದs ಮನ್ಯಾಗ ಎಲ್ಲಾ ಅಡ್ಡಳತ! ಆತನ ಕೆಟ್ಟಗಣ್ಣಿನ ಬಲಿಯೊಳಗಿಂದ ನೀ ಪಾರಾಗಿ ಉಳೀತೀಯೋ ಇಲ್ಲೋ ಅಂತ ನನಗ ಹತ್ತೇದ ಕೊರಗು!

ರತ್ನಾ:— (ಹೆದರಿ) ಅಯ್ಯಯ್ಯೊ! (ಅಳುತ್ತ) ಗಂಗಕ್ಕಾ, ದಯಮಾಡಿ ನೀನು ನನ್ನ ಬಿಟ್ಟು ಎಲ್ಲಿಯೂ ಹೋಗಬ್ಯಾಡ! ನಿನ್ನ ಕಾಲು ಬೀಳತೀನಿ, ಕೈ ಮುಗಿತೀನಿ! ನೀ ಹೊಂಟುಹೋದಿಯೆಂದರ, ನನಗ್ಯಾರು ಗತಿ ಇಲ್ಲೆ! ಅಡಿಗೀ ಮಾಡವರ್‍ಯಾರು? ಊಟಕ್ಕ ಬಡಿಸವರ್‍ಯಾರು? ಗಂಗಕ್ಕಾ ನೀ ಮರ್‍ಯೋ ಹೋಗಬ್ಯಾಡ! ಊರಿಗೆ ಹೋಗೂ ಮಾತು ತಗೀ ಬ್ಯಾಡ!

ಗಂಗಕ್ಕ:— (ಸ್ವಲ್ಪ ತಡೆದು) ರತ್ನಾ, ಅಳಬ್ಯಾಡ! ನಾ ಇಲ್ಲೇ ಇರಬೇಕಾದರ, ನೀ ಒಂದು ಕೆಲಸಾ ಮಾಡಬೇಕಾಗತsದ!

ರತ್ನಾ:— (ಸಮಾಧಾನ ತಳೆದು) ಅದೇನು ಕೆಲಸ? ನನ್ನ



ಕೈಯಿಂದಾಗೂ ಕೆಲಸಾ ಬೇಕಾದ್ದು ಮಾಡಲಿಕ್ಕೆ ಹೇಳು! ನೀ ಹೇಳಿದ ಮಾತನ್ನ ನಾ ಎಂದು ಮೀರೀನಿ ನೀನs ಹೇಳು!

ಗಂಗಕ್ಕ:— ಹಾಂಗಾದರ ಇಲ್ಲಿ ಕೇಳು! ನಾ ಈ ಮನಿಯೊಳಗ ಇರಬೇಕಂದರ, ನಿಮ್ಮ ಮಾವನ್ನ ಈ ಮನೀ ಬಿಡಿಸಿ ಹೊರಗ ಹಾಕಬೇಕಾಗತದ!

ರತ್ನಾ:— ಅವರು ಬರಲಿ! ಇಂದ ರಾತ್ರಿ, ಅವರ ಮುಂದ ಹೀಂಗ್ಹಿಂಗs ಅಂತ ಹೇಳತೀನಿ!

ಗಂಗಕ್ಕ:— ಹುಚ್ಚಿ ಇದ್ದೀದಿ ರತ್ನಾ ನೀನು? ಆ ಪ್ರೀತೀ ಮಗಾ ನಿನ್ನ ಮಾತು ಕೇಳಿ ಕಕ್ಕನ್ನ ಹೊರಗ ಹಾಕತಾನs? ಅಂವ ತಾನಾಗೇ ಹೊರಟು ಹೋಗೂ ಹಾಂಗ ನಾವs ಉಪಾಯ ಮಾಡಬೇಕು! ಯಾವಾಗಾದರೂ ಅಂವ ನಿನ್ನ ಜೀವಕ್ಕೊಂದು ಮುಳ್ಳು ಇದ್ಹಾಂಗ! ಈ ಮುಳ್ಳನ್ನ ನಾವೇ ಉಪಾಯದಿಂದ ಕಿತ್ತಿ ಒಗೀಬೇಕು!

ರತ್ನಾ:— ಏನು ಮಾಡಬೇಕು ಇದಕ್ಕ ಉಪಾಯ?

ಗಂಗಕ್ಕ:— ಅದನ್ನೆಲ್ಲಾ ಹಿಂದಿನಿಂದs ನಾ ಹೇಳತೀನಿ! ಅದಕ್ಕಾಗಿ ಒಂದು ಚಮತ್ಕಾರದ ನಾಟಕಾ ಹೂಡಬೇಕಾಗತದ. ಆ ನಾಟಕದೊಳಗ, ನಾ ಹೇಳಿದ್ಹಾಂಗ ನೀನು ಆಟಾ ಮಾಡಬೇಕಾಗತದ! ಸಿದ್ಧಳಿದ್ದೀಯಾ ನೀನು?

ರತ್ನಾ:—ನೀ ಇಲ್ಲಿ ಇರಲಿಕ್ಕೆ ಸಿದ್ಧಳಾದರ, ನೀ ಹೇಳಿದಂತೆಲ್ಲಾ ಮಾಡಲಿಕ್ಕೆ ನಾ ಸಿದ್ಧಳಿದ್ದೀನಿ! ಆಯ್ತಿಲ್ಲೋ!

ಗಂಗಕ್ಕ:— ಒಳ್ಳೇದು! ಮತ್ತ, ಈ ವಿಷಯಕ್ಕ ನೀನು ನಿನ್ನ ಗಂಡನ ಮುಂದ, ಪಿಟ್ಟಂತ ಬಾಯಿ ತಗೀಕೂಡದು ನೋಡು! ಏನೇನೂ ಮನಿಯೊಳಗ ಆಗಿಲ್ಲಾ ಅನ್ನುವವರ್ಹಾಂಗ ನಾನೂ ಇರತೀನಿ; ನೀನೂ ಇರಬೇಕು! ಗೊತ್ತಾತೇನು?

ರತ್ನಾ:— ನೀ ಆದರ ಕಾಳಜೀ ಬಿಡು!

ಗಂಗಕ್ಕ:— ಒಳಗ ಬಚ್ಚಲಮನೀ ಮಾಡದೊಳಗ ಕಡ್ಡೀಪೆಟಿಗಿ ಅದs ತೊಗೊಂಡು ಬಾ! ದೀಪಾ ಹಚ್ಚೂಣ ಹೋಗು! (ರತ್ನಾ ಹೋಗುವಳು) (ತನ್ನಲ್ಲಿ ತಾನೆ) ಮಾನಗೇಡಿ ಹೆಂಗಸು ಅಂತ! ಮಂದೀ ಒಳಗ ಯಾರು ಮಾನಗೇಡಿ ಆಗಿ ಮಿಡಕ ಬೇಕಾಗತದಂಬೂದನ್ನ, ಆ ಬೈರಾಗಿಗೆ ತೋರಿಸಿ ಬಿಡತೀನಿ! ನಾನು ಮನೀ ನರಕಾ ಮಾಡತೀನಂತ! ಮೂರ್ಖ! ಮನಿಯಷ್ಟs ಯಾಕ? ಇನ್ನ ಲೋಕಾನs ಅವನ ಪಾಲಿಗೆ ನರಕಾ ಮಾಡಿ ಬಿಡತೀನಿ! ಗಂಗಕ್ಕ ಅಂದರ, ಒಂದು ಹೆಣ್ಣುಗೊಂಬೀ ಅಂತ ತಿಳಕೊಂಡದ ಆ ಪ್ರಾಣಿ! ಹಹಹಹಹ (ನಗುವಳು).

೫

ನಿವೇದಕ :

ಎರಡು ಮೂರು ದಿನಗಳು ಕಳೆದುವು. ರಂಗಣ್ಣ ಕಾಕಾ ಉದಾಸೀನಭಾವದಿಂದಲೆ ಇದ್ದು ಬಿಟ್ಟಿದ್ದರು. ಶ್ಯಾಮಣ್ಣನ ಕಣ್ಣಿಗೆ ಕೂಡ ಹೆಚ್ಚಾಗಿ ಬೀಳುತ್ತಿರಲಿಲ್ಲ. ಅನಿವಾರ್ಯವಾಗಿ ಒಬ್ಬರನ್ನೊಬ್ಬರು ಕಂಡಾಗ, ರಂಗಣ್ಣ ಕಾಕಾ ಸಹಜಭಾವದ ಸೋಗು ಹಾಕಲು ಪ್ರಯತ್ನಿಸುತ್ತಿದ್ದರು. ಮನೆಯಲ್ಲಿ ನಡೆದ ಘಟನೆಯನ್ನು ಶ್ಯಾಮಣ್ಣನ ಮುಂದೆ ಹೇಳುವುದಕ್ಕೆ ಒಂದು ಬಗೆಯ ಸಂಕೋಚ. ಹೇಳಿದರೆ ಪರಿಣಾಮವೇನಾದೀತೆಂದು ಹೆದರಿಕೆ. ಶ್ಯಾಮಣ್ಣ ಮನೆಯಲ್ಲಿಲ್ಲದಾಗ, ಮನೆಯಲ್ಲಿ ಮೌನಿಗಳಾಗಿಯೆ ಕಾಲಕಳೆಯುವರು.

ಇದೀಗ ಸಂಜೆಯ ಐದು ಗಂಟೆಯಾಗಿದೆ; ರಂಗಣ್ಣ ಪಡಸಾಲೆಯಲ್ಲಿ ನೂಲು ತೆಗೆಯುತ್ತ ಕುಳಿತುಕೊಂಡಿದ್ದಾರೆ. ಊರಲ್ಲಿಯ ಮೂರು-ನಾಲ್ಕು ಜನ ರೈತರು ಏನೇನೋ ಕೆಲಸಕ್ಕಾಗಿ ಬಂದು ರಂಗಣ್ಣ ಕಾಕಾನ ಬಳಿಯಲ್ಲಿ ಕುಳಿತುಕೊಂಡಿದ್ದಾರೆ. ಅವರಲ್ಲಿಯ ಒಬ್ಬನನ್ನು ಕುರಿತು ರಂಗಣ್ಣ ಕಾಕಾ ಮಾತನಾಡುತ್ತಲಿದ್ದಾರೆ:

ರಂಗಣ್ಣ:— ನೋಡು ಚೆನ್ನಪ್ಪಾ, ನಮ್ಮ-ನಮ್ಮೊಳಗs ತೀರಿಸಿಕೊಳ್ಳಬೇಕಾದ ತಕರಾರುಗಳನ್ನ ಕೋರ್ಟಿಗೆ ಒಯ್ದು, ವ್ಯರ್ಥ ದುಡ್ಡು ಹಾಳುಮಾಡಿಕೊಳ್ಳೂದರೊಳಗ ಅರ್ಥ ಇಲ್ಲ. ಇಬ್ಬರು ನ್ಯಾಯ-ನೀತಿಯ ದೃಷ್ಟಿಯಿಂದ ವಿಚಾರ ಮಾಡಬೇಕು. ಅನ್ಯಾಯ ಮಾಡಿದವರಿಗೆ ದೇವರು ಶಿಕ್ಷಾ ಮಾಡೇಮಾಡತಾನೆಂಬೂದನ್ನ ನಾವು ಮರೆತು ನಡೀಬಾರದು....

(ಅಷ್ಟರಲ್ಲಿಯೆ ಗಂಗಕ್ಕ ಹೊರಗೆ ಬಂದು, ಗಾಬರಿಯ ಧ್ವನಿಯಲ್ಲಿ ಹೇಳಿದಳು.)

ಗಂಗಕ್ಕ:— ಮುಂಜಾನಿಂದ ರತ್ನಾ ಹಾಸಿಗೀ ಹಿಡಿದುಬಿಟ್ಟಾಳ ಈಗ ಹೊಟ್ಟ್ಯಾಗ ಸಂಕಟಂತ ಹೊರಳಿ ಹೊರಳಿ ಬೀಳಲಿಕ್ಕೆ ಹತ್ಯಾಳ! ನಿಮ್ಮನ್ನ ಕರೀಲಿಕ್ಕೆ ಹೇಳಿದಳಂತ ಬಂದೆ!

ರಂಗಣ್ಣ:— ಆಂ? ಏನು? ಸಂಕಟ ಆಗತದಂತs? ಪಿತ್ತ ಕೆರಳೇದ ಕಾಣಿಸತದ! ಒಳಗ ಹೋಗಿ ನೋಡಿ ಈಗ ಬರತೀನಿ.... ಇಲ್ಲೇ ಕೂಡ್ರೀ ಸ್ವಲ್ಪ! (ಎಂದು ಒಳಗೆ ಹೊರಡುವರು)

(ಅವರು ಹೊರಟುಹೋದ ಮೇಲೆ ಗಂಗಕ್ಕ ಅಲ್ಲಿ ಕುಳಿತಿದ್ದವರಿಗೆ ಹೇಳುವಳು).

ಗಂಗಕ್ಕ:— ಯಾಕೋ ಹುಡಿಗ್ಗಿ ಮೈಯಾಗ ನೆಟ್ಟಗs ಇಲ್ಲ ನೋಡ್ರೀಪಾ! ಎರಡು ದಿನಾ ಆಯ್ತು ಹಾಸಿಗೀ ಹಿಡಿದು! ಇವರ ಮುನ್ಯಾಗ ಏನೇನೋ ಔಷಧಾ ಕೊಡತಾರ! ಇಲ್ಲೇ ಹತ್ತೀಲೇನ ಶಾರದೂರು ಆದ; ಡಾಕ್ಟರರನ್ನ ಕರದು ತೋರಿಸಬೇಕೊ ಇಲ್ಲೋ! ಯಾವ ಔಷಧಾ ಕೊಟ್ಟಾರೊ ಏನೋ! ಹೊಟ್ಯಾಗ ಒಂದs ಸವನs ಸಂಕಟ ಆಗಲಿಕ್ಕೆ ಹತ್ತೇದಂತ....

(ದೂರದಿಂದ ಕೂಗು ಕೇಳಿಸುವುದು. ಕೂಗು ರತ್ನಾ ಬಾಯಿಯದು "ಅಯ್ಯೋ! ಗಂಗಕ್ಕಾ, ಗಂಗಕ್ಕಾ! ಬಾರs ಇಲ್ಲೆ!.......ಗಂಗಕ್ಕಾ ಈ ರಾಕ್ಷಸ ಏನ ನಡಸ್ಯಾನ....... ಅಯ್ಯೋ ಗಂಗಕ್ಕಾ, ಯಾರಾದರೂ ಬಂದು ನನ್ನ ಬಿಡಿಸಬರ್ರ್ಯೋ! ದೂರ ಸರಿ ಚಾಂಡಾಲಾ! ಸರಿ.......ದೂರ ಸರಿ! ಅಯ್ಯೋ ಬಿಡತೀ ಇಲ್ಲೋ?")

ಗಂಗಕ್ಕ:— ಅಯ್ಯೋ! ಇದೇನಿದು ರಂಬಾಟಾ? ಬಂದೆ ಬಂದೆ ರತ್ನಾ! ಅಯ್ಯೋ ಬರ್ರಿಪಾ ನೀವೂ ಒಳಗ! ಬಂದೆ ಬಂದೆ ರತ್ನಾ! (ಗಂಗಕ್ಕ ಒಳಗೆ ಓಡುವಳು. ಬಂದಿದ್ದ ರೈತರೂ ಅವಸರದಿಂದೆದ್ದು ಅವಳನ್ನು ಹಿಂಬಾಲಿಸುವರು).

ಗಂಗಕ್ಕ:— (ತಂಗಿಯ ಬಳಿಸಾರಿ) ಯಾಕs ರತ್ನಾ ! ಇದೇ ದು ? ಹೀಂಗ್ಯಾಕ ? ಕೆಟ್ಟದನಿಯಿಂದ ಚೀರೂದೇನು ? ವ್ಯಾಲಿನ ಅರಿವೀ ಈ ಅಸ್ತವ್ಯಸ್ತ ಏನು ? (ಅಳುಧ್ವನಿಯಲ್ಲಿ) ಂಗ್ಯಾಕs ನಮ್ಮವ್ವಾ! ಏನು, ಆಯ್ತೇನು ನಿನಗ !

ರತ್ನಾ:— ಆಯ್ತೇನs ? ಇನ್ನೇನು ಆಗಬೇಕಂತಿ ! ಅಲ್ಲಿ ಚಾಂಡಾಲ ಹ್ಯಾಂಗ ನಿಂತಾನ ನೋಡು! ಸುಳ್ಳುಸುಳ್ಳೆ ಗಾಬರೀ ೋಗು ಹಾಕಿಕೊಂಡು ! ಮನಿಶಾ ಅಲ್ಲ ಅಂವ; ಮನಿಮುರಕ ಶಾಚಿ! ಅಕ್ಕಾ, ನೀ ಬ್ಯಾಗನೇ ಬಂದಿ ಅಂತ, ನನ್ನ ಮರ್ಯಾದಿ ಳೀತು....ಅಕ್ಕಾ, ನನ್ನ ಮಾನಾ ದೇವರೇ ಕಾಯ್ದ ! ನೀಚ ! ಾಂಡಾಲ ! ರಾಕ್ಷಸ !

ಗಂಗಕ್ಕ:— ಇದೇನ್ರೀ ರಂಗರಾಯರ ? ಏನಂತಾಳ ರತ್ನಾ? ಿದು ? ನನಗೊಂದೂ ತಿಳೀವೊಲ್ಲದು ನೋಡ್ರೀ ! ಅಯ್ಯೊ ರತ್ನಾ! ಥಾ ಹೆದರಿಕಿ ನನಗ ಇತ್ತs ಇತ್ತವ್ವಾ! ಇವನ ಸೋಗಿನ ಧುತನಾ ನನಗ ಮೊದಲs ಎಲ್ಲಾ ಗೊತ್ತಾಗಿತ್ತು ! ಹೆಂಡಾ ಂಬಿಕೊಂಡ ತೀರ್ಥದ ಗಿಂಡಿ ಇದು ! ಗೋಮುಖ ವ್ಯಾಘ್ರ !

ರಂಗಣ್ಣ :— (ಗಾಬರಿಯ ಧ್ವನಿಯಲ್ಲಿ) ಹೀಂಗ್ಯಾಕ ರತ್ನಾ-ಯೀ ! ಪಿತ್ತ ಮಿದುಳಿಗೆ ಏರೇದೋ ಏನು ? ಗಂಗಾಬಾಯಿ ! ್ಲಿ ಹೊರಗ ಟೇಬಲ್ಲಿನ ಮ್ಯಾಲ ಮಾತ್ರಾದ ಡಬ್ಬಿ ಆದ; ಲಗೂನs ೇಗಿ ತೊಗೊಂಡು ಬರ್ರಿ ! ಹೋಗ್ರಿ, ಲಗೂನs ಹೋಗ್ರಿ !

ರತ್ನಾ :—ನೀನೇ ನಿನ್ನ ಮಾತ್ರಾ ತೆಯ್ದು ಕುಡಿ ಚಾಂಡಾಲಾ! ನು ನಿನ್ನ ಪ್ರೀತಿಯ ಮಗನ ಹೆಂಡತಿ.... ಮನಿಗೆ ಸೊಸಿಯಾಗಿ ದೀನಿ ! (ಅಳುತ್ತ) ಸೊಸೀ ಅಂದರ ಮಗಳ ಸರೀ ಅಂಬೂದರ ್ರ ಸುದ್ಧಾ ಇಲ್ಲ ಈ ಪಿಶಾಚಿಗೆ !

ರಂಗಣ್ಣ :— ಒಮ್ಮೆಲೇ ಹೀಂಗ್ಯಾಕ ಬಡಬಡಿಸಲಿಕ್ಕೆ ಹತ್ತೀದಿ ? ಅಯ್ಯೊ, ಒಮ್ಮಿಂದೊಮ್ಮೆ ಇಷ್ಟೊಂದು ಪಿತ್ತಪ್ರಕೋಪ ಂಗ ಆಗಿರಬಹುದೂ ಅಂತೀನಿ !

ಗಂಗಕ್ಕ :—ಸರಿ ! ಎಲ್ಲಾ ತಿಳದ್ಹಾಂಗಾತು ! ಪಿತ್ತಪ್ರಕೋಪ ್ಗ ಆಗಿಲ್ಲ; ಮುದಿಹುಚ್ಚುಹಿಡಿದ ನಿನಗಾಗೇದ ಪಿತ್ತಪ್ರಕೋಪ! ್ಯೋ, ದೇವರೇ ! ಏನಿದೂ ಅನಾಹುತಾ ಅಂತೀನಿ ! ದೈವ ಾ ಮನಿತನಾ ಗಂಟುಹಾಕಿತು ನಮ್ಮ ತಂಗಿಗೇ ಅಂತೀನಿ ! ್ಯೋ ! ರತ್ನಾ, ಮುಂದ ಏನವ್ವಾ ನಿನ್ನ ಗತಿ ! ಏ ರಾಕ್ಷಸಾ, ರಟು ಹೋಗು ಇಲ್ಲಿಂದ ! ಏಳೇಳು ಜನ್ಮಕ್ಕೂ ನಮ್ಮಂಥಾ ್ಣಮಕ್ಕಳ ಮಾರೀ ಕಾಣಬ್ಯಾಡ ನೀನು !

ರಂಗಣ್ಣ :— (ವಸ್ತುಸ್ಥಿತಿಯ ಅರಿವಾಗಿ) ಆಯ್ಯೊ, ಡಾಕಿನೀ! ಲ್ಲಾ ನಿನ್ನ ತಂತ್ರ ! ಅಯ್ಯೋ, ನಾನು ಮೋಸ ಹೋದೆ ! ೋಸ ಹೋದೆ ! ಈ ಚಾಂಡಾಲಿನಿ ಒಡ್ಡಿದ ಬಲೆಗೆ— ತಿಳಿಯ-ದೇ— ಬಿದ್ದುಬಿಟ್ಟೆ ! ಮೋಸ ! ಮೋಸ ! ಮೋಸ !

ಗಂಗಕ್ಕ :— ನೋಡ್ರೆಪಾ ನೀವs ಈ ಕಳ್ಳನ ತಿರುಬೊಬ್ಬೆ ! ಮಾಡೂದೆಲ್ಲಾ ತಪ್ಪು ಮಾಡಿ, ಮ್ಯಾಲ ತನ್ನದs ರಂಬಾಟಾ ನಡಿಸ್ಯಾನ ! ನೀವೂ ಹೆಣ್ಣು-ಗಂಡೂ ಹೆತ್ತವರಿದ್ದೀರಿ, ನೋಡ್ರೆಪಾ ಈ ಅನ್ಯಾಯಾ ಎಲ್ಲಾ !

ಒಬ್ಬ ರೈತ :— ಇದೇನ್ರೆಪಾ, ಯಾವ ಮಾತೂ ಆಡದ್ಹಾಂಗs ಆತು !

ಇನ್ನೊಬ್ಬ :—ಲೋಕಕ್ಕs ಬುದ್ಧೀ ಹೇಳವರು ನೀವು ಕಾಕಾ! ನಿಮ್ಮಿಂದ ಈ ಬಗೀ ಅನ್ನೇ ನಡದೀತಂತ ನಮಗೆಂದೂ ಅನಿಸಿದ್ದಿಲ್ಲ ಬಿಡ್ರಿ !

ಮೂರನೆಯವ:— ಇದೇನೂ ಶಿವಾ ಮೆಚ್ಚೂಮಾತಲ್ಲ ಬಿಡ್ರಿ ರಂಗಣ್ಣವರ !

ನಾಲ್ಕನೆಯವ:—ರಂಗಣ್ಣಕಾಕಾ ಹಂತಾವಾ; ರಂಗಣ್ಣಕಾಕಾ ಹಿಂತಾವಾ— ಅಂತ ಊರಿಗೆ ಊರs ಈ ಲುಚ್ಚ್ಯಾಮನಿಶಾನ್ನ ಕೊಂಡಾಡತಿತ್ತು !

ಒಬ್ಬ :— ಎಲ್ಲಾ,. ಹಿಂಗsನೋ ಯಪ್ಪಾ ! ಆಡೂದೊಂದು ಬ್ಯಾರೇನs, ಮಾಡೂದೊಂದು ಬ್ಯಾರೇನs !

‘ ಬಗನ ’ ಬಾಲಾಮೃತ

ಮಕ್ಕಳ
ಸಧೃಢತೆಗಾಗಿ
‘ಬಗನ’
ಬಾಲಾಮೃತ-
ವನ್ನು ಉಪ-
ಯೋಗಿಸಿರಿ.

ಮುಖ್ಯವಾಗ
ಮಕ್ಕಳ
ಯಕೃತು
ಮತ್ತು
ಹೊಟ್ಟೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ ‘ ಗ್ರಾಯಿಪ್-ವೀಲರಿನ ’ ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ ‘ ಟೊನಿಕ್ಕು ’ ಇರುವದು.

THE NATIONAL PHARMACIES & PHARMACEUTICALS Ltd. DHARWAR.

ಇನ್ನೊಬ್ಬ :— ಸಿಂತಾನ ಹ್ಯಾಂಗ ನೋಡ ದಿಂಗಬಡದು! ಬಾಯಿಂದ ಮಾತು ಬರಬೇಕರೇ ಹ್ಯಾಂಗ!

ಮೂರನೆಯವ :— ನಡಿರಲೇ ನಡೀರಿ! ಈ ಬದಮಾಸನ ಹತ್ತೀಲೆ ನಾವು ನ್ಯಾಯತೀರಿಸಿಕೊಳ್ಳಾಕ ಬಂದೀವಿ! ನಮ್ಮ ಮಳ್ಳ-ತನಾ ಹೆಂತಾದು ನೋಡು!

ನಾಲ್ಕನೆಯವ:— ಏನಯ್ತೋ ಏನೋ! ನಮಗ್ಯಾಕ ಇದೆಲ್ಲಾ ಒಣಾ ಪಂಚಾಯ್ತಿ! ಸುಮ್ಮಗ ನಮ್ಮ ಹಾದೀಹಿಡಿದು ಹೋಗೋಣ ನಡೀರಿ!

(ಎಲ್ಲರೂ ಹೊರಟು ಹೋಗುವರು.)

ರಂಗಣ್ಣ :— ದುಷ್ಟ ಹೆಂಗಸೇ! ನನ್ನ ಜೀವಂತ ಸುಟ್ಟುಬಿಟ್ಟಿ! ನನ್ನ ಜೀವನದ ಹೋಳೀ ಆಡಿಬಿಟ್ಟಿ! ಅಯ್ಯೊ, ಲೋಕ ಹಿಂಗೂ ಆದsನs? ಸತ್ಯದ ಉಪಹಾಸ ಈ ರೀತಿಂದsನೂ ನಡೀತದಲ್ಲs! ತಾಯ್ಯಿ, ನಾನು ಏನು ಇದ್ದೀನಿ, ಲೋಕದ ಕಣ್ಣಿಗೆ ಏನಾಗಿ ಹೋದೆ! ದೇವಾ, ದೇವಾ! ಅನ್ಯಾಯ.... ಅನ್ಯಾಯ.... ಅನ್ಯಾಯ! ಈ ಅನ್ಯಾಯಕ್ಕ ನೀನೂ ಏನಾದರೂ ಅದsನ?

ಗಂಗಕ್ಕ:— ಅಳು, ಮಾರಿಗೆ ಸೆರಗು ಹಾಕಿಕೊಂಡು ಗೋಳೋ ಅಂತ ಅಳು! ಇಷ್ಟ ಮ್ಯಾಲ ಮಾನವಂತ ಅಂತ, ಮಾರೀ ಮ್ಯಾಲ ಮಾಡಿಕೊಂಡು ನಡಿ, ಜನದಾಗ! ನಿನ್ನ ಮಾನವಂತಿಕಿ ಹೊರಬೀಳತ್ತದ!

ರಂಗಣ್ಣ :— ಥೂ! ಪಾಪೀ, ನಿನ್ನ ಮುಖದ ಕಡೆಗೆ ನೋಡ-ಲಾರೆ!

ಗಂಗಕ್ಕ :— ಇನ್ನ ಮ್ಯಾಲ ಜಗತ್ತs ನಿನ್ನ ಮುಖದ ಕಡೀ ನೋಡೂದಿಲ್ಲ ಹೋಗೊ ಹಂಬೀಡ!

ರಂಗಣ್ಣ:—(ಅಳುತ್ತ) ಜಗತ್ತು! ಜಗತ್ತು! ಬೇಡ! ಬೇಡ! ನನಗ ಇನ್ನ ಈ ಅನ್ಯಾಯದ ಜಗತ್ತಿನ ಸಂಬಂಧವೇ ಬೇಡ! ನನಗ ಬೇಕಾದ್ದು ಸತ್ಯ! ನನಗ ಬೇಕಾದ್ದು ಧರ್ಮ! ನನಗ ಬೇಕಾದದ್ದು ನ್ಯಾಯ! ನನಗ ಬೇಕಾದದ್ದು ಬೆಳಕು! ಈ ಜಗತ್ತಿ-ನೊಳಗ ಅದು ಸಿಗಲಾರದು! ಎಂದೆಂದೂ ಸಿಗಲಾರದು! ನಾನು ಅದು ಸಿಗುವಲ್ಲಿಗೆ ಹೋಗಬೇಕು! .... ಅಲ್ಲೇ ಇರಬೇಕು! ಈ ದುಷ್ಟ ಜಗತ್ತಿನ ಸಂಬಂಧವೇ ಬೇಡ ನನಗ!

ಶ್ಯಾಮಾ! ಅಯ್ಯೊ, ನನ್ನ ಶ್ಯಾಮಾ! ನೀನೂ ಇನ್ನ ನನ್ನ ಮಾರೀ ನೋಡಲಾರಿ! ಹೊರಟೆ.... ಹೊರಟೆ... ನನಗ ಯಾರೂ ಇಲ್ಲ; ಏನೂ ಇಲ್ಲ! ನನಗ ನನ್ನ ಶ್ಯಾಮನೂ ಇಲ್ಲ! ಅಯ್ಯೋ ನಾನು ಮಾಡಿದ ತಪ್ಪೇನು? ತಪ್ಪೇನು?.... ನಾನು ಹುಟ್ಟಿದ್ದು ತಪ್ಪು! ಬೆಳೆದದ್ದು ತಪ್ಪು! ಈ ಅನ್ಯಾಯದ ಜೊತೆಯಲ್ಲಿ ಬದುಕಿದ್ದು ತಪ್ಪು! ಹೌದು, ನಾನು ತಪ್ಪುಗಾರ! ನಾನು ತಪ್ಪುಗಾರ! (ಮುಂದೆ ಮುಂದೆ ನಡೆಯುತ್ತ) ನಾನು ತಪ್ಪುಗಾರ! ನಾನು ತಪ್ಪುಗಾರ! ಲೋಕವೇ, ನಾನು ತಪ್ಪುಗಾರ! ನನ್ನ ತಪ್ಪನ್ನ ಕ್ಷಮಿಸು! ಕ್ಷಮಿಸು!

(ರಂಗಣ್ಣಕಾಕಾ ಕೂಗಿಕೊಳ್ಳುತ್ತಲೆ ಮನೆಬಿಟ್ಟು ಹೊರಡುವನು)

ನೇದಳ :

ಒಂಬತ್ತು ಗಂಟೆ ರಾತ್ರಿಯಾಗಿದೆ. ತೋಟದಲ್ಲಿ ಮುದಕಪ್ಪ ಸಕರೆವ್ವ ಮಾತಾಡುತ್ತ ಗುಡಿಸಿಲ ಬಾಗಿಲಲ್ಲಿ ಕುಳಿತಿದ್ದಾರೆ.

ಸಕರೆವ್ವ :— ರಂಗಣ್ಣಕಾಕಾ ಬಂದರ್ಯಾಕ, ಹ್ಯಾದರ್ಯಾಕ ಮಾರೀಮ್ಯಾಗ ದಿನದ ಕಳೀನs ಇರಲಿಲ್ಲ! ಮಕಾ ಬಾಡಿ ಬತ್ತಿ-ಯಾಗಿ ಹೋಗಿತ್ತು! ನಾ ರಂಗಣ್ಣಕಾಕಾನ ಹಿಂತಾ ಮಾ[...] ಎಂದೆಂದೂ ನೋಡಿದ್ದಿಲ್ಲ!

ಮುದಕಪ್ಪ :— ನನಗೂ ಅದs ಒಂದು ಚೋಜಿಗ ಆಗೇ[...] ಹಿಂಗ್ಯಾಕ—ಅಂತ ಕೇಳಿದರ, ರಂಗಣ್ಣಕಾಕಾ ಒಂದು ಮಾತ[...] ಒಡದು ಹೇಳಲಿಲ್ಲ ನನಗ!

ಸಕರೆವ್ವ:— ಹೀಂಗs ನೋಡು ಲೋಕದ ರೀತಿ ಅಂಧರ! ಶ್ಯಾ-ಮನಿಗೆ ಸೊಸೀ ಬಂದಾಳು.... ಆಕಿ ಒಳ್ಳೇ ರೀತಿಂದs ಅವರನ್ನ ನೋಡಿಕೊಳ್ಳೂದಿಲ್ಲೋ ಏನೋ!

ಮುದಕಪ್ಪ:— ಅದs ಇದ್ದೀತು ಬಿಡು! ಈ ದಿನದಾ[...] ಅತ್ತೀ-ಮಾವನ ಕೂಡಾ ಒಳ್ಳೇರೀತಿಂದ ನಡಕೊಳ್ಳ[...] ಸೊಸೆಂದಿರು ಸಿಗೂದಂದರ ಅಪರೂಪದ ಮಾತs ಅನ್ನು! ಇ[...] ಸಾಕಿ ಸಲಹಿದ ಮಕ್ಕಳೂ ಹೆಂಡರ ಮಾತ ಕೇಳಿ ತಿರುಗಿ ಬಿದ್ದ[...] ನಮ್ಮಂತಾ ಮುದಕರ ಜೀವಕ್ಕ ಸಮಾಧಾನ ಎಲ್ಲಿಂದs ಸಿಕ್ಕೀತು

(ಸೈಕಲ್ಲಿನ ಗಂಟೆಯ ಸಪ್ಪಳ ಕೇಳುವುದು.)

ಸಕರೆವ್ವ:— ಇದೇನಿದು? ಈ ಹೊತ್ತಿನಾಗ ಕಾಲಗಾ[...] ಗಂಟೀ ಸಪ್ಪಳ ಎಲ್ಲೀದಿದು? ಏನು ಶ್ಯಾಮಣ್ಣವರು ಬಂದರೇ[...] ಏನು ಮತ್ತ?

(' ಮುದಕಪ್ಪಾ! ' ಎಂದು ಶ್ಯಾಮಣ್ಣನ ಕೂಗು ಕೇಳುವುದು).

ಮುದಕಪ್ಪ:— ಎಲಾ ಇವನ! ಹೌದಲಾ, ಶ್ಯಾಮಣ್ಣವ[...] ಬಂದರು. ಬರ್ರೀ ಯಪ್ಪಾ! ನೀವs ಯಾಕ ಬಂದಿರೀ ಯಪ್ಪಾ[...] ನಾಳೆ ನಸಿಕಿನಾಗs ಎದ್ದು ನಾನs ಬರಬೇಕಂತ ಮಾಡಿನ್ನಿ ನಿಮ[...] ಮನಿಗೆ!

ಶ್ಯಾಮಣ್ಣ:— (ಗಾಬರಿಯ ಕಂಪಿಸುವ ತಗ್ಗಿದ ಧ್ವನಿಯಲ್ಲಿ[...] ನಮ್ಮ ರಂಗಣ್ಣಕಾಕಾ ಇಲ್ಲಿಗೇನರೇ ಬಂದಿದ್ದರೇನು?

ಮುದಕಪ್ಪ:— ಬಂದಿದ್ದರು, ಮೂರೂಜಂಜೀ ಕಡೆ ಬಂ[...] ದ್ದರು!.... ಮತ್ತ ಮನ್ಯಾಗ ಏನಾರೇ ಹಾಕ್ಯಾಟ-ಗೀಕ್ಯಾಟ ಆ[...] ತೇನ್ರಿ? ಕಾಕಾ ಅವರ ಮಾರೀಮ್ಯಾಗ ದಿನದ ಸಿರೀನs ಇ[...] ಲ್ಲಿಲ್ಲ!

ಶ್ಯಾಮಣ್ಣ:— (ಅಳು ಧ್ವನಿಯಲ್ಲಿ) ಈಗ ಕಾಕಾ ಎಲ್ಲೆ ಇದ[...] ಮುದಕಪ್ಪಾ?

ಮುದಕಪ್ಪ:— ಮೂರೂಜಂಜೀ ಇಲ್ಲಿಗೆ ಬಂದು, ಆ ಗ[...] ಬಡ್ಯಾಗ, ಒಂದು ಗಳಿಗ ಕುಂತಕೊಂಡರ್ರಿ! ನನ್ನ ಜತೀ ಕ[...]

...ಕೀ ಜಕೀ ಆಗಲಿ, ದಿನದ್ಹಾಂಗ ಮಾಕs ಆಡಲಿಲ್ಲರಿ! ಹೀಂಗ್ಯಾ-
...ರಿ ಅಂತ ನಾ ಬೇಕಾದಷ್ಟು ಕೇಳಿದೆನ್ರಿ! ನಾಳೆ ನಿನಗ ಎಲ್ಲಾ
...ತೂ ಗೊತ್ತಾಗತೈತಿ!' ಅಂತ ಹೇಳಿ, ಆ ಮಬ್ಬು ಬೆಳಕಿ-
...ಗs ಕೂತು, ಏನೋ ಒಂದು ಚೀಟೀ ಬರದು ನನ್ನ ಕೈಯಾಗ
...ಟ್ಟಾರ್ರಿ.... ನಿಮಗ ಕೊಡಂತ ಹೇಳಿ! ಅದಕs ನಾಳಿಗೆ ನಾ
...ಮ್ಮ ಮನಿಗೆ ಬರಾಂವ ಇದ್ದೆನಿರಿ!

ಶ್ಯಾಮಣ್ಣ:— ಅದಾಯ್ತು, ಈಗ ಕಾಕಾ ಎಲ್ಲಿ ಇದ್ದಾರ?

ಮುದಕಪ್ಪ:— 'ಬಾಳ ಜರೂರೀ ಕೆಲಸ ಐತಿ! ಕಾಂಗ್ರೆಸಿನ
...ಂದಿ ಬಾ ಅಂತ ಹೇಳಿ ಕಳಿಸ್ಯಾರು! ಅದಕ್ಕ ನಾ ಈಗಿಂದೀಗ
...ಟ್ಟಣಕ್ಕ ಹೋಗಿ ಬರಬೇಕಾಗೈತಿ' ಅಂತ ಹೇಳಿ, ಚಿಟೀ ನನ್ನ
...ಯೊಳಗ ಕೊಟ್ಟವರs ಇಲ್ಲಿಂದ ಹೊಂಟs ಬಿಟ್ಟರು!

ಶ್ಯಾಮಣ್ಣ:— (ತಡೆದು) ಉಂ.... ಅವರು ಕೊಟ್ಟ ಆ ಚೀಟಿ
...ಲ್ಲಿ ಐದ?

ಮುದಕಪ್ಪ:— ಇಲ್ಲೇ ಕಿಸೇದಾಗs ಇಟಕೊಂಡೀನ್ರಿ! ಇದು
ಗೊಳ್ರಿ!

ಶ್ಯಾಮಣ್ಣ:— (ಚೀಟಿಯನ್ನು ಬಿಚ್ಚುತ್ತ) ಮುದಕಪ್ಪಾ, ಆ
...ಯಕಲ್ಲ ದೀಪಾ ತೊಗೊಂಡು ಬಾ ಇಲ್ಲೆ! ಈ ಚೀಟಿಯೊಳಗ
...ನ ಬರದಾರ ನೋಡೂಣ!

(ದೀಪ ತರಲಿಕ್ಕೆ ಮುದಕಪ್ಪ ಹೋಗುವನು.)

ಸಕರೆವ್ವ:— ಯಪ್ಪಾ, ನೀವೂ ಇಷ್ಟ್ಯಾಕ ಗಾಬರ್ಯಾಗೀರಿ
...ಮಣ್ಣಾ? ಮನ್ಯಾಗ ಎಲ್ಲಾರೂ ಪಾಡ ಅದಾರೋ ಇಲ್ಲೋ?

(ಶ್ಯಾಮಣ್ಣ ಉತ್ತರವನ್ನೇ ಕೊಡುವುದಿಲ್ಲ!)

ಮುದಕಪ್ಪ:— ತೊಗೋಳ್ರಿ ರಾಯರ ದೀಪಾ!

(ದೀಪದ ಬೆಳಕಿನಲ್ಲಿ ಹಿಡಿದು ಶ್ಯಾಮಣ್ಣ ಪತ್ರವನ್ನು ಓದಲು ತೊಡ-
ಗುವನು.)

ಶ್ಯಾಮಣ್ಣ:— "ಮಗು, ಶ್ಯಾಮು!

ನೀನು ನನ್ನನ್ನು ಕ್ಷಮಿಸು! ನಿರಪರಾಧಿಯಾದರೂ ದುರ್ಧರ
...ರಾಧದ ಅಪವಾದ ನನಗೆ ಅಂಟಿತು. ನನಗೆ ನನ್ನ ಮುಖ
ಶುದ್ಧವಾಗಿ ಕಾಣುತ್ತಲಿದ್ದರೂ, ಜಗತ್ತಿನ ಕಣ್ಣಿಗೆ ಅದು ಮಸಿ
...ಟ್ಟಾಗಿ ಕಾಣುತ್ತದೆ. ಅಂತಹ ಆ ಮುಖವನ್ನು ನಿನಗೂ
...ರಿಸಲಾರೆ; ಜಗತ್ತಿಗೂ ತೋರಿಸಲಾರೆ! ನೀನು ನನ್ನನ್ನು
...ರೆತು ಬಿಡು!

ನನ್ನ ಬೆಂದ ಹೃದಯವನ್ನು ನಿನ್ನ ವಿಷಯಕವಾದ ಪ್ರೇಮ
...ಸಿದ್ದಿತು! ಇಂದು ಅನ್ಯಾಯಪೂರ್ಣ ಜಗತ್ತು, ಆ ಬೆಂದ
...ದಯಕ್ಕೆ ಇನ್ನಿಷ್ಟು ಬೆಂಕಿಯನ್ನು ಹಾಕಿತು! ಈ ಉರಿಯನ್ನು
...ನು ತಡೆದುಕೊಳ್ಳಲಾರೆ! ಈ ಮಳೆಗಾಲದಲ್ಲಿ ತುಂಬಿ ಹರಿಯುವ
...ದಿಯ ಶೀತಲಗರ್ಭ ನನ್ನ ಉರಿಯನ್ನು ತಣಿಸೀತು! ನಿನ್ನನ್ನು
ಅಗಲಿ ಹೋಗಬೇಕಾಗುತ್ತದೆ. ನೀನೂ ನನ್ನನ್ನು ಅಪರಾಧಿಯೆಂದು
ಭಾವಿಸಿದರೆ, ಸ್ವರ್ಗದಲ್ಲಿಯೂ ನನಗೆ ಶಾಂತಿ ಸಿಕ್ಕಲಾರದು.

ನಿನ್ನ
ರಂಗಣ್ಣಕಾಕಾ"

ಶ್ಯಾಮಣ್ಣ:— ಹಯ್ಯೋ (ಎಂದು ನಿಟ್ಟುಸಿರಿಕ್ಕುವನು).

ಮುದಕಪ್ಪ:—ಯಾಕ್ರೀ ಯಪ್ಪಾ! ಏನು ಬರದಾರ್ರೀ ಕಾಕಾ
ಅವರು?

ಶ್ಯಾಮಣ್ಣ:— (ಮತ್ತೆ ಬಿಸಿಯುಸುರಿಕ್ಕಿ ಸುಮ್ಮನೆ ಕುಳಿತು-
ಕೊಳ್ಳುವನು).

ಸಕರೆವ್ವ:— ಯಾಕ್ರೀ ಯಪ್ಪಾ, ಹೀಂಗ್ಯಾಕ ದಿಂಗಬಡದವ-
ರ್ಹಾಂಗ ಕುಂತಬಿಟ್ಟಿರಿ? ಎಲ್ಲಿಗೆ ಹೋಗತೀನಂತ ಬರದಾರ್ರಿ ಕಾಕಾ.
ನವರು?

ಶ್ಯಾಮಣ್ಣ:— ಎಲ್ಲಿಗೆ! ... ಎಲ್ಲಿಗೆ? .... ಎಲ್ಲಿಗೆಂತ ಹೇಳಲಿ
ಸಕರೆವ್ವಾ! ಅವರು ಎಲ್ಲಿಗೆ ಹೋಗ್ಯಾರ ಅಲ್ಲಿಗೆ ನಾನೂ ಹೋಗ-
ಬೇಕು...! ಬರತೀನಿ ಮುದಕಪ್ಪಾ, ಬರತೀನಿ ಸಕರೆವ್ವಾ! ಇನ್ನ
ತೋಟಕ್ಕ ಬರಬೇಕಾದರ, ರಂಗಣ್ಣಕಾಕಾನ್ನ ಕೂಡಿಕೊಂಡs ಬರ-
ತೀನಿ! ರಂಗಣ್ಣಕಾಕಾ ಇಲ್ಲದs ತೋಟಕ್ಕ ಇನ್ನ ಕಾಲು ಹಾಕೂ.

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ.

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ ಬರೆಯಿರಿ:

卐

ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ.

ದಿಲ್ಲ! ಕಾಕಾ....ಕಾಕಾ....ರಂಗಣ್ಣ ಕಾಕಾ! ನೀವು ಇದ್ದಲ್ಲಿ ಈ ಶ್ಯಾಮು! ನಮ್ಮ ಅವ್ವ, ನನ್ನ ನಿಮ್ಮ ಕೈಯಾಗ ಒಪ್ಪಿಸ್ಯಾಳ! ಈಗ ನೀವು ನನ್ನ ಹೀಂಗ ಬಿಸಾಡಿ ಹೋಗತೀರಾ! ಕಾಕಾ....ಕಾಕಾ.... (ಎನ್ನುತ್ತ ಸೈಕಲ್ಲು ತೆಗೆದುಕೊಂಡು ಹೊರಡುವನು).

೭
ನಿವೇದನ

ಐದು ದಿನಗಳು ಕಳೆದುವು. ರಂಗಣ್ಣ ಕಾಕಾನ ಸುದ್ದಿಯಿಲ್ಲ. ಅವನನ್ನು ಹುಡುಕಲು ಹೋಗಿರುವನೆಂದು ತಿಳಿದ ಶ್ಯಾಮುನದೂ ಸುದ್ದಿಯಿಲ್ಲ. ರತ್ನಾ, ಗಂಗಕ್ಕ ಇಬ್ಬರೂ ಜೋಲುಮೊಗದವರಾಗಿ ಕುಳಿತುಕೊಂಡು ಮಾತನಾಡುತ್ತಲಿದ್ದಾರೆ. ಸಮಯ ಹಗಲು ಹನ್ನೊಂದು ಗಂಟೆಯಾಗಿದೆ.

ರತ್ನಾ:— (ಅಳುತ್ತಳುತ್ತ) ಹೋಗಿ ಐದು ದಿನವಾಯಿತು.... ಇನ್ನೂ ಅವರು ತಿರುಗಿ ಬರಲೆ ಇಲ್ಲಲ್ಲ ಗಂಗಕ್ಕಾ!

ಗಂಗಕ್ಕ— ತಮ್ಮ ಪ್ರೀತಿಯ ಚಿಕ್ಕಪ್ಪನ್ನ ಹುಡುಕಿಕೊಂಡು ಬರುವ ಹಟದಿಂದನss ಹೋಗ್ಯಾರಂತ! ನೀ ಅಳತೀ ಯಾಕ? ಒಂದು ದಿನಾ ಹೆಚ್ಚು, ಒಂದು ದಿನ ಕಡಿಮಿ....ಬಂದs ಬರತಾರ! ಎಲ್ಲಿ ಹೋಗತಾರವರು!

ರತ್ನಾ — ಇಲ್ಲss ಗಂಗಕ್ಕಾ! (ಅಳುತ್ತ) ನನಗ ರಾತ್ರೆಲ್ಲಾ ಕೆಟ್ಟ ಕೆಟ್ಟ ಕನಸು ಬೀಳತಾವ! ಇಂದ ಮುಂಜಾನಿಂದಂತೂ ಹೊಟ್ಯಾಗ ಯಾರರೇ ಅಗಿಸ್ಟಿಗೀ ಹೊತ್ತಿಸಿ ಇಟ್ಟಾರೇನೋ ಅನ್ನುವಷ್ಟು ತಗಬಗೀ ಆಗಲಿಕ್ಕೆ ಹತ್ತೇದ!

ಗಂಗಕ್ಕ:— ಹುಚ್ಚೀ, ನೀ ಭಾಳ ಮನಸ್ಸಿಗೆ ಹಚ್ಚಿಕೊಳ್ಳೂ ಹೆಣ್ಣು ನೋಡು!....

(ಅಂಚೆಯಾಳು ಬಂದು ಪತ್ರವೊಂದನ್ನು ಚೆಲ್ಲುವನು.)

ಅಂಚೆಯಾಳು:— ನಿಮ್ಮದು ಇದೊಂದು ಕಾರ್ಡು ಬಂದsದ ನೋಡ್ರೀ ಬಾಯವರ!

ರತ್ನಾ:— (ಆತುರದಿಂದ) ನೋಡs ಅಕ್ಕಾ, ಎಲ್ಲೀ ಪತ್ರ ಬಂದsದ? ಅವರದs ಆದs ಏನೋ! ಎಂದ ಬರತೇನಂತ ಬರ-ದಾರ?.... ನೋಡೂಣು ತಾ ಇಲ್ಲೆ!

(ಗಂಗಕ್ಕ ಪತ್ರ ತಂದು ರತ್ನಾನ ಕಡೆಗೆ ಕೊಡುವಳು).

ಗಂಗಕ್ಕ:— ಹೌದು, ಇದು ಅವರದs ಪತ್ರ ಕಾಣಿಸತsದ! ತೊಗೋ ಓದು!

ರತ್ನಾ:— (ಕಂಪಿಸುವ ಧ್ವನಿಯಲ್ಲಿ)

“ರತ್ನಾ!

ರಂಗಣ್ಣ ಕಾಕಾ ನಮ್ಮ ಮನೆಯ ದಿವ್ಯಜ್ಯೋತಿ. ಆ ಜ್ಯೋತಿ ತಣ್ಣಗಾಗಿ ಮನೆತುಂಬ ಕಾಳಗತ್ತಲೆ ವ್ಯಾಪಿಸಿರಬಹುದು! ಆ ಕತ್ತಲೆಯಲ್ಲಿ ನಾನು ಬದುಕಿಕೊಂಡು ಇರಲಾರೆ. ನನ್ನ ಚಿಕ್ಕಪ್ಪನ ಚಿನ್ನದಂತಹ ಗುಣದ ಪರಿಚಯ, ನನ್ನಷ್ಟು ಇನ್ನಾರಿಗೂ ಇಲ್ಲ. ಅಂತಹ ಸೂರ್ಯನನ್ನೂ ದುರುಳ ರಾಹು ನುಂಗಿತು.

ತನ್ನ ಬೆಂದ ಹೃದಯವನ್ನು ತಂಪು ಮಾಡಿಕೊಳ್ಳಲು ರಂಗಣ್ಣ ಕಾಕಾ ಕೃಷ್ಣೆಯ ಮಡಿಲಲ್ಲಿ ಕುಳಿತಿದ್ದಾರೆ. ಅವರ ಹೃದಯವೀಗ ತಂಪಾಗಿರಬಹುದು. ಈಗ ನನ್ನ ಬೆಂದ ಹೃದಯವನ್ನು ತಂಪು ಮಾಡಿಕೊಳ್ಳಲು ಅವನ ಹೃದಯದಲ್ಲಿ ಸೇರಿಕೊಳ್ಳುತ್ತೇನೆ. ಏನೋ ನಾಲ್ಕುದಿನ ಕೂಡಿ ಇದ್ದು ಗಂಡ-ಹೆಂಡತಿಯ ಗೊಂಬೆಯಾಟವಾಡಿದೆವು. ದುರ್ದೈವಕ್ಕೆ ನಮ್ಮ ಆಟ ಬೇಡವಾಯಿತು. ಮುಗಿಸಿಬಿಟ್ಟಿತು. ಎಲ್ಲರಿಗೂ ನಮಸ್ಕಾರ!

ನಿನ್ನ
ಶ್ಯಾಮು”

ರತ್ನಾ:— (ಪತ್ರವನ್ನೋದಿ ಮುಗಿಸಿ ಅಳುತ್ತ) ಗಂಗಕ್ಕಾ, ಇನ್ನು ನನ್ನ ಗತಿಯೇನು? ನನ್ನಿಂದ ಏನು ಮಾಡಿಸಿದಿ ನೀನು ನಿನ್ನ ಕೆಟ್ಟತನ ನನ್ನನ್ನೂ ಕೆಡಿಸಿ ಹಾಳುಮಾಡಿತು!....ಅಯ್ಯೊ, ರಂಗಣ್ಣ ಕಾಕಾ! ತಿಳಿಗೇಡಿಯಾಗಿ ತಪ್ಪು ಮಾಡಿದೆ....ನೀವು ಹಿರಿಯರು....ತಾಳಿಕೊಂಡು ನನಗೆ ಬುದ್ಧಿ ಹೇಳಬೇಕಾಗಿತ್ತು! ಅಯ್ಯೊ, ದೇವರೇ? ನನಗಿನ್ನು ಯಾರು ಗತಿ? ಯಾರು ಗತಿ? ಯಾರು ಗತಿ?

ಗಂಗಕ್ಕ:— ತಂಗೀ, ರತ್ನಾ! ಸಮಾಧಾನ ತಾಳೇ ತಾಯಿ!

ರತ್ನಾ:— ದುಷ್ಟೇ! ನಿನ್ನ ಪಾಪದುರಿ ನನ್ನ ಹೃದಯವನ್ನ ಬೇಯಿಸಿತು! ಈ ನನ್ನ ಬೆಂದ ಹೃದಯದಿಂದ ಹೊರಡೂ ಕಾವು ನನ್ನ ಪ್ರಾಣಾನೇ ತಿನಲಿಕ್ಕೆ ಹತ್ತೇದ! ಅಯ್ಯೋ, ಉರಿ! ಬೆಂಕಿ! ಕಿಚ್ಚದ ಕುಂಡ! ದೇವಾ! (ಮೈಮರೆತು ಬೀಳುವಳು).

ಗಂಗಕ್ಕ:—(ದುಃಖದಿಂದ) ಅಯ್ಯೊ! ತಂಗೀ, ರತ್ನಾ! ರತ್ನಾ! ನಾನು ಪಾಪಿ! ನಾನು ಪಾಪಿ! ನನ್ನ ದುರ್ದೈವ ನಿನ್ನನ್ನೂ ಹಾಳು ಮಾಡಿತು! ರತ್ನಾ! ರತ್ನಕ್ಕಾ! ತಂಗೀ!

(ಸಿಟಿಲಿನ ಸ್ವರಪರಿಣಾಮದ ಏರಿಕೆಯೊಂದಿಗೆ ಮುಕ್ತಾಯ).

ಶ್ರೀಶಾರದಾದೇವಿ

(ಜೀವನಪರಿಚಯ)

ಶ್ರೀ ಪ್ರ. ಮ. ಗಲಗಲಿ, ಹುಬ್ಬಳ್ಳಿ

卐

ಸಗಣಿಯಿಂದ ಸ್ವತಃ ಕುಳ್ಳುತಟ್ಟುವಂತಹ— ಹಳ್ಳಿಯ ಬಡವರ ಮನೆಯಲ್ಲಿ ಹುಟ್ಟಿದ— ಹುಡುಗಿ, ಜಗದ್ಧಾತ್ರಿ ಮಹಾಮಾತೆಯ ಪದವಿಗೇರಿದ ಸಂಗತಿಯಿದು. ಪುರಾಣಕಾಲದ ಕತೆಯಲ್ಲ. ಆಧುನಿಕಕಾಲದಲ್ಲಿ ಹಲವರು ಕಣ್ಣಾರೆ ಕಂಡ ಸಂಗತಿ.

卐

ಶ್ರೀರಾಮಕೃಷ್ಣ ಪರಮಹಂಸರು ಜನಿಸಿದ ಹದಿನೇಳು ವರ್ಷಗಳ ನಂತರ, ಅವರ ಜನ್ಮಸ್ಥಳವಾದ ಕಾಮಾರಪುಕುರದ ಸಮೀಪದಲ್ಲಿದ್ದ ಜಯರಾಮವಟಿಯಲ್ಲಿ, ೧೮೫೩ನೆಯ ಇಸ್ವಿಯಲ್ಲಿ ಡಿಸೆಂಬರ್ ೨೨ನೆಯ ತಾರೀಖಿನ ದಿನ ಹೆಣ್ಣು ಶಿಶುವೊಂದು ಜನಿಸಿತು. ಅತ್ಯಂತ ಬಡವರಾದ ಆ ಶಿಶುವಿನ ತಂದೆ-ತಾಯಿಗಳು, ಆ ಮಗುವಿಗೆ ಶಾರದಾ ಎಂದು ಹೆಸರಿಟ್ಟರು. ರಾಮಚಂದ್ರ ಮುಖೋಪಾಧ್ಯಾಯರು ಬಡತನದಲ್ಲಿದ್ದರೂ ಬಹು ಧಾರ್ಮಿಕರಾಗಿದ್ದರು. ಹೆಂಡತಿಯೊಂದಿಗೆ ದುಡಿಯುವುದಲ್ಲದೇ ಅವರು ವೈದಿಕ ವೃತ್ತಿಯನ್ನೂ ಮಾಡುತ್ತಿದ್ದರು. ಇದ್ದುದರಲ್ಲಿಯೇ ದಾನ-ಧರ್ಮ ಮಾಡುವುದರಲ್ಲಿ ಅವರಿಗೆ ಬಹಳ ಉತ್ಸಾಹವಿತ್ತು. ಒಂದು ವರ್ಷ ಅವರಿದ್ದ ಜಿಲ್ಲೆಯಲ್ಲಿ ಬರಗಾಲ ಬಿತ್ತು. ಕರುಣಾಹೃದಯರಾದ ರಾಮಚಂದ್ರರ ಅಂತಃಕರಣ ಕರಗಿತು. ತಮ್ಮಲ್ಲಿದ್ದ ತುಸು ಧಾನ್ಯಸಂಗ್ರಹವನ್ನೂ ಅವರು ನಾಳೆಯ ಚಿಂತೆ ಮಾಡದೆ ಹಂಚಿಬಿಟ್ಟರು. ಆ ಹಳ್ಳಿಗೂ ಸುತ್ತುಮುತ್ತಿನ ಜನಕ್ಕೂ ಮುಖೋಪಾಧ್ಯಾಯರು ರಾಮಚಂದ್ರನ ಅವತಾರವೇ ಆಗಿದ್ದರು. ಶಾರದೆಯ ತಾಯಿ ಶ್ಯಾಮಸುಂದರೀದೇವಿಯವರೂ ಪತಿಗೆ ತಕ್ಕ ಪತ್ನಿಯಾಗಿದ್ದರು. ಹೀಗೆ ಜಯರಾಮವಟಿಯ ರಾಮ-ಸೀತೆಯಂತಿದ್ದ ಈ ದಂಪತಿಗಳಿಗೆ, ಮುಂದೆ ಇಡೀ ಪ್ರಪಂಚಕ್ಕೆ ಪೂಜ್ಯ "ಮಹಾತಾಯಿ"ಯಾಗತಕ್ಕ ಪುತ್ರಿಯು ಜನನವಾಯಿತು.

ಶಾರದಾಮಣಿಯವರು ಬಾಲ್ಯದಿಂದಲೂ ಅಸಾಮಾನ್ಯರಾಗಿಯೇ ಇದ್ದರು. ಬಾಲಿಕೆಯಾದ ಶಾರದಾ ಎಲ್ಲ ಚಿಕ್ಕಮಕ್ಕಳಂತೆ ಆಟಪಾಟಗಳಲ್ಲಿ ತನ್ನ ವೇಳೆಗಳೆಯುತ್ತಿದ್ದಿಲ್ಲ. ಎಲ್ಲ ಹೆಣ್ಣುಹುಡುಗಿಯರಂತೆ ಅವಳು ತಾಯಿಯಾಗುವ ಆಟವನ್ನೂ ಆಡುತ್ತಿದ್ದಿಲ್ಲ. ವಿಶ್ವದ ಮಹಾತಾಯಿಯಾಗುವವಳಿಗೆ ಚಿಕ್ಕತನದಲ್ಲಿಯಾದರೂ ಗೊಂಬೆಗಳ ತಾಯಾಗಲು ಹೇಗೆ ರುಚಿಸಬೇಕು? ಐದು ವರ್ಷದ ಈ ಬಾಲಿಕೆಯ ಗಂಭೀರಭಾವಯುಕ್ತ, ಚಿಂತಾತುರ ಮುಖಭಾವವನ್ನು ಕಂಡು, ಎಂಥವರೂ ಆಶ್ಚರ್ಯಪಡುತ್ತಿದ್ದರು. ಪ್ರಪಂಚದ ದುಃಖ-ದುಮ್ಮಾನಗಳು, ಪರಮಾತ್ಮನ ಲೀಲೆಯು ಅಂದೇ ಶಾರದಾಮಣಿಗೆ ಗೋಚರಿಸುತ್ತಿದ್ದವೆ? ಅಂತೂ ಶಾರದಾ ಐದು ವರ್ಷದವಳಿರುವಾಗಲೇ ತಾಯಿಗೆ ಮನೆಗೆಲಸದಲ್ಲಿ ನೆರವಾಗತೊಡಗಿದಳು. ಯಾವಾಗಲೂ ಗಂಭೀರಳಾಗಿಯೇ ವರ್ತಿಸುತ್ತಿದ್ದಳು. ಸಗಣಿ ತರುವುದು, ಕುಳ್ಳುತಟ್ಟುವುದು ಇಂಥ ಚಿಕ್ಕ ಕಾರ್ಯಗಳಲ್ಲದೆ, ಹೊಲದಲ್ಲಿಯೂ ತನ್ನ ತಂದೆಯೊಡನೆ ಹುಲ್ಲು ಕೊಯ್ಯುವುದು ಮುಂತಾದ ಕಾರ್ಯಗಳನ್ನು ಮಾಡುತ್ತ ಆಡ್ಡಾಡುತ್ತಿದ್ದ ಶಾರದೆಯನ್ನು ಆ ಜಯರಾಮವಟಿಯಲ್ಲಿ ಯಾರೂ ನೋಡಬಹುದಿತ್ತು. ಹಾಲುಗಲ್ಲದ ಹಸುಳೆಯಾದ ಶಾರದೆಗೆ, ಆಗಲೇ ತಮ್ಮ ಬಡತನದ ಅರಿವು ಆಗಿದೆಯೋ ಎನ್ನುವಂತಿತ್ತು ಅವಳ ನಡೆನುಡಿ. ಶಾರದಾಮಣಿ ಅದೇಕೋ ಓದುಬರೆಹ ಕಲಿಯಲಿಲ್ಲ. ಅವಳ ತಂದೆ-ತಾಯಿಂದಿರೂ ಅದರ ಕಡೆಗೆ ಅಷ್ಟು ಲಕ್ಷ್ಯವೀಯಲಿಲ್ಲ. ಮುಂದೆ ದೊಡ್ಡವರಾದಾಗ, ಬಂಗಾಲಿಯ ಅಂಕಲಿಪಿಯನ್ನು ಓದಲು ಪ್ರಯತ್ನಿಸಿದಾಗ, ರಾಮಕೃಷ್ಣರ ಬಂಧುವೊಬ್ಬನು ಅದನ್ನು ಕಸಿದೊಗೆದನು. ಶಾರದಾ ಮುಂದೆ ಕತೆ-ಕಾದಂಬರಿಗಳನ್ನು ಓದಬಹುದೆಂಬ ಹೆದರಿಕೆ ಆತನಿಗೆ! ಆದರೂ ಶಾರದಾಮಣಿ ಬಹು ಕಷ್ಟದಿಂದ, ಮುಂದೆ ಹೇಗೋ ಓದುವುದನ್ನು ಮಾತ್ರ ಕಲಿತುಕೊಂಡರು. ಅವರು ರಾಮಾಯಣವನ್ನೋ ಮಹಾಭಾರತವನ್ನೋ ಓದುತ್ತ ಕುಳಿತುದನ್ನು ಕಾಣಬಹುದಾಗಿತ್ತಾದರೂ ಅವರೆಂದೂ ಬರೆಯುತ್ತಿದ್ದಿಲ್ಲ.

ಮೊದಲ ಸಲ ದಕ್ಷಿಣೇಶ್ವರಕ್ಕೆ ಹೋಗಿದ್ದ ರಾಮಕೃಷ್ಣರಿಗೆ ಹುಚ್ಚುಹಿಡಿಯುವ ಸಂಭವವಿದೆಯೆಂದು ಕೇಳಿ, ಅವರ ತಾಯಿ ಅವರನ್ನು ತಮ್ಮ ಹಳ್ಳಿಗೆ ಕರೆಯಿಸಿಕೊಂಡು ಔಷಧೋಪಚಾರ ಮಾಡಿಸತೊಡಗಿದರು. ಊರ ಹಿರಿಯರು ಪರಮಹಂಸರ ಲಗ್ನ ಮಾಡಲು ಸೂಚಿಸಿದರು. ಅವರ ಹುಚ್ಚು ಲಗ್ನದ ಹುಚ್ಚಿಂದು ಪ್ರಪಂಚಿಕರಿಗೆ ತೋರಿರಬಹುದು. ಕನ್ಯಾಶೋಧನೆಗೆ ಜನ ಹೊರಟರು. ಹುಚ್ಚನಿಗೆ ಆದಾರು ಕನ್ಯೆ ಕೊಡಬೇಕು? ಶೋಧಕರೆಲ್ಲ ನಿರಾಶೆಯಿಂದ ತಿರುಗಿ ಬಂದರು. ಆಗ ರಾಮಕೃಷ್ಣರ ಮನಸ್ಸಿನ ತುಂಬೆಲ್ಲ ಒಂದೇ ಒಂದು ವಿಚಾರ ತುಂಬಿತ್ತು: ಪರಮಾತ್ಮನಿದ್ದರೆ,— ಅದರಲ್ಲಿ ಅವರಿಗೆ ತುಸುವಾದರೂ ಸಂಶಯವಿದ್ದಿಲ್ಲ,— ಎಲ್ಲರಂತೆ ಅವನು ನಿತ್ಯ ತಮಗೆ ಕಾಣದಿರುವನೇಕೆ? ಆ ಸ್ಥಿತಿಗೆ ತಲುಪಲು ಏನು ಮಾಡಬೇಕು?— ಎಂಬ ವಿಚಾರದಲ್ಲಿ ಅವರಿಗೆ ಊಟ-ನಿದ್ರೆಗಳೂ ಬೇಕಾಗದಂತಹ ಪರಿಸ್ಥಿತಿಯಿದ್ದಾಗ, ಲಗ್ನದ ವಿಷಯದಲ್ಲಿ ತುಸುವಾದರೂ ಆಸಕ್ತಿಯಿರಲು ಸಾಧ್ಯವೆ? ಆದರೂ ರಾಮಕೃಷ್ಣ ಇದರಲ್ಲೂ ಆಸಕ್ತರಾಗಿದ್ದರು— ಕೂಸು ಹೊಸ ವಿಷಯವೊಂದರಲ್ಲಿ ಆಸಕ್ತವಾಗಿರುವಂತೆ! ನಗುತ್ತ ರಾಮಕೃಷ್ಣರು ತಮ್ಮ ತಾಯಿಗೆ ಹೇಳಿದರು: "ನನ್ನ ಲಗ್ನ ಮಾಡಬೇಕೆನ್ನುವೆಯಾ? ಕನ್ಯೆಯನ್ನು ಅಲ್ಲಿಲ್ಲಿ ಹುಡುಕಬೇಡ, ನನಗಾಗಿಯೇ ಒರ್ವ ಹುಡುಗಿ

ಜಯರಾಮವಟಿಯ ರಾಮಚಂದ್ರ ಮುಖ್ಯೋಪಾಧ್ಯಾಯರ ಮನೆಯಲ್ಲಿ ಬೆಳೆಯುತ್ತಿದ್ದಾಳೆ. ಹೋಗಿ ಕೇಳು !"

ತಾಯಿ ಮಗನ ಮಾತಿಗೆ ಉದಾಸೀನ ಮಾಡದೆ, ಜನರನ್ನು ಕಳುಹಿದಳು. ಮಗನ ಹೇಳಿಕೆ ಸತ್ಯವಾಗಿತ್ತು. ಎರಡೂ ಮನೆತನಗಳೂ ಶ್ರೇಷ್ಠವಾಗಿದ್ದುವು. ಹಿರಿಯರು ಲಗ್ನಕ್ಕೆ ಒಪ್ಪಿದರು. ಇಪ್ಪತ್ತೈದು ವರ್ಷದ, ಅಧ್ಯಾತ್ಮ ಪ್ರಪಂಚದಲ್ಲಿ ಆಗಲೇ ಶ್ರೇಷ್ಠ ಅಧಿಕಾರಿಗಳಾಗಿದ್ದ, ಪ್ರಾಪಂಚಿಕ ವ್ಯವಹಾರವನ್ನು ತುಸುವಾದರೂ ಅರಿಯದ ರಾಮಕೃಷ್ಣರು, ಹಾಲುಗಲ್ಲದ ಹಸುಳೆಯಾದ ಏಳು ವರ್ಷದ ಶಾರದಾಮಣಿಯ ಕೈಯನ್ನು ಹಿಡಿದರು. ಭಾರತದ ಅದ್ಯಂತದ ಆಧ್ಯಾತ್ಮಿಕ ಅನುಭವದ ಸಾಕಾರಮೂರ್ತಿಯಾದ ರಾಮಕೃಷ್ಣರು, ಸಾಮಾನ್ಯಳ ಕೈ ಹಿಡಿಯುವರೆ ? ಅವರು ಕೈ ಹಿಡಿದವಳು ಎಂದಾದರೂ ಸಾಮಾನ್ಯಳಾಗಿರಬಲ್ಲಳೆ? ಶಾರದಾಮಣಿ ಆಗ ಲಗ್ನವೆಂದರೇನೆಂಬುದನ್ನು ಕೂಡ ತಿಳಿಯದಷ್ಟು ಚಿಕ್ಕವರಿದ್ದರು.

ಮುಂದೆ ಕೆಲದಿನಗಳ ನಂತರ, ರಾಮಕೃಷ್ಣರು ಮತ್ತೆ ದಕ್ಷಿಣೇಶ್ವರಕ್ಕೆ ಬಂದರು. ಬರುತ್ತಲೇ ಪರಮಹಂಸರು ಮತ್ತೆ ತಾಯಿ, ತಂದೆ, ಹೆಂಡತಿ, ಬಂಧುಬಳಗ ಪ್ರಪಂಚಗಳನ್ನೆಲ್ಲ ಮರೆತುಬಿಟ್ಟರು. ಅವರು ಊಟ-ನಿದ್ರೆಗಳನ್ನು ಕೂಡ ಮರೆತುಬಿಟ್ಟರು. ಅವರ ಮನಸ್ಸು ಮತ್ತೆ ನಿರ್ವಿಕಲ್ಪ ಸಮಾಧಿಯಲ್ಲಿ ಸೇರತೊಡಗಿತು. ರಾಮಕೃಷ್ಣರಿಗೆ ಈ ಸಲ ಪೂರ್ತಿ ಹುಚ್ಚುಹಿಡಿಯಿತೆಂಬ ವಾರ್ತೆ ಮತ್ತೆ ಹಬ್ಬತೊಡಗಿತು. ತಾಯಿ ಬಹಳ ಚಿಂತೆ ಮಾಡತೊಡಗಿದರು. ಈ ಸುದ್ದಿ ಜಯರಾಮವಟಿಗೂ ಮುಟ್ಟಿತು. ದಕ್ಷಿಣೇಶ್ವರದಲ್ಲಿ ಆಗುತ್ತಿದ್ದ ಸಂಗತಿಗಳನ್ನು ತಿಳಿಯದಷ್ಟು ಚಿಕ್ಕವರಿದ್ದರು ಶಾರದಾಮಣಿ. ರಾಮಕೃಷ್ಣರು ೧೮೬೭ರಲ್ಲಿ ಮತ್ತೆ ತಮ್ಮ ಹಳ್ಳಿಗೆ ಬಂದರು. ವಿಚಿತ್ರ ಸುದ್ದಿಗಳನ್ನು ಕೇಳಿದ ಜನರೆಲ್ಲ ಪರಮಹಂಸರು ಎಲ್ಲರಂತೆಯೇ ಇದ್ದುದನ್ನು ಕಂಡು ಆಶ್ಚರ್ಯಪಟ್ಟರು. ಶಾರದಾಮಣಿ ಹದಿನಾಲ್ಕು ವರ್ಷದ ಸುಂದರ ಯುವತಿಯಾಗಿ ಈ ಸಲ ಅತ್ತೆಯ ಮನೆಗೆ ಬಂದರು. ಪರಮಹಂಸರೊಂದಿಗೆ ಏಳು ತಿಂಗಳು ಇದ್ದರು. ಪರಮಹಂಸರು ಆಗಲೇ ಗುಪ್ತವಾಗಿ ಸಂನ್ಯಾಸ ದೀಕ್ಷೆಯನ್ನು ಸ್ವೀಕರಿಸಿದ್ದರು. ಮೇಲಿಂದ ಮೇಲೆ ಸಮಾಧಿ ಹೊಂದುತ್ತಿದ್ದ ಪರಮಹಂಸರು, ಉಳಿದೆಲ್ಲ ಸಂಗತಿಗಳನ್ನು ಅಲಕ್ಷಿಸುತ್ತಿದ್ದರೂ ಹೆಂಡತಿಯನ್ನು ಮಾತ್ರ ಅಲಕ್ಷಿಸಲಿಲ್ಲ. ಅವರು ಹೆಂಡತಿಗೆ ಶಿಕ್ಷಣವನ್ನು ಕೊಡುವುದಲ್ಲದೆ, ಅನೇಕ ಆಧ್ಯಾತ್ಮಿಕ ಅನುಭವಗಳನ್ನೂ ತಿಳಿಸಿ ಹೇಳಿದರು. ಪರಮಹಂಸರು ಅವರಿಗೆ ಮನೆಗೆಲಸವನ್ನೂ ಕೂಡ ಕಲಿಸಲಾರಂಭಿಸಿದರು. ಶಾರದಾಮಣಿ ಈಗ ಮಾತ್ರ ತಮ್ಮ ಪತಿಯನ್ನು ಸಂಪೂರ್ಣವಾಗಿ ಕಂಡರು. ಅವರೆನ್ನುತ್ತಾರೆ : "ಆಗ ನನ್ನ ಹೃದಯದಲ್ಲಿ ಸಚ್ಚಿದಾನಂದವು ಅಖಂಡವಾಗಿ ನೆಲಸಿದಂತೆ ನನಗೆನ್ನಿಸುತ್ತಿತ್ತು."

ಮುಂದೆ ಕೆಲದಿನಗಳಲ್ಲಿ ಪರಮಹಂಸರು ಮತ್ತೆ ದಕ್ಷಿಣೇಶ್ವರಕ್ಕೆ ಬಂದು, ತಮ್ಮ ಹಿಂದಿನ ಜೀವನವನ್ನು ಮರೆತವರಂತಾದರು. ಇತ್ತ ಶಾರದಾಮಣಿ ತಮ್ಮ ಪತಿಯ ಹತ್ತಿರ ದಕ್ಷಿಣೇಶ್ವರದಲ್ಲಿ ವಾಸಿಸಲು ಹಾತೊರೆಯಹತ್ತಿದರು. ಈಗ ಶಾರದಾಮಣಿಯಲ್ಲಿ ತುಸು ಬದಲಾವಣೆಗಳು ಕಂಡು ಬರತೊಡಗಿದುವು. ಅವರು ಹೆಚ್ಚು ಶಾಂತ ಗಂಭೀರರೂ, ವಾತ್ಸಲ್ಯಮಯರೂ ಆದರು. ಕೆಲದಿನಗಳಲ್ಲಿಯೇ ಮತ್ತೆ ಸುದ್ದಿ ಬಂದಿತು: ಈ ಸಲ ರಾಮಕೃಷ್ಣರಿಗೆ ನಿಜವಾಗಿಯೂ ಹುಚ್ಚೇ ಹಿಡಿದಿದೆಯೆಂದು ಹಳ್ಳಿಯವರೆಲ್ಲ ಪಿಸುಮಾತುಗಳನ್ನು ಆಡತೊಡಗಿದರು. ಅವುಗಳನ್ನು ತಪ್ಪಿಸಲೋಸುಗ ಶಾರದಾಮಣಿ ತುಂಬಾ ಏಕಾಂತಪ್ರಿಯರಾದರು. ಪತಿಯನ್ನು ಕಾಣುವ ಬಯಕೆ ಹೆಚ್ಚಾಗತೊಡಗಿತು. ವಾಹನಸೌಕರ್ಯವಿಲ್ಲದ ಆ ಕಾಲದಲ್ಲಿ, ಅಷ್ಟು ದೂರ ಹೋಗುವ ಬಗೆ ಹೇಗೆ ? ಆದರೆ ಪರಮಾತ್ಮನು ಅವರ ಪ್ರಾರ್ಥನೆಯನ್ನು ಕೇಳಿ ಸಂಧಿಯನ್ನೊದಗಿಸಿದನು. ಗಂಗಾಸ್ನಾನಕ್ಕೆಂದು ಹೊರಟ ಅವರ ಸಂಬಂಧಿಕರಾದ ಸ್ತ್ರೀಯರ ಗುಂಪಿನೊಂದಿಗೆ, ತಂದೆಯೊಡನೆ ಶಾರದಾಮಣಿ ಕಾಲ್ನಡಿಗೆಯಲ್ಲಿ ಪತಿಯೆಡೆಗೆ ಹೊರಟರು. ದಾರಿಯಲ್ಲಿ ಜ್ವರ ಬಂದು, ಕಷ್ಟದಿಂದ ಅವರು ದಕ್ಷಿಣೇಶ್ವರವನ್ನು ತಲ್ಪಿದರು.

ಕಾಳೀಮಾತೆಯಲ್ಲಿ ಐಕ್ಯರಾಗಿ ಲೋಕದ ನಡೆನುಡಿಗಳಿಗೆ ಅಂಧರಾಗಿದ್ದ ಪರಮಹಂಸರು, ಶಾರದಾಮಣಿಯ ಅಶಕ್ತತೆಯನ್ನು ಕಂಡು ಒಮ್ಮೆಲೇ ಸಮಾಧಿಸ್ಥಿತಿಯನ್ನು ತ್ಯಜಿಸಿ ಈ ಲೋಕಕ್ಕೆ ಬಂದರು. ಕೂಡಲೇ ಪರಮಹಂಸರು ಪತ್ನಿಯ ಸೇವೆಗೆ ನಿಂತರು. ಅವರ ಅನವರತಸೇವೆಯಿಂದ ಶಾರದಾಮಣಿ ಕೆಲ ದಿನಗಳಲ್ಲಿಯೇ ಮತ್ತೆ ಗೆಲುವಾದರು. ಪರಮಹಂಸರ ಆರೈಕೆಯನ್ನು ಪಡೆದ ಬಳಿಕ ಅದಾವ ಬೇನೆ ಬಂದೀತು ? ಕೂಡಲೆ ಶಾರದಾಮಣಿ ಅತ್ತೆಯವರಿದ್ದ ನಹಬತ ಮನೆಗೆ ಬಂದರು. ಅದು ಪರಮಹಂಸರ ಕೋಣೆಯ ಬದಿಯಲ್ಲಿತ್ತು. ಜನರ ಕತೆಗಳಲ್ಲಿಯ ಹುಚ್ಚು ಪರಮಹಂಸರ ಬದಲು, ಇಲ್ಲಿ ತನ್ನ ಆರೈಕೆಗೈದ, ವಾತ್ಸಲ್ಯಪೂರ್ಣ ಪರಮಹಂಸರನ್ನು ಕಂಡು ಶಾರದಾಮಣಿ ಆನಂದಭರಿತರಾದರು. ಶಾರದಾಮಣಿಗೆ, ತನ್ನ ಪತಿ ಸರ್ವರಂತೆ ಜಾಣರಾಗಿದ್ದುದಲ್ಲದೆ ಅವರೆಲ್ಲರಿಗಿಂತ ಶ್ರೇಷ್ಠರಾಗಿದ್ದರೆಂಬುದೂ ಖಚಿತವಾಯಿತು.

ಮಗಳು ಸಂತೋಷಗೊಂಡದ್ದನ್ನು ಕಂಡು, ತಂದೆ ರಾಮಚಂದ್ರರು ಒಬ್ಬರೇ ಊರಿಗೆ ಹಿಂದಿರುಗಿದರು. ಈ ಸುಮಾರಿಗೆ ಪರಮಹಂಸರು ಆಧ್ಯಾತ್ಮಿಕ ಪ್ರಪಂಚದಲ್ಲಿ ಬಹು ಮುಂದುವರೆದಿದ್ದರು. ಆದರೆ ಅವರು ಹೆಂಡತಿಯನ್ನು ಮರೆಯಲಿಲ್ಲ. ಇಲ್ಲಿಯವರೆಗೆ ಸಾಧಿಸಿದ ಆಧ್ಯಾತ್ಮಿಕ ಪ್ರಗತಿಯನ್ನೆಲ್ಲ ಅವರು ಶಾರದಾಮಣಿ ಇಚ್ಛಿಸಿದರೆ ತ್ಯಾಗಮಾಡಲು ಕೂಡ ಸಿದ್ಧರಿದ್ದರು. ಆದರೆ ಶಾರದಾಮಣಿ ಸಾಮಾನ್ಯ ಸತಿಯೇ ? ಶಾರದಾಮಣಿಗೂ ಪತಿಯ ಗುರಿಯೇ ತಮ್ಮ ಗುರಿಯಾಯಿತು. ಪತಿಯನ್ನು ಹಿಂಬಾಲಿಸಲು

ಅವರು ನಿರ್ಧರಿಸಿದರು. ತಾವು ಅವರ ಪತ್ನಿಯೆಂಬುದನ್ನು ಮರೆತು, ಪರಮಹಂಸರ ಶಿಷ್ಯೆಯಾದರು. ಪರಮಹಂಸರ ಹತ್ತಿರ ಹಗಲು ಇಡೀ ಹೊತ್ತು ಶಿಷ್ಯರು ಬರುತ್ತಿದ್ದುದರಿಂದ, ಶಾರದಾಮಣಿ ಕೇವಲ ರಾತ್ರಿಯ ವೇಳೆಯಲ್ಲಿಯೇ ಪರಮಹಂಸರ ಹತ್ತಿರ ಬರುತ್ತಿದ್ದರು. ಪತಿ-ಪತ್ನಿಯರಿಬ್ಬರು ಒಂದೇ ಹಾಸಿಗೆಯಲ್ಲಿ ಮಲಗಿದ್ದರೂ ತಮ್ಮ ಧ್ಯೇಯಗಳನ್ನು ಬಿಡಲಿಲ್ಲ. ಅಷ್ಟೊಂದು ದೃಢ ನಿಶ್ಚಯ ಇಬ್ಬರದೂ. ಪರಮಹಂಸರು, ಶಾರದಾಮಣಿ ದಕ್ಷಿಣೇಶ್ವರಕ್ಕೆ ಬರುವ ಮೊದಲು ಕಾಳಿಯನ್ನು' ಪ್ರಾರ್ಥಿಸಿದ್ದರು :'ತಮ್ಮ ಪತ್ನಿಯ ಮನಸ್ಸಿನಲ್ಲಿಯ ಸರ್ವಕಾಮೇಚ್ಛೆಗಳನ್ನು ಸುಟ್ಟುಹಾಕಲು ಪರಮಹಂಸರ ಯಾವ ಪ್ರಾರ್ಥನೆಯನ್ನು ತಾನೇ ಕಾಳೀಮಾತೆ ಪೂರೈಸಿರಲಿಲ್ಲ ?

ಪರಮಹಂಸರು ಶಾರದಾಮಣಿಯನ್ನು, ಯಾವ ಪತಿಯೂ ತನ್ನ ಪತ್ನಿಯನ್ನು ಪ್ರೇಮಿಸದಂತೆ ಪ್ರೇಮಿಸುತ್ತಿದ್ದರು. ಅವರೇ ಹೇಳುತ್ತಿದ್ದರು: "ಶಾರದಾ ತುಸುವಾದರು ನೊಂದುಕೊಂಡರೂ ನನ್ನ ಈಶ್ವರಭಕ್ತಿಯೆಲ್ಲ ಹಾರಿ ಹೋಗುವುದು !" ಪರಮಹಂಸರು ಶಾರದಾಮಣಿಯನ್ನು ಜಗದ್ಧಾತ್ರಿ ಜಗನ್ಮಾತಾ ಪರಮೇಶ್ವರಿಯ ರೂಪದಲ್ಲಿ ಕಾಣುತ್ತಿದ್ದರು. ಒಂದು ರಾತ್ರಿ ಕಾಲೊತ್ತುತ್ತ ಕುಳಿತ ಶಾರದಾಮಣಿ ಕೇಳಿದ ಪ್ರಶ್ನೆಗೆ ಪರಮಹಂಸರು ಹೇಳಿದ್ದರು; "ಗರ್ಭಗುಡಿಯಲ್ಲಿ ಪೂಜೆಗೊಳ್ಳುತ್ತಿರುವ ಮಹಾಮಾತೆಯೇ ಈಗ ನನ್ನ ಕಾಲನ್ನು ಒತ್ತುತ್ತಿದ್ದಾಳೆ." ಪರಮಹಂಸರು ತಮ್ಮ ಜೀವನದಲ್ಲಿ ಒಂದೇ ಒಂದು ಸಲವಾದರೂ ಕಾಮದೃಷ್ಟಿಯಿಂದ ಶಾರದಾಮಣಿಯನ್ನು ನೋಡಲಿಲ್ಲ. 'ಇದರ ಕೀರ್ತಿ ಶಾರದಾಮಣಿಗೂ ಸಲ್ಲಲೇಬೇಕು' ಎನ್ನುತ್ತಾರೆ ಸ್ವತಃ ಪರಮಹಂಸರು. ಪರಮಹಂಸರು ೧೮೭೩ನೆಯ ಮೇ ತಿಂಗಳಿನ ಜ್ಯೇಷ್ಠ ಬಹುಳ ಅಮಾವಾಸ್ಯೆಯ ದಿನ ರಾತ್ರಿ ವಿಶೇಷವಾದ ಕಾಳೀ ಪೂಜೆಯನ್ನು ಮಾಡುವವರಿದ್ದರು. ಶಾರದಾಮಣಿಯೂ ಆ ವೇಳೆಯಲ್ಲಿ ಇರಬೇಕೆಂದು ಪರಮಹಂಸರು ಹೇಳಿದ್ದರು. ರಾತ್ರಿ ಮೊದಲನೆಯ ಜಾವ ಕಳೆಯುತ್ತಲೇ ಪರಮಹಂಸರು ಪೂಜೆಗೆ ಕುಳಿತರು. ದೇವತೆಯಿರುವ ಪೀಠ ಬರಿಯದಾಗಿತ್ತು. ಪರಮಹಂಸರು ಶಾರದಾಮಣಿಗೆ ಅಲ್ಲಿ ಕುಳ್ಳಿರಲು ಹೇಳಿದರು. ಹೊರಗಿನ ಪರಿವೆಯಿಲ್ಲದ ಶಾರದಾಮಣಿ ಹೋಗಿ ಪೀಠವನ್ನಲಂಕರಿಸಿದರು. ಪರಮಹಂಸರು ಯಥಾವಿಧಿಯಾಗಿ ತಮ್ಮ ಲೌಕಿಕ ಪತ್ನಿಯನ್ನು ಜಗದ್ಧಾತ್ರಿಯಂತೆ ಆ ಮಹಾರಾತ್ರಿಯಲ್ಲಿ ಪೂಜಿಸಿ, ತಮ್ಮ ಸಾಧನೆಯ ಕೊನೆಯ ಅಂಕವನ್ನು ಮುಗಿಸಿದರು. ತುಸು ಹೊತ್ತಿನಲ್ಲಿಯೇ ಪೂಜಿಸುತ್ತಿದ್ದ ಪರಮಹಂಸರೂ ಪೂಜಿಸಲ್ಪಡುತ್ತಿದ್ದ ಶಾರದಾಮಣಿಯವರೂ ಸಮಾಧಿಸ್ಥರಾಗಿಬಿಟ್ಟರು ! ಆ ಮೇಲೆ ಪರಮಹಂಸರು ಯಾವುದೇ ತರಹ ಆಧ್ಯಾತ್ಮಿಕ ಸಾಧನೆಯನ್ನೂ ಮಾಡಲಿಲ್ಲ. ಇದಾದ ನಂತರ ಹಗಲನ್ನು ಅತ್ತೆಯ ಹತ್ತಿರವೂ ರಾತ್ರಿಯನ್ನು ಪರಮಹಂಸರ ಹತ್ತಿರವೂ ಕಳೆಯುತ್ತ, ಐದು ತಿಂಗಳು ಶಾರದಾಮಣಿ ದಕ್ಷಿಣೇಶ್ವರದಲ್ಲಿದ್ದರು. ಮುಂದೆ ಅವರು ಕೆಲದಿನಗಳ ವರೆಗೆ ತಮ್ಮ ಹಳ್ಳಿಯಾದ ಜಯರಾಮವಟಿಗೆ ಬಂದರು. ಕೂಡಲೇ ಅವರು ತಮ್ಮ ಮನೆಗೆಲಸಗಳನ್ನು ಪ್ರಾರಂಭಿಸಿದರು. ಹೀಗೆ ತಮ್ಮೆಲ್ಲರ ಮಧ್ಯದಲ್ಲಿ ಅಲೆಯುತ್ತಿದ್ದ ಈ ವ್ಯಕ್ತಿ, ಮುಂದೆ ಪ್ರಪಂಚದ ಪೂಜ್ಯ ಮಾತಾಜಿಯಾಗಿ ವಿಕಾಸಹೊಂದುವಳೆಂದು ಅದಾರು ಯೋಚಿಸಿದ್ದರು ?

ಮುಂದೆ ಕೆಲವು ದಿನಗಳಲ್ಲಿಯೇ, ಬಡತನದಲ್ಲಿಯೂ ಸುಖಸಂತೃಪ್ತವಾಗಿದ್ದ ಪೂಜ್ಯ ಮಾತಾಜಿಯವರ ಮನೆಯಲ್ಲಿ, ರಾಮಚಂದ್ರ ಮುಖ್ಯೋಪಾಧ್ಯಾಯರು ಕಣ್ಮರೆಯಾದರು. ಬಡತನದ ತಾಪತ್ರಯ ಮಿತಿಮೀರಿತು. ಆದರೂ ಎದೆಗುಂದದೆ, ತಾಯಿ ಶ್ಯಾಮಸುಂದರೀದೇವಿಯೂ ಪೂಜ್ಯ ಮಾತಾಜಿಯವರೂ ಸಂಸಾರದ ಹೊಣೆಹೊತ್ತು ನಿಂತರು. ಪರರ ಮನೆಯ ಕೂಲಿಯನ್ನು ಮಾಡಿ, ಅಕ್ಕಿಕುಟ್ಟಿ ಮಾತಾಜಿಯವರು ದಿನಗಳನ್ನು ನೂಕುತ್ತಿದ್ದರು. ಇದಲ್ಲದೆ ತಮ್ಮ ನಾಲ್ಕು ಜನ ಸಣ್ಣ ತಮ್ಮಂದಿರ ಜವಾಬ್ದಾರಿಯನ್ನು ಹೊತ್ತುಕೊಂಡರು. ಹೀಗಾಗಿ ಜಯರಾಮವಟಿಯಲ್ಲಿ ಮಾತಾಜಿಯವರು ಬಹಳ ಕಷ್ಟಪಡಬೇಕಾಯಿತು. ತಾಯಿ ಶ್ಯಾಮಸುಂದರೀದೇವಿ ಮತ್ತು ಮಾತಾಜಿಯವರ, ಅನವರತ ಪ್ರಯತ್ನದಿಂದ, ಮುಂದೆ ಅವರ ಪರಿಸ್ಥಿತಿ ಸುಧಾರಿಸಿತು. ಮಾತಾಜಿ ಎರಡನೆಯ ಸಲ ದಕ್ಷಿಣೇಶ್ವರಕ್ಕೆ ಬಂದರು. ಬರುವಾಗ ಭಯಂಕರ ಆಮಶೌಚವನ್ನು ಕಟ್ಟಿಕೊಂಡೇ ಬಂದರು. ಬೇನೆ ಉಲ್ಬಣಾವಸ್ಥೆಗೆ ಮುಟ್ಟಿತು. ಅಲ್ಲಿ ದಕ್ಷಿಣೇಶ್ವರದಲ್ಲಿ ಪರಮಹಂಸರು "ಜೀವನಕ್ಕೆ ಬಂದನಂತರ ಅವಳು ಜೀವನದ ಅಂತಿಮೋದ್ದೇಶವನ್ನು ಸಾಧಿಸದೆ ಹೊರಟುಹೋಗುವಳೇ ?" ಎಂದು ಕಾತರಪಡುತ್ತಿದ್ದರು. ಎಲ್ಲ ಔಷಧಗಳು ನಿರುಪಯುಕ್ತವಾದುವು. ಆದರೆ ಮಾತಾಜಿ ಕೊನೆಯ ಔಷಧವನ್ನು ಪ್ರಯೋಗಿಸಿದರು. ಅವರು ಬೇರೆಯವರ ಸಹಾಯದಿಂದ ಹಳ್ಳಿಯ ಮಹಾತಾಯಿ ಸಿಂಹವಾಹಿನಿಯೆದುರು ಆಮರಣ ಉಪವಾಸ ಮಾಡುವ ಸವಣಿಕೆಯಲ್ಲಿದ್ದರು ! ಸಿಂಹವಾಹಿನಿ ಮಾತಾಜಿಗೆ ಪ್ರತ್ಯಕ್ಷಳಾಗಿ ಕೆಲವು ಔಷಧಗಳನ್ನು ಹೇಳಿದಳು. ಬೇನೆ ಕಡಿಮೆಯಾಯಿತು. ಮಾತಾಜಿ ಮತ್ತೆ ದಕ್ಷಿಣೇಶ್ವರಕ್ಕೆ ಹೊರಟರು. ಇದೇ ಸಲ ಅವರು ಒಂಟಿಯಾಗಿ ಕಟ್ಟಡವಿಯಲ್ಲಿ ರಾತ್ರಿ ನಡೆದಾಗ, ಒರ್ವ ದರೋಡೆಗಾರ ಮತ್ತು ಅವನ ಪತ್ನಿಯ ಹೃದಯಪರಿವರ್ತನಮಾಡಿ, ಸಜ್ಜನರನ್ನಾಗಿ ಮಾಡಿದರು. ಆಗ ಮಾತಾಜಿಗೆ ಕೇವಲ ಇಪ್ಪತ್ತೈದು ವರ್ಷ.

ಪೂಜ್ಯ ಮಾತಾಜಿಯವರು ದಕ್ಷಿಣೇಶ್ವರದಲ್ಲಿ ಒಟ್ಟು ಹದಿಮೂರು ವರ್ಷಗಳಿದ್ದರು. ಅಲ್ಲಿ ಅವರು ಹಗಲಿನಲ್ಲಿ ಹೊರಗೆ ಬರುತ್ತಲೇ ಇರಲಿಲ್ಲ. ಪರಮಹಂಸರಿಗೆ ಆಧ್ಯಾತ್ಮಿಕ ಅನುಭವ ಅಪಾರವಾಗಿತ್ತು. ಹಾಗೆಯೇ ಮಾತಾಜಿಯವರಿಗೂ ಆಧ್ಯಾತ್ಮಿಕ ಅನುಭವ ಅಪಾರವಾಗಿತ್ತು. ಪರಮಹಂಸರಿಗೆ ಅದು ಬಾಹ್ಯರೂಪದಲ್ಲಿಯೂ ಅನೇಕ ಸಲ ಪ್ರಕಟವಾಗುತ್ತಿದ್ದಿತು. ಆದರೆ ಮಾತಾಜಿ ಮಾತ್ರ ತಮ್ಮ ಮೇಲೆ ಬಹು ಕಠೋರವಾದ ನಿಯಂತ್ರಣವನ್ನಿಟ್ಟುಕೊಂಡಿದ್ದರು. ಪರಮಹಂಸರು ಮಹಾಸಮಾಧಿಯನ್ನೈದಿದ ನಂತರವೇ

ಆ ಶಕ್ತಿ ಪ್ರಕಟವಾಯಿತು. ಆದಕ್ಕೂ ಮೊದಲು ಕೇವಲ ತುಸು ಜನರಿಗಷ್ಟೇ ಅದು ತಿಳಿದಿದ್ದಿತ್ತು. ಆದರೆ ಅಷ್ಟರಲ್ಲಿಯೇ ಅವರು ಎಲ್ಲರ ಮಾತಾಜಿಯಾಗಿದ್ದರು. ಅವರ ಪ್ರೀತಿಯ ಸುಧೆಯನ್ನಿಂಟದ ವ್ಯಕ್ತಿ ದಕ್ಷಿಣೇಶ್ವರದಲ್ಲಿ ಒಬ್ಬರೂ ಇರಲಿಲ್ಲ. ಆಗ ಅವರು ಪ್ರೇಮದ ಸಾಕಾರಮೂರ್ತಿಯಾಗಿದ್ದರು ಅವರು ಯಾವಾಗಲೂ ಶಾಂತರೂ ಗಂಭೀರರೂ ಆಗಿದ್ದರು. ಪರಮಹಂಸರ ಶಿಷ್ಯರಿಗೆಲ್ಲ ಅವರು ಅಡಿಗೆ ಮಾಡಬೇಕಾಗಿತ್ತು. ಕೆಲಕೆಲವು ಸಲ ಬೇರೆ ಬೇರೆ ತರದ ಅಡಿಗೆಯನ್ನೂ ಮಾಡಬೇಕಾಗುತ್ತಿತ್ತು. ಪರಮಹಂಸರೊಮ್ಮೆ ಸಿಟ್ಟಿಗೆದ್ದು "ಎಲ್ಲ ಕಾರ್ಯವನ್ನೂ ನಾನೊಬ್ಬನೇ ಮಾಡಬೇಕೆ? ನೀನೇನು ಸಹಾಯ ಮಾಡುವುದಿಲ್ಲವೆ?" ಎಂದಾಗ ಮಾತಾಜಿ ಕೇಳಿದ್ದರು: "ನಾನೇನು ಮಾಡಬಲ್ಲೆ?" ಪರಮಹಂಸರು ನಗುತ್ತ ಹೇಳಿದರು: "ನೀನು ಅಸಾಧ್ಯ ಕಾರ್ಯಗಳನ್ನೂ ಸಾಧಿಸಬಲ್ಲೆ." ಒಮ್ಮೆ ಸಂಗಾತಿಯೊಬ್ಬಳ ಮುಖಾಂತರ ತಮಗೂ ನಿರ್ವಿಕಲ್ಪ ಸಮಾಧಿಯ ಪ್ರಸಾದ ಸಿಗಬೇಕೆಂದು ಪರಮಹಂಸರಿಗೆ ಹೇಳಿಕಳುಹಿದರು. ಆ ಸಂಗಾತಿ ಪರಮಹಂಸರು ಇಲ್ಲವೆಂದರೆಂದು ಸುದ್ದಿಯನ್ನು ತರುವಷ್ಟರಲ್ಲಿಯೇ ಮಾತಾಜಿ ನಿರ್ವಿಕಲ್ಪ ಸಮಾಧಿಯಲ್ಲಿ, ಅಚಿಂತ್ಯ ಅವ್ಯಕ್ತ ಬ್ರಹ್ಮನಲ್ಲಿ ಲೀನವಾಗಿಬಿಟ್ಟಿದ್ದರು!

ಮಾತಾಜಿ ಬೆಳಗು ಮುಂಜಾನೆ ಮೂರು ನಾಲ್ಕರ ನಡುವೆ ಏಳುತ್ತಿದ್ದರು. ದಿನಾಲು ಗಂಗಾಸ್ನಾನ ಮಾಡಿ ಬಂದು ಧ್ಯಾನಯುಕ್ತರಾಗಿ, ಧಾರ್ಮಿಕ ಕೃತ್ಯಗಳನ್ನೆಲ್ಲ ಚಾಜೂತಪ್ಪದೇ ನೆರವೇರಿಸಿ, ದಿನದ ಲೌಕಿಕ ಕೃತ್ಯಗಳ ಕಡೆ ಹೊರಳುತ್ತಿದ್ದರು. ಸಂಜೆಯ ಮುಂದೂ ಒಮ್ಮೆ ಪ್ರಾರ್ಥನೆ ಧ್ಯಾನಗಳನ್ನು ಮಾಡುತ್ತಿದ್ದರು ಪ್ರಪಂಚದ ಯಾವ ತಾಯಿಯನ್ನೂ ಮೀರಿಸುವ ಆರಯಿಕೆಯನ್ನು ಮಾತಾಜಿ ಪರಮಹಂಸರಿಗೆ ಮಾಡುತ್ತಿದ್ದರು ಎಂತಲೇ ಪರಮಹಂಸರು ಮಾತಾಜಿಗೆ ತುಸುವೇ ನೋವಾದರೆ ಸರಿ, ಎಲ್ಲವನ್ನೂ ಮರೆಯುತ್ತಿದ್ದರು. ಪ್ರಪಂಚದ ಮಹಾ ದುಃಖ-ದುಮ್ಮಾನಗಳನ್ನು ಧೀರತನದಿಂದ ಎದುರಿಸಿ ನಿಲ್ಲಬಲ್ಲವರಾದ ಪರಮಹಂಸರು, ಶಾರದಾಮಣಿ ನೊಂದುಕೊಂಡರೂ ಭಯಪಡುತ್ತಿದ್ದರು: "ರಮಾಲ ಇನ್ನೇನು ಮಾಡೋಣ? ಅವಳಿಗೆ ತಲೆಶೂಲೆಯಿದ್ದಿದೆಯಂತಲ್ಲ!" ಎಂದು ಗಾಬರಿಯಾಗುತ್ತಿದ್ದರು. ಪತಿ-ಪತ್ನಿಯರಿಬ್ಬರೂ ಯಾವಾಗಲೂ ಆಧ್ಯಾತ್ಮಿಕ ಪ್ರಪಂಚದಲ್ಲಿದ್ದು, ಅನುಭಾವದ ಉಚ್ಚಮಟ್ಟದ ಮಾತುಗಳಲ್ಲಿಯೇ ಮಗ್ನರಾಗಿರುತ್ತಿದ್ದರೂ ಅವರ ಜೀವನ ಹಾಸ್ಯಮಯವೂ ಆಗಿದ್ದಿತು. ಒಂದು ಸಲ ಮಾತಾಜಿ ತುಸು ಹೊತ್ತು ಹೆಚ್ಚು ಮಲಗಿಕೊಂಡಿದ್ದರು. ಹಾಯ್ದು ಹೋಗುತ್ತಿದ್ದ ಪರಮಹಂಸರು ಅದನ್ನು ಕಂಡು, ಅವರ ಮೇಲೆ ತಣ್ಣೀರೆರಚಿ ಸುಮ್ಮಗೆ ಹೊರಟುಹೋದರು. ಇನ್ನೊಮ್ಮೆ ಪರಮಹಂಸರಿಗೂ ಅವರ ಶಿಷ್ಯರೊಬ್ಬರಿಗೂ ಯಾರು ಹೆಚ್ಚು ಸುಂದರರೆಂಬುದರ ಬಗ್ಗೆ ವಾದ ಸುರುವಾಯಿತು. ಮಾತಾಜಿ ಸೌಂದರ್ಯ ಪರೀಕ್ಷಕರಾಗಿ ನಿಯೋಜಿತರಾದರು. ಅವರ ಕೋಣೆಯ ಮುಂದೆ ಪರೀಕ್ಷಾರ್ಥಿಗಳಾದ ಪರಮಹಂಸರೂ ಅವರ ಶಿಷ್ಯರೂ ನಡೆಯುತ್ತ ಹೋದರು. ಆದರೆ ಮಾತಾಜಿಯವರ ನಿರ್ಣಯ ಪರಮಹಂಸರ ವಿರುದ್ಧವಾಗಿತ್ತು. ಇನ್ನೊಮ್ಮೆ ಪರಮಹಂಸರು ಕಾಳೀಮಾತೆಯ ಪೂಜೆ ಮಾಡಿ ತಾವು ಪ್ರತಿ ತಿಂಗಳೂ ಸ್ವೀಕರಿಸುತ್ತಿದ್ದ ಎಂಟು ರೂಪಾಯಿಗಳನ್ನು ಕೂಡಿಸಿಟ್ಟು, ಶಾರದಾಮಣಿಗೆ ಬಂಗಾರದ ಬಳೆಗಳನ್ನು ಮಾಡಿಸಿಕೊಟ್ಟು ಹೇಳಿದರು "ಶಾರದಾ, ಎಲ್ಲರೂ ವಸ್ತ್ರವಡವೆಗಳನ್ನಿಟ್ಟುಕೊಂಡರೂ ನನಗೇನಿಲ್ಲ ಎಂದು ಅಸಮಾಧಾನಪಡಬೇಡ." ಎಲ್ಲಕ್ಕಿಂತ ಹೆಚ್ಚಾಗಿ ಶಾರದಾಮಣಿ ದಕ್ಷಿಣೇಶ್ವರದಲ್ಲಿ ಸರ್ವ ವಿದ್ಯೆಗಳಲ್ಲಿ ಶ್ರೇಷ್ಠವಾದ ಆಧ್ಯಾತ್ಮವಿದ್ಯೆಯನ್ನು ಕಲಿತರು. ಸರ್ವರ ಮಧ್ಯದಲ್ಲಿಯೇ ಸದಾಕಾಲವಿದ್ದರೂ ಅವರೆಂಥ ಆಧ್ಯಾತ್ಮಿಕ ಖಣಿಯು ಆಗಿದ್ದರೆಂಬುದನ್ನರಿತವರು ಬಹು ತುಸು ಜನರು ಮಾತ್ರ. ಕೇವಲ ಒಂದೆರಡು ಪ್ರಸಂಗಗಳನ್ನು ಬಿಟ್ಟರೆ ಕೆಲ ಜನರು ಕೂಡ ಸಮಾಧಿಸ್ಥ ಮಾತಾಜಿಯನ್ನು ಕಂಡಿರಲಿಲ್ಲ. ಪರಮಹಂಸರ ಇಚ್ಛೆ-ಆಜ್ಞೆಗಳನ್ನು ಮೀರಿ ಮಾತಾಜಿ ಶಿಷ್ಯರನ್ನು ಉಪಚರಿಸುತ್ತಿದ್ದರು. ಪರಮಹಂಸರು ಆಗಾಗ ಮಾತಾಜಿಗೆ ಉಪದೇಶ ಮಾಡುತ್ತಿದ್ದರೂ ಅವರನ್ನು ಆಧ್ಯಾತ್ಮಿಕ ಪ್ರಪಂಚದಲ್ಲಿ ತಮ್ಮ ಸರಿಸಮಾನರಂತೆಯೆ ಎಣಿಸುತ್ತಿದ್ದರು. ಪರಮಹಂಸರು ಹೇಳುತ್ತಿದ್ದರು: "ಕಾರ್ಗತ್ತಲೆಯಲ್ಲಿ ಜನರೆಲ್ಲ ಹುಳುಗಳಂತೆ ವಾಸಿಸುತ್ತಿದ್ದಾರೆ. ನೀನು ಅವರೆಲ್ಲರ ಯೋಗಕ್ಷೇಮವನ್ನು ನೋಡಲೇ ಬೇಕು."

ಪೂಜ್ಯಮಾತಾಜಿ ಪರಮಹಂಸರಂತೆ ತ್ಯಾಗಮೂರ್ತಿಯಾಗಿದ್ದರು. ಒಮ್ಮೆ ಪರಮಹಂಸರ ಒರ್ವ ಶಿಷ್ಯನು ಅವರ ಹೆಸರಿನಲ್ಲಿ ಬಹಳಷ್ಟು ಹಣವನ್ನು ಬ್ಯಾಂಕಿನಲ್ಲಿಡಬಯಸಿದನು. ಪರಮಹಂಸರು ತಮ್ಮನ್ನು ತಪ್ಪಿಸಿಕೊಳ್ಳಲು ಮಾತಾಜಿಯವರ ಹೆಸರಿನಲ್ಲಿಡಲು ಹೇಳಿದರು. ಮಾತಾಜಿ ಕೂಡಲೇ ಅದನ್ನು ತಿರಸ್ಕರಿಸಿದರು. ಮುಂದೆ ಪರಮಹಂಸರ ನಿರ್ವಾಣದ ನಂತರ, ತೀರ್ಥಯಾತ್ರೆಯಲ್ಲಿ ಅವರು ರಾಮನಾಡದ ಸಂಸ್ಥಾನಿಕನ ಅರಮನೆಗೆ ಬಂದಿದ್ದರು. ಅರಸು ತನ್ನಲ್ಲಿದ್ದ ವಜ್ರ-ವೈಡೂರ್ಯ ಐಶ್ವರ್ಯಗಳನ್ನೆಲ್ಲ ತೋರಿಸಿ, ಮಾತಾಜಿಗೆ- ಅದರಲ್ಲಿ ಏನು ಬೇಕೋ ಅದನ್ನು ತೆಗೆದುಕೊಂಡು ಅನುಗ್ರಹಿಸಲು- ಬಿನ್ನವಿಸಿದನು ಮಾತಾಜಿ ಅಲ್ಲಿಯ ಹುಲ್ಲುಕಡ್ಡಿಯನ್ನೂ ಮುಟ್ಟದೆ ಹಾಗೆಯೇ ಬಂದರು. ಮುಂದೆ ಪರಮಹಂಸರ ಗಂಟಲಿಗೆ ಕ್ಯಾನ್ಸರ್ ರೋಗ ಬಂದಿತು. ಶಿಷ್ಯರ ಮತ್ತು ಮಾತಾಜಿಯವರ ಅಪ್ರತಿಮ ಆರಯಿಕೆ ಉಪಚಾರಗಳನ್ನು ಲೆಕ್ಕಿಸದೆ, ಮೃತ್ಯು ಅವರನ್ನು ಎತ್ತಿಕೊಂಡು ಹೋಯಿತು. ಪರಮಹಂಸರು ಮಹಾಸಮಾಧಿಯಲ್ಲಿ ಲೀನರಾದರು. ಆದರೆ ಮಾತಾಜಿ ಮಾತ್ರ ವಿಧವೆಯಂತೆ ವೇಷ ಧರಿಸಲಿಲ್ಲ. ಹಾಗೊಮ್ಮೆ ಪ್ರಯತ್ನಿಸಿದಾಗ ಪರಮಹಂಸರು ಬಂದು, "ಏನು? ನೀನು ಕೂಡ ನಾನು ಹೋದೆನೆಂದೇ ತಿಳಿದೆಯಾ? ನಾನೆಲ್ಲಿ ಹೋದೆ? ನೀನು ಜನನಿಂದೆಯನ್ನು ಕೇಳಬೇಡ. ವಿಧವೆಯ ವೇಷವನ್ನು ನೀನೆಂದಿಗೂ ಧರಿಸಕೂಡದು." ಎಂದು ಹೇಳಿದರು.

ಮಾತಾಜಿ ಕೆಲ ದಿನಗಳವರೆಗೆ ಜಯರಾಮವಟಿಗೆ ಬಂದರು. ಇಂತಹ ಆಧ್ಯಾತ್ಮಶಕ್ತಿರೂಪಿಣಿಯಾದ ಮಾತಾಜಿ, ಪ್ರಪಂಚದ

...ಯ ಅನುಭಾವಿ ಪರಮಹಂಸರ ಪತ್ನಿ, ಪ್ರಪಂಚದ ಆತ್ಮ...ನ್ನೇ ನಡುಗಿಸಿ ವೇದಾಂತದ ಜಯಭೇರಿಯನ್ನು ಹೊಡೆದ ...ವೇಕಾನಂದರಂತಹ ಅದ್ವಿತೀಯ ಸಂನ್ಯಾಸಿಗಳ ಮಹಾತಾಯಿ— ...ಗದ್ಧಾತ್ರಿ, ತಮ್ಮ ಹಳ್ಳಿಯಲ್ಲಿ ತಮ್ಮಂದಿರಿಗೆ ಅಕ್ಕನಾಗಿ, ತಾಯಿಗೆ ...ಗಳಾಗಿ, ಹಳ್ಳಿಯ ಹಿರಿಯರಿಗೆ ಅದೇ "ಶಾರದೆ"ಯಾಗಿ, ಮನೆ...ಸಗಳನ್ನು ಮಾಡುತ್ತ ಸಾಮಾನ್ಯ ಸ್ತ್ರೀಯಂತೆ ಇರತೊಡಗಿದರು. ...ರೆ ಕೆಲದಿನಗಳ ನಂತರ ಅವರು ಜಯರಾಮವಟಿಯನ್ನು ...ಟ್ಟು ತಮ್ಮ ಅತ್ತೆಯ ಮನೆಯಲ್ಲಿಯೇ ಬಂದಿರತೊಡಗಿದರು. ಅಗ ...ತ್ರ ಅವರು ಅತ್ಯಂತ ದಾರುಣವಾದ ದಿನಗಳನ್ನು ಕಳೆಯ...ಕಾಯಿತು. ಎಷ್ಟೋ ದಿನ ಅವರು ಆಹಾರವಿಲ್ಲದೆಯೇ ಇರ...ಕಾಗುತ್ತಿತ್ತು. ಬಡತನದ ತಾಪತ್ರಯ ಮಿತಿಮೀರಿತ್ತು. ಈ ...ದ್ದಿ ತಾಯಿಗೆ ಮುಟ್ಟಿದರೂ, ಮಾತಾಜಿ ಅಲ್ಲಿಗೆ ಹೋಗಲೊಪ್ಪ...ಕ. ಅಶೋಕವನದಲ್ಲಿ ಶೋಕಮೂರ್ತಿಯಾಗಿ ಹಗಲು ರಾತ್ರಿ ...ಹತ್ತು ತಿಂಗಳೂ ಕೊರಗಿದ ಸೀತಾಮಾತೆ ಎಂದಾದರೂ ...ರೆದುರಿಗಾದರೂ ತನ್ನ ಅಗಮ್ಯವೆನಿಸಿದ ದುಃಖವನ್ನುಸುರಿದರೆ? ...ರ ಶಿಷ್ಯರಿಗೆ ಮಾತ್ರ ಈ ಸುದ್ದಿ ಗೊತ್ತಾಗಲಿಲ್ಲ. ಅವರೆಲ್ಲ ...ವ್ರಾಜಕರಾಗಿ ಭರತಭೂಮಿಯನ್ನು ಸುತ್ತುತ್ತಿದ್ದರು. ಕೆಲವು ...ಲದ ನಂತರ ಅವರಲ್ಲಿ ಕೆಲವರಿಗೆ ಇದು ತಿಳಿದು, ಅವರು ಮಾತಾ...ಗೆ ದುಡ್ಡಿನ ಅಡಚಣೆ ಎಂದಿಗೂ ಆಗದಂತೆ ಮಾಡಿದರು. ಪರಮ...ಸರ ಮಹಾಸಮಾಧಿಯ ನಂತರ ಪೂಜ್ಯಮಾತಾಜಿ, ಮೂವತ್ತು...ಲ್ಕು ವರ್ಷ ಜೀವಿಸಿದ್ದರು. ಮಾತಾಜಿ ಅಖಿಲ ಭಾರತದ ಸರ್ವ...ರ್ಥಕ್ಷೇತ್ರಗಳನ್ನೂ ಮೂರು ಸಲ ಸುತ್ತಿದರು. ವೃಂದಾವನದಲ್ಲಿ ...ದುವರೆ ವರ್ಷವಿದ್ದರು. ಅಲ್ಲಿಯೇ ಪರಮಹಂಸರು, ಮಾತಾಜಿಗೆ ...ರಿಗೆ ದೀಕ್ಷೆಕೊಡಲು ಆಜ್ಞಾಪಿಸಿದರು. ಅಂದಿನಿಂದ ಮಾತಾಜಿ ...ನೆಯ ಗಳಿಗೆಯ ವರೆಗೂ, ಸಾವಿರಾರು ಸ್ತ್ರೀಪುರುಷರಿಗೆ ಜಾತ...ನವಿಲ್ಲದೆಯೇ ದೀಕ್ಷೆಕೊಟ್ಟರು. ಪರಮಹಂಸರು ತಮ್ಮ ಶಿಷ್ಯ...ನ್ನ ನೋಡಿ ಆರಿಸುತ್ತಿದ್ದರು. ಮಾತಾಜಿ ಮಾತ್ರ ಹಾಗೆಂದಿಗೂ ...ಡಲಿಲ್ಲ. ತಾಯಿಗೆಂದಾದರೂ ಮಕ್ಕಳಲ್ಲಿಯ ಕುಂದುಕೊರತೆ ...ತೆ? ರಾಮಕೃಷ್ಣ ಮಠದ ಉಚ್ಚ ಸಂನ್ಯಾಸಿಯೊಬ್ಬರು ಅನ್ನು...ರು: "ನಾವು ನುಂಗಲಾರದ ವಿಷವನ್ನೆಲ್ಲ ಪೂಜ್ಯ ಮಾತಾಜಿ...ವರ ಅಡಿಯಲ್ಲಿ ಅರ್ಪಿಸುತ್ತೇವೆ." ಮಾತಾಜಿ ಆ ವಿಷವನ್ನೀಂಟಲು ... ಸಿದ್ಧರಾಗಿಯೇ ಇದ್ದರು. ನಿರ್ವಿಕಲ್ಪಸಮಾಧಿ ಸಿದ್ಧಿಸಿದ ...ರವೂ ಅವರು ಸಾಧನೆಯನ್ನು ಬಿಡಲಿಲ್ಲ. "ಇನ್ನೂ ಸಾಧನೆ...ನ್ನೇಕೆ ಮಾಡುವಿರಿ ?" ಎಂದು ಒಬ್ಬರು ಕೇಳಿದಾಗ ಮಾತಾಜಿ ...ದ್ದರು: "ಈ ಸಾಧನೆ ನನಗಾಗಿ ಅಲ್ಲ. ನನ್ನನ್ನು ನಂಬಿದ ...ಳಿಗಾಗಿ." ಮಾತಾಜಿಯವರ ಆಧ್ಯಾತ್ಮಿಕಮಟ್ಟವನ್ನು ಸೂಚಿ...ಕೆಲ ಉಕ್ತಿಗಳಿವು: "ನನ್ನ ಆಶೀರ್ವಾದ ಪಡೆದವ್ಯಕ್ತಿ ಮುಂದೆ ಮುಕ್ತಿಯನ್ನು ಕುರಿತು ಚಿಂತಿಸಬೇಕಿಲ್ಲ" "ನಾನು ಮತ್ತು ಪರಮಹಂಸರು ಒಂದೇ." "ನೀವು ನನ್ನನ್ನು ನೆನಪಿನಲ್ಲಿಟ್ಟು ಧ್ಯಾನಿಸಿರಿ, ಅಷ್ಟೇ ಸಾಕು!"

ಮಾತಾಜಿ ತಮ್ಮ ಅವತಾರ ಸಮಾಪ್ತಿಯಾಗುವ ಕಾಲ ಸನ್ನಿಹಿತವಾದಾಗ ಹೇಳಿದರು: "ಗುರುವನ್ನು ಕಂಡಮೇಲೂ ಅದೇಕೆ ಹೆದರುವಿ ? ಇಡೀ ವಿಶ್ವವನ್ನೇ ನಿನ್ನ ಕುಟುಂಬವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸು. ಯಾರೂ ಪರಕೀಯರಲ್ಲ. ಇಡೀ ವಿಶ್ವವೇ ನಿನ್ನದು! "ಇದು ಮಾತಾಜಿಯವರ ಕೊನೆಯ ಆಧ್ಯಾತ್ಮಿಕ ಉಕ್ತಿ. ಯಾವ ಅವ್ಯಕ್ತ ಚೈತನ್ಯದ ವ್ಯಕ್ತರೂಪವಾಗಿ ಮಾತಾಜಿ ಅರುವತ್ತೇಳು ವರ್ಷ ಜೀವನ ನಡೆಸಿದರೊ, ಹತ್ತೊಂಬತ್ತುನೂರಾ ಇಪ್ಪತ್ತನೆಯ ಇಸ್ವಿಯ ಜುಲಾಯಿ ಇಪ್ಪತ್ತನೆಯ ದಿನ ಬೆಳಗು ಮುಂಜಾನೆ ಅದೇ ಅವ್ಯಕ್ತದಲ್ಲಿ ಲೀನವಾದರು. ಪರಮಹಂಸರೊಮ್ಮೆ ತಮ್ಮ ಅತ್ತೆಯವರಿಗೆ ಹೇಳಿದ್ದರು: "ನೀವು ನಿಮ್ಮ ಮಗಳಿಗೆ ಮಕ್ಕಳಾಗಲಿಲ್ಲವೆಂದು ಚಿಂತಿಸಬೇಡಿರಿ. ನನ್ನ ತರುವಾಯ ಇಡೀ ಪ್ರಪಂಚದ ತುಂಬೆಲ್ಲ ನಿಮ್ಮ ಮಗಳಿಗೆ ಎಲ್ಲರೂ 'ತಾಯಿ' ಎಂದೇ ಅನ್ನುವರು!" ಅವರ ಶಬ್ದಗಳು ಎಷ್ಟೊಂದು ಸತ್ಯಪೂರ್ಣವಾಗಿದ್ದುವು. ಶಾರದಾಮಣಿ ರಾಮಕೃಷ್ಣರ ಪತ್ನಿಯೆಂದು ಮನ್ನಿಸಲ್ಪಡುತ್ತಿರುವುದಿಲ್ಲ, ಅವರ ಆಧ್ಯಾತ್ಮಿಕತೇಜಸ್ಸು, ಶಕ್ತಿ, ಅವರ ವಿಶ್ವಪ್ರೇಮಗಳು ಅವರಿಗೆ ಆ ಸ್ಥಾನವನ್ನು ದೊರಕಿಸಿ ಕೊಟ್ಟಿವೆ.



ಜಗವಿದೊಂದು ಕಲೆಯ ಬೀಡು

ಶ್ರೀ. ಸಿ. ಎಂ. ದೇವೇಂದ್ರನಾಯಕ, ಧಾರವಾಡ

★

ಜಗವಿದೊಂದು ಕಲೆಯ ಬೀಡು ದೇವನದರ ಶಿಲ್ಪಿಯು ;
ನೋಡಿದನಿತು ಇದರ ಆಳ, ಸೌಂದರ್ಯದ ವ್ಯಾಪ್ತಿಯು !

೧

ಭೂಮಿಯಿದುವೆ ಕಲೆಯ ನೆಲೆಯು ವ್ಯೋಮವದರ ಆರಳಿಕೆ !
ಕಲೆಯ ಫಲವು ಇಲ್ಲಿ ಮಾಗಿ ಜೀವಕಳೆಯು ಪಡೆಯುತೆ—
ಜೀವಕೋಟಿ ಸಸ್ಯರಾಶಿ ಕಲೆಯ ಹೊತ್ತು ನಿಲ್ಲುತೆ—
ನಿತ್ಯ ಮೂಡು-ಮುಳುಗಿನಲ್ಲಿ ಬೆಳೆವುದು ಚಿಗುಚಿಗುರುತೆ.
ಜಗವಿದೊಂದು ಕಲೆಯ ಬೀಡು, ದೇವನದರ ಶಿಲ್ಪಿಯು !

೨

ರವಿಯು ರಂಗನೊಮ್ಮೆಯೆರಚಿ ನೋಡಿ ತಣಿಯಲಾರದೆ
ಚಂದ್ರನ ಪ್ರಭೆಯೊರಿಸಿಟ್ಟು ಕುಶಲ ಶಿಲ್ಪಿ ನೋಡುವ—
ಕತ್ತಲನ್ನು ಕಳಿಸಿ ಜಗಕೆ ಮಿಣುಕುಚಿಕ್ಕೆ ಬೆಳಗಿಸಿ
ಮಿನುಗು ಬೆಳಕಿನಲ್ಲಿ ಕಲೆಯ ಹಿರಿಮೆ ಕಾಣ ಬಯಸುವ—
ಜಗವಿದೊಂದು ಕಲೆಯಬೀಡು, ದೇವನದರ ಶಿಲ್ಪಿಯು !

೩

ಭರದ ಗಾಳಿ-ಮಳೆಯ ಸೆಳೆತ ಮಿಂಚುಗುಡುಗು ಸಿಡಿಲಿನ
ಪ್ರಳಯ ರೂಪಗಳನು ತೋರಿ ಕುಣಿದು ನೋಡ ಬಯಸಿಹ—
ಮುಗಿಲು ಕರಗಿ ನೀರುಸುರಿದು ಹಳ್ಳ ಕೊಳ್ಳ ನದಿಗಳು
ಕಡಲಸರಿಸಿ ತುಂಬಿ ಹರಿದು ಅಲ್ಲಿ ನೆಲೆಯನೊಂದಿಹ—
ಜಗವಿದೊಂದು ಕಲೆಯ ಬೀಡು, ದೇವನವರ ಶಿಲ್ಪಿಯು !

೪

ಸೃಷ್ಟಿದೇವಿ ಕಲೆಯ ರಾಣಿ ಅವಳ ನೆರವಿನಲ್ಲಿಯೆ
ಕೊನೆಯ ಕುಂಚನೆತ್ತಿ ತೀಡಿ ಸಿರಿಯ ನಿಂತುನೋಡುವ—
ದಿನವು ರಾತ್ರಿ ಮಾಸ ವರುಷ ಯುಗಕಲ್ಪವು ಕಳೆದರೂ
ಕಲೆಯ ಪ್ರತಿಭೆ ಹೆಚ್ಚಿ ಹೆಚ್ಚಿ, ಅದನು ನಿತ್ಯ ಮೆರೆಸುವ—
ಜಗವಿದೊಂದು ಕಲೆಯಬೀಡು ದೇವನವರ ಶಿಲ್ಪಿಯು !

ಒಲವೇ ಗೆಲವು

ಶ್ರೀ. ಬಾಳು ಬಿ. ಉಪಾಧ್ಯೇ, ತವನೇವಾಡಿ

ನೀನು ಬಂದ ದಿನವೆ ನನ್ನ ಬಾಳ ಬಳ್ಳಿ ಕೊನರಿತು—
ನಿನ್ನೊಲುಮೆಯ ಸವಿದೊಡನೆಯೆ ಹೃದಯಕಮಲವರಳಿತು !

ಮಧುರಬಿಂಬದಿಂದ ಮಧುನಿ-
ನಧರಬಿಂಬ ನಲಿಯಿತು,
ಸಕಲಭಾಗ್ಯ ಬಂತು ಮನೆಗೆ
ಮನದ ಬಯಕೆ ಸಲಿಸಿತು. ॥ ೧ ॥

ಕೇಳು ಕಾಂತೆ ! ಹೇಳು ಶಾಂತೆ,
ನನ್ನ ನಿನ್ನ ಬಾಳುವೆ—
ಕರುಣೆ ತುಂಬಿದಂಥ ಶರಧಿ-
ಯಲ್ಲಿ ಮುಳುಗಿ ಏಳುವ ! ॥ ೨ ॥

ಇಂದಿನಿಂದ ಎಂದಿನವರೆಗೆ
ಕೂಡಿ ಜೋಡಿಯಾಗುವ—
ಮುಂದೆಯು ನಿಲ್ಲಿಸಲು ಬಾಳ
ತಾಯಿ-ತಂದೆಯಾಗುವ ! ॥ ೩ ॥

ನಮ್ಮ ನಾಡು ನಮ್ಮ ತಾಯಿ !
ಸೇವೆಯುದಕೆ ಸಲಿಸುವ—
ನಮ್ಮ ನಾಡ ಜೀವಕುಲಕೆ
ಪ್ರೀತಿಪಾಠ ಕಲಿಸುವ ! ॥ ೪ ॥

ನಾಡಿಗಾಗಿ ದುಡಿವ ವೀರ-
ಧೀರರನ್ನು ಹರಸುವ
ಒಡಕು ಮನವನೊಂದುಮಾಡಿ
ನಾಡಗುಡಿಯ ಮೆರೆಸುವ ॥ ೫ ॥

ನೀನು ಬಂದ ದಿನವೆ ನನ್ನ
ಬಾಳ ಬಳ್ಳಿ ಕೊನರಿತು—
ನಿನ್ನೊಲುಮೆಯ ಸವಿದೊಡನೆಯೆ
ಹೃದಯಕಮಲವರಳಿತು ! ॥ ೬ ॥

ಅವಳೇ ಇವಳು !

(ಸಣ್ಣ ಕತೆ)

ಶ್ರೀ. ಎಲ್. ವ್ಹಿ. ಸೂರಣಗಿ, ಧಾರವಾಡ

★

ಮಾಜಿಕ ರೂಢಿಗಳು, ಪ್ರಾಕೃತಿಕ ಆಕರ್ಷಣೆ ...ರಡರ ತೊಡಕಿನಲ್ಲಿ ಸಿಕ್ಕ ಪ್ರತಿಯೊಂದು ಹೆಣ್ಣು-...ನ ಬಾಳೂ ಒಂದೊಂದು ಅದ್ಭುತರಮ್ಯ ಕತೆ-ಯಾಗುವುದು !

★

...ಣಿಗೆಯ ಕೆಲಸದಲ್ಲಿ ತಲ್ಲೀನಳಾಗಿ ಕುಳಿತ ಸುಂದರಿ, ಸಾಯನ್-ಗಂಟೆಯ ನಿನಾದ ಕೇಳಿ ತಲೆಯೆತ್ತಿ ನೋಡಿದಳು. ಮಾಡಿಕೆ-...ತೆ ದೃಷ್ಟಿ ಕೂಡಿದುವು ಆ ದೃಷ್ಟಿಯಲ್ಲಿ ಹೃದಯಮಿಲನಕ್ಕಾಗಿ ...ೂರೆಯುವ ಛಾಯೆ ತೋರುತ್ತಿತ್ತು ! ಬಹುದಿನದ ಬಯಕೆ-ಅಧರ ಕಂಪಿಸುತ್ತಿತ್ತು !! ಗವಿಯ ಬರುವಿಕೆ ಕಾದು ಕಾದು, ...ೆಯನ್ನು ಬಿಚ್ಚಿನಿಂದ ಪಂಕಜದ ಪಕಳೆಯಂತೆ, ಸುಂದರಿಯ ...ಣ್ಣದ ಬಾಡಿದ ಕೆನ್ನೆ ಬಿಚ್ಚಿತು ! ತುಟಿಯೊಳಗೆ ಗುಪ್ತ-...ನಿಯಾಗಿ ಹುದುಗಿದ್ದ ಮುಗುಳ್ನಗೆ ಹೊರಬಂದಾಗ, ಸುಂದ-...ತೇಜೋವದನಕ್ಕೊಂದು ತೇಜಸ್ಸು ಸೂಸುತ್ತಿತ್ತು ! ಕೈ-...ಯ ಹೆಣಿಗೆಯ ವಸ್ತ್ರ ಹಾಗೆ ಬಿತ್ತು. ಅದಕ್ಕೆ ಪ್ರತ್ಯು-...ವೋ ಎಂಬಂತೆ, ಸಾಯನ್‌ಕಲ್ ಹಿಡಿದ ಕೈಯಿಂದ ಒಂದು ...ದದ ಚೂರು ಗಾಳಿಗೆ ಹಾರುತ್ತ ಅವಳ ಬದಿಯಲ್ಲಿಯೇ ಬಿತ್ತು. ...ರಿ ಧಾವಿಸಿ ಬಂದು ಅದನ್ನು ಓದಿದಳು. ಅದರಲ್ಲಿದ್ದುದು, ...ಬಯಸಿದ ಅಪ್ರತ್ಯಕ್ಷ ಹೃದಯಗಳ ಸಂದೇಶ ! ಅವನ ...ಶ ಇವಳಿಗೆ ಮುಟ್ಟಿದ್ದು ಈ ದಿನವೇ !

...ಂದರಿಯ ಮನೆ ಆ ಊರಿನ 'ದೇವೀಕೆರೆ'ಯ ಒಂದು ...ಯಲ್ಲಿ. 'ದೇವೀಕೆರೆ' ಸಮಾಂತರಭುಜ ಚೌಕೋನಾ-...ರದು. ಅದರ ಯಾವ ಕೋನದಲ್ಲಿ ನಿಂತು ನೋಡಿದರೂ, ...ಳಂತಿರುವ ನಾಲ್ಕು ಗೋಡೆಗಳು ಸಮನಾಗಿ ತೋರುತ್ತಿ-... ಒಂದು ಕೋನದಲ್ಲಿ ಸುಂದರಿಯ ಮನೆ; ಮತ್ತೊಂದರಲ್ಲಿ ...ಯ ದೇವಾಲಯ. ಪ್ರಭಾತಕಾಲದ ತಂಪು ಕಿರಣಗಳಿಂದ ...ವಾಗಿ ಬಳುಕುತ್ತಿರುವ ಆ ಕೆರೆಯಲ್ಲಿಯ ಕಮಲಪುಷ್ಪಗಳು, ...ನೈವೇದ್ಯ ಮಾಡಿ ಮೀಸಲುಮುರಿದಂತೆ ತೋರುತ್ತಿರುವುವು. ...ಯ ಪೂಜಾರಿಯೆ ಸುಂದರಿಯ ತಂದೆ. ಸುಂದರಿ ಈ ಲೋಕಕ್ಕೆ ...ಗ, ಅವಳ ತಾಯಿ ಮತ್ತೊಂದು ಲೋಕಕ್ಕೆ ಹೊರಟು ನಿಂತಳು. ಬಹುದಿವಸ ಬಯಸಿದ ತನ್ನದಾದ ಮುದ್ದು ಕಾಣಿಕೆ-ಸುಂದರಿಯನ್ನು ಜತನದಿಂದ ಒಪ್ಪಿಸಲು ಅಪ್ಪಣ್ಣನಿಗೆ ಬಿಟ್ಟು-ಹೋಗಿದ್ದಳು. ಅಪ್ಪಣ್ಣ ಸುಂದರಿಗೆ ತಾಯಿಯಾದ. ದೇವಿಯ ಕೃಪಾಕಟಾಕ್ಷದಿಂದ, ದೇವಿಯ ಭಕ್ತರ ಸುಲಿಗೆಯಿಂದ ಅಪ್ಪಣ್ಣ ಸುಂದರಿಗೆ ಮತ್ತೊಂದು ತಾಯನ್ನು ಹುಡುಕುವ ಹವ್ಯಾಸಕ್ಕೆ ಬೀಳದೆ— ದಿನದಿನವೂ ಬೆಳೆಯುವ ಕುಮಾರಿಯನ್ನು ನೋಡಿ ಹಿಗ್ಗುತ್ತ ಹಾಯಾಗಿದ್ದನು.

ಯೌವನ ತುಂಬಿ ಹೊರಸೂಸುತ್ತಿರುವ ಸಮಯದಲ್ಲಿಯೇ ತರುಣಿಯ ಜೀವನ ಹೊರಳಿಸಿದತ್ತ ಹೊರಳುವುದು ! ಹೆಣ್ಣನ್ನು ಸುಗಮ-ದುರ್ಗಮ ದಾರಿಗೆ ನಡೆಯಿಸುವ ಕಡಿವಾಣ ಮಾತೆಯ ಕೈಯಲ್ಲಿ ! ಮೊದಲಿನಿಂದಲೇ ಮಾತೆಯ ಮುದ್ದು ಕಡಿವಾಣ ದಿಂದ ವಿಮುಕ್ತಳಾದ ಸುಂದರಿ, ಈಗ ಯೌವನಭರದಿಂದ ತುಂಬಿ ಕಾಣುತ್ತಿದ್ದಾಳೆ ! ಆದರೆ ತೊಡಕು ತುಂಬಿದ ಹೆಣ್ಣು-ಜೀವನ-ವನ್ನು ಒಳಹೊಕ್ಕು, ಸುಗಮ ದಾರಿಯನ್ನು ಹುಡುಕುವ ಯೋಗ್ಯತೆ ಅಪ್ಪಣ್ಣನಲ್ಲಿರಲಿಲ್ಲ. ತನ್ನ ಕೆಲಸ ತಾನು ಮಾಡಿದ. ಸುಂದರ ವರ ನೋಡಿ ಸುಂದರಿಯನ್ನು ಮದುವೆ ಮಾಡುವುದಷ್ಟಿತ್ತು. ಅದರ ಜೊತೆಗೆ ದಂಪತಿಗಳ ಸುಖಜೀವನದ ಚಿತ್ರ ಕಣ್ಮುಂದಿರುವಾಗಲೇ ಕೊನೆಗೊಮ್ಮೆ ದೇವಿಯ ಸನ್ನಿಹದಲ್ಲಿ ಜೀವನ್ಮುಕ್ತನಾಗಬೇಕೆಂಬ ಮನದಾಶೆಯೂ ಮಸೆದಾಡುತ್ತಿತ್ತು. ಆದರೆ ದೈವದ ಎಳೆತನೇ ಬೇರಡೆಗೆ ಸಾಗಿತ್ತು ! ಯೌವನಮದದಲ್ಲಿ ಪ್ರೇಮದ ಕಣ್ಣು ಕುರುಡು ! ಹೃದಯದಲ್ಲಿ ಹೃದಯ ಬೆರೆತಾಗಲೇ ಪ್ರೇಮಕ್ಕೆ ಉಸಿರೆಂಬುದನ್ನು ತಿಳಿಯದ, ಸುಂದರಿಯ ಪ್ರೇಮನೌಕೆ, ಪ್ರಲಯ ಕಾಲದ ಕಡಲಲ್ಲಿ ಕೊಚ್ಚಿಕೊಂಡು ಹೋಯಿತು ! ಅದರೊಡನೆಯೆ ಅವಳ ಜೀವನ್ಮಂದಿರವೂ ಕುಸಿದು ಬಿತ್ತು !! ಇದು ಸುಂದರಿಯ ಜೀವನದ ಒಮ್ಮುಗ್ಗಿಲಿನ ಚಿತ್ರ—

* * * *

ಇಪ್ಪತ್ತು ವರ್ಷಗಳ ನಂತರದ ಮಾತು: ಕಾಲನ ಓಟದೊಂದಿಗೆ ಜಗತ್ತಿನ ಮಾಟವೇ ಬದಲಾಗುತ್ತದೆ ! ಹೊಸದು ಹಳೆಯದಾಗಿ, ಹಳೆಯದು ಇಲ್ಲದಾಗುವುದೆಂಬುದೂ ಈ ಓಟದ ಕೂಗು. ಕಾಲನ ಕೂಗಿಗೆ ಓಗೊಟ್ಟವನು ಶೇಖರನೂ ಒಬ್ಬ.

ಶೇಖರ ಕಚೇರಿಯಿಂದ ಬಂದವನೇ ನೇರವಾಗಿ ತನ್ನ ಕೊಠಡಿಯನ್ನು ಪ್ರವೇಶಿಸಿ, ಅರಿವೆ ಬಿಚ್ಚಿ, ಹಾಗೇ ಆರಾಮ ಖುರ್ಚಿಯ ಮೇಲೆ 'ಉಶ್' ಎಂದು ಒರಗಿದ. ಮೇಜಿನ ಮೇಲಿದ್ದ 'ಜಯಂತಿ' ಮಾಸಪತ್ರಿಕೆಯನ್ನು ಎಳೆದುಕೊಂಡು, ಕಣ್ಣೆದುರಿಗೆ ಹಿಡಿದು-ಕೊಂಡ. ನಡುಮನೆಯಲ್ಲಿ ರಮಾಬಾಯಿ ಸಂಜೆಯ ಅಡಿಗೆಗೆಂದು ತರಕಾರಿ ಸೋಸುತ್ತಿದ್ದಳು. ಮನೆಯ ಮಾತು ಮಕ್ಕಳು ! ಅಂತಹ ಮಕ್ಕಳೇ ಮನೆಯಲ್ಲಿರಲಿಲ್ಲವಾದ್ದರಿಂದ, ಮನೆ ಮೂಕವಾಗಿತ್ತು ! ಯಾರೊಡನೆ ಮಾತನಾಡುವುದು ? ಅದೇ, ಮಡದಿ ರಮಾನೊಡನೆಯೋ ? ಮಡದಿಯ ಮಾತಿನ ಚಪಲತೆಯಿಂದ ಸುಖಕಾಣುವ

ಶೇಖರನ ರೋಮಾಂಚಕಾರಕ ತಾರುಣ್ಯಜೀವನ, ಹಳೆಯದಾಗಿದೆ! ದಿನದಂತೆ, ದಿನದ ಶೈಲಿಯಲ್ಲಿ, 'ರಮಾ!' ಎಂದು ಕೂಗಿದ. ರಮಾ 'ಬಂದೆ' ಎಂದು ಮರುಕೂಗಿದಳು.

"ಕಚೇರಿಯಿಂದ ಬಂದು ಇಷ್ಟು ಹೊತ್ತಾದರೂ, ಇನ್ನೂ ಚಹದ ಸೂಚನೆ ಕಾಣದ್ದರಿಂದ, ಮತ್ತಾವ ಸಂಪಿನ ಸಿಡುಗು ಅಡಿಗೆ ಮನೆ ಹೊಕ್ಕಿದೆಯೋ ಎಂದು ತಿಳಿಯಲು ಕೂಗಿದೆ ಅಷ್ಟೇ!" ಎಂದು ತನ್ನೆಡೆಗೆ ಬರುತ್ತಿರುವ ಮಡದಿಗೆ, ತುಟಿಯೊಳಗೆ ನಗೆ ಮುಚ್ಚಿ ಕೇಳಿದ. "ಹೌದು ಕೆಲಸದವಳು ಈಗ ಬರಬಹುದು, ಇನ್ನೊಂದು ಗಳಿಗೆಗೆ ಬರಬಹುದೆಂತ ದಾರೀ ನೋಡಿ ಸಂಜೆಯಾಯಿತು. ಅವಳಿಗೇನಾಗಿದೆಯೋ ಧಾಡಿ! ಸ್ವಲ್ಪ ನಿದಾನಿಸಿರಿ. ನಾನೇ ಪಾತ್ರೆ ತಿಕ್ಕಿ ಚಹ ಕಾಸುವೆ." ಎಂದವಳೇ ಒಳಗೆ ಹೋದಳು.

ಅಂದು ಆದೇಕೋ ಶ್ಯಾಮರಾಯರ ಮನಃಪಕ್ಷಿ ಗತಕಾಲದ ಗಗನದಲ್ಲಿ ರೆಕ್ಕೆ ಬಿಚ್ಚಿ ವಿಹರಿಸಲುಪಕ್ರಮಿಸಿತು. ಆಗಿನ ಜೀವನಕ್ಕೆ ಈಗಿನ ಜೀವನಕ್ಕೆ ಎಷ್ಟೊಂದು ವ್ಯತ್ಯಾಸ! ಶ್ಯಾಮನಾಗಿದ್ದಾಗ ಅನುಭವಿಸಿದ ಪಾತ್ರಸಾರವನ್ನು, ಶ್ಯಾಮರಾಯರಾಗಿ, ಆ ಯೋಗಂಗಭೂಮಿಯ ಮುಂದೆ ಕುಳಿತು ನೋಡುತ್ತಿದ್ದಾರೆ.

"ಯಾವ ಕಡೆ ಗಮನ? ಚಹ ಕುಡಿಯಿರಿ!" ಎಂದು ರಮಾಬಾಯಿ ಚಹದ ಕಟ್ಟೆಯನ್ನು ಮೇಜಿನ ಮೇಲಿಟ್ಟಾಗಲೇ ರಾಯರ ಯೋಚನಾರಂಗಭೂಮಿಗೆ ಪರದೆ ಬಿದ್ದದ್ದು! ಮೌನವಾಗಿ ಚಹವೆಲ್ಲ ಗುಟುಕರಿಸಿದರು.

ರಮಾಬಾಯಿಯ ಪ್ರಕೃತಿ ದಮ್ಮಿನಿಂದ ದಿನೇ ದಿನೇ ಕೃಶವಾಗುತ್ತ ನಡೆದಿದೆ. ರಸದುಂಬಿದ ಲಿಂಬೇಹಣ್ಣಿನಂತಿದ್ದ ಅವಳ ಅಂಗಸೌಷ್ಠವದ ಕಾಂತಿ, ಕಳಾಹೀನವಾಗಿದೆ. ಸ್ವಲ್ಪ ಹೆಚ್ಚು ಕೆಲಸವಾದರೆ ತೀರಿತು. ಉಬ್ಬಸ ಬಂದುಬಿಡುತ್ತಿತ್ತು. ಶ್ಯಾಮರಾಯರಾ ಗೂ ಮನೆಗೆಲಸದಲ್ಲಿ ಆಗಿಷ್ಟು ಈಗಿಷ್ಟು—ಕೆಲಸದವರ ಅಭಾವವಾದಾಗ—ನೆರವಾಗುತ್ತಿದ್ದರು. ಮರುದಿನ ರವಿವಾರ ಅದೇ ಊಟ ಮಾಡಿ, ದಂಪತಿಗಳಿಬ್ಬರೂ ನಡುಮನೆಯಲ್ಲಿ ಮಾತಿಗಾರಂಭಿಸಿದ್ದರು. ಹೊರಗೆ ಗಗನಮಧ್ಯದಲ್ಲಿ ನಿಂತ ಪ್ರಚಂಡ ಸೂರ್ಯನು ಕೆಂಡ ಕಾರುತ್ತಿರುವನೋ ಏನೋ ಎನ್ನುವಷ್ಟು ರಣ-ರಣ ಬಿಸಿಲು! ಹೊರಗಿನ ಬಿಸಿಲಿಗೂ ತುಂಬಿದ ಒಡಲಿಗೂ, ಶ್ಯಾಮರಾಯರ ಕಣ್ಣು ತೇಲಹತ್ತಿದುವು. ಅದೇ ಸಮಯಕ್ಕೆ— "ಅಮ್ಮನವರೆ!" ಎಂದು ಕೂಗು ಕೇಳಿಸಿತು.

ರಮಾಬಾಯಿ ಹೊರಕ್ಕೆ ಬಂದು, "ಒಹೋ, ನೀನೇ? ಬಾ!" ಎಂದು ಸಿಡಿಮುಖದಿಂದಲೇ ಸ್ವಾಗತಿಸಿದಳು.

ಆರಾಮ ಖುರ್ಚಿಯಲ್ಲಿ ಅಂಗಾತ ಬಿದ್ದಿದ್ದ ಶ್ಯಾಮರಾಯರು, ಕೆಲಸದವಳು ಒಳಬರುವುದನ್ನು ಕಣ್ತೆರೆದು ನೋಡಿದರು. ರಾಯರಿರಲಿಕ್ಕಿಲ್ಲವೆಂದು ಸಂಕೋಚವಿಲ್ಲದೆ ರಮಾಬಾಯಿಯ ಹಿಂದಿನಿಂದ, ಅವಳು ಬರುವವಳಿದ್ದಳು. ಆದರೆ ರಾಯರನ್ನು ನೋಡಿ, ಹಿಂತಿರುಗುತ್ತಿದ್ದ ಅವಳನ್ನು ರಮಾಬಾಯಿ ಕೈಹಿಡಿದು ಕುಳ್ಳಿರಿಸಿದಳು. ಕೆಲಸದವಳು ಅಧೋಮುಖಿಯಾಗಿ, ರಮಾಬಾಯಿಯಿಂದ ದೂರ ಸಿಡಿದು ಕುಳಿತಳು. ಮೋರೆಯ ಮೇಲೆ ಕಳೆಯೇ ಇರಲಿ[l] ಯಾವುದೋ ಒಂದು ಅವ್ಯಕ್ತ, ಅಂತರಿಕವಾದ ಚಿಂತೆ ಹ[l] ತಿನ್ನುತ್ತಿದೆಯೆಂದು, ಅವಳನ್ನು ನೋಡಿದೊಡನೇ ಹೇಳಬಹುದಿತ್ತು. ಆದರೆ ರಾಯರ ದೃಷ್ಟಿ ಆದೇಕೋ ಅವಳಿಂದ ಹಿಂದೆಗೆಯದೆ ಕನಸಿನಲ್ಲಿ ಚಿತ್ತವರಂತೆ ಮಿಕಿ ಮಿಕಿ ನೋಡುತ್ತಿದ್ದಾರೆ! ಇ[l] ದಿವಸವಾದರೂ ಮುಖಾವಲೋಕನ ಮಾಡುವ ಪ್ರಸಂಗ[l] ರಾಯರಿಗೆ ಬಂದಿದ್ದಿಲ್ಲ. ಆದರೆ ಈಪೊತ್ತು ರಾಯರ ಮನಸ್ಸು ಸಂಶಯದ ಜೋಕಾಲಿಯಲ್ಲಿ ತೂಗುತ್ತಿದೆ! ಸ್ಥೈರ್ಯ ಮನ[l] ನಿಂದ ದೂರವಾಗಿದೆ!! ರಮಾಬಾಯಿ, ರಾಯರ ಬಾಣದಂ[l] ಬಿಡುತ್ತಿರುವ ಕದಲದ ದೃಷ್ಟಿಯನ್ನು ನೋಡಿ ಸಹಿಸಲಾರದೆ "ಯಾಕವ್ವಾ, ಕೆಲಸಕ್ಕೆ ಬರಲಿಲ್ಲ? ಮೈಯಲ್ಲಿ ನೆಟ್ಟಗಿಲ್ಲವೇನು?" ಎಂದು ದೃಷ್ಟಿಚ್ಛೇದ ಮಾಡಿದರು. ಮೈಮರೆತ ರಾಯ[ರು] ಒಮ್ಮೆಲೇ ಸಾವರಿಸಿಕೊಂಡು ಕುಳಿತರು.

"ನನಗೇನಾಗಿದೆ ಅಮ್ಮಾ, ನನ್ನ ಮಗು ಹೋಯಿತು!" ಎಂದಾಗ, ಅವಳ ನಯನಗಿರಿಯಿಂದ ಅಶ್ರುಪಾತವಾಗಹತ್ತಿತು.

"ಏನು ನಿನಗೊಬ್ಬ ಮಗುವಿದ್ದನೇ?" ರಮಾಬಾಯಿ ಕಾರುಣ[್ಯ]ಮಯಿಯಾಗಿ ಕೇಳಿದಳು.

"ಹೌದು. ಇದ್ದಿತು. ಆದರೆ ಈಗ ಇಲ್ಲ; ಆದೇ ಈ ವಂಚ[ಕ] ಜಗತ್ತಿನಲ್ಲಿ ನನ್ನನ್ನಿಲ್ಲಿಯವರೆಗೆ ಇರಗೊಟ್ಟದ್ದು! ಕಗ್ಗತ್ತಲೆ ಕವಿ[ದ] ಜೀವನಕ್ಕೆ ಆಶಾಕಿರಣವಾಗಿ ನನ್ನ ಕೂಸು ಬಾಳಲೆಂದು ದಿನವು ಹರಸುತ್ತಿದ್ದೆ! ಆದರೆ ಅದೇ ಹೋಯಿತು!" ದುಃಖದ ಮಾತ[ು] ರೋದನದೊಂದಿಗೆ ಸೇರಿತು.

ಅವಳ ಕರುಳು ಹೇಚುವ ರೋದನ ಕೇಳಿ, ಹಿಮಭರಿತ ರಾಯ[ರ] ಹೃದಯ ಕರಗಿ ಪ್ರವಹಿಸಿ, ಉಕ್ಕೇರಿಬಂದಿತು! ಅವಳ ಅಂತ[ರ]ರಂಗದ ಇಂಗಿತವನ್ನರಿಯಲು ಆ ಕರುಣಾಪ್ರವಾಹ ಧಾವಿಸು[]ತ್ತಿತ್ತು!! "ನೀನೊರ್ವ ಸುಶಿಕ್ಷಿತೆಯೆಂಬಂತೆ ಕಾಣುವುದು. ಜಗತ್ತನ್ನು ಇಷ್ಟು ಕ್ರೂರವಾಗಿ ಕಾಣುವ ನಿನ್ನ ನುಡಿಯಲ್ಲಿ ಅದಾವುದೋ—ಇದರ ಹಿಂಬದಿಯಲ್ಲಿ ಗೂಢವಾದ ಕಥೆ ಇರಲೇ ಬೇಕು. ದುಃಖ ಉಕ್ಕಿ ಬರದಿದ್ದರೆ ಕೇಳಬೇಕೆಂಬ ಆಶೆ." ಭಾವೋ[]ದ್ರಿಕ್ತರಾಗಿ ಕೇಳಿದರು ರಾಯರು.

"ಆ ಕಳೆದ ಕಥೆ ಬರುವುದು ಕಂಬನಿಯ ಕಾಲುವೆಯಲ್ಲಿ! ಅದ[]ರಲ್ಲೇಕೆ ತಮ್ಮಂತಹರು ಸುಖಹೃದಯಗಳನ್ನು ತೇಲಬಿಡುವದು!

"ಇಲ್ಲವ್ವಾ ಹೇಳು. ಸಂಕಟಬರುವುದು ಮನುಷ್ಯನಿಗೆ ಸಹಜ ಸಂಕಟಜೀವಿ ಮನುಷ್ಯ! ಹೇಳು!" ಎಂದು ದನಿಗೂಡಿಸಿದಳು ರಮಾಬಾಯಿ.

"ಕೇಳುವ ಆಶೆ ಇದ್ದರೆ, ಕೂಡಿಟ್ಟ ದುಃಖವನ್ನು ಕೋಡಿಯಾ[ಗಿ] ಹರಿಸಿ, ಹೃದಯ ಬರಿದು ಮಾಡಿಕೊಳ್ಳುವೆ. ನಾನು ಹುಟ್ಟಿದ್ದು ತಾಯಿಯ ಉದರದಲ್ಲಿಯಾದರೂ ಬೆಳೆದದ್ದು ತಂದೆಯ ತೊಡೆಯಲ್ಲಿ. 'ತಾಯಿಲ್ಲದ ಹಸುಳೆ' ಎಂಬ ಮರುಕದ ಬಿರುದಿನಿಂದ, ತರುಣಿಯಾಗುವ ವರೆಗೂ ಬಾಳಿದೆ. ತಂದೆಯ ನಲ್ಮೆ ತಾಯಿಯನ್ನ[ು]

ವಿಕಾರಿಸಿತ್ತು! ಅನುದಿನವೂ ಬಿದಿಗೆಯ ಚಂದ್ರನಂತೆ ತುಂಬುತ್ತ ನಡೆದಿರುವ ನನ್ನ ತಾರುಣ್ಯವನ್ನು ನೋಡಿ ತಂದೆಗೆ ಹಿಗ್ಗು! ಅವರ ಹಿಂದೆಯೇ ನಿರಾಶೆಯು ನಿಟ್ಟುಸಿರು! 'ಹೆಣ್ಣು ಪರರ ಪಾಲು' ಎಂದೋ ಏನೋ! ತುಂಬಿನಿಂತ ತಾರುಣ್ಯಕ್ಕೆ ಪಾಲು-ಗಾರರನ್ನು ಗೊತ್ತುಮಾಡುವ ಕರ್ತವ್ಯಪೂರ್ತಿಯ ಎತ್ತುಗಡೆ-ಯಲ್ಲಿದ್ದನು ತಂದೆ! ಆದರೆ ನಾನೆಂಥ ಮೋಸ ಹೋದೆ!

"ದೇಹ ಬೆಳೆದಿದೆ. ಬುದ್ಧಿಯೂ ಪಕ್ವವಾಗಿರಬಹುದೆಂದು ತಿಳಿದ ತಂದೆ ನನ್ನನ್ನು ಸ್ವೇಚ್ಛೆಯಾಗಿರಲುಬಿಟ್ಟ. ಮುಂಜಾನೆ ಊಟ ತೀರಿಸಿ ಮನೆಬಿಟ್ಟ ತಂದೆ, ಒಮ್ಮೆಲೇ ಸಂಜೆಯ ಊಟಕ್ಕೇ ಮರಳಿ ಬರುತ್ತಿದ್ದ. ನಾನೂ ಊಟಮಾಡಿ, ನಮ್ಮ ಮನೆಯ ಮುಂದಿನ ಜಗುಲಿಯ ಮೇಲೆ, ಹೆಣಿಗೆಯ ಕೆಲಸಮಾಡುತ್ತ ಸಾಯಂಕಾಲದ ವರೆಗೂ ಕುಳಿತಿರುತ್ತಿದ್ದೆ. ಈ ರೀತಿ ತಂದೆ-ಮಗಳ ಜೀವನ ನಿರಾತಂಕವಾಗಿ ಓಡುತ್ತಿತ್ತು."

"ನಮ್ಮ ಮನೆಯ ಜಗುಲಿಯ ಬದಿಗೇ ಒಂದು ದೊಡ್ಡ ಮಾರ್ಗ! ಎರಡೂ ಪಕ್ಕದಲ್ಲಿ ಗಗನಚುಂಬಿತವಾಗಿ ಸಾಲಾಗಿ ಬೆಳೆಸಿದ ಗಾಳಿಮರ. ಈ ಮಾರ್ಗದ ಬಲಪಾರ್ಶ್ವದಲ್ಲಿ ಒಂದು ಕೆರೆ. ಈ ಕೆರೆಯ ಒಂದು ಮೂಲೆಗೆ ನಮ್ಮ ಮನೆ. ಕೆರೆಯ ತುಂಬ ಕಮಲಪುಷ್ಪ. ಮಾರ್ಗದ ತುಂಬ ಜನ. ಜೊತೆಗೆ ಗಾಳಿಮರದ 'ಮರ್ಮರ' ಧ್ವನಿ. ಇದೆಲ್ಲಾ ಗಾಳಿ-ಬೆಳಕಿಲ್ಲದ ಮನೆಯೊಳಗೆ ತೂರಿ ಸಕೊಡುತ್ತಿರಲಿಲ್ಲ. ಅದೇ ಮಾರ್ಗದಲ್ಲಿ ನಿತ್ಯವೂ ಒಬ್ಬ ಯುವಕ ಸಾಯ್‌ಕಲ್ ಮೇಲಿಂದ ಹಾಯ್ದು ಹೋಗುತ್ತಿದ್ದ. ಕಡೆದು ಮಾಡಿದ ಮೈಕಟ್ಟಿನಲ್ಲಿ, ಸರ್ವಾಂಗಗಳೂ ಸರಿಯಾಗಿದ್ದ ದೇಹದ ನಿಲುಮೆ ನೋಡಿದರೆ, ಮತ್ತೊಮ್ಮೆ ನೋಡಬೇಕೆಂಬ ಆಶೆಯಾಗುವುದು. ಏರಿಳಿತವಾಗಿ ಬಾಚಿದ ಕ್ರಾಪು, ಸಾಯ್‌ಕಲ್ಲ ಮೇಲಿಂದ ಸುಳಿಗಾಳಿಗೆ ಕೆದರಿದಾಗ ಮತ್ತಷ್ಟು ಸುಂದರನಾಗಿ ಕಾಣುತ್ತಿದ್ದನು. ಅವನೊಬ್ಬ ಕಂದಾಯ ಖಾತೆಯಲ್ಲಿ ಕೆಲಸ ಮಾಡುತ್ತಿದ್ದ ಕಾರಕೂನ. ದಿನವೂ ಕಚೇರಿಯಿಂದ ಖೋಲಿಗೆ, ಖೋಲಿಯಿಂದ ಕಚೇರಿಗೆ—ನಾಲ್ಕಾರು ಸಲವಾದರೂ ಆ ಮಾರ್ಗ-ವಾಗಿ ಹಾಯ್ದಾಡುತ್ತಿದ್ದ. ಪ್ರತಿ ಸಲವೂ ಸಾಯ್‌ಕಲ್ಲ ಮೇಲಿಂದಲೇ ನನ್ನೆಡೆಗೆ ದೃಷ್ಟಿಬೀರುತ್ತಿದ್ದ. ಬರುಬರುತ್ತ ಮಾರ್ಗದಲ್ಲಿ ಯಾರೂ ಇರದಿದ್ದರೆ, ನಮ್ಮ ಮನೆಯ ಸಮೀಪಕ್ಕೆ ಬಂದಾಗ, ಸಾಯ್‌ಕಲ್ಲ ಗಂಟೆಬಾರಿಸುತ್ತಿದ್ದ. ತತ್ತೆತ್ತಿ ನೋಡಿದರೆ, ತುಂಟನಗೆ ತುಟಿ-ಯಲ್ಲಿ ತುಳುಕುತ್ತಿತ್ತು. ಈ ರೀತಿ ಎರಡು ತಿಂಗಳಾದರೂ ಕಳೆ-ದಿರಬೇಕು. ನಾನಾಗ ಚುಕ್ಕಾಣಿ ಇಲ್ಲದ ನಾವೆಯಂತಿದ್ದೆ! ಏಕೆಕೋ ಮನಸ್ಸೇ ಮಾರ್ಪಟ್ಟಿತು! ಕುಳಿತಾಗ—ಮಲಗಿದಾಗ—ಏಕೆ ಸ್ವಪ್ನಸೀಮೆಯಲ್ಲಿಯೂ ಸಾಯ್‌ಕಲ್ ಗಂಟೆಯ ನಿನಾದ ಕೇಳಿಸಹತ್ತಿತ್ತು! ಇಷ್ಟು ದಿವಸವೂ ಮತ್ತೊಂದನ್ನರಿಯದ ಮನಸ್ಸು ಅಂದು ಹೊಯ್ದಾಡಿತು! ನಲ್ಮೆಯ ಬುಗ್ಗೆ ಹೃದಯದ ಆಳದಿಂದ ಪುಟಿಯುಹತ್ತಿತ್ತು! ಅಂದು ಅವನ ನಗೆಗೆ ಲಜ್ಜಾಯುಕ್ತವಾದ ನನ್ನ ನಗೆ ಪ್ರತ್ಯುತ್ತರ ಕೊಟ್ಟಾಗ, ಅದಾವುದೋ ಒಂದು ಅನಿರ್ವಚನೀಯವಾದ ವಿದ್ಯುತ್‌ಶಕ್ತಿ ರಕ್ತನಾಳಗಳಲ್ಲಿ ಹರಿಯ-ಹತ್ತಿತು! ಆ ದಿನವೇ ಹೃದಯ—ದೇಹಗಳೆರಡನ್ನೂ ಸಂಪೂರ್ಣ-ವಾಗಿ ಅವನಿಗರ್ಪಿಸಿದೆ. 'ಹೆಣ್ಣು ಒಮ್ಮೆ ಮನಸೋತಳೆಂದರೆ ತೀರಿತು! ವಿವೇಕ ಅವಿವೇಕಗಳ ಸಾರಾಸಾರ ವಿಚಾರವೇ ಅವಳಿಗೆ ತಿಳಿಯದು. "ಸುಶಿಕ್ಷಿತನ ಜೀವನ ಸುಶಿಕ್ಷಿತೆಯನ್ನೇ ಬಯಸುತ್ತದೆ. ಸುಶಿಕ್ಷಿತೆಯಷ್ಟೇ ಅಲ್ಲ ನೀನು. ಸುಶಿಕ್ಷಿತೆಯರಿಗಿರದ ಸಹಜ ರೂಪಸಂಪತ್ತೂ ನಿನ್ನಲ್ಲಿದೆ! ನಿನ್ನ ಹೊರತಾಗಿ ಈ ಹೃದಯದಲ್ಲಿ ಮತ್ತಾರಿಗೂ ಸ್ಥಾನವಿಲ್ಲ!" ಇವು ಅವನಾಡುತ್ತಿದ್ದ ಆಗಿನ ಮಾತು.

ಎರಡು ದಿವಸಗಳ ವರೆಗೆ ಒಮ್ಮೆಲೇ ಸಾಯಕಲ್ ಗಂಟೆ ಕೇಳಿಸ-ದಂತಾಯಿತು ನನಗೆ ಹೇಳದೆ ಇವನೆಲ್ಲಿ ಹೋಗಿರಬಹುದೆಂದು ದಿಗಿಲು ಬಿದ್ದಂತಾಯಿತು. ತಾಯಿಗೆ— ಅಸ್ವಾಸ್ಥ್ಯವಾದುದರಿಂದ ರಜೆಯ ಮೇಲೆ ಹೋಗಿದ್ದೆನೆಂದು ಅವನ ಸವಿಮಾತು ನಂಬಿಸಿತು. ಆದರೆ ಆ ಮಾತು ವಿಷಗರ್ಭಿತ ಮಧುವೇಷ್ಟನವೆಂಬುದು ತಿಳಿಯದೆ ಮೂಢಳಾದೆ. ಅಂದು ರಾತ್ರಿ ಅವನ ಖೋಲಿಗೆ ಹೋದಾಗ, ಈಗ ಬರುವೆನೆಂದು ನನ್ನೊಬ್ಬಳನ್ನೇ ಖೋಲಿಯಲ್ಲಿ ಬಿಟ್ಟುಹೋದ. ಆ ಸಮಯದಲ್ಲಿ ಕಸಗೂಡಿಸುವುದಕ್ಕೆಂದು 'ಬ್ಯಾಗ'ನ್ನು ಬೇರೆ ಕಡೆ ಇಡುವಾಗ, 'ದಾಂಪತ್ಯ ದರ್ಶನ' ಎಂಬ ಪುಸ್ತಕ ಅದರ ಬುಡದಲ್ಲಿ-ದ್ದುದು ಕಂಡುಬಂದಿತು ಅದರ ಮೊದಲನೆಯ ಪುಟ ತಿರುವಿದೆ,

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ {ನೀಲಿ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣ-ದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನ-ಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

ಓಡಿದೆ. ನಿರಭ್ರಾಗಸದಿಂದ ಸಿಡಿದು ಬಂದು, ಸಿಡಿಲುಬಡಿದಂತಾಯಿತು ! ಪುಸ್ತಕ ಮದುವೆಯ ಸಮಯದಲ್ಲಿ ಕೊಟ್ಟ, ಅವನ ಗೆಳೆಯನೊಬ್ಬನ ಕಾಣಿಕೆಯಾಗಿತ್ತು.

" ಹಾಗೆಯೆ ಮನೆಗೆ ಬಂದೆ. ತಂದೆ ಇನ್ನೂ ಬಂದಿದ್ದಿಲ್ಲ. ಹಾಸಿಗೆಯಲ್ಲಿ ಉರುಳಿದೆ. 'ಇದು ನಿಜವಿರಬಹುದೇ ? ಹಾಗಿದ್ದರೆ ನನ್ನನ್ನು ತಿರಸ್ಕರಿಸಲಿಕ್ಕಿಲ್ಲವಷ್ಟೇ ? ' ಎನ್ನುವ ಮನದ ದುಗುಡದಲ್ಲಿ, ಇಡೀ ರಾತ್ರಿಯನ್ನು ಕಳೆದೆ. ಅರೆನಿದ್ರೆಯಲ್ಲಿ ಕಂಡ ದುಃಸ್ವಪ್ನ, ಮುಂದೆ ಕಾಯ್ದಿದ್ದ ಅನರ್ಥಜೀವನದ ಸೂಚಕವೋ ಎಂದು ಮನಸ್ಸು ನಡುಗಿತು ! ಮರುದಿವಸ ಆ ಪುಸ್ತಕವನ್ನು ತೋರಿಸಿ, ಕಠಿಣ ಮಾತುಗಳಿಂದ ಅವನನ್ನು ಹೀಗಳೆದೆ. ಪುರುಷರು ಪ್ರಸಂಗಾವಧಾನಿಗಳು ! 'ತಂದೆ-ತಾಯಿಗಳ ಕಟ್ಟು ಬಲವಾಯಿತು. ಅವಳಷ್ಟೇ ನಿನಗೂ ನನ್ನ ಹೃದಯದಲ್ಲಿ ಸ್ಥಾನ. ಇದಕ್ಕೇಕಿಷ್ಟು ಚಿಂತೆ ? ' ಎಂದವನೇ ತೋಳತೆಕ್ಕೆಯಲ್ಲಿ ನನ್ನನ್ನಿಟ್ಟುಕೊಂಡ. ಹೂವಿನ ಮಕರಂದವನ್ನು ಹೀರಿ ಹೀರಿ ಒಗೆಯುತ್ತಿದ್ದಾನೆಂಬುದನ್ನು ತಿಳಿಯದೆ ಹೋದೆ ! ನಂಬಿದೆ. ಮೊದಲಿನಂತೆ ಪ್ರಣಯಪ್ರಸಂಗ ನಡೆಯಿತು. ಅವನ ದೃಷ್ಟಿಯೇ ಬೇರೆ. ನನ್ನ ದೃಷ್ಟಿಯೇ ಬೇರೆ. ಅವನದು ಭೋಗಲಾಲಸೆಯ ವಂಚಕವರ್ತನೆಯಾದರೆ, ನನ್ನದು ಪವಿತ್ರಪ್ರೀತಿಯ ಶುಭ್ರಜ್ಯೋತಿ!

" ನನಗೆ ತಿಳಿಯದಂತೆ ಬೇರೆ ಕಡೆ ಬದಲು ಮಾಡಿಸಿಕೊಂಡು ಅಲ್ಲಿಂದ ಕಂಬಿ ಕೀಳಬೇಕೆಂದು ಅವನ ಯೋಚನೆ. ನನ್ನ ಮನದ ಮುಗ್ಧತೆಯ ಪರದೆ ತೆರೆದಾಗ ಕಾಲವಿಾರಿ ಹೋಗಿತ್ತು. ನನ್ನದೆಲ್ಲವನ್ನೂ ಕಳೆದುಕೊಂಡ ಕಳಂಕಿನಿ—ಅಬಲೆ ನಾನಾಗಿದ್ದೆ ! ಇಂತಹ ಕಳಂಕಿತ ಸ್ತ್ರೀಯ ಬಾಳು ಸಮಾಜದಲ್ಲಿ, ಜೀವಂತವಿದ್ದಾಗಲೇ ಗೋರಿಯಲ್ಲಿದ್ದಂತೆ ! ಇರಲಿ, ಅವನಿಗೆ ಬದಲಿಯಾದ ಸುದ್ದಿ ತಿಳಿಯದೆ ಇರುತ್ತದೆಯೆ ? ತಂದೆಯ ಕಣ್ಣು ತಪ್ಪಿಸಿ ಅವನ ಖೋಲಿಯತ್ತ ಧಾವಿಸಿದೆ. ಆದರೆ ಖೋಲಿ ಬರಿದು ! ಆಕಾಶ ಬೊಗರೆಯಂತೆ ಗಿರ್ರನೆ ತಿರುಗಹತ್ತಿತು. ನಿಂತ ನೆಲ ಚಿಮ್ಮಿದಂತಾಗಿರಬಹುದು ! ಅಂದಿನ ಅವಸ್ಥೆಯನ್ನು ಕಂಡು ಬೆದರಿದ ತಂದೆ, ಡಾಕ್ಟರನ್ನೂ ಕರೆತಂದ. ದೇಹ ಪರೀಕ್ಷಿಸುವ ಡಾಕ್ಟರು ಮನವನ್ನೆಂತು ಪರೀಕ್ಷಿಸುವನು ? ಮರುದಿವಸವೇ ಶ್ರೀಮಂತ ಮನೆತನದವರೊಬ್ಬರು ನನ್ನನ್ನು ನೋಡಲಿಕ್ಕೆ ಬರುವವರಿದ್ದರು. ಆದ್ದರಿಂದ ಎಷ್ಟೇ ದುಃಖವಾದರೂ ತಂದೆಗೆ ತೋರಗೊಡಲಿಲ್ಲ.

" ಅಂದಿನ ರಾತ್ರಿಯೇ ನನ್ನ ಜೀವನದ ಆಗು-ಹೋಗನ್ನು ನಿರ್ಧರಿಸುವುದಿತ್ತು. ' ತಂದೆಗೆ ಇದೆಲ್ಲ ಸಂಗತಿಯನ್ನು ಹೇಳಿಬಿಡಲೇ ? ' ಎಂದು ಮನಸ್ಸು ಹರಿಯುತ್ತಿತ್ತು. ಅಕ್ಕರೆಯಿಂದ ಪಾಲನಗೈದ, ಜೀವನದ ಸರ್ವಸ್ವನೆಂದು ತಿಳಿದ ನನ್ನಿಂದಾದ ಈ ಮಹಾ ಪಾಪಕೃತ್ಯಕ್ಕೆ, ತಂದೆಯ ಹೃದಯ ಕಸವಿಸಿಗೊಂಡು ಕಮರಿ ಹೋದೀತೆಂದು ಊಹಿಸಿದೆ. ನನ್ನ ಸುಖಕ್ಕಾಗಿ ಬಯಸಿದ್ದನ್ನು ಸದಾ ಕೈಯಲ್ಲಿ ಹಿಡಿದುಕೊಂಡು, ಮುದ್ದಿನ ಮೂರುತಿಯನ್ನಾಗಿ ಮಾಡಿದ ಹೃದಯ ಅವನದಾಗಿತ್ತು ! ತಂದೆಯ ಕರುಳು ಕತ್ತರಿಸುವ ದೀನದೃಶ್ಯವನ್ನು ನೋಡುವುದಕ್ಕಿಂತ ಚಿರಂತನವಾಗಿ ಈ ಲೋಕದಿಂದ ಬೇರೆಮಾಡಿ ಸುಖದಿಂದಿರಿಸುವ ಆತ್ಮಹತ್ಯೆಯನ್ನು ಮಾಡಿಕೊಂಡರೆ ಒಳಿತೆಂದು ತೋರುತ್ತಿತ್ತು. ಆದರೆ ಅದೆಂತಹ ಪಾತಕದ ಕೆಲಸ ! ನನ್ನ ಅಂತ್ಯದೊಡನೆಯೇ, ಗರ್ಭದಲ್ಲಿ ರೂಪುಗೊಳ್ಳುತ್ತಿರುವ ಭ್ರೂಣದ ಹತ್ಯೆಕ್ಕೆ ಮನಸ್ಸೊಪ್ಪಲಿಲ್ಲ. ಹಾಗಾದರೆ ಎಂತು ಬಾಳಲಿ? ಇತ್ತ ಇರಲೂ ಬಾರದು, ಅತ್ತ ಸಾಯಲೂ ಬಾರದು. ಇದ್ದರೆ ಉಸಿರಾಡುವುದು ಅನಂತ ಅಪಮಾನದ ಪೈಶಾಚ್ಯ ಸಮಾಜದಲ್ಲಿ; ಸತ್ತರೆ ಸಮಾಜದಲ್ಲಿ ಬಿಟ್ಟು ಹೋಗುವುದು ಕಳಂಕಿತ ಚಾರಿತ್ರ್ಯವನ್ನು ! ಆದ್ದರಿಂದ ಅವೆರಡರ ಮಧ್ಯಮ ಮಾರ್ಗವೊಂದನ್ನು ಯೋಚಿಸಿದೆ. ತಂದೆಯ ಕಣ್ಣು ತಪ್ಪಿಸಿ, ' ಅವಳೇ ಇವಳು ! ' ಎಂದು ಬೊಟ್ಟಿಟ್ಟು ತೋರಿಸುವ ಸಮಾಜದಿಂದ ಬಹುದೂರವಾಗಿ, ಪ್ರೇಮರೂಪವಾಗಿ ಬೆಳೆಯುತ್ತಿರುವ ಪೈರನ್ನು ಸಂರಕ್ಷಿಸುವುದಕ್ಕೋಸ್ಕರ ಬೇರೆಡೆಗೆ ಹೋಗಲು ನಿರ್ಧರಿಸಿದೆ.

" ನಡುರಾತ್ರಿ. ತಂದೆಯ ಪಾದಧೂಳಿಯನ್ನು ಹಣೆಯಲ್ಲಿ ಧರಿಸಿ ಹೊರಬಿದ್ದೆ. ಚಂದ್ರ ಆಗಸದಲ್ಲಿ ತೇಲುತ್ತಿದ್ದಾನೆ. ಎಲ್ಲಿಗೆ ಹೋಗಬೇಕೆಂಬ ಪೂರ್ವಯೋಜನೆಯಿಲ್ಲದೆ ಮನಬಂದತ್ತ ಹೆಜ್ಜೆ ಹಾಕಿದೆ. ಮಲೆನಾಡಿನ ಕಾಡು. ವನ-ಮೃಗ-ಪಕ್ಷಿಗಳು ವಿವಿಧ ವಿಕಾರ ಸ್ವರಗೈಯುತ್ತಿದ್ದುವು! ಆದರೂ ನಮ್ಮೂರಿಗೆ ಐದಾರು ಮೈಲಿನ ಮೇಲಿದ್ದ ಮಾರುತಿ ದೇವಾಲಯಕ್ಕೆ ಬಂದು ತಲುಪಿದೆ. ನಿರ್ಜನ ಕಾನನದಲ್ಲಿದ್ದರೂ, ಒಂದಿಲ್ಲೊಂದು ಕಾರಣದಿಂದ ಆ ದೇವಾಲಯ ಜನನಿಬಿಡವಾಗಿರುತ್ತಿತ್ತು. ಅಂದಿನ ಜನದಲ್ಲಿ ನಾನೊಬ್ಬಳೂ ಒಂದುಗೂಡಿದೆ. ಒಂದೆಡೆ ಇಳಿವಯಸ್ಸಿನ ಹೆಣ್ಣುಮಗಳೊಬ್ಬಳು ಚಳಿಗೆ ನಡುಗುತ್ತಿದ್ದಾಳೆ. ನಾನೂ ಅವಳ ಸನಿಹದಲ್ಲಿಯೇ ಕುಳಿತುಕೊಂಡೆ. ಅಂತಹ ಸಮಯದಲ್ಲಿ ಏಕಾಂಗಿಯಾಗಿ ಅಲ್ಲಿಗೆ ಬಂದದ್ದನ್ನು ನೋಡಿ, ಅವಳಿಗೆ ಸಂಶಯ ಬಂದಿರಲೂ ಬಹುದು. ಅದರಲ್ಲೂ ಏರುಜವ್ವನ ಸೂಚಕ ಅಂಗಾಂಗಿಯಾದ ತರುಣಿ! ಹಾಸು-ಹೊದೆಯವಿರದೆ ಕಲ್ಲಿನ ಮೇಲೆ ಸವಡಿಸುವುದನ್ನು ನೋಡಿ, ತಾನು ಹಾಸಿದ ಕಂಬಳಿಯ ಮೇಲೆ ಮಲಗಲು ಕರೆದಳು. ನನಗೂ ಅಷ್ಟೇ ಬೇಕಿತ್ತು. ಪ್ರೇಮಪೂರಿತ ಮಾತುಗಳಿಂದ ನನ್ನೆಲ್ಲ ಸಂಗತಿಯನ್ನು ತಿಳಿದುಕೊಳ್ಳಲು ಯತ್ನಿಸಿದಳು. ಅವಳ ಮೃದು ಮಾತುಗಳು, ' ಮಾತೆಯ ಮಮತೆ ಇದೇ ! ' ಎಂದು ತೋರಿಸಿಕೊಟ್ಟುವು ' ತರುಣಿಯ ಸಂಕಟ ನನಗೆ ಗೊತ್ತು. ನಿನ್ನಂತೆಯೇ ನಾನೂ ಒಬ್ಬ ಅಭಾಗಿನಿ ಇಬ್ಬರೂ ಸಮದುಃಖಿಗಳೇ! ಹೇಳು, ಒಬ್ಬಳೇ ಇಲ್ಲಿಗೇಕೆ ಬಂದೆ ? ನನ್ನಿಂದೇನಾದರೂ ಸಹಾಯ ಬೇಕಿದ್ದರೆ ಹೃದಯ ಬಿಚ್ಚಿ ಸ್ವೀಕರಿಸು. ನನ್ನವರಾರೂ ಇರದಿದ್ದರೂ ಅದಾವ ಮೋಹವು ಈ ಜಗತ್ತಿನಲ್ಲಿಟ್ಟುಕೊಂಡಿದೆಯೋ ತಿಳಿಯದು!'

ಎಂದು ಹೇಳಿದಾಗ, ದುಃಖದಿಂದ ಕುದಿದ ಅಶ್ರು, ಅವಳ ಹಿಡಿತದಲ್ಲಿದ್ದ ನನ್ನ ಮುಂಗೈ ಮೇಲೆ ಸುರಿಯಿತು. ಹೃದಯ ಕರಗಿತು! ಇವಳೂ ನನ್ನಂತಹವಳೇ ಎನ್ನುವ ಮನೋಭಾವನೆಯಿಂದ, ಮನಬಿಚ್ಚಿ ಅಲ್ಲಿಯ ವರೆಗಾದ ಕಥೆಯನ್ನು ಹೇಳಲು ಪ್ರಾರಂಭಿಸಿದೆ. ಆ ಮಂದಪ್ರಕಾಶದಲ್ಲಿ, ಅವಳ ಸಂಪೂರ್ಣ ಭಾವಭರಿತ ಮುಖ ಕಾಣದಿದ್ದರೂ, ವಿವಿಧ ಭಾವಸೂಚಕ ರೇಖೆಗಳು ಹರಿದಾಡುತ್ತಿದ್ದುವು! ಮತ್ತೂ ಕೇಳಬೇಕೆಂಬ ಲವಲವಿಕೆ ಅವಳ ಕಂಗಳ ಸರಿದಾಟದಲ್ಲಿ ನಿಚ್ಚಳವಾಗಿ ತೋರುತ್ತಿತ್ತು! ನನ್ನ ಕಥೆ ಮುಗಿಯುತ್ತ ಬಂದಂತೆ, ಅವಳ ಮುಖಕಾಂತಿ ಕುಂದುತ್ತ ಬಂದಿತು. ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟು ಕುಳಿತಲ್ಲಿಯೇ ನೆಲಕ್ಕುರುಳಿಬಿಟ್ಟಳು. ಮಗ್ಗುಲಲ್ಲಿ ಮಲಗಿದ ನಾನು ಗಾಬರಿಯಾಗಿ ಚಿಟ್ಟನೆ ಚೀರಿದೆ! ದೇವಾಲಯದಲ್ಲಿದ್ದವರೆಲ್ಲ ಒಟ್ಟುಗೂಡಿ, ನೆತ್ತಿಗೆ ನೀರು ಹೊಯ್ದು ಎಚ್ಚರಿಸಿದರು. ಬಳಿಕ ಎಚ್ಚತ್ತು, ಬವಳಿಯಲ್ಲಿದ್ದ ನನ್ನ ಅಪ್ಪಿನಲ್ಲಿ ಕಣ್ಣೀರಿನ ಕಾಲುವೆ ಹರಿಸಿದಳು! ಇದರರ್ಥವೇ ನನಗಾಗಲಿಲ್ಲ. ಉನ್ಮಾದಿನಿಯಂತೆ ಕೂಗುತ್ತ "ನೀ....ನು ಅ....ವನ ಮ........ಗ........ಳೇ? ಆ ವಂ........ಚಕನು ನಿನ್ನ ತಂದೆಯು!! ಒಂದು ಹೆಣ್ಣಿನ ಜೀವನವನ್ನು ಹಾಳುಮಾಡಿ ಕಾಮತೃಷೆಯನ್ನು ಹಿಂಗಿಸಿಕೊಂಡ ಆ ಕಾಮುಕನ ಮಗಳೇ ನೀನು!!! ನಾನು ಹೇಳಿದ್ದೆ; ಅದರಂತೇ ಆಗಿದೆ! ಸೇಡು ತೀರಿತು! ಇಷ್ಟೇ ಬೇಕಿತ್ತು!" ಎಂದವಳೇ ಹುಚ್ಚಿಯಂತೆ ನಗುತ್ತ, ನನ್ನ ಕೈ ಹಿಡಿದುಕೊಂಡು ದೇವಾಲಯದಿಂದ ಹೊರಬಿದ್ದಳು. ನಡುದಾರಿಯಲ್ಲಿ ಒಂದೂ ಮಾತನಾಡದೆ, ನೇರವಾಗಿ ತನ್ನ ಬೀಡಾರಕ್ಕೆ ಕರೆದುಕೊಂಡು ಹೋದಳು. ನನ್ನ ತಂದೆಯೂ ಹೆಣ್ಣುಹೃದಯದ ವಂಚಕನೆಂದು ತಿಳಿದಾಗ, ಅಂತಹವಳೇ ಒಬ್ಬ ಹೆಣ್ಣಾದ ನಾನು, ತಂದೆಯನ್ನು ಮನಸ್ಸಿನಿಂದ ಅಳಿಸಿಬಿಟ್ಟೆ. ತಾನೊಬ್ಬಳು ನನ್ನ ತಂದೆಯನ್ನು ಮನವಾರೆ ಮೆಚ್ಚಿ ಪ್ರೀತಿಸಿದ ಹೆಣ್ಣು ಎಂದು ಹೇಳಿದಳೇ ಹೊರತು, ಅವಳ ಪ್ರೇಮಮಂದಿರ ಕಳಚಿದ ನಂತರದ ಜೀವನವನ್ನು ಕೇಳಿದರೆ ಎಂದೂ ಹೇಳಲಿಲ್ಲ. ಕೂತು ತಿಂದರೆ ಸಾಲುವಷ್ಟು ಆಸ್ತಿಯನ್ನು ಹೇಗೋ ಮಾಡಿಟ್ಟಿದ್ದಳು. ಇಬ್ಬರೂ ಸುಖವಾಗಿ ಬಾಳಿದೆವು. ಆಗ ಗರ್ಭಿಣಿ ಇದ್ದ ನಾನು, ಅವಳ ಆಶ್ರಯದಲ್ಲಿಯೇ ಗಂಡುಶಿಶುವನ್ನು ಹೆತ್ತೆ. ನವಿಸ್ರ್ಮಾರ್ತರ ಊರುಗೋಲೆಂದು ನನ್ನ ಕಂದನನ್ನು ಕಾಣುತ್ತಿದ್ದಳು. ಆದರೆ ಭಗವಂತನ ಮನಸ್ಸಿಗೆ ಬರಲಿಲ್ಲ. ವಯಸ್ಸಾದಂತೆಲ್ಲಾ ಅವಳ ಪ್ರಕೃತಿ ಎಲುಬಿನ ಹಂದರವಾಯಿತು. ಕ್ಷಯ ರೋಗವೆಂದು ಕಂಡುಬಂದದ್ದರಿಂದ, ವೈದ್ಯರ ಅಭಿಪ್ರಾಯದ ಮೇರೆಗೆ 'ಆರೋಗ್ಯಧಾಮ'ದಲ್ಲಿ ಚಿಕಿತ್ಸೆ ಮಾಡಿಸಿದೆ. ಅವಳನ್ನು ಉಳಿಸಿಕೊಳ್ಳಲು ಮಾಡಿದ ಪ್ರಯತ್ನವೆಲ್ಲಾ ವ್ಯರ್ಥವಾಯಿತು. ಅವಳು ಕೂಡಿಟ್ಟ ಸಂಪತ್ತು ಅವಳಿಗಾಗಿ— ಅವಳ ಜೀವಕ್ಕಾಗಿ ಹರಿದು ಹೋಯಿತು. ಅವಳದು ಅವಳೊಡನೇ ಹೋಯಿತು! ನಾನು ಪುನಃ ಮೊದಲಿನಂತಾದೆ! ಅಲ್ಲಿಂದ ಇಲ್ಲಿಗೆ ಬಂದದ್ದು ಉದರ ನಿರ್ವಹಣಕ್ಕಾಗಿ! ಬೆಳೆಯುತ್ತಿದ್ದ ನನ್ನ ಮಗುವಿನ ಭಾವೀ ಬಾಳಿಗಾಗಿ!! ಆ....ದರೆ.... ಆದರೆ ಆ ಮಗುವೇ ಇಂದು ಇಲ್ಲ! ಇನ್ನಾರಿಗಾಗಿ ಬಾಳಿ, ಭೂಮಿಗೆ ಭಾರವಾಗಬೇಕು?" ಎಂದವಳೇ ನಿರಾತಂಕವಾಗಿ ಉದುರುತ್ತಿದ್ದ ಕಣ್ಣೀರನ್ನು ಸೀರೆಯ ಉಡಿಯಲ್ಲಿ ಹಿಡಿಯುತ್ತ ವೇಗವಾಗಿ ಹೊರಪ್ರೊಂಟಳು.

ಇಲ್ಲಿಯ ವರೆಗೂ ಮೂಕವಿಸ್ಮಿತವಾಗಿ ತದೇಕಚಿತ್ತದಿಂದ ಕೇಳುತ್ತಿದ್ದ ಈ ಎರಡು ಜೀವಿಗಳು, ನಿಟ್ಟುಸಿರಿನ ಮೇಲೆ ನಿಟ್ಟುಸಿರನ್ನು ಬಿಟ್ಟುವು! ಕೋಮಲವಾದ ಹೆಣ್ಣಿನ ಹೃದಯಕ್ಕನುಗುಣವಾಗಿ, ರಮಾಬಾಯಿಯ ಕಣ್ಣಲ್ಲಿ ಒಂದೆರಡು ತೊಟ್ಟು ನೀರು ಬಂದದ್ದೂ ಉಂಟು! "ಅಯ್ಯೋ ಪಾಪ!" ಎಂದು ರಮಾಬಾಯಿ ಮನೆಯ ಕೆಲಸಕ್ಕೆಂದು ಎದ್ದಾಗ, ಇಲ್ಲಿಯ ವರೆಗೂ ದಿಂಗುಬಡಿದು ಕುಳಿತಿದ್ದ ರಾಯರು "ಅವಳೇ ಇವಳು! ಹೌದು! ಅವಳೇ ಇವಳು!!" ಎನ್ನುತ್ತ ಬಹಳ ಕಸವಿಸಿಗೊಂಡು, ಖುರ್ಚಿಯಲ್ಲಿ ಕುಕ್ಕರಿಸಿದರು. ಪಾಪ! ಅವಳಾರೆನ್ನುವ ಗೂಢ ತಿಳಿಯದೆ, ಅಡುಗೆಯ ಮನೆಯತ್ತ ನಡೆದಳು ರಮಾಬಾಯಿ.

೫೫ ವರ್ಷಗಳಿಂದ ಅನುಭವಪಟ್ಟ
ಕರ್ತೀ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧-೮-೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುವು.
ವಿಳಾಸ :—
ಗಣೇಶ ರಾಮಚಂದ್ರ ಕರ್ತೀ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ಕುಮಟಾದಲ್ಲಿ ನಮ್ಮ ಏಜಂಟರು
ದಿ ಫ್ರೋರವರ್ ಏಜನ್ಸೀಸ್, ಏಜಂಟ್ಸ್

ಗುಡಗೇರಿಯಲ್ಲಿ ನಮ್ಮ ಏಜಂಟರು
ಶ್ರೀ ಡಿ. ಎನ್. ಹುಲಕೋಟಿ, ನ್ಯೂಜ್ ಏಜಂಟ್

ನಾಟಕ

(ಒಂದು ವಿಚಾರ)

ಶ್ರೀಮತಿ ಸರೋಜಿನಿ ಮಹಿಷಿ, ಎಂ. ಎ. ಧಾರವಾಡ

卐

ನಮ್ಮ ಭಾರತೀಯ ನಾಟಕನಿರ್ಮಿತಿ-ಪ್ರದರ್ಶನಗಳಿಗೂ ವಿಮರ್ಶೆಗೂ ವಿಶಿಷ್ಟವಾದ ತಂತ್ರವೊಂದು ಬೆಳೆದುಬಂದಿದೆ; ತಾಂತ್ರಿಕ ಪರಿಭಾಷೆಗಳೂ ರೂಢವಾಗಿವೆ. ಇವುಗಳ ಅಭ್ಯಾಸ ಇಂದಿನ ನಮ್ಮ ನಾಟಕನಿರ್ಮಿತಿಗೂ ನೆರವು ನೀಡೀತು; ವಿಮರ್ಶೆಗೂ ಸಹಕಾರಿಯಾಗಿ ನಿಂತೀತು !

ಮನುಷ್ಯನು ಮಾತುಬಲ್ಲವನಾಗಿದ್ದರೂ, ನಾಟಕದಲ್ಲಿ ಆ ಮಾತನ್ನಳವಡಿಸಿಕೊಂಡು, ಅದನ್ನು ಕುಶಲ ಕಲೆಯಾಗಿ ನಿರ್ಮಿಸುವುದು ಕಠಿಣವಾಗಿರುತ್ತದೆ. ತನ್ನ ಸುಖ-ದುಃಖಗಳನ್ನು ಬದಿಗಿಟ್ಟು, ವಿಶ್ವದ ಸುಖ-ದುಃಖಗಳಲ್ಲಿ ಭಾಗಿಯಾಗಿ, ಭಾವನಾಪ್ರಪಂಚದಲ್ಲಿ ಲೀನನಾಗಿ, ಹೃದಯದಾಳದಿಂದ ಕವಿ ನುಡಿದರೆ, ಭಿನ್ನಪಾತ್ರಗಳ ಮನದಲ್ಲಿ ಒಳಹೊಕ್ಕು, ಮನೋವಿಶ್ಲೇಷಣೆಯಿಂದ, ಹಲವು ಮಾತುಗಳನ್ನು ಬಚ್ಚಿಟ್ಟು ಹಲವನ್ನು 'ಹೊರಗೆಳೆದು, ಕ್ರಿಯೆಯ ಮೂಲಕವಾಗಿ ನಾಟಕಕಾರನು ತನ್ನ ಕೌಶಲ್ಯವನ್ನು ತೋರಿಸಬೇಕಾಗುವುದು. ನಾಟಕಕ್ಕೆ ರಂಗಭೂಮಿಯು ಅವಶ್ಯವಾಗಿ ಬೇಕೇ ಬೇಕು. ಕಥೆ-ಕಾದಂಬರಿಗಳಲ್ಲಿ ಪಾತ್ರಗಳು ರಂಗಭೂಮಿಯನ್ನು ತಮ್ಮೊಳಗೇ ಹೊತ್ತು ಆಡ್ಡಾಡಿದರೆ, ನಾಟಕದಲ್ಲಿ ಪಾತ್ರಗಳು ರಂಗಭೂಮಿಯ ಮೇಲೆ ಆಡ್ಡಾಡಬೇಕಾಗುವುದು. ಕಥೆ-ಕಾದಂಬರಿಗಳಲ್ಲಿ ಓದುಗರು ತಮ್ಮ ಮನೋವೇದಿಕೆಯ ಮೇಲೆಯೇ ರಂಗಭೂಮಿಯನ್ನು ಕಲ್ಪಿಸಿ ಅದರ ಸ್ವಾರಸ್ಯವನ್ನು ಸವಿದರೆ, ನಾಟಕದಲ್ಲಿ ಇದನ್ನು ಬಾಹ್ಯ ಚಕ್ಷುವಿನಿಂದಲೇ ನೋಡಬೇಕಾಗುವುದು. ಆದಕ್ಕೆಂದೇ ನಾಟಕ ದೃಶ್ಯಕಾವ್ಯ.

ಕಥೆ-ಕಾದಂಬರಿಗಳಲ್ಲಿ ಕಥಾವಸ್ತುವಿನ ಬೆಳವಣಿಗೆ, ಪಾತ್ರಪೋಷಣ, ವಿವಿಧ ಸನ್ನಿವೇಶಗಳ ನಿರ್ಮಾಣ ಇತ್ಯಾದಿಗಳೆಲ್ಲ ವಿಧಾನಪೂರ್ವಕವಾಗಿ ಸಾಗಬೇಕಾದುವೇನೋ ಸರಿ; ಆದರೆ ಆದರ ಗಾತ್ರ ಇಷ್ಟೇ ಆಗಿರಬೇಕೆಂಬ ನಿರ್ಬಂಧವಿಲ್ಲ; ಸಮಯ ನಿರ್ಬಂಧವೂ ಅದಕ್ಕಿಲ್ಲ. ಯಾವುದೇ ಒಂದು ಪಾತ್ರದ ಮನೋವಿಶ್ಲೇಷಣೆಯನ್ನು ಕಾದಂಬರಿಕಾರನು ಮಾಡುತ್ತ ಹೋಗಬಹುದು. ಅಥವಾ ಅದನ್ನು ಸ್ಪಷ್ಟವಾಗಿಯೇ ಹೇಳದೆ ಅದರ ಅರ್ಥವನ್ನು ಮಾತ್ರ ಹೊರಗೆಡಹಬೇಕೆಂದಿದ್ದರೆ, ಮತ್ತೆ ನಾಟಕೀಯತೆಯ ಬಣ್ಣ ಬಳಿದೂ ಹಾಗೆ ಮಾಡಬಹುದು. ಆದರೆ ನಾಟಕಕಾರನ ಕಾರ್ಯ ಇದಕ್ಕಿಂತ ಸೂಕ್ಷ್ಮ. ಮಾತುಗಳನ್ನು ಬಚ್ಚಿಟ್ಟು ಅವನು ಅರ್ಥವನ್ನು ಹೊರಗೆಡಹಬೇಕಾಗುತ್ತದೆ. ಅಲ್ಲದೆ ಬಹಳ ಹೆಚ್ಚೆಂದರೂ ಮೂರು ತಾಸಿನ ಅವಧಿಯೊಳಗೆ ದೃಶ್ಯಕಾವ್ಯದ ಅಭಿನಯ ಮುಗಿಯಲೇಬೇಕು. ಅದಕ್ಕಾಗಿ, ಅನಾವಶ್ಯಕವಾದ ಸನ್ನಿವೇಶಗಳನ್ನು ಕಲ್ಪಿಸಿದರೆ, ಕಥಾವಸ್ತುವಿನ ಬೆಳವಣಿಗೆಯೂ ನೇರವಾಗಿಯಾಗದು, ನಾಟಕದಲ್ಲಿ ಶೈಥಿಲ್ಯವುಂಟಾಗುವುದು, ವೇಳೆಯೂ ಹೆಚ್ಚು ಹಿಡಿಯುವುದು, ಪ್ರೇಕ್ಷಕರ ಮನದ ಮೇಲೆ ಇಚ್ಛಿಸಿದ ಪರಿಣಾಮವೂ ಆಗದು. ನಾಟಕದಲ್ಲಿ ಸಮಯ ನಿರ್ಬಂಧ, ಸ್ಥಳನಿರ್ಬಂಧ, ಕ್ರಿಯಾನಿರ್ಬಂಧಗಳ ನಿಯಮಗಳನ್ನು ಪಾಲಿಸಲೇಬೇಕೆಂಬ ಕಟ್ಟು ಒಂದು ಕಾಲದಲ್ಲಿತ್ತು. ಆದರೆ ಪ್ರತಿಭಾಶಾಲಿಗಳಾದ ನಾಟಕಕಾರರೇ ಈ ಕಟ್ಟುಗಳನ್ನೊಡೆದು ಹೊರಬಂದು, ಅದಕ್ಕೊಂದು ಪ್ರಮಾಣ ಸ್ವರೂಪವನ್ನು ಕೊಟ್ಟಿದ್ದಾರೆ.

ನಾಟಕದಲ್ಲಿ ಕ್ರಿಯೆ ಮುಖ್ಯ; ನಾಟಕದ ಪುಸ್ತಕದಲ್ಲಿ ಬರೆದ ಮಾತಿಗಿಂತಲೂ ರಂಗಭೂಮಿಯ ಮೇಲೆ ಮಾಡುವ ಅಭಿನಯದಿಂದಲೇ ನಾಟಕಕ್ಕೆ ಕಳೆಕಟ್ಟುತ್ತದೆ. ಹೀಗೆಂದು ನಾಟಕದಲ್ಲಿ ಮಾತುಗಳೇ ಅವಶ್ಯವಿಲ್ಲವೆಂದು ಹೇಳಲಾಗದು. ಮಾತಿಲ್ಲದ ಮೂಕನಾಟಕಗಳಿಂದಲೇ, ಮಾತಿನ ನಾಟಕಗಳ ವರೆಗೆ ಪ್ರಗತಿಯಾಗಿದೆ. ಸೂತ್ರಧಾರನು ಜಗ್ಗಿ ಕುಣಿಸುವ— ಮಾತಿಲ್ಲದ ಗೊಂಬೆಗಳು, ಪ್ರೇಕ್ಷಕನಲ್ಲಿ ರಸಾನಂದವನ್ನುಂಟುಮಾಡಬಲ್ಲವೇ ? ಅಥವಾ ಮಾತಿಲ್ಲದ ಕ್ರಿಯೆ ಮುಂದೆ ನಡೆಯುತ್ತಿದ್ದು, ಅದರ ಹಿಂದೊಬ್ಬನು ಆ ಕ್ರಿಯೆಯ ಅರ್ಥವನ್ನು ಕೂಗಿ ಕೂಗಿ ವಿವರಿಸುತ್ತಿದ್ದರೆ ಅದರಿಂದ ಸ್ವಾರಸ್ಯವುಂಟಾದೀತೇ ? ಹಿಂದೊಂದು ಕಾಲದಲ್ಲಿ ರಂಗಭೂಮಿಯು ಇಂದಿನಷ್ಟು ಸುಸಜ್ಜಿತವಿಲ್ಲದಾಗ, ಅಭಿನಯ ಕಲೆಯಲ್ಲಿ ಇಂದಿನ ಪ್ರಗತಿ ಕಾಣದಿದ್ದಾಗ, ನಾಟಕಕಾರನು ಆ ಕ್ರಿಯೆಯನ್ನು ಸ್ಪಷ್ಟವಾಗಿ ಮಾತಿನಲ್ಲಿಯೇ ಹೇಳಿಬಿಡುತ್ತಿದ್ದನು. ಉದಾಹರಣೆಗೆ 'ಶಾಕುಂತಲ'ದಲ್ಲಿ "ದಕ್ಷಿಣಾಕ್ಷಿಸ್ಪಂದನಂ ಸೂಚಯಿತ್ವಾ," 'ಶಕುಂತಲಾ ವೃಕ್ಷಸೇಚನಂ ನಾಟ್ಯತಿ.' ಇತ್ಯಾದಿ, ಇತ್ಯಾದಿ. ನಾಟಕದಲ್ಲಿ ಮಾತು ಅಷ್ಟೊಂದು ಮಹತ್ವದ್ದಲ್ಲ, ಎಂದು ಹೇಳಲು ಕಥೆ ಹೇಳುವುದುಂಟು ಡಿಡೆರಾಟ್ ಎಂಬ ಆಂಗ್ಲ ಪಂಡಿತನೊಬ್ಬನು, ನಾಟಕವನ್ನು ನೋಡಬೇಕಾದರೆ, ಕಿವಿಗಳನ್ನು ಮುಚ್ಚಿಕೊಂಡು ಕುಳ್ಳಿರುತ್ತಿದ್ದನಂತೆ! ಇದರಿಂದ ಮಾತು-ಕಥೆಗಳನ್ನೆಲ್ಲ ಬಿಟ್ಟುಕೊಟ್ಟು, ಬರೀ ಅಭಿನಯದಿಂದಲೇ ಎಷ್ಟೊಂದು ಅರ್ಥಮಾಡಿಕೊಳ್ಳಬಹುದೆಂಬುದನ್ನು ಪರೀಕ್ಷಿಸುತ್ತಿದ್ದನಂತೆ!

ನಾಟಕದಲ್ಲಿ ಪಾತ್ರಪೋಷಣೆಗೆ, ಕಥಾವಸ್ತುವಿನ ವಿಕಾಸಕ್ಕೆ ತೀರ ಅವಶ್ಯವಾದ ಘಟನೆಗಳನ್ನೂ ಮಾತುಗಳನ್ನೂ ಮಾತ್ರ ಉಪಯೋಗಿಸಬೇಕಾಗುವುದು. ಇಲ್ಲದಿದ್ದರೆ ನಾಟಕ ಹೊಂದಿಕೆಯಿಲ್ಲದ ಸನ್ನಿವೇಶಗಳ ಒಂದು ಸಂತೆಯಾಗುವುದು. ಇದಕ್ಕಾಗಿ, ನಾಟಕಕಾರನು ಪ್ರತಿಶಬ್ದವನ್ನೂ ತೂಗಿ ನೋಡಬೇಕಾಗುವುದು. ಇಂದಿನ ರಂಗಭೂಮಿಯೂ ಒಳ್ಳೇ ಸುಸಜ್ಜಿತವಾಗಿದ್ದು, ಪ್ರೇಕ್ಷಕರ ಮನದಲ್ಲಿ ಮೊದಲೇ ಹಿನ್ನೆಲೆಯನ್ನು ನಿರ್ಮಿಸಿಡುವುದರಿಂದ, ಈ ಹಿನ್ನೆಲೆಯನ್ನು ನಿರ್ಮಿಸಲು ಉಪಯೋಗಿಸುವ ಸನ್ನಿವೇಶವನ್ನೂ

ನಾಟಕಕಾರನು ಬಿಟ್ಟುಕೊಡಬಹುದು. ರಂಗಭೂಮಿಯ ಕೊರತೆಯನ್ನು ನಾಟಕದಲ್ಲಿ ತುಂಬಿಕೊಳ್ಳಲು ಬರೆದ ನಾಟಕಗಳಿಗಿಂತ, ಇಬ್ಸೆನ್ನನ ನಾಟಕಗಳನ್ನು ನಾವು ಈ ದೃಷ್ಟಿಯಿಂದ ಹೆಚ್ಚು ಮೆಚ್ಚಬಹುದು.

ದೃಶ್ಯಕಾವ್ಯದ ನಾಟಕದಲ್ಲಿಯೇ, ದೃಶ್ಯಾಂಶ, ಸೂಚ್ಯಾಂಶಗಳೆರಡೂ ಸ್ವಾರಸ್ಯವಾಗಿ ಹೊಂದಿಕೊಂಡಿರುತ್ತವೆ. ಎಲ್ಲ ಘಟನೆಗಳನ್ನೂ ರಂಗಭೂಮಿಯ ಮೇಲೆ ತರುವುದರಿಂದ ನಾಟಕದ ಸ್ವಾರಸ್ಯವೇ ಕೆಟ್ಟುಹೋಗುವುದು. ಆದಕ್ಕಾಗಿ ಕೆಲವೊಂದು ಸಂಗತಿಗಳನ್ನು ಸೂಚ್ಯವಾಗಿ ಹೇಳಬೇಕಾಗುವುದು. ಆದರೆ ಯಾವುದು ಸೂಚ್ಯವಾಗಿರಬೇಕು, ಯಾವುದು ದೃಶ್ಯವಾಗಿರಬೇಕು ಎಂಬುದನ್ನು ಮಾತ್ರ ನಾಟಕಕಾರನೇ ನಿರ್ಣಯಿಸಿ, ಪ್ರಭಾವಶಾಲಿಯಾಗುವಂತೆ ಚಿತ್ರಿಸಬೇಕಾಗುತ್ತದೆ. 'ಶಾಕುಂತಲ'ದಲ್ಲಿ ಕಾಲಿದಾಸನು, ದುಷ್ಯಂತನು ಶಕುಂತಲೆಯನ್ನು ಬಿಡುವ ಪ್ರಸಂಗವನ್ನು ಸೂಚ್ಯವಾಗಿ ಮಾಡಿ, ಮೇನಕೆ ಬಂದು ಶಕುಂತಲೆಯನ್ನು ಎತ್ತಿಕೊಂಡು ಹೋದ ದೃಶ್ಯವನ್ನು ದೃಶ್ಯಾಂಶವನ್ನಾಗಿ ಮಾಡಿದ್ದರೆ, ನಾಟಕದ ಸ್ವಾರಸ್ಯವೇ ಕೆಟ್ಟುಹೋಗುತ್ತಿತ್ತು. ರಂಗಭೂಮಿಯ ಮೇಲೆ ಬರುವಂಥ ದೃಶ್ಯಾಂಶವು ಒಳ್ಳೇ ಮಾರ್ಮಿಕವಾಗಿರಬೇಕಾಗುತ್ತದೆ.

ಸಂಸ್ಕೃತ ನಾಟಕಗಳಲ್ಲಿ ಹೀಗೆ ಸೂಚ್ಯಾಂಶವನ್ನು ಹೇಳಲು ಐದು ಬಗೆಗಳಿವೆ. ಇವುಗಳಿಗೆ ಅರ್ಥೋಪಸ್ಥಾಪಕಗಳೆಂದು ಹೇಳುವರು. ಇವುಗಳಲ್ಲಿ ಪ್ರವೇಶಕ, ವಿಷ್ಕಂಭಕ ಇವೆರಡು ಮುಖ್ಯವಾದುವು. 'ವಿಷ್ಕಂಭಕ' ಎರಡು ಮಧ್ಯಮ ವರ್ಗದ ಪಾತ್ರಗಳಲ್ಲಿ ನಡೆಯುವ ಸಂಭಾಷಣೆ. ಇದರಲ್ಲಿ ಎರಡೂ ವ್ಯಕ್ತಿಗಳು ಒಂದೇ ವರ್ಗದುವಿದ್ದು, ಮಾತು-ಕಥೆ ಸಂಸ್ಕೃತದಲ್ಲಿಯೇ ನಡೆಯುತ್ತಿದ್ದರೆ, ಅದಕ್ಕೆ ಶುದ್ಧವಿಷ್ಕಂಭಕ ಎಂದೂ, ಒಂದು ಪಾತ್ರವು ಮಧ್ಯಮ ವರ್ಗದ್ದೂ, ಇನ್ನೊಂದು ನೀಚವರ್ಗದ್ದೂ ಆಗಿದ್ದು, ಸಂಭಾಷಣೆ ಪ್ರಾಕೃತದಲ್ಲಿ ನಡೆಯುತ್ತಿದ್ದರೆ, ಅದಕ್ಕೆ ಮಿಶ್ರ ವಿಷ್ಕಂಭಕವೆಂದೂ ಹೇಳುವರು. ಇದು ನಡೆದುಹೋದ ಅಥವಾ ನಡೆಯತಕ್ಕ ಸಂಗತಿಗಳನ್ನು ಸೂಚಿಸಲು ಯಾವುದೇ ಅಂಕದ ಮೊದಲಿಗೆ ಬರುತ್ತದೆ. ಕೆಲವು ಸಲ ನಾಟಕದ ಮೊದಲಿಗೂ ಬರುವುದುಂಟು. 'ಪ್ರವೇಶಕ'ದ ಉದ್ದೇಶ ಕೂಡ ಸೂಚ್ಯಾಂಶವನ್ನೇ ಹೇಳುವುದಾದರೂ, ಇದರಲ್ಲಿಯ ಪಾತ್ರಗಳು ಯಾವಾಗಲೂ ಕೆಳವರ್ಗದುವೇ ಇರುತ್ತವೆ; ಸಂಭಾಷಣೆ ಯಾವಾಗಲೂ ಪ್ರಾಕೃತದಲ್ಲಿಯೇ; ಮತ್ತೆ ಇದು ನಾಟಕದ ಮೊದಲಿಗೆ ಎಂದೂ ಬರಲಾರದು. ಎಷ್ಟೋ ಸಲ ಅವಶ್ಯವಾಗಿ ಸೂಚಿಸಬೇಕಾದ ಅಂಶವನ್ನು ತೆರೆಯ ಮರೆಯಿಂದ ಹೇಳುವ ಪದ್ಧತಿಯೂ ಈ ನಾಟಕದಲ್ಲಿತ್ತು. ಅದಕ್ಕೆ 'ಚೂಲಿಕಾ' ಅಥವಾ 'ಖಂಡಚೂಲಿಕಾ' ಎಂದು ಹೆಸರು. ಮುಂಬರುವ ಅಂಕದಲ್ಲಿ ನಡೆಯುವ ಕ್ರಿಯೆಯ ಸೂಚನೆಯನ್ನು ಹಿಂದಿನ ಅಂಕದ ಕೊನೆಯಲ್ಲಿಯೇ ಪ್ರೇಕ್ಷಕರಿಗೆ ತಿಳಿಸಿಬಿಡುವುದು ನಾಟಕದ ಪದ್ಧತಿ; ಹೀಗೆ ಸೂಚಿಸುವುದಕ್ಕೆ, 'ಅಂಕಮುಖ' ಎಂದು ಹೆಸರು. ಯಾವುದೇ ಒಂದು ಅಂಕದಲ್ಲಿಯ ಕ್ರಿಯೆಯು ಆ ಅಂಕದಲ್ಲಿಯೇ ಕೊನೆಗೊಳ್ಳದೆ ಮುಂದಿನ ಅಂಕದವರೆಗೂ ಹಾಗೇ ಸಾಗಿದರೆ, ಅದಕ್ಕೆ 'ಅಂಕಾವತಾರ'. ಅಂತೂ ರಂಗಭೂಮಿಯ ಮೇಲೆ ಬರಲು ಅನವಶ್ಯವೂ ಅಸಾಧ್ಯವೂ ಆದ ಅಂಶಗಳನ್ನು ಈ ಮೇರೆಗೆ ಸೂಚಿಸಿ, ಪ್ರೇಕ್ಷಕರ ರಸಾಸ್ವಾದನೆಗೆ ಅನುಕೂಲ ಮಾಡಿಕೊಡುವುದು ನಾಟಕಕಾರನ ಉದ್ದೇಶವಾಗಿತ್ತು.

ಇವೆಲ್ಲ ಸಾಧನೆಗಳಿಂದ ಕ್ರಮೇಣ ಬೆಳೆದು ಸಫಲವಾಗುವ ಮುಖ್ಯ ಕಥಾವಸ್ತುವು ನಾಟಕದಲ್ಲಿ ಒಂದೇ. ಇದಕ್ಕೇ 'ಆಧಿಕಾರಿಕ' ಎಂದು ಹೇಳುವರು. ಇದರ ಉದ್ದೇಶಸಾಧನೆಗೆ ಸಹಾಯಕವಾಗಿ ಗೌಣಕಥೆಯೊಂದು ಅಥವಾ ಹಲವು, ನಾಟಕದಲ್ಲಿ ಬರಬಹುದು. ಗೌಣಕಥೆ ಮೊದಲಿನಿಂದ ಕೊನೆಯ ವರೆಗೂ 'ಆಧಿಕಾರಿಕ'ದ ಜೊತೆಗೆ ಬಂದರೆ, ಅದು 'ಪತಾಕಾಸ್ಥಾನ'. ಸ್ವಲ್ಪೇ ದೂರದ ವರೆಗೆ ಬಂದು, ತನ್ನ ಸಹಕಾರವನ್ನು ಕೊಟ್ಟು, ಅಲ್ಲಿಯೇ ಕೊನೆಗಂಡರೆ ಆ ಗೌಣಕಥೆ 'ಪ್ರಕರಿ'. ನಾಟಕಕಾರನು ಮುಖ್ಯ ಕಥಾವಸ್ತುವಿನ ವಿಕಾಸಕ್ಕೆ ಕಳೆಕಟ್ಟುವುದಕ್ಕಾಗಿ ಗೌಣಕಥೆಯನ್ನು ಉಪಯೋಗಿಸುತ್ತಾನೆ. ಗೌಣಕಥೆಯು ಉತ್ಕರ್ಷದಿಂದಲೋ, ಅಪಕರ್ಷದಿಂದಲೋ, ಸಾಮ್ಯವನ್ನು ತಂದೋ ಅಥವಾ ತೀಕ್ಷ್ಣವಾದ ವ್ಯತ್ಯಾಸದಿಂದಲೋ, ಮುಖ್ಯ ಕಥಾವಸ್ತುವಿನ ಉದ್ದೇಶಕ್ಕೆ ಸಹಾಯವಾಗಿರುತ್ತದೆ. ಶಾಕುಂತಲದ ಆರನೆಯಂಕದಲ್ಲಿ ಧನಿಕನೊಬ್ಬನು ನಿಪುತ್ರಿಕನಾಗಿ ಮರಣಹೊಂದಿದ ವಾರ್ತೆ ದುಷ್ಯಂತನ ಕಿವಿಗೆ ಸಿಡಿಲಿನಂತೆ ತಾಗಿ, ತನ್ನ ಸ್ಥಿತಿಯನ್ನೇ ನೆನಪುಮಾಡಿ ಕೊಡುತ್ತದೆ; ಗರ್ಭಿಣಿಯಾದ ಶಕುಂತಲೆ ತನ್ನೆಡೆಗೆ ಬಂದಾಗಲೂ ತಾನು ತಿರಸ್ಕರಿಸಿದುದು ಪಶ್ಚಾತ್ತಾಪವನ್ನುಂಟುಮಾಡುತ್ತದೆ.

ನಾಟಕದಲ್ಲಿ ಕಥಾವಸ್ತುವನ್ನು ಘಟನೆಗಳ ಮೂಲಕವಾಗಿ ಕ್ರಮೇಣ ಬೆಳೆಯಿಸಬೇಕಾಗುವುದು. ಈ ಕಥಾವಸ್ತುವಿನ ವಿಕಾಸಕ್ಕೆ ಪಾತ್ರಗಳು ಅತಿ ಮುಖ್ಯವಾದುವುಗಳೆಂದು ಬೇರೆ ಹೇಳುವುದು ಬೇಡ. ಅವುಗಳಿಂದಲೇ ಕಥಾವಸ್ತುವು ಮುಂದುವರಿಯತಕ್ಕದ್ದು. ಆದಕ್ಕಾಗಿ ಪಾತ್ರಪೋಷಣೆಯೂ ನಾಟಕದಲ್ಲಿ ಅತಿ ಮುಖ್ಯವಾದುದು. ಪಾತ್ರಗಳ ಸರ್ವತೋಮುಖ ವಿಕಾಸದೃಷ್ಟಿಯಿಂದಲೇ ನಾಟಕದಲ್ಲಿ ಘಟನೆಗಳು ಬಂದಿದ್ದರೆ, ಅವೆರಡರ ಸಮನ್ವಯದಿಂದ ಅಥವಾ ತಿಕ್ಕಾಟದಿಂದ ಕಥಾವಸ್ತುವು ವಿಕಾಸವನ್ನು ಹೊಂದುತ್ತದೆ. ನಾಟಕದಲ್ಲಿ ಪಾತ್ರಗಳ ಪರಿಚಯ ನಮಗಾಗುವುದು, ಅವುಗಳ ಮಾತಿನಿಂದ ಅಥವಾ ಅನ್ಯಪಾತ್ರಗಳು ಯಾವುದೇ ಒಂದು ವಿಶಿಷ್ಟ ಪಾತ್ರವನ್ನು ಕುರಿತು ತಮ್ಮತಮ್ಮೊಳಗೇ ಹೇಳಿಕೊಳ್ಳುವ ಮಾತಿನಿಂದ; ಆದರೆ ನಾಟಕದಲ್ಲಿ ಆಡುವ ಮಾತಿಗಿಂತ ಮಾಡುವ ಕಾರ್ಯವೇ ಮುಖ್ಯವಾದುದು; ಮಾಡುವ ಕಾರ್ಯವೂ ಆಡಿದ ಮಾತಿಗೆ ಅಥವಾ ಅಭಿವ್ಯಕ್ತಿಸಿದ ಮನೋವೃತ್ತಿಗನುಗುಣವಾಗಿರಬೇಕಾಗುವುದು.

ಮರಣೋತ್ತರ ಕರ

(ಅರ್ಥಿಕ ವಿಚಾರ)*

ಶ್ರೀ. ಶಾಂ. ಭೀ. ಜೋರಾಪೂರ, ಜಬಲ್‌ಪುರ

★

ಲೇಖಾಂಕ ೧

ಸರಕಾರದ ಕರಗಳೆಂದರೆ ಜನರೆಲ್ಲ ಬೆದರಿ ನಿಲ್ಲುವರು. ಆದರೆ ಕರಗಳಿಲ್ಲದೆ ಯಾವ ರಾಷ್ಟ್ರೀಯ ಸರಕಾರವೂ ಸುಯಂತ್ರಿತವಾಗಿ ಸಾಗದು. ಸರಕಾರದ ಹಲವು ಕರಗಳಲ್ಲಿ ‘ ಪಾರಸಾಕರ ’ ಒಂದು. ಅದರ ಸ್ವರೂಪ ಪರಿಚಯ ಈ ಲೇಖನದಲ್ಲಿದೆ.

卐

ಆಧುನಿಕಯುಗದ ರಾಷ್ಟ್ರೀಯ ಅರ್ಥಿಕ ರಂಗದಲ್ಲಿ, ರಾಜ್ಯಾಂಗದ **ಪಾತ್ರದ ಮಹತ್ತ್ವವು** ದಿನೇ ದಿನೇ ಹೆಚ್ಚಾಗುತ್ತಿದೆ. ರಾಷ್ಟ್ರದ ಸಂರಕ್ಷಣೆಗಾಗಿ ಮತ್ತು ಅಭಿವೃದ್ಧಿಗಾಗಿ ರಾಜ್ಯಾಂಗವು ಹೇರಳ ಧನ ವೆಚ್ಚಮಾಡಬೇಕಾಗಿದೆ. ಶಾಂತಿ-ಸುವ್ಯವಸ್ಥೆಯನ್ನು ಕಾಯಲು ಸೈನ್ಯ ಮತ್ತು ಪೋಲಿಸ ದಳಗಳು, ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಲು ನೀರಾವರಿ, ವಿದ್ಯುಚ್ಛಕ್ತಿ, ಮತ್ತಿನ್ನಿತರ ಯೋಜನೆಗಳು, ಶಿಕ್ಷಣ ಸೌಕರ್ಯ, ವೈದ್ಯಕೀಯ ಸಹಾಯ ಮುಂತಾದವುಗಳನ್ನು ಒದಗಿಸಿಕೊಡಬೇಕಾದದ್ದು ರಾಜ್ಯಾಂಗದ ಮುಖ್ಯ ಕರ್ತವ್ಯ. ಇವುಗಳನ್ನೆಲ್ಲ ಸಾಧಿಸಲು ಅಪಾರ ಧನ ಬೇಕು. ಈ ಹಣ ಎರಡು ವಿಧವಾಗಿ ರಾಜ್ಯದ ಬೊಕ್ಕಸವನ್ನು ಸೇರುತ್ತದೆ. ರಾಷ್ಟ್ರವು ತನ್ನ **ಒಡೆತನದಲ್ಲಿಟ್ಟುಕೊಂಡ** ಅಥವಾ ತನ್ನ ಮೇಲ್ವಿಚಾರಣೆಯಲ್ಲಿ **ಸಾಗಿಸುವ ವ್ಯಾಪಾರೋದ್ಯಮಗಳಿಂದ** ಮತ್ತು ಪ್ರಜೆಗಳ ಆಸ್ತಿಯ **ಮೇಲೆ, ಉತ್ಪನ್ನದ ಮೇಲೆ** ಮತ್ತು ಉದ್ಯೋಗಗಳ ಮೇಲೆ **ಹೇರುವ ಕರದಿಂದ.** ರೇಲ್ವೆ, ಮೋಟಾರ ಸಾರಿಗೆ, ಗೊಬ್ಬರ ಕಾರಖಾನೆ, ಉಕ್ಕು-ಕಬ್ಬಿಣ ಕಾರಖಾನೆ ಮುಂತಾದುವುಗಳು ಮೊದಲನೆಯ ಭಾಗದಲ್ಲಿ ಬರುವುವು. ಆಸ್ತಿಯ ಮೇಲಿನ ಕರ, ಆದಾಯ ಕರ, ಆಯಾತ-ನಿರ್ಯಾತ ಕರ, ಮಾರಾಟಕರ ಮುಂತಾದುವುಗಳು ಎರಡನೆಯ ವಿಭಾಗದಲ್ಲಿ ಬರುವುವು. ಕರಗಳಲ್ಲಿಯೂ ಎರಡು ಭಾಗಗಳಿವೆ:— ಪ್ರತ್ಯಕ್ಷ ಕರ ಮತ್ತು ಅಪ್ರತ್ಯಕ್ಷ ಕರ. ಪ್ರತ್ಯಕ್ಷಕರವೆಂದರೆ, ಯಾವನ ಮೇಲೆ ಕರ ಹೇರಿರುತ್ತದೆಯೋ ಅವನೇ ಕೊಡಬೇಕಾಗುತ್ತದೆ. ಅದನ್ನು ತಪ್ಪಿಸಲಿಕ್ಕಾಗಲಿ, ಇಲ್ಲವೆ ಎರಡನೆಯವರ ಮೇಲೆ ಹೊರಿಸಲಿಕ್ಕಾಗಲಿ ಸಾಧ್ಯವಿಲ್ಲ. ಆದಾಯಕರವನ್ನು ಮತ್ತು ಮರಣೋತ್ತರ ಕರವನ್ನು ಈ ದೃಷ್ಟಿಯಿಂದ ಪ್ರತ್ಯಕ್ಷಕರಗಳೆಂದು ಕರೆಯಬಹುದು. ಒಬ್ಬನ ಉತ್ಪನ್ನದ ಮೇಲೆ ಹೇರಿದ ಕರವನ್ನು ಅವನೇ ಕೊಡಬೇಕಾಗುವುದು. ಎರಡನೆಯವರು ಕೊಡುವಂತೆ ಮಾಡಲು ಅವನಿಗೆ ಬರಲಾರದು. ಆದರೆ ಅಪ್ರತ್ಯಕ್ಷ ಕರವು ಹಾಗಲ್ಲ. ಅಪ್ರತ್ಯಕ್ಷ ಕರದ ಭಾರವು ಸಂಪೂರ್ಣವಾಗಿ ಒಬ್ಬನ ಮೇಲೆಯೇ ಬೀಳುವುದಿಲ್ಲ. ಮೊದಲಿಗೆ ಅವನೇ ಸಂಪೂರ್ಣ ಕರ ಕೊಟ್ಟರೂ, ಅನಂತರ ಅದರ ಕೆಲ ಅಂಶವನ್ನು (ಅದರ ಪ್ರಮಾಣವು ಕಡಿಮೆಯಿರಬಹುದು ಅಥವಾ ಹೆಚ್ಚು ಇರಬಹುದು.) ಪರರ ಮೇಲೆ ಹಾಕಿ ತನ್ನ ಭಾರವನ್ನು ಕಡಿಮೆಮಾಡಿಕೊಳ್ಳಬಹುದು. ಮಾರಾಟಕರವು ಇದಕ್ಕೆ ಒಳ್ಳೆಯ ನಿದರ್ಶನವಾಗಿದೆ. ಪೆಟ್ರೋಲಿನ ಮೇಲಿನ ಅಥವಾ ಬಟ್ಟೆಯ ಮೇಲಿನ ಕರವನ್ನು ವ್ಯಾಪಾರಸ್ಥನೊಬ್ಬನೇ ಕೊಡುವುದಿಲ್ಲ. ಬಳಕೆಗಾರರೂ ಸಹ ತೆರಬೇಕಾಗುತ್ತದೆ. ಹೇಗೆಂದರೆ, ಪೆಟ್ರೋಲ್ ಮತ್ತು ಬಟ್ಟೆಯ ಮಾರಾಟಗಾರರು, ಕರವನ್ನು ಹೇರಿದ ಪರಿಮಾಣವಾಗಿ, ತಮ್ಮ ಲಾಭದಲ್ಲಿ ಉಂಟಾದ ಕಡಿತವನ್ನು ತುಂಬಿಕೊಳ್ಳಲು, ಸರಕುಗಳ ಬೆಲೆಯನ್ನು ಹೆಚ್ಚಿಸಬಹುದು. ಈ ಸರಕುಗಳು ನಿತ್ಯೋಪಯೋಗಿಗಳಾಗಿದ್ದರೆ, ಅತ್ಯಾವಶ್ಯಕವಾಗಿದ್ದರೆ, ಹೆಚ್ಚು ಬೆಲೆಕೊಟ್ಟಾದರೂ ಕೊಳ್ಳಲೇಬೇಕಾಗುವುದು. ಇದೇ ರೀತಿ ಅಸಿದ್ಧ ಸರಕುಗಳ ಮೇಲೆ ಹೇರಿದ ಕರವನ್ನು ಸಿದ್ಧ ಸರಕುಗಳ ಬಳಕೆಗಾರರು ತೆರಬೇಕಾಗುತ್ತದೆ. ಅಪ್ರತ್ಯಕ್ಷಕರದ ಭಾರವು ಸಂಪೂರ್ಣವಾಗಿ ಬಡವರ ಮೇಲೆಯೇ— ಗ್ರಾಹಕರ ಮೇಲೆಯೇ ಬೀಳುವುದೆಂಬ ವಾದ-ವಿವಾದವಿದೆ. ಆದರೆ ಈ ವಾದದಲ್ಲಿ ಕೈ ಹಾಕುವುದು ವಿಷಯಾಂತರವಾಗುವುದರಿಂದ, ಆ ಸರಕಿಗೆ ಇರುವ ಬೇಡಿಕೆ-ಪೂರೈಕೆ ಮತ್ತು ಕರಕೊಡುವವರ ಸ್ಥಾನ-ಮಾನಗಳ ಮೇಲೆ ಅದು ಅವಲಂಬಿಸಿದೆಯೆಂದಿಷ್ಟೇ ಹೇಳಬಹುದು. ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ಕರದ ಪ್ರಮಾಣದ ಬಗ್ಗೆಯೂ ಭಿನ್ನಾಭಿಪ್ರಾಯವಿದೆ. ಆದರೆ ಒಂದೇ ಬಗೆಯ ಕರವು ಹೆಚ್ಚು ಭಾರವಾದರೆ ಆರ್ಥಿಕಸ್ಥಿತಿಯ ಮೇಲೆ ದುಷ್ಪರಿಣಾಮವಾಗದಿರದು. ಅಪ್ರತ್ಯಕ್ಷ ಕರದ ಪ್ರಮಾಣದ ಹೆಚ್ಚಳವೆಂದರೆ, ಔದ್ಯೋಗಿಕ ರಂಗದಲ್ಲಿ ರಾಷ್ಟ್ರವು ಹಿಂದುಳಿದುದರ ಲಕ್ಷಣ. ಉದಾಹರಣೆಗಾಗಿ ೧೯೩೮-೩೯ ರಲ್ಲಿಯ ಭಾರತದ ಸ್ಥಿತಿಯನ್ನು ನೋಡಬಹುದು: ಆಗ ಪ್ರತ್ಯಕ್ಷ ಕರದ ಪ್ರಮಾಣ ೨೧% ಇದ್ದರೆ, ಅಪ್ರತ್ಯಕ್ಷ ಕರದ ಪ್ರಮಾಣ ೭೯% ಇತ್ತು. ಇದರ ವಿರುದ್ಧ ಸ್ಥಿತಿ ಯುದ್ಧಕಾಲದಲ್ಲಿ— ೧೯೪೩-೪೪ ರಲ್ಲಿ ಕಂಡುಬರುತ್ತದೆ. ಆಗ ಈ ಪ್ರಮಾಣವು ಅನುಕ್ರಮವಾಗಿ ೬೦% ಮತ್ತು ೪೦% ಇತ್ತು. ಇದರಂತೆ ಮುಂದುವರೆದ ರಾಷ್ಟ್ರಗಳಾದ, ಅಮೇರಿಕೆಯ ಸಂಯುಕ್ತ ಸಂಸ್ಥಾನ ಮತ್ತು ಸಂಯುಕ್ತ ಸಾಮ್ರಾಜ್ಯಗಳಲ್ಲಿ ಇದರ ಪ್ರಮಾಣವು ೧೯೪೮-೪೯ ರಲ್ಲಿ ಅನುಕ್ರಮವಾಗಿ ೭೯%, ೩೦% ಮತ್ತು ೪೮%, ೫೨% ಇತ್ತು. ಅಂಕ

* ಶ್ರೀ. ಎಸ್. ವ್ಹಿ. ಗಾಡಗೀಳ ಮತ್ತು ಶ್ರೀ. ವಿಠಲ ಬಾಬು, ಇವರ "**Studies in Death Duties**" ಗ್ರಂಥದಿಂದ ಅತ್ಯಂತ ಉಪಕೃತನಿದ್ದೇನೆ. **—ಲೇಖಕ**

ದರ ಪಿತಾಮಹನೆಂದು ಹೆಸರಾದ ಅಡ್ಯಾಮ್ ಸ್ಮಿಥ್‌ನು ಪ್ರತಿಪಾದಿಸಿರುವ ಸಮಾನತೆ, ಸರಳತೆ, ನಿಶ್ಚಿತತೆ ಮತ್ತು ಮಿತವ್ಯಯ ತತ್ತ್ವಗಳು ಒಳ್ಳೆಯ ಕರದ ಲಕ್ಷಣಗಳೆಂದು ಪ್ರಸಿದ್ಧವಾಗಿವೆ. ಆಧುನಿಕ ಶಾಸ್ತ್ರಜ್ಞರು, ಕಾಲಮಾನ ಪರಿಸ್ಥಿತಿಗೆ ಹೊಂದಿಕೆಯಾಗುವಂತೆ ಹೆಚ್ಚುಕಡಿಮೆ ಮಾಡಲು ಬರುವ ತತ್ತ್ವವನ್ನೂ, ಪ್ರಗತಿಪರ ದರದ ತತ್ತ್ವವನ್ನೂ ಇದರ ಜೊತೆಗೆ ಸೇರಿಸಿದ್ದಾರೆ. ದೃಷ್ಟಿನಲ್ಲಿ, ಹನ್‌ಸೇನ್ ಮತ್ತು ಪೆರ್ಲಾಫ್ ಇವರು ಅಭಿಪ್ರಾಯಪಡುವಂತೆ, ಯಾವುದೇ ಕರವು ದೇಶದ ಆರ್ಥಿಕ ಪ್ರಗತಿಯನ್ನು ಕುಂಠಿತಗೊಳಿಸದಂತೆಯೂ, ಆರ್ಥಿಕ ಬಲವನ್ನು ಹೆಚ್ಚಿಸುವಂತೆಯೂ ಇರಬೇಕು.

ಈ ಹಿನ್ನೆಲೆಯಲ್ಲಿ, ಮರಣೋತ್ತರ ಕರದ ಸ್ವರೂಪವನ್ನೂ, ಇದರ ಭಾರ ಮತ್ತು ಪರಿಣಾಮಗಳನ್ನೂ ವಿಚಾರಿಸಿ, ಭಾರತದಲ್ಲಿ ಇದರ ಸ್ಥಾನವನ್ನೂ, ಸಮಸ್ಯೆಯನ್ನೂ, ಚರ್ಚಿಸಬಹುದು. ಮೊದಲೇ ಹೇಳಿದಂತೆ, ಮರಣೋತ್ತರ ಕರವು ಪ್ರತ್ಯಕ್ಷಕರವು. ಇದನ್ನು ಮುಖ್ಯವಾಗಿ ಎರಡು ರೀತಿಯಿಂದ ಹೇರಬಹುದು: ಯಾವ ಒಬ್ಬ ಆಸ್ತಿವಂತನು ಮರಣ ಹೊಂದಿದರೆ, ಆ ಆಸ್ತಿಯು ವಾರಸುದಾರರಲ್ಲಿ ಹಂಚಿಹೋಗುವ ಮೊದಲು, ಸಂಪೂರ್ಣ ಆಸ್ತಿಯ ಮೇಲೆ ನಿರ್ದಿಷ್ಟ ಪ್ರಮಾಣದ ಕರವನ್ನು ಹೇರಬಹುದು. ಇದಕ್ಕೆ "ಆಸ್ತಿಕರ" ಎನ್ನಬಹುದು (ವಾರ್ಷಿಕ "ಆಸ್ತಿಕರ" ಇದರಿಂದ ಭಿನ್ನವಾದದ್ದು.) ಎರಡನೆಯ ರೀತಿಯೆಂದರೆ, ಆ ಆಸ್ತಿಯು ವಾರಸದಾರರಲ್ಲಿ ಹಂಚಿಹೋದ ನಂತರ, ಬೇರೆ ಬೇರೆಯಾಗಿ ಆಸ್ತಿಯ ಪಾಲಿಯನ್ನನುಲಕ್ಷಿಸಿ ಕರ ಹೇರಬಹುದು. ಇದಕ್ಕೆ "ವಾರಸಾ ಕರ" ಎಂದು ಹೆಸರು.

ರಾಷ್ಟ್ರದ ಆದಾಯದಲ್ಲಿ ಮರಣೋತ್ತರ ಕರದ ಸ್ಥಾನವು ಮಹತ್ತ್ವದ್ದಿದೆ. ಪ್ರತ್ಯಕ್ಷಕರದ ಕ್ಷೇತ್ರವು ಸಂಕುಚಿತವಾದದ್ದು. ಇದರ ಪ್ರಮಾಣವು ಮಿತಿಮೀರಿದರೆ, ಕೂಡಿಡುವ ಮನಃಪ್ರವೃತ್ತಿಗೆ ಧಕ್ಕೆಯಾಗಿ, ರಾಷ್ಟ್ರದ ಬಂಡವಾಳ ಕಡಿಮೆಯಾಗಿ, ಉದ್ಯಮವು ಕುಂಠಿತವಾಗಿ, ದೇಶದ ಆರ್ಥಿಕಸ್ಥಿತಿಯು ಹದಗೆಡಬಹುದು. ಹಾಗೆಂದು ಅಪ್ರತ್ಯಕ್ಷ ಕರದಪ್ರಮಾಣವನ್ನು—ಅಸ್ವಾರ್ಜಿತ ಆದಾಯ ಕರದ ಪ್ರಮಾಣವನ್ನು ಕಡಿಮೆಮಾಡಿದರೆ, ಸ್ವತಃ ಗಳಿಸದ ಹಣವು ಉಳಿದು ಆರ್ಥಿಕ ಅಸಮಾನತೆಯುಂಟಾಗಿ, ಅದಕ್ಕೂ ಹೆಚ್ಚು ಹಾನಿಕಾರಕ ಪರಿಣಾಮವಾಗಬಹುದು. ಇಂಥ ಆದಾಯದ ಮೇಲೆ ಭಾರವಾದ ಕರ ಹೇರುವುದು ಆರ್ಥಿಕಸಮಾನತೆಯ ದೃಷ್ಟಿಯಿಂದಲೂ ನ್ಯಾಯವಾದದ್ದು. ಈ ಎರಡು ಪರಿಣಾಮಗಳನ್ನು ಗಮನಿಸಿದರೆ, ಮರಣೋತ್ತರ ಕರದ ಆವಶ್ಯಕತೆಯು ಸ್ಪಷ್ಟವಾಗುವುದು. ಇದರಿಂದ ಏನೂ ತೊಂದರೆಯಿಲ್ಲದೆ, ವೆಚ್ಚವಿಲ್ಲದೆ ಅಪಾರ ಧನವು ರಾಷ್ಟ್ರದ ವಶವಾಗುವುದು. ಕರ ಕೊಡುವವನಿಗೂ ಅತಿ ಭಾರವೆನಿಸದು. ಏಕೆಂದರೆ ಅವನು ಸ್ವತಃ ಆ ಆಸ್ತಿಯನ್ನು ಗಳಿಸಿರುವುದಿಲ್ಲ. ಅದು "ಲಾಟರಿ"ಯಂತೆ ಅವನ ಪಾಲಿಗೆ ಬಂದಿರುತ್ತದೆ. ಈ ದೃಷ್ಟಿಯಿಂದ ನೋಡಿದರೆ, ಉಳಿದ ಕರಗಳಿಗಿಂತ ಈ ಕರವು ಅತ್ಯುತ್ತಮವಾದದ್ದು.

ಆದರೆ ಕೆಲವು ಹುರುಳಿಲ್ಲದ ವಾದ-ವಿವಾದವನ್ನು ಒಡ್ಡಲಾಗುತ್ತಿದೆ. ವ್ಯಕ್ತಿಸ್ವಾತಂತ್ರ್ಯ, ಬಂಡವಲು ಮತ್ತು ಧನಸಂಚಯಕ್ಕೆ ಅಡ್ಡಿಯಾಗುತ್ತದೆಯೆಂಬುದೇ ಈ ವಾದದ ತಿರುಳು.

ವ್ಯಕ್ತಿಸ್ವಾತಂತ್ರ್ಯದ ಮೇಲೆ ನಿಂತ ವಾದವು ಬಹಳ ಹೊತ್ತು ನಿಲ್ಲಲಾರದು. ವ್ಯಕ್ತಿಗೆ ಹಣಗಳಿಸಲು, ಅದನ್ನು ಹಂಚಿಕೊಡಲು



ಹಕ್ಕು ಇದ್ದೇ ಇದೆ. ಆದರೆ ಆ ಹಕ್ಕು, ಬೆಂಥ್ಯಾಮ್ ಹೇಳುವ ಹಾಗೆ, ಅವನ ಜೀವನವಿರುವ ವರೆಗೆ ಮಾತ್ರ ಇದೆಯೇ ಹೊರತು, ಅವನ ಮರಣದ ನಂತರ ಸೃಷ್ಟಿಯ ಮೇಲೆ ಅವನ ಹಕ್ಕು ಏನೂ ಉಳಿಯಲಾರದು. 'ಅವನು ತನ್ನ ಇಷ್ಟರಿಗೆ ಹಂಚಿಕೊಟ್ಟ ಆಸ್ತಿಯನ್ನು, ವ್ಯಕ್ತಿಯ ಮರಣದ ನಂತರ ಕಿತ್ತುಕೊಳ್ಳುವುದೆಂದರೆ ಅವನ ಸ್ವಾತಂತ್ರ್ಯವನ್ನು ಅಲ್ಲಗಳೆದಂತೆಯೇ ಆಗಲಿಲ್ಲವೇ?' ಎಂದು ಆಕ್ಷೇಪವೆತ್ತಬಹುದು. ಇದಕ್ಕೆ ಮಹಾಜ್ಞಾನಿ ಮಿಲ್‌ನ ಉತ್ತರವಿಷ್ಟೆ: ಆಸ್ತಿಯಿಲ್ಲದವನಿಗೆ ಅಥವಾ ಸಾಧಾರಣ ಆಸ್ತಿಯಿದ್ದವನಿಗೆ ಆಸ್ತಿವಂತನು ಆಸ್ತಿಯನ್ನು ಕೊಡಬಹುದು; ಆದರೆ ಈ ಮೊದಲೇ ಅಪಾರ ಆಸ್ತಿಯಿದ್ದವನಿಗೇ ಪುನಃ ಆಸ್ತಿಯನ್ನು ಕೊಡುವುದರಲ್ಲಿ, ಸಮಾಜದ ಹಿತದ ದೃಷ್ಟಿಯಿಂದ ವ್ಯಕ್ತಿಯ ಸ್ವಾತಂತ್ರ್ಯವು ನಷ್ಟವಾಗುವುದು. ಒಬ್ಬ ನಿಜಾಮರಿಗೆ ಅಥವಾ ಫೋರ್ಡರಿಗೆ ಇನ್ನೊಬ್ಬ "ನಿಜಾಮ"ರು ಅಥವಾ "ಫೋರ್ಡ"ರು ತಮ್ಮ ಅಪಾರ ಆಸ್ತಿಯನ್ನು ಕೊಡಲಾರರು. ಕೊಡುವುದು ನ್ಯಾಯವಾಗದು. ಇದಲ್ಲದೆ ವ್ಯಕ್ತಿಗೆ ರಾಷ್ಟ್ರವು ಶಾಂತಿ-ಭದ್ರತೆಗಳನ್ನು ಕಲ್ಪಿಸಿಕೊಟ್ಟುದರಿಂದಲೇ ವ್ಯಕ್ತಿಯ ಆಸ್ತಿ ಸುರಕ್ಷಿತವಾಗಿದೆ. ಎಂದ ಮೇಲೆ, ಈ ಆಸ್ತಿಯಲ್ಲಿ ರಾಷ್ಟ್ರವೂ ಪಾಲುಗೊಳ್ಳುವುದು ಅನ್ಯಾಯವಾಗದು.

ಎರಡನೆಯ ವಾದದಿಂದ: ಮರಣೋತ್ತರ ಕರವು ಧನಸಂಚಯ ಪ್ರವೃತ್ತಿಯನ್ನು ಕುಗ್ಗಿಸುವುದರಿಂದ ಬಂಡವಾಳ ಕಡಿಮೆಯಾಗಿ ದೇಶದ ಪ್ರಗತಿಗೆ ತಡೆಯಾಗುತ್ತದೆ. ಈ ವಾದವು ತೋರಿಕೆಗೆ ನಿಜವೆನಿಸಬಹುದು. ಆದರೆ ನಿಜವಾದ ಪರಿಣಾಮ ಹಾಗೆಯೇ ಆಗಬೇಕೆಂದಿಲ್ಲ. ಎಂದೋ ಸಾಯುವುದನ್ನು ತಿಳಿದಿರುವ ಮನುಷ್ಯನು ಊಟಮಾಡುವುದನ್ನಾಗಲಿ, ಕ್ಷುಲ್ಲಕವೆನಿಸಬಹುದಾದ ನಿತ್ಯ ಕರ್ಮಗಳನ್ನಾಗಲಿ ಅಲಕ್ಷಿಸುವನೇ? ಆದಾಯಕರ ಕೊಡಬೇಕಾಗುವುದೆಂದು ಗಳಿಸುವುದನ್ನು ಬಿಡುವನೇ? ತಾನು ಎಂದೋ ಸತ್ತ ಮೇಲೆ, ತನ್ನ ಆಸ್ತಿಯ ಪಾಲುಗಾರರು ಕರಕೊಡಬೇಕಾಗುವುದೆಂದು, ಆಸ್ತಿಯನ್ನು ಗಳಿಸಲು, ಕೂಡಿಸಲು ಅವನೇಕೆ ಹಿಂದೆ ಮುಂದೆ ನೋಡಬಹುದು? ಕರಕೊಡಬೇಕಾದವನು ಗಳಿಸುವವನಲ್ಲ, ಗಳಿಸಿದ್ದನ್ನು ಪಡೆಯುವವನು. ಪ್ರೊ. ಪಿಗು ಇವರ ವಾದವೆಂದರೆ: ಮರಣೋತ್ತರ ಕರದ ಗುಣವೇ ಅವಗುಣವಾಗಿ ತೋರುತ್ತದೆ. ಎಂದರೆ, ಆಸ್ತಿವಂತನು ತನ್ನ ಜೀವಮಾನದಲ್ಲಿ ಕರಕೊಡಬೇಕಾಗಿಲ್ಲವಾದ್ದರಿಂದ, ಅವನು ದುಂದುವೆಚ್ಚಮಾಡಬಹುದು, ತನ್ನ ವಾರಸದಾರರ ಹಿತವನ್ನು ಕಡೆಗಣಿಸಿ ಆ ಸಂಪತ್ತನ್ನು ತಾನೇ ಭೋಗಿಸುವುದರಿಂದ, ವಾರಸದಾರನ ಪಾಲು ಕಡಿಮೆಯಾಗುತ್ತದೆ. ದೇಶದ ಬಂಡವಾಳವು ಕಡಿಮೆಯಾಗುತ್ತದೆ. ಆದರೆ ಈ ವಾದವು ಅಷ್ಟು ಸರಿಯಾಗಿ ಕಾಣುವುದಿಲ್ಲ. ಮನುಷ್ಯನನ್ನು ಒಂದೇ ದೃಷ್ಟಿಕೋನದಿಂದ ನೋಡದೆ, ವೈಯಕ್ತಿಕ ಸುಖ-ಶಾಂತಿಯ ದೃಷ್ಟಿಯಿಂದ, ಕೌಟುಂಬಿಕ ಪ್ರೇಮದ ದೃಷ್ಟಿಯಿಂದ ನೋಡಬೇಕಾಗುವುದು. ತಾನು ಕರಕೊಡಬೇಕಾಗಿಲ್ಲವೆಂದು ತಿಳಿದರೂ, ಎಲ್ಲ ಸಂಪತ್ತನ್ನೂ ಸೂರೆಗೊಳ್ಳಲಾರನು. ಆಪತ್ಕಾಲಕ್ಕೆಂದಾಗಲಿ, ಮುಪ್ಪಿನ ಕಾಲಕ್ಕೆಂದಾಗಲಿ ಧನಸಂಚಯವನ್ನು ಮಾಡಿಯೇ ಮಾಡುತ್ತಾನೆ. ಕೌಟುಂಬಿಕನಾಗಿದ್ದರೆ ಅವರ ಮೇಲಿನ ಸ್ವಾಭಾವಿಕ ಪ್ರೀತಿಯಿಂದ, ಅವರ ಸುಖದ ಅಭಿಲಾಷೆಯಿಂದ ಅವರಿಗಾಗಿ ಹಣ ಕೂಡಿಡುತ್ತಾನೆ. ಇಲ್ಲವೆ ಸಮಾಜದಲ್ಲಿ ಗಣ್ಯಸ್ಥಾನವನ್ನು ಪಡೆಯುವುದಕ್ಕೋಸ್ಕರವಾದರೂ ಹಣವನ್ನು ಕೂಡಿಸಲು ಇಚ್ಛಿಸುವುದು ಸ್ವಾಭಾವಿಕ. ವಾರಸದಾರರಿರದವರು ಸಿರಿವಂತರಿಲ್ಲವೆ? ಸಿರಿವಂತರಿದ್ದವರು ವಾರಸಾದಾರರಿಲ್ಲದೆ ಇಲ್ಲವೆ? ಇದಲ್ಲದೆ ಬರ್ಟ್ರಾಂಡ್ ರಸೆಲ್ಲರು ಹೇಳುವ ಹಾಗೆ, "Ordinary work is done for the sake of living and best work is done for the interest of work itself."

ಮೂರನೆಯ ವಾದವೆಂದರೆ: ಮರಣೋತ್ತರ ಕರವು ಬಂಡವಾಳದ ಮೇಲಿನ ಕರವಿರುವುದರಿಂದ, ಬಂಡವಾಳವನ್ನು ಕಡಿಮೆಮಾಡಿ— ಕೆಲ ಭಾಗವನ್ನು ಮಾರಾಟಮಾಡಿ—ಕರಕೊಡಬೇಕಾಗುವುದರಿಂದ, ರಾಷ್ಟ್ರದ ಭಂಡವಾಳ ಕಡಿಮೆಯಾಗಿ ವ್ಯಾಪಾರೋದ್ಯಮಗಳಿಗೆ ಧಕ್ಕೆತಗಲಿ ಹುಟ್ಟುವಳಿ ಕಡಿಮೆಯಾಗುತ್ತದೆ. ಈ ವಿರೋಧಕ್ಕೆ ಎರಡು ರೀತಿಯಿಂದ ಉತ್ತರಿಸಬಹುದು. ಇದರಲ್ಲಿ ವೈಯಕ್ತಿಕ ಮತ್ತು ರಾಷ್ಟ್ರೀಯ ಸಂಗತಿಗಳು ಅಡಕವಾಗಿದ್ದು, ರಾಷ್ಟ್ರೀಯ ಹಿತಕ್ಕೇ ಹೆಚ್ಚು ಮಹತ್ತ್ವ ಕೊಡಬೇಕು. ಕರವನ್ನು ಕೊಡುವವರೆಲ್ಲ ಬಂಡವಾಳವನ್ನು ಮಾರಿಯೇ ಕೊಡಬೇಕೆಂದಿಲ್ಲ. ಮೊದಲು ತಾವು ಕೂಡಿಟ್ಟ ಹಣದೊಳಗಿಂದ ಕೊಡಬಹುದು. ಒಂದು ವೇಳೆ ವಾರಸದಾರನಿಗೆ ಕೂಡಿಟ್ಟ ಹಣವಿರದಿದ್ದರೆ— ಬಡವನಿದ್ದರೆ— ಹೀಗೆಂದು ಪ್ರಶ್ನಿಸಬಹುದು. ಇಲ್ಲಿ ರಾಷ್ಟ್ರೀಯ ದೃಷ್ಟಿಯಿಂದ ವಿಚಾರಿಸಬೇಕಾಗುವುದು. ಇಂತಹ ಪ್ರಸಂಗಗಳಲ್ಲಿ ವೈಯಕ್ತಿಕ ಬಂಡವಾಳಕ್ಕೆ ಧಕ್ಕೆಯಾಗುವುದೆಂದು ಒಪ್ಪಿಕೊಂಡರೂ, ರಾಷ್ಟ್ರೀಯ ಬಂಡವಾಳಕ್ಕೆ ಏನೂ ಧಕ್ಕೆಯಿಲ್ಲ. ಒಬ್ಬನು ಮಾರಾಟಗಾರನಾದರೆ ಇನ್ನೊಬ್ಬನು ಗ್ರಾಹಕನಾಗುತ್ತಾನೆ. ಬಂಡವಾಳ ಒಬ್ಬನ ಕೈಯಿಂದ ಇನ್ನೊಬ್ಬನ ಕೈಗೆ ಹೋಗಿದೆಯೆ ಹೊರತು, ಅದು ನಾಶವಾಗಿಲ್ಲ; ದೇಶದಲ್ಲಿಯೇ ಇದೆ. ಇದನ್ನೇ ಕಾಲವಿನ್ ಸಮಿತಿಯ ಅಲ್ಪಸಂಖ್ಯಾಕ ಪಕ್ಷದ ಸದಸ್ಯರು ಪ್ರತಿಪಾದಿಸಿದ್ದಾರೆ. ಸರ್ ಎಸ್. ಹೊಮ್ಸ್‌ರು ಇದನ್ನು ಒಪ್ಪಿದರೂ ಒಂದು ಅನುಮಾನವನ್ನು ವ್ಯಕ್ತಪಡಿಸಿದ್ದಾರೆ. ಎಲ್ಲರೂ ಮಾರಾಟಗಾರರಾದರೆ, ಗ್ರಾಹಕರಿಲ್ಲದಿದ್ದರೆ, ಅವುಗಳ ಬೆಲೆಯ ಮೇಲೆ ಎಂತಹ ಪರಿಣಾಮವಾಗಬಹುದು? ಆದರೆ ಇಂತಹ ಸ್ಥಿತಿ ಉಂಟಾಗುವುದು ವಿರಳ. ಒಟ್ಟಿನ ಮೇಲೆ ಮರಣೋತ್ತರ ಕರದಿಂದ ಹಾನಿಯಾಗದೆ ಲಾಭವೇ ಹೆಚ್ಚಾಗಿ ಆಗುವುದೆಂದು ಹೇಳಬಹುದು.

ಮರಣೋತ್ತರ ಕರದಿಂದ ಅನ್ಯಾಯವಾಗಿ ಕರಕೊಡುವವರ ಮೇಲೆ ಭಾರಬೀಳದೆ, ಶಕ್ಯವಿದ್ದಷ್ಟು ಹೆಚ್ಚಿಗೆ ಆದಾಯಬರುವಂತಾಗಬೇಕಾದರೆ, ಕೆಲವು ತತ್ತ್ವಗಳನ್ನು ಗಮನಿಸಬೇಕಾಗುವುದು: **ಪ್ರಗತಿಪರ ದರಗಳು ಮತ್ತು ಕನಿಷ್ಠ ಮುಕ್ತತೆ** (Exemption). ಮರಣೋತ್ತರ ಕರವು, ಸ್ವತಃ ಗಳಿಸದೆ ಅನಾ-

ಾಸವಾಗಿ ದೊರಕಿದ ಆಸ್ತಿಯ ಮೇಲೆ ಇರುವುದರಿಂದ; ಆಸ್ತಿಯ ಾಲ್ಯವು ಹೆಚ್ಚಾದಂತೆ ಕರದ ದರಗಳನ್ನು ಹೆಚ್ಚಿಸುವುದರಿಂದ ಭವೂ ಇದೆ, ಅನ್ಯಾಯವೂ ಆಗಲಾರದು. ಅ್ಯಡಾಲ್ಫ್ ವ್ಯಾಗ್ನರ್ ಪ್ರಾಯಪಡುವಂತೆ, ಪ್ರಗತಿಪರ ಕರಗಳು, ರಾಷ್ಟ್ರದ ಸಂಪತ್ತನ್ನು ತ್ತು ಆದಾಯವನ್ನು ಸಮಾನವಾಗಿ ಹಂಚುವ ಮತ್ತು ಔದ್ಯೋ ರಾಷ್ಟ್ರೀಕರಣದ ಆದರ್ಶವನ್ನು ಸಾಧಿಸುವ ಮಹತ್ತ್ವದ ಧನವು. ಪ್ರಗತಿಪರವಾದ ಮರಣೋತ್ತರ ಕರಗಳನ್ನು ಹೇರು- ದರಿಂದ, ಮೂರು ನಾಲ್ಕು ಪೀಳಿಗೆಗಳಲ್ಲಿ ಆ ಆಸ್ತಿಯನ್ನೆಲ್ಲ ನಾತ್ಮಕವಾಗಿ ರಾಷ್ಟ್ರೀಕರಿಸಬಹುದು. ಅಪ್ರಗತಿಪರ ದರ- ನ್ನು ಹೇರಿದರೆ, ಅಂದರೆ, ಆಸ್ತಿಯ ಬೆಲೆಯು ಹೆಚ್ಚುತ್ತ ದಂತೆ ದರಗಳನ್ನು ಕಡಿಮೆಮಾಡಿದರೆ, ದೇಶದ ಸಂಪತ್ತಿನ ಮಾನ ಹಂಚಿಕೆಯಾಗಿ, ಸಿರಿವಂತರು ಹೆಚ್ಚು ಸಿರಿವಂತ- ಗುತ್ತಾರೆ. ಬಡವರು ಹೆಚ್ಚು ಬಡವರಾಗುತ್ತಾರೆ. ಈ ವಿಪತ್ತನ್ನು ಪ್ಪಿಸಲು ಪ್ರಗತಿಪರ ದರದ ಕರಗಳನ್ನು ಹೇರುವುದು ಅತ್ಯಾವ- ಕ. ಈ ಪ್ರಗತಿತತ್ತ್ವವನ್ನು ಎರಡು ರೀತಿಯಿಂದ ಸಾಧಿಸ- ಾಗುವುದು. ಈ ಮೊದಲೇ ಹೇಳುತ್ತ ಬಂದಂತೆ, ಆಸ್ತಿಯ ಬೆಲೆ ್ಚಾದ ಹಾಗೆ ದರಗಳನ್ನು ಹೆಚ್ಚಿಸುವುದು ಒಂದನೆಯ ರೀತಿ. ಡನೆಯ ರೀತಿಯೆಂದರೆ (ಅ) ಆಸ್ತಿವಂತನು ಬಿಟ್ಟುಹೋದ ಪೂರ್ಣ ಆಸ್ತಿಯ ಬೆಲೆ, (ಬ) ಬೇರೆ ಬೇರೆ ವಾರಸದಾರರ ಲಿಗೆ ಬಂದ ಆಸ್ತಿ, (ಕ) ಪಾಲುಸಿಗುವ ಮೊದಲು ವಾರಸ- ರರು ಗಳಿಸಿದ ಆಸ್ತಿ, (ಡ) ವಾರಸದಾರನ ಮತ್ತು ಆಸ್ತಿವಂತನ ತ್ವ, (ಥ) ಆಸ್ತಿಯ ಒಡೆತನವು ಬದಲಿಸಿದ ಸಂಖ್ಯೆ,—ಮುಂತಾ- ಗಳನ್ನೆಲ್ಲ ಗಮನಿಸಿ ಕರಹೇರುವುದು ನ್ಯಾಯವಾದದ್ದು.

ಮೊದಲನೆಯ ಉಪನಿಯಮದ ಪ್ರಕಾರ, ಒಬ್ಬ ಆಸ್ತಿವಂತನು ಮಕ್ಕಳಿಗೆ, ಹೆಂಡತಿಗೆ, ಬಂಧು-ಭಗಿನಿಯರಿಗೆ, ದೂರದ ರಿ, ಗೆ ಸಾರ್ವಜನಿಕ ಸಂಸ್ಥೆಗಳಿಗೆ— ವಿವಿಧ ಬೆಲೆಯ ಆಸ್ತಿ- ನ್ನು ಹಂಚಿಕೊಟ್ಟಿರುವಾಗ, ಬೇರೆ ಬೇರೆ ವಾರಸದಾರರ ಲಿಗೆ ಬರಬಹುದಾದ ಆಸ್ತಿಯ ಬೆಲೆಯನ್ನು ಲಕ್ಷ್ಯಿಸದೆ, ಒಟ್ಟು ಯ ಆಸ್ತಿಯ ಮೇಲೆ ಕರ ಹೇರಿದರೆ, ಬಡ ವಾರಸದಾರರಿಗೆ— ಮೆ ಆಸ್ತಿ ಪಡೆದ ವಾರಸದಾರರಿಗೆ—ಅನ್ಯಾಯವಾಗುವುದು. ಂದರೆ ಕಡಿಮೆ ಆಸ್ತಿ ಪಡೆದವರೂ ಸಹ ಹೆಚ್ಚು ಆಸ್ತಿ ಪಡೆದ ಜೊತೆಗೆ ಹೆಚ್ಚಿನ ದರದ ಕರವನ್ನು ಕೊಡಬೇಕಾಗುವುದು. ನಾಗಿ, ಹೆಚ್ಚು ಆಸ್ತಿ ಪಡೆದವರು ಕೊಡಬೇಕಾಗಿದ್ದ ಹೆಚ್ಚಿನ ನ್ನು, ಕಡಿಮೆ ಆಸ್ತಿ ಪಡೆದವರ ಮೇಲೆ ಹೊರಿಸಿದಂತಾಗುತ್ತದೆ. ಸದಾರರು ಪಡೆದ ಆಸ್ತಿಯನ್ನು ಗಮನಿಸದೆ, ಒಟ್ಟು ಆಸ್ತಿಯ ಕರ ಹೇರಿದ್ದೇ ಈ ಅನ್ಯಾಯದ ಕಾರಣ. ಎರಡನೆಯ ನಿಯಮವು ಈ ದೋಷವನ್ನು ನಿವಾರಿಸುತ್ತದೆ. ಈ ನಿಯ ಮದ ಪ್ರಕಾರ ವೈಯಕ್ತಿಕ ವಾರಸದಾರರ ಪಾಲಿಗೆ ಬಂದ ಆಸ್ತಿ ಯನ್ನು ಲಕ್ಷ್ಯಿಸಿ ಅವರವರ ಆಸ್ತಿಯ ಮೇಲೆ ಕರ ಹೇರಲಾಗು ವುದು. ಇದರಿಂದ ಮೊದಲಿದ್ದ ಅನ್ಯಾಯವು ತಪ್ಪಿ, ಹೆಚ್ಚು ಆಸ್ತಿ ಪಡೆದವರು ಹೆಚ್ಚು ಕರ ಕೊಡುತ್ತಾರೆ. ಕಡಿಮೆ ಆಸ್ತಿ ಪಡೆದವರು ಕಡಿಮೆ ಕೊಡುತ್ತಾರೆ.

ಆದರೆ ಬೇರೆ ಬೇರೆ ವಾರಸದಾರರಿಗೆ ತಾನೇ ಗಳಿಸಿದ ಬೇರೆಬೇರೆ ಬೆಲೆಯ ಆಸ್ತಿಯಿದೆಯೆಂದು ತಿಳಿಯೋಣ. ವ್ಯಾಪಾರಸ್ಥನಾಗಿ ಇರುವ ಅಣ್ಣನಿಗೆ ಬಹಳ ಆಸ್ತಿಯಿರಬಹುದು; ಸಾಹಿತಿಯಿರುವ ತಮ್ಮನಿಗೆ ಏನೂ ಇರಲಿಕ್ಕಿಲ್ಲ, ಡಾಕ್ಟರ್ ಇರುವ ತಂಗಿಗೆ ಸ್ವಲ್ಪ ಇರಬಹುದು, ದೂರದ ನೆಂಟನು ಸಿರಿವಂತನಿರಬಹುದು, ಇನ್ನೊಬ್ಬನು ಬಡವನಿರಬಹುದು. ಅವರವರ ಪಾಲಿಗೆ ಬಂದ ಆಸ್ತಿಯ ಪ್ರಕಾರ ಕರ ಹೇರಿದರೂ, ಅವರ ಸ್ವಾರ್ಜಿತ ಆಸ್ತಿಯನ್ನು, ಕೌಟುಂಬಿಕ ವೆಚ್ಚವನ್ನು ಗಮನಿಸದಿದ್ದರೆ ಅನ್ಯಾಯವಾಗುತ್ತದೆ. ಹೇಗೆಂದರೆ, ವ್ಯಾಪಾರಸ್ಥನಾಗಿದ್ದವನಿಗೆ ಸಾಹಿತಿಗಿಂತ ಕಡಿಮೆ ಪಾಲು ಬಂದಿರಬಹುದಾದರೂ, ತಾನು ಗಳಿಸಿದ ಹಣವು ಸಾಹಿತಿ ಗಿಂತ ಹೆಚ್ಚು ಇರುವುದರಿಂದ, ವೆಚ್ಚವು ಹೆಚ್ಚಿದ್ದರೂ ಸಹ, ಕರಕೊಡುವುದು ಅವನಿಗೆ ಭಾರವೆನಿಸಲಿಕ್ಕಿಲ್ಲ; ಆದರೆ ಮನೆತುಂಬ ಮಕ್ಕಳಿರುವ ಸಾಹಿತಿಗೆ ಸುದೈವದಿಂದ ಹೆಚ್ಚು ಪಾಲು ದೊರಕಿ ದ್ದರೂ, ವೆಚ್ಚವು ಹೆಚ್ಚಾಗುವುದರಿಂದ ತಾನು ಗಳಿಸಿದ್ದು "ಪೂಜಿ" ಇರುವುದರಿಂದ, ತನ್ನ ಪಾಲಿನ ಕರ ಕೊಡುವುದು ದುಸ್ತರವೆನಿಸು ವುದು ಸ್ವಾಭಾವಿಕ. ಆದ್ದರಿಂದ ಪಾಲು ಪಡೆಯುವ ಮೊದಲು ವಾರಸದಾರರು ಗಳಿಸಿದ ಆಸ್ತಿಯನ್ನು ಅಲಕ್ಷಿಸಿ ಕರ ಹೇರಿದರೆ, ಅನ್ಯಾಯವಾಗುವುದು. ಎರಡನೆಯ ನಿಯಮವು ದೋಷಯುಕ್ತ ವಾಗಿದೆ. ಮೂರನೆಯ ನಿಯಮವು ಇದನ್ನು ಸರಿಗೊಳಿಸುತ್ತದೆ.

ಇಷ್ಟಾದರೂ ಆಸ್ತಿವಂತನ ಮತ್ತು ವಾರಸದಾರರ ಆಪ್ತತ್ವವನ್ನು ಕಡೆಗಣಿಸಿದರೆ ಯೋಗ್ಯವಾಗಲಾರದು. ಆಪ್ತತ್ವವು ಸಮೀಪ- ವಾದಂತೆ ಕರವು ಕಡಿಮೆಯಾಗಬೇಕಾದದ್ದು ಸ್ವಾಭಾವಿಕ. ಸೋದ- ರತ್ತಿಗಿಂತ ಮಗನಿಗೆ ಹೆಚ್ಚು ಬಾಧ್ಯತೆಯಿದೆ; ಸಾರ್ವಜನಿಕ ಸಂಸ್ಥೆ- ಗಿಂತ ದೂರದ ಆಪ್ತತ್ವದ ದೀನ ವಿಧವೆಗೆ ಹೆಚ್ಚು ಅಧಿಕಾರವಿರು- ವುದು ನ್ಯಾಯವಾದದ್ದು. ಸಮೀಪದ ವಾರಸದಾರರಿಗೆ— ಮಗ, ಮಗಳು ಇ— ಕಡಿಮೆ ಕರ ಕೊಡಬೇಕಾಗುವುದರಿಂದ, ದೂರದ ಆಪ್ತರು ಹೆಚ್ಚು ಕರ ಕೊಡಬೇಕಾಗುವುದರಿಂದ, ಆಸ್ತಿವಂತನು ತನ್ನ ಹತ್ತಿರದ ವಾರಸದಾರನಿಗೆ ಆಸ್ತಿಯನ್ನು ಕೊಡಿಸಿಕೊಡಲು ಉದಾಸೀನನಾಗುವುದಿಲ್ಲ. ಆದ್ದರಿಂದ ನಾಲ್ಕನೆಯ ಉಪನಿಯಮ- ವನ್ನು ಅನುಸರಿಸುವುದರಿಂದ, ಧನ ಸಂಚಯದ ಪ್ರವೃತ್ತಿಗೆ ಧಕ್ಕೆಯೂ ಆಗುವುದಿಲ್ಲ ಮತ್ತು ಮೂರನೆಯ ಉಪನಿಯಮದ ಕೊರತೆಯನ್ನು ಪರಿಹರಿಸುವುದು.

ಅಜಂತಾ

(ಅನುವಾದಿತ ಕತೆ)*

ಶ್ರೀ. ಕುಲಕರ್ಣಿ ಬಿಂದುಮಾಧವ, ಬಾದಾಮಿ

卐

ವಿಶ್ವಶಿಲ್ಪಿಯ ಕಲೆಯ ಆದರ್ಶ ಯಾವುದೇನೊ! ಮಾನವನ ಹೃದಯಶಿಲೆಯನ್ನು ಅನಾದಿಕಾಲದಿಂದಲೂ ಕಡೆಯುತ್ತಲಿದ್ದಾನೆ. ಅವನ ಈ ಕಲಾಕಾರ್ಯ ಅನಂತಕಾಲದ ವರೆಗೂ ನಡೆದಿರುವುದೇನೊ? ವಿಶ್ವಶಿಲ್ಪಿಯೂ ಒಬ್ಬ ಕರ್ಮಯೋಗಿ!

卐

“ಹ್ಞಂ— ಅಜಂತೆಯ ಈ ಅವಿಶ್ರಾಂತ ಶಿಲ್ಪಿಗಳು, ಕಲಾವಿದರೂ ಸಹ ತಮ್ಮ ಕೆಲಸವನ್ನು ಅರ್ಧಕ್ಕೇ ಕೊನೆಗಾಣಿಸಿದರೇಕೆ? ಎಂಟುನೂರು ವರುಷಗಳ ಕೊನೆಯಿಲ್ಲದ ದುಡಿಮೆ, ಹನ್ನೆರಡು ತಲೆಮಾರುಗಳ ಉಳಿಮೆಯಾಗಿಯೂ, ಈ ಕೊನೆಯ ಕಲ್ಮನೆಯನ್ನು ಅಪೂರ್ಣವಾಗಿಯೇ ಬಿಟ್ಟು ಹೊರಡಲು ಏನು ಕಾರಣ ಸಂಭವಿಸಿತು?” ಈ ಪ್ರಶ್ನೆ ಪ್ರತಿಯೊರ್ವನ ಕಲ್ಪನೆಗೂ ಆಹ್ವಾನವೀಯುತ್ತದೆ.

“ನಿನಗೇನೆನ್ನಿಸುತ್ತದೆ ಭಾರತಿ.... ?”

ಆದರೆ ಭಾರತಿ ಅಲ್ಲಿರಲಿಲ್ಲ. ಮಾರ್ಗದರ್ಶಕನೂ ಇರಲಿಲ್ಲ! ನಿರ್ಮಲನ ಧ್ವನಿ ಒಳಮಾಳಿಗೆಗಪ್ಪಳಿಸಿ, ದ್ವಾರ ಮಂಟಪದಿಂದ ಪ್ರತಿಧ್ವನಿಗೊಂಡು, ಆ ಕಲ್ಮನೆಯಲ್ಲಿ ಓಡಿಯಾಡಿ ಅವನ ಕಿವಿಗಪ್ಪಳಿಸಿತು.

ವಿಶಾಲವಾದ, ಅರ್ಧಮುಗಿದ ಆ ಕತ್ತಲುಕಲ್ಮನೆಯ ಮೂಲೆಯಲ್ಲಿ, ಅವನು ತನ್ನ ವಿಚಾರಗಳಲ್ಲೇ ಸಮರಸನಾಗಿದ್ದ. ಭಾರತಿ ಹಾಗೂ ಮಾರ್ಗದರ್ಶಕ, ಅವನು ಹೋಗಿರಬೇಕೆಂದೂಹಿಸಿ, ಕಲ್ಮನೆಗಳ ಮುಂದಿನ ಅಟ್ಟಳಿಗೆಯ ದಾರಿಗೆ ಬಂದರು. ಅಲ್ಲಿಯೂ ಅವನನ್ನು ಕಾಣದೆ, ಅವನು ಡಾಕ್ ಬಂಗಲೆಗೆ ಹೋಗಿರಬೇಕೆಂದು ಅವರು ನಿಶ್ಚಯಿಸಿದರು.

ಆ ಕಲ್ಮನೆಯಲ್ಲಲೆಯುತ್ತ ಅವನು ಶಾಂತವಾದ ಹಲವು ತಾಸುಗಳನ್ನು ಕಳೆದಿದ್ದ. ಮಹಾದ್ವಾರದೆದುರಿನ ಕಣಿವೆಯಾಚೆಗಿನ ಪರ್ವತದ ಹಿಂದೆ ಸೂರ್ಯ ಮುಳುಗುತ್ತಿರುವುದನ್ನು ಅವನು ಕಂಡ. ಉಸಿರುಗಟ್ಟಿ ಏರಿಬರುತ್ತಿರುವ ಖಿನ್ನತೆಯಂತೆ ಕಲ್ಮನೆಯಲ್ಲಿ ಮಬ್ಬು ತೀವ್ರವಾಗಿ ಆವರಿಸುತ್ತಿತ್ತು.

ಕೊನೆಯ ನೋಟದೊಂದಿಗೆ ನಿರ್ಮಲ ಒಂದೇ ಹೆಜ್ಜೆಯಲ್ಲಿ ಹೊರಬರುವಷ್ಟರಲ್ಲಿ— ಅಷ್ಟರಲ್ಲಿ ದೀವಟಿಗೆಯೊಂದು ಅವನತ್ತ ಚಲಿಸುತ್ತ ಬರುತ್ತಿರುವುದನ್ನು ಕಂಡ. ಆದರೆ ದೀವಟಿಗೆ ಮಹಾದ್ವಾರದಿಂದ ಬಾರದೆ, ಕಲ್ಮನೆಯ ಹಿಮ್ಮಗ್ಗುಲಿನಿಂದ ಬರುತ್ತಿರುವುದನ್ನು ಕಂಡು ಅವನಿಗೆ ತುಂಬ ಅಚ್ಚರಿ ಎನ್ನಿಸಿತು. ಮಾರ್ಗದರ್ಶಕನೇ ತನ್ನನ್ನು ಹುಡುಕುತ್ತ ಆ ಮೂಲೆಯಿಂದ ಹಿಂತಿರುಗಿರಬೇಕೆಂದು ಅವನು ತರ್ಕಿಸಿದ.

ಆದರೆ ಮರುಗಳಿಗೆಯಲ್ಲೇ ಕಾವಿಬಣ್ಣದ ಕಫನಿ ಧರಿಸಿದ ಒಬ್ಬ ಭಿಕ್ಷು ಕೈಯಲ್ಲಿ ದೀವಟಿಗೆ ಹಿಡಿದುಕೊಂಡು ಬರುತ್ತಿರುವವನನ್ನು ನೋಡಿ, ಅವನಿಗಿನ್ನೂ ವಿಸ್ಮಯವಾಯಿತು. ಯಾರನ್ನು ಹುಡುಕುವ ಆವಶ್ಯಕತೆಯೂ ಆ ಭಿಕ್ಷುವಿಗಿದ್ದಂತಿರಲಿಲ್ಲ. ಅವನು ತುಂಬ ಹಳೆಯ ಕಾಲದವನಂತೆ ಕಾಣಬರುತ್ತಿದ್ದ. ನಿಧಾನವಾಗಿ ಹಾಕುವ ಅವನ ಹೆಜ್ಜೆಯಲ್ಲಿ ಶಾಂತಿ, ತಾಳ್ಮೆ ಇದ್ದುವು. ಅರ್ಧ ಮುಗಿದ ಕಂಬಗಳಲ್ಲೊಂದರ ಬಳಿ ಸಾರಿ ಭಿಕ್ಷು, ಕಲ್ಲಿನಲ್ಲಿ ಕೊರೆದ ತೂತಿನಲ್ಲಿ ಆ ದೀವಟಿಗೆಯನ್ನಿಟ್ಟು, ತನ್ನ ಕಫನಿಯ ಜೇಬುಗಳಿಂದ ಸುತ್ತಿಗೆ ಚಾಣ ಹೊರತೆಗೆದ. ಆಮೇಲೆ ಹೊಸಬನ ಇರುವಿಕೆಯನ್ನು ಸಂಪೂರ್ಣವಾಗಿ ಅಲಕ್ಷ್ಯಿಸಿದಂತೆ ಅವನು ತನ್ನ ಚಾಣದ ಹೊಡೆತಕ್ಕಾರಂಭಿಸಿದ. ನಿರ್ಮಲ ಅವನತ್ತ ಕಡೆಗೇ ಹೋಗುವವನಿದ್ದ. ಅಷ್ಟರಲ್ಲೇ ಕಾವಿ ಕಫನಿ ಧರಿಸಿದ, ಕ್ಷೌರಗೊಂಡ ತಲೆಯ, ಕೈಯಲ್ಲಿ ದೀವಟಿಗೆ ಹಿಡಿದ ಅವನಂತಹ ಭಿಕ್ಷುಗಳ ತಂಡವೇ ಆ ಗುಹೆಯ ಯಾವುದೋ ಮೂಲೆಯಿಂದ ಬರುತ್ತಿದ್ದಿತು.

ಅವರಲ್ಲೊಬ್ಬರೂ ನಿರ್ಮಲನೆಡೆಗೆ ಕಣ್ಣೆತ್ತಿಯೂ ನೋಡಲಿಲ್ಲ. ಅವರೆಲ್ಲ ತಮ್ಮ ಉಪಕರಣಗಳನ್ನು ತೆಗೆದುಕೊಂಡು ಗೋಡೆಗಳ ಮೇಲೆ ಮೂರ್ತಿ ಕೆತ್ತುವ, ಸುತ್ತಿಗೆ-ಚಾಣಗಳಿಂದ ಹೊಡೆಯುವ ಚಿತ್ರ ಬಿಡಿಸುವ ಕೆಲಸ ಆರಂಭಿಸಿದರು. ಇನ್ನು ಕೆಲವರು ಮೃದುವಾದ ಮಣ್ಣನ್ನು ಗೋಡೆಗಳಿಗೆ ಮೆತ್ತಿ— ಆಮೇಲೆ ಚಿತ್ರಕಲಾವಿದರು ಸರಿಯಾಗಿ ಚಿತ್ರ ಮೂಡಿಸಲು ಸಾಧ್ಯವಾಗುವಂತೆ— ಹದಗೊಳಿಸುತ್ತಿದ್ದರು. ಶಾಂತವಾದ ಆ ಕಲ್ಮನೆ ಶಿಲೆಯ ವಿರುದ್ಧ ನಡೆದ ಕಬ್ಬಿಣದ ಹೊಡೆತಕ್ಕೆ ಪ್ರತಿಧ್ವನಿಗೊಡುತ್ತಿತ್ತು.

ಹಲವು ನಿಮಿಷಗಳ ವರೆಗೆ ನಿರ್ಮಲ ಈ ಅದ್ಭುತ ದೃಶ್ಯ ನೋಡುತ್ತಲಿದ್ದ. ಅವನಿಗಿನ್ನು ತಾಳ್ಮೆ ಉಳಿಯಲಿಲ್ಲ. ಅವನು ನೇರವಾಗಿ ತಾನು ಮೊದಲು ಕಂಡ ಭಿಕ್ಷುವಿನ ಬಳಿಸಾರಿದ :

“ಕ್ಷಮಿಸಿ ಸ್ವಾಮಿ. ನಾನು ತಮ್ಮ ಕೆಲಸದ ಮಧ್ಯೆ ಬಂದು ತೊಂದರೆ ಕೊಡುತ್ತಿದ್ದೇನೆ. ನೀವೆಲ್ಲ ಹೀಗೆ ಕೆಲಸ ಮಾಡುವುದನ್ನು ನೋಡಿ ನನಗೆ ಹೇಳಲಾರದಷ್ಟು ವಿಸ್ಮಯವಾಗಿದೆ.”

“ಯಾಕೆ?”

“ಯಾಕೆಂದರೆ ಈ ಕಲ್ಮನೆ ಎಂದೆಂದಿಗೂ ಅಪೂರ್ಣವಾಗಿಯೆ ಉಳಿಯುತ್ತದೆಂದು ನನಗೆ ಭಾಸವಾಗುತ್ತದೆ ಸ್ವಾಮಿ.”

* ಸುಪ್ರಸಿದ್ಧ ಉರ್ದು ಕತೆಗಾರ ಖ್ವಾಜಾ ಅಹಮ್ಮದ್ ಅಬ್ಬಾಸರ ಜನಪ್ರಿಯ ನೀಳ್ಗತೆ ‘ಅಜಂತಾ’ದ ಮುಕ್ತಾಯ ಭಾಗದ ರೂಪಾಂತರ ಈ ಕತೆ. ಈ ನೀಳ್ಗತೆ ಮೂಲ ಉರ್ದುವಿನಿಂದ ಇದೇ ಲೇಖಕರಿಂದ, ಇದೇ ಹೆಸರಿನಲ್ಲಿ ಹಿಂದಿಗೂ, ‘Blood and Stones’ ಎಂಬ ಹೆಸರಿನಿಂದ ಇಂಗ್ಲೀಷಿಗೂ ರೂಪಾಂತರಗೊಂಡಿದೆ.

" ಪ್ರಪಂಚವೂ ಸಹ ಅಪೂರ್ಣವಾಗಿಯೇ ಇದೆಯಲ್ಲ. ಮನು-ಷ್ಯನ ನೈಸರ್ಗಿಕ ಸಿದ್ಧಿಯು ಮಟ್ಟವೂ ಅಪೂರ್ಣವಾಗಿಯೇ ಇದೆ. ದರೆ ನಡೆಯುವ ಕೆಲಸ ನಡೆಯಲೇ ಬೇಕು."

ನಿರ್ಮಲನಿಗೆ ಈ ಗಹನವಾದ ಉತ್ತರ ಸಂಪೂರ್ಣವಾಗಿ ಅರ್ಥ-ಗಲಿಲ್ಲ. ಆದುದರಿಂದ ಅವನು ಪ್ರಶ್ನಿಸಿದ— "ತಾವೆಂದಿನಿಂದ ಕೆಲಸ ಮಾಡುತ್ತಿರುವಿರಿ ?"

" ಒಂಬತ್ತು ನೂರು ವರುಷಗಳಿಂದ ! "

"ಒಂಬತ್ತು ನೂರು ವರುಷ? ಹಾಗಾದರೆ ನಿಮ್ಮ ವಯಸ್ಸು...."

" ನನಗಿಂತ ಮೊದಲು ನನ್ನ ತಂದೆ ಇಲ್ಲಿದ್ದರು. ಅವರಿಗಿಂತ ಮೊದಲು ಅವರ ತಂದೆ. ಒಂದು ತಲೆಮಾರಿನ ಅನಂತರ ಮತ್ತೊಂದು ತಲೆಮಾರು. ಕರ್ಮದ ಗಾಲಿಯಂತೆ ಕೆಲಸದ ಗಾಲಿಯೂ ಉರುಳುತ್ತ ಸಾಗಿದೆ."

" ನಿಮ್ಮ ಹೆಸರು ಸ್ವಾಮಿ ? " ನಿರ್ಮಲ ತನ್ನ ಸಂಭಾಷಣೆಗೆ ಯುಕ್ತಿಕ ಸಂಬಂಧ ಕೊಡಲು ಯತ್ನಿಸಿದ.

" ನನ್ನ ಹೆಸರು ? ಏನೂ ಇಲ್ಲ. ನಾವೆಲ್ಲ ಹೆಸರಿಲ್ಲದವರು."

ಈ ಯಾವ ಕಲ್ಪನೆಗಳಲ್ಲೂ ಕಲಾವಿದರ ಹೆಸರು ಕೆತ್ತಿದ, ಇಲ್ಲವೆ ಬರೆಸಿದ್ದನ್ನು ಕಾಣದಿದ್ದುದು ನಿರ್ಮಲನಿಗೆ ಈಗೊಮ್ಮೆಲೇ ಹೊಳೆದಂತಾಯಿತು. ಈ ಕಲಾವಿದರು ಅನುರಕ್ತ್ರದ ಕನಸು ಕಂಡವರಲ್ಲವೆ ?

" ಹಾಗಾದರೆ ನೀವೆಲ್ಲ ಇಂತಹ ಕಠಿಣ ಕೆಲಸವನ್ನೇಕೆ ಮಾಡುತ್ತಿರಿ ಸ್ವಾಮಿ ?"

" ಫಲಾಪೇಕ್ಷೆಯಿಲ್ಲದೆ ಯಾರೂ ಕೆಲಸ ಮಾಡಲಾರರು ಮಗು! ಮನುಷ್ಯ ತನ್ನ ಕರ್ಮಗತಿಯನ್ನು ಸವೆಯಿಸಲು ಕೆಲಸ ಮಾಡಲೇಬೇಕಾಗುತ್ತದೆ."

" ಹಾಗಾದರೆ ಈ ಕೆಲಸ ಯಾವಾಗ ಮುಗಿಯುತ್ತದೆ ?"

" ಅದನ್ನಾರು ಬಲ್ಲರು ?"

" ಈ ಕಲ್ಪನೆ...."

" ಪೂರ್ಣವಾಗಲು ಎರಡುನೂರು ವರುಷ ಬೇಕು. ಅನಂತರ ಮತ್ತೊಂದು ಕಲ್ಪನೆ....ಅನಂತರ ಮತ್ತೊಂದು...."

"ಹಾಗಾದರೆ ಅಜಂತೆ ಎಂದೆಂದಿಗೂ ಪರಿಪೂರ್ಣವಾಗಲಾರದೆ?"

" ಆದೀತು ಮಗು. ಮನುಷ್ಯ ಪರಿಪೂರ್ಣನಾದಾಗ ಮಾತ್ರ!"

ನಿರ್ಮಲನ ಎದೆಯಲ್ಲಿ ತುಂಬಿದ ಆಶ್ಚರ್ಯದೊಂದಿಗೆ ಸಂಶಯಾತ್ಮಕ ಭಾವವೂ ಬೆರೆತಿತು. ಆವನೊಂದು ವಿಚಿತ್ರವಾದ ಬಿರುಸು ಧ್ವನಿಯಲ್ಲಿ ಕೇಳಿದ:— " ದಯವಿಟ್ಟು ನನಗಾಗಿ ಎಲ್ಲವನ್ನೂ ವಿವರಿಸಿ ಸ್ವಾಮಿ ! ಸಾವಿರಾರು ವರುಷಗಳಿಂದ, ಸಾವಿರಾರು ಜನ ನೀವು, ತುಂಬಿದ ಸಾಮರ್ಥ್ಯ ಹಾಗೂ ಶ್ರಮವನ್ನು ಈ ಕೆಲಸಕ್ಕಾಗಿ ಏಕೆ ಹಾಳು ಮಾಡುತ್ತೀರಿ ? ಈ ಎಲ್ಲ ಗುಹೆಗಳು, ಈ ಪರ್ವತದ ಶಿಖರಗಳು, ಈ ಎಲ್ಲ ಚಿತ್ರಗಳು ಹಾಗೂ ಮೂರ್ತಿಗಳು, ಶಿಲ್ಪ ಹಾಗೂ ಕೆತ್ತನೆ— ಇದೆಲ್ಲ ಏಕೆ ? ಏತಕ್ಕೋಸುಗ ? " ಧ್ವನಿಯಲ್ಲಿ ಗಾಂಭೀರ್ಯ ಹಾಗೂ ಸ್ಫೂರ್ತಿ ಬೆರೆತ ಧ್ವನಿಯಲ್ಲಿ ಅವನು ಕೂಗಿದ: " ಒಳ್ಳೇದು ಸ್ವಾಮಿ, ತುಂಬ ಒಳ್ಳೇದು! ಕಲ್ಲಿನಲ್ಲಿ ಹರಿಸುವ ನಿಮ್ಮ ಅತಿಮಾನುಷ ಶ್ರಮ ಹಾಗೂ ಪ್ರಯಾಸವನ್ನು ಮಾನವತೆಗಾಗಿ ಹರಿಸಿದ್ದರೆ, ಕೋಟ್ಯನುಕೋಟಿ ಜನ ನಾವು, ಒಬ್ಬರೊಬ್ಬರ ಕತ್ತು ಕೊಯ್ಯುತ್ತಿರಲಿಲ್ಲ; ರಕ್ತದ ಕಾಲುವೆ ಹರಿಸುತ್ತಿರಲಿಲ್ಲ. ನಮ್ಮನ್ನು ತಪ್ಪುದಾರಿ ತುಳಿಸಲು, ಮೋಸಗೊಳಿಸಲು ಹಾಗೂ ನಮ್ಮ ಮನಸ್ಸನ್ನು ಸೌಂದರ್ಯದ ಯಕ್ಷಿಣೀ ಶಕ್ತಿಯ ಸಂಕೋಲೆಗಳಿಂದ ಬಂಧಿಸಲು ಈ ಎಲ್ಲ ಮರುಳುಗೊಳಿಸುವ ಕಲ್ಪನೆಗಳ ಮಾದರಿಗಳನ್ನು ನಿರ್ಮಿಸಿದ್ದೀರಿ. ಪಲಾಯನವಾದಿಗಳ ನಂದನವನವಾದ ಈ ಗುಹೆಗಳು ನಮ್ಮನ್ನು ಮರುಳು ಮಾಡುತ್ತವೆ; ಧೈರ್ಯಗುಂದಿಸುತ್ತವೆ; ಸತ್ಯದಿಂದ, ವಾಸ್ತವಿಕತೆಯಿಂದ, ಜೀವನದಿಂದ ಕಾಲ್ತೆಗೆಯಿಸುತ್ತವೆ."

ಶಾಂತಮಯವಾದ ಭಿಕ್ಷುವಿನ ಮೊಗದಲ್ಲಿ ಸೋಜಿಗದ ಹಾಗೂ ಅಚಲವಾದ ನಗೆ ಮಿನುಗಿತು. ಆ ನಗೆಯಲ್ಲಿ ದ್ವೇಷ, ಕ್ರೂರತೆ ಇರಲಿಲ್ಲ; ಕೇವಲ ಪ್ರೀತಿ, ಕರುಣೆ, ದಯೆಗಳು ತುಂಬಿದ್ದುವು. ತನ್ನ ಕೆಲಸದಲ್ಲಿಯ ನೆಟ್ಟ ದೃಷ್ಟಿಯನ್ನೂ ಕಿತ್ತದೆ ಅವನು ತುಂಬಾ ಮೃದುವಾಗಿ, ಶಾಂತನಾಗಿ ಉತ್ತರಿಸಿದ :

" ಇಲ್ಲ ಮಗು ! "

ಅವನ ನಗೆಮೊಗದ ಸೌಮ್ಯತೆ, ಶಾಂತಿ, ಗಾಂಭೀರ್ಯ ನಿರ್ಮಲನನ್ನು ಕೆಣಕಿತು. ಅವನು ಗಟ್ಟಿಯಾಗಿ ಅರಚಿದ— " ಹಾಗಾದರೆ ಅಜಂತೆಯ ರಹಸ್ಯವೇನು ? ಅಜಂತೆಯ ಸಂದೇಶವೇನು ? "

" ಕೇಳು ಮಗು ! "

ಎಂದು ಮತ್ತೆ ಆ ಭಿಕ್ಷು ತನ್ನ ಕೆಲಸದಲ್ಲಿ ಸಮರಸನಾದ. ಕೇವಲ ಕಬ್ಬಿಣದ ತಾಳಬದ್ಧ ಧ್ವನಿಯ ವಿನಾ ಅಲ್ಲೆಲ್ಲ ತುಂಬಿದ ಶಾಂತಿ ನೆಲಸಿತ್ತು.

ನಿರ್ಮಲ ಆ ಕಾವಿಯ ಧರಿಸಿದ ಭಿಕ್ಷುವಿನಿಂದ ಅಜಂತೆಯ ಸಂದೇಶ, ಅಜಂತೆಯ ತತ್ತ್ವಜ್ಞಾನ, ಅಜಂತೆಯ ಅರ್ಥಗಳ ಪ್ರವಚನವೇ ನಡೆದೀತೆಂದು ಕಾದಿದ್ದ. ಆದರೆ ಅವನ ತುಟಿಯಿಂದ ಒಂದಕ್ಷರವೂ ತೇಲಿಬರಲಿಲ್ಲ. ಬರಿಯ ಹರಿತವಾದ ಚಾಣದ— ' ಖಟ್-ಖಟ್-ಖಟ್ ' ಎಂಬ ಮರ್ಮಭೇದಕ ಸದ್ದು, ಹಾಗು ಶರತ್ಕಾಲದ ಗಾಳಿಗೆ ಹಾರಿಬೀಳುವ ಎಲೆಗಳಂತೆ, ಶಿಲೆಯ ಸಣ್ಣ ಸಣ್ಣ ತುಣುಕುಗಳು ಹಾರಿಬೀಳುತ್ತಿದ್ದುವು.

" ಹಾಗಾದರೆ ಅಜಂತೆಯ ಸಂದೇಶ...."

ಆದರೊಮ್ಮೆಲೇ ಕಾರ್ಗತ್ತಲು ಕವಿದ ಅವನ ತಲೆಯಲ್ಲಿ ಸೆಳೆ-ಮಿಂಚೊಂದು ಬೆಳಗಿತು. ಹಾಗು ಅವನ ನಾಲಗೆಯ ಮೇಲೆ ಅದೇ ವಾಕ್ಯ ಮತ್ತೊಮ್ಮೆ ಅರ್ಥಕ್ಕೇ ನಿಂತಿತು.

ಅತಿ ವಿಶಾಲವಾದ ಆ ಗುಹೆಯಲ್ಲಿ ಶಿಲೆಗೆ ಬೀಳುವ ಕಬ್ಬಿಣದ ತಾಳಬದ್ಧ ಸ್ವರದ ವಿನಾ ಸಂಪೂರ್ಣವಾದ ಅಚಲತೆ ತುಂಬಿತ್ತು. ಯಾವುದನ್ನು ಭಿಕ್ಷು ನಿರ್ಮಲನಿಗೆ ತಿಳಿಸಬೇಕೆಂದಿದ್ದನೊ ಆ ಅಜಂತೆಯ ಸಂದೇಶ ಅದೇ ಆಗಿತ್ತು. ನಿರ್ಮಲನ ಕಣ್ಣುಗಳಲ್ಲಿಯ

ಆಶಾದಾಯಕ ಕಿರಣವನ್ನು ಕಂಡು ಭಿಕ್ಷು ಮಗುವಿನ ಹಾಗೆ ಶಾಂತ, ಸೌಮ್ಯ ನಗು ನಕ್ಕ. ಹಾಗು ತನ್ನ ಕೆಲಸದಲ್ಲಿ ತನ್ಮಯನಾದ. ನಿರ್ಮಲ ಈಗ ಬಹಳ ಪುರಾತನ ನಿಧಿಸಿಕ್ಕಿದ ಹಾಗೆ ಸಂತೋಷಗೊಂಡ. ಆ ಅಮೂಲ್ಯರಹಸ್ಯದ ಮುಂದೆ ಅವನಿಗೆ ರಸಸಿದ್ಧಿ, ಇಲ್ಲವೆ ಜೀವಾಮೃತ ಏನೂ ಅಲ್ಲ ಎನ್ನಿಸಿತು. ಅಜಂತೆಯ ಸಂದೇಶ ಅವನಿಗೆ ದೊರೆತಿತ್ತು !

ಚಾಣದಿಂದ ಶಿಲೆಗೆ ಬೀಳುತ್ತಿರುವ ಸದ್ದನ್ನಾಲಿಸುತ್ತ ನಿರ್ಮಲ ಆ ಮೂಲೆಯಲ್ಲಿ ಅದೆಷ್ಟು ಹೊತ್ತು ಕುಳಿತಿದ್ದನೋ, ಅದರ ಅರಿವೇ ಇರಲಿಲ್ಲ ಅವನಿಗೆ

‘ಖಟ್—ಖಟ್—ಖಟ್ !’

ಪ್ರತಿಯೊಂದು ಸಲವೂ ಬೀಳುತ್ತಿರುವ ಚಾಣದ ಹೊಡೆತಕ್ಕೆ ಆ ಶಿಲೆ ತನ್ನ ಕತೆ ತಾನೇ ಉಸುರುತ್ತಿರುವಂತೆನ್ನಿಸಿತು ನಿರ್ಮಲನಿಗೆ.

ಕೆಲಸ ! ಕೆಲಸ !! ಕೆಲಸ !!! ಶ್ರಮ ! ಶ್ರಮ !! ಶ್ರಮ !!! ಸಾಹಸ ! ಸಾಹಸ !! ಸಾಹಸ !!!

ಚಾಣದ ಹೊಡೆತದಿಂದ ಗಟ್ಟಿಯಾದ ಪರ್ವತದ ಬಂಡೆಗಳನ್ನು ತುಣುಕಾಗಿಸುವುದು, ಭೂಮಿಯ ಎದೆಯಲ್ಲಿ ಸೌಂದರ್ಯವನ್ನರಳಿಸುವುದು ಮನುಷ್ಯಶ್ರಮ. ಕಲ್ಲುಬಂಡೆಗಳಲ್ಲಿ ಜೀವನದ ಕಲ್ಪನೆಗಳನ್ನು ರೂಹಿಸುವುದು, ಚಿತ್ರಗಳ ಮೂಲಕ ಜೀವನದ ವರ್ಣಗಳನ್ನು ರೂಪಿಸುವುದು ಮಾನವೀಯ ಸಾಹಸ. ನರನನ್ನು ನಾರಾಯಣನನ್ನಾಗಿ ಮಾಡುವುದೂ ಮಾನವೀಯ ಸಾಹಸ. ಕೆಲಸವೇ ಪೂಜೆ. ಸಾಹಸವೇ ಸಿದ್ಧಿ....

ಖಟ್ ! ಖಟ್ !! ಖಟ್ !!!

ಶಿಲೆಯ ಮೇಲೆ ಬೀಳುತ್ತಿರುವ ಕಬ್ಬಿಣದ ತಾಳಬದ್ಧ ಧ್ವನಿ. ಈ ದಿನವೇ ಅಲ್ಲದಿದ್ದರೆ ನಾಳೆ, ನೂರುವರುಷ ಅಲ್ಲದಿದ್ದರೆ ಇನ್ನೂರು ವರುಷಗಳ ಅನಂತರವಾದರೂ ಈ ಶಿಲೆಗಳು ಚಾಣದ ಹೊಡೆತಕ್ಕೆ ಕಲೆ ಹಾಗೂ ಸೌಂದರ್ಯಗಳ ರೂಪುತಾಳಿಯಾವು. ಒಬ್ಬಿಬ್ಬರಿಂದಲ್ಲ— ಸಾವಿರಾರು ಜನಗಳಿಂದ, ಸಾವಿರಾರು ಕೈಗಳಿಂದ— ಒಂದು ತಲೆಮಾರಿನ ಅನಂತರ ಇನ್ನೊಂದು ತಲೆಮಾರು— ಈ ಕೆಲಸ ಮುಂದುವರಿಸಿಯಾರು. ಎಂದಿಗೂ ಈ ಕೆಲಸ ಮುಗಿಯುಲಿಕ್ಕೂ ಇಲ್ಲ; ಆದರಿದರ ಗುರಿ ಕಲಾಪ್ರಪೂರ್ಣತೆ.

ಖಟ್ ! ಖಟ್ !! ಖಟ್ !!!

ಶಿಲೆಯ ಮೇಲೆ ಬೀಳುತ್ತಿರುವ ತಾಳಬದ್ಧವಾದ ಕಬ್ಬಿಣದ ಸದ್ದು. ಇಂದಲ್ಲದಿದ್ದರೆ ನಾಳೆ, ನೂರು ವರುಷ ಅಲ್ಲದಿದ್ದರೆ ಇನ್ನೂರು ವರುಷ, ಇಲ್ಲವೆ ಕೆಲದಿನಗಳಲ್ಲೇ ಮಾನವ ಸ್ವಭಾವ ಚಾಣದ ಹೊಡೆತಕ್ಕೆ ಜ್ಞಾನ, ಕಲೆ, ಸೌಂದರ್ಯಗಳನ್ನರಳಿಸಿಕೊಳ್ಳಬಹುದು. ತುಸು ಜನಗಳಲ್ಲ, ಲಕ್ಷಾನುಲಕ್ಷ ಜನ— ತಲೆಮಾರಿನ ಅನಂತರ ತಲೆಮಾರು— ಈ ಗತಿಯಲ್ಲಿ ಭಾಗಿಗಳಾದಾರು ! ಮಾನವತೆಯ ಸಿದ್ಧಿಯೇ ಗುರಿಯಾಗಿರುವ ಈ ಕೆಲಸ ಎಂದಿಗೂ ಮುಗಿಯುವುದಿಲ್ಲ. ಖಟ್ ! ಖಟ್ !! ಖಟ್ !!!

ತಾಳಬದ್ಧವಾದ ಸ್ವರದಲ್ಲಿ ಕಬ್ಬಿಣ ಶಿಲೆಯ ಮೇಲೆ ಬೀಳುತ್ತಿತ್ತು. ಸುತ್ತಿಗೆ ತನ್ನ ಹೆಬ್ಬೆರಳಿನ ಮೇಲೆ ಬಿದ್ದರೂ ಅದರ ಪ ವೆಯೇ ಇಲ್ಲದಂತೆ, ಆ ಭಿಕ್ಷು ತನ್ನ ಕೆಲಸದಲ್ಲಿ ಮೈಮರೆತಿದ್ದ ಕಲ್ಲಿನ ನೆಲದ ಮೇಲೆ ರಂಗುರಂಗಾದ ನೆತ್ತರಿನ ಹನಿ ಹನಿಗಳು ಬೀಳುತ್ತಿರುವುದನ್ನು ನೋಡುತ್ತಿರುವಂತೆ, ಆ ಕಲ್ಮನೆಗಳ ಕಂಡ ಎಲ್ಲ ಬಣ್ಣದ ಚಿತ್ರಗಳು, ಮೂರ್ತಿಗಳು ಈಗ ನಿರ್ಮಲ ಜ್ಞಾಪಕಕ್ಕೆ ಬಂದುವು. ಸಾವಿರಾರು ವರುಷಗಳು ಗತಿಸಿದ ಅವುಗಳ ಬಣ್ಣಗಳು ಎಷ್ಟು ನವೀನ, ಹಾಗೂ ಪ್ರಕಾಶಮಾ ವಾಗಿವೆ ! ಆ ಕ್ಷಣ ಅವನಿಗೆ ಆ ಕಲಾವಿದರು ಬಣ್ಣಕ್ಕೆ ಬದಲಾ ತಮ್ಮ ಸ್ವಂತ ರಕ್ತವನ್ನೇ ಉಪಯೋಗಿಸಿರಬೇಕೆಂಬ ವಿಚಾ ಹೊಳೆಯಿತು. ಅದಕ್ಕಾಗಿಯೇ ಅವುಗಳ ಭಾವನೆಗಳು ಸಜೀ ವಾಗಿವೆ....

ಆಯಾಸದಿಂದ ಅವನು ಮಲಗಿದ. ಆದರೂ ಅವನು ತನ ವಿಚಾರಗಳಲ್ಲೇ ಸಮರಸನಾಗಿದ್ದ.

ಅವನಿಗೆ ಎಚ್ಚರವಾದಾಗ, ಬೆಳಗಿನ ಸೂರ್ಯನ ಕಿರಣಗಳು ಕಲ್ಮನೆಯಲ್ಲಿ ತೂರಿ ಬಂದು ಬೆಳಗುತ್ತಿದ್ದುವು. ಆದರೆಲ್ಲೆಡೆ ಸ್ಮಶಾನಶಾಂತಿ ಆವರಿಸಿತ್ತು. ಆ ಶಿಲ್ಪಿಗಳಾಗಲಿ, ಕಲಾವಿ ರಾಗಲಿ—ಯಾರೊಬ್ಬರೂ ಅಲ್ಲಿರಲಿಲ್ಲ. ದೀವಟಿಗೆಗಳೂ ಮಾಯ ವಾಗಿದ್ದುವು.

ಹಾಗಾದರೆ ಇದೆಲ್ಲ ಅವನ ಕನಸೆ ?....ಬಹುಶಃ.... ಅದ ಎಂತಹ ವಿಚಿತ್ರ ಸ್ವಪ್ನ !

“ ಸ್ವಪ್ನ ನಿಜವಾಗಲೇಬೇಕು.” ಅವನು ನಿರ್ಧರಿಸಿದ— “ ಇಂತ ವಿಚಿತ್ರ ವಾತಾವರಣದಲ್ಲಿ ನನ್ನ ಕಲ್ಪನೆ ಇಂತಹ ವಿಲಕ್ಷಣ ಗಾರು ಮಾಡಿರಬೇಕು ! ”

ಅವನು ಹೊರಟು ಆ ಕನಸಿನ ಭಿಕ್ಷು ಕೆಲಸಮಾಡುತ್ತಿದ್ದ ಕಂಬ ದಾಟುತ್ತಿರುವಾಗ, ಅಲ್ಲಿ ನಿನ್ನೆ ಸಂಜೆ ಇರದ ಹೊಸತಾ ಕೆತ್ತಿದ ನೂತನ ಕಮಲ ಅರಳಿರುವುದನ್ನು ಕಂಡ. ಇದೂ ಸ ಅವನ ಭ್ರಮೆಯೇ ಆಗಿತ್ತೆ ?

ಏನೋ ಜ್ಞಾಪಕವಾಗಿ ಅವನ ದೃಷ್ಟಿ ನೆಲದ ಮೇಲೆ ಹರಿಯಿತು ಅಲ್ಲಿ ಕೆಂಪು ಮುತ್ತಿನ ಹಾಗೆ ರಕ್ತದ ಹನಿಗಳು ಥಳಥಳಿಸುತ್ತಿದ್ದುವು.

ಡಾಕ್ ಬಂಗಲೆಯಲ್ಲಿದ್ದ ಭಾರತಿಯನ್ನು ಕಾಣದೆ, ನಿರ್ಮ ನೇರವಾಗಿ ರೈಲು ನಿಲ್ದಾಣಕ್ಕೆ ನಡೆದಿದ್ದ. ಮರುದಿನವೇ ರವಿವಾರ. ಜಾತೀಯ ದಂಗೆ ಇರಲಿ, ಇಲ್ಲದೆ ಇರಲಿ—ಆ ದಿನ ಸಾ ಪರಿಷತ್ತಿನ ಸಭೆಯಲ್ಲಿ ತರುಣ ಅಹಮ್ಮದನ ಶಾಂತಿ ಸೂಚನೆಗಳನ್ನು ಅನುಮೋದಿಸಲು ಅವನು ಮುಂಬಯಿಯಲ್ಲಿರಬೇಕಾಗಿತ್ತು ಮತೀಯ ದೊಂಬಿಗಳಿಂದ, ಮುಂಬಯಿಯಿಂದ, ಜೀವನದಿಂ ಪಾರಾಗಲು ಅವನಿಗೆ ಅವಕಾಶವಿರಲಿಲ್ಲ !

ರೈಲಿನಲ್ಲಿ ಒರ್ವ ಸಹ ಪ್ರಯಾಣಿಕ ಕೇಳಿದ “ ಸ್ವಾಮಿ, ತಾವ ಅಜಂತೆಯಿಂದ ಬಂದಿರಾ ? ” ನಿರ್ಮಲ ಉತ್ತರಿಸಿದ— “ ಇಲ್ಲ ನಾನು ಅಜಂತೆಯೆಡೆಗೆ ಸಾಗಿದ್ದೇನೆ ! ”



ನಂಜಿನ ಸವಿ

(ಸಾಮಾಜಿಕ ಕಾದಂಬರಿ)

ಬರೆದವರು ಶ್ರೀ. ಎಂ. ವಿ. ಸೀತಾರಾಮಯ್ಯ ಎಂ. ಎ; ಮೈಸೂರು. ಸಾಹಿತ್ಯಮಾಲೆಯ ೩೨ನೆಯ ಗ್ರಂಥ.

ಇದೊಂದು ವಿಷಾದಾಂತ ಸಾಮಾಜಿಕ ವಸ್ತುವನ್ನೊಳಗೊಂಡ ೧೮ ಪುಟಗಳ ಕಾದಂಬರಿ. ಇದನ್ನು ಬರೆದವರಾದ ಶ್ರೀಮಾನ್ ಎಂ. ವಿ. ಸೀತಾರಾಮಯ್ಯನವರು, ಇಷ್ಟರಲ್ಲಿಯೆ ಕನ್ನಡ ವಾಚಕ ಲೋಕಕ್ಕೆ ಸಾಕಷ್ಟು ಪರಿಚಿತರಾಗಿರುವರು. ಇವರು ಕಾದಂಬರಿಕಾರರು, ಕತೆಗಾರರು, ಕವಿ, ನಾಟಕಕಾರರು, ಕಲಾವಿದರು. ಚಿತ್ರದಲ್ಲಿ ಸೌಂದರ್ಯದ ಮತ್ತು ಸದಭಿರುಚಿಯ ಬೆಲೆ ಎಂತಹುದೆಂಬುದರ ಉಚಿತ ಕಲ್ಪನೆಯುಳ್ಳವರು. ಮೈಸೂರತ್ತ ಕಡೆಗೆ ಹೆಚ್ಚಾಗಿ ವಾಸಿಸುವ ಕರ್ಣಾಟಕ ಬ್ರಾಹ್ಮಣ ಸಮಾಜದಲ್ಲಿ ತಲೆದೋರಬಹುದಾದ ಮದುವೆಯ ಸಮಸ್ಯೆಯ ದುರಂತತೆಯೊಂದನ್ನು ಕೇಂದ್ರವಾಗಿಟ್ಟುಕೊಂಡು, ಈ ಕಾದಂಬರಿಯ ಜಾಲವನ್ನು ಹೆಣೆದಿದ್ದಾರೆ.

ಪುಟ್ಟಯ್ಯನವರ ಮಗ ಕೇಶವಮೂರ್ತಿಯೊಂದಿಗೆ, ಶ್ರೀಕಂಠಯ್ಯನವರ ಮಗಳು ಶಾರದೆಯ ಮದುವೆ– ನಂಜನಗೂಡಿನಲ್ಲಿ– ನಡೆಯುತ್ತದೆ. ತಮ್ಮಯ್ಯನೆಂಬ ಬ್ರಾಹ್ಮಣ ಈ ಮದುವೆಯ ಸಂಘಟಕ. ಗಂಡು-ಹೆಣ್ಣು ಹೊಂದಿಸಿ, ಹೇಗಾದರೂ ಮಾಡಿ ಮದುವೆಯಾಗಿಸಿ ಬಿಡುವುದು ಅವನ ರೂಢಿ. ಅದರಂತೆಯೆ ಶ್ರೀಕಂಠಯ್ಯನವರಿಗೊಂದು ರೀತಿ, ಪುಟ್ಟಯ್ಯನವರಿಗೆ ಇನ್ನೊಂದು ರೀತಿ ಹೇಳಿ ಮದುವೆಯ ಯೋಗ ಕಲ್ಪಿಸಿದನು. ಆದರೆ ಮೊದಲನೆಯ ದಿನವೇ ಸಂಘಟಕನ ಕೈಚಳಕ ಇಬ್ಬರಿಗೂ ಗೊತ್ತಾಗುವುದು. ಪುಟ್ಟಯ್ಯನವರು ಅಪೇಕ್ಷಿಸಿದಷ್ಟು ವರದಕ್ಷಿಣೆ-ವರೋಪಚಾರಗಳನ್ನು ಶ್ರೀಕಂಠಯ್ಯನವರಿಂದ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ೫೦ ರೂಪಾಯಿ ಸಂಬಳದಲ್ಲಿ ಜೀವಿಸಬೇಕಾಗಿರುವ—ಮಿಡಲ್ ಸ್ಕೂಲ್ ಮೇಷ್ಟರಾದ— ಶ್ರೀಕಂಠಯ್ಯನವರಿಗೆ ಒಂದು ಸಾವಿರ ರೂಪಾಯಿ ವರದಕ್ಷಿಣೆ, ರಿಸ್ಟ್‌ವಾಚು, ಸೈಕಲ್ಲು ಇವನ್ನೆಲ್ಲ ಕೊಡಲಿಕ್ಕೆ ಸಾಧ್ಯವಾದೀತು ಹೇಗೆ? ಆದರೆ ಪುಟ್ಟಯ್ಯನವರ ಎರಡನೆಯ ಹೆಂಡತಿ ಸಾತಮ್ಮನವರಿಗೆ, ಸವತಿಯ ಮಗನ ಮದುವೆಗಿಂತ, ಈ ಮದುವೆಯಲ್ಲಿ ಗಿಟ್ಟಿಸಿದ ಬಂಡವಾಳವನ್ನು ತನ್ನ ಹೊಟ್ಟೆಯ ಮಗನ ಮದುವೆಗಾಗಿ ಉಪಯೋಗಿಸಿಕೊಳ್ಳಬೇಕೆಂದು ಮಹತ್ವಾಕಾಂಕ್ಷೆ. ಸಾತಮ್ಮನ ಪ್ರಕೃತಿಯಲ್ಲಿ ಚಂಡಿಯ ಅಂಶವೇ ಹೆಚ್ಚು. ಎರಡನೆಯ ಹೆಂಡತಿಯ ಪ್ರಭಾವದಿಂದ ಗಂಡ ಆಕೆಯ ಕೈಗೊಂಬೆ.

ಇಷ್ಟೇನು, ಕನ್ಯಾಪಿತರು ಹಸೆಯ ಮೇಲೆ ಕೂತಿರುವ ವರನು ಕನ್ಯೆಯ ಕೊರಳಿಗೆ ತಾಳಿಯನ್ನು ಕಟ್ಟಬೇಕು. ಕಟ್ಟಲು ತೊಡಗಿದ್ದ. ಒಂದು ಗಂಟನ್ನು ಹಾಕಿಯೂ ಆಗಿತ್ತು. ಆಗಲೆ ಅಪ್ಪನ ಗದ್ದರಿಕೆಯಿಂದ ಮದುಮಗ ಕೇಶವಮೂರ್ತಿ, ಇನ್ನೊಂದು ಗಂಟುಹಾಕುವುದನ್ನು ಬಿಟ್ಟು, ಹಸೆಯ ಮಣೆಯಿಂದ ಎದ್ದು ಹೊರಟುಬಿಟ್ಟ. ಹೆಣ್ಣಿನ ಬಳಗದಲ್ಲಿ ಹಾಹಾಕಾರವೆದ್ದಿತು. ಶ್ರೀಕಂಠಯ್ಯನವರು ಹೋಗಿ ಎಷ್ಟೊಂದು ಹೇಳಿಕೊಂಡರೂ, ಹೆಂಡತಿಯ ಸೂತ್ರದಿಂದಾಗುವ ಗೊಂಬೆಯಾದ ಪುಟ್ಟಯ್ಯನವರು ಮದುವೆಯ ಕೆಲಸ ಮುಂದುವರಿಸಲು ಒಪ್ಪಲಿಲ್ಲ. ಮುರಿದುಕೊಂಡು ಮರಳಿ ಮೈಸೂರಿಗೆ ಹೊರಟುಬಿಟ್ಟರು.

ಕೇಶವಮೂರ್ತಿ ಶಾರದೆಯ ಸೌಂದರ್ಯವನ್ನು ನೋಡಿ ಮೆಚ್ಚಿದ್ದ. ಎಂತಲೆ ತಾನು ಒಂದೆ ಒಂದು ಗಂಟು ಹಾಕಿದ ತಾಳಿಯ ದಾರಕ್ಕೆ ಇನ್ನೊಂದು ಗಂಟು ಹಾಕಿಕೊಳ್ಳಲು ಶಾರದೆಗೆ ಸಂಜ್ಞೆ ಮಾಡಿ ಹೊರಟುಹೋಗಿದ್ದ. ಅದರಂತೆಯೆ ಅವಳು ಮತ್ತೊಂದು ಗಂಟನ್ನು ಹಾಕಿಕೊಂಡು, ತನ್ನ ಮದುವೆಯಾಯಿತೆಂದು ನಂಬಿಬಿಟ್ಟಳು. ತಾಯಿ-ತಂದೆಗಳಿಗೆ ಗೊತ್ತಿಲ್ಲದಂತೆ ಒಬ್ಬನೆ ಹೆಣ್ಣಿನ ಮನೆಗೆ ಬಂದು, ಶಾರದೆಗೆ ಕೇಶವಮೂರ್ತಿ ಅಭಿವಚನ– ಪ್ರೀತಿಯ ಉಂಗುರಗಳನ್ನು ಕೊಟ್ಟು ಹೋದುದರಿಂದಲಂತೂ ಶಾರದೆ, ಅವನೇ ತನ್ನ ಗಂಡನೆಂದು ನಂಬಿಬಿಟ್ಟಳು. ಕೇಶವಮೂರ್ತಿ ತಂದೆ-ತಾಯಿಗಳ ಮಾತನ್ನು ಮೀರಿ ಮುಂದುವರೆಯುವಂತಹ ಕ್ರಾಂತಿಕಾರಿ ಮನಸ್ಕನಲ್ಲ; ಆದರೆ ಶಾರದೆಯ ವಿಷಯದಲ್ಲಿ ಅನುಮಾನವಾದ ಪ್ರೇಮವನ್ನು ಇರಿಸಿಕೊಂಡವ.

ತನ್ನ ಮದುವೆಯಾಗಿದೆಯೆಂದು ಶಾರದೆ ನಂಬಿದ್ದರೂ ಸಮಾಜನಿಯಮ ಒಪ್ಪಿಗೆ ಕೊಡಬೇಕಲ್ಲ! ಸಪ್ತಪದಿಯಾಗಿಲ್ಲದೆ ಮದುವೆಯ ಸಂಸ್ಕಾರಕ್ಕೆ ಪೂರ್ತಿಯೆಲ್ಲಿ? ಸನಾತನಿಗಳಾದ ಶ್ರೀಕಂಠಯ್ಯನವರಿಗೆ ಕೂಡ ಶಾರದೆಯ ವಿಚಾರದಲ್ಲಿ ಸಂದೇಹವೆ. ಶಾರದೆಯ ನಂಬುಗೆ, ಸಮಾಜನಿಯಮದ ವಿರೋಧ ಇವುಗಳ ಎಳೆದಾಟದಲ್ಲಿ ಅವರು ಸೋತುಹೋದರು. ಧಾರ್ಮಿಕರ ಬೆಂಬಲವೂ ಸಿಕ್ಕಲಿಲ್ಲ. ಸರಕಾರದ ಕಾಯಿದೆಯ ಬೆಂಬಲವೂ ಸಿಕ್ಕಲಿಲ್ಲ. ಆದುದರಿಂದಲೇ ಶಾರದೆಯ ಹೆಸರಿಗೆ ಬಂದ ಕೇಶವಮೂರ್ತಿಯ ಪತ್ರಗಳನ್ನು ಅವಳಿಗೆ ಕೊಡದೆ, ತಾವೇ ಹರಿದುಹಾಕಿದರು.

ತಂದೆ-ತಾಯಿಗಳ ಆರ್ಥಿಕಸಮಸ್ಯೆಯನ್ನು ಪರಿಹರಿಸಿ, ಆಮೇಲೆ ಸ್ವಾವಲಂಬಿಯಾಗಿ ಶಾರದೆಯೊಂದಿಗೆ ಸಂಸಾರ ಮಾಡಿಕೊಂಡಿರಬೇಕೆಂಬುದು, ಆ ದಾಕ್ಷಿಣ್ಯಮೂರ್ತಿ ಕೇಶವನ ಆಶೆ. ಅದಕ್ಕಾಗಿ ಬೆಂಗಳೂರಿಗೆ ಹೋಗಿ ಕೆಲಸ ಹಿಡಿಯುವನು. ಸಾಕಷ್ಟು ಕಲಿಯದ ಆತನಿಗೆ ದೊಡ್ಡ ಸಂಬಳದ ಕೆಲಸ ಹೇಗೆ ಸಿಕ್ಕಬೇಕು? ಹೊಸದಾಗಿ ಹೊರಟ ಬ್ಯಾಂಕೊಂದರಲ್ಲಿ ೩೫ ರೂಪಾಯಿ ಸಂಬಳದ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಕಾರಕೂನನಾದ. ತೀರ ಅಲ್ಪವ್ಯಯದಲ್ಲಿ ಬದುಕಿ, ಹಣ ಉಳಿಸಬೇಕೆಂಬ ಹಂಬಲದಲ್ಲಿದ್ದ. ಅವನು ವಾಸಿಸುತ್ತಿದ್ದ ಉಡುಪಿಯ ಹೋಟಲಿನಲ್ಲಿ ಅವನಿಗೊಬ್ಬ ಗೆಳೆಯ ದೊರೆತ. ಗೋಪಾಲರಾಯನೆಂದು ಅವನ ಹೆಸರು. ಜೀವನದಲ್ಲಿ ನಿರಾಶೆಯಿಂದ ಸುಟ್ಟುಕೊಂಡವನಾದರೂ, ಉತ್ಸಾಹಮೂರ್ತಿಯಾಗಿ ಈಗ ಜೀವನವನ್ನು ನಡೆಯಿಸಿದ್ದ. ಬೆಂಗಳೂರಲ್ಲಿರುವಾಗ ಕೇಶವಮೂರ್ತಿಗೆ ಇವನಿಂದ ಹಣ, ಹುರುಪು, ಜೀವನಾನುಭವದ ಪಾಠ ಇವೆಲ್ಲ ದೊರೆಯುತ್ತಲಿದ್ದುವು.

ಮಗ ಕೇಶವಮೂರ್ತಿಯ ಮದುವೆಯನ್ನು ಇನ್ನೊಂದು ಹೆಣ್ಣಿನೊಂದಿಗೆ ಮಾಡಬೇಕೆಂದಿರುವಾಗಲೆ ಪುಟ್ಟಯ್ಯನವರು ಇಹಲೋಕ ಯಾತ್ರೆ ಮುಗಿಸುವರು. ತಂಗಿಯ ಮದುವೆಗೆಂದು ಮಿಗಿಸಿಟ್ಟ ಕೇಶವಮೂರ್ತಿಯ ಹಣ, ತಂದೆಯ ಉತ್ತರಕ್ರಿಯೆಗೆ ವೆಚ್ಚವಾಗುವುದು. ಪತಿನಿಧನ ದುಃಖಿತೆಯಾದ ಪಾತಮ್ಮ ನಿರ್ಗತಿಕಳಾಗಿ, ಮಲಮಗನಾದ ಕೇಶವಮೂರ್ತಿಯ ಆಶ್ರಯವನ್ನೇ—ಅನಿವಾರ್ಯವಾಗಿ ಯಾಚಿಸುವಳು. ಆತನ ಕರುಣಾಪೂರ್ಣವಾದ ಏಕಾಕಿ ಜೀವನಕ್ಕಾಗಿ ಪಶ್ಚಾತ್ತಾಪ ಪ್ರಕಟಿಸುವಳು. ಬೆಂಗಳೂರಿಗೆ ಬಂದು ಕೇಶವಮೂರ್ತಿಯು ಮಾಡಿದ ಮನೆಯಲ್ಲಿ ನಿಂತುಕೊಳ್ಳುವಳು.

ಶಾರದೆಯನ್ನು ಕರೆಯಿಸಿಕೊಳ್ಳಬೇಕೆಂಬ ಉತ್ಕಟತೆಯಲ್ಲಿ ಇರುವಾಗಲೇ ಕೇಶವಮೂರ್ತಿಗೆ, ಅವಳ ಮರುಮದುವೆಯ ಲಗ್ನಪತ್ರ ಬಂದು ಆಸನಾಘಾತವುಂಟಾಗುವುದು. ಆಗಲೆ ಬ್ಯಾಂಕು ಮುಳುಗಿ ಕೆಲಸ ಹೋದುದರಿಂದ, ಗೆಳೆಯ ಗೋಪಾಲರಾಯನ ಹೇಳಿಕೆಯಂತೆ ವಿಮಾಕಂಪನಿಯ ಏಜನ್ಸಿಯನ್ನು ಕೈಕೊಂಡಿದ್ದ ಕೇಶವಮೂರ್ತಿ.

ಶಾರದೆ ನರಸೀಪುರದಲ್ಲಿಯ ಶಿವರಾಮಯ್ಯನವರಿಗೆ ಮೂರನೆಯ ಹೆಂಡತಿಯಾಗಿದ್ದಳು. ಒಬ್ಬ ಗಂಡ ತಾಳಿಕಟ್ಟಿದ ಹೆಣ್ಣನ್ನು ಮದುವೆಯಾಗಲು ಸಮಾಜದಲ್ಲಿ ಒಳ್ಳೆಯ ವರಗಳು ಹೇಗೆ ಬಂದಾರು? ಆದರೆ ವಿಧಿಯುಕ್ತ ಮದುವೆಯಾಗಿರದ ಮಗಳನ್ನು ಶ್ರೀಕಂಠಯ್ಯನವರು ಹೇಗೆ ಸುಮ್ಮಗೆ ಇರಿಸಿಕೊಂಡಾರು? ಮನಸ್ಸಿಲ್ಲದಿದ್ದರೂ ಶಾರದೆ ಒಬ್ಬ ಗಂಡನನ್ನು ಶಾಸ್ತ್ರವಿಧಿಯನುಸಾರವಾಗಿ ಪಡೆದಳು. ಆದರೆ ಅವಳು ಈ ಗಂಡನೊಂದಿಗೆ ದೈಹಿಕ ಸಂಬಂಧವನ್ನು ಎಂದೂ ಒಪ್ಪಿಕೊಳ್ಳಲಿಲ್ಲ. ಅಡಿಗೆಗಾಗಿ ಮನೆಯಲ್ಲಿ ಇರಿಸಿಕೊಂಡ ಅಚ್ಚಮ್ಮನೆಂಬ ವಿಧವೆಯಿಂದ ತಮ್ಮ ಆವಶ್ಯಕತೆ ಪೂರಯಿಸುತ್ತಲಿದ್ದುದರಿಂದ, ಶಿವರಾಮಯ್ಯನವರು ಶಾರದೆಯನ್ನು ನಿರ್ಲಕ್ಷ್ಯಿಸಿಯೆ ಬಿಟ್ಟರು.

ಒಂದು ಸಲ, ಶಾರದೆಯನ್ನು ಕಣ್ಣಾರೆ ಕಾಣಬೇಕೆಂಬ ಉದ್ದೇಶವನ್ನಿಟ್ಟುಕೊಂಡೇ ಕೇಶವಮೂರ್ತಿ ನರಸೀಪುರಕ್ಕೆ ಹೋದ. ಆಗ ಶಿವರಾಮಯ್ಯನವರು ಊರಲ್ಲಿರಲಿಲ್ಲ. ಅತಿಥಿಯಾಗಿ ಮನೆಯಲ್ಲಿಯೆ ಇದ್ದ. ಶಾರದೆಯೊಂದಿಗೆ ಮನವಾರೆ ಮಾತನಾಡಿ, ಪರಿಸ್ಥಿತಿಯನ್ನು ತಿಳಿದುಕೊಂಡ ಸಮಾಜನಿಯಮ, ಇನ್ನು ಮೇಲೆ ತಾವು ಗಂಡಹೆಂಡಿರಾಗಿ ಬಾಳಲು ಅವಕಾಶ ಕೊಡಲಾರದೆಂಬುದ್ದು ಗೊತ್ತಾಯಿತು. ಆದರೆ ಇಬ್ಬರ ಹೃದಯಗಳೂ ತಾವು ಪತಿ-ಪತ್ನಿಯರೆಂಬ ಭಾವವನ್ನು ಪೂರ್ತಿಯಾಗಿ ಒಪ್ಪಿಕೊಂಡಿದ್ದುವು. ಒಂದು ರಾತ್ರಿ ಶಾರದೆ, ಕೇಶವಮೂರ್ತಿಯನ್ನು ಏಕಾಂತದಲ್ಲಿ ಕಾಣುವಳು. ಎಷ್ಟೇಷ್ಟೋ ಸುಖ-ದುಃಖದ ಮಾತುಗಳನ್ನು ಆಡುವರು. ಏಕಾಂತಸಾಮೀಪ್ಯದಿಂದ ಪರಸ್ಪರರು ಆಕರ್ಷಿತರಾಗುವರು. ಅಂದೊಂದು ರಾತ್ರಿ ಶಾರದೆ, ಕೇಶವಮೂರ್ತಿಯ ನಿಜವಾದ ಪತ್ನಿತ್ವವನ್ನು ಸ್ಥಾಪಿಸಿಕೊಳ್ಳುವಳು. ಅಂದೆಯೆ ಕೇಶವಮೂರ್ತಿ ಹೊರಟುಹೋಗುವನು.

ಅಚ್ಚಮ್ಮನಿಂದ ಶಿವರಾಮಯ್ಯನವರಿಗೆ ಇದೆಲ್ಲ ತಿಳಿಯುವುದು. ಶಾರದೆಗೆ ಎರಡು ತಿಂಗಳು ಮುಟ್ಟು ತಡೆದುದರಿಂದ, ಶಿವರಾಮಯ್ಯನವರ ರೋಷಕ್ಕೆ ಪಾತ್ರಳಾಗಿ, ಒಂದು ರಾತ್ರಿ, ಯಾರಿಗೂ ತಿಳಿಯದಂತೆ ಹೊಳೆಯಲ್ಲಿ ಬಿದ್ದು ಸಾಯುವಳು. ಈ ವರ್ತಮಾನ ಕೇಶವಮೂರ್ತಿಗೆ ತಿಳಿದು, ತುಂಬ ದುಃಖವಾಗುವುದು. ಗೋಪಾಲರಾಯನು ಎಷ್ಟೊಂದು ಹೇಳಿದರೂ ಇನ್ನೊಂದು ಮದುವೆ ಮಾಡಿಕೊಳ್ಳಲು ಒಪ್ಪದೆ, ಸಮಾಜನಿಯಮದ ನಂಜನ್ನುಂಡು ತೀರಿದ ಶಾರದೆಯ ನೆನಹಿನ ಸವಿಯನ್ನು ಉಣ್ಣುತ್ತಲೇ ಜೀವಿಸಿರುವೆನೆಂಬ ತನ್ನ ಸಂಕಲ್ಪವನ್ನು ಸಾರುವನು. ಕಾದಂಬರಿ ಕೊನೆಗೊಳ್ಳುವುದು.

ವಸ್ತುವಿನ ದೃಷ್ಟಿಯಿಂದ ಈ ಕಾದಂಬರಿ ಕೊನೆಯವರೆಗೂ ಸಾಮಾನ್ಯ ವಾಚಕರಲ್ಲಿ ಕುತೂಹಲವನ್ನು ತಡೆದು ನಿಲ್ಲಿಸಬಹುದು. ಪಾತಮ್ಮನ ಖಲವೃತ್ತಿ ಅವರಲ್ಲಿ ಕನಲಿಕೆಯನ್ನೂ ಹುಟ್ಟಿಸಬಹುದು ಶಾರದೆಯ ತಂದೆ ಶ್ರೀಕಂಠಯ್ಯನವರ ಸಾಂಪ್ರದಾಯಿಕ ಮನೋವೃತ್ತಿ, ಅವರಲ್ಲಿ ತಿರಸ್ಕಾರವನ್ನೂ ಹುಟ್ಟಿಸಬಹುದು. ಶಾರದೆ-ಕೇಶವಮೂರ್ತಿಯರ ಜೀವನದ ದುರಂತ, ಅವರಿಂದ ನಿಟ್ಟುಸಿರು–ಕಂಬನಿಗಳ ಮುಡಿಪನ್ನೂ ಪಡೆಯಬಹುದು. ಆದರೆ, ಔಚಿತ್ಯದೃಷ್ಟಿಯಿಂದ ಓದುವ ವಿಮರ್ಶಕರಿಗೆ, 'ಇದು ಸರಿಯೆ?' ಎಂದು ಸಂದೇಹವನ್ನು ಹುಟ್ಟಿಸುವಂತಹ ಸಂಗತಿಗಳು ಅಲ್ಲಲ್ಲಿ ಕಾಣದಿರವು.



…ೊದಲನೆಯದಾಗಿ ಕತೆ ನಡೆದ ಕಾಲವನ್ನು ಸೂಚಿಸಬಲ್ಲ …ತಿಗಳಾವುವೂ ಹಿನ್ನೆಲೆಯಲ್ಲಿ ಕಾಣುತ್ತಿಲ್ಲ. ಕೇಶವಮೂರ್ತಿ …ಊರಲ್ಲಿದ್ದು ೨೫ ರೂ. ಸಂಬಳದ ಕೆಲಸ ಹಿಡಿದದ್ದು, ಅವನು …ಶ್ತು ರೂಪಾಯಿ ಮಾತ್ರ ಕೊಟ್ಟು, ಹೋಟಲಿನಲ್ಲಿ ಉಣ್ಣು- …ದ್ದು— ಇದನ್ನು ನೋಡಿದರೆ, ಕತೆ ನಡೆದ ಕಾಲ, ಕಳೆದ …ಯುದ್ಧಕ್ಕಿಂತ ಮೊದಲಿನದೆಂದು ಭಾವಿಸುವಂತಿದೆ. ಸಾಮಾ- …ಕಾದಂಬರಿಗಳಲ್ಲಿ ದೇಶ-ಕಾಲದರ್ಶಕವಾದ ಹಿನ್ನೆಲೆ ಸ್ಪಷ್ಟ- …ಮೂಡಿ ನಿಂತಿದ್ದರೆ, ಅದಕ್ಕೊಂದು ಹೆಚ್ಚಿನ ಕಳೆ ಬರುತ್ತದೆ. …ಶವಮೂರ್ತಿ ಒಬ್ಬನೇ ಹೋಗಿ, ಕೋಣೆಯಲ್ಲಿ ಅಳುತ್ತ …ಗಿದ ಶಾರದೆಗೆ ಅಭಯವಚನ ಕೊಟ್ಟುಬಂದುದೂ, …ಪಾಲರಾಯರೊಂದಿಗೆ ಸೂಳೆಗೇರಿಗೆ ಹೋಗಿ ಸುಸಂಪ- …ದಿಗೆ ಒಂದು ರಾತ್ರಿಯನ್ನು ಕಳೆದು ಅವಳನ್ನು ತಂಗಿಯೆಂದು …ಸಿಕೊಂಡು ಬಂದುದೂ, ಕೊನೆಯದಾಗಿ ಶಿವರಾಮಯ್ಯ- …ಮನೆಗೆ ಹೋಗಿ ಶಾರದೆಯ ಸವಿನಾಪಸಂಬಂಧ ತಂದು- …ಡುದೂ ವಾಸ್ತವದೃಷ್ಟಿಗೆ ಅಸ್ವಾಭಾವಿಕವೆಂದು ತೋರಿ, …ಂಬರಿಯ ರಸಪುಷ್ಟಿಯನ್ನು ನಿಸ್ಸತ್ತ್ವಗೊಳಿಸುವುವು.

…ರ್ವಕಥೆಯೇನೂ ಗೊತ್ತಾಗದಂತೆ ಗೋಪಾಲರಾಯನ …ಕೊನೆಗೊಳ್ಳುವುದರಿಂದ, ಒಳ್ಳೆಯ ಪಾತ್ರನಿರ್ಮಿತಿಯೆಂದು …ರೂ ಅದು ಅಪೂರ್ಣವಾಗಿ ತೋರುತ್ತದೆ.

…ನಾಯಕನಾದ ಕೇಶವಮೂರ್ತಿಯ ಪಾತ್ರದಲ್ಲಿಯೂ …ತೆಗಳು ಇಲ್ಲದೆ ಇಲ್ಲ. ಅವನ ವಿದ್ಯಾಭ್ಯಾಸಜೀವನದಲ್ಲಿಯ ಆಸಯಶಸ್ಸು, ವಾಚಕರ ಮನಸಲ್ಲಿ ಮೊದ-ಮೊದಲು ಒಂದು ಬಗೆಯಾಗಿ ಅವನ ಚಿತ್ರರೂಪಿಸುವುದು. ಮುಂದಿನ ಆತನ ತರ್ಕಬದ್ಧ ತಾತ್ತ್ವಿಕಜೀವನವು ಮೊದಲಿನ ಚಿತ್ರಣಕ್ಕೆ ತೇಪೆಹಚ್ಚಿ- ದಂತೆ ಕಾಣಲು ತೊಡಗುವುದು. ಶಾರದೆಯ ವಿಷಯದಲ್ಲಿ ಆತನ ಹೃದಯದಲ್ಲಿ ಬೆಳೆದ ಪವಿತ್ರಪ್ರೇಮಕ್ಕೆ ಸಾಕಷ್ಟು ಅವಕಾಶವೂ ಉಚಿತಘಟನೆಗಳೂ ಕಾದಂಬರಿಯಲ್ಲಿ ದೊರೆತಿಲ್ಲವಾದುದರಿಂದ, ಆಗಾಗ ಅವನು ಆಡುವ ಪವಿತ್ರಪ್ರೇಮದ ಮಾತುಗಳು ಆಭಾಸ- ವಾಗಿ ತೋರುವುವು. ಪಾಪ, ಶಾರದೆಯ ರೂಪವನ್ನೊಂದನ್ನಲ್ಲದೆ— ಅದೂ ಒಂದು ಸಲ ಕೆಲವು ನಿಮಿಷ — ಕೇಶವಮೂರ್ತಿ ಇನ್ನೇ- ನನ್ನು ಕಂಡಿದ್ದಾನೆ? ರೂಪವೊಂದನ್ನೇ ಕಂಡು ಉಂಟಾಗುವ ಆಕರ್ಷಣೆ ಕಾಮುವೆನಿಸಬಹುದೇ ಹೊರತಾಗಿ ಪವಿತ್ರಪ್ರೇಮವಾಗ- ಲಾರದೆಂಬುದು ಮನೋವಿಜ್ಞಾನಿಗಳ ಅಭಿಪ್ರಾಯ.

ಕಾದಂಬರಿಯ ಭಾಷೆಯಲ್ಲಿ ಸಹಜತೆಯಿದ್ದು, ಕತೆಯನ್ನು ಕುತೂಹಲಕಾರಿಯಾಗಿ ಓದಿಸುತ್ತದೆ. ತಂತ್ರದಲ್ಲಿ ಹೊಸತನವೆಂದು ಹೇಳಿಕೊಳ್ಳುವಂತಹದಾವುದೂ ಇಲ್ಲವೆಂದೆನಿಸುವುದು. ಶ್ರೀಯುತ ಸೀತಾರಾಮಯ್ಯನವರ ಈ ಕಾದಂಬರಿ, ಕನ್ನಡ ವಾಚಕಲೋಕದ ಪ್ರೀತಿಗೆ ಪಾತ್ರವಾಗುವುದೆಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ ಮನುಷ್ಯನ ಜೀವನದಲ್ಲಿ ಮದುವೆಯೆಂದರೆ ಒಂದು ಆಕರ್ಷಕವಾದ ವಿಷಯ. ಅಂತಹ ಮದುವೆಗೆ ಸಂಬಂಧಿಸಿದ ಸಮಸ್ಯೆಯೊಂದನ್ನು ಈ ಕಾದಂಬರಿ ಒಳಗೊಂಡಿದೆ.

—ಬಿ. ಪಿ. ಎಸ್. ರಾವ್.

ತಾಯಂದಿರೆ,

ನಿಮ್ಮ ಮಗುವಿಗೆ

ಸಾಕಷ್ಟು ತಾಯ ಹಾಲು ಬೇಕಲ್ಲವೆ ?

ಹಾಗಾದರೆ ನೀವು ಈ ದಿನದಿಂದಲೇ

ಜೆನ್-ಓ ಮಿಲ್ಕ್

(GEN-O MILK)

ತೆಗೆದುಕೊಳ್ಳಲು ಪ್ರಾರಂಭಮಾಡಿರಿ !

ನಿಮ್ಮ ಊರಿನ ಕೆಮಿಸ್ಟರಲ್ಲಿ ದೊರೆಯದೆ ಹೋದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಅಜಿತ ಲ್ಯಾಬ್ಸ್. ಲಿ. ಮಿರಜ

ನಾಡನಡೆ

★

ಕೇಂದ್ರದಲ್ಲಿ ಕನ್ನಡಿಗ ಮಂತ್ರಿಗಳ ಸಂಖ್ಯಾವೃದ್ಧಿ

ಕಳೆದ ಕೇಂದ್ರ ಮಂತ್ರಿಮಂಡಲದಲ್ಲಿ ಮಾನ್ಯ ದಿವಾಕರರೊಬ್ಬರೆ ಕನ್ನಡಿಗರಿದ್ದರು. ಈ ಸಲ ಇಬ್ಬರು ಕನ್ನಡಿಗರು ಮಂತ್ರಿಗಳೂ ಇನ್ನಿಬ್ಬರು ಉಪಮಂತ್ರಿಗಳೂ ಆಗಿದ್ದಾರೆ. ಈ ಕಾರಣಕ್ಕಾಗಿ ನಮ್ಮ ನಾಡಿನಲ್ಲಿ ಹೆಮ್ಮೆಯಿಂದ ಹಿಗ್ಗಿದವರೂ ಉಂಟು; ಸಂದೇಹಭಾವದಿಂದ ಅಸಮಾಧಾನ ಪ್ರಕಟಿಸಿಮಾಡುವವರೂ ಉಂಟು. ಕರ್ನಾಟಕದ ಜನರು ಇಷ್ಟು ದೊಡ್ಡವರಾದರಲ್ಲಾ— ಎಂದು ಭಾವುಕ ಕನ್ನಡಿಗರಿಗೆ ಹೆಮ್ಮೆ-ಹಿಗ್ಗುಗಳಾದರೆ, ಪದವಿ-ಪ್ರತಿಷ್ಠೆಗಳ ಆಮಿಷ ತೋರಿಸಿ, ಕರ್ನಾಟಕ ಏಕೀಕರಣದ ಚಳವಳಿಯ ಮುಂದಾಳುಗಳನ್ನೂ ಪಂಡಿತ ನೆಹರು ಅವರು ತಮ್ಮ ಬಲೆಗೆ ಕೆಡಹಿಕೊಳ್ಳುತ್ತಿರುವರಲ್ಲಾ— ಎಂದು ಕರ್ನಾಟಕ ಏಕೀಕರಣ ಮನೋಭಾವನೆಯವರ ಅಸಮಾಧಾನದ ಕೂಗು. ಭಾವುಕ ಕನ್ನಡಿಗರ ಹೆಮ್ಮೆ-ಹಿಗ್ಗುಗಳು ಅರ್ಥಪೂರ್ಣವಾದುವೇ ಸರಿ ಕನ್ನಡಿಗನೊಬ್ಬ ವೈಯಕ್ತಿಕವಾಗಿ ಕೀರ್ತಿ-ಪ್ರತಿಷ್ಠೆ-ಸ್ಥಾನ-ಮಾನಗಳನ್ನು ಗಳಿಸಿದರೂ ಅದು ಕರ್ನಾಟಕ ಪ್ರಾಂತದ ಮಹತ್ವವನ್ನು ಹೆಚ್ಚಿಸಬಲ್ಲದು— ಎಂಬ ನಂಬಿಗೆಯವರಿಗೆ. ಅಸಮಾಧಾನ ಪ್ರಕಟಿಸುವವರ ಮಾತುಗಳು ಮಾತ್ರ ನಿರರ್ಥಕವಾದುವುಗಳೆಂಬುದನ್ನು ವಿಷಾದದೊಂದಿಗೆ ಹೇಳಬೇಕಾಗಿದೆ. ಮಂತ್ರಿಗಳಾಗಿದ್ದವರೆಲ್ಲ ಒಂದಿಲ್ಲೊಂದು ರೀತಿಯಿಂದ ಜನತೆಯ ಮುಂದಾಳುಗಳಾಗಿಯೆ ಇರುವರು. ಆಡಳಿತದ ಪರಿಭಾಷೆಯಿಂದ ಹೇಳಬೇಕಾದರೆ, ಪ್ರಜೆಗಳ ಪ್ರತಿನಿಧಿಗಳಾಗಿಯೂ ಇರುವರು. ಜನತೆ, ತನ್ನ ಮುಂದಾಳನ್ನೋ ಪ್ರತಿನಿಧಿಯನ್ನೋ ಒಪ್ಪಿಕೊಳ್ಳುವಾಗ, ಆತನ ಕಾರ್ಯಸಾಮರ್ಥ್ಯವನ್ನೂ ಪ್ರಾಮಾಣಿಕತೆಯನ್ನೂ ಮನವರಿಕೆ ಮಾಡಿಕೊಂಡೇ ಒಪ್ಪಿಕೊಂಡಿರುತ್ತದೆ. ಹೀಗಿದನ್ನು ಮನವರಿಕೆಮಾಡಿಕೊಳ್ಳದೆ ಒಪ್ಪಿಕೊಂಡಿದ್ದರೆ, ಜನತೆ ತನ್ನ ಅದೂರದರ್ಶಿತ್ವಕ್ಕಾಗಿ ಅಸಮಾಧಾನಪಡಬೇಕಲ್ಲದೆ, ಪದವಿ-ಪ್ರತಿಷ್ಠೆಗಳನ್ನು ಪಡೆದ ಮುಂದಾಳುಗಳನ್ನು ಸಂದೇಹದೃಷ್ಟಿಯಿಂದ ನೋಡುತ್ತ ಅಸಮಾಧಾನಪಡುತ್ತ ಕುಳಿತುಕೊಳ್ಳುವುದರಲ್ಲಿ ಸ್ವಲ್ಪವೂ ತಥ್ಯಾಂಶವಿರದು.

ಭಾರತದ ಯಾವ ಪ್ರದೇಶದಲ್ಲಿ ನೋಡಿದರೂ, ಮುಂದಾಳುಗಳಾಗಿ ಕಾರ್ಯಮಾಡುವವರಲ್ಲಿ ಅಧಿಕಾರಲೋಭ ಹೆಚ್ಚಿರುವುದೇನೋ ಸರಿಯೇ! ಅದು ಇಂದಿನ ಕಾಲಧರ್ಮ. ನಮ್ಮ ಜನ ಪದವಿ-ಪ್ರತಿಷ್ಠೆಗಳ ಮೋಹಕ್ಕೆ ಒಳಗಾಗಬಾರದೆಂದು ಅದರಂತೆ ನಡೆದುಕೊಂಡರೆ, ಆ ಪದವಿ ಪ್ರತಿಷ್ಠೆಗಳು ಬೇರೆಯವರಿಗೆ ದೊರೆತು, ಕರ್ನಾಟಕಕ್ಕೆ ಏಕೀಕರಣವೂ ಇಲ್ಲ, ವೈಯಕ್ತಿಕ ಪದವಿ-ಪ್ರತಿಷ್ಠೆಗಳೂ ಇಲ್ಲ— ಹೀಗಾಗುವುದು ಖಂಡಿತ. ನಮ್ಮ ಜನರಿಗೆ ಕೇಂದ್ರದಲ್ಲಿ ಮಂತ್ರಿಗಳಾಗಿರುವ ವ್ಯಕ್ತಿಗಳ ಪ್ರಾಮಾಣಿಕತೆಯ ಬಗೆಗೆ ನಂಬುಗೆಯಿದ್ದರೆ ಸಂಶಯ- ಅಸಮಾಧಾನಗಳನ್ನು ಪಡುವ ಕಾರಣವೇ ಇಲ್ಲ. ಅವರು ಎಲ್ಲಿಯೆ ಇದ್ದರೂ ಕರ್ನಾಟಕದ ಏಳ್ಗೆ–ಏಕೀಕರಣಗಳಿಗಾಗಿ ಹೋರಾಡಿಯೇ ಹೋರಾಡುತ್ತಾರೆಂಬುದನ್ನು ನಾವು ವಿಶ್ವಾಸದಿಂದ ನೋಡಬೇಕು. ನಂಬುಗೆಯಿಲ್ಲದೆ ಹೋದರೆ, ಅಂತಹರನ್ನು ನಮ್ಮ ಮುಂದಾಳುಗಳೆಂದು ಒಪ್ಪಿಕೊಂಡ ಅಜ್ಞಾನಕ್ಕೊಂದು ಒಳ್ಳೆಯ ಪಾಠ ದೊರೆಯಿತೆಂದು ಭಾವಿಸಿ, ಮುಂದಿನ ದಾರಿಯನ್ನಾದರೂ ಸರಿಯಾದ ಹೆಜ್ಜೆಯಿಟ್ಟು ನಡೆಯಲು ಸಿದ್ಧರಾಗಬೇಕು.

ಮಾನ್ಯ ದಾತಾರರಿಟ್ಟ ದೊಡ್ಡ ಮುಂದಡಿ !

ಬೆಳಗಾಂವಿಯವರಾದ ಶ್ರೀಮಾನ್ ದಾತಾರ ಬಳವಂತರಾಯರು ಚುನಾವಣೆಯ ಕಣಕ್ಕಿಳಿದುದು ಇದೇ ಮೊದಲನೆಯ ಸಲ. ಪಾರ್ಲಮೆಂಟಿನ ಸದಸ್ಯರಾಗಲು ಹುರಿಯಾಳಾಗಿ ನಿಂತರು ಚುನಾವಣೆಗೆ. ಆಶ್ಚರ್ಯವೆನಿಸುವಂತಹ ಪ್ರಚಂಡ ಬಹುಮತದಿಂದ ಆಯ್ಕೆ ಹೊಂದಿದರು. ಪಾರ್ಲಮೆಂಟು ಪ್ರಾರಂಭವಾಗುವುದೇ ತಡ; ದಿಲ್ಲಿಯಲ್ಲಿ ಕರ್ನಾಟಕ ಏಕೀಕರಣದ ಆಂದೋಲನಕ್ಕೆ ಧುರೀಣರಾಗಿ, ನೆಹರು ಅವರನ್ನು ಕಂಡರು. ಬುದ್ಧಿವಂತ ವಕೀಲರಾದ ಶ್ರೀಮಾನ್ ದಾತಾರರಂತಹರು, ಸದ್ಯದ ಸರಕಾರದಲ್ಲಿ ಪ್ರತ್ಯಕ್ಷವಾದ ಹೊಣೆಹೊತ್ತು ಕೆಲಸಮಾಡಬೇಕೆಂಬ ಆವಶ್ಯಕತೆ, ಮುಖ್ಯಮಂತ್ರಿ ನೆಹರು ಅವರಿಗೆ ಎನಿಸಿರಬಹುದು. ಅಂತೂ ಒಂದೆ ಹಾರಿಕೆಗೆ ಮಾನ್ಯ ದಾತಾರರು ಉಪಮಂತ್ರಿಪೀಠದ ಮೇಲೆಯೆ ಕುಳಿತುಬಿಟ್ಟರು. ವ್ಯಕ್ತಿಗೆ ಯೋಗ್ಯತೆಯೊಂದಿಗೆ ಅದೃಷ್ಟದ ಬಲವೂ ಇರಬೇಕಾಗುವುದು ಅದು ಇದೆಯೆಂತಲೇ ಮಾನ್ಯ ದಾತಾರರು ಹಿಡಿದ ಕಾರ್ಯದಲ್ಲಿ ಗೆಲವನ್ನೇ ಗಳಿಸುತ್ತಿರುವರು. ಈಗ ದಿಕ್ಕಿಗೆ ಹೋದಮೇಲೂ ಅವರ ಕಾರ್ಯಕ್ಕೆ ಗೆಲವು ದೊರೆತಿದೆ. ಅವರ ಕರ್ತೃತ್ವಶಕ್ತಿ– ಸುದೈವಗಳು, ಅವರಿಗೆ ಇದಕ್ಕಿಂತ ಹೆಚ್ಚಿನ ಸ್ಥಾನಮಾನಗಳನ್ನೂ ಒದವಿಸಿಕೊಡಬಹುದು; ಕರ್ನಾಟಕದ ಕೀರ್ತಿ-ಪ್ರತಿಷ್ಠೆ ಹೆಚ್ಚುವುದಕ್ಕೆ ಅನುಕೂಲತೆಯನ್ನು ಕಲ್ಪಿಸಿಕೊಡಬಹುದು. ಮಾನ್ಯ ದಾತಾರರಿಗೆ ನಮ್ಮ ಅಭಿನಂದನೆಗಳು! ಈಗ ಇವರು ಕರ್ನಾಟಕ ಪ್ರದೇಶದಲ್ಲಿಯೇ ಪ್ರವಾಸ ನಡೆಯಿಸಿದ್ದು, ಉತ್ತರ ಕರ್ನಾಟಕದ ಎಲ್ಲ ಕಡೆಗಳಲ್ಲಿಯ ಜನರಿಂದಲೂ ಇವರಿಗೆ ಪ್ರೀತಿ-ವಿಶ್ವಾಸದ ಮನ್ನಣೆ ಸಲ್ಲುತ್ತಿರುವುದು ಸಂತೋಷದ ವಿಷಯ. ಪರಸ್ಪರರನ್ನು ಪರಸ್ಪರರು ಸಂಭಾವಿಸುವುದರಿಂದ ಇಬ್ಬರಿಗೂ ಶ್ರೇಯಸ್ಸು ದೊರೆಯುವುದು.

ಜಯಂತಿ

— ಶರತ್‌ಪ್ರಕಾಶನ ಮಂದಿರದ ಮೂರನೆಯ ಪ್ರಕಟನೆ —

ಮಂಗಳ ಮದುವೆ

(ಸಾಮಾಜಿಕ ಕಾದಂಬರಿ)

卐

ಬರೆದವರು: 'ಆನಂದಕಂದ'

ಕ್ರೌನ್ ಅಷ್ಟಪತ್ರದ ೩೦೦ ಪುಟಗಳು **ಬೆಲೆ ೩ ರೂಪಾಯಿ ೮ ಆಣೆ.**

೧೯೩೦ ನೆಯ ಇಸ್ವಿಯ ಸತ್ಯಾಗ್ರಹದ ಆಂದೋಲನವನ್ನು ಹಿನ್ನೆಲೆಯಾಗಿಟ್ಟುಕೊಂಡು, ಉತ್ತರ ಕರ್ನಾಟಕದ ಪಟ್ಟಣ ಮತ್ತು ಹಳ್ಳಿಗಳ ಸಾಮಾಜಿಕಜೀವನವನ್ನು ವಾಸ್ತವಸುಂದರವಾಗಿ ಚಿತ್ರಿಸಿದ ಕಾದಂಬರಿಯಿದು. ಹಿನ್ನೆಲೆಯ ಚಿತ್ರಣ, ಕಥಾವಸ್ತು, ಪಾತ್ರಸೃಷ್ಟಿ, ಭಾವಪರಿಪುಷ್ಟಿ, ಭಾಷೆಯರೀತಿ— ಈ ಎಲ್ಲ ದೃಷ್ಟಿಯಿಂದಲೂ ಹೊಸತು-ಹೊಸತೆನಿಸುವಂತಹ ರಮ್ಯ ಕಾದಂಬರಿ.

ಆನಂದಕಂದರ

'ಸುದರ್ಶನ' ಸಾಮಾಜಿಕ ಕಾದಂಬರಿಯನ್ನು ಓದಿದ್ದೀರಲ್ಲವೆ ?

'ರಾಜಯೋಗಿ'
'ಅಶಾಂತಿಪರ್ವ' } ಈ ಐತಿಹಾಸಿಕ ಕಾದಂಬರಿಗಳನ್ನು ಓದಿದ್ದೀರಲ್ಲವೇ ?

'**ಮಂಗಳ ಮದುವೆ**'ಯನ್ನೂ ತರಿಸಿ ಒಂದು ಸಲ ಓದಿನೋಡಿರಿ. ಓದಲು ಕೈಯಲ್ಲಿ ಹಿಡಿದವರು ಮುನ್ನೂರು ಪುಟಗಳನ್ನು ಮುಗಿಸುವವರೆಗೂ ಕೆಳಗಿಡಲಾರಿರಿ. ಕಾದಂಬರಿಯಲ್ಲಿಯ ಒಂದೊಂದು ಪರಿಚ್ಛೇದವೂ ಒಂದೊಂದು ರಸಸೃಷ್ಟಿಯ ಚಿತ್ರವನ್ನೇ ಮನದ ಮುಂದೆ ನಿಲ್ಲಿಸುವುದು.

ಅಚ್ಚಾಗಿ ಸಿದ್ಧವಾಗಿದೆ. ಬೇಕಾದವರು ಕೂಡಲೆ ಬರೆದುಕೊಳ್ಳಬೇಕು.

ಶರತ್ ಪ್ರಕಾಶನ ಮಂದಿರ, ವಿಜಯರೋಡ್, ಧಾರವಾಡ

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು ! ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರೈಸಲಾಗುವುದು.

'ಆನಂದಕಂದ' ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವುವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಈಗ ತಾನೆ ಪ್ರಕಟಿಸಿದ 'ಆನಂದಕಂದರ' **ತರಂಗರೂಪಕ ಸಂಕಲನ :**

ಬೆಳವಡಿ ಮಲ್ಲಮ್ಮ

ಕ್ರಾ. ಅ. ೧೧೬ ಪುಟಗಳು. ಹೊಳಪಿನ ಕಾಗದ. ಬೆಲೆ ೧-೮-೦.

ಹೊಸತಾಗಿಯೆ ಹೊರಟ ಕವನ ಸಂಕಲನ

ಕಾರಹುಣ್ಣಿವೆ

ಇದರಲ್ಲಿ 'ಆನಂದಕಂದ'ರ ರಸವತ್ತಾದ ೫೦ ಕವನಗಳು ಸಂಕಲನಗೊಂಡಿವೆ. ವಿವಿಧ ಭಾವಗಳನ್ನು ವಿಸ್ತರಿಸಿದ ಸುಂದರವಾದ ಭಾವಗೀತಗಳು ! ಸಂಗೀತಗಾರರ ಕಾವ್ಯಗಾಯನ ಕಾರ್ಯಕ್ರಮಕ್ಕೆ ತುಂಬ ಸಹಕಾರಿಯಾದುವು !

ಕ್ರಾ. ಅ. ೧೨೮ ಪುಟಗಳು. ಅಂದವಾದ ಅಚ್ಚು. ಬೆಲೆ ೨-೦-೦.

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ಬಡತನದ ಬಾಳು	**ಕರ್ನಾಟಕ ಜನಜೀವನ**
ಸುದರ್ಶನ	ನಮ್ಮ ಬದುಕು	ಜೀವನ ಚರಿತ್ರ
ಕವನ ಸಂಕಲನ	ಸಂಸಾರ ಚಿತ್ರ	ಶ್ರೀ. ಬಸವಣ್ಣನವರು
ವಿರಹಿಣಿ	ಮಾತನಾಡುವ ಕಲ್ಲು	
ಒಡನಾಡಿ		

ಅಲ್ಲದೆ ಶ್ರೀ. ಹುದ್ದಾರರ '**ಚಿತ್ರಕಲಾಪ್ರವೇಶ**'ವೂ ಚಾಡಿಯ ಚಾಣಕ್ಯನ '**ಜಾತೀಯಸಮಸ್ಯೆ**' '**ಕರ್ನಾಟಕ ಏಕೀಕರಣ**', ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೫ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೇ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ : ಎಸ್. ಡಿ. ಧರಮುಟ್ಟಿ, ಶ. ಪ್ರ. ಮಂದಿರ, ಧಾರವಾಡ.

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar - 4166 5 .

ಅಕ್ಟೋಬರ್
೧೯೫೨

ಸಂಪುಟ
೧೫

ಸಂಚಿಕೆ
೫

ಈ ಸಂಚಿಕೆಯಲ್ಲಿ:

ರತ್ನದೀಪ (ಕವನ) ಶ್ರೀ. ಎಸ್. ಎಸ್. ಬಸುಪಟ್ಟದ ಎಂ.ಎ. ಬೆಳಗಾಂವಿ ೧೬೧
ತುಂಬಿದ ತಟ್ಟೆ, ಬರಿಯ ಹೊಟ್ಟೆ (ಸಂಪಾದಕೀಯ) ಸಂಪಾದಕರು ೧೬೨
ನಾಡನಡೆ (ಪ್ರಾಸಂಗಿಕ ಟಿಪ್ಪಣಿ) ‘ ಕಾಲಭೈರವ ’ ೧೬೩
ಪಾಪದ ಪಿಂಡ (ಸಣ್ಣ ಕತೆ) ಶ್ರೀ. ಎಸ್. ಎಸ್. ಚುಳಕಿ ಬಿ ಎ. (ಆನರ್ಸ್) ವಿಜಾಪುರ ೧೬೫
ಕೆಲವು ಹಬ್ಬಗಳು (ಸಂಶೋಧಕ ವಿಚಾರ) ಶ್ರೀ. ವಾಂ. ಭೀ. ದೇಸಾಯಿ ಎಂ.ಎ. ನೀಲಗಿರಿ ೧೭೧
ಜಾತ್ರೆಗೆ ಕರೆ (ಒಂದು ನಲ್ವಾಡು) ‘ ಆನಂದಕಂದ ’ ೧೭೫
ಕತೆಗಾರ (ಲಲಿತಪ್ರಬಂಧ) ಶ್ರೀ ಎನ್.ಎಂ. ಕುಲಕರ್ಣಿ, ಮುಂಬಯಿ ೧೭೬
ಕಲಂಕಿತ ಸೂರ್ಯ (ವಿಜ್ಞಾನ ವಿಚಾರ) ಶ್ರೀ ಎನ್. ಜಿ. ಕಟ್ಟಿ ಬಿ.ಎಸ್‌ಸಿ. (ಟೆಕ್.) ಕೊಲ್ಹಾಪುರ ೧೮೦
ಲಹರಿ ಲಹರಿ.... (ಕವನ) ಶ್ರೀ. ಡಿ. ಆರ್. ಕುಲಕರ್ಣಿ, ಮುಂಬಯಿ ೧೮೩
ಬದುಕಿದ ಜೀವದ ಬೆಲೆ (ಸತ್ಯಕಥೆ) ಡಾ. ಕಮಲಾಪುರ ಕಾಂತರಾಯರು ಎಂ ಬಿ. ಬಿ ಎಸ್. ಧಾರವಾಡ ೧೮೪
ವಿಜಾಪುರ ವಿಭಾಗದ ಬಸ್ಸುಸಾರಿಗೆ (ಪರಿಚಯ) ‘ ವಿಹಂಗಮ ’ ೧೮೬
ಹಳೆಯ ಹೆಗ್ಗಳಿಕೆ (ನಾಟ್ಯಛಟಾ) ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ ೧೮೯
ಮರಣೋತ್ತರ ಕರ (ಆರ್ಥಿಕ ವಿಚಾರ) ಶ್ರೀ. ವಾಂ. ಭೀ. ಜೋರಾಪುರ, ಜಬಲ್‌ಪುರ ೧೯೧
ಪುಸ್ತಕ ವಿಮರ್ಶೆ (ಎರಡು ಪುಸ್ತಕಗಳು) ಶ್ರೀ. ಬಿ. ಪಿ. ಎಸ್. ರಾವ್ ಮತ್ತು ‘ ಬಿ ಎಸ್. ಕೆ. ’ ೧೯೪
ಸಾಹಿತ್ಯವಿಹಾರ (‘ಬೆಂದಹೃದಯ’ದ ವಿಮರ್ಶೆ) ಶ್ರೀ. ಕೆ. ಎಸ್. ಶರ್ಮಾ ಮತ್ತು ಶ್ರೀಮತಿ ಪದ್ಮಾ ೧೯೬
ಸಾದರಸ್ವೀಕಾರ ೨೦೦

JAYANTI

ಬೆಲೆ ೮ ಆ

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು ! ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ' ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವುವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಈಗ ತಾನೆ ಪ್ರಕಟಿಸಿದ 'ಆನಂದಕಂದರ' **ತರಂಗರೂಪಕ ಸಂಕಲನ:**

ಬೆಳವಡಿ ಮಲ್ಲಮ್ಮ

ಕ್ರಾ. ಅ. ೧೧೬ ಪುಟಗಳು. ಹೊಳಪಿನ ಕಾಗದ. ಬೆಲೆ ೧-೮-೦.

ಹೊಸತಾಗಿಯೆ ಹೊರಟ ಕವನ ಸಂಕಲನ

ಕಾರಹುಣ್ಣಿವೆ

ಇದರಲ್ಲಿ 'ಆನಂದಕಂದ'**ರ** ರಸವತ್ತಾದ ೩೨ ಕವನಗಳು ಸಂಕಲನಗೊಂಡಿವೆ. ವಿವಿಧ ಭಾವಗಳನ್ನು ವಿಸ್ತರಿಸಿದ ಸುಂದರವಾದ ಭಾವಗೀತಗಳು ! ಸಂಗೀತಗಾರರ ಕಾವ್ಯಗಾಯನ ಕಾರ್ಯಕ್ರಮಕ್ಕೆ ತುಂಬ ಸಹಕಾರಿಯಾದುವು !

ಕ್ರಾ. ಅ. ೧೨೮ ಪುಟಗಳು. ಅಂದವಾದ ಅಚ್ಚು. ಬೆಲೆ ೨-೦-೦.

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ಬಡತನದ ಬಾಳು	**ಕರ್ನಾಟಕ ಜನಜೀವನ**
ಸುದರ್ಶನ	ನಮ್ಮ ಬದುಕು	ಜೀವನ ಚರಿತ್ರ
ಕವನ ಸಂಕಲನ	ಸಂಸಾರ ಚಿತ್ರ	ಶ್ರೀ. **ಬಸವಣ್ಣನವರು**
ವಿರಹಿಣಿ	ಮಾತನಾಡುವ ಕಲ್ಲು	
ಒಡನಾಡಿ		

ಅಲ್ಲದೆ ಶ್ರೀ. ಹುದ್ದಾರರ '**ಚಿತ್ರಕಲಾಪ್ರವೇಶ**'ವೂ ಚಾಡಿಯ ಚಾಣಕ್ಯನ '**ಜಾತೀಯಸಮಸ್ಯೆ**' '**ಕರ್ನಾಟಕ ಏಕೀಕರಣ**', ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೫ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೇ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ : ಎಸ್. ಡಿ. ಧರಮಟ್ಟಿ, ಶ. ಪ್ರ. ಮಂದಿರ, ಧಾರವಾಡ.

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar - 4160 5

ಅಕ್ಟೋಬರ್
೧೯೫೭

ಸಂಪುಟ
೧೫

ಸಂಚಿಕೆ
೫

ಈ ಸಂಚಿಕೆಯಲ್ಲಿ:

ರತ್ನದೀಪ (ಕವನ)	ಶ್ರೀ. ಎಸ್. ಎಸ್. ಬಸುಪಟ್ಟದ ಎಂ.ಎ. ಬೆಳಗಾಂವಿ	೧೬೧
ತುಂಬಿದ ತಟ್ಟೆ, ಬರಿಯ ಹೊಟ್ಟೆ (ಸಂಪಾದಕೀಯ)	ಸಂಪಾದಕರು	೧೬೨
ನಾಡನಡೆ (ಪ್ರಾಸಂಗಿಕ ಟಿಪ್ಪಣಿ)	‘ ಕಾಲಭೈರವ ’	೧೬೩
ಪಾಪದ ಪಿಂಡ (ಸಣ್ಣ ಕತೆ)	ಶ್ರೀ. ಎಸ್. ಎಸ್. ಚುಳಕಿ ಬಿ ಎ. (ಆನರ್ಸ್) ವಿಜಾಪುರ	೧೬೫
ಕೆಲವು ಹಬ್ಬಗಳು (ಸಂಶೋಧಕ ವಿಚಾರ)	ಶ್ರೀ. ಪಾಂ. ಭೀ. ದೇಸಾಯಿ ಎಂ.ಎ. ನೀಲಗಿರಿ	೧೭೧
ಜಾತ್ರೆಗೆ ಕರೆ (ಒಂದು ನಲ್ವಾಡು)	‘ ಆನಂದಕಂದ ’	೧೭೫
ಕತೆಗಾರ (ಲಲಿತಪ್ರಬಂಧ)	ಶ್ರೀ ಎನ್.ಎಂ. ಕುಲಕರ್ಣಿ, ಮುಂಬಯಿ	೧೭೬
ಕಲಂಕಿತ ಸೂರ್ಯ (ವಿಜ್ಞಾನ ವಿಚಾರ)	ಶ್ರೀ ಎನ್. ಜಿ. ಕಟ್ಟಿ ಬಿ.ಎಸ್ಸಿ. (ಟೆಕ್.) ಕೊಲ್ಹಾಪುರ	೧೮೦
ಲಹರಿ ಲಹರಿ... (ಕವನ)	ಶ್ರೀ. ಡಿ ಆರ್. ಕುಲಕರ್ಣಿ, ಮುಂಬಯಿ	೧೮೩
ಬದುಕಿದ ಜೀವದ ಬೆಲೆ (ಸತ್ಯಕಥೆ)	ಡಾ. ಕಮಲಾಪುರ ಕಾಂತರಾಯರು ಎಂ ಬಿ. ಬಿ ಎಸ್. ಧಾರವಾಡ	೧೮೪
ವಿಜಾಪುರ ವಿಭಾಗದ ಬಸ್ಸುಸಾರಿಗೆ (ಪರಿಚಯ)	‘ ವಿಹಂಗಮ ’	೧೮೬
ಹಳೆಯ ಹೆಗ್ಗಳಿಕೆ (ನಾಟ್ಯಛಟಾ)	ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ	೧೮೯
ಮರಣೋತ್ತರ ಕರ (ಆರ್ಥಿಕ ವಿಚಾರ)	ಶ್ರೀ. ಪಾಂ. ಭೀ. ಜೋರಾಪುರ, ಜಬಲ್‌ಪುರ	೧೯೧
ಪುಸ್ತಕ ವಿಮರ್ಶೆ (ಎರಡು ಪುಸ್ತಕಗಳು)	ಶ್ರೀ. ಬಿ. ಪಿ. ಎಸ್. ರಾವ್ ಮತ್ತು ‘ ಬಿ ಎಸ್. ಕೆ. ’	೧೯೪
ಸಾಹಿತ್ಯವಿಹಾರ (‘ಬೆಂದಹೃದಯ’ದ ವಿಮರ್ಶೆ)	ಶ್ರೀ. ಕೆ. ಎಸ್. ಶರ್ಮಾ ಮತ್ತು ಶ್ರೀಮತಿ ಪದ್ಮಾ	೧೯೬
ಸಾದರಸ್ವೀಕಾರ	....	೨೦೦

JAYANTI

ಬೆಲೆ ೮ ಆಣೆ

— ಶರತ್‌ಪ್ರಕಾಶನ ಮಂದಿರದ ಮೂರನೆಯ ಪ್ರಕಟನೆ —

ಮಗಳ ಮದುವೆ

(ಸಾಮಾಜಿಕ ಕಾದಂಬರಿ)

卐

ಬರೆದವರು : ' ಆನಂದಕಂದ '

ಕ್ರಾನ್ ಅಷ್ಟಪತ್ರದ ೩೫೦ ಪುಟಗಳು

ಬೆಲೆ ಸಾದಾ ಪ್ರತಿಗೆ ೪-೦-೦
ಉತ್ತಮ ಪ್ರತಿಗೆ ೪-೧೨-೦

೧೯೩೦ ನೆಯ ಇಸ್ವಿಯ ಸತ್ಯಾಗ್ರಹದ ಆಂದೋಲನವನ್ನು ಹಿನ್ನೆಲೆಯಾಗಿಟ್ಟುಕೊಂಡು, ಉತ್ತರ ಕರ್ಣಾಟಕದ ಪಟ್ಟಣ ಮತ್ತು ಹಳ್ಳಿಗಳ ಸಾಮಾಜಿಕಜೀವನವನ್ನು ವಾಸ್ತವಸುಂದರವಾಗಿ ಚಿತ್ರಿಸಿದ ಕಾದಂಬರಿಯಿದು. ಹಿನ್ನೆಲೆಯ ಚಿತ್ರಣ, ಕಥಾವಸ್ತು, ಪಾತ್ರಸೃಷ್ಟಿ, ಭಾವಪರಿಪುಷ್ಟಿ, ಭಾಷೆಯರೀತಿ— ಈ ಎಲ್ಲ ದೃಷ್ಟಿಯಿಂದಲೂ ಹೊಸತು-ಹೊಸತೆನಿಸ ವಂತಹ ರಮ್ಯ ಕಾದಂಬರಿ.

ಪುಟಸಂಖ್ಯೆ ಹೆಚ್ಚಾದುದರಿಂದ ಬೆಲೆಯನ್ನೂ ಹೆಚ್ಚಿಸಬೇಕಾಯಿತು.

ಆನಂದಕಂದರ

' ಸುದರ್ಶನ ' ಸಾಮಾಜಿಕ ಕಾದಂಬರಿಯನ್ನು ಓದಿದ್ದೀರಲ್ಲವೆ ?

' ರಾಜಯೋಗಿ '
' ಅಶಾಂತಿಪರ್ವ ' } ಈ ಐತಿಹಾಸಿಕ ಕಾದಂಬರಿಗಳನ್ನು ಓದಿದ್ದೀರಲ್ಲವೇ ?

' ಮಗಳ ಮದುವೆ 'ಯನ್ನೂ ತರಿಸಿ ಒಂದು ಸಲ ಓದಿನೋಡಿರಿ. ಓದಲು ಕೈಯಲ್ಲಿ ಹಿಡಿದವರ ಮುನ್ನೂರು ಪುಟಗಳನ್ನು ಮುಗಿಸುವವರೆಗೂ ಕೆಳಗಿಡಲಾರರು. ಕಾದಂಬರಿಯಲ್ಲಿಯ ಒಂದೊಂದು ಪರಿಚ್ಛೇದವೂ ಒಂದೊಂದು ರಸಸೃಷ್ಟಿಯ ಚಿತ್ರವನ್ನೇ ಮನದ ಮುಂದೆ ನಿಲ್ಲಿಸುವುದು.

ಅಚ್ಚಾಗಿ ಸಿದ್ಧವಾಗಿದೆ. ಬೇಕಾದವರು ಕೂಡಲೆ ಬರೆದುಕೊಳ್ಳಬೇಕು.

ಶರತ್ ಪ್ರಕಾಶನ ಮಂದಿರ, ವಿಜಯರೋಡ್, ಧಾರವಾಡ

ಜಯಂತಿ

ಸಂ. ೧೫. ಸಂಚಿಕೆ. ೫

ಕುಟುಂಬಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು
ಶ್ರೀ. ಡಿ. ಶರಣ್‌ಕುಮಾರ

ಪ್ರಕಾಶಕರು :
ಶ್ರೀ. ಎಮ್. ವಿ. ಮೆಳ್ಳಿಗಟ್ಟಿ.

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ರತ್ನದೀಪ

ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ. ಬೆಳಗಾಂವಿ

೧

ಬಾಳ ನಡೆಸೆ ಗೂಡಾರ ಹೊಡೆದು ನಾವಿಲ್ಲಿ ತಂಗುತಿರಲು,
ಕಾಳರೂಪದಲಿ ಕಾಳರಾತ್ರಿಯದು ಸುತ್ತು ಕವಿದು ಬರಲು—
ಧೈರ್ಯ-ಸ್ಥೈರ್ಯಗಳು ಮುಂದೆ ಬರದೆ ಮನದಲ್ಲೆ ಇಂಗುತಿರಲು,
ಜೀವಶಕ್ತಿಯನ್ನೀಯುತಿರುವೆಯೋ ಅವಕೆ ಮುಂದೆ ಬರಲು!

೨

ಜಗದ ಜನತೆಯನು ದಂಗುಗೊಳಿಸುತಿರೆ ವಿವಿಧ ತಾಪ-ಕೋಪ
ವಿಶ್ವಕೊಂದು ಚಣ ಬೆಳಕನಿತ್ತು ನೀ ತೋರ್ವೆ ವಿಶ್ವರೂಪ;
ತೋರಿ ವಿಶ್ವದಲಿ ವಿಶ್ವವ್ಯಾಪಿಯ—ಕೃಪೆಯ ವಿವಿಧರೂಪ,
ತಾಪ-ಕೋಪಗಳ ಕಳೆದುಬಿಡುವೆಯೋ ಬಾಳ ರತ್ನದೀಪ!

೩

ತಾಮಸದ ತಮವು ಸುತ್ತೆಲ್ಲ ತುಂಬಿ ನಿಂದಿಹುದು ಬಾಳಿನಲ್ಲಿ,
ರಾಜಸದ ಹಕ್ಕಿ ತಾಮಸದಿ ಸಿಕ್ಕಿ ತೊಳಲುವುದು ಗೋಳಿನಲ್ಲಿ;
ಕೈಹಿಡಿದು ನಡೆಸು ನೀನೆಮ್ಮ ಜೀವನದ ಏಳು-ಬೀಳಿನಲ್ಲಿ—
ಸಾತ್ತ್ವಿಕದ ಶುಭ್ರ ಹೊಂಬೆಳಕ ಹರಿಸಿ ಈ ಜಗದ ಕೇಳಿಯಲ್ಲಿ.

೪

ಹೆಪ್ಪುಗಟ್ಟಿದಾ ಕಪ್ಪುಮೋಡಗಳು ಮುತ್ತಿಬಂದ ಚಣಕೆ,
ಮೋಡದಂಚಿನಾ ಮಿಂಚು ಮಿಂಚಿ ಫಳಿಲೆಂದು ಇಳೆಯ ಕಣಕೆ,
ಕಣ್-ಮನವ ಕೊಟ್ಟು ಕೈಹಿಡಿದು ನಡಸೆ ಮಾನವನ ಕಣ್ಣಿಣಕೆ
ಬೆಳಕುದುಂಬಿ ತಾನೆನಯುತಿರಲು ಮತ್ತೇನು ಬೇಕು ಮನಕೆ?

೫

ಬೀಸೆ ಗಾಳಿ ಭೀಷಣತೆ ತಾಳಿ ಸುತ್ತೆಲ್ಲ ಮೇಲು-ಕೆಳಗು
ನಂದದಂತೆ ಓ ರತ್ನದೀಪವೇ, ಎಂದಿನಂತೆ ತೊಳಗು;
ಮುತ್ತಿ ಬರುವ ಕತ್ತಲೆಯ ಕಳೆಯುತಲಿ ಮನದ ಮನೆಯ ಬೆಳಗು—
ಬೆಳಕೆ ಬೆಳಕು ಮುಡುಗಟ್ಟಿ ನಿಂತಿರಲಿ ಮನದ ಹೊರಗು-ಒಳಗು!

೬

ಜ್ಞಾನತೈಲ ಉಣ್ಣುತಲಿ ಬತ್ತಿಯುರಿ ಬೆಳಕ ಬೀರಲಿನ್ನು
ಬೆಳಕು ಬಂದು ಈ ಬಾಳ ಬಯಲಿನಲಿ ಹಾದಿ ತೋರಲಿನ್ನು;
ಅನುಭವವು ಮಾಗಿ ಅನುಭಾವವಾಗಿ ಬಾಳಾಗಿ ನಿಲ್ಲೆ ಹೊನ್ನು—
ಹೊನ್ನ ಬಾಳ್ಗೆ ಹೊಂಬೆಳಕ ಬೀರೆ, ಜೀವನಕೆ ಅದುವೆ ಚಿನ್ನು.



ತುಂಬಿದ ತಟ್ಟೆ, ಬರಿಯ ಹೊಟ್ಟೆ !
ಕರ್ನಾಟಕದ ಒಕ್ಕಲಿಗರ ದುರವಸ್ಥೆ !

ಕರ್ನಾಟಕದಲ್ಲಿ ಆಹಾರದ ಕೊರತೆ ಎಂದೂ ಇರಲಿಲ್ಲ; ಆದರೆ ಇಂದು ಆಹಾರವಿಲ್ಲದೆ ಬಳಲುವ ಕನ್ನಡಿಗರ ಸಂಖ್ಯೆ ಹೆಚ್ಚುತ್ತಿರುವುದು ನಮ್ಮ ದುರ್ದೈವದ ಸಂಗತಿಯಾಗಿದೆ.

ಕರ್ನಾಟಕವು ಯಾವಾಗಲೂ ಬೇಸಾಯದ ಮೇಲೆ ಅವಲಂಬಿಸಿಕೊಂಡಿರುವ ದೇಶ. ಕನ್ನಡಿಗರಲ್ಲಿ ಬಹುಜನರು ಬೇಸಾಯವನ್ನು ಕೈಕೊಂಡು ಉಪಜೀವಿಸುವವರಾದುದರಿಂದಲೇ, ನಗರದ ಉದ್ಯಮಗಳಂಥ ವ್ಯಾಪಾರ-ಕೈಗಾರಿಕೆಗಳೆಲ್ಲ ಕನ್ನಡಿಗರಲ್ಲದವರ ಕೈಯಲ್ಲಿ ಸಿಕ್ಕಿಕೊಂಡು, ಕರ್ನಾಟಕಕ್ಕಾದ ಹಾನಿಯು ಅಷ್ಟಿಷ್ಟಲ್ಲ. ವಿಜ್ಞಾನದ ಫಲವಾಗಿ ಇಂದು ಬಂದಿರುವ— ಜೀವನಾವಶ್ಯಕವಾದ— ಪ್ರತಿಯೊಂದು ಉದ್ಯಮವೂ, ಕರ್ನಾಟಕದಲ್ಲಿ ಹೆಚ್ಚಾಗಿ ಕನ್ನಡಿಗರಲ್ಲದವರ ಆಧಿಪತ್ಯದಲ್ಲಿಯೇ ನಡೆದಿದೆ. ಎಂತಲೇ ಪ್ರತಿಯೊಂದು ಕನ್ನಡನಗರದಲ್ಲಿಯೂ ಕನ್ನಡಿಗರಲ್ಲದ ಬಂಡವಾಳಗಾರರೇ ಮುಂಗಾಲು ಮೇಲೆ ಮಾಡಿಕೊಂಡು ವ್ಯವಹರಿಸುತ್ತಲಿದ್ದು, ಎಲ್ಲ ಲಾಭವನ್ನೂ ಅವರೇ ಹೊಡೆಯುತ್ತಲಿದ್ದಾರೆ. ಇಂತಹ ಬಂಡವಾಳಗಾರರೇ ನಮ್ಮ ನಾಗರಿಕ ಸಮಾಜದ ಮುಂದಾಳುಗಳಾಗಿ ಮೆರೆಯುತ್ತಲಿರುವುದರಿಂದಲೇ, ಕರ್ನಾಟಕದ ಏಕೀಕರಣದ ಆವಶ್ಯಕ ಕಾರ್ಯವೂ ಮುಂದೆ ಮುಂದೆ ಬೀಳುತ್ತ ನಡೆದಿದೆ. ವ್ಯಾಪಾರೋದ್ಯಮಗಳ ಲಾಭ, ಕನ್ನಡಿಗರ ಹೊಟ್ಟೆಯನ್ನು ತುಂಬುವಂತಹ ಪರಿಸ್ಥಿತಿಯು ಇಲ್ಲವೇ ಇಲ್ಲ.

ಒಕ್ಕಲುತನದಿಂದಲಾದರೂ ಹೊಟ್ಟೆತುಂಬ ಉಂಡುಕೊಂಡು ಇದ್ದುದರಲ್ಲಿಯೇ ಸಮಾಧಾನ ಪಟ್ಟುಕೊಂಡು ಬದುಕಬೇಕೆಂದರೆ, ಕನ್ನಡಿಗರಿಗೆ ಅದಕ್ಕೂ ಮಾರ್ಗವಿಲ್ಲದಂತಾಗಿದೆ. ಕರ್ನಾಟಕಕ್ಕೆ ಸುಲಭವಾಗಿ ಬೆಳೆಯು ಬರುವಂತಹ ಕಸುವಿನ ಭೂಮಿಯಿದೆ; ಮೈಮುರಿದು ದುಡಿದು ಮಣ್ಣಿಂದ ಅನ್ನ ತೆಗೆಯುವೆವೆಂದು ಹಾರಯಿಸಿ ದುಡಿಯುವ ಜನಶಕ್ತಿಯೂ ಇದೆ. ಆದರೆ 'ದೇವರು' ಕೊಡುವ ಮಳೆಯ ಮೇಲೆಯೇ ಅವಲಂಬಿಸಿಕೊಂಡು ಇರಬೇಕಾದುದರಿಂದ, ಕನ್ನಡ ನಾಡಿನ ಒಕ್ಕಲಿಗರು, ಹನ್ನೆರಡು ತಿಂಗಳೂ ಆಕಾಶದ ಕಡೆಗೆ ಆಸೆಯಿಂದ ನೋಡುತ್ತಲೇ ಕುಳಿತುಕೊಳ್ಳಬೇಕಾಗಿದೆ. ಸಕಾಲದಲ್ಲಿ ಮಳೆಯಾಗುತ್ತಲಿದ್ದರೆ, ಕನ್ನಡಿಗರಿಗೆ ಅನ್ನದ ಕೊರತೆ ಎಂದೂ ಆಗಲಾರದು. ಜೀವನೋಪಯುಕ್ತವಾದ ಪ್ರತಿಯೊಂದು ವಸ್ತುವೂ ಕನ್ನಡನಾಡಿನ ಭೂಮಿಯಲ್ಲಿ ಸಮೃದ್ಧವಾಗಿ ಬೆಳೆಯಬಹುದಾಗಿದೆ. ಆದರೆ ಬರೀ ಕಣ್ಣುಮುಚ್ಚಾಲೆಯಾಡಿಸಿ ಕಣ್ಮರೆಯಾಗುತ್ತಿರುವ ಮಳೆರಾಯನು, ಪ್ರತಿವರ್ಷವೂ ಕನ್ನಡಿಗರನ್ನು ನಿರಾಶೆಗೊಳಿಸುತ್ತಲಿದ್ದಾನೆ. ಒಮ್ಮೊಮ್ಮೆ ಕಾಲವಲ್ಲದ ಕಾಲದಲ್ಲಿ ಮಳೆ ಸುರಿದೇ ಸುರಿಯುವುದು; ಬೇಕಾದ ಕಾಲದಲ್ಲಿ ಒಂದು ಹನಿಯನ್ನೂ ಸುರಿಸದೆ, ಕನ್ನಡಿಗರನ್ನು ಬಾಯಿ ಮನೆಯುವರನ್ನಾಗಿ ಮಾಡುವುದು. ಇತ್ತೀಚಿಗಿನ ೨೦–೨೫ ವರ್ಷಗಳಲ್ಲಿ ಇದೇ ದುರವಸ್ಥೆ ನಡೆದಿದೆ. ಇದಕ್ಕೆ ನಿವಾರಣೆ ಇಲ್ಲವೇನು?

ಇಲ್ಲವೇಕೆ ? ನಿವಾರಣೆಯ ಉಪಾಯಗಳು ಬೇಕಾದಷ್ಟು ಇವೆ. ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಬೇಕಾದಷ್ಟು ಹೊಳೆಗಳು ಹರಿಯುತ್ತಲಿವೆ. ಆವೆಲ್ಲ ಹೊಳೆಗಳು ಮಳೆಗಾಲದಲ್ಲಿ ಬಿದ್ದ ನೀರನ್ನು ತುಂಬಿಕೊಂಡು ಸಮುದ್ರಕ್ಕೆ ಸಾಗಿಸುವುದು ಹೊರತು, ಕನ್ನಡಿಗರಿಗೆ ಇನ್ನಾವ ಪ್ರಯೋಜನಕ್ಕೂ ಬಾರದಂತಾಗಿವೆ. ಪರಕೀಯರಾದ ಬ್ರಿಟಿಷರ ಆಡಳಿತದಲ್ಲಿ ಕರ್ನಾಟಕವು ಎಲ್ಲ ರೀತಿಯಿಂದಲೂ ಉಪೇಕ್ಷಿತವಾದುದು ಸರಿಯಷ್ಟೇ! ಅವರ ಹೆಜ್ಜೆಯಲ್ಲಿಯೆ ಹೆಜ್ಜೆಯಿಟ್ಟು ನಾಗಿರುವ ಇಂದಿನ 'ಸ್ವತಂತ್ರ ಪ್ರಜಾಪ್ರಭುತ್ವ'ವೂ ಕರ್ನಾಟಕವನ್ನು ಉಪೇಕ್ಷಿಸುತ್ತಲೇ ನಡೆದಿದೆ. ಕರ್ನಾಟಕದ ಒಕ್ಕಲಿಗರ ಬಡತನಕ್ಕೆ ಆಳುವ ಆಡಳಿತವೇ ಸಂಪೂರ್ಣವಾಗಿ ಉತ್ತರವಾದಿಯಾಗಿರುವುದೆಂದು ಹೇಳಿದರೆ ಯಾರೂ ಆಕ್ಷೇಪಿಸುವ ಕಾರಣವಿಲ್ಲ. ಕರ್ನಾಟಕದ ಒಕ್ಕಲಿಗರ ಬೇಸಾಯಕ್ಕೆ ನೀರನ್ನು ಒದಗಿಸಿಕೊಟ್ಟರೆ, ಅವರು ತಾವು ಸಮೃದ್ಧ ಜೀವನ ನಡೆಯಿಸುವರಷ್ಟೇ ಅಲ್ಲ; ಬೇರೆ ಕೊರತೆಯ ಪ್ರದೇಶಗಳಿಗೂ ಆಹಾರ-ಬಟ್ಟೆಗಳನ್ನು ಪೂರಯಿಸಬಹುದು.

ಕೇಂದ್ರಸರಕಾರದಿಂದಲೂ ಮುಂಬಯಿ-ಮದ್ರಾಸ ಸರಕಾರಗಳಿಂದಲೂ 'ಹೆಚ್ಚು ಆಹಾರ ಬೆಳೆಯಿರಿ!' ಎಂಬ ಪ್ರಚಾರದ ಕಾಗದಗಳ ಸುರಿಮಳೆ ನಡೆದಿದೆಯೇ ಹೊರತು, ಹೆಚ್ಚು ಆಹಾರ ಬೆಳೆಯಲು ಆವಶ್ಯಕವಾದ ನೀರಿನ ಅನುಕೂಲತೆಯ ಏರ್ಪಾಡು ಏನೂ ನಡೆಯಲೊಲ್ಲದು. ಹೊಸತಾಗಿ ಸಿದ್ಧವಾದ ಪಂಚವಾರ್ಷಿಕ ಯೋಜನೆಯೂ ಕರ್ನಾಟಕದ ಕಡೆಗೆ ಕಣ್ಣುಮುಚ್ಚಿಕೊಂಡೆ ಹೊರಟಿದೆ. ಕನ್ನಡಿಗರ ಫಲವತ್ತಾದ ಭೂಮಿಗೆ ನೀರನ್ನು ಒದಗಿಸಿಕೊಡದೆ ಹೋದರೆ, ಅಖಿಲ ಭಾರತಕ್ಕೇ ಅನ್ಯಾಯ ಮಾಡಿದಂತಾಗುವುದೆಂಬ ಮುನ್ನೋಟ, ಕೇಂದ್ರ ಮತ್ತು ರಾಜ್ಯ ಸರಕಾರಗಳಲ್ಲಿರುವ— ಸಂಕುಚಿತ ದೃಷ್ಟಿಯ— ಅಧಿಕಾರ ಸೂತ್ರಧಾರಿಗಳಿಗೆ ಉದಯಿಸುವುದು ಸಾಧ್ಯವೇ ಇಲ್ಲವೆಂದು ತೋರುತ್ತಲಿದೆ. ಆ ಸ್ಥಾನದಲ್ಲಿದ್ದುಕೊಂಡ ಕೈ ನಡೆಯುವ ನಾಯಕರೆಲ್ಲ— ತಮ್ಮ ತಮ್ಮ ಪ್ರಾಂತಗಳ ಅಭಿವೃದ್ಧಿಯ ಯೋಜನೆಗಳ ಕಡೆಗೆ ನೋಡಿಕೊಳ್ಳುತ್ತಲಿದ್ದಾರೆ; ದಾಕ್ಷಿಣ್ಯ ಭಾವದಿಂದಲೋ ಹೆದರಿಕೆಯಿಂದಲೋ— ಕನ್ನಡ ನಾಯಕರೆಲ್ಲ, ಅದನ್ನು ಕಣ್ಣಿಂದ ನೋಡುತ್ತ ಮಾತನೇನೂ ಆಡದೆ ಸುಮ್ಮನೆ ಹೊಂಟಿದ್ದಾರೆ. ಕರ್ನಾಟಕದ ಕೆಲವು ತಂತ್ರಗಾರ ಮುಂದಾಳುಗಳಂತೂ, ಕರ್ನಾಟಕದ— ಏಕೀಕರಣವಾಗದಂತೆ ನೋಡಿಕೊಳ್ಳುವ— ಮೇಲಿನವರ

(೧೬೮ನೆಯ ಪುಟಕ್ಕೆ ಮುಂದುವರಿದಿದೆ.)

ನಾಡ ನಡೆ

‘ ಕಾಲಭೈರವ ಕಂಡುದು ’

ಮುಂಬಯಿ ರಾಜ್ಯದ ವ್ಯಾಪಾರೀ ಆಡಳಿತ !

ಸ್ವಾತಂತ್ರ್ಯೋತ್ತರ ಭಾರತದಲ್ಲಿ ಎಲ್ಲ ರಾಜ್ಯಗಳಲ್ಲಿಯಂತೆ ಮುಂಬಯಿ ರಾಜ್ಯದಲ್ಲಿಯೂ ಸ್ವಾಯತ್ತ ಸರಕಾರವು ಆಡಳಿತವನ್ನು ನಡೆಯಿಸಿದೆ. ಈ ಸರಕಾರವು ಕೇವಲ ಆರ್ಥಿಕವಿಚಾರವನ್ನು ಮಾತ್ರ ತನ್ನ ಕಣ್ಣೆದುರು ಇರಿಸಿಕೊಂಡಿರುವುದೇನೋ! ರಾಜ್ಯದ ಜನತೆಯ ಹೃದಯಶಕ್ತಿ ವಿಕಾಸವಾಗುವಂತಹ ಯೋಜನೆಗಳನ್ನೇನೂ ಇಟ್ಟುಕೊಂಡಂತೆ ಕಾಣುವುದಿಲ್ಲ. ಅದರಲ್ಲಿಯೂ ಸಾಹಿತ್ಯ-ಸಂಸ್ಕೃತಿಗಳಿಗೆ ಪೋಷಣೆಕೊಡುವಂತಹ ಯೋಜನೆಗೆ ಕುಂಬಳಕಾಯಿ. ಮದ್ರಾಸ್ ಸರಕಾರವೂ ಮೈಸೂರು ಸರಕಾರವೂ ಸಾಹಿತ್ಯ-ಸಂಸ್ಕೃತಿಗಳ ಪೋಷಣೆ-ಅಭಿವೃದ್ಧಿಗಳ ಯೋಜನೆಗಳನ್ನಿಟ್ಟುಕೊಂಡು, ಆಚಾರದಲ್ಲಿಯೂ ತರಲು ತೊಡಗಿವೆ.

ಮದ್ರಾಸ್ ರಾಜ್ಯಸರಕಾರದಲ್ಲಿ ಪ್ರಮುಖವಾಗಿ ತಮಿಳು, ತೆಲುಗು, ಕನ್ನಡ, ಮಲಯಾಳ— ಹೀಗೆ ನಾಲ್ಕು ಪ್ರಾದೇಶಿಕ ಭಾಷೆಗಳಿವೆ. ಸಂಸ್ಕೃತವಂತೂ ಭಾರತದ ಸಂಸ್ಕೃತಿಯ ವಾಣಿ. ಇದನ್ನರಿತುಕೊಂಡು, ಇವೆಲ್ಲ ಭಾಷೆಗಳಲ್ಲಿಯ ಆಧುನಿಕ ಕವಿಗಳಲ್ಲಿ ಹಿರಿಯರನ್ನು ಆಯ್ದು ರಾಷ್ಟ್ರಕವಿಗಳೆಂದು ಮನ್ನಣೆಸಲ್ಲಿಸುವ ಪದ್ಧತಿಯನ್ನು ಪ್ರಾರಂಭಿಸಿರುವುದು. ಅದರಂತೆಯೇ ಪುರಸ್ಕಾರವೂ ಇವೆಲ್ಲ ಭಾಷೆಗಳಲ್ಲಿಯ ಶ್ರೇಷ್ಠಗ್ರಂಥಕಾರರ ಉತ್ತಮ ಗ್ರಂಥಗಳಿಗೆ ಸನ್ಮಾನಧನವನ್ನೂ ಸಲ್ಲಿಸುತ್ತಲಿರುವುದು. ಇದೇ ವರ್ಷ ಬಳ್ಳಾರಿಬೀಚಿ’ಯವರ ‘ತಿಮ್ಮನ ತಲೆ’ ಎಂಬ ಹಾಸ್ಯಮಯ ಗ್ರಂಥಕ್ಕೆ ೫೦೦ ರೂಪಾಯಿಗಳನ್ನೂ ಶ್ರೀ. ಶಿವರಾಮ ಕಾರಂತರ ಒಂದು ಕಾದಂಬರಿಗೆ— ಇನ್ನೊಬ್ಬರ ನಾಟಕಸಂಕಲನಕ್ಕೆ— ಉಚಿತ ಮನ್ನಣೆಗಳನ್ನೂ ಸಲ್ಲಿಸಿದೆ. ಮದ್ರಾಸಿನ ವಿಶ್ವವಿದ್ಯಾಲಯವಂತೂ ತನ್ನ ಆಡಳಿತದಲ್ಲಿರುವ ಎಲ್ಲ ಪ್ರಾದೇಶಿಕ ಭಾಷೆಗಳ ಪ್ರಾಚೀನ ಗ್ರಂಥಗಳನ್ನು— ಒಂದೊಂದಾಗಿ— ಪ್ರಕಟಿಸುವ ಪರಂಪರೆಯನ್ನು ಇಟ್ಟುಕೊಂಡಿರುವುದು.

ಇನ್ನು ಮೈಸೂರು ರಾಜ್ಯದ ವಿಚಾರ: ಹಿಂದಿನ ಮಹಾರಾಜರ ಪ್ರಗತಿಪರ ಆಡಳಿತದ ಕಾಲದಿಂದಲೂ ಮೈಸೂರು ಸರಕಾರ ಸಾಹಿತ್ಯ-ಸಂಸ್ಕೃತಿಗಳ ಪೋಷಣೆ-ಸಂವರ್ಧನೆಗಳ ವಿಚಾರದಲ್ಲಿ ಸಾಕಷ್ಟು ಪ್ರೋತ್ಸಾಹ ಕೊಡುತ್ತ ಬಂದಿದೆ. ಕನ್ನಡ ಸಾಹಿತ್ಯ ಇಷ್ಟತ್ತು ತಲೆಯೆತ್ತಿ ನಿಂತುದು ಮೈಸೂರು ಸರಕಾರದ ನೆರವಿನಿಂದಲೇ! ಮೈಸೂರು ಸರಕಾರದ ಓರಿಯೆಂಟಲ್ ಲೈಬ್ರರಿ, ವಿಶ್ವವಿದ್ಯಾನಿಲಯಗಳಿಂದ ಸಾಹಿತ್ಯ-ಸಂಸ್ಕೃತಿಗಳಿಗೆ ಸಂಬಂಧಿಸಿದ ಪ್ರಾಚೀನಾರ್ವಾಚೀನ ಗ್ರಂಥಗಳು ಎಷ್ಟೆಂದು ಪ್ರಕಟವಾಗಿವೆ- ಯೆಂಬುದರ ಎಣಿಕೆಹತ್ತದು. ಇಂದಿನ ಪ್ರಜಾಸರಕಾರವೂ ಹಿಂದಿನ ಪರಂಪರೆಯನ್ನೆಲ್ಲ ನಡೆಯಿಸಿಕೊಂಡು ಹೊರಟಿದೆಯಲ್ಲದೆ, ಶ್ರೇಷ್ಠ ಸಾಹಿತ್ಯಿಕರಿಗೆ ಮನ್ನಣೆಯನ್ನು ಸಲ್ಲಿಸುವ, ಗಮಕಿಗಳಿಗೆ ಪೋಷಣೆಯನ್ನು ಕೊಡುವ ಹೊಸ ಯೋಜನೆಯನ್ನೂ ಹಾಕಿಕೊಂಡಿರುವುದು.

ಇಂತಹ ವಿಚಾರದಲ್ಲಿ ಮುಂಬಯಿ ಸರಕಾರ ಮುಂದಿಟ್ಟ ಹೆಜ್ಜೆ ಯಾವುದು? ಮುಂಬಯಿ ರಾಜ್ಯದಲ್ಲಿಯೂ ಪ್ರಾಮುಖ್ಯವಾಗಿ ಕನ್ನಡ, ಮರಾಠಿ, ಗುಜರಾತಿ ಇವು ಮೂರು ಪ್ರಾದೇಶಿಕ ಭಾಷೆಗಳಿವೆ. ಈ ಭಾಷೆಗಳ ಸಾಹಿತ್ಯದ ಪೋಷಣೆ-ಸಂವರ್ಧನೆಗಾಗಿ ಮುಂಬಯಿ ಸರಕಾರವು ಇದುವರೆಗೆ ಯಾವ ಯೋಜನೆಯನ್ನೂ ಇರಿಸಿಕೊಂಡಂತೆ ಕಾಣುವುದಿಲ್ಲ. ಸರಕಾರಕ್ಕೂ ಪ್ರಜೆಗಳಿಗೂ ದುಡ್ಡಿನ ಸಂಬಂಧವೇ ಸಂಬಂಧ. ಹಳೆಯ ಹೊಸ ಕರಗಳನ್ನೆಲ್ಲ ಪ್ರಜೆಗಳು ತಂಟೆ-ತಕರಾರುಗಳಿಲ್ಲದೆ ತವಗೆ ತುಂಬಬೇಕು. ಆ ಕರದ ಹಣ ಎಲ್ಲಿಯೆಲ್ಲಿಯೋ— ಹೇಗೊ ಹೇಗೋ— ವೆಚ್ಚವಾಗಬೇಕು. ನಾಡ ಜನತೆಯ ಭಾವನಾಶಕ್ತಿ-ಸೌಂದರ್ಯಶಕ್ತಿ— ಸಂಸ್ಕೃತಿಗಳನ್ನು ವಿಕಾಸಗೊಳಿಸಬಲ್ಲ ಸಾಹಿತ್ಯ-ಲಲಿತಕಲೆಗಳಿಗಾಗಿ ಈ ಹಣದಲ್ಲಿಯ ಸ್ವಲ್ಪಾಂಶವೂ ಸಿಕ್ಕುವಂತಿಲ್ಲ. ಮುಂಬಯಿ ಸರಕಾರದಲ್ಲಿದ್ದ ಮುಂದಾಳುಗಳಿಗೆ ಸಾಹಿತ್ಯ ಸಂಸ್ಕೃತಿಗಳ ಬೆಲೆಯೇ ತಿಳಿದಿಲ್ಲವೆ? ಅಥವಾ ತನ್ನ ಬೆನ್ನನ್ನು ತಾನೇ ಚಪ್ಪರಿಸಿದಂತೆ ಬರೆದು ಪ್ರಕಟಿಸುತ್ತಿರುವ, ಸರಕಾರದ ಕರಪತ್ರಿಕೆ-ವರದಿಗಳೇ ನಿಜವಾದ ಸಾಹಿತ್ಯವೆಂದು ತಿಳಿದುಕೊಂಡಿರುವರೋ?

* * * *

ಭಾರತದ ಆಕಾಶವಾಣಿಯ ಲೆಕ್ಕಾಚಾರ

ಇಂದಿನ ವಿಜ್ಞಾನಯುಗದಲ್ಲಿ ಪ್ರತಿಯೊಂದು ರಾಷ್ಟ್ರವೂ ವಿಜ್ಞಾನದ ಅಮೂಲ್ಯಕಾಣಿಕೆಯಾದ ಆಕಾಶವಾಣಿಯ ಉಪಯೋಗವನ್ನು ಮಾಡಿಕೊಳ್ಳುತ್ತಲಿವೆ. ಎಲ್ಲ ಕಡೆಗಳಲ್ಲಿಯಂತೆ ಭಾರತರಾಷ್ಟ್ರವೂ ತನ್ನ ಸರಕಾರದ ನಿಯಂತ್ರಣದಲ್ಲಿರಿಸಿ, ಸರಕಾರದ ಪ್ರಕಟನಾಕಾರ್ಯದೊಂದಿಗೆ, ಜನತೆಯ ಮನೋರಂಜನೆ-ಜ್ಞಾನಾಭಿವೃದ್ಧಿಯ ಕಾರ್ಯವನ್ನೂ ಆಕಾಶವಾಣಿಯಿಂದ ನಡೆಯಿಸುತ್ತಲಿದೆ. ಇದು ಎಲ್ಲರಿಗೂ ಬೇಕಾದ ಸಂಗತಿಯೆ!

ಆದರೆ, ಇದಕ್ಕಾಗಿ ವೆಚ್ಚವಾಗುವ ಹಣಕಾಸಿನಲ್ಲಿ ಆಡಳಿತದ ಅಧಿಕಾರಿವರ್ಗದ ವೆಚ್ಚವೇ ತಲೆಭಾರವಾಗಿರುವುದರಿಂದ, ಜನೋಪಯುಕ್ತವಾದ ಕಾರ್ಯಕ್ರಮಗಳನ್ನು ಯೋಗ್ಯವೆನಿಸುವಂತೆ ಏರ್ಪಡಿಸಲು ಅವಕಾಶವೇ ಇಲ್ಲದಂತಾಗಿದೆ. ಇಂದು ನಮ್ಮ ರಾಷ್ಟ್ರದಲ್ಲಿ ಸಂಗೀತ- ಸಾಹಿತ್ಯ— ನಟನೆಗಳಿಗೆ ಸರಕಾರದ ಈ ಆಕಾಶವಾಣಿಯಿಂದಲೇ ಸಂರಕ್ಷಣೆ—ಪ್ರೋತ್ಸಾಹಗಳು ದೊರೆಯಬೇಕಾಗಿದೆ. ಇವೀಗ ದೊರೆಯದಿದ್ದರೆ, ಆ ಕಲಾಭಿಜ್ಞರನ್ನು ಕೇಳುವುದಕ್ಕೆ ಬೇರೆ ದಿಕ್ಕೇ ಇಲ್ಲ, ಇ ದಿನ ವ್ಯವಸ್ಥೆಯಲ್ಲಿ ಹೆಚ್ಚಿನ ಹಣವು ಆಡಳಿತಕ್ಕೇ ವೆಚ್ಚವಾಗುತ್ತಿರುವುದರಿಂದ, ಕಲಾಭಿಜ್ಞರಿಗೆ ತಕ್ಕ ಸನ್ಮಾನಧನ ದೊರೆಯಲು ಅವಕಾಶವೇ ಇಲ್ಲದಂತಾಗಿದೆ. ನಮ್ಮ ಕೇಂದ್ರ ಸರಕಾರವು ಆದಷ್ಟು ಬೇಗನೆ ಇದರ ಕಡೆಗೆ ಲಕ್ಷ್ಯ ಪೂರಯಿಸಬೇಕು.

ವಾದ ಉತ್ಕೃಷ್ಟ ಸನ್ನಿವೇಶಗಳೆಂಬುದಕ್ಕೆ ಸಂಶಯವಿಲ್ಲ. ಸಂಭಾಷಣೆಯ ಮಾತುಗಳೆಲ್ಲವೂ ಬಹು ಮಾರ್ಮಿಕವಾಗಿದ್ದು, ಸುಭಾಷಾ ಸಂಪತ್ತಿನಿಂದ ಕೂಡಿವೆ; ಅಲ್ಲೂ ಓಲೆಯಲ್ಲಡಕವಾದ ಮಾತುಗಳು ಹೃದಯಸ್ಪರ್ಶಿಗಳಾಗಿವೆ. ರಸಕ್ಕನುಗುಣವಾದ ಮಾತುಗಳೂ— ಮಾತುಗಳಲ್ಲಡಕವಾದ ವಿಚಾರಗಳೂ— ವಿಚಾರಗಳಿಂದೊಪ್ಪುವ ಸನ್ನಿವೇಶಗಳೂ— ಸನ್ನಿವೇಶಗಳಿಂದ ಎರಕಗೊಂಡ ಒಂದು ಉತ್ತಮ ಸಂಸಾರಚಿತ್ರವೂ ಬೆಂದ ಹೃದಯದಲ್ಲಿ ಸಮಾವೇಶವಾಗಿವೆ. ಇಂತಹ ಸಹಜ ಸಂಗತಿನಿಂದ ಬೆಳಗಿ ನಿಂತ ಈ ಒಂದು ರೂಪಕವು ಕರುಣಾತರಂಗವಾಗಿದೆ; ಅಲೆಗಳ ತಾಕಲಾಟದಂತೆ ವಿಚಾರಗಳು ಉದಯೋನ್ಮುಖವಾಗಿ ಸಾಗಿವೆಯೆಂಬುದಿದು, ಸಹಜಕವಿಗಳಾದ ಲೇಖಕರ ಪಾಲಿಗೊದಗಿದ ವಿಚಾರಸಂಪತ್ತಿನ ನಿದಾನವಾಗಿದೆ.

ಅಂತೂ ಇದೊಂದು ಶ್ರವ್ಯ-ದೃಶ್ಯಮಾರ್ಗಗಳೆರಡಕ್ಕೂ ಹೊಂದಿಕೆಯಾಗಿ ನಿಲುವ— "ಬೆಂದ ಹೃದಯದೊಡನೆ—ಸಮರಸವಾಗ ಬಯಸಿದ— ನೊಂದಿದೆಯ ಚಿತ್ರವು." ಆದುದರಿಂದಲೇ ಇದು **ಬೆಂದ ಹೃದಯ; ಬೆಂದ ಹೃದಯಗಳಲ್ಲ.**

'ಬೆಂದ ಹೃದಯ' ಎಂಬ ರೂಪಕದ ವಿಮರ್ಶೆ

ಶ್ರೀಮತಿ ಪದ್ಮಾ ಬೆಂಗಳೂರು.

'ಬೆಂದ ಹೃದಯ', ಹೆಸರೇ ಸೂಚಿಸುವಂತೆ, ಪರಿಶುದ್ಧ ಜೀವಿಯೊಂದು ಪ್ರಾಪಂಚಿಕ ಅನ್ಯಾಯ-ವಂಚನೆಗಳ ಸುಳಿಯಲ್ಲಿ ಸಿಕ್ಕು ಬೆಂದು ಹೋದುದರ ದುರಂತ ಚಿತ್ರ.

ರಂಗಣ್ಣ ಕಾಕಾನೆಂಬ ಹಳ್ಳಿಯ ಗೃಹಸ್ಥನೊಬ್ಬ, ತಾನು ಅತ್ತಿಗೆಗೆ ಅಂತಿಮ ಸಮಯದಲ್ಲಿ ಪ್ರಮಾಣ ಮಾಡಿದ್ದಂತೆ, ಅವರ ಮಗನನ್ನು ಮುಂದೆ ತರುವ ಸಲುವಾಗಿ ಅವಿವಾಹಿತನಾಗಿಯೇ ಉಳಿದು, ಉಚ್ಚ ವಿಚಾರ-ಭಾವನೆಗಳ ಹೊಳೆಯಲ್ಲಿ ತನ್ನ ಮನಸ್ಸನ್ನು ತೇಲಿಬಿಡುತ್ತಿದ್ದ ದೇವತಾ ಮನುಷ್ಯ. ಮಗ ಶ್ಯಾಮನಿಗೆ ವಿವಾಹವಾದ ಮೇಲೆ, ಆತನ ಪತ್ನಿ ರತ್ನಾನೊಡನೆ, ಆಕೆಯ ಅಕ್ಕ ಗಂಗಕ್ಕನೂ ತಂಗಿಯ ಸಂಸಾರವನ್ನು ಸುಗಮಗೊಳಿಸುವ ನೆಪದಲ್ಲಿ ಬಂದಿರುತ್ತಾಳೆ. ಆಕೆ ನಡತೆ ಹೀನಳೆಂಬ ಸುದ್ದಿಯಿದ್ದುದರಿಂದ, ಪತಿಯಿಂದ ತ್ಯಾಜ್ಯಳಾಗಿರುತ್ತಾಳೆ. ಬಂದ ಕೆಲವು ದಿನದಲ್ಲೇ ರಂಗಣ್ಣ ಕಾಕಾನೊಡನೆ ಸಂಬಂಧ ಬೆಳಸಲೆಳಸುತ್ತಾಳೆ. ಅದು ವ್ಯರ್ಥವಾಗುತ್ತದೆ. ಅದರಿಂದ ಕೆರಳಿದ ಆಕೆ, ಆತನ ನಿಷ್ಕಲಂಕ ಜೀವನಕ್ಕೆ ಕಪ್ಪುಬಳಿಯುವ ಪ್ರಯತ್ನ ನಡೆಸುತ್ತಾಳೆ. ತಂಗಿಯ ಮನಸ್ಸನ್ನು ಕಲ್ಮಷಗೊಳಿಸಿ, ತನ್ಮೂಲಕ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾಳೆ. ಅವಳ ಇಚ್ಛೆಯಂತೆ ರಂಗಣ್ಣ ಮನೆ ಬಿಟ್ಟು ಹೊರಟು ಹೋಗುತ್ತಾನೆ. ಆದರೆ ಆತನ ಪ್ರತಿಮೂರ್ತಿಯಂತಿದ್ದ ಶ್ಯಾಮ, ಸಂಸಾರ ತ್ಯಾಗ ಮಾಡಿ ಚಿಕ್ಕಪ್ಪನನ್ನು ಅರಸುತ್ತಾ ಹೊರಟು ಹೋಗುತ್ತಾನೆ. ಅಕ್ಕನ ದುಷ್ಟ ಮನಸ್ಸಿನ ಕರಾಳತೆ, ತಂಗಿಯ ಬಾಳಿನ ಬೆಳಕನ್ನು ಅಳಿಸಿ ಗಾಢಾಂಧಕಾರದಲ್ಲಿ ದೂಡುತ್ತದೆ.

ರೂಪಕದಲ್ಲಿ ಬರುವ ಪಾತ್ರಗಳೆಲ್ಲವೂ ಸಜೀವವಾಗಿವೆ, ಸಹಜವಾಗಿವೆ. ರಂಗಣ್ಣ ಕಾಕಾನ ಪರಿಶುದ್ಧಾತ್ಮ, ರೈತ ಹಿರಿಯ ಸ್ವಾಮಿನಿಷ್ಠತೆ, ಶ್ಯಾಮನ ನಿರ್ಮಲ ಅಂತಃಕರಣ, ರತ್ನಾ ಮುಗ್ಧತೆ, ಗಂಗಕ್ಕನ ಸ್ವಾರ್ಥಸಾಧಕ ಮನೋವೃತ್ತಿ— ಇವುಗಳು ವಾಚಕರ ಮನಸ್ಸಿನ ಮೇಲೆ ಬಹುಕಾಲ ನಿಲ್ಲತಕ್ಕುವಾಗಿವೆ.

ಪಾತ್ರ ಪೋಷಣೆಯಲ್ಲಿ ಲೇಖಕರು ಅನುಸರಿಸಿರುವ ಕ್ರಮಾಗತವಾದ ವಿರಳತದ ಯೋಜನೆ ಮೆಚ್ಚತಕ್ಕದ್ದಾಗಿದೆ. ಮೊದಲನೆಯ ಅಂಕದಲ್ಲಿ ರೈತರ ಹಿರಿಯ ಮುದುಕಪ್ಪ ಮತ್ತು ಸಕ್ಕರೆವ್ವ, ಸ್ವಾಮಿಯನೊಡನೆ ಆಡುವ ಮಾತುಗಳಿಂದ, ಆತನ ಇಡೀ ಜೀವನ, ನಿರ್ಮಲ ವಿಶಾಲಹೃದಯ, ಸ್ಪಷ್ಟವಾಗಿ ಗೋಚರವಾಗುತ್ತವೆ. ಅಂತೆಯೆ "ಆವರೇ ನನ್ನ ತಂದೆ, ತಾಯಿ, ದೇವರು....ತಾಯಿ-ತಂದೆಗಳ ನೆನಪೂ ಬಾರದಂತೆ ಸಾಕಿದ್ದಾರೆ!" ಎನ್ನುವ ಶ್ಯಾಮನ ಚಿತ್ರವು ಸಹಜವಾಗಿದೆ. ರಂಗಣ್ಣ ಕಾಕಾ ಮತ್ತು ಶ್ಯಾಮನನ್ನು ನೋಡಿದ ನಾವು ವಾಚಕರು, ಎರಡನೆಯ ಅಂಕದಲ್ಲಿ ಬೆಳ್ಳಗಿರುವುದೆಲ್ಲಾ ಹಾಲೆಂದು ನಂಬುವ ಮುಗ್ಧ ಹುಡುಗಿ ರತ್ನಾಳನ್ನು ನೋಡುತ್ತೇವೆ. ಮೂರನೆಯ ಅಂಕದಲ್ಲಿ ರಂಗಣ್ಣನ ಪರಿಶುದ್ಧಾತ್ಮತೆಯೂ ಗಂಗಕ್ಕನ ದುಷ್ಟಮನೋವೃತ್ತಿಗಳೂ ಸ್ಪರ್ಧಿಸುತ್ತವೆ. ಶ್ಯಾಮನ ಹಿತ ಚಿಂತನೆಯಲ್ಲೇ ಜೀವ ಸವೆಸಿದ್ದ ರಂಗಣ್ಣ, ಗಂಗಕ್ಕನ ಕೀಳು ಬಯಕೆಯನ್ನು ತೃಪ್ತಿಗೊಳಿಸುವುದಿಲ್ಲ. ಇಲ್ಲಿ ಯಾವ ಪ್ರಲೋಭನೆಗಳಿಗೂ ಸಿಕ್ಕದೆ, ಉನ್ನತಸ್ಥಾನದಲ್ಲಿ ನಿಂತು ಮೆರೆಯುವ ಆತನ ಆತ್ಮದ ಜ್ಯೋತಿ ಬೆಳಗುತ್ತದೆ. ಅದೇ ಅಂಕದಲ್ಲಿ, ಪ್ರತಿಶಕ್ತಿಯಾದ ಗಂಗಕ್ಕನ ಕರಾಳತೆಯೂ ಮೊದಲ ಹೆಜ್ಜೆ ಇಡುತ್ತದೆ. ನಾಲ್ಕನೆಯ ಅಂಕ, ಗಂಗಕ್ಕನ ಸಮಯಸಾಧಕ ಮನೋವೃತ್ತಿ, ತಂಗಿಯ ಮನಸ್ಸನ್ನು ಕಲ್ಮಷಗೊಳಿಸುವ ಚತುರತೆಯಿಂದ ಕೂಡಿದೆ. ಐದನೆಯ ಅಂಕದಲ್ಲಿ ಆಕೆಯ ಸೇಡು ಕಾರ್ಯರೂಪಕ್ಕೆ ಬರುವುದನ್ನೂ ರಂಗಣ್ಣನು ತ್ಯಾಜ್ಯನಾಗಿ ಹೊರಬೀಳುವುದನ್ನೂ ನೋಡುತ್ತೇವೆ. ಇಲ್ಲಿ ಅಂತರಂಗದ ಕಣಕಣವೂ ನಿಚ್ಚಳವಾಗಿ ಗೋಚರಿಸುತ್ತದೆ. ರಂಗಣ್ಣನ ಪಾತ್ರವು ಮುಕ್ತಿಯೆಡೆಗೆ ಧಾವಿಸುವ ಆತ್ಮದಂತೆ ಚಿತ್ರಿತವಾದರೆ, ಗಂಗಕ್ಕನ ಪಾತ್ರವು ಪರ್ವತದೆಡೆಯಿಂದ ಸಾಗರದ ಕಡೆಗೆ ಭೋರ್ಗರೆಯುತ್ತ ಹರಿಯುವ ಭೀಷಣ ಪ್ರವಾಹದಂತಿದೆ. ರಂಗಣ್ಣನ ಪಾತ್ರ, ವಾಚಕರ ಮನದ ಬೆಳಕನ್ನು ಹೆಚ್ಚಿಸಿದರೆ ಆಕೆಯ ಪಾತ್ರದ ಕರಾಳತೆ ಸ್ವಾರ್ಥಸಾಧನೆಯು ಮುಗ್ಧನಾದ ತಂಗಿಯ ಬಾಳನ್ನು ಮಣ್ಣುಗೂಡಿಸುವ ಪಾಶವೀ ಶಕ್ತಿಯಾಗುತ್ತದೆ. ರೂಪಕದ ಎರಡು ಪ್ರಧಾನಪಾತ್ರಗಳ ವಿರೋಧ ಮನೋವೃತ್ತಿಯನ್ನು, ಹೀಗೆ ಕ್ರಮಾಗತವಾದ ವಿರಳತದ ತಂತ್ರ ನಿಯೋಜನೆಯಿಂದ ಲೇಖಕರು ಸಾಧಿಸಿದ್ದಾರೆ.

ಪಾಪದ ಪಿಂಡ

(ಸಣ್ಣ ಕಥೆ)

ಶ್ರೀ. ಶ್ರೀ. ಶಾ. ಜುಳಕಿ ಬಿ. ಎ. (ಆನರ್ಸ್)

卐

ಮನುಷ್ಯನನ್ನು ಪಶುವನ್ನಾಗಿ ಮಾಡುವುದು ಸುತ್ತಣ ವಾತಾವರಣದಲ್ಲಿಯ ವಿಷದ ಗಾಳಿ! ಅಂತಹ ವಿಷದ ಗಾಳಿ ತಗಲದಿದ್ದರೆ, ಚೆನ್ನಿ ಪತಿತಳೇಕೆ ಆಗುತ್ತಿದ್ದಳು? ಭರಮನ ಬಾಳು ಏಕೆ ವಿಷಾದಾಂತವಾಗುತ್ತಿತ್ತು?

★

'ಕಟ್ ಕಟ್'

ಬಾಗಿಲು ಬಡಿದ ಸಪ್ಪಳ ಕೇಳಿ ಚೆನ್ನಿಗೆ ಎಚ್ಚರವಾಯಿತು. ಕಣ್ಣು ತೆರೆಯಬೇಕೆಂದರೆ, ಆಯಾಸದಿಂದ ಮುಚ್ಚಿದ ಕಣ್ಣು ತೆರೆಯದು. ಆದರೂ ಕಣ್ಣು ತೆರೆದಳು. ಕಣ್ಣುಗಳುರಿಯುತ್ತಿದ್ದುವು. ಸಣ್ಣದಾದ ದೀಪವನ್ನು ದೊಡ್ಡದಾಗಿ ಮಾಡಿದಳು. ಮಗ್ಗುಲಲ್ಲಿ ಮಗು ಮಲಗಿ ನಿದ್ರಿಸುತ್ತಿತ್ತು. ಅದಕ್ಕೆ ಸಂಸಾರದ ಸುಖ-ದುಃಖದ ಅರಿವೇ ಇರಲಿಲ್ಲ. ಮಗುವಿಗೆ ಚೆನ್ನಾಗಿ ಹೊಚ್ಚಿದಳು. ಮಗುವಿನ ಮುಖದ ಮೇಲೆ ಕೈಯಾಡಿಸಿ ಮುದ್ದು ಹಾಕಿದಳು. ತನ್ನ ತಲೆಗೂದಲನ್ನು ಸರಿಮಾಡಿಕೊಂಡು 'ಯಾರು?' ಎಂದು ಕೇಳಿದಳು. ಉತ್ತರ ಬಂತು, 'ನಾನು!' 'ನಾನು' ಎಂಬ ಉತ್ತರ ಕೇಳಿದೊಡನೆ ಚೆನ್ನಿಗೆ ಗಾಬರಿಯಾಯಿತು. ಎದೆ 'ಢವ ಢವ' ಎನ್ನತೊಡಗಿತು. ಧ್ವನಿ ಬಂಗಾರಮ್ಮನದು, ಚೆನ್ನಿಗೆ ಸ್ವಲ್ಪ ಸಿಟ್ಟು ಬಂದಿತು. ಬಾಗಿಲು ತೆಗೆಯದೆ 'ಯಾಕೆ?' ಎಂದು ಕೇಳಿದಳು. ಹೊರಗಿನಿಂದ ಬಂಗಾರಮ್ಮ "ಸಾವುಕಾರ ಸಂಗಪ್ಪನವರು ಬಂದಿದ್ದಾರೆ; ಬಾಗಿಲಾ ತೆಗಿ!" ಎಂದಳು. ಚೆನ್ನಿಗೆ ಸಿಟ್ಟು ತಡೆಯಲಾಗಲಿಲ್ಲ; "ನನ್ನಿಂದಾಗುವುದಿಲ್ಲ, ನಾನು ಬಾಗಿಲು ತೆರೆಯಲಾರೆ. ನೀನು ಮತ್ತೊಬ್ಬರನ್ನು ನೋಡಿಕೊ!" ಎಂದು ಹೇಳಿದಳು. ಬಂಗಾರಮ್ಮ ಹೊರಗಿನಿಂದಲೇ "ನೋಡು ಚೆನ್ನೀ! ಈ ಸಿಟ್ಟು ತಡೆಯಲ್ಲ; ನಾಳೆ ಮನೆಬಿಟ್ಟು ಹೊರಡಬೇಕಾದೀತು!" ಎಂದು ಎಚ್ಚರಿಸಿದಳು. ಚೆನ್ನಿ ಕೂಡ ಸಿಟ್ಟಿನ ಭರದಲ್ಲಿ "ಹೋದರೂ ಚಿಂತೆಯಿಲ್ಲ, ಈಗ ಬಾಗಿಲು ತೆರೆಯಲಾರೆ" ಎಂದು ಸ್ಪಷ್ಟವಾಗಿ ಹೇಳಿ, ದೀಪ ಸಣ್ಣದು ಮಾಡಿದಳು. ಕ್ಷಣಹೊತ್ತಿನ ಮೇಲೆ ಬಂಗಾರಮ್ಮ ಹೊರಟುಹೋದ ಹೆಜ್ಜೆಯ ಸಪ್ಪಳ ಕೇಳಿಸಿತು. ಚೆನ್ನಿ "ಉಶ್" ಎಂದು ಮಲಗಿದಳು.

ಚೆನ್ನಿ ಮಲಗಿದಳೇನೋ ನಿಜ. ಆದರೆ ಆವಳಿಗೆ ನಿದ್ದೆ ಹತ್ತಲಿಲ್ಲ. ಗತಕಾಲದ ನೆನಹುಗಳು ಒಂದೊಂದಾಗಿ ಭೂತದಂತೆ ಕಣ್ಣುಮುಂದೆ ನಿಲ್ಲಹತ್ತಿದುವು. ಚೆನ್ನಿಗೆ ತನ್ನ ಹಾಗೂ ಭರಮಣ್ಣನ ಸಂಸಾರದ ನೆನಪು ಬಂತು. ಅದು ನೆನಪಾದೊಡನೆ, ಕಣ್ಣಲ್ಲಿ ನೀರು ಧಾರಾಕಾರವಾಗಿ ಹರಿಯತೊಡಗಿತು. ಕಣ್ಣೀರಿನ ಒಂದೊಂದು ಹನಿಯೊಡನೆ, ಅವಳ ಜೀವನದ ಒಂದೊಂದು ನೆನಹು ಕಣ್ಣಮುಂದೆ ಕಟ್ಟಹತ್ತಿತು:

ಅಂದು ಭರಮಣ್ಣ ತನ್ನನ್ನು ನೋಡಲು ಬರುವವನಿದ್ದ. ಹುಟ್ಟು ಚೆಲುವೆಯಾದ ಅವಳನ್ನು, ಅಂದು ಅವಳ ತಾಯಿ ಹೆಚ್ಚು ಸುಂದರವಾಗಿ ಸಿಂಗರಿಸಿದ್ದರು. ಆ ಗುಲಾಬಿವರ್ಣದ ಸೀರೆ, ಎದೆ ಬಿಗಿಯುವಂತಹ ಅದೇ ಬಣ್ಣದ ರವಿಕೆ, ಮೈತುಂಬ ತೊಡಿಸಲ್ಪಟ್ಟ ಆ ಬಂಗಾರದ ಆಭರಣಗಳು— ಇವೆಲ್ಲ ಚೆನ್ನಿಯ ಸೌಂದರ್ಯವನ್ನು ಇಮ್ಮಡಿ ಮಾಡಿದ್ದುವು. ಅಂದು ಕನ್ನಡಿಯಲ್ಲಿ ತನ್ನ ಮುಖವನ್ನು ನೋಡಿಕೊಂಡಾಗ, ಸಂತೋಷದಿಂದುಂಟಾದ ಅವಳ ಮುಖದ ಮೇಲಿನ ಮುಗುಳ್ನಗೆ, ಅವಳ ಸೌಂದರ್ಯವನ್ನು ಮತ್ತಿಷ್ಟು ಹೆಚ್ಚಿಸಿತು. ಆದರೆ ಇಂದೂ— ಇಂದೂ—ತಾನು ಸಿಂಗರಿಸಿಕೊಳ್ಳುತ್ತಾಳೆ. ಇಂದೂ ಬೇರೆಬೇರೆ ಬಣ್ಣದ ಅರಿವೆಗಳನ್ನು ಧರಿಸುತ್ತಾಳೆ. ಮುಖಕ್ಕೆ ಪೌಡರು ಬಳಿಯುತ್ತಾಳೆ. ಕೃತ್ರಿಮ ಬಂಗಾರದ ಆಭರಣಗಳನ್ನು ಧರಿಸುತ್ತಾಳೆ. ಮುಖದ ಮೇಲೆ ಕೃತ್ರಿಮ ಮುಗುಳುನಗೆಯನ್ನು ತರಲು ಯತ್ನಿಸುತ್ತಾಳೆ. ಆದರೆ, ಅಂದಿನ ಶೃಂಗಾರಕ್ಕೂ ಇಂದಿನ ಶೃಂಗಾರಕ್ಕೂ ಎಷ್ಟೊಂದು ಅಂತರವಿದೆ? ಅಂದಿನದು ದೇಹದ ಕಾಂತಿಯನ್ನು ಹೆಚ್ಚಿಸುವ ಶೃಂಗಾರವಾಗಿದ್ದರೆ, ಇಂದಿನದು ದೇಹದ ಹೊಲಸನ್ನು ಮುಚ್ಚಿ ಇಡಲು ಯತ್ನಿಸುವ ಶೃಂಗಾರ!

ಭರಮಣ್ಣ ಸರಿಯಾದ ಸಮಯಕ್ಕೆ ಬಂದ. ಉಟ್ಟದ್ದು ಒಂದು ಖದ್ದರು ಧೋತರ. ತೊಟ್ಟದ್ದು ಒಂದು ನೆಹರೂ ಶರ್ಟು. ತಲೆಯ ಮೇಲೆ ಟೊಪ್ಪಿಗೆ ಇರಲಿಲ್ಲ. ತಲೆಗೂದಲನ್ನು ಓರಣವಾಗಿ ಬಾಚಿದ್ದ. ಅವನ ಆ ಅಗಲವಾದ ಹಣೆ, ವಿಶಾಲವಾದ ಎದೆ— ಈ ಸಾದಾ ಉಡುಪಿನಲ್ಲಿಯೂ ಅವನು ಹುಟ್ಟು ಚೆಲುವನೆಂದು ಹೇಳುತ್ತಿದ್ದುವು. ಚೆನ್ನಿ ಭರಮನನ್ನು ನೋಡಿದಳು; ಭರಮ ಚೆನ್ನಿಯನ್ನು ನೋಡಿದ. ಇಬ್ಬರ ದೃಷ್ಟಿ ಒಂದಕ್ಕೊಂದು ಕೂಡಿದಾಗ, ಭರಮನೊಡನೆ ಹೊಸ ಸೃಷ್ಟಿಯನ್ನೇ ನಿರ್ಮಾಣ ಮಾಡಬಲ್ಲೆನೆಂಬ ಆಶೆ ಅವಳಲ್ಲಿ ಮೂಡಿತು. ದೇವರಿಗೆ, ಭರಮ ತನ್ನನ್ನು ಮದುವೆಯಾಗಲು ಒಪ್ಪುವಂತೆ ಮಾಡಲು ಅನೇಕ ವಿಧವಾಗಿ ಬೇಡಿಕೊಂಡಳು. ದೇವರು ಒಪ್ಪಿದನೆನ್ನುವಂತೆ ಭರಮ ಒಪ್ಪಿದ. ಭರಮ ಹಾಗು ಚೆನ್ನಿಯರ ಮದುವೆ ಸಾಂಗವಾಗಿ ನೆರವೇರಿತು.

ಚೆನ್ನಿ, ಭರಮನೊಡನೆ, ಅವನ ಊರಾದ ಬಸವನ ಹಳ್ಳಿಯಲ್ಲಿ ಸಂಸಾರ ಹೂಡಿದಳು. ಭರಮನಿಗೆ ಯಾವುದಕ್ಕೂ ಕಡಿಮೆ ಇರಲಿಲ್ಲ. ಸಾಕಷ್ಟು ಉತ್ಪನ್ನ ಇತ್ತು. ಊರಲ್ಲಿ ಅಂಗಡಿಯೊಂದನ್ನು ಹಾಕಿದ್ದ. ಅದರಿಂದ ಸಾಕಷ್ಟು ಆದಾಯ ಬರುತ್ತಿತ್ತು. ಆಗ ಚೆನ್ನಿಗೆ ಯಾವ

ರೀತಿಯಿಂದಲೂ ಕಡಿಮೆ ಮಾಡಿರಲಿಲ್ಲ. ಊಟ, ಉಡಿಗೆ—ಎಲ್ಲದರಲ್ಲಿಯೂ ಚೆನ್ನಿಗೆ ಬೇಡಿದ್ದು ದೊರೆಯುತ್ತಿತ್ತು. ಭರಮ ಸ್ವಭಾವದಿಂದ ಅತಿ ಸರಲ. ಕೆಲಸಗಳಲ್ಲಿ ಅತಿ ಚೊಕ್ಕ. ಮುಂಜಾನೆ ನಸುಕಿನಲ್ಲಿ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು, ಸುಮಾರು ಮೂರು ತಾಸು ಹೊತ್ತೇರುವ ಹೊತ್ತಿಗೆ ಅಂಗಡಿಗೆ ಹೋದನೆಂದರೆ, ಬರುವುದು ಸೂರ್ಯ ನೆತ್ತಿಯ ಮೇಲೆ ಬಂದಾಗಲೇ. ಅಷ್ಟರಲ್ಲಿ ಚೆನ್ನಿ ಎಲ್ಲ ಮನೆಗೆಲಸಗಳನ್ನೂ ತೀರಿಸಿಕೊಂಡು, ಅಡಿಗೆ ಮುಗಿಸಿ, ಭರಮನ ದಾರಿ ಕಾಯುತ್ತ, ನೂಲುತ್ತಲೊ ಹೆಣೆಯುತ್ತಲೋ, ಇಲ್ಲವೇ ಓದುತ್ತಲೋ ಕುಳಿತುಕೊಳ್ಳುತ್ತಿದ್ದಳು. ಭರಮ ಬಂದ ಮೇಲೆ, ಇಬ್ಬರೂ ಕೂಡಿ ಊಟ ಮಾಡುತ್ತಿದ್ದರು ಊಟವಾದ ಮೇಲೆ ಭರಮ, ಚೆನ್ನಿಯೊಡನೆ ಕೆಲಹೊತ್ತು ಹರಟೆ ಹೊಡೆದು, ಮತ್ತೆ ಅಂಗಡಿಗೆ ಹೋಗುತ್ತಿದ್ದ. ಆ ಮೇಲೆ ಅಂಗಡಿಯಿಂದ ಬರುವುದು ಎರಡು ತಾಸು ರಾತ್ರಿಯಾದಾಗ ಚೆನ್ನಿ ಭರಮ ಮತ್ತೆ ಊಟಮಾಡಿ ಮಲಗುವರು. ಹೀಗೆಯೇ ಸುಖಮಯವಾಗಿ ಸಾಗಿತ್ತು—ಚೆನ್ನಿ-ಭರಮರ ಸಂಸಾರ. ಆದರೆ ಅದೆಲ್ಲ ಈಗ ಒಂದು ಹಳೆಯ ನೆನಹು ಮಾತ್ರ.

ಭರಮ ವಾರಕ್ಕೊಮ್ಮೆ, ಹದಿನೈದು ದಿನಗಳಿಗೊಮ್ಮೆ ಸಾಮಾನು ಖರೀದಿ ಮಾಡಲು ಸಮೀಪದ ಪಟ್ಟಣಕ್ಕೆ ಹೋಗಬೇಕಾಗುತ್ತಿತ್ತು. ಚೆನ್ನಿಗೆ ತಾನೂ ಪಟ್ಟಣಕ್ಕೆ ಹೋಗಬೇಕು,—ಪಟ್ಟಣ ನೋಡಬೇಕು— ಎಂಬ ಆಶೆ. ಆದರೆ ಚೆನ್ನಿಯನ್ನು ಕರೆದುಕೊಂಡು ಹೋದರೆ ಎಲ್ಲಿ ಇಳಿಯಬೇಕು? ತಾನೊಬ್ಬನೇ ಆದರೆ ಮುಂಜಾನೆ ಹೋಗಿ ಸಂಜೆಗೆ ಬರಬಹುದು. ಮಳೆಗಾಲದಲ್ಲಿ ಒಮ್ಮೊಮ್ಮೆ ನಿಂತರೂ ಅಷ್ಟು ತ್ರಾಸು ಎನಿಸುವುದಿಲ್ಲ. "ಚೆನ್ನಿಯನ್ನು ಕರೆದುಕೊಂಡು ಹೋದರೆ, ಊರು ನೋಡಲು ಏನಿಲ್ಲೆಂದರೂ ಎರಡು ದಿನ ನಿಲ್ಲಬೇಕಾಗುವುದು. ಊರಲ್ಲಿಯ ವ್ಯಾಪಾರ ತಪ್ಪುವುದು." ಎಂಬ ಯೋಚನೆಯಿಂದ ಚೆನ್ನಿಯ ಆಶೆಯನ್ನು ಭರಮ ಮುಂದೂಡುತ್ತಲೇ ನಡೆದಿದ್ದ. ಇದೊಂದು ವಿಷಯದಲ್ಲಿ ಗಂಡ-ಹೆಂಡಿರಲ್ಲಿ ಮನಸ್ತಾಪ ಉಂಟಾಗುತ್ತಿತ್ತು; ಆದರೆ ಅದು ಭರಮ ಪಟ್ಟಣಕ್ಕೆ ಹೊರಟು ನಿಂತಾಗ ಮಾತ್ರ. ಭರಮ ತಿರುಗಿ ಸಂಜೆಗೆ ಊರಿಗೆ ಬಂದಾಗೆಲ್ಲ, ಚೆನ್ನಿ ಮತ್ತೆ ಅವನನ್ನು ನಸುನಗುತ್ತ ಇದಿರುಗೊಳ್ಳುತ್ತಿದ್ದಳು. ಮುಂಜಾನೆಯ ಮನಸ್ತಾಪವನ್ನು ಇಬ್ಬರೂ ಮರೆತು ಬಿಡುತ್ತಿದ್ದರು.

ಒಂದು ದಿನ ಮಧ್ಯಾಹ್ನ, ಭರಮ ಊಟಕ್ಕೆ ಬಂದಾಗ ಹೇಳಿದ: "ಚೆನ್ನಿ, ನಿನ್ನೆ ನನ್ನ ಗೆಳೆಯ ಹನುಮಣ್ಣ ಊರಿಂದ ಬಂದಿದ್ದಾನೆ. ನನ್ನದೂ ಅವನದೂ ಬಹಳ ಹಳೆಯ ಗೆಳೆತನ ಚೆನ್ನಿ! ಅವನೀಗ ಊರು ಬಿಟ್ಟು ನಾಲ್ಕು ವರ್ಷಗಳಾದುವು. ಈಗೆಲ್ಲೋ ಲಷ್ಕರ ಸೇರಿದ್ದಾನಂತೆ. ಇದೇ ಈಗ ಭೆಟ್ಟಿಯಾಗಿದ್ದ. ಇಂದು ಮಧ್ಯಾಹ್ನ ನನ್ನ ಮನೆಗೆ ಬರಲು ಹೇಳಿದ್ದೇನೆ. ಅವನು ಬಂದಾಗ, ಅಷ್ಟು ಚಹಾ ಅವರ ಜೊತೆಗೆ ಏನಾದರೂ ತಿನ್ನಲಿಕ್ಕೆ ಮಾಡು!" ಚೆನ್ನಿಯೂ 'ಹೂಂ' ಎಂದು ಗೋಣು ಹಾಕಿದಳು.

ಮಧ್ಯಾಹ್ನ ಹನುಮಣ್ಣ ಬಂದ. ಸಂಪೂರ್ಣ ಖಾಕಿಯ ... ಧರಿಸಿದ್ದ. ಕಾಲಲ್ಲಿ ಬೂಟುಗಳು, ಕೈಯಲ್ಲಿ ಬಡಿಗೆ, ಓರೆ ... ತೆಗೆದಿದ್ದ. ತಲೆಯ ಮೇಲೆ ಟೊಪ್ಪಿಗೆ ಇರಲಿಲ್ಲ. ಬಣ್ಣ ಕಪ್ಪಾದರೂ ಕಣ್ಣು-ಮೂಗುಗಳಲ್ಲಿ ಯಾವ ದೋಷವೂ ಇಲ್ಲ... ಭರಮ ಹನುಮಣ್ಣನನ್ನು ಸ್ವಾಗತಿಸಿದ. ಗೆಳೆಯನಿಗೆ ತನ್ನ ಹೆಂ... ತಿಯ ಪರಿಚಯ ಮಾಡಿಕೊಟ್ಟ. ಚೆನ್ನಿಯೂ ತನ್ನ ಗಂಡನ ಗೆಳೆ... ಎನ್ನುವ ಭಾವದಿಂದ,— ಮೊದಮೊದಲು ಹೆದರಿದರೂ— ಕ್ಷೇ... ಸಮಾಚಾರದ ನಾಲ್ಕು ಮಾತುಗಳನ್ನಾಡಿದಳು. ಹನುಮ... ತನ್ನ ಮಿಲಿಟರಿ ಜೀವನದ ಸಾಹಸ ಕೃತ್ಯಗಳನ್ನು 'ಉಪ್ಪು-ಖಾ... ಹಚ್ಚಿ ಹೇಳಿದ. ಆದರಲ್ಲಿ ನೂರರಲ್ಲಿ ಹತ್ತು ಪಾಲಿನಷ್ಟು ನಿ... ವಿದ್ದಿರಬಹುದು. ಉಳಿದ ತೊಂಭತ್ತು ಪಾಲೆಲ್ಲ ಕೈಗಂಟೇ. ತಾ... ಮುಂಬೈ, ಕಲಕತ್ತೆ, ಮದ್ರಾಸ ಎಲ್ಲ ಪಟ್ಟಣಗಳನ್ನೂ ನೋಡಿ... ವೆನೆಂದೂ, ಅಲ್ಲಿ ತನಗೆ ಅನೇಕ ಜನ ಸ್ನೇಹಿತರಿರುವರೆಂದೂ ತನಗೆ ಮುಂಬಯಿಯಲ್ಲಿಯೇ ದೊಡ್ಡ ನೌಕರಿ ಸಿಗಲಿದೆಯೆಂದೂ ಅದಕ್ಕೂ ಮೊದಲು ಊರಿಗೊಮ್ಮೆ ಭೆಟ್ಟಿಕೊಟ್ಟು ಹೋಗ... ಬಂದಿರುವೆನೆಂದೂ—ಹೇಳಿದ. ಭರಮ ತನ್ನ ಗೆಳೆಯನ ಸಾಹ... ಜೀವನವನ್ನು ಮೆಚ್ಚಿ, ಅವನನ್ನು ವರ್ಣಿಸಿದ. ಚೆನ್ನಿಯೂ ಮೌನ... ದಿಂದಲೇ ಮೆಚ್ಚಿಕೆ ಸೂಚಿಸಿದಳು.

ಹನುಮಣ್ಣ ಭರಮನ ಮನೆಗೆ ಬರುವುದು ಹೆಚ್ಚಾಯಿತ... ಒಮ್ಮೊಮ್ಮೆ ಭರಮ ಮನೆಯಲ್ಲಿಲ್ಲದಾಗಲೂ ಬರುತ್ತಿದ್ದ. ಮೊ... ಮೊದಲು ಚೆನ್ನಿ, ತನ್ನ ಗಂಡನ ಗೆಳೆಯ ಎನ್ನುವ ಸಲಿಗೆಯಿಂ... ಸುಮ್ಮನಿದ್ದರೂ, ಬರುಬರುತ್ತ ಚೆನ್ನಿಗೆ ಹನುಮಣ್ಣನ ನಡ... ಸಂಶಯ ಕಂಡಿತು. ಭರಮನ ಮುಂದೆ ಈ ಮಾತನ್ನು ... ಬೇಕೆಂದಳು. ಆದರೆ "ಹನುಮಣ್ಣ ಇನ್ನು ಕೆಲವು ದಿವಸ ಮಾ... ಇರುವವ, ಅಷ್ಟರಲ್ಲಿ ತನ್ನ ಗಂಡನೆದುರಿಗೆ ಹೇಳಿ, ಅವರವರ ಗೆಳೆ... ಕ್ಕೇಕೆ ಧಕ್ಕೆ ತರಬೇಕು? ಅದೂ ಅಲ್ಲದೆ, ಹನುಮಣ್ಣ ಕೆಟ್ಟ... ನೆಂದು ಯಾತರ ಮೇಲಿಂದ ಸಿದ್ಧ ಮಾಡುವುದು?" ಎಂದು ವಿಚಾ... ಸುಮ್ಮನಿದ್ದಳು.

ಒಂದು ದಿನ— ಭರಮ ಸಾಮಾನು ತರಲು ಊರಿಗೆ ಹೊ... ಚೆನ್ನಿ ತಾನೂ ಬರುವೆನೆಂದು ಹಟ ಹಿಡಿದಳು. ಭರಮ ಅವ... ಬೇಡವೆಂದು ಹೇಳಿ, ಸಂತಯಿಸಲು ಯತ್ನಿಸಿದ. ಚೆನ್ನಿ ಕೇ... ಕೊನೆಗೆ ಭರಮ, ಇಂದು ಮಳೆಯಾಗುವ ಸಂಭವವಿದೆಯಾದ್ದರಿ... ಮುಂದಿನ ಸಲ ಹೋಗುವಾಗ ತಪ್ಪದೇ ಕರೆದುಕೊಂಡು ಹೋಗ... ವೆನೆಂದು ವಚನವಿತ್ತ ಮೇಲೆ, ಚೆನ್ನಿ ಅವನನ್ನು ಹೋಗಗೊಟ್ಟ... ಅಂದು ಸಂಜೆ ಭರಮ ತಿರುಗಿ ಬರಲಿಲ್ಲ. ಚೆನ್ನಿಗೆ ಭರಮ ಬ... ಇದ್ದುದಕ್ಕೆ ಸಿಟ್ಟು ಬಂದಿತು. ಮುಂಜಾನೆ ಕರೆದುಕೊಂ... ಹೋಗದೆ ಇದ್ದುದಕ್ಕಾಗಿ ಬಂದ ಸಿಟ್ಟು, ಭರಮ ಸಂಜೆಗೆ ತಿರು... ಬಾರದ್ದರಿಂದ ಮರುಕಳಿಸಿ ಬಂದಿತ್ತು. ಅಮಾವಾಸ್ಯೆ ಸಮೀಪಿಸ... ತ್ತಿದ್ದುದರಿಂದ, ಹೊರಗೆ ಕವಿದಿದ್ದ ಕತ್ತಲೆ ಅವಳಿಗೆ ಭಯವನ್ನು ಹುಟ್ಟಿಸಿತ್ತು. ಭರಮ ತಿರುಗಿ ಬಾರದ್ದರಿಂದುಂಟಾದ ನಿರಾ...

…ದಕ್ಕೆ ಪುಟ ಕೊಟ್ಟಿತ್ತು. ಆದರೂ ಮಳೆಯಾಗಿರಬಹುದಾದ-…ಿಂದ ವಸತಿ ಮಾಡಿರಬಹುದೆಂದು ತಿಳಿದು, ಚೆನ್ನಿ ಬೇಗನೆ ಊಟ …ಾಡಿ, ಬಾಗಿಲು ಹಾಕಿಕೊಂಡು ಮಲಗಿದ್ದಳು. ರಾತ್ರಿ ಹತ್ತು …ಟೆಯಾಗಿರಬಹುದು; ಯಾರೋ ಹೊರಗಿನಿಂದ ಬಾಗಿಲು ಬಡಿ-…ದಂತಾಯಿತು. ಚೆನ್ನಿ 'ಯಾರು?' ಎಂದಳು. ಹೊರಗಿನಿಂದ 'ನಾನು ಹನುಮಣ್ಣ!' ಎಂದು ಉತ್ತರ ಬಂತು. ಹನುಮಣ್ಣನ …ನ್ನಿ ಕೇಳಿದೊಡನೆ ಚೆನ್ನಿಗೆ ಗಾಬರಿ ಎನಿಸಿತು. 'ಇಷ್ಟು ರಾತ್ರಿಯ ಹೊತ್ತಿನಲ್ಲಿ ಇವನೇಕೆ ಬಂದ?' ಎಂದುಕೊಂಡಳು. ಒಳಗಿನಿಂದಲೇ "…ಅವರು ಊರಲ್ಲಿಲ್ಲ" ಎಂದು ಹೇಳಿದಳು. "ಹೌದು, ಆದರೆ …ನನ್ನೊಂದು ಪತ್ರ ಕೊಟ್ಟು ಕಳಿಸಿದ್ದಾನೆ!" ಎಂದು ಉತ್ತರ …ಂದಿತು 'ಪತ್ರ' ಎಂದ ಕೂಡಲೆ ಚೆನ್ನಿಗೆ ಗಾಬರಿಯಾಯಿತು. …ದ್ದು ಹೋಗಿ ಬಾಗಿಲನ್ನು ತೆರೆದಳು. ಹನುಮ ಒಳಗೆ ಬಂದ. …ನ್ನಿ ದೀಪ ದೊಡ್ಡದು ಮಾಡಲು ಮುಂದೆ ಕೈ ಚಾಚಿದಳು. …ನುಮ ಬೇಗನೆ ಬಂದವನೇ ಅವಳ ಕೈಹಿಡಿದೆಳೆದ. ಚೆನ್ನಿಗೆ ಚೀರ …ಕೆನಿಸಿತು. 'ಆ' ಎಂದು ಬಾಯಿ ತೆರೆದಳು. ಆದರೆ ಹನು-…ಣ್ಣ ಜಗ್ಗಿದ ರಾವಿನ ರಭಸ, ಅವಳ ಬಾಯನ್ನು ಮುಚ್ಚಿಸಿತು. …ನವನ್ನು ದೊಡ್ಡದು ಮಾಡಲು ಹೋದ ಕೈ ದೀಪವನ್ನಾರಿಸಿತು.

ಮರುದಿನ ಮಧ್ಯಾಹ್ನ ಭರಮ ಬಂದ. ಭರಮನನ್ನು ನೋಡಲು …ನ್ನಿಗೆ ಗಾಬರಿ ಎನಿಸಿತು. ಅದೇಕೋ ಅವಳ ಮನಸ್ಸು ಭರಮನ …ಂದೆ ನಿಲ್ಲಲು ಅಂಜುತ್ತಿತ್ತು. ಆದರೂ ಅದನ್ನು ಹತ್ತಿಕ್ಕಿ-…ಂಡು ಭರಮನ ಮುಂದೆ ನಿಂತಳು; ಆದರೆ ಆ ನೈಜನಗೆ, …ಖದ ಮೇಲೆ ಬರಲಿಲ್ಲ. ಭರಮ ಇನ್ನೂ ಚೆನ್ನಿಯ ಸಿಟ್ಟು …ದಿಲ್ಲವೆಂದು ತಿಳಿದು "ನಿನ್ನೆ ಮಳೆಯಾಯಿತು; ಅದ್ದರಿಂದ …ಲಾಗಲಿಲ್ಲ ಚೆನ್ನಿ!" ಎಂದು ಹೇಳಿದ. ಚೆನ್ನಿ 'ಹೂಂ' ಎಂದಿಷ್ಟೇ …ಹೇಳಿ ಸುಮ್ಮನಾದಳು.

ಚೆನ್ನಿ ಭರಮರಲ್ಲಿ ಕ್ರಮೇಣ ಮಾತು-ಕತೆ ಕಡಿಮೆಯಾಗುತ್ತಲೇ …ಹೋಯಿತು. ಅದಕ್ಕೆ ಕಾರಣ ಚೆನ್ನಿಯ ಸಿಟ್ಟು—ಎಂದು ಭರಮ …ತಿಳಿದುಕೊಂಡಿದ್ದರೆ, ಚೆನ್ನಿಯ ಮನಸ್ಸು ಅಂಜಿ ಮಾತುಕತೆ-…ಯಾಡಲು ಹಿಂಜರಿಯುತ್ತಿತ್ತು. ಹೆಣ್ಣು "ಕಾಲು ಜಾರು"ವುದೇ …ಒಮ್ಮೆ ಕಾಲು ಜಾರಿದರೆ ತೀರಿತು, ಅದಕ್ಕೆ ಕೊನೆಯೇ ಇಲ್ಲ …ನ್ನುವಂತೆ, ಅದು ಬೆಳೆಯುತ್ತಲೇ ಹೋಗುತ್ತದೆ. ಒತ್ತಾಯ-…ದಿಂದ ಕಾಲುಜಾರಿದ ಚೆನ್ನಿ, ಹನುಮಣ್ಣನೊಡನೆ ಹಾಗೆಯೇ …ವಹಾರ ಸಾಗಿಸುತ್ತಿದ್ದಳು. ಹನುಮನಿಗೆ—ನೀರಿಗೆ ಹೋದಾಗ …ಯ ದಡದಲ್ಲಿಯೋ, ಭರಮ ಅಂಗಡಿಗೆ ಹೋದಾಗ—ಇಲ್ಲವೆ …ಗೆ ಹೋದಾಗ—ಮನೆಯಲ್ಲಿಯೋ, ಭೆಟ್ಟಿಕೊಡುತ್ತಿದ್ದಳು.

ಹೀಗೆಯೇ ಒಂದು ತಿಂಗಳು ಕಳೆಯಿತು. ಆ ತಿಂಗಳು ಚೆನ್ನಿ …ಮುಟ್ಟಾಗಲಿಲ್ಲ. ಭರಮಣ್ಣ ಅದನ್ನು ಕೇಳಿ ಸಂತೋಷಪಟ್ಟ. …ತಾನು ಒಂದು ಕೂಸಿನ ತಂದೆಯಾಗಲಿರುವೆನೆಂದು ಸಂತೋಷ …ನಿಗೆ. ಆದರೆ ಚೆನ್ನಿಗೆ ಅದು ಯೋಚನೆಯನ್ನುಂಟು ಮಾಡಿತು. ನಾಳೆ ಕೂಸು ಹನುಮನನ್ನು ಹೋಲಿತರೆ? ತನ್ನ ಹಾಗೂ ಹನುಮನ ಗುಟ್ಟು ರಟ್ಟಾದರೆ? ತಾನು ಮೋಸಮಾಡಿದ್ದು ಭರಮನಿಗೆ ಗೊತ್ತಾದರೆ? ಚೆನ್ನಿಗೆ ಪ್ರಶ್ನೆಗಳ ಮೇಲೆ ಪ್ರಶ್ನೆಗಳು ಏಳಲಾರಂಭಿಸಿದುವು. ಇದಕ್ಕೆ ಹನುಮನನ್ನೇ ಕೇಳಬೇಕೆಂದು ನಿಶ್ಚಯಿಸಿದಳು. ಅಂದು ಸಂಜೆ, ನದಿಯ ದಡದ ಮೇಲೆ ಹನುಮನನ್ನು ಭೆಟ್ಟಿಯಾದಾಗ, ಚೆನ್ನಿ ಹನುಮನ ಮುಂದೆ ಈ ಪ್ರಶ್ನೆಯನ್ನಿಟ್ಟಳು. ಆದರೆ ಅವನಿಂದ ಬೇರೆ ಉತ್ತರವೇ ಬಂತು: "ಚೆನ್ನಿ, ನಾನಿಂದು ರಾತ್ರಿ ಊರಿಗೆ ಹೋಗುತ್ತೇನೆ" ಚೆನ್ನಿಗೆ ಮತ್ತಷ್ಟು ಗಾಬರಿಯಾಯಿತು. ಅವಳು ಅಳುತ್ತ, ತನ್ನ ಮೇಲಿನ ಪ್ರಸಂಗವನ್ನು ತಿಳಿಸಿ ಹೇಳಿದಳು. ಹನುಮ ನಗುತ್ತ "ಅಯ್ಯೋ ಚೆನ್ನೀ, ಇಷ್ಟಕ್ಕೆ ಅಳುತ್ತಾರೆಯೆ? ನನ್ನ ಮಿಲಿಟರಿ ಜೀವನದಲ್ಲಿ ಇಂಥ ಎಷ್ಟೋ ಹೆಣ್ಣುಗಳನ್ನು ನೋಡಿದ್ದೇನೆ!" ಎಂದು ಹೇಳಿದ. ಹನುಮನಿಗೆ ಇದು ಪೌರುಷದ ಮಾತಾದರೂ, ಚೆನ್ನಿಗೆ ಗಾಯದ ಮೇಲೆ ಬರೆ ಕೊಟ್ಟಂತಾಯಿತು. ತನ್ನ ಬಾಳೂ ಎಷ್ಟೋ ಹೆಣ್ಣುಗಳಂತೆ ಆದರೆ? ಚೆನ್ನಿಗೆ ತಡೆಯಲಾಗಲಿಲ್ಲ: "ಹನುಮ, ನಾನಿಲ್ಲಿರಲಾರೆ! ನಾನೂ ನಿನ್ನೊಡನೆ ಬರುತ್ತೇನೆ. ಕರೆದುಕೊಂಡು ನಡೆ!" ಎಂದಳು. ಹನುಮ ಮೊದಲು 'ಒಲ್ಲೆ' ಎಂದ ಕೊನೆಗೆ ಚೆನ್ನಿ "ಹಾಗಾದರೆ

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ನಾನಂತೂ ಹೇಗೂ ಹಾಳಾಗಿದ್ದೇನೆ. ನೀನು ನನ್ನನ್ನು ಬಲಾತ್ಕರಿಸಿರುವಿ ಎಂದು ಊರ ಜನರಿಗೆ ಸಾರಿ ಹೇಳಿಬಿಡುತ್ತೇನೆ!" ಎಂದು ಹೇಳಿದಳು. ಹನುಮ ಯೋಚಿಸಿದ. ಅವನ ಮುಖದ ಮೇಲೊಂದು ಮಂದಹಾಸ ಹಾಯ್ದು ಹೋಯಿತು. ಕೊನೆಗೆ ಕರೆದುಕೊಂಡು ಹೋಗಲು "ಅನಿವಾರ್ಯವಾಗಿ" ಒಪ್ಪಿದ.

* * * *

ಹನುಮ ಚೆನ್ನಿಯನ್ನು ಕರೆದುಕೊಂಡು ಪಟ್ಟಣಕ್ಕೆ ಬಂದ. ಪಟ್ಟಣದಲ್ಲಿ ಟಾಂಗಾ, ಒಂದು ಸಣ್ಣ ಓಣಿಯಲ್ಲಿ, ಒಂದು ಸಣ್ಣ ಮನೆಯ ಮುಂದೆ ನಿಂತಿತು. ಒಳಗಿನಿಂದ ಮುದುಕಿಯೊಬ್ಬಳು ಹೊರಗೆ ಬಂದಳು. ಆವಳ ತಂಬಾಕು ತುಂಬಿದ ಬಾಯಿ, ಅವಳ ಉಟ್ಟ ಉಡಿಗೆ ತೊಡಿಗೆ, ಹಾವಭಾವ ನೋಡಿ ಚೆನ್ನಿಗೆ ಹೇಗೋ ಎನಿಸಿತು. ಹನುಮ ಚೆನ್ನಿಯನ್ನು ಒಳಗೆ ಕರೆದುಕೊಂಡು ಹೋಗಿ "ಚೆನ್ನಿ, ಈ ಊರಲ್ಲಿ ಮನೆಸಿಕ್ಕುವವರೆಗೆ ನಾವಿಲ್ಲಿಯೇ ಇರಬೇಕು" ಎಂದು ಹೇಳಿದ. ಚೆನ್ನಿ "ಇದು ಯಾರ ಮನೆ?" ಎಂದು ಕೇಳಿದಳು. "ಆಗಲೇ ಬಂದಿದ್ದಳಲ್ಲ, ಆ ಮುದುಕಿಯ ಮನೆ ಇದು. ಅವಳ ಹೆಸರು ಬಂಗಾರವ್ವ" ಎಂದು ಹೇಳಿ, "ನೀನಿಲ್ಲಿಯೇ ಇರು, ನಾನು ಹೊರಗೆ ಹೋಗಿ ನಾಲ್ಕು ಕಡೆ ಮನೆಸಿಕ್ಕುವುದೇನೆಂಬುದನ್ನು ವಿಚಾರಿಸಿಕೊಂಡು ಬರುತ್ತೇನೆ" ಎಂದು ಹೇಳಿ ಹೋದ.

ಚೆನ್ನಿ, ಹನುಮ ಹೋದ ಮೇಲೆ ಬಾಗಿಲುಹಾಕಿಕೊಂಡು ಒಳಗೆ ಕುಳಿತಳು. ಹೊತ್ತು ಹೋಗದಂತಾಯಿತು. ಕಿಟಕಿಯಲ್ಲಿ ಮುಖ ಹಾಕಿ ಹೊರಗೆ ನೋಡತೊಡಗಿದಳು. ಹೊರಗಿನ ದೃಶ್ಯ ಕಂಡು ಆಶ್ಚರ್ಯವಾಯಿತು. ಬೇಕಾದ ಗಂಡಸರು ಬಂದು ಬೇಕಾದ ಹೆಂಗಸರೊಡನೆ ಹೋಗುತ್ತಿದ್ದರು. ಚೆನ್ನಿಗೆ ಅಸಹ್ಯವೆನಿಸಿ ಒಳಗೆ ಬಂದು ಮಲಗಿಕೊಂಡಳು. ಸಾಯಂಕಾಲ ಹನುಮ ಬಂದ. ಹನುಮನೊಡನೆ ಮತ್ತಾರೋ ಬಂದಿದ್ದರು. ಹನುಮ ಬಂದು ಹೇಳಿದ: "ಚೆನ್ನಿ, ಇವರು ಬಸಪ್ಪ ಸಾಹುಕಾರರು! ಇವರು ನಿನ್ನನ್ನು ನೋಡಿಕೊಳ್ಳುತ್ತಾರೆ. ಬಂಗಾರವ್ವ ನಿನಗೆ ಯಾವ ರೀತಿಯಿಂದಲೂ ಕಡಿಮೆಮಾಡುವುದಿಲ್ಲ." ಚೆನ್ನಿಗೆ ಗಾಬರಿಯಾಯಿತು 'ಹನುಮ ಪಟ್ಟಣಕ್ಕೆ ಕರೆದುಕೊಂಡು ಬಂದು ತನ್ನನ್ನು ಮೋಸಮಾಡಿದ!' ಎನ್ನಿಸಿತು. ಆವಳು ಹನುಮನನ್ನು ಪರಿಪರಿಯಿಂದ ಬೇಡಿಕೊಂಡಳು. ಆದರೆ ಅವನು ಕೇಳದೆ ಹೋಗಿಬಿಟ್ಟ.

ಚೆನ್ನಿಗೆ ಈಗ ಉಳಿದುವು ಎರಡೇ ಹಾದಿ: ಬಂಗಾರವ್ವನ ಮಾತಿನಂತೆ ಕೇಳಬೇಕು—ಒಂದು. ಇಲ್ಲವಾದಲ್ಲಿ ಹೊರಗೆ ಹೋಗಿ ಆತ್ಮಹತ್ಯಮಾಡಿಕೊಳ್ಳಬೇಕು! ಆತ್ಮಹತ್ಯಮಾಡಿಕೊಳ್ಳಬೇಕೆಂದರೆ ತಾನೊಂದು ಕೂಸಿನತಾಯಿ. ತಾನು ಸಾಯುವುದಲ್ಲದೆ ಕೂಸನ್ನೂ ಕೊಲ್ಲಬೇಕು. ಇಲ್ಲವಾದಲ್ಲಿ ಕೂಸಿಗಾಗಿ ತನ್ನ ಮಾನದ ಬಲಿ ಕೊಡಬೇಕು. ಆದರೆ ಮಾನ ಉಳಿದಿದೆಯೆಲ್ಲಿ? ಮಾನ ಒಮ್ಮೆ ಹೋದರೂ ಅಷ್ಟೇ, ಹತ್ತು ಸಲ ಹೋದರೂ ಅಷ್ಟೇ! ಆದ್ದರಿಂದ ಕೂಸಿಗಾಗಿ ತನ್ನ ಮಾನದ ಬಲಿ ಕೊಡಲು ಚೆನ್ನಿ ನಿಶ್ಚಯಿಸಿಕೊಂಡಳು. ಬಂಗಾರವ್ವನ ಮನೆ ಚೆನ್ನಿಗೆ ಆಶ್ರಯವಾಯಿತು.

ಬಸಪ್ಪ ಸಾಹುಕಾರರು ಚೆನ್ನಿಯ ಸಾಹುಕಾರರಾದರು— ಆದ[ರೆ] ಕೆಲ ದಿನಗಳ ಮಟ್ಟಿಗೆ ಮಾತ್ರ! ಮೇಲಿಂದ ಮೇಲೆ ಸಾಹುಕಾರ[ರು] ಬದಲಾಗುತ್ತಿದ್ದರು. ಒಮ್ಮೊಮ್ಮೆ ಇಬ್ಬರು ಮೂವರು ಸಾಹುಕಾ[ರ]ರಿಗೂ ಆಶ್ರಯ ಕೊಡಬೇಕಾಗುತ್ತಿತ್ತು.

ಒಂದು ವರ್ಷ ಕಳೆದುಹೋಯಿತು. 'ಚೆನ್ನಿ ಈಗ ಹೆಣ್ಣು ಕೂಸೊಂದರ ತಾಯಿ. ಬಂಗಾರವ್ವ ಚೆನ್ನಿಯನ್ನು ಪೂರ್ತಿ 'ಉದ್ಯೋಗ'ಕ್ಕೆ ಹಚ್ಚಿದ್ದಾಳೆ. ಆದರ ಹೊರತು ನಿರ್ವಾಹವಿಲ್ಲ. ಬಂಗಾರವ್ವನಾದರೂ ಎಷ್ಟು ದಿನ ಸಾಕಿಯಾಳು? ಈಗ ಚೆನ್ನಿಯ ಮೇಲೆ ಬಹಳ ಭಾರಬಿದ್ದಿದೆ. ಒಮ್ಮೊಮ್ಮೆ ಒಂದೊಂದು ದಿನ ನಾಲ್ಕೈದು ಜನರಿಗೆ ಆಶ್ರಯವೀಯಬೇಕಾಗುತ್ತದೆ. ಚೆನ್ನಿ[ಗೆ] ಜೀವನ ಬೇಸರವಾಗಿದೆ. ಆದರೆ ಮಾಡುವಳೇನು? ಮಗ[ಳ] ಮುಖ ನೋಡಿ, ಮಗಳಿಗಾಗಿ, ತನ್ನ ದೇಹವನ್ನು ಮಾರುತ್ತಾಳೆ. ತನ್ನ ಗತಜೀವನವನ್ನು ನೆನೆದುಕೊಂಡು ಅಳುವುದೊಂದೇ ಹಾದಿ.

ಅವೊತ್ತೂ ಚೆನ್ನಿ ನಾಲ್ಕು ಜನರಿಗೆ ಆಶ್ರಯವಿತ್ತು, ಅದೇ ತಾನೆ ಮಗುವನ್ನು ಮಗ್ಗುಲಲ್ಲಿರಿಸಿ ಮಲಗಿದ್ದಳು. ಬಂಗಾರವ್ವ ಬಂದು 'ಸಾಹುಕಾರ ಸಂಗಪ್ಪನವರು ಬಂದಿದ್ದಾರೆ!' ಎಂದು ಬಾಗಿಲು ತಟ್ಟಿದಳು. ಚೆನ್ನಿಗೆ ತಡೆಯದಾಗಿ ಬೈದು ಕಳಿಸಿದಳು. ಚೆನ್ನಿ ಬಂಗಾರವ್ವನನ್ನು ಬೈದೇನೋ ಕಳಿಸಿದಳು; ಆದರೆ ಬಂಗಾರವ್ವ ನಾಳೆ ತನ್ನನ್ನು ಮನೆಬಿಟ್ಟು ಹೊರಗೆ ಹಾಕಿದರೆ ತನ್ನ ಗತಿಯೇನು! ಆದಕ್ಕೂ ಹೆಚ್ಚಾಗಿ ಕೂಸಿನ ಗತಿಯೇನು? ಬಂಗಾರವ್ವನ ಮನೆ ಬಿಟ್ಟರೆ ಇನ್ನೊಬ್ಬರ ಮನೆ; ಆದರೆ ಅಲ್ಲಿಯೂ ಇದೇ ಹಣೆಯಬರಹ! ಅಂದಮೇಲೆ ಬಂಗಾರವ್ವನ ಮನೆ ಏನು ಕೆಟ್ಟ?— ಎಂದು ವಿಚಾರಮಾಡಿದಳು. 'ನೋಡೋಣ, ನಾಳೆ ಬೆಳಗಾದರೂ ಆಗಲಿ!' ಎಂದು ಕಣ್ಣುಮುಚ್ಚಿದಳು,

ಚೆನ್ನಿ ಕಣ್ಣುಮುಚ್ಚಿದರೆ ನಿದ್ರೆ ಬರಬೇಕಲ್ಲ! ಮಾನವನ ಚಿಂತೆಯ ಪರಿಣಾಮ ನಿದ್ರೆಯ ಮೇಲೆ ಬಹುಬೇಗ ಆಗುತ್ತದೆಂದು ತೋರುತ್ತದೆ. ಚೆನ್ನಿ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ಹೊರಳಿದಳು. ಏನು ಮಾಡಿದರೂ ನಿದ್ರೆಬರಲಿಲ್ಲ. ಹೆಡ್‌ಕ್ವಾರ್ಟರಿನ ಗಡಿಯಾಳ, ಒಂದು ಗಂಟೆಯನ್ನು ಬಾರಿಸಿತು. ಚೆನ್ನಿಗೆ ಸರಿಯಾ[ಗಿ] ವೇಳೆ ಎಷ್ಟಾಗಿದೆಯೆಂಬುದು ತಿಳಿಯದಿದ್ದರೂ, ಮಧ್ಯರಾತ್ರಿ ಮೀರಿದೆ ಎಂದೆನಿಸಿತು.

ಮತ್ತೆ 'ಕಟ್ ಕಟ್' ಬಾಗಿಲು ಬಡಿದದ್ದಾಯಿತು. ಚೆನ್ನಿ 'ಯಾರು?' ಎಂದಳು. 'ನಾನು ಬಂಗಾರವ್ವ!' ಎಂದು ಉತ್ತರ ಬಂತು. "ಚೆನ್ನಿ ದೊಡ್ಡ ಸಾಹುಕಾರರೊಬ್ಬರು ಬಂದಿದ್ದಾರೆ ಸುಮ್ಮನೆ ಬಾಗಿಲುತೆಗೆ. ಇಲ್ಲವಾದರೆ ನಾಳೆ ಮನೆಬಿಟ್ಟು ಹೊರಗೆ ಹೋಗಬೇಕಾದೀತು" ಎಂದು ಗದ್ದರಿಸಿದಳು. ಚೆನ್ನಿ "ಹೂಂ" ಎಂದು ಬಾಗಿಲು ತೆಗೆಯಲು ಎದ್ದಳು. ಹೊರಗೆ ಬಂಗಾರವ್ವ "ನೋಡ್ರಿ ಗೌಡರ! ಆಸಾಮಿ ಸ್ವಲ್ಪ ಸಿಟ್ಟಿನ್ಯಾಗದ; ಸ್ವಲ್ಪ ಸಂಭಾಳಸರಿ!" ಎಂದು ಹೇಳಿದಳು. ಹೊರಗಿನ ವ್ಯಕ್ತಿ "ಅದಕ್ಯಾಕ ಕಾಳಜಿ ಬಿಡುನೀ" ಎಂದು ಒದರಿ ಹೇಳಿತು; ಚೆನ್ನಿಗೆನಿಸಿತು,

ವ್ಯಕ್ತಿ ಕುಡಿದು ಬಂದಿದೆಯೆಂದು. ಚೆನ್ನಿ ಬಾಗಿಲು ತೆಗೆದಳು. ಹೊರಗಿನ ವ್ಯಕ್ತಿ ಒಳಗೆ ಬಂದೊಡನೆ, ಬಂಗಾರವ್ವ ಹೊರಗೆ ಬಾಗಿಲು ಹಾಕಿಕೊಂಡು ಹೋದಳು. ವ್ಯಕ್ತಿ ಜೋಲಿಹೊಡೆಯುತ್ತ ಒಳಗೆ ಬಂದುದೇ, ದೂರ ನಿಂತ. ಚೆನ್ನಿಯ ಸೀರೆಯ ಉಡಿಯನ್ನು ಹಿಡಿದು ಜಗ್ಗಿತು. ಚೆನ್ನಿಗೆ ಈ ಬಲತ್ಕಾರ ತಡೆಯಲಾಗಲಿಲ್ಲ. ಸಿಟ್ಟಿನಿಂದ ಸರಿದು, ಮುಂದೆ ಬಂದವಳೇ ಆ ವ್ಯಕ್ತಿಯ ಕೆನ್ನೆಗೊಂದು ಬಲವಾಗಿ ಬಿಗಿದಳು. ವ್ಯಕ್ತಿಗೆ ನಿಶೆ ಇಳಿದಂತಾಯಿತು. ಸಿಟ್ಟುಬಂತು, ಸಿಟ್ಟಿನಲ್ಲಿ "ನನ್ನ ಮ್ಯಾಲೆ ಕೈ ಎತ್ತೀಯಾ ರಂ...." ಎಂದವನೇ ಮುನ್ನುಗ್ಗಿದ. ವ್ಯಕ್ತಿಯ ಧ್ವನಿ ಕೇಳಿ ಚೆನ್ನಿಗೆ ಗಾಬರಿಯಾಯಿತು. ಧ್ವನಿ ಪರಿಚಯದ್ದೆನಿಸಿತು. ಚೆನ್ನಿ ದೀಪ ದೊಡ್ಡದು ಮಾಡಿ, ವ್ಯಕ್ತಿಯ ಮುಖವೆದುರು ಹಿಡಿದಳು. ಅಹುದು, ಅದೇ ಮುಖ; ಭರಮ! 'ಭರಮಾ' ಎಂದವಳೇ ಚೆನ್ನಿ, ಆ ವ್ಯಕ್ತಿಯ ಪಾದದ ಮೇಲೆ ಬಿದ್ದು ಅಳಹತ್ತಿದಳು. ವ್ಯಕ್ತಿಗೀಗ ಸಂಪೂರ್ಣ ಎಚ್ಚರು ಬಂತು. "ಚೆನ್ನೀ" ಎಂದು ಭರಮ ಅವಳನ್ನೆತ್ತಿ ಹಿಡಿದ.

ಭರಮ ಕೇಳಿದ : "ಚೆನ್ನೀ ನೀನಿಲ್ಲಿ ಹೇಗೆ ಬಂದೆ ?" ಚೆನ್ನಿ ಎಲ್ಲವನ್ನೂ ಹೇಳಿದಳು. ಭರಮ ತನ್ನ ಕಥೆಯನ್ನೂ ಹೇಳಿದ. "ಚೆನ್ನೀ, ನೀನು ನನ್ನನ್ನು ಬಿಟ್ಟುಬಂದ ಮೇಲೆ, ನನ್ನ ಬಾಳು ನಿಸ್ಸಾರವೆನಿಸಿತು. ನಾನು ನಿನಗೆ ಏನು ಕಡಿಮೆಮಾಡಿದೆ ಎನ್ನುವುದೇ ನನಗೆ ಗೊತ್ತಾಗಲಿಲ್ಲ. ನೀನು ಹೋದ ಮೇಲೆ, ಅನೇಕರು ಹೆಣ್ಣು ಕೊಡಲು ಬಂದರು. ಬೇರೆ ಮದುವೆಯಾಗಲು ಜುಲುಮೆ ಮಾಡಿದರು. ಆದರೆ ಚೆನ್ನಿಯ ಯೋಗ್ಯತೆ ಯಾವ ಹೆಣ್ಣಿಗೂ ಬಾರದೆಂದು, ಎಲ್ಲವನ್ನೂ ಬಿಟ್ಟೆ. ಮುಂದೆ ಕೆಲದಿನಗಳ ಮೇಲೆ ಕೆಲ ಗೆಳೆಯರು, ನನ್ನನ್ನೊಂದಂಗಡಿಗೆ ಒಯ್ದರು. ಅದು ಮದ್ಯದಂಗಡಿ. ಮೊದ-ಮೊದಲು ಒಲ್ಲೆನೆಂದರೂ, ಗೆಳೆಯರ ಒತ್ತಾಯಕ್ಕೆ ಒಮ್ಮೆ ಕುಡಿದೆ. ಆದರೆ ಆ ಒಮ್ಮೆ—ಇನ್ನೊಮ್ಮೆ, ಇನ್ನೊಮ್ಮೆಯಾಗಿ, ಬೆಳೆಯುತ್ತಲೇ ನಡೆಯಿತು. ಆ ಗೆಳೆಯರು ಬಂಗಾರವ್ವನಂಥ ಒಬ್ಬಬ್ಬರ ಪರಿಚಯ ಮಾಡಿಕೊಟ್ಟರು. ಮದ್ಯಸೇವನೆ ಮುಂದಿನ ಹೆಜ್ಜೆಗೆ ಎಡೆಕೊಟ್ಟಿತು. ಈ ಹೊತ್ತು ಒಬ್ಬರ ಮನೆಯಾದರೆ ಮತ್ತೊಂದು ದಿನ ಮತ್ತೊಬ್ಬರಲ್ಲಿ! ಎಲ್ಲಿಯಾದರೂ ತಿಂದು, ಎಲ್ಲಿಯಾದರೂ ಕುಡಿದು, ಯಾರಲ್ಲಿಯಾದರೂ ಮಲಗುವುದು—ಇದೇ ಕಾರ್ಯಕ್ರಮವಾಗಿ ಬಿಟ್ಟಿತು. ಇಂದು ಗೆಳೆಯರು ಇಲ್ಲಿಗೆ ಕರೆದುಕೊಂಡು ಬಂದರು. ಆದರೆ ಇಂದಿನ ದಿನ ಒಳ್ಳೆಯದೆನ್ನಬೇಕು; ಚೆನ್ನಿ! ಅಕಸ್ಮಾತ್ ನೀನು ಸಿಕ್ಕೆ!" ಎಂದು ಹೇಳಿ ಮುಗಿಸಿದ. ಚೆನ್ನಿಯ ಕಣ್ಣಲ್ಲಿ ನೀರು ಒಂದೇ ಸಮನೆ ಹರಿಯುತ್ತಿದ್ದುವು. ಚೆನ್ನಿ "ನನ್ನನ್ನು ಕ್ಷಮಿಸು, ನಾನು ಪಾಪಿ!" ಎಂದಳು. ಭರಮ "ತಪ್ಪು ನಿನ್ನದಲ್ಲ ಚೆನ್ನೀ. ಇರಲಿ. ನಮ್ಮ ಮಗು ಎಲ್ಲಿ?" ಎಂದ. "ಬೇಡಿರಿ, ಅದನ್ನು ಮುಟ್ಟಬೇಡಿರಿ! ಅದು ನಿಮ್ಮ ಮಗು ಎಂದು ಹೇಳಲು ನನಗೆ ನಾಚಿಕೆಯಾಗುತ್ತದೆ. ಅದು ಪಾಪದ ಪಿಂಡ" ಎಂದಳು. "ಪಾಪದ ಪಿಂಡ ಅಲ್ಲ ಚೆನ್ನಿ! ಅದು ಪುಣ್ಯದ ಫಲ! ಅದಕ್ಕಾಗಿಯಾದರೂ ನೀನು ಬದುಕಿದ್ದುದರಿಂದ ನನಗೆ ನೀನು ಈ ಹೊತ್ತು ಸಿಗುವಂತಾಯಿತು. ನಡೆ ಚೆನ್ನಿ! ನಾಳೆ ಮಗುವಿನೊಡನೆ ಊರಿಗೆ ಹೋಗೋಣ" ಎಂದ ಭರಮ. "ಊರಿಗೆ? ಇನ್ನೂ ಈ ಪಾಪಿಯೊಡನೆ ಇರಬಯಸುವಿರಾ?" ಎಂದಳು ಚೆನ್ನಿ.

"ನೀನು ಪಾಪಿಯಲ್ಲ ಚೆನ್ನಿ! ನೀನಿಲ್ಲದ ಬಾಳು ನನಗೆ ನಿಸ್ಸಾರ. ನನ್ನ ಬಾಳನೌಕೆಗೆ ನೀನೇ ಚುಕ್ಕಾಣಿ!" ಎಂದ. ಚೆನ್ನಿಗೆ ಯಾವುದೂ ತೋರಲಿಲ್ಲ. "ಸ್ವಾಮಿ, ನೀವು ದೇವರ ಸಮಾನ!" ಎಂದು ಭರಮನ ಪಾದಗಳ ಮೇಲೆ ಬಿದ್ದಳು.

ಚೆನ್ನಿ ಭರಮ ಅದೆಷ್ಟೋ ಹೊತ್ತು ಮನಬಿಚ್ಚಿ ಮಾತನಾಡಿದರು. ಭರಮ ಹಿಂದಿನದೆಲ್ಲವನ್ನೂ ಮರೆತು, ತನ್ನ ಭವಿತವ್ಯದ ಕನಸುಗಳನ್ನು ಒಂದೊಂದಾಗಿ ಹೇಳಿದ. ಚೆನ್ನಿಯ ಜತೆಯಲ್ಲಿ ಅವನಿಗೆ ಹೊತ್ತು ಹೋದದ್ದು ಗೊತ್ತೇ ಆಗಲಿಲ್ಲ. ಹೊರಗೆ ಗಡಿಯಾರದ ಗಂಟೆ ನಾಲ್ಕು ಹೊಡೆದಾಗಲೇ ಭರಮನಿಗೆ ಗೊತ್ತು, ತಾವಿನ್ನೂ ಎಚ್ಚರವಾಗಿದ್ದೇವೆಂಬುದು. ಭರಮ ಹೇಳಿದ: "ಇನ್ನು ಮಲಗು ಚೆನ್ನಿ! ನಾಳೆ ಬೆಳಗ್ಗೆ ಮತ್ತೆ ಊರಿಗೆ ಹೋಗಬೇಕು!" ಚೆನ್ನಿ 'ಹೂಂ' ಎಂದು ಮುಸುಕೆಳೆದಳು. ಭರಮನೂ ಮುಸುಕು ಹಾಕಿದ.

ಭರಮನಿಗೇನೋ ನಿದ್ರೆ ಹತ್ತಿತು. ಆದರೆ ಚೆನ್ನಿಗೆ ನಿದ್ರೆ ಹತ್ತಬೇಕಲ್ಲ! ಚೆನ್ನಿಗೆ ಗತಕಾಲದ ಪಾಪಕೃತ್ಯಗಳು ಭೂತದಂತೆ ಮುಂದೆ ನಿಂತು ಭವಿತವ್ಯದ ಭಯವನ್ನು ಸೂಚಿಸುತ್ತಿದ್ದುವು. ತಾನು ಭರಮನಿಗೆ ಯೋಗ್ಯಳಾದ ಹೆಂಡತಿಯೇ ?— ಎಂಬ ಪ್ರಶ್ನೆ



ಅವಳ ಮನಸ್ಸಿನ ಮುಂದೆ ಮೇಲಿಂದ ಮೇಲೆ ನಿಲ್ಲುತ್ತಿತ್ತು. ಅದಕ್ಕೆ 'ಹೂಂ' ಕಾರಾರ್ಥಕ ಉತ್ತರ ಚೆನ್ನಿಯ ಮನಸ್ಸಿನಿಂದ ಬರಲೊಲ್ಲದು. ತಾನು ಭರಮನಿಗೆ ಈಗಾಗಲೇ ಅನ್ಯಾಯ ಬಗೆದದ್ದು ಸಾಕಾಗಿಲ್ಲವೇ? ಭರಮನೇನೋ ದೊಡ್ಡ ಮನಸ್ಸಿನಿಂದ ತನ್ನನ್ನು ಮನ್ನಿಸಬಹುದು; ಆದರೆ ತಾನು ಅದಕ್ಕೆ ಪ್ರತಿಯಾಗಿ, ಅನೇಕ ರೋಗಗಳಿಗೆ ತುತ್ತಾದ ಈ ದೇಹವನ್ನು ಅರ್ಪಿಸಬೇಕೇ? ಛೀ! ಅದು ಹೆಚ್ಚಿನ ಪಾಪ! ಹಾಗಾದರೆ ಇನ್ನುಳಿದ ಉಪಾಯವೇನು? ನಾಳೆ ಭರಮ ತನ್ನನ್ನು ಬಿಡುವಂತಿಲ್ಲ. ಅಷ್ಟರಲ್ಲಿ ತನ್ನ ಬಾಳನ್ನು ಮುಗಿಸಿದರೆ? ಚೆನ್ನಿಗೆ ಅದು ಸಮಂಜಸವೆನಿಸಿತು. ತಾನು ಇಷ್ಟು ದಿನ ಬದುಕಿದ್ದುದು ಈ ಕೂಸಿಗಾಗಿ. ಆದರೆ ಇಂದು ಈ ಕೂಸನ್ನು ನೋಡಿಕೊಳ್ಳಲು ಯೋಗ್ಯನಾದ ವ್ಯಕ್ತಿಯನ್ನು ದೇವರು ಒದಗಿಸಿ ಕೊಟ್ಟಿದ್ದಾನೆ. ಎಂದಮೇಲೆ, ಇನ್ನು ತನ್ನ ಬಾಳಿನ ಆವಶ್ಯಕತೆಯಿಲ್ಲ. ಈ ಪಾಪಿ ದೇಹವನ್ನಿಡುವುದಕ್ಕಿಂತಲೂ ಆತ್ಮಹತ್ಯೆವೇ ಲೇಸೆಂದೆನಿಸಿತು ಈ ವಿಚಾರ ಬಂದೊಡನೆ ಚೆನ್ನಿ ಒಮ್ಮೆಲೆ ಎದ್ದಳು ದೀಪ ದೊಡ್ಡದು ಮಾಡಿ, ಏನನ್ನೋ ಹುಡುಕಾಡಲು ಸುತ್ತಲೂ ನೋಡಿದಳು. ಒಂದು ಮಗ್ಗುಲಿಗೆ ಭರಮ ಮಲಗಿದ್ದಾನೆ. ಇನ್ನೊಂದು ಮಗ್ಗುಲಿಗೆ ಮಗು ನಿದ್ರಿಸುತ್ತಿದೆ. ಭರಮನನ್ನು ನೋಡಿದೊಡನೆಯೇ ಚೆನ್ನಿಗೆ ವಿಚಾರವೊಂದು ಬಂತು. ತಾನು ಇಲ್ಲಿ ಆತ್ಮಹತ್ಯೆ ಮಾಡಿಕೊಂಡರೆ, ಆ ಅಪವಾದ ಭರಮನ ಮೇಲೆ ಬರಬಹುದು. ಭರಮ ರಾತ್ರಿ ಕುಡಿದು ಬಂದಿದ್ದನೆಂಬುದು ಬಂಗಾರಿಗೆ ಗೊತ್ತು. ಅವಳು ಭರಮನನ್ನು ಹಿಡಿಸಿದರೆ?.... ಚೆನ್ನಿಗೆ ಈ ಪ್ರಶ್ನೆಯೂ ನಿಜ ಎನಿಸಿತು. 'ನಾಳೆ ಬೆಳಗಾಗಲಿ ನೋಡೋಣ' ಎಂದು ದೀಪ ಸಣ್ಣದು ಮಾಡಿ ಮಲಗಿದಳು.

* * * *

ಮರುದಿನ ಮುಂಜಾನೆ ಭರಮ ಎದ್ದಾಗ, ಮಗ್ಗುಲಲ್ಲಿ ಚೆನ್ನಿ ಇರಲಿಲ್ಲ ಕೂಸು ಮಲಗಿ ನಿದ್ರಿಸುತ್ತಿತ್ತು. ಇಲ್ಲಿಯೇ ಎಲ್ಲಿಯಾದರೂ ಹೋಗಿರಬಹುದು—ಎಂದು ಹೊರಗೆ ಬಂದ. ಬಾಗಿಲಲ್ಲಿ ಬಂಗಾರವ್ವ ನಿಂತಿದ್ದಳು. ಭರಮ ಅವಳ ಕೈಯಲ್ಲಿ ನೂರು ರೂಪಾಯಿ ಇಟ್ಟು ಹೇಳಿದ: "ಬಂಗಾರವ್ವ, ಚೆನ್ನಿಯನ್ನು ಸಾಕಿದ್ದಕ್ಕಾಗಿ ನಿನಗೆ ಕೃತಜ್ಞತೆಗಳು. ನಾನು ಚೆನ್ನಿಯನ್ನೂ ಮಗುವನ್ನೂ ಕರೆದುಕೊಂಡು ಹೋಗುತ್ತೇನೆ." ಬಂಗಾರವ್ವ: "ಉಹೂಂ ಅದೇನೂ ನಡೆಯೋದಿಲ್ಲ. ಪೋಲೀಸರಿಗೆ ಹೇಳುತ್ತೇನೆ" ಎಂದಳು. ಭರಮ ಶಾಂತನಾಗಿ ಹೇಳಿದ: "ಅದೇ ಪೋಲೀಸರಿಂದಲೇ ನಿನ್ನನ್ನು ಜೇಲಿಗೆ ಕಳಿಸುತ್ತೇನೆ, ಬಂಗಾರಿ! ಚೆನ್ನಿ ನನ್ನ ಮದುವೆಯ ಹೆಂಡತಿ. ಅವಳನ್ನು ಓಡಿಸಿಕೊಂಡು ಬಂದು ಈ ಕೀಳು ಉದ್ಯೋಗಕ್ಕೆ ಹಚ್ಚಿರುವಿ ಎಂದು ಫಿರ್ಯಾದಿ ಮಾಡಿ, ನಿನ್ನನ್ನು ಜೇಲಿಗೆ ಕಳಿಸಬಲ್ಲೆ. ಆದರೆ ನೀನು ಚೆನ್ನಿಗೆ ಆಶ್ರಯ ಕೊಟ್ಟಿದ್ದರಿಂದಲೇ ನನಗೆ ನನ್ನ ಹೆಂಡತಿ ಮರಳಿ ದೊರೆತಳು. ಅದ್ದರಿಂದ ನಿನ್ನ ಉಪಕಾರ ಬಹಳವಾಯಿತು— ಎಂದು ನಿನ್ನನ್ನು ಸುಮ್ಮನೆ ಬಿಟ್ಟಿದ್ದೇನೆ." ಎಂದು ಹೇಳಿ ಹೊರಗೆ ಬಂದ! ಬಂಗಾರಿ ಕೈಯಲ್ಲಿಟ್ಟ ನೂರು ರೂಪಾಯಿಯ ನೋಟನ್ನು ನೋಡುತ್ತ ಸುಮ್ಮನೆ ನಿಂತಿದ್ದಳು.

ಭರಮ ಹೋಗಿ ಟಾಂಗಾ ತೆಗೆದುಕೊಂಡು ಬಂದ. ಒಳಕ್ಕೆ ಬಂದು "ಚೆನ್ನಿ ಚೆನ್ನಿ" ಎಂದು ಕೂಗಿದ. ಭರಮನಿಗೆ ಉತ್ತರ ಬರಲಿಲ್ಲ. ಬಂದು ಬಂಗಾರಿಯನ್ನು ಕೇಳಿದ. ಬಂಗಾರಿ ಗೊತ್ತಿಲ್ಲೆಂದಳು, ಭರಮನಿಗೆ ತಡೆಯುವುದಾಗಲಿಲ್ಲ. ಇಡಿ ಮನೆಯನ್ನು ಹುಡುಕಿದ. ಎಲ್ಲಿಯೂ ಕಾಣಲಿಲ್ಲ. ಭರಮನಿಗೆ ಹುಚ್ಚು ಹಿಡಿದಂತಾಯಿತು. 'ಚೆನ್ನಿ, ಚೆನ್ನಿ!' ಎಂದು ಒದರುತ್ತ ಹಿತ್ತಲಕ್ಕೆ ಬಂದ. ಬಾವಿಯ ಹತ್ತಿರ ಬಂದಾಗ, ದಡದ ಮೇಲೆ ಕೆಲವು ಬಂಗಾರದ ಆಭರಣಗಳು, ಅದರ ಕೆಳಗೆ ಒಂದು ಕಾಗದ ಕಂಡಿತು. ಆಗ ಭರಮನಿಗೆ ಸಂಶಯ ಬಂದಿತು. 'ಚೆನ್ನೀ' ಎಂದು ಒದರಿ, ಹೋಗಿ ಕಾಗದ ತೆಗೆದುಕೊಂಡು ಓದಿದ. ಓದುತ್ತಿದ್ದಂತೆಯೇ ಅವನ ಕಣ್ಣೊಳಗಿಂದ ನೀರು ಧಾರೆಯಾಗಿ ಸುರಿಯುತ್ತಿದ್ದುವು. ಮತ್ತೊಮ್ಮೆ ಓದಿದ:

"ಸ್ವಾಮಿ, ನೀವೇನೋ ನನ್ನನ್ನು ಉದಾರಹೃದಯದಿಂದ ಕ್ಷಮಿಸಿ ಕರೆದಿರಿ. ಆದರೆ ನಾನು ನಿಮ್ಮೊಡನೆ ಸಂಸಾರ ಮಾಡಲು ಯೋಗ್ಯಳಲ್ಲ! ನಾನು ತಿಳಿದೂ, ತಿಳಿದೂ ನೂರೆಂಟು ಗುಹ್ಯರೋಗಗಳಿಗೆ ತುತ್ತಾಗಿರುವ ಈ ದೇಹವನ್ನು ನನ್ನ ಸ್ವಾಮಿಗೆ ಬಡಿಸಲಾರೆ! ಇಷ್ಟು ಪಾಪವನ್ನೇ ಮಾಡಿದ್ದು ಸಾಕು! ಇದಕ್ಕೂ ಹೆಚ್ಚಿನ ಪಾಪವನ್ನು ಮಾಡಲು ಜೀವಿಸಿರುವುದಕ್ಕಿಂತಲೂ ಸಾಯುವುದೇ ಲೇಸೆನಿಸಿತು.

ನಾನಿದುವರೆಗೆ ಬದುಕಿದ್ದುದು—ನನ್ನ ಈ "ಪಾಪದ ಪಿಂಡ"-ವನ್ನು ಬೆಳೆಸಲು. ಆದರೆ ತಾವು ಉದಾರಮನಸ್ಸಿನಿಂದ ಇದನ್ನು 'ಪುಣ್ಯದ ಫಲ' ಎಂದು ಎತ್ತಿ ಹಿಡಿದಿರಿ, ಸಾಕು. ಅದನ್ನು ಸಾಕಲು ದೇವರು ಯೋಗ್ಯ ವ್ಯಕ್ತಿಯನ್ನು ಕಳಿಸಿಕೊಟ್ಟಮೇಲೆ, ನಾನು ಬದುಕಿ ಉಪಯೋಗವೇನು? ನನ್ನನ್ನು ಮರೆತು, ನನ್ನ ಕುರುಹಾಗಿ ಈ ಕೂಸನ್ನು ಸಾಕುವಿರಾಗಿ ನಂಬುತ್ತೇನೆ.

ಈ ಜನ್ಮದಲ್ಲಿಯಾಗುವುದಾಗಲಿಲ್ಲವಾದರೂ, ಮುಂದಿನ ಜನ್ಮದಲ್ಲಿಯಾದರೂ ನಿಮಗೆ ಯೋಗ್ಯಳಾದ ಸತಿಯಳನ್ನಾಗಿ ಮಾಡು ಎಂದು ದೇವರಲ್ಲಿ ಬೇಡಿಕೊಳ್ಳುತ್ತೇನೆ.

ಇತಿ ಪಾಪಿ ಚೆನ್ನಿ"

ಭರಮ "ಚೆನ್ನೀ, ನೀನು ಸತ್ತರೂ ಜೀವದಿಂದಿರುವೆ. ನೀನು ಪಾಪಿಯಲ್ಲ ಚೆನ್ನಿ! ಪಶ್ಚಾತ್ತಾಪದಿಂದ ಬೆಂದು ಪಾವನಳಾದ ಪುಣ್ಯಾತ್ಮೆ! ಈ ಕೂಸು ನನಗೆ ನಿನ್ನ ಕುರುಹಾಗಿರುವುದು!" ಎಂದು ಕೂಸನ್ನೆತ್ತಿಕೊಂಡನು.

ಚೆನ್ನಿ 'ಪಾಪದ ಪಿಂಡ'ವೆಂದಳು; ಭರಮ 'ಪುಣ್ಯದ ಫಲ' ಎಂದ. ಆದರೆ ಪಾಪ-ಪುಣ್ಯಗಳ ಪರಿವೆ ಇಲ್ಲದ ಹಸುಗೂಸು ನಸುನಗುತ್ತಿತ್ತು.

ಕೆಲವು ಹಬ್ಬಗಳು

ಶ್ರೀ. ದೇಸಾಯಿ ಪಾಂಡುರಂಗರಾಯರು,
ಎಂ. ಎ., ನೀಲಗಿರಿ

卐

ಪ್ರಾಚೀನ ಪರಂಪರೆಗೆ ಕನ್ನಡನಾಡು ಹೆಸರಾದ ದೇಶ. ಕೇವಲ ಕನ್ನಡನಾಡಿನಲ್ಲಿಯೆ ರೂಢವಾಗಿರುವ ಕೆಲವು ವಿಶಿಷ್ಟ ಜಾನಪದ ಹಬ್ಬಗಳೂ ಹಲವಾರು ಇವೆ. ಅವುಗಳ ಸಂಪ್ರದಾಯ ಪರಂಪರೆಯನ್ನು ಸಂಶೋಧಿಸಿದರೆ, ನಮ್ಮ ಸಂಸ್ಕೃತಿಯ ಚರಿತ್ರೆ ಬೆಳಕಿಗೆ ಬಂದೀತು!

卐

ಮಾನವನಿಗೆ ಮಾತು-ಮಾತಿಗೂ ತಿಳಿವಳಿಕೆ ಅಗತ್ಯ. ತಿಳಿವಳಿಕೆಯಿಂದ ಮಾಡಿದ ಕಾರ್ಯಗಳು ಸಫಲವಾಗುತ್ತವೆ. ನಾವು ಅನೇಕ ಹಬ್ಬಗಳನ್ನು ಆಚರಿಸುತ್ತೇವೆ. ಈ ನಮ್ಮ ಆಚರಣೆಯಲ್ಲಿ ಧಾರ್ಮಿಕಭಾವನೆ ಮತ್ತು ಜ್ಞಾನಕ್ಕಿಂತ ಅಂಧಶ್ರದ್ಧೆ ಮತ್ತು ಪರಂಪರಾನುಕರಣವೇ ಮುಖ್ಯವಾಗಿರುತ್ತದೆ. ಈ ನಮ್ಮ ಕುರುಡತನ ಮತ್ತು ವಿಚಾರದ ಬಡತನ ದೂರವಾಗಬೇಕು. ಹೆಚ್ಚಿನ ತಿಳಿವಳಿಕೆಯಿಂದ ನಾವು ನಮ್ಮ ಹಬ್ಬಗಳನ್ನು ಆಚರಿಸಿ, ನಮ್ಮ ಚೈತನ್ಯವನ್ನು ಬೆಳಗಿಸಬೇಕು.

ಹಬ್ಬಗಳ ವಿಚಾರದಲ್ಲಿಯ ತಿಳಿವಳಿಕೆ ಎರಡು ಬಗೆಯದು. ಒಂದನೆಯದು ಧಾರ್ಮಿಕ. ಇದರಲ್ಲಿ ಹಬ್ಬಗಳ ತಳಹದಿಯಾಗಿರುವ ಧಾರ್ಮಿಕಭಾವನೆ, ಪುರಾಣಾದಿ ಗ್ರಂಥಗಳಲ್ಲಿ ಹೇಳಿರುವ ವಿವರಣೆ, ಮುಂತಾದ ವಿಷಯಗಳು ಬರುತ್ತವೆ. ಎರಡನೆಯದು ಸಾಮಾಜಿಕ. ಈ ವಿಚಾರವನ್ನು ವಿಸ್ತರಿಸಿಕೊಂಡು, ಇದರಲ್ಲಿ ಚಾರಿತ್ರಿಕ ಪರಿಶೀಲನಕ್ಕೂ ಅವಕಾಶವನ್ನು ಕೊಡಬಹುದು. ಇಂತಹ ಪರಿಶೀಲನದಲ್ಲಿ ಹಬ್ಬಗಳ ಉಗಮ, ಪ್ರಾಚೀನತೆ, ಪರಂಪರಾಕ್ರಮ, ಅವುಗಳಲ್ಲಿ ಉಂಟಾದ ಸ್ಥಿತ್ಯಂತರಗಳು, ಅವುಗಳಿಂದ ಒದಗಿದ ಸಾಮಾಜಿಕ ಇಷ್ಟಾನಿಷ್ಟ ಪರಿಣಾಮಗಳು, ಮುಂತಾದ ಅಂಶಗಳಿಗೆ ಮಹತ್ತ್ವದ ಸ್ಥಾನವಿರುತ್ತದೆ. ಈ ಬಗೆಯ ಚಾರಿತ್ರಿಕ ಪರಿಶೀಲನವು ಈಗ ಕೆಲ ದಿನಗಳಿಂದ ನನ್ನ ಅನ್ವೇಷಣದಲ್ಲಿಯ ಒಂದು ವಿಷಯವಾಗಿದ್ದು, ಈ ವಿಚಾರದಲ್ಲಿ ಈಗಾಗಲೆ ಕೆಲವು ಬರೆಹಗಳನ್ನು ಪ್ರಕಟಿಸಿದ್ದೇನೆ.

ಈ ಅನ್ವೇಷಣದಲ್ಲಿ ನಮ್ಮ ಶಾಸನಗಳಿಂದ ದೊರಕುವ ಸಹಾಯವು ಮಹತ್ತರವಾದುದು. ಏಕೆಂದರೆ ಶಾಸನಗಳಲ್ಲಿ ನಿಶ್ಚಿತವಾದ ಕಾಲನಿರ್ದೇಶ ಇರುವುದರಿಂದ, ಅವು ವಿಶ್ವಸನೀಯ ಆಧಾರಗಳಾಗುತ್ತವೆ. ಶಾಸನಗಳಲ್ಲಿ ಕಾಣಿಸಿಕೊಳ್ಳುವ ಹಬ್ಬಗಳ ಉಲ್ಲೇಖಗಳಿಂದ ಹಬ್ಬಗಳ ಪ್ರಾಚೀನತೆ, ಪೂರ್ವದ ಹೆಸರು, ಅವುಗಳಲ್ಲಿ ಕಾಲಕ್ರಮದಿಂದ ಉಂಟಾಗಿರಬಹುದಾದ ಮಾರ್ಪಾಟಗಳು, ಮುಂತಾದ ವಿಷಯಗಳನ್ನು ಅರಿತುಕೊಳ್ಳಬಹುದು. ಆದರೆ ಹಬ್ಬದ ಧಾರ್ಮಿಕ ಇಲ್ಲವೆ ಸಾಮಾಜಿಕ ಆಚರಣೆಯ ವಿವರಗಳು ಶಾಸನಗಳಲ್ಲಿ ದೊರೆಯುವುದಿಲ್ಲ. ಅದಕ್ಕಾಗಿ ನಾವು ಸಾಹಿತ್ಯ ಗ್ರಂಥಗಳಲ್ಲಿ ಹಣಿಕಿಕ್ಕಿ ನೋಡುವುದು ಅವಶ್ಯಕ. ಆದರೆ ಇಂತಹ ವಿವರಗಳು ಸಾಹಿತ್ಯಕೃತಿಗಳಲ್ಲಿಯೂ ಸಾಕಷ್ಟು ಪ್ರಮಾಣದಲ್ಲಿ ಮತ್ತು ವಿಶ್ವಸನೀಯವಾಗಿ ಯಾವಾಗಲೂ ಸಿಕ್ಕಲಾರವು. ಹಲವೊಂದು ಸಲ, ಈ ವಿವರಗಳಲ್ಲಿ ಯಥಾರ್ಥವರ್ಣನೆಗಿಂತ ಕವಿಕಲ್ಪನೆ ಬೆರೆತಿರುತ್ತದೆ.

ಹೀಗಿದ್ದುದರಿಂದ, ನಮ್ಮ ಹಬ್ಬಗಳ ಅಭ್ಯಾಸದಲ್ಲಿ ಹೆಚ್ಚಿನ ನೈಜತೆಯೂ ನಿರ್ದೋಷತ್ವವೂ ಬರಬೇಕಾಗಿದ್ದರೆ, ನಾವು ವ್ಯಾಪಕ ಪ್ರಮಾಣದಲ್ಲಿ, ನಮ್ಮ ಜನಾಂಗದಲ್ಲಿ ಆಚರಣೆಯಲ್ಲಿರುವ ಕುಲ, ವರ್ಗ ಮತ್ತು ಪ್ರಾದೇಶಿಕ ರೂಢಿ-ಸಂಪ್ರದಾಯಗಳನ್ನು ಪರಿಶೀಲಿಸುವುದು ಯುಕ್ತ. ಇಂತಹ ಪರಿಶೀಲನದಿಂದ ಹಬ್ಬಗಳ ವಿವಿಧ ಅಂಗಗಳ ಮೇಲೆ ಹೆಚ್ಚಿನ ಪ್ರಕಾಶವು ಉಂಟಾಗಬಹುದಾಗಿದೆ. ಆದರೆ ಈ ವಿವಿಧಪರಿಶೀಲನೆ ಒಬ್ಬ ವ್ಯಕ್ತಿಗೆ ಸಾಮಾನ್ಯವಾಗಿ ಸಾಧ್ಯವಾಗದ ವಿಷಯ. ಅದಕ್ಕಾಗಿ ಸಹಕಾರದ ಅಗತ್ಯವಿದೆ. ನಮ್ಮ ನಾಡಿನ ಸುವಿದ್ಯರಾದ ಜನಗಳು ತಮ್ಮ ತಮ್ಮ ಮನೆತನಗಳಲ್ಲಿ, ಪಂಗಡಗಳಲ್ಲಿ ಮತ್ತು ಭಾಗಗಳಲ್ಲಿ ರೂಢಿಯಲ್ಲಿರುವ ಹಬ್ಬಗಳ ಆಚರಣೆಯ ವಿಶೇಷಾಂಶಗಳನ್ನು ಕಂಡುಹಿಡಿದು, ಅವುಗಳನ್ನು ಪ್ರಕಟಗೊಳಿಸಿದರೆ, ಇಂತಹ ಜಿಜ್ಞಾಸೆಗೆ ಉಪಕಾರವಾಗುತ್ತದೆ. ಈ ಉದ್ದೇಶದಿಂದ ಪ್ರಸ್ತುತ ಲೇಖನವನ್ನು ಪ್ರಕಟಿಸುತ್ತಿದ್ದೇನೆ.

ಇದೀಗ ಹಬ್ಬಗಳ ವಿಚಾರದಲ್ಲಿ ನನಗೆ ತೋರಿದ ಕೆಲವು ಮುಖ್ಯಾಂಶಗಳನ್ನು ಸಂಕ್ಷೇಪವಾಗಿ ಹೇಳಿ, ನನಗೆ ಸಂದಿಗ್ಧವಾಗಿ ಉಳಿದುಕೊಂಡಿರುವ ಮತ್ತು ಹೆಚ್ಚಿನ ವಿವರಗಳ ಅಗತ್ಯವಿರುವ ವಿಚಾರಗಳನ್ನು ಇಲ್ಲಿ ಸೂಚಿಸುವೆ. ಈ ಜಿಜ್ಞಾಸೆಯಲ್ಲಿ ನಮ್ಮ ನಾಡಿನ ವಿಚಾರಶೀಲ ವಾಚಕರ ಸಹಕಾರವನ್ನು ಅಪೇಕ್ಷಿಸುತ್ತೇನೆ. ಈ ನನ್ನ ವಿವೇಚನೆ ಬಹುಭಾಗದಲ್ಲಿ ಉತ್ತರ ಕರ್ನಾಟಕಕ್ಕೆ ಅನ್ವಯಿಸುತ್ತದೆ. ಏಕೆಂದರೆ ಇಲ್ಲಿ ಪ್ರಸ್ತಾಪಿಸಿದ ಅನೇಕ ಹಬ್ಬಗಳು ಈ ಪ್ರದೇಶದಲ್ಲಿ ಹೆಚ್ಚಾಗಿ ರೂಢಿಯಲ್ಲಿವೆ.

ಸುಮಾರು ಎಂಟು ನೂರು ವರ್ಷಗಳ ಹಿಂದೆ, ಚೈತ್ರದ ಹುಣ್ಣಿವೆಗೆ 'ವನದ ಪರ್ವ' ಇಲ್ಲವೆ 'ಬನದ ಹುಣ್ಣಿವೆ' ಎಂಬ ಹೆಸರು ಬಳಕೆಯಲ್ಲಿದ್ದಿತು. ಈ ಕಾಲದಲ್ಲಿ ಒಂದು ಉತ್ಸವವೂ ನಡೆಯುತ್ತಿದ್ದಿತು. ಈ ಉತ್ಸವವು ವನದಲ್ಲಿ ನಡೆಯುತ್ತಿರಬೇಕು ಎಂದು ತಿಳಿಯಲು ಅವಕಾಶವಿದೆ. ಎಂದಿನಂತೆ ಇದು ಧಾರ್ಮಿಕ ಸಮಾರಂಭವಾಗಿದ್ದು, ಇದರಲ್ಲಿ ದೇವತಾರಾಧನೆಗೆ ಪ್ರಾಮುಖ್ಯತೆ

ಇದ್ದಿರಬೇಕು. ಈಗಲಾದರೂ ದೇವಾಲಯಗಳಲ್ಲಿ ಚೈತ್ರದ ಉತ್ಸವಗಳು ನಡೆಯುತ್ತವೆ. ಆದರೆ ಅವುಗಳ ಸ್ವರೂಪವು ಬೇರೆಯಾಗಿದ್ದಂತೆ ತೋರುತ್ತದೆ ಈಗ ನಡೆಯುತ್ತಿರುವ ಇಂತಹ ಉತ್ಸವಗಳ ಸಂಪ್ರದಾಯ ಪರಂಪರೆಯನ್ನು ಪರೀಕ್ಷಿಸಿದರೆ, ಅದು ಉದ್‌ಬೋಧಕವಾಗಬಹುದು. 'ಬನದ ಹುಣ್ಣಿವೆ' ಎಂಬ ನಾಮಕರಣವು ಹಿಂದುಳಿದು 'ದವನದ ಹುಣ್ಣಿವೆ' ಎಂಬ ಹೆಸರು ಎಂದು ಮತ್ತು ಹೇಗೆ ರೂಢವಾಯಿತು ಎಂಬ ಸಂಗತಿಯಾದರೂ ವಿಚಾರಣೀಯವಾಗಿದೆ.

ವೈಶಾಖದ 'ಅಗಿ ಹುಣ್ಣಿವೆ' ಇಲ್ಲವೆ 'ಅಗಿ ಹುಣ್ಣಿವೆ'ಯ ಮೂಲದ ವಿಚಾರದಲ್ಲಿ ನನಗೆ ಸಂದೇಹವಿದೆ. ಸಂಸ್ಕೃತ ಅಗ್ನಿ ಎಂಬ ಪದದೊಡನೆ ಇದರ ಸಂಬಂಧವನ್ನು ಹೇಳುವವರು ಇದ್ದಾರೆ. ಕನ್ನಡ ಅಗಿ ಎಂದರೆ ಸಸಿ ಎಂಬುದರಲ್ಲಿ ಇದರ ಸ್ಪಷ್ಟೀಕರಣವನ್ನು ಅರಸುವವರೂ ಇದ್ದಾರೆ. ಆದರೆ ಈ ಎರಡೂ ಅಭಿಪ್ರಾಯಗಳ ಸಮರ್ಪಕತೆ ನನ್ನ ಮನವರಿಕೆಯಾಗಿಲ್ಲ. ಈ ನಾಮಕರಣದ ಪ್ರಾಚೀನತೆಯನ್ನು ಕುರಿತು ನನಗೆ ಆಧಾರ ದೊರೆತಿಲ್ಲ.

ವೈಶಾಖದ ಅಮಾವಾಸ್ಯೆ 'ಬಾದಮಿ ಅಮಾವಾಸ್ಯೆ'. ಈ ಹಬ್ಬದ ಚರಿತ್ರೆ ಮನೋರಂಜಕವಾಗಿದೆ. ಬಾದಾಮಿ-ಬನಶಂಕರಿಯೊಡನೆ ಈ ಹಬ್ಬದ ನಂಟನ್ನು ಪ್ರತಿಪಾದಿಸುವ ವಾಡಿಕೆ ಈಚಿಯ ಕಾಲದಲ್ಲಿ ಬಂದಿರಬೇಕು. ಬಹಳ ಹಿಂದಿನ ಕಾಲದಲ್ಲಿ ಬಾದುಬ್ಬೆ ಇಲ್ಲವೆ ಬಾದುಂಬೆ ಎಂಬ ಹೆಸರಿನ ಜಾನಪದ ದೇವತೆಯನ್ನು ಪೂಜಿಸುವ ಸಂಪ್ರದಾಯವು ನಮ್ಮ ಜನಾಂಗದಲ್ಲಿ ಪ್ರಚುರವಾಗಿದ್ದಂತೆ ತೋರುತ್ತದೆ. ಈ ದೇವತೆಯ ಹೆಸರಿನಿಂದ ಬಂದಿರಬಹುದಾದ ಅನೇಕ ಸ್ಥಳವಾಚಕ ಪದಗಳು ಶಾಸನಗಳಲ್ಲಿ ದೊರೆಯುತ್ತವೆ. ಹಾನಗಲ್ ತಾಲೂಕಿನ ಬಾಳೂರು ಗ್ರಾಮದ ಒಂದು ಶಿಲಾಶಾಸನದಲ್ಲಿ, ಬಾದುಂಬೆಯನ್ನು ಪ್ರತಿಷ್ಠೆ ಮಾಡಿದಂತೆ ಸ್ಪಷ್ಟವಾದ ನಿರ್ದೇಶವಿದೆ ಬ್ರಹ್ಮಶಿವನ 'ಸಮಯಪರೀಕ್ಷೆ' ಎಂಬ ಗ್ರಂಥದಲ್ಲಿಯೂ ಬೇರೆ ಕಡೆಯಲ್ಲಿಯೂ ಬರುವ ವರ್ಣನೆಗಳಿಂದ ಈ ದೇವತೆಯ ಪ್ರಾಚೀನ ಅಸ್ತಿತ್ವವು ಸ್ಫುಟವಾಗುತ್ತದೆ. ಈ ವಿಧವಾದ ಅಂಶಗಳನ್ನು ವಿಮರ್ಶಿಸಿದರೆ, ಬಾದುಬ್ಬೆ→ಬಾದುಂಬೆ→ಬಾದುಮೆ→ ಎಂಬುದಾಗಿ ಪ್ರಸಿದ್ಧಿವೆತ್ತ ಜಾನಪದ ದೇವತೆಯ ಮೂಲಕ 'ಬಾದಮಿ ಅಮಾಸೆ' ಎಂಬ ಹೆಸರು ರೂಢವಾಗಿರಬೇಕೆಂದು, ಮತ್ತು ಈ ಕಾಲಕ್ಕೆ ಈ ದೇವಿಯ ಉತ್ಸವವು ಹಲವೆಡೆಗಳಲ್ಲಿ ನಡೆಯುತ್ತಿರಬೇಕೆಂದು ನಿಷ್ಕರ್ಷೆಯಾಗುತ್ತದೆ. ಕಾಲಕ್ರಮದಲ್ಲಿ ಜನಗಳಲ್ಲಿ ಈ ದೇವತೆಯ ವಿಚಾರವು ಸಂಪೂರ್ಣವಾಗಿ ಮರೆತು ಹೋಗಿದ್ದಂತೆ ಕಂಡುಬರುತ್ತದೆ.

ಆದರೆ ಕ್ವಚಿತ್ತಾಗಿ ಉಳಿದುಕೊಂಡಿರುವ ಕೆಲವು ಕುಲಸಂಪ್ರದಾಯಗಳ ಮೂಲಕ, ಬಾದುಬ್ಬೆ ಒಬ್ಬ ದೇವತೆಯಾಗಿರಬೇಕು ಎಂಬ ಅಸ್ಪಷ್ಟವಾದ ಸೂಚನೆ ಹೇಗೆ ದೊರೆಯುತ್ತದೆ ಎಂಬ ವಿಷಯವನ್ನು, ಮಿತ್ರರಾದ ಶ್ರೀ. ಬೆಟಗೇರಿ ಕೃಷ್ಣಶರ್ಮರು ತೋರಿಸಿಕೊಟ್ಟಿದ್ದಾರೆ. ಶ್ರೀಯುತರು 'ಕನ್ನಡ ನುಡಿ'ಯ ಇದೇ ಮಾರ್ಚ್-ಎಪ್ರಿಲ ಸಂಚಿಕೆಯಲ್ಲಿ 'ಬಾದುಮೆ' ಎಂಬ ಶೀರ್ಷಿಕೆಯಲ್ಲಿ ವಿಚಾರಪೂರ್ಣ ಲೇಖನವನ್ನು ಬರೆದಿದ್ದು, ಈ ಲೇಖನದಲ್ಲಿ ತಮ್ಮ ಮನೆತನದಲ್ಲಿ ವಂಶಪಾರಂಪರ್ಯವಾಗಿ ನಡೆದುಕೊಂಡು ಬಂದಿದ್ದ ವೈಶಾಖ ಅಮಾವಾಸ್ಯೆಯಂದಿನ 'ಬಾದಮಿ' ಪೂಜೆಯ ರೀತಿಯನ್ನು ವಿವರಿಸಿದ್ದಾರೆ. ಈ ಅಂಶವು ಉದ್ಬೋಧಕವಾಗಿದ್ದು, ಇದರಿಂದ ನನ್ನ ಪರಿಶೋಧನೆಗೆ ಸಹಾಯವಾಗಿದೆ. ಬಾದುಬ್ಬೆ ಎಂಬ ಹೆಸರಿನಲ್ಲಿ ಅಬ್ಬೆ ಎಂದರೆ ತಾಯಿ, ದೇವತೆ, ಎಂಬ ಪದವು ಅಡಕವಾಗಿದೆ. ನನ್ನ ಮಿತ್ರರ ಸೂಚನೆಯನ್ನು ಎತ್ತಿಕೊಂಡು ಬದುಹು+ಅಬ್ಬೆ=ಬಾದುಬ್ಬೆ ಎಂಬುದಾಗಿ ಈ ಹೆಸರಿನ ನಿಷ್ಪತ್ತಿಯನ್ನು ಹೇಳಬಹುದೇನೋ! ಆದರೆ ಮೇರೆ, ಅಂಚು, ಈ ಅರ್ಥದಲ್ಲಿ ಬದುಹು=ಬದುವು, ಬಾಂಧ, ಬಾಧು, ಎಂಬ ಮಾತಿನ ಪ್ರಯೋಗವು ಅಷ್ಟು ಹಳೆಯದಾಗಿ ನನಗೆ ದೊರೆತಿಲ್ಲ. ಇದಕ್ಕೆ ಪ್ರತಿಯಾಗಿ ಬಾದುಬ್ಬೆ ಎಂಬ ಹೆಸರಿನ ಪ್ರಯೋಗವು ೮-೯ನೆಯ ಶತಮಾನದಷ್ಟು ಪ್ರಾಚೀನ ಕಾಲದಲ್ಲಿ ದೊರಕುತ್ತದೆ. ಬಾದುಬ್ಬೆ ಬದುವಿನ ದೇವತೆಯಾಗಿರಬಹುದೆಂದು ನನ್ನ ಮಿತ್ರರು ಸೂಚಿಸಿದ್ದಾರೆ. ಇದು ವಿಚಾರಣೀಯವಾಗಿದೆ.

ಜ್ಯೇಷ್ಠದ ಕಾರಹುಣ್ಣಿವೆ ನಮ್ಮ ನಾಡಿನ ಪ್ರಾಚೀನ ಕೃಷಿಜೀವನದ ಉತ್ಸವ. ಇದರ ನಿರ್ದೇಶ ಶಾಸನದಲ್ಲಿ ದೊರೆತಿದೆ. ಆದರೆ ಅದೇ ತಿಂಗಳಲ್ಲಿ ಬರುವ ಮಣ್ಣೆತ್ತಿನ ಅಮಾವಾಸ್ಯೆಯ ವೈಶಿಷ್ಟ್ಯವು ಅಷ್ಟು ಸ್ಫುಟವಾಗಿಲ್ಲ. ಇದೇ ಪರಿಯಲ್ಲಿ ಆ ಮುಂದಿನ ಆಷಾಢದ 'ಕಡಲೆಗಡಬಿನ ಹುಣ್ಣಿವೆ'ಯ ಪ್ರಾಮುಖ್ಯತೆ ಮತ್ತು ಪ್ರಯೋಜನವನ್ನು ಕುರಿತು ಹೆಚ್ಚಿನ ವಿವೇಚನೆಯು ಅಗತ್ಯ ತೋರುತ್ತದೆ.

ಆಷಾಢ ಅಮಾವಾಸ್ಯೆಗೆ ದೀವಸಿ ಅಮಾವಾಸ್ಯೆ ಎಂಬ ಹೆಸರಾದರೂ ಪ್ರಚಾರದಲ್ಲಿದೆ. ಈ ದಿವಸ ಪ್ರಾಯಿಕವಾಗಿ ಸೌಭಾಗ್ಯಕಾಂಕ್ಷಿಣಿಯರಾದ ಕನ್ನಿಕೆಯರು, ದೀವಸಿ ಎಂಬ ದೇವತೆಯನ್ನು ಪೂಜಿಸುವ ಸಂಪ್ರದಾಯವಿದೆ. ಆದರೆ ಈ ದೇವತೆಯ ನೈಜ ಸ್ವರೂಪ ಮತ್ತು ಈ ಆರಾಧನೆಯ ರಹಸ್ಯವು ಎಷ್ಟು ಜನರಿಗೆ ತಿಳಿದಿದೆಯೋ ನಾನರಿಯೆ. ವಾಸ್ತವಿಕವಾಗಿ ಈ ವ್ರತದಲ್ಲಿ ಸುಂದರವಾದ ಒಂದು ತತ್ತ್ವವು ಅಡಕವಾಗಿದೆ. ಗೃಹಲಕ್ಷ್ಮಿಯರಾಗತಕ್ಕವರು ಜ್ಯೋತಿ ಎಂದರೆ ದೀಪವನ್ನು ಬೆಳಗಿಸಬೇಕು—ಎಂಬ ವಿಚಾರದಿಂದ ಈ ಹಬ್ಬವು ಆಚರಣೆಗೆ ಬಂದಿದೆ. ದೀವಸಿ ಎಂದು ಪೂಜಿಸುವ ದೇವತೆಯ ಆಕೃತಿಯನ್ನು ಪರೀಕ್ಷಿಸಿದರೆ, ಅದು ದೀಪಸ್ತಂಭವನ್ನು ಹೋಲುತ್ತದೆ. ದೀಪ ಎಂಬ ಮಾತೇ ದೀವಸಿ ಎಂಬ ಹೆಸರಿನಲ್ಲಿ ದೀವ ಎಂಬುದಾಗಿ ಮಾರ್ಪಟ್ಟುದನ್ನು ಕಂಡುಹಿಡಿಯಬಹುದು. ಮರಾಠಿಯಲ್ಲಿ ಈ ಹಬ್ಬಕ್ಕೆ 'ದಿವ್ಯಾಚೀ ಅವಸ (ಅಮಾವಾಸ್ಯಾ)' ಎನ್ನುವರು. ಈ ಪ್ರಯೋಗದಲ್ಲಿ ದೀಪದ ಅಭಿಪ್ರಾಯವು ಸ್ಪಷ್ಟವಾಗಿದೆ ಈ ಹಬ್ಬದ ಸಂದರ್ಭದಲ್ಲಿ ಹೇಳುವ ಕತೆಯಲ್ಲಿ ಅಷ್ಟವಿಧ ಸೌಭಾಗ್ಯವತಿಯರು ದೀಪವಿದ್ದ ಮನೆಯಲ್ಲಿ

ಬಂದು ನಾಶವಾಗುವರು ಎಂದು ಬೋಧಿಸಿದೆ. ಮೈಸೂರು ಪ್ರದೇಶದಲ್ಲಿ ಈ ಅಮಾವಾಸ್ಯೆಗೆ ಭೀಮನ ಅಮಾವಾಸ್ಯೆ ಎನ್ನುವರು. ಆ ಭಾಗದವರು ಈ ದಿನ ಜ್ಯೋತಿರ್ಭೀಮೇಶ್ವರನ ಹೆಸರಿನಿಂದ ಪ್ರತ್ಯಕ್ಷ ದೀಪಸ್ತಂಭವನ್ನು ಎಂದರೆ ದೀಪವನ್ನೇ ಪೂಜಿಸುವರು. ಇದರಿಂದ ಈ ವ್ರತದ ಸ್ವರೂಪ ಮತ್ತು ಉದ್ದೇಶವು ಸ್ಫುಟವಾಗುತ್ತದೆ.

ಶ್ರಾವಣ ಶುಕ್ಲ ಷಷ್ಠಿ 'ಸಿರಿಯಾಳ ಷಷ್ಠಿ' ಎಂಬುದಾಗಿ ಕೆಲವೆಡೆ ಹೆಸರುಗೊಂಡಿದೆ. ಈ ಸಂಪ್ರದಾಯವು ಹೆಚ್ಚಾಗಿ ಮಹಾರಾಷ್ಟ್ರ ಭಾಗದಲ್ಲಿ ಮತ್ತು ಮಹಾರಾಷ್ಟ್ರೀಯ ಕುಟುಂಬಗಳಲ್ಲಿ ರೂಢವಾಗಿದ್ದಂತೆ ತೋರುತ್ತದೆ. ಹೆಂಗಳೆಯರು ಸಿರಿಯಾಳ ಎಂಬ ಶಿವಭಕ್ತನನ್ನು ಈ ದಿನ ಪೂಜಿಸುವರು. ಈತನು ಶ್ರೇಷ್ಠಿ ಎಂದರೆ ವರ್ತಕನೆಂದು, ಒಂದೂವರೆ ಗಂಟೆಯ ಕಾಲ ರಾಜ್ಯಭಾರ ಮಾಡಿದನೆಂದು, ಮುಂತಾಗಿ ಈತನನ್ನು ಕುರಿತು ದಂತಕತೆಗಳು ಬಳಕೆಗೆ ಬಂದಿರುವುವು. ಆದರೆ ಈತನ ಮೂಲವು ತಮಿಳುನಾಡಿನಲ್ಲಿ ಸಿಕ್ಕುತ್ತದೆ. ಈತನ ಮೂಲಸ್ವರೂಪದಲ್ಲಿ ವಿಲಕ್ಷಣ ಸ್ಥಿತ್ಯಂತರಗಳು ಉಂಟಾಗಿ, ಈತನ ಪವಾಡಕತೆಗಳು ಕರ್ನಾಟಕ, ಆಂಧ್ರ ಮತ್ತು ಮಹಾರಾಷ್ಟ್ರದ ಜಾನಪದ ವಾಙ್ಮಯದಲ್ಲಿ ಮತ್ತು ಸಾಹಿತ್ಯದಲ್ಲಿ ಹಬ್ಬಿಕೊಂಡಿವೆ. ಇದೊಂದು ಮನೋರಂಜಕ ವಿಷಯ. ಸ್ವತಂತ್ರ ಲೇಖನದ ವಸ್ತುವಾಗುವಷ್ಟು ವಿಸ್ತೃತವಾಗಿರುವುದರಿಂದ, ಅದನ್ನೆಲ್ಲ ಇಲ್ಲಿ ವಿವೇಚಿಸುವುದು ಅಪ್ರಸ್ತುತ. ಆದರೆ ಕರ್ನಾಟಕದ ಯಾವ ಭಾಗಗಳಲ್ಲಿ ಮತ್ತು ಯಾವ ವಿಧದಿಂದ ಈ ಸಿರಿಯಾಳಸೆಟ್ಟಿಯ ಸಂಪ್ರದಾಯವು ಆಚರಣೆಯಲ್ಲಿ ಸಿಕ್ಕುತ್ತದೆ—ಎಂಬುದನ್ನು ತಿಳಿದುಕೊಳ್ಳುವ ಕುತೂಹಲವು ನನಗಿದೆ.

ಆಶ್ವಿನ ಮಾಸದ ಸೀಗೀ ಹುಣ್ಣಿವೆಯ ಚರಿತ್ರೆ ವಿಚಿತ್ರವಾಗಿದೆ. ಈ ದಿನ ಒಂದು ದೇವತೆಯನ್ನು ಪೂಜಿಸುವರು. ಆಕೆ ಸೀಗೆಗೌರಿ. ಈ ಸೀಗೀ ಗೌರಿ ಯಾರು ? ಈ ಹೆಸರಿಗೆ ಏನಾದರೂ ಅರ್ಥವಿದೆಯೇ ? ಮುಂತಾದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಹೇಳುವವರು ಇದ್ದಾರೆಯೇ ? ಇಲ್ಲವೆಂದು ನನ್ನ ತಿಳವಳಿಕೆ. ಈ ವಿಚಾರದಲ್ಲಿ ಅನ್ವೇಷಣ ನಡೆಸುತ್ತಿರುವಾಗ, ಮೊತ್ತ ಮೊದಲಿಗೆ ಒಂದು ಸಂಗತಿ ನನ್ನ ಲಕ್ಷ್ಯಕ್ಕೆ ಬಂದಿತು. ಅದೇನೆಂದರೆ ಸೀಗೆಯ ಮರಕ್ಕೂ ಈ ಹಬ್ಬಕ್ಕೂ ಯಾವ ಬಾದರಾಯಣ ಸಂಬಂಧವೂ ಇಲ್ಲ ಎಂಬುದು. ಎರಡನೆಯದಾಗಿ, ಹಿಂದಿನ ಶಾಸನಗಳಲ್ಲಿ 'ಹೆಜ್ಜುಗ್ಗಿಯ ಪುಣ್ಣಮಿ' ಮತ್ತು 'ಹೆಜ್ಜುಗ್ಗಿಯ ಹಬ್ಬ' ಎಂಬ ನಿರ್ದೇಶಗಳು ಈ ಹಬ್ಬಕ್ಕೆ ಅನ್ವಯಿಸುವಂತಹವಾಗಿ ನನಗೆ ದೊರೆತುವು. ಮೂರನೆಯದಾಗಿ, ಈ ಹಬ್ಬಕ್ಕೆ 'ಹೆಜ್ಜುಗ್ಗಿ' ಎಂಬ ನಾಮಾವಶೇಷವು ಕೆಲವೆಡೆ ಪ್ರಚಾರದಲ್ಲಿದೆ, ಎಂಬ ಅಂಶವು ನನ್ನ ನೆರವಿಗೆ ಬಂದಿತು. ಹಳಗನ್ನಡ ಸಮಾಸ ಮತ್ತು ಸಂಧಿಯ ವಿಧಾನದಂತೆ, ಪಿರಿದು+ಸುಗ್ಗಿ=ಹೆಜ್ಜುಗ್ಗಿ, ಎಂದಾಗುತ್ತದೆ—ಇಂತಹ ಇನ್ನೊಂದು ಉದಾಹರಣೆ 'ಹೆಜ್ಜುಂಕ' (ಹಿರಿದು+ಸುಂಕ). ಈ ವಿವರಣೆಯ ಸ್ಪರ್ಶ ಇಷ್ಟು. 'ಹಿರಿಯ ಸುಗ್ಗಿಯ ಹುಣ್ಣಿವೆ' ಎಂಬುದು ಸಂಕ್ಷೇಪಗೊಂಡು 'ಸುಗ್ಗಿಯ ಹುಣ್ಣಿವೆ' ಎಂದಾಯಿತು. ಅದುವೇ ಮುಂದೆ ವಿಕಾರಗೊಂಡು 'ಸಿಗೀ ಹುಣ್ಣಿವೆ' ಆಯಿತು. ಇದೇ ಪರಿಯಲ್ಲಿ 'ಸುಗ್ಗಿಯ ಗೌರಿ' ಸೀಗೀಗೌರಿ ಆದಳು. ಕಾಲಕ್ರಮದಲ್ಲಿ ಈ ಹಬ್ಬದ ಪೂರ್ವೋತ್ತರಗಳು ಜನತೆಯ ಸ್ಮೃತಿಪಥದಿಂದ ಪೂರ್ತಿಯಾಗಿ ಅಳಿಸಿ ಹೋದುವು. ಈ ವಿಸ್ಮೃತಿಯ ಭೂತವು ಈ ಹಬ್ಬದ ಸಂಬಂಧವನ್ನು ಸೀಗೆಮರದೊಡನೆ ಅಂಟಿಸುವ ಅಡ್ಡದಾರಿಗೆ ನಮ್ಮನ್ನು ಎಳೆದೊಯ್ದಿತು. ಇಂತು ಇದು 'ಸೀಗೀ ಹುಣ್ಣಿವೆ'ಯಲ್ಲ, 'ಸುಗ್ಗಿಯ ಹುಣ್ಣಿವೆ,' ಎಂಬ ವಿಚಾರವು ಸ್ಫುಟವಾಗುತ್ತದೆ.

ಸುಗ್ಗಿಯ ಹುಣ್ಣಿವೆಯ ಸಮಯಕ್ಕೆ ಹೊಸ ಬೆಳೆ ಬರುತ್ತದೆ. ಸಂಸ್ಕೃತದವರು ಇದಕ್ಕೆ 'ನವಾನ್ನ ಪೂರ್ಣಿಮಾ' ಎನ್ನುತ್ತಾರೆ. ಕೃಷಿಜೀವಿಗಳಿಗೆ ಇದು ದೊಡ್ಡ ಸುಗ್ಗಿ, ಸಂಭ್ರಮದ ಕಾಲ. ಈ ಕಾರಣದಿಂದಾಗಿ ಈ ಹಬ್ಬವು ಆಚರಣೆಗೆ ಬಂದಿತು. ಈ ಹಬ್ಬದಲ್ಲಿ ಪೂಜಿಸುವ 'ಸುಗ್ಗಿಯ ಗೌರಿ' ಬೇರಾವುದೂ ಅಲ್ಲ. ಸಮೃದ್ಧಿಯ ದ್ಯೋತಕವಾದ ಧಾನ್ಯದ ರಾಶಿ. ಈ ಗೌರಿಯ ಆಕಾರವನ್ನು ಪರೀಕ್ಷಿಸಿದರೆ ಈ ಮಾತು ಸ್ಪಷ್ಟವಾಗುತ್ತದೆ. ಇದೊಂದು ರಮ್ಯವಾದ ಪ್ರತೀಕ. ಇದೆಲ್ಲವು ಎಷ್ಟು ಅರ್ಥಗರ್ಭಿತವಾಗಿದೆ !

ಕಾರ್ತಿಕಪೂರ್ಣಿಮೆ ಗೌರಿಯ ಹುಣ್ಣಿವೆ. ತ್ರಿಪುರೀ ಪೂರ್ಣಿಮೆ ಎಂದು ಇದಕ್ಕೆ ಇನ್ನೊಂದು ಹೆಸರಿದೆ. ಈ ಹಬ್ಬದಲ್ಲಿ ಹಿರಿಯ ಗೌರಿಯನ್ನು ಪೂಜಿಸುವರು. ಈ ಗೌರಿಯ ಮತ್ತು ಈ ಹಬ್ಬದ

ತಾಯಂದಿರೆ,
ನಿಮ್ಮ ಮಗುವಿಗೆ
ಸಾಕಷ್ಟು ತಾಯಿಯ ಹಾಲು ಬೇಕಲ್ಲವೆ ?
ಹಾಗಾದರೆ ನೀವು ಈ ದಿನದಿಂದಲೇ
ಜೆನ್-ಓ ಮಿಲ್ಕ್
(GEN-O MILK)
ತೆಗೆದುಕೊಳ್ಳಲು ಪ್ರಾರಂಭಮಾಡಿರಿ !
ನಿಮ್ಮ ಊರಿನ ಕೆಮಿಸ್ಟರಲ್ಲಿ ದೊರೆಯದೆ ಹೋದರೆ
ಕೆಳಗಿನ ವಿಳಾಸಕ್ಕೆ ಬರೆಯಿರಿ.
ಅಜಿತ ಲ್ಯಾಬ್ಸ್. ಲಿ. ಮಿರಜ

ಆಚರಣೆಯಲ್ಲಿಯ ಸಾಂಪ್ರದಾಯಿಕ ವಿವರಗಳನ್ನು ಕಂಡುಹಿಡಿಯುವ ಅವಕಾಶವು ನನಗೆ ದೊರೆತಿಲ್ಲ

ಕಾರ್ತಿಕದ ಅಮಾವಾಸ್ಯೆಗೆ ಆದರ ಮುಂದಿನ ಮಾರ್ಗಶೀರ್ಷ ಶುಕ್ಲ ಷಷ್ಠಿಯು ಮೂಲಕ ಗೌರವವು ಬಂದಿದೆ. ಇದಕ್ಕೆ ಚಂಪಾಷಷ್ಠಿ ಎನ್ನುವರು. ಇದು ಶಿವನ ಅವತಾರವೆಂದು ಗಣಿಸಲಾದ ಮಲ್ಲಾರಿ ಮಾರ್ತಂಡನ ಆರಾಧನೆಗೆ ಮೀಸಲಾದ ಉತ್ಸವವು. ಮಲ್ಲಾರಿ ಮಾರ್ತಂಡನು ಜನಪ್ರಿಯವಾದ ದೈವತ. ಈತನ ಭಕ್ತರು ಹಲವೆಡೆಗಳಲ್ಲಿ ಹರಡಿಕೊಂಡಿದ್ದಾರೆ. ಈತನ ಶಿಬಾರಗಳು ಅನೇಕ ಗ್ರಾಮಗಳಲ್ಲಿ ಕಣ್ಗೊಳಿಸುತ್ತವೆ. ಕರ್ನಾಟಕದ ವೀರದೇವತೆಗಳಲ್ಲಿ ಈತನೊಬ್ಬ. ಈಗ ಕೆಲವೆಡೆಗಳಲ್ಲಿ ಹೋಳಿಯ ಹಬ್ಬಕ್ಕಾಗಿ ಕಾಮಣ್ಣನನ್ನು ಸಿಂಗರಿಸಿ ಮೆರೆಸುವಂತೆ, ಹಿಂದಿನ ಕಾಲದಲ್ಲಿ ಮಲ್ಲಾರಿ ಅಥವಾ ಮೈಲಾರನನ್ನು ಆಡಂಬರವಾಗಿ ಪ್ರದರ್ಶಿಸುತ್ತಿದ್ದಂತೆ ತೋರುತ್ತದೆ. ಇಂತಹ ಒಳ್ಳಿಹ ಮೈಲಾರ'ನ ಸಡಗರದ ಆಭಾಸವನ್ನು ಬಸವಣ್ಣನವರು ತಮ್ಮ ವಚನಗಳಲ್ಲಿ ಎತ್ತಿ ತೋರಿಸಿದ್ದಾರೆ. ಒಂದು ವಚನವು ಹೀಗಿದೆ:

"ಒಳ್ಳಿಹ ಮೈಲಾರನ ಪೊಳಗೆಲ್ಲ ಸಣಬು :
ಹೊಜಗಣ ಬಣ್ಣ ಕರ ಲೇಸಾಯಿತ್ತಯ್ಯಾ !"

(ಬಸವಣ್ಣನವರ ಷಟ್‌ಸ್ಥಳದ ವಚನಗಳು, ಅಂಕ ೨೮೦)

ಅನೇಕ ಸಂಶೋಧಕರು ಮಲ್ಲಾರಿ ಮಾರ್ತಂಡನ ವಿಚಾರವಾಗಿ ಬರೆದಿದ್ದರೂ, ಈ ದೇವತೆಯ ಉಗಮವು ಇನ್ನೂ ಸಂದಿಗ್ಧವಾಗಿದೆ ಎಂಬುದು ನನ್ನ ಭಾವನೆ. ಈ ಸಂದೇಹಕ್ಕೆ ಕಾರಣವು ಹೀಗೆ. ಮಲ್ಲಾರಿಗೆ ಮಾರ್ತಂಡ ಭೈರವ ಎಂಬ ಹೆಸರಿದೆ. ತಾಂತ್ರಿಕ ಮತದಲ್ಲಿ ಶಿವನು ಭೈರವ ಎಂಬ ವಿಶಿಷ್ಟ ನಾಮಕರಣವನ್ನು ಪಡೆದಿದ್ದಾನೆ. ಮಲ್ಲಾರಿಯ ಪತ್ನಿ ಮಾಳತಿ, ಮ್ಹಾಳಸಾ. ಹಾವೇರಿ ತಾಲೂಕಿನ ದೇವೀಹೊಸೂರು ಗ್ರಾಮದ ಪ್ರಾಚೀನ ಶಾಸನಗಳಿಂದ, ಆ ಗ್ರಾಮವು ಮಲ್ಲಾರಿಯ ಶಕ್ತಿಯ ಸ್ಥಾನವೆಂದು ಪ್ರಸಿದ್ಧಿ ಪಡೆದಿದ್ದಿತು ಎಂದು ವ್ಯಕ್ತವಾಗುತ್ತದೆ. ಈ ದೇವಿಯ ಅವಶೇಷವು ಆ ಗ್ರಾಮದ ಹೆಸರಿನಲ್ಲಿ ಇಂದಿಗೂ ಉಳಿದುಕೊಂಡಿದೆ. ಈ ದೇವಿಗೆ ಆ ಶಾಸನಗಳಲ್ಲಿ ಮಾಳಚಿ ಮತ್ತು ಮಾಚಿಜ ಎಂದು ಕರೆದಿದೆ. ಆ ಗ್ರಾಮದ ಒಂದು ಶಾಸನದಲ್ಲಿ, ಈ ಗ್ರಾಮವು ಹಿಂದೆ ಜನಮೇಜಯ ರಾಜನು ಯಜ್ಞ ಮಾಡಿದ ಸ್ಥಳವಾದುದರಿಂದ ಯಾಗಪೀಠವೆನಿಸಿದ್ದಿತು; ಇದೀಗ ಅದು ಮಾಳಚಿ ಪೀಠವಾದುದರಿಂದ ಅದರ ಹಿರಿಮೆ ಅಧಿಕವಾಗಿದೆ; ಎಂದು ವರ್ಣಿಸಿದೆ. ತಾಂತ್ರಿಕ ಸಂಪ್ರದಾಯದಲ್ಲಿ ಯೋಗಪೀಠಗಳಿಗೆ ಪ್ರಾಮುಖ್ಯತೆ ಬಂದಿತು. ಯೋಗಪೀಠವೆಂದರೆ ಶಕ್ತಿಸ್ಥಾನಗಳು, ಶಿವಶಕ್ತಿಗಳು ಪ್ರತಿಷ್ಠಾಪಿತವಾದ ಕ್ಷೇತ್ರಗಳು. ಇಲ್ಲಿ ನಾವು, ಈ ಮಾಳಚಿ ಬಂದುಬ್ಬೆಯಂತೆ ಮೊದಲು ಜಾನಪದ ದೇವತೆಯಾಗಿದ್ದು, ಮುಂದೆ ಆಕೆ ತಾಂತ್ರಿಕಮತದಲ್ಲಿ ಸಮಾವೇಶಗೊಂಡು ಶಿವಶಕ್ತಿಯ ಪದವಿಯನ್ನು ಪಡೆದಿರಬೇಕು, ಎಂದು ಊಹಿ ಕೊಳ್ಳಲು ಸಾಕಷ್ಟು ಸೂಚನೆ ದೊರೆಯುತ್ತದೆ. ದೇವೀಹೊಸೂ ಮೈಲಾರನ ಕ್ಷೇತ್ರವಾದ ದೇವರಗುಡ್ಡದ ಬಳಿಯಲ್ಲಿದೆ. ಇಂತ ವಿಚಾರಿಸಿದರೆ ಮಲ್ಲಾರಿ ಮತ್ತು ಮಾಳಚಿ ಈ ದೇವತೆಗಳ ಮೇ ತಾಂತ್ರಿಕಮತದ ಪ್ರಭಾವವು ಹಬ್ಬಿರಬೇಕು ಎಂದು ತೋರುತ್ತ

ಮಾರ್ಗಶೀರ್ಷದ ಪೂರ್ಣಿಮೆ ಹೊಸ್ತಿಲ ಹುಣ್ಣಿಮೆ. ಈ ಹಬ್ಬ ಹೆಸರು ಮತ್ತು ಅದರ ಸಂಪ್ರದಾಯವನ್ನು ಕುರಿತು ಯಾರಾ ಸಮರ್ಪಕ ವಿವೇಚನೆಯನ್ನು ಮಾಡುವುದಾದರೆ, ಅದನ್ನು ಸ್ವಾಗತಿಸುತ್ತೇನೆ. ಭಗವದ್ಗೀತೆಯಲ್ಲಿ ಮಾರ್ಗಶೀರ್ಷವು ಮಾ ಗಳಲ್ಲಿ ಶ್ರೇಷ್ಠವೆಂದು ಹೇಳಿದೆ. ಮನೆಯ ಹೊಸ್ತಿಲುಗಳ ಅಲಂಕಾರಗೊಳಿಸಿ ದೇವತೆಗಳನ್ನು ಬರಮಾಡಿಕೊಳ್ಳುವ ಕಾ ವಿದಾದುದರಿಂದ, ಈ ಹೆಸರು ಬಂದಿರಬೇಕು ಎಂಬ ಸ್ಪಷ್ಟೀಕರಣ ತೃಪ್ತಿಕರವಾಗಿಲ್ಲ. ಏಕೆಂದರೆ ಅದರಲ್ಲಿ ಇದರ ವೈಶಿಷ್ಟ್ಯ ವಿವರಣೆ ಸಿಕ್ಕುವುದಿಲ್ಲ. ಇದೇ ಮೇರೆಗೆ ಅವರಾತ್ರಿ ಅಮಾ ವಾಸ್ಯೆಯ (ಪುಷ್ಯ ಅಮಾವಾಸ್ಯೆ) ಹೆಸರಿನ ಒಡಪಾದರೂ ಸುಗಮವಾಗಿಲ್ಲ. ಮಾಘದ ಅಮಾವಾಸ್ಯೆ ಮಹಾಶಿವರಾತ್ರಿಯ ಅಮಾವಾಸ್ಯೆ. ಇದು ಅದರ ಹಿಂದಿನ (ಅವರ) ಶಿವರಾತ್ರಿಯ ಅಮಾವಾಸ್ಯೆ. ಅವರ ಶಿವರಾತ್ರಿ ಅಮಾವಾಸ್ಯೆಯ ಸಂಕ್ಷೇ ಅವರಾತ್ರಿ ಅಮಾವಾಸ್ಯೆ. ಹೀಗೆ ಈ ಹೆಸರು ಬಂದಿರಬಹುದು ಎಂದು ಊಹಿಸುತ್ತೇನೆ.

ಭಾರತ ಹುಣ್ಣಿಮೆ ಇಲ್ಲವೆ ಗುಡಿ ಹುಣ್ಣಿಮೆ ಎಂದು ಪ್ರಖ್ಯಾ ಗೊಂಡಿರುವ ಮಾಘಪೂರ್ಣಿಮೆಯ ಹಬ್ಬದಲ್ಲಿ, ಪ್ರಾಚೀನ ಪರಂಪರೆಗಳ ಸಾಂಪ್ರದಾಯಿಕತೆ ಮೈಗೂಡಿಕೊಂಡಿದ್ದಂತೆ ತೋರು ತ್ತದೆ. ಈ ಹಬ್ಬದ ಹೆಸರಿನ ಸ್ಪಷ್ಟೀಕರಣದಲ್ಲಿ ಕೆಲವರು ಭಾರ ಪಠನಕ್ಕೆ ಪ್ರಾಮುಖ್ಯತೆ ಕೊಟ್ಟರೆ, ಇನ್ನೂ ಕೆಲವರು ಭಾರ ಎಂದರೆ ಸರಸ್ವತಿಯೊಡನೆ ಇದರ ಸಂಬಂಧವನ್ನು ಪ್ರತಿಪಾದಿಸು ವರು. ಕೆಲವರು ಈ ದಿನ ವ್ಯಾಸಪೂಜೆಯನ್ನು ಮಾಡುವ ಬೇರೆಯವರು ಈ ದಿವಸ ಗುಡಿಯಲ್ಲಿಯ ದೇವರುಗಳು ಭಕ್ತ ಮನೆಗಳಿಗೆ ಬರುವರು ಎಂದು ಹೇಳುವರು. ಕೆಲವು ಶಾಸ್ತ್ರ ಕಾರರು ಮಾಘಶುಕ್ಲ ಪಂಚಮಿಗೆ 'ವಸಂತಪಂಚಮಿ'ಎಂದು ಈ ದಿವಸ ಸರಸ್ವತಿಯನ್ನು ಪೂಜಿಸಬೇಕು ಎಂದು ವಿಧಿಸಿರು ಈ ವಸಂತಪಂಚಮಿಯ ಸರಸ್ವತೀಪೂಜೆ ಮುಂದಕ್ಕೆ ಸರಿ ಭಾರತೀಹುಣ್ಣಿಮೆಯಾಗಿ ಪರಿಣಮಿಸಿರಬಹುದೇ? ಅಂತೂ ಹಬ್ಬದ ಹೆಸರು ಮತ್ತು ಆಚಾರ ಸಂಪ್ರದಾಯಗಳನ್ನು ಕುರಿ ಹೆಚ್ಚಿನ ಪರಿಶೀಲನದ ಅಗತ್ಯವು ತೋರುತ್ತಿದೆ.

[ಈ ಸಂದರ್ಭದಲ್ಲಿ ಜಿಜ್ಞಾಸುಗಳು ಈ ಲೇಖನಗಳನ್ನು ಅವಲೋಕಿ ಬಹುದು: — ೧ ದನದ ಹುಣ್ಣಿಮೆ — ಪ್ರಬುದ್ಧ ಕರ್ನಾಟಕ, ಸಂಪು ಸಂಚಿಕೆ ೪; ೨-೩ ಬಾಪಟ, ಜಾನುಮ— ಕನ್ನಡ ನುಡಿ, ಸಂಪು ಸಂಚಿಕೆ ೨, ೩-೪.]

ಜಾತ್ರೆಗೆ ಕರೆ

(ಒಂದು ನಲ್ವಾಡು)

'ಆನಂದಕಂದ'

ನಮ್ಮೂರ ಜಾತ್ರಿ ಬಲು ಜೋರಾ....
ಕರಿಯಾಕಽ ಬಂದಾರಽ ತವರವರಾ! ॥ ಪಲ್ಲ ॥

೧

ಅಣ್ಣನ ಪ್ರೀತಿ ನನ್ನ ಮ್ಯಾಲ ಭಾರಿ....
ಎಲ್ಲಾ ಕೆಲಸಾನೂ ಬಿಟ್ಟಽ ತರಾತುರಿ....
ಹೊಂಟು ಬಂದಾನೌ ಸ್ವತಾ ರಾತರೀ;
ಸನಿಯಲ್ಲಽ ಹದಿನೆಂಟು ಮೈಲಿ ದೂರಾ....
ಕರಿಯಾಕಽ ಬಂದಾರಽ ತವರವರಾ!

೨

ಬಂಡೀ ತಂದಾನ ಕಟ್ಟಿಽ ಸವಾರೀ....
ಗೂಳ್ಯಾ-ಬಾಳ್ಯಾ ಎರಡೂ ಮೂಡಲ ಹೋರಿ....
ಗೊಂಡೇ ಹಣಿಪಟ್ಟಿ ಗಂಟೀ-ಗಗ್ಗಽರಿ.... !
ದಾರಿಹಿಡಿದಽರ ಮೋಟಾರ ಕಾರಾ...
ಕರಿಯಾಕಽ ಬಂದಾರಽ ತವರವರಾ !

೩

ನಮ್ಮೂರ್ ದ್ಯಾಮವ್ವ ಹೆಸರಾದ ದೇವರಾ....
ಕ್ವಾಣಽ ಬೀಳ್ತಾವ ಜಾತ್ರ್ಯಾಗ ಮೂರಾ....
ಎಳೀತಾರವ್ವ ಯೋಳ್ನಲಿ ತೇರಾ.... !
ತೇರಿನ ಕಳಸಕ್ಕ ಹೊಳಿಯೂ ಬಂಗಾರಾ
ಕರಿಯಾಕಽ ಬಂದಾರಽ ತವರವರಾ !

೪

ಮಾವಽ ಹೇಳ್ಯಾನ 'ಹೋಗಿ ಬಾ ಬ್ಯಾಗ!'..
ಅತ್ತೀ ಅಂತಾಳ 'ಕೇಳ ನಿನ್ನವಗ!'....
ಅವರ್ನ ಕೇಳೂ ಬಗೀ ಇನ್ನ ಹ್ಯಾಂಗ?
ಇಂದಽ ಬಂದೀನಿ ಒಳಗ, ಆಗಿ ನೀರಾ....
ಕರಿಯಾಕಽ ಬಂದಾರಽ ತವರವರಾ !

೫

ಹರಿತೈತೀ ತವರಿನ ಕಡೆ ಜೀವಾ....
ಜಾತ್ರೀ ನೋಡ್ಬೇಕಂತೈತಿ ಮನದ ಭಾವಾ....
ಹೋಗೋದ್ ಬಿಟ್ಟಽರ ತಾಯಿಗೆ ನೋವಾ!
ಏನ್ ಮಾಡೋದು ಬ್ಯಾಡಂದ್ರ ನನ್ನ ದೇವರಾ....
ಕರಿಯಾಕಽ ಬಂದಾರಽ ತವರವರಾ !

೬

ಹೊಳೀತವ್ವಾ ಈಗೊಂದು ನನಗಽ ಬೇತಾ....
ಅಣ್ಣಗ ಹೇಳ್ತೀನಿ ನಾ ಕಿವಿಮಾತಾ.... !
ಜಾತ್ರಿಗವರನ್ನೂ ಕರಿ ನೀನೇ ಸ್ವಂತಾ.... !
ಅಣ್ಣ ಕರದರ ಅವರೂ ಬಂದೇ ಬರತಾರ...
ಕರಿಯಾಕಽ ಬಂದಾರಽ ತವರವರಾ !

೭

ತಾಯಿಯಾ ಪ್ರೀತೀ—ರಾಯನ ಸಂಗ್ತೀ ಕೂಡಿ....
ಆದೀತಲ್ಲೇನಽ ಜೇನು ಸಕ್ರಿ ಜೋಡಿ
ಒಂಟೀ ಹೋಗೇನು ಮಾಡೋದು ಮೋಡಿ!
ಒಳ್ಳೇ ಕಲ್ಪಽನಾ ಕೊಟ್ಟಽ ನನಗ ದೇವರಾ—
ಕರಿಯಾಕಽ ಬಂದಾರಽ ತವರವರಾ !

೮

ರಾಯಾ ಬರದಿದ್ದರ್ಯಾತರ ಜಾತ್ರಿ?....
ಕಳಿಯೂದ್ಹ್ಯಾಂಗವ್ವ ಅಲ್ಲಿ ಸವಿರಾತ್ರಿ?...
ಬಂದಽ ಬರತಾರಽ ಕರೆದರ ಖಾತ್ರಿ!
ಕೂಡೇ ಹೋಗ್ತೀವಿ ಊರಿಗೆ ನಾವಿಬ್ಬರಾ....
ಕರಿಯಾಕಽ ಬಂದಾರಽ ತವರವರಾ !

೯

ಬರೂ ಮನಸಽ ಕೊಡಬೇಕಽ ನನ್ನ ದೊರಿಗೆ...
ಬಾನಾ ನಾನಽ ಒಯ್ತೀನೌ ದೇವರಿಗೆ ...
ಕಾಯಿಯಾ ಒಡಸ್ತೀನಿ ದೇವೀ ತೇರಿಗೆ....
ರಾಯಽ ಜೋಡಿದ್ದರ ಜಾತ್ರೀ ಸವಿ ಪೂರಾ...
ಕರಿಯಾಕಽ ಬಂದಾರಽ ತವರವರಾ !

ಕತೆಗಾರ

(ಲಲಿತಪ್ರಬಂಧ)

ಶ್ರೀ. ಎಸ್. ಎಂ. ಕುಲಕರ್ಣಿ, ಮುಂಬಯಿ

★

ಕತೆಬರೆಯಲು ಪ್ರಯತ್ನಿಸಿ, ವಿಫಲಪ್ರಯತ್ನನಾದ ತರುಣಲೇಖಕನ ಸ್ವಾನುಭವದ ಸಂಗತಿಯಿದು. ಕತೆ ಬರೆಯಲಿಕ್ಕಾಗದೆ ಹೋದರೂ ಕತೆಯನ್ನು ಹೇಗೆ— ಏಕೆ— ಬರೆಯಬೇಕೆಂಬುದರ ತಿಳಿವಳಿಕೆಯಾಯಿತು!

卐

ಕತೆಗಾರನಾಗಬೇಕೆಂಬ ನನ್ನ ಹಂಬಲು ಇಂದು ನಿನ್ನಿನದಾಗಿರಲಿಲ್ಲ. ನಾನೊಬ್ಬ ಉತ್ತಮ ಕತೆಗಾರನಾಗಬೇಕೆಂಬ ಹಿರಿಯಾಶೆ, ನನ್ನನ್ನು ಅನೇಕ ದಿನಗಳಿಂದ ಕಾಡುತ್ತಿತ್ತು. ವಾರಪತ್ರಿಕೆ, ಮಾಸಪತ್ರಿಕೆ ಮುಂತಾದುವುಗಳಲ್ಲಿಯ ಕತೆಗಳನ್ನು ಓದಿದ ಮೇಲಂತೂ, ನನ್ನ ಆ ಆಶೆ ಮತ್ತಷ್ಟು ಚಿಗುರುತ್ತಿತ್ತು. "ನಾನೂ ಇಂಥ ಕತೆಗಳನ್ನು ಬರೆದು ಅಚ್ಚಿಗೆ ಕಳಿಸಲು ಶಕ್ತನಾದರೆ!" ಎಂಬ ಆಶೆ ಒಳಗೇ ಮಿಡಿಯುತ್ತಿತ್ತು. ನಾನಾದರೂ ಕತೆ ಬರೆಯುವುದರಲ್ಲಿ ಉದ್ಯುಕ್ತನಾಗಬೇಕೆಂದು ಎಷ್ಟೋ ಪ್ರಯತ್ನ ಮಾಡಿದೆ. "ಅದರಲ್ಲೇನು ಮಹಾ; ನಾಳೆ ಬರೆದೇ ತೀರುವುದು!" ಎಂದು ದಿನಾಲು ಸಂಕಲ್ಪಮಾಡುತ್ತಿದ್ದೆ. ದಿನಗಳ ಮೇಲೆ ದಿನಗಳು ಉರುಳಿದುವು. ಬರೆಯಬೇಕೆಂಬ ನನ್ನ ಆಶೆ ಬೆಳೆಯಿತೇ ವಿನಾ ಯಾವುದೇ ಕತೆಯ ಒಂದು ಸಾಲನ್ನು ಕೂಡ ಬರೆಯಲಿಲ್ಲ.

ಅಂದು "ಜಯಂತಿ"ಯನ್ನು ಓದುತ್ತಿದ್ದಾಗ, ಅದರಲ್ಲಿಯ ಒಂದು ಪ್ರಕಟನೆ ನನ್ನನ್ನು ಬಹಳ ಕುತೂಹಲಿಯನ್ನಾಗಿಮಾಡಿತು. ಆ ಪ್ರಕಟನೆ ಜಯಂತಿಯ ಸಣ್ಣ ಕತೆಗಳ ಮೇಲಾಟದ ಬಗ್ಗೆ ಇತ್ತು. ಉತ್ತಮ ಕತೆಗಾರರಿಗೆ ಬಹುಮಾನಗಳನ್ನಿಟ್ಟಿದ್ದರು. ಸಂಪಾದಕರು ಕತೆಯ ರೂಪ-ರೇಷೆಗಳನ್ನು ತಿಳಿಸಿ, ಅದು ಸ್ವತಂತ್ರವಾಗಿರಬೇಕೆಂದೂ ಕರ್ನಾಟಕದ ಸಾಮಾಜಿಕ ಹಿನ್ನೆಲೆಯಿಂದ ಕೂಡಿದ್ದಾಗಿರಬೇಕೆಂದೂ ಎಚ್ಚರಿಸಿ, ಇಂತಿಷ್ಟು ಪುಟಗಳನ್ನು ಮೀರಬಾರದೆಂದು ನಿರ್ಬಂಧಹಾಕಿದ್ದರು. ಇಂದು ಒಂದು ಕತೆ ಬರೆದೇತೀರಬೇಕೆಂದು ನಾನು ನಿರ್ಧರಿಸಿದೆ. ಆದರೆ ಹಿಂದೆ ಮಾಡಿದ ಇಂಥ ಎಷ್ಟೋ ನಿರ್ಧಾರಗಳ ನೆನಪು ಬಂತು. ಆದರೂ ಅಧೀರನಾಗಲಿಲ್ಲ, ಹಿಂದಿನದು ಹಿಂದಾಯಿತು. ಇಂದು ಮಾತ್ರ ತಪ್ಪಿಸಲಾಗದು, ಆದಷ್ಟು ತೀವ್ರ ಬರೆದು ಜಯಂತಿಗೆ ಕಳಿಸಬೇಕೆಂದು ವಿಚಾರಿಸಿದೆ. ಕತೆ ಬರೆಯಲನುಕೂಲವಾದ ವೇಳೆಯನ್ನು ಹುಡುಕತೊಡಗಿದೆ. ಮರುದಿನ ಮಧ್ಯಾಹ್ನ ಮೂರು ಗಂಟೆಯೊಳಗಾಗಿ, ಮನೆಯ ಎಲ್ಲ ಕೆಲಸಗಳನ್ನು ಮುಗಿಸಿ, ಆ ಮೇಲೆ ಕತೆ ಬರೆಯುವ ಸಮಾರಂಭಕ್ಕೆ ತೊಡಗಬೇಕೆಂದು ಮನಸ್ಸಿನಲ್ಲಿಯೆ ಮಂಡಿಗೆತಿಂದೆ.

ಮರುದಿನ ಮುಂಜಾನೆ ಮನೆಯಲ್ಲಿ ಗಡಿಬಿಡಿಯೋ ಗಡಿಬಿಡಿ. ರೇಶನ್ ತರುವುದು, ಬೀಸಿಕೊಂಡು ಬರುವುದು, ಕಿರಾಣಿಸಾಮಾನು ತರುವುದು, ಕಾಯಿಪಲ್ಲೆ ತರುವುದು—ಮುಂತಾದ ಪ್ರಪಂಚದ ಎಲ್ಲ ತೊಡಕುಗಳೂ ಅಂದು ನನ್ನ ಕೊರಳಿಗೇ ಬಿದ್ದುವು. ಅಂತೂ ಎಲ್ಲ ಕೆಲಸಗಳನ್ನೂ ಮುಗಿಸಿ, ೪ ಗಂಟೆಗೆ ಮನೆಬಿಟ್ಟು ಹೊರಡಬೇಕಾದರೆ ಸಾಕುಬೇಕಾಯಿತು. ಮೊದಲೇ ಗೊತ್ತುಪಡಿಸಿದ— ಊರಹೊರಗಿನ ಬಯಲುಸ್ಥಳಕ್ಕೆ ಹೋದೆ. ಸಾಹಿತ್ಯವು ಪ್ರಶಾಂತ ಮತ್ತು ಏಕಾಂತ ಸ್ಥಳದಲ್ಲಿಯೇ ವಿಶೇಷವಾಗಿ ಹೊರಸೂಸುವುದೆಂದು ನನ್ನ ಪರಿಚಯದ ಕೆಲವು ಬರೆಹಗಾರರು ಅಭಿಪ್ರಾಯಪಟ್ಟಿದ್ದರು.

ಆ ಸ್ಥಳವನ್ನು ತಲುಪಿದ ಮೇಲೆ, ಅನೇಕ ವಿಚಾರಗಳು ನನ್ನನ್ನು ಮುತ್ತಿದುವು. ನಾನು ಬರೆಯಬೇಕೆಂದಿರುವ ಕಥೆಯ ತಲೆಬರಹವೇನಿರಬೇಕು ? ಕತೆಯನ್ನು ಯಾವ ವಿಷಯವಾಗಿ ಬರೆಯಬೇಕು? ಎಷ್ಟು ಪುಟ ಬರೆಯಬೇಕು ? ತಲೆಬರೆಹವನ್ನು ಮೊದಲು ಕೊಟ್ಟು ಅದರ ಆಧಾರದ ಮೇಲಿಂದ ಕತೆ ಬರೆಯಬೇಕೋ ? ಅಥವಾ ಮೊದಲು ಕತೆಬರೆದು ಅದರ ಆಧಾರದ ಮೇಲಿಂದ ತಲೆಬರೆಹ ಕೊಡಬೇಕೊ ?—ಈ ಎಲ್ಲ ವಿಚಾರಗಳು ಏಕಕಾಲಕ್ಕೆ ನನ್ನ ಮೇಲೆ ದಾಳಿಮಾಡಿದುವು. ನನ್ನನ್ನು ಕುಕ್ಕಿ-ಕುಕ್ಕಿ ಹಣ್ಣುಹಣ್ಣಾಗಿ ಮಾಡಿದುವು. ಕತೆ ಬರೆಯುವುದು ಹುಡುಗರ ಆಟವಲ್ಲವೆಂಬ ಕಲ್ಪನೆ ಆಗ ನನಗೆ ಬಂತು ! ಕೊನೆಗೆ ವಿಚಾರಗಳ ತಾಕಲಾಟವನ್ನು ನಿಲ್ಲಿಸಿ, ಒಂದು ನಿರ್ಧಾರಕ್ಕೆ ಬಂದೆ. "ಮೊದಲು ತಲೆಬರೆಹ ಕೊಟ್ಟು ಆ ಮೇಲೆ ಕತೆ ಬರೆಯಬೇಕು. 'ಕತೆಗಾರ' ಎಂದೇ ತಲೆಬರೆಹವಿರಬೇಕು "ಇನ್ನೇನು, ಎಲ್ಲಾ ಆಯಿತು. ಕತೆ ಶುರುಮಾಡಬೇಕು ಬರೆಯಲಿಕ್ಕೆ—ಎಂದವನೇ ಕಾಗದ-ಲೆಕ್ಕಣಿಕೆಗಳನ್ನು ಹೊರತೆಗೆದೆ. ಇನ್ನೂ ತಲೆಬರೆಹವನ್ನು ಕೂಡ ಬರೆದಿದ್ದಿಲ್ಲ. ಹಿಂದಿನಿಂದ ಯಾರೋ ನನ್ನನ್ನು ಕೂಗಿ ಕರೆದಂತಾಯಿತು. ನೋಡುತ್ತೇನೆ.... ನನ್ನ ಮಿತ್ರ ವೆಂಕಟಾಚಲ !

"ಇಲ್ಲ್ಯಾಕಯ್ಯಾ ನೀನು ಬಂದದ್ದು— ಲಾಯಬ್ರರಿಬಿಟ್ಟು ?" ಎಂದು ತುಸು ಅಣಕುಧ್ವನಿಯಲ್ಲಿಯೇ ಕೇಳಿದ.

"ಇವತ್ತೇನೋ ಬೇಸರು ಬಂದಿತ್ತು; ತಿರುಗಾಡಿಕೊಂಡು ಹೋಗೋಣ ಸ್ವಲ್ಪ—ಅಂತಬಂದೆ. ನೀನೇಕಪ್ಪಾ ಇಲ್ಲಿ ಬಂದದ್ದು ಅಡಿಗೆಮನೆಬಿಟ್ಟು?" ಎಂದು ಅವನನ್ನು ಪ್ರಶ್ನಿಸಿದೆ. 'ಇವನೇನೋ ನನ್ನ ಕತೆಗೆ ಕಂಟಕಪ್ರಾಯನಾಗೇ ಬಂದನಲ್ಲೋ!' ಎಂದು ಮನಸ್ಸಿನಲ್ಲಿಯೇ ಗೊಣಗಾಡಿದೆ. ಅವನಿಗೆ ಕಾಣದಂತೆ ಕಾಗದ-ಲೆಕ್ಕಣಿಕೆಗಳನ್ನು ಜೇಬಿಗೆ ಸೇರಿಸಿದೆ. ಅಂದಿನ ನನ್ನ ಕತೆಬರೆಯುವ ನಿರ್ಧಾರ ನಿರಾಧಾರವಾಗಿಹೋಯಿತು— ಎಂದಿನಂತೆ !

ತುಸುದಿನಗಳಲ್ಲಿಯೇ ಜಾಗತಿಕ ಕಥಾಸ್ಪರ್ಧೆಯ ಪ್ರಕಟನೆಯೊಂದು 'ಸಂಯುಕ್ತ ಕರ್ನಾಟಕ'ದಲ್ಲಿ ಕಾಣಿಸಿಕೊಂಡಿತು. ಈ

ಸಾರಿ ನಾನು ತೀರ ಬೇರೆ ಅಭಿಪ್ರಾಯಕ್ಕೆ ಬಂದೆ. ಹೇಗಾದರೂ ಮಾಡಿ ಕಥೆಯನ್ನು ಬರೆದೇ ತೀರಬೇಕೆಂದು ಗಟ್ಟಿಮನಸ್ಸು-ಮಾಡಿದೆ. ಬರೆಯುವುದೇನು ಬಂತು ಹಾಳು! ಜಾಗತಿಕ ಸ್ಪರ್ಧೆಗೆ ಕಳಿಸುವುದೆಂದೇ ನಿರ್ಧರಿಸಿದೆ. ಕತೆ ಬರೆಯುವ ಸಮಯ ಯಾವುದು? ಹೇಗೆ ಪ್ರಾರಂಭ ಮಾಡಬೇಕು?—ಮುಂತಾದುವು-ಗಳನ್ನೆಲ್ಲ ಬಲ್ಲವರಿಂದ ಸ್ವಲ್ಪ ಕೇಳಿ ತಿಳಿದುಕೊಳ್ಳಬೇಕೆಂಬ ಆಶೆ ಹುಟ್ಟಿತು. ವಿಚಾರಿಸಿ ನೋಡಿದಾಗ 'ಅದು ಸರಿ' ಎಂದೂ ಕಂಡಿತು. ಅದರಂತೆ ನನ್ನ ಗೆಳೆಯರಾದ ಕೆಲವು ಸಾಹಿತ್ಯಿಕರನ್ನು ನಾನು ಸೂಕ್ಷ್ಮವಾಗಿ ವಿಚಾರಿಸಿದೆ. ನಾನು ಕತೆ ಬರೆಯುವವನಿದ್ದೇನೆಂದರೆ ಅವರು ನಗೆಯಾಡದೇ ಬಿಡಲಾರರೆಂಬುದು ನನಗೆ ಗೊತ್ತೇ ಇತ್ತು. 'ಇವೆಲ್ಲ ತಿಳಿದುಕೊಂಡೇನು ಮಾಡುವಿ?' ಎಂದು ಆತ ಒಂದು ಸಲ ಕೇಳಿದರೆ "Oh Simply for infermation" ಎಂದು ಉತ್ತರಿಸಬೇಕೆಂದು ಮನಸ್ಸಿನಲ್ಲಿಯೇ ಮಾಡಿಕೊಂಡೆ. ಅದರಂತೆ ಅವರಲ್ಲಿ ಒಬ್ಬ ಕೇಳಿಯೂ ಬಿಟ್ಟ. ಅವನೇನೋ M. A. ಡಿಗ್ರಿ ಪಡೆದಿದ್ದಾನೆ. ಸಾಹಿತ್ಯಿಕ; ಉದ್ದಾಮ ಕತೆಗಾರ. ತನ್ನ ಚಿಕ್ಕ ಕತೆ-ಗಳ ಬಗ್ಗೆ ಈಗಾಗಲೇ ಅತಿ ಹೆಸರುವಾಸಿಯಾಗಿದ್ದಾನೆ. ಆದರೂ, ತನ್ನಂತೆ ಯಾರೂ ಬರೆಯಲಾರರೆಂಬ ಅವನ ಹೆಮ್ಮೆ ಅವನ ಶ್ರೇಯ-ಸ್ಸಿಗೆ ಆಗಾಗ ಕುಂದು ತಂದೊಡ್ಡುತ್ತದೆ. ನನಗೆ ಅಣಕವಾಡಬೇಕೆಂದೇ ಆತ ಹಾಗೆ ನನ್ನನ್ನು ಕೇಳಿದ್ದ. ನಾನಾದರೂ ಮೊದಲೇ ಗೊತ್ತು-ಮಾಡಿಸಿದ ಉತ್ತರವನ್ನೇ ಕೊಟ್ಟೆ, ಮತ್ತು ಸ್ವಲ್ಪ ನಕ್ಕೆ. ಅವನೂ ...ಶಾವರಿ ನಗೆ ನಕ್ಕ.

ಅಂದು ಭೋಜನಾನಂತರ, ಇಡೀ ದಿನ ನಿಷ್ಟೆಯಲ್ಲಿಯೇ ಮಲಗಿದೆ. ಎಲ್ಲಿಯೂ ಹೊರಗೆ ಹೋಗಲಿಲ್ಲ. ಮನೆಯಲ್ಲಿ ಎಲ್ಲರಿಗೂ ಆಶ್ಚರ್ಯ—ಇಂದು ಈತ ಹೀಗೇಕೆ ಮಾಡುತ್ತಾನೆಂದು, ನಮ್ಮ ತಾಯಿಯವರು ಕೇಳಿಯೇ ಬಿಟ್ಟರು: 'ಮೈಯಲ್ಲಿ ಆರಾಮ ಇಲ್ಲವೇ?' ಎಂದು. ಅವರಿಗೇನು ಗೊತ್ತು ಪಾಪ, ಅದು ರಾತ್ರಿಯ ಜಾಗರಣೆಯ ಪೂರ್ವತಯಾರಿ ಎಂದು!

ರಾತ್ರಿ ಹನ್ನೆರಡುಗಂಟೆಗೆ ಸರಿಯಾಗಿ ಎದ್ದೆ. ಎಲ್ಲರೂ ನಿದ್ರಾ-ದೇವಿಯ ವಶವಾಗಿದ್ದರು. ನಾನು ಮಾತ್ರ ಕಗ್ಗತ್ತಲೆಯಲ್ಲಿ ತಡಪಡಿಸಿ ಎದ್ದೆ. ಲಾಯಿಟ್ ಹಚ್ಚಿ ಸುತ್ತಲೂ ನೋಡಿದೆ, ಯಾರಾದರೂ ಎಚ್ಚರಾಗುವರೋ ಎಂದು. ಎಲ್ಲರೂ ಸ್ವಪ್ನದಲ್ಲಿರುವರೆಂಬು-ದನ್ನು ಮನಗಂಡವನೇ ಅಡಿಗೆಮನೆಯ ಹಾದಿ ಹಿಡಿದೆ. ಸ್ಟೋವ್ ಹೊತ್ತಿಸಿ ಒಂದು ಗ್ಲಾಸು ಚಹಾ ತಯಾರಿಸಬೇಕೆಂಬುದೇ ನನ್ನ ಉದ್ದೇಶವಾಗಿತ್ತು. ಆ ಉದ್ದೇಶ ನನ್ನ ಸಾಹಿತ್ಯದ ಸಲಹೆಗಾರ-ನಿಂದಲೇ ನನ್ನಲ್ಲಿ ಮೂಡಿತ್ತು. ಅಂದೇ ಮುಂಜಾನೆ ಲಾಯಬ್ರರಿಗೆ ಹೋದಾಗ, ಸುರೇಶ ಹೇಳಿದ್ದ, ಸಾಹಿತಿಗೆ ಪ್ರಶಾಂತ ವಾತಾವರ-ಣದ ಮೇಲೆ—ಅದರಲ್ಲೂ ಏಕಾಂತದ ಮೇಲೆ ಬಹಳ ಇಷ್ಟವೆಂದು ಅವನ ಭಾವನೆ. ಕೆಲವರಿಗೆ ಉತ್ತೇಜಕ ಪೇಯಗಳ ಆವಶ್ಯಕತೆ ಇದೆಯೆಂದೂ ಅವನ ಮತ. ವಿವಿಧ ಸಾಹಿತ್ಯಗಾರರ ವಿವಿಧ ಚಟ-ಗಳನ್ನು ಆತ ಬಣ್ಣಿಸಿದ. ಅವರ ಚಟಗಳೇ ಅವರ ಸಾಹಿತ್ಯವನ್ನು ಹೊರಹಾಕಲಿಕ್ಕೆ ಬಹುಮಟ್ಟಿಗೆ ಸಹಕಾರಿಯಾಗುತ್ತವೆಯೆಂದೂ ಅವನ ನಂಬಿಗೆ. ಒಬ್ಬ ಲೇಖಕ ಮಹಾಶಯರ ಧೂಮ್ರಪಾನದ ಕಡೆಗೂ ನನ್ನ ದೃಷ್ಟಿಯನ್ನು ಸೆಳೆದಿದ್ದ. ಧೂಮ್ರಪಾನವೇಕೋ ನನಗೆ ಹಿಡಿಸಲಿಲ್ಲ. ಉತ್ತೇಜಕ ಪೇಯವೆನಿಸಿಕೊಂಡ ಚಹವನ್ನೇ ತೆಗೆದುಕೊಂಡು, ಆ ನಡುರಾತ್ರಿಯ ಶಾಂತತೆಯಲ್ಲಿ ಕಥೆ ಬರೆಯು-ವುದನ್ನು ಪ್ರಾರಂಭಮಾಡಬೇಕೆಂದು, ಮನದಲ್ಲಿಯೇ ನಿಶ್ಚಯಿಸಿದ್ದೆ.

ಸ್ಟೋವ್ ಹೊತ್ತಿಸಿದೆ. (Silent burner ಇತ್ತು). ಯಾರಿಗೂ ಎಚ್ಚರವಾಗಬಾರದೆಂದು ಲಾಯಿಟ್ ಆರಿಸಿದೆ. ಇನ್ನು ನೀರು ಎಸರಿಡುವುದೊಂದುಳಿಯಿತು. ಚಹದ ಭಾಂಡಿ ಹುಡುಕಾಡತೊಡ-ಗಿದೆ. ನನ್ನ ಅದೃಷ್ಟವೇನೋ ಎಂಬಂತೆ ಆ ಭಾಂಡಿ, ಕೈತಾಕಿ ಶೆಲ್ಫಿನ ಮೇಲಿಂದ 'ಧಡಲ್' ಎಂಬ ಸಪ್ಪಳದೊಂದಿಗೆ ಕೆಳಗೆ ಬಿತ್ತು. ನಮ್ಮ ತಾಯಿಯವರ ಕಿವಿಗಳು ಮೊದಲೇ ಸರ್ಪದ ಕಿವಿಗಳಿದ್ದಂತೆ. ಈಗಂತೂ ಕೇಳುವುದೇನು? ಕೂಗಿಕೊಂಡು ಎದ್ದೇ ಬಿಟ್ಟರು—ಹಾಸಿಗೆಯ ಮೇಲಿಂದ. ಇನ್ನೇನು, ಕಳ್ಳಕಳ್ಳನೆಂದು ರಭಸದಿಂದ ಒದರುವವರೇ; ಆದರೆ ನಾನು ಹೊತ್ತಿಸಿಟ್ಟ ಸ್ಟೋವ್ ಅವರ ಲಕ್ಷ್ಯ ಸೆಳೆದಿರಬೇಕು!

"ಯಾರವರು?" ಎಂದು ಅವರು ಇನ್ನೂ ಪೂರ್ಣ ಶಬ್ದಗಳನ್ನು ಹೊರಗೆ ಹಾಕಿದ್ದಿಲ್ಲ, ನಾನೇ ಕೇಳಿದೆ: "ಯಾಕವ್ವಾ ಇಷ್ಟು ಗಾಬರಿಯಾಗಿ ಎದ್ದಿ ಒಮ್ಮೆಲೇ?" ಎಂದು.

ಅವರು ಕೂಡಲೇ ಲಾಯಿಟ್ ಹಚ್ಚಿದರು. ಅಡಿಗೆಮನೆ ಬಿಟ್ಟು ಸ್ವಲ್ಪ ಹೊರಗೆ ಬಂದೆ. ಅವರು ನನ್ನನ್ನು ನೋಡಿದವರೇ, "ಅಯ್ಯೋ ರಾಮು, ನೀ ಏನು? ನಾ ಖರೇ ಅಂದರೂ ಘಾಬರಿ ಆಗಿದ್ದೆನಪಾ! ಇಷ್ಟೊತ್ತಿನ್ಯಾಗ್ಯಾಕ ಎದ್ದಿ? ಏನು ಮಾಡಲಿಕ್ಕ ಹತ್ತೀ? ಸ್ಟೋವ್ ಯಾಕ ಹೊತ್ತಿಸೀದಿ?" ಎಂದು ಒಂದೇ ಉಸುರಿನಲ್ಲಿ ಪ್ರಶ್ನೆಗಳ ಮಳೆಯನ್ನೇ ಸುರಿಸಿದರು.

ಏನು ಹೇಳಬೇಕೆಂಬುದೇ ನನಗೆ ತಿಳಿಯಲಿಲ್ಲ. ಒಂದು ವೇಳೆ ಎರಡನೆಯವರ ಮನೆಯಲ್ಲಿ ನಾನು ಹೀಗೆ ಮಾಡಿದ್ದರೆ—ಎಂಬ ಸುಳ್ಳು ಭ್ರಾಂತಿಯೊಂದು ನನ್ನ ತಲೆಯಲ್ಲಿ ಹಾಯ್ದು ಹೋಯಿತು.

"ಏನೂ ಇಲ್ಲ; ಸ್ವಲ್ಪ ತಲೆ ನೋಯುತ್ತಿತ್ತs, ಚಹಾ ಕುಡಿದರೆ ಕಡಿಮ್ಯಾದೀತೆಂದು ಚಹಾ ಮಾಡ್ಲಿಕ್ಕೆಹತ್ತೀನಿ. ಇಷ್ಟೇ, ಮತ್ತೇನೂ ಇಲ್ಲ; ಇದೇ ಈಗ ಎದ್ದೆ. ನಿಮಗೆಲ್ಲ ತ್ರಾಸಾಗಬಾರದೆಂದು ಲಾಯಿಟ್ ಆರಿಸಿದ್ದೆ ಇಷ್ಟೆ!" ಎಂದು ಸ್ವಲ್ಪ ಎದೆಗುದಿಯಿಂದಲೇ ಉಸುರಿದೆ.

"ಹೌದು, ಮಧ್ಯಾಹ್ನದಾಗಿನಿಂದ ಸುಂದs ಇದ್ದೀ! ಖರೇ ಹಾಸಿಗೀ ಹಿಡಿದೀದ್ದೀಯಪಾ. ಆವಾಗನs ಏನಾಗೇದೋ ಅಂದರ, ಹೇಳ್ಳಿಲ್ಲ. ಈಗರ ಏನಾತು? ನನ್ನ ಎಬ್ಬಿಸಬಾರದಾಗಿತ್ತೇನು? ಚಹಾ ಮಾಡಿಕೊಡತಿದ್ದೆ." ಎಂದವರೇ ಮೇಲಕ್ಕೇ ಎದ್ದು ಬಿಟ್ಟರು.

ನಾನು ಅವಾಕ್ಕಾದೆ. ಬೇಡವೆಂದು ಎಷ್ಟು ಹೇಳಿದರೂ ಕೇಳಲೇ ಇಲ್ಲ. ಎದ್ದು ಬಂದೇಬಿಟ್ಟರು ಅಡಿಗೆಯ ಮನೆಗೆ. ಅಷ್ಟರಲ್ಲಿ,

ಕಥಾನಾಯಕನ ಕೃಪೆಯೋನೋ ಎಂಬಂತೆ, ನನ್ನ ಚಿಕ್ಕ ತಮ್ಮ ಕಿರುಚಲು ಪ್ರಾರಂಭಿಸಿಬಿಟ್ಟ. ಮೊದಲು ಹೋಗಿ ಅವನನ್ನು ಸಮಾಧಾನ ಮಾಡಲು, ನನ್ನ ತಾಯಿಯವರಿಗೆ ನಾನು ತಿಳಿಸಿದೆ. ಇಲ್ಲವಾದರೆ ಎಲ್ಲರ ನಿದ್ದೆ ಕೆಡಿಸುವನೆಂದು ಹೇಳಿದೆ. ಕಿರುಚುವುದನ್ನು ಕೇಳಿ ನನ್ನ ತಲೆನೋವು ಹೆಚ್ಚಾದೀತೆಂದು ಹೆದರಿಕೆ ಹಾಕಿದೆ. ಅಂತೂ ಅವರನ್ನು ತಿರುಗಿ ಕಳಿಸಬೇಕಾದರೆ ಸಾಕುಸಾಕಾಗಿ ಹೋಯಿತು ನನಗೆ.

ಕೊನೆಗೆ ನಾನೇ ಗೆದ್ದೆ. ಚಹ ಕುಡಿದವನೇ ನೇರವಾಗಿ ಮೇಜಿನ ಬಳಿ ಹೋಗಿ ಖುರ್ಚಿಯೊಂದನ್ನು ಎಳೆದುಕೊಂಡು ಕುಳಿತೆ. ಕಥೆಯ ರೂಪರೇಷೆ— ವಸ್ತು ವಿಷಯ— ತಲೆಬರೆಹ— ಕಥಾನಾಯಕ— ಕಥಾನಾಯಕಿ— ಇನ್ನೂ ಅನೇಕ ವಿಷಯಗಳನ್ನು ಯೋಚಿಸುತ್ತ, ಆ ಸುಪ್ತಶಾಂತತೆಯಲ್ಲಿ ಲೀನನಾಗಿದ್ದೆ. ಕತೆ ಬರೆಯಲಿಕ್ಕೆ ಬೇಕಾಗುವ ಎಲ್ಲ ಸಾಮಗ್ರಿಗಳನ್ನೂ, ಮುನ್ನಾದಿನವೇ ಮಲಗುವಾಗ ಮೇಜಿನ ಮೇಲಿರಿಸಿದ್ದೆ. ವಿಚಾರಪ್ರವಾಹ ಒಂದೇಸಮನೇ ನನ್ನ ತಲೆಯಲ್ಲಿ ಸಾಗಿತ್ತು.

"ರಾಮು," ಎಂದು ನನ್ನ ತಾಯಿಯವರು ಒದರಿದ್ದು ಎಚ್ಚರವೇ ಇದ್ದಿಲ್ಲ. ವಿಚಾರದಲ್ಲಿ ಅಷ್ಟು ಮಗ್ನನಾಗಿದ್ದೆ. ಅವರು ಮೇಜಿನ ಬಳಿ ಬಂದಾಗಲೇ ಎಚ್ಚರು. "ಅಂ ಏನು?" ಎಂದೆ.

"ಯಾಕೋ, ಆರಾಮಿಲ್ಲ ವೈಯಾಗ ಅಂತಿ; ಸುಮ್ಮಗ ಮಲಗಬಾರದೇ? ಜಪ್ಪೋ ಅಂತ ತಲೀ ಹಿಡಿಕೊಂಡು ಕೂತರ ಏನದು? ಈ ಅಮೃತಾಂಜನ ತಗೋ, ಸ್ವಲ್ಪ ತಲಿಗೆ ಹಚ್ಚಿಗೊಂಡು ಸುಮ್ಮನೆ ಮಲಕೋ, ತಿಳೀತೇನು?" ಎಂದು ಗುಡುಗಿದರು.

ನನ್ನ ವಿಚಾರಪ್ರವಾಹಕ್ಕೆ ಒಡ್ಡು ಹಾಕಿದಂತಾಯಿತು. ಕಕ್ಕಾವಿಕ್ಕಿಯಾಗಿ ಅತ್ತಿತ್ತ ನೋಡಿದೆ. ವೈಯನ್ನು ಸರಿಮಾಡಿಕೊಂಡು ಖುರ್ಚಿಯ ಮೇಲೆ ಕುಳಿತೆ— ನೀಟಾಗಿ.

"ಇಲ್ಲ, ನಿದ್ದಿ ಬರಲಿಲ್ಲ, ಸ್ವಲ್ಪ ಓದೋಣ ಅಂತ ಕೂತೇನಿ! ಇಷ್ಟs ಮತ್ತೇನಿಲ್ಲ....ವಿಶೇಷ ತ್ರಾಸೇನಿಲ್ಲ" ಎಂದು ಹೇಗೆ ಸುಧಾರಿಸಿಕೊಂಡು ಹೇಳಿದೆನೋ ನನಗೇ ಗೊತ್ತಿಲ್ಲ.

"ಅಂತೂ ಏನಾರೇ ಮಾಡಪಾ!" ಎಂದಿಷ್ಟೇ ಹೇಳಿ, ಅವರು ಮತ್ತೆ ಹೋಗಿ ಮಲಗಿದರು.

ಪುನಃ ನನ್ನ ವಿಚಾರದಲ್ಲಿ ನಾನು ಮಗ್ನನಾದೆ. ಇಂದು ಕತೆಯನ್ನು ಬರೆದೇ ತೀರಬೇಕೆಂದು ನನ್ನ ಹಟ. ಆದರೆ ಮಾಡುವುದೇನು? ಇಷ್ಟು ಹೊತ್ತು ಕಳೆದರೂ ಕಥಾವಸ್ತುವನ್ನೇ ನಾನು ಆಯ್ದುಕೊಂಡಿರಲಿಲ್ಲ. ಕತೆಯ ತಾತ್ಪರ್ಯವನ್ನರಿತ ಮೇಲೆಯೆ ತಲೆಬರೆಹ ತಕ್ಕಂತೆ ಕೊಡಬೇಕೆಂದು ಯೋಚಿಸಿದೆ. ಆದ್ದರಿಂದಲೇ ಕಥಾವಸ್ತುವಿಗಾಗಿ ಎಷ್ಟೋ ಸಮಯದ ವರೆಗೆ ತಲೆ ಕೆರೆದುಕೊಂಡೆ. ಕತೆಯನ್ನು ಈಗಿನ ವಾತಾವರಣಕ್ಕೆ ಸಂಬಂಧಿಸಲೊ ಅಥವಾ ಪೂರ್ವಜರ ಆಗು-ಹೋಗುಗಳ ಬಗ್ಗೆ ಬರೆಯಲೋ ಎಂದು ಮನಸ್ಸಿನಲ್ಲಿಯೇ ತೂಗಿ ನೋಡಿದೆ. ಸದ್ಯದ ವಾತಾವರಣದಲ್ಲಿ ಯಾರ ಜೀವನ ಚಿತ್ರಿಸಲಿ? ಬಡವರದೋ, ಶ್ರೀಮಂತರದೋ, ಮಧ್ಯಮವರ್ಗದವರದೋ? ಇಲ್ಲವಾದರೆ ಎಲ್ಲ ವರ್ಗಗಳ ಸುಖದುಃಖದಿಂದ ಕೂಡಿದ ಸಮರಸವಾದ ವಿಶಾಲಜೀವನವನ್ನೇ ಚಿತ್ರಿಸಲೊ?—ಎಂದು ಆಲೋಚಿಸಿದೆ ಸಮರಸವಾದ ಜೀವನವನ್ನೇ ಚಿತ್ರಿಸಬೇಕೆಂದು ನಿರ್ಧರಿಸಿದೆ. ಇನ್ನು ಪೂರ್ವಜರ ಇತಿಹಾಸದ ಪಾನಗಳನ್ನು ತಿರುವಿದೆ. ಅಲ್ಲಿ ರಾಜ, ರಾಣಿ, ಸೇನಾಪತಿ, ಪ್ರಜೆಗಳು ಇವರ ವಿನಾ ಮತ್ತಾರೂ ಕಾಣಲಿಲ್ಲ. ಅವರ ಬಗ್ಗೆ ಏಕೋ ನನಗೆ ಹಿಡಿಸಲಿಲ್ಲ. ಅವರ ಬಗ್ಗೆ ನನಗೆ ವಿಶೇಷ ಅಭ್ಯಾಸವೂ ಇಲ್ಲ. ಆಯಿತು, ಸದ್ಯದ ವಾತಾವರಣವೇ ನನ್ನ ಕತೆಗೆ ಸರಿಯಾದದ್ದೆಂದು ಗ್ರಹಿಸಿದೆ. ಅದು ಯಾಕಂದರೆ, ಈಗಿನ ಜನರ ಜೀವನ, ನಡೆ, ನುಡಿ ಇವುಗಳ ಬಗ್ಗೆ ನನ್ನಲ್ಲಿ ವಿಶೇಷ ಜ್ಞಾನವಿರಲಿಲ್ಲವಾದರೂ, ಸ್ವಲ್ಪಮಟ್ಟಿಗಾದರೂ ಇದೆ—ಎಂಬ ಭರವಸೆ ನನಗಿತ್ತು. ಒಂದು ಬಡಕುಟುಂಬದ ಜೀವನವನ್ನೇ ಚಿತ್ರಿಸಬೇಕೆಂದು ಮನಸ್ಸಿನಲ್ಲಿ ಮಾಡಿದೆ. ಕುಟುಂಬದಲ್ಲಿಯ "ಗಂಡ-ಹೆಂಡಿರು—ಮಕ್ಕಳು—ಯಜಮಾನನ ಉತ್ಪನ್ನ—ಕುಟುಂಬದ ಜನರ ಉದರ ನಿರ್ವಹಣ—ಮಕ್ಕಳ ಶಿಕ್ಷಣ—ಕುಟುಂಬದಲ್ಲಿಯ ಬೇನೆ ಬೇಸರಿಕೆಗಳು—ಇವೆಲ್ಲ ಕಾರಣದಿಂದ ಅವರ ತ್ರಾಸ—ದುಡ್ಡಿನ ಕೊರತೆ—ಅವರಿಗೆ ನೆರೆಹೊರೆಯ ಸಹಾಯದ ಆವಶ್ಯಕತೆ" ಮುಂತಾದ ಇನ್ನೂ ಅನೇಕ ವಿಷಯಗಳನ್ನು ನನ್ನ ಕತೆಯಲ್ಲಿ ವಿವೇಚಿಸಿ, ಸಮಾಜದ ಬಿಕ್ಕಟ್ಟನ್ನು ಎತ್ತಿ ತೋರಿಸಬೇಕೆಂದು ನಿರ್ಧರಿಸಿದೆ. ಜನರಿಗೆ ಆದರ್ಶ ಜೀವನದೆಡೆಗೆ ದಾರಿ ತೋರಿಸಬೇಕೆಂದು ಮನಸ್ಸಿನಲ್ಲಿಯೇ ಆಶಿಸಿದೆ.

ಆಯಿತು, ಎಲ್ಲಾ ವಿಚಾರಿಸಿಯಾಯಿತು. ಇನ್ನೇನು ಕತೆ ಬರೆಯಲು ಶುರು ಮಾಡುವುದು; ಮೇಜಿನಮೇಲಿದ್ದ ಕಾಗದಗಳನ್ನು ಸರಿಯಾಗಿರಿಸಿ, ಕೈಯಲ್ಲಿ ಲೆಕ್ಕಣಿಕೆಯನ್ನು ಹಿಡಿದೆ. ಮುಗಿಯಿತು 'ಶ್ರೀವಿಘ್ನೇಶಾಯನಮಃ' ಎಂದು ಬರೆದವನೇ ಕಥೆ ಶುರುಮಾಡುವವ! ಯಾವುದೋ ಕಿರುಚುವ ವಿಚಿತ್ರಧ್ವನಿ ನನ್ನನ್ನು ಬೆಚ್ಚಿಬೀಳುವಂತೆ ಮಾಡಿತು! ನನ್ನ ಎದೆ ಝಲ್ಲೆಂದಿತು. ಮತ್ತೇನಿಲ್ಲ, ಎರಡು ಬೆಕ್ಕುಗಳು ಜಗಳವಾಡುತ್ತಿದ್ದುವೆಂದು ಕಂಡು ಬಂತು. ಎದೆ ಹಗುರಾಯಿತು. ಅವು ಮಾತ್ರ 'ಗುರ್, ಮೆವ್' ಎಂದು ಬಚ್ಚಲುಕೋಣೆಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಓಡುತ್ತ ಅದನ್ನು ಇದನ್ನು ಕೆಡಹುತ್ತ, ದೊಡ್ಡ ಗದ್ದಲವನ್ನು ಎಬ್ಬಿಸಿದುವು. ಆಯಿತು, ವಿಘ್ನೇಶ್ವರನಿಗೆ ನಾನೆಷ್ಟು ಬೇಡಿಕೊಂಡರೂ ಆತ ವಿಘ್ನಗಳನ್ನೇನೂ ತಪ್ಪಿಸಲಿಲ್ಲ ಕೊನೆಗೂ.

"ಉಶ್, ಉಶ್, ಛೂ, ಹಚ್" ಎಂದು ನಮ್ಮ ತಂದೆಯವರು ಬಡಿಗೆ ತೆಗೆದುಕೊಂಡೇ ಎದ್ದು ಬಂದರು.

"ಅವ್ವಯ್ಯಾ! ಇವೇನs ಸುಡ್ಲಿ....ಇಷ್ಟೊತ್ತಿನಾಗs", ಎಂದು ನಮ್ಮ ತಾಯಿಯವರೂ ಎದ್ದು ಹಾಸಿಗೆಯ ಮೇಲೆ ಕುಳಿತರು. ಆ ಮೇಲೆ ಕೇಳುವುದೇನು? ನನ್ನ ಚಿಕ್ಕ ತಮ್ಮನೆದ್ದವನೇ ತನ್ನ ರಾಗ ಶುರು ಮಾಡಿದ!

ಆಯಿತು ಬ್ರಹ್ಮಾಂಡ ಸಿಟ್ಟು ಬಂದಿತು ನನಗೆ— ಆದರೆ ಯಾರ

ಮೇಲೆ ಸಿಟ್ಟು ಮಾಡಲಿ? ನನ್ನನ್ನೇ ನಾನು ಶಪಿಸಿಕೊಂಡೆ. ನನ್ನ ವಿಧಿಲಿಖಿತದಲ್ಲಿ ಕತೆ ಬರೆಯುವುದೇ ಇಲ್ಲವೆಂದುಕೊಂಡೆ. ಕೊನೆಗೆ ಬೇಸತ್ತು ಗಡಿಯಾರದ ಕಡೆಗೆ ನೋಡಿದೆ. ಆಗಲೇ ನಾಲ್ಕು ಬಡಿದಿತ್ತು. ಮುಂದೇನು? ಕತೆಯೂ ಇಲ್ಲ, ನಿದ್ದೆಯೂ ಇಲ್ಲ! ಇನ್ನೆಂದೂ ಕತೆ ಬರೆಯುವ ಹವ್ಯಾಸಕ್ಕೆ ಹೋಗುವುದಿಲ್ಲೆಂದು ಆಗಿನ ಮಟ್ಟಿಗೆ ಪ್ರತಿಜ್ಞೆಯನ್ನೇ ಮಾಡಿದೆ. ಲಾಯಿಟ್ ಆರಿಸಿದವನೇ ಹಾಸಿಗೆಯ ಮೇಲೆ ಉಸ್ಸೆಂದು ಉರುಳಿದೆ. ನನ್ನ ಕತೆ ಬರೆಯುವ ಮಬ್ಬು ನನ್ನನ್ನು ಶುದ್ಧ ಮಂಕನನ್ನಾಗಿ ಮಾಡಿತ್ತು. ನನ್ನ ಮೂರ್ಖತನಕ್ಕೆ ನನ್ನೊಳಗೆ ನಾನೇ ನಕ್ಕೆ. ಸ್ವಲ್ಪ ಕಾಲದಲ್ಲಿಯೆ ನಿದ್ರಾದೇವಿಯ ವಶನಾದೆ.

ಅದು ಕನಸೋ ನನಸೋ ನಾನರಿಯೆ: ಯಾರೋ ನನ್ನ ತಲೆಯ ಮೇಲೆ ಕೈಯಿಟ್ಟು "ತಮ್ಮಾ" ಎಂದರು. ನಾನು ಓ ಕೊಡುವುದರೊಳಗಾಗಿಯೇ ಅವರು ತಮ್ಮ ಚಿಕ್ಕ ಭಾಷಣವನ್ನು ಶುರು ಮಾಡಿದರು: "ನಿನಗಿಂದು ಕತೆ ಬರೆಯುವುದು ಸಾಧಿಸಿದ್ದರೆ, ಇಷ್ಟರಲ್ಲಿಯೇ ಪ್ರಪಂಚದಲ್ಲಿ ಬಹುಜನರು ಕತೆಗಾರರಾಗಬಹುದಿತ್ತು! ಸಾಹಿತ್ಯ ಸರಸದಾಟವಲ್ಲವೆಂಬುದನ್ನು ಇಂದು ನೀನು ಮನಗಂಡಿರಬಹುದು! ಸಾಹಿತ್ಯಕ್ಕೆ ಆಳವಾದ ಅಭ್ಯಾಸ ಬೇಕು— ಅಭ್ಯಾಸ ಬರೀ ಹಳೆಯ ಗ್ರಂಥಗಳದಲ್ಲ, ಪ್ರಪಂಚದ ಜನರ ಜೀವನದ ವಾಸ್ತವಿಕತೆಯ ಅಭ್ಯಾಸ! ಸಾಹಿತಿಗೆ ಸಮಾಜದ ಸಂಪೂರ್ಣ ಅನುಭವವಿರಬೇಕು. ಆತ ಸಮಾಜದ ಸುಖ ದುಃಖ ಅರಿತವನಾಗಿರಬೇಕು. ಸಾಹಿತಿ ಮನಸ್ಸಿನಿಂದ ಎಷ್ಟು ಕಠಿಣನೋ ಹೃದಯದಿಂದ ಅಷ್ಟೇ ಕೋಮಲನಾಗಿರಬೇಕು. ಸಮತೋಲ ದೃಷ್ಟಿ ಬೇಕು! ನಿಷ್ಪಕ್ಷಪಾತತನವಂತೂ ಸರಿಯೇ ಸರಿ! ಇವೆಲ್ಲ ಕತೆಗಾರನ ವಿಶಿಷ್ಟ ಗುಣಗಳೆಂದೇ ಹೇಳಬಹುದು. ಅದರಂತೆ ಸಾಹಿತ್ಯಕ್ಕೆ ಸತತ ಪ್ರಯತ್ನವು ಬೇಕು! ಒಮ್ಮೆಲೇ ಯಾರೂ ಸಾಹಿತಿಗಳಾಗಲಾರರು. ಅದಕ್ಕೂ ಅವಕಾಶ ಬೇಕು. ಸಾಧನೆ ಬೇಕು!

ನೀನು ಕತೆಗಾರನಾಗಲಾರೆಯೆಂದು ನಾನು ಹೇಳಲಾರೆ. ನಾನು ಹೇಳುವುದಿಷ್ಟೇ; ಸತತ ಪ್ರಯತ್ನ ಮಾಡು! ಸಮಾಜದ ಒಳಹೊಕ್ಕು ಸತ್ಯಾನ್ವೇಷಣೆ ನಡಿಸು. ವಾಸ್ತವಿಕ ಜೀವನವನ್ನೇ ಕಥೆಯ ರೂಪದಲ್ಲಿ ಚಿತ್ರಿಸಲು ಪ್ರಯತ್ನಿಸು. ನಿನ್ನ ಉದ್ದೇಶ, ಜನರಿಗೆ ಪ್ರಗತಿಯ ಆದರ್ಶಜೀವನದ ಸಂದೇಶ ಬೀರುವುದಿರಲಿ!

ಸಾಪ್ತಾಹಿಕ, ಮಾಸಿಕ, ತ್ರೈಮಾಸಿಕ ಪತ್ರಿಕೆಗಳಲ್ಲಿ ಅನೇಕ ಕತೆಗಳನ್ನು ನೀನು ಓದುತ್ತ ಬಂದಿರಬಹುದು. ಇತ್ತಿತ್ತಲಾಗಿ ಕೆಲವು ಕತೆಗಳು ಕೇವಲ ಮನೋರಂಜನೆಗಾಗಿ ರಚಿಸಲ್ಪಟ್ಟಂತೆ ತೋರುತ್ತವೆ. ಅವುಗಳಲ್ಲಿ ಜನತೆ ಕಲಿತುಕೊಳ್ಳುವಂತಹ ಆದರ್ಶ ವಿಚಾರಗಳು ತೀರ ಕಡಿಮೆ. ಕತೆಗಾರರ ಉದ್ದೇಶವೇ ಕೇವಲ ಮನರಂಜಿಸುವುದಿದೆಯೋ ಯಾರು ಬಲ್ಲರು? ಇದಾದರೂ ಕ್ಷಮ್ಯವಾಗಬಹುದು. ಆದರೆ ಕೆಲವು ಕತೆಗಳಂತೂ ಅವಾಸ್ತವಿಕವಾಗಿದ್ದರೂ, ನೀತಿಬಾಹಿರವಾಗಿರುತ್ತವೆ. ಎಚ್ಚರ! ನೀನು ಮಾತ್ರ ಇಂಥ ಕತೆಗಾರನಾಗಬೇಡ! ಇಂಥ ಕತೆಗಳಿಂದಾಗಲೀ, ಕತೆಗಾರರಿಂದಾಗಲೀ, ಸಮಾಜದ ಉದ್ಧಾರವಾಗಲಾರದು. ಅಧಃಪತನವಾದೀತು?"

ನಾನು ಒಂದೇ ಸವನೆ ಕೇಳುತ್ತಿದ್ದೆ—ಆಕೆಯ ಆ ಚಿಕ್ಕ ಭಾಷಣವನ್ನು. ಬೇಸರು ಬರಲಿಲ್ಲವಾದರೂ, ಮೊದಲು ಆಕೆ ಯಾರು ಎಂಬುದನ್ನು ತಿಳಿದುಕೊಳ್ಳುವ ಕುತೂಹಲ ನನ್ನನ್ನು ಹುಚ್ಚನನ್ನಾಗಿ ಮಾಡಿತು!

"ತಾಯಿ, ತಾವು ಯಾರು?" ನಾನು ಕೇಳಿಯೆ ಬಿಟ್ಟೆ, ಆಕೆಯನ್ನು. "ಸಾಹಿತ್ಯಕ್ಷೇತ್ರದಲ್ಲಿಯ ಸಾಹಿತ್ಯೋಪಾಸಕರು ನನಗೆ ಸಾಹಿತ್ಯದೇವಿ, ಎಂದು ನಾಮಕರಣ ಮಾಡಿರುವರು. ಕತೆಗಾರ ಸಾಹಿತ್ಯಕ್ಕೆ ಸಂಬಂಧಿಸಿದವ. ಅದಕ್ಕಾಗಿಯೇ ನಾನು ನಿನ್ನನ್ನು ಎಚ್ಚರಿಸಬೇಕಾಯಿತು. ನನ್ನ ಈ ಸಂದೇಶ ನಿನ್ನಲ್ಲಿಯಷ್ಟೇ ಉಳಿಯಬಾರದು. ಎಲ್ಲ ತರುಣ ಸಾಹಿತಿಗಳಲ್ಲಿ ಬೀರು!" ಎಂದಿಷ್ಟೇ ಹೇಳಿ ಆಕೆ ಅದೃಶ್ಯಳಾದಳು.

‘ಬಗನ’ ಬಾಲಾಮೃತ

ಮಕ್ಕಳ ಸಧೃಢತೆಗಾಗಿ ‘ಬಗನ’ ಬಾಲಾಮೃತವನ್ನು ಉಪಯೋಗಿಸಿರಿ.

ಮುಖ್ಯವಾದ ಮಕ್ಕಳ ಯಾಕೃತು ಮತ್ತು ಹೊಟ್ಟೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ ‘ಗ್ರಾಯಿಪ್ ವಾಟರಿನ’ ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ ‘ಟೊನಿಕ್ಕು’ ಇರುವದು.

THE NATIONAL PHARMACIES &
PHARMACEUTICALS Ltd. DHARWAR.

ಕಲಂಕಿತ ಸೂರ್ಯ

(ವೈಜ್ಞಾನಿಕ ಪ್ರಬಂಧ)

ಶ್ರೀ. ರಾಜೇಂದ್ರ ಕೊಲ್ಹಾಪುರ

★

ವೇದಕಾಲದ ಆರ್ಯರಿಗೆ ಸೂರ್ಯನೇ ಉಪಾಸ್ಯ-ದೈವತ. ಅವನೇ ಲೋಕದ ಎಲ್ಲ ಆಗು-ಹೋಗು-ಗಳಿಗೆ ಕಾರಣನೆಂದು ಅವರು ನಂಬಿದ್ದರು. ಅದನ್ನು ಅಂಧಶ್ರದ್ಧೆಯೆಂದು ಹೇಳುತ್ತಿದ್ದ ವಿಜ್ಞಾನವು, ಈಗ ಆರ್ಯರು ಹೇಳಿದ ಮಾತಿಗೇ ಬರತೊಡಗಿದ್ದು ಆಶ್ಚರ್ಯಕರವಾಗಿದೆ.

❁

ಶಾಪಿತ ಚಂದ್ರನಿಗೆ ಚಿರಂತನ ಕಲಂಕವು ತಾಗಿತೆಂದು ಪುರಾಣ-ಗಳು ಸಾರುತ್ತವೆ. ಚಂದ್ರನ ಕಲಂಕವನ್ನು ಬೇರೆಬೇರೆಯಾಗಿ ಕಲ್ಪಿಸಿ ಕವಿಗಳು ತಮ್ಮ ಪ್ರತಿಭೆಯ ಕುದುರೆಯನ್ನು ಕುಣಿಸಿ-ದ್ದುಂಟು. ಆದರೆ ಸೂರ್ಯನನ್ನು ಮಾತ್ರ, ಅಕಲಂಕ ತೇಜನೆಂದು, ಭಾಸ್-ಕರನೆಂದು ಯುಗಯುಗಗಳಿಂದ ನಂಬಿದ್ದೇವೆ ಸೂರ್ಯನೂ ಮೋರೆಗೆ ಕಪ್ಪು ಹಚ್ಚಿಕೊಂಡು ತಿರುಗುತ್ತಿದ್ದಾನೆಂದು ಹೇಳಿದರೆ, ಅನೇಕರು ನಂಬಲಿಕ್ಕಿಲ್ಲ. ಇಷ್ಟೇ ಅಲ್ಲದೆ, ಈ ಕಪ್ಪುಕಲೆಯ ಆಕುಂಚನ-ವಿಸ್ತಾರಗಳೊಂದಿಗೆ ಮಾನವವ್ಯಾಪಾರಗಳು ರಹಸ್ಯ ವಾದ ರೀತಿಯಲ್ಲಿ ನಿಗಡಿತವಾಗಿವೆಯೆಂದು ಹೇಳಿದರೆ, ಕಲ್ಪನೆಯ ಕಸರತ್ತೆಂದು ಅಲಕ್ಷ್ಯಿಸಬಹುದು.

ಮಾನವಜಾತಿಯ ಮಹಾಸಂಹಾರಕ್ಕೆ ಕಾರಣವಾದ ಎರಡನೆಯ ಮಹಾಯುದ್ಧದ ಹೊಣೆ, ಸೂರ್ಯನ ಕಪ್ಪುಕಲೆಗಳ ಮೇಲಿದೆ-ಯೆಂದು ಮಾಸ್ಕೋ ವಿದ್ಯಾಲಯದ ಪ್ರೊ. ಚಿಝೆವ್ಸ್ಕಿಯವರು ಸಾರಿದಾಗ, ವೈಜ್ಞಾನಿಕ ವಿಶ್ವದಲ್ಲಿ ಕೋಲಾಹಲವೆದ್ದಿತು ೧೯೩೭ರಲ್ಲಿ ಈ ಕಲೆಗಳ ಸಂಖ್ಯೆ ಎಂದಿಲ್ಲದಷ್ಟು ಬೆಳೆಯಿತೆಂದೂ, ಆದ ರಿಂದಲೇ ಯುರೋಪದಲ್ಲಿ ಹಿಟ್ಲರನು ಪ್ರಚಂಡವಾದ ದಾಳಿ ಹೂಡಿದನೆಂದೂ ಅವರ ಮತ. ಇಷ್ಟೇ ಅಲ್ಲ, ಅಮೇರಿಕೆಯ ಸ್ವಾತಂತ್ರ್ಯಯುದ್ಧ, ಪ್ಯಾರಿಸ್ ಕಮ್ಯೂನ್, ೧೮೪೮ರ ರಾಜ್ಯ ಕ್ರಾಂತಿ-ಮುಂತಾದ ಐತಿಹಾಸಿಕ ಘಟನೆಗಳೆಲ್ಲ, ಈ ಕಲೆಗಳ ಸಂಖ್ಯೆ ಹೆಚ್ಚಾದಾಗ ನಡೆದುವೆಂದು ಸಿದ್ಧಗೊಳಿಸಿದ್ದಾರೆ. ಅನೇಕ ಆಪತ್ತು-ಗಳಿಗೆ ಕಾರಣವಾದ ಈ ಕಲೆಗಳು, ಸೂರ್ಯನ ಧವಳಕೀರ್ತಿಗೆ ಹತ್ತಿದ ಕಲಂಕವಲ್ಲದೆ ಇನ್ನೇನು ?

ಪ್ರತಿ ಹನ್ನೊಂದು ವರುಷಕ್ಕೆ ಕಂಡುಬರುವ ಕಲೆಗಳನ್ನು, ಶಾಸ್ತ್ರಜ್ಞರು ಅಹಮಹಮಿಕೆಯಿಂದ ಅಭ್ಯಸಿಸಲು ಮುಂದೆ ಬರು-ತ್ತಾರೆ. ಈ ಕಾರ್ಯಕ್ಕೆ ಬಹಳ ಸೂಕ್ಷ್ಮ ದುರ್ಬೀನಿನ ಆವಶ್ಯ-ಕತೆಯಿಲ್ಲ. ಗ್ರಹಗಳನ್ನು ನೋಡಲು ಉಪಯೋಗಿಸುವ ಸಾಧಾ ರಣ ದುರ್ಬೀನು ಸಾಕು. ಅಂಥದೊಂದು ದುರ್ಬೀನಿನ ಸಹಾಯದಿಂದ ಸೂರ್ಯನ ಪ್ರತಿಬಿಂಬವನ್ನು ಬಿಳಿಯ ತೆರೆಯ ಮೇಲೆ ಮೂಡಿಸಿದರೆ, ಈ ಕಲೆಗಳು ಗುಂಪು ಗುಂಪಾಗಿಯೂ, ಬೇರೆ ಬೇರೆಯಾಗಿಯೂ ಮೂಡಿದ್ದು ಕಂಡುಬರುವುದು. ಒಮ್ಮೊಮ್ಮೆ ಸೂರ್ಯಾಸ್ತ ಸಮಯ-ದಲ್ಲಿ ಬರಿಗಣ್ಣಿಗೇ ಕಾಣುವಷ್ಟು ಕಲೆಗಳು ದೊಡ್ಡವಾಗುತ್ತವೆ.

ಪ್ರಾಚೀನ ಕಾಲದಲ್ಲಿ ಸೂರ್ಯನ ಮೋರೆಯು ಪೂರ್ಣ ಶುಭ್ರ-ವಾಗಿದೆಯೆಂದು ಕಲ್ಪನೆಯಿತ್ತು. ಎರಡನೆಯ ಶತಮಾನದಿಂದ ಈಚೆಗೆ, ಒಮ್ಮೊಮ್ಮೆ ಅಲ್ಲಿ ಕಪ್ಪು ಕಲೆಗಳು ಕಾಣಿಸುತ್ತವೆಯೆಂದು 'ಹಿಮಾಯಾಮಾ' ಎಂಬ ಚೀನೀ ಶಾಸ್ತ್ರಜ್ಞನು ಬರೆದಿಟ್ಟಿದ್ದಾನೆ. ಯುರೋಪದಲ್ಲಿ ಗೆಲಿಲಿಯೋ ೧೬೧೦ರಲ್ಲಿ ಈ ಕಲೆಗಳನ್ನು ಪರೀ-ಕ್ಷಿಸಿ, ಸೂರ್ಯನ ಮೈಮೇಲೆ ಗ್ರಹಣಗಳ ನೆರಳು ಈ ರೀತಿಯಾಗಿ ಕಾಣಿಸುತ್ತಿರಬಹುದೆಂಬ ಆ ಕಾಲದ ತಿಳುವಳಿಕೆಯನ್ನು ತಪ್ಪೆಂದೂ, ಸೂರ್ಯನ ಮೈಮೇಲೆಯೇ ಕಪ್ಪು ಕಲೆಗಳಿವೆಯೆಂದೂ ಸಾರಲು, ಭಾವಿಕ ಜನರು ಕಿಡಿಕಿಡಿಯಾದರು. ಪವಿತ್ರ ದೇವತೆಯಾದ ಸೂರ್ಯನು ಕಲಂಕಿತನೆಂದು ಹೇಳುವ ಗೆಲಿಲಿಯೋ ನಾಸ್ತಿಕನಿರ-ಬೇಕೆಂದು ಪಾದ್ರಿಗಳು ಬೊಬ್ಬಿಟ್ಟರು.

ಸೂರ್ಯನ ಅಂತರಂಗದ ಉಷ್ಣತೆಯು ಭಯಾನಕವಿದ್ದುದರಿಂದ, ಮೂಲದ್ರವ್ಯಗಳೆಲ್ಲ ವಾಯುರೂಪವಾಗಿಯೇ ಇರಬಲ್ಲವು. ಸೂರ್ಯನು ತನ್ನ ಸುತ್ತು ತಿರುಗುತ್ತಾನೆಂದು ಎಲ್ಲರಿಗೂ ಗೊತ್ತಿ-ರಲು ಸಾಕು. ಈ ಪ್ರದಕ್ಷಿಣೆಯ ಕಾಲವು ಮಾತ್ರ ಸೂರ್ಯನ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆಯಾಗಿರುತ್ತದೆ. ವಿಷುವವೃತ್ತದ ಹತ್ತಿರದ ಪ್ರದಕ್ಷಿಣೆಗೆ ೨೫ ದಿನಗಳು ಬೇಕಾದರೆ, ಧ್ರುವಬಿಂದುವಿನ ಹತ್ತರ ೩೪ ದಿನಗಳು ಬೇಕಾಗುತ್ತವೆ. ವಾಯುರೂಪ ಸ್ಥಿತಿಯ-ಲ್ಲಿದ್ದ ಮೂಲದ್ರವ್ಯಗಳೂ ಸೂರ್ಯನ ಸಂಗಡ ತಿರುಗುತ್ತಿರುತ್ತವೆ. ಗತಿಯ ವೇಗವು ಭಿನ್ನ ಭಿನ್ನ ವಿದ್ದುದರಿಂದ, ಈ ವಾಯುಮಂಡಲದಲ್ಲಿ ಭೀಮಗಾತ್ರದ ತಿರುಗಣಿ (Whirl pool) ಗಳು ನಿರ್ಮಾಣ-ವಾಗುತ್ತವೆ. ಈ ತಿರುಗಣಿಗಳಿಗೇ ಕಲೆಗಳೆನ್ನುತ್ತೇವೆ. ವಸ್ತುತಃ ಇವು ಕಪ್ಪು ಇರುವುದಿಲ್ಲ. ಆದರೆ ಉಳಿದ ಭಾಗದ ತೇಜಕ್ಕಿಂತ ಈ ಭಾಗವು ಮಸುಕಾಗಿರುವುದರಿಂದ, ಸಾಪೇಕ್ಷತಃ ಕಪ್ಪಾಗಿ ಕಾಣುತ್ತದೆ. ಈ ಕಲೆಗಳು ಪೂರ್ವದಿಂದ ಪಶ್ಚಿಮಕ್ಕೆ ವರ್ತುಲಾ-ಕಾರವಾಗಿ ಸುತ್ತುವಂತೆ ಕಾಣುತ್ತದೆ. ಕೆಲವು ಸಲ ಈ ಕಲೆಗಳು ಕೆಲವೇ ತಾಸು ಕಂಡರೆ, ಕೆಲವು ಸಲ ತಿಂಗಳು ತಿಂಗಳು ಹಾಗೆಯೇ ಉಳಿಯುತ್ತವೆ. ಸಾಮಾನ್ಯವಾಗಿ ಇವುಗಳ ಆಯುಷ್ಯ ೨-೩ ತಿಂಗಳು. ಇವು ಯಾವಾಗಲೂ ಸೂರ್ಯನ ಮೈಮೇಲೆ ಉತ್ತರಕ್ಕೂ ದಕ್ಷಿಣಕ್ಕೂ ೫ರಿಂದ ೪೫ ಅಕ್ಷಾಂಶಗಳ ನಡುವಿನ ಪಟ್ಟಿಯಲ್ಲಿ ಕಾಣುತ್ತವೆ. ಧ್ರುವದ ಹತ್ತಿರ ಅಥವಾ ವಿಷುವವೃತ್ತದ ಹತ್ತಿರ ಎಂದೂ ಕಂಡುಬರುವುದಿಲ್ಲ. ೧೯೪೭ರಲ್ಲಿ ಕಂಡ ಕಲೆಗಳ ಗುಂಪು

೬೦೦,೦೦೦ ಮೈಲು ಉದ್ದವಿತ್ತು. ೧೯೪೬ರ ಜನವರಿಯಲ್ಲಿ ಕಂಡ ಗುಂಪಿನ ಆಕಾರವು ಪೃಥ್ವಿಯ ಇಪ್ಪತ್ತು ಪಟ್ಟು ದೊಡ್ಡದಿತ್ತು. ಇ. ಸ. ೧೬೦೮ರಿಂದ ಇಂದಿನ ವರೆಗೆ ಕಲೆಗಳ ಸಂಖ್ಯೆಯ ಮತ್ತು ಆಕಾರದ ಲೆಕ್ಕವನ್ನು ವಿಜ್ಞಾನಿಗಳು ತಪ್ಪದೆ ಇಟ್ಟಿದ್ದಾರೆ. ಕಲೆಗಳ ಸಂಖ್ಯೆ ಮತ್ತು ಆಕಾರಗಳಲ್ಲಿ ಆಗುವ ಪರಿವರ್ತನೆಯು, ಅನಿಯಮಿತವಾಗಿರದೆ ಸೂತ್ರಬದ್ಧವಾಗಿದೆಯೆಂದು ಕಂಡುಬಂದಿತು. ಪ್ರತಿ ೧೧·೧೩ ವರ್ಷಗಳ ಅಂತರದಿಂದ, ಕಲೆಗಳ ಪ್ರಮಾಣವು ಉಚ್ಚಾಂಕವನ್ನು ಮುಟ್ಟುವುದೆಂದು ಸರಾಸರಿ ಲೆಕ್ಕವಿದೆ. ೧೯೩೩ರಲ್ಲಿ ಕಲೆಗಳು ಮೊಟ್ಟಮೊದಲು ಕಂಡುವು. ಅವು ಬೆಳೆಯುತ್ತ ೧೯೩೭ ರಲ್ಲಿ ಉಚ್ಚಾಂಕ ಮುಟ್ಟಿದುವು. ಆ ಮೇಲೆ ಇಳಿತಕ್ಕೆ ಪ್ರಾರಂಭವಾಗಿ ೧೯೪೪ರಲ್ಲಿ ಕ್ಷೀಣವಾದುವು. ೧೯೫೮ರಲ್ಲಿ ಎರಡನೆಯ ಉಚ್ಚಾಂಕವು ಬಂದಿರಬೇಕು.

೧೯೪೬ರಲ್ಲಿ ಭಾರತದಲ್ಲಿ ಹಲವೆಡೆ ಅನಪೇಕ್ಷಿತವಾಗಿ ಮಳೆ ಬಿದ್ದು ಹೊಳೆಗಳಿಗೆ ನೆರೆಬಂದಿತು. ಅಕಸ್ಮಾತ್ತಾಗಿ ಬಿರುಗಾಳಿಯೆದ್ದು ಅನಾಹುತವಾಯಿತು. ಕೆಲವರು ಹಿರೋಶಿಮಾ–ನಾಗಾಸಾಕಿಗಳ ಮೇಲೆ ಬಿದ್ದ ಅಣುಬಾಂಬುಗಳೇ ಈ ಅನಾಹುತಕ್ಕೆ ಕಾರಣವೆಂದರು. ಕೆಲವರು, ಸೂರ್ಯನ ಕಲೆಗಳ ಏರಿಕೆಯಿಂದ ಪೃಥ್ವಿಯ ಸಾಡೇಸಾತಿಗೆ ಪ್ರಾರಂಭವಾಯಿತೆಂದರು. ೧೯೪೬ರ ೩೦ ಜನವರಿಯಿಂದ ಫೆಬ್ರುವರಿ ೧೨ರ ವರೆಗೆ ದೊಡ್ಡ ಕಲೆಗಳು ಕಾಣಿಸಿದುವು. ಈ ಅವಧಿಯಲ್ಲಿ ರೇಡಿಯೊ, ಟೆಲಿಗ್ರಾಫ್, ಟೆಲಿಫೋನುಗಳ ವ್ಯವಹಾರದಲ್ಲಿ ವ್ಯತ್ಯಯವುಂಟಾಗಿ ತೊಂದರೆಯಾಯಿತು.

ಕಲೆಗಳ ಕಾಲಚಕ್ರವು ೧೧-೧೩ ಏಕಿರಬಹುದೆಂಬುದರ ಕಾರಣವು ಇನ್ನೂ ನಿಶ್ಚಿತವಾಗಿ ತಿಳಿದು ಬಂದಿಲ್ಲ. ಕೆಲವು ಘಟನೆಗಳ ಮೇಲೆ ಈ ಕಲೆಗಳ ಪರಿಣಾಮವು ಆಗದಿರದೆಂದು ನಿರ್ವಿವಾದವಾಗಿ ಸಿದ್ಧವಾಗಿದೆ. ಉದಾ : (೧) ಧ್ರುವಪ್ರದೇಶದಲ್ಲಿ ಆಗಾಗ ಕಾಣುವ ಪ್ರಕಾಶ ಚಮತ್ಕಾರಗಳು (Aurora Borealis) (೨) ಪೃಥ್ವಿಯ ಲೋಹಚುಂಬಕ ಕ್ಷೇತ್ರ. (೩) ಬಾನುಲಿಯ ಲಹರಿಗಳ ಗತಿ. ಇದಲ್ಲದೆ ದೈನಂದಿನ ಹವಾಮಾನ, ವನಸ್ಪತಿ ಮತ್ತು ಪ್ರಾಣಿಜೀವನ, ಉದ್ಯೋಗ-ವ್ಯವಸಾಯಗಳು ಮತ್ತು ಆರ್ಥಿಕ ರಾಜಕೀಯ ಸ್ಥಿತಿ— ಇವುಗಳ ಮೇಲೂ ಕಲೆಗಳ ಉತ್ಪಾತಕಾರಕ ನೆರಳು ಬೀಳುವುದೆಂದು ಕೆಲವು ವಿಜ್ಞಾನಿಗಳ ಮತವಿದ್ದರೂ, ಅದನ್ನು ಸರ್ವಮಾನ್ಯ ಸಿದ್ಧಾಂತವೆಂದು ಗ್ರಹಿಸಲಾಗದು.

ಪ್ರಕಾಶ ಚಮತ್ಕಾರಗಳು :— ಉತ್ತರ ಧ್ರುವದ ಸಮೀಪದ ದೇಶದಲ್ಲಿ, ಆಕಾಶದಲ್ಲಿ ಅದ್ಭುತ ದೃಶ್ಯಗಳು ಕಾಣಿಸುವುದುಂಟು. ಬಣ್ಣಬಣ್ಣದ ಹೊಳಪಿನ ಪರದೆಗಳನ್ನು ಇಳಿಬಿಟ್ಟಂತೆ ಕಾಣಿಸುವುದು. ಇವಕ್ಕೆ Aurora Borealis ಎನ್ನುತ್ತಾರೆ. ನಾರ್ವೇ ಸ್ವೀಡನ್, ಸೈಬೀರಿಯಾ ಮತ್ತು ಉತ್ತರ ಅಮೇರಿಕೆಯ ಕೆಲವು ಭಾಗಗಳಲ್ಲಿ, ಇಂಥ ದೃಶ್ಯಗಳು ವರ್ಷದಲ್ಲಿ ಸುಮಾರು ನೂರು ಸಲ ಕಾಣಿಸುತ್ತವೆ. ಇಂಥ ಶೀತಮಯ, ನಿರ್ಜನ ಪ್ರದೇಶದಲ್ಲಿ ನಿಸರ್ಗವು ತನ್ನ ಅಭಿಜಾತ ಕಲೆಯ ಮನಸೋಕ್ತ ಆವಿಷ್ಕಾರವನ್ನು ನಡೆಸಿದಾಗ, ಆ ಕಲೆಯನ್ನು ನೋಡಿ ಆನಂದಿಸುವ ರಸಿಕರಾರೂ ಅಲ್ಲಿಲ್ಲವಲ್ಲ !—ಎಂದು ವಿಷಾದವೆನಿಸುತ್ತದೆ. ಸೂರ್ಯನ ಕಪ್ಪು ಕಲೆಗಳು ಬೆಳೆದಂತೆ, ಈ ಸ್ವರ್ಗೀಯ ದೃಶ್ಯವು ಸ್ವರ್ಗೀಯತರ-ವಾಗುತ್ತದೆ. ಕಲೆಗಳಲ್ಲಿ ಪ್ರಚಂಡವಾದ ಲೋಹಚುಂಬಕ ಶಕ್ತಿಯಿದ್ದು, ಅತ್ಯಂತ ವೇಗವುಳ್ಳ ವಿದ್ಯುದಣುಗಳು ದೂರ ಸಿಡಿಯುತ್ತಿರುತ್ತವೆ. ವಿದ್ಯುತ್ಕಣಗಳ ಹೊಡೆತಕ್ಕೆ ವಾತಾವರಣದಲ್ಲಿಯ ಮೂಲದ್ರವ್ಯಗಳ ಪರಮಾಣುಗಳು ಜರ್ಜರವಾಗುತ್ತವೆ. ಒಡೆದು ತುಂಡಾಗುತ್ತವೆ. ಪರಮಾಣುಗಳು ಒಡೆಯಲು ಕಿರಣಗಳು ಹೊರಚೆಲ್ಲಲ್ಪಡುತ್ತವೆ. ನಮಗೆ ಕಾಣಿಸುವ ವಿಲೋಭನೀಯ ದೃಶ್ಯವನ್ನು ಈ ಕಿರಣಗಳೇ ನಿರ್ಮಿಸುತ್ತವೆ.

ಬಾನುಲಿ ಮತ್ತು ಕಲೆಗಳು:— ಬಾನುಲಿಯ 'ಉಲಿ'ಯನ್ನು ದಶದಿಶೆಗಳಿಗೆ ಒಯ್ಯುವ ವಿದ್ಯುಲ್ಲಹರಿಗಳಿಗೆ ಈ ಕಲೆಗಳು ಶತ್ರು-ರೂಪವಾಗಿವೆ. ಕಲೆಗಳ ಸಂಖ್ಯೆಯು ಬೆಳೆದಂತೆ ಬಾನುಲಿ-ಸಂಪರ್ಕವು ಕುಂಠಿತವಾಗುತ್ತದೆ. ಟೆಲಿಫೋನ್-ತಾರಾಯಂತ್ರಗಳ ಚಲನವಲನವು ನಿಂತುಹೋಗುತ್ತದೆ. ಕೆಲವು ಮೀಟರ್ ಪ್ರಮಾಣದ ಲಹರಿಗಳ ಗತಿಗೆ ಕಲೆಗಳು ಅಡ್ಡಬರುತ್ತವೆ. ಕಲೆಗಳ ನಿರೀಕ್ಷಣೆಯಿಂದ ಯಾವ ಮೀಟರ್ ನಿರುಪಯೋಗಿಯಾಗಬಹು-ದೆಂದು ಮೊದಲೇ ತಿಳಿದರೆ, ಉಳಿದ ಮೀಟರಿನ ಲಹರಿಗಳ ಸಹಾಯದಿಂದ ಬಾನುಲಿಯನ್ನು ಬಿತ್ತರಿಸಲು ಸಾಧ್ಯವಾಗುತ್ತದೆ. ವಿದ್ಯು-ಲ್ಲಹರಿಗಳ ಪರಾವರ್ತನ ಮತ್ತು ಪೃಥ್ವೀಪ್ರದಕ್ಷಿಣೆಗೆ ಕಾರಣವಾದ ಆಯಾನೋಸ್ಫಿಯರ್ ಎಂಬ ವಾಯುಕವಚದ ಮೇಲೆ, ಕಲೆಗಳಿಂದ ಬರುವ ವಿದ್ಯುದಣುಗಳ ಪರಿಣಾಮವಾಗಿ, ಪೃಥ್ವಿ ಮತ್ತು ಆಯಾನೋಸ್ಫಿಯರುಗಳ ನಡುವಿನ ಅಂತರವು ಕಡಿಮೆಯಾಗುತ್ತದೆ. ಅದ್ದರಿಂದ ಪರಾವರ್ತಿತವಾಗುವ ಲಹರಿಗಳ ತೀವ್ರತೆ (Intensity) ಬೇರೆಯಾಗಿ, ರೇಡಿಯೋ ಸಂಪರ್ಕದಲ್ಲಿ ವಿಘ್ನವುಂಟಾಗುತ್ತದೆ.

ಕಲೆಗಳ ಸಂಖ್ಯೆಯು ಹೆಚ್ಚಾಗಲು ಪೃಥ್ವಿಯ ಲೋಹಾಕರ್ಷಕ ಶಕ್ತಿಯಲ್ಲಿ ತೀವ್ರ ಪರಿವರ್ತನೆಯುಂಟಾಗಿ, ಟೆಲಿಫೋನ್ ಮತ್ತು ತಾರಾಯಂತ್ರಗಳ ವಾಹಕತಂತಿಗಳಲ್ಲಿ ತನ್ನಿಂದ ತಾನೇ ವಿದ್ಯುತ್ ಪ್ರವಾಹವು ಹರಿಯತೊಡಗುತ್ತದೆ: ಧ್ವನಿಸಂದೇಶದಿಂದ ಹುಟ್ಟುವ ವಿದ್ಯುತ್‌ಪ್ರವಾಹಕ್ಕೆ ಈ ಪ್ರವಾಹವು ಅಡ್ಡಬಂದು, ಸಂದೇಶವು ಒಂದು ತುದಿಯಿಂದ ಎರಡನೆಯ ತುದಿಗೆ ಮುಟ್ಟುವುದೇ ಇಲ್ಲ

ಪೃಥ್ವಿಯ ಮೇಲಿನ ಹವಾಮಾನ:-ಕಲೆಗಳ ಸಂಖ್ಯೆಹೆಚ್ಚಾಗಲು ಪೃಥ್ವಿಯ ಸರಾಸರಿ ಉಷ್ಣತಾಮಾನವು ಕಡಿಮೆಯಾಗುತ್ತದೆ. ನೀರು ಉಗಿಯಾಗುವ ಕಾರ್ಯವು ತೀವ್ರವಾಗಿ, ಮಳೆಯೂ ಹೆಚ್ಚಾಗುತ್ತದೆ. ಶೀತಕಟಿಬಂಧದಲ್ಲಿಯ ಹಿಮವೃಷ್ಟಿಯ ಪ್ರಮಾಣವು ೧೦೦ಕ್ಕೆ ೪೦ ರಷ್ಟು ಹೆಚ್ಚಾಗುತ್ತದೆ. ಸಮುದ್ರದಲ್ಲಿ ತೇಲುತ್ತ ಬರುವ ಹಿಮದುರ್ಗಗಳ ಸಂಖ್ಯೆಯೂ ಬೆಳೆಯುತ್ತದೆ. ಕಲೆಗಳ ಪರಿಣಾಮವಾಗಿ ಭಾರತ, ಆಸ್ಟ್ರೇಲಿಯಾ ಮುಂತಾದ ದೇಶಗಳಲ್ಲಿ

ಮಳೆ ಹೆಚ್ಚಾದರೂ, ಅಮೇರಿಕೆಯ ಪೂರ್ವಭಾಗದಲ್ಲಿ ಕಡಿಮೆ ಮಳೆಯಾಗುತ್ತದೆ. ಆದರೆ ಮಳೆ ಮತ್ತು ಕಲೆಗಳ ಸಂಖ್ಯೆಯಲ್ಲಿ ನಿಶ್ಚಿತ ಸಂಬಂಧವಿದೆಯೋ ಇಲ್ಲವೋ ಗೊತ್ತಾಗಿಲ್ಲ

ವನಸ್ಪತಿ ಜೀವನ:— ಕಲೆಗಳ ಸಂಖ್ಯೆಯೊಂದಿಗೆ ಸೂರ್ಯ ಪ್ರಕಾಶವೂ ಹೆಚ್ಚುಕಡಿಮೆಯಾಗುವುದರಿಂದ, ವನಸ್ಪತಿಗಳ ಬೆಳೆ-ವಣಿಗೆಯ ಮೇಲೆ ಕಲೆಗಳ ಪರಿಣಾಮವಾಗುತ್ತಿರಲೇ ಬೇಕು. ಕಲೆಗಳ ಸಂಖ್ಯೆಯೊಂದಿಗೆ ಪೃಥ್ವಿಗೆ ಬರುವ ಪ್ರಕಾಶದ ಮತ್ತು ಅತಿನೀಲ (Ultraviolet) ಕಿರಣಗಳ ಪ್ರಖರತೆ ಬೆಳೆಯುವುದರಿಂದ, ವನಸ್ಪತಿಗಳಿಗೆ ಈ ಕಲೆಗಳು ಉಪಕಾರಕವಾಗುತ್ತಿರಬೇಕೆಂದು ವಿಜ್ಞಾನಿಗಳ ಮತವಿದೆ.

ಮನುಷ್ಯಜೀವನ :— ಮನುಷ್ಯನ ಬೆಳೆವಣಿಗೆಯು ಅವನಿಗೆ ದೊರಕುವ ಅನ್ನ, ಹವೆ, ನೀರು, ಅವನ ವ್ಯವಸಾಯ ಇತ್ಯಾದಿಗಳ ಮೇಲೆ ಅವಲಂಬಿಸಿದುದಲ್ಲದೆ, ಸೂರ್ಯನ ಬೆಳಕು ಮತ್ತು ಅದರಲ್ಲಿಯ ಅತಿನೀಲ ಕಿರಣಗಳ ಮೇಲೆಯೂ ಅವಲಂಬಿಸಿರುತ್ತದೆ. ಔದ್ಯೋಗಿಕಪಟ್ಟಣಗಳಲ್ಲಿ ಹೊಗೆಯ ಮೂಲಕ, ಅತಿನೀಲಕಿರಣಗಳು ನೆಲಕ್ಕೆ ಮುಟ್ಟುವ ಮುಂಚೆಯೇ ಹೊಗೆಯ ಕಣಗಳಿಗೆ ತಾಗಿ ಪರಾವರ್ತಿತವಾಗಿ, ತಿರುಗಿ ಮುಗಿಲಲ್ಲಿಯೇ ಹೋಗಿಬಿಡುತ್ತವೆ. ಅತಿನೀಲಕಿರಣಗಳ ಅಭಾವದಿಂದ, ಶರೀರದಲ್ಲಿ 'ಡ' ಜೀವನಸತ್ತ್ವ (Vitamin D) ದ ಕೊರತೆಯುಂಟಾಗಿ, ಮನುಷ್ಯನು ರಿಕೆಟ್ಸ್, ಕ್ಷಯ ಮುಂತಾದ ರೋಗಗಳಿಗೀಡಾಗುತ್ತಾನೆ. ಹಳ್ಳಿಗಳಲ್ಲಿ ಹೊಗೆಯಿಂದ ದೂಷಿತವಾಗದ ಶುದ್ಧಹವೆಯಿರುವುದರಿಂದ 'ಡ' ಜೀವನ-ಸತ್ತ್ವವು ವಿಪುಲವಾಗಿ ದೊರೆಯುತ್ತದೆ. ಅತಿನೀಲಕಿರಣಗಳು ಉಪಕಾರಿಯಾಗಿದ್ದರೂ, ವಿಶಿಷ್ಟಪ್ರಮಾಣವನ್ನು ಮೀರಿದರೆ, ಅವೇ ಅಪಾಯವನ್ನುಂಟುಮಾಡುತ್ತವೆ. ಕಪ್ಪುಕಲೆಗಳು ಸೂರ್ಯನನ್ನು ಆವರಿಸಲು, ಅತಿನೀಲಕಿರಣಗಳ ಪ್ರಖರತೆಯು ಹೆಚ್ಚಾಗುತ್ತದೆಯೆಂದು ತಿಳಿದುಬಂದಿದೆ. ಹಾಗೆಯೇ ಹವೆಯಲ್ಲಿ ಋಣ-ಧನ ವಿದ್ಯುದಣುಗಳ (ions) ಹೆಚ್ಚಾಗಿ, ನಮ್ಮ ಆರೋಗ್ಯದ ಮೇಲೂ ಮನೋವೃತ್ತಿಯ ಮೇಲೂ ಪರಿಣಾಮವಾಗುತ್ತದೆ. ಪ್ರೊ. ಚಿಝೇವೆಸ್ಕಿಯವರ ಮತದಂತೆ, ಜಗತ್ತಿನಲ್ಲಿ ಕಾಲಕಾಲಕ್ಕೆ ಜನತೆಯ ಪ್ರಚಂಡ ಆಂದೋಲನಗಳಿಗೆಲ್ಲ, ಜನತೆಯ ಕ್ಷುಬ್ಧ-ಮನೋವೃತ್ತಿಯೇ ಕಾರಣ; ಆರೋಗ್ಯ ಮತ್ತು ಮನೋವೃತ್ತಿ-ಗಳನ್ನು ಬದಲಿಸುವ ಶಕ್ತಿಯುಳ್ಳ ಈ ಕಲೆಗಳ ಏರಿಳಿತಗಳಿಗೂ, ರಾಜಕೀಯ ಸಾಮಾಜಿಕ ಆಂದೋಲನಗಳಿಗೂ ಒಂದು ತರದ ಸಂಬಂಧವಿರಬಹುದು. ಈ ವಿಧಾನವನ್ನು ಎಲ್ಲ ವಿಜ್ಞಾನಿಗಳು ಒಪ್ಪಿದ್ದಾರೆಂದು ಹೇಳಲಾರೆ. ಈ ವಿಧಾನವು ಎಷ್ಟು ಮಟ್ಟಿಗೆ ಸತ್ಯವಾಗಿದೆಯೆಂಬುದನ್ನು ಭವಿಷ್ಯಕಾಲವೇ ನಿರ್ಣಯಿಸಬಹುದು.

ಉದ್ಯೋಗವ್ಯವಸಾಯಗಳು :— ಕಳೆದ ಅನೇಕ ವರ್ಷ-ಗಳಲ್ಲಿಯ ಆರ್ಥಿಕ ಏರಿಳಿತಗಳನ್ನು ಪರೀಕ್ಷಿಸಿದರೆ, ಇಂದಿನ ವರೆಗೆ ಬಂದ ಐದು ಆರ್ಥಿಕ ಅರಿಷ್ಟಗಳಲ್ಲಿ, ನಾಲ್ಕು ಪ್ರಸಂಗಗಳಲ್ಲಿ, ಕಪ್ಪು ಕಲೆಗಳು ಉಚ್ಚಾಂಕವನ್ನು ಮುಟ್ಟಿದ್ದುವು. (ಈ ವರ್ಷ ಕೂಡ ಜೂನ್ ತಿಂಗಳಲ್ಲಿ ಇದೇ ಪರಿಸ್ಥಿತಿಯಲ್ಲಿ ಕಪ್ಪುಕಲೆಗಳು ಪ್ರಾಮುಖ್ಯ-ದಿಂದ ತೋರಿಬಂದುವು.) ಇ. ಸ. ೧೭೨೧ ರಿಂದ ೧೮೭೮ ರಲ್ಲಿ ಸಂಭವಿಸಿದ ಆರ್ಥಿಕಗಂಡಾಂತರಗಳಲ್ಲಿ ಹನ್ನೊಂದು ಹನ್ನೊಂದು ವರುಷದ ಅಂತರವುಂಟೆಂದು ಆರ್ಥಿಕಶಾಸ್ತ್ರಜ್ಞರಾದ ಡಬ್ಲ್ಯೂ. ಎಸ್. ಜೇವ್ಹಾನ್ಸ್ ಹೇಳುತ್ತಾರೆ. ವ್ಯಾಪಾರಸ್ಥರ ಮನೋ-ವೃತ್ತಿಯೇ ಬೆಲೆಯ ಏರಿಳಿತ ಹಾಗೂ ಆರ್ಥಿಕಪರಿಸ್ಥಿತಿಯಲ್ಲಿಯ ಬದಲಾವಣೆಗಳಿಗೆ ಎಷ್ಟೋ ಸಲ ಕಾರಣವಾಗುತ್ತದೆಂತಲೂ, ಅಪ್ರತ್ಯಕ್ಷವಾಗಿ ಕಪ್ಪುಕಲೆಗಳು ಆರ್ಥಿಕವ್ಯವಹಾರದಲ್ಲಿ ದೂರ-ಗಾಮಿಯಾದ ಪರಿಣಾಮವನ್ನುಂಟುಮಾಡುವುವೆಂದೂ ಹಾರ್ವರ್ಡದ ಪ್ರೊಫೆಸರರಾದ ಶಾಫನೀರ ಮತ್ತು ಮಾಟಾ ಒಂದು ಲೇಖನದಲ್ಲಿ ಹೇಳಿದ್ದಾರೆ. ಇದು ಎಷ್ಟರಮಟ್ಟಿಗೆ ನಿಜವೋ ತಿಳಿಯದು.

ಸೂರ್ಯನ ಮೇಲಿನ ಕಪ್ಪುಕಲೆಗಳಿಂದ ಪೃಥ್ವಿಯ ಮೇಲೆ ಕ್ರಾಂತಿ, ಆರ್ಥಿಕ ಉತ್ಪಾತಗಳುಂಟಾಗುತ್ತಿದ್ದರೆ, ನಕ್ಷತ್ರ ಮತ್ತು ಗ್ರಹಗಳ ಗತಿಗೂ ವ್ಯಕ್ತಿ ಮತ್ತು ಜನಾಂಗಗಳ ಭವಿಷ್ಯಕ್ಕೂ ಏನಾದರೂ ಸಂಬಂಧವಿರಬಹುದೆ? ಈ ಪ್ರಶ್ನೆಗೆ 'ಅಹುದು' ಎಂದು ಹಟದಿಂದ ಉತ್ತರಕೊಡುವ ಫಲಜ್ಯೋತಿಷಿಗಳಿಗೂ, ಇಲ್ಲವೆಂದು ಅಷ್ಟೇ ಹಟದಿಂದ ವಾದಿಸುವ ಕೆಲ ವಿಚಾರವಂತರಿಗೂ ಎಂದೂ ಮುಗಿಯದ ವಾದ. ಹೀಗೆಯೇ ಎಂದು ನಿಶ್ಚಿತವಾಗಿ ಹೇಳುವುದು ಸಾಧ್ಯವಿಲ್ಲ. ಮೇಷರಾಶಿಯವರಿಗೆಲ್ಲ (ಕೂಸು ಮೊದಲುಮಾಡಿ ಮುದುಕರ ವರೆಗೆ) "ಈ ವಾರ ಸ್ತ್ರೀಸುಖ ಉತ್ತಮ. ಮುಂದಿನ ವಾರ ಪ್ರವಾಸಕ್ಕಿಂತ ಪತ್ರವ್ಯವಹಾರ ಅನುಕೂಲ" ಎಂದು ಧೈರ್ಯ-ದಿಂದ ಹೇಳುವ ವಾರದ ಭವಿಷ್ಯಗಳು ಸೂಚಿಸುವಷ್ಟು ಅನ್ಯೋನ್ಯ ಸಂಬಂಧವಿರದಿದ್ದರೂ, ಗ್ರಹಗಳ ಗತಿಗೂ, ಮನುಷ್ಯನ ಆರೋಗ್ಯ ಮತ್ತು ಮನೋವ್ಯಾಪಾರಗಳಿಗೂ ಒಂದು ತರದ ಅಸ್ಪಷ್ಟವಾದ ಸಂಬಂಧವಿದ್ದೀತು, ಅಥವಾ ಇರಲಿಕ್ಕೂ ಇಲ್ಲ—ಎಂದು ಸಂದಿಗ್ಧ ಉತ್ತರವೀಯಬಹುದು. ಅರ್ಥಾತ್ ವಾರದ ಭವಿಷ್ಯದಲ್ಲಿ ವಿಶ್ವಾಸವಿಟ್ಟು, ಲಾಟರಿಟಿಕೀಟು ಕೊಳ್ಳುವುದೂ, ರೇಸ್‌ಕೋರ್ಸಿನ ಮೇಲೆ ಯಾವುದೇ ಕುದುರೆಯ ಮೇಲೆ ರೊಕ್ಕಹಚ್ಚುವುದೂ, ಸಾಹಸದ ತರಗತಿಗೆ ಸೇರಿದರೂ, ಅಷ್ಟು ಜಾಣತನದ ಕೆಲಸವಲ್ಲ— ಎಂದು ಹೇಳಬಹುದು.

(ಈ ಲೇಖನವನ್ನು ಬರೆಯುವಾಗ, "ಕ್ಲೋನ್ಸ್ಟರ್‌ನ ... ಸಂಚಿಕೆಯಲ್ಲಿಯ ಒಂದು ಲೇಖನದಲ್ಲಿಯ Matter ಧಾರಾಳವಾಗಿ ಉಪಯೋಗಿಸಿದ್ದೇನೆ.)

ಲಹರಿ....ಲಹರಿ....

ಶ್ರೀ ಡಿ. ಆರ್. ಕುಲಕರ್ಣಿ, ಮುಂಬಯಿ

[ಬೆಳಗಿನ ಜಾವದಿಂದ ಸಂಜೆಯವರೆಗೂ, ನಿಸರ್ಗದ ತೊಡೆಯ
ಮೇಲೆ ನಡೆಯುವ ಆಟಗಳನ್ನು ಕಂಡಾಗ, ಒರ್ವಭಾವ ಜೀವಿಯ
ಹೃದಯದಲ್ಲಿ ಎದ್ದ ಭಾವನೆಗಳ ಲಹರಿ.... ಲಹರಿ....]

ಪ್ರಾತಃಕಾಲದ ವರ್ಣಮಹೋತ್ಸವ
ಮೂಡಣ ದಿಶೆಯಲಿ ನಡೆದಿತ್ತು;
ಕತ್ತಲುಕಾಳಿಯು ಕಾಡಿಗೆಗಪ್ಪೇ
ಕೆಂಪಿನ ಕೆಂಡವ ಹಡೆದಿತ್ತು.
ನೀಲದ ಬಯಲಲಿ ಮುಗಿಲುಗಳೆಲ್ಲವು
ಎಸೆದಿವೆ ವಿಧವಿಧರೂಪದಲಿ—
ಕಾಲನ ಕಡಲಲಿ ತೇಲುವ ಬಾಳುವೆ
ಮೈಗೊಂಡಿತು ಹೊಸರೂಪದಲಿ. ೧

ಮೆಲ್ಲನೆ ಸುಳಿಯುವ ತಣ್ಣನೆ ಗಾಳಿಯು
ಊದಿತು ಬೆಳಗಿನ ಕಹಳೆಯನು;
ಝಲ್ಲನೆ ಬಿಚ್ಚಿತು ಮುಚ್ಚಿದ ಮೊಗ್ಗೆಯು
ಅರಳಿಸಿ ಅಂದದೆಸಳುಗಳನು.
ಪರಿಚಯದಿಂಚರ ಸ್ವಾಗತಗೀತವು
ಹೊರಟಿತು ಖಗಗಳ ಕಂಠದಲಿ;
ಮಿಂಚಿಸಿ ಹೂನಗೆ ಹೊಂಚುತ ಬಂದಳು
ಬೆಳಗಿನ ರಾಣಿಯು ಬೆಡಗಿನಲಿ. ೨

ಕೂಡಿಯೆ ಸಾಗಿಹ ಮೋಡಗಳೆರಡೂ
ಕೊಡುವುವೊ ಎನುತಿರೆ ಸವಿಮುತ್ತು—
ನೋಡು-ನೋಡುತಲೆ ಆ ಸವಿ ಮಿಲನವು
ಬೇರೆಯ ಬಗೆಯನೆ ಪಡೆದಿತ್ತು;
ಬಾನೊಳು ನಡೆದಿದೆ ಮುಗಿಲುಗಳಾಟವು
ಮಾಟವ ಬದಲಿಸಿ ಚಣ-ಚಣಕೆ—
ಏನನೊ ನೆನೆಸಿ— ಜೇನೆಂದೆಣಿಸಿ
ಬಾಯ್ದೆರೆಯಿತು ಮೈ ಕಣಕಣಕೆ ! ೩

ಜಾವದ ಜೇನನು ಸವಿಯುವ ಮೊದಲೇ
ಸೂರ್ಯನ ಕಿರಣವು ಬಲಿತಿತ್ತು;
ಕಾವನು ತಾಳದೆ ಆ ರವಿಕಿರಣದ—
ಬಾಳಿನ ಸುಖಝರಿ ಬತ್ತಿತ್ತು.
ಎಳವೈ-ಮನವಿದು ಕಷ್ಟದ ಕಾಹಿಗೆ
ಅರೆಸತ್ತಂತೆಯೆ ಮಲಗಿತ್ತು—
'ಬೆಳಗಿನ ಹಿಂದೆಯೆ ಬಿಸಿಲ ಬೇಗೆಯಿದೆ'
ಎಂಬುದನೇ ಮನ ಮರೆತಿತ್ತು. ೪

ಆಶೆಯ ಬಳ್ಳಿಯು ಕಮರದೆ ಚಿಗಿತು
ಸಂಜೆಯ ಕುರುಹನು ಕಂಡಿತ್ತು—
ನಸುಕಿನ ತಪ್ಪೇ ಮರಳುವುದೆಂಬಾ
ಭಾವನೆಯಾ ಮಧುವುಂಡಿತ್ತು.
ಪಡುವಣ ದಿಶೆಯಲಿ ದಿನಮಣಿಯಿಳಿದನು
ಕಿರಣದ ಪ್ರಖರತೆ ಅಡಗಿಹುದು;
ನಡುಗಿದ ಜಡಮನ ಪಡೆದಿರೆ ಚೇತನ,
ಬಾಳಲಿ ಹೊಸತೆರ ಬೆಡಗಿಹುದು. ೫

ಅಕ್ಕರೆಯಿಂದಲಿ ರೆಕ್ಕೆಬಡಿದು ತಾಯ್-
ಹಕ್ಕಿಯು ಗುಟುಕನು ಕೊಡುತಿತ್ತು—
ಸಕ್ಕರೆಗುಟುಕನು ನುಂಗುತ ನಲ್ಮರಿ
ಉಕ್ಕುವ ಮೋದದಿ ನಗುತಿತ್ತು.
ವೃಕ್ಷದ ಮೇಗಣ ಪಕ್ಷಿಯು ಕೂಗಿತು
'ಪ್ರೇಯಸಿ, ಪ್ರೇಯಸಿ, ಬಾ ! ' ಎಂದು—
ಆ ಕ್ಷಣ ಬಂದಳು ಮೋಹಿಸಿ ನಿಂದಳು;
ಮನವೆಂದಿತು 'ಆ-ಹಾ ! ' ಎಂದು. ೬

ತಾಯಿ-ಮಕ್ಕಳಲಿ ಅಕ್ಕರೆ ನಡೆದಿದೆ
ಆ ಬಗೆ ಗೂಡಿನ ಒಳಗಡೆಗೆ—
ಪ್ರೇಯಸಿ ಪ್ರಿಯರ ಪ್ರಣಯವು ನಡೆದಿದೆ
ವೃಕ್ಷದೆಲೆಯ ಮಂಟಪದೊಳಗೆ.
ತಾಯಿಯ ಪ್ರೀತಿ— ಪ್ರೇಮದ ರೀತಿ—
ಒಂದೇ ಬಗೆಯವು ಬೇರಿಲ್ಲ;
ಮಾಯಾತರುವಿನ ರೆಂಬೆಗಳೆರಡೂ
ಬಿಟ್ಟ ಹಣ್ಣ ರುಚಿ ಬೇರಲ್ಲ ! ೭

ಜಾವದಿ ಅರಳಿದ ಲಲಿತ ಗುಲಾಬಿಯು
ಸಂಜೆಯ ವರೆಗೂ ಕಾದಿತ್ತು;
ಭಾವುಕ ತುಂಬಿಯು ಬಾರದೆ ಇರಲು—
ವಿರಹದಿ ಕಂದುತ ಬಾಡಿತ್ತು.
ಒಂದೆಡೆ ಪ್ರೀತಿಯು ಒಂದೆಡೆ ಭೀತಿಯು
ಒಂದೆಡೆ ವಿರಹವು ಕಾದಿಹುದು;
ಇಂತಹ ಬಾಳನೆ ಬಾಳುತ ಗೆದ್ದರೆ
ಆ ಜಯ ಮುಕ್ತಿಯ ಮೀರಿಹುದು ! ೮

ಬದುಕಿದ ಜೀವದ ಬೆಲೆ

(ಒಂದು ಸತ್ಯಕಥೆ)

ಡಾ. ಕಮಲಾಪುರ ಶಾಂತರಾಯರು, ಎಂ.ಬಿ.ಬಿ.ಎಸ್. **ಧಾರವಾಡ**

卐

ಯಾವ ಜೀವದಲ್ಲಿ ಯಾವ ಜ್ಯೋತಿ ಬೆಳಗಿ ಲೋಕಕ್ಕೆ ಪ್ರಯೋಜನವಾಗುವುದೊ !
ಜಗತ್ತಿನಲ್ಲಿ ಹುಟ್ಟಿಬಂದ ಪ್ರತಿಯೊಂದು ಮಾನವಜೀವಿಗೂ,
ಬದುಕಿಬಾಳುವುದಕ್ಕೆ ಯೋಗ್ಯ ವಾತಾವರಣವು
ಒದಗುತ್ತಿರಬೇಕು!

卐

ಡಾಕ್ಟರ್ ಥಾಡಿಯಸ್ ಮಾರ್ಲಿನರು, ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿ ಇದ್ದಾಗಲೇ “ ಜಗತ್ತಿನಲ್ಲಿ ಅಂಗಹೀನರನ್ನೂ ಅಸಾಧ್ಯವಾದ ಬೇನೆಗಳಿಗೆ ಗುರಿಯಾದವರನ್ನೂ ಇರಗೊಡುವುದೆಂದರೆ— ಇದೊಂದು ಮಹಾ ಮೂರ್ಖತನ!” ಎಂಬುದಾಗಿ ಖಚಿತವಾದ ಅಭಿಪ್ರಾಯವನ್ನು ತಾಳಿದವರು. ಅಂತಹ ನಿರುಪಯುಕ್ತ ಜನರನ್ನೆಲ್ಲ ‘ ನೋವಿಲ್ಲದ ಕೊಲೆ ’ಯ ಉಪಾಯದಿಂದ ಸಾಗಿಸಿಬಿಡಬೇಕೆಂದು, ಆಗಾಗ ತಮ್ಮ ಸಹಾಧ್ಯಾಯಿಗಳೊಂದಿಗೆ ವಾದ ಮಾಡುವರು.

“ ಕುರುಡರು— ಕುಂಟರು—ಊನಾಂಗರು— ಇಂತಹ ಜನರ ಉಪಚಾರವನ್ನಲ್ಲದೆ, ನಾವು ಎಂದರೆ ಡಾಕ್ಟರರು ಮಾಡುವ ಕೆಲಸ ಬೇರೆ ಏನಿದೆ ? ” ಎಂದು ಮಾರ್ಲಿನರ ಮಿತ್ರರು ಪ್ರತಿಯಾಗಿ ಹೇಳುತ್ತಿದ್ದರು.

“ ಬೇನೆಯವರನ್ನು ಸದೃಢ-ಆರೋಗ್ಯಶಾಲಿಗಳನ್ನಾಗಿ ಮಾಡುವುದೇನೋ ನಮ್ಮ ಕರ್ತವ್ಯ. ಆದರೆ ಅಸಾಧ್ಯ ಬೇನೆಗೆ ತುತ್ತಾದವರು, ಅಂಗಹೀನರು— ಇವರೆಲ್ಲ ಬದುಕುವುದಕ್ಕಿಂತ ಸಾಯುವುದೇ ಹಿತಕಾರಿಯಾದದ್ದು ! ಇದರಿಂದ ಪ್ರಪಂಚದಲ್ಲಿ ಯಾರಿಗೂ ಯಾವ ಬಗೆಯದೂ ನಷ್ಟವಿಲ್ಲ ! ” ಎಂದು ಮಾರ್ಲಿನ್ ಹೇಳುತ್ತಿದ್ದರು.

*   *   *   *

ಒಂದು ರಾತ್ರಿ, ಮಾರ್ಲಿನರು ಆಸ್ಪತ್ರೆಯಲ್ಲಿಯ ತಮ್ಮ ಕೆಲಸದ ಸರತಿಯ ಮೇಲೆ ಇದ್ದಾಗ, ಆ ಪಟ್ಟಣದ ಕೀಳುಕೇರಿಯಲ್ಲಿ ವಾಸಿಸುತ್ತಿದ್ದ ನಿರಾಶ್ರಿತ ಜರ್ಮನ್ ಮಹಿಳೆಯೊಬ್ಬಳು, ಹೆರಿಗೆಗಾಗಿ ಆ ಆಸ್ಪತ್ರೆಗೆ ಬಂದಳು. ಹಡೆದ ಕೂಸು ಗಂಡಾಗಿತ್ತು. ಅವಳ ಹೆರಿಗೆಯ ಕಾಲದ ಉಪಚಾರವನ್ನೆಲ್ಲ ಮಾರ್ಲಿನರೇ ನಿರ್ವಹಿಸಬೇಕಾಗಿ ಬಂತು. ಹುಟ್ಟಿದ ಕೂಸಿನ ಒಂದು ಕಾಲು ಗಿಡ್ಡವೆಂದರೆ ತೀರ ಗಿಡ್ಡವಾಗಿ ಇದ್ದುದು, ಡಾಕ್ಟರರಿಗೆ ಕಂಡುಬಂತು. ಕೂಸಿನ ಶ್ವಾಸೋಚ್ಛ್ವಾಸ ಪ್ರಾರಂಭವಾಗುವುದಕ್ಕೆಂದು ಮಾರ್ಲಿನರು, ಕೂಸಿನ ಬಾಯಲ್ಲಿ ಗಾಳಿಯನ್ನು ಊದಹತ್ತಿದ್ದರು. ಆಗಲೇ ಅವರ ಮನಸ್ಸು ಯೋಚನೆ ಮಾಡುತ್ತಿತ್ತು :

“ ಈ ಕೂಸು ಆಯುಷ್ಯದುದ್ದಕ್ಕೂ ಕುಂಟನಾಗಿಯೇ ಜಗತ್ತಿನಲ್ಲಿ ಆಯುಷ್ಯ ನೂಕಬೇಕು. ಜನರೆಲ್ಲ ಇವನನ್ನು ತಿರಸ್ಕಾರದಿಂದ ‘ ಕುಂಟ — ಕುಂಟ ’ ಎಂದು ಕರೆಯುವರು. ನಾನೀಗ ಈ ಕೂಸಿಗೆ ಜೀವಗಾಳಿಯನ್ನು ತುಂಬಬೇಕಾದರೂ ಯಾಕೆ? ಈಗಲೇ ಇದು ಸತ್ತುಹೋಗಿಬಿಟ್ಟರೆ, ಪ್ರಪಂಚಕ್ಕೆ ಯಾವ ಹಾನಿ ಉಂಟಾಗಬೇಕಾಗಿದೆ ? ”

ಆತನ ತಲೆಯಲ್ಲಿ ಹೀಗೆ ಯೋಚನೆಯ ಅಲೆಗಳು ಸುಳಿದರೂ, ಆತನ ಡಾಕ್ಟರೀ ವೃತ್ತಿಯ ಕರ್ತವ್ಯ, ಆ ಕೂಸಿನ ಪುಪ್ಪುಸಗಳು ಉಸಿರಾಡಿಸುವ ಕ್ರಿಯೆಯನ್ನು ಪ್ರಾರಂಭಿಸುವಂತೆ ಪ್ರಯತ್ನ ಮಾಡಲಿಕ್ಕೆ ಹಚ್ಚಿತು. ಎಷ್ಟೋ ಹೊತ್ತಿನ ಮೇಲೆ, ಕೂಸಿನ ಉಸಿರಾಟ ಪ್ರಾರಂಭವಾಯಿತು; ಬದುಕುವ ಲಕ್ಷಣ ಸ್ಪಷ್ಟವಾಗಿ ಕಂಡುಬಂತು. ಮುಖದಲ್ಲಿ ಚೆಂಬಣ್ಣ ಮೂಡಿತು. ಕೂಸು ಮೆಲ್ಲಗೆ ಅಳುವುದಕ್ಕೂ ಆರಂಭ ಮಾಡಿತು.

ಮಾರ್ಲಿನರು ತಮ್ಮ ಬ್ಯಾಗನ್ನು ಕೈಯಲ್ಲಿ ತೆಗೆದುಕೊಂಡರು. ‘ ನಾನೇತಕ್ಕೆ ಈ ಕೂಸನ್ನು ಬದುಕಿಸಿದೆನೋ ಏನೋ ! ಬಡತನದಿಂದ ತುಂಬಿದ ಈ ಜಗತ್ತಿನಲ್ಲಿ, ಲೆಕ್ಕವಿರದಷ್ಟು ಕೂಸುಗಳಿವೆ. ಹೀಗಿರುವಾಗ, ಇಂತಹ ಅಂಗಹೀನ ಕುನ್ನಿಯನ್ನು ನಾನು ಏತಕ್ಕಾಗಿ ಬದುಕಿಸಬೇಕಾಗಿತ್ತು ? ಸತ್ತು ಹೋಗಿದ್ದರೆ ನಷ್ಟವೇನು ಆಗುತ್ತಿತ್ತು ? ’ ಹೀಗೆಲ್ಲ ವಿಚಾರ ಮಾಡುತ್ತಲೇ ಮನೆಗೆ ತೆರಳಿದರು.

*   *   *   *

ವರ್ಷದ ಹಿಂದೆ ವರ್ಷ ಗತಿಸಿದುವು. ಡಾಕ್ಟರ್ ಮಾರ್ಲಿನರು ತಮ್ಮ ವೈದ್ಯಕ ವ್ಯವಸಾಯವನ್ನು ಸಾಗಿಸಲು ಒಂದು ಚಿಕ್ಕ ಪಟ್ಟಣಕ್ಕೆ ಹೋದರು. ವಿದ್ಯಾರ್ಥಿಯಾಗಿದ್ದಾಗಿನ ಹಿಂದಿನ ಎಲ್ಲ ವಿಚಾರಗಳೂ ಮಾಯವಾಗಿದ್ದುವು. ಉಳಿದ ಡಾಕ್ಟರಂತೆಯೆ ...... ಸತ್ತಿದ್ದರೆ ಎಷ್ಟು ಒಳಿತಾಗುತ್ತಿತ್ತು ? ' ಎಂಬ ವಿಚಾರ ...ಳಿಗೆ ಆಸ್ಪದ ಕೊಡದೆ, ತಮ್ಮ ಕಡೆಗೆ ಎಂತಹರು ಬಂದರೂ ಯೋಗ್ಯ ರೀತಿಯಿಂದ ಚಿಕಿತ್ಸೆ ನಡೆಯಿಸುತ್ತಿದ್ದರು.

ಕೆಲವು ಕಾಲ ಗತಿಸಿತು. ಡಾ. ಮಾರ್ಲಿನರಿಗೂ ದೈವಿಕ ವಿಪತ್ತೊಂದು ಬಂದಿತು. ಅವರ ಒಬ್ಬನೆ ಒಬ್ಬ ಮಗ, ಹೆಂಡತಿಯೊಂದಿಗೆ — ಮೋಟಾರ್ ಅಪಘಾತಕ್ಕೆ ಸಿಕ್ಕಿ — ಮರಣ ಹೊಂದಿದ. ಆತನಿಗೊಂದು ಹೆಣ್ಣು ಕೂಸು. ಚಿಕ್ಕತನದಲ್ಲಿಯೆ ತಂದೆ-ತಾಯಿಗಳಿಲ್ಲದ ತಬ್ಬಲಿಯಾಯಿತು. ಡಾ. ಮಾರ್ಲಿನರು ಆ ಕೂಸನ್ನು ತೆಗೆದುಕೊಂಡು ಬಂದು ತಮ್ಮ ಬಳಿಯಲ್ಲಿರಿಸಿಕೊಂಡು, ಪ್ರೀತಿಯಿಂದ ಜೋಕೆಮಾಡಲು ತೊಡಗಿದರು. ಕೂಸಿನ ಹೆಸರು ' ಬಾರ್ಬರಾ ' ಎಂದು. ಮಾರ್ಲಿನರು ಅದನ್ನು ಮನಃಪೂರ್ವಕವಾಗಿ ಪ್ರೀತಿಸುತ್ತಿದ್ದರು. ಕೂಸು ಬೆಳೆಯುತ್ತ ಹತ್ತು ವರ್ಷದ ಹುಡುಗಿಯಾಯಿತು. ಒಂದು ದಿನ ಇದ್ದುದಿದ್ದ ಹಾಗೆಯೆ ಆ ಹುಡುಗಿಯ ಕೈಕಾಲುಗಳಲ್ಲಿ ಅತಿಶಯವಾದ ಶೂಲಿಯು ತಲೆದೋರಿ, ಬಾಧೆ ಕೊಡಲು ತೊಡಗಿತು. ಕುತ್ತಿಗೆಯ ನರಗಳು ಹಿಡಿದುಬಿಟ್ಟಿದ್ದರಿಂದ, ಹೊರಳಾಡಿಸಲಿಕ್ಕೆ ಕೂಡ ಬರಲೊಲ್ಲದಾಯಿತು.

ಮೊದ-ಮೊದಲು, ಈ ರೋಗ 'ಪೋಲಿಯೋ' ಎಂಬುದು ಇರಬಹುದೆಂದು, ಆದಕ್ಕನುಗುಣವಾದ ಉಪಚಾರ ನಡೆಯಿತು. ಆದರೆ ಗುಣವು ಕಂಡು ಬರಲಿಲ್ಲ. ' ವ್ಹಾಯರಸ್ ' ನಿಂದ ಉತ್ಪನ್ನವಾದ ಒಂದು ವಿಲಕ್ಷಣತರದ ಅಪೂರ್ವರೋಗವೆಂದು ತಜ್ಞರು ಅಭಿಪ್ರಾಯಪಟ್ಟರು. ಇಂತಹ ರೋಗದ ವಿಷಯದಲ್ಲಿ, ವೈದ್ಯಕ ಗ್ರಂಥಗಳಲ್ಲಿ, ನಿದಾನ–ಚಿಕಿತ್ಸೆಗಳ ಬಗ್ಗೆ ಯಾವ ಉಲ್ಲೇಖವೂ ಕಾಣಲಿಲ್ಲ. ತಮ್ಮ ದೀರ್ಘಕಾಲದ ವ್ಯವಸಾಯಾವಧಿಯಲ್ಲಿ, ಈ ಬಗೆಯ ರೋಗವನ್ನೇ ನೋಡಿಲ್ಲವೆಂದು ಹೇಳಿ, ಅಸಾಧ್ಯವೆಂದು ತಜ್ಞರೆಲ್ಲ ತಲೆಯನ್ನು ಅಲ್ಲಾಡಿಸಿದರು. ಈ ಬೇನೆಗೆ ಚಿಕಿತ್ಸೆಯೇ ಇಲ್ಲವೆಂದೂ ಹೇಳಿದರು. ದಿನಗಳು ಕಳೆದಂತೆಲ್ಲ ಈ ರೋಗ ಬೆಳೆಯುತ್ತ ಹೋಗಿ, ದೇಹದಲ್ಲಿಯ ನರಗಳೆಲ್ಲ ಸತ್ತುಹೋಗುವುವೆಂದು ಅಭಿಪ್ರಾಯಪಟ್ಟರು.

ಈ ಬಗೆಯ ರೋಗ, ತಾನೇ ಕಂಡು ಹಿಡಿದ ವಿಶೇಷ ಚಿಕಿತ್ಸೆಯಿಂದ ಗುಣ ಹೊಂದಿದ ಬಗ್ಗೆ, ಒಬ್ಬ ತರುಣ ಡಾಕ್ಟರು ಪತ್ರಿಕೆಯಲ್ಲಿ ಒಂದು ಲೇಖನ ಪ್ರಕಟಿಸಿದ್ದರು. ಆತನ ಹೆಸರು ಡಾಕ್ಟರ್ ...ಜ ಮಿಲರ್ ಎಂದು. ಅವರ ಕಡೆಗೆ ಕರೆದುಕೊಂಡು ಹೋಗಬಹುದೆಂದು ಒಬ್ಬ ತಜ್ಞರು ಡಾ. ಮಾರ್ಲಿನರಿಗೆ ಸಲಹೆ ಕೊಟ್ಟರು. ಆದರಂತೆಯೆ ಡಾ. ಮಾರ್ಲಿನರು ತಮ್ಮ ಮೊಮ್ಮಗಳನ್ನು ಡಾಕ್ಟರ್ ಮಿಲರ್ ಅವರಲ್ಲಿಗೆ ತೆಗೆದುಕೊಂಡು ಹೋದರು. ಅವರದು ಚಿಕ್ಕದಾಗಿ ಇರುವ ಒಂದು ಖಾಸಗೀ ಆಸ್ಪತ್ರೆ. ಅಲ್ಲಿ ಅವರು, ತಮ್ಮವೇ ಆದ ಹೊಸ ಚಿಕಿತ್ಸೆಯಿಂದ, ಬೇರೆ ಬೇರೆ ರೋಗಗಳಿಂದ ಬಳಲುತ್ತಿರುವ ಅನೇಕ ಜನರನ್ನು ಗುಣಪಡಿಸಿದ್ದರು. ಡಾ. ಮಾರ್ಲಿನರ ಮೊಮ್ಮಗಳೂ ಇಲ್ಲಿ ಗುಣಹೊಂದಿದಳು. ಡಾಕ್ಟರ್ ಮಿಲರರು ಕುಂಟುಗಾಲಿನವರೆಂಬುದು ಡಾಕ್ಟರ್ ಮಾರ್ಲಿನರ ಲಕ್ಷ್ಯದಲ್ಲಿ ಬಂದಿತು. ಮಾತುಮಾತಿಗೆ ಸಂದರ್ಭ ಬಂದು, ಡಾಕ್ಟರ್ ಮಿಲರ್ ಹೇಳಿದರು :

" ನಾನೂ ಕುಂಟನೇ ಇದ್ದೇನೆ. ಹುಡುಗರೆಲ್ಲ ನನಗೆ ' ಕುಂಟ ' ' ಕುಂಟ ' ಎಂದು ಕರೆಯುತ್ತಾರೆ. ಹಾಗವರು ಕರೆದರೆ ನನಗೆ ತುಂಬ ತಮಾಷೆಯೆನಿಸುತ್ತದೆ; ನನ್ನ ರೀತಿಯನ್ನು ನೋಡಿ ಹುಡುಗರಿಗೂ ಸಂತೋಷವಾಗುತ್ತದೆ. ನನ್ನ ನಿಜವಾದ ಹೆಸರು ' ಥಾಡಿಯಸ್ ' ಎಂದು. ನನ್ನ ತಾಯಿಯ ಹೆರಿಗೆಯ ಸಮಯದಲ್ಲಿ ಚಿಕಿತ್ಸೆಗಾಗಿ ಬಂದ ವೈದ್ಯಕ ವಿದ್ಯಾರ್ಥಿಯ ಹೆಸರನ್ನೇ ನನಗೆ ಇರಿಸಲಾಗಿದೆ! "

ಇದನ್ನು ಕೇಳಿ ಡಾಕ್ಟರ್ ಮಾರ್ಲಿನರಿಗೆ ತಮ್ಮ ಹಿಂದಿನ ಕಾಲದ ಜೀವನವು ನೆನಪಿಗೆ ಬಂದಿತು. ಅವರ ಕಂಠವು ಬಿಗಿದು ಬಂದಿತು. ತಾನು ವಿದ್ಯಾರ್ಥಿಯಿದ್ದಾಗಲೇ ಒಬ್ಬ ಜರ್ಮನ್ ಹೆಂಗುಸಿನ ಹೆರಿಗೆಯ ಕಾಲದಲ್ಲಿ ಚಿಕಿತ್ಸೆ ಮಾಡಬೇಕಾಗಿ ಬಂದುದೂ ಆಕೆ ಹೆತ್ತ ಕೂಸು ಕುಂಟು ಇದ್ದುದರಿಂದ ' ಈ ಕೂಸನ್ನು ಬದುಕಿಸುವುದರಲ್ಲಿ ಅರ್ಥವೇನು ? ಸಾಯಗೊಡುವುದೇ ಒಳ್ಳೆಯದು ! ' ಎಂದುಕೊಂಡದ್ದೂ ಜ್ಞಾಪಕಕ್ಕೆ ಬಂದಿತು. ಆಗ ಅವರು ತಮ್ಮೊಳಗೇ ಎಂದುಕೊಂಡರು :

"ಅಯ್ಯೋ, ನಾನು ನನ್ನ ಚಿಕ್ಕತನದಲ್ಲಿ ಎಷ್ಟೊಂದು ಕುರುಡನಾಗಿದ್ದೆ ! "

ಹಾಗೆಯೆ ಅವರು ಮುಂದೆ ಯೋಚಿಸಿದರು :

" ಕುರುಡನಾಗಿ ಇರುವುದಕ್ಕಿಂತ ಅಂಗಹೀನನಾಗಿ ಇರುವುದು ಒಳ್ಳೆಯದು ! "

ಕೂಡಲೆ ಡಾ. ಮಾರ್ಲಿನರು ತಮ್ಮ ಕೈಯನ್ನು ಮುಂದೆ ಚಾಚಿ, ಡಾ. ಮಿಲರರ ಕೈಯನ್ನು ಹಿಡಿದು ಕುಲುಕಿದರು. ಅಭಿನಂದನೆಗಳನ್ನು ಸಲ್ಲಿಸಿದರು

(' ಲಿಟರರಿ ಡೈಜೆಸ್ಟ್ ' ನಲ್ಲಿ ಪ್ರಕಟವಾದ ಒಂದು ಸತ್ಯ ಸಂಗತಿಯ ಅನುವಾದವಿದು. —ಲೇ.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ವಿಜಾಪುರ ವಿಭಾಗದ ರಾಷ್ಟ್ರೀಕೃತ ಬಸ್ಸುಸಾರಿಗೆ

(ಪರಿಚಯ ಪ್ರಬಂಧ)

'ವಿಹಂಗಮ'

★

ಕರ್ನಾಟಕದ ಮಿಕ್ಕ ಭಾಗಗಳಲ್ಲೆಲ್ಲ ಎಸ್. ಟಿ. ಬಸ್ಸುಸಾರಿಗೆಯ ವ್ಯವಸ್ಥೆಯ ಬಗ್ಗೆ ದೂರುಗಳು ಕಿವಿಗೆ ಬೀಳುತ್ತಲಿದ್ದರೂ, ವಿಜಾಪುರದ ವಿಭಾಗಲ್ಲಿ ಇಂತಹ ದೂರುಗಳಿಗೆ ಆಸ್ಪದವಿಲ್ಲದಂತಿರುವುದು ಅಭಿನಂದನೀಯ ಸಂಗತಿ !

★

ಹಿನ್ನೆಲೆ

ರಾಷ್ಟ್ರೀಕೃತ ಬಸ್ಸುಸಾರಿಗೆಯ ಯೋಜನೆಯನ್ವಯ, ಮುಂಬಯಿ ಕರ್ನಾಟಕದಲ್ಲಿ ಮೊದಲನೆಯ ಸಲ ಸಾರಿಗೆಯನ್ನು ವಿಜಾಪುರ

ಕ್ಯಾಪ್ಟನ್ ಆರ್. ಎಚ್. ದೇಸಾಯಿ—ಡಿವ್ಹಿಜನಲ್ ಕಂಟ್ರೋಲರ್ ಸ್ಟೇಟ್‌ಟ್ರಾನ್ಸ್‌ಪೋರ್ಟ್, ಬಿಜಾಪೂರ.

ವಿಭಾಗದಲ್ಲಿ ಪ್ರಾರಂಭಿಸಲಾಯಿತು. ೧೯೪೯ನೆಯ ಇಸ್ವಿಯ ಮಾರ್ಚ್ ತಿಂಗಳಲ್ಲಿ ಪ್ರಾರಂಭವಾದ ರಾಷ್ಟ್ರೀಕೃತ ಬಸ್ಸುಸಾರಿಗೆಯು, ಕೇವಲ ೩೯ ಬಸ್ಸುಗಳ ಸಹಾಯದಿಂದ, ೯ ಮಾರ್ಗಗಳ ಮೇಲೆ, ದಿನಾಲು ೪೨೫ ಮೈಲು ಸಾರಿಗೆಯನ್ನು ಮಾಡುತ್ತಿತ್ತು. ಶೈಶವಾವಸ್ಥೆಯಲ್ಲಿದ್ದ ಈ ವಿಭಾಗವು, ಅನೇಕ ಏರಿಳಿತಗಳನ್ನು ಅನುಭವಿಸಿ, ಇಂದು ತನ್ನ ಸಾರಿಗೆಯ ಸೀಮೆಯನ್ನು ವಿಸ್ತಾರಗೊಳಿಸಿಕೊಂಡಿದೆ. ಸಾಂಗಲಿ, ಬೆಳಗಾಂವಿ, ಇಳಕಲ್ಲ, ನರಗುಂದ, ಧೂಳಖೇಡಗಳು ವಿಜಾಪುರ ವಿಭಾಗದ ಗಡಿನಾಡುಗಳಾಗಿದ್ದು, ಈ ವಿಭಾಗದ ಬಸ್ಸುಗಳು, ಈ ಎಲ್ಲ ಪ್ರದೇಶಗಳಲ್ಲಿ ತಮ್ಮ ಓಡಾಟವನ್ನು ಸಾಗಿಸುತ್ತಲಿವೆ. ಸದ್ಯಕ್ಕೆ, ಎಂದರೆ ಮಳೆಗಾಲದಲ್ಲಿ ೯೨ ಬಸ್ಸುಗಳು ೯೨ ಮಾರ್ಗಗಳ ಮೇಲೆ ಸಾರಿಗೆಯನ್ನು ಮಾಡಿ, ದಿನಾಲು ೧೧೦೦೦ ಮೈಲು ದಾರಿಯನ್ನು ಕ್ರಮಿಸುತ್ತಲಿವೆ. ಬೇಸಗೆಯಲ್ಲಿ ೧೦೨ ಬಸ್ಸುಗಳು ೧೦೦ ಮಾರ್ಗಗಳ ಮೇಲೆ ಸಾರಿಗೆಯನ್ನು ಮಾಡಿ, ೧೨೫೦೦ ಮೈಲು ದಾರಿಯನ್ನು ಕ್ರಮಿಸುತ್ತವೆ. ವಿಜಾಪುರ ವಿಭಾಗವು, ಸುಗ್ಗಿಯ ಕಾಲ ಹಾಗೂ ಮದುವೆ-ಮುಂಜಿವೆಗಳ ಕಾಲವಾದ ಬೇಸಗೆಯಲ್ಲಿ, ೧೦೨ ಬಸ್ಸುಗಳ ಸಹಾಯದಿಂದ ಪ್ರಯಾಣಿಕರ ಸಾಗಾಟವನ್ನು ಯಶಸ್ವಿಯಾಗಿ ನಿರ್ವಹಿಸುತ್ತದೆ. ಆದರೆ ಈ ವಿಭಾಗದಲ್ಲಿ ೧೨೭ ಬಸ್ಸುಗಳು ಇರುತ್ತವೆ.

ಬಸ್ಸುಗಳ ಪೋಷಣೆ

ಸದ್ಯಕ್ಕೆ ೯೨ ಮಾರ್ಗಗಳ ಮೇಲೆ ೯೨ ಬಸ್ಸುಗಳು ಸಾರಿಗೆಯನ್ನು ಮಾಡುತ್ತಿದ್ದರೂ, ವಿಜಾಪುರದ ವಿಭಾಗದ ಬಸ್ಸುಗಳ ಸಂಖ್ಯೆ ೧೨೭ ಏಕೆ ಇರುತ್ತದೆಂಬ ಪ್ರಶ್ನೆ ಸಹಜವಾಗಿ ಬರುತ್ತದೆ. ಈ ೩೫ ಹೆಚ್ಚಿನ ಬಸ್ಸುಗಳನ್ನು, ಪೋಷಣೆಗಾಗಿ ಹಾಗೂ ಗಂಭೀರ ಪ್ರಸಂಗಗಳ ಉಪಯೋಗಕ್ಕಾಗಿ ಕಾಯ್ದಿಡಲಾಗಿದೆ. ಮನುಷ್ಯನ ಜೀವನಕ್ಕೆ ಆಹಾರವು ಅವಶ್ಯವಿರುವಂತೆ, ದಿನಾಲು ಸುಮಾರು ೧೨೦ರಿಂದ ೧೫೦ ಮೈಲುಗಳ ವರೆಗೆ ಸಾರಿಗೆಯನ್ನು ಮಾಡಿದ ಬಸ್ಸುಗಳಿಗೆ, ಪೋಷಣೆಯನ್ನು ಕೊಡುವುದು ಅವಶ್ಯಕವಿರುತ್ತದೆ. ಪ್ರತಿಯೊಂದು ಗ್ಯಾರೇಜು ಹಾಗೂ ಡಿಪೋಗಳಲ್ಲಿ ವರ್ಕಶಾಪುಗಳಿದ್ದು, ಬಸ್ಸುಗಳ ಸವಕಳಿಯನ್ನು ತುಂಬಿ, ಚೆನ್ನಾಗಿ ಆರಯಿಕೆಯನ್ನು ಮಾಡಿ, ಮರುದಿನದ ಪ್ರವಾಸಕ್ಕೆ ಬಸ್ಸುಗಳನ್ನು ಸಿದ್ಧಮಾಡುವುದನ್ನು ದಿನಂಪ್ರತಿ ನೋಡಬಹುದು. ವಿಜಾಪುರ ವಿಭಾಗವು, ಬಸ್ಸುಗಳ ಪೋಷಣೆಗೆ ಹೆಚ್ಚಿನ ಮಹತ್ತ್ವವನ್ನು ಕೊಡುತ್ತದೆ. ಆರೋಗ್ಯಶಾಲಿಯಾದ ಮನುಷ್ಯನು ತನ್ನ ಕೆಲಸವನ್ನು ಚಾಚೂ ತಪ್ಪದೆ, ಉತ್ಸಾಹದಿಂದ ಮಾಡು-

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ.

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ ಬರೆಯಿರಿ :

卐

ದಿ ನೂತನ
ಆಯುರ್ವೇದ ಕಾರ್ಯಾಲಯ ಲಿ.
ವಿಜಾಪುರ.

ವಂತೆ, ಚೆನ್ನಾಗಿ ಪ್ರೋಕ್ಷಿತವಾದ ವಿಜಾಪುರದ ಬಸ್ಸುಗಳು ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸುತ್ತವೆ. ಪ್ರತಿಯೊಂದು ಬಸ್ಸಿನ ಮೇಲೆ ಕನಿಷ್ಟ ಮೂರುತಾಸಿನ ವರೆಗೆ, ತಾಂತ್ರಿಕಕಾರ್ಯದಲ್ಲಿ ನುರಿತ ಕೆಲಸಗಾರರು ಕೆಲಸವನ್ನು ಮಾಡುತ್ತಾರೆ. ಪ್ರೋಕ್ಷಣೆಯ ಕಾರ್ಯವು ಮುಗಿದಬಳಿಕ, ಫಿನಾಯಿಲ್ ಹಾಕಿ ಬಸ್ಸುಗಳನ್ನು ಸ್ವಚ್ಛವಾಗಿ ತೊಳೆಯಲಾಗುತ್ತದೆ. ಈ ಬಗೆಯಾಗಿ ಪ್ರೋಕ್ಷಿತವಾದ ಬಸ್ಸುಗಳು ಲಕಲಕನೆ ಹೊಳೆಯುತ್ತ, ಮರುದಿನದ ಪ್ರವಾಸಕ್ಕಾಗಿ ರಾತ್ರಿ ಸಿದ್ಧವಾಗುತ್ತವೆ.

ವೇಳಗೆ ಸರಿಯಾಗಿ ಬಸ್ಸುಗಳ ಓಡಾಟ :

ಮೇಲ್ಲಾಣಿಸಿದಂತೆ ಚೆನ್ನಾಗಿ ಪ್ರೋಕ್ಷಿತವಾದ ವಿಜಾಪುರದ ಬಸ್ಸುಗಳು, ವೇಳೆಗೆ ಸರಿಯಾಗಿ ತಮ್ಮ ಓಡಾಟವನ್ನು ಸಾಗಿಸುತ್ತವೆ. ೧೦೦ ಕ್ಕೆ ಸುಮಾರು ೯೬ ರಷ್ಟು ಬಸ್ಸುಗಳು ಸರಿಯಾದ ವೇಳೆಗೆ ತಮ್ಮ ಸ್ಥಳಗಳನ್ನು ಬಿಟ್ಟು ನಿರ್ದಿಷ್ಟಪಡಿಸಿದ ವೇಳೆಗೆ ಊರುಗಳನ್ನು ತಲುಪುತ್ತವೆ. ದಾರಿಯಲ್ಲಿ ಪ್ರವಾಸಿಗರ ದಟ್ಟಣೆ ಹೆಚ್ಚಾದಾಗ, ಇಲ್ಲವೆ ಮಳೆಯ ಮೂಲಕ ರಸ್ತೆಯಲ್ಲಿ ವಿಪರೀತ ಜಾರಿಕೆಯಾದಾಗ, ಸುಮಾರು ೧೦ರಿಂದ ೩೦ ನಿಮಿಷಗಳ ವರೆಗೆ ತಡವಾಗಿ ಬಸ್ಸುಗಳು ತಮ್ಮ ಸ್ಥಾನವನ್ನು ತಲುಪುತ್ತವೆ. ಆದರೆ ಇಂತಹ ಉದಾಹರಣೆಗಳು ಕ್ವಚಿತ್ತಾಗಿ ದೊರೆಯುತ್ತವೆ. ಮಾರ್ಗದಲ್ಲಿ ಬಸ್ಸುಗಳು ಕೆಟ್ಟುಹೋಗಿ ನಿಂತ ಉದಾಹರಣೆಗಳು ವಿಜಾಪುರ ವಿಭಾಗದಲ್ಲಿ ವಿರಳವಾಗಿರುತ್ತವೆ. ಚೆನ್ನಾಗಿ ಪ್ರೋಕ್ಷಣೆಯನ್ನು ಹೊಂದಿದ ಬಸ್ಸುಗಳು, ಮಾರ್ಗದಲ್ಲಿ ನಾದುರಸ್ತಾಗಿ ನಿಲ್ಲುವ ಕಾರಣವೇ ಇಲ್ಲ. ಇಂತಹ ಸಂಗತಿಗಳು ಅಪರೂಪವಾಗಿ ಜರುಗಿದಾಗ, ಕಾಯ್ದಿಟ್ಟ ಬಸ್ಸುಗಳು ಸಹಾಯಕ್ಕೆ ಧಾವಿಸುತ್ತವೆ. ಪ್ರಯಾಣಿಕರಿಗೆ ಯಾವುದೇ ಬಗೆಯ ಅನಾನುಕೂಲತೆಯುಂಟಾಗದಂತೆ ನೋಡಿಕೊಳ್ಳಲಾಗುತ್ತದೆ. ಅಕಸ್ಮಾತ್ತಾಗಿ ಬಸ್ಸುಗಳು ಮಾರ್ಗದಲ್ಲಿ ನಾದುರಸ್ತಾಗಿ ನಿಂತಾಗ, ಈ ಬಗೆಯಾಗಿ ಉಂಟಾದ ಘಟನೆಗೆ ಕಾರಣವೇನೆಂಬುದನ್ನು ಕೂಲಂಕಷವಾಗಿ ವಿಚಾರಿಸಲಾಗುತ್ತದೆ. ಒಂದುವೇಳೆ ಪ್ರೋಕ್ಷಣೆಯು ಸರಿಯಾಗಿ ಆಗದೆ ಬಸ್ಸು ದಾರಿಯಲ್ಲಿ ಕೆಟ್ಟಿತೆಂದು ಕಂಡುಬಂದರೆ, ಸಂಬಂಧಿಸಿದ ನೌಕರರ ಮೇಲೆ ಉಗ್ರಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಎಂತಲೇ ವಿಜಾಪುರ ವಿಭಾಗದಲ್ಲಿ ಬಸ್ಸುಗಳು ವೇಳೆಗೆ ಸರಿಯಾಗಿ ತಮ್ಮ ಸ್ಥಾನವನ್ನು ಬಿಟ್ಟು, ನಿರ್ದಿಷ್ಟಪಡಿಸಿದ ವೇಳೆಗೆ, ಸರಿಯಾಗಿ, ತಲುಪಬೇಕಾದ ಊರನ್ನು ಮುಟ್ಟುತ್ತವೆ.

ಜನತಾಭಿಪ್ರಾಯಕ್ಕೆ ಮನ್ನಣೆ :

ಜನತೆಗೆ ಸುಖದಾಯಕವಾದ ಪ್ರವಾಸವನ್ನು ಒದಗಿಸುವುದೇ ಬಸ್ಸುಸಾರಿಗೆಯ ರಾಷ್ಟ್ರೀಕರಣದ ಮೂಲೋದ್ದೇಶವಾಗಿರುವುದರಿಂದ, ವಿಜಾಪುರ ವಿಭಾಗವು ಜನತಾಭಿಪ್ರಾಯಕ್ಕೆ ಮನ್ನಣೆಯನ್ನೀಯಲು ಯೋಗ್ಯಕ್ರಮಗಳನ್ನು ಕೈಕೊಂಡಿದೆ. ವೇಳಾಪತ್ರಿಕೆಗಳಲ್ಲಿ ವರ್ಷಕ್ಕೆ ಎರಡುಸಲ, ಒಮ್ಮೆ ಬೇಸಗೆಯಲ್ಲಿ, ಇನ್ನೊಮ್ಮೆ ಮಳೆಗಾಲದಲ್ಲಿ—ಬದಲಾವಣೆಗಳನ್ನು ಮಾಡಲಾಗುತ್ತದೆ. ಅಂತಹ ವೇಳೆಗಳಲ್ಲಿ, 'ಸಂಯುಕ್ತ ಕರ್ನಾಟಕ,' 'ವಿಶಾಲ ಕರ್ನಾಟಕ,' 'ನವಯುಗ,' 'ಕರ್ನಾಟಕ ವೈಭವ,' ಮುಂತಾದ ಪತ್ರಿಕೆಗಳ ಮುಖಾಂತರ, ವೇಳಾಪತ್ರಿಕೆಯ ಬದಲಾವಣೆಗಳ ಬಗ್ಗೆ ಸಾರ್ವಜನಿಕರ ಸೂಚನೆಗಳನ್ನು ಕೇಳಲಾಗುತ್ತದೆ. ಸಂತೋಷದ



ಶ್ರೀಗಜಾನನೋತ್ಸವದ ವೇಳೆಯಲ್ಲಿ ಜರುಗಿದ ಶ್ರೀಸತ್ಯನಾರಾಯಣನ ಪೂಜೆ.



ಶ್ರೀ. ರಾಜಾರಾಮ ದುಬೆ (ಪಾರ್ಲಿಮೆಂಟಿನ ಸದಸ್ಯರು) ವಿಜಾಪೂರ ಹೊಸಡಿಪೋದ ಉದ್ಘಾಟನೆಯನ್ನು ಮಾಡುತ್ತಿರುವುದು.

ಸಂಗತಿಯೆಂದರೆ: ವಿಜಾಪುರ ವಿಭಾಗದ ಪ್ರವಾಸಮಾಡುವ ಜನತೆಯು, ತನ್ನ ಅಮೂಲ್ಯವಾದ ಸೂಚನೆಗಳನ್ನಿತ್ತು, ಸಾರಿಗೆಯ ಸಂಸ್ಥೆಯೊಡನೆ ಸಹಕರಿಸುತ್ತದೆ. ಸಾರ್ವಜನಿಕರ ಸೂಚನೆಗಳಿಗೆ ಪ್ರಾಧಾನ್ಯತೆಯನ್ನಿತ್ತು, ವೇಳಾಪತ್ರಿಕೆಗಳಲ್ಲಿ ಬದಲಾವಣೆಗಳನ್ನು ಮಾಡಲಾಗುತ್ತದೆ.

ಇದಲ್ಲದೆ ಪ್ರವಾಸಿಕರ ದೂರುಗಳನ್ನು, ಸಂಕಷ್ಟಗಳನ್ನು ಅರಿತುಕೊಳ್ಳಲು, ಪ್ರತಿಯೊಂದು ಬಸ್ಸುನಿಲ್ದಾಣದಲ್ಲಿ "ತಕರಾರು ಮತ್ತು ಸೂಚನೆಗಳು" ಎಂಬ ಪುಸ್ತಕವನ್ನು ಇಡಲಾಗಿದೆ. ಪತ್ರದ್ವಾರದಿಂದ ಸಹ ಪ್ರವಾಸಿಕರ ತೊಂದರೆಗಳನ್ನು ಕೇಳಿಕೊಳ್ಳಲಾಗುತ್ತದೆ. ಈ ರೀತಿಯಾಗಿ ಬಂದ ಪ್ರತಿಯೊಂದು ತಕರಾರಿನ ಬಗ್ಗೆ ಯೋಗ್ಯವಾದ ರೀತಿಯಲ್ಲಿ ಹೊಣೆಗಾರರಾದ ಅಧಿಕಾರಿಗಳು ವಿಚಾರಿಸಿ, ತಪ್ಪಿತಸ್ಥನಾದ ನೌಕರನಿಗೆ ಯೋಗ್ಯ ಶಿಕ್ಷೆಯನ್ನು ವಿಧಿಸುತ್ತಾರಲ್ಲದೆ, ಪುನಃ ಇಂತಹ ತಪ್ಪುಗಳು ಜರುಗದಂತೆ ಜಾಗರೂಕತೆ ವಹಿಸುತ್ತಾರೆ. ತಾವು ತೆಗೆದುಕೊಂಡ ಕ್ರಮವನ್ನು, ಸಂಬಂಧಿಸಿದ ಪ್ರವಾಸಿಕರಿಗೆ ತಿಳಿಸುತ್ತಾರೆ. ಮಳೆಗಾಲದಲ್ಲಿ ಪ್ರತಿದಿನ ಸುಮಾರು ೧೮೭೭೨ ಪ್ರಯಾಣಿಕರು, ಹಾಗೂ ಪ್ರವಾಸಿಕರ ದಟ್ಟಣೆಯು ವಿಶೇಷವಾಗಿರುವ ಏಪ್ರಿಲ್-ಮೇ ತಿಂಗಳಲ್ಲಿ ದಿನಂಪ್ರತಿ ೨೫೦೭೯ ಪ್ರಯಾಣಿಕರು, ವಿಜಾಪುರ ವಿಭಾಗದಲ್ಲಿ ಪ್ರವಾಸಮಾಡುತ್ತಾರೆಂದರೆ, ಮೇಲ್ಕಾಣಿಸಿದ ಕಾರ್ಯದ ಗುರುತರವಾದ ಹೊಣೆಯು ಅರಿವಾಗಬಹುದು.

ನೌಕರರ ದೃಷ್ಟಿಕೋನ :

ಪ್ರಯಾಣಿಕರ ಸೇವೆಯೇ ರಾಷ್ಟ್ರೀಕೃತ ಬಸ್ಸುಸಾರಿಗೆಯ ಧ್ಯೇಯವಾಗಿದೆಯೆಂಬುದನ್ನು ಪ್ರತಿಯೊಬ್ಬ ನೌಕರನಲ್ಲಿ ಬಿಂಬಿಸಿ, ಸಾರ್ವಜನಿಕರೊಡನೆ ವಿನಯಶೀಲತೆಯಿಂದ ನಡೆದುಕೊಳ್ಳುವುದನ್ನು ಕಲಿಸುವುದೇ ಈ ವಿಭಾಗದ ಮೊದಲನೆಯ ಕೆಲಸವಾಗಿದೆ. ವಿಜಾಪುರದ 'ಎಸ್ಟಿ' ನೌಕರರು ಪ್ರವಾಸಿಕರೊಡನೆ ಅತ್ಯಂತ ಸೌಜನ್ಯದಿಂದ ನಡೆದುಕೊಳ್ಳುತ್ತಾರಲ್ಲದೆ, ಪ್ರವಾಸಿಕರಿಗೆ ಶಕ್ಯವಿದ್ದ ಮಟ್ಟಿಗೆ ಹೆಚ್ಚಿನ ಸಹಾಯ ಸಲ್ಲಿಸುತ್ತಾರೆ. ಸಮಾಜದ ಅನೇಕ ಸಣ್ಣ ನಾಗರಿಕರಿಂದ, ಎಸ್ಟಿ ನೌಕರರ ಕಾರ್ಯದ ಬಗ್ಗೆ ಪ್ರಶಂಸೆಯ ಪತ್ರಗಳು ವಿಪುಲವಾಗಿ ಬರುತ್ತವೆ.

ಕಳೆದ ಮೂರು ವರ್ಷಗಳಲ್ಲಿ ವಿವಿಧ ಅನುಭವಗಳನ್ನು ಪಡೆದ ವಿಜಾಪುರದ ನೌಕರರು, ತಮ್ಮ ಕಾರ್ಯಕ್ಷಮತೆಯನ್ನು ಬೆಳೆಸಿಕೊಂಡು, ನಿಯಮಿತ ಕಾಲಕ್ಕೆ ಬಸ್ಸುಗಳ ಸಾಗಾಟವನ್ನು ಸಾಗಿಸಿ ಜನತೆಯ ಕೃತಜ್ಞತೆಯನ್ನು ಹಾಗೂ ಎಸ್ಟಿಯ ಕೇಂದ್ರ ಕಚೇರಿಯ ಅಭಿನಂದನೆಗಳನ್ನು ಪಡೆದಿದ್ದಾರೆ. ವಿಭಾಗಕ್ಕೆ ದೊರೆತ ಒಳ್ಳೆಯ ಹೆಸರನ್ನು ಕಾಪಾಡಿಕೊಂಡು ಹೋಗುವುದೇ ಅವರ ಮನದಲ್ಲಿಯ ಸದ್ಯದ ವಿಚಾರ. ಝಗಝಗಿಸುವ ಅಚ್ಚುಕಟ್ಟಾದ ಸಮವಸ್ತ್ರಗಳನ್ನು ಧರಿಸಿ, ಜನತೆಯ ಸೇವೆಯನ್ನು ಮಾಡುವ ಉದಾತ್ತ ಧ್ಯೇಯದಿಂದ ಬಸ್ಸುಸಾರಿಗೆಯ ನೌಕರರು, ರಾಷ್ಟ್ರೀಕರಣದ ನಂತರ, ಉತ್ಸಾಹದಿಂದ ಸ್ವತಂತ್ರ ನಾಗರೀಕರ ಸೇವಕರೆಂಬ ಅಭಿಮಾನದಿಂದ ಎದೆಯುಬ್ಬಿಸಿ ತಿರುಗಾಡುವ ನೋಟವು ಅತ್ಯಂತ ಆಕರ್ಷಕವಾದದ್ದು.

ರಾಷ್ಟ್ರೀಯ ಉತ್ಸವಗಳಾದ ಸ್ವಾತಂತ್ರ್ಯದಿನಾಚರಣೆ, ಶ್ರೀ ಗಜಾನನೋತ್ಸವಗಳನ್ನು ವಿಜಾಪುರದ ಕೆಲಸಗಾರರು ಹುರುಪಿನಿಂದ ಆಚರಿಸಿ, ತಮ್ಮಲ್ಲಿ ಹುದುಗಿದ್ದ ಸಂಗೀತ, ನಾಟ್ಯ, ಚಿತ್ರಕಲೆ ಮುಂತಾದ ಅಮೂಲ್ಯ ಕಲೆಗಳನ್ನು ಪ್ರದರ್ಶಿಸಿ, ತಮ್ಮ ಸರ್ವಾಂಗೀಣ ಅಭಿವೃದ್ಧಿಯನ್ನು ತಾವೇ ಹೇಗೆ ಮಾಡಿಕೊಳ್ಳುತ್ತಿದ್ದಾರೆಂಬುದನ್ನು ತೋರಿಸಿಕೊಟ್ಟರು.

ನೌಕರರಿಗೋಸ್ಕರ ಸಹಕಾರಿ ಸಂಘ, ವಿಶ್ರಾಂತಿಯ ಮನೆ, ವಾಚನಾಲಯ ಹಾಗೂ ಉಪಹಾರಗೃಹ, ಅಲ್ಪಬೆಲೆಯಲ್ಲಿ ಅರಿವೆಗಳನ್ನು ಸ್ವಚ್ಛ ಮಾಡಿಸುವುದು, ಹಾಗೂ ವಿವಿಧ ಆಟಗಳಲ್ಲಿ ಆಸ್ಥೆ ಹುಟ್ಟಿಸಲು ಆಟಗಳ ಸಂಘ ಇವನ್ನೆಲ್ಲ ತೆರೆಯಲಾಗಿದೆ.

ಕೊನೆಯ ಮಾತು

ಪ್ರಯಾಣಿಕರ ಸೇವೆಯೇ ರಾಷ್ಟ್ರೀಕೃತ ಬಸ್ಸುಸಾರಿಗೆಯ ಧ್ಯೇಯವೆಂಬುದನ್ನು ಗುರಿಯಾಗಿಟ್ಟುಕೊಂಡು, ಎಸ್ಟಿ ನೌಕರರ ಅಭಿವೃದ್ಧಿಯನ್ನು ತನ್ನ ಲಕ್ಷ್ಯದಲ್ಲಿಟ್ಟುಕೊಂಡು, ರಾಷ್ಟ್ರೀಕೃತ ಬಸ್ಸುಸಾರಿಗೆಯ ವಿಜಾಪುರ ವಿಭಾಗವು ಮುನ್ನಡೆಯಿಡುತ್ತಿದೆ. ಇನ್ನೂ ಸಾಧಿಸಬೇಕಾದ ಕಾರ್ಯವು ವಿಪುಲವಾಗಿದೆ; ಆದರೆ ಸಾಧಿಸಿದ ಕಾರ್ಯವು ಸಾಕಷ್ಟಿದೆಯೆಂಬುದನ್ನು ಅಭಿಮಾನದಿಂದ ಹೇಳಬಹುದು.

ಹಳೆಯ ಹೆಗ್ಗಳಿಕೆ

(ನಾಟ್ಯಛಟಾ)

ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ

卐

[ಆ ಪಟ್ಟಣದಲ್ಲಿ ಶಾಮರಾಯರು ಗಣ್ಯ ವಕೀಲರ ಕುಶಲ ಕಾರಕೂನರು. ಮೊನ್ನೆ ಮೊನ್ನೆ ಕೆಲಸದಿಂದ ನಿವೃತ್ತರಾಗಿರುವರು. ವಯಸ್ಸು ನೂರು ಅರುವತ್ತು. ಸಾಕಷ್ಟು ಸಿರಿವಂತರು. ಮನೆಯ ಕೆಲಸಕ್ಕೆಂದು ಊರಿಗೆ ಹೋದವರು ಈಗ ಬಂದಿರುವರು. ವೇಳೆ ಐದಾಗಿರಬಹುದು. ಮಗನು ಕೊಟ್ಟಿದ್ದು ಕರೀ ಸರ್ಜ್‌ಕೋಟು, ಬಿಳಿ ರುಮಾಲು, ಜರದ ಕೆಂಪು ದುಪ್ಪಟ್ಟಾ. ವಯಸ್ಸಿನ ದ್ಯೋತಕವಾದ ಚಾಳೀಸಿರುವುದು. ಕೈಯಲ್ಲೊಂದು ಬಡಿಗೆ, ಕಾಲಲ್ಲಿ ವಿಜಾಪುರದ ಮೊಚ್ಚೆ. ಬಿಸಿಲಲ್ಲಿ ನಡೆದು ಬಂದುದರಿಂದ ವಿಶ್ರಾಂತಿಯ ಸಿದ್ಧತೆಯಲ್ಲಿರುವರು. ಅಷ್ಟರಲ್ಲಿ, ರೂಢಿಯಂತೆ ಅವರ ಗೆಳೆಯ ರಾಜಣ್ಣ ಬರಲು, ಶಾಮರಾಯರು ತುದಿಮೊದಲಿಲ್ಲದ ಮಾತಿಗೆ ಮೊದಲುಮಾಡುವರು.]

(ಇಬ್ಬರೂ ತಂಬಾಕು ಚೂರು ಮಾಡಿಕೋತ್ತಾ) ರಾಜಣ್ಣಾ, ಮನೆಯ ಕೆಲಸ ಇತ್ತು ಅಂತ ಹ್ಯಾಟಿಯ ಕಡೆಗೆ ಹೋಗಿದ್ದೆ. ಅಲ್ಲಿಯ ಬರತಕ ಮನಸು ನಿಂದರಲಿಲ್ಲಾ ಅಂತ, ಕೋರ್ಟಿನ್ಯಾಗ ಸ್ವಲ್ಪ ಹೊತ್ತು ಕೂತಿದ್ದೆನೇನಪಾ. ಅಲ್ಲೆ ಇತ್ತಿತ್ತಲಾಗಿ ಏನೂ ತ್ರಾಣವಿಲ್ಲ ಉಳಿದಿಲ್ಲ. ನಮ್ಮ ಕಾಲನ ಕಾಲ! ಮಾಡಬೇಕು ವಕೀಲೀ ಧಂಧೆ ಅಂತ ಅನಿಸಿ, ನಮ್ಮ ಹುಡುಗ ಗಣಪತಿಗೆ ಈ ಸಾರೆ ಬಿ.ಎ. ಆದ ಕೂಡಲೆ ಎಲ್‌ಎಲ್. ಬಿ. ಗೆ ಕಳಿಸತೇನಿ! ತನ್ನ ಧ್ಯೆವಾ ತಕ್ಕೊಂಡಾನು! ನಾ ಹೇಳಲಿಕ್ಕೆ ಎಷ್ಟರಾಂವ ಅವಗ!

ನಮ್ಮ ದಿನದ ವಕೀಲಿಯ ಅಬ್ಬರ ಕೇಳತೀಯಾ? ಹಳೇ ನೆನಪು ಮರಕಳಿಸಿದರ, ಮೈ ಉಬ್ಬತದ. ಹ್ಯಾಂಗ ಪೇಸರು ನಮಗ ರೊಕ್ಕಾನೂ ಕೊಟ್ಟಾ ಅನ್ನು ಆಗ. ಆದರ ಈಗೇನು? ಬರೇ ಕಾಯದೇದ ಪುಸ್ತಕದ ಭಾರನ ಭಾರ! ನಿನಗ ಗೊತ್ತಿರಲಿಕ್ಕಿಲ್ಲ— ಹೇಳತೇನಿ ರಾಜಣ್ಣಾ! ಎಕ್ಕ್ಯೋಣೀಸೇ ಪಂಚವೀಸ ಸಾಲಿನ್ಯಾಗ, ನಾ ನಮ್ಮ ವಕೀಲರ ಸಂಗತಿ ಊರಿಗೆ ಹೋಗಿದ್ದೆ. ಅಲ್ಲೆ ಬ್ಯಾರೇ ಒಂದು ಖಟ್ಲೆ ನಡೆದಿತ್ತು ನೋಡು ಕೋರ್ಟಿನ್ಯಾಗ. ಅವರ ಮೋಜಿನ ಹಕೀಕತ್ತು ಕೇಳು: ಅಣ್ಣ-ತಮ್ಮಂದಿರೊಳಗ ಆಸ್ತಿಯ ಸಲುವಾಗಿ ತಕರಾರು ಎದ್ದಿತ್ತಂತ ತಮ್ಮಾ ಅಣ್ಣನ್ನ ಬಾಯಿಲೇ ಕಡಿದು ಕೊಂದಾನ— ಅಂತ ಸರಕಾರದ ತರ್ಫೇಲೆ ಸಾಕ್ಷೀ ಪುರಾವೆ ಆದುವು. ಆದರ ನೋಡು ರಾಜಣ್ಣಾ, ಆರೋಪೀ ತರ್ಫೆ ವಕೀಲರ ಕಾರಕೂನ, ಇಷ್ಟು ಚಾಣಾಕ್ಷ ಇದ್ದನಲ್ಲಾ; ಅವಾ ತಮ್ಮ ವಕೀಲರಿಗೆ ಹಂಚಿಕಿ ಹೇಳಿ, ಮರುದಿನ ಆರೋಪೀ ಬಾಯೊಳಗಿನ ಕೆಲವು ಮುಂದಿನ ಹಲ್ಲೆಲ್ಲಾ ತಗೆಯಿಸಿ, ಕಡಿಯಲಿಕ್ಕೇ ಸಾಧ್ಯ ಇಲ್ಲಾ ಅಂತ ಸಿದ್ಧ ಮಾಡಿಸಿಸಿದ. ಖಟ್ಲೆ ಗೆದ್ದು, ಕೋರ್ಟಿನ ಆವಾರದಾಗ ಫೇಡೇ ಹಾರ್‍ಯಾಡಿ ಹೋದುವು!

ಇನ್ನು ನಮ್ಮ ವಕೀಲರು ಹ್ಯಾಂಗ ಅಂತಿಯಾ? ಆಯ್ಯೋ! ಯುರೋಪಿಯನ್ ಡಿಸ್ಟ್ರಿಕ್ಟ ಜಜ್ಜನ ಮುಂದ ನಿಂತು, ಆರ್ಗ್ಯುಮೆಂಟ ಮಾಡಲಿಕ್ಕೆ ಹತ್ತಿದರ, ತುಟಿಗೆ ತುಟಿ ಹತ್ತಿದ್ದಿಲ್ಲ ಅವರವು! ಸಾಹೇಬ, ಮಾತು ಕೇಳಿ ದಂಗಾಗತಿದ್ದ.— ಅವರ ವಿದ್ವತ್ತಾಕ್ಕ, ಶೀನಿಗೆ! ಕ್ರಾಸಿನ್ಯಾಗಂತೂ ನಾ ನೀ ಅನ್ನೋ ಬುದ್ಧಿವಂತ ಸಾಕ್ಷೀದಾರರೂ ಜಿಗದು ಜಿಗದು ಹೋಗತಿದ್ದರು! ಒಮ್ಮೆಯಂತೂ ಒಬ್ಬ ಎಂ.ಬಿ.ಬಿ.ಎಸ್. ಡಾಕ್ಟರಂದು ಫಜೀತೀ ಆತು. ಖೂನೀ ಖಟ್ಲೆದಾಗ. ಕೋರ್ಟಿಗೆ ತಂದ ಮುದ್ದೆಮಾಲಿನ್ಯಾಗ ಎಲುವು ಇದ್ದವಲ್ಲಾ, ಅವು ಮನುಷ್ಯಾರವು ಅಲ್ಲಾ ಅಂತ ನಮ್ಮ ವಕೀಲರು ಸಿದ್ಧಮಾಡಿದಾಗ, ಕೋರ್ಟಿಗೆ ಕೋರ್ಟೇ ಹೌಹಾರಿ ಹೋಯ್ತು!

(ರಾಯರು ಅಡಿಗೆಯ ಮನೆಯ ಕಡೆಗೆ ಮೊಗಮಾಡಿ) ಕುಸುಮಕ್ಕಾ, ರಾಜಣ್ಣಗೂ ನನಗೂ ಚಹಾ ಮಾಡವ್ವಾ. ಇನ್ನೊಮ್ಮೆ ಎಲಿತಟಕಿ ಹಾಕು ತೊಗೊ! ಹೀಂಗಂತೀ ಅಲ್ಲಾ, ನೀ ಸರಕಾರೀ ಶಾಳಾ ಮಾಸ್ತರ ಆಗಿ ರಿಟಾಯರ್ ಆದಿ ಖರೆ! ಏನು ಓದೋಣ ನಿಂದು! ರದ್ದಡ ಇಂಟರ್ ತನಕಾ ಓದಿದ್ದರೂ, ಸಂಸ್ಕೃತದಾಗ ಉಪನ್ಯಾಸ ಕೊಡೋ ತಯಾರೀ ನಿಂದು. ಒಟ್ಟು ಇದಕೆಲ್ಲಾ ಆ ಎರಡು ಭಾಂಡಾರಕರರ ಪುಸ್ತಕ ಕಾರಣ. ನನ್ನ ಇಂಗ್ಲೀಷು ನೋಡೀ ಇಲ್ಲೋ? ನಮ್ಮ ವಕೀಲರು ಎಷ್ಟು ತಾರೀಫು ಮಾಡತಿರತಾರ? ಆದು ಕೇವಲ ನಾ ಮೂರು ಅಂಕಲೀನ ಭಾಷಾಂತರ ಓದಿದ್ದಕ್ಕಲ್ಲs? ಮತ್ತೇನು, ಕಲಿತವರೊಳಗೂ ಅಷ್ಟು ಓಡಾಡತಿದ್ದೆ. ಪುಚ್ಚ್ಯಾಸಟ್ಟಿ ರೊಕ್ಕ ತಿರುಗಿತು ನಮಗ.... ಆ ಕಾಲಕ್ಕ ಅಷ್ಟು ವಿದ್ಯಾದಲೇನs! ಅಂತs ಮನ್ಯಾಗ ಇಷ್ಟು ಬಾಣಂತಿತನ, ಹೆಣ್ಣು ಹುಡುಗರ ಲಗ್ನ, ಗಂಡುಹುಡುಗರ ಶಿಕ್ಷಣ ಸಾಗಿ, ಕೈಯ್ಯಾಗ

೫೫ ವರ್ಷಗಳಿಂದ ಅನುಭವಪಟ್ಟ

ಓರ್ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧–೮–೦

ಎಂಥಹ ಜ್ವರಗಡ್ಡೆಯನ್ನೂ ಕಳೆಯುವುದು

ವಿಳಾಸ :—

ಗಣೇಶ ರಾಮಚಂದ್ರ, ಓರ್ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪



ನಾಕು ದುಡ್ಡಾತು! ಮುಖ್ಯ ನೋಡೇನಪಾ, ಹಿಡಿದ ಕೆಲಸದಾಗ ಶ್ರದ್ಧಾ ಬೇಕು. ಈಗಿನ ಹುಡುಗರು ಮ್ಯಾಟ್ರಿಕ್ ಆಗತಾರಲ್ಲಾ; ಘಟ್ಟಿಸಿ ಒಂದು ಸ್ವಲ್ಪ ಜಬರಿಲೆ—ಶುದ್ಧ ಬರಹ ಇಂಗ್ಲಿಷ-ಕನ್ನಡ. ನಾ/— ಹೇಳಿದರ, ಹತ್ತು ಸಾಲಿನ್ಯಾಗ ಇಪ್ಪತ್ತು ತಪ್ಪತಾರ. **ಅಂಕಗಣಿತ ಅಂತೂ ಕೇಳಬ್ಯಾಡಾ ಸಾಠೀ ಮುಂದಿನ ಸೊನ್ನಿ! ಪೋಷಾಕಿನ ಥಾಟಿಗೆ ಮಾತ್ರ** ಏನೂ ಹೆಸರಿಡೋ ಹಾಂಗ ಇಲ್ಲಾ ಮತ್ತ! **ನಾವು ನೋಡಪಾ, ಕಲಿಯೋ ವ್ಯಾಳ್ಯಾಕ್ಕ**, ಸ್ವಚ್ಛ ವೈಲುಖೋರ ಅರಿವಿ ಹಾಕತಿದ್ದಿವಿ! ಚಪ್ಪಲ? ಮದ್ರಾಸಿನವು!

ಕೆಲಸಾ ಬಿಡು, ಊಟಾನರೆ ಮಾಡತಾರ ನೆಟ್ಟಗ ಅಂತೀಯ್ಯಾ ಈಗಿನ ಹುಡುಗರು? ಛೆ ನಿನs! ಅಷ್ಟು ಆದರೂ ಮಾಡತಿದ್ದರ ಒಂದು ಕೆಲಸಾ ಅಂತಿದ್ದೆ ನಾ. ಆದರ ನಂದು ಹೇಳತೇನಿ ಕೇಳ ಹಕೀಕತ್ತು. ಒಮ್ಮೆ ನಮ್ಮೂರ ತಾರಕೇಶ್ವರನ ಗುಡ್ಯಾಗ ದೇವ ಸಮಾರಾಧನೆಯ ಕಾಲಕ್ಕ ಮೋತೀಚೂರಿನ ಪ್ರಸ್ತಾ ಮಾಡಿ ದ್ದರು. ಸಮೃದ್ಧಿ ಕಾಲ ಅದು! ಈಗಿನ್ಹಾಂಗ ಖೋಡಿ ರೇಶನ್ ಇದ್ದಿದ್ದಿಲ್ಲ. ತಿನ್ನೋ ಕಾಂಪಿಟೀಶನ್ನಿಗೆ ಬೀಳಬಾರದ ಬಿದ್ದರ, ನನ್ನ ಪ್ರತಿಸ್ಪರ್ಧಿ ಬಂಡೇರಾಯಾ ಬಟ್ಟು ಕಚ್ಚಿದಾ ನನ್ನ ಊಟಕ್ಕ! ಎ ಡನೇ ಪಂಕ್ತಿಯವರಿಗೆ ಸಾಕಷ್ಟು ಉಂಡಿ ಉಳಿಯಲಿಕ್ಕಿಲ್ಲಾ ಅಂತ ದೇವಸ್ಥಾನದ ಪಂಚಕಮಿಟಿಯವರು ಪಂಚಾ ಹಾಸಿ ಸಾಷ್ಟಾಂಗ ಹಾಕಿದರು. ಆಗ ಏನು ತಿಳೀತೊ ಏನೋ, ಅಷ್ಟಕ್ಕs ಬಿಟ್ಟ ಸ್ಪರ್ಧಾ! ಈಗ ಹೇಳಿದರ ಕಟ್ಟುಕಥಿ ಅನಸ್ತದ ಮುಂದಿಗೆ.

ಛೆ, ಆಟಾನೂ ಕೇಳಬ್ಯಾಡಾ....ಹಾಂ ರಾಜಣ್ಣಾ, ಈಗಿ ಹೈಸ್ಕೂಲು-ಕಾಲೇಜ ಹುಡುಗರಿಗೆ! ನಮ್ಮ ಸಂಗತಿ ಇದ್ದನಲ್ಲ ಹೈಸ್ಕೂಲಿನ್ಯಾಗ ಗೋಪು? ಏನು ಫುಟ್‌ಬಾಲ್ ಕಿಕ್ ಒದಿಯೋ ವಪಾ ಅವಾ! ತನ್ನ ಗೋಲ್ ಏರಿಯಾದ ಹತ್ತರ ನಿಂತು ಒದ್ದ ಎದುರಿಗಿನ ಗೋಲಿಗೇ ಮೊದಲಿನ ಪುಟ್ಟಿ! ಪ್ಲೇಸ್ ಕಿಕ್ ಒದ್ದ ರಂತೂ ರಿಸೀವ್ ಮಾಡೋ ಧೈರ್ಯಾ ಆಗತಿದ್ದಿಲ್ಲ. ಅಕಸ್ಮಾತ್ ಎದುರಾಳಿ ಬಂದರ, ಅವಾ ನೆಟ್ಟಗ ಆಸ್ಪತ್ರಿಗೇ ದಾಖಲು! ತಮಾಷಾ ನಮ್ಮ ಟೀಮಿಂದು 'ಹೆಡ್' ಮಾಡೋ ಕೆಲಸ! ಅಪಾ ಖೋಡಿ ಈಗಿನ ಹುಡುಗರು! ಹಿಂದಿನ ನೆನಪು ಅವರ ರೋಮಾಂಚ ಏಳತಾವ. ಅದೆಲ್ಲಾ ಸುವರ್ಣಕಾಲ!

[ಅಷ್ಟರಲ್ಲಿ ಚಹ ಬರಲು ಇಬ್ಬರೂ ಕುಡಿಯುವಾಗ]

ನಾ ಮ್ಯಾಟ್ರಿಕ್ ಆದ ಋಬ್ಬಿನ್ಯಾಗ, ನಮ್ಮ ಅಪ್ಪಾ ಒಂದು ವರ್ಷ ಕಾಲೇಜಿಗೆ ಕಳಸಿದ್ರಲ್ಲs ಪ್ರಿವ್ಹಿಯಸ್ಸಿಗೆ? ಅದು ನೆನಪು ಅದ ಇಲ್ಲೊ ರಾಜೇರಾಯಾ? ನೀ ಬಹಳ ಮಾಡಿ ಆವಾಗ ರಟ್ಟೀ ಹಳ್ಳ್ಯಾಗ ಇದ್ದಿ ಕಾಣಸ್ತದ. ನೌಕರಿ ಹತ್ತಿದ್ದಿಲ್ಲ. ಜೇಸಾಯದ ಹೊಲಾ ಮಾಡಸ್ತಿದ್ದಿ. ಆಗ ನಾವು ಆರ್ಟ್ಸ್ ಕಾಲೇಜದಾಗ ಏನು ಮಾಡತಿದ್ದಿವಿ ಅಂದಿ? ಆಗಿನ ಪ್ರೊಫೆಸರರs ಖರೇ ಪ್ರೊಫೆಸರರು! ಹೆಸರಿಗೆ ತಕ್ಕಹಾಂಗs ಇದ್ದರು. ಏನು ನಡಿಗಿಯ ಥಾಟು, ಅಪ್ರತಿಮ ಪಾಂಡಿತ್ಯ! ಖೋಡಿ ಆ ಸಾಯನ್ಸ್-ಟ್ರಿಗಾನಾ ಮಿಟ್ರಿ-ಆಲ್ಜಿಬ್ರಾ ನಮಗ ನೀರು ಕುಡಿಸಿದುವು. ಇಲ್ಲದಿದ್ದರ, ಇಂದ ಯಾವ ಹುದ್ದೆದಾಗ ಇರತಿದ್ದೆವೊ ಯಾರಿಗೆ ಗೊತ್ತು? ಅದು ಇರಲಿ, ರಾಜಣ್ಣಾ, ಮಾಮೂಲೀ ಪ್ರಕಾರ ಹಿಂಗs ಅಡ್ಡಾಡಿ ಬರೋಣ? ದೇವರ ಮ್ಯಾಲಿನ ಹೂ ತಪ್ಪಿದರೂ ತಪ್ಪೀತು ಆದ ತಪ್ಪಬಾರದು. ನಡಿ!

[ಹೀಗೆ ಇಬ್ಬರೂ ಹೊರಡುವಾಗ ಮಿಂಚಿನಂತೆ]

ಶಿರಿ.

ಮರಣೋತ್ತರ ಕರ

(ಆರ್ಥಿಕವಿಚಾರ)

ಶ್ರೀ. ಶಾಂ. ಭೀ. ಜೋರಾಪುರ, ಜಬಲ್‌ಪುರ

ಲೇಖಾಂಕ ೨

卐

ಮರಣೋತ್ತರ ಕರದಿಂದಾಗುವ ಎರಡು ಮಹತ್ತ್ವದ ಪರಿಣಾಮಗಳೆಂದರೆ : ಇದರಿಂದ ರಾಷ್ಟ್ರದ ಆದಾಯ ಹೆಚ್ಚುತ್ತದೆ; ರಾಷ್ಟ್ರದಲ್ಲಿಯ ಆರ್ಥಿಕವೈಷಮ್ಯ ಕಡಿಮೆಯಾಗುತ್ತ ಹೋಗುತ್ತದೆ !

卐

ಕೊನೆಯ ನಿಯಮವೆಂದರೆ ರಿಗ್ನ್ಯಾನೊ ಯೋಜನೆಯ ತಳಹದಿಯೇ ಸರಿ. ಆಸ್ತಿಯ ಒಡೆತನವು ಒಬ್ಬನಿಂದ ಇನ್ನೊಬ್ಬನಿಗೆ ಬದಲಿಸುತ್ತ ಹೋದಂತಾಗೆ, ಕರದ ದರವನ್ನು ಹೆಚ್ಚಿಸಬೇಕೆಂಬುದೇ ಈ ನಿಯಮದ ಉದ್ದೇಶ. ಸಾಮಾನ್ಯವಾಗಿ ತಂದೆಯ ಪ್ರೀತಿ ಮೊಮ್ಮಗನ ಅಥವಾ ಮೊಮ್ಮಗನ ಮಗನಿಗಿಂತ ಮಗನ ಮೇಲೆ ಹೆಚ್ಚು! ಅವನಿಗಾಗಿಯೇ ಹೆಚ್ಚು ಅನುಕೂಲತೆ ಕಲ್ಪಿಸಿಕೊಡುತ್ತಾನೆಂಬ ಭಾವನೆಯೇ ಈ ನಿಯಮದ— ರಿಗ್ನ್ಯಾನೊ ಯೋಜನೆಯ— ಆಧಾರ. ಮಗನಿಗಿಂತ ಅವನ ಮುಂದಿನ ವಾರಸದಾರರು ಹೆಚ್ಚು ಕರಕೊಡಬೇಕಾಗುವುದೆಂಬುದನ್ನು ತಿಳಿದ ತಂದೆಯು, ಮಗನಿಗಾಗಿ ಆಸ್ತಿಗಳಿಸಿಕೊಡಲು ಹಿಂಜರಿಯುವುದಿಲ್ಲ, ನಿರುತ್ಸಾಹಿಯಾಗುವುದಿಲ್ಲ. ವಾರಸದಾರರು ಸಹ, ತಂದೆಯ ಆಸ್ತಿಗಿಂತ ತಾತನ, ಮುತ್ತಾತನ ಆಸ್ತಿ ಕಡಿಮೆ ಬಂದರೆ, ಆ ಆಸ್ತಿಯ ಮೇಲೆ ಹೆಚ್ಚು ಕರ ಕೊಡಬೇಕಾದರೆ ಅವರಿಗೆ ಅಷ್ಟು ವಿಷಾದವಾಗಬೇಕಿಲ್ಲ. ಈ ಯೋಜನೆಯಿಂದ ನಿರಾಯಾಸವಾಗಿ ವ್ಯಕ್ತಿಯ ಆಸ್ತಿಯು ಮೂರು ತಲೆಮಾರುಗಳಲ್ಲಿ ರಾಷ್ಟ್ರದ ಅಧೀನವಾಗುವುದು. ಸಮಾಜವಾದಿಯಾದ ರಿಗ್ನ್ಯಾನೊ ಇದರಿಂದ ಆಕರ್ಷಿತನಾದದ್ದು ಆಶ್ಚರ್ಯವಲ್ಲ. ಇದರಲ್ಲಿಯೂ ಕೆಲವು ಕುಂದು-ಕೊರತೆಗಳಿದ್ದು, ಅವನ್ನು ನಿರಸಡಿಸಲು ಡಾಲ್ಟನ್, ಹೆಂಡರಸನ್, ಕೀನ್ಸ ಇವರು ತಿದ್ದುಪಡಿಯನ್ನು ಸೂಚಿಸಿದ್ದಾರೆ.

ಪ್ರಗತಿಪರ ಕರದ ಈ ತತ್ತ್ವಗಳಲ್ಲದೆ, ಕನಿಷ್ಟಮುಕ್ತತೆಯನ್ನು (Exemption) ಮನ್ನಿಸುವುದೂ ಅತ್ಯವಶ್ಯ. ಯಾವುದೇ ಕರದ ಉದ್ದೇಶವು ಆದಾಯವೊಂದೇ ಅಲ್ಲ. ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವುದೂ, ಸಮಾನತೆಯನ್ನು ಸ್ಥಾಪಿಸಿ ಕಾಯ್ದುಕೊಳ್ಳುವುದೂ ಅದರ ಹಿರಿಯ ಉದ್ದೇಶ. ಮೃತನು ಬಿಟ್ಟುಹೋದ ಆಸ್ತಿಯೊಂದೇ ಆಧಾರವಾಗಿರುವ ಹೆಂಡತಿ-ಮಕ್ಕಳಿಗೆ ಕರಕೊಡುವುದು ಭಾರವಾಗಬಹುದು. ಸಣ್ಣಪುಟ್ಟ ಆಸ್ತಿಯ ಮೇಲೆಲ್ಲ ಕರಹೇರುವುದು ಸಾಮಾಜಿಕದೃಷ್ಟಿಯಿಂದಲೂ, ಆಡಳಿತದ ದೃಷ್ಟಿಯಿಂದಲೂ ಅನ್ಯವಹಾರ್ಯ. ಸಾಧಾರಣ ಆಸ್ತಿಪಡೆದವರನ್ನು ಕರದಿಂದ ಮುಕ್ತಗೊಳಿಸುವುದು ಯೋಗ್ಯವಾದದ್ದು. ಇದರಿಂದ ವಾರಸದಾರರಿಗೂ ಆಸ್ತಿವಂತರಿಗೂ ಧೈರ್ಯ; ಸಾಮಾನ್ಯ ಜನತೆಯಲ್ಲಿ ಅಸಂತೋಷವುಂಟಾಗದು. ಆದಾಯಕ್ಕಿಂತ ಆಡಳಿತ ವೆಚ್ಚವು ಹೆಚ್ಚಾಗುವಂಥ ಪ್ರಮಾದವೂ ತಪ್ಪುವುದು.

ಮರಣೋತ್ತರ ಕರದ ಭಾರ ಮತ್ತು ಪರಿಣಾಮಗಳ ಬಗ್ಗೆ ಈ ಮೊದಲೇ ಅಲ್ಲಲ್ಲಿ ಹೇಳಿರುವುದನ್ನೇ ಈಗ ಸಂಗ್ರಹಿಸಬಹುದು :

ಮರಣೋತ್ತರ ಕರದ ಭಾರದ ಬಗ್ಗೆ ವಿಚಿತ್ರವಾದ ಮತ್ತು ಪರಸ್ಪರ ವಿರೋಧವುಳ್ಳ ಅಭಿಪ್ರಾಯಗಳಿವೆ. ಫಿಂಡ್ಲೆ ಶಿರಾಸ್ ಇವರ ಅಭಿಪ್ರಾಯದ ಪ್ರಕಾರ, ಮರಣೋತ್ತರ ಕರವೆಂದರೆ ಬಹಳ ದಿನಗಳ ನಂತರ ಕೂಡಿಸಿಕೊಟ್ಟ ಆದಾಯಕರ. ೧೯೪೪ರಲ್ಲಿ ಬ್ರಿಟನದ ಆರ್ಥಿಕಮಂತ್ರಿಯಾಗಿದ್ದ ಸರ್ ವಿಲಿಯಮ್ ಮತ್ತು ಕಾಲವಿನ್ ಸಮಿತಿಯವರು, ಈ ಕರದ ಭಾರವು ವಾರಸದಾರನ ಮೇಲೆಯೇ ಇದೆಯೆಂದು ಪ್ರತಿಪಾದಿಸಿದ್ದಾರೆ. ಕರವನ್ನು ಆಸ್ತಿವಂತನ ಆಸ್ತಿಯ ಮೇಲೆ ಹೇರಿರುವುದರಿಂದ, ಮತ್ತು ಆ ಕರವನ್ನು ಆಸ್ತಿಯೊಳಗಿಂದಲೇ ಕೊಡಲಾಗುವುದರಿಂದ, ಅದರ ಭಾರವು ಆಸ್ತಿವಂತನ ಮೇಲೆ ಇದೆಯೆಂದು ಇವರ ವಾದ. ಆಡ್ಯಾಮ್ ಸ್ಮಿಥ್ ಮಿಲ್, ಡಾಲ್ಟನ್ ಇವರೆಲ್ಲ ಅದರ ಭಾರವು ವಾರಸದಾರನ ಮೇಲಿದೆಯೆಂದು ಪ್ರತಿಪಾದಿಸುತ್ತಾರೆ. ಆಸ್ತಿಯು ಯಾರ ಕೈಸೇರುವುದೋ ಅವರ ಮೇಲೆಯೇ ಕರಭಾರವಿರುವುದೆಂದು ಆಡ್ಯಾಮ್ ಸ್ಮಿಥ್‌ನೂ, ಕರಕೊಡುವುದರಿಂದ ಬಿಡುವುದರಿಂದ ವಾರಸದಾರನಿಗೇ ಹಾನಿ ಅಥವಾ ಲಾಭವಾಗುವುದರಿಂದ ಅದರ ಭಾರ ವಾರಸದಾರನ ಮೇಲಿದೆಯೆಂದು ಮಿಲ್‌ನೂ, ಸತ್ತವನು ಕರಕೊಡಲಾರನೆಂದು ಡಾಲ್ಟನ್ನನೂ ಅಭಿಪ್ರಾಯಪಡುತ್ತಾನೆ. ಇನ್ನೊಂದು ತಂಡದವರ ವಾದ, ಆ ಭಾರವು ವಾರಸದಾರನ ಮೇಲೆಯೂ ಇಲ್ಲ, ಆಸ್ತಿವಂತನ ಮೇಲೆಯೂ ಇಲ್ಲ, ಆಸ್ತಿಯ ಮೇಲಿದೆ ! ಆದರೆ ಆ ನಿರ್ಜೀವಿ ಆಸ್ತಿಯೇ ಕರಕೊಡುವುದೆನ್ನುವುದು ಹಾಸ್ಯಾಸ್ಪದ. ಅದರ ಭಾರವು ಸಾಮಾನ್ಯವಾಗಿ ವಾರಸದಾರನ ಮೇಲೆಯೇ ಇರುತ್ತದೆಯೆಂದು ನಿರ್ವಿವಾದದಿಂದ ಹೇಳಬಹುದು.

ಮರಣೋತ್ತರ ಕರದಿಂದ ಉಂಟಾಗುವ ಮಹತ್ತ್ವದ ಎರಡು ಪರಿಣಾಮಗಳೆಂದರೆ, ಈ ಕರದಿಂದ ರಾಷ್ಟ್ರದ ಆದಾಯವು ಹೆಚ್ಚುತ್ತದೆ, ಮತ್ತು ರಾಷ್ಟ್ರದಲ್ಲಿಯ ಆರ್ಥಿಕ ಅಸಮಾನತೆಯು ಕ್ರಮೇಣ ಕಡಿಮೆಯಾಗುತ್ತ ಹೋಗಿ, ವ್ಯಕ್ತಿಯೊಡೆತನವು ರಾಷ್ಟ್ರದೊಡೆತನದಲ್ಲಿ ಪರಿಣಮಿಸುತ್ತದೆ. ಕಾಲವಿನ್ ಸಮಿತಿಯವರು ಮೂರು ಪರಿಣಾಮಗಳನ್ನು ಎತ್ತಿ ತೋರಿಸಿದ್ದಾರೆ: ೧. ವೈಯಕ್ತಿಕ ವ್ಯವಹಾರ ೨. ಒಕ್ಕಲತನದ ಮೇಲಾಗುವ ಪರಿಣಾಮ ೩. ಮಾನಸಿಕ ಪರಿಣಾಮ.

ಯಾವನೊಬ್ಬ ಪಾಲುಗಾರನು ತೀರಿಕೊಂಡರೆ, ಅವನ ಭಂಡವಾಳದ ಮೇಲೆ ಕರಬೀಳುವುದರಿಂದ, ವ್ಯಾಪಾರಕ್ಕೆ ಅಥವಾ ಉದ್ಯಮಕ್ಕೆ ಹಾನಿತಟ್ಟುತ್ತದೆಯೆಂದು ಬ್ರಿಟನ್ನಿನ ವಣಿಕ್ ಸಂಘದವರು ಆಕ್ಷೇಪವೆತ್ತಿದ್ದಾರೆ. ಅಪಾರ ಆಸ್ತಿಯನ್ನು ಉದ್ಯೋಗದಲ್ಲಿ ತೊಡಗಿಸಿದ ಸಿರಿವಂತನು ಆಕಸ್ಮಾತ್ತಾಗಿ ಮೃತನಾದನೆಂದು ತಿಳಿಯೋಣ. ಆ ಉದ್ಯಮದ ಭಂಡವಾಳವು ಲಾಣ್ಯರೂಪದಲ್ಲಿಯೇ ಇರಲಾರದು. ಅಸಿದ್ಧ ಸರಕುಗಳಲ್ಲಿ, ಯಂತ್ರಗಳಲ್ಲಿ, ಕಟ್ಟಡಗಳಲ್ಲಿ, ಮುಂತಾದ ಅನೇಕ ರೀತಿಯಲ್ಲಿ ಆ ಬಂಡವಾಳವನ್ನು ತೊಡಗಿಸಿರಬಹುದು. ಹೀಗಿರುವಲ್ಲಿ ಲಕ್ಷಾಧೀಶನಾದ ಪಾಲುಗಾರನು ಒಮ್ಮೆಲೆ ತೀರಿಕೊಂಡರೆ, ಅವನ ಆಸ್ತಿಯನ್ನು ಮುಕ್ತಗೊಳಿಸುವುದು ಹೇಗೆ? ಕರಕೊಡುವ ಬಗೆ ಹೇಗೆ? ಲಾಭದಾಯಕವೆಂದು ಕಂಡುಬಂದ ಉದ್ಯಮದಲ್ಲಿ ತೊಡಗಿಸಿದ ಹಣವನ್ನು ಮರಳಿಪಡೆಯುವುದು ಹೇಗೆ? ಒಂದುವೇಳೆ ಕಷ್ಟದಿಂದ ತಕ್ಕೊಂಡರೆ, ಆ ಉದ್ಯಮಕ್ಕೆ ಅದರಿಂದ ಆಘಾತವಾಗದಿರದೇ? ಅಂತೆಯೇ ಫಾರೆಸ್ಟ್ ಇವರು 'ಅತಿ ಸಿರಿವಂತನಾದ ಪಾಲುಗಾರನಿರುವುದೆಂದರೆ ಉದ್ಯಮಕ್ಕೆ ಗಂಡಾಂತರವಿದ್ದಂತೆ' ಎಂದು ಅನ್ನುತ್ತಾರೆ.

ಈ ಕರದಿಂದ ಒಕ್ಕಲುತನಕ್ಕೂ ಅನ್ಯಾಯವಾಗುವುದೆಂದು ಬ್ರಿಟನ್ನಿನ ಹೊಲದೊಡೆಯರ ಸಂಘದವರು ದೂರಿದ್ದಾರೆ. ಒಕ್ಕಲುತನದ ಆಸ್ತಿಗೆ ಪೇಟೆಯಲ್ಲಿ ಹೆಚ್ಚು ಬೆಲೆಯಿದ್ದರೂ, ಹುಟ್ಟುವಳಿಯಲ್ಲಿ ಹೆಚ್ಚಾಗದೆ, ಬೆಲೆಯೇರಿದ ಪರಿಣಾಮವಾಗಿ ಸ್ವಲ್ಪ ಹೆಚ್ಚಿಗೆ ಹಣ ಬಂದರೂ ಹುಟ್ಟುವಳಿಯು ಅಷ್ಟೇ ಇರುವುದರಿಂದ, ಒಕ್ಕಲತನದ ಆಸ್ತಿಯ ಬೆಲೆಯ ಮೇಲೆ ಕೊಡಬೇಕಾದ ಕರವು ಅನ್ಯಾಯವಾಗಿ ಭಾರವಾಗುತ್ತದೆಯೆಂದು ಅವರ ಗೋಳಾಟ. ಕಾಲವಿನ್ ಸಮಿತಿಯ ಮತದಂತೆ, ಬಂಡವಾಳದ ಆದಾಯವನ್ನು ಗಮನಿಸದೆ, ಬಂಡವಾಳದ ಮೇಲೆ ಕರ ಹೇರಿದಂತಾಗುತ್ತದೆ.

ಕರ ಹೇರುವ ಪದ್ಧತಿಯಲ್ಲಿ ಸುಧಾರಣೆಯಾದರೆ, ಬಂಡವಾಳದ ಆದಾಯವನ್ನು ಗಮನಿಸಿದರೆ, ಮತ್ತು ಬೆಲೆಕಟ್ಟುವ ಪದ್ಧತಿಯನ್ನು ಅನುಸರಿಸಿದರೆ, ಮೇಲೆ ಕಾಣಿಸುವ ಎರಡೂ ದೋಷಗಳನ್ನು ನಿವಾರಿಸಬಹುದು.

ಕಾಲವಿನ್ ಸಮಿತಿಯವರು ಎತ್ತಿ ತೋರಿಸಿದ ಮೂರನೆಯ ಪರಿಣಾಮವೆಂದರೆ, ಮಾನಸಿಕ ಪರಿಣಾಮ:—ಮರಣೋತ್ತರ ಕರವನ್ನು ಹೇರುವುದರಿಂದ ವಾರಸದಾರನ ಮತ್ತು ಆಸ್ತಿವಂತನ ದುಡಿಮೆಯ ಮೇಲೆ ಹಾಗೂ ಧನಸಂಚಯದ ಆಕಾಂಕ್ಷೆಯ ಮೇಲೆ ಯಾವ ಪರಿಣಾಮವಾಗುತ್ತದೆಯೆಂಬುದೇ ಗಮನಾರ್ಹವಾದದ್ದು. ಈ ಮೊದಲೇ, ಧನಸಂಚಯದ ಪ್ರವೃತ್ತಿಗೆ ಪೆಟ್ಟು ಬೀಳುವುದೆಂದು ಪ್ರೊ, ಪಿಗು ಅವರು ಅಭಿಪ್ರಾಯಪಟ್ಟಿದ್ದನ್ನು ಹೇಳಿದೆ. ಅದರಂತೆಯೆ ಸರ್ ಫೆಲಿಕ್ಸರು ಸಹ, ವಾರಸದಾರನು ಕರಕೊಡುವವನಾದ್ದರಿಂದ, ಆಸ್ತಿವಂತನು ಅವನ ಹಿತವನ್ನು ಲಕ್ಷ್ಯಿಸದೆ ವೆಚ್ಚ ಮಾಡುವುದರಿಂದ, ಮುಂದಿನ ಜನತೆಗೆ ಇದರಿಂದ ಅನ್ಯಾಯವಾಗುತ್ತದೆಯೆಂದು ಹೇಳುತ್ತಾರೆ. ಆದರೆ ಡಾಲ್ಟನ್‌ರ ವಾದ ಸರಣಿಯೇ ಬೇರೆ. ವಾರಸದಾರರಿಗೆ ಅನಾಯಾಸವಾಗಿ ಅಪಾರ ಹಣ ದೊರಕಿದರೆ, ಅವರು ಅಲಸಿಗರಾಗಿ ಕೆಲಸದಲ್ಲಿ ಉತ್ಸುಕರಾಗುವದಿಲ್ಲ. ಆದರೆ ಆಸ್ತಿಯ ಮೇಲೆ ಭಾರವಾದ ಕರ ಹೇರಿದ್ದರೆ ಹೊಸ ಕೆಲಸವನ್ನು ಕೈಕೊಳ್ಳಲು ಅದರಿಂದ ಉತ್ತೇಜನ ದೊರಕಿ, ಆ ಕೊರತೆಯನ್ನು ತುಂಬಿಕೊಳ್ಳಲು ಹೆಚ್ಚು ಕೆಲಸಮಾಡಲು ಮುಂದುವರಿಯುತ್ತಾನೆ.

ಆದಾಯಕರದೊಡನೆ ಹೋಲಿಸಿದರೂ ಇದು ಶ್ರೇಷ್ಠವಾದದ್ದು. ಆದಾಯಕರ ಕೊಡುವವನು ತನ್ನ ಸ್ವಂತದ ಆದಾಯದೊಳಗಿಂದ ಕರ ಕೊಡಬೇಕಾಗುತ್ತದೆ. ಆ ಕರವನ್ನು ಕೊಡುವ ಪ್ರಸಂಗವಿಲ್ಲದಿದ್ದರೆ, ಅಷ್ಟು ಹಣವನ್ನು ತನಗಾಗಿ ವಿನಿಯೋಗಿಸಬಹುದಾಗಿತ್ತು. ಇನ್ನೂ ಹೆಚ್ಚು ಗಳಿಸಲೂ ಯಾವ ದುಗುಡವಿರುತ್ತಿರಲಿಲ್ಲ. ಆದರೆ ಆದಾಯಕರ ಕೊಡಬೇಕಾಗುವುದರಿಂದ, ಅವನ ಸೌಖ್ಯವನ್ನು ಕಸಿದುಕೊಂಡಂತಾಗುವುದು. ಇದಲ್ಲದೆ ಅದರ ಪ್ರಮಾಣವು ಮಿತಿಮೀರಿದರೆ ಉದ್ಯೋಗದಲ್ಲಿಯ ಆಸ್ಥೆಯೂ ಕಡಿಮೆಯಾಗಬಹುದು. ಮರಣೋತ್ತರ ಕರದ ವಿಷಯವು ಹಾಗಲ್ಲ. ಆಸ್ತಿವಂತನು ಬೇಕಾದಷ್ಟು ಗಳಿಸಿದರೂ, ಅದನ್ನು ಬೇಕಾದ ಉದ್ಯೋಗಗಳಲ್ಲಿ ತೊಡಗಿಸಿದರೂ, ಅವನು ಕರ ಕೊಡಬೇಕಾಗಿಲ್ಲ. ಅವನ ವಾರಸದಾರನು ಮಾತ್ರ ಕೊಡಬೇಕಾಗುತ್ತದೆ. ಈ ರೀತಿ ಮರಣೋತ್ತರ ಕರದಿಂದ ವೈಯಕ್ತಿಕ ಸುಖಕ್ಕೆ, ದುಡಿಮೆಗೆ, ಕೂಡಿಡುವುದಕ್ಕೆ ಮತ್ತು ಉದ್ಯಮಕ್ಕೆ ಧಕ್ಕೆಯಾಗುವುದಿಲ್ಲ.

ಇನ್ನು, ನಮ್ಮ ದೇಶದಲ್ಲಿ ಈ ಕರವನ್ನು ಹೇರುವುದರ ಆವಶ್ಯಕತೆಯೆಷ್ಟಿದೆ, ಅದಕ್ಕಿರುವ ಅಡ್ಡಿ-ಆತಂಕಗಳು ಯಾವುವು ಎಂಬುದನ್ನು ಸ್ವಲ್ಪದರಲ್ಲಿ ನೋಡಬಹುದು :

ಈ ಕರವು ಎರಡು ದೃಷ್ಟಿಯಿಂದ ಅವಶ್ಯವಿದೆ— ಆದಾಯ ಮತ್ತು ಆರ್ಥಿಕ ನ್ಯಾಯ— ಸಮಾನತೆ. ಪ್ರಾರಂಭದಲ್ಲಿಯೇ ಹೇಳಿದಂತೆ, ನಮ್ಮ ದೇಶದಲ್ಲಿ ಅಪ್ರತ್ಯಕ್ಷ ಕರದ ಪ್ರಮಾಣ ಹೆಚ್ಚು. ಅದು ಹೆಚ್ಚಾಗಿ ಸಾಮಾನ್ಯ ಜನರಿಂದ ಬರುವ ಆದಾಯ. ಪ್ರತ್ಯಕ್ಷ ಕರವೆಂದರೆ ಆದಾಯಕರವೊಂದೇ! ಇದರಿಂದ ಬಹಳ ಆದಾಯವಿರುವುದಾದರೂ ಮಿತಿಮೀರಿ ಹೆಚ್ಚಿಸುವುದು ಅಶಕ್ಯ. ಇದಲ್ಲದೆ, ಒಕ್ಕಲತನದ ಆಸ್ತಿಯ ಆದಾಯದ ಮೇಲೆ ಎಲ್ಲ ಪ್ರಾಂತಗಳೂ ಕರ ಹೇರಿಲ್ಲ. ಅಷ್ಟು ಆದಾಯ ಪ್ರಾಂತಗಳಿಗೆ ಕೊರತೆಯಾದಂತಾಯ್ತು. ಪಾನಪ್ರತಿಬಂಧದ ಪರಿಣಾಮವಾಗಿಯೂ ಅನೇಕ ಪ್ರಾಂತಗಳು ಹಾನಿಗೊಳಗಾಗಿವೆ. ಇವೆಲ್ಲ ಕಾರಣಗಳ ಮೂಲಕ, ಕೇಂದ್ರದ ಮತ್ತು ಪ್ರಾಂತಗಳ ಆದಾಯವನ್ನು ಹೆಚ್ಚಿಸಲು, ಮರಣೋತ್ತರ ಕರವನ್ನು ಹೇರುವದು ಅತ್ಯವಶ್ಯ.

ಆರ್ಥಿಕ ಅಸಮಾನತೆಗೆ ನಮ್ಮ ದೇಶವು ಸುಪ್ರಸಿದ್ಧವಾಗಿದೆ. ಕೋಟ್ಯಧೀಶರೂ ಇದ್ದಾರೆ; ಒಂದೂಟವನ್ನೂ, ಗೇಣು ಬಟ್ಟೆಬಟ್ಟೆಯನ್ನೂ ಕಾಣದ ಬಡವರಿದ್ದಾರೆ. ಮಾನವತೆಗೆ ಅಪಮಾನ-

ಕಾರಕವಾದ ಇಂಥ ಹೀನ ಸ್ಥಿತಿಯನ್ನು ಸುಧಾರಿಸುವುದು ರಾಷ್ಟ್ರದ ಕರ್ತವ್ಯ. ಇದೇನೂ ಅಸಾಧ್ಯವಿಲ್ಲ. ಕ್ರಮೇಣವಾಗಿ ವ್ಯಕ್ತಿ-ಯೊಡೆತನದಲ್ಲಿರುವ ಆಸ್ತಿ ರಾಷ್ಟ್ರದ ಒಡೆತನಕ್ಕೆ ಸೇರಬೇಕು. ಸುವ್ಯವಸ್ಥಿತ ಯೋಜನೆಯು ಸಮಾಜದಿಂದ ಅನ್ನ-ಬಟ್ಟೆ ವಸತಿಗಳನ್ನು ಒದಗಿಸಿ ಕೊಡುವುದಲ್ಲದೇ, ಜೀವನದ ಮಟ್ಟವನ್ನು ಎತ್ತರಿಸಬೇಕು. ಮರಣೋತ್ತರ ಕರವು ಇದನ್ನು ಸಾಧಿಸುವ ಸಾಧನೆಗಳಲ್ಲಿ ಮಹತ್ತ್ವವಾದ ಒಂದು ಸಾಧನ.

ಇದನ್ನು ಮನಗಂಡೇ ೧೯೪೪-೪೫ರಲ್ಲಿ ಆರ್ಥಿಕ ಮಂತ್ರಿಗಳಾಗಿದ್ದ ರೇಸ್‌ಮನ್ ಇವರು, ಇದರ ಆವಶ್ಯಕತೆಯನ್ನು ಪ್ರತಿಪಾದಿಸಿದ್ದರು. ಇದರ ಪರಿಣಾಮ ಮುಂದೆ ಬಂದ ಮಂತ್ರಿಗಳ ಮೇಲೆ ಆಗದೆ ಹೋಗಲಿಲ್ಲ. ೧೯೪೮ರಲ್ಲಿ ಆರ್ಥಿಕ ಮಂತ್ರಿಗಳಾಗಿದ್ದ ಶ್ರೀ. ಷಣ್ಮುಖಂ ಚೆಟ್ಟಿಯವರು ಆಸ್ತಿಕರದ ಮುಸೂದೆಯನ್ನು ಮಂಡಿಸಿದರು. ಇದನ್ನು ಪರಿಶೀಲನಾ ಸಮಿತಿಗೆ ಕಳುಹಿಸಲಾಗಿ, ಇದರ ಮಾರ್ಗದಲ್ಲಿ ಕೆಲವು ಅಡೆತಡೆಗಳಿರುವುದರಿಂದ, ಹಿಂದೂಧರ್ಮಶಾಸ್ತ್ರಕ್ರೋಢೀಕರಣ ಮುಸೂದೆಯು ಪಾಸಾಗುವ ವರೆಗೆ ತಡೆಹಿಡಿಯಬೇಕೆಂದು, ಸಮಿತಿಯ ಅಧ್ಯಕ್ಷರು ಅಭಿಪ್ರಾಯಪಟ್ಟರು.

ಈ ಕರವನ್ನು ಕಾರ್ಯರೂಪದಲ್ಲಿ ತರಲು ಇರುವ ಮುಖ್ಯವಾದ ಎರಡು ತೊಡಕುಗಳೆಂದರೆ, ಹಿಂದೂಧರ್ಮಶಾಸ್ತ್ರ ಹಾಗೂ ಮಹಮ್ಮದೀಯ ಧರ್ಮಶಾಸ್ತ್ರ. ಹಿಂದೂ ವಾರಸಾಶಾಸ್ತ್ರದಲ್ಲಿ, 'ದಾಯಭಾಗ' ಮತ್ತು 'ಮಿತಾಕ್ಷರ' ಎಂದು ಎರಡು ಪಂಗಡಗಳಿರುವುದರಿಂದ ಸಮಸ್ಯೆ ಜಟಿಲವಾಗಿದೆ. ಈ ತೊಡಕನ್ನು ಪರಿಹರಿಸಲು ಹಿಂದೂಧರ್ಮಶಾಸ್ತ್ರ ಕ್ರೋಢೀಕರಣವು ಪ್ರಯತ್ನಿಸಿರೂ, ಹೊಸದೊಂದು ಸಮಸ್ಯೆಯನ್ನು ನಿರ್ಮಿಸಿದಂತಾಗಿದೆ. ಈ ಯೋಜನೆಯಿಂದ, ವಾರಸದಾರರಿಗೆ ಮೊದಲು ಇದ್ದ ಕುಚಿತ ಆರ್ಥಿಕ ಅಧಿಕಾರಕ್ಕೆ ಬದಲಾಗಿ, ಆಸ್ತಿಯ ಬಗ್ಗೆ ಪೂರ್ಣ ಅಧಿಕಾರ ಪ್ರಾಪ್ತವಾಗುತ್ತದೆ. ವಾರಸದಾರರ ಸಂಖ್ಯೆಯೂ ಹೆಚ್ಚಾಗುತ್ತದೆ. ನೋಡಲೇ ತುಂಡುತುಂಡಾಗಿರುವ ಆಸ್ತಿಯಲ್ಲಿ ಇನ್ನೂ ತುಂಡುಗಳಾದರೆ, ಒಕ್ಕಲುತನಕ್ಕೆ ಧಕ್ಕೆಯಾಗದೇ?— ಎಂಬ ಪ್ರಶ್ನೆ ಏಳುತ್ತದೆ. ಇಂಥವರಲ್ಲಿ ಆಸ್ತಿಕರ ಹಾಕುವುದು ಅನ್ಯಾಯ. ವಾರಸಾ ಕರ ಹೇರಿದರೆ ಸುಲಭವಾಗಬಹುದೆಂದು ತೋರಿದರೂ, ಕರ ವಿಚಾರಣಾ ಸಮಿತಿಯವರು ಅಭಿಪ್ರಾಯಪಟ್ಟಂತೆ, ನೂರಾರು ಒಳಪಂಗಡಗಳಿರುವಾಗ ಸಾಮಾನ್ಯ ನಿಯಮವನ್ನು ಅನ್ವಯಿಸುವುದೂ ಕಷ್ಟದಾಯಕವಾದುದರಿಂದ, ವಾರಸಾಕರವನ್ನು ತರುವುದೂ ಸುಲಭವಾಗಲಾರದು. ಮಲಬಾರದ ವಿಶಿಷ್ಟ ಪದ್ಧತಿಯಿಂದ ಬೇರೊಂದು ಸಮಸ್ಯೆ ಉದ್ಭವಿಸಿದೆ. ಅವರ ಪದ್ಧತಿಯಂತೆ "ತರವದ" ಆಸ್ತಿಯನ್ನು ಯಾವ ಕಾಲಕ್ಕೂ ವಿಭಾಗಿಸಲು ಬರುವುದಿಲ್ಲ. ಆ ಆಸ್ತಿಯು ಕೊನೆಯ ವರೆಗೂ ಅವಿಭಕ್ತ ಕುಟುಂಬದ ಆಸ್ತಿಯಾಗಿ ಉಳಿಯುವುದು. ಹಾಗಾದರೆ ವಾರಸಾಕರವನ್ನು ಹೇರುವುದೇ ಸಾಧ್ಯವಿಲ್ಲ. ಇದಲ್ಲದೆ ಹಿಂದೂ ಕುಟುಂಬವು ಅವಿಭಕ್ತ ಕುಟುಂಬವಿರುವುದರಿಂದ, ಮತ್ತು ದೇಶದಲ್ಲಿ ಮರಣಸಂಖ್ಯೆಯು ಹೆಚ್ಚಿರುವುದರಿಂದ, ವಾರಸದಾರನು ಮರಣ ಹೊಂದಿದಾಗೊಮ್ಮೆ ಕರ ಹೇರುವುದೆಂದರೆ, ಅವಿಭಕ್ತ ಕುಟುಂಬಕ್ಕೆ ಅನ್ಯಾಯವಾಗುತ್ತದೆ. ಇನ್ನೊಂದು ಸಂಗತಿಯೆಂದರೆ, ಹಿಂದೂ ಶಾಸ್ತ್ರವು, ಆಸ್ತಿವಂತನು ಮರಣ ಹೊಂದುವ ಕಾಲಕ್ಕೆ ಕೊಡುವ ದಾನವನ್ನು ಮನ್ನಿಸುತ್ತದೆ, ಅದು ಧಾರ್ಮಿಕವಿಧಿಯೆಂದೂ ಒಪ್ಪುತ್ತದೆ. ಆದರೆ ಈಗ ಯೋಜಿತವಾದ ಆಸ್ತಿಕರಮುಸೂದೆಯು ಅಂಥ ದಾನಗಳನ್ನೂ ಸಹ ತನ್ನ ಅಧಿಕಾರಕಕ್ಷೆಯಲ್ಲಿ ತರಲು ಇಚ್ಛಿಸುತ್ತದೆ. ಅಂದರೆ ಹಿಂದೂ ಧರ್ಮಶಾಸ್ತ್ರವು ಮನ್ನಿಸಿದ ವ್ಯಕ್ತಿಸ್ವಾತಂತ್ರ್ಯಕ್ಕೆ ಗಡೆ ಬಂದಂತಾಯಿತು. ಹೀಗೆ ಪರಸ್ಪರ ವಿರೋಧಶಾಸ್ತ್ರಗಳು ಇರುವುದು ಅಸಮಂಜಸ.

ಇದೇ ರೀತಿ ಮುಹಮ್ಮದೀಯ ಶಾಸ್ತ್ರದಿಂದಲೂ ಸಮಸ್ಯೆಗಳು ಉದ್ಭವಿಸುತ್ತವೆ. ಅವರಲ್ಲಿಯೂ ಶಿಯಾ ಮತ್ತು ಸುನ್ನಿ ಎಂದು ಎರಡು ಪಂಗಡಗಳಿದ್ದು, ಶಿಯಾ ಪಂಥದಲ್ಲಿ ನಾಲ್ಕು ಒಳಪಂಗಡಗಳೂ, ಸುನ್ನಿ ಪಂಥದಲ್ಲಿ ಮೂರು ಒಳಪಂಗಡಗಳೂ ಇರುತ್ತವೆ. ಮತ್ತು ಅವರಲ್ಲಿ ಪಿತ್ರಾರ್ಜಿತ ಆಸ್ತಿ ಮತ್ತು ಸ್ವಾರ್ಜಿತ ಆಸ್ತಿಗಳಲ್ಲಿ ಹಾಗು ಸ್ಥಾವರ ಮತ್ತು ಜಂಗಮ ಆಸ್ತಿಗಳಲ್ಲಿ ಭೇದವಿಲ್ಲ. ಇದರಿಂದ ಆಸ್ತಿಕರವನ್ನು ಕಾರ್ಯರೂಪದಲ್ಲಿ ತರುವುದು ಕಠಿಣವಾಗುವುದು; ಹಿಂದೂ ಶಾಸ್ತ್ರದಂತೆ ಮುಹಮ್ಮದೀಯ ಶಾಸ್ತ್ರದ ಪ್ರಕಾರ ಆಸ್ತಿಯನ್ನು ಅನೇಕ ವಾರಸದಾರರಲ್ಲಿ ಹಂಚಿಕೊಡಲು ಬರುವುದರಿಂದಲೂ ಮರಣಕಾಲಕ್ಕೆ ಕೊಟ್ಟ ದಾನಗಳನ್ನು ಮನ್ನಿಸುವುದರಿಂದಲೂ, ಸಮಸ್ಯೆಯು ಇನ್ನೂ ಕಠಿಣವಾಗಿದೆ.

ಕಂತುಗಳ ಬೆಲೆಯ ಮೇಲೆ

ಹಿಂದ್ ಸೈಕಲ್

ಮತ್ತು

ಉಷಾ ಹೊಲಿಗೆ ಯಂತ್ರ!

ಬೆಲೆಗಳು ಕ್ರಮವಾಗಿ ೧೯೫ ರೂ. ಮತ್ತು ೨೪೫ ರೂ.
ಪ್ರತಿ ತಿಂಗಳೂ ೨೫ ರೂ. ಗಳಂತೆ ಕಂತಿನಿಂದ ಹಣ
ಕಳುಹಬೇಕು. ಯಾವುದೇ ಒಂದಕ್ಕಾಗಿ ಮಾತ್ರ
ಕೂಡಲೆ ಬರೆದು ಕೊಳ್ಳಿರಿ!

INTERNATIONAL TRADERS (India)
Khari Bauli (J. D.) DELHI

ಯೌವನವೊಟ್ಟ ಪಾಲುಗಾರನು ತೀರಿಕೊಂಡರೆ, ಅವನ ಭಂಡವಾಳದ ಮೇಲೆ ಕರಬೀಳುವುದರಿಂದ, ವ್ಯಾಪಾರಕ್ಕೆ ಅಥವಾ ಉದ್ಯಮಕ್ಕೆ ಹಾನಿತಟ್ಟುತ್ತದೆಯೆಂದು ಬ್ರಿಟನ್ನಿನ ವಣಿಕ್ ಸಂಘದವರು ಆಕ್ಷೇಪವೆತ್ತಿದ್ದಾರೆ. ಅಪಾರ ಆಸ್ತಿಯನ್ನು ಉದ್ಯೋಗದಲ್ಲಿ ತೊಡಗಿಸಿದ ಸಿರಿವಂತನು ಆಕಸ್ಮಾತ್ತಾಗಿ ಮೃತನಾದನೆಂದು ತಿಳಿಯೋಣ. ಆ ಉದ್ಯಮದ ಭಂಡವಾಳವು ಲಾಭ್ಯರೂಪದಲ್ಲಿಯೇ ಇರಲಾರದು. ಅಸಿದ್ಧ ಸರಕುಗಳಲ್ಲಿ, ಯಂತ್ರಗಳಲ್ಲಿ, ಕಟ್ಟಡಗಳಲ್ಲಿ, ಮುಂತಾದ ಅನೇಕ ರೀತಿಯಲ್ಲಿ ಆ ಬಂಡವಾಳವನ್ನು ತೊಡಗಿಸಿರಬಹುದು. ಹೀಗಿರುವಲ್ಲಿ ಲಕ್ಷಾಧೀಶನಾದ ಪಾಲುಗಾರನು ಒಮ್ಮೆಲೆ ತೀರಿಕೊಂಡರೆ, ಅವನ ಆಸ್ತಿಯನ್ನು ಮುಕ್ತಗೊಳಿಸುವುದು ಹೇಗೆ? ಕರಕೊಡುವ ಬಗೆ ಹೇಗೆ? ಲಾಭದಾಯಕವೆಂದು ಕಂಡುಬಂದ ಉದ್ಯಮದಲ್ಲಿ ತೊಡಗಿಸಿದ ಹಣವನ್ನು ಮರಳಿಪಡೆಯುವುದು ಹೇಗೆ? ಒಂದುವೇಳೆ ಕಷ್ಟದಿಂದ ತಕ್ಕೊಂಡರೆ, ಆ ಉದ್ಯಮಕ್ಕೆ ಅದರಿಂದ ಆಘಾತವಾಗದಿರದೇ? ಅಂತೆಯೇ ಫಾರೆಸ್ಟ್ ಇವರು 'ಅತಿ ಸಿರಿವಂತನಾದ ಪಾಲುಗಾರನಿರುವುದೆಂದರೆ ಉದ್ಯಮಕ್ಕೆ ಗಂಡಾಂತರವಿದ್ದಂತೆ' ಎಂದು ಅನ್ನುತ್ತಾರೆ.

ಈ ಕರದಿಂದ ಒಕ್ಕಲುತನಕ್ಕೂ ಅನ್ಯಾಯವಾಗುವುದೆಂದು ಬ್ರಿಟನ್ನಿನ ಹೊಲದೊಡೆಯರ ಸಂಘದವರು ದೂರಿದ್ದಾರೆ. ಒಕ್ಕಲುತನದ ಆಸ್ತಿಗೆ ಪೇಟೆಯಲ್ಲಿ ಹೆಚ್ಚು ಬೆಲೆಯಿದ್ದರೂ, ಹುಟ್ಟುವಳಿಯಲ್ಲಿ ಹೆಚ್ಚಾಗದೆ, ಬೆಲೆಯೇರಿದ ಪರಿಣಾಮವಾಗಿ ಸ್ವಲ್ಪ ಹೆಚ್ಚಿಗೆ ಹಣ ಬಂದರೂ ಹುಟ್ಟುವಳಿಯು ಅಷ್ಟೇ ಇರುವುದರಿಂದ, ಒಕ್ಕಲತನದ ಆಸ್ತಿಯ ಬೆಲೆಯ ಮೇಲೆ ಕೊಡಬೇಕಾದ ಕರವು ಅನ್ಯಾಯವಾಗಿ ಭಾರವಾಗುತ್ತದೆಯೆಂದು ಅವರ ಗೋಳಾಟ. ಕಾಲವಿನ್ ಸಮಿತಿಯ ಮತದಂತೆ, ಬಂಡವಾಳದ ಆದಾಯವನ್ನು ಗಮನಿಸದೆ, ಬಂಡವಾಳದ ಮೇಲೆ ಕರ ಹೇರಿದಂತಾಗುತ್ತದೆ.

ಕರ ಹೇರುವ ಪದ್ಧತಿಯಲ್ಲಿ ಸುಧಾರಣೆಯಾದರೆ, ಬಂಡವಾಳದ ಆದಾಯವನ್ನು ಗಮನಿಸಿದರೆ, ಮತ್ತು ಪಿಲಿಕಟ್ಟಿನ ಪದ್ಧತಿಯನ್ನು ಅನುಸರಿಸಿದರೆ, ಮೇಲೆ ಕಾಣಿಸುವ ಎರಡೂ ದೋಷಗಳನ್ನು ನಿವಾರಿಸಬಹುದು.

ಕಾಲವಿನ್ ಸಮಿತಿಯವರು ಎತ್ತಿ ತೋರಿಸಿದ ಮೂರನೆಯ ಪರಿಣಾಮವೆಂದರೆ, ಮಾನಸಿಕ ಪರಿಣಾಮ:—ಮರಣೋತ್ತರ ಕರವನ್ನು ಹೇರುವುದರಿಂದ ವಾರಸದಾರನ ಮತ್ತು ಆಸ್ತಿವಂತನ ದುಡಿಮೆಯ ಮೇಲೆ ಹಾಗೂ ಧನಸಂಚಯದ ಆಕಾಂಕ್ಷೆಯ ಮೇಲೆ ಯಾವ ಪರಿಣಾಮವಾಗುತ್ತದೆಯೆಂಬುದೇ ಗಮನಾರ್ಹವಾದದ್ದು. ಈ ಮೊದಲೇ, ಧನಸಂಚಯದ ಪ್ರವೃತ್ತಿಗೆ ಪೆಟ್ಟು ಬೀಳುವುದೆಂದು ಪ್ರೊ. ಪಿಗು ಅವರು ಅಭಿಪ್ರಾಯಪಟ್ಟಿದ್ದನ್ನು ಹೇಳಿದೆ. ಅದರಂತೆಯೆ ಸರ್ ಫೆಲಿಕ್ಸರು ಸಹ, ವಾರಸದಾರನು ಕರಕೊಡುವವನಾದ್ದರಿಂದ, ಆಸ್ತಿವಂತನು ಅವನ ಹಿತವನ್ನು ಲಕ್ಷ್ಯಿಸದೆ ವೆಚ್ಚ ಮಾಡುವುದರಿಂದ, ಮುಂದಿನ ಜನತೆಗೆ ಇದರಿಂದ ಅನ್ಯಾಯವಾಗುತ್ತದೆಯೆಂದು ಹೇಳುತ್ತಾರೆ. ಆದರೆ ಹಾಬ್ಸನ್‌ರ ವಾದಸರಣಿಯೇ ಬೇರೆ. ವಾರಸದಾರರಿಗೆ ಅನಾಯಾಸವಾಗಿ ಆಸ್ತಿ ಹಣ ದೊರಕಿದರೆ, ಅವರು ಆಲಸಿಗರಾಗಿ ಕೆಲಸದಲ್ಲಿ ಉತ್ಸಾಹರಾಗುವುದಿಲ್ಲ. ಆದರೆ ಆಸ್ತಿಯ ಮೇಲೆ ಭಾರವಾದ ಕರ ಹೇರಿದರೆ ಹೊಸ ಕೆಲಸವನ್ನು ಕೈಕೊಳ್ಳಲು ಅದರಿಂದ ಉತ್ತೇಜನ ದೊರಕಿ ಆ ಕೊರತೆಯನ್ನು ತುಂಬಿಕೊಳ್ಳಲು ಹೆಚ್ಚು ಕೆಲಸಮಾಡಲು ಮುಂದುವರಿಯುತ್ತಾನೆ.

ಆದಾಯಕರದೊಡನೆ ಹೋಲಿಸಿದರೂ ಇದು ಶ್ರೇಷ್ಠವಾದದ್ದು. ಆದಾಯಕರ ಕೊಡುವವನು ತನ್ನ ಸ್ವಂತದ ಆದಾಯದೊಳಗಿಂದ ಕರ ಕೊಡಬೇಕಾಗುತ್ತದೆ. ಆ ಕರವನ್ನು ಕೊಡುವ ಪ್ರಸಂಗವಿಲ್ಲದಿದ್ದರೆ, ಅಷ್ಟು ಹಣವನ್ನು ತನಗಾಗಿ ವಿನಿಯೋಗಿಸಬಹುದಾಗಿತ್ತು. ಇನ್ನೂ ಹೆಚ್ಚು ಗಳಿಸಲೂ ಯಾವ ದುಗುಡವಿರುತ್ತಿರಲಿಲ್ಲ. ಆದರೆ ಆದಾಯಕರ ಕೊಡಬೇಕಾಗುವುದರಿಂದ, ಅವನ ಸೌಖ್ಯವನ್ನು ಕಸಿದುಕೊಂಡಂತಾಗುವುದು. ಇದಲ್ಲದೆ ಅದರ ಪ್ರಮಾಣವು ಮಿತಿಮೀರಿದರೆ ಉದ್ಯೋಗದಲ್ಲಿಯ ಆಸ್ಥೆಯೂ ಕಡಿಮೆಯಾಗಬಹುದು. ಮರಣೋತ್ತರ ಕರದ ವಿಷಯವು ಹಾಗಲ್ಲ. ಆಸ್ತಿವಂತನು ಬೇಕಾದಷ್ಟು ಗಳಿಸಿದರೂ, ಅದನ್ನು ಬೇಕಾದ ಉದ್ಯೋಗಗಳಲ್ಲಿ ತೊಡಗಿಸಿದರೂ, ಅವನು ಕರ ಕೊಡಬೇಕಾಗಿಲ್ಲ. ಅವನ ವಾರಸದಾರನು ಮಾತ್ರ ಕೊಡಬೇಕಾಗುತ್ತದೆ. ಈ ರೀತಿ ಮರಣೋತ್ತರ ಕರದಿಂದ ವೈಯಕ್ತಿಕ ಸುಖಕ್ಕೆ, ದುಡಿಮೆಗೆ, ಕೂಡಿಡುವುದಕ್ಕೆ ಮತ್ತು ಉದ್ಯಮಕ್ಕೆ ಧಕ್ಕೆಯಾಗುವುದಿಲ್ಲ.

ಇನ್ನು, ನಮ್ಮ ದೇಶದಲ್ಲಿ ಈ ಕರವನ್ನು ಹೇರುವುದರ ಆವಶ್ಯಕತೆಯೆಷ್ಟಿದೆ, ಅದಕ್ಕಿರುವ ಅಡ್ಡಿ-ಆತಂಕಗಳು ಯಾವುವು ಎಂಬುದನ್ನು ಸ್ವಲ್ಪದರಲ್ಲಿ ನೋಡಬಹುದು :

ಈ ಕರವು ಎರಡು ದೃಷ್ಟಿಯಿಂದ ಅವಶ್ಯವಿದೆ— ಆದಾಯ ಮತ್ತು ಆರ್ಥಿಕ ನ್ಯಾಯ— ಸಮಾನತೆ. ಪ್ರಾರಂಭದಲ್ಲಿಯೇ ಹೇಳಿದಂತೆ, ನಮ್ಮ ದೇಶದಲ್ಲಿ ಅಪ್ರತ್ಯಕ್ಷ ಕರದ ಪ್ರಮಾಣ ಹೆಚ್ಚು. ಅದು ಹೆಚ್ಚಾಗಿ ಸಾಮಾನ್ಯ ಜನರಿಂದ ಬರುವ ಆದಾಯ. ಪ್ರತ್ಯಕ್ಷ ಕರವೆಂದರೆ ಆದಾಯಕರವೊಂದೇ! ಇದರಿಂದ ಬಹಳ ಆದಾಯವಿರುವುದಾದರೂ ಮಿತಿಮೀರಿ ಹೆಚ್ಚಿಸುವುದು ಅಶಕ್ಯ. ಇದಲ್ಲದೆ, ಒಕ್ಕಲತನದ ಆಸ್ತಿಯ ಆದಾಯದ ಮೇಲೆ ಎಲ್ಲ ಪ್ರಾಂತಗಳೂ ಕರ ಹೇರಿಲ್ಲ. ಅಷ್ಟು ಆದಾಯ ಪ್ರಾಂತಗಳಿಗೆ ಕೊರತೆಯಾದಂತಾಯಿತು. ಪಾನಪ್ರತಿಬಂಧದ ಪರಿಣಾಮವಾಗಿಯೂ ಅನೇಕ ಪ್ರಾಂತಗಳು ಹಾನಿಗೊಳಗಾಗಿವೆ. ಇವೆಲ್ಲ ಕಾರಣಗಳ ಮೂಲಕ, ಕೇಂದ್ರದ ಮತ್ತು ಪ್ರಾಂತಗಳ ಆದಾಯವನ್ನು ಹೆಚ್ಚಿಸಲು, ಮರಣೋತ್ತರ ಕರವನ್ನು ಹೇರುವದು ಅತ್ಯವಶ್ಯ.

ಆರ್ಥಿಕ ಅಸಮಾನತೆಗೆ ನಮ್ಮ ದೇಶವು ಸುಪ್ರಸಿದ್ಧವಾಗಿದೆ. ಕೋಟ್ಯಧೀಶರೂ ಇದ್ದಾರೆ; ಒಂದೂಟವನ್ನೂ, ಗೇಣು ಬಟ್ಟೆಬಟ್ಟೆಯನ್ನೂ ಕಾಣದ ಬಡವರಿದ್ದಾರೆ. ಮಾನವತೆಗೆ ಅಪಮಾನ-

ಮಾರಕವಾದ ಇಂಥ ಹೀನ ಸ್ಥಿತಿಯನ್ನು ಸುಧಾರಿಸುವುದು ರಾಷ್ಟ್ರದ ಕರ್ತವ್ಯ. ಇದೇನೂ ಅಸಾಧ್ಯವಿಲ್ಲ. ಕ್ರಮೇಣವಾಗಿ ವ್ಯಕ್ತಿ-ಯೊಡೆತನದಲ್ಲಿರುವ ಆಸ್ತಿ ರಾಷ್ಟ್ರದ ಒಡೆತನಕ್ಕೆ ಸೇರಬೇಕು. ಸುವ್ಯವಸ್ಥಿತ ಯೋಜನೆಯ ಸಹಾಯದಿಂದ ಅನ್ನ-ಬಟ್ಟೆ ವಸತಿಗಳನ್ನು ಒದಗಿಸಿ ಕೊಡುವುದಲ್ಲದೇ, ಜೀವನದ ಮಟ್ಟವನ್ನು ಎತ್ತರಿಸಬೇಕು. ಮರಣೋತ್ತರ ಕರವು ಇದನ್ನು ಸಾಧಿಸುವ ಸಾಧನೆಗಳಲ್ಲಿ ಮಹತ್ತ್ವವಾದ ಒಂದು ಸಾಧನ.

ಇದನ್ನು ಮನಗಂಡೇ ೧೯೪೪-೪೫ರಲ್ಲಿ ಆರ್ಥಿಕ ಮಂತ್ರಿಗಳಾಗಿದ್ದ ರೇಸ್‌ಮನ್ ಇವರು, ಇದರ ಆವಶ್ಯಕತೆಯನ್ನು ಪ್ರತಿಪಾದಿಸಿದ್ದರು. ಇದರ ಪರಿಣಾಮ-ಮುಂದೆ ಬಂದ ಮಂತ್ರಿಗಳ ಮೇಲೆ ಆಗದೆ ಹೋಗಲಿಲ್ಲ. ೧೯೪೮ರಲ್ಲಿ ಆರ್ಥಿಕ ಮಂತ್ರಿಗಳಾಗಿದ್ದ ಶ್ರೀ. ಷಣ್ಮುಖಂ ಚೆಟ್ಟಿಯವರು ಆಸ್ತಿಕರದ ಮುಸೂದೆಯನ್ನು ಮಂಡಿಸಿದರು. ಇದನ್ನು ಪರಿಶೀಲನಾ ಸಮಿತಿಗೆ ಕಳುಹಿಸಲಾಗಿ, ಇದರ ಮಾರ್ಗದಲ್ಲಿ ಕೆಲವು ಅಡೆ-ತಡೆಗಳಿರುವುದರಿಂದ, ಹಿಂದೂ-ಧರ್ಮಶಾಸ್ತ್ರಕ್ರೋಢೀಕರಣ ಮುಸೂದೆಯು ಪಾಸಾಗುವ ವರೆಗೆ ತಡೆಹಿಡಿಯಬೇಕೆಂದು, ಸಮಿತಿಯ ಅಧ್ಯಕ್ಷರು ಅಭಿಪ್ರಾಯಪಟ್ಟರು.

ಈ ಕರವನ್ನು ಕಾರ್ಯರೂಪದಲ್ಲಿ ತರಲು ಇರುವ ಮುಖ್ಯವಾದ ಎರಡು ತೊಡಕುಗಳೆಂದರೆ, ಹಿಂದೂಧರ್ಮಶಾಸ್ತ್ರ ಹಾಗೂ ಮಹಮ್ಮದೀಯ ಧರ್ಮಶಾಸ್ತ್ರ. ಹಿಂದೂ ವಾರಸಾಶಾಸ್ತ್ರದಲ್ಲಿ, 'ದಾಯಭಾಗ' ಮತ್ತು 'ಮಿತಾಕ್ಷರ' ಎಂದು ಎರಡು ಪಂಗಡಗಳಿರುವುದರಿಂದ ಸಮಸ್ಯೆ ಜಟಿಲವಾಗಿದೆ. ಈ ತೊಡಕನ್ನು ನಿವಾರಿಸಲು ಹಿಂದೂಧರ್ಮಶಾಸ್ತ್ರ ಕ್ರೋಢೀಕರಣವು ಪ್ರಯತ್ನಿಸಿದರೂ, ಹೊಸದೊಂದು ಸಮಸ್ಯೆಯನ್ನು ನಿರ್ಮಿಸಿದಂತಾಗಿದೆ. ಹೊಸ ಯೋಜನೆಯಿಂದ, ವಾರಸದಾರರಿಗೆ ಮೊದಲು ಇದ್ದ ಸಂಕುಚಿತ ಆರ್ಥಿಕ ಅಧಿಕಾರಕ್ಕೆ ಬದಲಾಗಿ, ಆಸ್ತಿಯ ಬಗ್ಗೆ ಪೂರ್ಣ ಅಧಿಕಾರ ಪ್ರಾಪ್ತವಾಗುತ್ತದೆ. ವಾರಸದಾರರ ಸಂಖ್ಯೆಯೂ ಹೆಚ್ಚಾಗುತ್ತದೆ. ಮೊದಲೇ ತುಂಡುತುಂಡಾಗಿರುವ ಭೂಮಿಯಲ್ಲಿ ಇನ್ನೂ ತುಂಡುಗಳಾದರೆ, ಒಕ್ಕಲುತನಕ್ಕೆ ಧಕ್ಕೆಯಾಗದೇ ?— ಎಂಬ ಪ್ರಶ್ನೆ ಏಳುತ್ತದೆ. ಇಂಥವರಲ್ಲಿ ಆಸ್ತಿಕರ ಹೇರುವುದು ಅನ್ಯಾಯ. ವಾರಸಾ ಕರ ಹೇರಿದರೆ ಸುರಳಿತವಾಗಬಹುದೆಂದು ತೋರಿದರೂ, ಕರ ವಿಚಾರಣಾ ಸಮಿತಿಯವರು ಅಭಿಪ್ರಾಯಪಟ್ಟಂತೆ, ನೂರಾರು ಒಳಪಂಗಡಗಳಿರುವಾಗ ಸಾಮಾನ್ಯ ನಿಯಮವನ್ನು ಅನ್ವಯಿಸುವುದೂ ಕಷ್ಟದಾಯಕವಾದುದರಿಂದ, ವಾರಸಾಕರವನ್ನು ತರುವುದೂ ಸುಲಭವಾಗಲಾರದು. ಮಲಬಾರದ ವಿಶಿಷ್ಟ ಪದ್ಧತಿಯಿಂದ ಬೇರೊಂದು ಸಮಸ್ಯೆ ಉದ್ಭವಿಸಿದೆ. ಅವರ ಪದ್ಧತಿಯಂತೆ "ತರವದ" ಆಸ್ತಿಯನ್ನು ಯಾವ ಕಾಲಕ್ಕೂ ವಿಭಾಗಿಸಲು ಬರುವುದಿಲ್ಲ. ಆ ಆಸ್ತಿಯು ಕೊನೆಯ ವರೆಗೂ ಅವಿಭಕ್ತ ಕುಟುಂಬದ ಆಸ್ತಿಯಾಗಿ ಉಳಿಯುವುದು. ಹಾಗಾದರೆ ವಾರಸಾಕರವನ್ನು ಹೇರುವುದೇ ಸಾಧ್ಯವಿಲ್ಲ. ಇದಲ್ಲದೆ ಹಿಂದೂ ಕುಟುಂಬವು ಅವಿಭಕ್ತ ಕುಟುಂಬವಿರುವುದರಿಂದ, ಮತ್ತು ದೇಶದಲ್ಲಿ ಮರಣಸಂಖ್ಯೆಯು ಹೆಚ್ಚಿರುವುದರಿಂದ, ವಾರಸದಾರರು ಮರಣ ಹೊಂದಿದಾಗೊಮ್ಮೆ ಕರ ಹೇರುವುದೆಂದರೆ, ಅವಿಭಕ್ತ ಕುಟುಂಬಕ್ಕೆ ಅನ್ಯಾಯವಾಗುತ್ತದೆ. ಇನ್ನೊಂದು ಸಂಗತಿಯೆಂದರೆ, ಹಿಂದೂ ಶಾಸ್ತ್ರವು, ಆಸ್ತಿವಂತನು ಮರಣ ಹೊಂದುವ ಕಾಲಕ್ಕೆ ಕೊಡುವ ದಾನವನ್ನು ಮನ್ನಿಸುತ್ತದೆ, ಅದು ಧಾರ್ಮಿಕವಿಧಿಯೆಂದೂ ಒಪ್ಪುತ್ತದೆ. ಆದರೆ ಈಗ ಯೋಜಿತವಾದ ಆಸ್ತಿಕರಮುಸೂದೆಯು ಅಂಥ ದಾನಗಳನ್ನೂ ಸಹ ತನ್ನ ಅಧಿಕಾರಕಕ್ಷೆಯಲ್ಲಿ ತರಲು ಇಚ್ಛಿಸುತ್ತದೆ. ಅಂದರೆ ಹಿಂದೂ ಧರ್ಮಶಾಸ್ತ್ರವು ಮನ್ನಿಸಿದ ವ್ಯಕ್ತಿಸ್ವಾತಂತ್ರ್ಯಕ್ಕೆ ಗದೆ ಬಂದಂತಾಯಿತು. ಹೀಗೆ ಪರಸ್ಪರ ವಿರೋಧಶಾಸ್ತ್ರಗಳು ಇರುವುದು ಅಸಮಂಜಸ.

ಇದೇ ರೀತಿ ಮಹಮ್ಮದೀಯ ಶಾಸ್ತ್ರದಿಂದಲೂ ಸಮಸ್ಯೆಗಳು ಉದ್ಭವಿಸುತ್ತವೆ. ಅವರಲ್ಲಿಯೂ ಶಿಯಾ ಮತ್ತು ಸುನ್ನಿ ಎಂದು ಎರಡು ಪಂಗಡಗಳಿದ್ದು, ಶಿಯಾ ಪಂಥದಲ್ಲಿ ನಾಲ್ಕು ಒಳಪಂಗಡಗಳೂ, ಸುನ್ನಿ ಪಂಥದಲ್ಲಿ ಮೂರು ಒಳಸಂಗಡಗಳೂ ಇರುತ್ತವೆ. ಮತ್ತು ಅವರಲ್ಲಿ ಪಿತ್ರಾರ್ಜಿತ ಆಸ್ತಿ ಮತ್ತು ಸ್ವಾರ್ಜಿತ ಆಸ್ತಿಗಳಲ್ಲಿ ಹಾಗು ಸ್ಥಾವರ ಮತ್ತು ಜಂಗಮ ಆಸ್ತಿಗಳಲ್ಲಿ ಭೇದವಿಲ್ಲ. ಇದರಿಂದ ಆಸ್ತಿಕರವನ್ನು ಕಾರ್ಯರೂಪದಲ್ಲಿ ತರುವುದು ಕಠಿಣವಾಗುವುದು; ಹಿಂದೂ ಶಾಸ್ತ್ರದಂತೆ ಮಹಮ್ಮದೀಯ ಶಾಸ್ತ್ರದ ಪ್ರಕಾರ ಆಸ್ತಿಯನ್ನು ಅನೇಕ ವಾರಸಾದಾರರಲ್ಲಿ ಹಂಚಿಕೊಡಲು ಬರುವುದರಿಂದಲೂ ಮರಣಕಾಲಕ್ಕೆ ಕೊಟ್ಟ ದಾನಗಳನ್ನು ಮನ್ನಿಸುವುದರಿಂದಲೂ, ಸಮಸ್ಯೆಯು ಇನ್ನೂ ಕಠಿಣವಾಗಿದೆ.

ಕಂತುಗಳ ಬೆಲೆಯ ಮೇಲೆ

ಹಿಂದ್ ಸೈಕಲ್

ಮತ್ತು

ಉಷಾ ಹೊಲಿಗೆ ಯಂತ್ರ !

ಬೆಲೆಗಳು ಕ್ರಮವಾಗಿ ೧೩೫ ರೂ. ಮತ್ತು ೨೪೫ ರೂ.
ಪ್ರತಿ ತಿಂಗಳೂ ೨೫ ರೂ. ಗಳಂತೆ ಕಂತಿನಿಂದ ಹಣ
ಕಳುಹಬೇಕು ಯಾವುದೇ ಒಂದಕ್ಕಾಗಿ ಮಾತ್ರ
ಕೂಡಲೆ ಬರೆದು ಕೊಳ್ಳಿರಿ!

INTERNATIONAL TRADERS (India)
Khari Bauli (J. D.) DELHI



ಶ್ರೀ ಸಾನೇಗುರೂಜೀ ಹಾಗೂ ಅವರ ಕೃತಿಗಳು.

ಸಂಪಾದಕರು ಶ್ರೀ ಬುರ್ಲಿ ಬಿಂದುಮಾಧವರು. ಧಾರವಾಡದ ಮಿಂಚಿನ ಬಳ್ಳಿಯ ೧೪ನೆಯ ವರ್ಷದ ೨-೩-೪ ನೆಯ ಕುಡಿಗಳು. ಬೆಲೆ ೬--೪--೦.

ಮಹಾರಾಷ್ಟ್ರದಲ್ಲಿ ಸಾಮಾಜಿಕ ಕಾರ್ಯಕರ್ತರೆಂದೂ ವಿಚಾರಶೀಲ ಸಾಹಿತ್ಯಿಕರೆಂದೂ ದಿವಂಗತ ಸಾನೇ ಗುರುಜಿಯವರ ಹೆಸರು ಆಬಾಲವೃದ್ಧರಲ್ಲಿ ಪ್ರಸಿದ್ಧವಾಗಿದೆ. ತಮ್ಮ ಜೀವನದ ಕೊನೆಯ ಭಾಗದಲ್ಲಿ ಕೈಕೊಂಡ 'ಅಂತರ್ಭಾರತಿ'ಯ ವಿಶಿಷ್ಟ ಚಟುವಟಿಕೆಯ ಪ್ರಚಾರಕ್ಕಾಗಿ ಸಾನೇ ಗುರುಜಿಯವರ ಉತ್ತರ ಕರ್ನಾಟಕದ ಕೆಲವು ನಗರಗಳಲ್ಲಿಯೂ ಸುತ್ತಿ ಹೋದುದರಿಂದ, ಅನೇಕ ಜನ ಕನ್ನಡಿಗರಿಗೂ ಸಾನೇ ಗುರುಜಿಯವರು ಸುಪರಿಚಿತರಾಗಿದ್ದರು.

ಮಹಾರಾಷ್ಟ್ರದಲ್ಲಿ ಸಾನೇ ಗುರುಜಿಯವರು ಮಾಡಿದ ಕಾರ್ಯವು ಬಹುಮುಖವಾದದ್ದು. ಸಾಹಿತ್ಯಪ್ರಪಂಚದಲ್ಲಿ ಕವಿಗಳಾಗಿ ಕವನಗಳನ್ನು ರಚಿಸಿದ್ದಾರೆ. ಕಾದಂಬರಿಕಾರರಾಗಿ ಜನಪ್ರಿಯ ಕಾದಂಬರಿಗಳನ್ನು ಬರೆದಿದ್ದಾರೆ. ಕತೆಗಾರರಾಗಿ ವಿಚಾರಪೂರ್ಣ ಕತೆಗಳನ್ನು ಬರೆದಿದ್ದಾರೆ. ಗುರುಜಿಯವರಾಗಿ ಮಕ್ಕಳ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಪ್ರಾಚೀನ ಸಂಸ್ಕೃತಿಯ ಅಭ್ಯಾಸಿಗಳಾಗಿ, ತಮ್ಮ ಸಾಂಸ್ಕೃತಿಕ ಗ್ರಂಥಗಳ ಮೂಲಕ, ಜನತೆಯಲ್ಲಿ ಅದರ ವಿಷಯಕ ಶ್ರದ್ಧೆಯನ್ನು ಜಾಗೃತಗೊಳಿಸಿದ್ದಾರೆ. ಆದರ್ಶನಿಷ್ಠರಾದ ಇವರು ಮಾನವನ ಆದರ್ಶವಾವುದೆಂಬುದನ್ನು ತಿಳುಹುವ ಉದ್ಬೋಧಕ ನಿಬಂಧ-ಪ್ರಬಂಧಗಳನ್ನು ಬರೆದಿದ್ದಾರೆ. ಸಂಪಾದಕರಾಗಿ ವೃತ್ತಪತ್ರಿಕೆ ನಡೆಯಿಸಿದ್ದಾರೆ. ವಾಗ್ಮಿಗಳಾಗಿ ಮಹಾರಾಷ್ಟ್ರದ ಮೂಲೆ-ಮೂಲೆಯ ಜನತೆಗೂ ತಮ್ಮ ಜೀವನದ ಸಂದೇಶವನ್ನು ತಲ್ಪಿಸಿದ್ದಾರೆ.

ಸಾನೇ ಗುರುಜಿಯವರ ದೃಷ್ಟಿ, ಮಹಾರಾಷ್ಟ್ರದ ಉನ್ನತಿಯನ್ನಷ್ಟೆ ಕಾಣಬಯಸುವ ಸಂಕುಚಿತವಿಚಾರದ್ದಲ್ಲ. ಅಖಿಲ ಭಾರತವೆಲ್ಲ ಹೃದಯ— ಹೃದಯದಿಂದ ಒಟ್ಟುಗೂಡಬೇಕೆಂಬ ವಿಶಾಲದೃಷ್ಟಿ ಅವರದು. ರಾಜಕೀಯ ಸಂಬಂಧಕ್ಕಿಂತ ಸಾಹಿತ್ಯಿಕ ಸಂಬಂಧವೇ ಭಾರತದ ಬೇರೆ ಬೇರೆ ಭಾಷಾಪ್ರಾಂತ್ಯದ ಜನರಲ್ಲಿ ಸಾಮಿಪ್ಯವನ್ನುಂಟು ಮಾಡುವುದೆಂಬ ನಂಬುಗೆಯವರಿಗೆ. ಆದುದರಿಂದಲೇ, ಎಲ್ಲ ಕಡೆಗೂ ಎಲ್ಲ ಭಾಷೆಯ ವಿದ್ವನ್ಮಣಿಗಳೂ ಒಟ್ಟುಗೂಡುವಂತಹ ವಿದ್ಯಾಸಂಸ್ಥೆಗಳನ್ನು ತೆರೆದು, ಎಲ್ಲರೂ ಎಲ್ಲ ಭಾಷೆಯ ಸಾಹಿತ್ಯ ಸಾರವನ್ನು ಕಂಡುಕೊಳ್ಳುವಂತಹ ಅವಕಾಶವನ್ನು ಕಲ್ಪಿಸಬೇಕೆಂಬ ಪ್ರಯತ್ನವನ್ನವರು ನಡೆಯಿಸಿದ್ದರು. ದಿವಂಗತ ರವೀಂದ್ರನಾಥ ಠಾಕೂರರ 'ವಿಶ್ವಭಾರತಿ' ವಿಶ್ವದ ಸಂಸ್ಕೃತಿಯನ್ನು ಒಂದು-ಗೂಡಿಸಬೇಕೆಂಬ ಧ್ಯೇಯವನ್ನಿಟ್ಟುಕೊಂಡು ಹೊರಟುದಾಗಿದ್ದರೆ, ಸಾನೇ ಗುರುಜಿಯವರ 'ಅಂತರ್-ಭಾರತಿ' ಭಾರತದ ಎಲ್ಲ ಪ್ರಾಂತಗಳ ಜನತೆಯನ್ನು ಒಂದೇ ಸಂಸ್ಕೃತಿಯ ಛತ್ರದಲ್ಲಿ ತಂದು ನಿಲ್ಲಿಸಬೇಕೆಂಬ ಆದರ್ಶದಿಂದ ರೂಪುಗೊಂಡುದು.

ಸಾನೇ ಗುರುಜಿಯವರು ಕೇವಲ ಕುಳಿತಲ್ಲಿಯೆ ಕುಳಿತು ಬರೀ ಪುಸ್ತಕ ಬರೆದ ಸಾಹಿತ್ಯವೀರರಲ್ಲ. ಭಾರತದ ಪಾರತಂತ್ರ್ಯ ವಿಮೋಚಕ ಚಟುವಟಿಕೆಯಲ್ಲಿ ಪ್ರತ್ಯಕ್ಷವಾಗಿ ಭಾಗ ವಹಿಸಿ, ವಿವಿಧ ಕಾರ್ಯಗಳನ್ನು ನಡೆಯಿಸಿ, ಬ್ರಿಟಿಷರ ಕಾಲದ ಸೆರೆಮನೆಯ ಕಷ್ಟನಷ್ಟಗಳನ್ನು ಅನುಭವಿಸಿದ ಕರ್ಮವೀರರೂ ಹೌದು. ಮಹಾತ್ಮಾ ಗಾಂಧಿಯವರನ್ನು ಹೃತ್ಪೂರ್ವಕವಾಗಿ ಪ್ರೀತಿಸುವ ಮಹಾರಾಷ್ಟ್ರೀಯರಲ್ಲಿ ಸಾನೇ ಗುರುಜಿಯವರು ಪ್ರಮುಖರು. ಹರಿಜನೋದ್ಧಾರ, ದಲಿತೋದ್ಧಾರ ಚಳವಳಿಗಳಲ್ಲಿಯೂ ದುಡಿದು ಕೃತಕೃತ್ಯತೆ ಪಡೆದವರು! ಬಹುಜನ ಕಾಂಗ್ರೆಸ್ಸಿಗರಲ್ಲಿ — ಸ್ವಾತಂತ್ರ್ಯದ ತರುವಾಯ—ತಲೆದೋರಿದ ಸ್ವಾರ್ಥಸಾಧಕವೃತ್ತಿ, ಅಧಿಕಾರಲಾಲಸೆ, ವಂಚಕತನ — ಇವುಗಳಿಗೆ ರೋಸಿಕೊಂಡು, ತಮ್ಮದೇ ಆದ ಒಂದು ಬಗೆಯ ಸಮತಾವಾದದ ಮಾರ್ಗದಿಂದ ಹೊರಟವರಿವರು.

ಇವರ ವ್ಯಕ್ತಿತ್ವವನ್ನೂ ಸಾಹಿತ್ಯವನ್ನೂ ಕನ್ನಡಿಗರಿಗೆ ಪರಿಚಯ ಮಾಡಿಕೊಡಬೇಕೆಂಬ ಸದುದ್ದೇಶದಿಂದ, ಶ್ರೀ. ಬುರ್ಲಿ ಬಿಂದು ಮಾಧವರು ಈ ಮಹಾಗ್ರಂಥವನ್ನು ಮುದ್ರಿಸಿ ಪ್ರಕಟಿಸಿದ್ದಾರೆ. ಮೊದಲಿನ ೧ರಿಂದ ೪೦ರ ವರೆಗಿನ ಪುಟಗಳಲ್ಲಿ ಗುರೂಜಿಯವರ ಸಂಕ್ಷಿಪ್ತ ಜೀವನ ಪರಿಚಯವಿದೆ. ಈ ವಿಭಾಗದ ಹೆಜ್ಜೋಲೆಯಂತೆ ಕೊನೆಗೆ ಶ್ರೀಮಾನ್ ವಿನೋಬಾ ಭಾವೆಯವರು ಗುರುಜಿಯವರ ಜೀವನ ಸಮಾಪ್ತಿಕಾಲದಲ್ಲಿ ಬರೆದ ಮೃತ್ಯುಲೇಖದ ಭಾಷಾಂತರವಿದೆ.

'ಚರಿತ್ರ ವಿಭಾಗ' ಎಂಬ ಎರಡನೆಯ ಖಂಡದಲ್ಲಿ, ಸಾನೇ ಗುರುಜಿಯವರು ಬರೆದ 'ಸ್ವರಾಜ್ಯಸಂಸ್ಥಾಪಕ ಶಿವರಾಯ' ಎಂಬ ಹೆಸರಿನ ಶ್ರೀಶಿವಾಜಿಯ ವ್ಯಕ್ತಿಚಿತ್ರವೂ ಶ್ರೀ. ವಿನೋಬಾ ಭಾವೆಯವರ ಜೀವನ ಚರಿತ್ರವೂ ಅನುವಾದಗೊಂಡು ಪ್ರಕಟವಾಗಿವೆ. ಮೂರನೆಯದಾದ 'ಪ್ರಬಂಧ ವಿಭಾಗ'ದಲ್ಲಿ 'ಸಾವಿನ ಸವಿ' ಎಂಬ ತಾತ್ತ್ವಿಕ ಪ್ರಬಂಧವೂ, ತಮಿಳುಭಾಷೆಯ ಪ್ರಾಚೀನ ಕಾವ್ಯವಾದ 'ಕುರುಳ್' ಎಂಬುದನ್ನು ಕುರಿತು ಬರೆದ ವಿಮರ್ಶಾತ್ಮಕ ಪರಿಚಯ ಪ್ರಬಂಧವೂ ಭಾಷಾಂತರಿತವಾಗಿ ಬಂದಿವೆ.

ನಾಲ್ಕನೆಯದು ಕಥಾವಿಭಾಗ. ಇದರಲ್ಲಿ ಸಾನೇಗುರುಜಿಯವರ ಆರು ಒಳ್ಳೆಯ ಕತೆಗಳನ್ನು ಆಯ್ದು ಭಾಷಾಂತರಿಸಿ ಕೊಡಲಾಗಿದೆ.

ಎಲ್ಲ ಕತೆಗಳೂ ಸಾನೇಗುರುಜಿಯವರ ಆದರ್ಶ ಪ್ರೀತಿಗೂ ಸದಭಿರುಚಿಗೂ **ಸಂಸ್ಕೃತಿಯ ಆಳವಾದ ಅಭ್ಯಾಸಕ್ಕೂ** ಪ್ರತ್ಯಕ್ಷಸಾಕ್ಷಿಗಳಂತಿವೆ.

ಐದನೆಯ 'ಸಂಕೀರ್ಣವಿಭಾಗ'ದಲ್ಲಿ ಗುರುಜಿಯವರ ಎರಡು ಪತ್ರಗಳೂ, 'ಭಾರತೀಯ ಸಂಸ್ಕೃತಿ' 'ಅಂತರ್ ಭಾರತಿ' 'ರಾಷ್ಟ್ರೀಯ ಸಂಪತ್ತು' ಎಂಬ ವಿಚಾರಪ್ರಬೋಧಕ ಲೇಖನಗಳೂ ಅನುವಾದಗೊಂಡು ಅಡಕವಾಗಿವೆಯಲ್ಲದೆ, ಕೊನೆಗೆ ಅವರ ಐದು ಕವನಗಳ ಕನ್ನಡ ಭಾಷಾಂತರಗಳು ಬಂದಿವೆ. 'ಇದುವೆ ನಿಜದ ಧರ್ಮ' 'ಕಂಬನಿ' ಇವೆರಡೂ ಕವನಗಳು, ಗುರುಜಿಯವರ ಹೃದಯದ ಪ್ರತಿಬಿಂಬಗಳಂತಿವೆ. ಸೌಂದರ್ಯವರ್ಣನೆಗಿಂತ ಸುವಿಚಾರಪ್ರಕಟನೆಯೇ ಇವರ ಕವನಗಳಲ್ಲಿ ಕಂಡುಬರುವ ವಿಶೇಷಗುಣ.

ಸಾನೇಗುರುಜಿಯವರು ಹಲವು ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಶಾಮಚೀ ಆಯಿ' ಎಂಬ ಕಾದಂಬರಿ, ಮಹಾರಾಷ್ಟ್ರದ ಪ್ರತಿಯೊಬ್ಬ ವಾಚಕನ ಮೆಚ್ಚಿಕೆಗೆ ಪಾತ್ರವಾದುದು. ಈ ಗ್ರಂಥದ 'ಕಾದಂಬರೀ ವಿಭಾಗ'ದಲ್ಲಿ, ಗುರುಜಿಯವರ 'ಆಸ್ತಿಕ' ಎಂಬ ಪೌರಾಣಿಕ ಕಾದಂಬರಿಯನ್ನು ೨೭೦ ಪುಟಗಳಲ್ಲಿ ಭಾಷಾಂತರಿಸಿಕೊಟ್ಟಿದ್ದಾರೆ. ಈ ಕಾದಂಬರಿ, ಮಹಾಭಾರತದ ಆದಿಪರ್ವದಲ್ಲಿ ಬರುವ 'ಆಸ್ತೀಕೋಪಾಖ್ಯಾನ'ದ ಕಥಾವಸ್ತುವನ್ನೇ ಆಧಾರವಾಗಿಟ್ಟುಕೊಂಡು ಬರೆದುದಾಗಿದ್ದರೂ ಗುರುಜಿಯವರ ಪ್ರಗತಿಶೀಲ ಸಾಮಾಜಿಕ ದೃಷ್ಟಿಯ ಮೂಲಕ, ಇದಕ್ಕೊಂದು ಹೊಸ ಸ್ವರೂಪ ಬಂದುಬಿಟ್ಟಿದೆ. ಪೌರಾಣಿಕ ಪಾತ್ರಗಳಲ್ಲಿ ಅಡಕವಾದ ಜೀವನತತ್ತ್ವವನ್ನು ಕಂಡುಹಿಡಿದು, ಹೊಸ ಕಾಲದ ಜನತೆಯವರು ಹೇಗೆ ಇಡಬೇಕೆಂಬುದನ್ನು ನೋಡಬೇಕೆನ್ನುವವರು, ಈ ಕಾದಂಬರಿಯನ್ನು ಓದಿನೋಡಬೇಕು.

ಕ್ರೌನ್. ಅಷ್ಟಪತ್ರ ೫೬೪ ಪುಟಗಳಿಂದ ಕೂಡಿದ ಈ ಗ್ರಂಥವು ಶ್ವೇತ ಬಿಳಿಕಾಗದದ ಮೇಲೆ ಅಂದವಾಗಿ ಅಚ್ಚಾಗಿದೆ. ಸಾನೇ ಗುರುಜಿಯವರ ಛಾಯಾಚಿತ್ರದಿಂದೊಡಗೂಡಿದ ಬಹಿರಂಗವೂ ಚೊಕ್ಕಟ್ಟಾಗಿದೆ. ಕನ್ನಡಿಗರಾದ ನಮ್ಮ ಜನರು—ಯಾವ ಸಂಕುಚಿತ ದುರಭಿಮಾನವನ್ನೂ ಹಿಡಿಯದೆ— ನೆರೆನಾಡಿನ ವ್ಯಕ್ತಿಗಳಲ್ಲಿರುವ ಗುಣವನ್ನು ಗ್ರಹಿಸಿ ಪುರಸ್ಕರಿಸಲು ಬಯಸುತ್ತಾರೆ. ಆದರೆ [illegible] ಗುಣವನ್ನು ಈ ರೀತಿಯಿಂದ ಗ್ರಹಿಸಿ ಪರಿಚಯಮಾಡಿಕೊಂಡು ಪುರಸ್ಕರಿಸುವ ನೆರೆನಾಡಿಗರು ಇಲ್ಲವೇ ಇಲ್ಲವೆಂದು ಹೇಳಿದರೆ ಅದು ಅತಿಶಯೋಕ್ತಿಯೆನಿಸದು. ಈ ವಿಷಮಸ್ಥಿತಿ ಇಲ್ಲದಂತಾಗಬೇಕಾದರೆ, ನಮ್ಮ ನೆರೆನಾಡಿಗರಾದ ಮಹಾರಾಷ್ಟ್ರೀಯರು, ಆಂಧ್ರರು, ತಮಿಳರು, ಕೇರಳರು ಹೃದಯವನ್ನು ವಿಶಾಲವಾದುದನ್ನಾಗಿ ಮಾಡಿಕೊಳ್ಳಬೇಕು. ಸ್ವಾತಂತ್ರ್ಯೋತ್ತರ ಭಾರತದಲ್ಲಿ ತಲೆದೋರಿದ ರಾಜಕೀಯ ಅಧಿಕಾರದ ವಿಲೋಭನೆ, ಪ್ರಾಂತ-ಪ್ರಾಂತಗಳ ಜನರಲ್ಲಿ ವೈಮನಸ್ಯಭಾವವನ್ನು ಬೆಳೆಯಿಸುತ್ತಲಿದೆಯೇ ಹೊರತು ಕಡಿಮೆಮಾಡುವ ಪರಿಸ್ಥಿತಿಯಲ್ಲಿಲ್ಲ. ಆದುದರಿಂದ, ಸಾಂಸ್ಕೃತಿಕ ಕ್ಷೇತ್ರದಲ್ಲಿ ಕಾರ್ಯಮಾಡುವವರಾದರೂ, ಒಬ್ಬರೊಬ್ಬರ ಗುಣವೈಶಿಷ್ಟ್ಯಗಳನ್ನು ಒಬ್ಬರೊಬ್ಬರು ಪರಿಚಯಮಾಡಿಕೊಳ್ಳುತ್ತ ಹೋದರೆ, ನಮ್ಮನಮ್ಮಲ್ಲಿ ಆದರ-ವಿಶ್ವಾಸಗಳು ಬೆಳೆದಾವು. ಪ್ರತ್ಯೇಕ ಪ್ರಾಂತಗಳನ್ನು ಕಟ್ಟಿಕೊಳ್ಳಲೂ ಇದರಿಂದ ಸುಲಭವಾದೀತು. ಕನ್ನಡಿಗರು ಗುಣಪಕ್ಷಪಾತಿಗಳಾಗಿ ಇದ್ದಾರೆಂಬುದಕ್ಕೆ, ಈ ಗ್ರಂಥಪ್ರಕಟನೆ ಪ್ರತ್ಯಕ್ಷ ಸಾಕ್ಷಿಯಾಗಿದೆ.

—ಬಿ. ಪಿ. ಎಸ್. ರಾವ್

ರಸಾಯನ ಶಾಸ್ತ್ರ

(ವೈಜ್ಞಾನಿಕ ಪಠ್ಯಪುಸ್ತಕ)

ಬರೆದವರು: ಶ್ರೀನಿವಾಸ್ ವೆಂಕೋಬಾಚಾರ್ಯ ಉಪಾಧ್ಯಾಯ ಎಂ.ಎಸ್‌ಸಿ., ಹೈದರಾಬಾದ್ ಅವರು. ಪ್ರಕಾಶಕರು: ಸತ್ಯಾಶ್ರಯ ಪ್ರಕಾಶನ ಮಂದಿರ, ಹೈದರಾಬಾದ್. ಬೆಲೆ ೩-೮-೦.

ಹೈಸ್ಕೂಲಿನ ೮-೯-೧೦ನೆಯ ತರಗತಿಗಳ ವಿದ್ಯಾರ್ಥಿಗಳ ರಸಾಯನ ವಿಜ್ಞಾನದ ಅಭ್ಯಾಸಕ್ಕಾಗಿ ಪಾಠಪುಸ್ತಕವೆಂದು ಈ ಗ್ರಂಥವನ್ನು ಬರೆದಿದ್ದಾರೆ. ಲೇಖಕರು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ಶಾಖೆಯಲ್ಲಿ ಪ್ರಾಧ್ಯಾಪಕರಾಗಿ ಇರುವರಲ್ಲದೆ, ವಿಜ್ಞಾನ ವಿಷಯವನ್ನು ಕನ್ನಡ ಭಾಷೆಯಲ್ಲಿಯೂ ತಿಳಿಸುವುದಕ್ಕೆ ಅನುಕೂಲವೆನಿಸುವಂತಹ ಮಾತಿನ ಹದವನ್ನು ಬಲ್ಲವರಾಗಿದ್ದಾರೆ. ಪುಸ್ತಕದ ಕೊನೆಯಲ್ಲಿ ಕೊಟ್ಟ ೨೬ ಪುಟಗಳ ರಸಾಯನಿಕ ಪರಿಭಾಷಾಪದಗಳ ಸೂಚಿಯನ್ನು ನೋಡಿದರೆ, ಮೂಲ ಇಂಗ್ಲಿಷ್ ಪರಿಭಾಷೆಗಳನ್ನು ಕನ್ನಡಕ್ಕೆ ಪರಿವರ್ತಿಸಲು ಎಷ್ಟೊಂದು ಪರಿಶ್ರಮ ಪಟ್ಟಿರುವರೆಂಬುದು ಗೊತ್ತಾಗುತ್ತಿದೆ. ಆದರೆ ಯಾವುದೇ ಶಾಸ್ತ್ರದ ಪರಿಭಾಷಾಪದಗಳ ಅರ್ಥ ಒಮ್ಮೆಲೇ ಆಗುವುದು ಸಾಧ್ಯವಿಲ್ಲ. ವಿಷಯ ವಿವರಣೆಯೊಂದಿಗೆ ಕಲಿಸಿಕೊಟ್ಟಾಗಲೇ ಆ ಪರಿಭಾಷಾ ಪದಗಳಲ್ಲಿ ಅಡಕವಾಗಿರುವ ಶಾಸ್ತ್ರವಿಷಯದ ಪರಿಚಯ-ಪರಿಜ್ಞಾನಗಳುಂಟಾಗಬಹುದು. ವಿಜ್ಞಾನದ ಮೇಲಿನ ತರಗತಿಯ ಪಾಠಗಳನ್ನು ನಮ್ಮ ದೇಶೀಯ ಭಾಷೆಯಲ್ಲಿ ಕಲಿಸುವುದು ಸಾಧ್ಯವೇ ಇಲ್ಲವೆಂದು ವಾದಿಸುವವರು ಬಹುಜನರಿದ್ದಾರೆ. ಅವರು ತಿಳಿದುಕೊಳ್ಳಬೇಕಾದ ಮಹತ್ವದ ಮಾತೆಂದರೆ: ಯಾವುದೇ ಶಾಸ್ತ್ರವಿಷಯವು ನಮ್ಮ ಜೀವನಕ್ಕೆ ಬೇರೆ ಹೊರತು, ಅದರ ಸಂಪೂರ್ಣ ಅರ್ಥ ನಮಗಾಗುವುದಿಲ್ಲ; ಅದರ ಸಂಪೂರ್ಣ ಅರ್ಥವಾಗದೆ ಹೋದರೆ, ಕೊನೆಯವರೆಗೂ ಅದನ್ನು ನಮ್ಮ ಮಾತಿನಲ್ಲಿ ಮೂಡಿಸಿ ಹೇಳಲು ಬರುವುದಿಲ್ಲ. ಆದುದರಿಂದ, ಪರಕೀಯ ಭಾಷೆಯ ಪ್ರಚಲಿತ ಪರಿಭಾಷೆಗಳನ್ನೇ ಬಳಸಿಕೊಂಡಾದರೂ ವಿಜ್ಞಾನವನ್ನು ದೇಶಭಾಷೆಯಲ್ಲಿಯೇ ಕಲಿಸುತ್ತ ಹೋಗಬೇಕು. ಕೆಲವು ದಿನಗಳು ಕಳೆದಂತೆಲ್ಲ ನಮ್ಮವೇ ಆದ ಪರಿಭಾಷಾಪದಗಳು ತಾವಾಗಿಯೇ ಸೃಷ್ಟಿಯಾಗುತ್ತ ಹೋಗುವುವು. ಒಮ್ಮೆಲೇ ಇಂಗ್ಲಿಷ್ ಸಮಾನಾರ್ಥಕ ಪರಿಭಾಷಾಪದಗಳನ್ನು ಸೃಷ್ಟಿಸುವುದರಿಂದ, ಅವು ಕೃತ್ರಿಮವೆನಿಸಬಹುದು; ಅಪೂರ್ಣವೆನಿಸಿ ಸರ್ವಸಾಮಾನ್ಯವಾಗಲಾರವು. ಆದರೂ ಶ್ರೀ. ವೆಂಕೋಬಾಚಾರ್ಯರು ಸೃಷ್ಟಿಸಿಕೊಂಡ ಪರಿಭಾಷಾಪದಗಳು ಹೆಚ್ಚಾಗಿ ಔಚಿತ್ಯದಿಂದ ಕೂಡಿವೆಯೆಂದು ಯಾರೂ ಹೇಳಬಹುದಾಗಿದೆ.

—ಜಿ. ಎಸ್. ಕೆ.

ಸಾಹಿತ್ಯವಿಹಾರ

ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ, ಜಯಂತಿಯ ಸಪ್ಟಂಬರ್ ಸಂಚಿಕೆಯ 'ನನಗೆ ಮೆಚ್ಚಿಕೆಯಾದ ಲೇಖನ' ಕುರಿತು ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು, ಶ್ರೀಮತಿ ಪದ್ಮಾ, ಬೆಂಗಳೂರು, ಶ್ರೀ. ಎಸ್. ಎಂ. ಕುಲಕರ್ಣಿ, ಮುಂಬಯಿ, ಶ್ರೀ. ಆರ್. ಸುಬ್ಬರಾವ್, ಮದ್ರಾಸ್ ಈ ನಾಲ್ವರಿಂದ ವಿಮರ್ಶಾತ್ಮಕ ಲೇಖನಗಳು ಬಂದಿವೆ. ನಾಲ್ವರೂ '**ಬೆಂದ ಹೃದಯ**' ಎಂಬ ಸಾಮಾಜಿಕ ರೂಪಕವನ್ನೇ ಮೆಚ್ಚಿ ವಿಮರ್ಶೆ ಬರೆದು ಕಳುಹಿದ್ದಾರೆ. ಶ್ರೀಮತಿ ಪದ್ಮಾ ಅವರು, 'ಬೆಂದ ಹೃದಯ'ದೊಂದಿಗೆ 'ಅವಳೇ ಇವಳು!' ಎಂಬ ಕತೆಯನ್ನೂ ವಿಮರ್ಶಿಸಿ, ಬರೆದು ಕಳುಹಿರುವರು. ಈ ವಿಮರ್ಶೆ, ವಿಮರ್ಶೆಯ ದೃಷ್ಟಿಯಿಂದ ಒಳ್ಳೆಯದಾಗಿರುವುದಾದರೂ, ಮೆಚ್ಚಿದ ಲೇಖನವನ್ನಾಗಿ ವಿಮರ್ಶಿಸಿದಂತಿಲ್ಲ. ಕೇವಲ ಒಂದು ಕತೆಯ ವಿಮರ್ಶೆಯಾಗಿದೆ. ಆದುದರಿಂದಲೇ ನಾಲ್ವರೂ ಬರೆದು ಕಳುಹಿದ 'ಬೆಂದ ಹೃದಯ'ದ ವಿಮರ್ಶೆಗಳನ್ನೆ ನಿರ್ಣಾಯಕರ ಕಡೆಗೆ ಕಳುಹಿದೆವು. ಶ್ರೀಮತಿ ಪದ್ಮಾ ಮತ್ತು ಶ್ರೀ. ಕೆ. ಎಸ್. ಶರ್ಮಾ ಇವರಿಬ್ಬರೂ ಬರೆದ ವಿಮರ್ಶೆಗಳು ಉತ್ತಮವಾಗಿವೆಯೆಂದೂ, ಎರಡೂ ತಮ್ಮದೇ ಆದ ವೈಶಿಷ್ಟ್ಯದಿಂದ ಕೂಡಿರುವುವೆಂದೂ, ಆದುದರಿಂದ ಎರಡು ಮಾದರಿಗಳೆಂದು ಎರಡನ್ನೂ ಪ್ರಕಟಿಸಬಹುದೆಂದೂ ನಿರ್ಣಾಯಕರು ಅಭಿಪ್ರಾಯಪಟ್ಟಿರುವರು. ಆದುದರಿಂದ, ಆವೆರಡೂ ವಿಮರ್ಶೆಗಳನ್ನು ಇದ್ದುದಿದ್ದಂತೆ ಇಲ್ಲಿ ಪ್ರಕಟಿಸಲಾಗಿದೆ.

—**ಸಂ. ಜ.**

★

೧೯೫೩ ಸಪ್ಟಂಬರ್ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ನನ್ನ ಮೆಚ್ಚಿಕೆಗೆ ಪಾತ್ರವಾದ ಒಂದು ತರಂಗ ರೂಪಕ

"ಬೆಂದ ಹೃದಯ"

ಶ್ರೀ. ಕೆ. ಎಸ್. ಶರ್ಮಾ ವಿದ್ವಾನ್ ಕಾಸರಗೋಡು

ಇದೊಂದು ಸಾಮಾಜಿಕ ಚಿತ್ರವನ್ನು ದೃಶ್ಯರೂಪವಾಗಿ ಅಳವಡಿಸಿದ, ದುರಂತ ಹಾಗೂ ಮನೋವೇಧಕವಾದ, ಗಮನಾರ್ಹ ಸಂಸಾರದ ಕಥೆ. ರಂಗಭೂಮಿಯಲ್ಲಿದು ಉತ್ತಮ ನಟರ ಭಾವಪೂರ್ಣ ನಟನಕೌಶಲದಿಂದ ಸಾಮಾಜಿಕರ ಹೃದಯವನ್ನು ಮಿಡಿದು, ಸಂಸಾರದಲ್ಲಿರಬಹುದಾದ ಕೆಲವೊಂದು ಘಟನಾತರಂಗಗಳಲ್ಲಿ ತೇಲಾಡಿಸಿದರೆ — ವಾಚಕನನ್ನು ಸನ್ನಿವೇಶರಚನೆ, ಸಂಭಾಷಣೆ, ಕಥಾಪೋಷಣೆ, ಆಕರ್ಷಕ ಹಾಗೂ ಗಮನೀಯ ವಸ್ತುರೂಪಣೆ ಇವುಗಳಿಂದ ಸೆರೆಹಿಡಿದು, ಕಥಾಗರ್ಭದಲ್ಲಡಕವಾದ ಕಾಳ್ಕೆ, ವೇದನೆ, ಕಾಠಿಣ್ಯ, ಕೌಟಿಲ್ಯ, ಅನುತಾಪ ಮೊದಲಾದ ವಿವಿಧರೂಪದ ಭಾವಗಳಲ್ಲಿ ತೇಲಾಡಿಸದಿರದು. ಅಷ್ಟೊಂದು ಮಾರ್ಮಿಕವಾಗಿ ಸನ್ನಿವೇಶ-ವಸ್ತುಗಳು ರಚಿತವಾಗಿರುವವು. ಆದುದರಿಂದಲೆ ಈ ವಸ್ತುವು ಪ್ರತಿಯೊಬ್ಬನಲ್ಲೂ ಒಂದು ಯಥಾರ್ಥ ಭಾವವನ್ನು ಮೂಡಿಸದಿರದು ಇದೇ ತರಂಗರೂಪಕವು ಹಲವಾರು ಪುಟಗಳನ್ನು ಕ್ರಮಿಸಬಹುದಾದ ಒಂದು ಕಾದಂಬರಿಗೂ ನೆಲೆಯಾಗಬಹುದು. ವಿಪುಲವಾಗಿ ಕ್ರಮಿಸಬಹುದಾದ ಈ ಕಥಾಭಾಗವನ್ನು — ಈ ಉದಾತ್ತ ಚಿತ್ರವನ್ನು — ಕೆಲವೇ ಪುಟಗಳ ಪರಿಮಿತಿಯಲ್ಲಿ ರೂಪಿಸಿ, ವ್ಯಕ್ತಿಗತವಾದ ಗುಣ-ದೋಷಗಳ ಪರಿಪೂರ್ಣ ಕಥನವನ್ನು ಸಾರಿ, ನಾಟಕೀಯ ಸಂಪ್ರದಾಯಕ್ಕೆ ಕಳೆಯೇರಿಸಿದ ಈ ರಚನೆಯು ಶ್ರೇಷ್ಠವಾಗಿದೆಯೆನ್ನುವುದು ಅಭಿಮಾನದ ಮಾತಾಗಿದೆ.

ರಂಗಣ್ಣನೆಂಬ ಒಬ್ಬ ಜೀಶಪಾಂಡೆ ಮನೆತನಕ್ಕೆ ಸೇರಿದ ವ್ಯಕ್ತಿಯು, ತನ್ನ ಅಣ್ಣ ಮತ್ತು ಅತ್ತಿಗೆ—ತಮ್ಮ ಮರಣಕಾಲದಲ್ಲಿ ಕೇಳಿಕೊಂಡ ಕೊನೆಯುಸುರಿನ ಕೇಳಿಕೆಯಂತೆ, ಅವರ ಮಗ ಶ್ಯಾಮನ ಜೀವನಕ್ಕಾಗಿ ತನ್ನ ಜೀವನವನ್ನೇ ಧಾರೆಯೆರೆದು, ಅವನಿಗೆ ವಿವಾಹ ಮಾಡಿಸಿ, ಅವನ ಸುಖವನ್ನೇ ತನ್ನ ಸುಖವೆಂದು ಭಾವಿಸುವನು. ಈ ಮಧ್ಯೆ ಶ್ಯಾಮನ ಪತ್ನಿ ರತ್ನಳ ಅಕ್ಕ ಗಂಗಾಬಾಯಿಯ ದುಷ್ಟವಾದ, ಹೇಯವಾದ, ಕಾಮಪಿಪಾಸೆಯ, ಅನೀತಿಯ ಕೇಳಿಕೆಗೆ ಮನಸ್ಸೀಡದ ಅವಿವಾಹಿತ ರಂಗಣ್ಣಕಾಕಾನು, ಅವಳ ಕುಹಕಜಾಲದಲ್ಲಿ ಕೆಡೆದು ಬಿದ್ದು, ಮಂದಿಯ ಮುಂದೆ ನಗೆಗೀಡಾಗಿ, ಜೀವನದಲ್ಲೇ ವಿರಕ್ತಿಗೊಂಡು— ಕೃಷ್ಣೆಯ ಗರ್ಭದಲ್ಲಿ ಬೆಂದೊಡಲನ್ನು ತಣಿಸುವನು. ರಂಗಣ್ಣಕಾಕಾನ ಪಥವಿಡಿದೇ ಸಾಗುವ— ಚಿಕ್ಕತಂದೆಯ ನೆರಳೇ ತಾನಾಗಿರುವ— ಶ್ಯಾಮನು ತನ್ನ ಪತ್ನಿ ಹಾಗೂ ಗಂಗೆಯರು ಬೀಸಿದ ಬಲೆಯ ಹೊಂಚನ್ನರಿದು, ಖಿನ್ನನಾಗಿ, ತನ್ನ ನೊಂದೆದೆಯನ್ನು, ಬೆಂದೆದೆಯ ತಣಿದ ಅದೇ ಕೃಷ್ಣೆಯ ಗರ್ಭದಲ್ಲಿ ತಣಿಸುವನು. ಇದಿಷ್ಟು ಕಥಾವಸ್ತು. ಈ ಕಥಾವಸ್ತುವು ಪರಿಪುಷ್ಟವಾಗುವಂತೆ— ವ್ಯಕ್ತಿಚಿತ್ರವು ಪರಿಸ್ಫುಟವಾಗುವಂತೆ—ಮುದುಕಪ್ಪ-ಸೇರೆಪ್ಪರ ನಾಮವು ಅನ್ವರ್ಥವಾಗುವ ಹಾಸ್ಯರಸದ ಸಮಾವೇಶವೂ ಉಚಿತವಾಗಿ ನೆಲೆಗೊಂಡಿದೆ.

ಈ ರೂಪಕದಲ್ಲಿ ನಾವು ಏಳು ದೃಶ್ಯಗಳನ್ನು ಕಾಣಬಹುದು. ದೃಶ್ಯಗಳ ಪಾರಸ್ಪರಿಕ ಸಂಬಂಧಕ್ಕಾಗಿ, ಅನುಸ್ಯೂತವಾಗಿ ಹರಿಯಬೇಕಾದ ಕಥಾವಸ್ತುವಿಗಾಗಿ, ಭೂತ-ಭವಿಷ್ಯ-ವರ್ತಮಾನಗಳ ಕಥನಕ್ಕಾಗಿ, ಪ್ರತಿದೃಶ್ಯದಲ್ಲೂ ನಾವು ನಿವೇದಕನ ಸ್ಥಾನವನ್ನೂ ಆವಶ್ಯಕತೆಯನ್ನೂ ಮನಗಾಣಬಹುದು. ಚರ್ವಿತ-ಚರ್ವಣವಿಲ್ಲದ ಮಿಂಚಿನಂತೆ ಬಂದು ಸಾಗುವ ನಿವೇದಕನ ಜಾಣ್ಮೆಯು ಈ ರೂಪಕದಲ್ಲಿ ಕಳೆಬೀರಿ ನಿಂತಿದೆ. ನಿವೇದಕನು ನಮ್ಮೆದುರಿಗೆ ಕಾಣಿಸಿದೊಡನೆ ನಮಗೇಕೋ ಅದೊಂದು ವಿಧದ ಯೋಗ್ಯ ಜಿಜ್ಞಾಸೆಯು ತಲೆದೋರುವುದು. ಶ್ರವಣಕುತೂಹಲವು ಜಾಗೃತವಾಗುವುದು ಈ ಬಗೆಯ ಸ್ಥಾನವನ್ನು 'ನಿವೇದಕ'ನ ಪಾಲಿಗಿರಿಸಿದರೆ, ಎಂತ

ರ್ಪುಲ ಇತಿವೃತ್ತವೆನ್ನಾದರೂ ರಸಹೀನವಾಗದಂತೆ ಪರಿಪೂರ್ಣ-ವಾಗುವಂತೆ ರೂಪಿಸಬಹುದು.

ಇನ್ನು ಸನ್ನಿವೇಶರಚನೆ: ಈ ಭಾಗವು ಸಂಭಾಷಣೆಗಳ ನೆರವಿ-ನಿಂದ ಬೆಳಗಿ ನಿಂತಿದೆ. ಪ್ರಥಮದೃಶ್ಯದಲ್ಲಿ ತೋಟದೆಡೆ ಸಾಗಿದ ಶ್ಯಾಮಣ್ಣನು, ಮುದುಕಪ್ಪ-ಸಕರೆವ್ವರೊಡನೆ ಕಲೆತು ಮಾತ-ನಾಡುವ ಸಂದರ್ಭವು ಮುಖ್ಯವಾಗಿದೆ. ರಂಗಣ್ಣ ಕಾಕಾನ ಹೃದಯ, ತನ್ನ ಪತ್ನಿಯ ಸಹಾಯಕ್ಕಾಗಿ ತವರಿಂದ ಬಂದ ಗಂಗಕ್ಕನ ವಿಚಾರ, ಇವೆಲ್ಲಾ ಇಲ್ಲಿ ಬಂದು ಸೇರಿ 'ಕಾಯಿಪಲ್ಯ'ದ ವಿಚಾರದಲ್ಲಿ ನುಸುಳಿ ಹಾದುಹೋಗುವವು. ಮುದುಕಪ್ಪ-ಸಕರೆವ್ವರ ಎರಕವನ್ನು—ಸಲಿಗೆಯನ್ನು— ಎತ್ತಿ ತೋರಲು ಇಲ್ಲಿ ನಡೆದ " ನಿನಗ ಮಾತ್ರ, ಹುಟ್ಟಿದ ಹನ್ನೆರಡನೇ ದಿನಾನಃ ನಿಮ್ಮ ಅಪ್ಪಾ-ಅವ್ವಾ 'ಮುದುಕಾ' ಅಂತ ಹೆಸರಿಟ್ಟು, ಹುಡುಗ ಇದ್ದಾಗಃ ಮುದಕನ್ನ ಮಾಡಿ-ಬಿಟ್ಟರ!' ಎಂಬ ಸಕರೆವ್ವನ ಅಣಕದ ಮಾತಿಗೆ " ಈ ಕಾರದ ಮುದ್ದಿಗೆ,ಇವರ ಅಪ್ಪಾ ಅವ್ವಾ 'ಸಕ್ಕರಿ' ಅಂತ ಹ್ಯಾಂಗ ಹೆಸರಿ-ಟ್ಟಾರೋ ಏನೋ!" ಎಂಬ ಮುದಕಪ್ಪನ ಮಾತೂ ಜೊತೆಗೊಂಡು, ನಗೆಯಿಂದ ತುಂಬಿದೆ. ಇದೇ ನಗೆಯ ಮುಂದುವರಿದು ರಂಗಣ್ಣ ಕಾಕಾನ, ಯಥಾರ್ಥಚಿತ್ರವನ್ನು ತೋರುವ ಕಾರ್ಯಭಾಗದಲ್ಲಿ ಕಳೆಯೇರುವುದು. ಅಲ್ಲಿಂದ ಮುಂದೆ ರತ್ನಾ-ಶ್ಯಾಮರ ಏಕಾಂತ ಭಾಷಣ. ಈ ಭಾಷಣದಲ್ಲಿ ಇಂದಿನ ಸಂಸಾರಿಕರ ಜೀವನದ ಗುಟ್ಟು, ಗಂಡುಸು-ಹೆಂಗುಸು ಇವರ ಬಿದಿರಿಕೆಯ ಸೋಗು ಮತ್ತು ಸತ್ಯ, ಇವುಗಳ ನಿರೂಪಣೆಯೂ "ಪತಿಗೃಹದಿಂದ ತಳ್ಳಲ್ಪಟ್ಟ ಗಂಗೆಯ ನಡತೆಯ ಸೂಕ್ಷ್ಮವಾದ ವಿಚಾರವೂ" ಹೊರತೋರುವುದು. ಇದೇ ವಿಚಾರವು ಮುಂದಿನ ದೃಶ್ಯದ ಪ್ರಭಾವನೆಗೆ ದಾರಿಯಾಗುವುದು. ರಂಗಣ್ಣ ಕಾಕಾನಂತಹ ಆದರ್ಶ ಸಹೃದಯ-ಗಣ್ಯಪ್ರಭಾವಶಾಲೀ ವ್ಯಕ್ತಿಯ " ಗಂಗಾಬಾಯಿ! ನೋಡ್ರಿ, ಒಂಟಿತನಾ ಜೋಡುತನಾ ಎಲ್ಲಾ ಮನಸಿನ ಭಾವನಾದ ಪರಿಣಾಮ! ನಮ್ಮ ನಮ್ಮವರು ಅಂತ ಬೇಕಾದಷ್ಟು ಜನಾ ಇರತಾರ! ಅವರೇ ನಮ್ಮ ಜೊತೇ— ಅಂತ ಪ್ರೇಮದಿಂದ ನಡಕೊಂಡರ ಆಯ್ತು!" ಎಂಬ ನಿಷ್ಕಪಟವಾದ ಉದಾತ್ತ ತತ್ತ್ವಕಥನವು, 'ಚಾ'ವನ್ನು ನೀಡಲು ಬಂದ ಕುಲಟೆಗಂಗೆಯ ವಿಪರೀತ ಭಾವನೆಯ ಅನೀತಿಯ ಯಾಚ-ನೆಯ—ವಿಚಾರಕ್ಕೆ ಎಡೆಯನ್ನಿತ್ತಿತು. ಅದುವೇ ನ್ಯಾಯಪ್ರಿಯ-ನಾದ ರಂಗಣ್ಣ ಕಾಕಾನ ಹೃದಯವನ್ನು ಜೇಯಿಸುವಂತಾಯಿತು. ಗಂಗೆಯಂತಹ ಕುಲಟೆಯರ ವಿಷಪೂರಿತ ಹೃದಯದ " ಹೆಣ್ಣಿನ ಕೈಯೊಳಗಿಂದಃ ಪಾರಾಗೂದಂದರ, ಹಂಜಿಯಿಂದ ನೂಲು ತಗ-ದ್ಹಾಂಗ ಸುಲಭ ವಿಷಯಾ ಅಂತ ತಿಳಕೊಳ್ಳ್ಯಾಡ್ರಿ " ಎಂಬ ಮಾತಿಗೆ, ರಂಗಣ್ಣ ಕಾಕಾನ ಹೃದಯವು ಬಲಿಯಾಗಿ, ಬೆಂದು ಹೋಂತು, ಸತ್ಯ-ನ್ಯಾಯದ ಬೆಳಕಿನಲ್ಲೂ " ಹರಯದ ಹೆಂಗಸಿನ ಮುಂದೆ " ನಾಚಿಕೆಗೆ ಈಡಾಗಿ, ಮಂದಿಯ ನಗೆಗೀಡಾಗಿ ತೊನೆ-ದಾಡುವಂತಾಯಿತು. ಕುಲಟೆನಾರಿಯ ಹೃದಯದ ವಿಷಸರ್ಪದ ಪ್ರಭಾವವನ್ನು, ಲೇಖಕರು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಅಲ್ಲೂ ರಂಗಣ್ಣ ಕಾಕಾನಂತಹ ನಿರ್ಲಿಪ್ತ, ನಿರೀಹ, ನಿಷ್ಕಾಮ ವ್ಯಕ್ತಿ-ಯನ್ನೇ— ಗಂಗೆಯು ಬಲಿತೆಗೆದುದೆಂದರೆ, ಅದು "ಬೆಂದಹೃದಯ-ವನ್ನು" ಸರ್ವಾತ್ಮನಾ ಬೆಳಗುವ ಒಂದು ಉತ್ಕೃಷ್ಟ ವಸ್ತುರೂಪಣೆ ಯೆಂಬುದರಲ್ಲಿ ಸಂದೇಹವಿಲ್ಲ. ಇದರಿಂದ "ಬೆಂದಹೃದಯ"ದ ರಂಗಣ್ಣನ ಜೀವನೋನ್ನತಿಯು ಮಾನವಗುಣದ ಶಿಖರವನ್ನು ಏರುತ್ತಿದೆ. ಎಂಥವನೂ ರಂಗಣ್ಣನಿಗಾಗಿ ಕೊರಗಿ, ಗಂಗೆಯೆಡೆ ಕೆಂಗಣ್ಣನ್ನು ಹಾಯಿಸಬೇಕಾದ ಉತ್ತಮರಚನೆಯಿದು. ಮುಂದೆ ಗಂಗೆಯ ಮುಯ್ಸಾಧನೆಯ ರಂಗ. ರತ್ನಾಳನ್ನು ಒಡಂಬಡಿಸಿ, ರಂಗಣ್ಣನನ್ನು ಮುಗಿಸುವ ಸಂಚನ್ನು ಗುಪ್ತವಾಗಿ ನಿಶ್ಚಯಿಸಿ ಮುಗಿಸುವ ಈ ದೃಶ್ಯವು, ಮುಂದಿನ ದೃಶ್ಯಕ್ಕೆ ವಾಚಕನನ್ನೂ ನಿರೀಕ್ಷಕನನ್ನೂ ಬಿಗಿದ ಹೃದಯದಿಂದ ಓಡಿಸುವುದು. ಅಷ್ಟೊಂದು ಮಾರ್ಮಿಕವಾಗಿ ನಾಲ್ಕನೆಯ ದೃಶ್ಯದ ರಚನೆಯಾಗಿದೆ. ಇದೇ ನಾಟಕೀಯ ದೃಶ್ಯಯೋಜನೆಗಿರುವ ಮಹತ್ತ್ವ! ದೃಶ್ಯಾಂತರ ಯೋಜನೆಯ ಕೌಶಲ್ಯ!! ಮುಂದಿನದು ಗಂಗೆಯು ರತ್ನಾಳಿಂದ-ಮಾಡಿಸುವ ಸಂಚು. ಈ ಸಂಚಿನಲ್ಲಿ ಸಿಕ್ಕ ರಂಗಣ್ಣನು ಮಂದಿಯ ಮುಂದೆ ನಗೆಗೀಡಾಗಿ "ನನ್ನ ಜೀವಂತ ಸುಟ್ಟುಬಿಟ್ಟೆ, ನನ್ನ ಜೀವನದ ಹೋಳಿ ಆಡಿಬಿಟ್ಟೆ! " ಎಂದು ಗಂಗೆಯನ್ನು ಕುರಿತಾಡುವಾಗ, ನಾವು ಕಂಗಾಲಾಗುವೆವು "ಇನ್ನ ಮ್ಯಾಲ ಜಗತ್ತು ನಿನ್ನ ಮುಖದ ಕಡೆ ನೋಡೋದಿಲ್ಲ,ಹೋಗೋ ಹೆಂಬೇಡಿ!" ಎಂದು ಗಂಗೆಯೆನ್ನುವಾಗ, ಒಡನೆ ನಾವು ಕುದಿವೆವು. ಈ ಘಟನೆಯ ಬಳಿಕ ರಂಗಣ್ಣನು ದುಃಖ-ದಿಂದ ಬೆಂದಾಡುವ ಮಾತು "ಅಯ್ಯೋ" ಎನಿಸುವಂತಿದೆ. ಮುಂದಿನ ಭಾಗವು ದುಃಖಭರಿತವಾಗಿದೆ. ಬೆಂದಹೃದಯದ ನಿರ್ಯಾಣ. ಕಾಕಾನ ನೆರಳನ್ನು ಹಿಡಿದು ಮನೆಯಿಂದ ತೆರಳಿ, ಮುದಕಪ್ಪ-ಸಕರೆವ್ವರಿಂದ ಕಾಕಾನ ವಿಚಾರವರಿತು ತೆರಳುವ ಶ್ಯಾಮನ ಅನು-ಸರಣೆ! "ನೀವು ಇದ್ದಲ್ಲೇ ಈ ಶ್ಯಾಮ," ಎಂದೆಂದು, ಪತ್ನಿಯನ್ನೂ ಮುಂದೆ ಚಿಗುರಾಗಲಿರುವ ಸಂಸಾರವನ್ನೂ ಒದೆದು ದಾಟುವ ಶ್ಯಾಮನ ಬಂಧುಪ್ರೇಮಕ್ಕಾಗಿ ನಾವು ಬೆರಗಾಗಬೇಕು. ಮುಂದೇ-ನಿದೆ? ನಿರಾಶಜೀವಿಯಾದ ರತ್ನಾಳ ದುರಂತ! ನೆನೆದುದು ವಿಪರೀತ-ವಾಗಿ ಬಂದ ಕುಲಟೆ ಗಂಗೆಯ ದುಃಖ— ಇವು.

ಅಂತೂ ಈ ಬಗೆಯ ಸನ್ನಿವೇಶವು— ನುಡಿಮಾತುಗಳಿಂದಲೂ ಎಡೆಬಿಡದೆ ಸಾಗುವ ಸ್ವಾರಸ್ಯ ಹಾಗೂ ಆದರಣೀಯ ಸಂಭಾಷಣೆ-ಗಳಿಂದಲೂ ತುಂಬಿನಿಂತಿದೆ. ಮುಖ್ಯವಾಗಿ ನಮ್ಮ ಗಮನವನ್ನು ಸೆಳೆಯುವ ಮತ್ತೊಂದು ಭಾಗವೆಂದರೆ— " ತಪ್ತಜೀವಿ ರಂಗಣ್ಣನು ತನ್ನ ಶ್ಯಾಮನಿಗಾಗಿ ಬರೆದ " ಬೆಂದೆದೆಯ ಓಲೆ " — ಹಾಗೂ— ಶ್ಯಾಮನು ತನ್ನ ಪತ್ನಿಗಾಗಿ ತನ್ನ ಚಿನ್ನದಂತಹ ಗುಣದ ಚಿಕ್ಕ-ಪ್ಪನ ಪರಿಚಯವನ್ನಿತ್ತು, ಅವನಿಗಾಗಿ ತಾನು ಮಾಡಬೇಕಾದ ಕರ್ತವ್ಯವನ್ನು ಸಾರಿ, ಪತ್ನಿಗಾಗಿ ಅವಳ ತಿಳಿಗೇಡಿತನಕ್ಕಾಗಿ "ಮುನಿಯದ ಓಲೆ"; ಇವು ಗಮನಾರ್ಹವಾದ ವಿಚಾರಗಳು. ಈ ಓಲೆಗಳು ಕಟುವಾಗಿರದೆ ಆಳವಾಗಿದ್ದು, ಬೆಂದೆದೆಗಳ ನೊಂದ ಕತೆಯನ್ನು ರೂಪಿಸುವಲ್ಲಿ—ರೂಪಕಗಳ ದೃಷ್ಟ್ಯಾ ಇದಂಪ್ರಥಮ-

ಇನ್ನೊಂದು ವಿಷಯವೆಂದರೆ: ಸಂಗೀತಶಾಖೆಯೊಂದನ್ನು ಉಳಿದು, ಇನ್ನುಳಿದ ನಾಟಕಕಾರ, ನಟ, ಕವಿ, ಕತೆಗಾರ, ವಾಗ್ಮಿ— ಇವರಲ್ಲಿ ತರಗತಿಗಳನ್ನೇನೂ ಮಾಡಿದಂತೆ ಕಾಣುವುದಿಲ್ಲ. ಎಲ್ಲರೂ ಒಂದೇ ತಕ್ಕಡಿಯಲ್ಲಿ ತೂಗಿಸಿಕೊಂಡು ಒಂದೆ ಬೆಲೆ ಪಡೆಯುತ್ತಿರುವುದು ಆಶ್ಚರ್ಯದ ಸಂಗತಿಯಾಗಿದೆ. ಸಂಗೀತವೊಂದರಲ್ಲಿಯೇ ತರಗತಿಗಳನ್ನು ಕಲ್ಪಿಸಲು ಬರುತ್ತದೆಂದು ಬಾನುಲಿಯ ಕಲಾತಜ್ಞರ ಅಭಿಪ್ರಾಯವೋ ಹೇಗೆ? ಹಣ್ಣನ್ನೂ ಹೀಚನ್ನೂ ಒಂದೆ ಎಂದು ಭಾವಿಸಿ ಬೆಲೆಕಟ್ಟುವ ಇಂದಿನ ಧೋರಣೆಯ ಮೂಲಕ, ಕಾರ್ಯಕ್ರಮಗಳಿಗೆ ಅನುಭವಿಕರಾದ ನಾಟಕಕಾರರೂ, ನಟವರ್ಗವೂ, ಕವಿಗಳೂ, ಭಾಷಣಕಾರರೂ ದೊರೆಯದೆ ಹೋಗಬಹು ದಲ್ಲ! ಬಾನುಲಿಶಾಖೆಯ ಹೊಣೆಗಾರರಾದ ಅಧಿಕಾರಿಗಳು ಇದನ್ನು ಲೆಕ್ಕಹಾಕಿ ನೋಡಿರುವರೇನು?

* * * *

ನಾಡಹಬ್ಬದ ಮುನ್ನಡೆ

ಕನ್ನಡಿಗರಿಗೆ ತಮ್ಮದೇ ಆದ ಒಂದು ಸಾರ್ವಜನಿಕ ಉತ್ಸವ ಬೇಕಾಗಿದ್ದಿತು. ಅವರ ಅಪೇಕ್ಷೆಯಂತೆ, ಕನ್ನಡ ಜನತೆಯ ಸಾಂಸ್ಕೃತಿಕ ಹಬ್ಬವಾದ ಶರನ್ನವರಾತ್ರಿಯ ಉತ್ಸವವೇ ನಾಡಹಬ್ಬವಾಗಿ ರೂಪುಗೊಂಡು, ಹೊಸಕಾಲಕ್ಕನುಗುಣವಾಗಿ ಆಚರಣೆಯಲ್ಲಿ ಬಂದಿತು. ಇಂದು ನಾಡಹಬ್ಬ, ಕರ್ನಾಟಕದ ಎಲ್ಲ ನಗರಗಳಲ್ಲಿಯೂ ಅನೇಕ ಹಳ್ಳಿಗಳಲ್ಲಿಯೂ ಕನ್ನಡಿಗರು ಮನೆಮಾಡಿಕೊಂಡಿರುವ ಹೊರನಾಡಿನ ನಗರಗಳಲ್ಲಿಯೂ ನಾಡಹಬ್ಬದ ಸಮಾರಂಭಗಳು ವಿಜೃಂಭಣೆಯಿಂದ ಜರುಗುತ್ತಲಿರುವುದು ಸಂತೋಷದ ಸಂಗತಿಯೇ! ಆದರೂ ಇಷ್ಟು ದಿನಗಳಾದರೂ, ಈ ಹಬ್ಬದ ನಡೆವಳಿಕೆಗೆ ಒಂದು ವಿಶಿಷ್ಟ ವಿಧಾಯಕ ಸ್ವರೂಪ ಬರಲೊಲ್ಲದಾಗಿದೆ. ಈ ನಾಡಹಬ್ಬದಲ್ಲಿ ಎಲ್ಲ ಕಡೆಯವರೂ ನಡೆಯಿಸುತ್ತಿರುವುದು, ಪ್ರಾಮುಖ್ಯವಾಗಿ ಉಪನ್ಯಾಸಗಳನ್ನು ಮಾತ್ರ. ಉಪನ್ಯಾಸಗಳು ಅನಾವಶ್ಯಕವೆಂದೇನೂ ಅಲ್ಲ; ಜನಜೀವನವನ್ನು ವಿಕಾಸಗೊಳಿಸುವಂತಹ ಅನುಭವಿಕ ವಿದ್ವಾಂಸರ ವಿಚಾರಪೂರ್ಣ ಉಪನ್ಯಾಸಗಳಿಂದ ಕೆಲವು ಮಟ್ಟಿಗೆ ಪ್ರಯೋಜನವಿದ್ದೇ ಇದೆ. ಆದರೆ ನಾಡಹಬ್ಬಕ್ಕಾಗಿ ವೆಚ್ಚವಾಗುವ ಧನ-ಶ್ರಮಗಳೆಲ್ಲ, ಕೇವಲ ಉಪನ್ಯಾಸಗಳಲ್ಲಿಯೆ ಮುಗಿಯದೆ, ನಾಡನ್ನು ಕಟ್ಟುವ ಬೇರೆ ಬೇರೆ ಕಾರ್ಯಕ್ರಮಗಳಿಗೂ ಅದು ಹಂಚಿ ಹೋಗುತ್ತಿರಬೇಕೆಂದು ನಮ್ಮ ಅಭಿಪ್ರಾಯ.

ನಾಡಹಬ್ಬ ಜರುಗುವ ಒಂದೊಂದು ಊರಲ್ಲಿಯೂ ಒಂದೊಂದು ಕಲೆ, ಒಂದೊಂದು ಕೈಗಾರಿಕೆ, ಒಂದೊಂದು ಚಮತ್ಕಾರಗಳನ್ನು ಅರಿತ ಜನರಿರುತ್ತಾರೆ. ಈ ಹಬ್ಬದ ದಿನಗಳಲ್ಲಿ ಅವರನ್ನು ಕಂಡುಹಿಡಿದು, ಅವರ ಗುಣವಿಶೇಷಣಗಳನ್ನು ಗೌರವಿಸುವ ಕೆಲಸ ನಡೆಯಬೇಕು. 'ನಮ್ಮ ಊರಿನ ಪರಿಚಿತಮುಖ' ಎಂಬ ಉಪೇಕ್ಷೆಯಿಂದ ಅಂತಹ ಗುಣವಂತರನ್ನು ಬಿಟ್ಟುಬಿಟ್ಟರೆ, ಅವರ ಗುಣಗಳು ದೇಶಕ್ಕೆ ಉಪಯೋಗವಾಗದೆ, ಇದ್ದಲ್ಲಿಯೇ ಮುರುಟಿ ಹೋಗುವ ಸಂಭವವಿರುವುದು. ಇದ್ದೂರ ಗರಡಿಮನೆಯವರ ಶಕ್ತಿಪ್ರದರ್ಶನ ನಡೆಯಿಸಬೇಕು. ಇದ್ದೂರ ನಟವರ್ಗದ ನಾಟಕಗಳನ್ನಾಡಿಸಬೇಕು. ಇದ್ದೂರ ಕವಿಗಳ ಕಾವ್ಯ-ಕವನಗಳನ್ನು ಓದಿಸಿಕೊಳ್ಳಬೇಕು; ಕೀರ್ತನಕಾರರಿದ್ದರೆ ಕೀರ್ತನಗಳನ್ನು ಮಾಡಿಸಬೇಕು; ಸಂಗೀತಗಾರರಿದ್ದರೆ ಸಂಗೀತ ಕಾರ್ಯಕ್ರಮವನ್ನಿಡಿಸಬೇಕು. ಹೆಚ್ಚು ಬೆಳೆದ ಒಕ್ಕಲಿಗನನ್ನು ಸಾರ್ವಜನಿಕವಾಗಿ ಮನ್ನಿಸಬೇಕು ಪ್ರಾಮಾಣಿಕವಾಗಿ ದುಡಿಯುವ ಕೂಲಿಕಾರರ ಹಿರಿಯನಿಗೆ ಮರ್ಯಾದೆ ಸಲ್ಲಿಸಬೇಕು.

ಊರಲ್ಲಿಯೇ ವೇಷಗಾರರಿರುವರು; ಹಾಸ್ಯಗಾರರಿರುವರು; ಜಾನಪದ ಕವಿಗಳಿರುವರು. ಅವರೆಲ್ಲರನ್ನೂ ರಂಗದ ಮೇಲೆ ತಂದು ಪ್ರೋತ್ಸಾಹಕೊಡಬೇಕು. 'ನಮ್ಮ ಹಿತ್ತಲಲ್ಲಿಯ ಬೆಳೆದ ಮಲ್ಲಿಗೆ' ಎಂದು ಯಾರಾದರೂ ಮಲ್ಲಿಗೆಯನ್ನು ಉಪೇಕ್ಷಿಸುವುದುಂಟೆ? 'ನಮ್ಮ ಊರ ಮುಂದಿನ ಮಾಮರದ ಹಣ್ಣು?' ಎಂದು ಯಾರಾದರೂ ಬೇಸರದಿಂದ ಅದನ್ನು ನೋಡುವರೇ? ಮಲ್ಲಿಗೆ-ಮಾವುಗಳಂತೆಯೇ ಗುಣವಿದ್ದ ಜನರನ್ನೂ ನಾವು ಪುರಸ್ಕರಿಸಬೇಕು, ನಾಡಹಬ್ಬದ ದಿನಗಳನ್ನು ಇಂತಹ ಗುಣಪುರಸ್ಕಾರಕ್ಕಾಗಿ ಉಪಯೋಗಮಾಡಿಕೊಳ್ಳಬೇಕು. ಗುಣದ ಪೂಜೆ ನಡೆಯಲು ತೊಡಗಿದರೆ, ನಾಡಿನಲ್ಲಿ ತಲೆಯೆತ್ತಿರುವ ವಿಷಮತೆ ಅಳಿದೀತು; ಶಾಂತಿಸಮತೆ ನೆಲೆಗೊಂಡೀತು. ನಾಡಹಬ್ಬದ ಆಚರಣೆಯ ಮುಖ್ಯ ಉದ್ದೇಶವು, ಶಾಂತಿ-ಸಮತೆಯ ಸ್ಥಾಪನೆಯೇ ಆಗಿದೆಯೆಂಬುದನ್ನು ನಾವು ಮರೆಯಲಾಗದು.

(೧೬೬ನೆಯ ಪುಟದಿಂದ ಮುಂದುವರಿದುದು.)

ಒಪ್ಪಿಸಿಕೊಟ್ಟ— ಚಟುವಟಿಕೆಗಳಲ್ಲಿಯೇ ವ್ಯಮರೆತು ಹೋಗಿದ್ದಾರೆ ಕೇಂದ್ರದಲ್ಲಿಯೂ ರಾಜ್ಯಸರಕಾರಗಳಲ್ಲಿಯೂ ಮಂತ್ರಿ-ಉಪಮಂತ್ರಿ ಪದವಿಗಳನ್ನು ಪಡೆದ ಕನ್ನಡಿಗರು, ತಮಗೆ ದೊರೆತ ಪದವಿ-ಗೌರವಗಳನ್ನು ಉಳಿಸಿಕೊಳ್ಳುವುದು ಹೇಗೆಂಬ ಯೋಚನೆಯಲ್ಲಿಯೇ ಕಾಲಕಳೆಯುತ್ತಲಿರಬಹುದು. ನಾಯಕರನ್ನು ನಂಬಿದ ಕನ್ನಡ ಜನರು ನಿಷ್ಕ್ರಿಯರಾಗಿ ಕುಳಿತುಬಿಟ್ಟಿದ್ದಾರೆ.

ಪ್ರಕೃತಿದೇವಿ ಕನ್ನಡಿಗರಿಗೆ ತುಂಬಿದ ತಟ್ಟೆಯನ್ನು ದಯಪಾಲಿಸಿದ್ದರೂ, ಕನ್ನಡಿಗರು ಬರಿಹೊಟ್ಟೆಯಿಂದಲೇ ಬದುಕಬೇಕಾಗಿದೆ. ಈ ನರಳಾಟವನ್ನು ಸ್ವತಂತ್ರ ಭಾರತವೂ ಕೇಳದೆ ಹೋದರೆ ಇನ್ನಾರು ಕೇಳಬೇಕು? ಕನ್ನಡಿಗರೇ, ಹೊಟ್ಟೆತುಂಬ ಅನ್ನ ಸಿಕ್ಕಬೇಕೆಂಬ ಉತ್ಕಟ ಆಪೇಕ್ಷೆ ನಿಮಗಿದ್ದರೆ, ಹೀಗೆ ನಿಷ್ಕ್ರಿಯರಾಗಿ ಕುಳಿತು ಪ್ರಯೋಜನವೇನೂ ಇಲ್ಲವೆಂಬುದನ್ನು ಲಕ್ಷ್ಯದಲ್ಲಿಡಿರಿ! ಬದುಕುವ ಜನ್ಮಸಿದ್ಧ ಹಕ್ಕಿಗಾಗಿ ಬಾಯಿ ತೆರೆಯಿರಿ! ಕೂಗಿರಿ! ಕಿರುಚಿರಿ! ಗುಲ್ಲೆಬ್ಬಿಸಿರಿ!

— ಸಂಪಾದಕರು.

ರಂಗಣ್ಣ ಕಾಕಾನ ಪಾತ್ರವಿಲ್ಲದೆಯೇ, ಮೊದಲನೆಯ ಅಂಕದಲ್ಲಿ ತನ ಚಿತ್ರವನ್ನು ಸಂಪೂರ್ಣವಾಗಿಯೂ ಸ್ಪಷ್ಟವಾಗಿಯೂ ಚಿತ್ರಿಸುವುದು ಉತ್ತಮ ಪಾತ್ರರಚನೆಯ ದ್ಯೋತಕವಾಗಿದೆ. ರೈತರ ...ಯರ ಸ್ವಾಮಿನಿಷ್ಠೆಯೊಂದಿಗೆ 'ಅವರೇ ನನ್ನ ತಂದೆ, ತಾಯಿ, ...ವರು' ಎನ್ನುವ ಶ್ಯಾಮನ ಪಾತ್ರವೂ ಸಹಜವಾಗಿದೆ. ರತ್ನಾ, ...ಡನೊಡನೆ "ಹೆಂಡತಿ, ಗಂಡನಿಗೆ ಹೆದರಲೇಬೇಕು" ಎಂದು ...ಳುತ್ತ 'ಇಲ್ಲದ ಹರಲೀ ಹೊತ್ತು ತವರಿಗೆ ಬಂದ' ತನ್ನ ಅಕ್ಕನ ...ಳಿಗಾಗಿ ಮಿಡಿದುದೂ, ಐದನೆಯ ಅಂಕದಲ್ಲಿ ಅಕ್ಕನ ಸೋಗಿಗೆ ...ರುಳಾದುದೂ, ಆಕೆಯ ಅಣತಿಯಂತೆ ಗಂಡನಿಗೂ ಯಾವ ...ಾರವನ್ನೂ ತಿಳಿಸದೆ "ನೀನು ಹೇಳಿದಂತೆ ಕೇಳುವೆ" ಎಂಬ ...ಟ್ಟಿಕ್ಕೆ ಬಂದುದೂ, ಆಕೆಯ ದೌರ್ಬಲ್ಯತೆ-ಮುಗ್ಧತೆಗಳ ಪ್ರತೀಕ ...ಾಗಿವೆ. 'ನಾವು ಹೆಂಗುಸರಿರುವಾಗ ನೀವೇತಕ್ಕೆ ಕೈಬಾಯಿ ...ಟ್ಟುಕೋಬೇಕು?' ಎಂದು ಅನುನಯದ ನುಡಿಗಳನ್ನಾಡುತ್ತ, ...ಂಗಣ್ಣನಾಡಿದ 'ಇದ್ದವರನ್ನೇ ನಮ್ಮವರೆಂದು ಭಾವಿಸಿ ಪ್ರೀತಿ...ಂದ ನಡೆದುಕೊಳ್ಳಬೇಕು!' ಎಂಬ ಮಾತನ್ನು ಶ್ಲೇಷೆಯಾಗಿ ...ಪಯೋಗಿಸಿಕೊಂಡು, 'ನಾನು ಬಂದುದು ನಿಮ್ಮ ಜೋಡಾಗಿ!' ...ನ್ನುವಾಗ, ಆಕೆಯ ಪಾತ್ರದ ಅರಿವಾಗುತ್ತದೆ. ಆಕೆಯ ಇಚ್ಛೆ ...ಸೇರದೆ ಹೋದಾಗ 'ನಿಮ್ಮ ಸತ್ಯ ಮಾನ-ಮರ್ಯಾದೆಗಳನ್ನು ...ನು ಬಯಲಿಗೆಳೆಯುವೆ! ನಾನೂ ಶ್ಯಾಮನಿಗೆ ಹೇಳುವೆ, ನೀವೂ ...ಳಿರಿ! ಜಗತ್ತು ಯಾರನ್ನು ನಂಬುತ್ತದೆಂಬುದನ್ನು ನೀವು ...ಯಿರಿ!' ಎನ್ನುವುದು ಆಕೆಯ ಹೃದಯದ ಕಠಿಣತೆಯ ಕುರು...ಗಿದೆ. ಕಾರ್ಯರೂಪಕ್ಕೆ ತರುವ ಹಂಚಿಕೆಯಲ್ಲಿ ಆಕೆ ತೋರುವ ...ನೆ 'ಅಡಿಗೆ ಅಂಬಲಿಯದು ಅಂತಿರಲಿ, ನಿನ್ನ ಗಂಡ ಬೆಳಗ್ಗೆ ...ನೆಬಿಟ್ಟು ಹೋದರೆ ಸಂಜೆಯೇ ಬರುವುದು. ದಿನವಿಡೀ ...ನೊಬ್ಬಳೇ ಇರುವುದು, ಮನೆಯಲ್ಲಿ ಆವನ ಪಾಪದೃಷ್ಟಿಗೆ ಬಿದ್ದು ...ನ್ನಲ್ಲಿ ಉಳಿಯುತ್ತೀಯೋ?" ಎಂದು ಪರಿತಪಿಸುವಿಕೆಯಲ್ಲಿರುವ ...ಟಕೀಯತೆ, ಅನಂತರ ತನ್ನಲ್ಲಿಯೇ ಹೇಳಿಕೊಳ್ಳುವ ಕಟು...ಡಿಗಳು, ತಂಗಿ ತನ್ನ ಗಂಡನೊಂದಿಗೆ ವಿಷಯವನ್ನೆಲ್ಲಾ ತಿಳಿಸು...ನೆಂಬಾಗ 'ಆ ಪ್ರೀತಿಯ ಮಗ ತನ್ನ ಕಕ್ಕನನ್ನು ಎಂದಾದರೂ ...ಗಗೊಟ್ಟಾನೆಯೇ?' ಎಂಬ ಜಾಣ್ಮೆ, ರಂಗಣ್ಣ ಮನೆಬಿಟ್ಟು ...ರಟಾಗ ಆಡುವ ವಿಷಾಕ್ತ ಬಾಣಗಳಂತಿರುವ ಬಿರುನುಡಿಗಳು ...ಯ ಹೃದಯದ ಕಠಿಣತೆಯ—ಸೇಡಿನ ನಗ್ನರೂಪಗಳಾಗಿವೆ.

ಪರಿಣಾಮದ ದೃಷ್ಟಿಯಿಂದ ಏಳನೆಯ ಅಂಕವು ಬಹು ಪ್ರಧಾನವಾದುದಾಗಿದೆ. ಅದರಲ್ಲಿ ಗಂಗಕ್ಕನ ಸೇಡು ಯಾವ ಅನಾಹುತವನ್ನುಂಟುಮಾಡಿತೆಂಬುದರ ಅರಿವಾಗುತ್ತದೆ. ಶ್ಯಾಮನ ನಿರೀಕ್ಷೆಯಲ್ಲಿರುವಾಗ, ಆತ ಸಂಸಾರತ್ಯಾಗ ಮಾಡಿ ಚಿಕ್ಕಪ್ಪನನ್ನರಸಿ ಹೋದುದರ ಪತ್ರ ಬರುತ್ತದೆ. ಆಗ 'ಅಯ್ಯೋ ದುಷ್ಟೆ! ನಿನ್ನ ಪಾಪದ ಬೆಂಕಿ ನನ್ನನ್ನು ಸುಡುತ್ತಿದೆ. ನಿನ್ನ ದುಷ್ಟತನ ನನ್ನನ್ನು ಹಾಳು ಮಾಡಿತು.... ನೀವಾದರೂ ನನಗೆ ಹೇಳಬಾರದಿತ್ತೇ! ಎಂದು ಹಲಬುತ್ತಾಳೆ. "ಆಗ ಗಂಗಕ್ಕ ನನ್ನ ದುರ್ದೈವ ನಿನ್ನನ್ನು ಹಾಳು ಮಾಡಿತು. ನಾನು ಪಾಪಿ! ನನ್ನನ್ನು ಕ್ಷಮಿಸು!" ಎಂದು ಕೇಳಿಕೊಳ್ಳುತ್ತಾಳೆ. ಗಂಗಕ್ಕ ಗೆದ್ದು ಸೋತರೆ, ರಂಗಣ್ಣ ಸೋತು ಗೆಲ್ಲುತ್ತಾನೆ. ಇವರಿರ್ವರ ನಡುವೆ ಶ್ಯಾಮ-ರತ್ನಾರ ಜೀವನ ಮಣ್ಣುಗೂಡುತ್ತದೆ.

ಪಾತ್ರರಚನೆ ಮತ್ತು ಸನ್ನಿವೇಶನಿಯೋಜನೆಗಳ ಚೆಲುವು ಒಂದರೊಡನೊಂದು ಸಮ್ಮಿಳಿತವಾಗಿವೆ. ಶ್ಯಾಮನ ಸಂಸಾರತ್ಯಾಗ-ಸಮಾಚಾರವನ್ನು ಪತ್ರವು ತಿಳಿಸಿದರೂ, ಶ್ಯಾಮನಿಗೆ ಪರಿಸ್ಥಿತಿಯ ಕಲ್ಪನೆಯಾದದ್ದರ ಬಗ್ಗೆ ೫-೬ನೆಯ ಅಂಕಗಳ ನಡುವೆ, ಆತನ ಕಾರಣವರಿಯದ ತಳಮಳ, ಬರುವಾಗ ಜನರ ಪಿಸುನುಡಿಗಳು, ಮನೆಯಲ್ಲಿ ಮನವರಿಯುವ ಮೌನ ಇವುಗಳನ್ನು ಚಿತ್ರಿಸುವ ಅಂಕವೊಂದು ಬರಬೇಕೆನಿಸುತ್ತದೆ. ಇದೊಂದು ಲೋಪವನ್ನು ಬಿಟ್ಟರೆ, ಮನಮುಟ್ಟುವ ಶೈಲಿ, ಚಿತ್ರಪೋಷಣೆ, ಸನ್ನಿವೇಶಗಳು, ಸಂಭಾಷಣೆ—ಎಲ್ಲ ವಿಷಯದಲ್ಲೂ ಉತ್ತಮ ಕಲಾಕೃತಿಯಾಗಿದೆ.... 'ಬೆಂದಹೃದಯ'.

96" X 54"
ಕಾಶ್ಮೀರೀ ಶಾಲು
ಬರೀ ೨—೮—೦ ಬೆಲೆಗೆ
ಕೂಡಲೆ ಬರೆಯಿರಿ :
ORIENTIAL KASHMIRI SHAWL STORE
FATEPURI (J. D.) DELHI.

ಕುಮಟಾದಲ್ಲಿ ನಮ್ಮ ಏಜಂಟರು
ದಿ ಫೋರಮ್ ಏಜನ್ಸೀಸ್, ನ್ಯೂಜ್ ಏಜಂಟ್ಸ್

ಗುಡಗೇರಿಯಲ್ಲಿ ನಮ್ಮ ಏಜಂಟರು
ಶ್ರೀ. ಡಿ. ಎನ್. ಹುಲಕೋಟಿ, ನ್ಯೂಜ್ ಏಜಂಟ್

ಸಾದರ ಸ್ವೀಕಾರ

★

೫೪. **ಶಕುಂತಲಾ** (ಅನುವಾದಿತ ಕಾದಂಬರಿ). ಮೂಲ ಮರಾಠೀ ಲೇಖಕರು ಶ್ರೀಮಾನ್ ನಾ. ಸೀ. ಫಡಕೆಯವರು ಅನುವಾದಿಕೆಯರು ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಅವರು. ಧಾರವಾಡದ ಪ್ರತಿಭಾಗ್ರಂಥಮಾಲೆಯ ೯ ನೆಯ ವರ್ಷದ ೪ ನೆಯ ಕಿರಣ. ಕ್ರಾ. ಅ. ೧೭೨ ಪುಟಗಳು. ಬೆಲೆ ೨-೧೨-೦.

೫೫. **ಆಶಾಬಾಳು** (ಸ್ವತಂತ್ರ ಸಾಮಾಜಿಕ ಕಾದಂಬರಿ). ಬರೆದವರು ಶ್ರೀಮಾನ್ ಪಿ. ಶ್ರೀಧರರಾಯರು, ಮಂಗಳೂರು ಮೋಲಿನ ಗ್ರಂ. ಮಾಲೆಯ ೯ ನೆಯ ವರ್ಷದ ೫ನೆಯ ಕಿರಣವಿದು. ಕ್ರಾ. ಅ. ೮೭ ಪುಟಗಳು. ಬೆಲೆ ೧-೯-೧.

೫೬. **ಕಣ್ಮಣಿ** (ಕಥಾಸಂಕಲನ) ಬರೆದವರು "ಅನುಪಮಾ," ಪ್ರಕಾಶಕರು ಪುರೋಗಾಮಿ ಪ್ರಕಾಶನ, ಬೆಂಗಳೂರು. ಐದನೆಯ ಗ್ರಂಥವಿದು. ಕ್ರಾ. ಅ. ೧೦೦ ಪುಟಗಳು. ಬೆಲೆ ೧-೪-೦.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ.ವಿ. ಪಂಡಿತರ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ ಕಾರಖಾನೆ.

ದೃಢವಿದು

ಚರ್ಮವನ್ನು ಮೃದುವಾಗಿ ಅಂದವಾಗಿ ಸುಸ್ಥಿತಿಯಲ್ಲಿಡುವ ಅಲಂಕಾರವಸ್ತುಗಳಲ್ಲಿ ಉತ್ತಮವಾದುದು

ಏಕ್ಲಾ

ಟಾಯಿಲೆಟ್ ಸ್ನೋ



★

ದಿ ನೊಪ್ಲಾ ಕಂಪನಿ

೫೭. **ಹರಿದ ಬಾಳು** (ಕಥಾಸಂಕಲನ). ಬೇರೆ ಬೇರೆ ಕಥೆಗಾರರು ಬರೆದ ಕಥೆಗಳು. ಪ್ರಕಾಶಕರು ಉದಯ ಸಾಹಿತ್ಯ ಕೋಟಿ. ಬೆಂಗಳೂರು ೨, ಕ್ರಾ. ಅ. ೬೪ ಪುಟಗಳು. ಬೆಲೆ ೦-೧೨-೦.

೫೮. **ಜೀವನ** (ಮಾಸಪತ್ರಿಕೆಯ ಶ್ರೀ. ಅಂಬಳೇ ಕೃಷ್ಣ ಶಾಸ್ತ್ರಿ ವಿಶಿಷ್ಟ ಸಂಚಿಕೆ). ಸಂಪಾದಕರು ಮತ್ತು ಪ್ರಕಾಶಕರು ಶ್ರೀಮಾನ್ ಮಾಸ್ತಿ ವೆಂಕಟೇಶ ಐಯಂಗಾರ್ ಗವೀಪುರಂ, ಬೆಂಗಳೂರು. ಕ್ರಾ. ಅ. ೩ ದ ೬೪ ಪುಟಗಳು. ಬೆಲೆ ೧-೦-೦.

೫೯. **ನಂದನ** (ಕವನ ಸಂಕಲನ). ಬರೆದವರು ಶ್ರೀಮಾನ್ 'ಬಿಳಿಗಿರಿ'. ಪ್ರಕಾಶಕರು ಬಿ. ಪಿ. ಹಾಲಪ್ಪ ಸ್ಮಾರಕ ಗ್ರಂಥಮಾಲೆ, ಭದ್ರಾವತಿ. ಕ್ರಾ. ಅ. ೯೩ ಪುಟಗಳು. ಬೆಲೆ ೧-೮-೦.

೬೦. **ಶಿವಶರಣರ ಕೃತಿಗಳು** (ಸ್ವರಪ್ರಸ್ತಾರ ಸಹಿತ) ಸ್ವರ ಸಂಯೋಜಕರು 'ಗಾನವಿದ್ಯಾ ವಿಶಾರದ' 'ವೈಣಿಕ ವಿದ್ವಾನ್' ಶ್ರೀ. ಮೈಸೂರು ಎಲ್. ರಾಜಾರಾವ್. ಪ್ರಕಾಶಕರು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ನಗರ. ಕ್ರಾ. ಅ. ೯೫ ಪುಟಗಳು. ಬೆಲೆ ೧-೮-೦.

ಜಯಂತಿಯ ವಿಶೇಷ ಸಂಚಿಕೆ

卐

ಈ ಸಲದ ದೀಪಾವಳಿಯು ಅಕ್ಟೋಬರ್ ಸಂಚಿಕೆಯನ್ನು ದೀಪಾವಳಿ ವಿಶೇಷ ಸಂಚಿಕೆಯನ್ನು ಮಾಡುವಂತಿರಲಿಲ್ಲ. ನವ್ಹಂಬರ್ ಸಂಚಿಕೆ ಹೊರಡುವ ಹೊತ್ತಿಗೆ ದೀಪಾವಳಿ ಮುಗಿದು ಹೋಗಿರುವುದರಿಂದ, ಆ ತಿಂಗಳ ಸಂಚಿಕೆಯನ್ನೂ 'ದಿಪಾವಳಿ ಸಂಚಿಕೆ' ಎಂದು ಹೊರಡಿಸುವುದರಲ್ಲಿ ಔಚಿತ್ಯ ಕಾಣಲಿಲ್ಲ. ಜಯಂತಿಯ ವಾಚಕರಿಗೆ ಸಲ್ಲಿಸಬೇಕಾದ ವಿಶೇಷ ಸಂಚಿಕೆಯನ್ನು ವಸಂತಮಾಸದಲ್ಲಿ ಕೊಡಬೇಕೆಂದಿದ್ದೇವೆ—ಎಂದರೆ ೧೯೪೦ನೆಯ ಏಪ್ರಿಲ್ ಸಂಚಿಕೆಯು 'ವಸಂತ ಸಂಚಿಕೆ'ಯಾಗಿ ಹೊರಡುವುದು. ದೀಪಾವಳಿ ವಿಶೇಷ ಸಂಚಿಕೆಯ ಕೊರತೆಯನ್ನದು ಒಂದಕ್ಕೆರಡಾಗಿ ತುಂಬಿಕೊಡದಿರದೆಂದು ನಂಬುಗೆ ಕೊಡುತ್ತೇವೆ. ಜಯಂತಿಯ ಚಂದಾದಾರರ ಬಳಗ ಬೆಳೆದಂತೆ, ಜಯಂತಿ ಕನ್ನಡಿಗರಿಗೆ ಕೊಡುವ ಕಾಣಿಕೆಗಳೂ ವಿಶೇಷ ರೀತಿಯವಾಗಬಹುದು.

ವ್ಯವಸ್ಥಾಪಕ 'ಜಯಂತಿ' ಧಾರವಾಡ.

ದೀವಳಿಗೆಯ ವಿಶೇಷ ಕಾಣಿಕೆ:

No. 42.
Tele : 'GOOD LUCK'
Phone 29

೫೦,೦೦೦ ರೂಪಾಯಿಗಳು

ಸರಿಯಾಗಿರುವ ೨೦ ಚೌಕುಗಳಿಗೆ ಸಮಾನವಾಗಿ ಬಹುಮಾನ ಹಂಚಲಾಗುವುದು.

ಎಲ್ಲ ಬಹುಮಾನಗಳೂ ವಿಶ್ವಾಸಾರ್ಹವಾದುವುಗಳು :—

೨೦೦೦ ರೂ. ಪ್ರತಿಯೊಂದು ಸಂಪೂರ್ಣ ಸರಿಯಾದ ಉತ್ತರಕ್ಕೆ. ೨೦೦ ರೂ. ಮೊದಲಿನೆರಡು ಸಾಲುಗಳು ಸರಿಯಾಗಿರುವ ಪ್ರತಿಯೊಂದು ಉತ್ತರಕ್ಕೆ. ೧೩೦ ರೂ. ಮೊದಲನೆಯ ಒಂದು ಸಾಲಿನ ಅಂಕಿಗಳು ಸರಿಯಾಗಿರುವ ಪ್ರತಿಯೊಂದು ಉತ್ತರಕ್ಕೆ.

೩ ರಿಂದ ೧೮ ರ ವರೆಗೆ ಅಂಕಿಗಳನ್ನು ಚೌಕುಗಳಲ್ಲಿ ತುಂಬಬೇಕು. ಅಡ್ಡ, ಉದ್ದ, ಢೇಮನ ಮನೆಗಳಲ್ಲಿಯು ಒಟ್ಟು ೪೨ ಆಗಬೇಕು. ಒಂದು ಮನೆಯಲ್ಲಿ ಬಳಸಿದ ಅಂಕಿಯನ್ನು ಇನ್ನೊಂದು ಮನೆಯಲ್ಲಿ ಬಳಸಲಾಗದು.

ಉತ್ತರ ಕಳುಹಬೇಕಾದ ಕೊನೆಯ ತಾ. ೩೦-೧೦-೩೯. ನಿರ್ಣಯದ ತಾ. ೧೦-೧೧-೩೯

ಪ್ರವೇಶ ಧನ : ಒಂದು ಉತ್ತರಕ್ಕೆ ೧ ರೂ. ಅಥವಾ ನಾಲ್ಕು ಉತ್ತರಗಳಿಗೆ ರೂ. ೩—೦—೦ ಇಲ್ಲವೆ ಎಂಟು ಉತ್ತರಗಳ ಪ್ರತಿಯೊಂದು ಸೆಟ್ಟಿಗೆ ರೂ. ೫—೦—೦.

ನಿಯಮಗಳು : ಸಾದಾ ಕಾಗದದಲ್ಲಿ ಬೇಕಾದಷ್ಟು ಚೌಕುಗಳನ್ನು **ಮಾಡಿಕೊಂಡು,** ಅಂಕಿಗಳನ್ನು ತುಂಬಿ, ಪ್ರವೇಶಧನದೊಂದಿಗೆ ಕಳಿಸಬೇಕು. ಚೌಕದ ಜೊತೆಯಲ್ಲಿ M.O. ರಿಸೀಟನ್ನಾಗಲೀ, ಪೋಸ್ಟಲ್ ಆರ್ಡರು ಇಲ್ಲವೆ ಬ್ಯಾಂಕ್ ಡ್ರಾಫ್ಟನ್ನಾಗಲಿ ತಪ್ಪದೆ ಇಡಬೇಕು. ಬುಲಂದಶಹರದ ಒಂದು ಪ್ರಮುಖ ಬ್ಯಾಂಕಿನಲ್ಲಿ ಸೀಲ್ ಮಾಡಿ ಇರಿಸಿದ ಉತ್ತರದ ಚೌಕಕ್ಕೆ ಸಮಾನವಾದ ಉತ್ತರವನ್ನೇ ಸಂಪೂರ್ಣ ಸರಿಯಾದ ಉತ್ತರವೆಂದು ಪರಿಗಣಿಸಲಾಗುವದು. ಉತ್ತರದ ಚೌಕುಗಳಲ್ಲಿ ಇಂಗ್ಲಿಷ್ ಅಂಕಿಗಳನ್ನು ಬಳಸಬೇಕು. ಪತ್ರವ್ಯವಹಾರವನ್ನು ಎಲ್ಲರೂ ಇಂಗ್ಲಿಷಿನಲ್ಲಿಯೇ **ಮಾಡ**ಬೇಕು. ಮನಿಯಾರ್ಡರ್ ಕೂಪನಿನ ಮೇಲೆ ಎಲ್ಲರೂ ತಮ್ಮ ತಮ್ಮ ಸರಿಯಾದ ಹೆಸರು ವಿಳಾಸಗಳನ್ನು ಬರೆಯಬೇಕು. ಒಟ್ಟಿನಲ್ಲಿ ಬಂದ ಸರಿಯಾದ ಉತ್ತರಗಳಿಗನುಗುಣವಾಗಿ ಮೇಲೆ ಹೇಳಿದಂತೆ ಬಹುಮಾನಗಳನ್ನು ಹಂಚಲಾಗುವುದು. ನಂಬುಗೆಗೊಟ್ಟು ಹೇಳಿರುವ ರಕಮು ಬಹುಮಾನದಲ್ಲಿ ಯಾ ಬದಲಾವಣೆಯಾಗುವುದಿಲ್ಲ.

ಪರಿಣಾಮವು ಕೂಡಲೆ ತಿಳಿಯಬೇಕೆಂದು ಅಪೇಕ್ಷಿಸುವವರು ತಮ್ಮ ವಿಳಾಸ ಬರೆದ ಕವರುಗಳನ್ನು ಸಾಕಷ್ಟು ಅಂಚೆಯ ಚೀಟಿ ಹಚ್ಚಿ ಕಳುಹಬೇಕು. ಮ್ಯಾನೇಜರರ ತೀರ್ಮಾನವೇ ಕೊನೆಯದು. ನಿಮ್ಮ ಉತ್ತರದ ಚೌಕುಗಳನ್ನು ಪ್ರವೇಶ-ಧನದೊಂದಿಗೆ ಕೆಳಗಿನ ವಿಳಾಸಕ್ಕೆ ಕಳಿಸಬೇಕು.

ಕಳೆದ ಸಲದ ಪರಿಣಾಮ

ಒಟ್ಟು 38

7	17	10	4
2	12	15	9
13	3	8	14
16	6	5	11

Phœnix Corporation Regd. (85) Bulandshahar, U. P.

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು ! ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ' ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವುವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಈಗ ತಾನೆ ಪ್ರಕಟಿಸಿದ 'ಆನಂದಕಂದರ' ತರಂಗರೂಪಕ ಸಂಕಲನ:

ಬೆಳವಡಿ ಮಲ್ಲಮ್ಮ

ಕ್ರಾ. ಅ. ೧೧೬ ಪುಟಗಳು. ಹೊಳಪಿನ ಕಾಗದ. ಬೆಲೆ ೧-೮-೦.

ಹೊಸತಾಗಿಯೆ ಹೊರಟ ಕವನ ಸಂಕಲನ

ಕಾರಹುಣ್ಣಿವೆ

ಇದರಲ್ಲಿ 'ಆನಂದಕಂದ'ರ ರಸಪತ್ತಾದ ೫೨ ಕವನಗಳು ಸಂಕಲನಗೊಂಡಿವೆ. ವಿವಿಧ ಭಾವಗಳನ್ನು ವಿಸ್ತರಿಸಿದ ಸುಂದರವಾದ ಭಾವಗೀತಗಳು ! ಸಂಗೀತಗಾರರ ಕಾವ್ಯಗಾಯನ ಕಾರ್ಯಕ್ರಮಕ್ಕೆ ತುಂಬ ಸಹಕಾರಿಯಾದುವು !

ಕ್ರಾ. ಅ. ೧೨೮ ಪುಟಗಳು. ಅಂದವಾದ ಅಚ್ಚು. ಬೆಲೆ ೨-೦-೦.

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ

ರಾಜಯೋಗಿ
ಸುದರ್ಶನ

ಕವನ ಸಂಕಲನ

ವಿರಹಿಣಿ
ಒಡನಾಡಿ

ಕಥಾಸಂಕಲನ

ಬಡತನದ ಬಾಳು
ನಮ್ಮ ಬದುಕು
ಸಂಸಾರ ಚಿತ್ರ
ಮಾತನಾಡುವ ಕಲ್ಲು

ಇತರ ಗ್ರಂಥಗಳು

ಕರ್ನಾಟಕ ಜನಜೀವನ

ಜೀವನ ಚರಿತ್ರ

ಶ್ರೀ. ಬಸವಣ್ಣನವರು

ಅಲ್ಲದೆ ಶ್ರೀ. ಹುದ್ದಾರರ '**ಚಿತ್ರಕಲಾಪ್ರವೇಶ**'ವೂ ಚಾಡಿಯ ಚಾಣಿಕ್ಯನ '**ಜಾತೀಯಸಮಸ್ಯೆ**' '**ಕರ್ನಾಟಕ ಏಕೀಕರಣ**', ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೫ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೇ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ : **ಎಸ್. ಡಿ. ಧರಮಟ್ಟಿ, ಶ. ಪ್ರ. ಮಂದಿರ, ಧಾರವಾಡ.**

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar -4213-52.



ನವ್ಹಂಬರ್ ೧೯೫೨

ಸಂಪುಟ ೧೫

ಸಂಚಿಕೆ ೬

ಈ ಸಂಚಿಕೆಯಲ್ಲಿ :

★

ಅಖಿಲಭಾರತ ಮಾಧ್ವಸಮ್ಮೇಳನ (ಸಂಪಾದಕೀಯ) ಸಂಪಾದಕರು ೨೦೧

ನಾಡನಡೆ (ಪ್ರಾಸಂಗಿಕ ಟಿಪ್ಪಣಿ) 'ಕಾಲಭೈರವ' ೨೦೩

ಮಲ್ಲಿ (ಸಣ್ಣಕತೆ) ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ., ಬಿ. ಟಿ. ೨೦೫

ಪಂಪಭಾರತದ ಕಥಾಂತರಗಳು (ಸಾಹಿತ್ಯವಿಚಾರ)
ಶ್ರೀ.ಕೆ. ವೆಂಕಟರಾಯಾಚಾರ್ಯ, ಸುರತ್ಕಲ್ಲ ೨೧೦

ಬೆಣ್ಣೆಯಾಕೆ (ಒಂದು ನಲ್ವಾಡು) 'ಆನಂದಕಂದ' ೨೧೩

ಆಯ್‌ಸ್ಕ್ರೀಮು (ಕವನ) ಶ್ರೀ. ದಿನಕರ ದೇಸಾಯಿ ಎಂ. ಎ. ಮುಂಬಯಿ ೨೧೩

ಪಟ್ಟಿ (ಒಂದು ವಿನೋದ ಚಿತ್ರ) ಶ್ರೀ. ಅರವಿಂದ ಪಾಣೆಮಂಗಳೂರು ೨೧೪

ಶಾರೀರಿಕ ಶಿಕ್ಷಣದ ಮಹತ್ತ್ವ (ವ್ಯಾಯಾಮ ವಿಚಾರ)
ಶ್ರೀ. ಯ. ವೆಂ. ಜಾವಡೇಕರ ಎಂ.ಎ., ಬಿ.ಟಿ. ೨೧೮

ನಿರುದ್ಯೋಗದಲ್ಲಿ ಉದ್ಯೋಗ (ನಾಟ್ಯಛಟಾ) ಶ್ರೀ. ಎನ್. ಎಸ್. ಗದಗಕರ ಬಿ.ಎ..... ೨೨೩

ವಿಜ್ಞಾನದ ವಿಷ (ಸಣ್ಣಕತೆ) ಶ್ರೀ. ವೆಂ. ಮು. ಜೋಶಿ, ಧಾರವಾಡ ೨೨೬

ಅನಿಲಶಕ್ತಿ (ವೈಜ್ಞಾನಿಕಪ್ರಬಂಧ) ಶ್ರೀ. ವೀರಭದ್ರಪ್ಪ ಎಂ.ಎಸ್.ಸಿ. ಹೈದರಾಬಾದ್ ೨೩೦

ಕವಿತೆಗಳು (ನಾಲ್ಕು ಕವನಗಳು) ಬೇರೆ ಬೇರೆ ಕವಿಗಳು ೨೩೩

ಧಾರವಾಡ ಆಕಾಶವಾಣಿಯ ಹೊಸವ್ಯವಸ್ಥೆ (ವರದಿ) 'ವಿಹಂಗಮ' ೨೩೪

ಸಾಹಿತ್ಯವಿಹಾರ (ಸಾಹಿತ್ಯವಿಷಯಕ ಟಿಪ್ಪಣಿ) ಸಂಪಾದಕರು ೨೩೬

ಸಾದರಸ್ವೀಕಾರ ೨೩೯

ಮುಗಳ ಮದುವೆ' ಓದಿ:

ಶ್ರೀಮಾನ್ ಬೆಟಗೇರಿಯವರಲ್ಲಿ ಸಪ್ರೇಮ ವಂದನೆಗಳು—

ಇದೀಗ ಪ್ರಕಟವಾದ ನಿಮ್ಮ 'ಮುಗಳ ಮದುವೆ' ಕಾದಂಬರಿಯನ್ನು ಓದಿದೆ. ೩೪೧ ಪುಟಗಳುಳ್ಳ ಈ ಕಾದಂಬರಿಯನ್ನು ಕೂತ ಮೆಟ್ಟಿನ ಮೇಲೆ ಮುಗಿಸಿಯೇ ಬಿಟ್ಟೆ. ಕೈಯಲ್ಲಿ ಮೊದಲು ಪುಸ್ತಕ ಹಿಡಿದಾಗ, ೧೭ ವರ್ಷಗಳ ದೀರ್ಘ ಕಾಲಾವಧಿಯ ನಂತರ ಮತ್ತೆ ನಿಮ್ಮ ಕಾದಂಬರಿಯನ್ನು ಓದುವ ಸುಯೋಗ ದೊರೆಯಿತಲ್ಲ — ಎಂಬ ಆತುರದ ಜೊತೆಗೆ, ಅಂಜಿಕೆಯ ಒಂದು ಸಣ್ಣ ಸುಳಿಯೂ ಮನವನ್ನು ಆವರಿಸಿತ್ತು. ಆ ಅಂಜಿಕೆ ಮತ್ತಾವುದೂ ಅಲ್ಲ; ಹದಿನೇಳು ವರ್ಷ ದೀರ್ಘ ವಿಶ್ರಾಂತಿಯನ್ನು ಪಡೆದು ಹೊರಬರುತ್ತಿದ್ದ ನಿಮ್ಮೊಳಗಿನ ಕಲಾಕಾರ ಆಕಳಿಸುತ್ತಲೇ ಬರುತ್ತಿದ್ದಾನೋ ಎಂಬ ಭಯ! ಆದರೆ ಕಾದಂಬರಿಯ ಹತ್ತೆಂಟು ಪುಟಗಳನ್ನು ಓದುವುದರೊಳಗಾಗಿ ಆ ಅಂಜಿಕೆ ಎಲ್ಲಿಯೋ ಮಾಯವಾಗಿ, ಪುಟಪುಟಕ್ಕೂ ಈ ಕೃತಿಸುಮನ ಹೆಚ್ಚೆಚ್ಚು ಅರಳುವುದರ ಜೊತೆಗೆ ತನ್ನ ಸೌರಭದಿಂದ ನನ್ನ ಚಿತ್ತವನ್ನು ಸೂರೆಗೊಂಡಿತು. ಇದರಲ್ಲಿಯ ಕಲಾಕಾರ ಎಲ್ಲಿ-ಲ್ಲಿಯೂ ತಾನೇ ಕಾಣಿಸಿಕೊಳ್ಳುವ ಗೋಜಿಗೆ ಹೋಗದೆ, ವ್ಯಕ್ತಿಗಳ ಪರಿಚಯದೊಂದಿಗೆ ತಾನು ಹಿಂದುಳಿದು ಬಿಡುತ್ತಾನೆ. ಮುಂದೆ ಆ ವ್ಯಕ್ತಿಗಳೇ ತಮ್ಮ ಸ್ವಭಾವೋಚಿತ ಕೃತಿಗಳಿಂದ ಓದುಗನ ಮನಸ್ಸನ್ನು ಸೆರೆಹಿಡಿಯು-ತ್ತವೆ. ಇದರಲ್ಲಿಯ ಪ್ರತಿಯೊಂದು ದೃಶ್ಯವೂ ಕಣ್ಣೆದುರಿನಲ್ಲಿಯೇ ನಡೆಯುತ್ತಿರುವುದರಿಂದ, ಓದುಗನ ಮನಸ್ಸಿನ ಮೇಲೆ ಅತ್ಯಂತ ಪರಿಣಾಮಕಾರಿಯಾಗುವಂತಹ ಆಘಾತಗಳುಂಟಾಗಿ, ಕಥಾನಕದಲ್ಲಿಯ ವ್ಯಕ್ತಿಗಳ ಬಗ್ಗೆ ಓದುಗ, ಲೇಖಕನ ಅಭಿಪ್ರಾಯಗಳಿಗೆ ಒಳಗಾಗದೆ, ತನ್ನ ಅಭಿಪ್ರಾಯಗಳನ್ನು ತಾನೇ ರೂಪಿಸಿಕೊಳ್ಳುತ್ತಾನೆ. ಪರಿಣಾಮಕಾರಕತೆಯ ದೃಷ್ಟಿಯಿಂದ ಇಲ್ಲಿ ಅವಲಂಬಿಸಿದ ಈ ವಿಧಾನ ತುಂಬ ಯಶಸ್ವಿಯಾಗಿದೆ.

ಕಾವೇರಿಯ ಮದುವೆಯ ಮಾತಿನಿಂದ ಪ್ರಾರಂಭವಾಗುವ ಈ ಕೃತಿ, ರಂಗಣ್ಣ-ಕಾವೇರಿಯರ ಮದುವೆ-ಯಲ್ಲಿ ಮುಗಿದಿದ್ದರೂ, ರತ್ನಾಕರ-ಕುಮುದೆಯರ ಅಸಫಲ ಪ್ರಣಯಕಥೆಯೇ ಇದರಲ್ಲಿ ಮುಖ್ಯವಾಗಿದ್ದು, ಅದು ಮುಂದಿನ ಕಾದಂಬರಿಗೆ ಸಂಚಕಾರವನ್ನೊದವಿಸಿದೆ. ಇಲ್ಲಿಯ ಕಥಾನಕ ನನಗೆ ವಿಶೇಷ ಮಹತ್ತ್ವದ್ದೆನಿಸ-ಲಿಲ್ಲ. ಮತ್ತು ಅದರ ಹೆಣಿಕೆಯಲ್ಲಿ ಅಷ್ಟೊಂದು ಚಾತುರ್ಯವೂ ಕಾಣಲಿಲ್ಲ. ಆದರೆ ಕಥಾನಕದಲ್ಲಿ ಚಾತುರ್ಯ ಬೇಕಾಗುವುದಕ್ಕೆ ಇದೇನು ಪತ್ತೇದಾರಿ ಕಾದಂಬರಿಯಲ್ಲವಾದುದರಿಂದ, ನನಗೆ ಈ ಕೊರತೆಯ ಕಡೆಗೆ — ಇದು ಕೊರತೆಯೇ ಇದ್ದರೆ — ಲಕ್ಷ್ಯವೇ ಹೋಗಲಿಲ್ಲ. ಇದೊಂದು ಬಹಳ ಒಳ್ಳೆಯ ಕೃತಿ ಎಂದು ಹೇಳುವುದಕ್ಕೆ ಇದರಲ್ಲಿ ನನಗೆ ಪ್ರಾಮುಖ್ಯವಾಗಿ ಕಂಡುದು: ಪಾತ್ರಗಳ ಮನೋವ್ಯಾಪಾರದ ಸೂಕ್ಷ್ಮದರ್ಶನ, ಮಾನವ-ಸಹಜ ಪ್ರವೃತ್ತಿಗಳ ಜೊತೆಗೆ ವ್ಯಕ್ತಿವೈಶಿಷ್ಟ್ಯವನ್ನು ಸ್ಫುಟಗೊಳಿಸಿರುವ ವಿಧಾನ, ರಸೋತ್ಕರ್ಷವನ್ನು ಉತ್ಕಟ-ವಾಗಿ ಸಾಧಿಸಿದ ರೀತಿ, ವಾಸ್ತವತೆ ಮತ್ತು ಕಲ್ಪನಾರಮ್ಯತೆ ಇವುಗಳ ಸುಂದರವಾದ ಎರಕ ಮತ್ತು ೧೯೩೦ನೆಯ ಇಸ್ವಿಯ ರಾಜಕೀಯ ವಾತಾವರಣದ ಯಥಾರ್ಥ ದರ್ಶನ. ಈ ಗುಣಗಳು ಅತ್ಯಂತ ಪ್ರಭಾವಿಯಾಗಿ ಇಲ್ಲಿ ರೂಪಿತವಾಗಿರುವುದರಿಂದ, ಇದಕ್ಕೊಂದು ವಿನೂತನವಾದ ಮೆರುಗು ಬಂದಿದೆಯೆಂದು ನನಗೆನಿಸುವುದು.

'ಇಲ್ಲಿ, 'ಮುಗಳ ಮದುವೆ'ಯ ಕೂಲಂಕಷ ವಿಮರ್ಶೆ ಎಂದು ನಾನಿದನ್ನು ಬರೆಯಹೊರಟಿಲ್ಲ. ಕಾದಂಬರಿಯನ್ನು ಓದುವಾಗ ಅದರ ಸಮಗ್ರಸೌಂದರ್ಯವನ್ನೂ ಗುಣಶ್ರೇಷ್ಠತೆಯನ್ನೂ ಕಂಡು ಅನುಭವಿಸಿ, ನನಗಾದ ಸಂತೋಷವನ್ನು ಸೂಚಿಸುವುದಕ್ಕಾಗಿಯೇ ನಾನು ಈ ನಾಲ್ಕು ಮಾತುಗಳನ್ನು ಬರೆದಿದ್ದೇನೆ. ಅದನ್ನು ತೀರ ಕಡಿಮೆ ಶಬ್ದಗಳಲ್ಲಿ ವ್ಯಕ್ತಪಡಿಸಿದ್ದಕ್ಕಾಗಿ ಕ್ಷಮೆ ಬೇಡಿ, ಒಂದು ಒಳ್ಳೆಯ ಕೃತಿಯನ್ನು — ಇಷ್ಟು ವರ್ಷ-ಗಳ ಮೇಲಾದರೂ ಆಗಲಿ — ಕನ್ನಡಕ್ಕೆ ಕೊಟ್ಟುದಕ್ಕಾಗಿ ನಿಮ್ಮನ್ನು ಪುನವಾರೆ ಅಭಿನಂದಿಸಿ, ಈ ಬರೆಹವನ್ನು ಮುಗಿಸುತ್ತೇನೆ.

ತಾ. ೧೬-೧೦-೫೨

ದ. ರಾ. ಬೇಂದ್ರೆ

ಜಯಂತಿ

ಸಂ. ೧೫.　　ಸಂಚಿಕೆ. ೩

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು
ಶ್ರೀ. ಡಿ. ಶರತ್‌ಕುಮಾರ

ಪ್ರಕಾಶಕರು :
ಶ್ರೀ. ಎಮ್. ವಿ. ಮೆಳ್ಳಿಗಟ್ಟಿ.

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

ಸೇರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಅಖಿಲ ಭಾರತ ಮಾಧ್ವಸಮ್ಮೇಳನ.

卐

ಇದೇ ತಿಂಗಳಲ್ಲಿ ಉಡುಪಿಯಲ್ಲಿ ಸೇರಲಿದ್ದ ಅಖಿಲ ಭಾರತ ಮಾಧ್ವಸಮ್ಮೇಳನವು, ವಿಶೇಷ ಕಾರಣಗಳಿಗಾಗಿ ಕೆಲವು ದಿನ ಮುಂದೆ ಬಿದ್ದಿತೆಂಬ ಸುದ್ದಿ ಬಂದಿದೆ. ಹೂಡಿದ ಕಾರ್ಯ ದೊಡ್ಡದು. ಬರಬೇಕಾದ ಜನರೆಲ್ಲ ಅದಕ್ಕೆ ಬಂದರೆಯೆ ಕಾರ್ಯಕ್ಕೆ ಶೋಭೆ ಬಂದೀತು; ಸಮ್ಮೇಳನದ ಗುರಿಯು ಸಿದ್ಧಿಯಾದೀತು.

ಇಂದು ಭಾರತದಲ್ಲಿ ಮತ-ಪಂಥಗಳೆಲ್ಲ ಯಾವ ಅವಸ್ಥೆಯಲ್ಲಿವೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಎಲ್ಲ ಮತಗಳಿಗೂ ಪರಂಪರೆಯ ಗುರುಪೀಠಗಳಿವೆ; ಪರಂಪರೆಯ ಅನುಯಾಯಿ ವರ್ಗವಿದೆ. ಗುರುವರ್ಗ ತಂತಮ್ಮ ಮತ-ಪಂಥಗಳ ತತ್ತ್ವವನ್ನು ಮೈಗೂಡಿಸಿಕೊಂಡು ನಡೆಯುತ್ತಿದೆಯೋ, ಇಲ್ಲವೋ; ಅದನ್ನು ಬಾಯಿಬಿಚ್ಚಿ ಆಡುವಂತಿಲ್ಲ. ಆದರೆ ಅನುಯಾಯಿ ವರ್ಗ ತಂತಮ್ಮ ಮತ-ಪಂಥಗಳಿಂದ ದೂರವಾಗಿ ಬಿಟ್ಟಿದೆಯೆಂದು ಕೈಯೆತ್ತಿ ಹೇಳಬಹುದು.

'ಮತ' ಎಂಬುದು ಲೌಕಿಕ ವ್ಯವಹಾರಕ್ಕೆ ಸೇರಿದುದಲ್ಲ; ಅಧ್ಯಾತ್ಮಿಕಪ್ರಪಂಚದ ವಿಷಯವಾಗಿರುವುದು. ದೇವನ ಅಸ್ತಿತ್ವವನ್ನು ಒಪ್ಪಿ, ಆತನ ಸ್ವರೂಪವಿಚಾರವನ್ನೂ, ದೇವನಿಗೂ ಜಗತ್ತಿಗೂ ಇರುವ ಸಂಬಂಧವನ್ನೂ, ಜೀವದ ಬಂಧನ-ಮೋಕ್ಷಗಳ ವಿಚಾರವನ್ನೂ, ಜೀವ-ದೇವರುಗಳಲ್ಲಿಯ ಸಂಬಂಧವನ್ನೂ ವಿವೇಚನೆ ಮಾಡುವ ಕಾರ್ಯಕ್ಕಾಗಿ ಪ್ರತಿಯೊಂದು ಮತವೂ ಹುಟ್ಟಿಬಂದಿದೆ. ಮತಾನುಯಾಯಿತ್ವದ ಬಹಿರಂಗ ಸಂಕೇತಗಳಾಗಿ ಕೆಲವೊಂದು ವಿಶಿಷ್ಟ ಆಚಾರಗಳೂ ವಿಶಿಷ್ಟ ಗುರುತುಗಳೂ ಇರುವುವು.

ಮತಗಳಲ್ಲಿ ದ್ವೈತ, ಅದ್ವೈತ— ಇವೆರಡೇ ಮುಖ್ಯ ಭೇದಗಳು. ಜೀವ-ಜಗತ್ತು-ದೇವ ಇವರುಗಳ ಪ್ರತ್ಯೇಕತೆಯನ್ನು ಪ್ರಸ್ಥಾಪಿಸುವ ಮತವೇ ದ್ವೈತವೆನಿಸುವುದು; ಇವೆಲ್ಲ ಒಂದೆ ಎಂದು ಪ್ರಸ್ಥಾಪಿಸುವ ಮತವು ಅದ್ವೈತವೆನಿಸುವುದು. ಅದ್ವೈತ ಮತದಲ್ಲಿ ವಿಶಿಷ್ಟಾದ್ವೈತ, ಶುದ್ಧಾದ್ವೈತ, ದ್ವೈತಾದ್ವೈತ ಎಂದು ಉಪಶಾಖೆಗಳೂ ಹುಟ್ಟಿಕೊಂಡಿರುವುವು.

ದ್ವೈತಮತವನ್ನು ಪ್ರತಿಷ್ಠಾಪಿಸಿದವರು ಶ್ರೀಮಧ್ವಾಚಾರ್ಯರೇ ಆದುದರಿಂದ, ದ್ವೈತಮತವನ್ನು ಮಾಧ್ವಮತವೆಂದು ಹೆಸರಿಟ್ಟು ಹೇಳುವುದೂ ಉಂಟು. ಮಾಧ್ವಮತಾನುಯಾಯಿಗಳ ಸಂಖ್ಯೆ ಹೆಚ್ಚಾಗಿ ಕರ್ನಾಟಕದಲ್ಲಿಯೆ ಇರುವುದು. ಆಂಧ್ರ, ದ್ರಾವಿಡ, ಮಹಾರಾಷ್ಟ್ರ, ಮಲೆಯಾಳಗಳಲ್ಲಿಯೂ ಕೆಲ-ಕೆಲವು ಮಾಧ್ವಮತೀಯ ಕುಟುಂಬಗಳಿರುವುವು. ಬಂಗಾಲದಲ್ಲಿ ರೂಢವಾಗಿರುವ ಚೈತನ್ಯಪಂಥವು ಮಾಧ್ವಮತದ ಪ್ರಭಾವದಿಂದಲೇ ಹುಟ್ಟಿ ಬೆಳೆದುದಾದುದರಿಂದ, ಅಲ್ಲಿಯ ಚೈತನ್ಯಪಂಥೀಯರನ್ನು ಮಾಧ್ವರ ಎಣಿಕೆಯಲ್ಲಿ— ಅವರು ಒಪ್ಪಿದರೆ— ಹಿಡಿಯಬಹುದಾಗಿದೆ. ಆದುದರಿಂದಲೇ ಉಡುಪಿಯಲ್ಲಿ ನೆರೆಯಲಿರುವ ಮಾಧ್ವಸಮ್ಮೇಳನವನ್ನು, 'ಅಖಿಲ ಭಾರತ ಮಾಧ್ವಸಮ್ಮೇಳನ' ಎಂದು ಕರೆದರೆ, ಅದಕ್ಕೆ ಅತಿಶಯೋಕ್ತಿಯ ದೋಷವೇನೂ ಬರಲಾರದು. ಮಾಧ್ವಮತದಲ್ಲಿ ನಿಜವಾದ ಶ್ರದ್ಧೆಯಿರುವ ಜನರೆಲ್ಲ ಇಂದು ಒಂದೆ ಎಡೆಯಲ್ಲಿ ಸೇರಿ, ಅಭ್ಯುದಯ-ನಿಶ್ರೇಯಸಗಳ ಬಗೆಗೆ ವಿಚಾರವಿನಿಮಯ ಮಾಡಿ, ಹೃದಯಸಂಬಂಧವನ್ನು ಹೆಚ್ಚಿಸಿಕೊಳ್ಳಬೇಕಾದ ಕಾಲ ಈಗ ಬಂದಿದೆ. ಉಡುಪಿಯ ಪೇಜಾವರ ಮಠದ— ಪ್ರಾಗತಿಕ ವಿಚಾರದವರಾದ— ಸ್ವಾಮಿಗಳು, ಅದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡಲು ಸಿದ್ಧರಾಗಿ, ಈ ಮಹಾಸಮ್ಮೇಳನವನ್ನು ನೆರೆಯಿಸುವ ಹೊಣೆಯನ್ನು ಹೊತ್ತುನಿಂತುದು ಪ್ರಶಂಸನೀಯವಾದ ಸಂಗತಿ.

ಒಂದು ವಿಷಾದದ ಸಂಗತಿಯೆಂದರೆ ಮಾಧ್ವಮತಾನುಯಾಯಿಗಳಲ್ಲಿ ಇಂದು ಅನೇಕ ಪಂಗಡಗಳುಂಟಾಗಿ, ಪಂಗಡ-ಪಂಗಡಗಳಲ್ಲಿ ಜಗಳಾಟ ಕಾದಾಟಗಳು ನಡೆದು, ಪರಸ್ಪರರಲ್ಲಿ ವೈಮನಸ್ಯ-ವಿತುಷ್ಟಿಗಳು ಬೆಳೆಯುತ್ತಿವೆ. ಈ ಪಂಗಡಗಳ ನಿರ್ಮಿತಿಗೆ ಗುರುಪೀಠಗಳೇ ಮುಖ್ಯಕಾರಣ. ಒಂದು ಕಾಲದಲ್ಲಿ ಅನುಕೂಲತೆಗಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆಗೊಂಡ ಗುರುಪೀಠಗಳು, ಕಾಲಾಂತರದಲ್ಲಿ ಎಂತೆಂತಹವೋ ಅಭಿನಿವೇಶಗಳಿಗೊಳಗಾಗಿ, ಪರಸ್ಪರ ದ್ವೇಷ-ಮತ್ಸರಗಳನ್ನು ಹರಡುವುದಕ್ಕೆ ಕಾರಣವಾದುದು ಐತಿಹಾಸಿಕ ಸತ್ಯ. ಗುರುಗಳು ಹೇಳಿದಂತೆ ಶಿಷ್ಯರು ನಡೆಯಬೇಕು. ಗುರುಪೀಠಗಳ ಪರಸ್ಪರ ದ್ವೇಷ-ಮತ್ಸರಗಳು ಅನುಯಾಯಿ ವರ್ಗದಲ್ಲಿಯೂ ಇಳಿ[illegible] ನಾವು ನೋಡಬಹುದು: ಉತ್ತರಾದಿಮಠ, ಶ್ರೀರಾಘವೇಂದ್ರಸ್ವಾಮಿಗಳ ಮಠ, ಶ್ರೀವ್ಯಾಸರಾಯರ ಮಠ, ಶ್ರೀ[illegible] ಮಠ ಎಂಬ ಭೇದಭಾವಗಳು ಮಾಧ್ವಸಮಾಜದಲ್ಲಿ ತೀವ್ರವಾಗಿರುತ್ತವೆ. ಪ್ರಾದೇಶಿಕ ಅನುಕೂಲತೆಯಂತೆ, ಬೇರೆ ಬೇರೆ ಗುರುಪೀಠದವರು ಲೌಕಿಕ ಆಚಾರ-ವಿಚಾರಗಳಲ್ಲಿ ಅಲ್ಪ-ಸ್ವಲ್ಪ ವ್ಯತ್ಯಾಸಗಳು ಕಂಡುಬರುವುವು. ಈ ಆಚಾರ ವ್ಯತ್ಯಾಸಗಳು ಪರಸ್ಪರರ ಹಿಂದೆಗೆ ಕೆಟ್ಟ ಕಳೆಯನ್ನು ಕೊಡುತ್ತಿರುವುದು ಆಶ್ಚರ್ಯದ ಸಂಗತಿ. ಉದಾಹರಣೆಗಾಗಿ: ಚಾತುರ್ಮಾಸದ [illegible]ನೆಯ ವ್ರತದಲ್ಲಿ ಮಾಧ್ವರಿಗೆ ಆಹಾರದಲ್ಲಿ ದ್ವಿದಲ-ಬಹುಬೀಜಗಳು ವರ್ಜವೆಂದು ಹೇಳಿದೆ; ಆದರೆ ಶ್ರೀರಾಘವೇಂದ್ರರ ಮಠದಲ್ಲಿ, ಈ ವ್ರತಕಾಲದಲ್ಲಿ ಸಾಸಿವೆಯನ್ನು ಬಳಸುವ ಆಚಾರವಿದೆ. ಇದೊಂದು ಸಣ್ಣ ಆಚಾರವೇ ಮಿಕ್ಕ ಮಠದ ಅನುಯಾಯಿಗಳಿಗೆ ಮಹಾಪರಾಧವಾಗಿ ಕಂಡು, ರಾಘವೇಂದ್ರ ಮತಾನುಯಾಯಿಗಳು ಧರ್ಮಬಾಹಿರರಾಗಿ ಕಾಣುವರು. ಇಂತಹ ಸಣ್ಣ-ಪುಟ್ಟ ಆಚಾರಭೇದದ ಉದಾಹರಣೆಗಳನ್ನು ಬೇಕಾದಷ್ಟು ಹೇಳಬಹುದು.

ಮಾಧ್ವ ಗುರುಪೀಠದಲ್ಲಿಯ ಇನ್ನೊಂದು ಮುಖ್ಯ ಜಗಳವೆಂದರೆ, ಮೂಲರಾಮದೇವರದು. ಶ್ರೀಮನ್ಮಧ್ವಾಚಾರ್ಯ ಕರಾರ್ಜಿತ ಮೂಲರಾಮದೇವರು ತಮ್ಮ ಮಠದಲ್ಲಿಯೇ ಇದೆಯೆಂದು ಮೂರು ಪ್ರಮುಖ ಮಠಗಳಲ್ಲಿ ವಾದ. ಅದಕ್ಕಾಗಿ ದ್ವೇಷ-ಮತ್ಸರ. ಶ್ರೀವಾದಿರಾಜರನ್ನೂ ಅವರ ಅನುಯಾಯಿಗಳು ವಾಯ್ವಂಶರೆಂದು ಹೇಳುವುದು ಮಿಕ್ಕ ಗುರುಪೀಠಗಳಿಗೆ ಒಪ್ಪಿಗೆಯಿಲ್ಲ. ಅದಕ್ಕಾಗಿ [illegible]ರ ಮನೋವೈಕಲ್ಯ.

[illegible] ಒಪ್ಪಿಕೊಂಡುದು ಒಂದೆ ಮತತತ್ತ್ವ ಎಲ್ಲರೂ ಮನ್ನಣೆ[illegible] ಅಧ್ಯಯನಮಾಡುವುದು ಅವೇ ಗ್ರಂಥಗಳನ್ನು. ಎಲ್ಲರೂ [illegible] ಒಂದೆ ಬಗೆಯ ಅಧ್ಯಾತ್ಮವನ್ನು. ಆದರೂ ಮಾಧ್ವಮತಾನುಯಾಯಿಗಳಲ್ಲಿ ಇಂದು ಪರಸ್ಪರ ಸೌಹಾರ್ದವಿಲ್ಲ; [illegible]ಲೇ ಅವರಲ್ಲಿ ಸರಿಯಾದ ಸಂಘಟನೆಯಿಲ್ಲ. ಇದೊಂದು [illegible]ಬೇಕಾದ ಸಂಗತಿ.

ಇಂದು ಕಾಲವು ಸಂಪೂರ್ಣವಾಗಿ ಬದಲಾಗಿದೆ. ಜಗತ್ತಿನಲ್ಲಿಯ ವಿಶ್ವ ಮತತತ್ತ್ವಗಳನ್ನೂ ಸಮನ್ವಯದೃಷ್ಟಿಯಿಂದ ನೋಡಬೇಕಾದ ವಿಚಾರ ಎಲ್ಲೆಲ್ಲಿಯೂ ಮೂಡುತ್ತಲಿದೆ. ವಿಜ್ಞಾನದ ಪ್ರಗತಿಯು ಇಂದು ನಮ್ಮ ಜೀವನದಲ್ಲಿ ವೇಗ-ಶಕ್ತಿಗಳನ್ನು ಹೆಚ್ಚಿಸಿ, ದೂರದ ಪ್ರದೇಶವನ್ನೂ ಹತ್ತಿರಕ್ಕೆ ತಂದು ನಿಲ್ಲಿಸಿ, ಮಾನವನ ಮನಸ್ತತ್ತ್ವವನ್ನು ತಿಳುಹಿಕೊಟ್ಟು, ನಮಗೆ ವಿಶಾಲವಾದ ಅಂತರ್ದೃಷ್ಟಿಯನ್ನು ಒದಗಿಸಿಕೊಟ್ಟಿದೆ. ಸರ್ವಧರ್ಮಸಮ್ಮೇಳನಗಳು ಸೇರಿ, ಮಾನವನಲ್ಲಿ ಸಮನ್ವಯಬುದ್ಧಿ- ಸೌಹಾರ್ದಗಳನ್ನು ಹೆಚ್ಚಿಸಬೇಕಾದ ಈ ಕಾಲದಲ್ಲಿ, ಒಂದೆಮತದ ಅನುಯಾಯಿಗಳಾದ ಮಾಧ್ವರು, ಚಿಕ್ಕಪುಟ್ಟ ಆಚಾರಭೇದಗಳನ್ನು ಮರೆತು, ಸುಸಂಘಟಿತರಾಗಿ ನಡೆಯಬೇಕಾದುದು ಅತ್ಯಗತ್ಯವಾದ ಮಾತಲ್ಲವೆ? ನಮ್ಮ ಗುರುಪೀಠಗಳ ಮೇಲೆ ಕುಳಿತು ಮೆರೆಯುವ ಗುರುವರ್ಗವು, ಇಂದಿನ ಕಾಲದ ಬೇಡಿಕೆಯ ಅರ್ಥವನ್ನು ಸರಿಯಾಗಿ ಮಾಡಿಕೊಳ್ಳಬೇಕು. ವೈಭವ–ಅಧಿಕಾರಗಳ ವೈಯಕ್ತಿಕ ಅನುಭವಕ್ಕಿಂತ, ಸನ್ಮತದ ಪ್ರಚಾರವು ಅತ್ಯಗತ್ಯದ ಕರ್ತವ್ಯವೆಂಬುದನ್ನು ಮನವರಿಕೆ ಮಾಡಿಕೊಳ್ಳಬೇಕು. ಗುರುವರ್ಗದ ಜೀವನಪತನವೇ ಶಿಷ್ಯಕೋಟಿಯ ಜೀವನಪತನಕ್ಕೆ ಕಾರಣವಾಗುವುದೆಂಬ ಮಾತನ್ನು, ನಮ್ಮ ಗುರುಪೀಠಗಳಿಗೆ ಪ್ರತ್ಯೇಕವಾಗಿ ಹೇಳಿಕೊಡಬೇಕಾದ ಕಾರಣವೇನೂ ಇಲ್ಲ.

ಇಂದು ಯಾವ ಮತಾನುಯಾಯಿಗೂ ತನ್ನ ಮತದ ವಿಷಯಕವಾದ ತಿಳಿವಳಿಕೆಯಿಲ್ಲ. ಎಂತಲೇ ಅವರಿಂದು ಮತಧರ್ಮದ ವಿಷಯದಲ್ಲಿ ನಿಷ್ಠೆಯಿಲ್ಲದೆ ವ್ಯಭಿಚಾರಿಯಾಗುತ್ತಿದ್ದಾರೆ. ತಮ್ಮ ಮತವಿಷಯಕವಾದ ಸಂಪೂರ್ಣಜ್ಞಾನ ಅವರಿಗಿರುತ್ತಿದ್ದರೆ, ಯಾವು-ಯಾವುವೋ ಅಮುಖ್ಯವಾದ ಪಂಥಪ್ರಚಾರಕರ ಬೆನ್ನುಹತ್ತಿ ಹೋಗುತ್ತಿರಲಿಲ್ಲ. ಮಾಧ್ವಮತದ ತತ್ತ್ವ-ಪ್ರಕ್ರಿಯೆಗಳು ಸಂಸ್ಕೃತ ಗ್ರಂಥಗಳಲ್ಲಿ ಬೇಕಾದಷ್ಟು ಇವೆ. ಆದರೆ ಆ ಗ್ರಂಥಗಳನ್ನು ಅಧ್ಯಯನಮಾಡಲಿಕ್ಕೆ ಬಿಡುವು ಯಾರಿಗಿದೆ? ಸಂಸ್ಕೃತಭಾಷೆ ಕಲಿಯಬೇಕು; ಪರಿಭಾಷೆಗಳಿಂದ ಕೂಡಿದ ಪ್ರಮೇಯಗಳನ್ನು ತಿಳಿದುಕೊಳ್ಳಬೇಕು. ಇದು ಸಾಧ್ಯವಿರುವವರೆಷ್ಟು ಜನರು? ಆದುದರಿಂದಲೇ ಮಾಧ್ವಮತಾನುಯಾಯಿಗಳಲ್ಲಿಯ ಹಲವು ಜನರು, ತಮಗೆ ತಿಳಿಯುವಂತಹ ಮಾತುಗಳಲ್ಲಿ ಸುಲಭವಾಗಿ ಹೇಳುವ ವೇದಾಂತ ಮತಗಳತ್ತ ತಿರುಗುತ್ತಲಿದ್ದಾರೆ. ಇದರಿಂದ ಪ್ರತಿಯೊಂದು ಗುರುಪೀಠಗಳೂ ತಮ್ಮ ಕರ್ತವ್ಯದ ಪಾಠಗಳನ್ನು ಅರಿತುಕೊಳ್ಳಬೇಕು. ಮತಪ್ರಮೇಯಗಳನ್ನು ಮುಚ್ಚಿ ಇಟ್ಟು, ಅನುಯಾಯಿಗಳಲ್ಲಿ ಮತವಿಷಯಕವಾದ ಅಜ್ಞಾನವು ನೆಲಸಿರುವಂತೆ ಮಾಡಿದರೆ, ಇನ್ನು ಅದರಿಂದ ಉಪಯೋಗವೇನೂ ಆಗದು. ಆದುದರಿಂದ, ಅಚ್ಚುಮಾತಿನಲ್ಲಿ – ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ— ಎಲ್ಲರಿಗೂ ಸುಲಭ ಬೆಲೆಯಲ್ಲಿ ಸಿಕ್ಕುವಂತೆ— ಮಾತೃಭಾಷೆಯಲ್ಲಿ ಗ್ರಂಥಗಳನ್ನು ಬರೆಯಿಸಬೇಕು. ಆಚಾರಭೇದಗಳನ್ನು ಪರಸ್ಪರರು ಸಹಾನುಭೂತಿಯಿಂದ ಕಂಡು, ಅವು ಮತಪ್ರಪಂಚದಲ್ಲಿ ಮಹತ್ತ್ವದ ಮಾತುಗಳಲ್ಲವೆಂಬುದನ್ನು ಎಲ್ಲ ಗುರುವರ್ಗವೂ ಪ್ರಚಾರವನ್ನು ಕೈಕೊಳ್ಳಬೇಕು. ಮಾಧ್ವ-

[illegible]ಳನೆಯ ಪುಟಕ್ಕೆ ಮುಂದುವರಿದಿದೆ.

ನಾಡನಡೆ

★

ಬೆಳಗಾಂವಿಯಲ್ಲಿ ಕನ್ನಡಕ್ಕೆ ಅಪಮಾನ

ಪತ್ರಿಕೆಯಲ್ಲಿ ಬಂದ ವೃತ್ತಗಳನ್ನೋದಿದವರಿಗೆ, ಬೆಳಗಾಂವಿಯ ನಗರಸಭೆಯು ಬಹುಸಂಖ್ಯಾಬಲದಿಂದ, ಕನ್ನಡನುಡಿಯ ಕುತ್ತಿಗೆ ಹಿಸುಕುವ ಕಾರ್ಯ ನಡೆಯಿಸಿದುದು ಗೊತ್ತಾಗಿರಬಹುದು. ಬೆಳಗಾಂವಿಯಲ್ಲಿ ಕನ್ನಡಕ್ಕೆ ಈ ರೀತಿಯ ದುರ್ದಶೆಯೊದಗುವಂತಹ ಪರಿಸ್ಥಿತಿಯನ್ನುಂಟು ಮಾಡಿದವರು, ಅಲ್ಲಿಯ ನಮ್ಮ ಮುಂದಾಳುಗಳೇ ಎಂದು ಹೇಳಬಹುದು. ಸಂಪೂರ್ಣ ಕನ್ನಡ ನಗರವಾದ ಬೆಳಗಾಂವಿಯು ಈ ರೀತಿಯಲ್ಲಿ ಮರಾಟಿಗರ ಮುಷ್ಟಿಯಲ್ಲಿ ಸಿಕ್ಕುವಂತೆ ಮಾಡಿದವರು, ಬೆಳಗಾಂವಿಯ ಕನ್ನಡ ನಾಯಕರೇ ಎಂದು ಘಂಟಾಘೋಷವಾಗಿ ಹೇಳಬೇಕಾಗಿದೆ. ಬೆಳಗಾಂವಿಯ ನಗರಸಭಾಧ್ಯಕ್ಷಸ್ಥಾನದ ಚರಿತ್ರೆಯನ್ನು ನೋಡಿದರೆ, ಹಿಂದಿನ ದಿನಗಳಲ್ಲಿ ಹಲವು ವರ್ಷ ಕನ್ನಡಿಗರೆನ್ನಿಸಿಕೊಳ್ಳುವವರೇ ಇದ್ದುದು ತಿಳಿದುಬರುವುದು. ಅವರೆಲ್ಲ ಅಧಿಕಾರಸ್ಥಾನದಲ್ಲಿ ಇರುವಾಗ, ಮನಸ್ಸು ಮಾಡಿದ್ದರೆ, ಯಾರೂ ಮೈಗೆ ಕೈ ಹಚ್ಚದಷ್ಟು, ಕನ್ನಡದ ಸ್ಥಾನವನ್ನು ಭದ್ರಗೊಳಿಸಬಹುದಾಗಿತ್ತು. ಆದರೆ ಅದನ್ನವರು ಎಂದೂ ಮಾಡಲಿಲ್ಲವಿಷ್ಟೇ ಅಲ್ಲ; ಮಾಡಬೇಕೆನ್ನುವವರಿಗೆ ತಾವೂ ವಿರೋಧಿಗಳಾಗಿ ನಿಲ್ಲುತ್ತಿದ್ದರು. ಹಿರಿಯರಾದ ಶ್ರೀಮಾನ್ ಬೆಳವಿ ದತ್ತರಾಯರು, ಕನ್ನಡಿಗರಾದರೂ ನಿಷ್ಪಕ್ಷಪಾತದ ಆವಿರ್ಭಾವದಿಂದ, ಬೆಳಗಾಂವಿ-ಚಿಕ್ಕೋಡಿ-ಖಾನಾಪುರ ಮೊದಲಾದ ಭಾಗದ ಕೋರ್ಟುಗಳಲ್ಲಿ ಕನ್ನಡ-ಮರಾಟಿ ಎರಡೂ ಇರಬೇಕೆಂದು ಗಟ್ಟಿಮುಟ್ಟಾಗಿ ಹೇಳಿದ್ದರು. ಆದರೆ ಬೆಳಗಾಂವಿ ನಗರಸಭೆಯಲ್ಲಿ ಕನ್ನಡಕ್ಕೂ ಸ್ಥಾನವನ್ನು ಕೊರಕಿಸಿಕೊಡಬೇಕೆಂಬುದರ ಕಡೆಗೆ ಲಕ್ಷ್ಯಕೊಡಲಿಲ್ಲ. ಆ ಮೇಲೆ ಬೆಳಗಾಂವಿ ನಗರಸಭೆಯು ಹದಿನಾರಾಣೆ ಕನ್ನಡಿಗರಾದ ಶ್ರೀ. ಭೀಮರಾವ್ ಪೋತದಾರ ಅವರ ನೇತೃತ್ವದಲ್ಲಿಯೇ ನಡೆಯುತ್ತಿದ್ದಿತು. ಆ ಕಾಲದಲ್ಲಿಯೂ ಕನ್ನಡ ಭಾಷೆಗೆ ನಗರಸಭೆಯಲ್ಲಿ ಸ್ಥಾನ ಸಿಕ್ಕಲಿಲ್ಲ. ಇಷ್ಟೇ ಅಲ್ಲ, ಚುನಾವಣೆಯಲ್ಲಿ ತಮ್ಮ ಪಕ್ಷಕ್ಕೇ ಗೆಲವು ಬರಬೇಕೆಂಬ ಹಿರಿದ ಸ್ವಾರ್ಥಲೋಭದಿಂದ, ನಗರಲ್ಲಿಯ ಮತದಾರರ ವಾರ್ಡುಗಳನ್ನು ವಿಕ್ಷಿಪ್ತರೀತಿಯಲ್ಲಿ ಒಡೆಯಲಾಯಿತು. ಇದರ ಪರಿಣಾಮವೆಂದರೆ, ನಗರಸಭೆಯ ಸದಸ್ಯರಲ್ಲಿ ಕನ್ನಡಿಗರು ಬಹುಸಂಖ್ಯೆಯಲ್ಲಿ ಆರಿಸಿಬರುವ ಸಂದರ್ಭವು ಶಾಶ್ವತವಾಗಿ ತಪ್ಪಿಹೋಯಿತು. ಇಷ್ಟು ಮಾತ್ರ ತಮಗೇ ತಿರುಗಿ, ಈಗ ಕನ್ನಡಿಗರಾರೂ ನಗರಸಭೆಯಲ್ಲಿ ಹೊಣೆಗಾರಿಕೆಯ ಸ್ಥಾನಕ್ಕೆ ಆರಿಸಿಬಾರದಂತಾಗಿ ಕುಳಿತಿತು. ಸ್ವಪಕ್ಷ ದೃಷ್ಟಿಯಿರದ ಸ್ವಾರ್ಥಿಮುಂದಾಳುಗಳ ಅನುಯಾಯಿಗಳು, ಕೊನೆಗೆ ಇಂತಹ ಕಹಿಫಲವನ್ನೇ ಉಣ್ಣಬೇಕಾಗುವುದು. ಬೆಳಗಾಂವಿಯ ಕನ್ನಡಿಗರಿಗೆ ಅಂತಹ ಸಂದರ್ಭವೀಗ ಪ್ರತ್ಯಕ್ಷವಾಗಿ ಒದಗಿಬಂದಿದೆ. ಹೊರಗಿನಿಂದ ಬಂದು ಹೊಕ್ಕ ಭೂತಗಳು ನಗರದ ಸೂತ್ರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು, ಕನ್ನಡಿಗರ ಗಂಡು ಮೆಟ್ಟಾದ ಬೆಳಗಾಂವಿ ನಗರದಲ್ಲಿ, ಕನ್ನಡವನ್ನು ತಬ್ಬಲಿ ಕೂಸಿನಂತೆ ಮಾಡಲು ನಿಂತಿವೆ. ಅಂದು ಕಣ್ಣುಮುಚ್ಚಿ ತಮ್ಮ ಸ್ವಾರ್ಥವೊಂದನ್ನೇ ನೋಡಿದ ನಮ್ಮ ಮುಂದಾಳುಗಳು, ಬೆಳಗಾಂವಿಯ ಇಂದಿನ ಪರಿಸ್ಥಿತಿಯನ್ನು ಕಣ್ಣುತೆರೆದು ನೋಡುತ್ತಿರುವರೆ? ತಾವು ಕನ್ನಡದ ವಿಷಯದಲ್ಲಿ ತೋರಿಸಿದ ಉಪೇಕ್ಷೆಯ ವಿಷಫಲವನ್ನು ಬೆಳಗಾಂವಿಯ ಕನ್ನಡಿಗರ ಸಂತಾನವೇ ಉಣ್ಣಬೇಕಾಗಿದೆಯೆಂಬುದನ್ನವರು ನೋಡಲಿ! ತಾವು ಮಾಡಿದ ಪಾಪಕ್ಕೆ ತಮ್ಮ ಬಳಗವೆಲ್ಲ ಪ್ರಾಯಶ್ಚಿತ್ತವನ್ನು ಪಡೆಯಬೇಕಾಗಿದೆಯೆಂಬುದನ್ನು ನೆನೆದುಕೊಳ್ಳಲಿ!

* * * *

ಬೆಳಗಾಂವಿ ಕನ್ನಡಿಗರದಲ್ಲವೆ?

ಎಷ್ಟೋ ಜನ ಕನ್ನಡಿಗರೇ ಹೀಗೆ ಸಂಶಯದಿಂದ ಮಾತನಾಡುತ್ತಿರುವುದು ಆಶ್ಚರ್ಯದ ಸಂಗತಿ— ವಿಷಾದದ ಮಾತು! ಬಹಳ ಹಿಂದಿನ ಕಾಲದ ಇತಿಹಾಸವನ್ನು ಬಿಟ್ಟುಬಿಡೋಣ. ಮುಂಬಯಿ ಕರ್ನಾಟಕದ ಗ್ಯಾಜಿಟಿಯರಿನಲ್ಲಿ ಬಂದ ಬೆಳಗಾಂವಿಯ ವಿವರಣೆಯನ್ನು ನೋಡಿರಿ. ೧೯ನೆಯ ಶತಮಾನದ ಉತ್ತರಾರ್ಧದ ಕೊನೆಯ ಭಾಗದಲ್ಲಿಯೂ ಬೆಳಗಾಂವಿ ನಗರದಲ್ಲಿ ಏಳು ಕನ್ನಡ ಶಾಲೆಗಳಿದ್ದುವಂತೆ; ಒಂದೆ ಒಂದು ಮರಾಟಿ ಶಾಲೆಯಿದ್ದಿತಂತೆ. ಮುಂದೆ ಬ್ರಿಟಿಷರ ಆಡಳಿತದಲ್ಲಿ ಬೆಳಗಾಂವಿ ದಂಡಿನ ಠಾಣ್ಯವಾದದರಿಂದ, ಅಲ್ಲಿಯಿಲ್ಲಿಯ ಜನರು ಬಂದು ಇಲ್ಲಿ ನೆಲೆಯೂರಲು ತೊಡಗಿದರು. ಕರ್ನಾಟಕದಲ್ಲಿ ಉಚ್ಚಶಿಕ್ಷಣದ ಅನುಕೂಲತೆಯಿರಲಿಲ್ಲವಾದುದರಿಂದ, ದೊಡ್ಡ ದೊಡ್ಡ ಅಧಿಕಾರಿಗಳು, ವಕೀಲರು, ಡಾಕ್ಟರರು, ಸರಕಾರಿ ನೌಕರರು— ಎಲ್ಲರೂ ಮಹಾರಾಷ್ಟ್ರದ ಕಡೆಯಿಂದ ಬಂದು, ಬೆಳಗಾಂವಿಯಲ್ಲಿ ಗುಂಪುಗೂಡಿದರು. ಊರು ಬೆಳೆದಂತೆ ವ್ಯಾಪಾರ ಬೆಳೆಯಿತು. ಬೆಳಗಾಂವಿಯ ವ್ಯಾಪಾರಕ್ಷೇತ್ರದಲ್ಲಿ ಕನ್ನಡಿಗರು ಔದಾಸೀನ್ಯ ತೋರಿಸಿದುದರಿಂದ, ಎಲೆಯಡಿಕೆಯ ಅಂಗಡಿಯಿಂದ ರತ್ನಪಡಿಯ ಅಂಗಡಿಯವರೆಗೆ ಎಲ್ಲ ವ್ಯಾಪಾರವೂ ಕೊಂಕಣದಿಂದ ಬಂದು ನಿಂತ ಅನ್ಯಭಾಷೆಯವರ ಕೈಸೇರಿತು. ನಗರದಲ್ಲಿ ಸಿರಿವಂತರ ವರ್ಗ ಹೆಚ್ಚಿತು; ಊಳಿಗದವರ ಆವಶ್ಯಕತೆಯೆನಿಸಿತು. ಕನ್ನಡಿಗರು ಇಂತಹ ಕೆಲಸಕ್ಕೆ ಸಿದ್ಧರಾಗುವವರಲ್ಲ. ಆದುದರಿಂದ, ಊಳಿಗದ ಕೆಲಸಕ್ಕಾಗಿಯೂ ಕೊಂಕಣದ ಬಡಜನ ಬಂದು ಮನೆಮಾಡಿಕೊಂಡು ನಿಂತಿತು. ಇವೆಲ್ಲ ಕಾರಣಗಳಿಂದಾಗಿ ಬೆಳಗಾಂವಿಯಲ್ಲಿ ಮರಾಟಿ ಮಾತನಾಡುವವರ ಸಂಖ್ಯೆ ಬೆಳೆದುದೇನೂ ಸುಳ್ಳಲ್ಲ. ಅದರಲ್ಲಿಯೂ ಬೆಳಗಾಂವಿಯ ನಗರದ ಸುತ್ತು-ಮುತ್ತಲೂ ವ್ಯಾಪಿಸಿಕೊಂಡಿದ್ದ ಪಟವರ್ಧನ ಸಂಸ್ಥಾನಗಳ ಆಡಳಿತದ ಕನ್ನಡದ ಬಹಿಷ್ಕಾರದ ಪರಿಣಾಮವೂ ಬೆಳಗಾಂವಿಯ ಮೇಲೆ ಆಯಿತು. ಅಂದಿನ ರಾಜಕೀಯ ಚಟುವಟಿಕೆಗಳು ಮಹಾರಾಷ್ಟ್ರದಿಂದ ನುಗ್ಗಿಬರುತ್ತಿದ್ದುದರಿಂದ; ಅದರ ಪ್ರಭಾವವೂ ಬೆಳಗಾಂವಿಯ ಕನ್ನಡಿಗರ ಮೇಲೆ

ಆಯಿತು. ಈ ಸಂಕ್ರಮಣ ಕಾಲದಲ್ಲಿ ಬೆಳಗಾಂವಿಯಲ್ಲಿಯ ಹಲವಾರು ಕನ್ನಡ ಪ್ರಮುಖ ಕುಟುಂಬಗಳು ಕುಲಗೆಟ್ಟು ಮಹಾರಾಷ್ಟ್ರದ ಮುದ್ರೆ ಹಾಕಿಸಿಕೊಂಡು ಹೊರಟುವು. ಈಗ ಸಧ್ಯ ಬೆಳಗಾಂವಿಯ ನಗರ ಸಭೆಯ ಅಧ್ಯಕ್ಷೆಯರಾಗಿ ಮಹಾರಾಷ್ಟ್ರದ ಧ್ವಜವನ್ನು ಎತ್ತಿ ಹಿಡಿಯಲು ನಿಂತ ಸೌ ಶಾಂತಾಬಾಯಿ ನರಗುಂದಕರ ಅವರು ಸೊಸೆಯಾಗಿ ಬೆಳಗಾಂವಿಗೆ ಬಂದುದು, ಇಂತಹ ಕುಲಗೆಟ್ಟ ಕನ್ನಡ ಮನೆತನವೊಂದಕ್ಕೇ ಎಂಬುದನ್ನು ಯಾರೂ ಮರೆಯಲಾಗದು. ನರಗುಂದಕರ ಮನೆತನದವರು ಕನ್ನಡದ ರುಮಾಲು ಬಿಟ್ಟು ಮಹಾರಾಷ್ಟ್ರದ ಪಗಡಿಯನ್ನು ತಲೆಗಿಟ್ಟುಕೊಂಡುದನ್ನು ನೋಡಿದವರು, ಬೆಳಗಾಂವಿಯಲ್ಲಿ ಇನ್ನೂ ಬಹುಜನರಿದ್ದಾರೆ. ಇಷ್ಟಾದರೂ ನಿಷ್ಪಕ್ಷಪಾತವಾಗಿ ತಲೆಯೆಣಿಕೆ ಮಾಡಿದರೆ, ಬೆಳಗಾಂವಿಯಲ್ಲಿ ಕನ್ನಡಿಗರ ಸಂಖ್ಯೆಯೆ ಹೆಚ್ಚಾಗುವುದು ಖಂಡಿತವಾದ ಮಾತು. ಕಾರಣಾಂತರದಿಂದ ಮಹಾರಾಷ್ಟ್ರೀಯರು ಬೆಳಗಾಂವಿಯಲ್ಲಿ ಬಂದು ನೆಲೆಗೊಂಡ ಮಾತ್ರಕ್ಕೆ, ಬೆಳಗಾಂವಿ ಕರ್ನಾಟಕದಿಂದ ಹೊರಗಾಗುವುದೇ ? ಬೆಳಗಾಂವಿಯನ್ನು ಬಿಟ್ಟು, ಅದರ ಸುತ್ತುಮುತ್ತಣ ಐವತ್ತು ಕ್ರೋಶಿಯಲ್ಲಿ ಇರುವ ಹಳ್ಳಿಗಳನ್ನು ನೋಡಬಹುದು; ಅವೆಲ್ಲ ಈಗಲೂ ಅಚ್ಚ ಕನ್ನಡಿಗರಿಂದ ತುಂಬಿರುವುದನ್ನು ನಾವು ಕಣ್ಣಾರೆ ಕಾಣಬಹುದು.

* * * *

ನಮ್ಮವರ ಹೊಣೆಗೇಡಿತನ

ಬೆಳಗಾಂವಿಯಲ್ಲಿ ಕನ್ನಡ ನುಡಿಗೂ ಕನ್ನಡಿಗರಿಗೂ ಇಷ್ಟೊಂದು ಉತ್ತುಸುರು ಬಿಡುವಂತಹ ದುರವಸ್ಥೆಯೊದಗಿದ್ದರೂ, ಮುಂಬಯಿ ಸರಕಾರದಲ್ಲಿರುವ ಕನ್ನಡ ಮಂತ್ರಿಗಳೂ ಅಸೆಂಬ್ಲಿಯ ಸದಸ್ಯರೂ, ಇದುವರೆಗೂ ನಿಷ್ಕ್ರಿಯರಾಗಿ ಕುಳಿತಿರುವುದು ದುಃಖದ ಸಂಗತಿಯಾಗಿದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯೂ, ಬೆಳಗಾಂವಿ ಜಿಲ್ಲಾ ಕಾಂಗ್ರೆಸ್ ಸಮಿತಿಯೂ ಇದುವರೆಗೂ ಇದರ ವಿಚಾರವನ್ನು ತಲೆಯಲ್ಲಿ ಹಾಕಿಕೊಂಡಂತೆ ಕಾಣುವದಿಲ್ಲ. ಪ್ರಸಂಗವೊದಗಿದಾಗಲೆಲ್ಲ ಕನ್ನಡಿಗರಿಗೆ ಬುದ್ಧಿಹೇಳಲು ಬರುವ ಬೆಳಗಾಂವಿಯ ಕರ್ನಾಟಕಸಿಂಹ ಗಂಗಾಧರರಾಯರೂ ನಗರ ಪಿತಾಮಹ ಶ್ರೀ. ಬೆಳವಿ ದತ್ತರಾಯರೂ ಈಗ ಬಾಯಿಮುಚ್ಚಿಕೊಂಡು ಸುಮ್ಮಗೆ ಏಕೆ ಕುಳಿತಿದ್ದಾರೆ? ಜಿಲ್ಲಾ ಬೋರ್ಡ್ ಸದಸ್ಯರಲ್ಲಿ ಒಬ್ಬಿಬ್ಬರು ವೈಯಕ್ತಿಕವಾಗಿ ಗಟ್ಟಿಮುಟ್ಟಾಗಿ ಮಾತನಾಡಿದ್ದಾರೆಯೇನೋ ಸರಿಯೆ; ಆದರೆ ಜಿಲ್ಲಾ ಬೋರ್ಡು ಇದರ ಬಗೆಗೆ ತನ್ನ ನಿಷೇಧವನ್ನು ಪ್ರತ್ಯಕ್ಷವಾಗಿ ತೋರಿಸಬಾರದೇಕೆ?

ಕನ್ನಡಿಗರೆ, ಬೆಳಗಾಂವಿ ನಗರದ ಕನ್ನಡಿಗರ ಕಳವಳವನ್ನು ಮನದಂದು ನೋಡಿರಿ! ಎಲ್ಲರೂ ಈ ಸಂದರ್ಭದಲ್ಲಿ ಅವರಿಗೆ ಸಹಾನುಭೂತಿ-ಸಹಕಾರಗಳನ್ನು ತೋರಿಸದೆ ಹೋದರೆ, ಅವರು ಯಾವ ಧೈರ್ಯದಿಂದ ಅಲ್ಲಿ ಹೋರಾಡಬೇಕು? ಬೆಳಗಾಂವಿಯ ಕನ್ನಡಾಭಿಮಾನಿಗಳು ಕೊಟ್ಟ ಸುದ್ದಿಯನ್ನು ಪ್ರಕಟಿಸುವುದರ ಹೊರತು, ನಮ್ಮ ಕನ್ನಡ ಪತ್ರಿಕೆಗಳು ಇದುವರೆಗೂ ಬೇರೆ ಯಾವ ಪ್ರಚಾರವನ್ನೂ ತೃಪ್ತಿಕರವಾಗಿ ಮಾಡಿಲ್ಲ. ಇದು ಕರ್ನಾಟಕಕ್ಕೆ ಒಳ್ಳೆಯದೆ? ಜನತೆಯ ರಾಜ್ಯವೆಂದು ಮೆರೆಯಿಸಿಕೊಳ್ಳುವ ಮುಂಬಯಿ ರಾಜ್ಯ ಸರಕಾರವು, ಬೆಳಗಾಂವಿಯ ಕನ್ನಡಿಗರಿಗೊದಗಿದ ಈ ದುರವಸ್ಥೆಯನ್ನು ಕಳೆಯಲು ಏನು ಏರ್ಪಾಡು ಮಾಡಿದೆ? ಸ್ಥಾನಿಕಸ್ವರಾಜ್ಯ ಸಂಸ್ಥೆಗಳ ಖಾತೆ, ಕನ್ನಡಿಗರೂ ಬೆಳಗಾಂವಿ ಜಿಲ್ಲೆಯವರೂ ಆದ ಮಾನ್ಯ ಮಂತ್ರಿ ಮಲ್ಲನಗೌಡರ ಕಡೆಗಿದೆ. ಅವರು ಕನ್ನಡಿಗರಿಗಾದ ಈ ಅನ್ಯಾಯದವಾರ್ತೆಯನ್ನು ಇದುವರೆಗೂ ಕೇಳಿಯೇ ಇಲ್ಲವೇನು? ಜನರನ್ನು ಮೋಹಗೊಳಿಸಲು ಹಗಲಿರುಳೂ ಕ. ಏಕೀಕರಣದ ಮಾತುಗಳನ್ನಾಡುವ ಮುಂದಾಳುಗಳು ಈಗ ಮಾಡುತ್ತಿರುವುದೇನು? ಬೆಳಗಾಂವಿಯ ಪರಿಸ್ಥಿತಿಯೆ ನಾಳೆ ಕಾರವಾರದಲ್ಲಿ ಒದಗೀತು, ಬಳ್ಳಾರಿಯಲ್ಲಿ ಪ್ರಾಪ್ತವಾದೀತು ಇದೇ ಕಾರಣಕ್ಕಾಗಿ ಸೊಲ್ಲಾಪುರ ಸಾಂಗಲಿಗಳನ್ನು ಕಳೆದುಕೊಳ್ಳಬೇಕಾದೀತು! ಸಿಕ್ಕಿರುವ ಅಧಿಕಾರ ಪೀಠಗಳು ಶಾಶ್ವತವಲ್ಲ; ಕರ್ನಾಟಕದ ನಮ್ಮ ಮನೆ ಶಾಶ್ವತವಾದುದೆಂಬುದನ್ನು ಯಾವ ಕನ್ನಡಿಗನೂ ಮರೆತು ನಡೆಯಲಾಗದು!

(೨೦೨ನೆಯ ಪುಟದಿಂದ ಮುಂದುವರಿದುದು)

ಮತಾನುಯಾಯಿಗಳ ಲೌಕಿಕ ಜೀವನವು ಸುಗಮವಾಗಿ ಸಾಗುವಂತೆ, ಪರಸ್ಪರ ಸಹಕಾರ - ಸಹಾನುಭೂತಿಗಳು ಹೆಚ್ಚಾಗಬೇಕು. ಬೇಗನೆ ನಡೆಯಲಿರುವ ಸಮ್ಮೇಳನದಲ್ಲಿ ಇವೆಲ್ಲ ವಿಷಯಗಳ ವಿಚಾರ ಚರ್ಚೆ ನಡೆದು, ಅದರಂತೆ ಪ್ರತ್ಯಕ್ಷ ಕಾರ್ಯ ನಡೆಯಬೇಕೆಂದು ನಮ್ಮ ಹಾರಯಿಕೆ

ಜಯಂತಿಗೆ ಒಲವಿನ ಕಾಣಿಕೆ

ಧಾರವಾಡದ ಸುಪ್ರಸಿದ್ಧ ವಕೀಲರೂ ಕರ್ನಾಟಕದ ಅಭಿಮಾನಿಗಳೂ ಆದ ಶ್ರೀಮಾನ್ ಎನ್. ಕೆ. ದೀಕ್ಷಿತರವರು, ಕಳೆದ ದೀವಳಿಗೆಯ ಹಬ್ಬದಲ್ಲಿ, ಜಯಂತಿಗೆ ೧೦೦ ರೂಪಾಯಿಗಳ ಒಲವಿನ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಅದಕ್ಕಾಗಿ ಅವರಿಗೆ ಕೃತಜ್ಞತೆಯ ವಂದನೆಗಳು

ಜಯಂತಿಯ ಕಾರ್ಯಮಹತ್ತ್ವವನ್ನರಿತು, ಅದರ ಆರ್ಥಿಕ ಸಂಕಟದ ನಿವಾರಣೆಗಾಗಿ ಶ್ರೀ ದೀಕ್ಷಿತರು ಮೊದಲಿಗರಾಗಿ ತಮ್ಮ ಔದಾರ್ಯದ ಹಸ್ತವನ್ನು ನೀಡಿದ್ದಾರೆ. ಕನ್ನಡಿಗರಾದ ಬೇರೆ ಸಿರಿವಂತರೂ ಜಯಂತಿಗೆ ತಮ್ಮ ಉದಾರ ಹಸ್ತದ ಸಹಕಾರ ಕೊಟ್ಟರೆ, ಅದರ ಆಪತ್ತಿ ದೂರವಾದೀತು. ಇನ್ನೂ ಹೆಚ್ಚಿನ ಕಾರ್ಯವನ್ನು ಮಾಡಲು ಅನುಕೂಲವಾದೀತು.

—ಸಂಪಾದಕರು

ಮಲ್ಲಿ

(ಚಿಕ್ಕ ಕಥೆ)

ಬಿ. ಆರ್. ವಾಡಪ್ಪಿ ಎಂ. ಎ., ಬಿ. ಟಿ. ಧಾರವಾಡ

★

**ಜ್ಞಾನಕ್ಕೆ ಅಧಿಕಾರ ದೊರೆತರೆ, ಸ್ವಾರ್ಥಸಾಧನೆ-
ಗ ಎಂತೆಂತಹ ಅನ್ಯಾಯ ಮಾಡಲಿಕ್ಕೂ ಸಿದ್ಧ-
ಗುವುದು. ಇಂತಹ ಅಜ್ಞಾನದ ಅಧಿಕಾರ-
ವೇ ಮಲ್ಲಿಯ ಬಾಳಿಗೆ ಅಳಿಗಾಲ ತಂದಿತ್ತು.**

★

· ವರುಷಕ ಒಮ್ಮೆ ಬರುತೈತಣ್ಣಾ ಶ್ರಾವಣ ಸೋಮಾರಾ
ಳಿವೀ ಬಸವಣ್ಣನ ವಾರಾ "

ನನ್ನು ಹಿಂಬಾಲಿಸಿ 'ಛಿಲ್....ಛಿಲ್....ಛಿಲ್' ಗೆಜ್ಜೆಗಳ ಳ; ಹೀಗೆ ಸಾಗಿ ಬರುತ್ತಿತ್ತು—ಒಂದು ಹಳ್ಳಿಗರ ಹೆಜ್ಜೆಯು . ಅಂದು ಶ್ರಾವಣ ಸೋಮವಾರ ಹಳ್ಳಿಗರಿಗೊಂದು ಹಬ್ಬ-? ಬಸವಣ್ಣನ ಗುಡಿಯ ಪಟಾಂಗಣದಲ್ಲಿ ಹಳ್ಳಿಯ ಯುವತಿ- ತಂಡವು ನೆರೆದು, ಹೆಜ್ಜೆಯ ಕುಣಿತವನ್ನು ಕಣ್ಣುಬಿಡದೆ ಸುತ್ತಿತ್ತು. ಈ ಮೇಳದ ಮಧ್ಯದಲ್ಲಿ ಬೇಡರ ಭರಮನೂ ಯುತ್ತಿದ್ದ. ಭರಮ ಗಟ್ಟಿಗ. ಬಣ್ಣದ ಅಂಗಿಯನ್ನು ತೊಟ್ಟು ಹಾಕುವಾಗ, ಅಂದವಾಗಿಯೇ ಕಂಡ. ಮುಖವು ಸಾಹಸದ ಮಾಡುವೆನೆಂಬ ನಿರ್ಧಾರ ಸೂಚಿಸುವಂತಿತ್ತು. ಕುಣಿಯುತ್ತ ಯುತ್ತ ಮುಂದೆ ಸಾಗುವಾಗೊಮ್ಮೆ, ಅವನ ದೃಷ್ಟಿ ಅಲ್ಲಿಯೇ ಮಲ್ಲಿಯ ಕಡೆಗೆ ಹೋಯಿತು. ಹಸಿರು ಸೀರೆ ಉಟ್ಟು ಗೆ ಒಂದು ಬೊಟ್ಟು ಕುಂಕುಮವಿಟ್ಟ ಮಲ್ಲಿ, ಅವನಿಗೆ ಅಪ್ಸರೆ- ಗಿಯೇ ಕಂಡಿರಬೇಕು. ಅವಳೂ ಭರಮನನ್ನು ನೋಡಿದಳು. ಪ ಅವಳ ಮನವನ್ನೇ ಸೆರೆಹಿಡಿದ. ಮಲ್ಲಿ ತನ್ನ ತಾಯಿಯು ಗೆ ತೋಟದಲ್ಲಿ ದುಡಿಯುವಾಗ, ಭರಮನನ್ನು ಅನೇಕ ಸಲ ಿದ್ದಳು. ಆದರೆ ಇಂದು ಅನುಭವಿಸಿದ ಅನುಭವ ಬಂದಿರಲಿಲ್ಲ. ಹೃದಯ ಹಿಗ್ಗಿತು. ಭರಮ ಹೆಜ್ಜೆಯ ಮೇಳದೊಡನೆ ಪೆ ಸಾಗಿದನಾದರೂ ಮನ ಹಿಂದೆಯೆ ಉಳಿಯಿತು ಪಾಪ!

ಟ್ಟದ ಓರೆಯಲ್ಲಿ ಆ ಹಳ್ಳಿ ನೆಲಸಿದೆ. ಹಿಂದೆ ತಿಳಿ ಆಕಾಶ- ಮುಟ್ಟಿದ ದಿನ್ನೆಗಳು, ಮುಂದೆ ವಿಸ್ತಾರವಾಗಿ ಹಬ್ಬಿದ ಲು — ಆ ಊರಿಗೆ ಒಂದು ಅಪೂರ್ವ ಕಳೆ ತಂದುಕೊಟ್ಟಿವೆ; ರ ಸುತ್ತಲೂ ಎಲೆತೋಟಗಳು. ಅಲ್ಲಿ ತೋಟದಲ್ಲಿ ಹೊಟ್ಟೆ- ತುಂಬಿಕೊಳ್ಳುವವರೇ ಹೆಚ್ಚು. ಮಲ್ಲಿಯ ತಾಯಿ ನಿಂಗವ್ವ, ತೋಟದಲ್ಲಿ ದುಡಿದು ಹೊಟ್ಟೆ ತುಂಬಿಕೊಳ್ಳುವವಳು. ಊರ ಹೊರಗೆ ಒಂದು ತೋಟಕ್ಕೆ ಹೊಂದಿ, ಅವಳು ಚಿಕ್ಕದೊಂದು ಗುಡಿಸಿಲು ಕಟ್ಟಿಕೊಂಡಿದ್ದಳು. ದನಗಳ ಕಾಟವಾಗಬಾರದೆಂದು ಸುತ್ತಲೂ ಬೇಲಿ ಕಟ್ಟಿದ್ದಳು. ಅವಳ ಗುಡಿಸಲಿಗೆ ಒಂದು ಬಳ್ಳಿ ಹಬ್ಬಿ ಹಂದರ ಹಾಕಿತ್ತು. ದೂರದಿಂದ ನೋಡುವವರಿಗೆ ಅದು ಬಹು ಸುಂದರವಾಗಿ ಕಾಣುತ್ತಿತ್ತು. ದುಡಿದು ದಣಿದ ಕೂಲಿಕಾರರು, ನಿಂಗವ್ವನ ಗುಡಿಸಿಲಿಗೆ ಬಂದು ನೀರು ಕುಡಿದು ದಣಿವಾರಿಸಿಕೊಂಡು ಮುಂದೆ ಸಾಗುತ್ತಿದ್ದರು. ಇದಲ್ಲದೆ ನಿಂಗವ್ವ ಮಾತುಗಾರ್ತಿ; ಅವಳೊಡನೆ ಮಾತನಾಡು- ವುದೂ ಒಂದು ಸುಖವೆಂದೇ ಜನರು ಭಾವಿಸಿದ್ದರು. ಬಸವಣ್ಣನ ಜಾತ್ರೆಯ ಮರುದಿನ ನಸುಕಿನಲ್ಲೆದ್ದು ನಿಂಗವ್ವ "ಮಲ್ಲಿ.... ನಾ ತೋಟಕ್ಕ ಕೆಲಸಕ್ಕ ಹೋಕ್ಕೇನಿ; ನೀ ರೊಟ್ಟೀ ಮಾಡು!" ಎಂದು ಹೊರಟುಹೋದಳು. ಮಲ್ಲಿ ಮನೆಗೆಲಸ ಸುರುವು ಮಾಡಿದಳಾ- ದರೂ.... ಅವಳಿಗೆ ಭರಮನ ವಿಚಾರವೇ ವಿಚಾರ! ನಿಂಗವ್ವ ತೋಟಕ್ಕೆ ಹೋಗಿ ಐದು ನಿಮಿಷವಾಗಿರಬಹುದು "ಬಾರವ್ವಾ ಬಾ....ಲಕುಮಿ ಬಾ!" ಎಂದು ಸಿಳ್ಳುಹಾಕುತ್ತ ಭರಮ ಗುಡಿಸಲಿಗೆ ಬಂದು "ನಿಂಗವ್ವಾ, ನಿಂಗವ್ವಾ," ಎಂದು ಕೂಗಿದ. ಮಲ್ಲಿ ಗುಡಿಸಿ- ಲಲ್ಲಿ ಒಬ್ಬಳೆ. ಅವಳು ಭರಮನನ್ನು ಬಲ್ಲವಳಾದರೂ ಇಂದು ಅವಳಿಗೆ ನಾಚಿಕೆ ಬಂದು ಹೊರಗೆ ಮುಖ ಹಾಕಲು ಮನಸ್ಸಾಗಲಿಲ್ಲ. ಮತ್ತೆ ಭರಮ ಕೂಗಿದ. ಮಲ್ಲಿ ಅನಿವಾರ್ಯವಾಗಿ "ಅವ್ವ ತೋಟಕ್ಕೆ ಹೋಗ್ಯಾಳು" ಎಂದು ನುಡಿದು ತುಟಿ ಸವರಿಕೊಂಡಳು. ಭರಮ ಕಟ್ಟೆಯ ಮೇಲೆ ಕುಳಿತು, ಒಂದು ಚುಟ್ಟವನ್ನು ಬೊಕ್ಕಣದಿಂದ ಹೊರತೆಗೆದು "ಮಲ್ಲಿ, ಬೆಂಕಿ ತತಾ" ಎಂದ. ಮಲ್ಲಿ ಬೆಂಕಿಪೆಟ್ಟಿಗೆ ಹೊರಗೆ ಒಗೆದು ಮತ್ತೆ ಪುಟಕ್ಕನೆ ಒಳಗೆ ಹೋದಳು. ಭರಮ ಎಷ್ಟೆಂದರೂ ಗಂಡುಗಲಿ; ಕೇಳಬೇಕೆ? "ನೀ ಒಬ್ಬಾಕೇ ಆದಿಯೇನು ಮನ್ಯಾಗ?" ಎಂದು ನಗಹತ್ತಿದ. ಮಲ್ಲಿ ಇಲ್ಲದ ಹುಸಿ ಮುನಿಸನ್ನು ಮುಖದ ಮೇಲೆ ತಂದು "ಹೂ ಮತ್ತೇನು ಮಾಡಬೇಕು!" ಎಂದು ಗಟ್ಟಿಯಾಗಿ ನುಡಿದಳು.

"ಅಲೆಲೆ, ನೀ ನಾಚಾಕ ಹತ್ತೀ ಏನು?" ಎಂದು ಚುಟ್ಟಾ ಹೊತ್ತಿಸಿ ಸೇದುತ್ತ ಕುಳಿತ. ಮಲ್ಲಿ ಒಳಗೆ ಏನೋ ಕೆಲಸ ಮಾಡು- ವಂತೆ ನಟಿಸಿದಳು. ಭರಮ "ನಾ ಹೋಕ್ಕೇನಿ" ಎಂದು ಹೊರಟ. ಮಲ್ಲಿ "ಅವ್ವಗ ಏನ ಹೇಳಬೇಕು?" ಎಂದು ಸೆರಗು ಸರಿಮಾಡಿ- ಕೊಂಡು ಬಾಗಿಲಿಗೆ ಬಂದು ನಿಂತಳು "ನಾ ಬಂದಿದ್ದ ಅತ್ತಿಗೆ ಹೇಳಬ್ಯಾಡ" ಎಂದವನೇ ಹೊರಟೇ ಬಿಟ್ಟ. ಮಲ್ಲಿಗೆ ಒಂದು ಏನೋ ಹೇಳಲು ಬಾರದ ಅನುಭವ... ಇಂದು ಬಂದಿದೆ ಅಲ್ಲಿಯೇ ಹಾವಿದ ಹರಕು ಚಾಪೆಯಮೇಲೆ ಉರುಳಿಕೊಂಡಳು. ನಿಂಗವ್ವ ದುಡಿದು ಮನೆಗೆ ಬರುವಳೆಂದು ಮನ ಒತ್ತಿ ಹೇಳಿತು. ಎದ್ದು ಒಲೆಯ ಮೇಲೆ ಹಂಚನ್ನಿಟ್ಟು ರೊಟ್ಟಿಮಾಡಿದಳು. ನಿಂಗವ್ವನೂ ಬಂದಳು. ನಿಂಗವ್ವ ಎಂದಿನಂತೆ ಅಂದು ಹರುಷದಿಂದ ಗುಡಿಸಿಲನ್ನು ಹೊಗಲಿಲ್ಲ.

ಏನೋ ಚಿಂತೆ ಅವಳನ್ನು ಸುತ್ತಿಕೊಂಡಂತಿತ್ತು. ಮಲ್ಲಿ ತಾಯಿಯ ಮೌನಕ್ಕೆ ಬೇಸತ್ತು "ಯವ್ವಾ ಏನ ಆಗೇತಿ ನಿನಗ? ಸುಮ್ಮಗ ಯಾಕಿದ್ದಿ?" ಎಂದಳು. ನಿಂಗವ್ವ ರೊಟ್ಟೀ ತಿಂದು ನೀರು ಕುಡಿದು "ಮಲ್ಲಿ...ಬಡವರು ಅಂದರ, ಬೇಕಾದವರು ಬೇಕಾದ್ದು ಮಾತಾಡತಾರ" ಎಂದು ಒಂದು ಉಸಿರುಬಿಟ್ಟಳು.

"ನಿನಗ ಯಾರು ಏನಂದರು?" ಮಲ್ಲಿ ತಾಯಿಯನ್ನು ಕೇಳಿದಳು.

"ಅದs ಸಿದ್ದನಗೌಡ...ನಿನ್ನ ಮಗಳನ್ನ ಯಾಕ ಕೆಲಸಕ್ಕ ಕರಕೊಂಡು ಬರಲಿಲ್ಲ... ಹಾಗ.... ಹೀಗ... ಅಂತ ಪಿಸಿ ಪಿಸಿ ನಕ್ಕ"

"ಅದ್ಯಾಕ ಬೇಕಾಗಿತ್ತು ಅವಗ?" ಮಲ್ಲಿ ಮೋರೆ ಗಂಟಿಕ್ಕಿ ನುಡಿದಳು. ನಿಂಗವ್ವ ಉತ್ತರ ಕೊಡಲಿಲ್ಲ ಹನಿ-ಹನಿಯಾಗಿ ಕಣ್ಣಲ್ಲಿ ನೀರ ಉದುರುತೊಡಗುವು. ಮಲ್ಲಿ ಒಮ್ಮೆಲೆ ಏನೋ ನೆನಪಾದಂತೆ "... ...ಮಾವ್ವ ಬಂದಿದ್ದ!" ಎಂದು ತಾಯಿಗಾದ ನೋವನ್ನು ...ಡಿನೆ ... ಯತ್ನಿಸಿದಳು.

...ಂಗವ್ವ ಕಣ್ಣು ಒರಸಿಕೊಂಡು "ಯಾವಾಗ ಬಂದಿದ್ದ? ಏನು ಬೇಕಾಗಿತ್ತಂತ?"

"ಏನೂ ಇಲ್ಲ. ಹಾಂಗs ಬಂದಿದ್ದ!"

ನಿಂಗವ್ವ "ಮಲ್ಲೀ....ಭರಮ ಚಲೋ ಹುಡುಗ." ಎಂದು ...ಳ ಮೋರೆ ನೋಡಿದಳು. ಮಲ್ಲಿ ಸುಮ್ಮಗಾದಳು. ನಿಂಗವ್ವ ...ತ್ತೆ ...ಕೆ ಹೋಗಲೇಬೇಕಾಗಿತ್ತು—ಮತ್ತೆ ಹೊರಟಳು. ...ದುವಾಗ ಏನೋ ಯೋಚಿಸಿ' "ಮಲ್ಲೀ, ಜ್ವಾಕಿ; ನಾ ಬಾತೆನಿ!" ಎಂದು ತೋಟದ ಕಡೆಗೆ ಹೊರಟಳು.

ಮಲ್ಲಿ ಬೇಡರ ಹೆಣ್ಣಾದರೂ ಕಣ್ಣುಮೂಗಿನಿಂದ ಚಲುವೆ. ಚೇಸಾಗಿ ಬೆಳೆದುನಿಂತ ಬಾಳೆಯ ನಿಲುವು; ಕಪ್ಪು ಬಣ್ಣಕ್ಕೆ ಒಪ್ಪುವ ಹೊಳಪಿನ ಕಣ್ಣು. ಹರಯಕ್ಕೆ ತಕ್ಕ ಹಳ್ಳಿಯ ಒನಪು ವೈಯಾರ ವನ್ನು ಗೂಡಿಸಿಕೊಂಡಿದ್ದಾಳೆ. ಹರವಾದ ಹಣೆಗೆ ಹಚ್ಚೆಯ ಬಟ್ಟು ಶೋಭೆಯನ್ನು ತಂದಿದೆ. ಮೊದಲ ನೋಟಕ್ಕೆ ಮನಸೋತರೆ ಯುವಕರದೇನೂ ತಪ್ಪಲ್ಲ. ಭರಮನ ಜೊತೆಗೆ ಅವಳು ಅದೆಷ್ಟೋ ಹರಟೆ ಹೊಡೆದಿದ್ದಳಾದರೂ, ಇಂದು ಭರಮ ಮನೆಗೆ ಬಂದಾಗ ಅವಳಿಗೆ ಮಾತನಾಡುವ ಧೈರ್ಯವೇ ಬರಲಿಲ್ಲ "ಜ್ವಾಕಿ" ಎಂದು ತಾಯಿ ಹೇಳಿ ಹೋದಳು. ಭರಮನ ಬಗ್ಗೆ ಅವಳಿಗೆ ತಿರಸ್ಕಾರವೆ? ಛೀ ಅದು ಎಂದೂ ಇಲ್ಲ. ಮತ್ತೆ ತಾಯಿಯ ಯೋಚನೆ ಅವಳಿಗೆ ಸ್ಪಷ್ಟವಾಗಲಿಲ್ಲ. ನಿಂಗವ್ವ ಕೆಲಸಕ್ಕೆ ಹೋದೊಡನೆ ಮಲ್ಲಿ ಮನೆಗೆಲಸ ...ಗಿಸಿ- ... ಮುಂದಿನ ಕ್ಯಾದೋಟನಲ್ಲಿ ಕೆಲಸಮಾಡುತ್ತ ...ಳಿತುಕೊಂಡಳು. ...ಸಿಲಿನಲ್ಲಿ ...ಬಹು ದೂರದಲ್ಲಿ.... ... ...ದ್ದ. ಗಾಳಿ ...ಸುತ್ತಿತ್ತು. ಮಲ್ಲಿ ಪತ್ರಿಪು ... ...ಲೇ ಕುಳಿತಳು. ನಿಂಗವ್ವ ಕಟ್ಟಿಗೆಯ ಹೊರೆಯನ್ನು ಬಾಗಿಲ ಮುಂದೆ ಚೆಲ್ಲಿ 'ತಂಗೀ.... ನೀರ ತತಾ' ಎಂದು ಮಗಳನ್ನು ಕರೆದಳು. ಮಲ್ಲಿ ನೀರು ತಂದು ತಾಯಿಗೆ ಕೊಟ್ಟಳು. ನಿಂಗವ್ವ ತಾನೇ ಒಲೆಯ ಮುಂದೆ ಕ... ನಾಲ್ಕು ರೊಟ್ಟಿ ಮಾಡಿದಳು. ಊಟವೂ ಆಯಿತು. ಮ... ನುಡಿದಳು; "ಮಲ್ಲಿ.... ದೊಡ್ಡಾಕಿ ಆದಿ, ಅತ್ತಾಗ ಇ... ತಿರಗ್ಯಾಡಬ್ಯಾಡ! ಜನ ಕೆಟ್ಟ!" ಎಂದು ತಟ್ಟನೆ ನುಡಿ... ಮಲ್ಲಿಗೆ ಇಲ್ಲದ ಪುಕ್ಕತನ ಬಂದಿತು: "ಯವ್ವಾ.... ನಾ ... ಮಾಡ್ಯೇನಿ?" ಎಂದು ಅಳಹತ್ತಿದಳು. ತಾಯಿಯೂ ಅತ್ತ...

"ಮಲ್ಲಿ, ನೀ ಸರಸೋತಿ; ನಿನ್ನ ಭರಮಗ ಕೊಟ್ಟು ... ಮಾಡತೇನಿ" ಎಂದು ಮಗಳ ಮೈದಡವಿದಳು. ಮಲ್ಲಿ ಸು... ಹಾಸಿಗೆಯಲ್ಲಿ ಉರುಳಿಕೊಂಡಳು. ನಿಂಗವ್ವ ಮತ್ತೆ ತಪ್ಪಿಸಿ... ಯೋಚನೆಯ ಬೆನ್ನು ಹತ್ತಿದಳು. ಅಂದಿನ ರಾತ್ರಿ ಅವಳಿಗೆ ನಿದ್ದೆ ಹತ್ತಲಿಲ್ಲ. 'ನನ್ನ ಬಾಳು ಹಾಳುಮಾಡಿದ ಗೌಡನ ಮಗ, ... ಬಾಳು ಹಾಳು ಮಾಡಿದರೆ ಏನು ಗತಿ?' ಇದೇ ಅವಳ ಯೋ... ಅದಕ್ಕೆ ಭರಮನೊಡನೆ ಲಗ್ನಮಾಡುವ ನಿರ್ಧಾರಕ್ಕೆ ಬ... ಆದರೆ ಭರಮನನ್ನು ಕೇಳಬೇಡವೆ? ಭರಮನಾದರೂ ಪ... ಎಂಬ ಮಾತನ್ನು ಅವಳು ಬಲ್ಲಳು. ಈಗ ಭರಮನನ್ನು ಒಪ್ಪಿ... ವುದೇ ಅವಳ ಮುಖ್ಯ ಕೆಲಸ. ಮಲ್ಲಿ ಮಾತ್ರ ನಿದ್ದೆಹೋ... ಮರುದಿನ ಮುಂಜಾನೆ ನಿಂಗವ್ವ ಕೆಲಸಕ್ಕೆ ಹೋಗದೆ ಮನೆ... ಲ್ಲಿಯೇ ಉಳಿದಳು. ಬಡತನ ಅವಳನ್ನು ವೈರಿಯಂತೆ ಕಾಡುತ್ತಿ... ಆದರೂ ಅವಳಿಗೆ ಆ ಗೌಡನ ಮೋರೆ ನೋಡುವುದು ಬೇ... ಯಿತು. ಸುಮಾರು ಎರಡು ತಾಸು ಹೊತ್ತು ಏರಿಬ... ಭರಮ ಸಿಳ್ಳುಹಾಕುತ್ತ ಬಂದು "ನಿಂಗವ್ವ .... ಅತ್ತೀ" ಎ... ಒದರಿದ. ನಿಂಗವ್ವ "ಬಾ.... ಭರಮಾ .... ನಿನ್ನ ಹಾ... ನೋಡಾಕ ಹತ್ತಿದ್ದೆ" ಎಂದು ಒಳಗೆ ಕರೆದಳು. ಭರಮ ನಿ... ಮನೆಯಲ್ಲಿ ಇರುವುದಿಲ್ಲೆಂಬ ಭರವಸೆಯಿಂದ ಬಂದಿದ್ದ? ... ಬಂದು ಗೋಡೆಗೆ ಒರಗಿ ಕುಳಿತು ಚುಟ್ಟಾ ಹೊತ್ತಿಸಿದ.... ನಿ... "ಮಲ್ಲೀ, ಎಲೀ ಅಡಕಿ ತತಾ" ಎಂದಳು. ಮಲ್ಲಿ ಎಲೆ ... ಚೀಲ ತಂದು ಕೊಟ್ಟಳು. ಭರಮ ನಿಂಗವ್ವ ಎಲಿ ಅಡಿಕಿ ಹಾ... ಕೊಂಡರು. ಮಲ್ಲಿ ಬಟ್ಟೆ ಒಗೆಯುವ ನೆವಮಾಡಿ ಹೊ... ಹೊದಳು.

ಭರಮ "ಯಾಕ ಅತ್ತೀ, ಇಂದ ಹ್ವಾರೇಕ ಹೋಗಿಲ್ಲೇನು...

"ನಿನಗ ಒಂದು ಮಾತ ಹೇಳಬೇಕಂತ ಮನ್ಯಾಗ ಅದೇನಿ"

ಭರಮ ಗಾಬರಿಗೊಂಡ. ನಿಂಗವ್ವ ತನ್ನನ್ನು ಹಳಿಯುವಳೆ... ಬಗೆದ.

"ಮಲ್ಲಿನ್ನ ನಿನಗ ಕೊಟ್ಟು ಮದಿವೀ ಮಾಡಬೇಕಂತೇನಿ" ಎಂದಳು. ಭರಮ ಸುಮ್ಮನೆ ಕುಳಿತ. ಒಮ್ಮೆ ಚುಟ್ಟವನ್ನು ... 'ಭುಸ್' ಎಂದು ಹೊಗೆ ಬಿಟ್ಟು "ನನಗರ ಯಾರು ಅ... ಪರದೇಶಿ! ನೀ ಇಷ್ಟ ಪಿರುತಿಮಾಡಿ ಹೇಳತಿ. ಅಂದಮ್ಯಾಗ ... ಮಾತು ಹೇಳಾಕ ಬರತೈತೆ?" ಎಂದ.

"ನಿಮ್ಮ ದೊಡ್ಡಪ್ಪನ್ನ ಕೇಳಿ ಮದಿವೀ ಆಗಾವೇನು?"

“ನಾ ಏನ ಕಂಡೇನಿ ಅವರ ಮನ್ಯಾಗಿದ್ದು ? ” ಎಂದು ಭರಮು ಗವ್ವನನ್ನು ನೋಡಿದ. ನಿಂಗವ್ವನ ಮೋರೆಯ ಮೇಲೆ ಒಂದು ಣೆಯ ಭಾವ ಮೂಡಿತ್ತು.

“ತಮ್ಮಾ— ನಾ ಅದೇನಿ ; ಮಲ್ಲೀ ಮದಿವೀ ಮಾಡಿ ಕೊಡ ನಿ.”

“ದುಡಿಯಾಕ ಸಗತಿ ಕೊಟ್ಟಾನು ದೇವರು ; ನೀ ಹೇಳಿ- ಂಗ ಆಗಲಿ!”

“ಭರಮಾ, ಈ ಊರ ಗೌಡ ಭಾಳ ಕೆಟ್ಟ ಮನಸ್ಯಾ” ಗವ್ವ ಅಂಜಿಕೆಯಿಂದ ನುಡಿದಳು.

“ಇರವಲ್ಲಾ, ನಮಗೇನ ಮಾಡತಾನು ?”

“ಅಲ್ಲಾ— ಜ್ವಾಕಿಯಿಂದ ಇರಬೇಕು !” ಮಾತು ಮುಗಿ- ವ ಮೊದಲೇ ಮಲ್ಲಿ ಒಳಗೆ ಬಂದಳು. ನಿಂಗವ್ವ ಸುಮ್ಮ ದಳು.

ಭರಮು “ಅತ್ತೀ....ನಾ ಮನಿಗೆ ಹೊಕ್ಕೇನಿ”

ನಿಂಗವ್ವ “ಭರಮಾ....ನೀ ನಮ್ಮನ್ಯಾಗ ಇದ್ದುಬಿಡು !”

ಮಲ್ಲಿ ಅಡಿಗೆಯ ಮನೆಯಲ್ಲಿ ಏನೋ ಸದ್ದುಮಾಡಿದಳು. ಗವ್ವ “ಮಲ್ಲಿ, ಭರಮುಗ ನನಗ ಊಟಕ್ಕ ನೀಡು !” ಎಂದಳು.

ಭರಮು ಅಂದಿನಿಂದ ನಿಂಗವ್ವನ ಮನೆಯಲ್ಲಿಯೇ ಇರಹತ್ತಿದ. ಗವ್ವನೂ ಆ ತಿಂಗಳಲ್ಲಿಯೇ ಮದುವೆ ಮಾಡಬೇಕೆಂದು ರಿಸಿದಳು. ಭರಮು ದುಡಿದು ಅವರಿಗೆ ಹೊಟ್ಟೆಗೆ ಹಾಕು- ವನಾದ್ದರಿಂದ, ನಿಂಗವ್ವನಿಗೆ ಹೊರಗೆ ಕೆಲಸಕ್ಕೆ ಹೋಗುವ ಗವೇ ಬರಲಿಲ್ಲ. ಗೌಡರ ಸಿದ್ದಪ್ಪನಿಗೆ ನಿಂಗವ್ವ ಮಲ್ಲಿ ತಮ್ಮ ಟಕ್ಕೆ ದುಡಿಯುವುದಕ್ಕೆ ಬರದಿರುವುದು ಅಚ್ಚರಿಯನ್ನುಂಟು ಡಿತು ಅವನ ಎಣಿಕೆ, ಹಂಚಿಕೆ–ಹೊಂದಿಕೆ–ಆಗದಿದ್ದುದಕ್ಕೆ ನವಲ್ಲಿ ಮರುಗಿದ. ಆದರೆ ಬಾಯಿಬಿಚ್ಚಿ ಮಾತನಾಡುವು- ಟ? ಒಂದು ದಿನ ಮುಂಜಾನೆ ಸಿದ್ದನಗೌಡ ಹಟಾತ್ತಾಗಿ ಗವ್ವನ ಗುಡಿಸಿಲಿಗೆ ಬಂದ ಮಲ್ಲಿ ಭರಮು ನಗುತ್ತ ಬಾಗಿ- ಲೆಯೇ ನಿಂತಿದ್ದರು. ಸಿದ್ದನಗೌಡನಿಗೆ ಕಳವಳವಾಯಿತು. ಗವ್ವನನ್ನು ಕೂಗಿದ, ಮುದುಕಿ ಹೊರಗೆ ಬಂದಳು.

“ಏನು ನಿಂಗವ್ವಾ....ನಮ್ಮ ತ್ವಾಟದ ಕೆಲಸಾ ಕೆಡಿಸಿಬಿಟ್ಟಿ!” ಪ ಬಿರುಸಾಗಿ ನುಡಿದ.

“ಏನರಿ....ನಾನs....ಜಡ್ಡು ಆಗಿ ಸಾಯಾಕ ಹತ್ತೇನಿ” ಎಂದು ದುಕಿ ಸಿದ್ದಪ್ಪನಿಗೆ ಸಿಟ್ಟಾಗಿಯೇ ನುಡಿದಳು. ಸಿದ್ದಪ್ಪ ಯುವಕ; ಲಾಗಿ ಗೌಡರ ಮಗ; ಕೇಳುವುದೇನು ? “ಬಡವರಿಗೆ ಹೊಟ್ಟೆ- ಬಿತ್ತಂದರ....ಮಂದೀ ಕಿಮ್ಮತ್ತs ಉಳಿಯೂದಿಲ್ಲ” ಎಂದು ಮನ ಕಡೆಗೆ ದುರುದುರನೆ ನೋಡಿದ. ಭರಮು “ಯಾಕರೀ ಡರ....ದುಡಿದು ತಿನ್ನಾಕ ಯಾರ ಹಂಗು ? ಯಾರದರ ಗಂಟ ಕೇನಿ?” ಎಂದು ಸಿದ್ದನಗೌಡನ ಅಭಿಮಾನಕ್ಕೆ ಪೆಟ್ಟುಹಾಕಿದ.

ಸಿದ್ದಪ್ಪ “ಅಟ್ಟಾ ನೊಕ್ಕs” ಎಂದು ಗೊಣಗುತ್ತ ಹೊರಟೇ ಬಿಟ್ಟ. ಭರಮು ಸಿದ್ದನಗೌಡ ಹೋದ ದಿಕ್ಕನ್ನು ಓರೆಗಣ್ಣಿನಿಂದ ನೋಡಿ, ಮೀಸೆಯ ಮೇಲೆ ಕೈಯಾಡಿಸಿದ. ನಿಂಗವ್ವ “ಭರಮಾ.... ನೀ ಸುಮಾಕ ಇರು. ಗೌಡ ನೀಚ ಅದಾನು!” ಎಂದು ಭೀತಿಯಿಂದ ನುಡಿದಳು.

“ಇರಲಿ ಬಿಡು. ಇಂಥಾ ಗೌಡರನ್ನ ನೋಡೇನಿ. ಮನಸಿಗೆ ಬಂದ್ಹಾಂಗ ಅಂತಾನು” ಎಂದು ಭರಮು ಸಿಟ್ಟಾಗಿ ಮಾತನಾಡಿದ. ಅಂದಿನ ಪ್ರಸಂಗ ಹಿಂದಾಯಿತು.

ಸಿದ್ದನಗೌಡ ಮನದ ಮುನಿಸನ್ನು ಮೇಲೆ ಕಾಣಿಸದೆ – ಕೆಲವು ದಿನಗಳನ್ನು ಹಾಗೆಯೇ ಕಳೆದ. ನಿಂಗವ್ವ ಮಲ್ಲಿಯ ಮದುವೆಗಾಗಿ ದುಡ್ಡು ಕೂಡಿಸುವುದರಲ್ಲಿದ್ದಳು. ಶಿವರಾತ್ರಿಯ ಅಮಾವಾಸ್ಯೆ ಬಂದಿತು. ಸಿದ್ದನಗೌಡನ ಸುಪ್ತಕ್ರೋಧ ಹೊರಬಂದು—ಒಂದು ಹಂಚಿಕೆ ಹಾಕಿತು. ತನ್ನ ಆಳು ಹನುಮನಿಗೆ ಅದರಂತೆ ಸೂಚನೆ ಕೊಟ್ಟದ್ದೂ ಆಯಿತು. ರಾತ್ರಿ ಗೌಡ ಮನೆಯಲ್ಲಿಯೇ ಮಲಗಿ- ಕೊಂಡ. ಇನ್ನೂ ಚುಮುಚುಮು ನಸುಕಿನಲ್ಲಿಯೇ ಹನುಮ ಕೂಗುತ್ತಾ ಬಂದು “ಗೌಡರ....ಗೌಡರ, ನಮ್ಮ ಮನಿ ಕಳವ

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ ಕೊಡುತ್ತದೆ.

ತ್ತೈತಿ " ಎಂದು ಗಲಭೆ ಎಬ್ಬಿಸಿದ. ಊರ ಜನ ಕೂಡಿತು. ಗೌಡರು ಓಲೆಕಾರನ ಜೊತೆಗೆ ಒಂದು ಓಲೆ ಕಳುಹಿ, ಹತ್ತಿರದ ಹಳ್ಳಿಯಲ್ಲಿ ತಂಗಿದ್ದ ಪೋಲೀಸ ಸಬ್‌ಇನಸ್ಪೆಕ್ಟರನ್ನು ಕೂಡಲೆ ಬರುವಂತೆ ಮಾಡಿ— ಹನುಮನ ಮನೆಯ ಕಡೆಗೆ ಹೊರಟ. ಗೌಡರು ಹನುಮನಿಗೆ "ನಿನಗ ಯಾವ ವ್ಯಾಲೆ ಸಂಶೇ ಬರತೈತಿ? " ಎಂದರು. ಹನುಮ ತಟ್ಟನೆ " ಭರಮ.... ಬ್ಯಾಡರ ಭರಮ. ನಮ್ಮ ಮನಿಗೆ ಈಗ ವ್ಯಾಲಿಂದ ವ್ಯಾಲೆ ಬರತಿದ್ದ. " ಎಂದು ಹೇಳಿಕೊಟ್ಟ ಮಾತನ್ನು ಒಪ್ಪಿಸಿದ. ತೋಟದಿಂದ ಬರುತ್ತಿದ್ದ ಗೌಡರ ಆಳು, ಒಂದು ಸಂದುಕು ಹೊತ್ತುಕೊಂಡು ಬಂದು ' ಗೌಡರ.... ಯಾರೋ ಕಳ್ಳರು ನಮ್ಮ ತ್ವಾಟದ ಹತ್ತೇಕ ಒಗೆ-ದಿದ್ದಾರು'' ಎಂದು ಹನುಮನ ಸಂಶಯಕ್ಕೆ ಸಾಕ್ಷಿಹಾಕಿದ! ಗೌಡರಿಗೆ ಇನ್ನೇಕೆ ಅಂಜಿಕೆ ಉಳಿಯಬೇಕು ? ಒಬ್ಬ ಓಲೆಕಾರನನ್ನು ಕಳುಹಿ ಭರಮನನ್ನು ಕರೆಯಿಸಿದರು. ಅಷ್ಟರಲ್ಲಿ ಸಬ್‌ಇನಸ್ಪೆಕ್ಟರು ಬಂದು ಗೌಡರ ಅತಿಥಿಗಳಾಗಿಯೇ ಬಿಟ್ಟಿದ್ದರು. ಭರಮ ಗಾಬರಿಯಾಗಿ " ಗೌಡರ, ಯಾಕ ಕರಿಸಿದಿರಿ ? " ಎಂದ.

ಗೌಡ ಆಢ್ಯತೆಯಿಂದ " ಫೌಜದಾರರನ್ನು ಕೇಳು " ಎಂದು ಒಂದು ಸಿಗರೇಟು ಹೊತ್ತಿಸಿದ. ಭರಮ ಏನು ಹೇಳಿಕೊಂಡರೂ ಪ್ರಯೋಜನವಾಗಲಿಲ್ಲ. ನಿಂಗವ್ವ ಗೌಡರ ಮನಿಗೆ ಬಂದು ಹೇಳಿಕೊಂಡಳು. ಸಿದ್ದನಗೌಡ ಅವಳಿಗೆ ತಾನು ಉಪಕಾರ ಮಾಡಿ ಅವಳನ್ನು ಈ ಪ್ರಸಂಗದಿಂದ ಉಳಿಸಿಕೊಂಡೆನೆಂದು ನಟಿಸಿ " ನಿಂಗವ್ವಾ....ಇಂಥ ಬದ್ಮಾಷ್....ಮನಸ್ಯಾನ್ನ ಮನ್ಯಾಗ ಇಟ್ಟುಕೊಂಡಿ. ನಿನಗ ಕಚೇರಿಗೆ ಹೋಗೋ ಪರಸಂಗ ಬರ-ತಿತ್ತು." ಎಂದು ನುಡಿದ. ನಿಂಗವ್ವ ಸುಮ್ಮನಾದಳು. ಮತ್ತೆ ಗೌಡ. " ನಿಂಗವ್ವ ಬಹಳ ಒಳ್ಳೇ ಹೆಣಮಗಳು " ಎಂದು ಫೌಜದಾರರಿಗೆ ನುಡಿದ. ನಿಂಗವ್ವ ಯಾವುದೂ ಮಾತನಾಡದೆ, ಮನದಲ್ಲಿ ಮಿಡುಕುತ್ತ ಮನೆಗೆ ಹೋದಳು ಭರಮ ಕಳ್ಳನಾಗಿ ಫೌಜ-ದಾರರ ಹಿಂದೆ ಅಂದು ಹೋಗಲೇಬೇಕಾಯಿತು.

ಸಿದ್ದನಗೌಡನಿಗೆ ಭರಮನನ್ನು ಜೇಲಿಗೆ ಕಳುಹಿದ ಸಂತೋಷ ಹೇಳತೀರದ್ದು. ಮಲ್ಲಿ ಇನ್ನು ತನ್ನವಳೆಂದೇ ಅವನ ಮನದ ಎಣಿಕೆ. ಮರುದಿನ ಮುಂಜಾವಿನಲ್ಲಿ ಜರದ ರುಮಾಲು ಸುತ್ತಿಕೊಂಡು, ಒಳ್ಳೇ ಆಢ್ಯತೆಯಿಂದ ನಿಂಗವ್ವನ ಗುಡಿಸಿಲಿಗೆ ಬಂದ. ಆದರೆ ಬಾಗಿಲಿಗೆ ಕೀಲಿ ಬಿದ್ದಿತ್ತು. ಅವನು ಹಾಕಿದ ಹಂಚಿಕೆಗೆ ನಿಂಗವ್ವ ಯಾವ ಹೊಂಚು ಹಾಕಿದ್ದಳೊ! ಸಿದ್ದನಗೌಡ ಇಲ್ಲದ ಬಣ್ಣದ ಮಾತು ಹೇಳಿ ನಿಂಗವ್ವನನ್ನು ಈ ಕಳವಿನಿಂದ ಪಾರು-ಮಾಡಿದೆನೆಂದು ಹೇಳಬಂದಿದ್ದ. ಮಲ್ಲಿಯನ್ನು ಕಾಣುವ ಆತುರವಂತೂ ಇದ್ದೇ ಇದ್ದಿತು! ಆದರೆ ಅವನಿಗೆ ಈಗ ನಿರಾಶೆಯ ಮೊನೆ ಬಲವಾಗಿ ಚುಚ್ಚಿತು. ಗೌಡ ಮನೆಗೆ ಬಂದು ಹನುಮನಿಗೆ ಎಲ್ಲವನ್ನೂ ಹೇಳಿದ. ಕೊನೆಗೆ ಹನುಮ ಅಲ್ಲಿ ಇಲ್ಲಿ ತಿರುಗಾಡಿ ನಿಂಗವ್ವ ಊರು ಬಿಟ್ಟು ಹೋದಳೆಂದು ಗೌಡನಿಗೆ ಸುದ್ದಿ ಮುಟ್ಟಿಸಿದ. ಗೌಡ ಕೆಲವೇಳೆ ಸುಮ್ಮನೆ ಕುಳಿತು " ಹೊಟ್ಟೆಗೇನ ಮಾಡತಾಳು ತಾನೇ ಬರತಾಳೇಳು! " ಎಂದು ನುಡಿ[...] ತೋಟದ ಕಡೆಗೆ ಹೊರಟ.

* * * *

ಭರಮ ನಿರಾಪರಾಧಿಯಾದರೂ ನ್ಯಾಯದೇವತೆಯು ಅವ[...] ಶಿಕ್ಷೆ ವಿಧಿಸಿದ್ದಳು! ಅವನು ಸೆರೆಮನೆಗೆ ಆರು ತಿಂಗಳು ಹೋಗ[...] ಬೇಕಾಯಿತು. ಭರಮ ಇಪ್ಪತ್ತೈದು ವರುಷದ ಹರಯದ ಹುಡು[...] ಮಲ್ಲಿಯ ವಿಚಾರವಂತೂ ಅವನಿಗೆ ತಪ್ಪದಾಯಿತು. ಈ ಅವಧಿ[...] ಯಲ್ಲಿ ಮಲ್ಲಿ ಗೌಡನ ದಾಸಿಯಾದರೆ ಗತಿಯೇನು ? ಛೀ....ಎಂದ[...] ಆಗದು. ನಿಂಗವ್ವ, ಏನಾದರೂ ಹಾಗೆ ಮಾಡಗೊಡಲಾರಳೆಂ[...] ಅವನ ಮನ ಒತ್ತಿ ಹೇಳಿತು. ' ನಿಂಗವ್ವ ಮಲ್ಲಿಯನ್ನು ಬೇರೊಬ್ಬನ[...] ಮದುವೆ ಮಾಡಿಕೊಟ್ಟರೆ ? ' ಎಂಬ ಸಂಶಯವೂ ಅವನನ್ನ[...] ಮುತ್ತಿತು. ಹೀಗೆ ಅನೇಕ ವಿಚಾರಗಳ ಸಂತೆಯಾಯಿತ[...] ಅವನ ತಲೆ!

* * * *

ನಿಂಗವ್ವನು ಅಂದಿನ ರಾತ್ರಿಯೇ ಇದ್ದ ತನ್ನ ನಾಲ್ಕು ಸಾಮಾನುಗಳನ್ನು ಕಟ್ಟಿಕೊಂಡು ಮಲ್ಲಿಯೊಡನೆ ಯಾವ ನಿರ್ಧಾರವಿಲ್ಲದೆ... ಹಳ್ಳಿಯ ಹತ್ತಿರವೇ ಇದ್ದ ರೇಲ್ವೆ ನಿಲ್ದಾಣಕ್ಕೆ ಹೊರಟುಹೋದಳು ಅಂದು ಏಕೋ—ನಿಲ್ದಾಣದಲ್ಲಿ ಬರೇ ಕೂಲಿಕಾರರೇ ನೆರೆದಿದ್ದರು ಒಂದು ಗಿಡದಡಿಯಲ್ಲಿ ಒಬ್ಬ ಮುದುಕಿ ಹನ್ನೆರಡು ವರುಷ[...] ಹುಡುಗನನ್ನು ಕೂಡಿಸಿಕೊಂಡು ಕುಳಿತಿದ್ದಳು. ನಿಂಗವ್ವ ತನ್ನ ಸಾಮಾನು ಇಳುಹಿ ಅಲ್ಲಿಯೇ ಮಲ್ಲಿಯೊಡನೆ ಕುಳಿತಳು. ನಿಂಗವ್ವ " ಯವ್ವಾ, ಯಾ ಊರಿಗೆ ಹೋಕ್ಕಿದಿ ? " ಎಂದು ಮುದುಕಿಯನ್ನು ಕೇಳಿದಳು. ಆ ಮುದುಕಿ "ನಾವು ಕೂಲಿಕಾರ್ರು....ಇಲ್ಲೆ ಹೊಳಿಗೆ.... ಆಣೆಕಟ್ಟು ಕಟ್ಟತಾರು....ಅಲ್ಲಿಗೆ ಹೊಕ್ಕೇನಿ'' ಎಂದಳು. ಮಲ್ಲಿ ''ಇವಾ ನಿನ್ನ ಮೊಮ್ಮಗ ಏನು''? ಎಂದಳು. ಮುದುಕಿಯ ಕಣ್ಣಲ್ಲಿ ನೀರೂರಿತು. ನಿಂಗವ್ವ '' ಯಾಕ ತಾಯಿ ಅಳತೀದಿ ? '' ಎಂದು ಕಳಕಳಿಯಿಂದ ಕೇಳಿದಳು. ಮುದಿಕಿ " ಯವ್ವಾ, ನನ್ನ ಮಗಳು ಹೋದಳು. ಮೊಮ್ಮಗ ಇವಾ. ಏನ ಮಾಡೋದು ದೈವಕ್ಕ!" ಎಂದು ಎಲ್ಲಾ ದುಃಖ ತೋಡಿಕೊಂಡಳು. ಸುಮಾರು ಅರ್ಧತಾಸಿನಲ್ಲಿ....ಅವರೆಲ್ಲ ಹತ್ತಿರದ ಬಳಗದವರಾದಂತಾದರು. ನಿಂಗವ್ವ " ತಾಯಿ, ನಾವೂ ಅಲ್ಲಿಗೇ ಬರತೇವಿ ಕೂಲಿಗೆ " ಎಂದು ಬಾಯಿ ತೆರೆದಳು. ಮುದುಕಿ " ಬಾ.... ಎಲ್ಲಾರು ಒಂದು ಗುಡಸಲಾ ಕಟ್ಟೋನು " ಎಂದು ಹೇಳಿದ್ದಕ್ಕೆ ಮಲ್ಲಿಗೆ ಹಿಡಿಸಲಾರದಷ್ಟು ಆನಂದವಾಯಿತು. ದೂರದಲ್ಲಿ ಬರುತ್ತಿರುವ ಗಾಡಿಯ ಸೀಟಿ ಇವರನ್ನು ಜಾಗೃತಗೊಳಿಸಿತು. ಎಲ್ಲರೂ ಒಟ್ಟಾಗಿ ಹೊಟ್ಟೆತುಂಬಿ-ಕೊಳ್ಳಲು ಹೊರಟರು!

* * * *

ಭರಮ ಜೇಲಿನ ಹೀನ ಬಾಳನ್ನು ಅನುಭವಿಸಿ ಹೊರಗೆ ಬಂದಾಗ, ಮುಂದೆ ಎಲ್ಲಿಗೆ ಹೋಗಬೇಕು— ಏನು ಮಾಡಬೇಕೆಂಬ

ಚಿಂತೆ ಅವನನ್ನು ಬೆನ್ನುಹತ್ತಿತು. ತಿರುಗಿ ತನ್ನ ಹಳ್ಳಿಗೆ ಹೋಗ-ಬೇಕೆ— ಅದು ಅವನಿಗೆ ಬೇಡವಾಯಿತು. ಮಲ್ಲಿ ಗೌಡನ.... ದಾಸಿಯಾಗಿರಬಹುದು ನಿಂಗವ್ವ.... ತನ್ನನ್ನು ಕರೆಯುವಳೇ ದೊಡ್ಡಪ್ಪನ ಮನೆಯಲ್ಲಿ....ಅವನನ್ನು ಮುಂದೆ ಕರೆಯುವವರಾರು? ಅವನಿಗೆ ಇದಲ್ಲದೆ ಸಿದ್ದನಗೌಡನ ಅಂಜಿಕೆಯಂತೂ ದೆವ್ವನಂತೆ ಬೆನ್ನುಹತ್ತಿತ್ತು. ರೈಲಿನಲ್ಲಿ ಬಂದು ಕುಳಿತಾಗ....ಹುಚ್ಚನಂತೆಯೇ ಆಚರಿಸಿದ! ಅವನು ಕುಳಿತ ಡಬ್ಬಿಯಲ್ಲಿ ಕೂಲಿಕಾರರ ಬಳಗವೇ ತುಂಬಿತ್ತು. ಅವರು ನಕ್ಕು ನಲಿಯುತ್ತಿದ್ದರು! ಭರಮು ಚುಟ್ಟಾ ಸೇದುವುದನ್ನು ಬಿಟ್ಟು ಒಂದು ವರುಷವಾಗಿತ್ತು. ಮತ್ತೆ ಅವನಿಗೆ ಸೇದಬೇಕೆನ್ನಿಸಿತು. ಒಬ್ಬನನ್ನು ಕೇಳಿ ಒಂದನ್ನು ತೆಗೆದುಕೊಂಡು ಸೇದಹತ್ತಿದ. ಆ ಜನರ ಮಾತಿನಲ್ಲಿ ತಾನೂ ನಾಲ್ಕು ಮಾತ-ನಾಡಿದ. ಅವರು ಹೊಳೆಯ ಆಣೆಕಟ್ಟಿನ ಕೆಲಸಗಾರರಾಗಿದ್ದರು. ತಾನು ಅವರ ಜೊತೆಯಲ್ಲಿ ಬರುವುದಾಗಿ ಕೇಳಿಕೊಂಡ. ಅವರು ಒಪ್ಪಿಕೊಂಡದ್ದಕ್ಕೆ ಅವನಿಗೆ—ಏನೋ ಒಂದು ಹೊಸತನ ಬಂದಂ-ತಾಯಿತು !

ಆಣೆಕಟ್ಟು ಕಟ್ಟುವಲ್ಲಿ ನಡೆದ ಕೆಲಸ ನೋಡಿ ಭರಮು ದಂಗು ಬಡಿದ. ಎಷ್ಟು ಜನ ದುಡಿಯುವವರು! ಗಂಡ-ಹೆಂಡರು ಜೊತೆ-ಯಾಗಿ ಕೂಲಿ ಮಾಡುತ್ತಿದ್ದರು. ಭರಮುನಿಗೆ ಮಲ್ಲಿಯ ನೆನಪು ಬಂದುಹೋಯಿತು ಆ ವಿಚಾರ ಬಿಟ್ಟು ದುಡಿಯುವುದಕ್ಕೆ ಪ್ರಾರಂಭ ಮಾಡಿದ. ಎಳೆಂಟು ದಿವಸಗಳಲ್ಲಿ ಇದ್ದದ್ದರಲ್ಲಿಯೇ ಅವನಿಗೆ ನೆಮ್ಮದಿಯಾಯಿತು. ಒಂದು ದಿನ ಒಬ್ಬ ಮೇಲಧಿಕಾರಿ ಭರಮು ದುಡಿಯುತ್ತಿದ್ದ ಗುಂಪಿನವರನ್ನೆಲ್ಲ ಮತ್ತೊಂದು ಕಡೆಗೆ ಕೆಲಸ ಮಾಡಲು ಹೇಳಿದ. ಭರಮು ಮರುದಿನ ಹೊಳೆಯ ಆಚೆಯ ದಂಡೆಗೆ ತನ್ನ ಸಲಕರಣೆಗಳೊಂದಿಗೆ ಹೊರಟಾಗ....ಮಲ್ಲಿ ಎದುರಿ-ನಲ್ಲಿಯೇ ಬಂದು ಬುಟ್ಟಿಹೊತ್ತುಕೊಂಡು ಎದುರಾದಳು. ಮಲ್ಲಿ ಭರಮುನನ್ನು ನೋಡಿದಳು. ಅವಳು ತನ್ನ ಕಣ್ಣುಗಳನ್ನೇ ತಾನು ನಂಬದಾದಳು. ಭರಮು ಯಾವ ಯೋಚನೆಯೂ ಇಲ್ಲದೆ ಮುಂದೆ ಸಾಗಿದ. ಮಲ್ಲಿ ಹಾಗೆಯೇ ಬಿಟ್ಟರೆ ತಪ್ಪಿಸಿಕೊಳ್ಳಬಹುದೆಂದು "ಮಾವಾ....ಭರಮಾ" ಎಂದಳು. ಭರಮು ತಿರುಗಿದ. ಮಲ್ಲಿ ಅವನೆದುರಿಗೆ ನಿಂತಿದ್ದಾಳೆ! ಮಲ್ಲಿಯೂ ಬೆರಗುಗಣ್ಣಿನಿಂದ ಭರಮು-ನನ್ನು ನೋಡಿ ಮೋರೆ ಕೆಳಗೆ ಹಾಕಿದಳು. ಭರಮು ತುಸು ಸಾವರಿಸಿಕೊಂಡು "ಮಲ್ಲವ್ವಾ, ಊರ ಬಿಟ್ಟು ಇಲ್ಲಿಗೆ ದುಡಿಯಾಕ ಬಂದೀ-ದೀನು?" ಎಂದು ಮಾತಿಗೆ ಮೊದಲು ಮಾಡಿದ. ಮಲ್ಲಿ ಭರಮು-ನನ್ನು ತೀಕ್ಷ್ಣವಾದ ಒಂದು ನೋಟದಿಂದ ನೋಡಿ "ಯವ್ವಾ.... ಏಕಪ್ಪಾ....ಅಂತ ಮಾತಾಡ್ಲಾಕ ಕಲತೇನು?" ಎಂದು ತನ್ನ ಕಾಲಿನಿಂದ ನೆಲ ಕೆದರಹತ್ತಿದಳು.

"ನಿಂದು ಮದಿವಿ ಆಗಿಲ್ಲ?" ಆತುರದಿಂದ ಕೇಳಿದ ಭರಮು.

"ಯಾರ ಕೂಡ?" ಮಲ್ಲಿ ಸವಾಲು ಹಾಕಿದಳು.

"ನಿಂಗವ್ವ ಮದಿವಿ ಮಾಡತೇನಿ ಅಂತಿದ್ಲು."

"ನೀನ ಹೋದೆಲ್ಲ" ಮಲ್ಲಿ ಅಳಹತ್ತಿದಳು ಭರಮು ಅವಳ ಕೈ ಹಿಡಿದು "ಅಳಬ್ಯಾಡ ಬಿಡು. ದುಃಖ ಬಂದರ ಅನಭೋಗಿಸಬೇಕು. ಅತ್ತಿ ಎಲ್ಲಿ ಅದಾಳು?" ಮಲ್ಲಿಯ ದುಃಖ ಮೇರೆ ಮೀರಿತು. ಭರಮು ಹುಚ್ಚನಾದ. ತುಸು ತಡೆದು "ಸತ್ತು ಐದು ತಿಂಗಳಾತು" ಎಂದಳು

"ನೀ ಒಬ್ಬಾಕೇ ಅದೀಯೇನು?" ಎಂದ ಭರಮು ಬಿರುಸಾಗಿ, "ನನಗ ದೇವರು...ಅಮ್ಮನ್ನ ಕೊಟ್ಟಾನು. ಮತ್ತು ನನ್ನ ತಮ್ಮನೂ ಅದಾನು" ಎಂದು ಹೇಗೋ ಮಾತು ಮುಗಿಸಿದಳು. ದೂರದಲ್ಲಿ ಗುಡಿಸಲೆದುರಿನಲ್ಲಿ ಆ ಮುದುಕಿ ಕುಳಿತಿದ್ದಳು. ಮಲ್ಲಿ ಭರಮುನ ಕೈ ಹಿಡಿದು ಸಾಗಿದಳು. ಗುಡಿಸಲ ಕಡೆಗೆ, ಇತ್ತ ಸಾವಿರಾರು ಜನರು ಯಾವ ಪರಿವೆಯಿಲ್ಲದೆ ದುಡಿಯುತ್ತಿದ್ದರು!!

'ಬಗನ' ಬಾಲಾಮೃತ

ಮಕ್ಕಳ
ಸದೃಢತೆಗಾಗಿ
'ಬಗನ'
ಬಾಲಾಮೃತ-
ವನ್ನು ಉಪ-
ಯೋಗಿಸಿರಿ.

ಮುಖ್ಯವಾದ
ಮಕ್ಕಳ
ಯಕೃತು
ಮತ್ತು
ಹೊಟ್ಟೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ 'ಗ್ರಾಯಿಪ್ ಹೀಲರ್'
ಅಂಶವೂ ಇರುವದರಿಂದ, ಇದು ಮಕ್ಕಳ
ಉತ್ತಮ 'ಟೋನಿಕ್ಕು' ಇರುವದು.

THE NATIONAL PHARMACIES & PHARMACEUTICALS Ltd. DHARWAR.

—o—

ಪಂಪಭಾರತದ ಕಥಾಂತರಗಳು

(ದೇಹಲೀ ದೀಪನ್ಯಾಯ)

ಶ್ರೀ ಕೆ. ವೆಂಕಟರಾಯಾಚಾರ್ಯ, ಸುರತ್ಕಲ್

★

ಪಂಪಭಾರತದಲ್ಲಿ ಅಲ್ಲಲ್ಲಿ ಕಥಾವ್ಯತ್ಯಾಸವನ್ನು ನೋಡುವೆವು. ಈ ವ್ಯತ್ಯಾಸಗಳಲ್ಲಿ ಪಂಪನು ತೋರಿಸಿದ ಔಚಿತ್ಯವೆಂತಹದು ?

★

ಪಂಪನು ಕನ್ನಡದ ಆದಿಕವಿಯೆಂದು ಮಾತ್ರವಲ್ಲ, ಕನ್ನಡದ ವಾಲ್ಮೀಕಿಯೂ ಹೌದೆಂದರೆ ತಪ್ಪಲ್ಲ. ಏಕೆಂದರೆ, ಇವನಿಗಿಂತ ಮೊದಲಲ್ಲಿ ಇಡಿಯಾದ ಕಾವ್ಯವನ್ನು ಆದಾರೂ ರಚಿಸಿಲ್ಲ (ಸಿಕ್ಕಿಲ್ಲ) ವೆಂದು 'ನಾಡೋಜಪಂಪ'ದಲ್ಲಿ ಹೇಳಿದೆ.

ಆದರೆ, ಈ ನಾಡೋಜನು ತನ್ನ ಆ ಕಾವ್ಯದಲ್ಲಿ, ಮಹಾಭಾರತ-ದಲ್ಲಿ ಕಾಣಬರುವ ಕೆಲವು ಅನೌಚಿತ್ಯಗಳನ್ನು ಬಿಟ್ಟು, ಕೆಲವನ್ನು ತಿದ್ದಿ, ಕೆಲವೆಡೆ ಹೊಸಕತೆಯನ್ನು ತುಂಬಿ, ಇನ್ನೂ ಕೆಲವೆಡೆ ತುಸು ಮಾರ್ಪಡಿಸಿದ್ದಾನೆಂದು ಹೇಳುತ್ತಾ, ಮುಖ್ಯವಾದ ಕೆಲವು ವ್ಯತ್ಯಾಸಗಳನ್ನು ಉದಾಹರಿಸಿದ್ದಾರೆ, ಪಂಪಭಾರತದ ಉಪೋ ದ್ಘಾತದಲ್ಲಿ.

ಇದೀಗ ಆ ಕಥಾಂತರಗಳ ಔಚಿತ್ಯವಿಚಾರವನ್ನು ಬರೆಯ ಲೆಳಸಿದೆ. ಶ್ರೀಮಾನ್. ದಿ. ಮುಳಿಯ ತಿಮ್ಮಪ್ಪಯ್ಯನವರು ತಮ್ಮ ಉದ್ಗ್ರಂಥದಲ್ಲಿ ಆ ಕೆಲವನ್ನು ವಿವೇಚಿಸಿದ್ದಾರೆ, ಅರಿಕೇಸರಿಯ ಬಣ್ಣನೆಯ ಹೆಚ್ಚಳವು ಅಲ್ಲಿ ಆಭಾಸವಾಗಿಲ್ಲೆಂದೂ ಸಾರಿದ್ದಾ-ರೆಂದು ಈ ಮೊದಲಲ್ಲಿ ನೆನೆಸಿದರೆ ಅಪ್ರಸ್ತುತವಾಗದು ! ವ್ಯಾಸ-ಪಂಪರ ಭಾರತಗಳನ್ನು ದೇಹಲೀದೀಪನ್ಯಾಯದಿಂದ ನಿರೀಕ್ಷಿಸಿದೆ.

೧. ಶಿಖಂಡಿಯು ದ್ರುಪದನ ಮಹಾದೇವಿಗೆ ಮಗಳಾಗಿ ಹುಟ್ಟಿ, ಪುರುಷವೇಷದಲ್ಲಿ ಮದುವೆನಿಂದ ಮೇಲೆ, ಒಬ್ಬ ಯಕ್ಷನಿಂದ ಪುರುಷತ್ವವನ್ನು ಪಡೆದುದೆಂಬುದರ ಬದಲು, 'ಮಗನಾಗಿ ಹುಟ್ಟಿ ಕಾರಣಾಂತರದೊಳ್ ಶಿಖಂಡಿಯಾಗಿರ್ದ'ನೆಂಬುದೇ ಸರಿಯಾಗಿದೆ: ಹೆಣ್ಣಾಗಿ ಹುಟ್ಟಿದವನು ಗಂಡಾಗುವ ಯಕ್ಷನರಕ್ಕಿಂತ, ಮಗನಾಗಿ ದ್ದವನೇ ಶಿಖಂಡಿ (ನಪುಂಸಕ—ಪುರುಷತ್ವಹೀನ) ಯಾಗುವುದ ರಲ್ಲಿ ದೈಹಿಕವಿಜ್ಞಾನಿಗಳ ಸಮ್ಮತಿಯಿದೆ; ಹಾಗೂ ಶಿಖಂಡಿ ಯೆಂಬ ಹೆಸರಿಂದಲೇ ಆತನ ಹುಟ್ಟನ್ನು ವಿವರಿಸಿದಂತಿದೆ. ಆದರೆ, ವ್ಯಾಸಭಾರತದಲ್ಲಿ ಆವೊಂದು ನುಡಿಯೂ ಈ ತೆರಕ್ಕೆ ಪುಷ್ಟಿಯಾಗಿ ಲ್ಲದೆ, ಪುರಾಣಾಂತರ ವ್ಯಾಗ್ಯವೂ ಹೌದು !

೨. ಅಂಬಿಕೆ-ಅಂಬಾಲಿಕೆಯರು ಪುತ್ರಾರ್ಥಿಗಳಾಗಿ ವ್ಯಾಸನ ದೇಹಸಂಬಂಧವನ್ನು ಮಾಡಿದ್ದಾರೆಂಬುದನ್ನು ಬಿಟ್ಟು, 'ಮುನೀಂದ್ರನ ದಿವ್ಯದೃಷ್ಟಿಮಂತ್ರದೊಳೆ ಗರ್ಭವಾಯ್ತೆಂ'ದಿದೆಯಾದರೂ ; ಅದೇ ಮುಂದಣ ಗದ್ಯದಲ್ಲಿ (೧. ೮೫ ವ) 'ಅಂತು ದಿವ್ಯ ಸಂಯೋಗದೊಳಿರ್ವರುಂ ಗರ್ಭಮಂ ತಾಳ್ದರ್' ಎಂದು ಹೇಳುತ್ತಾ, ಬರಿಯ ದಿಟ್ಟಿ (ನೋಟ) ಯಿಂದಲ್ಲ, ದಿಟ್ಟಿಸಿ ಸಂಗಮಿಸಿದ್ದನೆಂದು ಪಂಪನು ಹೇಳಿದಂತಿದೆ !

೩ ದ್ರೋಣನು ದ್ರುಪದನಿಗೆ 'ಒದೆದುದು' ಮೂಲಕ್ಕಿಂತ ಹೆಚ್ಚಿಗೆ ಸಾಜವಿದೆ : ದ್ರುಪದನು 'ಅಂತೆಂಬನಾರ್ಗೆಂ'ದು ಮೊದಲಾಗಿ ಸಭಾಂತರದಲ್ಲಿ ನಿಂದಿಸಿದುದಕ್ಕೆ ಪ್ರತಿಯಾಗಿ, ದ್ರೋಣನ ಶಿಷ್ಯನು ಆತನನ್ನು ಕಟ್ಟಿತಂದು, ದ್ರೋಣನ ಪಾದಮೂಲದಲ್ಲಿ ಇಳುಹಿದಾಗ, ದ್ರುಪದನ ತಲೆಯು ದ್ರೋಣನ ಎಡಗಾಲಿಗೆ ಮುಟ್ಟುವುದರಲ್ಲಿ ಆಶ್ಚರ್ಯವಿಲ್ಲ ! ಹಾಗೆಂದು ತಾನೇ ಪಂಪನು ರೂಪಿಸಿರಬಹುದು, ಆ ಕಾರಣ ಮೂಲದ ಅನ್ವೇಷಣಕ್ಕೆ ಅವಕಾಶವಿಲ್ಲ.

೪. ಪಾಂಡವರೈವರಿಗೂ ನಡೆದ ದ್ರೌಪದೀವಿವಾಹವು ಈ ಸಮಸ್ತ ಭಾರತದಲ್ಲಿ ಚಾರಿತ್ರಿಕತೆಗೆ ಸರಿಯಾಗಿ ಅರ್ಜುನನೊಬ್ಬನೊಂದಿಗೆ ಮಾಸಲಾಗಿರಿಸಿದೆಯಾದರೂ, ಮೂಲದಲ್ಲಿ ಈ ಸಂಗತಿಗೆ ಬೆಂಬಲ-ವಾಗಿ ವರ್ಣಿತವಾಗಿರುವುದನ್ನೂ ನೋಡಬಹುದು. ಅಲ್ಲಿ ಮೊದಲ-ಬಾರಿಗೆ ದ್ರೌಪದಿ–ಯುಧಿಷ್ಠಿರರ ವಿವಾಹವಾಗಿ, ರಾಜಗೃಹದಿಂದ ಹೊರಟರು ಈ ಕ್ರಮದಿಂದ, ಪ್ರತಿದಿನದಲ್ಲೂ ಒಬ್ಬೊಬ್ಬರಾಗಿ ಆಕೆಯ ಕೈಹಿಡಿದರೆಂದೂ. ಆಕೆಯಾದರೋ ಪ್ರತಿದಿನವೂ ಕನ್ಯೆ-ಯಾಗೇ ಇರುತ್ತಿದ್ದಳೆಂದೂ ವರ್ಣಿಸಿದುದನ್ನು ನೋಡಿದರೆ, ಮೇಲಿನ ಕತೆಯೂ (ಪಂಪನಲ್ಲಿ) ಸರಿಹೊಂದಿಕೆಯಾಗುವುದಲ್ಲವೇ ? ಪಂಪನು ತನಗೆ ಬೇಕಾದ 'ಅರ್ಜುನ–ದ್ರೌಪದೀವಿವಾಹವನ್ನು ಮಾತ್ರ ಎತ್ತಿ-ಕೊಂಡನೆಂದು ಹೇಳಬಹುದು. ಅಂದರೆ ಸ್ಥಾಲೀಪುಲಾಕನ್ಯಾಯದ ಕಥಾನುವಾಚಕನದು !

೫. ಅರ್ಜುನನು 'ನಾರದನ ಕಟ್ಟು ಮೀರಿದುದಕ್ಕಲ್ಲದೆ, ತಾನೇ ತಾನಾಗಿ ದಿಕ್‌ಪ್ರದಕ್ಷಿಣೆಗೆಳಸಿ ಹೊರಟನೆಂಬುದು ಆತನ

ವೀರತೆಯ ಪ್ರದರ್ಶನಕ್ಕೆ ತಕ್ಕಂತಿದೆ. ಹಾಗೂ ನಾರದನ ಕಟ್ಟಿನಂತೆಯೇನೋ. ಆಗ ದ್ರೌಪದಿಯು ಅರ್ಜುನನ ಸರ್ತಿಗೆ ಬಂದಿದ್ದಳೆಂದೂ, ಅವಳ ತಳ್ತ ತೋಳ್ಗಳಿಂ ' ಮೆಲ್ಲಮೆಲ್ಲನೆ ' ಪತ್ತುವಿಡಿಸಿ ' ಪೊರವಟ್ಟನೆಂದೂ ಹೇಳಿದುದರಿಂದ, ಆ ಕಟ್ಟಿನ ಪಾಲನೆಗಾಗಿ ಹೊರಟನೆಂದಿಲ್ಲದಿರುವುದೂ ಸರಿಯೇ ಸೈ !

೬. ಅರ್ಜುನನು ತೆಂಕಡಲ ಬಳಿಯಲ್ಲಿ 'ಮುನ್ನಿನ ರಾಮಜನ್ಮ' ವನ್ನು ನೆನೆದುದು, ಜೈನಪರಿಭಾಷೆಯಲ್ಲಿದ್ದ ಕೃಷ್ಣಾರ್ಜುನವಿಷಯಕವಾದ (ಇತರ ಮತೀಯರಿಗಿಂತ ತರತಮ) ಭಾವವನ್ನು ಜೈನನಾದ ಈ ಕವಿಯು ಹೆಣೆದಂತಿದೆ.

೭. ಸುಭದ್ರಾಪರಿಣಯವು ಚಾರಿತ್ರಿಕದ ಹಿನ್ನೆಲೆಯುಳ್ಳುದರೊಂದಿಗೆ, " ಅರ್ಜುನನು ಕೃಷ್ಣನ ಮನೆಯಲ್ಲಿದ್ದನು. ಒಮ್ಮೆ ಆಕಸ್ಮಿಕವಾಗಿ ಸುಭದ್ರೆಯನ್ನು ಕಂಡು ಮನಸೋತು, ರೈವತಕ ಪರ್ವತದಿಂದ ಉತ್ಸವವಾಗಿ ಹಿಂದಿರುಗುವ ಸುಭದ್ರೆಯನ್ನು ಅಪಹರಿಸಿದ "ನೆಂಬ ಒಂದು ಪ್ರತಿಯ ಮೂಲಕತೆಗೆ ಅನುವಾಗಿದೆ.

೮. ಅರ್ಜುನನು 'ಜವನೊಳ್ ತಾಗಿ ಪಾರ್ವರ ಪಿಳ್ಳೆಯ ಪೋದ ಜೀವಮಂ ತಂದುದು,' ವ್ಯಾಸಭಾರತದಲ್ಲಿಲ್ಲದ ಹೊಸ ಕತೆಯಾದರೂ, ಅದೇ ಭಾರತದ ಖಿಲರೂಪವಾದ 'ಹರಿವಂಶ' ದಲ್ಲಿದೆ (ಉಪಪರ್ವ ೨—೧೧೩ ಅಧ್ಯಾಯ.). ಭಾಗವತದಲ್ಲೂ ಇದೆ. ಪಂಪನು ಈ ಕತೆಯನ್ನು ತಾನೂ ಓದಿದ್ದೇನೆಂಬರಿಕೆಯನ್ನು ಇಲ್ಲಿ ಸ್ಪಷ್ಟಗೊಳಿಸಿದಂತಿದೆ ವಿನಾ, ' ರಾಮನು ಶಂಬುಕನನ್ನು ಕಾರಣಾಂತರದಿಂದ ಕೊಂದು ಬ್ರಾಹ್ಮಣನೊಬ್ಬನ ಸತ್ತ ಮಗನನ್ನು ಬದುಕಿಸಿದ ಕತೆಯಿಂದ ಆಧರಿಸಿರಬಹುದೆಂಬಾಶಯಕ್ಕೆಡೆಯಿಲ್ಲ ! ಪಂಪನು ' ಉಭಯಭಾಷೆ 'ಯಲ್ಲೂ ನುರಿತವನೆಂದೇ ಇದರಿಂದ ತಿಳಿಯುವುದಲ್ಲವೇ ?

೯. ಸಹದೇವನು ದೂತಮೂಲಕ ಹೇಳಿಸಿ ಲಂಕೆಯಧಿಪತಿಯಿಂದ ಕಪ್ಪಗೊಂಡುದಕ್ಕಿಂತ, ನಕುಲನು ಹೇಳಿಸಿದರೂ ಕೊಡದಾಗ ಅರ್ಜುನನು ಬಾಣಮೂಲಕವಾಗಿ ಕೊಂಡನೆಂಬುದು ಆ ಮೊದಲೆಂದಂತೆ **' ರಾಮನಾದಂದಿನ '** ವಿಭೀಷಣ ಸಖ್ಯವನ್ನು ಹೆಚ್ಚು ಕಳೆಗೂಡಿಸುವುದು.

೧೦. ಕೃಷ್ಣನು ಶಿಶುಪಾಲನನ್ನು ಚಕ್ರದಿಂದಲ್ಲದೆ ' ತಳಿಗೆ ' ಯಿಂದೊತ್ತಿದನೆಂದರೆ, ಜೈನರೀತಿಯಲ್ಲಿ ಕೃಷ್ಣನತ್ತ ದೇವತ್ವದ ಒಪ್ಪಿಗೆಯಿಲ್ಲೆಂದೂ, ಆದಾಗ ಇರುವ ಉಪಕರಣದಿಂದೇ ತರಿದನೆಂದೂ ಹೇಳಿರಬಹುದು. ಹಾಗೂ ಅದೇ ಮುಂದಿನ ಪದ್ಯದಲ್ಲಿ (ಆ. ೬—೬೫) ' ತಿರಿಪಿ ಕರ ಚಕ್ರಮಂ ದನುಜರ ತಲೆಗಳನಸುರವೈರಿ ಮುಳಿದಿ'ಟ್ಟನೆಂದೂ ಹೇಳಿದೆ. ಇಲ್ಲಿ, ಕೃಷ್ಣನು 'ಚಕ್ರಧಾರಿ' ಯೂ ಅಹುದೆಂದು ಪಂಪನೇ ಸಾರಿದ್ದಾನೆ.

೧೧ ವಸ್ತ್ರಾಪಹಾರದ ಕತೆಯು ಅಮುಖ್ಯವೆಂದೇ ಹೇಳಿಲ್ಲ. ಹಾಗೂ ' ಕೌರವನ ತೊಡೆ ಮುರಿವೆ' ನೆಂಬ (ಆ. ೭—೧೩) ಭೀಮನ ನುಡಿಯಾದರೋ, ಕೌರವನು ತೊಡೆದೋರಿದುದರಿಂದಲೇನೇ ಬಂದಿರಬೇಕು ! ' ದ್ರೌಪದಿಯ ಮುಡಿಯೆಳೆ 'ತದಿಂದಲೇ ಕೌರವ ಪಾಂಡವ ವೈರಕ್ಕೆಡೆಯಾಗುವಂತಿದ್ದರೆ, ' ವ್ಯಾಸಮುನೀಂದ್ರ ರುಂದ್ರವಚನಾಮೃತವಾರ್ಧಿಯನೀಸಿ'ದ ಪಂಪನು ' ವರ್ಣಕಂ ಕತೆಯೊಳೊಡಂಬಡಂ ಪಡೆಯೆ 'ತಕ್ಕಷ್ಟು ಆಯ್ದುಕೊಂಡಿದ್ದಾನೆನ್ನಬಹುದು.

೧೨. ಕೌರವ ಗಂಧರ್ವ ಯುದ್ಧದಲ್ಲಿ, ಯುಧಿಷ್ಠಿರನೆಡೆಗೆ ' ಭಾನುಮತಿಯಾಗಮನ 'ವು ತಕ್ಕುದೇ ಆಗಿದೆ. ಆ ಗಂಧರ್ವರು ಕೌರವರೊಂದಿಗೆ ಅವರ ' ದಾರಾಭಿಮರ್ಷಣ 'ವನ್ನು ಕೈಗೊಂಡರೆಂಬುದಕ್ಕಿಂತ, ಬರಿಯ ಕೌರವರನ್ನೇ ಸೆಳೆದರೆಂಬುದೇ ಮೇಲಾದುದು. ಅಂತೆ, ಕೌರವರಾಣಿಯ ವಿಲಾಪವು ಇಲ್ಲಿ ಕವಯಿಸಿದೆ !

೧೩. ಅರಣಿಯನ್ನು ಜಿಂಕೆಯು ಬದಲು, ಆನೆಯೊಯ್ದಿತೆಂಬ ಕಥಾಂತರವು ಹೀಗಿರಬಹುದು. ಅದನ್ನು ಕೇವಲ ಮೃಗಮೊಂದು ಒಯ್ಯುತ್ತಿದ್ದರೆ, ಮುನಿಗಳೇ ಅದರ ಬೆನ್ನಟ್ಟಲು ಬರುತ್ತಿತ್ತು; ಆದರೆ ಆನೆಯಾದುದರಿಂದ ಬೆದರಲೇ ಬೇಕಾಯ್ತೆಂಬ ಆಶಯದಿಂದ ಪಂಪನು ಹೀಗೆ ಮಾರ್ಪಡಿಸಿರಬಹುದು. ಇದರಿಂದ ಅದೇನೂ ಔಚಿತ್ಯವಿಲ್ಲವೇ ಇಲ್ಲವೆನ್ನುವಷ್ಟು ನೀರಸವಾಗಿಲ್ಲ ! ಖಚಿತವಾಗಿಯೂ ಕಾವ್ಯೌಚಿತ್ಯವಿದೆ !

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ.

●

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ ಬರೆಯಿರಿ :

卐

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ .

೧೪. ಕನಕಸ್ವಾಮಿಯು ಅಭಿಚಾರದ ಕೀರ್ತಿಗೆಯಿಂದ ಪಾಲಿಸಲೆಂದೇ ಯಕ್ಷನು ಪಾಂಡವರನ್ನು ಉಪದ್ರವಿಸಿದನೆಂಬ ಭಾವು ಕತೆಯು ಭವ್ಯವಿದೆ; ನೀರಡಿಕೆಗೆ ಕೊಳವನ್ನು ಅರಸಹೋದ ಭೀಮನೂ ಧರ್ಮರಾಯನೂ 'ಇದೇನು ಭೂತವೋ?' ಎಂದೂ, 'ದುರ್ಯೋಧನಕೃತಂ ವಾ' ಎಂದೂ ಆಶಂಕಿಸುವುದನ್ನು ಮೂಲದಲ್ಲಿ ಕಂಡ ಪಂಪನು, ಆ ಮೊದಲ ಘೋಷಯಾತ್ರೆಯಾದೊಡನೆ ನೆರವೇರಿದ ಕೌರವಕೃತ ಯಾಗವನ್ನು ಇಲ್ಲಿಗೆ ಹೊಂದಿಸಿರಬೇಕೆಂದು ತೋರುವುದು. ಆಗಣ ಜನಸಾಮಾನ್ಯರ ನಡೆವಳಿಯನ್ನೂ ಚಿತ್ರಿಸಿದಂತಿದೆ! ಮತ್ತು ಆ ಗಾದೆಯೊಂದರ ಸಾರ್ಥಕ್ಯವನ್ನು ಸಾರಿದೆ.

೧೫. ಕೀಚಕನಲ್ಲಿಗೆ ದ್ರೌಪದೀಗಮನವು ಹೀಗೆ ತಿಳಿಯಬರುವುದು: 'ಆಕೆಯುವನ ಮನದ ಪಕುವಗೆಯನರಿ (ಯ) ದಂತೆಗೆಯ್ವೆ'ನೆಂದು, 'ಅರಿದಂ ತೆಗೆಯ್ವೆ'ನೆಂದು ತಿಳಿವಂತೆಯೂ ಇದೆ. ಹಾಗೂ ಮೂಲದಲ್ಲಿಯಾದರೋ, ವಿಷಾದಿಸಿದ ಕೊನೆಗೆ ಅವಳು ಹೀಗೇ ಒಪ್ಪಿದುದೆಂಬಲ್ಲಿಗೆ ಇದು ಸರಿಬರುವುದು.

೧೬. ಗೋಗ್ರಹಣ ಪ್ರಸಂಗದಲ್ಲಿ ಅರ್ಜುನನ ಕಾಪು ಹೊರಗಡೆಯಿತ್ತೆಂಬುದೇ ಚೆನ್ನು! "ಇದು ನಮ್ಮನಾರಯಲಿ ವೈರಿಯ ಮಾಡಿದ ಗೊಡ್ಡಂ, ಇಲ್ಲಿ ಮಾಣ್ದಿರಲಾಗ, ಪೂಣ್ದವಧಿಯುಂ ನೆರೆದತ್ತು, ಕಡಂಗಿ ಕಾದುವ" ಮೆಂದು ಪಾಂಡವರು ಕೂಡಿ ಯೋಚಿಸಿದ್ದರು. ಅದು ಕಾರಣ, ಹೊರಗಣ್ಗೆ ಅರ್ಜುನನ ಕಾಪುಗೊಂಡರು! ಪಂಪನೂ 'ಪಾಂಡವರ ಹದಿಮೂರು ವರುಷದ ಲೆಕ್ಕಾಚಾರ'ವನ್ನು ಮನದಲ್ಲಿಟ್ಟುಕೊಂಡೇ (ಮುಗಿದುದೆಂದು) ಹೀಗೆ ಕವಯಿಸಿರಬೇಕು.

೧೭. ಕೃಷ್ಣದೌತ್ಯದಲ್ಲಿ ಕೌರವನು 'ಮೆಯ್ಯಳಸಿದಂತೆದ್ದ'ನೆಂದು, ಆತನು ಆಗಣ ಕಾರ್ಯದ ಫಲಿತಾಂಶದತ್ತ ಅಲಸಿದಂತಿದ್ದನೆಂಬುದನ್ನು ರೂಪಿಸಿದಂತಿದೆ! 'ಅಲಸದಂತೆಂ'ಬ ಪಾಠಾಂತರವೂ ಇದೆ!

೧೮. ವಿದುರನು ಬಿಲ್ಲುಡಿದುದು ಮೂಲದಲ್ಲಿಲ್ಲವಾದರೂ ಅಗತ್ಯವಿದೆ: ಯುದ್ಧಕಾಲದಲ್ಲಿ ವಿದುರನು ಕೌರವರೆಡೆಗೆ ಸೇರಿಲ್ಲವೆಂಬುದಕ್ಕೊಂದು ಸಕಾರಣವದು!

೧೯. ಕರ್ಣನ ದಿಗ್ವಿಜಯವೇನೋ ವ್ಯಾಸಭಾರತ (ಶಾಂತಿಪರ್ವ)ದಲ್ಲಿ ಹೇಳಿದೆ. ಪರಂತು, ಚಕ್ಷುಸ್ಸ್ನಾನವು ಕಾಲದಲ್ಲೆಂದುದು ಜೈನಸಾಂಪ್ರದಾಯವೇ ಸೈ!

೨೦. ಅರ್ಜುನನು ಪಾಶುಪತಾಸ್ತ್ರವನ್ನು ಪಡೆದ ಬಳಿಕಲೇ, ಅದರ ಮುಷ್ಟಿಗಾಗಿ ಕೃಷ್ಣನು ಆತನೊಡನೆ ಶಿವನಲ್ಲಿಗೈದುದು. ಹೀಗಿದೆ, ಮೂಲದಲ್ಲಿ: 'ತಸ್ಯ ಪಾರ್ಶ್ವೇ ಚ ಮುಷ್ಟಿಂ ಚ ಸ್ಥಾನಂ ಚಾಲಕ್ಷ್ಯ ಪಾಂಡವಃ (ದ್ರೋಣಪರ್ವ ೮೧-೧೮)' ಇ.

೨೧. ಪಂಪನು ಬಣ್ಣಿಸಿದ ಸೈಂಧವನ ಕಡೆಗಾಲದ ಪರಿಸ್ಥಿತಿಯು ವಿಶೋಚಿತವಿದೆ. 'ಎಂಟು ಅಕ್ಷೌಹಿಣಿ ಸೇನೆಯನ್ನು ಕೊಂದಿರುವ (ದ್ರೋ. ೧೪೬-೧೪೪) ಸೈಂಧವನು ತೀರುವಂದು, ಹಾಗೆ ಮೂಲಕ್ಕೆ ವಿಶೇಷ ವಿರುದ್ಧವಾಗದಂತೆ ಹೇಳಿದೆ.

೨೨. ದ್ರೋಣನ ಪ್ರಾಣವಿಮೋಚನೆಯಲ್ಲಿ ಕಲ್ಪಿಸಿದ ಕಾರಣವು ಸಮಂಜಸವಿದೆ: 'ರಣದಲ್ಲಿ ಮುನ್ನೆ ಬಿಲ್ವಿಸುಟೆನಿದೆಂತು ಪೇಳ್ ಪಿಡಿವೆನಿನ್ನಿದನೆಂದು' ಸಾರಿದ ದ್ರೋಣನಿಗೆ ಸರಿಹೊಂದಿಕೆಯ ಕೃತಿಯಾಗಿದೆಯೆಂದು ನಿಸ್ಸಂದೇಹವಾಗಿ ಹೇಳಬಹುದು.

೨೩. ಕರ್ಣನ ಭೂವಿಜಯಯಾತ್ರೆಯು ವ್ಯಾಸಭಾರತದಲ್ಲಿ (ಶಾಂತಿ. ೨) ಹೇಳಿದುದನ್ನು ಪುರಾಣಾಂತರಗಳ ಕಥಾನ್ವಯದಿಂದ ಇಲ್ಲಿ ಹೇಳಿದೆ.

೨೪. ಕರ್ಣನು ಹುಗಿದು ಪೋದ ರಥವೆತ್ತಿ ಬಂದು ಯುದ್ಧ ಮಾಡಿದುದೆಂದರೆ, 'ಬೆಳಗುವ ಸೊಪರ್ಗಳ ಬೆಳಗಗ್ಗಳಿಸುವವೋಲ್ ಪೋಪ ಪೊಳ್ತರೊಳ್' ಎಂದು ಪಂಪನೇ ಸಾರಿದ್ದಾನೆ. ತೇರ ಹುಗಿತವು ಕೊನೆಗಾಲದ ಮುನ್ಸೂಚಿಯೆಂದಷ್ಟೆ ಮೂಲದ ಆಶಯವು!

೨೫. ಶಲ್ಯನು ಧರ್ಮರಾಯನ ಕಿಡಿಗಣ್ಣುರಿಯಿಂದ ಸುಟ್ಟು ಹೋದನೆಂಬುದು ವಿಚಿತ್ರವಲ್ಲ: 'ಸ ಧರ್ಮರಾಜೋ ಮಣಿಹೇಮದಂಡಾಂ ಜಗ್ರಾಹ ಶಕ್ತಿಂ ಕನಕಪ್ರಕಾಶಾಂ ನೇತ್ರೇ ಚ ದೀಪ್ತೇ ಸಹಸಾ ವಿವೃತ್ಯ ಮದ್ರಾಧಿಪಂ ಕ್ರುದ್ಧಮನಾ ನಿರೈಕ್ಷತ' 'ಅದರಿಂದ ಆಗ ಆತನು ಬೂದಿಗೊಂಡಿಲ್ಲವೆಂಬುದು ನನಗೆ ಅಚ್ಚರಿಯಾಗುತ್ತಿಂ'ದ ಮೂಲ ವಾಕ್ಯವನ್ನು ಅವಲಂಬಿಸಿ ಕೃತಿಸಿದೆ!

೨೬. ಕೌರವನು ವೈಶಂಪಾಯನ ಸರೋವರದಲ್ಲಿ ಅಡಗಿರಲು ಭೀಷ್ಮರು ಜಲಮಂತ್ರೋಪದೇಶವನ್ನು ಮಾಡುವರು. ಮೂಲ ಭಾರತದಲ್ಲಾದರೋ, ಆತನು ತಾನೇ ತಿಳಿದಿದ್ದಾನೆಂದಿದೆ. (ಉದ್ಯೋಗಪರ್ವ) ಆದರೆ, ಇಲ್ಲಿ ಭೀಷ್ಮನ ಮಹತ್ತ್ವಕ್ಕೆಗಾಗಿ ಹೀಗೆ ಮಾರ್ಪಡಿಸಿದ ತೆರವೆನ್ನಬಹುದು.

೨೭. ಅರ್ಜುನನೊಬ್ಬನಿಗೇನೇ ಕೊನೆಯ ಪಟ್ಟಾಭಿಷೇಕವು ನಡೆಯುವುದಕ್ಕೆ ಚಾರಿತ್ರಿಕ ಕಥಾನಕದ ಬೆಂಬಲವು ಪ್ರಾಮುಖ್ಯವೇನೋ ಹೌದು. ಅದರಂತೆ, ಮೂಲಭಾರತದ ಒಂದು ಮಾತು ಇಲ್ಲಿನ ಮೌಲಿಕವಿದೆ: ಧರ್ಮರಾಯನು ವಿರಕ್ತನಾಗಿದ್ದು, ಅರ್ಜುನನೊಡನೆ ಹೇಳುತ್ತಾನೆ—'ಪ್ರಶಾಧಿ ತ್ವಮಿಮಾಮುರ್ವೀಂ ಕ್ಷೇಮಾಂ ನಿಹತಕಂಟಕಾಂ'. (ಶಾಂತಿ) [ಆದರೆ, ಕೊನೆಗೆ ಧರ್ಮರಾಯನಿಗೇನೇ ಪಟ್ಟವಾಗುವುದು. ಆದರೂ,] ಇದೊಂದು ಮಾತು ಪಂಪನಲ್ಲಿ ಮಿನುಗುತ್ತಿದೆಯೆಂದು ಹೇಳಬಹುದು.

ಇವಿಷ್ಟು ಆ ಸಂಗತಿಗಳನ್ನು ಕುರಿತು ಕಾಣಬರುವ ಔಚಿತ್ಯ ವಿಚಾರವಾಯ್ತು. ಇಲ್ಲಿಗೆ ಕಾಣುವ ಅನುಕೂಲ-ಪ್ರತಿಕೂಲವಾದ ಆಶಯಗಳನ್ನು ಬಲ್ಲವರು ಬರೆಯಬೇಕಾಗಿ ವಿನಂತಿಸಿ ವಿರಮಿಸುವೆವು.* ಇತಿ ಶಮ್.

* ಇಲ್ಲಿ ಹೇಳಿದ ವ್ಯಾಸಭಾರತವು ಕಲ್ಕತ್ತಾ ಪ್ರತಿಯಾಗಿದೆ. —ಲೇ.

ಬೆಣ್ಣೆಯಾಕೆ

(ಒಂದು ನಲ್ವಾಡು)

' ಆನಂದಕಂದ '

ನಾ ಸಂತಿಗೆ ಹೋಗಿನ್ನಿ—ಆಕಿ—ತಂದಿದ್ದಳೋ ಬೆಣ್ಣಿ !
ಹಿಂಡು ಹೆಣ್ಣಿನಾಗ ಆಕಿಯೇ ಸರಿ ಒಂದು ಸವಿ ಸಕ್ಕರಿ ಕಣ್ಣಿ !

೧

ತೆನಿ ತಿರಿವಿದ ಟೋಪಿನ ಸೀರಿ—ಅದ-
ರಂಚಿಗೆ ರೇಶಿಮಿ ಭಾರಿ !
ಬಿಸಿಲು ಬಿದ್ದ ಕಡೆ ಭಂಗಾರದಾ ಗೆರಿ
ಮೈಯಾಗ ಕುಪ್ಪಸ ಹೂ ಜರತಾರೀ....
ನಾ ಸಂತಿಗೆ ಹೋಗಿನ್ನಿ—ಆಕಿ—ತಂದಿದ್ದಳೋ ಬೆಣ್ಣಿ !

೨

ಮೂಗ್‌ಬಟ್ಟು ಹಾಕಿದಾಕೀ ಮೂಗಾ—ಕೊರ-
ಳ್ಳಚ್ಚಿದ್ಹಾಂಗ ಮಾರೀ ಮ್ಯಾಗs !
ಹರಳಿನಾ ಝುಮಿಕಿ ಕಿವಿಯಾಗs—
ಕೂಗ್ಯಾಡಿ ಸುರಿಸತಿತ್ತೊ ಸೊಬಗ....
ನಾ ಸಂತಿಗೆ ಹೋಗಿನ್ನಿ—ಆಕಿ—ತಂದಿದ್ದಳೋ ಬೆಣ್ಣಿ !

೩

ಮುಂಗುರುಳು ಹಾರ್‍ಯಾಡುವ ಹಣೀ—
ಚೆಲ್ವಿಕಿಯ ಖಣೀ ನೋಡು ಥೇಟs !
ತಂಬುಲದ ಚಂದುಟೀ ಅರಳಿಸಿ ಬಿಟ್ಟರ
ಆ ನಗಿ ಮಲ್ಲಿಗಿ ತೋಟ.... !
ಕೊರಳ ಮಣೀ ಕೆಂಪಾದ ಕೆನ್ನಿ ಕುಣಿ
ಕರೆದು ಕೈಯ ಮಾಡಿ ಕೊಟ್ಟಿತು ಕಾಟಾ !
ನಾ ಸಂತಿಗೆ ಹೋಗಿನ್ನಿ—ಆಕಿ—ತಂದಿದ್ದಳೋ ಬೆಣ್ಣಿ !

೪

ಸುಳಿಗಾಳಿ ಸರಿಸತಿತ್ತೊ ಸೆರಗಾ
ಎಷ್ಟೇಳ್ಳಿ ತುಂಬಿದೆದಿ ಮೆರಗಾ !
ಪರಿವಿಲ್ಲ ಸರಿದ ಸೆರಗಿಂದಾ—ನನ-
ಗೇರಿತಾಗ ಏನೊ ಸುಂದಾ....
ನಾ ಸಂತಿಗೆ ಹೋಗಿನ್ನಿ—ಆಕಿ—ತಂದಿದ್ದಳೋ ಬೆಣ್ಣಿ !

೫

ಕಣ್ಣೆತ್ತಿ ನೋಡತಿತ್ತೋ !—ಮನಸೆತ್ತಿ ಓಡತಿತ್ತೋ !
ಬಗಿಯೇನೊ ಹಾಡತಿತ್ತೋ—ಬೆಣ್ಣಿಗಡಿಗಿ ಮಾತ್ರ ಮುಂದಿತ್ತೋ
ನೋಡಿದ ಸಿಟ್ಟಿಗೆ ಮಿಂಚಿನ ಕೋಲಾ
ತಿಳೀದ್ಹಾಂಗ ನನಗಾತೋ ಸೋಲಾ !
ನಾ ಸಂತಿಗೆ ಹೋಗಿನ್ನಿ—ಆಕಿ—ತಂದಿದ್ದಳೋ ಬೆಣ್ಣಿ !

ಆಯ್‌ಸ್ಕ್ರೀಮು

ಶ್ರೀ. ದಿನಕರ ದೇಸಾಯಿ, ಮುಂಬಯಿ

ಬಗೆ ಬಗೆ ಬಣ್ಣದ ಗೋಲು,
ಆದರೆ ಒಂದೇ ಹಾಲು.
ಪರಿ ಪರಿ ರಾಗದಿ ಮಿಂದೂ
ಮಾನವ-ಸಂಸ್ಕೃತಿಯೊಂದು.

ಹಾಲೂ ಸಕ್ಕರೆ ತುಟ್ಟಿ,
ಯಂತ್ರದೊಳಾಯಿತು ಗಟ್ಟಿ ;
ಬೇಸಗೆಯಲಿ ಸಹ ಬರ್ಫ !
ದುಡ್ಡಿದ್ದವರಿಗೆ ದರ್ಪ.

ಇಂದಿನ ಲೋಕದ ಸುದ್ದಿ—
ಆಯ್‌ಸ್ಕ್ರೀಮಾಯಿತು ಬುದ್ಧಿ ;
ಬಣ್ಣಕೆ ಬಣ್ಣಕೆ ಭೇದ,
ದೇಶಕೆ ದೇಶಕೆ ವಾದ.

ಪೃಥಿವಿಯ ಗೋಲಿನ ರೀತಿ—
ಆಯ್‌ಸ್ಕ್ರೀಮಾಯಿತು ನೀತಿ !
ಶೀತಲ ಶೀತಲ ಯುದ್ಧ,
ಸತ್ತನು ಗೌತಮ ಬುದ್ಧ.

ಪಟ್ಟಿ

(ಒಂದು ವಿನೋದಚಿತ್ರ) *

ಶ್ರೀ. ' ಅರವಿಂದ ' ಪಾಣೇ ಮಂಗಳೂರು

★

ಕೈಗೊಂದು ಪಟ್ಟಿಯನ್ನು ಕಟ್ಟಿಕೊಂಡರೆ, ಕೇಳಿ ಬೇಸರಿಸುವ ಜನವೆಷ್ಟು? ಸಿಡುಕರಿಗಂತೂ ಸಹನೆ ಮೀರುವುದಲ್ಲವೆ?

★

ಪಟ್ಟಿಗಳಲ್ಲಿ ಅನೇಕ ವಿಧವುಗಳಿವೆ. ಮಂಚಕ್ಕೆ ಬಿಗಿಯುವಂತಹದು ಒಂದು; ಸೈನಿಕರು ಕಟ್ಟಿಕೊಳ್ಳುವಂತಹದು ಇನ್ನೊಂದು. ಆದರೆ ನಾನೀಗ ಹೇಳುವ ಪಟ್ಟಿಯೆಂದರೆ— ಅದು— ನಿಮಗೆ ಗಾಯವಾದಾಗ ಡಾಕ್ಟರರು ಕಟ್ಟುತ್ತಾರಲ್ಲ.. ಆ ಪಟ್ಟಿ. ಇದರ ವಿಷಯ ಇಷ್ಟು ತಿಳಿದುಕೊಂಡರೆ, ಇನ್ನು ನನ್ನ ವಿಷಯವನ್ನು ಮುಂದುವರಿಸಬಹುದು.

* * * *

ನನ್ನಾಕೆಗೆ ಪರಿಚಯಸ್ಥರು ಬಹಳ. ಇವರ ಪೈಕಿ ಒಬ್ಬ ಲೇಡಿ ಡಾಕ್ಟರಳೂ ಇದ್ದಳು. ಆಕೆಯ ಶುಭನಾಮಧೇಯ— ಮಿಸ್ ಔರಮಾ ಲಿಂಡ್ಸೇ. ನಾನು ನನ್ನ ಮಾವನ ಮನೆಗೆ ಹೋಗುವವನಿದ್ದೆ. ನನಗೆ— "ಹೋಗುವುದಕ್ಕೆ ಮುಂಚೆ ಕಂಡುಹೋಗಬೇಕು" ಎಂದು ಆಜ್ಞೆ ಇತ್ತಿದ್ದಳು ಈ ಸ್ನೇಹಿತೆ. ಆದುದರಿಂದಲೇ ಒಂದು ದಿನ ಬೆಳಿಗ್ಗೆ, ಆವಳ ಬಂಗಲೆಯ ಕಡೆಗೆ ಹೊರಟೆ.

ಇನ್ನು ನನ್ನ ಕಥೆ ಮುಂದೆ ಹೋಗುವುದಕ್ಕೆ ಮುಂಚೆ ನಾಲ್ಕು ಮಾತು ಹೇಳಬೇಕಾದರೆ—"ಬಹಳ ಮುದ್ದಾದುವು" ಎಂದು ಕರೆಯಲ್ಪಡುವ ಆ ಚಿಕ್ಕಚಿಕ್ಕ ಉದ್ದ ಕೂದಲಿನ ಬಂಗಲೆ ನಾಯಿಗಳ ವಿಷಯ. ನೀವು ಬಂಗಲೆಯೊಳಕ್ಕೆ ಹೋದೊಡನೆಯೇ ನಿಮ್ಮನ್ನು ತಮ್ಮ ಯಜಮಾನನ ಜಾತಿಯವೇ ಎಂದು ತಿಳಿದು, ಈ ನಾಯಿಗಳು ನಿಮ್ಮ ಮೇಲೇರಿ ಬರುವುವು— ಪ್ರೀತಿಯಿಂದ. ನನ್ನ ಅವಸ್ಥೆಯೂ ಹೀಗೇ ಆಯಿತು. ನಮ್ಮ ಡಾಕ್ಟರಿಣಿಯ ಈ ನಾಲ್ಕಾರು ನಾಯಿಗಳು, ಅಭ್ಯಾಸಬಲದಿಂದ ನನ್ನ ಮೇಲೇರಿ ಬಂದುವು. ನಾನು ಈ ರೀತಿಯ ನಾಯಿಗಳ ಪ್ರೇಮಕ್ಕೆ ತೀರ ಪರಿಚಿತ. ಅವು ಕಚ್ಚುವುವೋ ಏನೋ ಎಂದು ತಪ್ಪಿಸಹೊರಗಿದೆ. ನನ್ನ ಆಟಕ್ಕೆ ಮೆಚ್ಚಿ ಅವು ಇನ್ನೂ ಆಡತೊಡಗಿದುವು. ಈ ಆಟದಲ್ಲಿ ನಾನು, ಅಲ್ಲೇ ಇದ್ದ ತೋಟದ ಗುಲಾಬಿ ಗಿಡ ಒಂದರ ಮೇಲೆ ಬಿದ್ದೆ. ಅದು ನನ್ನ ಕೈಯಲ್ಲಿ, ಮೊಳಗಂಟಿನ ಹತ್ತಿರ ಚಿಕ್ಕ ಗಾಯವನ್ನು ಮಾಡಿಬಿಟ್ಟಿತು. ಆದರೆ ಅಷ್ಟರಲ್ಲಿ ಈ ಗಲಾಟೆಯಿಂದಾಗಿ, ಶ್ರೀಮತಿ ಲಿಂಡ್ಸೆಯವರು ಒಳಗಿನಿಂದ ಹೊರಗೆ ಬಂದರು. ದೇವರ ದಯದಿಂದ, ಅವರು ಬರುವುದರೊಳಗೆ ನಾನು ಎದ್ದಿದ್ದೆ. ನನ್ನನ್ನು ಸುತ್ತುಗಟ್ಟಿದ್ದ ನಾಯಿಗಳು, ತಮ್ಮ ಯಜಮಾನಿಯನ್ನು ನೋಡಿ ಅವಳೆಡೆಗೆ ಓಡಿದುವು.

ಅನಂತರ ಆಕೆ ಬಹಳ ವಿಶ್ವಾಸದಿಂದ ನನ್ನನ್ನು ಕರೆದುಕೊಂಡು ಹೋದಳು. ನನ್ನನ್ನು ಕರೆಯಿಸಲು ಅಷ್ಟೇನೂ ತಲೆಹೋಗುವ ವಿಚಾರವಿರಲಿಲ್ಲ. ಬರೇ ನನ್ನಾಕೆಗೆ ತನ್ನ ನಮಸ್ಕಾರವನ್ನು ತಿಳಿಸಬೇಕಿತ್ತು. ಅನಂತರ ಇದೆಯಲ್ಲಾ—ಲೋಕಾಭಿರಾಮದ ಪಟ್ಟಾಂಗ. ಇನ್ನೇನು, ನಾನು ಹೊರಡಬೇಕು ಎಂಬುವಷ್ಟರಲ್ಲಿಯೇ ಆಕೆಯ ದೃಷ್ಟಿ ನನ್ನ ಕೈಗಾಗಿದ್ದ ಗಾಯದ ಮೇಲೆ ಬಿತ್ತು. ಡಾಕ್ಟರಲ್ಲವೇ?

"ಅಯ್ಯಯ್ಯೋ ಇದೇನು? ಕೈಲಿ ಗಾಯ? ತಡೆಯಿರಿ. ಲೋಶನ್‌ನಲ್ಲಿ ತೊಳೆದು ಡ್ರೆಸ್ ಮಾಡಿಬಿಡುತ್ತೇನೆ."

"ಛೆ ಛೆ, ಇರಲೆಪ್ಪಾ, ಅದಕ್ಕೇನು?" ಎಂದೆ.

"ಹಾಗೆಲ್ಲಾ Careless ಆಗಬಾರದು ನೋಡಿ. ಇದನ್ನೇ ಅಜಾಗರೂಕತೆಯಿಂದ ನೋಡಿದರೆ ಕಡೆಗೆ.... " ಎಂದಳು ಆಕೆ.

"ಕಡೆಗೆ?" ನಾನು ಕುತೂಹಲಿಯಾದೆ.

"ಎಲ್ಲಾದರೂ ಸೆಪ್ಟಿಕ್ ಆದರೆ, ಕಡೆಗೆ 'ಟಿಟನ್ನಿಸ್'ಗೆ ತಿರುಗುವ ಭಯವಿದೆ" ಈಗ ನನ್ನ ಧೈರ್ಯ ಉಡುಗಿಹೋಯಿತು. 'ಟಿಟನ್ನಿಸ್'ಅಂದರೆ ನಾವು 'ಧನುಷ್ಟಂಕಾರ' ಎಂದು ಕರೆಯುವುದೇ. ಕೂಡಲೇ ಲೋಶನ್ನಿನಲ್ಲಿ ತೊಳೆದು ಒಂದು ಚೆಲುವಾದ ಪಟ್ಟಿಯನ್ನು ಕಟ್ಟಿಯೇ ಬಿಟ್ಟಳು. ಬಳಿಕ ಗಾಡಿಯೊಂದನ್ನು—ನಾನೆಷ್ಟು ಬೇಡವೆಂದರೂ—ಕರೆಯಿಸಿದಳು.

ಗಾಡಿಯಲ್ಲಿ ಕುಳಿತುಕೊಂಡು ಮನೆಯ ಕಡೆಗೆ ಹೊರಟಾಗಲೇ ದಾರಿಯಲ್ಲಿ ಒಬ್ಬರು ಗಾಡಿಯನ್ನು ನಿಲ್ಲಿಸಿದರು. 'ನಮಸ್ಕಾರ'ಗಳನ್ನು ಕೊಟ್ಟನಂತರ ಕೇಳಿದರು : "ಕೈಯಲ್ಲೇನದು ಪಟ್ಟಿ?"

"ಏನಿಲ್ಲ, ಗಾಯ! ಟಿಟನ್ನಿಸ್‌ನ ಭಯವಿದೆಯೆಂದು ಡಾಕ್ಟರರು ಹೇಳಿದ್ದಾರೆ."

"ಪೂಹ್, ಪೂಹ್" ಎಂದರವರು. ಅದು ಅವರ ಅಭ್ಯಾಸ. "ಅಷ್ಟೇನೇ, ಕುಂಕುಮವಿದೆಯಲ್ಲಾ....ಅದನ್ನು, ಎಣ್ಣೆಯೊಡನೆ ಕಲಿಸಿ ಕಲಿಸಿ ಹಚ್ಚಿಬಿಡು; ತನ್ನಷ್ಟಕ್ಕೆ ನಿಲ್ಲುತ್ತೆ."

ಆಗಲೇ ನೋಡಿ, ನನಗೆ ಏನೇನೋ ಆಯಿತು. ಆದರೆ ಮುಂದೆ ಹೋಗಬೇಕಾದರೆ ಇನ್ನೊಬ್ಬ ಮಿತ್ರರು ಸಿಕ್ಕಿದರು. ಅವರೂ ಗಾಡಿಯನ್ನು ನಿಲ್ಲಿಸಿಯೇ ನಿಲ್ಲಿಸಿದರು; ಕೇಳಿಯೂ ಕೇಳಿದರು. ಚಂದನವನ್ನು ನೀರಿನಲ್ಲಿ ತೆಯ್ದು ಹಚ್ಚಲು ಹೇಳಿಹೋದರು. ಅನಂತರ

* ಮಿರ್ಜಾ ಅಜೀಜ್‌ಬೇಗ್ ಚಗತಾಯಿ ಅವರ ಕೃತಿಯ ಅನುವಾದ. —ಲೇ.

ಸಿಕ್ಕಿದ ಮಹಾಶಯ ' ಬರಿಯ ಗಾಳಿಯಲ್ಲೇ ಗಾಯ ಒಣಗುತ್ತೆ ' ಎಂದ. ಅಂತೂ ಸಾವರಿಸಿಕೊಂಡು ಮನೆಗೆ ಬರಬೇಕಾದರೆ ಸಾಕಾಗಿ ಹೋಯಿತು.

ನಾನು ಮನೆಯನ್ನು ಸೇರಬೇಕಾದರೇನೆ ಪ್ರಶ್ನೆ ಕಾದಿತ್ತು " ಪಟ್ಟಿ ಏನದು ? " ತಂದೆಯವರು ಕೇಳಿದರು. ತಾಯಿಯವರದು ನಂತರದ ಸರತಿ. ಅನಂತರ ಕ್ರಮವಾಗಿ, ಅಣ್ಣ, ಅಕ್ಕ, ತಮ್ಮ, ತಂಗಿ, ಕೆಲಸದವರು ಇತ್ಯಾದಿ ಇತ್ಯಾದಿ. ಮನೆಯ ಮುದುಕಿಯೊಬ್ಬಳು ಬಹಳ ಸಹಾನುಭೂತಿಯಿಂದ ಕೇಳಿದಳು : " ಟೇಂಟಸ್ ಎಂದರೆ ಏನು ಮಗೂ ! " ಮನೆಯ ಮಕ್ಕಳು ಅದೊಂದು ಇಂಗ್ಲಿಷ್ ತರಕಾರಿಯ ಹೆಸರೆಂದು ಗೇಲಿ ಮಾಡಿದ್ದುವು. ಅನಂತರ ಹೊರಗಿನ ಯಾರೋ ಒಬ್ಬರು ಬಂದರು. ಅವರೂ ಕೇಳಿದರು. ಅವರಿಗೂ ತಿಳಿಸಲೇ ಬೇಕಾಯಿತು. ಬಳಿಕ ತರಕಾರಿಯವ ಬಂದ; ಕೇಳಿಯೇ ಕೇಳಿದ : "ಪಟ್ಟಿ ಎಂಥದು ಸ್ವಾಮಿ ?"

ನಾನು ಸುಮ್ಮನೆ ಮಾತನ್ನು ಹಾರಿಸಬೇಕೆಂದಿದ್ದೆ. ಅಷ್ಟರಲ್ಲೆಲ್ಲ ಮಕ್ಕಳೆಲ್ಲಾ ಒಮ್ಮೆಲೇ ಚೀರಿದುವು " ಟೇಂಟಸ್, ಟೇಂಟಸ್ ". ಅವಕ್ಕೂ ಏನೋ ಒಂದು ವಿಶೇಷದ ಸಂಗತಿಯಾಗಿತ್ತು ಇದು. ತಮ್ಮ ಸಹಪಾಠಿಗಳೊಡನೆ ಹೇಳಿರಲಿಕ್ಕೂ ಸಾಕು : " ನಮ್ಮಣ್ಣನೇನು ಸಾಮಾನ್ಯನೇ ? ಹ್ಞ, ಅವನಿಗೆ ' ಟೇಂಟಸ್ ' ಆಗಿದೆ" ಅಂತ.

" ಟೇಂಟಸ್ ಎಂದರೇನು ಸ್ವಾಮಿ, ಯಾವುದಾದರೂ ಕಜ್ಜಿಗೆ ಡಾಕ್ಟರರು ಇಟ್ಟ ಹೊಸ ಹೆಸರೇ ? " ಕೇಳಿದ.

ನನಗೆ ಬಂದ ಸಿಟ್ಟು ವಿಪರೀತ. ಒಂದೇ ಸಲ ಘರ್ಜಿಸಿದೆ "ಥತ್, ಸುಮ್ಮನೇ ಬೊಗಳಬೇಡವೋ " ಎಂದವನೇ ಒಳಗೆ ಹೋದೆ. ಆದರೆ ಒಳಗೆ ಹೋದಾಗ ನಮ್ಮ ತಾಯಿಯವರು " ಟಿಟನ್ನಿಸ್ "ನ ಮೇಲೆ—ಸೇರಿದ ನೆರೆಕರೆಯ ನಾಲ್ಕಾರು ಹೆಂಗಸರಿಗೆ—"ಲೆಕ್ಚರ್" ಕೊಡುತ್ತಿದ್ದರು. ನನ್ನನ್ನು ಕಂಡೊಡನೆ ಎಲ್ಲರೂ ಅದರ ವಿಷಯ ಸವಿಸ್ತಾರವಾಗಿ ತಿಳಿಸಲು ಬೇಡಿಕೊಂಡರು. ಅಂತೂ ಹೇಗಾದರೂ ಮಾಡಿ ಪಾರಾದೆ ಅನ್ನಿ.

× × × ×

ಸಾಯಂಕಾಲದ ಟ್ರೇನಿಗೇನೆ ನಾನು ನನ್ನತ್ತೆಯವರ ಮನೆಗೆ ಹೊರಟೆ. ನನ್ನ ಪೆಟ್ಟಿಗೆ ಇತ್ಯಾದಿಗಳನ್ನು ಹಾಕಲು ಗಾಡಿಯೊಂದಕ್ಕೆ ಆರ್ಡರು ಕೊಟ್ಟಾಯಿತು. ಗಾಡಿಯೂ ಬಂತು ನಾನಿನ್ನೂ ಹತ್ತಿ ಕುಳಿತುಕೊಳ್ಳಬೇಕು ಎನ್ನುವಷ್ಟರಲ್ಲೇ ಗಾಡಿಯವನ ಪ್ರಶ್ನೆ ಬಂತೇ ಬಂತು ! " ಪಟ್ಟಿ ಎಂಥದು ಸ್ವಾಮಿ ? "

ಸ್ಟೇಶನ್‌ನಲ್ಲೂ ಇದೇ ಗಲಾಟೆ. ಕಂಡವರೆಲ್ಲಾ ಇದೇ ಪ್ರಶ್ನೆ. ಕೇಳುವವರೇ " ಕೈಯ್ಯಲ್ಲೇನದು ಪಟ್ಟಿ ? " " ಅದೇನು ? ಒಂದು ಸಣ್ಣ ಗಾಯ ! " ಎಂದು ಅವರ ಪ್ರಶ್ನೆಯನ್ನು ಹಾರಿಸುತ್ತಿದ್ದೆ.

ಆದರೂ ಒಬ್ಬರೊಡನೆ ಸ್ವಲ್ಪ ಬಿಸಿ ಮಾತುಗಳನ್ನಾಡಬೇಕಾಗಿ ಬಂತು. ಆ ಜನ ಬಂದು ಕೇಳಿದರು :

" ಸ್ವಾಮಿ, ಕೈಯ್ಯಲ್ಲಿ ಪಟ್ಟಿ ಏನದು ? "

" ಏನು, ಬರೀ ಸಣ್ಣ ಗಾಯ ಒಂದು " ಎಂದೆ.

" ಹೇಗೆ ತಾಗಿತು ? "

" ಮಾರ್ಗದಲ್ಲಿ ಬಿದ್ದೆ. ಗಾಯವಾಯಿತು, ಅಷ್ಟೆ! "

" ಮತ್ತೇನಿಲ್ಲ ತಾನೇ ? "

" ಛೆ, ಇಲ್ಲಪ್ಪಾ "

" ಅಂದರೆ, ಹಾಗಲ್ಲಾ, ಆಗ ಗೋವಿಂದ ಸೆಟ್ಟರು ಸಿಕ್ಕಿದವರು ಹೇಳಿದರು—ಅಲ್ಲಾ, ದೇವರು ಮಾಡದಿರಲಿ—ಟಿಟನ್ನಿಸ್ ಅಂತೆ! "

ಅವರ ಮುಖವನ್ನು ಹರಿಯುವಷ್ಟು ಕೋಪ ಬಂತು. ಬರದೆ ಇದ್ದೀತೇ ? ನೀವೆ ಆಲೋಚನೆ ಮಾಡಿ. ಆದರೂ ತಾಳ್ಮೆ ವಹಿಸಿದೆ. " ಆಗಿರಬಹುದು " ಅಂದೆ.

" ಹ್ಞ, ಈ ಟಿಟನ್ನಿಸ್ ಅಂದರೇನು ? " ಅವರ ಮರುಪ್ರಶ್ನೆ. ಈಗ ಕೋಪ ತಡೆಯಲಾಗಲಿಲ್ಲ " ಟಿಟನ್ನಿಸ್ ಅಂದರೆ ಒಂದು ತರಹದ ಜ್ವರ. ಅದರಿಂದ ' ಶೀನು ' ಬರುತ್ತವೆ " ಎಂದೆ.

" ಕ್ಷಮಿಸಿ, ಗೋವಿಂದ ಶೆಟ್ಟರು ಹೇಳಿದರು, ಅದು ಸೆಪ್ಟಿಕ್ ಆಗಿ Blood poisoning ಅಂತೆ " ಎಂದರು.

" ಹಾಗಾದರೆ ನಿಮಗೆ ಗೊತ್ತಿದೆ; ಗೊತ್ತಿದ್ದರೂ ಕೇಳಿದ್ದೇಕೆ ? ನಿಮಗೇನೂ ಬಂದಿಲ್ಲವಷ್ಟೇ ? " ಎಂದೆ

ಅವರಿಗೆ ತುಂಬಾ ಬೇಸರವಾಗಿದ್ದಿರಬೇಕು. ನನಗಂತೂ ಅವರಿಗಿಂತಲೂ ಬೇಸರವಾಯಿತು.

× × × ×

ನಮ್ಮ ಡಬ್ಬಿಯಲ್ಲಿ ನನ್ನೆದುರಿಗಿದ್ದ ಪ್ರವಾಸಿ, ಒಬ್ಬ ಸೈನಿಕನಂತೆ ಕಾಣುತ್ತಿದ್ದ. ಡ್ರೆಸ್ ಏನೂ ಮಾಡದೇ ಇದ್ದರೂ, ಆ ಕಬ್ಬಿಣದ ಬೂಟ್ಸ್, ಆ ಮರದ ತುಂಡಿನಂತಹ ವೈ, ಮತ್ತು ಸಿಗರೇಟು, ಇವನ್ನು ನೋಡಿದಾಗ, ಸೈನಿಕನೆಂದು ಸಹಜವಾಗಿ ಊಹಿಸಬಹುದಾಗಿತ್ತು.

೫೫ ವರ್ಷಗಳಿಂದ ಅನುಭವಪಟ್ಟ

ಕರ್ಕೀ ಮತ್ತು ಕಂಪನಿಯ

ಜ್ವರಗಡ್ಡೆಯ ಗುಳಿಗೆಗಳು

ಬಾಟ್ಲಿಗೆ ೧-೮-೦

ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.

ವಿಳಾಸ :—

ಗಣೇಶ ರಾಮಚಂದ್ರ ಕರ್ಕೀ ಮತ್ತು ಕಂಪನಿ

ಗಿರಗಾಂವ, ಮುಂಬಯಿ. ೪

ಇನ್ನೊಬ್ಬರು ಬಹುಶಃ ದೊಡ್ಡ ಮಳಿಗೆಯ ಯಜಮಾನರಾಗಿದ್ದಿರಬೇಕು. ದೊಡ್ಡ ಹೊಟ್ಟೆ, ಸಣ್ಣ ಕೈಕಾಲು, ಬೋಳುಮಂಡೆ, ಬೊಕ್ಕುಬಾಯಿ, ಮಾತನಾಡುವ ರೀತಿ, ಇವುಗಳಿಂದ ಹಾಗೆ ತೋರುತ್ತಿತ್ತು.

ಇನ್ನೊಬ್ಬರು ದೊಡ್ಡ ಜಮೀನ್‌ದಾರರು. ಅವರ ಕೋಟು, ಪಂಚೆ, ಚಿನ್ನದ ಉಂಗುರ, ಚಿನ್ನದ ಬಟನ್, ಚಿನ್ನದ ಗಡಿಯಾರದ ಚೈನು ನೋಡಿದರೆ ಹಾಗೆಯೇ ಕಾಣುತ್ತಿತ್ತು. ಇನ್ನೂ ನಾಲ್ಕಾರು ಮಂದಿ ಇದ್ದರು. ಲೋಕಾಭಿರಾಮವಾಗಿ ಕಂಟ್ರೋಲು, ಮಳೆ, ಬೆಳೆ. ವಿಷಯ ಹರಟೆಗೆ ಮೊದಲಾಯಿತು ಕಡೆಗೆ ಬಂತೇ ಬಂತು, ನಾನು ಹೆದರಿಕೊಂಡಿದ್ದ ಪ್ರಶ್ನೆ— ಭಂಡಸಾಲೆಯ ಯಜಮಾನರಿಂದ :

" ಅದೆಲ್ಲಾ ಇರಲಿ, ನಿಮ್ಮ ಕೈಗೇನು ಪಟ್ಟಿ ? "

" ಸಾಮಾನ್ಯವಾದ ಏಟು ತಗಲಿತು ? " ಎಂದೆ.

" ಹೇಗೆ ಆಗಿತು ? " ಬಂತು ಪುನಃ ಪ್ರಶ್ನೆಯೊಂದು. ಈಗ ನನ್ನ ಕೋಪ ಎಲ್ಲೆ ಮೀರಿತು. ಸುಳ್ಳುಸುಳ್ಳೇ ಹೇಳಿದೆ :

"ಮೊಸಳೆ ಕಚ್ಚಿತು ಸ್ವಾಮಿ ! ನಿಜವಾದ ಸಂಗತಿ ಎಂದರೆ ಇದೇ!"

" ಆಂ ! ಮೊಸಳೆಯೇ ? ಮೊಸಳೇ? " ಉತ್ಸಾಹದಿಂದ ಎಲ್ಲರೂ ಕೇಳಿದರು.

" ಹ್ಞೂಂ " ಅಷ್ಟೇ ನಿರ್ಲಿಪ್ತನಾಗಿ ನಾನು ಉತ್ತರವಿತ್ತೆ.

" ಹೇಗೆ? " ವಿವರ ಕೇಳಲು ಅವರ ಉತ್ಸಾಹ ಮೇರೆಮೀರಿತು.

" ಬಾಯಿಯಿಂದ " ನಾನು ಉತ್ತರವಿತ್ತೆ.

"ಅದೇನೋ ಹೌದೇ" ಅವರು ತಲೆಯಲ್ಲಾಡಿಸುತ್ತಾ ಹೇಳಿದರು: ನನ್ನ ಅರ್ಥವೆಂದರೆ ಎಲ್ಲಿ ಮೊಸಳೆ ಕಚ್ಚಿತು ಅಂತ. "

ನಾನು ಗಾಯವಾದ ಸ್ಥಳವನ್ನು ತೋರಿಸುತ್ತಾ, ಹೇಳಿದೆ : "ಇಲ್ಲೇ, ಇಲ್ಲೆ ಕಚ್ಚಿತು" ಹೀಗೆ. ಎನ್ನುತ್ತಾ ಕೈಯನ್ನು ಮೊಸಳೆಯ ಬಾಯಿಯಂತೆ ಬಿಡಿಸಿ ತೋರಿಸಿ ಹೇಳಿದೆ.

" ಹಾಗಲ್ಲಯ್ಯಾ ? " ನಮ್ಮ ಜಮೀನ್‌ದಾರ್ ಮಹಾಶಯರು ಹೇಳಿದರು— "ಅವರ ಅರ್ಥ ಅದಲ್ಲ. ಮೊಸಳೆ ಕಚ್ಚಿದ್ದು ಯಾವ ಸ್ಥಳದಲ್ಲಿ ?— ಎಂಬುದು ಅವರ ಅರ್ಥ."

" ನಾನೂ ಅದೇನೆ ಹೇಳಿದ್ದು. ಇಲ್ಲೇ— ಈ ಮೊಳಗಂಟು ಇದೆಯಲ್ಲಾ, ಇಲ್ಲಿ– ಅದರ ಬಾಯಿಯುಂಟಲ್ಲವೇ, ಅದನ್ನು ಆ ಎಂದು ಬಿಡಿಸಿ ಕಚ್ಚಿತು ! " ನಾನೆಂದೆ.

ಈಗ ಸುಮ್ಮನಿದ್ದ ಸೈನಿಕನಿಗೆ ಎಚ್ಚರವಾಯಿತೋ ಅಥವಾ ನನ್ನ ಬೆಪ್ಪುತನಕ್ಕೆ ತಾಳ್ಮೆ ತಪ್ಪಿತೋ! "ಯಾವ ಹಳ್ಳ, ಯಾನೆ. ಬಾವಿ, ಇಲ್ಲವೆ ತೋಡು, ಅಥವಾ ನದಿಯ ಬದಿಯಲ್ಲಿ, ಎಷ್ಟು ದೊಡ್ಡ, ಅಥವಾ ಚಿಕ್ಕ ಮೊಸಳೆ, ಎಷ್ಟು ಹೊತ್ತಿನಲ್ಲಿ ನಿಮ್ಮ ಮೊಳಗಂಟಿನ ಹತ್ತಿರ ಬಾಯಿಯನ್ನು ಆ ಮಾಡಿ ಕಚ್ಚಿತು ? " ಎಂದರು

"ಓಹ್ಹೊ, ಹೀಗೇನೋ" ಎಂದೆ ನಾನು....ಈಗ ತಾನೇ ಅರ್ಥವಾದವನಂತೆ, "ಹಾಗಾದರೆ ಘಟನೆ ಹೀಗಿದೆ : ನಮ್ಮ ಮನೆಯಿಂದ ಸ್ವಲ್ಪವೇ ದೂರದಲ್ಲಿ ಒಂದು ನದಿಯು ಹರಿಯುತ್ತದೆ. ಒಂದು ಸಲ ನಾನು ಅಲ್ಲಿದ್ದ ದೊಡ್ಡ ದೊಡ್ಡ ಮೀನುಗಳನ್ನು ಹಿಡಿಯುವ ಉದ್ದೇಶದಿಂದ, ಒಂದು ದೊಡ್ಡ ಉಕ್ಕಿನ ಮೊನಚಾದ ತುಂಡಿನ ತುದಿಗೆ ಮಾಂಸವನ್ನು ಕಟ್ಟಿ, ನದಿಯಲ್ಲಿ ತೇಲುವಂತೆ ಕಟ್ಟಿದೆ. ಮೊನ್ನೆ ರಾತ್ರಿ ಸುಮಾರು ಎಂಟು ಘಂಟೆಯಾಗಿ ಹದಿನೇಳುವರೆ ಮಿನಿಟಿಗೆ ಒಂದು ದೊಡ್ಡ ಮೊಸಳೆಯ ಮರಿ ಮಾಂಸದ ಆಶೆಗೋಸ್ಕರ ಬಂದು ಅದರಲ್ಲಿ ಸಿಕ್ಕಿಬಿತ್ತು. "

ಆದರೆ ಈ ಸಂಕ್ಷೇಪವರದಿಯಿಂದ ಅವರಿಗೆ ಎಲ್ಲಿ ಸಮಾಧಾನವಾಗುತ್ತೆ ? ಮೊಸಳೆಯ ಉದ್ದಳತೆ, ಕಬ್ಬಿಣದ ತುಂಡಿನ ಉದ್ದ, ಭಾರ, ಅದನ್ನು ಕಟ್ಟಿದ ಹಗ್ಗ ಸಂಗೆಯೇ ? ಅಥವಾ ಬರಿಯ ಹಗ್ಗವೊ ? ಎಷ್ಟು ಉದ್ದದ್ದು ? ಮುಂತಾದುದನ್ನು ಹೇಳಿದ್ದೆನೇ? ಆದುದರಿಂದ ಪ್ರಶ್ನೆಗಳ ಸುರಿಮಳೆಯೇ ಬಿತ್ತು. ಇದರ ಪ್ರಶ್ನೆಗಳಿಗೆಲ್ಲಾ ಉತ್ತರವಿತ್ತು. ನನ್ನ ಮೊಸಳೆಯನ್ನು ಹತ್ತು ಹದಿನೈದು ಜನ ಧಾಂಡಿಗರು ಮೇಲೆತ್ತುತ್ತಿದ್ದರಷ್ಟೆ ! ಇನ್ನೊಂದು ಸ್ಟೇಶನ್ ಬಂತು. ರೈಲು ನಿಂತಿತು

ರೈಲು ನಿಂತರೇನು ? ನನ್ನ ಕಥೆ ನಿಲ್ಲುವುದೇ ? ಆದರೆ ಅಷ್ಟರಲ್ಲಿ ಅದು ನಿಲ್ಲದೆ ನಿರ್ವಾಹವಾಗಲಿಲ್ಲ. ಯಾರೋ ಪೋಲಿಸ್ ಇನ್ಸ್‌ಪೆಕ್ಟರನಂತಿದ್ದ ಮಹಾಶಯರೊಬ್ಬರು ತಮ್ಮ ಅಗಣಿತ ಸಾಮಾನುಗಳ ನಡುವೆ ಒಳನುಗ್ಗಿದರು. ಅವರಿಗೆ ಸರಿಯಾದ ಸ್ಥಳವನ್ನು ಕೊಡುತ್ತ ಸ್ವಾಗತಿಸುತ್ತ ನನ್ನ ಕಥೆ ಎತ್ತಲೋ ಹಾರಿಹೋಯಿತು. ಬರಿಯ ಒಂದೈದು ನಿಮಿಷದ ತನಕ. ಆನಂತರ ಅದೇ ಪೋಲೀಸ್ ಇನ್ಸ್‌ಪೆಕ್ಟರರು ಗುಂಡು ಹಾರಿಸಿಯೇಬಿಟ್ಟರು : " ತಮ್ಮ ಕೈಯಲ್ಲೇನದು ಪಟ್ಟಿ ? "

ನಾನು ಒಂದಿಷ್ಟೂ ಬೇಸರಿಯದೆ ನಿರರ್ಗಳವಾಗಿ ಹೇಳಿಯೇ ಬಿಟ್ಟೆ: "ಅದೇ ? ಅದು ಒಂದು ಕಾಳಸರ್ಪ ಕಚ್ಚಿದ್ದು. ಸ್ವಾಮಿ"

"ಆಂ ಕಾಳಸರ್ಪ, ಕಾಳ ?" ಕೇಳಿದರವರು.

" ಹೂಂ ಕಪ್ಪು ಕಪ್ಪು ಕಾಳ! " ಎಂದವನೇ ಮೊಸಳೆಯ ಕಥೆ ಕೇಳುತ್ತಿದ್ದವರ ಮೇಲೆ ದೃಷ್ಟಿಹಾಯಿಸಿದೆ. ಕೆಲವರು ಆಗಿನ ಕಥೆಯೇ ಮುಂದುವರಿಯುವುದೋ ಏನೋ ಎಂದು ಚಿತ್ತಕೊಟ್ಟು ಕೇಳುತ್ತಿದ್ದರು. ಉಳಿದ ಕೆಲವರು " ಇದು ಈ ಮಹಾರಾಯನ ಜೋಕೆ ? " (Joke) ಎಂದು ನಸುನಗುತ್ತಿದ್ದರು. ಆದರೂ ಎಲ್ಲರೂ ಕೇಳುತ್ತಲೇನೋ ಇದ್ದರು.

" ಎಲ್ಲಿ ? ಯಾವಾಗ ? " ಎಂದು ಕೇಳಿದರು.

" ಮೊನ್ನೆ ಎಂದು ಹೇಳಿದ್ದೇನಷ್ಟೆ ? " ಎಂದೆ.

" ಹೇಗೆ ? ಎಲ್ಲಿ? ನೀವು ಏನು ಮಾಡುತ್ತಿದ್ದಿರಿ ? "

" ನಾನು ತಿನ್ನುತ್ತಿದ್ದೆ: ಇಲ್ಲೇ, ಮೊಳಗಂಟಿನ ಹತ್ತಿರ "— ಎಂದು ಕೈಯಿಂದ ಆ ಸ್ಥಳವನ್ನು ತೋರಿಸುತ್ತಾ " ಹೀಗೆ " ಎಂದು ಕೈಯಿಂದ ಹಾವಿನ ಬಾಯಿಯಂತೆ ತೋರಿಸಿ, ಅದು ಆ ಸ್ಥಳವನ್ನು ಕಚ್ಚಿದಂತೆ ನಟಿಸಿದೆ.

“ ಹಾಗಲ್ಲ **ಮಹಾಸ್ವಾಮಿ, ನನ್ನ ಅರ್ಥ ಅದಲ್ಲ!** ಎಲ್ಲಿ ...ವಾಗ ಯಾವ ಕಾರಣದಿಂದ ಕಚ್ಚಿತು?—ಎಂಬುದು'' ಎಂದರು.

...ಡಲೇ ನಾನು ಮೊಸಳೆಗಿಂತಲೂ ಒಳ್ಳೆಯ ಕಥೆಯೊಂದನ್ನು ...ಡು ಹೇಳಿದೆ. ಈಗ ಆ ಕಥೆ ಏನೋ ಮರೆತು ಹೋಗಿದೆ. ...ದರೆ ಅದು ಒಳ್ಳೆಯ ಕಥೆ ಎಂಬುದನ್ನು ಮರೆಯಲಿಲ್ಲ.

ಮೊಸಳೆಯ ಕಥೆ ಕೇಳಿದವರ ಪ್ರಶ್ನೆಗಳಿಗೆಲ್ಲಾ ಚೆನ್ನಾಗಿಯೇ ...ತ್ತರ ಕೊಟ್ಟೆ! “ ಅಲ್ಲಾ, ಮೊಸಳೆ ಕಚ್ಚುವುದಾದರೂ ಹೇಗೆ? ...ದು ಕಚ್ಚುತ್ತೆಯೆ? '' ''ನನಗೆ ಕಚ್ಚಲೇ ಇಲ್ಲ. ನೀವೇನೋ ...ಕುಗಳಂತೆ ಕೇಳುತ್ತಿದ್ದಿರಿ. ಅದಕ್ಕೆ ನಾನೇನು ಮಾಡಬೇಕು?”

ನಾನು ಹಾಗೆಂದಾಗ ಕೆಲವರಿಗೆ ಸಂಶಯ ಬಂದಿತು—ಎಲ್ಲಾ... ಸರ್ಪ ಕಚ್ಚುತ್ತೋ ಇಲ್ಲವೋ?— ಎಂದು. ಅವರವರೊಳಗೆ ...ಕೇಳಿ ಶಾಂತಪಡಿಸಿಕೊಂಡರು. ಈ ಮಧ್ಯೆ ಒಂದೆರಡು ...ಶನ್ ದಾಟಿದ್ದುವು. ನಮ್ಮ ಪೋಲೀಸ್ ಇನ್ಸ್‌ಪೆಕ್ಟರರನ್ನು ...ಡಿ, ನಂತರದ ನಮ್ಮಂಥ ಮನುಷ್ಯಪ್ರಾಣಿಗಳು ಒಳಗೆ ಬರುವ ...ವನ್ನು ಮಾಡಲಿಲ್ಲ. ಅಂತೂ ದೇವರ ದಯದಿಂದ ನನ್ನ ...ಯ ಸಂಗತಿಯನ್ನು ನಾನು ಮನೆಮುಟ್ಟುವ ತನಕ ಯಾರೂ ...ಲೇ ಇಲ್ಲ.

* * * *

ಮನೆಮುಟ್ಟುವಾಗ ಕತ್ತಲಾಗಿತ್ತು. ಆದುದರಿಂದಲೇ ಯಾರಿಗೂ ... ಪಟ್ಟಿ ಕಾಣಲೇ ಇಲ್ಲ. ಕಂಡರೂ ಕೇಳಿ ತಿಳಕೊಳ್ಳುವಷ್ಟು ...ಯೂ ಇರಲಿಲ್ಲ. ಅಂತೂ ಪಾರಾದೆ. ಆದರೆ ಎಷ್ಟರತನಕ? ...ನೆಮುಟ್ಟುವ ತನಕ ತಾನೆ?

ಮನೆಮುಟ್ಟಿದೊಡನೆಯೇ ಅತ್ತೆಯವರು “ಹೇಗಿದೀಯಪ್ಪಾ, ...ಖ್ಯ ತಾನೇ? ಅರೇ, ಕೈಯ್ಯಲ್ಲಿ ಪಟ್ಟಿ ಎಂಥದು? ವಿಶೇಷವೇನೂ ...ವಲ್ಲಾ?'' ' ಎಂದು ಕೇಳಿಯೇ ಕೇಳಿದರು.

“ಮುಂಚಿನಿಂದಲೂ ಇದ್ದುದು ಸಿಡುಕು. ಸಿಡುಕಿನಿಂದಲೇ ...ತ್ತರಿಸಿದೆ. “ಗೋಲಿ ತಾಗಿತು— ಗುಂಡು!''

“ಅಯ್ಯೊಯ್ಯೋ—ನಮ್ಮಪ್ಪಾ ಗುಂಡು! ಗುಂಡೇ!! ಭಗವಂತಾ ...ವಾ, ತಾಗಿತು?''

ಬಂದೂಕು ಉಂಟಲ್ಲವೇ, ಅದರ ಬಾಯಿಯಿಂದ ಹಾರಿಬಂದು ...ತು!''

‘...ಗೂ, ಇದೆಲ್ಲಾ ಸರಿಯೇ, ಗುಂಡು ಹೇಗೆ ಹಾರಿತಪ್ಪಾ?'' ...ದರಿಂದ ಏನು ಕೋಪವು ಬಂದಿತು ಅಂತ ಹೇಳಲಿ ಸ್ವಾಮಿ! ...ನಡೆದುಕೊಂಡು ಬಂದಿದ್ದೇನೆ— ಪ್ರಿಯತಮೆಯ ಮುಖ ...ನಿಸ್ಸಿ— ಅದಿರಲಿ. ಬಾಯಾರಿಕೆ, ಹಸಿವು ಆದರೂ ಕೇಳ... ...ನೇ? ಬದಲು ಅದೇ ಆ ಪಟ್ಟಿಯ ವಿಚಾರ?

‘ಹೌದು, ಬಂದೂಕಿನ ಕುದುರೆ ಹಾರಿ ಒತ್ತಿತು. ಗುಂಡು ...ರಿತು. ನನಗೆ ತಾಗಿತು.''

ಇಂಥಾ ಮಾತನ್ನು ಅಂಥ ಹಿರಿಯರ ಎದುರು **ಆಡಬಾರದಿತ್ತು** ಆದರೆ ಆ—ಆ, ಉಪ್ಪರಿಗೆಯ ಪಕ್ಕದ ಕೋಣೆಯಲ್ಲಿ ದೀಪವೂ ಇರಲಿಲ್ಲ. ಹಾಗಾದರೆ ನಾನು ನನ್ನ ಕೋಪವನ್ನು ಹೇಗೆ ತಡಕೊಳ್ಳಲಿ? ನೀವೇ ಹೇಳಿ. ಕಡೆಗೆ ಹೇಳಿದ್ದನ್ನೇ ಸಂಕ್ಷಿಪ್ತವಾಗಿ, ಸರಳವಾಗಿ, ಹೇಗೆ ಬಂದೂಕು, ಪಕ್ಕನೆ, ಅಕಸ್ಮಾತ್ತಾಗಿ ಹಾರಿ, ನನ್ನ ಕೈಯಲ್ಲಿ ಗಾಯಮಾಡಿತು ಎಂಬುದನ್ನು ವಿವರಿಸಿದೆ.

ಇಷ್ಟರಲ್ಲೇ ನನ್ನಾಕೆಯ ತಂಗಿ ಮೆಲ್ಲಗೆ ಆಚೆಯಿಂದ ಬಂದಳು. ಅವಳನ್ನು ನೋಡಿ ನಮ್ಮ ಅತ್ತೆಯವರು ಹೇಳಿದರು: “ಇವಳೂ ಅವಳೊಡನೆಯೇ ಹೋಗಿದ್ದಳು ಇವಳೇನೋ ಬೇಗನೇ ಬಂದಳು ಸಾಯಂಕಾಲವೇ! ಆದರೆ ಅವಳು ಇನ್ನೂ ಬರಲಿಲ್ಲ.......”

ನನಗೆ ಬೇಕಾದ ಸಂಗತಿಯಷ್ಟು ತಿಳಿಯಿತು. ಅಲ್ಲಾ— ನಾನು ಬಂದ ದಿನವೇ ಹೊರಗೆ ಹೋಗಬೇಕೇ? ಇನ್ನೂ ಬಾರದಿರಬೇಕೇ? ಅಂತೂ ಇವತ್ತು ಬೆಳಗಿನಲ್ಲಿ ಎದ್ದಗಳಿಗೇನೇ ಒಳ್ಳೆಯದಲ್ಲ—ಎಂದು ಕಂಡಿತು. ಅತ್ತೆಯವರಂತೂ ಏನೇನೋ ವಿಷಯಗಳನ್ನು ಹೇಳುತ್ತಲೇ ಇದ್ದರು ನನಗದು ಕೇಳುತ್ತಿದ್ದರೂ— ಕೇಳುತ್ತಿರಲಿಲ್ಲ. ಮೆಲ್ಲನೆ ಅತ್ತಿತ್ತ ನೋಡಿ ಆಕಳಿಸಲು ಪ್ರಾರಂಭಿಸಿದೆ ಇದರ ಅರ್ಥ ಅತ್ತೆಯವರಿಗಾಯಿತು ಎಂದು ತೋರುತ್ತೆ. “ಹಾಂ, ಕತ್ತಲಾಯಿತು, ಹೋಗಿ ಮಲಗಿಕೋ” ಎಂದು ಆಜ್ಞಾಪಿಸಿದರು.

ನಾನು ಕತ್ತಲಲ್ಲೇ, ಅದೇ ಮಾಳಿಗೆಯ ಕೆಳಗಿನ ಕೋಣೆಗೆ ಹೋದೆ ದೀಪ ಹಚ್ಚಿಸಿತ್ತು. ಮಿಣುಕಾಗಿ, ಮೆಲ್ಲನೆ ಉರಿಯುತ್ತಿತ್ತು. ಮಂಚದಲ್ಲಿ, ಆ ಕೆಲಸದಾಕೆ ಇನ್ನೂ ಹಾಸಿಗೆಯನ್ನು ಹಾಸಿರಲಿಲ್ಲ. ನಾನೇ ಹಾಸಿಕೊಳ್ಳಬೇಕಾಯಿತು. ದೀಪ ನಂದಿಸಿ, ಹಾಗೆಯೇ ಮಲಗಿಕೊಂಡೆ. ನಿದ್ದೆ ಬಂದುದು ನನಗೆ ತಿಳಿಯಲೇ ಇಲ್ಲ.

ಆಯಾಸವೆಲ್ಲವನ್ನೂ ಪರಿಹರಿಸುವ ಸುಖವಾದ ನಿದ್ದೆ ಬಂದಿತ್ತು. ಆದರೆ ಅಷ್ಟರಲ್ಲೇ ಕೋಣೆಯಲ್ಲಿ ಹರಡಿದ ವಿದ್ಯುದ್ದೀಪದ ಪ್ರಕಾಶದಿಂದ ಎಚ್ಚರವಾಯಿತು. ಕೂಡಲೇ ಎದ್ದು ಕುಳಿತು ಗಟ್ಟಿಯಾಗಿಯೇ ಕೇಳಿದೆ: “ಯಾರದು?”

ಉತ್ತರ ಕೊಡಲಿಲ್ಲ ಯಾರೂ. ಬದಲು ಕುಲುಕುಲು ನಗುತ್ತಿದ್ದಳು ನನ್ನ ರಾಣಿ!

ಆಯಿತು! ಪತಿದೇವನನ್ನು ನೋಡಿ, ಒಂದು ಸಾಷ್ಟಾಂಗವಂದನೆ ಮಾಡಲಿಲ್ಲ— ಒಂದು ಮಧುರವಚನ ಆಡಲಿಲ್ಲ. ಬದಲು ಕೇಳಿಯೇ ಕೇಳಿದಳು:— “ಅಯ್ಯಯ್ಯೋ ದೇವರೇ, ಕೈಗೇನಾಗಿದೆ! ಪಟ್ಟಿ ಯಾಕೆ ಕಟ್ಟಿಕೊಂಡಿದ್ದೀರಿ?''

ನಾನು ಯಾವ ಉತ್ತರ ಕೊಡಬೇಕಿತ್ತು? ನೀವೇ ಹೇಳಿ. ಆದರೂ ಹೇಳಿದೆ: “ದೃಷ್ಟಿಬಾಣಗಳಿಂದ ಗಾಯಗೊಳಿಸಿದ್ದೀಯೆ, ನಂತರವೂ ಕೇಳುತ್ತೀಯಲ್ಲಾ— ಏನು ಗಾಯ ಅಂತ?”

ಈ ಉತ್ತರ ಹೇಳುತ್ತಿರುವಂತೆಯೇ ಮನದಲ್ಲೇ ನಿಶ್ಚಯಿಸಿದೆ— ಇನ್ನು ಜನ್ಮಜನ್ಮಕ್ಕೂ— ಖಂಡಿತ— ಪಟ್ಟಿ ಕಟ್ಟಲಾರೆ ಅಂತ.

ಶಾರೀರಿಕ ಶಿಕ್ಷಣ ಅದರ ಮಹತ್ತ್ವ

(ಲೇಖಾಂಕ: ೨)*

ಶ್ರೀ. ಯ. ನ್ಯಂ. ಜಾವಡೇಕರ, ಎಂ. ಎ., ಬಿ. ಟಿ., ಡಿ ಪಿ. ಎಡ್.,
ಸ್ಟೇಟ್ ಇನ್‌ಸ್ಪೆಕ್ಟರ ಫಾರ್ ಫಿಜಿಕಲ್ ಎಜ್ಯುಕೇಶನ್, ಮುಂಬಯಿರಾಜ್ಯ

卐

ಭಾರತದ ಪರಾಧೀನ ಜೀವನವು ನಮ್ಮನ್ನು ಶಾರೀರಿಕ ದೃಷ್ಟಿಯಿಂದಲೂ ಎಷ್ಟೊಂದು ಬಲಹೀನ ಗೊಳಿಸಿದೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಜನತೆಯ ಆರೋಗ್ಯವೆಂದರೆಯೆ ಭಾರತದ ಸ್ವಾತಂತ್ರ್ಯದೇವಿಯ ಆರೋಗ್ಯ!

卐

" ಸುಧಾರಣೆಯ ಅತ್ಯುಚ್ಚ ಶಿಖರವನ್ನು ಮುಟ್ಟಿದ ಪಾಶ್ಚಾತ್ಯ ದೇಶಗಳಲ್ಲಿ ಕೂಡ ಮೋಜಿನ ಉದಾಹರಣೆಗಳು ದೊರೆಯುತ್ತವೆ. ಇಂಗ್ಲಂಡಿನಲ್ಲಿ ನಡೆದ ಅದೊಂದು ಸಂಗತಿಯನ್ನು ನಾನು ಮರೆಯಲಾರೆ. "

ಮಹಾರಾಷ್ಟ್ರದಲ್ಲಿಯ ಒಬ್ಬ ನಿಷ್ಠಾವಂತ ಮತ್ತು ಅತ್ಯಂತ ಉತ್ಸಾಹಿ ಶಾರೀರಿಕ ಶಿಕ್ಷಣಕಾರ್ಯಕರ್ತರೊಬ್ಬರು, ಯುರೋಪದ ಪ್ರವಾಸವನ್ನು ಮುಗಿಸಿಕೊಂಡು ಮಾತೃಭೂಮಿಗೆ ಮರಳಿ ಬಂದ ಬಳಿಕ, ಒಂದು ಸಭೆಗೆ ಅಧ್ಯಕ್ಷರಾದಾಗ, ಮೇಲಿನಂತೆ ಉದ್ಗಾರ ತೆಗೆದರು. ಆ ಮೋಜಿನ ಸಂಗತಿ ಯಾವುದಿರಬಹುದೆಂದು ನಾನು ಉತ್ಸುಕತೆಯಿಂದ ಅವರ ಮಾತನ್ನು ಕೇಳತೊಡಗಿದೆನು.

ಅವರು ಮುಂದುವರಿದು ಹೀಗೆ ಹೇಳಿದರು : "ಒಂದು ಶಿಕ್ಷಣ ಸಂಸ್ಥೆಯನ್ನು ನೋಡಿಕೊಂಡು ಬರಬೇಕೆಂದು ನಾನು ಅಲ್ಲಿಗೆ ಹೋದೆನು. ಸಂಸ್ಥೆಯ ಹೆಬ್ಬಾಗಿಲಿಗೆ ನಮ್ಮ ಮೋಟಾರು ತಲ್ಪಿದೊಡನೆ, ಒಬ್ಬ ಶಿಪಾಯಿಯು ಮೋಟಾರಿನ ಬಾಗಿಲು ತೆಗೆದು, ಇಂಗ್ಲಿಷ್‌ಜನರ ಪದ್ಧತಿಯ ಪ್ರಕಾರ ಸಲಾಮು ಹೊಡೆದನು. ಸಂಸ್ಥೆಯ ಕಚೇರಿಯಲ್ಲಿ ಪ್ರಾಸ್ತಾವಿಕ ಸ್ವರೂಪದ ಮಾತು-ಕತೆಗಳು ಮುಗಿದ ಮೇಲೆ, ಶಾರೀರಿಕ ಶಿಕ್ಷಣದ ಚಟುವಟಿಕೆಗಳನ್ನು ನನಗೆ ತೋರಿಸಲೆಂದು ನನ್ನನ್ನು ಕ್ರೀಡಾಂಗಣಕ್ಕೆ ಕರೆದುಕೊಂಡು ಹೋದರು. ಶಾರೀರಿಕ ಶಿಕ್ಷಣವನ್ನು ಕೊಡುತ್ತಿದ್ದ ಶಿಕ್ಷಕರನ್ನು ಕರೆದೊಡನೆ, ಅವರನ್ನು ಈ ಮೊದಲು ನಾನೆಲ್ಲಿಯೋ ನೋಡಿದಂತೆ ಭಾಸವಾಗಿ— ಎಷ್ಟು ಧೇನಿಸಿಕೊಂಡರೂ— ಮೊದಲಿನ ಗುರುತು ನೆನಪಿಗೆ ಬರದಂತಾಯಿತು. ಇಲ್ಲಿಯ ಎಲ್ಲ ಕೆಂಪು ಮನುಷ್ಯರೂ ಒಂದೇ ರೂಪದಂತೆ ಒಬ್ಬರಂತೆ ಒಬ್ಬರು ಕಾಣಿಸುತ್ತಿರಬಹುದೆಂದು ಮನಸ್ಸಿಗೆ ಸಮಾಧಾನ ಹಚ್ಚಿಕೊಳ್ಳಲು ಬಹಳ ಪ್ರಯತ್ನಿಸಿದೆನು. ಆದರೆ ನನ್ನ ಪ್ರಯತ್ನವು ನಿಷ್ಫಲವಾಯಿತು. ಕುತೂಹಲವು ಕೆರಳತೊಡಗಿತು. ಕೊನೆಗೆ ಧೈರ್ಯತಂದುಕೊಂಡು ಸಂಸ್ಥೆಯ ಮುಖ್ಯಾಧ್ಯಾಪಕರಿಗೆನೇ ಕೇಳಿಬಿಟ್ಟೆ :

" ' ಕ್ಷಮಿಸಿರಿ. ಈ ಶಿಕ್ಷಕರನ್ನು ನಾನು ಈ ಮೊದಲು ಎಲ್ಲಿಯೋ ನೋಡಿದಂತಿದೆ. ಎಲ್ಲಿ ಎಂಬುದು ನೆನಪಾಗಲೊಲ್ಲದು. ಅಡ್ಡಿಯಿರದಿದ್ದರೆ ನನ್ನ ಮನಸ್ಸಿನ ಈ ತೊಡಕನ್ನು ಬಿಡಿಸಲು ದಯವಿಟ್ಟು ನೀವೊಂದಿಷ್ಟು ನೆರವಾಗುವಿರಾ ? ' ಆಗ ಮುಖ್ಯಾಧ್ಯಾಪಕರು ಹೀಗೆ ಅಂದರು.

" ' ಸರಿ ಸರಿ. ಅತಿಶಯ ಆನಂದದಿಂದ ನೆರವಾಗುವೆನು. ಇದೀಗ ೧೦-೧೫ ಮಿನಿಟುಗಳ ಮುಂಚೆ ಹೆಬ್ಬಾಗಿಲ ಬಳಿಯಲ್ಲಿ ತಮ್ಮ ಮೋಟಾರಿನ ಬಾಗಿಲವನ್ನು ತೆರೆದು ಸಲಾಮು ಮಾಡಿದ ವ್ಯಕ್ತಿಯೇ ಇವರು. ಪೋಷಾಕನ್ನು ಬದಲಿಸಿದ್ದರಿಂದ ನಿಮಗೆ ಇಷ್ಟೊಂದು ಗೊಂದಲವಾಗಿರಬೇಕು. ಇವರು ನಮ್ಮಲ್ಲಿ ಶಿಪಾಯಿ ಇದ್ದು ಶಾರೀರಿಕ ಶಿಕ್ಷಕನ ಕೆಲಸವನ್ನೂ ಮಾಡುತ್ತಾರೆ.'

" ' ಶಾರೀರಿಕ ಶಿಕ್ಷಣವನ್ನು ಕೊಡುವುದಕ್ಕಾಗಿ ಇವರನ್ನು ನೀವು ಹೇಗೆ ಆರಿಸಿದಿರಿ ? ' ಎಂದು ನಾನು ಕೇಳಿದೆ. ಎಲ್ಲ ಸಂಗತಿಯನ್ನು ತಿಳಿದುಕೊಳ್ಳುವುದು ಅಗತ್ಯವೆಂದು ತೋರಿ, ಒಂದಿಷ್ಟು ಸಂಕೋಚವೆನಿಸಿದರೂ ಹಾಗೆ ನಾನು ಕೇಳಿದೆನು. ಆಗವರು ಹೀಗಂದರು :

" ' ಈ ವ್ಯಕ್ತಿಯ ಯೋಗ್ಯತೆ ಶಿಪಾಯಿ ದರ್ಜೆಯದೆಂದು ತಿಳಿದು ಆ ಕೆಲಕ್ಕೆಂದು ಅವರನ್ನು ನೇಮಿಸಿಕೊಂಡೆವು. ಆದು ಆವರಿಗೆ ಬೇಕೆನಿಸಿದಷ್ಟು ಸಂಬಳವನ್ನು ಶಿಪಾಯಿ ಸ್ಥಳಕ್ಕೆ ಕೊಡು

---

* ಕಳೆದ ಎಪ್ರಿಲ್ ಸಂಚಿಕೆಯಲ್ಲಿ ಮೊದಲನೆಯ ಲೇಖಾಂಕ ಪ್ರಕಟವಾಗಿದೆ. ಸಂ. ಜ.

ದು ಸಂಸ್ಥೆಗೆ ಶಕ್ಯವಿರಲಿಲ್ಲ. ಇದಕ್ಕಾಗಿ ಹೆಚ್ಚಿನ ಕೆಲಸವೆಂದರೆ ೀರಿಕ ಶಿಕ್ಷಣದ ಕೆಲಸವನ್ನು ಅವರಿಗೆ ಒಪ್ಪಿಸಿ, ಹೆಚ್ಚಿನ ಸಂಬಳ ನ್ನು ಕೊಡುತ್ತಿದ್ದೇವೆ. ಇಲ್ಲದಿದ್ದರೆ ಇವರು ಬೇರೆ ಏನನ್ನು ಸಬಲ್ಲರು? '

" ಈ ಉತ್ತರವನ್ನು ಮುಖ್ಯಾಧ್ಯಾಪಕರು ಅತಿ ಸಹಜತೆಯಿಂದ ಳಿದರು. ಅವರಿಗೆ ಆ ವಿಷಯದಲ್ಲಿ ಯಾವ ಅಭ್ಯಂತರವೂ ೀರಿಬರಲಿಲ್ಲ...." ಹೀಗೆ ಆ ಸಭೆಯಲ್ಲಿ ಅಧ್ಯಕ್ಷರ ಭಾಷಣವು ುಂದುವರಿಯಿತು.

ಇರಲಿ. ಈ ಮೋಜಿನ ಉದಾಹರಣೆಯನ್ನು ಕೇಳಿ ನನ್ನ ಮನ ಗೆ ಒಂದು ಬಗೆಯ ತೀವ್ರ ಆಘಾತವಾಯಿತು; ಮನಸ್ಸಿ- ಲ್ಲಿ ವಿಚಾರದ ಗೊಂದಲವುಂಟಾಯಿತು. ಶಿಪಾಯಿ ಮತ್ತು ೀರಿಕ ಶಿಕ್ಷಣದ ಶಿಕ್ಷಕ ಒಬ್ಬನೇ! ಈ ಎರಡೂ ಕೆಲಸಗಳಲ್ಲಿ ಯಾವ ಸಾಧರ್ಮ್ಯವುಂಟೆಂದು ಶಿಪಾಯಿಯು ಶಿಕ್ಷಕನ ಕೆಲಸವನ್ನು ಾಡಬೇಕು? ಇಬ್ಬರೂ ಮನುಷ್ಯರೆಂಬುದು ನಿಜ. ಶಿಪಾಯಿ, ಕ್ಷಕ ಈ ಎರಡೂ ಶಬ್ದಗಳಲ್ಲಿಯ ಆದ್ಯ ಅಕ್ಷರವು ಒಂದೇ ುಬುದೂ ನಿಜವೇ. ಆದರೆ ಅವರವರ ಯೋಗ್ಯತೆ ಎಲ್ಲಿ ಳಿಯಿತು?

ಸಂಬಳದಲ್ಲಿ 'ಬಢತಿ' ಯಾಗುವ ಅನುಕೂಲತೆಗಾಗಿ, ಜೇಕು ಾದವನಿಗೆ ಈ ಶಿಕ್ಷಣದ ಕೆಲಸವನ್ನು ಒಪ್ಪಿಸಿಕೊಡಬಹುದು ಬರು ಥ ದರ್ಜೆ ಈ ಕೆಲಸಕ್ಕುಂಟೇ? ಇದ್ದರೆ ಅದು ಏಕೆ? ಶಿಪಾ- ಯಿಯು ಶಾರೀರಿಕ ಶಿಕ್ಷಣದ ಕೆಲಸವನ್ನು ಮಾಡುತ್ತ ಹೋದರೆ, ದ್ಯಾರ್ಥಿಗಳಿಗೆ ಅದರ ಲಾಭವಾಗುವುದೇ? ಬಾಲಕ, ಪಾಲಕ, ತರ ಶಿಕ್ಷಕರು ಹಾಗು ಸಂಸ್ಥಾ ಚಾಲಕ ಇವರಲ್ಲಿ ಯಾವ ಭಾವನೆ- ಳು ಮೂಡುವುವು? ಎಂಬೀ ವಿಚಾರವು ಮನಸ್ಸಿನಲ್ಲಿ ಸುಳಿದೊಡನೆ, ನ್ನ ಕಣ್ಮುಂದೆ ಮುಂಬಯಿರಾಜ್ಯದ ಪರಿಸ್ಥಿತಿಯು, ತೀವ್ರವಾಗಿ ರುಳುವ ಚಲಚ್ಚಿತ್ರಪಟದಂತೆ ಉರುಳತೊಡಗಿತು.

ಬಡೋದೆಯ ರಾಜ್ಯವು ವಿಲೀನವಾಗುವ ಮೊದಲು, ಶಿಪಾಯಿ ದ್ದವನು ಮುಂದೆ ವಿಶಿಷ್ಟ ಶಿಕ್ಷಣ ಪಡೆದು ಶಾರೀರಿಕ ಶಿಕ್ಷಣದ ಧ್ಯಾಪಕನಾಗಿದ್ದಾನೆಂಬ ಮಾತು, ನಾನು ವಿಲೀನೀಕರಣದ ತರು- ಾಯ ಬಡೋದೆಗೆ ಮೇಲ್ವಿಚಾರಣೆಗೆಂದು ಹೋದಾಗ ತಿಳಿದು ಿತು. ಆದರೆ ನಮ್ಮ ದೇಶದಲ್ಲಿ ಒಂದೇ ವ್ಯಕ್ತಿ ಶಿಪಾಯಿ ಮತ್ತು ಕ್ಷಕನಾಗಿರುವುದು ನನ್ನ ಲಕ್ಷ್ಯದಲ್ಲಿ ಬಂದಿಲ್ಲ.

ಮುಂಬಯಿ ರಾಜ್ಯದ ಇತಿಹಾಸವನ್ನು ಅವಲೋಕಿಸಿದರೆ, ಶಾರೀ- ಕ ಶಿಕ್ಷಣವನ್ನು ಕೊಡುವುದಕ್ಕಾಗಿ ಸೈನ್ಯ ಇಲ್ಲವೆ ಪೋಲೀಸ ಾತೆಯೊಳಗಿಳ ನಿವೃತ್ತ ಜನರು ಡ್ರಿಲ್‌ಮಾಸ್ತರರಾಗಿರುತ್ತಿದ್ದ- ೆಂದು ತಿಳಿದುಬರುತ್ತದೆ. ಆದರೆ ಶಾಲೆಯಲ್ಲಿ ಅವರ ದರ್ಜೆ ಇತರ ಕ್ಷಕರಿಗೆ ಸಮಾನವಾದುದಾಗಿ ಎಂದೂ ಇರುತ್ತಿದ್ದಿಲ್ಲ. ಒಂದು ಾರವಾದ ಬಾಕನ್ನು ಎತ್ತಲು ಶಿಪಾಯಿಗೆ ಅಸಾಧ್ಯವಾದಾಗ, ಲ್ಲವೆ ಅಸಂಖ್ಯಾಕ ವಿದ್ಯಾರ್ಥಿಸಮೂಹವನ್ನು ಕೂಗಿ ಗಪ್ಪು ಕೂಡಿಸುವ ಸಂದರ್ಭವಿದ್ದಾಗ, ಮುಖ್ಯಾಧ್ಯಾಪಕರಿಗೆ ಡ್ರಿಲ್ ಮಾಸ್ತರರ ನೆನಪೇ ಮೊದಲಿಗೆ ಆಗುತ್ತಿತ್ತು. ಒಂದು ಬದಿಗೆ ಎದ್ದು ನಿಂತ ಶಿಪಾಯಿ, ನಡುವೆ ಬೌದ್ಧಿಕ ವಿಷಯಗಳ ಶಿಕ್ಷಕರು ಕುರ್ಚಿ- ಯಲ್ಲಿ, ಇನ್ನೊಂದು ಬದಿಗೆ ಎದ್ದುನಿಂತ ಡ್ರಿಲ್‌ಮಾಸ್ತರರು—ಹೀಗೆ ಫೋಟೋ ತೆಗೆಸಿದ್ದನ್ನು ನಾನು ಬಲ್ಲೆ. ಬೌದ್ಧಿಕ ಪ್ರಗತಿ, ಶಿಷ್ಟಾ- ಚಾರ, ಮಧುರವಾಣಿ ಮೊದಲಾದ ಸದ್ಗುಣಗಳು ಸುತರಾಂ ಇಲ್ಲದ ಗೃಹಸ್ಥನನ್ನೇ ಶಾರೀರಿಕ ಶಿಕ್ಷಣದ ಕೆಲಸಕ್ಕೆ ನೇಮಿಸಿಕೊಳ್ಳುತ್ತಿದ್ದ ಮುಖ್ಯಾಧ್ಯಾಪಕರಿಗೆ ಇಲ್ಲವೆ ಸಂಸ್ಥಾ ಚಾಲಕರಿಗೆ, ಶಾರೀರಿಕ ಶಿಕ್ಷ- ಣದ ಮಹತ್ತ್ವದ ಮನವರಿಕೆಯಾಗಿತ್ತೆಂದು ಹೇಗೆ ಹೇಳಬೇಕು? ಈ ವಿಷಯದ ಮಹತ್ತ್ವವು ಸಂಸ್ಥೆಗಳಲ್ಲಿ ಪ್ರಸ್ಥಾಪಿತವಾಗಬಾರ- ದೆಂದೇ ಪೂರ್ವದ ಪರಕೀಯ ಸರಕಾರದ ಧೋರಣವಿರುತ್ತಿತ್ತು.

ನನ್ನ ಅನುಭವಕ್ಕೆ ಬಂದ ಒಂದು ಸಂಗತಿಯನ್ನು ಹೇಳುವೆ. ಇದರಿಂದ ಪರಕೀಯ ಸರಕಾರದ ಧೋರಣದ ಮೇಲೆ ಒಳ್ಳೇ ಪ್ರಕಾಶವು ಬೀಳಬಲ್ಲದು.

ನನ್ನ ಮೇಲ್ವಿಚಾರಣೆಯ ಪ್ರವಾಸದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಮುಖ್ಯಾಧ್ಯಾಪಕರು ಮತ್ತು ಸ್ಥಾನಿಕ ಡಾಕ್ಟರರು ಇವ- ರನ್ನೆಲ್ಲ ಕರೆಯಿಸಿ, ಶಾರೀರಿಕ ಶಿಕ್ಷಣದ ಸಮಸ್ಯೆಗಳನ್ನು ಕುರಿತು ಆಪ್ತಾಲೋಚನೆ ಮಾಡುವುದುಂಟು. ಕೆಲವು ವೇಳೆ ಸರಕಾರದ ಶಾರೀರಿಕ ಶಿಕ್ಷಣ ವಿಷಯಕ ಯೋಜನೆಯನ್ನು ತಿಳಿಸಿಹೇಳಿ ಜನ- ತೆಯ ಸಹಕಾರವನ್ನು ಬಯಸುವದಕ್ಕಾಗಿ, ಸಾರ್ವಜನಿಕ ಸ್ವರೂಪದ

ವ್ಯಾಖ್ಯಾನಗಳನ್ನೂ ಕೊಡುವುದುಂಟು. ಒಂದು ಜಿಲ್ಲಾ ಸ್ಥಳದಲ್ಲಿ ನನ್ನದೊಂದು ಇಂಥ ವ್ಯಾಖ್ಯಾನವಾಯಿತು. ಸಭೆ ಮುಗಿದ ಬಳಿಕ ವಯೋವೃದ್ಧ ಗೃಹಸ್ಥರೊಬ್ಬರು ನನ್ನ ಭೆಟ್ಟಿಗೆ ಬಂದರು ಅವರ ಕಣ್ಣಲ್ಲಿ ನೀರು ಸುರಿಯುತ್ತಿತ್ತು. ಮುಖಲಕ್ಷಣದ ಮೇಲಿಂದ ಅವು ಆನಂದದ ಅಶ್ರುಗಳೆಂಬುದು ಸ್ಪಷ್ಟವಿತ್ತು. ಅವರ ಕಂಠವು ಮಾತ್ರ ಬಿಗಿದು ಬಂದಿತ್ತು. ಅವರು ಒಮ್ಮೆಲೆ ಹೀಗೆ ಉದ್ಗಾರ ತೆಗೆದರು :

“ ಇದೆಂಥ ಭಾಗ್ಯದ ದಿವಸ ! ನಮ್ಮ ಕಾಲವೋ ...... ”

“ ಯಾವ ಭಾಗ್ಯವದು ? ನಿಮ್ಮ ಕಾಲದಲ್ಲಿ ಅಷ್ಟೊಂದು ಉದ್ವೇಗಕಾರಿಯಾದುದು ಏನಿತ್ತು ? ” ಎಂದು ನಾನು ಕೇಳಿದೆ; ನನ್ನ ಹೃದಯವಾದರೂ ಅವರ ಉದ್ಗಾರದ ಮೂಲಕ ತುಂಬಿ ಬಂದಿತ್ತು. ಅವರ ಆನಂದಾಶ್ರುಗಳಿಗೆ ಕಾರಣವಾದ ಆ ಉದ್ವೇಗದ ವಿವರವನ್ನು ತಿಳಿದುಕೊಳ್ಳಲು ನಾನು ಉತ್ಸುಕನಾಗಿದ್ದೆ. ಅವರು ಮುಂದುವರಿದು ಹೀಗೆ ಹೇಳಿದರು :

“ ನಾನೊಂದು ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕನಾಗಿದ್ದಾಗ, ಒಮ್ಮಿಂದೊಮ್ಮೆ ಮೇಲಧಿಕಾರಿಗಳಿಂದ ಎಚ್ಚರಿಕೆ ಬಂತು : ‘ ನಿಮ್ಮ ನಡತೆ ಮತ್ತು ಧೋರಣ ಇವು ಸರಕಾರದ ದೃಷ್ಟಿಯಲ್ಲಿ ಸಂಶಯಾಸ್ಪದವಾಗಿವೆ; ನೀವು ಅವನ್ನು ಸುಧಾರಿಸಿಕೊಳ್ಳದಿದ್ದರೆ ನಿಮ್ಮ ವಿರುದ್ಧವಾಗಿ ಶಿಸ್ತಿನ ಉಪಾಯವನ್ನು ಕೈಕೊಳ್ಳಬೇಕಾದೀತು,’’ ಎಂಬ ಎಚ್ಚರಿಕೆ ಬಂದೊಡನೆ ನಾನು ಗೊಂದಲದಲ್ಲಿ ಬಿದ್ದೆ. ನನ್ನ ಸಹೋದ್ಯೋಗಿಗಳ ಸಹಾಯದಿಂದ ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸವಾಗುವಂತೆ ನಾನು ಮನಃಪೂರ್ವಕವಾಗಿ ದುಡಿಯುತ್ತಿದ್ದೆ,’ ಹೀಗಿರುವಾಗಿ ಇಂಥ ಎಚ್ಚರಿಕೆ ಏಕೆ ಬರಬೇಕೆಂಬುದು ತಿಳಿಯದಂತಾಗಲು, ದಡಪಡಿಸುತ್ತ ಜಿಲ್ಹಾಧಿಕಾರಿಗಳ ಬಳಿಗೆ ಹೋಗಿ ಚೌಕಸಿ ಮಾಡಿದೆನು. ಆಗ ಅವರು ಒಮ್ಮೆಲೆ ರೇಗಿ “ ಏನ್ರೀ ನಿಮ್ಮ ಸಾಲೆಯಲ್ಲಿ ಮಲ್ಲಕಂಬವಿದೆಯಂತೆ; ಹೌದೇ ? ವ್ಯಾಯಾಮ ಶಾಲೆಯಿದೆಯಂತೆ; ಹೌದೇ ? ಲಾಠಿ, ಲೇಜೀಮು, ದಾಂಡಪಟ್ಟಾ ಮೊದಲಾದ ಸಾಮುಗ್ರಿಯನ್ನು ವಿದ್ಯಾರ್ಥಿಗಳ ಸಲುವಾಗಿ ಸಂಗ್ರಹ ಮಾಡಿರುವಿರಂತೆ; ಹೌದೇ ? ಉಠಾಬೈಸು, ಸಾಮುಗಳನ್ನು ಅವರಿಗೆ ಹೇಳಿಕೊಡುತ್ತ ಅವರನ್ನು ಜಟ್ಟಿಗಳನ್ನಾಗಿ ಮಾಡಲು ಹೊಂಚು ಹಾಕಿರುವಿರಂತೆ; ಹೌದೇ ? ’ ಎಂಬ ಪ್ರಶ್ನೆಗಳನ್ನು ಒಂದೇ ಉಸುರಿನಲ್ಲಿ ಕೇಳಿದರು. ಅವರ ಪ್ರಶ್ನೆಗಳ ಧ್ವನಿಯ ಮೇಲಿಂದ ಅವರು ನನಗಿತ್ತ ಎಚ್ಚರಿಕೆಯ ಅರ್ಥವಾಯಿತು. ಶಾರೀರಿಕ ಶಿಕ್ಷಣದ ಸಹಾಯದಿಂದ ಮಕ್ಕಳ ಸರ್ವಾಂಗೀಣ ವಿಕಾಸವಾಗುವಂತೆ ವ್ಯವಸ್ಥೆಯನ್ನು ನನ್ನ ಶಾಲೆಯಲ್ಲಿ ಇಟ್ಟಿರುವುದೇ ನನ್ನ ಅಪರಾಧವು; ನನಗೆ ದೊರೆತ ಎಚ್ಚರಿಕೆಯು ಈ ಅಪರಾಧಕ್ಕೆ ಪ್ರಾಯಶ್ಚಿತ್ತವಾಗಿತ್ತು ! ಇದಕ್ಕೇ ಗುಲಾಮಗಿರಿಯೆಂದು ಹೆಸರು. ಈಗಲಾದರೋ ರಾಷ್ಟ್ರೀಯ ಸರಕಾರದ ಪ್ರತಿನಿಧಿಗಳಾಗಿ ನೀವು ಸಾವಿರಾರು ಶಾರೀರಿಕ ಶಿಕ್ಷಣಕೇಂದ್ರಗಳನ್ನು ತೆರೆದದ್ದು ಕೇಳಿ ನನಗೆ ರೋಮಹರ್ಷವಾಯಿತು. ನನಗೆ ಇಷ್ಟೊಂದು ಆನಂದವಾದ ಕಾರಣವು ಇದೇ. ಇಂದಿನ ಸರಕಾರವು ಶಾರೀರಿಕ ಶಿಕ್ಷಕರಿಗೆ ತಾನಾಗಿ ತರಬೇತಿ[illegible] ವ್ಯವಸ್ಥೆ ಮಾಡಿದೆ. ಸ್ಥಾನಿಕ ಶಾರೀರಿಕ ಶಿಕ್ಷಕರ ಕೆಲಸವನ್ನು ತಪಾಸಿಸಲು ಜಿಲ್ಹಾಧಿಕಾರಿಗಳನ್ನೂ ಅವರೆಲ್ಲರ ಮೇಲೆ ಇಡೀ ರಾಜ್ಯದಲ್ಲಿ ಏಕಸೂತ್ರತೆಯನ್ನೂ ತರಲು ಒಬ್ಬ ಸ್ವತಂತ್ರ ಅಧಿಕಾರಿಯನ್ನು ನೇಮಿಸಿರುವುದನ್ನು ಕಂಡು ನನಗೆ ಸಮಾಧಾನವಾಯಿತು ಪಾರತಂತ್ರ್ಯ ಮತ್ತು ಸ್ವಾತಂತ್ರ್ಯ ಇವುಗಳಲ್ಲಿ ಎಷ್ಟೊಂದು ಭೇದವಿದೆ ನಿಮಗೆ ನನ್ನ ಆಶೀರ್ವಾದಗಳಿವೆ ! ” ಎಂದು ನನ್ನನ್ನು ಹರಸಿ ಅವರು ತಮ್ಮ ಮಾತು ಮುಗಿಸಿದರು.

ಶಿಪಾಯಿಗೆ ಶಾರೀರಿಕ ಶಿಕ್ಷಕನ ಕೆಲಸವನ್ನು ಕೊಡುವ ಮುಖ್ಯಾಧ್ಯಾಪಕರು, ಡ್ರಿಲ್‌ಮಾಸ್ತರರನ್ನು ಶಿಪಾಯಿಗಳಂತೆ ನಡೆಸಿಕೊಳ್ಳುವ ಸಂಸ್ಥಾಚಾಲಕರು, ಶಾರೀರಿಕ ಶಿಕ್ಷಣದ ಕೆಲಸವನ್ನು ವ್ಯವಸ್ಥಿತವಾಗಿ ನಡೆಸಿರುವ ಮುಖ್ಯಾಧ್ಯಾಪಕರನ್ನು ಬೆದರಿಸಿ ಎಚ್ಚರಿಕೆ ಕೊಡುವ ಪರಕೀಯ ಸರಕಾರವು— ಇವೆಲ್ಲಾ ಈಗ ಗತಕಾಲದ ಮಾತುಗಳಾಗಿವೆ. ಆದರೂ ಬೇರೆ ಬೇರೆ ಸಂಸ್ಥೆಗಳನ್ನು ನೋಡಿದ ಮೇಲೆ, ಮುಖ್ಯಾಧ್ಯಾಪಕ ಹಾಗು ಇತರ ಅಧ್ಯಾಪಕರೊಡನೆ ಚರ್ಚೆ ನಡೆಸಿದ ಮೇಲೆ, ಶಾರೀರಿಕ ಶಿಕ್ಷಣಕ್ಕೆ ಶಾಲೆಯ ಅಭ್ಯಾಸಪತ್ರಿಕೆಯಲ್ಲಿ ದೊರೆತ ಸ್ಥಾನವನ್ನು ಕಣ್ಣಾರೆ ಕಂಡ ಮೇಲೆ, ನನಗೆ ಒಂದು ಮಾತನ್ನು ಎಲ್ಲರಿಗೂ ಮತ್ತೆ ಮತ್ತೆ ಹೇಳಬೇಕೆಂದೆನಿಸುತ್ತಿದೆ ಅದಾವುದೆಂದರೆ : ಶಾರೀರಿಕ ಶಿಕ್ಷಣದ ಮಹತ್ತ್ವವನ್ನು ಎಷ್ಟೊಂದು ಬಾರಿ ಸ್ಪಷ್ಟೀಕರಿಸಿದಷ್ಟೂ ಕಡಿಮೆಯೇ ಇದೆ. ಎಷ್ಟೆಷ್ಟು ಸಾರಿ ಅದನ್ನು ಬಿಂಬಿಸಿ ಹೇಳಿದರೂ ಮತ್ತೆ ಮತ್ತೆ ಹೇಳುವ ಅವಶ್ಯಕತೆ ಇದ್ದೇ ಇದೆಯಾದ್ದರಿಂದ, ಈ ವಿಷಯವನ್ನು ಉದ್ದೇಶಪೂರ್ವಕವಾಗಿ ಹೇಳಬೇಕೆಂದು ಈ ಲೇಖನವನ್ನು ಬರೆಯುತ್ತಿದ್ದೇನೆ. ಸುಟ್ಟು ನಿಂತರೂ ಮರದ ಹಸಿ ನಿಲ್ಲಲಿಲ್ಲವೆಂಬಂತೆ, ಪಾರತಂತ್ರ್ಯದ ಅವಧಿ ನಿಂತುಹೋಗಿದ್ದರೂ ಶಾರೀರಿಕ ಶಿಕ್ಷಣವಿಷಯಕವಾದ ಔದಾಸೀನ್ಯವು ಸ್ವಲ್ಪ ಕಡಿಮೆಯಾಗಿದ್ದರೂ ಇನ್ನೂ ನಮ್ಮಲ್ಲಿ ಸ್ಥಿರವಾಗಿ ಉಳಿದುಕೊಂಡಿದೆ ಎಂಬುದು ನನ್ನ ಅನುಭವದ ಮಾತಾಗಿದೆ.

ಸದ್ಯಸ್ಥಿತಿಯಲ್ಲಿ ಶಾರೀರಿಕ ಶಿಕ್ಷಣದ ಮಹತ್ತ್ವವೆಷ್ಟಿದೆಯೆಂಬುದನ್ನು ವಿವರಿಸುವುದಕ್ಕಾಗಿ ಮೊದಲು ನಮ್ಮ ಸದ್ಯದ ಸ್ಥಿತಿಯು ಈ ಬಗ್ಗೆ ಎಂತಿದೆಯೆಂಬುದನ್ನು ನೋಡುವುದು ಅಗತ್ಯವಾಗಿದೆ. ನಮ್ಮನ್ನು ಎದುರಿಸಿದ ಸಮಸ್ಯೆಗಳಾವುವು ಎಂಬುದನ್ನು ಅಭ್ಯಾಸ ಮಾಡಲಿಕ್ಕೆ ಬೇಕು. ಈ ಸಮಸ್ಯೆಗಳನ್ನು ಬಿಡಿಸಲು ಶಾರೀರಿಕ ಶಿಕ್ಷಣವು ಎಷ್ಟರಮಟ್ಟಿಗೆ ನೆರವಾದೀತೆಂಬ ಸಂಗತಿಯನ್ನೂ ನಾವು ಆಲೋಚಿಸಲಿಕ್ಕೆ ಬೇಕು

ನಮ್ಮ ಮಾತೃಭೂಮಿಯು ಸ್ವತಂತ್ರವಾಗಿ ಇದೀಗ ಐದು ವರ್ಷಗಳಾಗುತ್ತ ಬಂತು. ಈ ಐದು ವರ್ಷಗಳ ವರೆಗೂ ನಾವು ಪಾರತಂತ್ರ್ಯದ ಹುದುಲಿನಲ್ಲಿ ಸಿಲುಕಿಕೊಂಡಿದ್ದೆವು. ಇಷ್ಟೊಂದು ದೀರ್ಘ ಕಾಲ ದೇಶವು ದಾಸ್ಯದಲ್ಲಿ ಇದ್ದದ್ದರಿಂದಲೂ ಹಾಗೂ ಮೊನ್ನೆಯ ದ್ವಿತೀಯ ಮಹಾಯುದ್ಧದ ಜಂಜಡದಲ್ಲಿ ನಮ್ಮ ದೇಶವನ್ನು ಒತ್ತಾಯದಿಂದ ಎಳೆದದ್ದರಿಂದಲೂ ನಮ್ಮ ರಾಷ್ಟ್ರಕ್ಕೆ ಅಪರಿಮಿತ-

ವಾದ ಹಾನಿಯಾಗಿದೆ. ೨೧ ದಿನಗಳ ಟೈಫಾಯ್ಡ್ ಜ್ವರವು ಬಂದು ಹೋದ ಮೇಲೆ, ಪ್ರಕೃತಿಯು ಮತ್ತೆ ಮೂಲಸ್ವಾಸ್ಥ್ಯವನ್ನು ಪಡೆದುಕೊಳ್ಳಬೇಕಾದರೆ ೨-೩ ತಿಂಗಳುಗಳ ಅವಧಿ ಬೇಕಲ್ಲವೇ? ಆದರಂತೆ ೧೫೦ ವರ್ಷಗಳ ಅನಿಷ್ಟ ಪರಿಣಾಮವು ೪-೫ ವರ್ಷಗಳ ಅಲ್ಪ ಕಾಲದಲ್ಲಿ ಹೇಗೆ ನಷ್ಟವಾದೀತು? ಆದರೆ ಈ ವಿಷಯದಲ್ಲಿ ನಿರಾಶಾವಾದವಾಗಲಿ ಪರಾಭೂತ ಮನೋವೃತ್ತಿಯಾಗಲಿ ನಮ್ಮನ್ನಾವರಿಸದಂತೆಯೂ ನಾವು ಎಚ್ಚರಿಕೆ ವಹಿಸಬೇಕು. ಪಾರತಂತ್ರ್ಯವೆಂಬ ಈ ಹಳೆಯ ರೋಗದ ಲಕ್ಷಣಗಳು ಹಿಂದೆ ಸರಿದ ಬಳಿಕ, ಆ ರೋಗದ ಬಾಧೆಯಿಂದುಂಟಾದ ರಾಷ್ಟ್ರದ ಹಾನಿಯೇನೇನು ಎಂಬುದರ ವಿಮರ್ಶೆಯನ್ನು ಮಾಡಲೇಬೇಕು. ಮತ್ತು ನಮ್ಮ ರಾಷ್ಟ್ರದಲ್ಲಿ ನವಚೈತನ್ಯವುಂಟಾಗಿ ಪ್ರಾಚೀನಕಾಲದ ವೈಭವವು ಮರಳಿ ಹೇಗೆ ಬಂದೀತು ಎಂಬುದರ ಪರ್ಯಾಲೋಚನೆಯನ್ನೂ ನಾವು ಮಾಡತಕ್ಕದ್ದು. ಪಾರತಂತ್ರ್ಯದ ಪರಿಣಾಮಗಳಾವುವು ಎಂಬೀ ವಿಷಯವಾಗಿ ಮೊದಲಿಗೆ ನೋಡುವಾ.

ಪಾರತಂತ್ರ್ಯದ ಪರಿಣಾಮಗಳು:

(೧) ರಾಷ್ಟ್ರಪುರುಷನ ಶಾರೀರಿಕ ಹಾನಿ

ನಮ್ಮ ಭಾರತದೇಶದ ಪರಂಪರೆಯು ಶಾರೀರಿಕ ಸಾಮರ್ಥ್ಯದ ವಿಷಯದಲ್ಲಿ ಅತಿಶಯ ಉಜ್ವಲವಾಗಿದೆ. ಶ್ರೀರಾಮಚಂದ್ರ ಮತ್ತು ಶ್ರೀಹನುಮಾನ್, ಭೀಮ ಮತ್ತು ಅರ್ಜುನ, ಕೃಷ್ಣದೇವರಾಯ, ರಾಣಾಪ್ರತಾಪ, ಶಿವಾಜಿಮಹಾರಾಜರಂಥ ಶೂರ ಪುಣ್ಯಪುರುಷರು ತಮ್ಮ ಪರಾಕ್ರಮದಿಂದ ಈ ಪುಣ್ಯಭೂಮಿಯಲ್ಲಿ ಬೆಳಗಿದ್ದಾರೆ. ಹಿಂಸ್ರಪಶುಗಳೊಡನೆ ಲೀಲೆಯಿಂದ ಚೆನ್ನಾಟವಾಡುವ ಪುರಾಣಕಾಲದ ಭರತಕುಮಾರನನ್ನು ನಾನು ಮರೆಯುವಂತಿಲ್ಲ. ಸೊಕ್ಕಿದ ಹೃಷ್ಟಪುಷ್ಟ ಕುದುರೆಯನ್ನು ಗುದ್ದಿ ರಕ್ತಕಾರಿಸುವ ಅಣ್ಣಾಸಾಹೇಬ ಪಟವರ್ಧನ, ಇಂಗ್ಲಿಷರ ಸೈನ್ಯವನ್ನು ತನ್ನ ಅಪರಿಮಿತ ಪರಾಕ್ರಮದಿಂದ ಮಣ್ಣುಮುಕ್ಕಿಸಿದ ಝಾಂಸಿ ಲಕ್ಷ್ಮೀಬಾಯಿ ಇಂಥ ಅಸಾಧಾರಣವ್ಯಕ್ತಿಗಳು ನಮ್ಮ ಮಾತೃಭೂಮಿಯಲ್ಲಿಯೇ ಜನಿಸಿದ್ದಾರೆ. ಈ ವೈಯಕ್ತಿಕ ಉದಾಹರಣೆಗಳನ್ನು ಬಿಟ್ಟರೂ ಮರಾಠಾ ಸಾಮ್ರಾಜ್ಯಕಾಲದಲ್ಲಿಯ ಸರ್ವಸಾಮಾನ್ಯ ಮನುಷ್ಯರ ಶಾರೀರಿಕ ಪ್ರಗತಿಯೆಂಥದಿತ್ತೆಂಬುದನ್ನು ಇಂದಿನವರೂ ನಾವು ಕಣ್ಣುತೆರೆದು ನೋಡುವಂತಿದೆ. ಸಜ್ಜನಗಡದಲ್ಲಿಯ ಹೊಕ್ಕುತೊಂಬುವ ಬಾವಿಯಿಂದ ನೀರನ್ನು ಹೊತ್ತುತರುವುದಕ್ಕಾಗಿ ಉಪಯೋಗಿಸುತ್ತಿದ್ದ ಅಂದಿನ ಕಾಲದ ದೊಡ್ಡ ದೊಡ್ಡ ತಪ್ಪೇಲಿಗಳು, ಅಂದಿನವರ ಸಾಮರ್ಥ್ಯಕ್ಕೆ ಇಂದಿಗೂ ಸಾಕ್ಷಿನುಡಿಯುತ್ತವೆ. ಇಂಥ ಭಾರಿ ಪಾತ್ರೆಗಳು ರಾಮಗಡ, ಸಿಂಹಗಡ, ಮೋದೂಲಂಗ, ಕಾರ್ನಾಕಸೆಪ್ಪಮು ಈ ಮೊದಲಾದ ಎತ್ತರದ ಸ್ಥಳಗಳಲ್ಲಿ ಇಂದಿಗೂ ತಲೆಯೆತ್ತಿ ನಿಂತಿದ್ದು, ಅಂದಿನ ಮಾವಳೀ ಜನರ ಗಟ್ಟಿಗತನವನ್ನು ಸಿದ್ಧಮಾಡಿ ಕೊಡುತ್ತವೆ. ಪ್ರತಾಪಗಡದಲ್ಲಿ ಶಿವಾಜಿಮಹಾರಾಜನು ಅಫಜುಲಖಾನನನ್ನು ಸಂಜೆಯ ಸುಮಾರಿಗೆ ಕೊಂದನಂತರ, ಮಾವಳೀ





ಸೈನಿಕರು ಮಹಾಬಳೇಶ್ವರ ಬೆಟ್ಟವನ್ನು ಏರಿ, ಇಳಿದು ೨೫ ಮೈಲು ಸ್ವಾರಿಮಾಡಿ, ಖಾನನ ಪಾಳೆಯದ ಪಾಡೆಯನ್ನು ಸುಲಿದು, ಅಂದೇ ರಾತ್ರಿಯಲ್ಲಿ ಪುನಃ ಪ್ರತಾಪಗಡಕ್ಕೆ ಮರಳಿ ಹೋದರೆಂಬುದನ್ನು ಓದಿದಾಗ ಅಂದಿನ ಜನದ ವೇಗವೆಷ್ಟಿತ್ತೆಂಬುದು ಸ್ಪಷ್ಟವಾಗುವುದು. ಸಿಂಹಗಡದ ಬುರುಜಿನ ಎತ್ತರದ ಗೋಡೆಗೆ ಉತವನ್ನು ಗಟ್ಟಿಯಾಗಿ ಒಗೆದು, ಸಾವಿರಾರು ಮಾವಳೇ ಸೈನಿಕರು ಹಗ್ಗದ ಸಹಾಯದಿಂದ ಅಷ್ಟು ಎತ್ತರಕ್ಕೆ ಏರಿಹೋಗಿ ಕೋಟೆಯನ್ನು ಕೈವಶಮಾಡಿಕೊಳ್ಳುವಾಗ ಆ ಜನರು ತೋರಿಸಿದ ಶಾರೀರಿಕ ಸಹನಶೀಲತೆಯ ಪರಮಾವಧಿಯೆಷ್ಟಿತ್ತೆಂಬುದರ ಕಲ್ಪನೆ ನಮಗೆ ಬರುವುದು. ಒಂದು ಲಂಗೋಟಿಯನ್ನಿಷ್ಟು ಮಾನರಕ್ಷಣೆಗೆಂದು ಉಟ್ಟು, ಹೆಗಲ ಮೇಲೆ ಕಂಬಳಿಯೊಂದನ್ನು ಹೊಟ್ಟು, ಏನು ಸಿಕ್ಕಿತೋ ಆ ಕಚ್ಚಾ ಧಾನ್ಯವನ್ನೇ— ಕುದುರೆಯ ಮೇಲೆ ಕುಳಿತೇ—ಮುಕ್ಕುತ್ತ ಶತ್ರುಸೈನ್ಯದ ಮೇಲೆ ಏರಿಹೋಗಿ ಅವನ್ನು ಹಣ್ಣಿಗೆ ತರುವ ಆ ಮರಾಠಾ ಸೈನಿಕರ ಶಾರೀರಿಕ ಹಾಗು ಮಾನಸಿಕ ಸಹಿಷ್ಣುತೆಯನ್ನು ಶಬ್ದಗಳಲ್ಲಿ ವರ್ಣಿಸುವುದು ಕಠಿಣವೇ ಸರಿ. ಇಷ್ಟೊಂದು ಉಜ್ವಲಪರಂಪರೆಯಳ್ಳ ನಮ್ಮ ರಾಷ್ಟ್ರದ ತೇಜೋಭಂಗವನ್ನು ಪದ್ಧತಿಯುಕ್ತವಾಗಿ ಪರಕೀಯ ಸರಕಾರವು ಹೇಗೆ ಮಾಡಿತೆಂಬುದನ್ನೂ ನಮ್ಮ ಅಧೋಗತಿ ಯಾವ ಮಟ್ಟಕ್ಕೆ ಇಳಿಯಿತೆಂಬುದನ್ನೂ ನಾವು ಸೂಕ್ಷ್ಮವಾಗಿ ನಿರೀಕ್ಷಿಸುವಂತಿದೆ.

ಬಗೆಬಗೆಯ ಕೇಶತೈಲಗಳು, ಪೊಮೇಡ್, ಪಾವಡರುಗಳೇ ಮೊದಲಾದ ಸಾಧನಗಳನ್ನು ಇಂದಿನವರು ಉಪಯೋಗಿಸಿಯೂ ಮುಖಲಕ್ಷಣದ ತೇಜವನ್ನು ಉಳಿಸಿಕೊಳ್ಳುವುದು ಕಠಿಣವಾಗಿದೆ. ಯಾವಾಗಲೂ ಯಾವುದೊಂದು ಬಗೆಯ ಬಟ್ಟೆಯನ್ನು ಮೈಮೇಲೆ ಧರಿಸುವ ಪಾಶ್ಚಾತ್ಯಪದ್ಧತಿಯು ರೂಢಿಯಲ್ಲಿ ಬಂದದ್ದರಿಂದ, ತೆರೆದ ಮೈಯೆಂಬುದು ಹೇಗಿತ್ತೋ ಅದರ ಕಲ್ಪನೆಯೂ ಬಾರದಂತಾಗಿದೆ. ಒಂದೊಪ್ಪತ್ತು ಅದನ್ನು ಕಂಡರೂ ಆದರೆ, ಈಗಿನವರ ಮೈಕಟ್ಟನ್ನು ಏನೆಂದು ಬಣ್ಣಿಸುವುದು ? ಒಳಗೋದಿದ ಗಲ್ಲ, ಕುತ್ತಿಗೆಯ ಎರಡು ಬದಿಗೂ ಚಾಚಿಕೊಂಡಿದ್ದ ಎರಡು ಎಲುಬು, ಬೆನ್ನುಹುರಿಯ ಮಣಿಗಳಿಂದ ಟೊಂಕದವರೆಗೆ ಎದೆ ಸಪಾಟಾದ ಮೂಳೆಯ ಮೇಲೆ ಹಾಸಿದ್ದ ಪಕ್ಕೆಗಳು ಸಣ್ಣ ಕೈಕಾಲು, ನಗಾರಿಯಂತಿದ್ದ ಡೊಳ್ಳು ಹೊಟ್ಟೆ— ಇಂಥ ಶರೀರದ ಆಕಾರವನ್ನು ನೋಡಿ ಇಲ್ಲವೆ ಕೇಳಿ, ಯಾವನ ತಲೆ ಲಜ್ಜೆಯಿಂದ ಬಾಗಲಿಕ್ಕಿಲ್ಲ ? ಒಂದು ಸಣ್ಣ ಪೆಟ್ಟಿಗೆಯನ್ನು ಎತ್ತಿ ಇಡಬೇಕಾದಲ್ಲಿ ಹಮಾಲರೇ ಬರಬೇಕು. ನಾಲ್ಕಂತಸ್ತಿನ ಕಟ್ಟಡವನ್ನು ಏರುವಾಗ ವಿದ್ಯುತ್ತಿನ ತೊಟ್ಟಿಲ(ಲಿಫ್ಟ) ಕ್ಕಾಗಿ ಅರ್ಧ ತಾಸಿನ ವರೆಗೂ ಹಾದಿ ನೋಡುತ್ತ ನಾವು ನಿಲ್ಲುತ್ತೇವೆ. ಮೈಲುಗಟ್ಲೆ ಕಾಲಿನಿಂದ ನಡೆದು ಹೋಗುವ ಮಾತು ಈಗ ಗತಕಾಲದ ಮಾತಾಗಿ ಬಿಟ್ಟಿದೆ. ಪೋಸ್ಟಿಗೆ ಹೋಗಿ ಪತ್ರವನ್ನು ಹಾಕಿ ಬರಬೇಕಾದರೆ ಸಾಯಿಕಲ್ ಇಲ್ಲದಿದ್ದರೆ ನಮಗೆ ತ್ರಾಸೆನಿಸುವುದು. ಇದೆಲ್ಲದರ ಮೇಲಿಂದ ನಮ್ಮಲ್ಲಿ ಶಕ್ತಿಯೆಷ್ಟು ಸಿಲುಕು ಉಳಿದಿದೆಯೆಂಬುದು ತಿಳಿದು ಬರುತ್ತದೆ. ಥಂಡಿ, ಗಾಳಿ, ಬಿಸಿಲುಗಳನ್ನು ಸಹಿಸಿಕೊಳ್ಳುವುದು ನಮ್ಮಿಂದ ಆಗುವುದಿಲ್ಲ. ಸದಾಕಾಲ ಶರೀರವನ್ನು ನಖಶಿಖಾಂತವಾಗಿ ಮುಚ್ಚಿಕೊಂಡಿರುವ ವ್ರತವೇ ನಮಗುಂಟು ಇದು ಇಂದಿನ ನಮ್ಮ ಶಾರೀರಿಕ ಸಹಿಷ್ಣುತೆಯ ವಸ್ತುಸ್ಥಿತಿ. ಹವೆ ಒಂದಿಷ್ಟು ಬದಲಾದೊಡನೆ ನೆಗಡಿ ಬಂದೇ ಬಿಡುವುದು, ಅದರೊಡನೆ ತಲೆಶೂಲಿ, ಕಣ್ಣುರಿಗಳು ಇರಲೇಬೇಕು. ಇದು ನಮ್ಮ ಆರೋಗ್ಯ! ಏನಾದರೂ ಒಂದಿಷ್ಟು ಪ್ರಕೃತಿಯಲ್ಲಿ ಹೆಚ್ಚುಕಡಿಮೆಯಾದ ಕ್ಷಣಕ್ಕೇನೇ ಡಾಕ್ಟರರ ಬಳಿಗೆ ಧಾವಿಸಿ ಹೋಗುವುದಕ್ಕೆ ಪ್ರಾರಂಭವೇ! ನಮ್ಮ ಶರೀರವೆಂದರೆ ವಿಧವಿಧದ ರೋಗಗಳ ಪ್ರತ್ಯಕ್ಷ ಪ್ರಯೋಗಶಾಲೆಯೇ ಆಗಿದೆ. ಸಣ್ಣಮಕ್ಕಳು, ಹರೆಗೆಯಾದ ಹೆಣ್ಣುಮಕ್ಕಳು ಹಾಗು ತರುಣ ಸ್ತ್ರೀಪುರುಷರು ಇವರೆಲ್ಲರ ಅಕಾಲಮರಣದ ಪ್ರಮಾಣವು ಹೆಚ್ಚುತ್ತಲೇ ನಡೆದಿದೆ. ಬಾಲ್ಯವು ಕಳೆದೊಡನೆ ತಮಗೆ ಮುಪ್ಪೇ ಬರುವುದೆಂಬ ತಪ್ಪುಗ್ರಹಿಕೆಯನ್ನು ಅನೇಕ ತರುಣರು ಮಾಡಿಕೊಂಡಂತಿದೆ. ಈ ವಯತು ಅವರ ಶಾರೀರಿಕ ಅವನತಿಯ ಮೇಲಿಂದ ಸ್ಪಷ್ಟವಾಗುತ್ತಿದೆ.

ಪರಕೀಯ ಪ್ರಭುತ್ವವು ನಮ್ಮ ರಾಷ್ಟ್ರಪುರುಷನ ಶಾರೀರಿಕ ಹಾನಿಯನ್ನು ಎಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮಾಡಿದೆಯೆಂಬ ಚಿತ್ರವು ಅತ್ಯಂತ ಭೀಷಣಸ್ವರೂಪದ್ದಾಗಿದೆ. ಆದರೆ ಇದರಿಂದೇನೂ ನಾವು ಹೆದರದೆ, ನಮ್ಮ ಪರಿಸ್ಥಿತಿಯನ್ನು ಪಲ್ಲಟಿಸಲೇಬೇಕು.

ಹಿಂದೆ ಆದದ್ದು ಆಗಿಹೋಯಿತು; ಆದರೆ ಮುಂದಿನ ಪೀಳಿಗೆಯು ತೇಜಸ್ವಿಯಾಗಬೇಕೆಂಬ ಇಚ್ಛೆಯನ್ನು ನಾವು ತಳೆಯಲೇಬೇಕು ಯಾವ ಕೆಲಸಕ್ಕೂ ಮುಂದಿನವರು ಸದಾ ಸಿದ್ಧರಿರುವಂತೆ ಅವರನ್ನು ನಾವು ತರಬೇತುಗೊಳಿಸಬೇಕು. ಅವರಲ್ಲಿ ಚಾಪಲ್ಯ, ವೇಗ, ಗಟ್ಟಿಗತನ, ಜೋರು, ಚೊಕ್ಕಟತನ, ಕೌಶಲ್ಯ ಇತ್ಯಾದಿ ಶಾರೀರಿಕ ಸದ್ಗುಣಗಳ ನಿರ್ಮಾಣವೆಂತಾದೀತೆಂಬುದರ ಬಗ್ಗೆ ಹಂಚಿಕೆಗಳನ್ನು ಹುಡುಕಲು ನಾವು ತಳಮಳದೊಂದಿಗೆ ದುಡಿಯಲೇಬೇಕು. ಯಂತ್ರಯುಗವು ಆಗಮಿಸಿದ ಮೂಲಕ ಹಳೆಯಕಾಲದ ನೈಸರ್ಗಿಕ ವ್ಯಾಯಾಮವು ಹಿಂದೆ ಬೀಳುತ್ತ ನಡೆದಿದೆ. ದೂರದ ದಾರಿಯನ್ನು ನಡೆದು ಹೋಗುವವರು ಇಂದು ಇಲ್ಲ. ನೀರು ಜಗ್ಗುವುದು, ತುಂಬುವುದು ಕಣ್ಮರೆಯಾಗತೊಡಗಿದೆ. ಬೀಸುವುದು, ಕುಟ್ಟುವುದು, ಒಗೆಯುವುದು, ಇವೆಲ್ಲಾ ಇತಿಹಾಸಕಾಲದ ಮಾತಾಗುತ್ತ ನಡೆದಿವೆ. ಕಟ್ಟಿಗೆ ಒಡೆಯುವ ಆವಶ್ಯಕತೆ ಇಂದು ನಮಗಿಲ್ಲ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಮುಂದಿನ ಪೀಳಿಗೆಯ ಆರೋಗ್ಯ, ಆಯುರ್ಮರ್ಯಾದೆ, ಶಕ್ತಿ, ಸಹಿಷ್ಣುತೆ, ಚಾಪಲ್ಯ, ವೇಗ, ಚೊಕ್ಕಟತನ, ಕೌಶಲ್ಯ, ಕಾರ್ಯಕ್ಷಮತೆಗಳು ಹೆಚ್ಚುತ್ತ ಹೋಗಬೇಕಾದರೆ ಶಾಸ್ತ್ರಶುದ್ಧವಾದ ಶಾರೀರಿಕ ಶಿಕ್ಷಣವು ಏಕಮಾತ್ರ ಉಪಾಯವಾಗಿದೆ.

ನಿರುದ್ಯೋಗದಲ್ಲಿ ಉದ್ಯೋಗ

(ನಾಟ್ಯಕಥಾ)

ಶ್ರೀ. ಎಸ್. ಎಸ್. ಗದಗಕರ ಬಿ. ಎ. ಧಾರವಾಡ

★

[ಆ ವಿಖ್ಯಾತ ನಗರದಲ್ಲಿ ವಸಂತರಾಯನು ಸುಖವಸ್ತು. ವಯಸ್ಸು ಸುಮಾರು ಮೂವತ್ತಾರು. ಪದವೀಧರನಾಗಿ ೧೦-೧೨ ವರ್ಷಗಳಾಗಿರಬಹುದು. ನಿರುದ್ಯೋಗಿಯಾಗಿ ಬಹುದಿನ ಮನೆ ಹಿಡಿದು ಕುಳಿತಿದ್ದರೂ, ಅವನ ವೇಷಭೂಷಣಕ್ಕೆ ಹೇರಿಕುವಂತಿರಲಿಲ್ಲ. ಬೈತಲು ತೆಗೆದ ಕ್ರಾಪಿನ ಮೇಲೆ ಟೊಪ್ಪಿಗೆ ವರ್ಜ್ಯ. ಕಾಲಲ್ಲಿ ಮಿರಿ ಮಿರಿ ಮಿಂಚುವ ಸ್ಲಿಪರ್. ಮೈಮೇಲೆ ರೇಶಿಮೆಯ ಶರ್ಟು, ಊಲನ್ ಪ್ಯಾಂಟು ಇವೆ. ಅತಿ ಓದಿ ಕಣ್ಣು ಕೆಡಿಸಿಕೊಂಡಿದ್ದರ ಪ್ರತೀಕವೆಂಬಂತೆ ಕಣ್ಣಿಗೆ ಚಾಳೀಸಿದೆ. ಅವನ ವ್ಯಕ್ತಿತ್ವಕ್ಕೆ ಸ್ಫುರದ್ರೂಪಕ್ಕೆ ತನ್ಮೂಲಕ ಅಲೌಕಿಕ ಕಾಂತಿಯೂ ಬಂದಿದೆ. ರೂಢಿಯಂತೆ ಅವನು ಪ್ರಾದೇಶಿಕ ವಾಚನಾಲಯಕ್ಕೆ ಭೆಟ್ಟಿಕೊಟ್ಟು ಮನೆಗೆ ಬಂದು ಸಿಗರೇಟು ಹಚ್ಚಿ ವಿರಾಮ ಪಡೆಯುವಾಗ ಜಾರ್ಜ್ ಗಡಿಯಾರದ ಮುಳ್ಳು ಆರು ಗಂಟೆ ತೋರಿಸಿತು. ಮುಗಿಲ ಮಾಂಗೆ ರಾಗರತಿಯ ನಂಜು ಏರಿ ಸಂಜೆ-ಯಾಗುವ ವೇಳೆ ಸಮೀಪಿಸುತ್ತಲಿದೆ. ಸಿಗರೇಟಿನ ಹೊಗೆಯಗುಂಟ ಅವನ ವಿಚಾರಲಹರಿಯೂ ಹೊರಟಿದೆ.]

★

“ ಎಷ್ಟು ವರ್ಷ ಆತು ಕಾಲೇಜ ಶಿಕ್ಷಣ ಮುಗಿಸಿ ! ಆದರೂ ನಾ ಓದಿದ ಆ ಇಂಗ್ಲೀಷು ನಾಟಕಗಳ ಕಥಾನಾಯಕ-ನಾಯಕಿಯರು ಇನ್ನೂ ಥಕ ಥಕ ಕುಣೀತಾರ ಕಣ್ಣು ಮುಂದ ! ಏನು ರೋಮಿಯೊ, ಏನು ಜುಲಿಯೆಟ್ ! ಆ ಪಾತ್ರಗಳನ್ನಂತೂ ಶೇಕ್ಸ್-ಪಿಯರ್ ಅಮರ ಮಾಡ್ಯಾನ. 'Mid Summer Night's Dream' ದ ತಿಳಿವಿನೋದ, ರಮ್ಯ ವಾತಾವರಣ, ಯಕ್ಷಿಣಿಯರ ನಿರುಪದ್ರವಿ ಚಟುವಟಿಕೆ—ಯಾವೂ ಮರಿಯೋಹಾಂಗಿಲ್ಲ. ಆಥೆಲೊ ಡೆಸ್‌ಡೆಮೊನಾ ಇವರ ದೈವೀ ಪ್ರೇಮಕ್ಕ, ಕವಡೀ ಕಿಮ್ಮತ್ತಿನ ಕರವಸ್ತ್ರ ಅನರ್ಥ ತಂದೊಡ್ಡಿದ್ದು ವಿಚಿತ್ರ ! ಎಲ್ಲಾ ದೈವದಾಟ. ಮಿಲ್ಟನ್‌ನ ಮಹಾಕಾವ್ಯ ಎಂಥಾದು ! ಗಂಗಾಪ್ರವಾಹ ಬ್ಯಾರೆ ಅಲ್ಲಾ, ಅದು ಬ್ಯಾರೆ ಅಲ್ಲಾ ! ಅಂಥಾ ಪ್ರತಿಭಾ ಅವಂದು ! ಇವನ್ನೆಲ್ಲಾ ಬಿಟ್ಟು ನಮ್ಮ ಮಹಾಕವಿ ಕಾಲಿದಾಸನ ನಾಟಕ ನೆನಿಸಿಗೊಂಡರ, ಅವನ ಶಕುಂತಲಾ ಪಾತ್ರದ ಪಾವಿತ್ರ್ಯತಾ, ಆ ದುಷ್ಯಂತನ ಧೀರೋದಾತ್ತತಾ ಯಾರಿಗೆ ಹುಚ್ಚು ಹಿಡಿಸಲಿಕ್ಕಿಲ್ಲಽ— ಅಂತೇನಿ ! ಕರುಣಾರಸದ ಮಾತು ಬಂದಾಗಂತೂ ಭವಭೂತಿನ್ನ ಮರಿಯೋದು ಪಾಪ ! ಅವನ ಉತ್ತರ ರಾಮಚರಿತದ ' ತೇಹಿನೋ ದಿವಸಾ ಗತಾಃ ' ಅನ್ನೋ ಒಂದು ಸಣ್ಣ ಮಾತು ನೆನಪಾದರ ಸಾಕು; ಭಾವನಾಜೀವಿ ಇಡೀ ಸನ್ನಿವೇಶ ನೆನಪು ಮಾಡಿಕೊಂಡು ಕಣ್ಣೀರು ಮಿಡೀತಾನ. ಒಂದು ವ್ಯಾಳ್ಯಾ ಲಕ್ಷ್ಮೀಶ-ಕುಮಾರವ್ಯಾಸರ ಕಾವ್ಯದ ಓಜಸ್ಸಿನ ಮುಂದ, ಆಧುನಿಕ ಕವನ ನಿಲ್ಲಲಿಕ್ಕಿಲ್ಲ. ಆದರೂ ಇಂದಿನ ಕನ್ನಡ ಕಾವ್ಯಪ್ರಪಂಚದಾಗ ಒಳ್ಳೇ ಕವಿಗಳು ಸಿಕ್ಕಽ ಸಿಗತಾರ.......

[ಹೀಗೆ ಸಿಗರೇಟಿನ ಹೊಗೆಗುಂಟ ವಸಂತರಾಯನ ವಿಚಾರಲಹರಿ ಸಾಗಿದಾಗ, ಮೇಲಿನ ಮನೆಯ ವಿನಾಯಕರಾಯರು ಸಂಯುಕ್ತ ಕರ್ನಾಟಕ ಓದಲು ಬರುವರು. ಅವರು ಮಧ್ಯಮ ವಯಸ್ಸಿನವರು; ವ್ಯವಹಾರ ಚತುರರು. ಜಮೀನುದಾರರು. ಆದರೆ ಅವರ ವೇಷ ಭೂಷಣದಲ್ಲಿ ಹಳೆ-ಹೊಸದರ ತಿಕ್ಕಾಟದ ಲಕ್ಷಣಗಳು ಕಾಣುವವು.]

ವಿನಾಯಕರಾವ್, ಎಷ್ಟೆಷ್ಟು ದಿವಸಕೊ ನಿಮ್ಮ ಭೆಟ್ಟಿ ನಮ್ಮಗ ! ಇತ್ತಿತ್ತಲಾಗಂತೂ ನಮ್ಮ ಮನಿಯ ಕಡಿಗೆ ಹಾಯಬಾರದು ಅಂತ ಶಪಥ ತೊಟ್ಟಹಾಂಗ ಕಾಣಸ್ತದ ನೀವು. ಆಚೀ ವಾರ ನೀವ್ ಗದ. ನಿಮ್ಮದು ಬನ್ನೀ ಮುಡಿಯೂ ಮುಂದ ಆದ ಭೆಟ್ಟಿನಽ ಭೆಟ್ಟಿ—ವೆಂಕಟ-ರಮಣನ ಗುಡ್ಯಾಗ! ತಿರುಗಿ ಸುದ್ದಿ ಇಲ್ಲ ನಿಮ್ಮದು. ನಾ ನಿರುದ್ಯೋಗಿ ಆಗೇನಿ ಅಂತ, ಅತಿಪರಿಚಿತರು ನೀವೂ ಮಾರೀ ತಪ್ಪಿಸ್ತೀರೇನು ಮತ್ತ? ನಿಮ್ಮ ಮಾತು ಕೇಳದೇ, ರಾಯರ, ನಾ ಲಾಟರಿಯೊಳಗ ಹಣಾ ತೊಡಗಿಸಿ ಹಾಳಾದೆ—ಒಂದಲ್ಲಾ ಎರಡು ಸಾರೆ. ಮೊನ್ನೆ ನೆನೆ ಅಂತೂ ಚಹಾದ ಪುಡಿ—ಸ್ಟೇಶನರಿ ಅಂಗಡಿ ವ್ಯಾಪಾರದಾಗ ತೂ ಹಾನಿ ಆಗಿ ಹುಚ್ಚನಂಗ ಆದೆ. ನಿಮ್ಮ ಮಾತ ಕಿವಿಮ್ಯಾಲೆ ಹಾಕಿ-ಕೊಳ್ಳದೇ ಇದ್ದದ್ದಕ್ಕ, ಕವಿತನಕಾ ಟೊಪ್ಪಿಗಿ ಬಿತ್ತು. ಸಾಲ್ಯಾಗ ಇದ್ದಾಗಿನಿಂದ, ನನಗ ಲಾಭ-ಹಾನಿ ಲೆಖ್ಖಾ ಸೊನ್ನಿ. ಈಗಂತೂ ವ್ಯವಹಾರ. ಕೇಳೋದ? ಒಂದು ಮೋಜು ಹೇಳತೇನಿ ಕೇಳ್ರಿ: ನಾ ಕಾಲೇಜದಾಗ ಇದ್ದಾಗ, ಪ್ಯಾಟೆಗೆ ಹೋದದ್ದರದು ! ಒಬ್ಬಾಕಿ ಬಾಗವಾನರಾಕೀ ಕಡಿಗೆ ಹೋಗಿ, ಸಪತಿಕಾಯಿ ಹ್ಯಾಂಗನಾ ಅಂದರ, ಆಕಿ ೨ ಬಿಲ್ಲಿಗೆ ೩ ಸೇರು ಅಂದಳು. ನಮ್ಮ ಮನ್ಯಾಗ ನಮ್ಮ ತಂದಿಯವರು ಚೌಕಶಿ ಮಾಡಬೇಕು ಅಂತ ಕಲಿಸಿದ್ದು ನೆನಪಾಗಿ, ೩ ಬಿಲ್ಲಿಗೆ ೨ ಸೇರು ಕೊಡತಿದ್ದರ ಕೊಡು ಅಂದಾಗ, ಆಕೀ ಬ್ಯಾರೆಯವರಿಗೂ ತೂಗೋದು ಬಿಟ್ಟು ನನ್ನ ಮಾರಿ ನೋಡಿ, ಬಿದ್ದು ಬಿದ್ದು ನಕ್ಕಳು. ಪಾಪ ! ಆಕಿ ಪ್ರಾಮಾಣಿಕ ಇದ್ದಳಂತಽ ತನ್ನ ದರದಿಂದ ಚೆಲೊ ಕಾಯಿ ಆರಿಸಿ ಕೊಟ್ಟಳು, ಅಂತೂ ಅಂಥ ಒಟ್ಟು ಬಯಸಿಗೊಂಬೋ ಪಾಳಿ

ಹುಂಚ ಬಿತ್ತು. ಆದರೂ ಹುಳುಕ ಬದನೀಕಾಯಿ, ಹೀರೀಕಾಯಿ, ಸಣ್ಣ ಎಲಿ ಮೆಂಥೇಪಲ್ಯಾ, ಬೆಂಡೊರೆದ ಮೂಲಂಗಿ, ಕಹಿ ಸವತೀ- ಕಾಯಿ ನಾ ತಟ್ಟಿಮಾಡಿಸಿ ತಂದದ್ದು ತಿಳಿದಾಗ, ನಮ್ಮಣ್ಣಾ ನನ್ನ ಪ್ಯಾಟೆಯು ಶಿಸ್ತಿನಿಂದ ನಿವೃತ್ತ ಮಾಡಿಸಿಬಿಟ್ಟ. ನೆಟ್ಟಗ ಆತು ಅಂದೆ ಮನಸಿನ್ಯಾಗ. ನಮ್ಮ ಅವ್ವಾ ಅಪ್ಪಾ ಅಂತೂ— 'ವಸಂತಾ, ನಾವು ಸಲ್ಯಾ ಇಲ್ಲದೇ ಉಂಡೇವು, ಆದರೆ ನಿನ್ನ ಚೌಕಶಿಯು ಉತ್ತಮ ಪಲ್ಯಾ ಬ್ಯಾಡಾ' ಅಂತ ಅಂದಿನಿಂದ ತಾಕೀದಿ ಮಾಡಿದರು. ಇಗೆಲಾ ನನ್ನ ವ್ಯಾವಹಾರಿಕ ಬುದ್ಧಿಯು ಉಜ್ವಲ ಇತಿಹಾಸ!

ವಿನಾಯಕರಾಯಾ, ಸಿಗರೇಟು ಹಚ್ಚು, ತೊಗೊ ಒಲ್ಲೆಂದರ ನಡಿಯೂದಿಲ್ಲ ಕನಿಷ್ಟ ಇಂದ. ನಿಮ್ಮಂಥಾ ಜವಾಬದಾರರಿಗೆ ಒಂದೂ ಚಟಾ ಇಲ್ಲಾ ಅನ್ನೋದು ಶೋಭಿಸೂದಿಲ್ಲ. ನಮಗಂತೂ ಸಾಲ್ಯಾಕು ಅನ ನೀ ಮಾಲಿಂದ ಮ್ಯಾಲೆ ಸೇದೋಂವಾ ಅಲ್ಲಾ. ಜುಲುಮಿಗಾದರೂ ಹಚ್ಚು, ತೊಗೊ!

[ಇಬ್ಬರೂ ಸಿಗರೇಟು ಹಚ್ಚುವರು.]

ಏನಂದಿ ವಿನಾಯಕರಾಯಾ, ನಾ ಪತ್ರಿಕಾ ವ್ಯವಸಾಯದ ಹವ್ಯಾಸತ್ತ ಬಿದ್ದು ಕೆಟ್ಟಿನ? ಖರೇನಪಾ ನಿನ್ನ ಮಾತು, ಹದಿನಾರಾಣಿ ಖರೆ! ಅದು ಹೊಟ್ಟಿ ತುಂಬಿಸೋ ಉದ್ಯೋಗ ಅಲ್ಲಾ. ನಿರುದ್ಯೋ- ಗದಕಿಂತ ಅತತ್ತ! ಆ ಬಿಲಿಬಾರದ ಕಥೆ-ಕಾದಂಬರಿ ಬರದು ಬರದು ಪ್ರಕಟಮಾಡಿ ಬಂಗೈ ಆತು ನಂದು! ಅನೇಕ ಪ್ರತಿ ಅಭಿಪ್ರಾಯಕ್ಕ ಕಾಣಿಕೆಗೆ, ವಿಮರ್ಶಾಕ್ಕs ಛಟ್ ಅಂದು ಹೋದುವು. ಹೊಸ ಲೇಖಕರ ಹಣೆಬರಹ ಇದು! ಒಳ್ಳೇ ಕೃತಿ ಇದ್ದರೂ, ಒಮ್ಮೊಮ್ಮೆ ಪುಕ್ಸಟ ಹಂಚೋ ಈ ಗೋಳು ತಪ್ಪಿದ್ದಲ್ಲ. ಅವಾ, ಒಟ್ಟು ನೋಡು, ಸಾಹಿತ್ಯದ ಬಿಸಿಲುಗುದುರಿಯು ಹಿಂದ ತರುಣ ಲೇಖಕ ಚಿಗರೆಯು ಹಾಂಗ ನಡದಾನ ತೀರಿತು. ನಾ ನೀ ಅನ್ನೊ ಪ್ರೌಢ ಲೇಖಕರಿಗೇ ಆಶಾಕಿರಣ ಉಳದಿಲ್ಲ ಇಂದ ಹೊಸಬರಂತೂ ಯಾವ ಗಿಡದ ತೊಪ್ಪಲೊ! ಛೆ! ನಾ ಬರೆಯಲಿಕ್ಕೆ ಹತ್ತಿದ ತೊಟ್ಟು ಇಲ್ಲಿಯು ತನಕಾ ಟಪಾಲಖಾತೆ ಮತ್ತು ಪ್ರಕಾಶನಕ್ಕ ಹಾಕಿದ ರೊಕ್ಕದ ಲೆಖ್ಖಾ ತಗದರ, ಛಲೋ ಪ್ರೆಸ್ಸು ಕೊಳ್ಳಲಿಕ್ಕೆ ಆಗತಿತ್ತು— ಅಂದಿ, ಮೊನ್ನೆ ಕಾಲೇಜದ ಕಡಿಗೆ ಆಡ್ಯಾಡಲಿಕ್ಕೆ ಹೋದಾಗ! ಆಗ ನಾ ಖೊಕ್ ಖೊಕ್ ನಕ್ಕೆ. ಹಿಂದಾಗಡೆ ನಿನ್ನ ಮಾತಿನ ಮಹತ್ತ್ವದ ಖಬರು ಬಂದು ತಲೆದೂಗಿದೆ. ಬರ್ನಾರ್ಡ್ ಶಾ, ಡಾ. ಜಾನ್ಸನ್, ಗೋಲ್ಡ್- ಸ್ಮಿಥ್‌ರಂತಹ ಲೋಕಪ್ರಿಯ ಲೇಖಕರs ಆಂಗ್ಲ ಸಮಾಜದಾಗ ತಂತಿ ಹಿಡದರು— ಹಣದ ದೃಷ್ಟೀಲೆ! ಅಂದ ಮ್ಯಾಲೆ ಕೊಂಡು ಓದೋಮಂದಿ ಕಡಿಮಿ ಇದ್ದ ಕರ್ನಾಟಕದಾಗ ಲೇಖನ ವ್ಯವಸಾಯ

ನಿಮ್ಮ ಮುಖದ ಕಳೆಯನ್ನು ಹೆಚ್ಚಿಸಿರಿ !

●●●

ಕಾಮಿನಿಯಾ ಸ್ನೋ !

(ರಜಿಸ್ಟರ್ಡ್)

ಇದನ್ನು ಉಪಯೋಗಿಸಿ, ತಮ್ಮ ಮುಖವನ್ನು ಎಳಸಾಗಿಯೂ, ಕಳೆಯುಳ್ಳದ್ದಾಗಿಯೂ ಆಗುವಂತೆ ಮಾಡಿಕೊಳ್ಳಿರಿ' ಇದು ಜನರಲ್ಲಿ ನಿಮ್ಮ ವ್ಯಕ್ತಿತ್ವವು ಮೂಡುವಂತೆ ಮಾಡಿ, ನಿಮ್ಮ ಜೀವನದ ಜಯಕ್ಕೆ ಕಾರಣವಾಗಿ ನಿಲ್ಲಬಹುದು.

ದೀಪಾವಳಿಯಂತಹ ಮಂಗಲ ಪ್ರಸಂಗದಲ್ಲಿ 'ಕಾಮಿನಿಯಾ ಸ್ನೋ', 'ಕಾಮಿನಿಯಾ ಆಯಿಲ್', 'ಕಾಮಿನಿಯಾ ಸಾಬೂಣ' ಮತ್ತು 'ಓಟೋ ದಿಲ್‌ಬಹಾರ' ಸೆಂಟು ಇವೆಲ್ಲ ಸೌಂದರ್ಯ ಪ್ರಸಾಧನಗಳ ಶುಭದ ಕಾಣಿಕೆಯನ್ನು ಕಳುಹುವುದರಿಂದ, ತಮ್ಮ ಆಪ್ತ-ಬಾಂಧರಲ್ಲಿ ಆನಂದವು ಬೆಳೆದು ನಿಲ್ಲುವುದು.

ಆಂಗ್ಲೋ ಇಂಡಿಯನ್ ಡ್ರಗ್ ಮತ್ತು ಕೆಮಿಕಲ್ ಕಂಪನಿ

೨೪೫, ಜುಮ್ಮಾ ಮಸೀದ, ಮುಂಬಯಿ ೨.

ಹ್ಯಾಂಗ ನೆಟ್ಟಗ ನಡದೀತು ಅನ್ನೋ ನಿನ್ನ ಅಭಿಪ್ರಾಯ ಸಮಂಜಸ ಅದ. ಆದಕ್ಕs ಪತ್ರಿಕಾನೂ ಹುಟ್ಟತಾವ, ಸಾಯತಾವ! ಮತ್ತು ನಮ್ಮ ಜನತಾ ಆದರೂ ಹ್ಯಾಂಗ ಅದ ಅಂತಿ, ವಿನಾಯಕರಾಯಾ? ಜೀವಂತ ಇದ್ದಾಗ ಲೇಖಕರಿಗೆ ಸಹಾನುಭೂತಿ ತೋರಿಸದೆ, ಸತ್ತ ಮ್ಯಾಲೆ ವಿಜೃಂಭಣೆಯಿಂದ ಸ್ಮಾರಕಾ ಮಾಡತದ, ಗುಣಗ್ರಾಹಕತೆಯು ಕಳಸ ಇದು ಅಂದೆ!

ಅವ್ವಾ, ಚಹಾನs ತಂದುಬಿಟ್ಟಿಯಲ್ಲಾ—ವಿನಾಯಕರಾಯರಿಗೂ ನನಗೂ ಕೊಡಿಸಿ! ಆತು ನೆಟ್ಟಗ ಆತು ಬಿಡು. ತೊಗೊ ವಿನಾಯಕರಾಯಾ, ಗಂಟಲು ಆರೇದ ನನುಗೂ ಮಾತಾಡಿ ಮಾತಾಡಿ! ಇದs ಪ್ರಮುಖ ಉದ್ಯೋಗ ಆಗೇದ ಇತ್ತಿತ್ತಲಾಗ. ಚಹಾ ಉತ್ತಮ ಆಗೇದಲ್ಲ? ನಮ್ಮ ಅವ್ವ, ತಾ ಕುಡೀದಿದ್ದರೂ ಪುಡಿ ಸಕ್ಕರಿ ಹಾಲಿನ ಅಳತಿ ನೋಡಿಯ ಕಡೆಯಿಂದ ನೆಟ್ಟಗ ತಿಳಕೊಂಡಾಳ ಮತ್ತ! ನಮ್ಮ ಬಾಯಿಸಾಹೇಬರು ಗೆಳತಿಯರ ಸಂಗತಿ ಹರಟಿ ಹೊಡೆಯಲಿಕ್ಕೆ ಹೋದಾಗ, ಅವ್ವನ, ಚಹಾನs ಗತಿ ನಮಗ! ಛೆ ಅವಲಕ್ಕೀನೂ ತಂದುವಲ್ಲ! ಹೊಡಿ ಹೊಡಿ!

[ಇಬ್ಬರೂ ಚಹ ಕುಡಿಯಲನುವಾಗುವರು.]

ಇಲ್ಲೆ ನೋಡು ವಿನಾಯಕರಾಯಾ! ನಾಟಕ ಕಂಪನೀ ಸಂಗತಿ ಹೋಗಿದ್ದರ ನಾಟ್ಯಸೇವಾ ಸಾಧಿಸತಿತ್ತು— ಅಂದಿ ಹೋದಸಾರೆ ಬಂದಾಗ; ಆದರ ನೋಡು, ಈಗ ಕಂಪನಿ ಆದರೂ ಎಲ್ಲಿ ಉಳದಾವ? ಲೋಕಾಗ್ರಹದ ನಿಮಿತ್ತ ದಿವಾಳಿ ತಗದು ಹೋದುವು. ಏನೋ ಸಿಳ್ಳಿಮಿಳ್ಳಿ ಕಂಪನಿ, ಜಾತ್ರಿ, ಉತ್ಸವದಾಗ ಒಮ್ಮೊಮ್ಮೆ ಬರತಾವ. ಇನ್ನೇನು? ದನಿ ನೆಟ್ಟಗದ, ಆಕ್ಟಿಂಗು ಸಾಧಿಸೀತು—ಅಂತ ತಿಳದು ಸಿನೇಮಾ ಪ್ರಪಂಚದಾಗ ಧುಮುಕು ಅಂದಿ ನೀನು ನನಗ! ಆದರ ನಾ ಮರ್ರ್ಯಾ ಒಲ್ಲೆಪಾ ಅಲ್ಲಿ ಹೋಗಲಿಕ್ಕೆ. ದತ್ತಕ ತಾಯಿಯ ಆಸ್ತಿ ಅಂತೂ ಈಗ ಅರ್ಧಮರ್ಧ ಸಿಕ್ಕದ! ಪ್ರಾಮಾಣಿಕ ರೀತೀಲೆ ಹೊಲದಾಗ ಕೆಲಸಾ ಮಾಡೇನು ಒಂದು ನ್ಯಾಳ್ಯಾ ರೈತನ ಸಂಗಡ; ಆದರ ಇಂಥಾ ನೀತಿಬಾಹಿರ ಸಿನೇಮಾ ಲೋಕದಾಗ ಕೆಲಸ ಬ್ಯಾಡಾ!

ನಟ-ನಟಿಯರು ಅಂದರ ಏನುಅಂತೀದಿ? ದಿಗ್ದರ್ಶಕರ ಕೈಗೊಂಬಿ! ಅವರು ಕೈ ಹಿಡಿದರ ತಿಪ್ಪಿ ಹೋಗಿ ಉಪ್ಪರಿಗಿ ಆಗತದ! ಉತ್ತಮ ಕಥಾವಸ್ತು, ಹಿನ್ನೆಲೆಯ ಸಂಗೀತ, ಭರ್ಜರಿ ಸೀನು ಸೀನರಿ— ಇವಾಗಡೆ ಎಲ್ಲಾ! ಸಿನೇಮಾ ಬಂಡವಳಶಾಹೀ ಜನರ ಕೈವಶ ಆಗೇದ. ನಮ್ಮಂಥಾ ವಿಲಾಸೀ ನಟರು ಮಣ್ಣು ಮುಕ್ಕತೇವಿ ಅವರ ಕೈಯ್ಯಾಗ ಸಿಕ್ಕರ. ಕಾಲೇಜ ಕರ್ನಾಟಕ ಸಂಘದ ನಾಟಕದಾಗ ಎಷ್ಟು ಸಾರೆ ಉತ್ತಮ ಪಾರ್ಟು ಮಾಡಿದ್ದರೇನಾತು? ವ್ಯವಹಾರದ ಪ್ರಶ್ನೆ ಬಂದಾಗ ಎಬಡತನ ಆಗತದ!

ಎಲಿ ಅಡಿಕಿ ಹಾಕು ತೊಗೊ ವಿನಾಯಕರಾಯಾ, ನೀ ನನಗ ಪರಕೀಯ ಅಲ್ಲಾ. ಮನಿಯವಾ ಅನ್ನೋ ಅಷ್ಟು ಬಳಕಿ ಅದ. ಏನಂದಿ?— ಜಂಗಲ್ ಕಾಂಟ್ರ್ಯಾಕ್ಟ್ ಹಿಡಿದು ಕಟ್ಟಿಗಿ ವ್ಯಾಪಾರ ಮಾಡಿದ ಧನ್ಯ ಆಗತೇನೆ? ಹೌದಪಾ, ಆದಕ್ಕೆಲ್ಲಾ ಪ್ರಾರಂಭಕ್ಕ ಭಂಡವಳ ಭಾಳು ಬೇಕು! ಮತ್ತು ನೋಡೇನಪಾ, ಆ ಕೆಲಸದಾಗ ಬಿದ್ದರ, ಕೂಳು ನೀರಿನ ಪರಿವೀ ಬಿಟ್ಟು ಕೂಲೀ ಜನರ ಮ್ಯಾಲೆ ಹಂಗಾಮ ದಿನದಾಗ ಅಡಿವ್ಯಾಗ ಇರಬೇಕಾಗತದ. Dignity of labour ಕ್ಕ ಮಹತ್ತ್ವ ಕೊಡೋದಾದರ, ಮಹಾತ್ಮಾಜಿಯವರು ಹೇಳಿದ್ಹಾಂಗ ಗಟ್ಟಿಮನಸುಮಾಡಿ ಹಳ್ಳಿಗೇ ಹೋದೇನು! ನಮ್ಮ ದತ್ತಕ ಆಸ್ತಿ ಇಷ್ಟು ಈ ನಿರುದ್ಯೋಗ ನಿವಾರಣಾದ ಗದ್ದಲದಾಗ ನೈನ ಆದರೂ ಆದೀತು. ಈ ಹೊಸಾ ಕ್ಷೇತ್ರದಾಗ Grow more food campaign ಕ್ಕ ಸಹಾಯ ಆದರೂ ಆಗಲಿ ನನ್ನಿಂದ ಆದಷ್ಟು. ಯಾರ ಭಾಗ್ಯಾ ಯಾರು ಕಂಡಾರ! ನಾಳಿಂದು ಇವತ್ತು ಹೇಳಲಿಕ್ಕೆ ಆಗೂದಿಲ್ಲ.

ಏ ವಿನಾಯಕರಾಯಾ, ಆರ್ಧಾ ನೋಡಿದರೂ ಚಿಂತಿ ಇಲ್ಲಾ, 'ಬಡಿದೀದಿ' ಫಿಲ್ಮು ನೋಡಿ ಬರೋಣ ನಡಿಯಪಾ, ಮನಿಯ ಮಗ್ಗಲಿಗೆ ಥಿಯೇಟರ ಇದ್ದದರ ಉಪಯೋಗ ತೊಗೊಂಬೋಣು! ಅದರಿಂದ ಆದರೂ ತಲಿ ಶಾಂತ ಆಗಿ, ಮನಿಸ್ಯಾರ ಬಟ್ಟ್ಯಾಗ ಬಂದೇನು!" ಅನ್ನುವಾಗ

(ಶಿರಿ)



ವಿಜ್ಞಾನದ ವಿಷ

(ಸಣ್ಣ ಕತೆ)

ಶ್ರೀ. ನೆಂ. ಮು. ಜೋಶಿ ಧಾರವಾಡ

★

ಒಬ್ಬನ ಸಿರಿವಂತಿಕೆ ಸಾವಿರ ಜನರ ಬಡತನದ ಬರಿಹೊಟ್ಟೆಗೆ ಕಾರಣ! ವಿಜ್ಞಾನವಿಂದು ಒಬ್ಬನಿಗೆ ಅಮೃತ ಕುಡಿಸಿ ತೋರಿಸಿದರೂ, ಸಾವಿರ ಸಾವಿರ ಜನರಿಗೆ ವಿಷವನ್ನೂಡಿಸುತ್ತಲಿದೆಯಲ್ಲವೆ?

★

ನಗರ ಸಭಾಭವನದ ಅಟ್ಟ ಕಿಕ್ಕಿರಿದು ತುಂಬಿಹೋಗಿತ್ತು. ಒಳಗೂ ಹೊರಗೂ ಸ್ವಯಂಸೇವಕರ ಓಡಾಟ ನಡೆದಿತ್ತು. ಭವನದ ಹೊರಅಂಗಳದಲ್ಲಿ, ೫-೬ (ಲಾವುಡ್‌ಸ್ಪೀಕರ್) ಧ್ವನಿವಾಹಕ ಕರ್ಣಗಳು ಕಂಗೊಳಿಸುತ್ತಿದ್ದುವು. ಆ ಊರ ಪ್ರತಿಷ್ಠಿತ ಕಾರಖಾನೆದಾರರ ಕಾರುಗಳು, ಬದಿಯ ಆವಾರಿನಲ್ಲಿ ಸಾಲಾಗಿ ಶಿಸ್ತಿನಲ್ಲಿ ನಿಂತಿದ್ದುವು. ಈ ಎಲ್ಲ ಸಂಭ್ರಮ ಯಾವುದಕ್ಕೋಸ್ಕರ—ಎಂಬುದು ನೋಡುವವನಿಗೆ ಒಮ್ಮೆಲೆ ತಿಳಿಯುವಂತಿತ್ತು. ಹೌದು! ಪರೀಕ್ಷೆಯ ಫಲಿತಾಂಶ ನೋಡಿ ಬಂದ ವಿದ್ಯಾರ್ಥಿಯ ಮುಖದ ಮೇಲಿನ ಕಳೆಯಿಂದ, ಅವನ ಪರಿಣಾಮವನ್ನು ಗುರುತಿಸುವುದು ಕಠಿಣವಲ್ಲ! ಹಾಗೆಯೇ, ಈ ಸಭಾಭವನದಲ್ಲಿ ನಲಿಯುತ್ತಿದ್ದ ಸಂಭ್ರಮ ಯಾರದೊ ಸ್ವಾಗತಕ್ಕಾಗಿ—ಎಂದು ಊಹಿಸುವುದು ಸುಲಭಸಾಧ್ಯವಾದ ಮಾತು.

ಆ ಊಹೆ ಸಂಪೂರ್ಣ ನಿಜ. ಅದೇ ಊರಿನ ಒಬ್ಬ ಮನುಷ್ಯ ಪರದೇಶಕ್ಕೆ ಹೋಗಿ, ಯಂತ್ರೀಕರಣ ವಿದ್ಯೆಯಲ್ಲಿ ಹೊಸ ಸಂಶೋಧನೆಯನ್ನು ಮಾಡಿ, ಆ ವರುಷದ ವಿಶೇಷ ಪ್ರಾಯಿಜ್ ಒಂದನ್ನು ಗಳಿಸಿದ್ದ. ಆ ವಿಜ್ಞಾನಿಯೆಂದರೆ ಆ ಊರ ರಾಜು. ಆ ತಾಲ್ಲೂಕಿನ ಒಂದು ಸಣ್ಣ ಹಳ್ಳಿಯ ಶಾಲಾ ಮಾಸ್ತರನ ಮಗ ರಾಜು. ಆದರೆ ಇಂದು ಅವನು ಒಬ್ಬ ಶಾಲಾ ಮಾಸ್ತರನ ಮಗ ರಾಜು ಎಂದು ಎಣಿಸಲ್ಪಡುತ್ತಿರಲಿಲ್ಲ— ಒಬ್ಬ ಪ್ರಸಿದ್ಧ ವಿಜ್ಞಾನಿ ಎಂದು— ಪ್ರಾಯಿಜ್ ಗಳಿಸಿಕೊಂಡ ಮಹಾ ವ್ಯಕ್ತಿ ಎಂದು! ಕರ್ನಾಟಕಕ್ಕೂ ಬೇರೆ ಪ್ರಾಂತಕ್ಕೂ ಒಂದು ಉಪಯುಕ್ತ ಹೊಸ ಮಶಿನ್‌ನ್ನು ಕಂಡುಹಿಡಿದ ಸಂಶೋಧಕನೆಂದು.

ಒಂದು ನಿಮಿಷದಲ್ಲಿ ೨೦೦ ಬೀಡಿಗಳನ್ನು ಕಟ್ಟುವ ಯಂತ್ರವನ್ನು ರಾಜು ಕಂಡುಹಿಡಿದಿದ್ದ. ಅಬ್ಬಾ! ಒಂದು ನಿಮಿಷದಲ್ಲಿ ೨೦೦ ಬೀಡಿಗಳನ್ನು ಕಟ್ಟುವ ಯಂತ್ರವನ್ನು ಕಂಡುಹಿಡಿಯುವುದು ಸಾಮಾನ್ಯವಿಷಯವೇ?

ಆ ಜಿಲ್ಲೆಯ ಎಲ್ಲ ಬೀಡಿಕಾರಖಾನೆಯ ಭಂಡವಲುದಾರರು ರಾಜನನ್ನು ಹಾಡಿ ಹೊಗಳಿದ್ದರು. ಉದಾರಹಸ್ತದಿಂದ ಸಹಾಯ ಮಾಡಲು ತಮ್ಮ ಇಚ್ಛೆಯನ್ನು ಪ್ರಕಟಿಸಿದ್ದರು. ರಾಜುವಿನ ಸ್ವಾಗತಕ್ಕಾಗಿ ನಡೆದ ವೆಚ್ಚವನ್ನೆಲ್ಲ ಬೀಡಿಕಾರಖಾನೆಯ ಬಂಡವಲುದಾರರು ವಹಿಸಿದ್ದರು. ಅಂತೂ ರಾಜನನ್ನು ಸ್ವಾಗತಿಸುವುದಕ್ಕಾಗಿ ಇವರೆಲ್ಲರೂ ಆತುರರಾಗಿಬಿಟ್ಟಿದ್ದರು.

ನಗರ ಸಭಾಭವನದ ಎದುರಿನ ಮತ್ತೊಂದು ಬೀದಿಯಲ್ಲಿ ನಿಂತ ಜನತಂಡವನ್ನು ನೋಡಿದಾಗ, ಆಂಗ್ಲ ಗಾದೆಯ ಮಾತೊಂದು ನೆನಪಿಗೆ ಬರುತ್ತಿತ್ತು: "ಮಿತ್ರರನ್ನು ಗಳಿಸಿಕೊಂಡವರಿಗೆ ಕೆಲ ಶತ್ರುಗಳಿರುವುದೂ ಸ್ವಾಭಾವಿಕ" ಎಂದು. ಆ ಬೀದಿಯ ತುಂಬ ಕೆಲವು ಕೂಲಿ ಜನ ಮಾತ್ರ ಕರೀಪತಾಕೆಯನ್ನು ಹಿಡಿದುಕೊಂಡು, ನಿಷೇಧಪ್ರದರ್ಶನಕ್ಕಾಗಿ ಕಾದುಕುಳಿತಿದ್ದರು. ಅವರೆಲ್ಲ ಬೀಡಿ ಕಾರ್ಖಾನೆಯಲ್ಲಿ ದುಡಿಯುವ ಕೂಲಿಜನ. ಬೀಡಿಕಟ್ಟುವ ಹೊಸ ಯಂತ್ರಬಂದು ೧೫ ದಿನಗಳಾದುವು. ಇವರೆಲ್ಲ ಅಂದಿನಿಂದ ನಿರುದ್ಯೋಗಿಗಳಾಗಿದ್ದರು. ಅವರೆಲ್ಲರ ಹಸಿದ ಹೊಟ್ಟೆ, ಅವರ ಮುಖದ ಮೇಲೆ ಯಾವುದೋ ಒಂದು ಪೈಶಾಚಿಕ ಉಗ್ರಕಳೆಯನ್ನು ತಂದಿರಿಸಿತ್ತು ಅವರ ಗಂಟಲು, ಮಳೆಗಾಲದಲ್ಲಿ ರಭಸದಿಂದ ಹರಿಯುವ ಹಳ್ಳದಂತೆ ಕರ್ಕಶವಾದ ಕೇಕೆಹಾಕುತ್ತಿದ್ದುವು.

"ಬೀಡಿ ಕಟ್ಟುವ ಯಂತ್ರವನ್ನು ಹುಡುಕಿದ ರಾಜು ಮನುಷ್ಯನಲ್ಲ— ಪಶು, ರಾಕ್ಷಸ! ಅವನಿಗೆ ಧಿಕ್ಕಾರ!"

ಪೋಲೀಸ ಪಡೆ ಬರುವ ಮೊದಲೇ ಅವರ ಈ ಅಬ್ಬರ ನೋಡುವ ಹಾಗಿತ್ತು. ಪೋಲಿಸರ ಎರಡು ಮೋಟರ್ ಲಾರಿಗಳು ಬಂದಾಕ್ಷಣ ಕರಿಯ ಪತಾಕೆಯ ಜನ ಚೆದರಿತು. ಈ ಯಾಂತ್ರಿಕ ಯುಗದಲ್ಲಿ ಕೇವಲ ಸಿಟ್ಟಿಗೆ ಮಹತ್ತ್ವವಿಲ್ಲ; ಕೇವಲ ಶಕ್ತಿಗೆ ಮಹತ್ತ್ವವಿಲ್ಲ; ಬಾಹುಬಲದ ಕಾಲ ಹಿಂದೆ ಹೋಯಿತು. ಇಂದು ಯಾಂತ್ರಿಕ ಯುಗ. ಇಲ್ಲವಾದರೆ— ?

ಇಲ್ಲವಾದರೆ ೨೫ ಪೋಲೀಸರು ೫-೬ ನೂರುಜನರನ್ನು ಚೆದರಿಸುವದೆಂದರೆ? ಹೌದು ಅವರಲ್ಲಿ ಬಂದೂಕುಗಳಿದ್ದುವು. ಅವೂ ಒಂದು ಯಾಂತ್ರಿಕ ಸಾಧನಗಳು. ಒಬ್ಬ ಮನುಷ್ಯ ಬಹಳವಾದರೆ ಇಬ್ಬರನ್ನು ತಡೆಹಿಡಿದು ನಿಲ್ಲಿಸಬಹುದು. ಆದರೆ ಯಂತ್ರಸಾಮರ್ಥ್ಯವಿದ್ದಾಗ—? ೫೦ ಜನರ ಕೆಲಸ, ಯಂತ್ರವಿದ್ದವನೊಬ್ಬ ಮಾಡಬಲ್ಲ. ಉಳಿದ ೪೯ ಜನರು— ?

ಇದೇ ಬಗೆಹರಿಯದ ಸಮಸ್ಯೆಯನ್ನು ಬೀಡಿ ಕೂಲಿಕಾರರ ಕರಿಯ ಪತಾಕೆ ಚಟಪಟಿಸಿ ಜಗತ್ತಿಗೆ ಸಾರಿ ಹೇಳುತ್ತಿರುವಂತೆ ಭಾಸವಾಗುತ್ತಿತ್ತು. ಮತ್ತೆ ಕೂಲಿಕಾರರು ಕೇಕೆ ಹೊಡೆದರು:

"ರಾಜು ಮನುಷ್ಯನಲ್ಲ—ಅವನು ಪಶು, ರಾಕ್ಷಸ. ಧಿಕ್ಕಾರ!"

ಆದರೆ ಈ ಕೂಗು ರಾಜುವಿನ ಕಿವಿಯನ್ನು ಮುಟ್ಟುವಂತಿರಲಿಲ್ಲ. ಕೇವಲ ಯಾಂತ್ರಿಕ ಸಾಧನವೇ ಅದನ್ನು— ?

ನೀರಿನ ಪ್ರವಾಹಕ್ಕೆ ಎಷ್ಟು ಒಡ್ಡು ಕಟ್ಟಿದರೇನಾಯಿತು? ಅದು ಎಲ್ಲಿಯೋ ಸೆಲೆಯ ರೂಪವಾಗಿ ಹೊರಬರುತ್ತದೆ.

ಆ ಕೂಲಿಕಾರರ ತಂಡದಲ್ಲಿದ್ದ ಸುಬ್ಬಮ್ಮ ಸೆಲೆಯ ರೂಪವಾಗಿಯಾದರೂ ಆ ಪಡೆಯ ಗೋಡೆಯನ್ನೂ ಮುರಿದು ಒಳಹೋಗ ಬಯಸುತ್ತಿದ್ದಳು. ಆದರೆ ಸಭಾಭವನದಲ್ಲಿ ಕೇವಲ ಆಮಂತ್ರಿತರಿಗಷ್ಟೇ ಪ್ರವೇಶವಿತ್ತು. ಉಳಿದವರಿಗೆ— ಯಾಂತ್ರಿಕ ಸಾಧನಗಳ ಮೂಲಕ— ರಾಜುವಿನ ಭಾಷಣವನ್ನು ಹೊರಗಿನಿಂದಲೇ ಕೇಳುವ ವ್ಯವಸ್ಥೆಯನ್ನು ಮಾಡಲಾಗಿತ್ತು.

ಆದರೂ ಸುಬ್ಬಮ್ಮ ಗೇಟಿನ ಬಳಿ ನಿಂತಿದ್ದ ಪೋಲಿಸ ಹವಾಲ್ದಾರನನ್ನು ಅಂಗಲಾಚಿ ಬೇಡಿಕೊಂಡಳು :

"ಅಣ್ಣಾ, ಈ ಮುದುಕಿ ಅಷ್ಟು ಒಳಗ ಹೋಗಿ ನೋಡಿ ಬರ್ತಾಳಪ್ಪಾ !"

ಪೋಲಿಸ ಹವಾಲ್ದಾರ ಮೊದಲು ನಕ್ಕುಬಿಟ್ಟ. ಆದರೆ ಒಮ್ಮೆಲೆ ಸುಬ್ಬಮ್ಮನ ಗುರುತು ಹತ್ತಿತು. ಕುತೂಹಲಿಯಾಗಿ ಕೇಳಿದ : "ಅಲ್ಲs ಸುಬ್ಬವ್ವಾ! ನಿನ್ನ ಮಗ ಭಾಂವೀ ಬಿದ್ದು ಸತ್ತು ನಾಲ್ಕು ದಿನಾ ಆತು ! ಈಗ ಸಭಾದಾಗಿನ ಮಂದಿನ್ನ ನೋಡ್ಲಾಕ ಬಂದೀಯಲ್ಲವ್ವಾ?"

ಮುದುಕಿ ಸುಬ್ಬಮ್ಮನ ಕಣ್ಣಲ್ಲಿ ನೀರು ಧಾರಾಳವಾಗಿ ಹರಿಯತೊಡಗಿತು. ಅವಳ ಕಂಠದಿಂದ ಮಾತೇ ಹೊರಡಲಿಲ್ಲ. ಅವಳ ದುಃಖವನ್ನು ಕಂಡು ಮರುಗಿದ ಪೋಲಿಸ ಹವಾಲ್ದಾರನೇ ಮತ್ತೆ ಮಾತನಾಡಿಸಿದ :

"ಇರಲಿ ಬಿಡು, ಯಾಕ ಅಳೋದು! ಎಲ್ಲಾ ಮಾಡಸೋಂವ ಪರಮಾತ್ಮ! ನಾವು, ನೀವು ಯಾರು? ಆದರ ಇಂಥ ಭಾಂವೀ ಯಾಕ ಬೀಳಬೇಕಾಗಿತ್ತು? ಬೀಡಿ ಕಾರಖಾನ್ಯಾಗಿನ ನೌಕರಿ ಹೋದರ, ಮತ್ತೆಲ್ಲ್ಯಾದರೂ ನೋಡಬೇಕಾಗಿತ್ತು? ಸಂಗಾಟಲೇ ಹೋಗಿ ಜೀವಾನs ಕೊಡಬೇಕೇನು?"

ಅವನ ಕೊನೆಯ ಮಾತು ಮುಗಿಯುವ ಮೊದಲೇ ಸುಬ್ಬಮ್ಮ ಅವನನ್ನು ಅಪ್ಪಿಕೊಂಡು ಹುಚ್ಚು ಹಿಡಿದವರಂತೆ ದೊಡ್ಡ ಧ್ವನಿ ತೆಗೆದು ಅಳತೊಡಗಿದಳು. ಕೂಡಿದ ಜನರಲ್ಲಿ ತನ್ನ ಸ್ಥಾನಮಾನಕ್ಕೆ ಕುಂದೆಲ್ಲಿ ಬರುವುದೋ ಎಂದು ಆ ಪೋಲಿಸನಿಗೆ ನಾಚಿಗೆಯಾಗಿರಬೇಕು. ಆದರಿಂದಲೇ ಅವನು ಸುಬ್ಬಮ್ಮನನ್ನು ಹೊರಶಬ್ದಗಳಿಂದ ಸಾಂತ್ವನಗೊಳಿಸಿ, ಮತ್ತೆ ಕೈಯಲ್ಲಿ ಲಾಠಿಯನ್ನು ಹಿಡಿದು ಗೇಟಿನತ್ತ ನಡೆದ

ಆಧಾರವಾಗಿ ನಿಂತ ಹವಾಲ್ದಾರ ದೂರಕ್ಕೆ ಹೋದರೂ ಸುಬ್ಬಮ್ಮನಿಗೆ ಹೆಚ್ಚು ದುಃಖವೆನಿಸಲಿಲ್ಲ. ಅವಳ ಜೀವನಾಧಾರವಾಗಿದ್ದ ಮಗನೇ ನಿರುದ್ಯೋಗಿಯಾಗಿ ಭಾಂವಿ ಬಿದ್ದು ಸತ್ತು ಹೋಗಿದ್ದ. ಆ ದುಃಖದ ಮುಂದೆ— ಕ್ಷಣಕಾಲ ಸಂತೈಸುವವನು ದೂರಹೋದ ದುಃಖ ಎಲ್ಲಿಯದು?

ಕುರುಡನು ಧರಿಸಿದ ಅಂಗಿಯ ಮೇಲೆ ಮಸಿ ಸುರುವಿ, 'ನಿನ್ನ ಅಂಗಿ ಕಪ್ಪಾಯಿತು' ಎಂದು ಕೂಗಿದರೆ, ಕುರುಡನಿಗೆ ದುಃಖವೇ? ಕಣ್ಣಿಲ್ಲದ ದುಃಖದ ಮುಂದೆ, ಕರಿಯದು ಬಿಳಿಯದು— ಒಂದೇ ಅವನಿಗೆ.

ಮುದುಕಿ ಸುಬ್ಬಮ್ಮನೂ ಕಣ್ಣೊರಸಿಕೊಳ್ಳುತ್ತ ಗೇಟಿನ ಹತ್ತಿರ ಬಂದು ನಿಂತಳು. ಮುದುಕಿ ಎಂದು ಪೋಲಿಸರಾರೂ ಅವಳ ಗೋಜಿಗೆ ಹೋಗಲಿಲ್ಲ. ಸುಬ್ಬಮ್ಮ ಗೇಟಿಗೆ ಬಂದ ಮೂರು ನಿಮಿಷಗಳಲ್ಲಿಯೇ ಎರಡು ಮೂರು ಕಾರುಗಳು ಬಂದುವು. ಮೂರನೆಯ ಕಾರಿಗೆ ಮೇಲುಹೊದಿಕೆ ಇರಲಿಲ್ಲ. ಆ ಕಾರಿನಲ್ಲಿಯೇ ರಾಜ ವಿರಾಜಮಾನನಾಗಿದ್ದ. ರಾಜನ ಕಾರು ಗೇಟಿಗೆ ಬರುತ್ತಲೂ ನಗರ ಸಭೆಯ ಪ್ರತಿಷ್ಠಿತ ಜನ ಅವನಿಗೆ ಹೂವಿನ ಹಾರ ಹಾಕಿ ಕೆಳಗಿಳಿಸಿ ಅವನನ್ನು ಸಭಾಭವನದತ್ತ ಕರೆದುಕೊಂಡು ನಡೆದರು. ಆಗಲೂ ಮುದುಕಿ ಸುಬ್ಬಮ್ಮ ಗೇಟಿನ ಬಳಿಯಲ್ಲಿಯೇ ನಿಂತಿದ್ದಳು. ರಾಜ ಹಾದು ಹೋಗುವಾಗ, ಅವನನ್ನು ಸುಬ್ಬಮ್ಮ ತೀರ ಹತ್ತಿರದಿಂದ ನೋಡಿದಳು. ನೋಡುತ್ತಿರುವಂತೆ ಅವಳಲ್ಲಿ ಮಾತೃ ಭಾವನೆ ಜ್ವಾಲಾಮುಖಿಯಂತೆ ಸ್ಫೋಟವಾಯಿತು. ರಾಜ ಸಭಾ ಭವನವನ್ನು ಸೇರಿದರೂ, ಮುದುಕಿ ಸುಬ್ಬಮ್ಮ ನಿಂತಲ್ಲಿಯೇ ನಿಂತು ಕಣ್ಣು ಮುಚ್ಚಿಕೊಂಡಳು. ಅವಳಿಗೆ ತನ್ನ ದುಃಖ ಎಲ್ಲಿಯೋ ಮಾಯವಾದಂತೆ ಭಾಸವಾಯಿತು. ಆ ದುಃಖದ ಎಡೆಯಲ್ಲಿ ಮೇರೆ ಮೀರಿದ ಆನಂದ, ಸಂತೋಷ ನಲಿಯತೊಡಗಿತು. ಅವಳು ಕಣ್ಣು ಮುಚ್ಚಿದಂತೆಯೇ ಅವಳ ಮನಸ್ಸು ಅವಳನ್ನು ಭೂತಕಾಲಕ್ಕೆ ಸೆಳೆದೊಯ್ದಿತು. ಸುಬ್ಬಮ್ಮ ತನ್ನ ಹಿಂದಿನ ದಿನಗಳನ್ನು ಜ್ಞಾಪಿಸಿ ವಿಚಾರಿಸತೊಡಗಿದಳು.

"— ಆ ಹಳ್ಳಿಯಲ್ಲಿ ಒಬ್ಬ ಸಾಲೆಯ ಮಾಸ್ತರರ ಮನೆಯ ಬದಿಯಲ್ಲಿಯೇ ತಾನು ತನ್ನ ಗಂಡನೊಂದಿಗೆ ಇದ್ದಳು. ತನ್ನ ಗಂಡ ಕುಲಕರ್ಣಿಕೆಯನ್ನು ಕಳೆದುಕೊಂಡ ಕುಲಕರ್ಣಿಯಾಗಿದ್ದ. ಮುಂದಿಯ ಹೊಲ ಲಾವಣಿ ಹಿಡಿದು ಮಾಡಿ ದುಡಿದು ಮನೆಯನ್ನು ನಡೆಯಿಸಿದ್ದ. ಹೀಗಾಗಿ ತಾನೂ ಬಡವಿ, ಮಾಸ್ತರರೂ ಹೇಳಿಕೊಳ್ಳುವಷ್ಟು ಸಿರಿವಂತರಲ್ಲ. ಮುಂದೆ ಆ ಮಾಸ್ತರರ ಹೆಂಡತಿಯ ಪ್ರಸೂತಿಯ ದಿನ— ಅಯ್ಯೋ, ಅದು ಅವರ ಜೀವನದಲ್ಲಿ ಬಂದ ಬಿರುಗಾಳಿ—

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ದೊಡ್ಡ— ಸೂಲಗಿತ್ತಿಯ ಕೆಲಸಕ್ಕೆ ತಾನೇ ನಿಂತುಕೊಂಡಿದ್ದಳು. ಆದರೆ ದುರ್ದೈವ! ಮಾಸ್ತರರ ಹೆಂಡತಿ ಸುಪುತ್ರಳಾಗಿ ಹಡೆದಳೇನೋ ನಿಜ; ಆದರೆ ಹಡೆದ ಬೇನೆಯಿಂದ ಮೂರನೆಯ ದಿನವೇ ಮರಣಹೊಂದಿದಳು. ಅವಳಿಗಿಂತಲೂ ಒಂದು ವರುಷ ಮೊದಲು ತನ್ನ ಹೆರಿಗೆಯಾಗಿತ್ತು. ತಾನೂ ಗಂಡುಮಗುವನ್ನು ಹಡೆದಿದ್ದಳು. ಆ ಮಗುವಿಗೆ ಆದೇ ವರುಷ ತುಂಬುತ್ತಿತ್ತು. ಅಂತಹ ಆಪತ್ಕಾಲದಲ್ಲಿಯೂ ತಾನು ತನ್ನ ಮಗುವನ್ನು ಬದಿಗಿರಿಸಿ ಮಾಸ್ತರನ ಮಗನಿಗೆ ತನ್ನ ಎದೆಹಾಲನ್ನು ಕುಡಿಸಿದಳು.

ತನ್ನ ಹಾಲಿನಿಂದಲೇ ಆ ಮಗು ದೊಡ್ಡದಾಯಿತು. ಮುಂದೆ ಆ ಮಗು ೧೭ ವರುಷದವನಾಗುವವರೆಗೂ ತಾನೇ ತಾಯಿಯಾಗಿದ್ದಳು. ಮುಂದೆ ಮಾಸ್ತರರಿಗೆ ಯಾವುದೋ ಲಾಟ್ರಿಯಲ್ಲಿ ಅಪಾರ ಹಣ ದೊರಕಿತು. ಅವರು ಹಳ್ಳಿಬಿಟ್ಟು ಮಗನ ಮುಂದಿನ ಶಿಕ್ಷಣಕ್ಕಾಗಿ ಮುಂಬಯಿಗೆ ಹೋದರು. ಅಂದೇ ಅವರ ತಮ್ಮ ಪರಿಚಯ ಮರೆತುಹೋಯಿತು. ಜೀವನವೂ ಒಂದು ಪ್ರವಾಹ. ಬಿರುಗಾಳಿಬಿಟ್ಟಾಗ ದೋಣಿಗಳು ಒಂದೆಡೆಯಲ್ಲಿ ಸೇರಿ ಒಬ್ಬರೊಬ್ಬರ ಸಹಾಯ ಬಯಸುತ್ತವೆ. ಮತ್ತೆ ಬಿರುಗಾಳಿ ನಿಂತಿತೆಂದರೆ, ಅವು ತಮ್ಮ ತಮ್ಮ ಹಾದಿಹಿಡಿಯುತ್ತವೆ. ಬಿರುಗಾಳಿಯಲ್ಲಿ ಬೆಳೆದ ಪರಿಚಯ ಬರೀ ಗಾಳಿಯ ಹಾಗೆ?

ಮುಂದೆ ಊರಲ್ಲಿ ದೊಡ್ಡ ಬರಗಾಲಬಿದ್ದಿತು. ಮೇವು ಇಲ್ಲದ್ದರಿಂದ ಜನ ಬಂದ ದರಕ್ಕೆ ದನಗಳನ್ನು ಮಾರಿ ಪಟ್ಟಣ ಸೇರತೊಡಗಿದರು. ತನ್ನ ಗಂಡ ಅದೇ ಕಾಲಕ್ಕೆ ಸಾಯಬೇಕೆ? ಆ ದುಃಖ ಬೇರೆ! ಆದರೆ ದುಃಖವೆಂದು ಅಳುತ್ತ ಕೂತರೆ ಎರಡು ಜೀವಗಳ ಹೊಟ್ಟೆತುಂಬಬೇಕಲ್ಲ! ತಾನೂ ತನ್ನ ಮಗಳನ್ನು ಕರೆದುಕೊಂಡು ಧಾರವಾಡವನ್ನು ಸೇರಿದಳು. ಆದರೆ ತನ್ನ ಮಗನನ್ನು ಮೊದಲಿನಿಂದಲೂ ಹೊಲಗೆಲಸಕ್ಕೆ ಹಚ್ಚಿದ್ದರಿಂದ, ಆವನನ್ನು ಸಾಲೆಗೇ ಕಳಿಸಿರಲಿಲ್ಲ. ಧಾರವಾಡದಲ್ಲಿ ಇಂಥವನಿಗೆ ಉದ್ಯೋಗ ಸಿಗಬೇಕೆಲ್ಲಿ? ಗಿರಣಿಯ ಹೊರತು ಗತಿ ಇರಲಿಲ್ಲ. ಆದರೆ ಧಾರವಾಡದಲ್ಲಿ ಗಿರಣಿಗಳೂ ಇರಲಿಲ್ಲ. ಹೀಗಾಗಿ ಕಡೆಗೆ ತನ್ನ ಜಾತಿಯವರು ಮಾಡದ ಉದ್ಯೋಗಕ್ಕೆ ಮಗ ಕೈಹಾಕಿದ. ಅದೇ, ಬೀಡಿಕಾರಖಾನೆಯಲ್ಲಿ ಬೀಡಿಕಟ್ಟುವ ನೌಕರಿಯನ್ನು ಸಂಪಾದಿಸಿದ. ಬೀಡಿಕಟ್ಟುವುದರಲ್ಲಿ ಆತ ನಿಪುಣನಾದ. ದಿನಕ್ಕೆ ೨ ಸಾವಿರ ಬೀಡಿ ಕಟ್ಟುವಷ್ಟು ಅವನು ತರಬೇತು ಹೊಂದಿದ. ಅವನ ಸಂಪಾದನೆಯಲ್ಲಿ ತಮ್ಮಿಬ್ಬರ ಹೊಟ್ಟೆ ತುಂಬುತ್ತಿತ್ತು— ಆದರೆ ಬೀಡಿ ಕಟ್ಟುವ ಯಂತ್ರ ಬಂದಂದಿನಿಂದ ಅವನು ನಿರುದ್ಯೋಗಿಯಾದ. ಎಲ್ಲಿಯೂ ಗತಿಗಾಣದವನಾದ. ತನ್ನದೊಬ್ಬನದೇ ಅಲ್ಲ, ಅದರ ಜತೆಯಲ್ಲಿ ತನ್ನ ತಾಯಿಯ ಹಸಿದ ಹೊಟ್ಟೆಯೂ ಅವನಿಗೆ ಭೂತಾಕಾರವಾಗಿ ಕಂಡಿರಬೇಕು — ಕಡೆಗೆ ಬಳಲಿ ಬೆಂಡಾಗಿ ಭಾಂವಿಯಲ್ಲಿ ಬಿದ್ದ— ಅಯ್ಯೋ ಮಶಿನ್ನು; ಅದನ್ನ ಹುಡುಕಿದ ಪಶು, ರಾಕ್ಷಸ. ಅವನಿಗೆ ಧಿಕ್ಕಾರ— ಹಾಲಿಗಾಗಿ ಮೊಲೆ ಕೊಟ್ಟರೆ ರಕ್ತ ಹೀರಬೇಕೆ? —

ಮುದುಕಿ ಸುಬ್ಬಮ್ಮ ಕಣ್ಣು ತೆರೆದಳು. ಅವಳ ಕಣ್ಣೆದುರಿನಲ್ಲಿ ರಾಜನಂಥ ಅಸಂಖ್ಯ ರಾಕ್ಷಸರು ಅವಳನ್ನು ಹಿಡಿಯಲು ಬಂದಂತೆ ಭಾಸವಾಯಿತು ಒಮ್ಮೆಲೆ ಹೌಹಾರಿದವಳಂತೇ ಚೀರಿಬಿಟ್ಟಳು.

“ ಪಶು— ರಾಕ್ಷಸ— ಧಿಕ್ಕಾರ! ....

ಮುದುಕಿಯ ಚೀತ್ಕಾರ ದೂರ ನಿಂತಿದ್ದ ಕೂಲಿಕಾರ ತಂಡವನ್ನು ಕೆರಳಿಸಿತು. ಮತ್ತೆ ಅದೇ ಘೋಷಣೆ ಕೇಳಿಸಿತು.

“ ಪಶು ರಾಕ್ಷಸ— ಧಿಕ್ಕಾರ ”

ಪೋಲಿಸರ ಪಡೆ ಆ ತಂಡದತ್ತ ಧಾವಿಸಿತು. ಕ್ಷಣಮಾತ್ರದಲ್ಲಿ ಮತ್ತೆ ಶಾಂತತೆ ನೆಲಸಿತು. ಯಾಂತ್ರಿಕ ಸಾಧನದ ಬಲದ ಮೇಲೆಯೇ ಆ ಶಾಂತಿ ನೆಲಸಿತ್ತು. ಆದರೆ ಅದು ಸ್ಮಶಾನ ಶಾಂತಿಯಾಗಿ ಕಾಣುತ್ತಿತ್ತು.

ಪೋಲಿಸ ಹವಾಲ್ದಾರ ಮುದುಕಿಯ ಹತ್ತಿರ ಬಂದು ಅವಳನ್ನು ಎಚ್ಚರಿಸಿದ:

“ ಏ ಮುದುಕೀ ಎತ್ಲಾಗ ನೋಡತಿ? ಆ ಕೊಳವಿ ಕಡೆ ನೋಡು, ಒಳಗ ಮಾತಾಡಿದ್ದು ಇಲ್ಲಿ ಕೇಳಸ್ತೈತಿ! ”

ಸುಬ್ಬಮ್ಮ ನಿರ್ಜೀವ ಯಂತ್ರದಂತೆ ತನ್ನ ಕಿವಿಗಳನ್ನು ಧ್ವನಿವಾಹಕ ಕರ್ಣಗಳತ್ತ ಹೊರಳಿಸಿದಳು.

ರಾಜನ ಭಾಷಣ ಅಲ್ಲಿ ಕೇಳುತ್ತಿತ್ತು: “ —ನಾನು ಈಗ ದೊಡ್ಡ ವಿಜ್ಞಾನಿಯಾಗಿ ಬಂದಿಲ್ಲ, ದೊಡ್ಡ ಸಂಶೋಧಕನಾಗಿ ಬಂದಿಲ್ಲ. ನಿಮ್ಮ ಊರವನಾಗಿ ಬಂದಿದ್ದೇನೆ. ನಿಮ್ಮವನಾಗಿ ಬಂದಿದ್ದೇನೆ. ನಮ್ಮ ಪ್ರಾಂತದವರು ಪರರಿಗೆ ಉಪಕಾರ ಮಾಡುವುದರಲ್ಲಿ ಹೆಸರಾಗಿದ್ದಾರೆ. ಈಗ ನಾನು ಹೊಸ ಯಂತ್ರದ ರಚನೆಯನ್ನು ಕಂಡು ಹಿಡಿದು ಪರರಿಗೆ ಉಪಕಾರ ಮಾಡಿದ್ದೇನೆ. ನಾನು ಕೂಡ ಇಂಥವೇ ಉಪಕಾರದ ಮೇಲೆ ಬೆಳೆದು ಇಂದು ಈ ಉನ್ನತ ಪದವಿಗೇರಿದ್ದೇನೆ. ನಾನು ನನ್ನ ಆತ್ಮವೃತ್ತ ಹೇಳುತ್ತ ಕೂಡ್ರುವುದಿಲ್ಲ. ಆದರೂ ನನ್ನ ಜೀವನದಲ್ಲಿ ನಡೆದ ಒಂದು ಭಾಗ. ಹೇಳಲೇಬೇಕು. — ನಾನು ಹುಟ್ಟಿ ಮೂರುದಿನಗಳಲ್ಲಿಯೇ ನನ್ನ ತಾಯಿಯನ್ನು ಕಳೆದುಕೊಂಡೆ. ಆಗ ನೆರೆಮನೆಯ ಹೆಣ್ಣುಮಗಳೊಬ್ಬಳು— ಅವಳ ಹೆಸರು ಸುಬ್ಬಮ್ಮ, — ತನ್ನ ಒಂದು ವರುಷದ ಮಗುವನ್ನು ಬದಿಗಿರಿಸಿ ಆ ಮಗುವಿಗೆ ಅರೆಹೊಟ್ಟೆಯುಣಿಸಿ, ನನಗೆ ತನ್ನ ಎದೆ ಹಾಲುಣಿಸಿ ಬೆಳೆಸಿದಳು. — ”

ಸುಬ್ಬಮ್ಮನ ಕಣ್ಣುಗಳಲ್ಲಿ ನೀರು ಧಾರಾಳವಾಗಿ ಹರಿಯತೊಡಗಿತು. ಅವಳ ಸತ್ತ ಮಗುವಿನ ಭೂತ ಅವಳ ಎದುರು ನಿಂತು ಕೂಗಾಡತೊಡಗಿದಂತೆ ಭಾಸವಾಯಿತು. ಆ ಭೂತ ಕೂಗಿ ಕಿರುಚಿ ಹೇಳುತ್ತಿತ್ತು: “ ಅವ್ವಾ ನೀನು ಸ್ವಂತ ಮಗನಿಗೆ ಹಾಲುಣಿಸಲಿಲ್ಲ. ಒಂದು ಹಾಂವಿಗೆ ಹಾಲು ಹಾಕಿದಿ! ಹಲ್ಲು ಕೀಳುವ ಸಾಮರ್ಥ್ಯವಿದ್ದರಷ್ಟೇ ಹಾಂವಿಗೆ ಹಾಲೆರೆಯಬೇಕು? ನೀನು ಬಡವಿ, ಪರೋಪಕಾರ ಮಾಡಲು ಹೋದಿ! ನೀನು ಕುಡಿಸಿದ ಹಾಲಿನಿಂದ ಪುಷ್ಟಗೊಂಡ ಘಟಸರ್ಪ ನನ್ನನ್ನು ಕಚ್ಚಿತು! ಇನ್ನು ನಿನ್ನನ್ನು

ಕಚ್ಚುತ್ತದೆ. ಎಚ್ಚರ! ಸೇಡು! ಸೇಡು!! ನೀನು ಈಗ ಸೇಡು ತೀರಿಸಿಕೊಂಡರೆ ನನಗೆ ಸಮಾಧಾನ! ”

ಸುಬ್ಬಮ್ಮನ ಕಣ್ಣುಗಳು ಇದ್ದುದಿದ್ದಂತೆಯೇ ಕೆಂಪಾದುವು. ಕ್ಷಣಕಾಲ ಅವಳ ಮುಖದ ಮೇಲಿಂದ ಪೈಶಾಚಿಕ ನಗುವೊಂದು ನುಸುಗಿ ಮಾಯವಾಯಿತು. ಆ ನಿರಾಶೆಯ ನಗುವಿನಲ್ಲಿಯೇ “ ಸೇಡು ” ಎಂದುಸುರಿದಳು. ಆಗ ಮುದುಕಿಯ ಮುದುಡಿಯಾದ ಮುಖದಲ್ಲಿಯೂ ಉಗ್ರಕಳೆ ಕುಣಿದಾಡತೊಡಗಿತು. ಒಮ್ಮೆ ಎದೆಯ ಮೇಲೆ ಸೆರಗಿನ ಒಳಗೆ ಕೈಯಾಡಿಸಿ, ಸಮಾಧಾನದ ಒಂದು ದೀರ್ಘ-ಶ್ವಾಸವನ್ನು ಬಿಟ್ಟಳು. “—ಆ ಸುಬ್ಬಮ್ಮ—” ಲಾವುಡ್‌ಸ್ಪೀಕರಿನಲ್ಲಿ ಕೇಳುತ್ತಿದ್ದ ರಾಜನ ಭಾಷಣ ಸುಬ್ಬಮ್ಮನನ್ನು ಎಚ್ಚರಿಸಿತು. ಸುಬ್ಬಮ್ಮ ಮತ್ತೆ ಧ್ವನಿಗ್ರಾಹಕ ಕರ್ಣದತ್ತ ಕಿವಿಯನ್ನು ಹೊರಳಿಸಿದಳು. ರಾಜನ ಭಾಷಣ ನಡೆದೇ ಇತ್ತು.

“ —ಆ ಸುಬ್ಬಮ್ಮ ನನ್ನನ್ನು ಈಗ ಮರೆತಿರಬಹುದು. ಆದರೆ ನಾನು ಅವಳನ್ನು ಮರೆಯುವುದು ಅಸಾಧ್ಯ. ಸ್ವಂತದ ಹಿತದ ಕಡೆಗೆ ಹೆಚ್ಚು ಲಕ್ಷಕೊಡದೇ ಪರೋಪಕಾರ ಧರ್ಮವನ್ನು ಪರಿಪಾಲಿಸಿದ ಸಾಧ್ವಿಯನ್ನು ಮರೆಯುವದೆಂತು ಸಾಧ್ಯ? ಅವಳನ್ನು ಈಗ ಯಾರಾದರೂ ಕರೆದು ತಂದರೆ, ನಾನು ಅವಳ ಕಾಲಿಗೆ ಬಿದ್ದು, ಧನ್ಯನಾಗುವೆ.... ” ಸುಬ್ಬಮ್ಮನ ಹತ್ತಿರವೇ ನಿಂತಿದ್ದ ಪೋಲಿಸ ಹವಾಲ್ದಾರ, ರಾಜನ ಭಾಷಣ ಕೇಳುತ್ತಿರುವಂತೆ ಸ್ತಂಭೀಭೂತನಾದ. “ ಈ ಮುದುಕಿಯನ್ನೇ ಇವರು ಹೊಗಳುತ್ತಿದ್ದಾರಲ್ಲ—ಇವಳನ್ನೇ ಒಯ್ದು ಅವರ ಮುಂದೆ ನಿಲ್ಲಿಸಿದರೆ, ತನ್ನ ಶೀಘ್ರ ಕರ್ತವ್ಯಕ್ಕೆ ಅಧಿಕಾರಿಗಳು ಮೆಚ್ಚಿಯಾರು! ” ಎಂದು ತನ್ನಷ್ಟಕ್ಕೇ ವಿಚಾರಿಸಿ, ಆ ಮುದುಕಿಯ ಬಳಿಸಾರಿ ಮೃದುವಾಗಿ ಮಾತಾಡಿದ:

“ ಸುಬ್ಬಮ್ಮಾ, ನೋಡು, ಸಾಹೇಬರು ಏನು ಮಾತಾಡಿದರು ಕೇಳಿದ್ಯಾ? ”

“ ಕೇಳಿದ್ನೆಪಾ! ” ನಿರ್ವಿಕಾರಳಾಗಿ ಮುದುಕಿ ಉತ್ತರಿಸಿದಳು.

“ ನೀನೇ ಏನು ಸುಬ್ಬಮ್ಮಾ, ಸಾಹೇಬರನ್ನ ಸಣ್ಣಾಕಿರ‍್ತ ಸಾಕಿದಾಕಿ? ”

“ ಹೌದಪಾ! ”

ಉತ್ತರವನ್ನು ಕೇಳಿದ ಪೋಲಿಸ ಹವಾಲ್ದಾರನ ಆನಂದಕ್ಕೆ ಮೇರೆಯೇ ಉಳಿಯಲಿಲ್ಲ. ಮತ್ತೆ ಕೇಳಿದ:

“ ನಡೀ ಸುಬ್ಬಮ್ಮಾ, ಒಳಗ ನಡಿ! ಅವರ ದರ್ಶನ ಮಾಡಿಸು ಅಂತ ಕೇಳತಿದ್ದೆಲ್ಲ. ಮಾಡಿಸ್ತೀನಿ ನಡಿ! ”

ಸುಬ್ಬಮ್ಮನಿಗೆ ಅದು ಬೇಕಾಗಿರಲಿಲ್ಲ. ಆದರೆ ಮರುಕ್ಷಣದಲ್ಲಿಯೇ ಮಗನ ಭೂತ “ ಸೇಡು ” ಎಂದು ಹೇಳಿದಂತೆ ಭಾಸವಾಯಿತು. ಸುಬ್ಬಮ್ಮ ಮತ್ತೆ ಎದೆಯ ಮೇಲಣ ಸೆರಗಿನ ಒಳಗೆ ಕೈಯಾಡಿಸಿ “ನಿನ್ನ ಉಪಕಾರ ಭಾಳ ಆತಪಾ! ” ಎಂದು ಪೋಲೀಸ ಹವಾಲ್ದಾರನ ಸಂಗಡ ಒಳಗೆ ನಡೆದಳು.

ಸಭಾಭವನದಲ್ಲಿ ಕಾಲಿಟ್ಟೊಡನೆಯೇ ಮುದುಕಿ ಸ್ತಂಭಿತಳಾದಳು. ಸೂಟು-ಬೂಟಿನಲ್ಲಿ ಕುಳಿತ ಸಭಿಕರು ತಿರಸ್ಕೃತ ದೃಷ್ಟಿಯಿಂದ ಮುದುಕಿಯನ್ನು ದೃಷ್ಟಿಸತೊಡಗಿದರು. ಅದೇ ಆಗ ರಾಜನ ಭಾಷಣ ಮುಗಿದಿತ್ತು. ಅಧ್ಯಕ್ಷರು ಹೂವಿನ ಹಾರ ಹಾಕುವವರಿದ್ದರು. ಅಷ್ಟರಲ್ಲಿ ಪೋಲಿಸ ಹವಾಲ್ದಾರ ಕೂಗಿ ಹೇಳಿದ:

“ ಸಾಹೇಬರ‍್ರ, ಸುಬ್ಬಮ್ಮ ಬಂದಾಳರೀ; ನೀವು ಇದೇ ಈಗ ಕರೆದುಕ್ಕೊಂಡು ಬಂದರ— ಅಂತ ಹೇಳಿದ್ದಿರಿ. ಅದಕ್ಕ ಕರಕೊಂಡು ಬಂದೀನರಿ. ”

ಸಭಿಕರೆಲ್ಲರೂ ಗಹಗಹಿಸಿ ನಕ್ಕರು. ಸುಬ್ಬಮ್ಮನ ಕಂಗಾಲ ಸ್ಥಿತಿಗೆ ಆ ನಗು ಇಮ್ಮಡಿ-ಮುಮ್ಮಡಿಯಾಗುತ್ತಿತ್ತು. ಸುಬ್ಬಮ್ಮನ ಮೈಮೇಲಿನ ವಸ್ತ್ರಗಳು ದರಿದ್ರತೆಯ ಪತಾಕೆಗಳಂತೆ ಗಾಳಿಗೆ ಹಾರಾಡುತ್ತಿದ್ದುವು. ಅಧ್ಯಕ್ಷರು ಮೂಗುಮುರಿದರು. ಸಭಿಕರೆಲ್ಲರೂ ಮತ್ತೊಮ್ಮೆ ತಿರಸ್ಕಾರ ಮಿಶ್ರಿತ ನಗೆಯನ್ನು ನಕ್ಕರು. ಆ ನಗೆ ಸಭಾಭವನದ ತುಂಬ ಪ್ರತಿಧ್ವನಿಸಿತು.

ಆ ಅಟ್ಟಹಾಸದ ನಗು ಸುಬ್ಬಮ್ಮನಿಗೆ ತನ್ನ ಹೃದಯವನ್ನು ಇರಿದುಹೋದಂತೆ ಭಾಸವಾಯಿತು. ಒಂದು ಸಲ ತೀಕ್ಷ್ಣದೃಷ್ಟಿಯಿಂದ ರಾಜುವನ್ನು ನೋಡಿದಳು.

ರಾಜ ಏಳಬಯಸುತ್ತಿದ್ದರೂ, ಜನತೆಯ ನಗು ಅವನನ್ನು ಹಿಂದಕ್ಕೆ ಎಳೆಯಿತು. ತಮ್ಮಿಬ್ಬರಲ್ಲಿಯ ಅಂತರವನ್ನು ಅವನ ಮನಸ್ಸು ಅಳೆಯತೊಡಗಿತ್ತು.

ರಾಜುವಿನ ಹೇಡಿತನ ಸುಬ್ಬಮ್ಮನ ಲಕ್ಷ್ಯಕ್ಕೆ ಬಾರದೆಹೋಗಲಿಲ್ಲ. ಯಾವುದೋ ಒಂದು ಪಾಶವೀಧೈರ್ಯ ಅವಳಲ್ಲಿ ಸಂಚಾರವಾಯಿತು. ಆ ಕರ್ಕಶನಗುವಿನ ಮಧ್ಯದಲ್ಲಿಯೇ, ೪-೫ ಹೆಜ್ಜ ಸಭಾಸ್ಥಾನದಲ್ಲಿ ಮುಂದೆ ಸರಿದಳು. ಅವಳಿಗೆ ತಿಳಿಯದ ಹಾಗೆ ಅವಳ ಕೈ ಎದೆಯ ಮೇಲಣ ಸೆರಗಿನ ಪರೆಗೆ ಹೋಯಿತು. ಅಲ್ಲಿಂದ ಅವಳ ಕೈಗೆ ಬಂದುದು ಗೇಣುದ್ದದ ಚೂರಿ.

ಇದ್ದಕ್ಕಿದ್ದಂತೆಯೇ ಸಭೆಯಲ್ಲಿ ಶಾಂತತೆ ವ್ಯಾಪಿಸಿತು. ಸುಬ್ಬಮ್ಮ ಒಮ್ಮೆಲೇ ಚೀರಿದಳು:

“ ಹಾವಿಗೆ ಹಾಲುಣಿಸಿದೆ! ನೀನು ಯಂತ್ರವನ್ನು ಹುಡುಕಿ ನನ್ನ ಮಗನನ್ನು ಕೊಂದೆ! ನಾನು ನಿನಗೆ ಹಾಲಿಗಾಗಿ ಮೊಲೆ ಕೊಟ್ಟರೆ, ನೀನು ನನ್ನ ರಕ್ತ ಹೀರಿದೆ! ಹಿಡೀ, ನಾನೂ ಸೇಡು ತೀರಿಸಿಕೊಳ್ಳುತ್ತೇನೆ! ” ಆ ವಾಕ್ಯ ಮುಗಿಯುವ ಮೊದಲೇ ಕೈಯಲ್ಲಿಯ ಚೂರಿಯನ್ನು ರಾಜನತ್ತ ಸುಬ್ಬಮ್ಮ ಬೀಸಾಡಿದಳು. ಹೇಳಿಕೇಳಿ ಅವಳು ಮುದುಕಿ; ಗುರಿ ತಪ್ಪಿತು. ರಾಜ ಕುಳಿತ ಖುರ್ಚಿಯ ಮೇಲ್ಭಾಗಕ್ಕೆ ಅದು ಬಡಿದಿತ್ತು.

ಸಭೆಯಲ್ಲಿ ಒಂದೇ ಒಂದು ಕೋಲಾಹಲವೆದ್ದಿತು. ಸುಬ್ಬಮ್ಮನನ್ನು ಕರೆದುತಂದ ಪೋಲೀಸ ಹವಾಲ್ದಾರನೇ ಅವಳನ್ನು ಬಂಧಿಸಿ, ಅವಳ ಕೈಗೆ ಬೇಡಿತೊಡಿಸಿ, ಅವಳನ್ನು ಹೊರಗೆ ಕರೆದುಕೊಂಡು ನಡೆದ. ಸುಬ್ಬಮ್ಮ ಮತ್ತೆ ಚೀರಿದಳು.

“ ಪಶು— ರಾಕ್ಷಸ. ಧಿಕ್ಕಾರ! ” ಸುಬ್ಬಮ್ಮನನ್ನು ಸಭಾಭವನದಿಂದ ಹೊರಗೆ ಕರೆದೊಯ್ದ ಬಳಿಕ, ಸಭೆಯಲ್ಲಿಯ ಕೋಲಾಹಲ

([illegible]ನೆಯ ಪುಟ ನೋಡಿರಿ)

ಅನಿಲ ಶಕ್ತಿ

(GAS ENERGY)

ಶ್ರೀ. ಬಿ ವಿರುಪಾಕ್ಷಪ್ಪ, ಎಂ. ಎಸ್‌ಸಿ., ಹೈದರಾಬಾದ

★

ಇಂದಿನ ವೈಜ್ಞಾನಿಕ ಜಗತ್ತಿನಲ್ಲಿ, ವಿದ್ಯುಚ್ಛಕ್ತಿಗೆ ತುಂಬ ಬೆಲೆಯಿದೆಯಾದರೂ ಅದರ ಅಭಾವವಿದ್ದಲ್ಲಿ ಶಕ್ತಿಸಂಚಯನಕ್ಕಾಗಿ ಅನಿಲಗಳು ಬೇಕಾಗುತ್ತವೆ. ಇಂತಹ ಅನಿಲಗಳು ಯಾವು-ಯಾವವು ?

★

ಶಕ್ತಿಯು ಅನಂತರೂಪದಲ್ಲಿ ಪ್ರಕಟವಾಗುತ್ತದೆ ಬೆಳಕು, ಉಷ್ಣ ಹಾಗು ಶಬ್ದ ಮುಂತಾದುವುಗಳು ಇದರ ಅನಂತ ರೂಪದ ಮುಖ್ಯ ಉದಾಹರಣೆಗಳಾಗಿವೆ. ನಿತ್ಯಜೀವನದಲ್ಲಿ, ಸೃಷ್ಟಿಯಲ್ಲಿ ನಡೆಯುತ್ತಿರುವ ಅನೇಕ ವ್ಯವಹಾರಗಳಿಗೂ, ಔದ್ಯೋಗಿಕ-ಕ್ಷೇತ್ರದಲ್ಲಿ ನಡೆಯುತ್ತಿರುವ ನಾನಾತರದ ಚಟುವಟಿಕೆಗಳಿಗೂ ಪ್ರತ್ಯಕ್ಷ ರೂಪದಿಂದಾಗಲಿ, ಅಪ್ರತ್ಯಕ್ಷ ರೂಪದಿಂದಾಗಲಿ, ಉಷ್ಣ ಮತ್ತು ಬೆಳಕು ಮುಂತಾದುವುಗಳಿಂದ ಸಹಾಯ ದೊರಕುತ್ತದೆ. ಅದರಲ್ಲಿಯೂ ಔದ್ಯೋಗಿಕಕ್ಷೇತ್ರದ ಯಾವತ್ತೂ ಕಾರ್ಯಕಲಾಪಗಳು ಉಷ್ಣರೂಪದಲ್ಲಿ ಸಿಕ್ಕುತ್ತಿರುವ ಶಕ್ತಿಯನ್ನವಲಂಬಿಸಿವೆ. ನಮ್ಮ ನವನಾಗರಿಕತೆಯು ಈ ಭವ್ಯವಾದ ಕಟ್ಟಡದ ಭದ್ರತೆಯು ಆಧುನಿಕ ಔದ್ಯೋಗಿಕ ಚಟುವಟಿಕೆಗಳ ಪ್ರಗತಿಯನ್ನವಲಂಬಿಸಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಈ ಮೊದಲೇ ತಿಳಿಸಿದಂತೆ ಔದ್ಯೋಗಿಕ ಪ್ರಗತಿಯ ಮುಖ್ಯ ಸಾಧನವೆಂದರೆ ಉಷ್ಣತೆ ಹಾಗು ಬೆಳಕಿನ ರೂಪದಲ್ಲಿ ನಮಗೆ ಸಿಕ್ಕುತ್ತಿರುವ ಶಕ್ತಿ. ಕಾರಣ, ಈ ಶಕ್ತಿ ನಮಗೆಲ್ಲಿಂದ ಬರುತ್ತಿದೆ? ಇದನ್ನು ದೊರಕಿಸುವ ಸಾಧನಗಳಾವುವು? ಅದರಲ್ಲಿಯೂ ಹೆಚ್ಚು ಉಪಯುಕ್ತ ಸಾಧನವಾವುದು ?—ಮುಂತಾದ ವಿಷಯಗಳನ್ನು ಕೂಲಂಕಷವಾಗಿ ಚರ್ಚಿಸುವುದವಶ್ಯವಾಗಿದೆ.

ವಿದ್ಯುತ್‌ಶಕ್ತಿಯಿಂದ ಉಷ್ಣತೆ, ಬೆಳಕು ಮುಂತಾದ ಶಕ್ತಿಯ ರೂಪಗಳನ್ನು ಸುಲಭವಾಗಿ ದೊರಕಿಸಿಕೊಂಡು, ಅನೇಕ ಕಾರ್ಯಗಳನ್ನು ಸಾಗಿಸಬಹುದು. ಇದೇ ಕ್ರಮವನ್ನನುಸರಿಸಿ ಎಲ್ಲ ಪ್ರಗತಿಪರ ರಾಷ್ಟ್ರಗಳಲ್ಲಿ ಔದ್ಯೋಗಿಕ ಪ್ರಗತಿಯನ್ನು ಸಾಧಿಸಲಾಗುತ್ತಿದೆ; ಆದರೆ ವಿದ್ಯುತ್‌ಶಕ್ತಿಯ ವಿಷಯಕ್ಕೆ ಒಂದು ಮಾತನ್ನು ಮಾತ್ರ ಗಮನದಲ್ಲಿಟ್ಟುಕೊಳ್ಳಬೇಕು. ವಿದ್ಯುತ್‌ಶಕ್ತಿ ಎಲ್ಲ ದೇಶಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಔದ್ಯೋಗಿಕ ಹಾಗೂ ನಿತ್ಯೋಪಯೋಗಿ ವ್ಯವಹಾರಗಳಿಗೆ ಸುಲಭವಾಗಿ ಸಿಕ್ಕುವುದು ಕಷ್ಟಸಾಧ್ಯ. ಜಲಪಾತ ಮುಂತಾದ ನೈಸರ್ಗಿಕ ಸಾಧನಗಳಿಂದ ದೊರಕುತ್ತಿರುವ ದೇಶಗಳಲ್ಲಿ ವಿದ್ಯುತ್‌ಶಕ್ತಿಯನ್ನು ಸಕಲ ಕಾರ್ಯಗಳಿಗೂ ಉಪಯೋಗಿಸಬಹುದು. ನಾರ್ವೆಯಂಥ ರಾಷ್ಟ್ರಗಳಿಗೆ ಈ ಮಾತು ಹೆಚ್ಚು ಅನ್ವಯಿಸುತ್ತದೆ. ಅಲ್ಲಿ ನೈಸರ್ಗಿಕವಾಗಿ ವಿದ್ಯುತ್ತು ಬೇಕಾದಷ್ಟು ದೊರೆಯುವುದರಿಂದ ಶಕ್ತಿಯನ್ನು ಇತರ ಸಾಧನಗಳಿಂದ ದೊರಕಿಸಿಕೊಳ್ಳುವ ಸಮಸ್ಯೆಯೇ ತಲೆದೋರುವುದಿಲ್ಲ. ಆದರೆ ನೈಸರ್ಗಿಕ ಸಾಧನಗಳ ಅಭಾವವಿರುವ ಭಾರತದಂತಹ ರಾಷ್ಟ್ರಗಳಲ್ಲಿ, ವಿದ್ಯುತ್ತನ್ನು ಕೇವಲ ಅನಿವಾರ್ಯ ಪಕ್ಷದಲ್ಲಿ ಮಾತ್ರ ಉಪಯೋಗಿಸಿ, ಇತರ ಕಾರ್ಯಗಳಿಗೆ ಬೇರೆ ಸಾಧನಗಳಿಂದ ದೊರಕುವ ಶಕ್ತಿಯನ್ನುಪಯೋಗಿಸುವುದತ್ಯವಶ್ಯವಾಗುತ್ತದೆ.

ವಿದ್ಯುತ್ತನ್ನು ಬಿಟ್ಟರೆ ಶಕ್ತಿಯ ಅನಂತ ರೂಪಗಳಾದ ಉಷ್ಣತೆ ಹಾಗು ಬೆಳಕು ಮುಂತಾದುವುಗಳನ್ನು ದೊರಕಿಸಿಕೊಳ್ಳುವ ಇನ್ನೊಂದು ಸುಲಭ ಮತ್ತು ಯೋಗ್ಯ ಸಾಧನವೆಂದರೆ ಅನಿಲಗಳು ಅಥವಾ Gases ಎಂದು ಹೇಳಬಹುದು. ಕಲ್ಲಿದ್ದಲು, ಇದ್ದಿಲು ಮತ್ತು ಕಟ್ಟಿಗೆ ಮುಂತಾದ ಘನಪದಾರ್ಥಗಳನ್ನು—ಪೆಟ್ರೋಲ್ ಕಲ್ಲೆಣ್ಣೆ ಡಿಸಿಲ್ ಆಯಿಲ್ ಮುಂತಾದ ದ್ರವಪದಾರ್ಥಗಳನ್ನು—ಉರುವಲದಂತೆ ಉಪಯೋಗಿಸಿ ಶಕ್ತಿಯನ್ನು ದೊರಕಿಸಿಕೊಳ್ಳಬಹುದು. ಆದರೆ ಇವುಗಳ ಉಪಯೋಗದಿಂದ ಔದ್ಯೋಗಿಕ ಕ್ಷೇತ್ರದಲ್ಲಿ ಶಿಸ್ತು ಮತ್ತು ಸ್ವಚ್ಛತೆಯಿಂದ ಕಾರ್ಯ ಸಾಗಿಸಲಾಗುವುದಿಲ್ಲ ಮತ್ತು ಇವುಗಳಿಂದ ಉತ್ಪನ್ನವಾಗುವ ಉಷ್ಣತೆಯನ್ನು ಬೇಕಾದ ಹಾಗೆ ಹತೋಟಿಯಲ್ಲಿಟ್ಟುಕೊಳ್ಳಲು ಬರುವಂತಿಲ್ಲ. ಇದಲ್ಲದೆ ಇವು ಭಾರವಾದ ವಸ್ತುಗಳಾದುದರಿಂದ, ಇವುಗಳನ್ನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸಲು ವಿಶೇಷ ಖರ್ಚು ಬರುತ್ತದೆ. ಆದರೆ ಇದೇ ವಸ್ತುಗಳನ್ನು ವಾಯುರೂಪದಲ್ಲಿ ಅಥವಾ ಅನಿಲರೂಪದಲ್ಲಿ ಪರಿವರ್ತಿಸಿ, ಅವುಗಳನ್ನು ಶಕ್ತಿಯ ಸಾಧನವನ್ನಾಗಿ ಮಾಡಿಕೊಂಡರೆ, ಮೊದಲು ಹೇಳಿದ ಎಲ್ಲ ತೊಡರುಗಳು ದೂರವಾಗಬಹುದು. ನೀರಿನಂತೆ ಅನಿಲವನ್ನು ಒಂದು ಸ್ಥಳದಲ್ಲಿ ಶೇಖರಿಸಿ, ನಳಗಳ ದ್ವಾರದಿಂದ ಬೇಕಾದ ಸ್ಥಳಕ್ಕೆ ಒಯ್ದು, ಉರುವಲದಂತೆ ಉಪಯೋಗಿಸಿ, ಅದರಿಂದ ಉಷ್ಣತೆಯನ್ನೂ ಬೆಳಕನ್ನೂ ದೊರಕಿಸಿಕೊಳ್ಳಬಹುದು. ಎಂಜಿನ್ನುಗಳಲ್ಲಿ ಇದನ್ನು ಉರಿಯಿಸಿ ಸಿಕ್ಕಬಹುದಾದ ಉಷ್ಣತೆಯಿಂದ ಅವುಗಳನ್ನು ನಡೆಯಿಸಬಹುದು.

ಅನಿಲಗಳ (Gases) ಉಪಯುಕ್ತತೆಯ ಬಗ್ಗೆ ಇವಿಷ್ಟು ಮಾತುಗಳನ್ನು ಹೇಳಿದ ಮೇಲೆ, ಔದ್ಯೋಗಿಕ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ವಿಶೇಷ ಉಪಯೋಗದಲ್ಲಿರುವ ಕೆಲವು ಅನಿಲಗಳ ಸಂಕ್ಷಿಪ್ತ ಸಂಗತಿಯ ಕಡೆಗೆ ನಮ್ಮ ದೃಷ್ಟಿಯನ್ನು ಹಾಕೋಣ:

ಅಂಗಾರಾನಿಲ (Producer gas)

ಇದು ಉರುವಲ ಅನಿಲಗಳಲ್ಲಿ ಬಹು ಮುಖ್ಯವಾದ ಅನಿಲ. ಕೆಂಗಾದ ಕೋಕಿನ ಮೇಲೆ ಗಾಳಿಯನ್ನು ಹಾಯಿಸಿ, ಅಂಗಾರಾನಿಲ (Producer gas) ವನ್ನು ತಯಾರ್ ಮಾಡುತ್ತಾರೆ. ಅಂಗಾರಾ-

ನಿಲದಲ್ಲಿ **ಇಂಗಾಲದ ಮೊನಾಕ್ಸಾಯಡ್ (Carbon monoxide)** ಸಾರಜನಕ (Nitrogen) ಮತ್ತು ಇನ್ನು ಕೆಲವು ಅನಿಲಗಳಿರುತ್ತವೆ. **ಇದು ಔದ್ಯೋಗಿಕ ದೃಷ್ಟಿಯಿಂದ** ಬಹಳ ಮುಖ್ಯವಾದ ಅನಿಲ. **ಗಾಜು ಮತ್ತು** ಉಕ್ಕು ಮುಂತಾದ ನಿತ್ಯೋಪಯೋಗಿ ಪದಾರ್ಥಗಳನ್ನು ತಯಾರಿಸುವ ಔದ್ಯೋಗಿಕ ಭಟ್ಟಿಗಳಲ್ಲಿ (Indust ial laranace) ಇದನ್ನು ವಿಶೇಷವಾಗಿ ಉಪಯೋಗ ಮಾಡುತ್ತಾರೆ. **ದೊಡ್ಡ ದೊಡ್ಡ** ಫ್ಯಾಕ್ಟರಿಗಳಲ್ಲಿ ಇಂಟರ್ನಲ್ ಕಂಬಸ್ಟನ್ ಎಂಜಿನ್ (Internal combustion engine) (ಅಂತರ್ದಹನ ಎಂಜಿನ್)ಗಳಲ್ಲಿ ಇದನ್ನು ಉರಿಯಿಸಿ, ಇದರಿಂದ ವಿದ್ಯುತ್‌ಶಕ್ತಿಯನ್ನು ಉತ್ಪಾದಿಸುವ ಕಾರ್ಯ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರೂಢಿಯಲ್ಲಿದೆ.

ಜಲಾನಿಲ (Water gas) ಉಗಿ ಅಥವಾ ಹವೆಯನ್ನು ಕೆಂಪಾದ **ಕೋಕಿನ ಮೇಲೆ** ಹಾಯಿಸಿದಾಗ, ಜಲಜನಕ (Hydrogen) ಮತ್ತು ಇಂಗಾಲದ ಮಾನಾಕ್ಸಾಯಡುಗಳ ಮಿಶ್ರಣವಾದ ಅನಿಲವು ಉತ್ಪತ್ತಿಯಾಗುತ್ತದೆ. ಇದಕ್ಕೆ ಜಲಾನಿಲ ಎನ್ನುತ್ತಾರೆ. ಇದನ್ನು ಉರುವಲದಂತೆ ವಿಶೇಷವಾಗಿ ಉಪಯೋಗಿಸುತ್ತಾರೆ. ಇದಲ್ಲದೆ ಇಂದು ನಾಳೆ ಇದರಿಂದ ದೊಡ್ಡ ಪ್ರಮಾಣದಲ್ಲಿ ಜಲಜನಕವನ್ನು ತಯಾರಮಾಡಲಾಗುತ್ತದೆ. ಹೀಗೆ ತಯಾರಿಸ್ಪಟ್ಟ ಜಲಜನಕದಿಂದ "ಜಲಜನಕ ಮಿಶ್ರಿತ ಎಣ್ಣೆ" (Hydrogenated oils) ಮುಂತಾದ ಉಪಯುಕ್ತ ಪದಾರ್ಥಗಳನ್ನು ಸಿದ್ಧಪಡಿಸಲಾಗುತ್ತದೆ. ಉದಾಹರಣೆಗಾಗಿ ವನಸ್ಪತಿ ತುಪ್ಪವೆಂದು ಪ್ರಸಿದ್ಧವಿರುವ ಡಾಲ್ಡಾದ ಹೆಸರನ್ನು ಇಲ್ಲಿ ತೆಗೆದುಕೊಳ್ಳಬಹುದು. ಈ ದೃಷ್ಟಿಯಿಂದಲೂ ಜಲಾನಿಲದ ಮಹತ್ತ್ವ ದಿನೇ ದಿನೇ ಹೆಚ್ಚಾಗಹತ್ತಿದೆ.

ಕೋಲ್‌ಗ್ಯಾಸ್ (coal gas)

ಇದು ಅನೇಕ ಅನಿಲಗಳ ಮಿಶ್ರಣ. ವಿಶೇಷವಾಗಿ ಇದರಲ್ಲಿ ಇಂಗಾಲದ ಮಾನಾಕ್ಸಾಯಡ್, ಜಲಜನಕ, ಸಾರಜನಕ, ಎಥಿಲೀನ್, ಎಸ್‌ಟಿಲೀನ್, ಆಮ್ಲಜನಕ ಮತ್ತು ಮಾರ್ಷಗ್ಯಾಸ್ ಮುಂತಾದ ಅನಿಲಗಳು ಕೂಡಿರುತ್ತವೆ. ಇದನ್ನು ತಯಾರಿಸಲೋಸುಗ ಕಲ್ಲಿದ್ದಲನ್ನು ಸಂಪೂರ್ಣವಾಗಿ ಭಟ್ಟಿಯಿಳಿಸಲಾಗುತ್ತಿದೆ. ಭಟ್ಟಿಯಿಳಿಯಿಸುವ ಸಮಯದಲ್ಲಿ, ಇದ್ದಲಿನಿಂದ ಹೊರಡುವ ಅನೇಕ ಅನಿಲಗಳನ್ನು ಒಂದೆಡೆ ಸಂಗ್ರಹಿಸಲಾಗುತ್ತದೆ. ಹೀಗೆ ಸಂಗ್ರಹಿಸಲ್ಪಟ್ಟ ಅನಿಲಗಳ ಮಿಶ್ರಣಕ್ಕೆ 'ಕೋಲಗ್ಯಾಸ್' ಎಂದು ಕರೆಯುತ್ತಾರೆ. ಕೋಲಗ್ಯಾಸ್ ಬಹಳೇ ಉಪಯೋಗವುಳ್ಳ ಅನಿಲ. ಇದನ್ನು ಗಾಳಿಯೊಂದಿಗೆ ಬೆರಸಿ ಉರಿಸುತ್ತಾರೆ. ವಿಶೇಷವಾಗಿ ಇದರಿಂದ ಬೆಳಕನ್ನು ದೊರಕಿಸಿಕೊಳ್ಳಲಾಗುತ್ತಿದೆ. ಸನ್ ೧೭೯೨ ರಲ್ಲಿ ವಿಲಿಯಮ್ ಮುರಡಾಕ್ (weliiom murdock) ಎಂಬ ವಿಜ್ಞಾನಿ, ಮೊದಲನೆ ಸಲ ಈ ಅನಿಲವನ್ನು ಉರಿಯಿಸಿ, ಇದರ ದೀಪಗಳಿಂದ ತನ್ನ ಮನೆಯನ್ನು ಪ್ರಕಾಶಗೊಳಿಸಿದ. ಸನ್ ೧೮೧೦ ರಲ್ಲಿ ಲಂಡನ್ ಬೀದಿಗಳನ್ನು ಇದರ ದೀಪಗಳಿಂದ ಬೆಳಗಿಸಲಾಯಿತು. ಸನ್ ೧೮೫೭ರಲ್ಲಿ ಭಾರತದಲ್ಲಿ ಮೊದಲನೆ ಸಲ, ಕಲಕತ್ತಾ ಪಟ್ಟಣದ ಬೀದಿಗಳಲ್ಲಿ ಈ ದೀಪಗಳು ಕಂಗೊಳಿಸಿದುವು. ಇಂದಿಗೂ ಭಾರತದ ಅನೇಕ ಪಟ್ಟಣಗಳಲ್ಲಿ ಕೋಲಗ್ಯಾಸಿನ ದೀಪಗಳಿಂದ ಬೆಳಕನ್ನು ದೊರೆಕಿಸಿಕೊಳ್ಳಲಾಗುತ್ತಿದೆ. ಸನ್ ೧೮೫೫ ರಲ್ಲಿ ಬನ್‌ಸನ್‌ನೆಂಬ ವಿಜ್ಞಾನಿಯು, ಬನ್‌ಸನ್ ಬರ್ನರ್ ಎಂಬ ದೀಪಕವನ್ನು ರೂಢಿಯಲ್ಲಿ ತಂದನು. ಇದರ ಸಹಾಯದಿಂದ ಅನಿಲವನ್ನು ಉರಿಯಿಸಿ, ಅದರಿಂದ ಸಣ್ಣ ಪ್ರಮಾಣದ ಮೇಲೆ ಬೆಳಕನ್ನು ವಿಶೇಷತಃ ಉಷ್ಣತೆಯನ್ನು ದೊರೆಕಿಸಿಕೊಳ್ಳಲು ಬಹಳೇ ಅನುಕೂಲವಾಯಿತು. ಬನ್‌ಸನ್ ದೀಪಕವು ಬಳಕೆಯಲ್ಲಿ ಬಂದಾಗಿನಿಂದ ಕೋಲಗ್ಯಾಸಿನ ಉಪಯೋಗವು ದಿನೇ ದಿನೇ ಹೆಚ್ಚಾಗುತ್ತ ನಡೆಯಿತು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿದ್ಯುತ್‌ಶಕ್ತಿಯ ಬಳಕೆ ವಿಶೇಷವಿಲ್ಲದ ಕಾಲದಲ್ಲಿ ಅಂದರೆ ಸುಮಾರು ೧೯ನೆಯ ಶತಮಾನದ ಮಧ್ಯದಲ್ಲಿ ಮನೆಯ ಎಲ್ಲ ನಿತ್ಯೋಪಯೋಗಿ ವ್ಯವಹಾರಗಳಲ್ಲಿ ಬನಸನ್ ದೀಪಕವನ್ನು ಉಪಯೋಗಿಸಲಾಗುತ್ತಿತ್ತು. ಕೆಲವು ದಿವಸಗಳ ಮೇಲೆ ಮೇಕರ್ ದೀಪಕವು ಬಳಕೆಯಲ್ಲಿ ಬಂದಿತು ಇದರಿಂದ ಬನ್‌ಸನ್ ದೀಪಕಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಉಷ್ಣತೆ ಸಿಕ್ಕುತ್ತದೆ. ಅನಂತರ ಗ್ಯಾಸ್ ಸ್ಟೋಗಳು ಬಳಕೆಯಲ್ಲಿ ಬಂದುವು. ಇವೆಲ್ಲ ಯಂತ್ರಗಳ ರಚನೆಯಿಂದ, ಕೋಲಗ್ಯಾಸ್ ಮತ್ತು ಇತರ ಅನಿಲಗಳ ಉಪ-

---

(೨೫ನೆಯ ಪುಟದಿಂದ ಮುಂದುವರಿದುದು)

ಮಾಯವಾಯಿತು. ಆದರೆ ರಾಜ ದಂಗುಬಡೆದವನಂತೆ ಕುಳಿತುಬಿಟ್ಟಿದ್ದ. ರಾಜ ಅಪಾಯದಿಂದ ಪಾರಾದ ಬಗ್ಗೆ ಜನ ಅವನಿಗೆ ಅಭಿನಂದನೆಗಳನ್ನು ಅರ್ಪಿಸುತ್ತಿದ್ದರು. ಆದರೆ ರಾಜನ ಕಿವಿ....? ತನ್ನ ಕಣ್ಣೆದುರಿನಲ್ಲಿ ಸುಬ್ಬಮ್ಮನಂತಹ ಸಹಸ್ರಾರು ಮುದುಕಿಯರು ತನತ್ತ ಕೈಮಾಡಿ ಅತ್ತು ಕರೆಯುತ್ತಿರುವಂತೆ ರಾಜನಿಗೆ ಭಾಸವಾಗತೊಡಗಿತು. ರಾಜುವಿನ ಹೃದಯದಲ್ಲಿಯ ಹೊಯ್ದಾಟ ಆ ಸಹಸ್ರಾರು ಮುದುಕಿಯರ ಭೀಕರ ಕೂಗಿಗೆ ಹೆಚ್ಚಾಯಿತು. ಅದೇ ಹುಚ್ಚಿನಲ್ಲಿ ರಾಜ ತನ್ನ ಖುರ್ಚಿಯನ್ನು ಬಿಟ್ಟೆದ್ದ ಜನ ಅವನನ್ನೀ ದಿಟ್ಟಿಸತೊಡಗಿದರು. ರಾಜನ ಕಣ್ಣೆದುರಿನಲ್ಲಿ ಮತ್ತೆ ನಿರುದ್ಯೋಗಿ ಪುತ್ರರನ್ನು ಕಳೆದುಕೊಂಡ ಮುದುಕಮಾತೆಯರ ಭೀಕರತಂಡ ಕಾಣಿಸಿದಂತೆ ಭಾಸವಾಯಿತು. ಆಗ ಪೂರ್ಣ ಎಚ್ಚರದಪ್ಪಿದ ರಾಜ, ಟೇಬಲ್ಲಿನ ಮೇಲಿರಿಸಿದ ಯಂತ್ರದ ಮಾದರಿಯನ್ನು ತನ್ನ ಎಡೆಗಾಲ ಬೂಟಿನಿಂದ ಒದೆದುಬಿಟ್ಟ. ಯಂತ್ರ ಮುರಿದು ತುಂಡುತುಂಡಾಗಿ ಬಿದ್ದಿತು. ಕೂಡಿದ ಜನ ದಿಗ್ಭ್ರಾಂತರಾದರು. ಆದರೆ ಮಶಿನ್ನಿನ ಬಿದ್ದ ತುಂಡುಗಳು ಗಹಗಹಿಸಿ ನಕ್ಕು, ತನ್ನನ್ನು ಅಣಕಿಸುವಂತೆ ಭಾಸವಾಯಿತು.

"ಪಶು, ರಾಕ್ಷಸ— ಧಿಕ್ಕಾರ!" ಬಿದ್ದ ತುಂಡುಗಳ ಸಪ್ಪಳದಲ್ಲಿ ಈ ಶಬ್ದಗಳು ರಾಜನ ಕಿವಿಗೆ ಕೇಳಿಸುತ್ತಿದ್ದುವು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ {ನೀಲ} ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ ಬೆಳೆಸುತ್ತದೆ. ಬಾಲನರಿಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ {ಜೀವಿನಿ} ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ {ಪಂಚವಟಿ} ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು ಆಯುರ್ವೇದೀಯ ಔಷಧಗಳು ತಯಾರಾಗುವ

ಕಾರಖಾನೆ.

ಯುಕ್ತತೆ ಬೆಳೆಯುತ್ತ ಹೋಯಿತು. ಸುಮಾರು ಎಲ್ಲ ದೇಶಗಳಲ್ಲಿ ಇಂದಿಗೂ ಬನಸನ್ ಬರ್ನರ್ ಮತ್ತು ಗ್ಯಾಸ್ ಸ್ಟೋಗಳು ವೈಜ್ಞಾನಿಕ ಪ್ರಯೋಗಶಾಲೆಗಳಲ್ಲಿ ಬಳಕೆಯಲ್ಲಿವೆ. ಶಾಲೆ. ಕಾಲೇಜುಗಳ ಪ್ರಯೋಗಶಾಲೆಗಳಲ್ಲಿ ಇವುಗಳಿಂದಲೇ ಕೆಲಸ ತೆಗೆದುಕೊಳ್ಳಲಾಗುತ್ತಿದೆ.

ಕೋಲಿನಿಂದ ಕೋಲ್‌ಗ್ಯಾಸನ್ನು ತಯಾರಿಸುವಾಗ ಸಂಜನಿತ-ರೂಪವಾಗಿ ಅಥವಾ ಉಪವಸ್ತುಗಳಂತೆ, ಕೋಲ್‌ಟಾರ್, ಬೆಂಝೀನ್, ಫೀನಾಯಿಲ್, ಅಮೋನಿಯಾ, ಗ್ಯಾಸ್‌ಲೈಮ್ ಮತ್ತು ಗ್ಯಾಸ್ ಕಾರ್ಬನ್ ಮುಂತಾದ ಬಹು ಉಪಯುಕ್ತ ಪದಾರ್ಥಗಳು ನಮ್ಮ ಕರ ಸೇರುತ್ತವೆ. ಉಪವಸ್ತುವಿನಂತೆ ಸಿಕ್ಕುತ್ತಿರುವ ಅಮೋನಿಯಾದಿಂದ ಅತ್ಯುತ್ತಮ ಕೃತ್ರಿಮ ಗೊಬ್ಬರವಾದ ಅಮೋನಿಯಮ್ ಸಲ್ಫೇಟ್ (Ammoniam sulphate) ನ್ನೂ ಸಿದ್ಧಪಡಿಸಲಾಗುತ್ತಿದೆ. ಈ ಕಾರ್ಯದತ್ತ ಇತ್ತೀಚೆಗೆ ಭಾರತ ಸರಕಾರವು ಕೂಡ ಸಾಕಷ್ಟು ಗಮನಕೊಟ್ಟಿದೆ. ಒಟ್ಟಿನ ಮೇಲೆ ಕೋಲ್‌ಗ್ಯಾಸ್ ಸ್ವತಃ ತನ್ನ ಉಪಯುಕ್ತತೆಯ ದೃಷ್ಟಿಯಿಂದಲೂ ಅದರ ತಯಾರಿಕೆಯಲ್ಲಿ ಸಿಕ್ಕುವ ಉಪವಸ್ತುಗಳ (By product) ದೃಷ್ಟಿಯಿಂದಲೂ ಹೇಳತೀರದಷ್ಟು ಮಹತ್ವವುಳ್ಳ ವಸ್ತುವಾಗಿದೆ.

ಈ ಮೂರು ಅನಿಲಗಳಲ್ಲದೆ ಮಾರ್ಷಗ್ಯಾಸ್, ಸೆಮಿವಾಟರ್ ಗ್ಯಾಸ್, ಕ್ಯಾರೊಸಿನ್ ಆಯ್ಲ ಗ್ಯಾಸ್ ಮತ್ತು ಕಾರಖಾನೆಗಳಲ್ಲಿ ಹಾಳಾಗುವ ಇನ್ನಿತರ ಅನಿಲಗಳು, ಉರುವಲ ಅನಿಲಗಳ ಮಾಲಿಕೆಯಲ್ಲಿ ಸೇರುತ್ತವೆ.

ಅನಿಲಶಕ್ತಿಯ ಸಂಬಂಧವಾಗಿ ಮಾತನಾಡುವಾಗ ಆಮ್ಲಜನಕ, ಜಲಜನಕ ಜ್ವಾಲೆ ಹಾಗೂ ಆಮ್ಲಜನಕ-ಎಸ್‌ಟಲೀನ ಜ್ವಾಲೆಯ ಬಗ್ಗೆ ನಾಲ್ಕು ಮಾತುಗಳನ್ನು ಹೇಳದೆ ಬಿಟ್ಟರೆ ವಿಷಯ ಮುಗಿದಂತಾಗುವುದಿಲ್ಲ. ಆಮ್ಲಜನಕವನ್ನು ಜಲಜನಕದೊಡನೆ ಯೋಗ್ಯ ಪ್ರಮಾಣದಲ್ಲಿ ಬೆರಸಿ ಉರಿಯಿಸಿದರೆ, ಅತ್ಯುನ್ನತ ಉಷ್ಣತೆಯುಳ್ಳ ಜ್ವಾಲೆ ಉತ್ಪತ್ತಿಯಾಗುತ್ತದೆ. ಇದರ ಉಷ್ಣ ಸುಮಾರು ೨೫೦೦°c. ಡಿಗ್ರಿ ಇರುತ್ತದೆ. ಎಂದರೆ ಈ ಜ್ವಾಲೆಯಲ್ಲಿ ಅನೇಕ ಲೋಹಗಳು ಕರಗಿ ನೀರಾಗುತ್ತವೆ. ಕಾರಣ ಇದನ್ನು ಲೋಹಗಳನ್ನು ಬೆಸೆಯುವ ಕೆಲಸದಲ್ಲಿ ಉಪಯೋಗಿಸುತ್ತಾರೆ.

ಆಮ್ಲಜನಕದೊಡನೆ ಎಸ್‌ಟಲೀನ್ ಅನಿಲವನ್ನು ಬೆರೆಯಿಸಿ ಉರಿಸಿದರೆ ಆಮ್ಲಜನಕ, ಜಲಜನಕ ಜ್ವಾಲೆಗಿಂತ ಹೆಚ್ಚು ಉಷ್ಣತೆಯುಳ್ಳ ಜ್ವಾಲೆ ಉತ್ಪತ್ತಿಯಾಗುತ್ತದೆ. ಇದಕ್ಕೆ ಆಮ್ಲಜನಕ-ಎಸ್‌ಟಲೀನ್ ಜ್ವಾಲೆಯೆನ್ನುತ್ತಾರೆ. ಈ ಜ್ವಾಲೆಯಲ್ಲಿ ಪ್ಲ್ಯಾಟಿನಂ ಲೋಹ ಕೂಡ ಕರಗುತ್ತದೆ. ಈ ಜ್ವಾಲೆ ಉಕ್ಕು ಕತ್ತರಿಸುವ ಕೆಲಸದಲ್ಲಿ ಬಹಳ ಉಪಯೋಗವಾಗವಾಗುತ್ತಿದೆ. ಕಾರಣ ಅನಿಲಗಳಲ್ಲಿ ಎಂಥ ಅಗಾಧ ಶಕ್ತಿ ಹುದುಗಿದೆ ಎಂಬದನ್ನು ತಾವು ಮನಗಾಣಬೇಕು.

ಈ ಪ್ರಕಾರ ಅನಿಲಗಳಿಂದ ನಾನಾರೂಪವಾಗಿ ಸಿಕ್ಕುತ್ತಿರುವ ಶಕ್ತಿಯನ್ನು, ಔದ್ಯೋಗಿಕ ಹಾಗೂ ನಿತ್ಯೋಪಯೋಗಿ ವ್ಯವಹಾರಗಳಲ್ಲಿ ಉಪಯೋಗಿಸಿ, ದೇಶದ ಭೌತಿಕಪ್ರಗತಿಯನ್ನು ಸಾಧಿಸಬಹುದು. ಈ ದಿಶೆಯಲ್ಲಿ, ಭಾರತವು ಸ್ವತಂತ್ರವಾದ ಮೇಲೆ ಸಾಕಷ್ಟು ಪ್ರಗತಿಯನ್ನು ಸಾಧಿಸಲು ಹಲವಾರು ಯೋಜನೆಗಳನ್ನು ಯೋಜಿಸಿದೆ. ಅವುಗಳಿಗೆ ತೀವ್ರ ಯಶಸ್ಸು ದೊರೆಯಲಿ!

ಕುಮಟಾದಲ್ಲಿ ನಮ್ಮ ಏಜಂಟರು

ದಿ ಫೋರಮ್ ಏಜನ್ಸೀಸ್, ನ್ಯೂಜ್ ಏಜಂಟ್ಸ

ಗುಡಗೇರಿಯಲ್ಲಿ ನಮ್ಮ ಏಜಂಟರು

ಶ್ರೀ. ಡಿ. ಎನ್. ಹುಲಕೋಟಿ, ನ್ಯೂಜ್ ಏಜಂಟ್

ಮಿಲನ

ಶ್ರೀ. ದ. ಲ. ಕೆರೂರ ಬಿ. ಎ. ಹುಬ್ಬಳ್ಳಿ

ಬಾ ರಮಣಿ ! ಇಂತೇಕೆ ದೂರದಲಿ ನಿಂತಿರುವೆ ?
ನಾಚಿ ಬಾಗುವುದೇಕೆ ? ನನ್ನ ತನು-ಮನಗಳನು
ನಿನಗರ್ಪಿಸಿರಲೇಕೆ ಹಿಂಜರಿವೆ ? ನಾನೇನು
ದಾನವನೆ ರಸವಂತಿ ? ಹೀಗೇಕೆ ಬೆದರಿರುವೆ ?
ತಾ ಹಾಲ ಬಟ್ಟಲನು, ಬೆದರಿ ಬಳಕುತಲಿರುವೆ,
ಕೈಯಿಂದ ಬಿದ್ದೀತು ! ಬಾ ಹೀಗೆ ನಿನ್ನ ಮನ-
ಸಿನೊಳಾವ ಭಾವನೆಯು ತೂಗುತಿದೆ ? ನೀನದನು
ತಿಳಿದಿಲ್ಲ ? ನಿನ್ನಂತೆ ನನ್ನ ಗತಿಯಿದೆ ಚಲುವೆ !
ನಿನ್ನ ದರ್ಶನದಿಂದ ಮನವುಬ್ಬಿ ಮುದದಿಂದ
ಮಾರಸಂಗರಕಿನ್ನು ನಾನೆಳೆಯುತಿರಲಾಗ,
ನಿನ್ನ ಒನಪಿನ ತಡೆಯು ಮನಸಿಗತ್ಯಾನಂದ !
ಏನೆಂದೆ ? ಜನಭೀತಳೇ ಹುಚ್ಚಿ ? ಸತಿಯೀಗ
ಪತಿಯುಲಾತ್ಮನ ಬೆರಸಲಾಧ್ಯಾತ್ಮಿಕಾನಂದ
ಕೇಳಿ ನಾಚಿದಳಿನ್ನ ಸತಿ ತೋಳ ಸೆರೆಯಾಗ.

ದಿವ್ಯವಾಣಿ

' ಚಿರಂತನ '

ಕಲಿಯ ಹಿಮ್ಮೆಟ್ಟಿಸುವ ಕಲೆಯು ಪೆರ್ಮೆಯ ಉಸಿರ
ಜಗಕೆಲ್ಲ ಸೂಸುವಾ ಖಗಕುಲದ ಕೊರಲಿಂದ,–
ಹೃದ್ಗ್ರಂಥಿಗಳ ತಣಿಸ ದಿವ್ಯ ವಾಣಿಯ ನಾದ
ತೂರಿ ಬರುತಿದೆ ಮೀರಿ ಸುಗ್ಗಿಬನಗಳ ಬಸಿರ.
ವಿಶ್ವಂಚರರ ತತ್ತ್ವ ಘೋಷವದು ; ಆಲೈಸು
ಸತ್ಯದರ್ಶನವಾಂತ ಹರ್ಷದಿಂ ಸಾರುತಿದೆ
ವಿಶ್ವವ್ಯಾಪಿಯ ಶಿವನ ಇರವನೇನಾಬೋಧೆ ! –
" ಪ್ರೀತಿವಿದಾವೇಶದಲಿ ಬನವೆ ನಳನಳಿಸು–
ತಿಹುದೆಲ್ಲ ಬಾಳ್ಗಿಹುದು ಆ ಶಿಶಿರ ಈ ಮಧು
ಹೊಸ ಚಿಗುರು, ಹೂ ಹಣ್ಣು ! (ಶಿವನ ಕರುಣೆಯ ಕಣ್ಣು
ಹಳೆಯಲಸಿಕೆಯ ದಹಿಸೆ-) ಹೊಸ ಬಾಳ ಚೆಲುಗಣ್ಣು !
ಅಂತೆ ಶಿಶಿರದಿ ಬನವ, ಬಾಳ ಚಿರ ಬಯಲೆಂದು
ಅರಿಯದುಸುರದೆ ಕರುಣೆಗಾಗಿ ಕಾದಿರೆ ನಾಸ್ತಿ–
'ಕತೆಯುಟ್ಟಿ : ಬಹ ಸೊಗವೆ ಶಿವನು ನಿರುತ ಸ್ವಸ್ತಿ ! "

ಇದುವೆ ತಾರುಣ್ಯವಿಹುದೆ !

★

ಶ್ರೀ. ದೇವೇಂದ್ರನಾಯಕ, ಧಾರವಾಡ

ಎಳತನದಿ ದಿನಗಳಿದೊ
ಒಂದೊಂದೆ ಜಾರಿಹವು
ಮುದದಲ್ಲಿ ಬೆಳೆಯುತಿರೆ;
ಒಳಗೊಳಗೆ ತನುವಿನಲಿ
ಏನೇನೊ ತುಂಬಿಹುದು
ಮನವೆಲ್ಲ ಅರಳುತಿರೆ........ (೧)
ಅದು ಯಾವ ಚೇತನವೊ
ತಿಳಿಯದಲೆ ಚಿಮ್ಮಿಹುದು
ಭರದಲ್ಲಿ ಬೆಳೆಯುತಿರೆ ;
ಅಂಗಾಂಗವೆಲ್ಲವನು
ಪೂರ್ಣತೆಯು ನಲಿಸಿಹುದು
ದಿನವೆಲ್ಲ ಉರುಳುತಿರೆ........ (೨)
ನನ್ನನ್ನೆ ನಾನೋಡಿ
ಸಮ್ಮೋಹಗೊಂಡಿಹೆನು
ಏಕೆಂದು ತಿಳಿಯದಲೆ ;
ಅಂಗಾಂಗವೆಲ್ಲವಿದು
ಜುಮ್ಮೆದ್ದಿಟ್ಟದೆ ನಡುಗಿ
ಇದುವೆ ತಾರುಣ್ಯವಿಹುದೇ........ (೩)

ಇದು ಆವ ತತ್ತ್ವ ?

★

ಶ್ರೀ. ಆರ್. ಜಿ. ಬಾರ್ಕಿ, ಜಳಗೇರಿ

೧

ಭೂಗರ್ಭದೊಳಗಿಂದ ಮೇಲೆ ಬಪ್ಪುದು ಹೊನ್ನು !
ಭೂಗರ್ಭದೊಳನುಗ್ಗಿ ಮಣ್ಣಾಗುವುದು ಹೆಣ್ಣು !
ಸಾಮ್ಯವಾಗಿದೆ ' ಮಣ್ಣು ' ಹೊನ್ನು–ಹೆಣ್ಣೆರಡಕೂ–
ಮೇಣ್ಬಿತ್ತಿ ಮಣ್ಣಿನಲಿ ಬೆಳೆದುಂಡು ಬದುಕಿಹೆವು ;
ಇಂತಿದ್ದರೂ ಜನತೆ ಹೊನ್ನು–ಹೆಣ್ಣುಗಳ ಜೊತೆಗೆ–
ಮಣ್ಣನೂ ಜರೆವುದಿದು ಆವ ತತ್ತ್ವ ?

೨

ದೇವನಿಂದೊಗೆದುಬಂದಿಹುದೊಂದು ' ಹೆಣ್ಣು ' ಕುಲ !
ಆತನಿಂದೊಗೆದು ಬಂದಿಹುದದುವೆ ' ಗಂಡು ' ಕುಲ !
ಬೇರೆ ' ಕುಲವೇ ' ಇಲ್ಲ ಮಾನವರೊಳಿವನುಳಿದು–
ಓದುತ್ತ–ನೋಡುತ್ತ–ಕೇಳುತ್ತ ಬಂದಿಹೆವು ;
ಇಂತಿದ್ದರೂ ಜನತೆ ಹೆಣ್ಣು–ಗಂಡುಗಳೊಳಗೆ–
ಮೇಲ್ಕೀಳ್ಗಳೆಣಿಪುದಿದು ಆವ ತತ್ತ್ವ ?

ಧಾರವಾಡ ಆಕಾಶವಾಣಿಯ ಹೊಸ ವ್ಯವಸ್ಥೆ

‘ ವಿಹಂಗಮ ’ನ ವರದಿ

卐

ಧಾರವಾಡದ ಬಾನುಲಿಕಟ್ಟೆಗೆ ಹೊಸ ದಿಗ್ದರ್ಶಕರು ಬಂದು ಮಾಡಿಸಿದ್ದರಿಂದಲೋ, ಹೊಸದೇನನ್ನಾದರೂ ಮಾಡಬೇಕೆಂಬ ಹಂಬಲದಿಂದಲೋ, ದೈನಂದಿನ ಕಾರ್ಯಕ್ರಮದಲ್ಲಿ ಹೊಸ ವ್ಯವಸ್ಥೆಯಾದುದನ್ನು, ರೇಡಿಯೋ ಯಂತ್ರ ಇಟ್ಟವರೆಲ್ಲರೂ ಚೆನ್ನಾಗಿ ಬಲ್ಲರು. ಕಾರ್ಯಕ್ರಮದಲ್ಲಿ ಹೊಸ ವ್ಯವಸ್ಥೆಯಾಗಿದೆಯೆಂದು ಕಂಡರೂ, ಕೇಳುತ್ತಿರುವ ಧ್ವನಿಗಳಲ್ಲಿ ವಿಶಿಷ್ಟವಾದ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲ. ಕನ್ನಡವು ಸ್ವಲ್ಪವೂ ಗೊತ್ತಿಲ್ಲದ ಅದೇ ಕಾರ್ಯಕ್ರಮ ನಿರ್ವಹಣಾಧಿಕಾರಿ, ಅದೇ ಕಾರ್ಯಕ್ರಮ ನಿರೀಕ್ಷಣಾಧಿಕಾರಿ— ಇದ್ದಾರೆ. ಕಾರ್ಯಕ್ರಮ ಸಹಾಯ್ಯಾಧಿಕಾರಿಗಳೂ, ಕಾರ್ಯಕ್ರಮ ನಿರೂಪಕರೂ ಇದ್ದವರೇ ಇದ್ದಾರೆ. ನಿರೂಪಣಾ ವಿಭಾಗದಲ್ಲಿ ಇತ್ತೀಚೆಗೆ ಹೆಣ್ಣಿನ ಕಂಠವೊಂದು ಹೊಸತಾಗಿ ಕೇಳುತ್ತಲಿದೆ. ಇದೊಂದು ಹೊಸ ವ್ಯವಸ್ಥೆ. ರೇಡಿಯೋ ರಸಿಕರಲ್ಲಿ ಬಹುಜನರು ಹೆಣ್ಣಿನ ಕಂಠವನ್ನು ಅಪೇಕ್ಷಿಸುತ್ತಾರೆಂದು ಮೇಲಿನವರ ಅಭಿಪ್ರಾಯ. ಅದಕ್ಕನುಗುಣವಾಗಿ, ಈಗ ಹೆಣ್ಣಿನ ಕಂಠದ ನಿರೂಪಣೆ ಕಿವಿಗೆ ಬೀಳುತ್ತಿರಬಹುದು; ಆದರೆ ಒಂದು ದುಃಖದ ವಿಷಯ: ಆ ಹೆಣ್ಣಿನ ಕೋಮಲ ಕಂಠವು ನಿತ್ಯವೂ ಮಾಡುತ್ತಿರುವ ಕನ್ನಡ ನುಡಿಯ ಕೊಲೆಯನ್ನು ನೋಡಿದ ಕನ್ನಡ ನುಡಿಯ ಭಕ್ತರು ‘ ಅಯ್ಯೋ! ಅಕಟಾ! ’ ಎಂದು ಮರುಗದೆ ಇರರು.

ಸಂಗೀತ ವಿಭಾಗ

ಕಾರ್ಯಕ್ರಮದಲ್ಲಿ ಹೊಸ ವ್ಯವಸ್ಥೆ ಮಾಡಿದಂತೆ, ಸಂಗೀತಗಾರರನ್ನು ಎಲ್ಲಿಂದ ಹೊಸತಾಗಿ ತಂದಾರು ಪಾಪ, ನಮ್ಮ ಬಾನುಲಿಕಟ್ಟೆಯವರು? ಇದ್ದ ಮಾಲನ್ನೇ ಮಾರಾಟ ಮಾಡಬೇಕು. ಆದರೂ ಇದರಲ್ಲಿಯೂ ಹೊಸತನವನ್ನು ನಾವು ನೋಡಬಹುದು. ಪ್ರತಿ ರವಿವಾರವೂ ತಾಸುಗಟ್ಟಲೆ ದಕ್ಷಿಣ ಪದ್ಧತಿಯ ಸಂಗೀತ ಕೇಳಿಸುತ್ತಿದ್ದಾರೆ. ಆದರೆ ಉತ್ತರಕರ್ನಾಟಕದಲ್ಲಿ ಈ ದಕ್ಷಿಣಪದ್ಧತಿಯ ಸಂಗೀತ ಹಲವರಿಗೆ ತಲೆನೋವನ್ನು ಎಬ್ಬಿಸುವುದೆಂಬುದನ್ನು ಈ ಕಾರ್ಯಕ್ರಮ ನಿರ್ಮಾತರು ವಿಚಾರ ಮಾಡಿದಂತೆ ಕಾಣುವುದಿಲ್ಲ. ರವಿವಾರ ದಿನ, ಬಿಡುವಾಗಿ ಮನೆಯಲ್ಲಿ ಕುಳಿತುಕೊಂಡು, ಹಾಯಾಗಿ ಸಂಗೀತ ಕೇಳೋಣವೆಂದು, ರೇಡಿಯೋ ಯಂತ್ರ ಎಚ್ಚರಿಸಿದರೆ, ದಕ್ಷಿಣಾದಿ ಸಂಗೀತದ ಸ್ವರಗಳ ಸರ್ಕಸ್ಸು ಕಿವಿಗೆ ಬಿದ್ದು ಜೀವ ಗಾಬರಿಗೊಳ್ಳುವುದು. ಕೂಡಲೇ ಮುಂಬಯಿಗೋ ದಿಲ್ಲಿಗೋ ಮುಳ್ಳು ಸರಿದು, ಅಲ್ಲಿಯ ಸಂಗೀತವನ್ನು ಯಂತ್ರ ಹಾಡಲು ತೊಡಗುವುದು. ಉತ್ತರ ಕರ್ನಾಟಕದ ಹಲವು ರೇಡಿಯೊ ಯಂತ್ರಗಳು, ರವಿವಾರ ದಿನ ಧಾರವಾಡ ಬಾನುಲಿಕಟ್ಟೆಯನ್ನು ಮರೆತೇ ಬಿಟ್ಟಿರುವುವು ಇತ್ತೀಚೆಗೆ.

ಇನ್ನು ಮುದ್ರಿತ ಸಂಗೀತದ ವ್ಯವಸ್ಥೆ. ಇದರಲ್ಲಿ ಹೊಸದೇನನ್ನೂ ಮಾಡಲಿಕ್ಕೆ ಬರುವಂತಿಲ್ಲವೆಂದು ಕಾಣುತ್ತದೆ. ಯಾಕೆಂದರೆ ಬಾನುಲಿಕಟ್ಟೆ ಪ್ರಾರಂಭವಾದಂದು ಕೊಂಡ ಧ್ವನಿಮುದ್ರಿಕೆಗಳೇ ಮತ್ತೆ ಮತ್ತೆ ಕೂಗಿಕೊಳಬೇಕು. ‘ ನಿಮಗಾಗಿ ’ ಯಲ್ಲಿಯೂ ಅವೇ ಕೂಗಬೇಕು. ಮಿಶ್ರಸಂಗೀತದಲ್ಲಿಯೂ ಅವೇ ಕೂಗಬೇಕು. ರೆಕಾರ್ಡು ಸಂಗೀತದಲ್ಲಿಯೂ ಅವೇ ಕೂಗಬೇಕು.

‘ ಭಾವಗೀತ ’ಗಳ ವಿಚಾರವನ್ನಂತೂ ದೇವರೇ ಕೇಳಬೇಕು. ಎಂದಾದರೂ ಒಂದೊಂದು ದಿನ ಎಲ್ಲಿಯೊ ಒಬ್ಬ ಒಳ್ಳೆಯ ಸಂಗೀತಗಾರರ ಬಾಯಿಗೆ ಸಿಕ್ಕ ಒಂದು ಭಾವಗೀತ, ತಾನು ಧನ್ಯನಾದೆನೆಂದೇ ತಿಳಿದುಕೊಳ್ಳಬೇಕು. ಮೊನ್ನೆ ಮೊನ್ನೆ ಸುಪ್ರಸಿದ್ಧ ದಕ್ಷಿಣಾದಿ ಸಂಗೀತಗಾರರೊಬ್ಬರು ‘ ಕುಮಾರ ವ್ಯಾಸನು ಹಾಡಿದನೆಂದರೆ ’ ಎಂಬ ಭಾವಗೀತವನ್ನು ಹೇಳಿದರು. ಅಬ್ಬಾ! ಕವಿ ಕೇಳಿದ್ದರೆ, ಆತನ ಹರಣವೇ ಹಾರಿರಬೇಕು. ಕನ್ನಡ ನುಡಿದೇವಿಯಂತೂ ಚಡಪಡಿಸಿ ಒದ್ದಾಡಿದಳು. ಕನ್ನಡ ಭಾವಗೀತಗಳನ್ನು ಹಾಡಬೇಕೆನ್ನುವ ಸಂಗೀತಗಾರರು, ದಯೆಯಿಟ್ಟು, ಕವಿಗೂ ಭಾಷೆಗೂ ಗೀತಗಾಯನ ರೀತಿಗೂ ಅನ್ಯಾಯವಾಗದಂತೆ ನೋಡಿಕೊಳ್ಳಬೇಕು.

ನಾಟಕದ ಪದಗಳ ಹಾಡುಗಾರಿಕೆ! ಉತ್ತರ ಕರ್ನಾಟಕದಲ್ಲಿ ಸ್ವತಂತ್ರವಾಗಿ ಯಾವ ನಾಟಕಕಾರ ನಾಟ್ಯಗೀತಗಳ ರಚನೆ ಮಾಡಿದ್ದಾನೆ ? ಇಲ್ಲವೇ ಇಲ್ಲವೆಂದ ಮೇಲೆ, ಸಲ್ಲದ ಕಗ್ಗಗಳನ್ನೇ ತಂದು ಏತಕ್ಕಾಗಿ ಪ್ರದರ್ಶನ ಮಾಡಬೇಕು ? ಒಳ್ಳೆಯ ಸಂಗೀತವಿದ್ದರೆ, ಅದರಲ್ಲಿ ಆ ಪದಗಳ ಸಾಹಿತ್ಯಿಕ ಆಭಾಸವನ್ನು ಮುಚ್ಚಬಹುದು; ಆದರೆ ಸಂಗೀತದ ಆಭಾಸ, ಸಾಹಿತ್ಯದ ಆಭಾಸ ಎರಡೂ ಕೂಡಿ ಬಂದು ಕೇಳುಗರ ಕಿವಿ-ಹೃದಯಗಳನ್ನು ಕೊರೆಯಲು ತೊಡಗಿದರೆ, ಸಹನೆ ಮಾಡುವುದಕ್ಕೆ ಯಾರಿಗೆ ಸಾಧ್ಯವಾದೀತು ?

ದಾಸರ ಪದ, ಶರಣರ ವಚನಗಳದೂ ಇದೇ ಹಾದು. ನಮ್ಮಲ್ಲಿ ದಾಸರ ಕೀರ್ತನ-ಶರಣರ ವಚನಗಳ ರಾಶಿ ಅಕ್ಷಯವೆನಿಸುವಷ್ಟು ಬಿದ್ದಿದೆ. ಒಳಹೊಕ್ಕು ತೆಗೆದರೆ ಸಾವಿರ ಸಾವಿರ ಲೆಕ್ಕದಲ್ಲಿ ಭಾವ ಚಿಂತಾರತ್ನಗಳು ಸಿಕ್ಕುವುವು. ಆದರೆ ‘ ಹಾಡಿದ್ದನ್ನೇ ಹಾಡೋ ಕಿಸುಬಾಯಿದಾಸಾ! ’ ಧಾರವಾಡದ ಬಾನುಲಿಕಟ್ಟೆ ಪ್ರಾರಂಭವಾದಂದಿನಿಂದಲೂ ಮತ್ತೆ ಮತ್ತೆ ಅವೇ ಕೀರ್ತನ, ಅವೇ ವಚನ! ಹೇಳುವ ಆಪಸ್ವರಗಳು ಮಾತ್ರ ಬೇರೆ ಬೇರೆಯಾಗಿರುವವು...... ಇಷ್ಟೆ!

ನಾಟಕವಿಭಾಗ

ಮೊದಲು, ತಿಂಗಳಲ್ಲಿ ನಾಲ್ಕೇ ಇದ್ದ ನಾಟಕಗಳು ಈಗ ಅದರ ಮುಮ್ಮಡಿಸಂಖ್ಯೆಗೇರಿವೆ. ಶನಿವಾರ ಅರ್ಧತಾಸಿನದು; ಮಂಗಳವಾರ ಕಾಲುತಾಸಿನದು. ರವಿವಾರ ‘ ಕಾಮನಬಿಲ್ಲಿ ’ಗೆ

...ಕೊಂಡು ಹದಿನೈದು ನಿಮಿಷದ್ದು. ಈ ಹದಿನೈದು ನಿಮಿಷಕಾಲದ ...ಟಕ'ಗಳು ನೆಪಕ್ಕಾಗಿ ನಡೆದಂತೆ ಕಾಣುವುವು. ಯಾರೋ ...ೋ ಬರೆಯುವರು; ಇನ್ನಾರೋ ಹೇಗೋ ಮೈಕಿನೆದುರು ಓದು ...ು. ಬಹಳ ಸಲ ಇವರ ಓದು ಯಾರಿಗೂ ಕೇಳಿಸದಷ್ಟು ಹಿನ್ನೆ- ...ಯ ವಿಶಿಷ್ಟಧ್ವನಿಗಳಿರುವುವು. ಉದಾಹರಣೆಗಾಗಿ ಹೇಳಬೇಕೆಂದರೆ ...ುದಿನ 'ಕಾವೇರಿ' ಎಂಬ ಹೆಸರಿನ ಗೀತರೂಪಕ ನಡೆಯಿತು. ...ೇನು ಗೀತರೂಪಕವೋ ಭೂಗೋಲ ಪಠ್ಯಪುಸ್ತಕದಲ್ಲಿಯ ...ೇರೀ ನದಿಯ ವಿವರಣೆಯೋ ಗೊತ್ತಾಗಲಿಲ್ಲ. ಇನ್ನೊಂದು ದಿನ ...ಲ್ಲಿಯ ನೆನಹು' ಎಂದು ಇನ್ನೊಂದು ಗೀತರೂಪಕ. ಇದೊಂದು ...ನೈದು ನಿಮಿಷ ಕಳೆಯಲಿಕ್ಕೆಮಾಡಿದ ಹುಡುಗಾಟ. ಮತ್ತೊಂದು ...'ದೆವ್ವದ ಕೆರೆ' ರೂಪಕ. ಇದನ್ನು ಪದಿನೈದು ನಿಮಿಷವೂ ...ಳಬೇಕಾಗಲಿಲ್ಲ. ಹತ್ತೇ ನಿಮಿಷದಲ್ಲಿ ಮುಗಿದು ಕೇಳುಗರ ...ಂದರೆಯನ್ನು ತಪ್ಪಿಸಿತು. ಇನ್ನೊಂದು ದಿನ ಹರಿದಾಸರ ಒಂದು ...ಗತೆಯೇ ಹದಿನೈದು ನಿಮಿಷದ ನಾಟಕವಾಗಿ ಹೊರಬಿತ್ತು. ...ದರಲ್ಲಿ ಒಬ್ಬ ನಟರು ಮುದುಕಿಯ ಧ್ವನಿಯನ್ನು ಸಹಜವಾಗಿ ...ರಿಸಿ ಆ ನಾಟಕದ ಮಾನಕಾಯ್ದರು; ಇಲ್ಲವಾದರೆ, ಅದೊಂದು ...ಳು ಹರಿವೆಯ ಸೊಪ್ಪು.

'ಹೂಬಾಣ' ಹೆಸರಿಗೆ ಮರುಳಾಗಿ ಕೇಳಲು ಹೊರಟವರಿಗೆ ...ಶೆಯ ನಿಟ್ಟುಸಿರು ಹಾಕಬೇಕಾಯಿತು. 'ಅಳಿಯನ ಸೋಲು' ...ದಲು ಮಾಡಿಕೊಂಡು, ಮೂರು-ನಾಲ್ಕು ಅಳಿಯಂದಿರ ನಾಟಕ- ...ುವುವು. ಎಲ್ಲವೂ ಬದನೆಯ ಕಾಯಿಪಾಕಗಳೇ! ನಾಟಕದ ...ಖ್ಯೆಯೇನೋ ಬೆಳೆದಿದೆ. ಗುಣವು ಮಾತ್ರ ಅಭಾವವಾಗುತ್ತ ...ರಟಿದೆ.

ಭಾಷಣವಿಭಾಗ

...ಷಣಗಳು ಸಾಕಷ್ಟು ಆಗುವುವಾದರೂ, ಭಾಷಣಕಾರರ ...ರುಗಳು ಮಾತ್ರ ಮತ್ತೆ ಮತ್ತೆ ಅವೇ ಅವೇ ಆಗಿ ತೋರುತ್ತಿರು- ...ದು ಆಶ್ಚರ್ಯದ ವಿಷಯವೇ ಆಗಿದೆ. ಆ ಆ ದಿನಕ್ಕೆ ಸರಿಯಾಗಿ ...ಷಣಕಾರರು ಬೇಕು; ಬರುತ್ತಾರೆ. ಅವರಲ್ಲಿ ಅಷ್ಟಿ ...ಷ್ಟಿ ವಿಷಯದ ತಿಳಿವಳಿಕೆಯಿದ್ದವರಿದ್ದರೆ, ಅಂತಹ ಒಬ್ಬಿಬ್ಬರ ...ಷಣಗಳು ಚೆನ್ನಾಗಿಯೂ ಆಗುವುದುಂಟು. ವಿಷಯ ಅಷ್ಟಕ್ಕಷ್ಟೇ ...ದ್ದರೂ ಏನಾದರೂ ಬರೆದುಕೊಂಡು ಬಂದು, ಒಳ್ಳೆಯರೀತಿಯಿಂದ ...ೇದನೆ ಮಾಡುವವರೂ ಕೆಲವರು ಸಿಕ್ಕುವರು. ಆದರೆ ಯಾವ- ...ವುದೋ ಅಧಿಕಾರಸ್ಥಾನಗಳ ಬಲದ ಮೂಲಕ ಭಾಷಣದ ...ದರ್ಭಗಳು ದೊರೆತು, ಹೇಳುವ ವಿಷಯ ಗೊತ್ತಿಲ್ಲದೆ, ಬರೆದು- ...ನ್ನು ಸರಿಯಾಗಿ ಓದಿ ಹೇಳಲೂ ಬಾರದೆ, ತಾವೂ ಪೇಚಾಡುತ- ...ುಗರನ್ನೂ ಸಂಕಟಕ್ಕೆ ಗುರಿಮಾಡುವ— ಭಾಷಣಕಾರರೂ ...ಗ ನೋಡಲು ಸಿಕ್ಕುವರು. ಇದೊಂದು ಇಲ್ಲಿಯ ಭಾಷಣ ...ಾಗದ ವೈಶಿಷ್ಟ್ಯ. ಧಾರವಾಡ ಬಾನುಲಿಕಟ್ಟೆಯಲ್ಲಿ ಆಗುವ ...ೇಕ ಭಾಷಣಗಳ ಶಿರೋಲೇಖಗಳ ಅರ್ಥವೂ ಬಹಳ ಸಲ ನಮ್ಮ ...ುಗರಿಗೆ ಆಗುತ್ತಿರುವುದಿಲ್ಲ. ಶಿರೋಲೇಖವನ್ನು ನೋಡಿ, 'ಈ ವಿಷಯ ಕುರಿತು ಇಂದಿನ ಭಾಷಣವಿರಬಹುದೇ?' ಎಂದು ಕುತೂ- ಹಲದಿಂದ ಕೇಳಿದರೆ, ಭಾಷಣ ಬೇರೆ ವಿಷಯವನ್ನು ನಿರ್ದೇಶಿಸು- ವಂತಹದಾಗಿರುವುದು.

ಆತ್ಮಗಾನ

ಇದೊಂದು ಹೊಸ ವಿಭಾಗ. ಇದರಲ್ಲಿ ಈಗಾಗಲೆ 'ಪುರಂದರ ದಾಸ' 'ಬಸವಣ್ಣನವರು' ಇಬ್ಬರನ್ನು ಅವರ ಕೃತಿಗಳೊಂದಿಗೆ ಪರಿಚಯ ಮಾಡಿಕೊಡಲಾಯಿತು. ಚಹದ ಅಂಗಡಿಗಳಿಗಾಗಿ ಸಿದ್ಧಗೊಳಿಸಿದ 'ಕೀರ್ತನ' 'ವಚನ' ಗಳ ಧ್ವನಿಮುದ್ರಿಕೆಗಳಿಂದ ಪುರಂದರದಾಸರು, ಬಸವಣ್ಣನವರು—ಇವರ ದಿವ್ಯ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ರೂಪಿಸಿ ತೋರಿಸುವುದು ಅಸಾಧ್ಯವಾದ ಮಾತು. ಅಲ್ಲದೆ ವ್ಯಕ್ತಿತ್ವವನ್ನು ನಿರೂಪಿಸುವ ನಿರೂಪಕನಿಗೆ ಆ ಆ ವಿಭೂತಿ ಗಳ ಚರಿತ್ರ, ತತ್ತ್ವಜ್ಞಾನ, ಸಾಹಿತ್ಯ ಇವುಗಳ ಕೂಲಂಕಷ ಪರಿ ಚಯವಿಲ್ಲದೆ ಹೋದರೆ, ನಿರೂಪಣೆಯ ಮಾತು, ಕೇವಲ ಭಾಗವತ ರಾಟದ ಸೂತ್ರಧಾರನ ಮಾತಿನ ಮಾಲೆಯಂತಾಗುವುದು. ಕಲ್ಪನೆ ಚೆನ್ನಾಗಿದೆಯಾದರೂ ಕೃತಿಯಲ್ಲಿ ಇದು ಇನ್ನೂ ಪರಿಪಾಕಗೊಳ್ಳ ಬೇಕು.

ಗಿಳಿವಿಂಡು-ಗೃಹಲಕ್ಷ್ಮಿ

ಈ ವಿಭಾಗಗಳು ಎಂದಿನಂತೆಯೆ ಇವೆ. ವಾರಗಳು ಬದಲಾಗಿ- ವೆಯಷ್ಟೆ!

ಯಾವುದೇ ವ್ಯಕ್ತಿಯಾಗಲಿ, ಶಕ್ತಿಯಾಗಲಿ, ಹೆಸರನ್ನು ಹೊಸ ತಾಗಿ ಇರಿಸಿದರೆ, ಇರುವ ಗುಣ-ರೂಪಗಳು ಮರೆಯಾಗಬೇಕು ಹೇಗೆ? ಅವು ಶಾಶ್ವತವಾಗಿ ಇದ್ದೇ ಇರಬೇಕು.

ಸಂಸ್ಮರಣೀಯ ಗೀತ

ಇದೂ ಮೊದಲಿನಿಂದಲೂ ನಡೆದು ಬಂದುದು. ಮೊದಲು ಇದು ಮಾಸಗೀತವಾಗಿರುತ್ತಿತ್ತು. ಈಗ ಇಷ್ಟವಿಷಯಕ ಗೀತವಾಗಿರು- ತ್ತದೆ. ಗೀತವೆಂದರೆ ಹಾಡಲು ಬರುವಂತಹದಿರಬೇಕು. ನಮ್ಮ ಕವಿಗಳಲ್ಲಿ ಬಹಳ ಜನರು ಕವಿತೆಗಳನ್ನು ರಚಿಸುವರಾದರೂ, ಅವು ಹಾಡಲಿಕ್ಕೆ ಯೋಗ್ಯವಾಗಿರುವುವೋ ಇಲ್ಲವೋ ಎಂಬ ವಿಚಾರವನ್ನು ಸಾಕಷ್ಟು ಮಾಡಿರುವುದಿಲ್ಲ. ನಮ್ಮ ಬಾನುಲಿಕಟ್ಟೆಯವರು, ಸಂಸ್ಮರಣೀಯ ಗೀತಕ್ಕಾಗಿ, ಕವಿಗಳೆಲ್ಲರ ಬಳಿಯಲ್ಲಿಯೂ ಕವಿತೆ- ಗಳನ್ನು ಬರೆದುಕೊಡಲು ಕ್ರಮವಾಗಿ ಕೇಳುವರು. ಕವಿ ಕೊಟ್ಟ ಕವಿತೆ ಹಾಡಲು ತಕ್ಕುದಾಗಿದ್ದಿತೋ ಸಂಗೀತಗಾರ ಬದುಕಿದ; ಇಲ್ಲವಾದರೆ ಆತನ ಸಂಗೀತಜ್ಞಾನದ ಶಿವಪೂಜೆ ಚೆನ್ನಾಗಿ ಆಗಿಬಿಡುವುದು. ನಮ್ಮ ಕೆಲವು ಕವಿಗಳ ಸಂಸ್ಮರಣೀಯ ಗೀತ- ಗಳನ್ನು ಹಾಡಬೇಕಾಗಿ ಬಂದು, ಅನೇಕ ಸಂಗೀತ ವಿದ್ವಾಂಸರು ರಸಿಕರಿಂದ ಬೈಗುಳನ್ನು ತಿನ್ನಬೇಕಾಗಿದೆ. ಪಾಪ ಯಾರದೋ ಪಾಪದ ಫಲವನ್ನು ಯಾರೋ ಉಣ್ಣಬೇಕು. ನಮ್ಮ ಬಾನುಲಿ ಕಟ್ಟೆಯವರು, ಈ ಸಂಸ್ಮರಣೀಯ ಗೀತಗಾಯಕರ ಫಜೀತಿಯಾಗ- ದಂತೆ ಮೊದಲೇ ಪೂರ್ಣವಾಗಿ ವಿಚಾರ ಮಾಡಬೇಕು.

ಸಾಹಿತ್ಯವಿಹಾರ

卐

ಈ ಸಲದ ದೀಪಾವಳಿ ಸಾಹಿತ್ಯ

ದೀವಳಿಗೆ ಹಬ್ಬದ ಉತ್ಸಾಹದ ಪರಿಣಾಮವು ಕನ್ನಡ ಸಾಹಿತ್ಯ ನಿರ್ಮಿತಿಯ ಮೇಲೂ— ಅಭಿವೃದ್ಧಿಗೆ -- ಹೆಚ್ಚು ಹೆಚ್ಚಾಗಿ ಆಗುತ್ತಲಿರುವುದು ಸಂತೋಷದ ಸಂಗತಿ. ಅನೇಕ ವಾರಪತ್ರಿಕೆಗಳು ದೀಪಾವಳಿ ವಿಶೇಷ ಸಂಚಿಕೆಗಳನ್ನು ಹೊರಡಿಸಿವೆ. ಹುಬ್ಬಳ್ಳಿಯ 'ಕರ್ಮವೀರ', 'ಜಯಹಿಂದ', ಬೆಂಗಳೂರಿನ 'ಪ್ರಜಾಮತ', 'ಜನಪ್ರಗತಿ' ಇವುಗಳ ವಿಶೇಷ ಸಂಚಿಕೆಗಳು ಎಲ್ಲರ ಕಣ್ಣಿಗೂ ಎದ್ದು ಕಾಣುವಂತಿವೆ. ಮಿಕ್ಕ ಕೆಲವು ವಾರಪತ್ರಿಕೆಗಳು ತಮ್ಮ ಎಂದಿನಂತಹ ಸಂಚಿಕೆಯನ್ನೇ ಬಣ್ಣಬಣ್ಣವಾಗಿಸಿ, ಹಬ್ಬದ ಕಳೆಯನ್ನು ತಂದುಕೊಟ್ಟು 'ದೀಪಾವಳಿ ಸಂಚಿಕೆ' ಎಂದು ಹೆಸರು ಹಾಕಿ ಪ್ರಕಟಿಸಿವೆ.

'ಪ್ರಜಾಮತ'ದ ವಿಶೇಷ ಸಂಚಿಕೆ ಎಂದಿನಂತೆಯೇ ಜಾಹೀರಾತಿನ ಪುಟಗಳಿಂದ ತನ್ನ ಗಾತ್ರವನ್ನು ಬೆಳೆಸಿಕೊಂಡಿದೆ. ಜನಪ್ರಗತಿಯ ವಿಶೇಷ ಸಂಚಿಕೆ, ಪ್ರಜಾಮತದ ದಾರಿಯಲ್ಲೇ ಹೊರಟಿದೆ. ಹುಬ್ಬಳ್ಳಿಯ 'ಜಯಹಿಂದ್' ವಿಶೇಷ ಸಂಚಿಕೆಯ ಅಂತರಂಗ ಎಂದಿನಂತೆಯೆ ಇದೆಯಾದರೂ, ಮೇಲೋಲೆಯ ಮೂರು ಬಣ್ಣದ ಚಿತ್ರ ಹಬ್ಬದ ಬೆಡಗಿಗೆ ತಕ್ಕುದಾಗಿಲ್ಲ. 'ಕರ್ಮವೀರ'ದ ವಿಶೇಷ ಸಂಚಿಕೆಯ ಮುದ್ರಣವೂ ಅಚ್ಚುಕಟ್ಟೂ ಮಾದರಿಯವಾಗಿವೆಯಾದರೂ, ಮುಖಚಿತ್ರದ ಅಂದಗೇಡಿಸ್ವರೂಪ ಅದರ ಇನ್ನಿತರ ಸೌಂದರ್ಯವನ್ನು ಕಡಿಮೆಮಾಡಿದೆ.

ಈ ಸಲದ ಕರ್ಮವೀರ ಸಂಚಿಕೆಯ ವೈಶಿಷ್ಟ್ಯವೆಂದರೆ ೧೦೦ ರೂ. ೫೦ ರೂ. ಬಹುಮಾನಗಳನ್ನಿರಿಸಿ ಸಣ್ಣ ಕಥಾ ಸ್ಪರ್ಧೆಯನ್ನು ಏರ್ಪಡಿಸಿ, ಬಹುಮಾನಪಡೆದ ಕತೆಗಳನ್ನು ವಿಶೇಷ ಸಂಚಿಕೆಯಲ್ಲಿಯೆ ಪ್ರಕಟಿಸಿದುದು ಕರ್ಮವೀರದ ಲೇಖನಗಳಲ್ಲಿಯೂ ವೈವಿಧ್ಯವಿದೆ

ಈ ಸಲದ ದೀಪಾವಳಿ ಸಾಹಿತ್ಯನಿರ್ಮಿತಿಯಲ್ಲಿ ಎದ್ದು ಕಾಣುವಂತಹದೆಂದರೆ '**ದೀಪದಾನದ**' ಪ್ರಕಟನೆ. ಇದು ಯಾವುದೇ ಪತ್ರಿಕೆಯ ವಿಶೇಷ ಸಂಚಿಕೆಯಲ್ಲ. ದೀಪಾವಳಿಗಾಗಿಯೇ ಹೊರಡಿಸಿದ ವಿಶೇಷ ಸಾಹಿತ್ಯದ ಸಂಪುಟ. ಶ್ರೀ. ದತ್ತಾತ್ರೇಯ ಕುಲಕರ್ಣಿ ಪ್ರೊ. ಸಿ. ಎಂ. ಕುಲಕರ್ಣಿ ಎಂ. ಎ. ಇವರು ಸಂಪಾದಕರು. ಧಾರವಾಡದ ಲಲಿತ ಮುದ್ರಣಾಲಯದಲ್ಲಿ ಮುದ್ರಿತವಾಗಿ ದೀಪದಾನ ಪಬ್ಲಿಕೇಶನ್ಸ್ ಪರವಾಗಿ ಶ್ರೀ. ಎಸ್. ಬಿ. ಕುಲಕರ್ಣಿಯವರು ಬೆಳಕಿಗೆ ತಂದಿದ್ದಾರೆ. ಕ್ರಾ. ೧/೮ ದ ೨೦೦ ಪುಟಗಳಿಂದ ಕೂಡಿದ ಈ ಸಂಚಿಕೆಯು ಅಂತರಂಗ ಬಹಿರಂಗ ಸೌಂದರ್ಯಗಳಿಂದ ಆಕರ್ಷಕವಾಗಿದೆ.

ಲೇಖಕವರ್ಗದಲ್ಲಿ ಕರ್ನಾಟಕದಲ್ಲಿಯ ಅನೇಕ ಸುಪ್ರಸಿದ್ಧ ಲಲಿತ ಸಾಹಿತ್ಯಲೇಖಕರ ಹೆಸರುಗಳಿವೆ ಕತೆ, ನಾಟಕ, ಹರಟೆ, ಕವಿತೆಗಳಲ್ಲದೆ, ಅನೇಕ ಅಭ್ಯಾಸಪೂರ್ಣವಾದ ವಿಷಯವಿವೇಚನಾತ್ಮಕ ಲೇಖನಗಳಿರುವುವು. ದೀಪಾವಳಿ ಸಂಚಿಕೆಗಳಲ್ಲಿಯ ಲಘುತ್ವವನ್ನೇ ಬಯಸುವ ಸಾಮಾನ್ಯವಾಚಕರಿಗೆ ಇದರಲ್ಲಿಯೇ ಬರೆಹಗಳು ಸ್ವಲ್ಪ ಭಾರವೆನಿಸಬಹುದಾದರೂ ಬಾಳ್ವೆಗೆ ಬೆಳಕನ್ನು ಒದಗಿಸುವ ಸತ್ತ್ವದಿಂದ ಕೂಡಿದಂತಹ ಲೇಖನಗಳು ಹಲವಾರು ಇವೆ. ಇಂತಹದೊಂದು ಒಳ್ಳೆಯ ಸಂಚಿಕೆಯನ್ನು ಒದಗಿಸಿಕೊಟ್ಟ ಪ್ರಕಾಶಕರನ್ನೂ ಸಂಪಾದಕರನ್ನೂ ಮನಸಾರೆ ಅಭಿನಂದಿಸುತ್ತೇವೆ

* * * *

ನಾವು ಅಪೇಕ್ಷಿಸಿರಲಿಲ್ಲವಾದರೂ ರಸಿಕವಿಮರ್ಶಕರಾದ ಶ್ರೀ. ಕೆ. ಎಸ್. ಶರ್ಮಾ 'ವಿದ್ವಾನ್' ಅವರು, ಜಯಂತಿಯ ಅಕ್ಟೋಬರ್ ಸಂಚಿಕೆಯಲ್ಲಿಯ ಒಂದು ಕತೆಯನ್ನೂ ಒಂದು ಕವಿತೆಯನ್ನೂ ತುಂಬ ಮೆಚ್ಚಿ ಅವುಗಳ ಗುಣವಿಮರ್ಶೆಯನ್ನು ಕಳುಹಿದ್ದಾರೆ. ನಮ್ಮ ವಾಚಕರ ಅವಗಾಹನೆಗಾಗಿ ಆ ವಿಮರ್ಶೆಯನ್ನಿಲ್ಲಿ ಪ್ರಕಟಿಸಲಾಗಿದೆ :

ಪಾಪದ ಪಿಂಡ (ಕತೆಯ ವಿಮರ್ಶೆ)

ಜೀವನದ ಸಹಜ ಚಿತ್ರವು ಕಲ್ಪಿತ ಹಾಗೂ ಸಹಜಸಿದ್ಧ ಚಿತ್ರಣಗಳಲ್ಲಿ ಒಡಮೂಡಿ ಬಂದು, ಸಾಮಾನ್ಯ ಜನತೆಯ ಹೃದಯವನ್ನು ತಟ್ಟುವ, ನಿತ್ಯಜೀವನದ ಹೃದಯಗತ ಭಾವಗಳನ್ನು ತೋರುವ, ಯಥಾರ್ಥ ಜೀವನ ಕಥೆಗಳು ನಮಗಿಂದು ಬೇಕಾಗಿವೆ. ಸಾಹಿತ್ಯವೆಂದರೆ— "ಸುಖದುಃಖಾತ್ಮಕ ಜೀವನದ ಏರಿಳಿತಗಳನ್ನು ಸಹಜ, ಸುಂದರ ಮಾರ್ಗದಲ್ಲಿ ಸಾಗಿಸುವ, ಮನೋಭಾವನೆಗಳನ್ನು ಪ್ರತಿಬಿಂಬಿಸುವ ಒಂದು ಆದರ್ಶ. ಅಲ್ಲೂ ಅದು ಕಾವ್ಯನಿಯಮಗಳಿಗೆ ತೇಲಾಡದೆ,— ಜೀವನಾನುಭವವನ್ನೇ ಬಿಂಬಿಸುವ ಸಾಧನವಿರಬೇಕು.

ಈ ಒಂದು ದೃಷ್ಟಿಯಿಂದ "ಪಾಪದ ಪಿಂಡ"ವೂ, "ಜಾತ್ರೆಗೆ ಕರೆಯೂ" ಉತ್ಕೃಷ್ಟ ಚಿತ್ರಗಳಾಗಿವೆ. ಒಂದು ಕಥಾರೂಪದಿಂದ ಒಂದು ಜೀವನಾನುಭವವನ್ನು ತೋರಿಸಿದರೆ, ಮತ್ತೊಂದು ಜಾನಪದ ಗೀತದಿಂದ ಒಂದು ಹೆಣ್ಣಿನ ಆಶೆ, ಪ್ರೇಮಗಳನ್ನು ಜೀವನದ ಒಂದು ಕೋನದಿಂದ ಒಡಮೂಡಿಸಿದ ನಲ್ವಾಡು. ಇವೆರಡೂ ಜೀವನದ ಸಾಮಾನ್ಯ ಚಿತ್ರಗಳು; ಜಾನಪದ ಜೀವನದ ಯಥಾರ್ಥ ಚಿತ್ರಗಳೆಂದರೂ ತಪ್ಪಾಗದು. ಆದುದರಿಂದಲೆ ವಾಚಕನು ಇವೆರಡೂ ಕೃತಿಗಳನ್ನು ಓದುವಾಗ— ಕರಗುವನು; ಮರುಗುವನು. ಪಾಪದ

ಪಿಂಡವು ಚೆನ್ನಿ-ಭರಮಣ್ಣರ ವಿಷಾದಜೀವನದ ದುರಂತ ಕಥೆಯಿಂದ ಮನವನ್ನು ಕರಗಿಸಿದರೆ— ಜಾತ್ರೆಗೆ ಕರೆಯು, ತವರೂರಿಗೆ ಜಾತ್ರೆಗಾಗಿ ತೆರಳುವ ಹೆಬ್ಬಯಕೆಯುಳ್ಳ ಹೆಣ್ಣು ಬಯಸುವ— ಗರತಿಯ ಜೀವನದ ಗತಿಯನ್ನು ಬಿಂಬಿಸುವ—ಸುಂದರ ಚಿತ್ರದಿಂದ ಮನವನ್ನು ನಿರುಗಿಸುವುದು.

'**ಪಾಪದ ಪಿಂಡ**' — "ವಾತಾವರಣವು ಜೀವನದ ಮೇಲೆ ಪ್ರಭಾವವನ್ನು ಬೀರುವುದು. ಭರಮನ ಜೀವನದ ಜೀವನಸೆಯಾದ ಚೆನ್ನಿಯು ಹನುಮನ ಕಾಮಪಿಪಾಸೆಯ ಕುಹಕ ಬಲೆಯು — ವಿಷಪ್ತ ವಾತಾವರಣದ ಸೋಂಕಿನಿಂದ,ಜೀವನವನ್ನೇ ಕೆಡಿಸಿಕೊಂಡಳು. ಹನುಮನು ಚೆನ್ನಿಯನ್ನು ತಪ್ಪುದಾರಿಗೆ ಎಳೆದು, ಕೊನೆಗೆ ವ್ಯಭಿಚಾರದ ಮಾರ್ಗಕ್ಕೆ ಬಲಿಯಿತ್ತು— ಮತ್ತೊಂದು ಹೆಣ್ಣಿಗಾಗಿ ಹಾರಯಿಸಿ ನಡೆದನು. ಭರಮನು ಚೆನ್ನಿಯ ವಿರಹದಿಂದ ನಿರಾಶೆ ಹೊಂದಿ, ಜೀವನದ ಧಾಟಿಯಲ್ಲಿ ದಾರಿತಪ್ಪಿ, ಕುಡುಕನಾಗಿ ಒಂದು ದಿನ ವೇಶ್ಯಾಮಂದಿರಲ್ಲಿ ತನ್ನವಳೇ ಆದ ಚೆನ್ನಿಯನ್ನು ಕಂಡು, ಆಕೆಯ ಬಳಿಯಲ್ಲಿದ್ದ "ಪಾಪದ ಪಿಂಡ"ವಾದ ಕೂಸನ್ನು ಕಂಡು, ಸಾಮಾನ್ಯ ಜೀವಿಯು ನೆನೆಯಲೇ ಅಸಾಧ್ಯವಾದ ಅಸದೃಶ ಪ್ರೇಮದಿಂದ ಚೆನ್ನಿಯು ಜೀವನವನ್ನು ಪುನಃ ತನ್ನದಾಗಿಸುವ ತುಂಬುಮನದಿಂದ—ಪಾಪದ ಪಿಂಡವನ್ನು—ಪುಣ್ಯದ ಪಿಂಡವೆಂದು, ಮುದ್ದಾಡಿ ನಲಿದರೆ—ಚೆನ್ನಿಯು ತನ್ನ ಹೇಸಿಜೀವನವು, ಕೊಳಕು ಮೈಯು ಭರಮನ ಪಾಲಿನದಾಗಬಾರದೆಂದು— ಜೀವನವನ್ನು ಕೊನೆಗೊಳಿಸುವಳು. ಆಶೆಯ ಹೊನಲಿನಲ್ಲಿ ತೇಲಾಡಿ, ಚೆನ್ನಿಯ ಜೀವನದೊಡನೆ ಮಗುವೊಂದು ಶುಭ್ರಜೀವನದ ಬಯಕೆಯನ್ನು ತಾಳಿದ್ದ ಭರಮನ ಪಾಲಿಗೆ ಸಿಕ್ಕಿದುದು, ನಾಲ್ಕಕ್ಷರಗಳಿಂದ ಹೃದಯವನ್ನು ಕೊರೆದ ಒಂದು ಹೆಣ್ಣಿನ ಜೀವನದ ಮುಡಿಪು.

ಕಥಾರಂಭದಲ್ಲೇ ಲೇಖಕರು, ಚೆನ್ನಿಯು ಬಂಗಾರವ್ವನ ಮನೆಯಲ್ಲಿ ದೇಹವನ್ನು ಮಾರುತ್ತಿರುವ ದುರಂತ ಸನ್ನಿವೇಶದಿಂದ ವಿಚಾರವನ್ನು ಮುಂದಿರಿಸಿ, ಕಣ್ಣಮುಂದೆ ಚೆನ್ನಿ-ಭರಮರ ವಿವಾಹಘಟನೆ-ವಿವಾಹಜೀವನ ಇವುಗಳನ್ನಿರಿಸಿ,ಒಂದು ದಾಂಪತ್ಯಜೀವನದ ಸುಂದರ ಚಿತ್ರವನ್ನು ನೀಡುತ್ತಾರೆ. ಆಗಾಗ ಪಟ್ಟಣದ ಕಡೆ ಸಾಗುವ ಭರಮನೊಂದಿಗೆ ಹೋಗಲಾಶಿಸುವ ಚೆನ್ನಿಯ ಹಟ, ಆ ಹಟವನ್ನು ಹತ್ತಿಕ್ಕಿ ಆಕೆಯನ್ನು ಬಿಟ್ಟು ತೆರಳುವ ಭರಮನ ಸಾಗು, ಹೀಗಿದ್ದರೂ ಸಂಜೆ ಭರಮ ಬಂದಾಗ ಮುಂಜಾನೆಯ ಮನಸ್ತಾಪವನ್ನು ಮರೆತಿಸುವ ಆ ಪ್ರೇಮಬಂಧ.—ಈ ಭಾಗಗಳನ್ನು, ಮುಂದೆಬರುವ ಚೆನ್ನಿ-ಭರಮರ ಜೀವನಾಂಧಕಾರ ಚಿತ್ರಣದ ಹಿನ್ನೆಲೆಗಳೆಂದೆನ್ನಲೇಬೇಕಾಗಿದೆ. ಈ ಮಧ್ಯದಲ್ಲೇ ಹನುಮನೆಂಬ ಮಿಲಿಟರಿವಾಲನು—ಭರಮನ ಗೆಳೆಯನು—ಭರಮನ ಅತಿಥಿಯಾಗಿ ಬರುವುದೂ,ಬಂದ ಮೇಲೆ ಸಲುಗೆಯಿಂದ ಆಗಾಗ ಬರುತ್ತ ಚೆನ್ನಿಯ ಜೀವನದಲ್ಲಿ ವಿಷಬೆರಸಯಿಸುವುದೂ— ಬಹು ಗೂಢವಾಗಿ ಚಿತ್ರಿತವಾಗಿವೆ. ಒಂದು ದಿನ ಭರಮನಿಲ್ಲದಂದು ಹನುಮನು ರಾತ್ರಿ ಬಂದು—ಚೆನ್ನಿಯನ್ನು ಬಲಾತ್ಕರಿಸಿ" ಆಕೆಯು ದೀಪವನ್ನು ದೊಡ್ಡದು ಮಾಡಲು ನೀಡಿದ ಕೈಯಿಂದಲೇ ದೀಪವನ್ನು ಕೆಡಿಸುವನು ...!"

ಇಲ್ಲಿಯ ವರೆಗೆ ಅವುದೋ ಒಂದು ಬಗೆಯ ಹಿಡಿತದಿಂದ ಸಾಗಿ ಬಂದ ಕತೆಯು— ಜೀವನದಲ್ಲಿ ಮತ್ತೊಂದು ತಿರಿಯನ್ನೀಸಿತು. ಚೆನ್ನಿಯು ತನ್ನ ಅಪರಾಧಕ್ಕಾಗಿ ಬೆದರಿ ಭರಮನ ಮುಂದೆ ನಾಚಿದರೆ, ಭರಮನು ಅದು ತಾನು ಪಟ್ಟಣಕ್ಕೆ ಕರೆದೊಯ್ಯದ ಮುನಿಸೆಂದು ಬಗೆವನು. ಆದರೇನು? ಚೆನ್ನಿ ಹೆಣ್ಣು! ಒತ್ತಾಯಕ್ಕಾಗಿ ಒಂದು ರಾತ್ರಿ ಜಾರಿದ ಕಾಲು— ಮುಂದಿನ ದಿನಗಳಲ್ಲಿ ಭರಮನ ಕಣ್ಣು ತಪ್ಪಿಸಿ— ಹನುಮನೆಡೆಗೆ ಸರಾಗವಾಗಿ ಜಾರತೊಡಗಿತು. ಅದಕ್ಕೆ ಕೊನೆಯೇ ಇಲ್ಲದಾಯಿತು"— ಭರಮನು ಮಾತ್ರ ಚೆನ್ನಿಯನ್ನು ತನ್ನ ಹೃದಯವೆಂದೇ ಬಗೆದು ಸಾಗುವ, ಚೆನ್ನಿಗಾಗಿ ಸರ್ವಸ್ವವನ್ನು ನೀಡಿದ ಬಡಪಾಯಿ ಪ್ರೇಮಿ. ಆದರೆ ಚೆನ್ನಿಯೇನು ಮಾಡುವಳು? ಆಕೆಯ ಪಾಲಿಗೆ ಬಂದ ವಾತಾವರಣವು ಆಕೆಯನ್ನು ಜೀವನದ ನೈಚ್ಯಕ್ಕೆ ತಳ್ಳಿ— ಬಂಗಾರವ್ವನ ಬಾಗಿಲ ಬೊಂಬೆಯನ್ನಾಗಿಸಿತು. ಭರಮ ತನ್ನೆಡೆಗೇ ಬಂದ ದಿನ ಆಕೆ ಮಾತ್ರ ಪಶ್ಚಾತ್ತಾಪದಗ್ಧಳಾಗಿ— ಭರಮನು 'ಪುಣ್ಯದ ಫಲ'ವೆಂದು ಬಗೆದ ಪಾಪದ ಪಿಂಡವನ್ನು ಆತನೆಡೆ ನೀಡಿ ಮರೆಯಾಗುವಳು.

ಈ ಚಿಕ್ಕ ಕಥೆಯಲ್ಲಿ ಸುಳಿವ ಎಲ್ಲ ವ್ಯಕ್ತಿಗಳನ್ನೂ ಲೇಖಕರು ಪರಿಪೂರ್ಣವಾಗಿ ಚಿತ್ರಿಸಿದ್ದಾರೆ. "ಪಾಪದ ಪಿಂಡ'ವೆಂಬ ಶಿರೋ-

ತಾಯಂದಿರೆ,

ನಿಮ್ಮ ಮಗುವಿಗೆ

ಸಾಕಷ್ಟು ತಾಯ ಹಾಲು ಬೇಕಲ್ಲವೆ?

ಹಾಗಾದರೆ ನೀವು ಈ ದಿನದಿಂದಲೇ

ಜೆನ್-ಓ ಮಿಲ್ಕ್

(GEN-O MILK)

ತೆಗೆದುಕೊಳ್ಳಲು ಪ್ರಾರಂಭಮಾಡಿರಿ!

ನಿಮ್ಮ ಊರಿನ ಕೆಮಿಸ್ಟರಲ್ಲಿ ದೊರೆಯದೆ ಹೋದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಅಜಿತ ಲ್ಯಾಬ್ಸ್. ಲಿ. ಮಿರಜ

ನಾವುವೇ ಕಥಾಂಗಭೂತತತ್ವವಾಗಿವೆ. ರಸಾನುಗುಣವಾದ ಶೈಲಿ- ಸುಂದರಭಾಷೆ- ಚಿಕ್ಕ ಕಥೆಗಳಲ್ಲಿರಬೇಕಾದ ವಸ್ತುವಿನ್ಯಾಸ- ಗಾಂಭೀರ್ಯಪೂರ್ಣ ವ್ಯಕ್ತಿಚಿತ್ರ- ಇವು ಸಹಜಸಂಪತ್ತಿನಿಂದ ಬೆಳಗಿ,- ಸಹಜಜೀವನದ- ಹಳ್ಳಿಯ ಬದುಕಿನ— ಕಥೆಯನ್ನು ರಸವತ್ತಾಗಿ ನಿರೂಪಿಸಿ ಸಾಗಿವೆ.

ಚೆನ್ನಿಯು ಹನುಮನಿಂದ ಗರ್ಭಧರಿಸಿ ತನ್ನ ಮುಂದಿನ ಜೀವನಕ್ಕಾಗಿ ಆತನೊಡನೆ ಬೇಡಿದಾಗ "ಅಯ್ಯೋ ಚೆನ್ನಿ!- ನನ್ನ ಮಿಲಿಟರಿ ಜೀವನದಲ್ಲಿ ಇಂಥ ಎಷ್ಟೋ ಹೆಣ್ಣುಗಳನ್ನು ನೋಡಿದ್ದೇನೆ" ಎಂದೆನ್ನುವಾಗ ನಾವು ತತ್ತರಿಸುತ್ತೇವೆ; ಚೆನ್ನಿಗಾಗಿ ಮರುಗುತ್ತೇವೆ. ಅವಳೆಷ್ಟಾದರೂ ಹೆಣ್ಣು. ತಪ್ಪಿಬೀಳಲು ಸುಲಭಸಾಧ್ಯಳು. ಅಂತಹ ಹೆಣ್ಣನ್ನು ತಪ್ಪಿಗೆಳೆದ ಹನುಮನಿಗಾಗಿ ನಾವು ಕುದಿಯುತ್ತೇವೆ. ಈ ಭಾಗವು ಕಥೆಗೊಂದು ತಿರುವು. ಮುಂದೆ ಚೆನ್ನಿ ವ್ಯಭಿಚಾರ-ಜೀವನದಲ್ಲಿ ತನ್ನ ಭರಮನನ್ನೇ ಕಂಡ ರಾತ್ರಿ- ಆ ರಾತ್ರಿಯಲ್ಲಿ ಭರಮ-ಚೆನ್ನಿಯರ ಯೋಗಕ್ಷೇಮ- ಚೆನ್ನಿಯ ತಳಮಳ-ಭರಮನು ಚೆನ್ನಿಗಾಗಿ ನೀಡಿದ ಕರಾವಲಂಬನ,- ಬಹುದಿನದಿಂದ ಅಗಲಿ ದೂರವಾಗಿ ಜೀವನದಲ್ಲೇ ಶೂನ್ಯವನ್ನುಂಡ ಆ ತಪ್ತಜೀವಿಗಳ ಆ ಕ್ಷಣಿಕ ಭಾವೀಜೀವನಗೋಪುರ- ಇವು ಕಥಾಸರಣಿಯಲ್ಲಿ ರಸನಿಷ್ಯಂದಿಗಳಾಗಿವೆ. ಭರಮನ ಆದರದ- ಪ್ರೇಮದ ಮಾತುಗಳನ್ನು ಕೇಳಿದ ಚೆನ್ನಿಯು ಆ ರಾತ್ರಿ, ತಪಿಸುವ ಭಾಗವನ್ನು ಲೇಖಕರು ಮನಮುಟ್ಟುವಂತೆ ನಿರ್ದೇಶಿಸಿದ್ದಾರೆ. ಚೆನ್ನಿಯು ಭರಮನಿಗಾಗಿ ಬರೆದ ಓಲೆಯು ಚೆನ್ನಿಯ ಕೈಯಿಂದಲೇ ಬರೆದುದಾಗಿರಬಹುದೇ ಎಂಬ ಒಂದು ಸಂದೇಹವು ವಾಚಕನಲ್ಲುದಿಸಿದರೂ- ಆ ಓಲೆ ಹಲ್ಲಸಕವಾದ ಆತ್ಮನಿವೇದನೆಯು- ಜೀವಿತಾರ್ಪಣವು ನವೇದೆಯನ್ನು ಮಿಡಿಯುವುದು. "ನೂರೆಂಟು ಗುಹ್ಯರೋಗಗಳಿಗೆ ಬಲಿಯಾದ ಈ ಒಡಲನ್ನು ನಿಮಗೆ ಬಡಿಸಲಾರೆ; ನಾನಿದುವರೆಗೆ ಬದುಕಿದ್ದುದು ಈ ಪಾಪದ ಪಿಂಡವನ್ನು ಬೀಸಲು, ಉದಾರವಮನಸ್ಸಿನಿಂದ ತಾವಿತ್ತನ್ನು ಪುಣ್ಯದ ಫಲವೆಂದಿರಿ! ಮುಂದಿನ ಜನ್ಮದಲ್ಲಾದರೂ ನಿಮಗೆ ಯೋಗ್ಯಳಾದ ಸತಿಯಾಳನ್ನಾಗಿ ಮಾಡು ಎಂದು ದೇವರನ್ನು ಬೇಡಿಕೊಳ್ಳುತ್ತೇನೆ" ಈ ಮಾತುಗಳು ಚೆನ್ನಿಯು ಪಡುವ ಪಶ್ಚಾತ್ತಾಪದ ಕುರುಹುಗಳು. ಮಾರ್ಮಿಕವಾದ ಸನ್ನಿವೇಶಗಳು. ಉ[illegible]ಸ್ಪಷ್ಟನಿರೂಪಣೆಯು. ವಸ್ತುಸ್ಫೋಟನೆಯ ಉದ್ದೇಶದಿಂದ ಈ ಚಿಕ್ಕ ಕಥೆಯಲ್ಲಿ ಎತ್ತಿಕೊಂಡ ಹಾಗೂ ಕಥಾಪ್ರವಾಹಕ್ಕೆ ತೊಡಕಾಗದ- ಚೆನ್ನಿ-ಭರಮರ ವಿವಾಹದ ಮೊದಲಿನ ನೋಟ, ವಿವಾಹಾನಂತರದ ದಿನಗಳು. ಹನುಮನ ಆತಿಥ್ಯ, ಚೆನ್ನಿಯು ಕಾಲು ಜಾರಿದುದು, ಹನುಮನೊಡನೆ ಚೆನ್ನಿಯ ಪ್ರಯಾಣ, [illegible]ಕಾ ಜೀವನ ಭರಮನ ಆಗಮನ, ಚೆನ್ನಿಯ ಇತಿವೃತ್ತವು [illegible]ನೆಗೊಂಡ ದಿನ- ಕೊನೆಗೊಂದು ಪತ್ರ- ಇವಿಷ್ಟನ್ನು ಲೇಖಕರು ಭಾವಪೂರ್ಣವಾಗಿ- ಸತ್ಯವಾಗಿ- ನಿರೂಪಿಸಿದ್ದಾರೆ. ಆದುದರಿಂದಲೆ ಈ ಕಥೆಯು ಒಂದು ಸತ್ಯಜೀವನವಾಗಿದೆ—

"**ಜಾತ್ರೆಗೆ ಕರೆ**" — ಜಾತ್ರೆಗೆ ಹೋಗಬೇಕೆಂಬ ಆಸೆಯಿಂದ, ಅಲ್ಲೂ ತವರೂರ ನೆನಹು ಬಂದು, ಆ ಸವಿಯೂಟದ ತವರೂರ ಯಾತ್ರೆಗಾಗಿ ಹಾರಯಿಸಿ, ಉತ್ಸುಕಳಾದ ಒಬ್ಬಾಕೆ ಹೆಣ್ಣುಮಗಳ ಒಂದು ಸುಂದರ ಚಿತ್ರವಿದು. ಇದೊಂದು ಜಾನಪದ ಗೀತೆ; ಆದುದರಿಂದಲೆ ಇದು ಸಂಸ್ಕಾರಪೂರ್ಣ ಹೃದಯಗೀತವಾಗಿದೆ. ಕಾವ್ಯ ನಿಯಮಗಳ ಕಟ್ಟುನಿಟ್ಟಿಲ್ಲದೆ ಒಲವಿನ ಜೀವನವನ್ನು ಸ್ವಾಭಾವಿಕವಾಗಿಯೇ ಸಾರುವ ಒಂದು ಗೀತವಾಗಿದೆ- ಜಾತ್ರೆಗೆ ಕರೆ. ಇಂತಹ ಹಾಡುಗಳು, ಇಂತಹ ಜೀವನಾನುಭವಗಳು, ಇಂತಹ ಸುರಸ ಸಹಜ ಹಾಡುಗಳು ಜನತೆಯ ಹೃದಯದರ್ಪಣವಾಗಿವೆ. ಎಷ್ಟೊಂದು ಸರಳವಾಗಿ—ಎಷ್ಟೊಂದು ಮೃದುವಾಗಿ ಈ ನಲ್ವಾಡು ಹೆಣೆಯಲ್ಪಟ್ಟಿದೆ!

"ಕರಿಯಾಕ ಬಂದಾರ ತವರವರಾ"—ಪ್ರತಿಯೊಂದು ಹಾಡಿನ ಕೊನೆಗೆ ಕುಣಿದು ನಲಿವ ರಸತರಂಗಿಣಿಯಿದು. ಮೊದಲನೆಯ ಪದ್ಯಗಳೆರಡರಲ್ಲಿ "ತನ್ನನ್ನು ಕರೆದೊಯ್ಯಲು ಬಂದ ಅಣ್ಣನ ವಿಚಾರ, ಅವನು ತಂದ ಗಾಡಿಯ ವಿಚಾರಗಳನ್ನು ಕಾಣಿಸಿದುದು, ಹಳ್ಳಿಯ ಹೆಣ್ಣುಮಗಳ ತವರೂರಿಗೆ ಸಾಗುವ ಹಂಬಲದ ಪೀಠಿಕೆಯಾಗಿದೆ. ಮುಂದಿನ ಪದ್ಯ ತವರಿನ ಜಾತ್ರೆಯ ವರ್ಣನೆ. ನಾಲ್ಕನೆಯ ಪದ್ಯವು ರಸಪೂರ್ಣವಾಗಿದೆ. "ಅವರ್ನ ಕೇಳೂ ಬಗಿ ಇನ್ನ ಹ್ಯಾಂಗ? ಇಂದು ಬಂದೀನಿ ಒಳಗ, ಆಗಿ ನೀರಾ......" ಈ ಎಡೆಯಲ್ಲಿ ಗಂಡ ಹೆಂಡಿರ ಆವುದೋ ಒಂದು ದಾಂಪತ್ಯಜೀವನದ ಗೂಢಚಿತ್ರವು ಮಾರ್ಮಿಕ-ಸಂಸ್ಕಾರಪೂರ್ಣವಾಗಿ ರೂಪಿತವಾಗಿದೆ. ೫ನೆಯ ಪದ್ಯವು ಆ ಹೆಣ್ಣಿನ ತವಕ. "ಹೋಗದಿದ್ದರೆ ತಾಯಿ ನೋಯುವಳು" "ಏನ್ ಮಾಡೋದು ಬ್ಯಾಡಂದ್ರ ನನ್ನ ದೇವರಾ...." ೬ನೆಯ ಪದ್ಯದಲ್ಲಿ, ಆಕೆಯಲ್ಲಿ—ಸಾಮಾನ್ಯ ಜೀವನದಲ್ಲೇ ಸಹಜವಾಗಿ ಹೊಳೆದ ಒಂದು ಯೋಚನೆ: "ಅಣ್ಣಾನಿಂದಲೇ ಅವರನ್ನು ಕರೆಸುವ ಯೋಚನೆ"— ಈ ಪದ್ಯವನ್ನು ಓದುವಾಗ ನಾವು ಆ ಹೆಣ್ಣಿಗಾಗಿ "ಭೇಷ್" ಎನ್ನುತ್ತೇವೆ. ಮುಂದಿನ ಪದ್ಯದಲ್ಲಿ ತನ್ನ ಕಲ್ಪನೆಯ ವಿಷಯದಲ್ಲಿ ಆಕೆಗೆ ಅಭಿಮಾನ. ಆದುದರಿಂದಲೆ ಆಕೆಯ ಹೃದಯ ತುಂಬಿ" ತಾಯಿಯಾಪ್ರೀತಿ— ರಾಯನ ಸಂಗ್ತೀ ಕೂಡಿ ...ಆದೀತಲ್ಲೇನs ಜೇನು ಸಕ್ರೀ ಜೋಡಿ" ಎಂದು ಗರತಿಯು ಆಡತಕ್ಕ ಮಾತನ್ನೇ ಆಡುತ್ತಾಳೆ. ಆಕೆಯ ಜೀವನಸರ್ವಸ್ವವು—ಆಕೆಯ ದೇವರು-ರಾಯನಿಲ್ಲದೆ ತವರೂರಲ್ಲಿ ಬರಲಿರುವ ರಾತ್ರಿ ಎಂದೆಂದೂ "ಸವಿರಾತ್ರಿಯಾಗದು" ಅವನು ಬಾರದ ಜಾತ್ರೆಯೂ ಸೊಗಸಾಗದು. ಹೀಗೆನ್ನುತ್ತ ಆಕೆ ಸ್ವಾಭಾವಿಕವಾದ ಒಲುಮೆಯಿಂದ "ತನ್ನ ದೇವರಿಗೆ ಬರುವ ಮನಸ್ಸು ಮಾಡುವಂತೆ ದೇವರಿಗೆ-ದೇವಿಗೆ-ಹರಕೆಯನ್ನು ಹೊತ್ತುಕೊಳ್ಳುವಳು," ಯಾಕೆಂದರೆ "ರಾಯ ಜೋಡಿದ್ದರ ಜಾತ್ರೀ ಸವಿಪೂರಾ" ಎಂದು ಆಶಿಸುವಳು. ಇಂತಹ ಗರತಿಯ ಜೀವನವು— ಆದೆಷ್ಟು ಮಧುರ ಶೈಲಿಯ-ಮಧುರ ರೂಪಣದಿಂದ ಕಳೆಗೊಂಡಿದೆ—

ಆದುದರಿಂದಲೆ ಜಯಂತಿಯು ಸರ್ವರೀತಿಯಲ್ಲೂ ಮಾರ್ಗದರ್ಶಕವಾಗಿದೆ. ಮನೆಮನೆಯಲ್ಲೂ ಕಾಲಿರಿಸಬೇಕಾದ ಆದರ್ಶ ಪತ್ರಿಕೆ. ಇಂತಹ ಉತ್ಕೃಷ್ಟ ಚಿತ್ರಗಳಿಗೂ ಜಯಂತಿ ಆಗಾಗ ಅನುವೀಯಲಿ!

(೨೮ನೆಯ ಪುಟಕ್ಕೆ ಮುಂದುವರಿದಿದೆ.)

ಸಾದರ ಸ್ವೀಕಾರ

★

೬೧. **ಸಣ್ಣ ಕತೆಗಾರರ ಮತ್ತು ಕಾದಂಬರಿಕಾರರ ಸಮ್ಮೇಳನಗಳು** (ವರದಿ). ಪ್ರಕಾಶಕರು ಸಾಹಿತಿಗಳ ಸಂಘ, ಬೆಂಗಳೂರು. ಕ್ರಾ. ೩ ದ ೮೨ ಪುಟಗಳು.

ಸಮ್ಮೇಳನಗಳಲ್ಲಿ ನಡೆದ ಪ್ರತಿಯೊಂದು ಕಾರ್ಯಕ್ರಮದ ಸಂಕ್ಷೇಪ ವರದಿಯೂ, ಸ್ವಾಗತಾಧ್ಯಕ್ಷ ಅಧ್ಯಕ್ಷರ ಭಾಷಣಗಳೂ, ಸ್ಪರ್ಧೆಗಳಲ್ಲಿ ಬಹುಮಾನ ಪಡೆದ ವಿಮರ್ಶೆ— ಸಣ್ಣ ಕತೆಗಳೂ ಇದರಲ್ಲಿ ಅಡಕಗೊಂಡಿದ್ದು, ಗ್ರಂಥಭಾಂಡಾರದಲ್ಲಿ ಸಂಗ್ರಹಿಸಿಡಬೇಕಾದ ಸಾಹಿತ್ಯಗ್ರಂಥದಂತಾಗಿದೆ— ಈ ವರದಿ. ಇಷ್ಟೊಂದು ಒಳ್ಳೆಯ ರೀತಿಯಿಂದ ಅಚ್ಚು ಹಾಕಿಸಿ ಒದಗಿಸಿಕೊಟ್ಟ ಸಾಹಿತಿಗಳ ಸಂಘದವರಿಗೆ ಧನ್ಯವಾದಗಳು.

೬೨ **ಕೆಳದಿಯ ಚೆನ್ನಮ್ಮ** (ಐತಿಹಾಸಿಕ ಏಕಾಂಕ ನಾಟಕ) ಬರೆದವರು ಶ್ರೀಮಾನ್ ಎನ್. ಡಿ. ಬಗರಿ, ವೀರಶೈವ ಸಾಹಿತ್ಯ ಸಮಿತಿ, ಬೆಳಗಾಂವಿ. ಪ್ರಕಾಶಕರು ಶ್ರೀ ಜಿ. ಕೆ. ಬೆಕ್ಕಿನಕೇರಿ, ವೀ ಸಾ. ಸಮಿತಿ, ಬೆಳಗಾಂವಿ. ಕ್ರಾ. ಅ. ೨೦ ಪುಟಗಳು. ಬೆಲೆ ೦–೩–೦.

೬೩ **ವರುಣ** (ಕವನಸಂಕಲನ). ಕವಿಗಳು ದಿವಂಗತ ಬಿಜಾಪುರ ಸದಾಶಿವರಾಯರು, ಮಂಗಳೂರು. ಸಂಪಾದಿಸಿ ಪ್ರಕಟಿಸಿದವರು ಪ್ರೊ. ರಂ. ಶ್ರೀ. ಮುಗುಳಿ, ವಿಲಿಂಗ್ಡನ್ ಕಾಲೇಜ್, ವಿಶ್ರಾಮಬಾಗ–ಸಾಂಗಲಿ. ಕ್ರಾ. ಅ. ೯೪ ಪುಟಗಳು. ಬೆಲೆ ೧-೪-೦.

೬೪ **ಸ್ನೇಹ ಸೂಕ್ತ** (ಕವನಸಂಕಲನ). ಕವಿಗಳು ಶ್ರೀ. ಹೇಮಂತ, ಹೈದರಾಬಾದ್. ಪ್ರಕಾಶಕರು ಶ್ರೀಮಾನ್ ಶ್ರೀ. ದೇಸಾಯಿ, ಸಾಹಿತ್ಯನಿಕೇತನ, ಹೈದರಾಬಾದ್. ಕ್ರಾ. ಅ. ೯೦ ಪುಟಗಳು. ಬೆಲೆ ೧-೮-೦.

೬೫ **ಕರ್ನಾಟಕ ಡೈರೆಕ್ಟರಿ** (ಸಚಿತ್ರ– ಕರ್ನಾಟಕ ದಿಗ್ದರ್ಶನ ಗ್ರಂಥ). ಸಂಪಾದಕರು ಶ್ರೀ. ಎ. ಕೇಶವ ಮತ್ತು ಶ್ರೀ. ಬಿ. ದಾಸ ದೇವರಾವ್. ಪ್ರಕಾಶಕರು ಅಜಾದ್ ಪಬ್ಲಿಕೇಶನ್, ಬಸವನಗುಡಿ, ಬೆಂಗಳೂರು ೪ ಕ್ರಾ. ೩ ದ ೩೪೦ ಪುಟಗಳು. ಬೆಲೆ ೫-೦-೦.

೬೬. **ಮಾತೆಯ ಕಂಬನಿ** (ಅರ್ಥಾತ್ ಸರದಾರ್ ವಲ್ಲಭಭಾಯಿ ಪಟೇಲರ ಜೀವನ ಚರಿತ್ರೆಯ ಸಾರ) ಪದ್ಯಮಯ ಕಿರುಹೊತ್ತಿಗೆ. ಶ್ರೀ. ರಾ ಶ. ಸಿಂದಗಿ; ವಿಜಾಪುರ ಅವರು ಬರೆದುದು. ಕ್ರಾ ಅ. ೩೦ ಪುಟಗಳು. ಬೆಲೆ ೦-೮-೦.

೬೭. THE TELE POST (ಇಂಗ್ಲಿಷ್ ಮಾಸಪತ್ರಿಕೆ). ಸಂಪಾದಕರು ಶ್ರೀಮಾನ್ ಕೆ. ರಾಮಮೂರ್ತಿ. ಅಖಿಲಭಾರತ ಅಂಚೆ ಹಾಗೂ ತಂತೀಖಾತೆಯ ಕೆಲಸಗಾರರ ಸಂಘದ ಮುಖ ಪತ್ರಿಕೆಯಿದು. ನ್ಯೂ ದಿಲ್ಲಿಯಿಂದ ಪ್ರಕಟಿಸಲಾಗುತ್ತಲಿದೆ. ಕ್ರಾ. ೩ ದ ೬೦ ಪುಟಗಳು.

ಈ ಪತ್ರಿಕೆಯು ಅಂಚೆ ಹಾಗೂ ತಂತಿ ಖಾತೆಯ ಕೆಲಸಗಾರರ ಸಂಘದ ಸುಸಂಘಟಿತ ಕಾರ್ಯಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಅಂಚೆ ಮತ್ತು ತಂತಿ ಶಾಖೆಯ ಕೆಲಸಗಾರರೆಂದರೆ ದೇಶದ ಜೀವಾಳವಿದ್ದಂತೆ. ಇವರ ಕಾರ್ಯಶಕ್ತಿ-ಪ್ರಾಮಾಣಿಕತನಗಳ ಮೇಲೆಯೇ ಭಾರತದ ಜನತೆಯ ದೈನಂದಿನ ಜೀವನ ಸುಖ-ಸಮಾಧಾನಗಳಿಂದ ಸಾಗಬಲ್ಲದು. ಆದುದರಿಂದ, ಪ್ರಭುತ್ವವೂ ಜನತೆಯೂ ಅಂಚೆ ಮತ್ತು ತಂತಿ ಖಾತೆಯ ಕೆಲಸಗಾರರ ಕಷ್ಟ-ನಷ್ಟಗಳ ನಿವಾರಣೆಗಾಗಿ ಜಾಗ್ರತೆವಹಿಸುವುದು ಅತ್ಯಂತ ಅವಶ್ಯವಾಗಿದೆಯೆಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ. ಈ ಪತ್ರಿಕೆ ಅವರ ಕಷ್ಟ ನಷ್ಟ, ಆಶೆ-ಆಕಾಂಕ್ಷೆಗಳ ಸಂದೇಶದ ವಾಹಕವಾಗಿದೆ. ಧಾರವಾಡದವರೇ ಆದ ಶ್ರೀಮಾನ್ ಟಿ ಆರ್. ಕುಲಕರ್ಣಿಯವರು, ಮಧ್ಯವರ್ತಿ ಸಂಘದ ಕಾರ್ಯಕಾರಿಮಂಡಲದಲ್ಲಿ ಒಬ್ಬ ಸದಸ್ಯರಾಗಿ ಆಯ್ಕೆ ಪಡೆದುದು, ಕನ್ನಡಿಗರಾದ ನಮಗೆಲ್ಲ ಅಭಿಮಾನದ ಸಂಗತಿಯಾಗಿದೆ.

೬೮. **ಮರುಳಾರ್ಯನ ಅನುಭವೋಕ್ತಿ** (ಪದ್ಯಸಂಕಲನ) ಬರೆದವರು ಶ್ರೀ. ಕೆ. ಸಿದ್ಧಲಿಂಗಣ್ಣ 'ವಿಶಾರದ' ಅಧ್ಯಾಪಕರು ಮಾಧ್ಯಮಿಕ ವಿದ್ಯಾಲಯ ಮುಧೋಳ. ಫೂ. ಕ್ಯಾ. ಅ. ೪೪+೧೯೨ ಪುಟಗಳು. ಬೆಲೆ ೨-೦-೦.



೬೯. **ಸಣ್ಣ ಕತೆಗಳು** (ಸಂಕಲನ) ಕತೆಗಾರರು 'ಅಶ್ವತ್ಥ' ಪ್ರಕಾಶಕರು ಜೀವನ ಕಾರ್ಯಾಲಯ, ಬಸವನಗುಡಿ, ಬೆಂಗಳೂರು. ಕ್ರೌ. ೮. ೧೬೪ ಪುಟಗಳು. ಬೆಲೆ ೨-೮-೦.

೭೦. **ಕ್ರಾಂತಿಕಾರ,** (ನಾಟಕ) ಬರೆದವರು 'ಅಶ್ವತ್ಥ' ಪ್ರಕಾಶಕರು ಜೀವನ ಕಾರ್ಯಾಲಯ, ಬಸವನಗುಡಿ, ಬೆಂಗಳೂರು. ಕ್ರೌ. ೮. ೬೦ ಪುಟಗಳು. ಬೆಲೆ ೦-೧೨-೦.

೭೧. **ಮರ್ಯಾದೆ ಮಹಲು** (ಸ್ವತಂತ್ರ ಸಾಮಾಜಿಕ ಕಾದಂಬರಿ). ಲೇಖಕರು 'ಅಶ್ವತ್ಥ'. ಧಾರವಾಡದ ಮನೋಹರ ಗ್ರಂಥಮಾಲೆಯ ೧೯೯-೧೧೦ ನೆಯ ಕುಸುಮ. ಕ್ರೌ. ೮. ೩೫೦ ಪುಟಗಳು. ಬೆಲೆ ೩-೮-೦.

೭೨. **ಸಣ್ಣ ಕಥೆಗಳು** (೩ನೆಯ ಸಂಕಲನ). ಕತೆಗಾರರು 'ಅಶ್ವತ್ಥ'. ಮೈಸೂರಿನ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯ ಪ್ರಕಾಶನ. ಕ್ರೌ. ೮. ೨೨೮ ಪುಟಗಳು. ಬೆಲೆ ೨-೪-೦.

೭೩. **ಕನ್ನಡಿಗ** (ವಾರಪತ್ರಿಕೆಯ ಕರ್ನಾಟಕ ಏಕೀಕರಣಾಂಕ) ಸಂಪಾದಕರು ಶ್ರೀ. ಹುಚ್ಚೀಶ್ವರ ಮೋದಿ, ಹುಬ್ಬಳ್ಳಿ. ಪ್ರಕಾಶಕರು ವಿಶ್ವಭಾರತಿ ಪ್ರಕಟನಾಲಯ, ಹುಬ್ಬಳ್ಳಿ. ಕ್ರೌ. ೪ದ ೧೦೦ ಪುಟಗಳು. ಬೆಲೆ ೧ರೂ.

೭೪ **ಮುಂಬಯಿ ಕರ್ನಾಟಕ ಸಂಘದ** ೧೯ನೆಯ ವರ್ಷದ ವರದಿ. ಕಾರ್ಯದರ್ಶಿಗಳು ಶ್ರೀ. ಗಳಾದ ರಾ. ಸು. ಸ್ವಾದಿ—ಟಿ. ಬಿ. ನಾಳ್ವೀಕರ. ಸಂಜಗಿರಿ ಸದನ, ಗಿರಗಾಂವ, ಮುಂಬೈ. ಡೆ. ೮. ೧೬ ಪುಟಗಳು.

೭೫ **ಅತ್ತಿಗೆ** (ಸಾಮಾಜಿಕ ಕಾದಂಬರಿ) ಲೇಖಕರು ಶ್ರೀ. ಎಸ್. ಅನಂತನಾರಾಯಣ. ಮೈಸೂರಿನ ಉಷಾಸಾಹಿತ್ಯಮಾಲೆಯ ೩೫-೩೬ ನೆಯ ಪುಷ್ಪ. ಕ್ರೌ. ೮, ೨೦೫ಪುಟಗಳು. ಬೆಲೆ ೨-೪-೦.

೭೬. **ಬಾಳ್ವೆ** (ಸಾಮಾಜಿಕ ಕಾದಂಬರಿ). ಲೇಖಕರು ಡಾ. ವಿ. ಕೆ. ರಾವ್, ನಂಜನಗೂಡು. ಉಷಾಸಾಹಿತ್ಯಮಾಲೆಯ ೩೭-೩೮-೩೯-೪೦ ಪುಷ್ಪ. ಕ್ರೌ. ೮. ೬೦೬ ಪುಟಗಳು. ಬೆಲೆ ೨-೦-೦.

೭೭. **ಹೊಲಿಗೆಯ ಕಲೆ** (ಸಚಿತ್ರ ತ್ರೈಮಾಸಿಕ). ಸಂಪಾದಕರು ಶ್ರೀಮಾನ್ ಹಳಪೇಟೆ ಚಿಂತಾಮಣಿರಾಯರು, ಕರ್ನಾಟಕ ಟೇಲರಿಂಗ್ ಕಾಲೇಜ್, ಗಾಂಧೀಚೌಕ-ಧಾರವಾಡ. ಡೆ. ೪ದ ೨೮ಪುಟಗಳು. ವಾರ್ಷಿಕ ಚಂದಾ ೨-೦-೦.

ಶ್ರೀ. ಹಳಪೇಟೆ ಚಿಂತಾಮಣಿರಾಯರ ಹೊಲಿಗೆಯ ವಿಷಯದ ತಜ್ಞತೆ ಜಯಂತಿಯ ವಾಚಕರಿಗೆ ಹೊಸ ವಿಷಯವೇನೂ ಅಲ್ಲ. ಈಗ ತಮ್ಮ ವಿಷಯವನ್ನೇ ಪ್ರಾಮುಖ್ಯವಾಗಿ ತಿಳುಹುವ ಅಪೇಕ್ಷೆಯಿಂದ ಸ್ವತಂತ್ರವಾಗಿ ಈ ತ್ರೈಮಾಸಿಕವನ್ನು ಪ್ರಕಟಿಸತೊಡಗಿದುದು ಸಂತೋಷದ ಸಂಗತಿ. ಕನ್ನಡಿಗರಿಗೆಲ್ಲ ಈ ಪತ್ರಿಕೆ ಪ್ರಯೋಜನಕಾರಿಯಾಗಿ, ಬಹುಕಾಲ ಬಾಳಲೆಂದು ನಮ್ಮ ಹಾರಯಿಕೆ.

(೨೩೮ನೆಯ ಪುಟದಿಂದ ಮುಂದುವರಿದುದು.)

ಒಂದು ಪತ್ರ

★

ಜಯಂತಿಯ ಅಕ್ಟೋಬರ್ ಸಂಚಿಕೆಯಲ್ಲಿ ಪ್ರಕಟವಾದ '**ಬದುಕಿದ ಜೀವದ ಬೆಲೆ**' ಎಂಬ ಕತೆಯನ್ನೋದಿದ ಶ್ರಿ ಎಸ್. ಎಸ್. ಮಾಟಲದಿನ್ನಿ ಬಿ ಕಾಮ್ (ಬಾಮ್) ಇವರು, ಆ ಕತೆಯನ್ನು ಬರೆದ ಡಾ ಕಮಲಾಪುರ ಕಾಂತರಾಯರಿಗೆ ಒಂದು ಪತ್ರ ಬರೆದಿದ್ದಾರೆ. ಆ ಪತ್ರದಲ್ಲಿ ಹೀಗಿದೆ:

"ಡಾ ಕಮಲಾಪುರ ಕಾಂತರಾಯರು ಧಾರವಾಡ ಇವರಿಗೆ....

ಯಸ್ ಯಸ್ ಮಾಟಲದಿನ್ನಿ ಯವರು ಮಾಡುವ ಅನೇಕ ವಂದನೆಗಳು. ಅಕ್ಟೋಬರ್ ತಿಂಗಳ ಜಯಂತಿ ಮಾಸಪತ್ರಿಕೆಯಲ್ಲಿ ೧೮೪ ನೆಯ. ಪುಟದಲ್ಲಿ ತಮ್ಮ ಅನುವಾದ 'ಬದುಕಿದ ಜೀವದ ಬೆಲೆ' ಈ ಕಥೆಯನ್ನು ಓದಿ ತುಂಬ ಆನಂದಭರಿತನಾದೆನೆಂದು ಹೇಳುವ ಆವಶ್ಯಕತೆ ಇಲ್ಲ. ಮೂಲ ಇಂಗ್ಲಿಷಿನಲ್ಲಿ ಬರೆದ ಶೈಲಿಗಿಂತ ತಮ್ಮ ಅನುವಾದವು ತುಂಬ ಅನುಕರಣೀಯವಾಗಿಯೂ ಹೃದಯದ್ರಾವಕವಾಗಿಯೂ ಇರುತ್ತದೆ. 'ಕುರುಡನಾಗಿ ಇರುವುದಕ್ಕಿಂತ ಅಂಗಹೀನನಾಗಿ ಇರುವುದು ಒಳ್ಳೆಯದು!'

ನಾವು ಪರಿಶ್ರಮ ತೆಗೆದುಕೊಂಡು ಅನುವಾದ ಮಾಡಿದ್ದಕ್ಕೆ ನನ್ನ ಅಭಿನಂದನೆಗಳನ್ನು ಕಳಿಸಿದ್ದೇನೆ; ಸ್ವೀಕರಿಸಿರಿ! ಇದರಂತೆ ಮುಂದೆಯಾದರೂ ತಮ್ಮಿಂದ ಈ ತರದ ಸೇವೆ ಸಲ್ಲಲೆಂದು ದೇವರಿಗೆ ನನ್ನ ಪ್ರಾರ್ಥನೆ ಇಂತೀ ವಂದನೆಗಳು.

ಎಸ್ ಎಸ್. ಮಾಟಲದಿನ್ನಿ"

ಜಯಂತಿಯಲ್ಲಿಯ ಒಂದೊಂದು ಲೇಖನವೂ ಜನರಿಗೆ ಒಂದೊಂದು ರೀತಿಯಲ್ಲಿ ಮೆಚ್ಚಿಕೆಯಾಗುತ್ತಿರುವುದು ಸಮಾಧಾನದ ಸಂಗತಿಯಾಗಿದೆ. ಜನತೆ ಜಯಂತಿಯ ಜೀವಿತದ ಹೊಣೆಗಾರಿಕೆಯನ್ನು ಹೊತ್ತರೆ, ಜನೋಪಯುಕ್ತವಾದ ಸಾಹಿತ್ಯ ಪ್ರಕಟನಾಕಾರ್ಯವನ್ನು ಜಯಂತಿ ಹೆಚ್ಚು ಹೆಚ್ಚಾಗಿಯೇ ಮಾಡೀತು.

ಸಂ. ಜ.

— ಶರತ್‌ಪ್ರಕಾಶನ ಮಂದಿರದ ಮೂರನೆಯ ಪ್ರಕಟನೆ —

ಮಗಳ ಮದುವೆ

(ಸಾಮಾಜಿಕ ಕಾದಂಬರಿ)

卐

ಬರೆದವರು : 'ಆನಂದಕಂದ'

ಕ್ರೌನ್ ಅಷ್ಟಪತ್ರದ ೩೫೦ ಪುಟಗಳು

ಬೆಲೆ ಸಾದಾ ಪ್ರತಿಗೆ ೪-೦-೦
ಉತ್ತಮ ಪ್ರತಿಗೆ ೪-೧೨-೦

೧೯೩೦ ನೆಯ ಇಸ್ವಿಯ ಸತ್ಯಾಗ್ರಹದ ಆಂದೋಲನವನ್ನು ಹಿನ್ನೆಲೆಯಾಗಿಟ್ಟುಕೊಂಡು, ಉತ್ತರ ಕರ್ನಾಟಕದ ಪಟ್ಟಣ ಮತ್ತು ಹಳ್ಳಿಗಳ ಸಾಮಾಜಿಕಜೀವನವನ್ನು ವಾಸ್ತವಸುಂದರವಾಗಿ ಚಿತ್ರಿಸಿದ ಕಾದಂಬರಿಯಿದು. ಹಿನ್ನೆಲೆಯ ಚಿತ್ರಣ, ಕಥಾವಸ್ತು, ಪಾತ್ರಸೃಷ್ಟಿ, ಭಾವಪರಿಪುಷ್ಟಿ, ಭಾಷೆಯರೀತಿ—ಈ ಎಲ್ಲ ದೃಷ್ಟಿಯಿಂದಲೂ ಹೊಸತು-ಹೊಸತೆನಿಸುವಂತಹ ರಮ್ಯ ಕಾದಂಬರಿ.

ಪುಟಸಂಖ್ಯೆ ಹೆಚ್ಚಾದುದರಿಂದ ಬೆಲೆಯನ್ನೂ ಹೆಚ್ಚಿಸಬೇಕಾಯಿತು.

ಆನಂದಕಂದರ

'**ಸುದರ್ಶನ**' ಸಾಮಾಜಿಕ ಕಾದಂಬರಿಯನ್ನು ಓದಿದ್ದೀರಲ್ಲವೆ ?

'**ರಾಜಯೋಗಿ**'
'**ಅಶಾಂತಿಪರ್ವ**' } ಈ ಐತಿಹಾಸಿಕ ಕಾದಂಬರಿಗಳನ್ನು ಓದಿದ್ದೀರಲ್ಲವೇ ?

'**ಮಗಳ ಮದುವೆ**'ಯನ್ನೂ ತರಿಸಿ ಒಂದು ಸಲ ಓದಿನೋಡಿರಿ. ಓದಲು ಕೈಯಲ್ಲಿ ಹಿಡಿದವರು ಮುನ್ನೂರು ಪುಟಗಳನ್ನು ಮುಗಿಸುವವರೆಗೂ ಕೆಳಗಿಡಲಾರಿರಿ. ಕಾದಂಬರಿಯಲ್ಲಿಯ ಒಂದೊಂದು ಪರಿಚ್ಛೇದವೂ ಒಂದೊಂದು ರಸಸೃಷ್ಟಿಯ ಚಿತ್ರವನ್ನೇ ಮನದ ಮುಂದೆ ನಿಲ್ಲಿಸುವುದು.

ಅಚ್ಚಾಗಿ ಸಿದ್ಧವಾಗಿದೆ. ಬೇಕಾದವರು ಕೂಡಲೆ ಬರೆದುಕೊಳ್ಳಬೇಕು.

ಶರತ್ ಪ್ರಕಾಶನ ಮಂದಿರ, ವಿಜಯರೋಡ್, ಧಾರವಾಡ

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು !
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ
ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ' ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಈಗ ತಾನೆ ಪ್ರಕಟಿಸಿದ 'ಆನಂದಕಂದರ' ಕರಂಗರೂಪಕ ಸಂಕಲನ:

ಬೆಳವಡಿ ಮಲ್ಲಮ್ಮ

ಕ್ರಾ. ಅ. ೧೧೬ ಪುಟಗಳು. **ಹೊಳಪಿನ ಕಾಗದ.** **ಬೆಲೆ ೧-೮-೦.**

ಹೊಸತಾಗಿಯೆ ಹೊರಟ ಕವನ ಸಂಕಲನ

ಕಾರಹುಣ್ಣಿವೆ

ಇದರಲ್ಲಿ 'ಆನಂದಕಂದ'ರ ರಸವತ್ತಾದ ೫೨ ಕವನಗಳು ಸಂಕಲನಗೊಂಡಿವೆ. ವಿವಿಧ ಭಾವಗಳನ್ನು ವಿಸ್ತರಿಸಿದ ಸುಂದರವಾದ ಭಾವಗೀತಗಳು! ಸಂಗೀತಗಾರರ ಕಾವ್ಯಗಾಯನ ಕಾರ್ಯಕ್ರಮಕ್ಕೆ ತುಂಬ ಸಹಕಾರಿಯಾದುವು!

ಕ್ರಾ. ಅ. ೧೨೮ ಪುಟಗಳು. ಅಂದವಾದ ಅಚ್ಚು. ಬೆಲೆ ೩-೦-೦.

ಸಧ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	**ಬಡತನದ ಬಾಳು**	**ಕರ್ನಾಟಕ ಜನಜೀವನ**
ಸುದರ್ಶನ	**ನಮ್ಮ ಬದುಕು**	ಜೀವನ ಚರಿತ್ರ
ಕವನ ಸಂಕಲನ	**ಸಂಸಾರ ಚಿತ್ರ**	**ಶ್ರೀ. ಬಸವಣ್ಣನವರು**
ವಿರಹಿಣಿ	**ಮಾತನಾಡುವ ಕಲ್ಲು**	
ಒಡನಾಡಿ		

ಅಲ್ಲದೆ ಶ್ರೀ. ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ '**ಜಾತೀಯಸಮಸ್ಯೆ**' '**ಕರ್ನಾಟಕ ಏಕೀಕರಣ**', ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೫ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೇ ಪತ್ರವ್ಯವಹಾರವನ್ನು ಮಾಡಿರಿ.

ಸಂಚಾಲಕ : **ಎಸ್. ಡಿ. ಧರಮಟ್ಟಿ, ಶ. ಪ್ರ. ಮಂದಿರ, ಧಾರವಾಡ.**

Printed by V. Y. Jathar at the Karnatak Printing Works, Dharwar, and Published for the Proprietors Jayanti Publications, by M. V. Melligatti at the Jayanti Office, Dharwar - 4238 - 52.

ಡಿಸೆಂಬರ್
೧೯೫೨

ಸಂಪುಟ ೧೫

ಸಂಚಿಕೆ ೭

ಈ ಸಂಚಿಕೆಯಲ್ಲಿ:

ಇಂದಿನ ನೀತಿಪತನದ ಕಾರಣ ಮೀಮಾಂಸೆ .... ಸಂಪಾದಕರು ೨೪೧
ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು) .... 'ಕಾಲಭೈರವ' ೨೪೩
ಮೃತ್ಯು (ಸಣ್ಣಕತೆ) ಶ್ರೀ. ಕುಲಕರ್ಣಿ ಬಿಂದುಮಾಧವ, ಬಾದಾಮಿ ೨೪೫
ಭಾರತೀಯ ಸಂಗೀತದ ಶ್ರುತಿಗಳು (ಸಂಗೀತ ವಿಜ್ಞಾನ) ಶ್ರೀ. ಶ್ರೀ. ತಟ್ಟಿ ರಾಮರಾಯರು ಬಿ. ಎ., ಬಿ. ಟಿ. ೨೪೯
ಹಿಂಗ್ಯಾಕ ನೋಡತಾನ ? (ಒಂದು ಸಲ್ಲಾಪ) ... ... 'ಆನಂದಕಂದ' ೨೫೩
ಆಚಾರ್ಯ ಶಾಂತಿಸಾಗರರು (ಜೀವನ ಪರಿಚಯ) ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೨೫೪
ನಾಲ್ಕು ಹನಿಗತೆಗಳು (ಅನುವಾದಿತ) ಶ್ರೀ. ಎಸ್. ಜಿ. ಶೆಟ್ಟಿ ಬಿ.ಎಸ್ಸಿ.(ಟೆಕ್) ಕೊಲ್ಹಾಪುರ ೨೫೭
ರಂಗ-ಸಿಂಗರ ಕತೆ (ಕವನ) .... 'ಆನಂದಕಂದ' . .. ೨೫೮
ಶಾರೀರಿಕ ಶಿಕ್ಷಣ ಅದರ ಮಹತ್ತ್ವ (ಲೇಖಾಂಕ ೨) ಶ್ರೀ. ಯ. ವ್ಯಂ. ಜಾವಡೇಕರ ಬಿ.ಎ., ಬಿ ಟಿ., ಡಿ.ಪಿಎಡ್. ಮುಂಬಯಿ ೨೫೯
ಈ ಮಲ್ಲಿಗೆ ಈ ಗುಲಾಬಿ (ಕವನ) ಶ್ರೀ. ಚೆನ್ನವೀರ ಕಣವಿ ಎಂ. ಎ. ಧಾರವಾಡ ೨೬೪
ವಿಜ್ಞಾನಿಗೆ (ಕವನ) ಶ್ರೀ. ಬಾಳು ಬಿ. ಉಪಾಧ್ಯೆ, ಸಮನೇವಾಡಿ . .. ೨೬೪
ತಿರುಗಿ ತಿರುಪತಿಗೆ (ಸಣ್ಣಕತೆ) ಶ್ರೀ. ಹೊನ್ನಮನೆ ಸೀತಾರಾಮ, ಚಿತ್ರದುರ್ಗ ... ೨೬೫
ಸೂರ್ಯಶಕ್ತಿಯ ಪ್ರಯೋಜನ (ವಿಜ್ಞಾನ ಪರಿಚಯ) ಶ್ರೀ. ವೆಂಕೋಬಾಚಾರ್ಯ ಉಪಾಧ್ಯಾಯ ಎಂ.ಎಸ್ಸಿ. ೨೬೭
ಕಾಲರಾ ಕ್ರಿಮಿಗಳ ಮೇಲೆ ತಾಮ್ರದ ಉಪಯೋಗ ಡಾ. ಕಮಲಾಪುರ ಕಾಂತರಾಯರು ಎಂ.ಬಿ.ಬಿ.ಎಸ್. ೨೭೫
ಮುಗಳ ಮದುವೆ (ಪುಸ್ತಕ ವಿಮರ್ಶೆ) ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೨೭೬
ಸಾಹಿತ್ಯವಿಹಾರ ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು . .. ೨೭೯
ಓ ನನ್ನೆದೆಯ ಹಾಡೆ ! (ಕವನ) ಶ್ರೀ. ದೇವೇಂದ್ರನಾಯಕ, ಧಾರವಾಡ . .. ೨೮೦
ಸಾದರ ಸ್ವೀಕಾರ.... ....ಹೊದಿಕೆಯ ೩ನೆಯ ಪುಟ

ಬಿಡಿ ಪ್ರತಿ ೧೦ ಆಣೆ

ಸಾದರ ಸ್ವೀಕಾರ

★

೭೮. **ಜಯಹಿಂದ** (ವಾರಪತ್ರಿಕೆಯ ದೀಪಾವಳಿ ಸಂಚಿಕೆ). ಸಂಪಾದಕರು ಶ್ರೀ. ಶಂ. ಬಾ. ಮನಗೋಳಿಯವರು. ವ್ಯವಸ್ಥಾಪಕರು ಶ್ರೀ. ರಾ. ವೆಂ. ಕರಿಗುದರಿಯವರು. ಪ್ರಕಾಶಕರು: ಹಿಂದ ಸೇವಾ ಟ್ರಸ್ಟ್, ಸ್ನೇಹಕುಂಜ, ಕಿಲ್ಲೆ. ಕ್ರಾ. ೩ದ ೧೦೪ ಪುಟಗಳು ಬೆಲೆ ೦-೧೨-೦.

೭೯. **ನಟಸಮ್ರಾಟ್ ಮನ್ನರಾಜ ಉಮರ್ಜಿ** (ಅಲ್ಪ ಪರಿಚಯ). ವಿಜಾಪುರದಲ್ಲಿ ಸ್ಥಾಪಿತವಾದ ಉಮ್ಮರ್ಜಿ ಸ್ಮಾರಕ ಸಮಿತಿಯ ಪ್ರಕಟನೆ. ಕ್ರಾ. ೮. ೮ ಪುಟಗಳು.

ಕರ್ನಾಟಕದ ಕಲಾ-ಸಂಸ್ಕೃತಿಗಳ ಉನ್ನತಿಗೆ ಕಾರಣವಾದ ವ್ಯಕ್ತಿಯಾಗಿದ್ದು ಆ ವ್ಯಕ್ತಿ ಗತಿಸಿದರೆ, ಕನ್ನಡಿಗರು ಅಂತಹರ ಸ್ಮಾರಕದ ಕಾರ್ಯದಲ್ಲಿ ಸಹಕರಿಸಬೇಕಾದುದು ಕರ್ತವ್ಯವೇ ಆಗಿದೆ.

೮೦. **ಕೋಳಿ ಸಾಕುವ ವ್ಯವಸಾಯ** (ಪರಿಚಯಾತ್ಮಕ ಕಿರುಹೊತ್ತಗೆ). ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯ ಪ್ರಕಟನೆ. ಕ್ರಾ. ೮. ೫೬ ಪುಟಗಳು.

ಕೋಳಿಗಳನ್ನು ಸಾಕುವುದು ನಮ್ಮ ನಾಡಿನಲ್ಲಿ ಹೊಸ ಮಾತಲ್ಲವಾದರೂ, ಅದೊಂದು ಲಾಭಕಾರಿಯಾದ ಗೃಹೋದ್ಯಮ ಎಂಬ ತಿಳಿವಳಿಕೆಯಿಂದ ಸಾಕುವುದು ತೀರ ಅಪೂರ್ವವೆಂದೇ ಹೇಳಬಹುದು. ಇತ್ತೀಚಿಗೆ ಕೋಳಿಯ ತತ್ತಿಯೂ ನಮ್ಮಲ್ಲಿ ಆಹಾರದಲ್ಲಿಯ ಒಂದು ಮುಖ್ಯವಸ್ತುವಾಗಿ ಪರಿಣಮಿಸುತ್ತಲಿದೆ. ಮಡಿನಂತರು ಇದಕ್ಕಾಗಿ ಮೂಗು ಮುರಿಯುತ್ತಲಿದ್ದರೂ, ಡಾಕ್ಟರರು ಪಥ್ಯವನ್ನಾಗಿ ಹೇಳಿದಾಗ, ಬದುಕುವಾಶೆಯಿಂದ, ಅನಿವಾರ್ಯವಾಗಿ ಇದನ್ನು ಆಹಾರವನ್ನಾಗಿ ಸೇವಿಸಲೇ ಬೇಕಾಗುತ್ತಲಿದೆ. ಹೊಸ ನಾಗರಿಕತೆಯುಳ್ಳಂತೂ ಕೋಳೀ ತತ್ತಿಯು ಆಹಾರವಸ್ತುವಾಗಿ ಹಳೆಯ ಮಾತಾಗಿದೆ. ಆದುದರಿಂದಲೇ ಇಂದು ಕೋಳಿಯ ತತ್ತಿಗೆ ಪೇಟೆಯಲ್ಲಿ ಬೇಡಿಕೆ ಹೆಚ್ಚಿದೆ. ಆದುದರಿಂದಲೆ ವ್ಯವಸ್ಥಿತವಾಗಿ ನಡೆಯಿಸಿಕೊಂಡು ಹೋದರೆ, ಕೋಳಿ ಸಾಕುವಿಕೆಯ ವ್ಯವಸಾಯವೊಂದು ಲಾಭಕಾರಿಯೆ ಆಗಬಹುದಾಗಿದೆ. ಆದುದರಿಂದಲೇ ನಮ್ಮ ಸರಕಾರಗಳೂ ಈ ವ್ಯವಸಾಯವನ್ನು ಪುರಸ್ಕರಿಸುತ್ತಲಿವೆ. ಕೋಳಿ ಸಾಕುವ ವ್ಯವಸಾಯಿಗಳಿಗೆ ಈ ಪುಸ್ತಕ ತುಂಬ ಪ್ರಯೋಜನಕಾರಿಯಾಗುವಂತಿದೆ. ಸಂದರ್ಭೋಚಿತ ಚಿತ್ರಗಳಿಂದ ಕೂಡಿ ಪುಸ್ತಕ ಅಚ್ಚುಕಟ್ಟಾಗಿ ಪ್ರಕಟವಾಗಿದೆ.

೮೧. **ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ, ಅರವಟಿಗಿ** (ವಾರ್ಷಿಕ ವರದಿ) ಮುಖ್ಯ ಕೇಂದ್ರದಿಂದ ಪ್ರಕಟವಾಗಿದೆ. ಡೆ. ೮. ೨೪ ಪುಟಗಳು.

ದೇಶದ ಕೆಲಸವೆಂದರೆ, ಸರಕಾರಗಳಲ್ಲಿ ಪ್ರಜಾಪ್ರತಿನಿಧಿ ಸಭೆಗಳಲ್ಲಿ ಸ್ಥಾನ-ಮಾನ ಗಳಿಸುವುದೇ — ಎಂಬ ಭಾವನೆ ನಮ್ಮ ಬಹುಜನ ದೇಶಭಕ್ತರ ತಲೆಯಲ್ಲಿದೆ. ಅಂತಹರು ಅರವಟಿಗೆಯ ಸರ್ವೋದಯ ಕೇಂದ್ರದ ಕೆಲಸಗಾರರು ನಡೆಯಿಸಿದ ಕಾರ್ಯಗಳನ್ನು ಕಣ್ಣಾರೆ ಕಂಡು, ನಿಜವಾದ ದೇಶಸೇವೆಯೆಂದರೇನೆಂಬ ಪ್ರತ್ಯಕ್ಷ ಪಾಠವನ್ನು ಕಲಿತುಕೊಳ್ಳಬಹುದು. ಜನಹೀನವಾದ ಮಲೆನಾಡಿನ ಹಳ್ಳಿಗಳನ್ನು ಜನಪೂರ್ಣವಾಗಿಸಿ, ಎಲ್ಲ ಬಗೆಯ ಸೌಕರ್ಯಗಳು ಅವರಿಗೆ ದೊರೆಯುವಂತೆ ಮಾಡಿ, ನಿರುದ್ಯೋಗಿಗಳಿಗೆ ಉದ್ಯೋಗವನ್ನು ಹಚ್ಚಿಕೊಟ್ಟು, ಬೀಳುಭೂಮಿಯನ್ನು ಅನ್ನದಾಗರವನ್ನಾ ಮಾಡಲು ಹೊರಟಿರುವ ಇಲ್ಲಿಯ ಕಾರ್ಯಕರ್ತರ ತ್ಯಾಗ ಕಾರ್ಯನಿಷ್ಠೆಗಳು ಪ್ರಶಂಸನೀಯವಾದುವುಗಳಾಗಿವೆ. ಇವ ಪ್ರಯತ್ನದಿಂದ ಕನ್ನಡ ಮಲೆನಾಡು ಮೊದಲಿನ ಸಮೃದ್ಧಿಜೀವನವನ್ನು ಪಡೆಯಲಿ !

೮೨. **ಜಗತ್‌ಪ್ರವಾಸಿ** (ಕನ್ನಡ ತ್ರೈಮಾಸ ಪತ್ರಿಕೆ) ಸಂಪಾದಕರು ಶ್ರೀ. ಆರ್. ಎ. ಜಾಗಿರದಾರ, ನಾಗರಹಳ್ಳಿ, ಥಪಲ ವಿಜಾಪುರ ಅವರು. ಡೆ. ೮. ೧೬ ಪುಟಗಳು. ವಾರ್ಷಿಕ ಚಂದಾ ೧-೮-೦. ಬಿಡಿ ಸಂಚಿಕೆಗೆ ೨-೬-೦.

೮೩. **ಕಿರಣಕುಂಜ** (ಕವನಸಂಗ್ರಹ). ಗುಳೆದಗುಡ್ಡ ಬಾಲಸಾಹಿತ್ಯಮಾಲೆಯ ಪ್ರಕಟನೆ. ಸಂಪಾದಕರು : ಶ್ರೀ. ಬಿ. ಎಸ್. ಜಮುಖಂಡಿ ಮತ್ತು ಶ್ರೀ. ಡಿ. ಡಿ. ಕಠಾರಿ, ಕ್ರಾ. ೧೬ ೧೨ ಪುಟಗಳು. ಬೆಲೆ ೦-೨-೦.

೮೪. **ಸರ್ವೋದಯ** (ಕನ್ನಡ ಮಾಸಪತ್ರಿಕೆ). ಅಖಿಲ ಭಾರತ ಸರ್ವಸೇವಾ ಸಂಘದ ಪತ್ರಿಕೆಯಿದು. ಸಂಪಾದಕರು ಶ್ರೀ. ಸಿದ್ದವನಹಳ್ಳಿ ಕೃಷ್ಣಶರ್ಮ ಮಲ್ಲೇಶ್ವರ — ಬೆಂಗಳೂರು ಕ್ರಾ. ೮. ೭೨ ಪುಟಗಳು. ವಾ. ಚಂ. ೫-೦-೦.

೮೫. **ಸ್ವರ್ಗಸುಖ** (ಬಾನುಲಿ ನಾಟಕ) ಲೇಖಕರು ಶ್ರೀ ವಿ. ಡಿ. ದೇಶಪಾಂಡೆ ವಕೀಲರು, ಧಾರವಾಡ. ಪ್ರಕಾಶಕರು ಲಕ್ಷ್ಮೀ ವೆಂಕಟೇಶ ಗ್ರಂಥಮಾಲೆ, ಲೈನ್‌ಬಝಾರ್, ಧಾರವಾಡ ಕ್ರಾ. ೮. ೧೮ ಪುಟಗಳು. ಬೆಲೆ ೦-೪-೦.

೮೬. **ಗರತಿ** (ಸ್ತ್ರೀಧರ್ಮನೀತಿಬೋಧಕ ಗ್ರಂಥ). ಬರೆದವರು ಶ್ರೀಮಾನ್ ' ಆತ್ಮಾರಾಮ ' ಅವರು. ಪ್ರಕಾಶಕರು ಸದ್ಗುರು ಸೇವಾ ಸಾಹಿತ್ಯಮಾಲೆ, ಪರಮಾನಂದ ಮಠ, ಸೀಗೆಹಳ್ಳಿ— ಸಿರಸಿ. ಕ್ರಾ. ೮. ೧೬+೧೮೨ ಪುಟಗಳು. ಬೆಲೆ ೨-೪-೦.

೮೭. **ಸಮಾಜ ವಿಕಾಸ** (ಹೊಸ ವಾರಪತ್ರಿಕೆ). ಸಂಪಾದಕರು ಶ್ರೀಮಾನ್ ಭಿ. ಕೃ. ನಾಡಕರ್ಣಿ, ಸಮಾಜ ವಿಕಾಸ ಕಾರ್ಯಾಲಯ, ಹಳೇ ಹುಬ್ಬಳ್ಳಿ. ಕ್ರಾ. ಫೋ. ೮ ಪುಟಗಳು. ವಾರ್ಷಿಕ ಚಂದಾ ೩ರೂ. ಬಿಡಿ ಸಂಚಿಕೆಗೆ ೧ಆಣೆ.

ಸಂಪಾದಕರು ಕನ್ನಡ ಪತ್ರಿಕಾಪ್ರಪಂಚದಲ್ಲಿ ಸಾಕಷ್ಟು ಅನುಭವ ಪಡೆದವರು. ಹೊಸ ಪತ್ರಿಕೆಯೊಂದನ್ನು ಹೊರಡಿಸಿ ಅದನ್ನು ಬೆಳೆಯಿಸಿ ಬದುಕಿಸಿಕೊಂಡು ಹೋಗುವುದು ಸದ್ಯದ ಪರಿಸ್ಥಿತಿಯಲ್ಲಿ ಎಷ್ಟೊಂದು ಕಠಿನವಾಗಿದೆಯೆಂಬ ಮಾತನ್ನು ಅವರು ಪೂರ್ಣವಾಗಿ ವಿಚಾರಮಾಡಿಕೊಂಡೇ ಈ ಹೊಸಪತ್ರಿಕೆಯ ಪ್ರಕಟನೆಯ ಸಾಹಸಕ್ಕೆ ಕೈಯಿಕ್ಕಿರಬಹುದು. ಪತ್ರಿಕೆ ಬಹುದಿವಸ ಬಾಳಿ ಕನ್ನಡ ಸಮಾಜದ ಸೇವೆ ಮಾಡಲಿ !

ಜಯಂತಿ

ಸಂ. ೧೫. ಸಂಚಿಕೆ. ೭

ಕುಟುಂಬದಲ್ಲಿಯ
ಪ್ರತಿಯೊಬ್ಬರೂ ಓದಿ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

ಸಂಪಾದಕರು :
ಶ್ರೀ ಬೆಟಗೇರಿ ಕೃಷ್ಣಶರ್ಮ

ವ್ಯವಸ್ಥಾಪಕರು :
ಶ್ರೀ. ಡಿ ಶರತ್‌ಕುಮಾರ

ಪ್ರಕಾಶಕರು :
ಶ್ರೀ. ಎಮ್. ವಿ ಮೊಳ್ಳಿಗಟ್ಟಿ.

ಸಂಚಿಕೆ ಪ್ರತಿ ತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ.

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು.

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಇಂದಿನ ನೀತಿಪತನದ ಕಾರಣಮೀಮಾಂಸೆ

卐

ಇಂದು ಪ್ರಪಂಚದಲ್ಲಿಯ ಪ್ರತಿಯೊಂದು ಮೂಲೆ-ಮೂಲೆಯಲ್ಲಿಯೂ, ಜನತೆಯ **ನೀತಿಪ**ತನವಾಗಿದೆಯೆಂಬ ಕೂಗು ಕೇಳಬರುತ್ತಲಿದೆ. ನೂರಾರು ವರ್ಷ ಪರಾಧೀನಜೀವನದಲ್ಲಿದ್ದ ಭಾರತದ ಜನತೆಯಲ್ಲಂತೂ ನೀತಿಯ ಮಟ್ಟ ತೀರ ಕೆಳಗಿಳಿದುಹೋಗಿದೆಯೆಂಬ ಮಾತನ್ನು ಎಲ್ಲರೂ ಒಪ್ಪಿಕೊಳ್ಳುವರು. ಧರ್ಮ-ನೀತಿಗಳೇ ಜೀವನದ ಜೀವಾಳವಾಗಿ ಇದ್ದ ಭಾರತ ಜನತೆಯ ನೀತಿಯ ಮಟ್ಟ ಇಷ್ಟೊಂದು ಕೆಳಗೆ ಇಳಿಯಲು ಕಾರಣವೇನು ? ಇದುವರೆಗೂ ನಾವು ನಮ್ಮ ಎಲ್ಲ ತಪ್ಪುಗಳ ಮೂಟೆಯನ್ನೂ ನಮ್ಮ ಪರಾಧೀನಜೀವನದ ಮೇಲೆ ಹಾಕುತ್ತ ಬಂದೆವು. ಇದಕ್ಕಾಗಿಯೆ, ನಮ್ಮನ್ನಾಳುತ್ತಿದ್ದ ಬ್ರಿಟಿಷರನ್ನು ಬೈಯುತ್ತ ಬಂದೆವು. ಆದರೆ ಇದೀಗ ಭಾರತದಲ್ಲಿ ಬ್ರಿಟಿಷರಿಲ್ಲ; ನಮ್ಮ ಜೀವನದ ಸೂತ್ರಸಂಚಾಲಕರು ನಾವೇ ಆಗಿದ್ದೇವೆ. ಆದರೂ ನಮ್ಮ ಜನತೆಯ ನೀತಿಯ ಮಟ್ಟ ಕೆಳಗೇ ಇಳಿಯುತ್ತ ಹೊರಟಿದೆಯಲ್ಲ ! ಹೀಗೆಯೇ ಇದು ಮುಂದುವರಿದರೆ, ಭಾರತದಲ್ಲಿ ಸುಖ-ಶಾಂತಿಗಳು ನೆಲಸುವ ಆಶೆಯೆಲ್ಲಿ ? ಸುಖ-ಶಾಂತಿಗಳಿಲ್ಲದ ರಾಜಕೀಯ ಸ್ವಾತಂತ್ರ್ಯ ಎಷ್ಟು ದಿನ ಬದುಕೀತು ?

ಕೇವಲ ರಾಜಕೀಯ ಕಾಯಿದೆಗಳಿಂದ ಜನರನ್ನು ನೀತಿವಂತರನ್ನಾಗಿ ಮಾಡುವುದು ಸಾಧ್ಯವಿಲ್ಲ. ಜನತೆಯಲ್ಲಿಯೆ ನೈತಿಕದೃಷ್ಟಿ ಸಹಜವಾಗಿ ಮೂಡಿದರೆಯೆ ಇದು ಸಾಧ್ಯವಾಗುವುದು. ಇಂದಿನ ಪ್ರಜಾಪ್ರಭುತ್ವ ಯುಗದಲ್ಲಿ, ರಾಜಕೀಯ ಸೂತ್ರ ನಡೆಯಿಸುವ ಸರಕಾರವೂ ಜನತೆಯಿಂದಲೆ ನಿರ್ಮಿತವಾದುದಾಗಿರುವುದು. ಜನತೆಯಲ್ಲಿ ನೈತಿಕ ದೃಷ್ಟಿಯಿರದಿದ್ದಾಗ, ಅದು ನಿರ್ಮಿಸಿದ ಸರಕಾರದಲ್ಲಿಯೂ ನೈತಿಕದೃಷ್ಟಿಯಿರುವುದು ಸಾಧ್ಯವಿರುವುದಿಲ್ಲ. ಸರಕಾರವನ್ನು ನಡೆಯಿಸುವ ವ್ಯಕ್ತಿಗಳು ಜನತೆಯ ಪ್ರತಿನಿಧಿಗಳೇ ಆದುದರಿಂದ, ಜನತೆಯಲ್ಲಿಲ್ಲದ ನೈತಿಕ ದೃಷ್ಟಿ ಜನತೆಯ ಘಟಕಗಳೆ ಆಗಿರುವ ಸರಕಾರ ನಡೆಯಿಸುವ ವ್ಯಕ್ತಿಗಳಲ್ಲಿ ಹೇಗೆ ಮೂಡಿ ನಿಂತೀತು. ಎಂತಲೇ ಬಹಿರಂಗವಾಗಿ ಮಾಡುವ ಜನಹಿತ ಕಾನೂನುಗಳಿಗೂ, ಅಂತರಂಗದಲ್ಲಿ ನಡೆಯಿಸುವ ಆಡಳಿತದ ರೀತಿಗೂ ಸಂಬಂಧವೇ ಉಳಿಯದಂತಾಗುವುದು. ಜನಸೇವಾಬುದ್ಧಿಯ ಜನರಿಂದ ಕೂಡಿದ ಸರಕಾರವಿದ್ದರೆ, ಅದು ತಾನೂ ನೀತಿಯಿಂದ ನಡೆದುಕೊಂಡೀತು; ಜನತೆಯನ್ನೂ ನೀತಿಪಥದಲ್ಲಿ ನಡೆಯಹಚ್ಚೀತು. ಆದರೆ ದುರ್ದೈವದ ಮಾತು : ಇಂದಿನ ಸರಕಾರಗಳಲ್ಲಿರುವ ಅನೇಕ ವ್ಯಕ್ತಿಗಳ ಆಚಾರ-ವಿಚಾರಗಳನ್ನು ನೋಡಿದರೆ, ದೊರೆತಿರುವ ಈ ಅನುಕೂಲ ಸಂದರ್ಭವನ್ನು ಸ್ವಾರ್ಥಸಾಧನೆಗೆ ಉಪಯೋಗ ಮಾಡಿಕೊಳ್ಳಬೇಕೆಂಬ ಪ್ರವೃತ್ತಿಯೆ ಹೆಚ್ಚಾಗಿ ಕಂಡುಬರುವುದು. ಹೆಂಡತಿಯ ತಂಗಿಗೆ ಔಷಧಿ ಕೊಡಿಸಿದ ಬಿಲ್ಲನ್ನೂ ಸರಕಾರದ ತಲೆಯ ಮೇಲೆ ಹೇರಲು ಬಯಸುವ ಮಂತ್ರಿಗಳೂ, ಹೋದಲ್ಲೆಲ್ಲ ಬೇರೆ ಬೇರೆಯವರ ಸರಬರಾಯಿಯಿಂದ ಲೋಲಾಡಿ, ಅವರು ಒದಗಿಸಿಕೊಟ್ಟ ಮೋಟಾರ್ ಕಾರುಗಳಲ್ಲಿ ತಿರುಗಾಡಿ, ಮತ್ತೆ ಸರಕಾರದ ಕಡೆಯಿಂದ ಪ್ರವಾಸವೆಚ್ಚವನ್ನು ವಸೂಲ್ ಮಾಡುವ ಹೊಣೆಗಾರ ಅಧಿಕಾರಿಗಳೂ, ಸಿಕ್ಕಲ್ಲೆಲ್ಲ ಲಂಚಮುಕ್ಕಿ ನ್ಯಾಯಾನ್ಯಾಯಗಳನ್ನು ತಲೆಕೆಳಗು ಮಾಡುವ ಆಡಳಿತಗಾರರೂ ಇರುವ ಸರಕಾರಗಳು, ಜನತೆಯಲ್ಲಿ ನೈತಿಕ ದೃಷ್ಟಿಯನ್ನು ಹೇಗೆ ಮೂಡಿಸಬಲ್ಲವು? ಇಷ್ಟೇ ಅಲ್ಲ, ಇಂತಹ ಸರಕಾರಗಳಲ್ಲಿರುವ ಸ್ವಾರ್ಥಿ ವ್ಯಕ್ತಿಗಳು, ಜನತೆಯಲ್ಲಿ ಇಲ್ಲದ ವಿಲೋಭನೆಯನ್ನು ಹುಟ್ಟಿಸುವುವು. ಸರಕಾರದಲ್ಲಿಯ ಅಧಿಕಾರಗಳು ಸ್ವಾರ್ಥಸಾಧನೆಗೆ ಅನುಕೂಲವಾಗಿವೆ ಎಂದು ತಿಳಿದ ವ್ಯಕ್ತಿಗಳು, ಸುಮ್ಮಗೆ ಏಕೆ ಕುಳಿತುಕೊಳ್ಳು-

ವರು? ಸಹಜವಾದ ಸ್ವಾರ್ಥಪ್ರವೃತ್ತಿ ಅವರನ್ನೂ ಜಾಗೃತಗೊಳಿಸಿ, ಆಡಳಿತದ ವಿಷಯವಾದ ಅತೃಪ್ತಿ-ಅಸಂತುಷ್ಟಿಗಳನ್ನು ಜನತೆಯಲ್ಲಿ ಹಬ್ಬಿಸಲು ಪ್ರಾರಂಭಿಸುವರು. ಇನ್ನವರ ಅಧಿಕಾರಸ್ಥಾನಗಳನ್ನು ಆಕ್ರಮಿಸಲು ಹಲವು ಬಗೆಯ ಉದ್ವೇಗಕಾರಕ ಚಟುವಟಿಕೆಗಳನ್ನು ಪ್ರಾರಂಭಿಸುವರು. ಸ್ವಾರ್ಥವನ್ನು ಸ್ವಾರ್ಥದಿಂದಲೇ ಗೆಲ್ಲಬೇಕೆಂದು ಹೊರಟಾಗ, ನಾಡಿನಲ್ಲಿ ಅಶಾಂತಿ, ಅಸುಖ, ನೀತಿಪತನಗಳಲ್ಲದೆ ಸತ್ಪರಿಣಾಮಗಳೆಂದೂ ಉಂಟಾಗಲಾರವು. ಭಾರತದ ಜನತೆಯ ನೀತಿಯ ಪತನಕ್ಕೆ ಇದೇ ಪರಿಸ್ಥಿತಿಯು ಕಾರಣವಾಗಿದೆ.

ಇನ್ನೊಂದು ಕಾರಣವೆಂದರೆ: ಇಂದು ಅರ್ಥ, ಅಧಿಕಾರ, ಬುದ್ಧಿ, ದೇಹಶ್ರಮಗಳಲ್ಲಿ ಸರಿಯಾದ ಸಹಕಾರ_ಸಹಾನುಭೂತಿಗಳು ಇಲ್ಲದಿರುವುದು. ಎಲ್ಲವನ್ನೂ ಸಮಂಜಸರೀತಿಯಿಂದ ಸರಿಗೊಳಿಸಿ ಜನತೆಯಲ್ಲಿ ಸಮತೂಕವನ್ನು ತಂದುನಿಲ್ಲಿಸುವುದು ಬುದ್ಧಿಯ ಕೆಲಸವಾದರೂ, ಅರ್ಥ-ಅಧಿಕಾರಗಳು ಅದರ ಸ್ಥಾನವನ್ನು ಕಸಿದುಕೊಂಡು, ಅದನ್ನು ಸ್ಥಾನಭ್ರಷ್ಟವಾಗಿಸಿವೆ. ಮುನ್ನೋಟವಿಲ್ಲದ ದೇಹಶ್ರಮ ಬುದ್ಧಿಯ ಬಲವನ್ನು ಅಪೇಕ್ಷಿಸದೆ, ಅರ್ಥ-ಅಧಿಕಾರಗಳ ಬೆನ್ನುಹತ್ತಿ ನಡೆದಿವೆ. ವೈಯಕ್ತಿಕಸ್ವಾರ್ಥಗಳು ತಂತಮ್ಮ ಮಂಡಲ ವೊಂದನ್ನು ಕಟ್ಟಿಕೊಳ್ಳುವುದಕ್ಕಾಗಿ, ಜನತೆಯ ಸುಖ-ಶಾಂತಿಗಳ ಪರಿವೆಯಿಲ್ಲದೆ ಹೊಡೆದಾಡುತ್ತಲಿವೆ. ಬೇಕಾದಷ್ಟು ನಿಃಸ್ವಾರ್ಥಿಯಾಗಿ ವಿವೇಕಬುದ್ಧಿ ಕೂಗಿಕೊಳ್ಳುತ್ತಲಿದ್ದರೂ, ಅದರ ಕೂಗಿನ ಕಡೆಗೆ ಯಾರೂ ಲಕ್ಷ್ಯವನ್ನೇ ಕೊಡುತ್ತಿಲ್ಲ. ಇಷ್ಟೇ ಅಲ್ಲ; ಬುದ್ಧಿಯನ್ನು ಮೆಟ್ಟಿ ತುಳಿಯುವ ವಿಧ್ವಂಸಕಕಾರ್ಯಕ್ಕೂ ಸಿದ್ಧವಾಗುತ್ತಲಿವೆ ಈ ಅರ್ಥ, ಅಧಿಕಾರ, ದೇಹಶ್ರಮಗಳು.

ಇಂತಹ ಪರಿಸ್ಥಿತಿಯನ್ನು ನಿರ್ಮಾಣಮಾಡಿದುದು ನಮ್ಮ ನಾಡಿನಲ್ಲಿಯ ಸಾಮಾಜಿಕಶೈಥಿಲ್ಯ. ನಮ್ಮ ಸಮಾಜದಲ್ಲಿ ಇಂದು, ಮಧ್ಯಮವರ್ಗದ ಜನತೆಗೆ ತಮ್ಮ ಸ್ಥಾನದಲ್ಲಿದ್ದು ಬಾಳುವುದಕ್ಕೆ ಅವಕಾಶವೇ ಇಲ್ಲದಂತಾಗಿದೆ. ಮಧ್ಯಮವರ್ಗದ ಜನತೆಯೆಂದರೆ ಅರ್ಥ, ಅಧಿಕಾರ, ಬುದ್ಧಿ, ದೇಹಶ್ರಮ— ಇವೆಲ್ಲವುಗಳ ಮಹತ್ತ್ವವನ್ನೂ ಕೂಲಂಕಷವಾಗಿ ಅರಿತುಕೊಂಡವರು. ಜೀವನದಲ್ಲಿ ಇವು ನಾಲ್ಕು ಶಕ್ತಿಗಳಿಗೂ ಸರಿಯಾದ ಸ್ಥಾನವನ್ನು ಕೊಟ್ಟು ಸಮನ್ವಯವನ್ನು ಸಾಧಿಸುವವರು. ಸಿರಿತನದ ಪರಡಿ ಭಾರವಾದಾಗ, ಬಡತನದ ಪರಡಿಯ ಕಡೆಗೆ ಒಲಿದೂ— ಕುರುಡು ದೇಹಶ್ರಮ ಪ್ರಲಯವನ್ನೆಬ್ಬಿಸಿದಾಗ ಅರ್ಥ-ಅಧಿಕಾರಗಳಿಗೆ ಸಂರಕ್ಷಣೆಕೊಟ್ಟೂ, ನಾಡಿನಲ್ಲಿ ಸಮತೆಯನ್ನು ಕಾಯುವವರು. ಸುಖ-ದುಃಖಗಳೆರಡರ ಸತ್ಯವನ್ನೂ ಚೆನ್ನಾಗಿ ತಿಳಿದುಕೊಂಡವರು. ಸುಖಾಂಧರಾದವರಿಗೆ ಜೀವನದ ಅಸ್ಥಿರತೆಯ ಭೀತಿಯನ್ನು ಹುಟ್ಟಿಸಿಯೂ ದುಃಖಾಂಧರಾದವರಿಗೆ ಕರ್ಮಶ್ರದ್ಧೆಯನ್ನು ಹುಟ್ಟಿಸಿಯೂ ಸರಿಯಾದ ದಾರಿಗೆ ತರುವವರು. ಆದರೆ ಇಂದಿನ ಸಾಮಾಜಿಕ ಪರಿಸ್ಥಿತಿ ಇಂತಹ ಮಧ್ಯಮ ವರ್ಗದ ಅಸ್ತಿತ್ವಕ್ಕೆ ಅವಕಾಶವನ್ನೇ ಕೊಡದಂತೆ ಮಾಡಿಬಿಟ್ಟಿದೆ.

ಹಿಂದಿನ ಕಾಲದಲ್ಲಿ ಮಧ್ಯಮವರ್ಗದವರೆನಿಸಿಕೊಂಡು, ದೇಶದ ಸರ್ವತೋಮುಖ ಪ್ರಗತಿಗೂ ಕಾರಣವಾಗಿದ್ದ ಮಧ್ಯಮವರ್ಗದ ಜನವಿಂದು, ಅರ್ಥ-ಅಧಿಕಾರಗಳ ಒತ್ತಾಯಕ್ಕೆ ಒಳಗಾಗಿ ಸುಲಿಗೆಗೆ ಗುರಿಯಾಗಿದೆ. ಅವರಲ್ಲಿ ಸಂಸ್ಕೃತಿ-ಸದ್ಭಾವನೆಗಳ ಹೊರತು ಉಳಿದ ಬಂಡವಾಳವೇನೂ ಉಳಿದಿಲ್ಲ. ಆದರೆ ಅವರು ಬದುಕಿ ಬಾಳಬೇಕಾದರೆ, ಈ ಸಂಸ್ಕೃತಿ-ಸದ್ಭಾವನೆಗಳು ಯಾವ ಪ್ರಯೋಜನಕ್ಕೂ ಬಾರವೆಂಬ ಮಾತು, ಕ್ಷಣ-ಕ್ಷಣಕ್ಕೂ ಮನವರಿಕೆಯಾಗಲು ತೊಡಗಿದೆ. ಆದುದರಿಂದ ಅವರು ಬದುಕುವ ಉತ್ಕಟವಾದ ಆಶೆಗಾಗಿ ಬೇರೆ ದಾರಿಯನ್ನೇ ಹಿಡಿಯಬೇಕಾಗಿದೆ. ಇದ್ದ ಬುದ್ಧಿಯನ್ನು ದುರ್ಬುದ್ಧಿಯನ್ನಾಗಿಸಿ ಅರ್ಥ-ಅಧಿಕಾರಗಳ ಬೆನ್ನು ಹತ್ತಬೇಕು ಒಂದು; ಇಲ್ಲವೆ ಸಂಸ್ಕೃತಿ-ಸದ್ಭಾವನೆಗಳನ್ನು ಕಳಕೊಂಡು ಕುರುಡು ದೇಹಶ್ರಮದ ಬೆನ್ನು ಹತ್ತಬೇಕು ಒಂದು. ಮಧ್ಯಮವರ್ಗದವರಿಗೆ ಬದುಕಿ ಬಾಳುವುದು ಸದ್ಯದ ಕಾಲದಲ್ಲಿ ಶಕ್ಯವೇ ಇಲ್ಲ. ಜಠರದ ಹಸಿವು ಅವರ ಕಡೆಯಿಂದ ಎಂತಹ ಪಾಪವನ್ನು ಮಾಡಿಸೀತೆಂಬ ನಿಯಮವೂ ಇಲ್ಲ. ಕಾಯುವ ಕೈಯೇ ಕೊಲ್ಲುವ ಕೆಲಸ ಮಾಡಲು ತೊಡಗಿದರೆ, ಜನತೆಯಲ್ಲಿ ಸುಖ-ಶಾಂತಿಗಳು ಹೇಗೆ ಉಳಿಯಬೇಕು? ಮಧ್ಯಮವರ್ಗದ ಪತನವೇ ಇಂದಿನ ಜನತೆಯ ನೀತಿಯ ಪತನದ ಮೂಲಕಾರಣವೆಂದು ಇಂದು ಗಟ್ಟಿಮುಟ್ಟಾಗಿ ಹೇಳಲೇ ಬೇಕಾಗಿದೆ. ಮಧ್ಯಮವರ್ಗದ ವಿನಾಶವೆಂದರೆ, ದೇಶದ ಸಂಸ್ಕೃತಿ-ಸದ್ಭಾವನೆಗಳ ವಿನಾಶ. ಸಂಸ್ಕೃತಿ-ಸದ್ಭಾವನೆಗಳ ವಿನಾಶವೆಂದರೆ ಜನತೆಯ ನೈತಿಕ ಪತನ. ಜನತೆಯ ನೈತಿಕಪತನವೆಂದರೆ ರಾಷ್ಟ್ರದ ವಿನಾಶಕ್ಕೆ ಮುಖ್ಯ ಕಾರಣ.

— **ಸಂಪಾದಕರು**

(೨೬೮ನೆಯ ಪುಟದಿಂದ ಮುಂದುವರಿದುದು.)

ಗಳಿಂದ ರೂಪುಗೊಂಡಿರುತ್ತದೆ. ಅದೊಂದು ಒಳ್ಳೆಯ ಜೀವನದ ಪರಿಪಕ್ವದೃಷ್ಟಿಯಾದುದರಿಂದ, ಯಾವ ರೂಪದಲ್ಲಾದರೂ ಅದು ಜನತೆಯ ಮನಸ್ಸಿಗೆ ಹೋಗಿ ಮುಟ್ಟುವುದವಶ್ಯ. ಈ ಕಾರ್ಯವು 'ಮಗಳ ಮದುವೆ' ಯಿಂದಲೂ ಆಗಿದೆ. ಇಂಥ ಜೀವನ ದೃಷ್ಟಿಯಲ್ಲಿ ಹೊಸತನವನ್ನು ಇಲ್ಲಿ ಹುಡುಕಲು ಹೋಗದೆ ಬೆಟಗೇರಿಯವರು ಜೀವನವನ್ನು ಕಾಣುವ ನವೀನ ದೃಷ್ಟಿಯನ್ನು ನಾವು ತಿಳಿದುಕೊಳ್ಳಬೇಕು. ಅಂದರೆ ಈ ಕಾದಂಬರಿಯ ನಾವೀನ್ಯ, ಚಿತ್ರಿಸಲ್ಪಟ್ಟ ಜೀವನದಲ್ಲಿಯ ವೈವಿಧ್ಯ, ಕಲಾವಿದನ ಕಲ್ಪಕತೆ ಮತ್ತು ರಸಸೃಷ್ಟಿಯಲ್ಲಿಯ ಪರಿಶುದ್ಧತೆಗಳ ಅರ್ಥವಾಗುವುದು.

ನಾಡುನಡೆ

ಗ್ರಂಥಕರ್ತರ ಬಾಯಿಗೆ ಗಡ್ಡೆ

卐

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಹುಟ್ಟಿದಂದಿನಿಂದಲೂ ಮುಂಬಯಿ ಸರಕಾರ, ಆ ಸಂಘದ ಮುಖಾಂತರವಾಗಿ ಕನ್ನಡ ಗ್ರಂಥಕಾರರಿಗೆ ವರು-ವರುಷವೂ ಬಹುಮಾನ ಧನವನ್ನು ಹಂಚುತ್ತಲಿದ್ದಿತು. ಅಲ್ಪಪ್ರಮಾಣದಲ್ಲಿಯೆ ಪ್ರಾರಂಭವಾದ ಆ ಬಹುಮಾನಧನ, ೭೫೦ ರೂ. ಗಳ ಮೊತ್ತಕ್ಕೆ ಏರಿದ್ದುದು, ಈ ಸಲ ಒಮ್ಮೆಲೆ ಶೂನ್ಯಕ್ಕೆ ಇಳಿದುದು ವಿಷಾದದ ಸಂಗತಿ. ಇದೇ ಬಗೆಯ ಬಹುಮಾನಧನವನ್ನು ಮದ್ರಾಸ್ ಸರಕಾರವೂ ಗ್ರಂಥಕರ್ತರಿಗೆ ಹಂಚುತ್ತಲಿದ್ದು, ಅದೇನೂ ಅದನ್ನು ನಿಲ್ಲಿಸಿಬಿಟ್ಟಿಲ್ಲ. ಆದರೆ ಸೆಟ್ಟಿಯ ಲೆಕ್ಕಾಚಾರದ ಮುಂಬಯಿ ರಾಜ್ಯದ ಪ್ರಜಾ ಸರಕಾರ, ಕನ್ನಡ ಗ್ರಂಥಕರ್ತರ ಬಾಯಿಗೆ ಬೀಳುತ್ತಲಿದ್ದ ಈ ಚುರುಮುರಿ-ಪುಠಾಣಿಯ ಪ್ರಸಾದವನ್ನೂ ನಿಲ್ಲಿಸಿಬಿಡುವ ಪುಣ್ಯಕಾರ್ಯಕ್ಕೆ ಸಿದ್ಧವಾದುದು ಆಶ್ಚರ್ಯಪಡಬೇಕಾದ ಸಂಗತಿಯಾಗಿದೆ. ಇದನ್ನು ನಿಲ್ಲಿಸಿ ಕನ್ನಡ ಗ್ರಂಥಕರ್ತರ ಅನುಕೂಲತೆಗಾಗಿ ಇನ್ನೇನಾದರೂ ಹೊಸ ಯೋಜನೆ ಕಲ್ಪಿಸಿದ್ದಾರೆಯೆ? — ಎಂದು ವಿಚಾರಮಾಡಿ ನೋಡಿದರೆ, ಅದೇನೂ ಇರುವಂತೆ ಕಾಣುವುದಿಲ್ಲ. ಬೇಕಾದಲ್ಲಿ ಬೇಕಾದಷ್ಟು ಹಣವನ್ನು ಬಿತ್ತುತ್ತಿರುವ ಮುಂಬಯಿ ಸರಕಾರ, ಕನ್ನಡ ಗ್ರಂಥಕರ್ತರನ್ನೇಕೆ, ಬರಿಗೈಯವರನ್ನಾಗಿ ಮಾಡಲು ಮನಸ್ಸು ಮಾಡಿದೆಯೋ ಏನೊ! ಮುಂಬಯಿ ಸರಕಾರಕ್ಕೆ ಕೋಳಿಯ ಹುಟ್ಟುವಳಿ ಬೇಕಾಗಿದೆ; ಮೀನದ ಹುಟ್ಟುವಳಿ ಬೇಕಾಗಿದೆ; ನೀರಾದ ಹುಟ್ಟುವಳಿ ಬೇಕಾಗಿದೆ; ಕುರಿಗಳ ಹುಟ್ಟುವಳಿ ಬೇಕಾಗಿದೆ; ಆದರೆ ಗ್ರಂಥಕರ್ತರ ಹುಟ್ಟುವಳಿ ಬೇಡವಾಗಿದೆಯೆಂದು ತೋರುವುದು. ಏಕೆಂದರೆ ಗ್ರಂಥಕರ್ತರು, ಕುರಿ-ಕೋಳಿ-ಮೀನಗಳಂತಾಗಬೇಕಾದ ರಾಜ್ಯದ ಜನತೆಯಲ್ಲಿ ಇಲ್ಲದ ವಿಚಾರವನ್ನು ಹಾಕಿ, ಅವರನ್ನು ಮನುಷ್ಯರಂತೆ ಸ್ವತಂತ್ರಬುದ್ಧಿಯಿಂದ ವರ್ತಿಸಲು ಹಚ್ಚಬಹುದು. ಇದೇ ಹೆದರಿಕೆಯಿದ್ದರೂ ಇರಬಹುದು ಇಂದಿನ ಮುಂಬಯಿ ಸರಕಾರಕ್ಕೆ. ಕನ್ನಡ ಗ್ರಂಥಕರ್ತರಿಗೆ ಇಂದು ಸರಕಾರದಿಂದ ಸಹಾಯವಿಲ್ಲ; ತಮ್ಮ ಹೊಟ್ಟೆತುಂಬಲಾರದೆ ಕಳವಳಪಡುತ್ತಿರುವ ಜನತೆಗೆ ಗ್ರಂಥಗಳನ್ನು ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಕನ್ನಡ ಗ್ರಂಥಕಾರರು ಇನ್ನೇನು ಮಾಡಬೇಕು? ಗ್ರಂಥದ ನಿರ್ಮಿತಿಯನ್ನು ನಿಲ್ಲಿಸಿ, ಕೋಳಿ-ಕುರಿಗಳ ಹುಟ್ಟುವಳಿಗೆ ತೊಡಗಬೇಕು. ಎಂದರೆ ಮುಂಬಯಿ ಸರಕಾರದ ಸೆಟ್ಟಿಬುದ್ಧಿ ಅವರಿಗೆ ಸಹಕಾರ ಕೊಟ್ಟೇ ಕೊಡುವುದು. ಇಂದೆಯೆ ಮುರಿದೊಗೆಯಿರಿ ಲೇಖಕರೇ ನಿಮ್ಮ ಕೈಯಲ್ಲಿಯ ಲೆಕ್ಕಣಿಕೆಯನ್ನ!

* * * *

ಕೇಂದ್ರ ಸರಕಾರದ ಸಾಹಿತ್ಯಿಕ ಸಹಾಯ

ಹಾಂ! ಸ್ವಲ್ಪ ತಡೆಯಿರಿ, ಒಮ್ಮೆಲೆ ಮುರಿದು ಚೆಲ್ಲಬೇಡಿರಿ ನಿಮ್ಮ ಲೆಕ್ಕಣಿಕೆಯನ್ನು! ದಿಲ್ಲಿಯ ಕೇಂದ್ರಸರಕಾರವೇನೋ ಸಾಹಿತ್ಯಿಕರಿಗೆ ಸಹಾಯದ ಆಶೆಯ ಆಶ್ವಾಸನವನ್ನು ಕೊಡುತ್ತಲಿದೆ. ಆದರೆ ಅವರಿಂದ ಸಹಾಯ ಬೇಡುವ ಸಾಹಿತ್ಯಿಕ, ಸಾಹಿತ್ಯಪ್ರಪಂಚದಲ್ಲಿ ಸುಪ್ರತಿಷ್ಠಿತನಾಗಿರಬೇಕು; 'ಅಕಿಂಚನ' ಎಂದರೆ 'ಕುರುಡು ಕಾಸೂ ಇಲ್ಲದವ' ಆಗಿರಬೇಕು. ಇವೆರಡೂ ಪ್ರಶಸ್ತಿ ಇಲ್ಲದೆ ಹೋದರೆ, ಆ ಕೇಂದ್ರ ಸರಕಾರದ ಸಹಾಯ ಸಿಕ್ಕುವಂತೆ ಕಾಣುವುದಿಲ್ಲ. ಸುಪ್ರತಿಷ್ಠಿತನಾದ ಸಾಹಿತ್ಯಿಕ 'ಅಕಿಂಚನ'ನಾಗಿ ಇರಬಹುದೆ? ಇರಲಾರ! ಏಕೆಂದರೆ ಇಷ್ಟೊಂದು ಪ್ರತಿಷ್ಠೆ ಅವನಿಗೆ ಸಿಕ್ಕಬೇಕಾದರೆ, ಜನತೆ ಅವನ ಸಾಹಿತ್ಯವನ್ನು ತುಂಬಾ ಮೆಚ್ಚಿರಬೇಕು. ಜನತೆ ಮೆಚ್ಚಿದ್ದರೆ, ಅವನ ಸಾಹಿತ್ಯಕ್ಕೆ ಧನರೂಪದ ಪ್ರತಿಫಲ ದೊರೆತೇ ದೊರೆಯುವುದು; ಎಂದ ಮೇಲೆ ಅಂತಹನು 'ಅಕಿಂಚನ' ಹೇಗೆ ಆಗುವನು? ಇನ್ನು ನಿಜವಾಗಿಯೂ 'ಅಕಿಂಚನ'ರಾಗಿಯೇ ಇರುವ ಸಾಹಿತ್ಯಿಕರು, ಪ್ರತಿಷ್ಠೆ ಪಡೆದವರಲ್ಲವೆಂಬ ಮಾತು ತಾನೇ ಸಿದ್ಧವಾಗುವುದು. ಹೀಗಿರುವಾಗ ಸುಪ್ರತಿಷ್ಠೆ, 'ಅಕಿಂಚನ' ಇವೆರಡೂ ಗುಣದ ಬೆಳಕು-ಕತ್ತಲೆಗಳು ಒಂದೆ ಎಡೆಯಲ್ಲಿ ಹೇಗೆ ನೋಡಲು ಸಿಕ್ಕಬೇಕು? ಇವೆರಡೂ ಇವೆಯೆಂದು ಹೇಳಿ ಯಾವನಾದರೂ ಸಾಹಿತ್ಯಿಕ ಸಹಾಯವನ್ನು ಕೇಳುವ ಸಾಹಸ ಮಾಡಿದರೆ, ತರ್ಕವು ಹೇಗೆ ಒಪ್ಪಿಕೊಂಡೀತು? ಆದುದರಿಂದ ಇಲ್ಲಿಯೂ ನಿರಾಶೆಯೆ ನಿರಾಶೆ. ಬರೀ 'ನಿಷ್ಕಿಂಚನ' ರಾದವರಿಗೂ ಸಹಾಯ ಸಿಕ್ಕದು. ಬರಿ ಸುಪ್ರತಿಷ್ಠಿತರಾದವರಿಗೂ ಸಹಾಯ ಸಿಕ್ಕದು. ಆದುದರಿಂದ ಯಾರಿಗೂ ಸಿಕ್ಕಲಾರದೆಂಬ ನಿರಾಶೆಯ ಸಿದ್ಧಾಂತವನ್ನೇ ಸಿದ್ಧಮಾಡಬೇಕಲ್ಲವೇ ನಾವು?

* * * *

ಸಾಹಿತ್ಯಪ್ರಪಂಚದಲ್ಲಿ ಪ್ರತಿಷ್ಠೆ

ಸಾಹಿತ್ಯಿಕರಿಗೆ ಸಹಾಯ ಸಲ್ಲಿಸುವ ಸದ್ವಿಚಾರವನ್ನೇ ನಮ್ಮ ಕೇಂದ್ರಸರಕಾರದವರು ನಿಜವಾಗಿ ಮಾಡಿದ್ದರೆ, ಒಂದು ವಸ್ತುಸ್ಥಿತಿಯನ್ನವರು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಬೇಕು. ನಮ್ಮ ನಾಡಿನಲ್ಲಿ ಸಾಹಿತ್ಯಿಕರನೇಕರಿಗೆ ಪ್ರತಿಷ್ಠೆ ದೊರೆತುದು ಅವರವರ ಸಾಹಿತ್ಯನಿರ್ಮಿತಿಯಿಂದ ಮಾತ್ರ ಅಲ್ಲ; ಅವರವರ ಸ್ಥಾನಗೌರವ-ಅಧಿಕಾರ ಗೌರವಗಳ ಮೂಲಕವೇ ಸಾಹಿತ್ಯದಲ್ಲಿಯೂ ಪ್ರತಿಷ್ಠೆಗೆ ಪಾತ್ರರಾದವರೇ ಹೆಚ್ಚಿನ ಜನರು. ಸ್ಥಾನಬಲವಿಲ್ಲದ— ಅಧಿಕಾರಬಲವಿಲ್ಲದ— ಸಾಹಿತ್ಯಿಕ, ಎಷ್ಟೊಂದು ಒಳ್ಳೆಯ ಸಾಹಿತ್ಯನಿರ್ಮಾತೃವಾಗಿದ್ದರೂ ಆತನಿಗೆ ಸಮಾಜದಲ್ಲಿ ಪ್ರತ್ಯಕ್ಷವಾದ ಪ್ರತಿಷ್ಠೆ ಇರುವುದಿಲ್ಲ. ಇಂತಹ ಅಪ್ರತಿಷ್ಠಿತರಾದ ನಿಜವಾದ ಸಾಹಿತ್ಯಿಕರು, ನಿಜವಾಗಿಯೂ 'ಅಕಿಂಚನ'ರಾಗಿಯೆ ಇರುವರು. ತಮ್ಮ ಸ್ವಂತದ ಸಾಹಿತ್ಯಕೃತಿಗಳನ್ನು ತಾವೇ ಪ್ರಕಟಿಸಬೇಕೆಂದರೆ ಸಾಧ್ಯವಿರದೆ, ಅನಿವಾರ್ಯವಾಗಿ ಅವುಗಳನ್ನು ಬಂಡವಾಳಗಾರರಾದ ಪ್ರಕಾಶಕರಿಗೆ ಕೊಡ-

ಬೇಕಾಗುತ್ತದೆ. ಆ ಕೃತಿಯಿಂದ ಪ್ರಕಾಶಕ ವ್ಯಾಪಾರಿಗಳು ಬೇಕಾದಷ್ಟು ಲಾಭ ಹೊಂದುತ್ತಲಿದ್ದರೂ, ಸಾಹಿತ್ಯಿಕ ಮಾತ್ರ ಅವರು ಕೊಟ್ಟಷ್ಟು ತೆಗೆದುಕೊಂಡು ಸಂತುಷ್ಟನಾಗಬೇಕಾಗುತ್ತದೆ. ಆತನ ಸಾಹಿತ್ಯ, ಪ್ರಕಾಶಕರ ಪೆಟ್ಟಿಗೆಯನ್ನು ತುಂಬುತ್ತಲಿದ್ದರೂ, ಅವನು ಮಾತ್ರ ಕೊನೆಯ ವರೆಗೂ 'ಅಕಿಂಚನ' ಪರಿಸ್ಥಿತಿಯಲ್ಲಿಯೇ ಉಳಿಯಬೇಕಾಗುತ್ತದೆ; ಸಮಾಜದ ಸಾಮಾನ್ಯದೃಷ್ಟಿಯಲ್ಲಿ ಅಂತಹ ಸಾಹಿತ್ಯಿಕನಿಗೆ ಪ್ರತಿಷ್ಠೆಯೆಂದೂ ಸಿಕ್ಕುವುದೇ ಇಲ್ಲ.... ಬದುಕಿರುವ ವರೆಗೆ. ಆತ ಸತ್ತ ಮೇಲೆ ಮಾತ್ರ ಜನತೆ ಅವನಿಗಾಗಿ ಮರುಕದ ಕಣ್ಣೀರು ಕರೆದೀತು ಇಷ್ಟೆ! ಕೇಂದ್ರಸರಕಾರ ಪ್ರಯತ್ನ ಮಾಡಿದರೆ, ಇಂತಹ ಅಪ್ರತ್ಯಕ್ಷ ಪ್ರತಿಷ್ಠಿತರಾದ ನಿಜವಾದ ಸಾಹಿತ್ಯಿಕರಾರೆಂಬುದು ಗೊತ್ತಾಗಬಹುದು. ಅಂತಹರನ್ನು ಕಂಡುಹಿಡಿದು ಕೇಂದ್ರಸರಕಾರ ತಾನಾಗಿಯೆ ಅವರಿಗೆ ನೆರವನ್ನು ಕೊಡಬೇಕು. ಎಂದರೆ ಅದರ ಈ ಹೊಸ ಯೋಜನೆ ಪ್ರಯೋಜನಕಾರಿಯಾದೀತು. ಇಲ್ಲವಾದರೆ, ಹೊಟ್ಟೆತುಂಬಿದವರಿಗೇ ಹುಗ್ಗಿಯನ್ನು ಉಣ್ಣಿಸುವ ಅನುಚಿತ ಕಾರ್ಯಕ್ಕೇ ಎಡೆಗೊಟ್ಟಂತಾಗುವುದು ಖಂಡಿತ.

* * * *

ದೇಶದ ನಾಯಕರ ದೇಶದ್ರೋಹ

ಸ್ವಾತಂತ್ರ್ಯ ಸಿಕ್ಕಿ ಭಾರತದಲ್ಲಿ ಜನತಾಪ್ರಭುತ್ವ ಪ್ರಾರಂಭವಾದ ಮೇಲೆ, ನಮ್ಮ ಮುಂದಾಳುಗಳನೇಕರಿಗೆ ಇಂಗ್ಲಿಷ್ ಭಾಷೆಯ ಪ್ರೀತಿ ಹೆಚ್ಚಾಗಲು ತೊಡಗಿದುದು ಆಶ್ಚರ್ಯದ ಸಂಗತಿಯಾಗಿದೆ. ಇಂಗ್ಲಿಷರ ಆಡಳಿತವಿದ್ದಾಗ, ಅವರನ್ನು ವಿರೋಧಿಸಿ ಮಾತನಾಡುವಾಗ, ಮಾತೃಭಾಷಾಭಿಮಾನದ ಕಡಲನ್ನು ಉಕ್ಕೇರಿಸುತ್ತಲಿದ್ದವರೇ, ಇಂದು ಮಾತೃಭಾಷೆಯನ್ನು ಹಿಂದೆ ಹಾಕಿ ಇಂಗ್ಲಿಷ್ ಭಾಷೆಗೆ ಪ್ರಮುಖ ಪಟ್ಟವನ್ನು ಕಟ್ಟಲು ಹೊರಟಿದ್ದಾರೆ. ಮೈಸೂರು ರಾಜ್ಯದ ಸದ್ಯದ ಮುಖ್ಯ ಮಂತ್ರಿಗಳಾದ ಮಾನ್ಯ ಕೆ. ಹನುಮಂತಯ್ಯನವರೂ ಇಂಗ್ಲಿಷ್ ಭಾಷೆಯ ವಿಜಯಧ್ವಜವನ್ನು ಎತ್ತಿ ಹಿಡಿದವರಲ್ಲಿ ಒಬ್ಬರು. 'ರಾಜ್ಯದ ಪಾಠಶಾಲೆಗಳಲ್ಲಿ ಮಾತೃಭಾಷೆಯ ಮೂಲಕ ಶಿಕ್ಷಣ ಕೊಡುವುದಕ್ಕಿಂತ ಇಂಗ್ಲಿಷ್ ಭಾಷೆಯನ್ನೇ ಮಾಧ್ಯಮವನ್ನಾಗಿ ಮಾಡಿಕೊಳ್ಳುವುದು ಶ್ರೇಯಸ್ಕರ— ಎಂದು ಅವರ ವಿಚಾರ ಲಹರಿ. ದೇಶದ ದುರ್ದೈವ. ಮಹಾತ್ಮರ ಮಹಾಕಾರ್ಯದಿಂದ, ನಮ್ಮ ದೇಶದ ರಾಜಕೀಯ ಗುಲಾಮಗಿರಿ ಮಾತ್ರ ಹೋಗಿದೆ. ಸಾಂಸ್ಕೃತಿಕ ಗುಲಾಮಗಿರಿ ಇದ್ದಂತೆಯೆ ಇದೆ. ಇಂದು ಹೇಗೋ ಅಧಿಕಾರಸ್ಥಾನಗಳನ್ನು ಪಡೆದುಕೊಂಡು ಬಂದ ನಮ್ಮ ನಾಯಕರು ಎಲ್ಲವಿಷಯದಲ್ಲಿಯೂ ತಮಗೆ ಪ್ರಾವೀಣ್ಯವಿರುವಂತೆ ಸರ್ವಜ್ಞತೆಯ ಮಾತನಾಡುತ್ತಿರುವುದು ದೇಶಕ್ಕೆ ಒಳ್ಳೆಯದೇನೂ ಅಲ್ಲ. ಮಹಾತ್ಮ ತತ್ತ್ವದ ಬೆಂಬಲದಿಂದಲೇ ಆಡಳಿತವನ್ನು ನಡೆಯಿಸುವೆವೆಂದು ಹೇಳು ತ್ತಿರುವ ಮಾನ್ಯ ಕೆ. ಹನುಮಂತಯ್ಯನವರು, ಮಾತೃಭಾಷೆ ಮತ್ತು ಇಂಗ್ಲಿಷ್ ಭಾಷೆಗಳ ವಿಚಾರದಲ್ಲಿ ಮಹಾತ್ಮರು ಏನು ಹೇಳಿದ್ದಾರೆಂಬುದನ್ನು ಓದಿ ಇಲ್ಲವೆ ಕೇಳಿ ತಿಳಿದುಕೊಂಡಿದ್ದಾರೆಯೆ? ವೈದ್ಯ ಹೇಳಿದ ಪಥ್ಯ ಔಷಧಿಗಳಲ್ಲಿ, ತನಗೆ ಬೇಕಾದುದನ್ನು ಮಾತ್ರ ತೆಗೆದುಕೊಂಡು ಬೇಡವಾದುದನ್ನು ಬಿಡುತ್ತ ಹೋದಲ್ಲಿ, ರೋಗವೇನೂ ಗುಣವಾಗದೆಂಬುದನ್ನು ಮಾನ್ಯ ಹನುಮಂತಯ್ಯನವರು ಮರೆಯಬಾರದು. ಇಂಗ್ಲಿಷ್ ಭಾಷೆಯ ವ್ಯಾಮೋಹ ತಮಗಿದ್ದರೆ, ವೈಯಕ್ತಿಕವಾಗಿ ಅದನ್ನು ತಲೆಯ ಮೇಲಿರಿಸಿಕೊಂಡು ಕುಣಿದಾಡಲಿ ಒಂದು ಸ್ವತಂತ್ರ ಸರಕಾರದ ಮುಖ್ಯಮಂತ್ರಿಗಳಾಗಿದ್ದವರ ಬಾಯಿಂ ಈ ಬಗೆಯ ಸಾಂಸ್ಕೃತಿಕ ದಾಸ್ಯದ ಮಾತು ಬರುವುದೆಂದರೆ, ಅದ ನಮ್ಮ ದೇಶಕ್ಕೇ ಅವಮಾನ. 'ಇಂಗ್ಲಿಷನ್ನೂ ಕಲಿಯಲೇ ಬೇಕು ಎಂದು ಹೇಳಲಿ; ಆದರೆ ಇಂಗ್ಲೀಷನ್ನೇ ಕಲಿಯಬೇಕೆಂದು ಹೇಳುವುದ ದೇಶದ್ರೋಹಿಯ ರೀತಿ!

ಜಯಂತಿಗೆ ಚಂದಾದಾರರಾಗಿರಿ!

ಮುಂಬಯಿ, ಮೈಸೂರು, ಮದರಾಸು,
ಹೈದರಾಬಾದ್— ಎಲ್ಲ ಸರಕಾರದ ವಿದ್ಯಾಶಾಖೆಯ
ಮುಖ್ಯಾಧಿಕಾರಿಗಳಿಂದ ಮನ್ನಣೆ ಪಡೆದಿರುವ
ಜಯಂತಿಯನ್ನು
ಎಲ್ಲ ಮಿಡಲ್‌ಸ್ಕೂಲ್, ಹೈಸ್ಕೂಲ್, ಕಾಲೇಜುಗಳಿಗೂ
ತರಿಸಿಕೊಳ್ಳಬೇಕು.

ವ್ಯ. ಜ. ಧಾ.



ಮೃತ್ಯು

(ಮನೋವಿಶ್ಲೇಷಣಾತ್ಮಕ ಕತೆ)

ಶ್ರೀ. ಕುಲಕರ್ಣಿ ಬಿಂದುಮಾಧವ, ಬದಾಮಿ

★

ಹುಟ್ಟಿದವನಿಗೆ ಮೃತ್ಯುವು ಪ್ರಕೃತಿಸಿದ್ಧವಾದರೂ, ಮೃತ್ಯುವಿಗೆ ಅಂಜದವ ಅದನ್ನು ಮೂರು ಮಾರು ದೂರಕ್ಕೆ ಸರಿಸಬಲ್ಲ. ಅಂಜಿದವರಿಗೆ ಮೃತ್ಯು ಬಳಿಯಲ್ಲಿಯೆ ಸುಳಿಯುವುದು !

★

ಬಿರುಗಾಳಿಯಂತೆ ತನ್ನ ಬಲಶಾಲಿಯಾದ ತೋಳುಗಳನ್ನು ಬೀಸು-ತ್ತಾಳೆ ಮೃತ್ಯುದೇವಿ. ಪ್ರಪಂಚವೆಲ್ಲ ಸಾವಿನ ನೋವು, ಅಳು-ಲಿಂದ ತುಂಬಿ ನಿಂತಿದೆ.

ಹೆಣಗಳ ರಾಶಿ ! ಹುಟ್ಟಿಬಂದ ಪ್ರತಿಯೊಂದು ಜೀವಿಯ ಮೇಲೂ ತ್ಯು ತನ್ನ ಪಾಶ ಬೀಸುತ್ತಿದ್ದಾಳೆ. ಹುಟ್ಟಿದ ಪ್ರತಿಯೊಂದು ಣಿಗೂ ಸಾವು ತಪ್ಪಿಲ್ಲ— ಎಂದು ಕೈಯೆತ್ತಿ ಸಾರುತ್ತಿದ್ದಾಳೆ. ಒಂದು ! ಎರಡು !! ಮೂರು !!!— ಸಾವಿರ !!! ನಿಮಿ-ನಿಮಿಷವೂ ತ್ಯು ಬಲಿಯುತ್ತಿದೆ. ದೇಹದಿಂದ ಜೀವಗಳನ್ನು ತನ್ನೆಡೆಗೆ ಸೆಳೆಯು-ತ್ತಿದ್ದಾಳೆ ಮೃತ್ಯು ಗರ್ಜಿಸುತ್ತ. ತನಗೂ ಅಂತಹ ಸಾವು ಬಿದೆಯೆಂದರಿತೂ, ಆ ಶವಗಳನ್ನು ಹೊತ್ತುಕೊಂಡೊಯ್ಯುತ್ತಿದೆ ಶಾನಕ್ಕೆ ಜನಸಮೂಹ. ಆ ಶವಗಳ ವಾರಸುದಾರರು ಭೋರೆಂದು ಳಿಸುತ್ತ ಸಾಗಿದ್ದಾರೆ ಸ್ಮಶಾನಯಾತ್ರೆಗೆ.

ರುದ್ರಭೂಮಿ ! ರಾಶಿ-ರಾಶಿಯಾದ ಶವಗಳನ್ನೆಲ್ಲ ಅಲ್ಲಿ ತಂದಿ-ದ್ದಾರೆ. ಸತ್ತವರು ತಮ್ಮ ಕೋಮು ಸಂಪ್ರದಾಯಗಳನ್ನು ಕೇಳಿದ್ದರೂ, ಜೀವಿಸಿದ್ದವರು ತಮ್ಮ ತಮ್ಮ ಕೋಮು, ಸಂಪ್ರ-ದಾಯಗಳಂತೆ ಆ ಶವಗಳಿಗೆ ಮಣ್ಣು ಕಾಣಿಸುತ್ತಿದ್ದಾರೆ. ಅಗ್ನಿ ನಾರಾಯಣನಿಗೆ ಹಲವು ಶವಗಳಾದರೆ, ಭೂಮಿತಾಯಿಗೆ ಇನ್ನು ವು. ಗೋರಿಗಳ ಬಾಯಿಗೆ ತುತ್ತಾಗುವವು ಮತ್ತೆ ಹಲವು. ದೊಂದೂ ಒಂದೊಂದು ವಿಧವಾಗಿ ಆ ರುದ್ರಭೂಮಿಯ ಪಾಲಾ-ಗುತ್ತಿವೆ. ಮಣ್ಣಿನಿಂದ ಜನಿಸಿದ ದೇಹವನ್ನು ಮಣ್ಣಿನಲ್ಲೇ ಬೆರಸಿ ನೆಮ್ಮದಿಯಾಗಿದೆ ಜನಜಂಗುಳಿ. ಎಲ್ಲೆಲ್ಲೂ ಎತ್ತೆತ್ತಲೂ ಚಾಚಿ ನಿಂತಿದೆ ಮೃತ್ಯುವಿನ ಕರಾಳ ಛಾಯೆ. ಒಂದೆಡೆ ಮೃತ್ಯು ವಿನೆಯ ವಿಕಟಾಟ್ಟಹಾಸ. ಅದರ ಮಧ್ಯದಲ್ಲೇ ಕೇಳಬರುತ್ತಿದೆ ಜೀವಿಯ ಚೀತ್ಕಾರ !

ರಾಯರು ಭಯಭರಿತರಾಗಿ ಆ ಒಂದೊಂದೇ ದೃಶ್ಯಗಳನ್ನು ವಾನವಾಗಿ ಈಕ್ಷಿಸುತ್ತಿದ್ದರು. ಕಣ್ಣುರೆಪ್ಪೆಗಳನ್ನೂ ಮುಚ್ಚದೆ ಆ ದೃಶ್ಯಗಳನ್ನು ಉಸಿರುಬಿಡದೆ ದೃಷ್ಟಿಸುತ್ತಿದ್ದಾರೆ. ಅವರ ಸ್ಮೃತಿಯೆಲ್ಲ ಜೋರೆಂದು ಬೆವತಿದೆ. ರಕ್ತದ ಚಲನೆ ನಿಧಾನವಾಗಿ ದೇಹವಿಡಿ ಭಯದಿಂದ ಗದಗುಟ್ಟಿ ನಡುಗುತ್ತಲಿದೆ. ನೋಡು-ನೋಡುತ್ತಿರು-ವಂತೆಯೇ ರಾಯರ ದೇಹವೂ ಆ ಶವಗಳಲ್ಲಿ ಒಂದಾಗಿದೆ. ಮೃತ್ಯು ಮಹಾ ಅಟ್ಟಹಾಸದಿಂದ ಅವರ ದೇಹದ ಬಳಿ ನಿಂತಿದ್ದಾಳೆ. ದುಃಖ ತುಂಬಿದ, ಕಣ್ಣೀರು ಕಾಲುವೆಯಾಗಿ ಹರಿಸುತ್ತಿರುವ ಅವರ ಪತ್ನಿ, ಮಕ್ಕಳು, ಸಂಬಂಧಿಕರು ಅವರ ಶವವನ್ನು ಸ್ಮಶಾನಕ್ಕೆ ತಂದು ಬೆಂಕಿಗೆ ಆಹುತಿ ಕೊಡುತ್ತಿದ್ದಾರೆ.

" ಅಯ್ಯೋ ಸಾವು.... "

ರಾಯರು ಆ ಬೀಭತ್ಸ ದೃಶ್ಯವನ್ನು ನೋಡಲಾರದೆ ಗಟ್ಟಿಯಾಗಿ ಅರಚಲು ಯತ್ನಿಸಿದರು. ಆದರೂ ಅವರ ಸ್ವರ ಪಾತಾಳದಿಂದ ಬಂದಂತೆ ಅವರಿಗೆ ಭಾಸವಾಯಿತು.

" ಊಹ್ಞೂ, ನಾನು ಸಾವಿಗೆ ಹೆದರಲಾರೆ.... "

ಹಟಯೋಗಿಯಂತೆ ತಮ್ಮನ್ನೇ ತಾವು ಸಂತೈಸಲು ಹೇಳಿ-ಕೊಂಡರು ರಾಯರು ಗಟ್ಟಿಯಾಗಿ. ತಮಗಾದ ತುಂಬಿದ ಭೀತಿ ಯನ್ನು ಮರೆಮಾಚಲು " ರಾಮ-ಕೃಷ್ಣ " ಎಂದು ಮತ್ತೆ ಮತ್ತೆ ಹೇಳಿಕೊಂಡರು. ಆದರೂ ಅವರ ಭಯ ತಪ್ಪಲಿಲ್ಲ. ಮೃತ್ಯು, ಸಾವಿನ ಚೀತ್ಕಾರ, ರುದ್ರಭೂಮಿ—ಅವರ ಕಣ್ಣೆದುರಿನಿಂದ ತೊಲ-ಗಲಿಲ್ಲ. ಅವರನ್ನೇ ನುಂಗಿಬಿಡುವ ಹಾಗೆ ನೋಡುತ್ತ ಮೃತ್ಯು ಅವರೆದುರು ತಾಂಡವವಾಡುತ್ತಿತ್ತು.

" ತೊಲಗು, ತೊಲಗಿಲ್ಲಿಂದ ಶನಿ.... "

ರಾಯರ ಆತ್ಮ ಅರಚಿತು. ಆದರೂ ಅವರ ಕಣ್ಣೆದುರಿನ ದೃಶ್ಯ-ವಾಗಲಿ, ಮೃತ್ಯುವಾಗಲಿ ಮಾಯವಾಗಲಿಲ್ಲ. ರಾಯರು ಭಯದಿಂದ ಇನ್ನೂ ಮುದುಡಿದರು. ಸ್ವಲ್ಪ ಸಾವರಿಸಿಕೊಂಡು ಅರಚಿದರು :

" ನನಗೇಕೆ ನೀನು ಗಂಟುಬಿದ್ದೆ ಶನಿ ?.... ನಾನಿನ್ನೂ ಬದುಕ ಬೇಕು.... ನನ್ನ ಪೆನ್‍ಶನ್.... ಈಗ ತಾನೆ ಬರುತ್ತದೆ.... ಹತ್ತು ವರುಷಗಳಾದರೂ ಅದನ್ನು ಪಡೆಯಲು ಅವಕಾಶ ನೀಡು....ಬಿರಿಯ ಮುದಿವೆಯಲ್ಲೇ ಅರುವತ್ತು ಕಳೆದೆನು....ಜೀವಕ್ಕೆ ಸ್ವಲ್ಪ ವಿಶ್ರಾಂತಿ-ಯನ್ನನುಭವಿಸಲು ಅವಕಾಶ ಬೇಡವೆ ? "

ಮೃತ್ಯುವಿನ ಆ ಭಯಾನಕ ದೃಶ್ಯ ಇನ್ನೂ ನಿಂತೇ ಇತ್ತು ರಾಯರೆದುರು. ಅವರು ಉಸಿರ್ಗರೆಯುತ್ತ ವಿಶ್ರಾಂತಿ ಬಯಸಿ ಆರಾಮಾಸನದ ಮೇಲೊರಗಿ, ಮೃತ್ಯು ಕಾಣಬಾರದೆಂದು ಗಟ್ಟಿ-ಯಾಗಿ ಕಣ್ಣುಮುಚ್ಚಿದರು.

" ನಾನಿನ್ನೂ ಮುದುಕನಲ್ಲ....ನನಗೆ ನಾಳೆ ತಾನೆ ಅರುವತ್ತು ವರುಷ ತುಂಬುತ್ತವೆ. .... ಅರುವತ್ತು ವರುಷ ಬಹಳ ಹೆಚ್ಚೇನೂ ಅಲ್ಲವಲ್ಲ....ಇಷ್ಟು ಕಿರಿಯ ವಯಸ್ಸಿನಲ್ಲಿ ಸಾವೆಂದರೇನು ?.... "

ರಾಯರು ಮನದಲ್ಲಿ ತಮ್ಮನ್ನೇ ತಾವು ಪ್ರಶ್ನಿಸಿಕೊಂಡರು. ಆದರೆ ಅದಕ್ಕೆ ಉತ್ತರ ಮಾತ್ರ ಬರಲಿಲ್ಲ. ನಿರಾಶೆಯ ಉಸಿರೊಮ್ಮೆ ಅವರ ಗಾಢವಾದ ಎದೆಯನ್ನು ಸೀಳಿ ಹೊರಹೊಮ್ಮಿತು.

" ನನಗೇಕೆ ಈಗಾಗಲೇ ಈ ಭಯ?.... ನನಗೇಕೆ ಇಂತಹ ಮೃತ್ಯುವಿನ ಹೆದರಿಕೆ? ...." ಮತ್ತೆ ಎರಡು ಗುಳ್ಳೆಗಳು ಅವರೆದೆಯ ಕೊಡದಿಂದ ಎದ್ದು ಬಂದು 'ಪಳ್' ಎಂದು ಒಡೆದುವು.

ರಾಯರಿಗೆ ತಮ್ಮೆದುರಿಗೆ ನಡೆಯುತ್ತಿರುವ ಸಾವಿನಾಟವನ್ನು ಮರೆಯಬೇಕಿತ್ತು. ಮನದಲ್ಲಿ ತೆರೆತೆರೆಯಾಗಿ ಏಳುತ್ತಿರುವ ಬಿರು-ಗಾಳಿಯನ್ನು ಶಾಂತಗೊಳಿಸಬೇಕಿತ್ತು. ಅದಕ್ಕಾಗಿಯೇ ಅವರು ಈ ದಿನ ನಡೆದ ಘಟನೆಗಳನ್ನೆಲ್ಲ ಮೆಲುಕು ಹಾಕತೊಡಗಿದರು.

ಮೃತ್ಯುವಿನ ಹೆದರಿಕೆ ಈ ಹಿಂದೆ ಅವರಿಗೆಂದೂ ಇರಲಿಲ್ಲ. ಸಾವಿನ ವಿಚಾರವಾಗಿ ಈ ಮೊದಲು ಅವರು ಯೋಚಿಸಿಯೇ ಇರಲಿಲ್ಲ. ಈ ದಿನವೇ ಮೊದಲು ಅವರಿಗೆ ಸಾವು ಎನ್ನುವುದೂ ಇದೆ ಜೀವನ-ದಲ್ಲಿ— ಎಂದು ತಿಳಿದದ್ದು. ದಿನನಿತ್ಯದ ಹಾಗೆಯೇ ಊಟ ಮುಗಿಸಿ, ಹನ್ನೊಂದುವರೆ ಗಂಟೆಗೆ ತಮ್ಮ ಆಫೀಸಿಗೆ ಹೊರಡಲು ದಿನನಿತ್ಯದ ಪದ್ಧತಿಯಂತೆ ಕನ್ನಡಿಯೆದುರು ನಿಂತಾಗ, ರಾಯರಿಗೆ ಮೊದಲು ಸಲ ಕಾಣಿಸಿದುವು ಬೆಳ್ಳಗೆ ಲಕಲಕಿಸುತ್ತಿರುವ ಹತ್ತೆಂಟು ಕೂದಲುಗಳು ತಲೆಯ ಮೇಲೆ. ತಮ್ಮ ಕಣ್ಣನ್ನೇ ನಂಬಲಾರದೆ ಮತ್ತೊಮ್ಮೆ ತಮ್ಮ ತಲೆಯನ್ನು ಕನ್ನಡಿಯಲ್ಲಿ ನೋಡಿಕೊಂಡರು.

ಹೌದು. ಬೆಳ್ಳಿಯ ಹಾಗೆ ಬೆಳಗುತ್ತಿರುವ ಆ ಕೂದಲುಗಳು— " ನಿನಗೆ ವೃದ್ಧಾಪ್ಯಬಂತು, ಮೃತ್ಯು ಹತ್ತಿರನಾಯಿತು " ಎಂದು ಕೂಗಿ ಹೇಳಿದುವು. ರಾಯರ ಮನಸ್ಸಿಗೇಕೋ ಆ ಕೂಗನ್ನಾಲಿ-ಸುತ್ತ 'ಝಿಜೀಲ್' ಎನಿಸಿತು. ಕಣ್ಣು ತೇವಗೊಂಡುವು. ರಾಯರು ಏನೋ ಜ್ಞಾಪಕವಾಗಿ ಬಾಯಿ ತೆರೆದರು. ಬಚ್ಚಬಾಯಿ ಕನ್ನಡಿ-ಯಲ್ಲಿ ಭಣಭಣಗುಟ್ಟಿತು. ಹೃದಯಕ್ಕೆ ಚೇಳು ಕುಟುಕಿದಷ್ಟು ವೇದನೆಯಾಯಿತು ಕನ್ನಡಿಯಲ್ಲಿಯ ತಮ್ಮ ಆ ಬರಿದಾದ ಬಾಯಿ-ಯನ್ನು ಕಂಡು. ಇಷ್ಟು ದಿನಗಳ ವರೆಗೂ ಆ ಬಾಯಿ "ವೃದ್ಧಾಪ್ಯ, ಸಾವು"— ಎಂದು ಹೇಳಿರಲಿಲ್ಲ. ಕೃತಕ ಹಲ್ಲಿನ ಮೇಲೆಯೇ ಅವರು ಮುನ್ನಡೆದಿದ್ದರು. ಆದರೆ ಈ ದಿನ ಹಾಗಲ್ಲ;— ಅದೇ ಬಚ್ಚಬಾಯಿ ಗಹಗಹಿಸಿ— " ನಿನಗೆ ವೃದ್ಧಾಪ್ಯ....ಮೃತ್ಯು.... " ಎಂದು ಅಣಕಿಸಿತು. ಆ ಅಣಕವನ್ನು ಕೇಳಲಾರದೆ ರಾಯರು ಗಟ್ಟಿಯಾಗಿ ಕಿವಿ ಮುಚ್ಚಿಕೊಂಡರು. ಅವರಿಗೆ ಬಹಳ ಹೊತ್ತಿನ ವರೆಗೆ ಕನ್ನಡಿಯ ಮುಂದೆ ನಿಲ್ಲಲಾಗಲಿಲ್ಲ ಈ ದಿನ. ಕೃತಕ ಹಲ್ಲು-ಗಳನ್ನು ಹಾಕಿಕೊಳ್ಳುವುದನ್ನು ಮರೆತು ಅವರು ಆಫೀಸಿಗೆ ನಡೆದರು.

ನಾಳೆಗೆ ತಾನೆ ರಾಯರಿಗೆ ಅರುವತ್ತು ವರುಷ ತುಂಬುತ್ತವೆ. ನಾಳೆಯಿಂದ ಅವರಿಗೆ ವಿಶ್ರಾಂತಿಯೇ ವಿಶ್ರಾಂತಿ. ಅರುವತ್ತು ವರುಷ-ಗಳನ್ನು ದುಡಿಮೆಯಲ್ಲಿಯೇ ಕಳೆದ ಜೀವ ನಾಳೆಯಿಂದ ವಿಶ್ರಾಂತಿ ಪಡೆಯುತ್ತದೆ. ಅದಕ್ಕಾಗಿಯೇ ಅವರ ಬದಲಿಗೆ ಇನ್ನೊರ್ವ ಅಧಿಕಾರಿಯನ್ನು ಮೇಲಧಿಕಾರಿಗಳು ಕಳಿಸಿದ್ದರು. ರಾಯರು ಆಫೀಸಿಗೆ ಹೋದ ತಕ್ಷಣ, ಆ ಅಧಿಕಾರಿಗಳೊಂದಿಗೆ ಕುಳಿತು 'ಚಾರ್ಜ್ ಪಟ್ಟಿ' ಸಿದ್ಧಪಡಿಸಬೇಕಿತ್ತು. ಅದಕ್ಕಾಗಿ ಅವರು ಕಾಗದ, ಮಸಿ, ಲೆಕ್ಕಣಿಕೆಗಳನ್ನಿಟ್ಟುಕೊಂಡು ಕುಳಿತರು. ಆದರೆ ಎಂದೂ ಇಲ್ಲದ ಈ ದಿನ ಮೊದಲು ಅವರ ಕೈನಡುಗಿ— "ನಿನಗೆ ವೃದ್ಧಾಪ್ಯ, ಮೃತ್ಯು...." ಎಂದು ಉಸಿರಿಟ್ಟಿತು. ರಾಯರು ಅದರ ಮಾ ನ್ನಾಲಿಸಿ ದಂಗುಬಡಿದವರಂತೆ ಕುಳಿತರು. ಗೆರೆ ಎಳೆಯುವ ತೆಗೆದುಕೊಂಡು ಸೀಸದಿಂದ ಗೆರೆ ಎಳೆಯುವುದೂ ಅವರಿಗೆ ಸಾ ವಾಗಲಿಲ್ಲ. ಅದಿರುತ್ತಿರುವ ಕೈಗಳು 'ಅರುವತ್ತು ವರುಷ' ಸಾರುತ್ತಲೇ ಇದ್ದುವು. ರಾಯರು ಹೇಗೋ— ಹೇಗೋ ತ ಕೊಂಡು ಗೆರೆಗಳನ್ನೆಳೆದು ಮುಗಿಸಿದರು. ಅನಂತರ ಗೆರೆ ಕಾಗದಗಳ ಮೇಲೆ ಬರೆಯಲೆಂದು ಕೋಟಿನ ಜೇಬಿನಿಂದ ಕನ್ನ ವನ್ನೆತ್ತಿಕೊಂಡು ಕಣ್ಣಿಗಿಟ್ಟುಕೊಂಡರು. ಆ ಕಾಗದಗ ಎರಡು ಮೂರು ಸಲ ದೃಷ್ಟಿ ಹಾಯಿಸಿದರೂ, ಸೀಸದ ಗೆರೆಯೂ ಕಾಣಲಿಲ್ಲ; ಆ ಗೆರೆಗಳನ್ನು ಗುರುತಿಸಲು ಅವರು ದೃಷ್ಟಿಯನ್ನು ಪರೀಕ್ಷಿಸಿಯೇ ಪರೀಕ್ಷಿಸಿದರು. ಏನೂ ಪ್ರಯೋ ವಾಗಲಿಲ್ಲ. ಅರುವತ್ತು ವರುಷಗಳ ದೀರ್ಘಕಾಲ ಅವರ ದುಡಿ ಅನ್ನಕ್ಕೆ ಜೀವನಾಧಾರವಾಗಿ ಕೆಲಸ ಮಾಡುತ್ತಿದ್ದ ಆ ಕಣ್ಣು ಈ ದಿನ 'ಪಳ-ಪಳನೆ' ನೀರು ಸುರಿದು— " ಅರುವತ್ತು ವರು ನಾನು ಕೆಲಸ ಮಾಡಲಾರೆ.... " ಎಂದು ಉದ್ಗರಿಸಿತು. ರಾ ಗೀಗ ನರ-ನರವೂ ವೃದ್ಧಾಪ್ಯದಿಂದ, ಮೃತ್ಯುವಿನಿಂದ ತು ಕೊಂಡಂತೆ ಭಾಸವಾಯಿತು. ಹೃದಯ ಅದೇಕೋ ಲೆಕ್ಕವಿಲ್ಲ ಸಲ ಹೊಡೆದುಕೊಂಡಿತು. 'ಚಾರ್ಜ್ ಪಟ್ಟಿ'ಯನ್ನು ಸಿದ್ಧಪ ಸುವ ಕೆಲಸವನ್ನು ರಾಯರು ಹೇಗೋ ಮುಂದುವರಿಸಿದರು. ಮನ ಯಾವುದೋ ಭೀತಿಯಿಂದ ನಡುಗುತ್ತಿತ್ತು; ಎಲ್ಲೆಲ್ಲೋ ಸುತ್ತುತ್ತಿ ಆದರೆ ಅವರ ಕೈಗಳು ಮಾತ್ರ ಯಂತ್ರದಂತೆ ಕೆಲಸ ಮಾಡುತ್ತಿದ್ದು

ಮೂರು ಗಂಟೆ ಕಳೆಯಿತೆಂದು ಸೂಚಿಸಲು ಕಚೇರಿಯ ಗ ಯಾರ ಮೂರುಸಲ ಹೊಡೆದುಕೊಂಡಿತು. ರಾಯರು ಇ ಕೆಲಸವನ್ನೂ ಮಾಡಿ ಮುಗಿಸಿರಲಿಲ್ಲ. ಅದೇ ವೇಳೆಗೆ ಅವರ ಆ ಸಿನ ಕೆಲಸಗಾರರೆಲ್ಲ ಬೀಳ್ಕೊಡುಗೆಯ ಉಪಾಹಾರ ತರಿಸಿದ್ದ ಹೊಸ ಅಧಿಕಾರಿಗಳೊಂದಿಗೆ, ರಾಯರೂ ಅವರಲ್ಲಿ ಭಾಗವಹಿಸಿದ ಉಪಾಹಾರ ನಡೆಯುತ್ತಿದ್ದಂತೆ ಎಲ್ಲರೂ ಹರಟೆಗೆ ತೊಡಗಿದ ಆಗಲೇ ವಿರಾಮವೇತನದ ವಿಚಾರವಾಗಿ ಮಾತು ಹೊರಟಿ ಹೊಸ ಅಧಿಕಾರಿಗಳೂ ಅವರಲ್ಲಿ ಭಾಗವಹಿಸಿ :—

" ನಮ್ಮ ಖಾತೆ ಭಾಳ ಕೆಟ್ರೀ,— ಎಲ್ಲಾ ಖಾತೇದಾ ಐವತ್ತೈದು ವರುಷಕ್ಕ ಪೇನಶನ್ ಆದ್ರ, ನಮ್ಮ ಖಾತೇದಾಗ ಅ ವತ್ತು ವರುಷಕ್ಕಃ....ಹಃ....ಹಃಃ ಅಷ್ಟ ವರುಷ ದುಡದ್ರ, ಮನುಷ್ಯಾ ಅವನ್ಸ್ಗಿ ಏನು ಆಗಬ್ಯಾಡ್ರಿಃ ?.... ಅದಕಃ ನಮ್ಮ ಖಾತೇದ ಪೇನಶನ್ ತೊಗೊಂಡ ಒಂದೆರಡು ತಿಂಗಳದಾಗಃ ಸತ್ತುಹೋ ತಾರಃ.... "

" ಹೌದ್ರಿಃ ಸಾಹೇಬ್ರೀ ನಮ್ಮ ಖಾತೆ ಕೆಟ್ಟಃ....ಕೆಟ್ಟಃಃ...."

ಅಲ್ಲಿ ನೆರೆದ ಕೆಲಸಗಾರರೂ ಹೊಸ ಅಧಿಕಾರಿಗಳನ್ನು ತೃಪ್ತಿಪ ಸುವುದೇ ತಮ್ಮ ಧರ್ಮ ಎಂದು ತಿಳಿದಂತೆ, ಅವರ ಜತೆಗೆ ಧ್ವ ಬೆರೆಯಿಸಿದರು. ಅಧಿಕಾರಿಗಳು ಮುಂದುವರಿದು, ಹಾಗೇ ವಿರಾಮ

ನ ನಡೆದ ವಾರದಲ್ಲೋ, ತಿಂಗಳಿನಲ್ಲೋ ತೀರಿಕೊಂಡ ಹಲವು ಕಾರಿಗಳ ಕತೆ ಹೇಳಿದರು. ರಾಯರು ಪೆಚ್ಚು ಮೋರೆ ಹಾಕಿ-ಂಡು ಆ ಕತೆಗಳನ್ನು ಕೇಳುತ್ತಿದ್ದರು. ಈ ಹಿಂದೆಯೇ ಆ ಕತೆ-ಳು ಅವರಿಗೆ ಗೊತ್ತಿದ್ದರೂ ನಿರ್ಲಕ್ಷ್ಯದಿಂದಲೇ ಇದ್ದರು. ಅವು-ಲ್ಲಿ ಇರುವ ಸಜೀವತೆಯನ್ನು ಅವರು ಗುರುತಿಸಿರಲಿಲ್ಲ. ಆದರೆ ನ ಅವುಗಳಲ್ಲಿ ತುಂಬಿದ ಸತ್ಯ, ಶಕ್ತಿ ಇದುವಂತೆ ಅವರಿಗೆ ಚರಿಸಿತು. ತಾವೇ ಪ್ರತ್ಯಕ್ಷವಾಗಿ ಅಂತಹ ಮರಣಕ್ಕೆ ಬಲಿ-ಗುತ್ತಿರುವಂತೆ ಭಾಸವಾಯಿತು. ವಿರಾಮವೇತನ ಪಡೆಯುತ್ತಿರು-ಯೇ, ಹಾಸಿಗೆ ಹಿಡಿದ ಎಷ್ಟೋ ಅಧಿಕಾರಿಗಳಂತೆ ತಾವೂ ಮ ಅವರು ಯೋಚನೆಗೊಳಗಾದರು.

"ಹೌದು. ವೃದ್ಧಾಪ್ಯ ಬಂತು.... ವಿರಾಮವೇತನದೊಂದಿಗೇ ಣಹೊಂದುವುದು ನಮ್ಮ ಖಾತೆಯ ವೈಶಿಷ್ಟ್ಯ.... ಅದಕ್ಕೆ ಹೊರತಾಗಲಾರೆ....ನನಗೂ ಮರಣ ಬರುತ್ತದೆ....ಮರಣ!.... ರಣ ???...."

ಾಯರ ಎದೆ ತುಂಬಿದ ಉದ್ವೇಗದಿಂದ ಹೊಡೆದುಕೊಂಡಿತು. ಸ್ಸು ಸುಂಟರಗಾಳಿಯಲ್ಲಿ ಸಿಕ್ಕ ತರಗೆಲೆಯಂತೆ ಎಲ್ಲೆಲ್ಲೋ ದಿಂದ ತೂರಾಡಿತು. ಅವರು ಗುಟುಕರಿಸುತ್ತಿರುವ ಚಹಾ ಕಹಿ-ಗಿ ಆರಿಹೋದಂತೆನ್ನಿಸಿತು. ತಮ್ಮ ಬಿಸಿ ಕಳೆದುಕೊಳ್ಳುತ್ತಿರುವ ದ ಹಾಗೆ.

ಉಪಾಹಾರ ಮುಗಿಯಿತು. ರಾಯರಿಗೆ ಮುಂದೆ ಕೆಲಸ ಸಾಗಿಸಲು ಧ್ಯವಾಗಲಿಲ್ಲ. ಕುಳಿತಲ್ಲಿಯೇ ಅವರಿಗೆ ಮೂರ್ಛೆಬರುವಂತೆನ್ನಿ-. ತಲೆ ಗಿರಿಗಿರಿ ಸುತ್ತಿ, ಅಲ್ಲಿ ಕುಳಿತಿದ್ದವರೆಲ್ಲ 'ತಿರುಗಿ-ಮುರುಗಾ'ಗಿ ಸಿದರು. ತಮಗೆ ದೇಹಾಲಸ್ಯ ಎಂದು ನೆವ ಹೇಳಿ ಮನೆಗೆ ದರು. ಅವರ ಮೊಗ ಬಾಡಿ ಬಸವಳಿದಿತ್ತು; ಎಂದೂ ಇಲ್ಲದ ರ ರೂಪು ತಳೆದಿತ್ತು. ನೇರವಾಗಿ ತಮ್ಮ ಕೋಣೆಗೆ ಹೋಗಿ ಗದ ಮೇಲೆ ಬಿದ್ದುಕೊಂಡರು — ಗಾಢವಾದ ಉಸಿರುಗಳ-ಷ್ಟೋ ಹೊರಹಾಕುತ್ತ. ಉಸಿರುಸಿರಿಗೂ—" ಸಾವು!!...." ಎಂಬ ಅವರ ಮುಖದಿಂದ ಹೊರಬೀಳುತ್ತಿತ್ತು; ಅವರನ್ನು ಮತ್ತೆ, ತ್ತೆ ಬೆಚ್ಚಿಬೀಳುವಂತೆ ಮಾಡುತ್ತಿತ್ತು.

ಗಾಢವಾದ ಕಾರ್ಗತ್ತಲೆ, ರಾಯರು ಮಲಗಿದ ಕೊಟಡಿಯಲ್ಲೆಲ್ಲ ಿಸಿತು. ಅವರ ಮನದಲ್ಲೂ ಅಂತಹದೇ ಕಾರ್ಗತ್ತಲೆ ತುಂಬಿತ್ತು. ಸಿಮ ಆಳು ಬಂದು ದೀಪ ಇಟ್ಟುಹೋದರೂ ಅವರಿಗತ್ತ ಗಮನ ಲ್ಲ. ಅವರು ಕಣ್ಣುಮುಚ್ಚಿಕೊಂಡು ಧ್ಯಾನಾಸಕ್ತರಂತೆ ಗಿಯೇ ಇದ್ದರು. ಊಟದ ವೇಳೆಗೆ ಮಕ್ಕಳು ಬಂದು ಊಟಕ್ಕೆ ದು. ಅವರಿಗೆ ಎದ್ದು ಹೋಗಿ ಊಟಮಾಡುವ ಮನಸ್ಸಾಗಲಿಲ್ಲ. ್ಲ ಅಲ್ಲ, ಮಧ್ಯಾಹ್ನ ಆಫೀಸಿನಲ್ಲಿ ತಿಂದ ಉಪಹಾರವೊಂದೂ ಸ್ವದ ಮೂಲಕ ಕರಗದೆ, ಇನ್ನೂ ಅವರ ಹೊಟ್ಟೆಹೊಟ್ಟೆ ರವಾಗಿರುವಂತೆ ತೋರಿತು. ರಾಯರು "ಹಸಿವೆಯಿಲ್ಲ" ಎಂದು ಿ ಮಕ್ಕಳನ್ನು ಕಳಿಸಿದರು. ಸ್ವತಃ ಅವರ ಮಡದಿ ಕರೆಯಲು ದರೂ ಅದೇ ಜವಾಬು ದೊರೆಯಿತು.

ಮಧ್ಯರಾತ್ರಿಯವರೆಗೂ ರಾಯರು ಹಾಗೆಯೇ ಒರಗಿದ್ದರು. ಅವರ ಸುತ್ತಲೂ ಮೃತ್ಯುವಿನ ನಾನಾಮುಖಗಳು ತಾಂಡವವಾಡು-ತ್ತಿದ್ದುವು. ನೂರಾರು ರೀತಿಯಲ್ಲಿ ಸಾವು ಅವರಿಗೆ ಕಾಣಬರುತ್ತಿತ್ತು. ಅವರನ್ನು ಭಯಚಕಿತಗೊಳಿಸಿತ್ತು.

" ಸಾವು .... ಸಾವು .... ಅಯ್ಯೋ .... ಸಾವು .... "

ನಾಲ್ಕಾರು ಧ್ವನಿಗಳು ಜತೆ ಸೇರಿ ಜೀವಭಯದಿಂದ, ವಿಚಿತ್ರ ಧ್ವನಿಯಲ್ಲಿ ಅರಚಿದಂತೆ ರಾಯರಿಗೆ ಕೇಳಿತು — ಮತ್ತೆ. ಮುಚ್ಚಿದ ಕಣ್ಣುಗಳನ್ನು ಭಯದಿಂದ ತೆರೆದು ಸುತ್ತಲೂ ದೃಷ್ಟಿಸಿದರು.

ಮೇಜಿನ ಮೇಲೆ ಉರಿಯುತ್ತಿರುವ ಟೆಬಲ್‌ಲ್ಯಾಂಪಿನ ಬೆಳಕಿಗೆ ಮೋಹಿಸಿ ಬಂದ ಪತಂಗವೊಂದು, ಮೈಸುಟ್ಟುಕೊಂಡು ಮೃತ್ಯು-ಮುಖದಲ್ಲಿ ಅರಚುತ್ತಿತ್ತು.

" ಮೃತ್ಯು ಹತ್ತಿರವಾದಾಗ ಇಷ್ಟು ಅರಚಬೇಕೆ? " ರಾಯರ ಮನಸ್ಸು ಅವರನ್ನು ಪ್ರಶ್ನಿಸಿತು. ಅವರು ಅಂತರ್ಮುಖಿಯಾಗಿ ಆ ಪ್ರಶ್ನೆಗೆ ಉತ್ತರ ಕೊಡಬೇಕೆನ್ನುವಾಗ, ಮತ್ತೆ ಅದೇ ಪತಂಗದ ಮರಣಭಯದ ಭಯಾನಕ ಕೂಗು! ರಾಯರಿಗೇಕೋ ಎಂದೂ ಇಲ್ಲದ್ದ, ಈಗ ಸಾಯುತ್ತಿರುವ ಪತಂಗದ ವಿಚಾರವಾಗಿ ಕರುಣೆ ಉಕ್ಕಿತು! ಇಂತಹ ಸಾವಿರಾರು ಮೃತ್ಯುಮುಖದಲ್ಲಿರುವ ಜೀವಿ-ಗಳನ್ನು ಕಂಡಿದ್ದರೂ ಕರಗದ ರಾಯರ ಹೃದಯ, ಆ ಪತಂಗದ ಅಸಹಾಯ ಸ್ಥಿತಿಗೆ ಮರುಕಗೊಂಡಿತು; ಕಳವಳಿಸಿತು. ಅವರಿಗರಿ-ಯದಂತೆಯೇ ಅವರ ಕೈ ಮೇಜಿನ ಬಳಿಗೆ ಚಲಿಸಿತು. ಲ್ಯಾಂಪಿನ ಗ್ಲಾಸನ್ನು ಮೇಲೆ ತೆಗೆದು ಆ ಪತಂಗವನ್ನು ಬಿಡುಗಡೆ ಮಾಡಿ ಸಮಾಧಾನದ ಉಸಿರೆಳೆದರು.

" ಸಾವು .... ಸಾವು .... ಅಯ್ಯೋ .... ಸಾವು .... "

ಮತ್ತೊ ಒಮ್ಮೆ ಅಂತಹದೇ ಸಾವಿನ ಕೂಗಾಟ. ರಾಯರು ಹೌಹಾರಿದರು. ತಮ್ಮ ದೃಷ್ಟಿಯನ್ನು ಸುತ್ತಲೂ ತಿರುಗಿಸಿದರು. ಆ ದೃಷ್ಟಿಯಲ್ಲಿ ಭಯ, ಕಳವಳ ತುಂಬಿ ನಿಂತಿದ್ದುವು.

" ಸಾವು .... ಅಯ್ಯೋ ಸಾವು .... "

೫೫ ವರ್ಷಗಳಿಂದ ಅನುಭವಪಟ್ಟ
ಕರ್ಕಿ ಮತ್ತು ಕಂಪನಿಯ
ಜ್ವರಗಡ್ಡೆಯ ಗುಳಿಗೆಗಳು
ಬಾಟ್ಲಿಗೆ ೧–೮–೦
ಎಂತಹ ಜ್ವರಗಡ್ಡೆಯನ್ನೂ ಕಳೆಯುವುದು.
ವಿಳಾಸ :—
ಗಣೇಶ ರಾಮಚಂದ್ರ ಕರ್ಕಿ ಮತ್ತು ಕಂಪನಿ
ಗಿರಗಾಂವ, ಮುಂಬಯಿ. ೪

ಮತ್ತೆ ಅದೇ ಭಯಾನಕ, ಬೀಭತ್ಸ ಕೂಗು. ರಾಯರು ಚಿತ್ತವಿಟ್ಟು ಆಲಿಸಿದರು. ಅವರು ಮಲಗಿದ ಪಲ್ಲಂಗದ ಹಿಂದಿನ ಕಿಟಕಿಯಿಂದ ಆ ಭಯದ ಕೂಗು ಕೇಳಿಬರುತ್ತಿತ್ತು. [illegible] ಜಾಗೃತರಾದ ರಾಯರು, ಕೈಯಲ್ಲಿ ದೀಪವನ್ನೆತ್ತಿಕೊಂಡು ಆ ಕಿಟಕಿಯೆಡೆಗೆ ತೆರಳಿದರು.

ಹೊರಗಿನ ಬಲೆಯಲ್ಲಿ ಸಿಕ್ಕ [illegible]. ಬಲವಾದ ಬಂಧನದಲ್ಲಿ ಸಿಕ್ಕಿ, ವಿಲಿವಿಲಿ ಒದ್ದಾಡುತ್ತಿತ್ತು. ಪ್ರಾಣಭಯದಿಂದ ಕೂಗಿಕೊಳ್ಳುತ್ತಿತ್ತು.

ರಾಯರು ತಮಗರಿಯದಂತೆಯೇ ಆ [illegible] ಮೃತ್ಯು ಬಂಧನದಿಂದ ಬಿಡುಗಡೆ ಮಾಡಿದ್ದರು. ಕೊಲ್ಲುವವನಿಗಿಂತ ಕಾಯುವವನೇ ಬಹಳ ದೊಡ್ಡವನು ಎಂದು [illegible] ನೆನೆದುಕೊಂಡರು.

ಮತ್ತೆ ಅವರೀಗ ಪಲ್ಲಂಗದ ಮೇಲೆ ಬಂದು [illegible]. ಅವರು ಬಿಡುತ್ತಿರುವ ಗಾಢವಾದ ಉಸಿರಿನ [illegible] ಶಾಂತವಾಗಿತ್ತು. ಅವರ [illegible] ಕೈಗಳನ್ನು [illegible] ಮತ್ತೆ [illegible]. ತಮ್ಮ [illegible] ಬಂದು ಅವರನ್ನು ಸುತ್ತುವರಿದವು. ರಾಯರು [illegible] ಕೊಂದುಹಾಕಲು [illegible]. ಅದೇ [illegible] ಭಯ [illegible]. [illegible] ಪ್ರತಿಧ್ವನಿಸುತ್ತು: [illegible]. [illegible] ಅವರು [illegible] ತಮ್ಮ [illegible] ಅಸಹಾಯಕರಾಗಿ ನೋಡುತ್ತ ನಿಶ್ಚೇಷ್ಟಿತರಾಗಿ ಮಲಗಿದ್ದರು.

"ಮೃತ್ಯು ... ಮೃತ್ಯು . [illegible] ಮೃತ್ಯು . . ."

ಮತ್ತೆ ಯಾರೋ ಭಯದಿಂದ ಕೂಗಿಕೊಂಡಂತಾಯಿತು. ರಾಯರಿಗೆ ಆ ಸ್ವರವನ್ನು ಗುರುತಿಸುವಂತಿತ್ತು. [illegible] ಬರುತ್ತಿತ್ತು. [illegible] ಮಲಗಿದ [illegible].

"ಅಯ್ಯೋ . . ."

ಎಂದೊರಲಿತು ರಾಯರ [illegible] ಕೊಂಡಿತು. ರಾಯರು ಕಣ್ಣು ಬಿಟ್ಟರು.

ಆ [illegible] ಮೇಲೆ [illegible] ತಗಣೆಯು [illegible] ಅವರ ಹೊಟ್ಟೆ [illegible].

ರಾಯರ ಕಣ್ಣಿಗೆ [illegible]. ಆ [illegible] ಮನಂತೆ ಅವರ ಮನಸ್ಸು, [illegible] ತುಂಬಿತ್ತು.

"ಮೃತ್ಯುವನ್ನು [illegible] ತಿಳಿದವರಾರು? .... '[illegible] ಬರಿದಿಲ್ಲ' ಎಂದು [illegible]!"

"ಹಾಗೆ [illegible] ಕಮ [illegible]... ಕಮ [illegible]..." ರಾಯರ ಭೀತವಾದ ಮನಸ್ಸು ಕೂಗಿಕೊಂಡಿತು. [illegible]

[illegible], ಪ್ರಾಣಾನ್ತಿದಿಂದ ಅವರಿಗೆ ಭಾರಿ ಜ್ವರ ಬಂದಿದ್ದಿತ್ತು. [illegible] ತಗಣೆಗಳು ಅವರ ದೇಹಕ್ಕೆ [illegible] ಕೆಣ್ಣುಮುಚ್ಚಿ [illegible]. ಅವರ ಮನಸ್ಸಿನಲ್ಲಿ [illegible] ತಗಣೆಯು [illegible] ಅವರನ್ನೇ [illegible] ಬೊಬ್ಬೆ ಹೊಡೆಯಿತು:

"ನನ್ನನ್ನು ಕೊಂದ ಪಾಪಿ ನೀನು!.... [illegible] ನೀನು ಹೇಗೆ ಬದುಕಿಯೆ!....ನನ್ನಂತೆಯೇ [illegible] ಸಾಯಿ!.... ಸಾಯಿ!!"

ಆ ತಗಣೆಯು ಅಟ್ಟ ಹಾಸ ಮಾಡುತ್ತಿತ್ತು. ಅವರು ಭಯದಿಂದ [illegible]. [illegible] ಎಲ್ಲ ಸ್ವಪ್ನಗಳೂ [illegible].

"[illegible]... ಮೃತ್ಯು... ಪ್ರಾಣ... [illegible]... [illegible]."

ರಾಯರ [illegible] ಎಚ್ಚರವಾಯಿತು. ಅವರಿಗೆ [illegible]. [illegible]. ಕಣ್ಣು [illegible].

[illegible] ಮೃತ್ಯು [illegible]. ರಾಯರು [illegible]. [illegible] 'ಗೊರ ಗೊರ' ಎಂಬ [illegible].

ಮೃತ್ಯುವಿನ ಆ [illegible] ರಾಯರು [illegible]. [illegible] ಕಣ್ಣುಗಳಲ್ಲಿ [illegible].

[illegible] ರಾಯರು [illegible].

[illegible] ಅವರ [illegible] ನಗೆಗಡಲ [illegible] ಮುಂದೆ [illegible].

[illegible] ರಾಯರು [illegible].

* * * *

[illegible] ಅವರ [illegible], ರಾಯರು [illegible] ಮೃತ್ಯುವಿನ [illegible] ಅವರ [illegible].

ಭಾರತೀಯ ಸಂಗೀತದ ಶ್ರುತಿಗಳು

[illegible]

[illegible]

★

[illegible]

☆

[illegible]

[illegible] ಸಾ, ರಿ, ಗ, ಮ, ಪ, ಧ, ನಿ. [illegible]

[illegible]

೨೨ ಸ್ವರಗಳು ಬೇಕಾಗುವವು. ವೀಣೆ, ಸಿತಾರು ಮೊದಲಾದ ತಂತು ವಾದ್ಯಗಳ ಮೇಲೆ ಒಂದೇ ಸಪ್ತಕದಲ್ಲಿ ೨೨ ಪಾವಟಿಗೆಗಳನ್ನು ರಚಿಸುವುದು ಯಾಂತ್ರಿಕದೃಷ್ಟಿಯಿಂದ ಬಹಳ ಅನನುಕೂಲವಾಗುವುದು, ವಾದಕರಿಗೂ ತುಂಬ ತೊಂದರೆಯದಾಗುವುದು— ಎಂದು ತಿಳಿದು, ಹನ್ನೆರಡೇ ಪಾವಟಿಗೆಗಳನ್ನು ಮಾತ್ರ ಇಟ್ಟಿರುತ್ತಾರೆ. ಇದಕ್ಕೆ 'ಅಚಲಥಾಟಿನ ವ್ಯವಸ್ಥೆ' ಎಂದೆನ್ನುತ್ತಾರೆ. ಕಲಿಯುವವರಿಗೆ ಇನ್ನೂ ಹಗುರಾಗಬೇಕೆಂದು ಏಳೇ ಪಟ್ಟಿಗಳನ್ನು ಅಥವಾ ಪರದೆಗಳನ್ನು ಕಟ್ಟಿದರು. ಇದಕ್ಕೆ 'ಚಲಥಾಟಿನ ವ್ಯವಸ್ಥೆ' ಎಂದು ಕರೆಯುವರು. ಈ ಏಳು ಪರದೆಗಳು ಸಮಾನಾಂತರದ ಮೇಲೆ ಇರುವುದಿಲ್ಲವೆಂಬುದನ್ನು ಹಿಂದೆ ಹೇಳಿದ್ದೇವೆ. ಈ ಅಂತರಗಳನ್ನು ಇಂಚುಪಟ್ಟಿಯಿಂದ ಅಳೆಯಬಹುದು. ಪರದೆಗಳು ಸರಿಯಾದ ಅಳತೆಯ ಮೇಲೆ ಕೂಡಿಸಲ್ಪಟ್ಟವೆಯೆಂಬುದನ್ನು ಹೇಗೆ ರುಜುವಾತುಮಾಡಿ ತೋರಿಸಬೇಕು— ಎಂಬುದೇ ಈ ಶ್ರುತಿಸಿದ್ಧಾಂತದ ಇನ್ನೊಂದು ಮುಖ. ಅದನ್ನು ಸ್ವಲ್ಪ ಸಾವಧಾನದಿಂದ ವಿಚಾರಿಸೋಣ :

ಸ್ವರಗಳು ನಿಯಮಿತ ಕಂಪನಗಳಿಂದ ಆಗುವುವಷ್ಟೆ? ನಿಮ್ಮ ತಂಬೂರಿಯ ನಾದವನ್ನು ನಿಮಗೆ ಹಿತವಾದ ಬೇಕಾದ ಒಂದು ಸ್ವರಕ್ಕೆ ಕೂಡಿಸಬಹುದು. ಆ ನಾದಕ್ಕೇ ಸಾ ಎಂಬ ಸಾಪೇಕ್ಷ ಹೆಸರು. ಸೇಕಂದಿಗೆ ನೂರು ಕಂಪನಗಳಿಂದ ಹೊರಡುವ ಧ್ವನಿಗೆ ನಮ್ಮ ತಂಬೂರಿಯನ್ನು ಕೂಡಿಸಿದ್ದೇವೆ, ಎಂದು ತಿಳಿಯೋಣ.

ಕುಟಜಾರಿಷ್ಟ

ಆಮಾಂಶ-ಸಂಗ್ರಹಣಿಗಳಿಗೆ.

ಕಾಸಶ್ವಾಸಾರಿ

ದಮ್ಮು-ಕೆಮ್ಮುಗಳಿಗೆ.

ಎಲ್ಲ ಬಗೆಯ ಆಯುರ್ವೇದ ಔಷಧಗಳಿಗಾಗಿ ಬರೆಯಿರಿ :

卐

ದಿ ನೂತನ

ಆಯುರ್ವೇದ ಕಾರ್ಯಾಲಯ ಲಿ.

ವಿಜಾಪುರ.

ಕಲ್ಯಾಣಿ ಥಾಟಿನ ರಾಗವನ್ನು ಹಾಡುತ್ತಿದ್ದರೆ, ಅಥವಾ ವೀಣೆಯ ಮೇಲೆ ಬಾರಿಸುತ್ತಿದ್ದರೆ, ಆ ರಾಗದ ಸಪ್ತಸ್ವರದ ಕಂಪನಗಳು ಹೀಗಿರಬೇಕು :

ಸಾ	ರಿ	ಗಾ	ಮ	ಪ	ಧ	ನಿ	ಸ
೧೦೦,	೧೧೨॥,	೧೨೫,	೧೩೩⅓,	೧೫೦,	೧೬೬⅔,	೧೮೭,	೨೦೦

(ಮುಂದಿನ ಸಪ್ತಕದ ಷಡ್ಜ) ಈ ವ್ಯಾಖ್ಯಾನವನ್ನು ಕೇಳುವವರ ಅಥವಾ ಓದುವವರ ಮನಸ್ಸಿನಲ್ಲಿ ಥಟ್ಟನೇ ಒಂದು ಪ್ರಶ್ನೆಯನ್ನು ಮಾಡಬೇಕೆಂದು ಬರುವುದು : ಪ. ಎಂಬ ಸ್ವರವು ೧೫೦ ಆಂದೋಲನಗಳಿಂದ ಅಥವಾ ಕಂಪನಗಳಿಂದ ಆದದ್ದು— ಎಂದು ನಮಗೆ ಹೇಗೆ ಪ್ರತ್ಯಕ್ಷ ಅನುಭವಕ್ಕೆ ಬರಬೇಕು? ಅದಕ್ಕೆ ಒಂದು ಹಾದಿಯಿದೆ. ಸ್ವರಗಳ ಕಂಪನಗಳು ಬಾರಿಸುವ ತಂತಿಯ ಉದ್ದಳತೆಯ ವ್ಯಸ್ತಪ್ರಮಾಣದಲ್ಲಿ ಇರುವುವು ಎಂಬ ಸಿದ್ಧಾಂತವಿದೆ. "ತ್ರಿಭಾಗಾತ್ಮಕ ವೀಣಾಯಾಂ ಪಂಚಮಂ ಸ್ಯಾತ್‌ದಗ್ರಿಮೇ" ಎಂಬ ಸಂಗೀತ ಪಾರಿಜಾತ ಗ್ರಂಥದಲ್ಲಿಯ ಉಕ್ತಿಯ ಮೇಲಿಂದ ಅಥವಾ ಆಧುನಿಕ ಭೌತಶಾಸ್ತ್ರದ ಆಧಾರದ ಮೇಲಿಂದ ಆಂದೋಲನಸಂಖ್ಯೆಯು ಉದ್ದಳತೆಯ ವ್ಯಸ್ತಪ್ರಮಾಣದಲ್ಲಿರುವುದು ಎಂಬ ಮಾತನ್ನು ಗ್ರಹಿಸಿದರಾಯಿತು. (ಎರಡು ಕೋಟಿಗಳಲ್ಲಿ ಬಿಗಿಮಾಡಿದ) ಒಂದು ತಂತಿಯನ್ನು ಮೀಟಿದೊಡನೆ ಕೇಳಿಸುವ ಆಧಾರನಾದದ ತತ್‌ಕ್ಷಣವೇ ತಾರ ಷಡ್ಜವೂ ತಾರಸಪ್ತಕದ ಪಂಚಮವೂ ಸೂಕ್ಷ್ಮವಾಗಿ ಕೇಳಿಸುವುವು. ಮೊದಲು ಇಡಿಯ ಒಂದು ತಂತಿ, ಕೂಡಲೆ ಅದರ ಎರಡು ಅರ್ಧಭಾಗಗಳು, ಕೂಡಲೆ ಅದರ ಮೂರು ಮೂರನೇ ಭಾಗಗಳು ಹೀಗೆ ಕಂಪನಹೊಂದಿ ಅನುಕ್ರಮವಾಗಿ ೧: ೨: ೩ ಈ ಪ್ರಮಾಣದಲ್ಲಿರುವ ಕಂಪನಗಳುಳ್ಳ ಸೂಕ್ಷ್ಮಸ್ವರಗಳನ್ನು (ಅನುರಣನ ಸ್ವರಗಳನ್ನು) 'ಹಾರ್ಮೋನಿಕ್ಸ್' ಹೊರಡಿಸುವುವು. ಸಾ ಮತ್ತು ಪ ಇವುಗಳ ಆಂದೋಲನಗಳ ಪ್ರಮಾಣವು ೧೦೦ : ೧೫೦ :ಅಥವಾ ೨ : ೩ ಅಥವಾ ೧ : ೧½ ಇರುವುದರಿಂದ ಅವು ನುಡಿಯುವ ತಂತಿಯ ಉದ್ದಳತೆಗಳು ಆಂದೋಲನಗಳ ವ್ಯಸ್ತಪ್ರಮಾಣಲ್ಲಿರಬೇಕು; ಎಂದರೆ ೧೫೦ : ೧೦೦ = ೩ : ೨ = ೧ : ⅔ ಈ ಪ್ರಮಾಣದಲ್ಲಿ ಇರಬೇಕು. ಸಾ ಒಂದು ಇಡೀ ತಂತಿಯ ಮೇಲೆ ನುಡಿಯುತ್ತಿದ್ದರೆ, ಪ ವು ಅದರ ⅔ ಉದ್ದಳತೆಯ ಮೇಲೆ ಕೇಳಿಸಬೇಕು (ನುಡಿಯಬೇಕು). ತಂತಿಯು ೩೬ ಇಂಚು ಉದ್ದವಿದೆ ಮತ್ತು ಇಡಿಯ ತಂತಿಯು ಬಾರಿಸುತ್ತಿರುವಾಗ ಸ ಕೇಳಿಸುವುದೆಂದು ತಿಳಿದುಕೊಂಡರೆ (೩೬ × ⅔ =) ೨೪ ಇಂಚು ಉದ್ದಳತೆಯ ಮೇಲೆ ಪಂಚಮವೂ ಕೇಳಿಸಬೇಕು.



ಆಕೃತಿ ೧. ಆಕೃತಿ ೨. ಆಕೃತಿ ೩.

ಆಕೃತಿಯ ಒಂದನೆಯದರ ತಂತಿಯ ಅ ಬ ದ **ಮೇಲೆ ಸ** ಕೇಳಿಸಿದರೆ ೨ ನೇ ಆಕೃತಿಯಲ್ಲಿ ಕ ಎಂಬ ಸ್ಥಳದಲ್ಲಿ ಪಡದೆಯನ್ನು ಕಟ್ಟಿದರೆ ಅಲ್ಲಿ ಕ ಬ ತಂತಿಯ ಮೇಲೆ ಅಥವಾ ಆಕೃತಿಯ ೩ ನೇದರಲ್ಲಿ ತೋರಿಸಿದಂತೆ ಅ ಡ ತಂತಿಯ ಮೇಲೆ ಪ ಕೇಳಿಸಬೇಕು. ಹೀಗೆ ಕೇಳಿಸುವುದೋ ಇಲ್ಲವೋ ಎಂಬುದನ್ನು **ಪರೀಕ್ಷಿಸಿ ನೋಡಿರಿ.** ಎಂದರೆ ಮೇಲೆ ಹೇಳಿದ ಭೌತಿಕಸಿದ್ಧಾಂತದ **ಅರ್ಥವಾಗುವುದು.** ಅದ-

ಕೊಡನೆ ಪಾರಿಜಾತದಲ್ಲಿ ಮೇಲೆ ಹೇಳಿದ ಉಕ್ತಿಯ ಅನುಭವವೂ ಬರುವುದು. ಕಲ್ಯಾಣಿ ಥಾಟಿನ ಸ್ವರಗಳ ಕಂಪನಸಂಖ್ಯೆಗಳನ್ನು ತಕ್ಕೊಳ್ಳೋಣ !

೧೦೦, ೧೧೨$\frac{೧}{೨}$, ೧೨೫, ೧೪೦$\frac{೫}{೮}$, ೧೫೦, ೧೬೮$\frac{೩}{೪}$, ೧೮೭$\frac{೧}{೨}$, ೨೦೦. ಭಿನ್ನಾಂಕಗಳಿಂದ ವಿಚಾರವು ಹೆಚ್ಚು ಹಗುರಾಗುವುದು ಮತ್ತು ಸಾ ದ ಕಂಪನ ಸಂಖ್ಯೆಯು ಐಚ್ಛಿಕವಿರುವುದರಿಂದ ಎಲ್ಲ ಕಂಪನ ಸಂಖ್ಯೆಗಳ ಎಂಟು ಪಟ್ಟು ಮಾಡಿ ಇಡೋಣ : ೮೦೦, ೯೦೦, ೧೦೦೦, ೧೧೨೫, ೧೨೦೦, ೧೩೫೦, ೧೫೦೦, ೧೬೦೦. ಸ ವು ಒಂದು ಪಟ್ಟು ಕಂಪನ-ವನ್ನು ಸೂಚಿಸಿದರೆ, ಮಧ್ಯಷಡ್ಜದಿಂದ ತಾರಷಡ್ಜದ ವರೆಗಿನ ಎಲ್ಲ ಸ್ವರಗಳು ಸ, ರಿ, ಗ, ಮ, ಪ, ಧ, ನಿ, ಸ, ಈ

$$೧ : \frac{೯}{೮} : \frac{೫}{೪} : \frac{೪೫}{೩೨} : \frac{೩}{೨} : \frac{೨೭}{೧೬} : \frac{೧೫}{೮},\ ೨.$$

ಪ್ರಮಾಣವನ್ನು ಸೂಚಿಸುವುವು. ಇಲ್ಲಿ ಏಳು ಬೇರೆ ಬೇರೆ ಸ್ವರಗಳಿವೆ; ಅಂತೆಯೇ ಏಳು ಸ್ವರಾಂತರಗಳಿವೆ. ಈ ಸ್ವರಾಂತರಗಳು ಸ್ವಲ್ಪ ಹೆಚ್ಚುಕಡಿಮೆ ಅಷ್ಟಷ್ಟೇ ಇವೆ. ಹೇಗೆಂದರೆ, (ಯಾವಾಗಲೂ ಎರಡು ಸ್ವರಗಳ ಅಂತರವನ್ನು ಲೆಕ್ಕ ಮಾಡಿ ನೋಡಬೇಕಾದರೆ ಏರುಸ್ವರದ ಕಂಪನ ಸಂಖ್ಯೆಗೆ ಇಳಿಸ್ವರದ ಕಂಪನ ಸಂಖ್ಯೆಯಿಂದ ಭಾಗಿಸಬೇಕು; ಬರುವ ಭಾಗಲಬ್ಧವೇ ಅಂತರವನ್ನು ತೋರಿಸುವುದು.)

ಕಲ್ಯಾಣಿ ಥಾಟಿನ ಸ್ವರಗಳ ಅಂತರಗಳು

ಸ	ದಿಂದ	ರಿ;	$\frac{೯}{೮} \div ೧ = \frac{೯}{೮}$ = ೧।೧೨	= ೪	ಶ್ರುತ್ಯಂತರ
ರಿ	,,	ಗ;	$\frac{೫}{೪} \times \frac{೮}{೯} = \frac{೧೦}{೯}$ = ೧।೧೧	= ೩	,,
ಗ	,,	ಮ;	$\frac{೪೫}{೩೨} \times \frac{೪}{೫} = \frac{೯}{೮}$ = ೧।೧೨	= ೪	,,
ಮ	,,	ಪ;	$\frac{೩}{೨} \times \frac{೩೨}{೪೫} = \frac{೧೬}{೧೫}$ = ೧।೦೬	= ೨	,,
ಪ	,,	ಧ;	$\frac{೨೭}{೧೬} \times \frac{೨}{೩} = \frac{೯}{೮}$ = ೧।೧೨	= ೪	,,
ಧ	,,	ನಿ;	$\frac{೧೫}{೮} \times \frac{೧೬}{೨೭} = \frac{೧೦}{೯}$ = ೧।೧೧	= ೩	,,
ನಿ	,,	ಸ;	$೨ \times \frac{೮}{೧೫} = \frac{೧೬}{೧೫}$ = ೧।೦೬	= ೨	,,

ಎಲ್ಲಕ್ಕೂ ಸಣ್ಣ ಅಂತರವು ೧।೦೬ ಅಥವಾ ೧$\frac{೧}{೧೫}$.
ಅದಕ್ಕೂ ಸ್ವಲ್ಪ ಹೆಚ್ಚಿನ ಅಂತರವು ೧।೧೧ ಅಥವಾ ೧$\frac{೧}{೯}$.
ಅದಕ್ಕೂ ಸ್ವಲ್ಪ ದೊಡ್ಡದು ೧।೧೨ ಅಥವಾ ೧$\frac{೧}{೮}$.

ಈ ಭಾಗಾಕಾರದ ಮತ್ತು ಗಣಿತದ ತೊಂದರೆಯನ್ನು ತಪ್ಪಿಸುವುದಕ್ಕೆ ನಮ್ಮ ಹಿಂದಿನ ಶಾಸ್ತ್ರಕಾರರು ಸಾ ದಿಂದ ರಿ ಅಂತರಕ್ಕೆ ಚತುಶ್ರುತಿ ಎಂದೂ, ರಿ ದಿಂದ ಗ ಅಂತರಕ್ಕೆ ತ್ರಿಶ್ರುತಿ ಎಂದೂ, ನಿ ದಿಂದ ಸ ಅಂತರಕ್ಕೆ ದ್ವಿಶ್ರುತ್ಯಂತರವೆಂದೂ ಸಂಕೇತವಿಟ್ಟುಕೊಂಡಿದ್ದರು. ಈ ಶ್ರುತ್ಯಂತರಗಳ ಒಟ್ಟು ೨೨ ಆಗುವುದೆಂಬುದನ್ನು ಲಕ್ಷ್ಯದಲ್ಲಿಡಿರಿ.

ಸಪ್ತಕದಲ್ಲಿ ೧೨ ಸ್ವರಗಳನ್ನು ಇಟ್ಟುಕೊಂಡಾಗ, ೧೨ ಸ್ವರಾಂತರಗಳೂ ಆಗುವುವು. ಸ್ಥೂಲಮಾನದಿಂದ ಹೇಳುವುದಾದರೆ ಮಧ್ಯ ಷಡ್ಜದಿಂದ ತಾರ ಷಡ್ಜದ ವರೆಗೆ ಈ ಸ್ವರಗಳ ಕಂಪನಗಳು ಪ್ರತಿ ಶತ ೬ ರಂತೆ ಹೆಚ್ಚಾಗುತ್ತ ಹೋಗುವವು. ಅವುಗಳನ್ನು ಗಣಿತದ ರೀತಿಯಲ್ಲಿ ಹೀಗೆ ಬರೆದು ತೋರಿಸಬಹುದು :

ಸ ಕೋಮಲ ರಿ ತೀವ್ರ ರಿ ಕೋಮಲ ಗ

$$೧೦೦,\ ೧೦೦\times ೧{\cdot}೦೬,\ ೧೦೦\times(೧{\cdot}೦೬)^{೨},\ ೧೦೦\times(೧{\cdot}೦೬)^{೩} \ldots\ ೧೦೦\times(೧{\cdot}೦೬)^{೧೨}$$

ಇಲ್ಲಿ ಸ್ವರಾಂತರಗಳು ಸಮಾನವೆಂದು ಹಿಡಿಯಲ್ಪಟ್ಟಿವೆ; ಬೇಕಾದ ಒಂದು ಸ್ವರದ ಕಂಪನಸಂಖ್ಯೆಗೆ ಅದರ ಹಿಂದಿನ ಕಂಪನ ಸಂಖ್ಯೆಯಿಂದ ಭಾಗಿಸಿದರೆ, ಅಷ್ಟೇ ಭಾಗಲಬ್ಧವು ಬರುವುದು. ಯುರೋಪಿನ ಆರ್ಕೆಸ್ಟ್ರಾ ಸಂಗೀತದಲ್ಲಿ ಉಪಯೋಗಿಸುವ ವಾದ್ಯಗಳಲ್ಲಿಯ ೧೨ ಸ್ವರಗಳು ಹೀಗೆಯೇ ಸಮೀಕೃತ ಸ್ವರಾಂತರಗಳುಳ್ಳವು; ಹಾರ್ಮೋನಿಯಮಿನ ಮೇಲಿನ ಸ್ವರಗಳು ಸಾಮಾನ್ಯವಾಗಿ ಇಂತಹವೇ ಇರುವುವು. ಅನಭಿಜ್ಞನ ಕಿವಿಗೆ ಅವೇನು ಅಷ್ಟು ಅಶುದ್ಧವೆನಿಸುವುದಿಲ್ಲ. ಸಾಮಾನ್ಯಸಂಗೀತಕ್ಕೆ ಅವು ನಡೆಯುವುವೆಂದು ನಾವು ಸುಮ್ಮನಿರುವೆವು; ವೃಂದ (ಬ್ಯಾಂಡ್) ಸಂಗೀತದಲ್ಲಿ ಅವು-ಗಳಿಲ್ಲದೇ ಗತಿಯೇ ಇಲ್ಲ. ಆದಕ್ಕಾಗಿಯೇ ಹಾರ್ಮೋನಿಯಮಿನ ಉಪಯೋಗವನ್ನು ಆಕಾಶವಾಣಿಯ ಸಂಗೀತದಲ್ಲಿ ಪ್ರತಿಬಂಧಿಸಿರು-ವರು. ಆರ್ಕೆಸ್ಟ್ರಾದ ಹೆಚ್ಚಾದ ಉಪಯೋಗದಿಂದ ನಮ್ಮ ಭಾರ-ತೀಯ ಸಂಗೀತದ ಸಹಜ ಸಂಸ್ಕಾರವು ಇಳಿತರದ್ದಾಗುವುದು.

(ಮುಂದುವರಿಯುವುದು)

‘ ಬಗನ ’ ಬಾಲಾಮೃತ

ಮಕ್ಕಳ ಸದೃಢತೆಗಾಗಿ ‘ಬಗನ’ ಬಾಲಾಮೃತ-ವನ್ನು ಉಪ-ಯೋಗಿಸಿರಿ.

ಎಂ. ಪ್ರಮಾಥ ಮಕ್ಕಳ ಯಕೃತು ಮತ್ತು ಹೊಟ್ಟೆ

ರೋಗದ ಭಯವಿಲ್ಲ.

ಬಗನ ಬಾಲಾಮೃತದಲ್ಲಿ ‘ ಗ್ರಾಯಿಪ್ ವಾಟರಿನ ’ ಅಂಶವೂ ಇರುವದರಿಂದ, ಇದು ಮಕ್ಕಳ ಉತ್ತಮ ‘ ಟೊನಿಕ್ಕು ’ ಇರುವದು.

THE NATIONAL PHARMACIES &
PHARMACEUTICALS Ltd. DHARWAR.

ಹೀಂಗ್ಯಾಕ ನೋಡತಾನ ?

(ಒಂದು ನಲ್ವಾಡು)

' ಆನಂದಕಂದ '

卐

ಎಲ್ಲಿ ಹೋದರು ನನ್ನಕಡೆ ಕಣ್ಣಾ....
ಹೀಂಗ್ಯಾಕ ನೋಡತಾನ ಚೆನ್ನಾ ?

೧

ಒಂದಿನ ಓಣ್ಯಾಗ ಕೂಡಿಯಿದ್ದು ಜೊತಿದರನ್ನ ನೆರಿ ಹೊರಿ....
ಎಂದೂ ಇಲ್ಲದ್ದು ನನಗೀಗ ಬಂದೈತೇನು ಐಸಿರಿ ? ....
ಒಂದ ನನನ ನೋಡತಾನ ರೆಪ್ಪಿ ಸಿಳಕಿಸದೆ– ಪೂರಿ....
ಗೊತ್ತಾಗವಲ್ಲದು ಇದರ ಕಾರ್ಣಾ....
ಹೀಂಗ್ಯಾಕ ನೋಡತಾನ ಚೆನ್ನಾ ?

೨

ಬುತ್ತಿ-ರೊಟ್ಟಿ ತೊಗೊಂಡು—ತ್ವಾಟಕ ನಾ ಹೊಂಟಾಗ....
ಅಂವ ನಿಂತಿರತಾನವ್ವ ಹಾದಿಯ ಬದಿವಿನ ಮ್ಯಾಗ....
ಹಕ್ಕಿ ಬಂದು ಎರಗಿ ಬೆಳಿ ತಿಂದರು ಅರಿವಿಲ್ಲವಗ....
ಎಸಿತಾನ ನನಗ ಕಣ್‌ಬಾಣಾ
ಹೀಂಗ್ಯಾಕ ನೋಡತಾನ ಚೆನ್ನಾ ?

೩

ಮುಂಜಾಲೆ ಅಂಗಳದ ಕಸಾ ಗುಡಸತಿರುವಾಗ....
ಅಂವ ಓಡಿಬಂದು ನಿಲ್ಲತಾನ ಮನೀ ಬಿಟ್ಟು ಹೊರಗ....
ನಾ ಎತ್ತ ತಿರಿಗಿದರು ಅವನ ದಿಟ್ಟಿ ನನ್ನ ಮ್ಯಾಗ....
ಇದು ಎಂಥಾದವನ ಮಳ್ಳತಾನಾ....
ಹೀಂಗ್ಯಾಕ ನೋಡತಾನ ಚೆನ್ನಾ !

೪

ಅಂವ ಯಾಕ ನೋಡ್ತಾನಂತ ನಾನೂ ನೋಡ್ತೀನವನ್ನ....
ನೋಡಿದಾಗ ತುಟಿಯ ಮ್ಯಾಗ ಕುಣಿಸತಾನ ನಗಿಯನ್ನ....
ಆ ನೋಟ ನಗೀ ನೋಡಿ ಏನೋ ಅಂತೈತಿ ಮನ ತನನ....
ಎಂದೂ ಅರಿಯದ ಬೆರಗಿಲಿ ನನ್ನ—
ಹೀಂಗ್ಯಾಕ ನೋಡತಾನ ಚೆನ್ನಾ ?

೫

ನಾ ಬರಿಗೊಡ ಹೊತುಗೊಂಡು ಹೊಳಿಗೆ ಹೊರಡತೀನಲಾ....
ನೋಡ್ತಿರತಾನ ದಾರಿಯ ಹೋಗಿ ನನ್ನಕಿಂತ ಮೊದಲಾ....
ಹೊಳಿಗಿಳಿದು ಬಾಗಿದಾಗ ಬಿಗಿಯುವನನ ಕಣ್‌ಜಾಲಾ....
ಮಾಡ್ತಿದ್ದಿಲ್ಲ ಹೀಂಗ ಇಷ್ಟು ದೀನಾ
ಹೀಂಗ್ಯಾಕ ನೋಡತಾನ ಚೆನ್ನಾ ?

೬

ಮೊದ-ಮೊದಲಿಗನಿಸಿತವ್ವ ಅಂವಗೇನೋ ಒಂದು ಹುಚ್ಚಾ....
ಬರ-ಬರತ ಕಂಡಿತವ್ವ ನನಗ ಅವನ ಹುಚ್ಚು ಮೆಚ್ಚಾ....
ನೋಡ್ದಿದ್ದರ ನನ್ನ ಕಡೆ, ಕರಳಾಗ ಬಿದ್ಹಾಂಗ ಕಿಚ್ಚಾ....
ಹೀಂಗ್ಯಾಕಾಗುದು ಇದು ಏನಾ ?
ನಾನೂ ಯಾಕ ನೋಡ್‌ತೀನವನ್ನ ?

* * * *

ನಾ ಯಾಕ ನೋಡತೀನವನ್ನ....
ನನ್ಯಾಕ ನೋಡತಾನ ಚೆನ್ನ ?

ಕವಿಯ ಅನುಭವ

(ಸಂಸ್ಕೃತದಿಂದ)

ನಟನಲ್ಲ, ವಿಟನಲ್ಲ, ಅಲ್ಲ ನಾ ಗಾಯಕ
ಆಟಮಟ ನುಡಿವ ಮಾತಾಳಿಯು ಅಲ್ಲ !
ಎದೆಯ ಭಾರದಿ ಬಳುಕುವ ವಿಳಾಸಿನಿಯಲ್ಲ
ಅದಕೆಂದೇ ದೊರೆಯ ದರ್ಶನ ನನಗಿಲ್ಲ !

ದೇಶಭಕ್ತನ ಅನುಭವ

(ಪರಿಸ್ಥಿತಿಯಿಂದ)

ಡಂಬವ ಬಿಟ್ಟು ಸತ್ಯದ ಬೆನ್ನು ಹತ್ತಿದೆ,
ಅನ್ಯಾಯಗಳಿಗೆ ನನ್ನದು ವಿರೋಧ !
ಹಣವ ಸುಲಿಯಲಿಲ್ಲ, ಜನಮನ ಕಳಲಿಲ್ಲ,
ನನಗೆಂತು ದೊರೆವುದು ಮಂತ್ರಿಪದ ?

ಆಚಾರ್ಯ ಶ್ರೀಶಾಂತಿಸಾಗರರೂ ಅವರ ವಿಚಾರಗಳೂ

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ.

★

ಜೈನಮುನಿಗಳ ಜೀವನವೆಂದರೆ ಸಾಮಾನ್ಯ ಜನರಿಗೆ ಪವಾಡವಾಗಿ ಕಾಣುವುದು. ಆದರೆ ಸಾತಗೌಡನೆಂಬ ಸಾಮಾನ್ಯ ವ್ಯಕ್ತಿಯೇ ಆಚಾರ್ಯ ಶಾಂತಿಸಾಗರರಾಗಿ ನಿಂತಿರುವುದೆಂಬುದನ್ನು ಪ್ರತ್ಯಕ್ಷ ನೋಡಬಹುದು !

★

ಲೌಕಿಕ ಜೀವನ

ಒಂದು ಹಿರಿಯ ಜೀವ ನಾಡಿನಲ್ಲಿ ಜನಿಸಬೇಕಾದರೆ ದೇಶದ ಪುಣ್ಯೋದಯವಾಗಬೇಕು; ಜನತೆಯ ಭಾಗ್ಯ ತೆರೆಯಬೇಕು. ಅಲ್ಲದೆ ಅಂತಹ ವ್ಯಕ್ತಿಯ ಮಾರ್ಗದರ್ಶನದ ಆವಶ್ಯಕತೆಯೂ ಆ ಕಾಲದ ಸಮಾಜಕ್ಕೆ ಎನಿಸಿರಬೇಕು. ಈ ನಿಯಮವನ್ನು ಜಗತ್ತಿನ ಯಾವ ಮಹಾಪುರುಷರ ಅವತಾರ ಸಂದರ್ಭಕ್ಕೂ ನಾವು ಅನ್ವಯಿಸಿ ಹೇಳಬಹುದು. ರಾಮ, ಕೃಷ್ಣ, ಬುದ್ಧ, ಮಹಾವೀರ, ಏಸುಕ್ರಿಸ್ತ, ಪೈಗಂಬರ ಮತ್ತು ಬಸವ ಇವರೆಲ್ಲರ ಜನ್ಮಸ್ಥಳ, ಕಾಲ, ಸಮಾಜಗಳೆಲ್ಲವೂ ಅವರವರ ಅವತಾರ ಕಾರ್ಯಕ್ಕೂ ಉದ್ದೇಶಕ್ಕೂ ತಕ್ಕುವಾಗಿದ್ದುವು. ಇವರಂತೆಯೇ ರಾಜಕೀಯ ಕ್ಷೇತ್ರದಲ್ಲಿಯ ಮಹಾವ್ಯಕ್ತಿಗಳ ಜನ್ಮೋದ್ದೇಶಗಳಿಗೂ ಸಾಂಕೇತಿಕ ಪಾರ್ಶ್ವಭೂಮಿ ಇದ್ದುದನ್ನು ಚಾರಿತ್ರಿಕ ಅಭ್ಯಾಸದಿಂದ ನಾವು ಕಂಡುಕೊಳ್ಳಬಹುದು. ಇಂಥ ಒಂದು ಪರಿಸರದ ಫಲವಾಗಿ ಭೋಜಗ್ರಾಮದ ಗೌಡಮನೆತನದ ಸಾತಗೌಡ ಎಂಬ ಸಾಮಾನ್ಯ ವ್ಯಕ್ತಿಯು ಇಂದು ಆಚಾರ್ಯ ಶ್ರೀಶಾಂತಿಸಾಗರರಾಗಿ ನಮ್ಮ ಎದುರಿಗೆ ನಿಂತಿದ್ದಾರೆ !

ಆಚಾರ್ಯಶ್ರೀಯವರು ಒಂದು ಜೈನ ಮನೆತನದಲ್ಲಿ ನಮ್ಮೆಲ್ಲರಂತೆ ಒಬ್ಬ ಸಾಮಾನ್ಯ ವ್ಯಕ್ತಿಯಾಗಿ ಹುಟ್ಟಿದರು. ಆದರೆ ಅವರ ಬೆಳವಣಿಗೆಯ ರೀತಿಯು ಮಾತ್ರ ಜನಸಾಮಾನ್ಯರಂತೆ ಇರಲಿಲ್ಲ. ಆದರಿಂದಲೇ ಅವರಿಂದು ತಮ್ಮ ತಪಸ್ಸು, ಸಾಧನೆಗಳಿಂದ ಆಚಾರ್ಯ ಪದವನ್ನು ಪಡೆದರು; ಚಾರಿತ್ರಚಕ್ರವರ್ತಿ ಎನಿಸಿದರು; ವಿಶ್ವವಂದ್ಯರಾದರು. ಅಲ್ಲದೆ ತಮ್ಮ ಸತತ ಸಾಧನೆಯಿಂದ ಒಂದು ಸತ್ಯವನ್ನು ಕಂಡರು. ತಾವು ಕಂಡುಕೊಂಡ ಸತ್ಯವನ್ನು ಆಚರಿಸಿದರು. ಅದನ್ನೇ ತಮ್ಮ ಸುತ್ತಲಿನ ಜನಕ್ಕೆ ಬೋಧಿಸಿದರು. ಅದು ಧರ್ಮದ ತಿರುಳೆನಿಸಿತು. ಅದರಲ್ಲಿ ಆತ್ಮಕಲ್ಯಾಣದೊಡನೆ ವಿಶ್ವಕಲ್ಯಾಣವೂ ಸಮಾವೇಶವಾಯಿತು. ಎಂತಲೇ ಅದನ್ನೀಗ ನಾವು ತಿಳಿದುಕೊಂಡು, ಉಳಿದವರಿಗೂ ಹೇಳುವ ಆವಶ್ಯಕತೆಯುಂಟಾಗಿದೆ.

ಮಹಾಪುರುಷರ ಪರಂಪರೆಯು ಭಾರತಕ್ಕೇನೂ ಹೊಸದಲ್ಲ. ಅದರಲ್ಲೂ ಜೈನ ಸಂಪ್ರದಾಯಕ್ಕೆ ಒಂದು ವಿಶಿಷ್ಟ ಪರಂಪರೆಯುಂಟು. ಅದು ತೀರ್ಥಂಕರರು, ಕೇವಲಿಗಳು, ಶ್ರುತಕೇವಲಿಗಳು, ಮತ್ತು ಆಚಾರ್ಯರು ಎಂದು ಮುಂದರಿದು ಬಂದಿದೆ. ಈ ಕ್ರಮದಲ್ಲಿ ತೀರ್ಥಂಕರರಿಗಿಂತ ಕೇವಲಿಗಳು, ಕೇವಲಿಗಳಿಗಿಂತ ಶ್ರುತಕೇವಲಿಗಳು, ಶ್ರುತಕೇವಲಿಗಳಿಗಿಂತ ಆಚಾರ್ಯರು ಧರ್ಮಜ್ಞಾನದಿಂದಲೂ ಬುದ್ಧಿಯಿಂದಲೂ. ಇನ್ನಿತರ ವಿಷಯಗಳಿಂದಲೂ ಕೆಳಗಿನ ವರ್ಗಕ್ಕೆ ಸೇರುತ್ತ ಹೋಗುತ್ತಾರೆ. ಆದರೂ ಇವರೆಲ್ಲರೂ ಒಂದು ಹಿರಿಯ ಸಂಪ್ರದಾಯದಲ್ಲಿ ಹುಟ್ಟಿ, ಬೆಳೆದು ಆಗಾಗ ಧರ್ಮವನ್ನು ಬೋಧಿಸಿದರು, ಸಮಾಜವನ್ನೂ ನಾಡಿನ ಜನತೆಯನ್ನೂ ಮೇಲೆತ್ತಲು ಯತ್ನಿಸಿದರು. ಇಂತಹ ಒಂದು ಪೂರ್ವಪರಂಪರೆಯ ಆಚಾರ್ಯ ಪದದಲ್ಲಿ ಇಂದು ಶ್ರೀಶಾಂತಿಸಾಗರರು ಇದ್ದಾರೆ. ಅದರಿಂದ ಅವರ ವಿಷಯವನ್ನೂ ವಿಚಾರಗಳನ್ನೂ ತಿಳಿದುಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ತಿಳಿದುಕೊಂಡ ಒಳ್ಳೆಯದನ್ನು ಪ್ರಚುರಗೊಳಿಸುವುದು ಧರ್ಮಕಾರ್ಯವಾಗಿದೆ.

(೧)

ರಾಮ-ಕೃಷ್ಣರಂಥ ಅವತಾರಿಕರನ್ನೂ ತೀರ್ಥಂಕರರಂಥ ಮಹಾಮಾನವರನ್ನೂ ಪಡೆದು, ಧರ್ಮದ ತವರ್ಮನೆಯೆನಿಸಿಕೊಳ್ಳುವ ಭಾಗ್ಯ ಉತ್ತರ ಭಾರತಕ್ಕಿರುವಷ್ಟು ದಕ್ಷಿಣ ಭಾರತಕ್ಕಿಲ್ಲ. ಆದರೂ ಆಗಾಗ ತೀರ್ಥಂಕರರ ಸಂಚಾರದಿಂದಲೂ ಉಪದೇಶದಿಂದಲೂ

ದೇವರಿನಿಂದ ಪವಿತ್ರವಾದ ನಾಡು ಕರ್ನಾಟಕವಾಗಿದೆ. ಅಲ್ಲದೆ ಭಾರತದ ಅನ್ಯ ಪ್ರಾಂತವು ಪಡೆಯದನ್ನು ಹಿರಿಯ ಆಚಾರ್ಯರನ್ನು ಪಡೆದು, ಧರ್ಮದ ಪ್ರಭಾವವನ್ನು ಬೆಳಗಿಸಿಕೊಂಡ ಜನತೆಯು ಆಗದಿರದು. ಇಲ್ಲಿ ಜೈನಧರ್ಮದ ಐತಿಹಾಸಿಕ ಪರಂಪರೆಯೊಂದನ್ನಷ್ಟೇ ಲಕ್ಷಿಸಿದರೂ ಆಚಾರ್ಯರುಗಳ ಕೊಡುಗೆ ನಮ್ಮ ನಾಡಿಗೆ ಏತಕ್ಕೆಂದಿತ್ತು ಎಂಬ ತಪ್ಪೇನಿಲ್ಲ. ಉತ್ತರದಿಂದ ಅಂತಿಮ ಶ್ರುತಕೇವಲಿ ಭದ್ರಬಾಹುಗಳು ಕರ್ನಾಟಕದಲ್ಲಿಯೇ ಶ್ರವಣಬೆಳ್ಗೊಳಕ್ಕೆ ಬಂದು ನಿಂತರು. ಆ ಮೇಲೆಯೂ ಜೈನಾಗಮಗಳನ್ನು ಸಂರಕ್ಷಿಸಿಕೊಳ್ಳಬೇಕಾದರೆ ಉತ್ತರದ— ಗಿರಿನಾರ ಗುಹ್ಯದ ಗುಹೆಯ— ಧರಸೇನಾಚಾರ್ಯರು, ಕರ್ನಾಟಕದಿಂದ ಭಗವಾನ್ ಭೂತಬಲಿ, ಪುಷ್ಪದಂತರಂಥ ಶಿಷ್ಯರನ್ನು ಕರೆಯಿಸಿಕೊಳ್ಳಬೇಕಾಯಿತು. ಅವರಿಂದ ಜಿನಾಗಮವು ಲೋಕದಲ್ಲಿ ಬೆಳಗಿತು. ಅನಂತರ ಜಿನವಾಣಿಯ ಉಪಕಾರಕವಾದ ಷಟ್ಖಂಡಾಗಮಸೂತ್ರವು, ಕಷಾಯಪಾಹುಡ ಕಷಾಯಸೂತ್ರಗಳ ತಳಹದಿಯ ಮೇಲೆ ಪ್ರಸ್ತುತವಾದ ನಡೆಯಿತು. ಧವಲ, ಜಯಧವಲಗಳಂಥ ಮಹಾತತ್ತ್ವಗ್ರಂಥಗಳನ್ನು ಬಿತ್ತರಿಸಿದ ಭಗವದ್ ಜಿನಸೇನ, ವೀರಸೇನರ ತಾಯ್ನಾಡು ಕರ್ನಾಟಕ. 'ಆತ್ಮಾನುಶಾಸನ'ವನ್ನು ಅರುಹಿದ ಗುಣಭದ್ರರು ನಮ್ಮಲ್ಲಿಯೇ ಜನಿಸಿದರು.

ಇಷ್ಟೇನು, ಸಿದ್ಧಾಂತ ಚಕ್ರವರ್ತಿಯೆನಿಸಿ, ಆಗಮಗಳನ್ನು ಬರೆದು, ಚಾಮುಂಡರಾಯ— ಗೊಮ್ಮಟನಿಗಾಗಿ 'ಗೊಮ್ಮಟಸಾರ'ವನ್ನು ಹೇಳಿದ ನೇಮಿಚಂದ್ರಾಚಾರ್ಯರು ಶ್ರವಣಬೆಳ್ಗೊಳದಲ್ಲಿ ಇದ್ದರು. ಒಂದೇ? ಎರಡೇ! ಹೀಗೆ ಹಲವು ಜನ ಪೂಜ್ಯಪುರುಷರನ್ನು ಪಡೆದು ಪೂಜ್ಯಭೂಮಿಯೆನಿಸಿದ ಕರ್ನಾಟಕದಲ್ಲಿ, ಈ ಯುಗದ ಆಚಾರ್ಯ ಶ್ರೀಶಾಂತಿಸಾಗರರು ಜನಿಸಿರುವುದು ಹೆಮ್ಮೆಗೊಂಡು ಹೊಸ ಚಿಕ್ಕೆಂತಾಗಿದೆ.

ಬೆಳಗಾಂವಿ ಜಿಲ್ಲೆಯ ಉತ್ತರ ಗಡಿಯಲ್ಲಿ ಕೊಲ್ಹಾಪುರ, ಸ್ವಾತಾರೆಗಳು ಸಂಧಿಸುವಲ್ಲಿ ಇಂದಿಗೂ ಜೈನ ಜನಾಂಗದ ವ್ಯಾಪಿಸಿದೆ. ಈ ಸೀಮೆಯಲ್ಲಿ ಬಹುಸಂಖ್ಯೆಯಿಂದ ಜೈನ ಜನ ಬಾಳಿದೆ. ಭಾರತದ ಅನ್ಯಾನ ಭಾಗದಲ್ಲಿಯೂ ಹೀಗೆ ಒತ್ತಟ್ಟ ಜೈನ ಜನವು ಇದ್ದುದನ್ನು ನಾವೆಲ್ಲಿಯೂ ಕಾಣಲಾರೆವು. ಇತ್ತ ಕಡೆಗೆ ವೈದಿಕಧರ್ಮವು ತನ್ನ ವರ್ಚಸ್ಸನ್ನು ಬೀರಿದಂತೆ ಇಲ್ಲಿ ಬೀರದೆ ಇಲ್ಲ. ಅಲ್ಲದೆ ಕನ್ನಡಿಗರದೇ ಆದ ವೀರಶೈವ ಧರ್ಮ ಕ್ರಾಂತಿಯೂ ಇಲ್ಲಿ ತನ್ನ ಪ್ರಭಾವದ ಮುದ್ರೆಯನ್ನು ಒತ್ತಿಬಿಟ್ಟಿಲ್ಲ. ಇದರಿಂದ ಎಷ್ಟೋ ಜಿನಮೂರ್ತಿಗಳೂ ಜಿನಮಂದಿರಗಳೂ ವೀರಶೈವರಿಂದ ಪೂಜೆಗೊಳ್ಳುವುದನ್ನು ಈಗಲೂ ನಾವು ಕಾಣಬಹುದು. ಇದರಂತೆ ಜೈನ ಮನೆತನದ ಗೌಡರೂ ಲಿಂಗಾಯತರಾಗಿ ಬಾಳುತ್ತಿರುವುದನ್ನೂ ಕಾಣುತ್ತೇವೆ. ಇಂತಹ ಸಂಕ್ರಾಂತಿಯಲ್ಲೂ ತನ್ನತನವನ್ನು ಕಾಯ್ದುಕೊಂಡು ಇಲ್ಲಿ ಜೈನ ಜನ ಬಾಳಿದೆ. ಇದಕ್ಕೆ ಇದಕ್ಕಿರುವ ಭದ್ರ ತಳಹದಿಯೇ ಕಾರಣವಾಗಿರಬೇಕು. ಈಗಲೂ ಕೊಲ್ಹಾಪುರ, ನಾಂದಣಿ, ರಾಯಬಾಗ, ತೇರದಾಳ, ಬೆಳಗಾಂವಿ ಮತ್ತು ಹೊಸೂರುಗಳಲ್ಲಿ ಮಠಗಳನ್ನು ಕಟ್ಟಿಕೊಂಡು ಬಾಳಿ ಬೆಳಗುತ್ತಿರುವ ಸ್ವಸ್ತಿ ಶ್ರೀಲಕ್ಷ್ಮೀಸೇನ, ಜಿನಸೇನ ಭಟ್ಟಾರಕರ ಗದ್ದುಗೆಗಳನ್ನು ಕಾಣಬಹುದು. ಅದಲ್ಲದೆ ಸ್ತವನಿಧಿ, ಕಾಗವಾಡ, ಕುಂದಲ ಮತ್ತು ಕುಂಭೋಜಗಳಂತಹ ಪ್ರಾಚೀನ ಜೈನಕ್ಷೇತ್ರಗಳನ್ನೂ ಸಾಂಸ್ಕೃತಿಕ ಸ್ಥಳಗಳ ಕುರುಹುಗಳನ್ನೂ ನಾವು ನಿರೀಕ್ಷಿಸಬಹುದು. ಇಂತಹ ಒಂದು ಜೈನ ಸಾಂಸ್ಕೃತಿಕ ಸೀಮೆಯ ಹೃದಯದಂತೆ ಭೋಜ ಗ್ರಾಮವಿದೆ.

ಇಲ್ಲಿಯ ಗೌಡರ ಮನೆತನದಲ್ಲಿ ಭೀಮಗೌಡ–ಸರಸ್ವತಿ ಎಂಬ ದಂಪತಿಗಳು. ಇವರಲ್ಲಿ ಸರಸ್ವತಿಗೆ ಸತ್ಯಭಾಮೆ ಎಂದೂ ಹೆಸರಿತ್ತು. ಇವರಿಗೆ ಐವರು ಮಕ್ಕಳು. ಅವರಲ್ಲಿ ನಾಲ್ವರು ಗಂಡುಮಕ್ಕಳು, ಇನ್ನೊಬ್ಬಳು ಕೃಷ್ಣಾತಾಯಿ ಎಂಬ ಮಗಳೂ ಇದ್ದಳು. ಗಂಡು ಸಂತತಿಯಲ್ಲಿ ದೇವಗೌಡ, ಆದಗೌಡ ಎಂಬವರು ಹಿರಿಯರು. ಮೂರನೆಯವನಾದ ಸಾತಗೌಡನೇ ಇಂದಿನ ಶಾಂತಿಸಾಗರರು. ಕುಮಗೌಡ ಇವರಿಗೂ ಕಿರಿಯನು. ಈ ಸಾತಗೌಡನು ಜನಿಸಿದುದು ಕ್ರಿ. ಶ. ೧೮೭೨ರಲ್ಲಿ. ಮಗುವು ಹುಟ್ಟಿದಾಗ, ಈತ ಮುಂದೆ ಆಚಾರ್ಯಪದಕ್ಕೇರುವನೆಂಬ ಸಂಗತಿಯು ಯಾರ ಕನಸುಮನಸ್ಸಿನಲ್ಲಿಯೂ ಇರಲಿಲ್ಲ. ಎಷ್ಟು ಸಾಮಾನ್ಯ ರೀತಿಯಲ್ಲಿ ನಡೆಯಿತು ಇವರ ಜನನೋತ್ಸವ !

ಹುಟ್ಟು ವ್ಯಕ್ತಿಯ ಸ್ವಾಧೀನವಲ್ಲ : ಅದು ಕರ್ಮಾಧೀನ : ಆದರೆ [illegible] ಆತ್ಮೋನ್ನತಿಯನ್ನು ತಾನು ಮಾಡಿಕೊಳ್ಳುವುದು ವ್ಯಕ್ತಿಯು ಪ್ರಯತ್ನಪಟ್ಟರೆ ಸಾಧ್ಯವಾಗಿದೆ. [illegible]ಲ್ಲಿ ಹುಟ್ಟಿದ ಸಾತಗೌಡನಿಗೆ ಎಂಬತ್ತು ವರ್ಷಗಳ ಹಿಂದೆ ಏನು ಮಾಡಬಹುದಿತ್ತು? ಅಂದಿನ ದೇಶದ ಸ್ಥಿತಿಯ ಕಡೆಗೆ ಸ್ವಲ್ಪ ನಾವು ದೃಷ್ಟಿಯನ್ನು ಬೀರಿದರೆ, ಒಂದು ಸಮಾಧಾನ ಸಿಕ್ಕುವುದು. ಅದಕ್ಕೆ ಶಾಂತಿಸಾಗರರ ಬಾಲ್ಯಜೀವನವೇ ನಿದರ್ಶನವೂ ಆಗುವುದು. ಅಂದಿಗೆ [illegible] ದಿನಗಳ ಹಿಂದೆ ಕ್ರಿ. ಶ. ೧೮೫೭ರ ಸ್ವಾತಂತ್ರ್ಯ ಸಮರ ಮುಗಿದಿದ್ದಿತು. ಭಾರತೀಯರು ವಿಫಲಪ್ರಯತ್ನರಾಗಿದ್ದರು. ಬ್ರಿಟಿಷ್ ಸತ್ತೆಯ ಮುಂದೆ ನಮ್ಮವರ ಶಕ್ತಿಯು ಸಾಲದೆಹೋಯಿತು. ಆ ಸಂದರ್ಭದಲ್ಲಿ ನಮ್ಮ ಭಾಗದಲ್ಲಿ ನರಗುಂದದ ನಾಯಕರೂ ಹೋರಾಡಿ ಸೋತರು. ಇದೆಲ್ಲದರ ಚಿತ್ರ ಅಂದಿನ ನಮ್ಮ ನಾಡಿನ ಜನರ ಕಣ್ಣೆದುರಿಗೆ ಇತ್ತು. ಅದರಿಂದ ಅವರು ಶಕ್ತಿದೇವಿಯ ಉಪಾಸಕರಾಗಿದ್ದರು. ಊರೂರಿಗೆ ನಾಲ್ಕಾರು ಗರಡೀಸಾಧನೆಯ ಮನೆಗಳನ್ನು ಕಟ್ಟಿಕೊಂಡಿದ್ದರು. ಇಂಥ ವಾತಾವರಣದಲ್ಲಿ ಬೆಳೆದ ಸಾತಗೌಡನೂ ಶಕ್ತಿಯನ್ನು ಸಂಪಾದಿಸುವುದರಲ್ಲಿ ಎಲ್ಲರಿಗೂ ಮುಂದೆ ಎನಿಸಿದನು.

ತೋಟದಲ್ಲಿ ಯಾತ ಹೊಡೆಯುವಾಗ, ತುಂಬಿದ ಮೊಟ್ಟೆಯನ್ನು ಒಂದು ಕೈಯಲ್ಲಿ, ಎತ್ತುಗಳನ್ನು ಇನ್ನೊಂದು ಕೈಯಲ್ಲಿ ಜಗ್ಗಿ ನಿಲ್ಲಿಸಿದ ಸಾತಗೌಡನ ಸಾಮರ್ಥ್ಯವೇನು ಕಿರಿಯದಲ್ಲ. ಅದರಂತೆ ವಯಸ್ಸಿನ ಇಪ್ಪತ್ತೆರಡನೆಯ ವರ್ಷದಲ್ಲಿ ಯಾತ್ರಿಕರನ್ನು ಹೆಗಲ ಮೇಲೆ ಹೊತ್ತುಕೊಂಡು, ಆ ಸಮ್ಮೇದಗಿರಿಯ ಹದಿನೆಂಟು ಮೈಲುಗಳನ್ನು ಏರಿದ್ದು, ಸಾಧಾರಣ ಸಾಮರ್ಥ್ಯದ ದ್ಯೋತಕವೂ ಅಲ್ಲ. ಈ ಅಸಾಧಾರಣ ಶರೀರ ಸಂಪತ್ತಿನೊಡನೆ ಇವರು ತಮ್ಮ ಮನೋಬಲವನ್ನು ಬೆಳೆಯಿಸಿಕೊಂಡುದು ಸಂತೋಷದ ಸಂಗತಿಯಾಗಿದೆ. ಇವರಿಗೆ ಒಂಬತ್ತನೆಯ ವರ್ಷಕ್ಕೇನೇ ಹೆಸರಿಗೆ ಮದುವೆಯೆಂಬುದು [illegible] ಕೈಹಿಡಿದ ಹೆಣ್ಣು ಮಡಿದು ಹೋಯಿತು. ಅಂದಿನಿಂದ ಇವರಿಗೆ ಬ್ರಹ್ಮಚರ್ಯವೇ ಸ್ವಾಭಾವಿಕ ವ್ರತವಾಗಿ ಬಿಟ್ಟಿತು. ಅದನ್ನು ದೃಢ ಮನಸ್ಸಿನಿಂದ ಸಂರಕ್ಷಿಸಿಕೊಂಡು ಬಂದರು. ಅದ-[illegible], ಎಂದೂ ಕೈಯಲ್ಲಿ ಕೋವಿಯನ್ನು ಹಿಡಿಯದ ಇವರು, ಮೊದಲ ಸಲವೇ ಗಿಡದ ತೆಂಗನ್ನು ಕೆಡವುವಷ್ಟು [illegible] ಆಗಿದ್ದರು. ಹೀಗೆ ಇವರ ವ್ಯಸನಗಳಿದ್ದರೂ ಬಲವುಳ್ಳ[illegible]ಗಿದ್ದುವು. ಆದರಿಂದಲೇ ಇವರಿಗೆ ಜೈನ ಶ್ರಾವಕ* ಧರ್ಮವನ್ನು ಪಾಲಿಸುವುದಾಗಲಿ, ಮುನಿಧರ್ಮದಂತೆ ನಡೆಯುವುದಾಗಲಿ ಸುಲಭವಾಯಿತು. ಇಂತಹ ಸಾಧಕ, ಕ್ಷುಲ್ಲಕ, ಐಲಕ ಅವಸ್ಥೆಗಳನ್ನು ದಾಟಿ, ನಿರ್ಗ್ರಂಥ ಸ್ಥಿತಿಗೆ ಹೋಗಲು ಕೇವಲ ಐದು ವರ್ಷಗಳೂ ಹೆಚ್ಚೆನಿಸಿದುವು. ಆರಂಭದಲ್ಲಿ ಒಮ್ಮೆಲೇ ನಿರ್ಗ್ರಂಥ ದೀಕ್ಷೆಗೆ ಸಿದ್ಧರಾದ ಇವರು, ಗುರು ದೇವೇಂದ್ರ ಕೀರ್ತಿಗಳ ಆಜ್ಞೆಯಂತೆ ಕ್ರಮ-ಕ್ರಮವಾಗಿ ಸಾಧನೆಗೈದರು. ಹಾಗೆಯೇ ಮಾಡಬೇಕಾಯಿತು. ನಮ್ಮ ಧಾರ್ಮಿಕ ವಿಧಾನದ ಕಟ್ಟು-ನಿಟ್ಟುಗಳೇ ಅಷ್ಟು ಬಿಗಿಯಾ-ದುವು. ಅವುಗಳಲ್ಲಿಂದ ಹಾಯ್ದು ಹೋದಾಗಲೇ ಶುದ್ಧ ಸುವರ್ಣ ಸಿದ್ಧವಾಗುವುದು.

ಆಯಿತು, ಸಾತಗೌಡ ಶಾಂತಿಸಾಗರರಾದರು; ಆಚಾರ್ಯ ಶಾಂತಿಸಾಗರರೂ ಆದರು. ತಪಸ್ಸಿನಿಂದ ಸತ್ಯವನ್ನು ಕಂಡು ಅನುಭವಿಸಿದರು. ಆ ಮೇಲೆ ಉಪಕಾರಕ್ಕೆ ಆರಂಭವಾಯಿತು, ಉಪ-ದೇಶದ ಪ್ರವಾಹ ಹರಿಯುತ್ತಿತ್ತು. ವರ್ಷಾಯೋಗದಲ್ಲಿ ನಾಲ್ಕು ತಿಂಗಳು ಒಂದೂರಿನಲ್ಲಿ ಕಳೆದರೆ ತೀರಿತು. ಉಳಿದ ಎಂಟು ತಿಂಗಳು ವಿಹಾರದಲ್ಲಿಯೇ ನಡೆಯಬೇಕು. ಹೀಗೆ ಸುಮಾರು ನಲವತ್ತು ವರ್ಷಗಳನ್ನು ಆಚಾರ್ಯ ಶ್ರೀಗಳವರು ಸತತ ಪರ್ಯಟನದಲ್ಲಿ ಕಳೆದಿದ್ದಾರೆ: ನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿದ್ದಾರೆ. ಆರಂಭದಲ್ಲಿ ಆರೇಳು ವರ್ಷಗಳ ವರೆಗೆ ಕರ್ನಾಟಕ ಮಹಾರಾಷ್ಟ್ರ-ಗಳಲ್ಲಿ ವಿಹರಿಸಿದರು, ಜನಜಾಗೃತಿಯನ್ನು ಉಂಟುಮಾಡಿದರು. ಎಷ್ಟೋ ಜನರನ್ನು ದುರ್ವ್ಯಸನಗಳಿಂದ ಮುಕ್ತಗೊಳಿಸಿದರು ಧರ್ಮದಲ್ಲಿ ನಿಲಿಸಿದರು. ಆ ಮೇಲೆ ಉತ್ತರ ಭಾರತಕ್ಕೆ ಆಚಾರ್ಯ ಶ್ರೀಗಳವರು ತೆರಳಿದರು. ಅಲ್ಲಿಯೂ ವಿವಿಧ ಪ್ರಾಂತಗಳಲ್ಲಿ ಸಂಚರಿಸಿ ಧರ್ಮೋಪದೇಶವನ್ನು ಮಾಡಿದರು. ಅದರ ಜೊತೆಗೆ ಪೂರ್ವಕಾಲದ ತೀರ್ಥಂಕರರ ಜನ್ಮಭೂಮಿ, ತಪೋಭೂಮಿ, ಮುಕ್ತಿಸ್ಥಾನಗಳನ್ನೆಲ್ಲ ಸಂದರ್ಶಿಸಿದರು. ಮನಸ್ಸನ್ನು ಹದಗೊಳಿಸಿಕೊಂಡರು. ಆಹಾರದ ತ್ಯಾಗ, ಸಿಂಹನಿಷ್ಕ್ರೀಡಿತ† ವ್ರತಗಳಂಥ ಕಠೋರ ನಿಯಮಗಳನ್ನು ಪರಿಪಾಲಿಸಿದರು. ಸಾಧನೆಯ ಉಚ್ಚಸ್ಥಿತಿಗೆ ಹೋಗಿ ತಲುಪಿದರು. ಇಂದು ಈ ಲೋಕದಲ್ಲಿ ಎಂಬತ್ತು ವರ್ಷಗಳನ್ನು ಬಾಳಿದರು; ಧರ್ಮವನ್ನು ಬೆಳಗಿದರು!

---

* ಶ್ರಾವಕ : ಜೈನ ಸದ್ಗೃಹಸ್ಥ ; ಕ್ಷುಲ್ಲಕ : ಕೌಪೀನ [illegible] ಧರಿಸುವ ಜೈನಸಾಧು ; ಐಲಕ : ಕೌಪೀನವನ್ನಷ್ಟೇ [illegible] ಜೈನಸಾಧು. ನಿರ್ಗ್ರಂಥ : [illegible]

† ಮೊದಲಿನಿಂದ ಸಹ ಒಂದು ದಿನ ಉಪವಾಸ ಮಾಡಿದ ನಂತರ ಮರುದಿನ ಊಟ ಮಾಡುವರು. [illegible] ಈ ಹೆಸರು ಕೊಡಲ್ಪಟ್ಟಿದೆ.

ನಾಲ್ಕು ಹನಿಗತೆಗಳು

ಶ್ರೀ. ಎನ್. ಜಿ. ಶೆಟ್ಟಿ, ಬಿ. ಎಸ್‌ಸಿ. (ಟೆಕ್.) ಕೊಲ್ಹಾಪುರ

(ಜಾಗತಿಕ ಕೀರ್ತಿಶಾಲಿಗಳಾದ ಆಸ್ಕರ್ ವಾಯಿಲ್ಡ್ ಅವರ ನಾಲ್ಕು ಕತೆಗಳ ಅನುವಾದ.)

★

ಹನಿಗತೆಗಳೆಂದರೆ ಒಂದು ಬಗೆಯ ಭಾವರೂಪಕ. ಗದ್ಯದಲ್ಲಿ ಹೇಳಿದ ಭಾವಕವನಗಳೆಂದೂ ಹೇಳಬಹುದು. ತಿಳಿಯದವರಿಗೆ ಒಡೆಯಲಾರದ ಒಗಟು; ತಿಳಿದುಕೊಂಡವರಿಗೆ ರಸದ ಸೆಲೆಗಳು.

★

೧. ಕಲಾವಿದ

ಒಂದು ದಿನ 'ಕ್ಷಣಿಕ ಆನಂದ'ದ ಪ್ರತಿಮೆಯನ್ನು ನಿರ್ಮಿಸಬೇಕೆಂದು ಆಶೆಯಾಯಿತು ಕಲಾವಿದನಿಗೆ. ಎರಕಹೊಯ್ಯಲು ಕಂಚನ್ನರಸತೊಡಗಿದನಾತ. ಕಂಚಿನಲ್ಲಿ ಪ್ರತಿಮೆಗಳನ್ನು ನಿರ್ಮಿಸುವುದೊಂದನ್ನೇ ಆತ ಬಲ್ಲ.

ಜಗತ್ತಿನಲ್ಲಿಯ ಕಂಚೆಲ್ಲ ಮಾಯವಾಗಿತ್ತು. ಎಲ್ಲೆಲ್ಲಿ ಹುಡುಕಿದರೂ ಕಂಚೇ ದೊರೆಯದಾಯಿತು. ಜಗತ್ತಿನಲ್ಲಿಯೇ ಉಳಿದ ಕಂಚೆಂದರೆ 'ಚಿರಂತನ ದುಃಖ'ದ ಪ್ರತಿಮೆ ಮಾತ್ರ.

ಈ ಪ್ರತಿಮೆಯನ್ನು ಆತನೇ, ತನ್ನ ಕೈಗಳಿಂದಲೇ ನಿರ್ಮಿಸಿದ್ದ. ತನ್ನ ಪ್ರೇಯಸಿಯ ಸಮಾಧಿಯ ಮೇಲೆ ಅದನ್ನು ಪ್ರತಿಷ್ಠಾಪಿಸಿದ್ದ. ಅಮರವಾದ ಮಾನವಪ್ರೀತಿ ಮತ್ತು ಚಿರಂತನವಾದ ಮಾನವ ದುಃಖಗಳ ಪ್ರತೀಕವೆಂದು ಆ ಪ್ರತಿಮೆಯನ್ನು ಕಲಾವಿದ, ತಾನು ನಿಸ್ಸೀಮವಾಗಿ ಪ್ರೀತಿಸಿದ ನಲ್ಲೆಯ ಸಮಾಧಿಯ ಮೇಲೆ ಪ್ರತಿಷ್ಠಾಪಿಸಿದ್ದ. ಇಡೀ ಜಗತ್ತಿನಲ್ಲಿಯೇ ಈ ಕಂಚನ್ನು ಬಿಟ್ಟರೆ ಬೇರೆ ಕಂಚೇ ಇರಲಿಲ್ಲ.

ಕಲಾವಿದ ತನ್ನ ಕಲಾಕೃತಿಯನ್ನು ಕಿತ್ತುಕೊಂಡು ಕುಲುಮೆಯಲ್ಲಿ ಕರಗಿಸಿಬಿಟ್ಟ, ಮತ್ತು ಚಿರಂತನ ದುಃಖದಿಂದಲೇ ಕ್ಷಣಿಕ ಆನಂದದ ಸೃಷ್ಟಿಯಾಯಿತು.

* * * *

೨. ಉಪಕಾರಿ

ರಾತ್ರಿಯಾಗಿತ್ತು. ಆತ ಏಕಾಕಿಯಾಗಿಯೇ ಹೊರಟಿದ್ದ. ದೂರದಲ್ಲಿ ಪಟ್ಟಣದ ಕೋಟೆ ಕಂಡಿತು. ಅತ್ತ ನಡೆದ.

ನಗರವನ್ನು ಸಮೀಪಿಸುತ್ತಲೇ ಆನಂದದ ನೃತ್ಯ, ಆನಂದದ ಗೀತ, ಆನಂದದ ಸಂಗೀತ ಕೇಳಿಬಂದುವು. ಬಾಗಿಲು ತಟ್ಟಿದ. ದ್ವಾರಪಾಲಕರು ಬಾಗಿಲನ್ನು ತೆರೆದರು.

ಅಮೃತಶಿಲೆಯ ಪ್ರಾಸಾದವೊಂದು ಕಂಡಿತು. ಎದುರಿಗೆ ಎತ್ತರವಾದ ಅಮೃತಶಿಲೆಯ ಸ್ತಂಭಗಳಿದ್ದುವು. ಸ್ತಂಭಗಳಿಗೆ ಮಾಲೆಗಳನ್ನು ತೂಗುಬಿಟ್ಟಿದ್ದರು. ಒಳಗೂ ಹೊರಗೂ ನೂರಾರು ದೀವಟಿಗೆಗಳು ಉರಿಯುತ್ತಿದ್ದುವು. ಆತ ಒಳಗೆ ನಡೆದ.

ಭವ್ಯವಾದ ಸಭಾಗೃಹವನ್ನು ದಾಟಿ, ಭೋಜನಗೃಹಕ್ಕೆ ನಡೆದ. ಅಲ್ಲಿ ಹಂಸತೂಲಿಕಾತಲ್ಪದ ಮೇಲೆ ಒಂದು ವ್ಯಕ್ತಿ ಒರಗಿತ್ತು. ಅವನ ಸುಕುಮಾರ ಕೇಶರಾಶಿಯನ್ನು ಗುಲಾಬಿಯ ಹೂಗಳು ಅಲಂಕರಿಸಿದ್ದುವು. ಅವನ ಅಧರಗಳು ಮಧುಪಾನದಿಂದ ರಕ್ತವರ್ಣದುವಾಗಿದ್ದುವು.

ಆತ ಆ ಲಕ್ಷ್ಮೀಪುತ್ರನ ಬಳಿಗೆ ಹೋಗಿ, ಬೆನ್ನುತಟ್ಟಿ ಕೇಳಿದ: "ನೀನು ಹೀಗೇಕೆ ಬಾಳುತ್ತಿರುವಿ?"

ಲಕ್ಷ್ಮೀಪುತ್ರ ಹೊರಳಿ ನೋಡಿದ. ಆತನನ್ನು ಗುರುತಿಸಿದ.

ಉತ್ತರವಿತ್ತ: "ಪ್ರಭು, ನಾನು ಮಹಾರೋಗಿಯಾಗಿದ್ದೆ. ನೀವೇ ನನ್ನನ್ನು ಗುಣಪಡಿಸಿದಿರಿ. ಈಗ ಜೀವನದ ಆನಂದವನ್ನು ಉಪಭೋಗಿಸುತ್ತಿರುವೆ. ಮತ್ತೇನು ಮಾಡಲಿ?"

ಆ ಮನೆಯಿಂದ ಹೊರಬಿದ್ದು ಆತ ಬೀದಿಯಲ್ಲಿ ನಡೆದ.

ಒಬ್ಬ ಸ್ಫುರದ್ರೂಪಿಯಾದ ಹೆಣ್ಣುಮಗಳು ನಡೆದಿದ್ದಳು. ಮುಖಕ್ಕೆ ಬಣ್ಣವಿತ್ತು. ಉಗುರಿಗೆ ಮದರಂಗಿಯಿತ್ತು. ಕಾಲಲ್ಲಿ ಅಂದುಗೆಗಳಿದ್ದುವು. ಅವಳ ಹಿಂದೆಯೇ ತರುಣನೊಬ್ಬ, ಅವಳ ಹೆಜ್ಜೆಯಲ್ಲಿ ಹೆಜ್ಜೆಯಿಕ್ಕುತ್ತ ನಡೆದಿದ್ದ ಬೇಟೆಗಾರನಂತೆ. ಆ ಸ್ತ್ರೀಯು ಅಪ್ಸರೆಯರನ್ನು ನಾಚಿಸುವಂಥ ಚೆಲುವೆ. ತರುಣನ ಕಣ್ಣುಗಳಲ್ಲಿ ಹಸಿವು ಮಿಂಚುತ್ತಿತ್ತು.

ಆತ ಅವಸರದಿಂದ ಹೋಗಿ ತರುಣನನ್ನು ಕೈಹಿಡಿದು ನಿಲ್ಲಿಸಿದ. ಕೇಳಿದ: "ತರುಣನೆ, ಅವಳನ್ನು ನೀನು ಹೀಗೇಕೆ ದಿಟ್ಟಿಸುತ್ತಿರುವೆ?"

ತರುಣನು ತಿರುಗಿ ನೋಡಿದ. ಕೂಡಲೇ ಆತನನ್ನು ಗುರುತಿಸಿದ. ನುಡಿದ: "ಪ್ರಭು, ನಾನು ಒಂದು ಕಾಲಕ್ಕೆ ಎರಡೂ ಕಣ್ಣಿಲ್ಲದ ಕುರುಡನಾಗಿದ್ದೆ. ನೀನು ದಯೆದೋರಿ ದೃಷ್ಟಿಯನ್ನು ದಯಪಾಲಿಸಿದೆ. ನಾನು ಬೇರೆ ಏನನ್ನು ನೋಡಲಿ?"

ಆತ ಓಡಿ ಹೋಗಿ ಆ ತರುಣಿಯನ್ನು ಮಾತಾಡಿಸಿದ : “ ನಡೆ-
ಯಲು ಪಾಪದ ದಾರಿಯನ್ನುಳಿದು ಬೇರೆಯ ದಾರಿಯಿಲ್ಲವೆ? ”

ಆಕೆ ತಿರುಗಿ ನೋಡಿದಳು. ಆತನನ್ನು ಗುರುತಿಸಿದಳು.

ಉತ್ತರವಿತ್ತಳು: “ ಪ್ರಭು, ನೀನು ನನ್ನ ಪಾಪಗಳನ್ನೆಲ್ಲ ಕ್ಷಮಿ-
ಸಿನಿ. ಪಾಪದ ದಾರಿ ಸುಖದ ದಾರಿಯೂ ಅಹುದು. ”

ಆತ ಊರ ಹೊರಗೆ ತೆರಳಿದ.

ಬೀದಿಯ ಬದಿಗೆ ಒಬ್ಬ ತರುಣ ಅಳುತ್ತ ಕುಳಿತಿದ್ದ.

ಆತ ಅವನೆಡೆಗೆ ಹೋಗಿ, ಮುಂಗುರುಳನ್ನು ತೀಡುತ್ತ ನುಡಿದ:
“ ನೀನು ಅಳುತ್ತಿರುವುದೇಕೆ ? ”

ತರುಣ ಕಣ್ಣೆತ್ತಿ ನೋಡಿದ. ಗುರುತಿಸಿದ.

ಉತ್ತರವಿತ್ತ: “ ನಾನು ಒಮ್ಮೆ ಸತ್ತು ಹೋಗಿದ್ದೆ. ನೀನು
ನನ್ನನ್ನು ಬದುಕಿಸಿ, ಭೂಮಿಗೆ ಕಳಿಸಿದೆ. ಅಳುವುದರ ಹೊರತು
ನನಗೆ ಬೇರೆ ಗತಿಯಿಲ್ಲ. ”

*   *   *   *

೩. ಪ್ರಭು

ಸಂಜೆ ಕವಿಯಲು ಅರಿಮಾಥಿಯಾದ ಜೋಸೆಫ್, ದೀವಟಿಗೆ-
ಯನ್ನು ಹೊತ್ತಿಸಿ, ಬೆಟ್ಟದಿಂದಿಳಿದು ಕೊಳ್ಳಕ್ಕೆ ನಡೆದ. ಏಕೆಂದರೆ
ಅವನಿಗೆ ಮನೆಯಲ್ಲಿ ಕೆಲಸವಿತ್ತು.

“ ನಿರಾಶೆಯ ಕಂದರದಲ್ಲಿ ” ಬಂಡೆಗಲ್ಲಿನ ಮೇಲೆ ಕುಳಿತು ನಗ್ನ-
ನಾದ ತರುಣನೊಬ್ಬನು ಕಂಬನಿಗರೆಯುತ್ತಿದ್ದುದನ್ನು ನೋಡಿದ.
ತರುಣನ ಕೂದಲು ಚಿನ್ನದಂತೆ ಮಿರುಗುತ್ತಿತ್ತು. ಅವನ ದೇಹವು
ಮಲ್ಲಿಗೆಯಂತೆ ಶುಭ್ರವೂ ಸುಕುಮಾರವೂ ಆಗಿತ್ತು. ಆತ ಮೈಯೆಲ್ಲ
ಮುಳ್ಳು ಚುಚ್ಚಿಕೊಂಡು ಗಾಯ ಮಾಡಿಕೊಂಡಿದ್ದ. ತಲೆಯ
ಮೇಲೆ ಮುಳ್ಳಿನ ಮುಕುಟವನ್ನು ಹೊತ್ತಿದ್ದ.

ಸಿರಿವಂತನಾದ ಜೋಸೆಫ್, ಚಿತ್ತಲೆಯಾಗಿ ಅಳುವ ತರುಣನನ್ನು
ಸಂತಯಿಸತೊಡಗಿದ : “ ಅಯ್ಯಾ, ನಿನ್ನ ದುಃಖದಾಳವನ್ನು ನಾನು
ಬಲ್ಲೆ. ಆತ ನಿಜವಾಗಿ ಮಹಾತ್ಮನೇ ಆಗಿದ್ದ. ”

ಆ ತರುಣನು ಉತ್ತರವಿತ್ತ : “ ನಾನು ದುಃಖಿಸುತ್ತಿರುವುದು
ಅವನಿಗಾಗಿ ಅಲ್ಲ, ನನಗಾಗಿ. ನಾನು ನೀರನ್ನು ದ್ರಾಕ್ಷಾರಸವಾಗಿ
ಪರಿವರ್ತಿಸಿದ್ದೇನೆ. ಮಹಾರೋಗಿಯನ್ನು ಗುಣಪಡಿಸಿದ್ದೇನೆ. ಅಂಧ-
ನಿಗೆ ದೃಷ್ಟಿಯನ್ನಿತ್ತಿದ್ದೇನೆ. ಸಾಗರದ ಮೇಲೆ ನಡೆದಿದ್ದೇನೆ.
ಮರುಭೂಮಿಯಲ್ಲಿ ಆಹಾರವಿಲ್ಲದೆ ಬಳಲುತ್ತಿರುವ ಪಥಿಕರಿಗೆ ಆಹಾರ-
ವಿತ್ತಿದ್ದೇನೆ. ಮೃತರಿಗೆ ಜೀವನವನ್ನು ಮರಳಿ ಕೊಟ್ಟಿದ್ದೇನೆ.
ಜನಸಾಗರವು ನೋಡುತ್ತಿರಲು, ನನ್ನಾಜ್ಞೆಯಿಂದ ಅಂಜೂರಿಯ
ಮರವು ಒಣಗಿ ಹೋಯಿತು. ಈತ ಗೈದ ಪವಾಡಗಳನ್ನೆಲ್ಲ ನಾನೂ
ಮಾಡಿ ತೋರಿಸಿದ್ದೇನೆ. ಆದರೆ ಇವರು ನನ್ನನ್ನೂ ಶಿಲುಬೆಗೇರಿಸ-
ಲಿಲ್ಲವಲ್ಲ ಎಂದು ರೋದಿಸುತ್ತಿರುವೆ. ”

*   *   *   *

೪. ನ್ಯಾಯಾಲಯ

ನ್ಯಾಯಾಲಯದಲ್ಲಿ ಪೂರ್ಣ ಶಾಂತತೆಯಿತ್ತು. ಮಾನವನು
ನಗ್ನನಾಗಿ ಪರಮಾತ್ಮನೆದುರು ನಿಂತ.

ಪರಮಾತ್ಮ ಮಾನವನ ಜೀವನಚರಿತ್ರೆಯನ್ನು ತೆರೆದ.

ಗಂಭೀರವಾದ ಧ್ವನಿ ಹೊರಟಿತು: “ ನಿನ್ನದು ದುರ್ಜೀವನ.
ದಯೆಯನ್ನು ಬೇಡಬಂದವರಿಗೆ ಕ್ರೌರ್ಯವನ್ನು ನೀಡಿದೆ. ಕೈನೀಡಿಂದು
ಕರೆದವರಿಗೆ ಕಲ್ಲೆದೆಯಿಂದ ಕಹಿಯನ್ನುಣ್ಣಿಸಿದೆ. ಬಡವರ ಮೊರೆ-
ಯನ್ನು ನೀನು ಕೇಳಲಿಲ್ಲ. ದುಃಖವೆರಗಿದ ನನ್ನ ಸಂತಾನದ
ರೋದನೆ ನಿನ್ನ ಕಿವಿಯನ್ನು ಸೇರಲಿಲ್ಲ. ಅನಾಥರ ಸಂಪತ್ತನ್ನು
ನೀನು ನುಂಗಿದೆ. ನೆರೆಯವರ ಹೊಲದಲ್ಲಿ ಗೂಳಿಗಳನ್ನು ಬಿಟ್ಟೆ.
ಶಿಶುಗಳ ಬಾಯಿಂದ ತುತ್ತನ್ನು ಕಸಿದು ನಾಯಿಗಳಿಗೆ ಚೆಲ್ಲಿದೆ.
ಜವುಳಿನಲ್ಲಿ ಬಿದ್ದು, ನನ್ನ ಆರಾಧನೆಯಲ್ಲಿಯೇ ಸಮಾಧಾನದಿಂದ
ಜೀವಿಸುತ್ತಿದ್ದ ರೋಗಿಗಳನ್ನು ಅಲ್ಲಿಂದೋಡಿಸಿದೆ. ಯಾವ ನೆಲದಿಂದ
ನೀನು ಹುಟ್ಟಿದೆಯೋ ಅದೇ ನೆಲಕ್ಕೆ ನಿರಾಗಸ ನೆತ್ತರದ ಅಭಿಷೇಕ
ಮಾಡಿದೆ. ”

ಮಾನವನು ಉತ್ತರವಿತ್ತ, “ ಇದೆಲ್ಲವೂ ನಿಜ, ಪ್ರಭು. ”

ಪರಮಾತ್ಮ ಮುಂದಿನ ಅಧ್ಯಾಯವನ್ನು ಓದತೊಡಗಿದ.

“ ನಿನ್ನದು ದುರ್ಜೀವನ. ನೀನು ಆವಿಷ್ಕರಿಸಿದ ‘ **ಸೌಂದರ್ಯ** ’
ವನ್ನು ಬೆನ್ನುಹತ್ತಿದೆ. ನಾನು ತೆರೆಯ ಮರೆಯಲ್ಲಿರಿಸಿದ ‘ **ಶುಭ** ’
ವನ್ನು ನೀನು ಕಡೆಗಣಿಸಿದೆ. ನಿನ್ನ ಅರಮನೆಗಳ ಗೋಡೆಗಳ
ಮೇಲೆಲ್ಲ ಪ್ರತಿಮೆಗಳನ್ನು ಚಿತ್ರಿಸಿದೆ. ಪ್ರಭಾತಸಮಯದಲ್ಲಿ ಮುರಲಿಯ
ನಾದವು ನಿನ್ನನ್ನು ಪಾಪದ ಪಲ್ಲಂಕದಿಂದ ಎಚ್ಚರಿಸುತ್ತಿತ್ತು. ನೀನು

ಭೋಗಿಸಿದ ಸಪ್ತಪಾಪಗಳಿಗೆ ನೀನು ಸಪ್ತವೇದಿಕೆಗಳನ್ನು ರಚಿಸಿದೆ. ಉಣ್ಣಬಾರದುದನ್ನು ಉಂಡೆ. ನೀನುಟ್ಟ ವಸ್ತ್ರಕ್ಕೆ ಪಾಪದ ಗೊಂಚಲುಗಳ ಚಿತ್ರದ ಅಂಚಿತ್ತು. ನೀನು ಪೂಜಿಸುವ ಮೂರ್ತಿಗಳು ಚಿನ್ನದುವಲ್ಲ, ಬೆಳ್ಳಿಯವಲ್ಲ, ನಶ್ವರವಾದ ಮಾನವ ದೇಹಗಳನ್ನೇ ಪೂಜಿಸಿದೆ. ಆ ದೇಹಗಳನ್ನು ನೀನು ಅಲಂಕರಿಸಿದೆ. ಕೇಶಪಾಶಗಳಿಗೆ ಸುಗಂಧ ತೈಲಗಳನ್ನು ಹಾಕಿದೆ. ಕಾಲು-ಕೈಗಳಿಗೆ ಮದರಂಗಿ ಹಾಕಿದೆ. ಆ ದೇಹಗಳನ್ನು ಸಿಂಹಾಸನದಲ್ಲಿರಿಸಿ, ಅವುಗಳ ಕಾಲಿಗೆ ಬಿದ್ದೆ. ಬಯಲಿನಲ್ಲಿ ಸಿಂಹಾಸನಗಳನ್ನಿರಿಸಿ, ಸೂರ್ಯದೇವನಿಗೆ ನಿನ್ನ ಪಾಪವನ್ನು ಪ್ರದರ್ಶಿಸಿದೆ. ಚಂದ್ರನನೆದುರು ನಿನ್ನ ಉನ್ಮಾದವನ್ನು ಪ್ರದರ್ಶಿಸಿದೆ. ”

ಮಾನವನು ಉತ್ತರವಿತ್ತ: “ ಇದೆಲ್ಲವೂ ನಿಜ, ಪ್ರಭು. ”

ಪರಮಾತ್ಮ ಮೂರನೆಯ ಅಧ್ಯಾಯವನ್ನೋದತೊಡಗಿದ.

“ ನಿನ್ನದು ದುರ್ಜೀವನ. ಒಳಿತಿಗೆ ಪ್ರತಿಯಾಗಿ ಕೇಡನ್ನು ಬಗೆದೆ. ದಯೆದೋರಿದವನಿಗೆ ಅನ್ಯಾಯಗೈದೆ. ತುತ್ತುಕೊಟ್ಟ ಕೈಗೆ ಮುಳ್ಳು ಚುಚ್ಚಿದೆ. ಹಾಲುಣಿಸಿದ ಸ್ತನಗಳನ್ನು ತಿರಸ್ಕರಿಸಿದೆ. ನೀರು ಬೇಡಲು ಬಂದವನು ನೀರಡಿಸಿಯೇ ಹೋದ ನಿನ್ನ ಬಾಗಿಲಿಂದ. ಶಾಸನದಿಂದ ತಪ್ಪಿಸಿಕೊಂಡವರು ನಿನಗೆ ಇರುಳು ತಮ್ಮ ಗುಹೆಯಲ್ಲಿ ಆಸರವಿತ್ತಾಗ, ಬೆಳಗುಹರಿಯುವ ಮೊದಲೇ ಅವರಿಗೆ ಮೋಸಮಾಡಿದೆ. ನಿನ್ನನ್ನು ಕ್ಷಮಿಸಿ ಜೀವದಾನ ಮಾಡಿದ ಶತ್ರುವನ್ನು ದ್ರೋಹಬಗೆದು ಕೊಲ್ಲಿಸಿದೆ. ಜತೆಗೆ ಬಂದ ಮಿತ್ರನನ್ನು ವಂಚಿಸಿದೆ. ನಿನ್ನನ್ನು ಪ್ರೀತಿಸಿದ ಸ್ತ್ರೀಗೆ ಎಂದೆಂದೂ ಕಾಮವನ್ನೇ ಕೊಟ್ಟೆ.

ಮಾನವನು ಉತ್ತರವಿತ್ತ, “ ಇದೆಲ್ಲವೂ ನಿಜ, ಪ್ರಭು. ”

ಪರಮಾತ್ಮ ಮಾನವನ ಜೀವನಚರಿತೆಯನ್ನು ಮುಚ್ಚಿದ. ಯೋಚಿಸಿ ನುಡಿದ : “ ನಿನ್ನ ಪಾಪಗಳಿಗೆ ಶಿಕ್ಷೆಯೆಂದು ನಿನ್ನನ್ನು ನರಕಕ್ಕೆ ಕಳಿಸುವೆ. ”

ಮಾನವ ಕೂಗಿದ: “ಪ್ರಭು, ನೀನು ನನ್ನನ್ನು ನರಕಕ್ಕೆ ಕಳಿಸಲಾರೆ. ”

ಪರಮಾತ್ಮನೆಂದ “ ಹಾಗೆನ್ನಲು ಕಾರಣವೇನು ? ”

ಮಾನವನೆಂದ, “ ಏಕೆಂದರೆ ನಾನು ಯಾವಾಗಲೂ ನರಕದಲ್ಲಿಯೇ ವಾಸಿಸಿದ್ದೇನೆ. ”

ನ್ಯಾಯಾಲಯದಲ್ಲಿ ಗಂಭೀರ ಶಾಂತಿ ಪಸರಿಸಿತು.

ತುಸು ಯೋಚಿಸಿ ಪರಮಾತ್ಮನೆಂದ: “ ನಿನ್ನನ್ನು ನರಕಕ್ಕೆ ಕಳಿಸುವುದು ಸಾಧ್ಯವಿಲ್ಲ. ಆದ್ದರಿಂದ ನಿನ್ನನ್ನು ಸ್ವರ್ಗಕ್ಕೆ ಕಳಿಸುವೆ. ”

ಮಾನವನು ಕೂಗಿದ: “ ಅದೂ ಸಾಧ್ಯವಿಲ್ಲ. ”

ಪರಮಾತ್ಮ ಕೇಳಿದ, “ ಏಕೆ ? ”

ಮಾನವನೆಂದ, “ ಏಕೆಂದರೆ ಯಾವ ಕಾಲದಲ್ಲಿಯೂ, ಯಾವ ಸ್ಥಳದಲ್ಲಿಯೂ ನನಗೆ ಸ್ವರ್ಗದ ಕಲ್ಪನೆಯೇ ಹೊಳೆದಿಲ್ಲ. ”

ನ್ಯಾಯಾಲಯದಲ್ಲಿ ಮೌನವು ನೆಲಸಿತು.

ರಂಗ-ಸಿಂಗರ ಕತೆ

‘ ಆನಂದಕಂದ ’

ರಂಗನ ತಾಯಿಯು ತುಂಗಾಬಾಯಿ....
ಸಿಂಗನ ತಾಯಿಯು ಗಂಗಮ್ಮಾಯಿ !
ರಂಗಣ್ಣ ಸಿಂಗಣ್ಣ ಜೀವದ ಗೆಳೆಯರು
ಒಬ್ಬರಿಗೊಬ್ಬರು ಸವಿಯ ಜೇಂಗಾಯಿ !
ತುಂಗಾಬಾಯಿಯ ಮಗ ರಂಗನು ಎಂದು
ಗಂಗಮ್ಮಾಯಿಯ ಮಗ-ಸಿಂಗನು ಎಂದು—
ಕನಸಿನಲ್ಲಿಯು ಕೂಡ ನೆನಪಾಗದವರಿಗೆ
ತಾಯಿದಿರ ಹೆಸರವು ಬೇರೆಬೇರೆಂದು !
ರಂಗನ ತಾಯಿ ರಂಗನ ಪ್ರೀತಿಸುವಳು
ಸಿಂಗನ ತಾಯಿ ಸಿಂಗನ ಪ್ರೀತಿಸುವಳು:
ರಂಗ-ಸಿಂಗರು ತಮ್ಮ ತಾಯ ಪ್ರೀತಿಸಿದರು
ಭಂಗವಿಲ್ಲದ ಆ ಸ್ನೇಹದೊಳು.
ರಂಗನ ದೇವರು ಗಿರಿವೆಂಕಟೇಶ್ವರ,
ಸಿಂಗನ ದೇವರು ಮಲೆಯ ಸೋಮೇಶ್ವರ;
ಇಬ್ಬರೂ ಅರಿಯರು ತಂತಮ್ಮ ದೇವರ
ಇಬ್ಬರಿಗೂ ದೇವರಂಧಕಾರ !

ಹೆಸರು ಬೇರೆ ಬೇರೆ, ತಾಯದಿರಿಬ್ಬರು
ಆದರೂ ತೊಡಕಿಲ್ಲ ಗೆಳೆತನಕೆ ;
ಒಬ್ಬನೆ ದೇವಗೆ ಹೆಸರೆರಡಾಗಿರೆ
ಕಾರಣವಾಯ್ತದು ಹಗೆತನಕೆ !
ರಂಗನ ದೇವರು ವೆಂಕಟೇಶ್ವರನೆಂದು
ಸಿಂಗನ ದೇವರು ಸೋಮೇಶ್ವರನೆಂದು
ಮನದೊಳು ನೆನಹಾಡಿದರೆ ಸಾಕು ಅವರಿಗೆ
ಮುನಿಸಿಂದ ಮುಖವೆಲ್ಲ ಕೆಂದು ಕೆಂದು !
ರಂಗಣ್ಣ ಸಿಂಗಣ್ಣ ಹೋರಾಡುತಿರುವರು
ತಂತಮ್ಮ ದೇವರೆ ಮೇಲುಮೇಲೆಂದು
ಗೆಳೆತನವಳಿದಿದೆ ಜಗಳವು ಬೆಳೆದಿದೆ
ಕಳೆದಿದೆ ಬದುಕಿನ ಶಾಂತಿಯನಿಂದು.
ರಂಗ-ಸಿಂಗರು ವಾದಹಾಕುತಲಿರುವರು
ತಂತಮ್ಮ ದೇವರು ಮೇಲುಮೇಲೆಂದು ;
ರಂಗ-ಸಿಂಗರೊಳಿಂದು ಗೆಳೆತನವಿಲ್ಲ—
ಎಂತಲೇ ಮನದಲ್ಲಿ ಸುಖ-ಶಾಂತಿಯಿಲ್ಲ.

ಶಾರೀರಿಕ ಶಿಕ್ಷಣ ಅದರ ಮಹತ್ತ್ವ

(ಲೇಖಾಂಕ ೩)

ಶ್ರೀ. ಯಂ. ವ್ಹಿಂ. ಜಾವಡೇಕರ ಎ. ಎ., ಬಿ. ಟಿ., ಡಿ. ಪಿಎಡ್.
ಸ್ಟೇಟ್ ಇನ್‌ಸ್ಪೆಕ್ಟರ್ ಫಾರ್ ಫಿಜಿಕಲ್ ಎಜ್ಯುಕೇಶನ್, ಮುಂಬಯಿರಾಜ್ಯ

卐

ಮಾನವನಿಗೆ ದೇಹಬಲದ ಆವಶ್ಯಕತೆಯಿರುವಂತೆಯೆ ಮನೋಬಲದ ಆವಶ್ಯಕತೆಯಿದೆ. ದೇಹಬಲವಿಲ್ಲದಲ್ಲಿ ಮನೋಬಲಕ್ಕೂ ಅವಕಾಶವಿರುವುದಿಲ್ಲ.

卐

ರಾಷ್ಟ್ರದ ಮಾನಸಿಕ ಅವನತಿ

ನಮ್ಮ ರಾಷ್ಟ್ರದ ಮಾನಸಿಕ ಸದ್ಗುಣಗಳ ಇತಿಹಾಸವನ್ನು ಅಭ್ಯಾಸ ಮಾಡಿದ್ದಾದರೆ, ಅದು ಅಭಿಮಾನಾಸ್ಪದವಿದೆಯೆಂದು ಯಾರಾದರೂ ಹೇಳಬಹುದು. ರಾಮ, ಕೃಷ್ಣ, ಚಂದ್ರಗುಪ್ತ, ಪುಲಿಕೇಶಿ, ಶಿವಾಜಿಮಹಾರಾಜರಂಥವರ ಕಾಲದಲ್ಲಿ ರಾಷ್ಟ್ರದ ಮನಸ್ಸು ಯಾವ ಅವಸ್ಥೆಯಲ್ಲಿತ್ತು? ಸಂತಾಜಿ ಘೋರಪಡೆ ಮತ್ತು ಧನಾಜಿ ಜಾಧವ ಇವರ ಕಾಲದಲ್ಲಿ ಮರಾಠರ ಪ್ರಭುತ್ವವು ಒಂದಿಷ್ಟು ಇಳಿಮುಖವಾಗಿದ್ದರೂ, ಸ್ವಾತಂತ್ರ್ಯರಕ್ಷಣಕ್ಕಾಗಿ ಅವರು ಪಟ್ಟ ಪರಿಶ್ರಮ, ಆ ಪರಿಶ್ರಮದ ಬೆಂಬಲಕ್ಕಿದ್ದ ಅವರ ಆ ತಳಮಳ ಇವುಗಳನ್ನೆಲ್ಲ ನೋಡಿದಾಗ ಅಗಾಧವೆನಿಸುವುದು. ಈ ಸದ್ಗುಣಗಳನ್ನೆಲ್ಲ ಇಂಗ್ಲಿಷರು ಮೆಲ್ಲಮೆಲ್ಲನೆ ಹ್ರಾಸಗೊಳಿಸಿದರು. ಕೊನೆಗೆ ದಾಸ್ಯವೇ ಮೇಲೆಂದು ಅದರ ಗುಣಗಾನವನ್ನು ನಾವು ಮಾಡತೊಡಗಿದೆವು. ಸ್ವಾತಂತ್ರ್ಯವನ್ನು ಮರಳಿ ಪಡೆಯುವ ಹುಮ್ಮಸದಿಂದ ತನ್ನ ಪರಾಕ್ರಮದಿಂದ ಇಂಗ್ಲಿಷರಿಗೆ ಕಾಲಿಗೆ ಬುದ್ಧೀ ಹೇಳಹಚ್ಚಿದ ಝಾಂಸಿ ಲಕ್ಷ್ಮೀಬಾಯಿಯೆತ್ತ? ಮತ್ತು ಚಹಕ್ಕೆ ಸಕ್ಕರೆ ಕಡಿಮೆ ಬೀಳುವ ಈ ಸ್ವರಾಜ್ಯಕ್ಕಿಂತ ಮಾಬಾಪ್ ಇಂಗ್ಲಿಷ ಸರಕಾರವು ಒಳ್ಳೆಯದು ಆಗಿತ್ತೆಂದು ಬಗೆದು, ಅದು ಮರಳಿ ಬಂದರೆ ಒಂದು ಸತ್ಯನಾರಾಯಣವನ್ನು ಮಾಡೋಣ—ಎಂದು ಮೊದಲಾಗಿ ಅಳುಬುರುಕ ವಿಚಾರವನ್ನು ವ್ಯಕ್ತಗೊಳಿಸುವ ಇಂದಿನ ಜನವೆತ್ತ? ಬಂಗಾರದ ಪಂಜರದಲ್ಲಿ ಬೆಳ್ಳಿಯ ತಾಟಿನಲ್ಲಿರುವ ದಾಳಿಂಬದ ಬೀಜಗಳನ್ನು ಅನಾಯಾಸವಾಗಿ ತಿನ್ನುವ ಗಿಳಿಗೆ ಕೂಡ ಹಾರಿಹೋಗಬೇಕೆಂಬ ಸ್ವಾತಂತ್ರ್ಯದ ಹುಮ್ಮಸವಿರುತ್ತದೆ. ಆದರೆ ನಾವು ಮಾತ್ರ ಚಹಾಪಾನದಂಥ ದುಷ್ಟವ್ಯಸನದ ಚಟಕ್ಕಾಗಿ ಪುನಃ ಪಾರತಂತ್ರ್ಯದ ಮಾರ್ಗಪ್ರತೀಕ್ಷೆ ಮಾಡುವಷ್ಟು ದುರ್ಬಲರಾಗಿದ್ದೇವೆ. ಈ ಮನೋದೌರ್ಬಲ್ಯಕ್ಕಿಂತ ಹೆಚ್ಚಿನ ದೌರ್ಬಲ್ಯವಾವುದು?

ಆಶಾವಾದದ ದೃಷ್ಟಿಕೋನ, ಆನಂದಮಯ ಜೀವನ ಇವು ನಮ್ಮ ಪರಂಪರೆಯ ವೈಶಿಷ್ಟ್ಯಗಳು.

ನಮ್ಮ ಸಂಸ್ಕೃತಿಯಲ್ಲಿ ಆಶಾವಾದ ಮತ್ತು ಆನಂದ ಇವುಗಳು ಹೆಚ್ಚಿ ಮೇರೆಪರಿದಿವೆ. ಇಹಲೋಕದಲ್ಲಿ ಇಷ್ಟೇ ಅಲ್ಲ, ಮರಣಾನಂತರವೂ ಕೂಡ ಆತ್ಮಕ್ಕೆ ಸಾತ್ತ್ವಿಕ ಸುಖ-ಆನಂದಗಳು ದೊರೆಯಬೇಕೆಂದು ತಪಶ್ಚರ್ಯೆ ಕೈಕೊಂಡ ನಮ್ಮ ಋಷಿಗಳು, ಜಗದಲ್ಲಿ ಅನಾದಿ-ಅನಂತವಾಗಿರುವ ಬ್ರಹ್ಮತತ್ತ್ವದ ಮೂರುಲಕ್ಷಣಗಳಲ್ಲಿ (ಸತ್-ಚಿತ್-ಆನಂದ) ಆನಂದವೂ ಒಂದು ಲಕ್ಷಣವಾಗಿದೆಯೆಂದು ಹೇಳುವ ನಮ್ಮ ತತ್ತ್ವಜ್ಞಾನ, ಹಾಗು ವಿಧವಿಧದ ಹಬ್ಬ-ಹುಣ್ಣಿವೆ-ಉತ್ಸವ, ಯಾತ್ರೆ, ಜಾತ್ರೆಗಳನ್ನು ವರ್ಷದುದ್ದಕ್ಕೂ ಏರ್ಪಡಿಸಿರುವ ನಮ್ಮ ಧರ್ಮಶಾಸ್ತ್ರ—ಈ ಮಾತುಗಳಿಂದ ನಾವು ಅತಿಶಯ ಆನಂದವೃತ್ತಿಯವರೆಂದೂ ಆಶಾವಾದಿಗಳೆಂದೂ ಸಿದ್ಧವಾಗುತ್ತದೆ. ಆದರೆ ಪರಕೀಯರ ದಾಸ್ಯದಿಂದಾಗಿ ನಮ್ಮ ಆಶಾವಾದವು ನಷ್ಟವಾಯಿತು. 'ನಮ್ಮ ಕೈಯಿಂದೇನಾದೀತು, ನಾವು ಹೀಗೇ ಇರುವವರು, ಇದರಲ್ಲೇನಿದೆ, ಅದರಿಂದೇನಾಗುವುದದೆ' ಎಂದು ಮೊದಲಾಗಿರುವ ಅಳುಬುರುಕ ತತ್ತ್ವಜ್ಞಾನವನ್ನು ನಾವು ಅಂಗೀಕಾರಮಾಡುವಂತೆ, ಈ ದಾಸ್ಯವು ತನ್ನ ಪ್ರಭಾವವನ್ನು ಬೀರಿದೆ. ಕಚೇರಿಯಲ್ಲಿ ಕಾರಕೂನಿ ದೊರೆತರೆ ಜೀವನವೇ ಧನ್ಯವೆಂದು ತಿಳಿಯುವ ಅಲ್ಪ ಸಂತೋಷವೇ ನಮ್ಮ ದೊಡ್ಡ ಧ್ಯೇಯವಾಗಿಬಿಟ್ಟಿತು.

ಜ್ಞಾನಾರ್ಜನೆಯ ವಿಷಯದಲ್ಲಿ ಈ ದೇಶದ ಪರಂಪರೆಯು ಬಹು ಶ್ರೇಷ್ಠವಾಗಿದೆ.

'ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ' ಎಂಬೀ ಏಕತ್ವದ ಸಿದ್ಧಾಂತವನ್ನು ಪ್ರತಿಪಾದಿಸುವ ಆದ್ಯ ಶಂಕರಾಚಾರ್ಯರು, ವ್ಯಾಕರಣ-ಯೋಗಶಾಸ್ತ್ರಗಳ ಸಿದ್ಧಾಂತಗಳನ್ನು ಮಂಡಿಸಿದ ಪಾಣಿನಿ-ಪತಂಜಲಿ ಮುನಿಗಳು, ಗಣಿತ ಶಾಸ್ತ್ರದ ಗಭೀರ

ಅಭ್ಯಾಸ ಮಾಡಿದ ಭಾಸ್ಕರಾಚಾರ್ಯರು, ರಾಜ್ಯಶಾಸನಶಾಸ್ತ್ರದ ಸೂಕ್ಷ್ಮ ವರ್ಣನೆಯನ್ನು ಮಾಡುವ ಕೌಟಿಲ್ಯರು, ಸಂಸ್ಕೃತದಲ್ಲಿರುವ ತತ್ತ್ವಜ್ಞಾನವನ್ನು ಕಂಠೋಕ್ತವಾಗಿ ಕಾವ್ಯಮಯ ಮರಾಠಿಯಲ್ಲಿ ಬಹುಜನ ಸಮಾಜದ ಸೊತ್ತನ್ನಾಗಿ ಮಾಡಿದ ಸಂತ ಜ್ಞಾನೇಶ್ವರರು ಮತ್ತು ಅಖಂಡ ವಾಚನ, ಸೂಕ್ಷ್ಮ ನಿರೀಕ್ಷಣ, ಸತತ ಮನನ, ನಿಧಿಧ್ಯಸನಾದಿಗಳ ನೆರವಿನಿಂದ ಜ್ಞಾನಸಾಧನೆಮಾಡಿ ‘ ನಿಬಂಧ ಮಾಲೆ ’ ಯಂಥ ಗ್ರಂಥನಿರ್ಮಾಣ ಮಾಡಿದ ವಿಷ್ಣು-ಶಾಸ್ತ್ರಿ ಚಿಪಳೂಣಕರ ಇವರೆಲ್ಲರ ಚರಿತ್ರೆಗಳು ಜ್ಞಾನಗಂಗೆಯ ದಂಡೆಯಲ್ಲಿರುವ ಪವಿತ್ರ ತೀರ್ಥ—ಕ್ಷೇತ್ರಗಳೇ ಸರಿ.

ಇಂಥ ಪರಂಪರೆಯು ಪಾರತಂತ್ರ್ಯದ ಪರಿಣಾಮದಿಂದಾಗಿ ನಷ್ಟ-ವಾಗುತ್ತ ನಡೆಯಿತು. ಬುದ್ಧಿಸ್ವಾತಂತ್ರ್ಯದ ಬೆಲೆ ಕಡಿಮೆಯಾಗಿ ಸ್ವತಂತ್ರವಿಚಾರದ ದೃಷ್ಟಿಯೇ ಮಂದವಾಯಿತು. ನಾನು ಸ್ವತಃ ತಿಳಿದು ನೋಡುವೆ, ಅಭ್ಯಾಸ ಮಾಡಿ ನೋಡುವೆ, ಸ್ವಂತ ವಿಚಾರ-ಅನುಭವಗಳಿಗೆ ಇತರರ ಅನುಭವದ ಜೋಡಿಯನ್ನು ಮಾಡಿ ಜೀವಂತ ವಿಚಾರಗಳನ್ನು ಮಂಡಿಸುವೆ — ಎಂಬೀ ಮೌಲಿಕ ಅವಸ್ಥೆಯು ಮಾಯವಾಯಿತು. ಅದರ ಸ್ಥಳದಲ್ಲಿ ಇತರರು ಕುಡಿಸಿದ ಗುಟುಕುನೀರನ್ನೇ ಕುಡಿದು, ಕುಡಿದದ್ದು ಪಚನವಾಗದೆ ಅದನ್ನೇ ಪರೀಕ್ಷೆಯಲ್ಲಿ ಕಾರಿಕೊಳ್ಳುವ ವೃತ್ತಿ ನೆಲೆಗೊಂಡಿದೆ. ಹೇಗಾದರೂ ಮಾಡಿ ದಾಟಿದರಾಯಿತೆಂಬ ದುರ್ಬಲಬುದ್ಧಿಯೇ ಒಳ್ಳೆಯದೆಂದು ನಮಗೆನಿಸತೊಡಗಿದೆ. ಈಗ ಎಲ್ಲಿ ನೋಡಿದಲ್ಲಿ ಶಾಲೆಗಳಲ್ಲಿಯ ಅಧ್ಯಾಪನವು ಸಾಲದೆ ಖಾಸಗಿ ಓದು ಹೇಳುವದು, ಖಾಸಗಿ ವರ್ಗ-ಗಳು, ಟೀಕೆ ಟಿಪ್ಪಣಿ ಗೈಡುಗಳು ಇವುಗಳ ಸಹಾಯವಿಲ್ಲದೆ ನಡೆ-ಯುವಂತಿಲ್ಲ. ಪರೀಕ್ಷೆಯ ಸಮಯದಲ್ಲಿ ಪ್ರಶ್ನೆಗಳನ್ನು ಮುಂಚಿತ-ವಾಗಿ ತಿಳಿದುಕೊಳ್ಳಬೇಕೆಂದು ವಿದ್ಯಾರ್ಥಿಗಳು ನಡೆಸಿರುವ ಧಡಪಡ-ವನ್ನು ನೋಡಿ, ಮನಸ್ಸಿಗೆ ಕಳವಳವಾಗುತ್ತದೆ. ಮಾನಸಿಕ ಪರಿ-ಶ್ರಮವನ್ನು ಮಾಡುವ ಅಭ್ಯಾಸವೇ ಸಂಪುಷ್ಟಕ್ಕೆ ಬರಹತ್ತಿದೆ.

ಇದರಂತೆಯೇ ಆತ್ಮವಿಶ್ವಾಸ, ಧೈರ್ಯ, ಶ್ರದ್ಧೆ ಮೊದಲಾದ ಸದ್ಗುಣಗಳ ನಮ್ಮ ಪೂರ್ವಪರಂಪರೆಯು ನಷ್ಟವಾಗುತ್ತ ನಡೆದಿದೆ. ಅಮೃತಶೈಲಿಯಲ್ಲಿ ಬರೆದ ಮಹಾರಾಷ್ಟ್ರದ ಆದಿಕವಿಗಳಾದ ಜ್ಞಾನೇಶ್ವರರು, ಮೊಗಲರಿಗೆ. ತಮ್ಮ ಕಳ್ಳಕಾಳೆಗದಿಂದ ಚಳ್ಳು ಹಣ್ಣು ತಿನಿಸಿ ಅವರಿಂದ ಕುದುರೆಗೆ ‘ ನೀರಿನಲ್ಲಿ ಸಂತಾಜಿ ಘೋರ್ಪಡೆ ಕಾಣುವನೇ ? ’ ಎಂದು ಕೇಳಹಚ್ಚಿದ ಮಾವಳೇ ವೀರರು, ಪ್ರಾಣ-ಹೋದರೂ ಪರಧರ್ಮ ಸ್ವೀಕರಿಸಲಾರೆನೆಂದು ಪ್ರತಿಭಟಿಸಿದ ಸಂಭಾಜಿ ಮಹಾರಾಜರು — ಇವರೆಲ್ಲರ ಆತ್ಮವಿಶ್ವಾಸ, ಧೈರ್ಯ, ಶ್ರದ್ಧೆಗಳು ಇಂದು ಗೋಚರವಾಗುವುದೇ ಕಠಿಣವಾಗಿದೆ. ಇಂಥ ಗುಣಗಳ ವಿಕಾಸಕ್ಕೆ ಪಾರತಂತ್ರ್ಯದ ಅವಧಿಯಲ್ಲಿ ಅವಕಾಶವೇ ದೊರೆಯದೆ ಹೋಯಿತು. ಈ ಗುಣಗಳ ವೃದ್ಧಿಗೆ ಉತ್ತೇಜನ ಕೊಡುವವರೇ ಇಲ್ಲದಾಯಿತು.

ಪಾರತಂತ್ರ್ಯದ ಅವಧಿಯಲ್ಲಿ ಪರಕೀಯ ಪ್ರಭುತ್ವದವರು ರಾಷ್ಟ್ರಪುರುಷನ ಶಾರೀರಿಕ ಹಾನಿಯನ್ನು ಮಾಡಿದ್ದಕ್ಕಿಂತ ಹೆಚ್ಚಿ[ನ] ಪ್ರಮಾಣದಲ್ಲಿ ಮಾನಸಿಕ ಅವನತಿಯನ್ನೂ ಅವರು ಉಂಟುಮಾಡಿ-ದರು. ನಮ್ಮ ರಾಷ್ಟ್ರದ ಮನವೇ ವಿಕೃತವಾಗಿ ಮೃತವತ್ ನಿಷ್ಕ್ರಿ[ಯ]-ತನವಾಯಿತು. ಈ ಹಾನಿ ಅತ್ಯಂತ ಭಯಂಕರವೇ ಸರಿ. ಇಂ[ಥ] ಮೃತಮನವು ಇಂದು ಪುನಃ ಸಜೀವವಾಗುವಂಥ ಸಂಜೀವಿನಿಯ ಇಂದು ನಮಗೆ ಬೇಕಾಗಿದೆ. ಪಾರತಂತ್ರ್ಯಕಾಲದ ನಿರಾಶಾವಾದ-ವನ್ನು ನಿರ್ಮೂಲ ಮಾಡುವ, ಇದಕ್ಕಾಗಿ ಅವಶ್ಯವಿರುವ ಸರ್ವ ಕಷ್ಟ-ಗಳನ್ನು ಅತಿಶಯ ಆನಂದದಿಂದ ಸಹಿಸುವ, ಇದಕ್ಕಾಗಿ ಅಗತ್ಯ-ವಿರುವ ಜ್ಞಾನವನ್ನು ಸ್ವಂತ ಪರಿಶ್ರಮ-ಸ್ವಾನುಭವ-ಇತರರ ಅನು-ಭವದ ಸಹಾಯ ಈ ಮೂಲಕ ಸಂಪಾದಿಸುವ ಮತ್ತು ಸರ್ವ ಸಂಕಟ-ಗಳನ್ನು ಧೈರ್ಯ-ಆತ್ಮವಿಶ್ವಾಸಗಳಿಂದ ಎದುರಿಸುವ ತರುಣರನ್ನು ಹಾಗೂ ಅವರ ಹೆಗಲಿಗೆ ಹೆಗಲು ಹಚ್ಚಿ ಸಹಕಾರವನ್ನು ಕೊಡು[ವ] ತರುಣಿಯರನ್ನು ನಾವು ತರಬೇತುಗೊಳಿಸಿ ಅಣಿಗೊಳಿಸಬೇಕಾಗಿ[ದೆ]. ಸ್ವಲ್ಪದರಲ್ಲಿ ಹೇಳುವುದೆಂದರೆ ನಮ್ಮ ರಾಷ್ಟ್ರೀಯ ಮನಸ್ಸನ್ನು ಮತ್ತೊಮ್ಮೆ ಜೀವಂತಗೊಳಿಸಿ ಕಾರ್ಯಕ್ಷಮವನ್ನಾಗಿ ಮಾಡಬೇಕಾ-ಗಿದೆ. ಇದಕ್ಕಾಗಿ ಯಾವ ಸಂಜೀವಿನಿಯು ನಮಗೆ ಹೆಚ್ಚು ಉಪ-ಯುಕ್ತವಾದೀತು? ನನ್ನ ಅಭಿಪ್ರಾಯವೆಂದರೆ, ಶಾಸ್ತ್ರಶುದ್ಧ ಶಾರೀರಿ[ಕ] ಶಿಕ್ಷಣವೇ ಈ ಸಂಜೀವಿನಿಯಾಗಿದೆ. ಶಾರೀರಿಕ ಶಿಕ್ಷಣ ಹಾಗು ಸತ್ತಂ-ಬದ್ದಿರುವ ರಾಷ್ಟ್ರಪುರುಷನ ಮನಸ್ಸಿಗೆ ಜೀವಕಳೆ ತುಂಬುವ ಕಾ[ರ್ಯ] ಇವುಗಳಲ್ಲಿರುವ ಅನ್ಯೋನ್ಯ ಸಂಬಂಧವು ಎಂತಹದು ಎಂಬುದ-ರ ಮೀಮಾಂಸೆಯನ್ನು ನಾವು ಮಾಡಬೇಕಾಗುವುದು. ಇದಕ್ಕಾ[ಗಿ] ಒಂದು ಸ್ವತಂತ್ರ ಲೇಖನವೇ ಅವಶ್ಯವಿದ್ದು ಅದನ್ನು ಮುಂದೆ ನಾನ[ು] ಬರೆಯುವ ವಿಚಾರದಲ್ಲಿದ್ದೇನೆ.

(೩) ಸಾಮಾಜಿಕ ಅಧೋಗತಿ

ಶಾರೀರಿಕ ಹ್ರಾಸ ಮತ್ತು ಮಾನಸಿಕ ಅವನತಿಗಳ ಜೊತೆಗೇನೆ ಇಂಗ್ಲಿಷರ ಆಳಿಕೆಯ ಪರಿಣಾಮವಾಗಿ ನಮ್ಮ ಸಾಮಾಜಿ[ಕ] ಜೀವನದಲ್ಲಿಯೂ ಹೆಚ್ಚಿನ ಅಧೋಗತಿಯುಂಟಾದುದು ಕಂಡುಬರು-ತ್ತದೆ. ಸಾಮಾಜಿಕ ಸ್ಥೈರ್ಯಕ್ಕಾಗಿ ಮತ್ತು ಸಾಮಾಜಿಕ ಪ್ರಗತಿ-ಗಾಗಿ ಹಲವೊಂದು ಸಾಮಾಜಿಕ ಸದ್ಗುಣಗಳ ಅಗತ್ಯ ಇರುತ್ತದೆ. ಅವು ಯಾವುವೆಂದರೆ ಸಮಾಜದೊಳಗಿನ ಬೇರೆ ಬೇರೆ ಘಟಕಗಳ[ಲ್ಲಿ] ಪರಸ್ಪರ ಪರಿಚಯ, ಪೂರ್ಣಸ್ನೇಹ, ಸುಖ-ದುಃಖಗಳ ತಿಳಿವ[ಳಿಕೆ] ಒಬ್ಬರೊಬ್ಬರಿಗೆ ನೆರವಾಗುವ ಪ್ರವೃತ್ತಿ, ಮತ-ಜಾತಿ-ಧರ್ಮಗಳ[ು] ಭಿನ್ನವಿದ್ದರೂ ಅವನ್ನು ಬದಿಗೆ ಸರಿಸಿ ಸಹಿಷ್ಣುತೆ-ಪ್ರೇಮಾದರ-ಗಳನ್ನು ವ್ಯಕ್ತಮಾಡುವ ಪ್ರವೃತ್ತಿ, ಮತ್ತು ಕೊನೆಯದಾಗಿ ನಾವೆ-ಲ್ಲರೂ ಒಂದೇ—ಕೂಡಿ ತೇಲೋಣ ಇಲ್ಲವೆ ಕೂಡಿ ಮುಳುಗೋಣ-ವೆಂಬೀ ಭಾವನೆಯು ಪ್ರಧಾನವಾಗಿರುವ ಅಭೇದ್ಯ ಐಕ್ಯ—ಇವೇ ಮೊದಲಾದುವುಗಳು. ಈ ಎಲ್ಲ ದೃಷ್ಟಿಯಿಂದಲೂ ಹಿಂದುಸ್ಥಾನದ ಪರಂಪರೆಯು ಬಹಳೇ ಉಚ್ಚ ತರಗತಿಯದಿತ್ತೆಂಬ ಮಾತನ್ನು ಇಂದು ಹೇಳುವುದೇ ಎದೆಗಾರಿಕೆಯ ಮಾತಾಗಿ ತೋರುವುದು. ಆದ[ರೆ]

ಈ ಕ್ಷೇತ್ರದಲ್ಲಿಯೂ ಆದರ್ಶ ಉದಾಹರಣೆಗಳು ಹಿಂದುಸ್ಥಾನದ ಇತಿಹಾಸದಲ್ಲಿ ದೊರೆತೇ ದೊರೆಯುವವು.

ಅಶೋಕ ಚಕ್ರವರ್ತಿಯ ಕಾಲದಲ್ಲಿ ಧರ್ಮ ಸ್ವಾತಂತ್ರ್ಯದ ಮಟ್ಟವು ಉನ್ನತ ಅವಸ್ಥೆಯಲ್ಲಿತ್ತು; ಹೇಗೆಂದರೆ, ತಂದೆ ವೈದಿಕನಾದರೆ ಮಗನು ಬೌದ್ಧನಾಗಿ ಒಂದೇ ಕುಟುಂಬದಲ್ಲಿ ಸಂಸಾರ ನಡೆಯುತ್ತಿತ್ತು. ಮತಸ್ವಾತಂತ್ರ್ಯದ ಮೇರೆಯು ಪರಮಾವಧಿಗೆ ಮುಟ್ಟಿದ್ದರೂ ಪರಸ್ಪರರಲ್ಲಿ ಪ್ರೇಮ-ಸಹಕಾರಗಳು ಜೀವಂತವಾಗಿದ್ದು ಸರ್ವರಲ್ಲಿ ಐಕ್ಯಭಾವನೆಯು ಓತಪ್ರೋತವಾಗಿ ಹರಿಯುತ್ತಿತ್ತು. ಸ್ವತಂತ್ರ ಭಾರತದ ರಾಷ್ಟ್ರಧ್ವಜದಲ್ಲಿ ಅಶೋಕಚಕ್ರಕ್ಕೆ ಮಧ್ಯಸ್ಥಾನದಲ್ಲಿ ದೊರೆತ ಅಗ್ರಮರ್ಯಾದೆಗೆ ಅಂದಿನ ಪ್ರೇಮಮಯ ಸಾಮಾಜಿಕ ವಾತಾವರಣವೇ ಕಾರಣವು. ಮುಂದೆ ಅಕಬರ ಬಾದಶಹ ಮತ್ತು ಶಿವಾಜಿ ಮಹಾರಾಜರ ಕಾಲದಲ್ಲಿ ಕೂಡ ಇಂತಹ ಉದಾಹರಣೆಗಳು ದೊರೆಯುತ್ತವೆ. ಶಿವಾಜಿ ಮಹಾರಾಜರು ಅಂದಿನ ವಿವಿಧ ಸಾಮಾಜಿಕ ವರ್ಗಗಳಾದ ಬ್ರಾಹ್ಮಣ, ಪ್ರಭು, ಮರಾಠಾ, ಹರಿಜನ ಮತ್ತು ಮುಸಲ್ಮಾನರಲ್ಲಿ ಪರಸ್ಪರ ಪ್ರೇಮ-ಸಹಕಾರಗಳನ್ನುಂಟುಮಾಡಿ ತಮ್ಮ ಸಾಮ್ರಾಜ್ಯದಲ್ಲಿ ಸಾಮರಸ್ಯದ ವಾತಾವರಣವನ್ನು ಕಲ್ಪಿಸಿದರು. ತಮ್ಮ ಸರ್ವಸ್ವವನ್ನೆಲ್ಲ ಸ್ವಾಮಿಕಾರ್ಯಕ್ಕಾಗಿ ಧಾರೆಯೆರೆದ ತಾನಾಜಿ-ಬಾಜೀಪ್ರಭುಗಳಂಥವರ ಜೀವನರಹಸ್ಯವು ಅಂದಿನ ಸಾಮಾಜಿಕ ಐಕ್ಯಭಾವದಲ್ಲಿದೆ ಎಂದು ಹೇಳಿದರೆ ವಸ್ತುಸ್ಥಿತಿಯನ್ನೇ ಹೇಳಿದಂತಾಗುವುದು.

ನಮ್ಮ ಸ್ವಾತಂತ್ರ್ಯವನ್ನು ಇಂಗ್ಲಿಷರು ಅಪಹರಿಸಿದ ನಂತರ, ತಮ್ಮ ಬೇಳೆಯನ್ನು ಬೇಯಿಸಿಕೊಳ್ಳಲಿಕ್ಕೆಂದು ಅವರು ನಮ್ಮಲ್ಲಿ ಅನೇಕ ಬಗೆಯ ಒಡಕು ಹುಟ್ಟಿಸಿದರು. ಭೇದನೀತಿನಿಪುಣರಾದ ಅವರು 'ಒಡೆಯಿರಿ ಮತ್ತು ಆಳಿರಿ (Divide & Rule) ' ಎಂಬ ತತ್ತ್ವಕ್ಕನುಸಾರವಾಗಿ ನಮ್ಮಲ್ಲಿದ್ದ ಪರಸ್ಪರ ಪ್ರೇಮ, ಸಹಿಷ್ಣುತೆ, ಐಕ್ಯ, ಸಹಕಾರ ಮೊದಲಾದ ಸಾಮಾಜಿಕ ಸದ್ಗುಣಗಳನ್ನು ನಿರ್ನಾಮಗೊಳಿಸಿದರು. ಎರಡು ಬೆಕ್ಕುಗಳಲ್ಲಿಯ ಜಗಳದಿಂದ ಹೊರಗಿನ ಮಂಗಕ್ಕೆ ಬೆಣ್ಣೆಯ ಲಾಭವಾದಂತೆ ನಮ್ಮೊಳಗಿನ ಅಂತಃಕಲಹಗಳ ಲಾಭವನ್ನು ಪರಕೀಯರು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಂಡರು.

ಇದರ ಪರಿಣಾಮವೇನಾಯ್ತೆಂದರೆ ದೇಶದಲ್ಲಿ ಬ್ರಾಹ್ಮಣ-ಬ್ರಾಹ್ಮಣೇತರ, ಸ್ಪೃಶ್ಯಾಸ್ಪೃಶ್ಯ, ಹಿಂದು-ಮುಸಲ್ಮಾನ ತಂಟೆಗಳಿದ್ದು ಸಮಾಜದಲ್ಲಿ ಬಿರುಕುಗಳುಂಟಾದುವು. ಪರಸ್ಪರರಲ್ಲಿ ದ್ವೇಷ-ಮತ್ಸರಗಳು ಹೆಚ್ಚಿದುವು. ಹಿಂದು-ಮುಸಲ್ಮಾನರಲ್ಲಿ ದಂಗೆಗಳು ಏಳುವುದು ನಿತ್ಯದ ಮಾತಾಗಿಬಿಟ್ಟಿತು. ಅನೇಕ ಉಗ್ರ ಯಾದವೀ ಕಲಹಗಳಾಗಿ ಕೊನೆಯಲ್ಲಿ ದೇಶವು ಇಬ್ಭಾಗವಾಗಿ ಪಾಕಿಸ್ತಾನವು ಜನಿಸಿಬಂತು.

ಈಗ ನಮ್ಮ ಪಟ್ಟಣ ಮತ್ತು ಹಳ್ಳಿಗಳೊಳಗಿನ ಜೀವನವನ್ನು ಸ್ಥೂಲದೃಷ್ಟಿಯಿಂದ ನೋಡುವವರಿಗೆ ಕೂಡ ಒಂದು ಮುಖ್ಯ ಮಾತು



ಸ್ಪಷ್ಟವಾಗಿ ತಿಳಿದುಬರುವುದು. ಅದೇನೆಂದರೆ, ನಮ್ಮ ಸಮಾಜದಲ್ಲಿ ಸಮಾಜತ್ವವೆಂಬುದೇ ಸ್ವಲ್ಪವಾದರೂ ಉಳಿದಿಲ್ಲ. ಪ್ರತಿಯೊಬ್ಬನೂ ತನ್ನ ಮನೆ- ತನ್ನ ಪ್ರಪಂಚಗಳಲ್ಲಿಯೇ ಮಗ್ನನಾಗಿಬಿಟ್ಟಿರುತ್ತಾನೆ. ನನ್ನ ಸಂಪತ್ತು ಹೇಗೆ ಹೆಚ್ಚೀತು, ಅದು ಹೆಚ್ಚುವಾಗ ಇತರರ ಕುತ್ತಿಗೆಯನ್ನು ಮುರಿದರೂ ಅಡ್ಡಿಯಿಲ್ಲ. ಯಾವ ಯುಕ್ತಿಗಳಿಂದ ಅದನ್ನು ನಾನು ಹೆಚ್ಚಿಸಿಕೊಳ್ಳಬಲ್ಲೆ? ಎಂಬ ವಿವಂಚನೆಯಲ್ಲಿಯೇ ಪ್ರತಿಯೊಬ್ಬನೂ ಸಿಲುಕಿಕೊಂಡಿರುತ್ತಾನೆ. ತನ್ನ ಮನೆಯ ಸ್ವಚ್ಛತೆಯನ್ನು ಕಾಯುವಾಗ—ಇಲ್ಲವೆ ಕಾಯ್ದುಬಳಿಕ ನೆರೆಹೊರೆಯವರ ಸಮಾಚಾರವನ್ನು ಯಾರೂ ತೆಗೆದುಕೊಳ್ಳುವುದಿಲ್ಲ. ತಮ್ಮ ಮಕ್ಕಳು ಸುಶಿಕ್ಷಿತರಾಗುವುದರ ಜೊತೆಗೆ ಇತರರ ಮಕ್ಕಳೂ ಸುಶಿಕ್ಷಿತರಾದರೆ ಒಳ್ಳೆಯದೆಂದು ಲೆಕ್ಕಹಾಕುವ ಜನರು ಅತಿ ಕಡಿಮೆ. ಸ್ವಂತ ಮಕ್ಕಳ ಆರೋಗ್ಯದ ಜೊತೆಗೆ ಇತರ ಬಾಲಕರ ಆರೋಗ್ಯವನ್ನು ಸುಧಾರಿಸುವುದೆಂದರೆ, ಮಾಡಬಾರದ ಕೆಲಸವಾದ ಊರ ಉಸಾಬರಿ ಮಾಡಿದಂತೆಂದು ಜನರು ಭಾವಿಸುತ್ತಾರೆ. ಸಾಮುದಾಯಿಕ ಒಕ್ಕಲತನ, ಸಹಕಾರೀ ಸಂಸ್ಥೆಗಳು ಇತ್ಯಾದಿ ಯೋಜನೆಗಳು ನಮ್ಮ ದೇಶದಲ್ಲಿ ಯಶಸ್ವಿಯಾಗದಿದ್ದುದಕ್ಕೆ ಈ ಬಗೆಯ ಸಾಮಾಜಿಕ ಪರಿಸ್ಥಿತಿಯೇ ಬಹುಮಟ್ಟಿಗೆ ಕಾರಣವಾಗಿದೆ.

ಈ ಹೊತ್ತು, ಭಾರತವು ಸ್ವತಂತ್ರವಾದ ಈ ಕಾಲದಲ್ಲಂತೂ ಪ್ರೇಮ-ಐಕ್ಯ-ಸಹಕಾರಗಳೆಂಬ ಸಾಮಾಜಿಕ ಸದ್ಗುಣಗಳು ವಿಕಾಸಗೊಳ್ಳುವುದು ಅತ್ಯಂತ ಅಗತ್ಯವಾಗಿದೆ. ನಮ್ಮೊಳಗಿನ ಐಕ್ಯಭಾವನೆಯನ್ನು ಹೊಡೆದುಹಾಕಲು, ನಮ್ಮ ನೆರೆಯ ರಾಷ್ಟ್ರವಾದ ಪಾಕಿಸ್ತಾನವು ಹೊಂಚುಹಾಕುವ ಪ್ರಯತ್ನದಲ್ಲಿದೆ. ಇಂಥ ಪ್ರಸಂಗದಲ್ಲಿ ಐಕ್ಯಸಿದ್ಧಾಂತದಲ್ಲಿ ನಮಗಿರುವ ಶ್ರದ್ಧೆಯು ದೃಢವಾಗಬೇಕು. ನಮ್ಮಲ್ಲಿ ಒಡಕು ಹುಟ್ಟಿಸಬೇಕೆನ್ನುವ ಹಿತಶತ್ರುಗಳ ವಿಷಯದಲ್ಲಿ ನಾವು ಜೋಕೆಯಿಂದಿರಬೇಕು. ಸಮಾಜದಲ್ಲಿಯ ಬೇರೆ ಬೇರೆ ಘಟಕಗಳನ್ನು ಸಮಾನತೆ, ಬಂಧುತ್ವ ಮತ್ತು ಮಾನವ್ಯಗಳ ಆಧಾರದ ಮೇಲೆ ಒಂದೆಡೆಗೆ ತರಬೇಕು. ಒಬ್ಬರೊಬ್ಬರ ಸಹವಾಸವು ಪರಸ್ಪರರಿಗೂ ಆನಂದವನ್ನುಂಟು ಮಾಡುವ ಕಾರ್ಯಕ್ರಮಗಳನ್ನು ನಾವು ಯೋಜಿಸಬೇಕು. ಒಬ್ಬರೊಬ್ಬರಿಗೆ ನೆರವಾಗುವ ಅವಕಾಶವುಂಟಾಗುವಂತೆ ಪ್ರಸಂಗಗಳನ್ನು ಕಲ್ಪಿಸಬೇಕು. ಒಬ್ಬರಿನ್ನೊಬ್ಬರಿಗಾಗಿ ತ್ಯಾಗ ಮಾಡುವ ಪ್ರಸಂಗಗಳನ್ನು ಒಡ್ಡಿ, ಪರಸ್ಪರ ಪ್ರೇಮದ ಪಾಠವನ್ನು ಕಲಿಸಬೇಕು. ಒಬ್ಬನನ್ನು ನೇತಾರನೆಂದು ಒಪ್ಪಿಕೊಂಡ ಮೇಲೆ, ಆತನ ಆಜ್ಞೆಯನ್ನು ಎಲ್ಲರೂ ಪಾಲಿಸುವುದು ಹೇಗೆ ಅವಶ್ಯವೆಂಬುದನ್ನು ನಮ್ಮ ಜನಕ್ಕೆಲ್ಲಾ ತಿಳಿಸಿಕೊಡಬೇಕು. ಪರಸ್ಪರ ಸ್ನೇಹಕ್ಕೆ ಎರವಾಗದೆ ಒಬ್ಬರೊಬ್ಬರಲ್ಲಿ ಸಾತ್ತ್ವಿಕ ಸ್ಪರ್ಧೆ ನಡೆಯುವುದು ಶಕ್ಯವಿದೆಯೆಂಬುದನ್ನು ಉದಾಹರಣೆಗಳಿಂದ ತೋರಿಸಿ ಕೊಡಬೇಕು. ಬಂದ ಕೀರ್ತಿಯನ್ನು ನಮ್ರತೆಯಿಂದ ಹೇಗೆ ಸ್ವೀಕಾರ ಮಾಡಬೇಕು, ಆನಂದಮಯ ಆಟಗಾರಿಕೆಯ ಪರಿಯಿಂದ ಸೋಲನ್ನೂ ಹೇಗೆ ಧೈರ್ಯದಿಂದ ಎದುರಿಸಬೇಕು ಎಂಬುದನ್ನು ಸಾಮಾಜಿಕರಿಗೆ ಕಲಿಸಬೇಕು.

ಈ ಎಲ್ಲ ಮಾತುಗಳನ್ನು ಸಾಧಿಸಿ ತೋರಿಸುವುದಾದರೆ ಸಾಂಘಿಕ ಕವಾಯತ್ತು, ಪಂದ್ಯಾಟಗಳು, ಶಿಬಿರಗಳು, ಸಂಮೇಲನಗಳು ಇ ಮೊದಲಾದ ಸಾಂಘಿಕ ಶಾರೀರಿಕ ಶಿಕ್ಷಣಕ್ಕೆ ನಮ್ಮ ಸಮಾಜದಲ್ಲಿ ಅತ್ಯಂತ ಪ್ರೋತ್ಸಾಹ ದೊರೆಯಬೇಕು. ಸಾಮಾಜಿಕ, ಸಮತೆ, ಸಹಕಾರ, ಸಹಿಷ್ಣುತೆ ಮತ್ತು ಐಕ್ಯ ಈ ಸದ್ಗುಣಗಳ ವಿಕಾಸಕ್ಕೆ ಆಟದ ಬಯಲಿನಿಂದ ಉತ್ತಮ ಸ್ಥಳವು ಇನ್ನೊಂದಿಲ್ಲವೆಂಬೀ ಮಾತು ನಮ್ಮ ರಾಷ್ಟ್ರದ ನೇತಾರರಿಗೆ ಎಷ್ಟು ಬೇಗನೆ ಹೊಳೆದೀತೋ ಅಷ್ಟು ಒಳ್ಳೆಯದು. ಅದೇ ನಮ್ಮ ಭಾಗ್ಯೋದಯ !

೪. ನೈತಿಕ ಅಧಃಪತನ

ಸತ್ಯ, ಬ್ರಹ್ಮಚರ್ಯ, ಅಹಿಂಸೆ, ಅಸ್ತೇಯ, ಅಪರಿಗ್ರಹ ಇವು ನೀತಿಯ ಐದು ತತ್ತ್ವಗಳು. ಈ ನೀತಿತತ್ತ್ವದ ದೃಷ್ಟಿಯಿಂದಲೂ ಭಾರತೀಯ ಸಂಸ್ಕೃತಿಯು ಜಗತ್ತಿನಲ್ಲೆಲ್ಲ ಶ್ರೇಷ್ಠವಾದದ್ದಾಗಿದೆ.

ನಡೆದು ಬಂದ ರಾಜ್ಯಲಕ್ಷ್ಮಿಯನ್ನು ತೊರೆದು, ತಂದೆಯಿತ್ತ ವಚನವನ್ನು ಸತ್ಯಮಾಡಿ ತೋರಿಸಲು ೧೪ ವರ್ಷ ವನವಾಸವನ್ನು ಅನುಭವಿಸಿದ ಶ್ರೀರಾಮಚಂದ್ರ, ದ್ಯೂತದ ಆಟದಲ್ಲಿ ಕೊಟ್ಟ ವಚನಕ್ಕಾಗಿ ವನವಾಸ-ಅಜ್ಞಾತವಾಸಗಳನ್ನು ಅನುಭವಿಸಿದ ಪಾಂಡವರು, ಅತ್ತಿಗೆಯಾದ ಸೀತೆಯ ಕಾಲೊಳಗಿನ ನೂಪುರಗಳನ್ನಷ್ಟೇ ನಿತ್ಯದ ವಂದನೆಯ ಕಾಲಕ್ಕೆ ನೋಡುವ ಲಕ್ಷ್ಮಣ ಮತ್ತು ಕಲ್ಯಾಣದ ಸುಭೇದಾರನ ಅತಿ ಸುಂದರ ಪತ್ನಿಯನ್ನು ಸೈನಿಕರು ತಂದು ತನಗೆ ಅರ್ಪಿಸಿದಾಗ ಆಕೆಯನ್ನು ತಾಯಿಯೆಂದೇ ಭಾವಿಸಿ ಆದರದಿಂದ ಆಕೆಯನ್ನು ಪುನಃ ಸುಖರೂಪವಾಗಿ ತಿರುಗಿ ಕಳಿಸಿದ ಶ್ರೀ. ಶಿವಾಜಿಮಹಾರಾಜ, ಧರ್ಮದ ಹೆಸರಿನಲ್ಲಿ ನಡೆದ ಮೂಕಪ್ರಾಣಿಗಳ ಹಿಂಸೆಯನ್ನೂ ಸಣ್ಣಮಕ್ಕಳ ಸಾವನ್ನೂ ವೃದ್ಧರ ಕ್ಲೇಶವನ್ನೂ ಕಂಡು ಮಮ್ಮಲನೆ ಮರುಗಿ ರಾಜ್ಯತ್ಯಾಗ ಮಾಡಿ ತಪಸ್ಸುಗೈದು ಜ್ಞಾನಿಯಾದ— ಅಹಿಂಸೆಯ ಉಪದೇಶವನ್ನು ಜಗಕ್ಕೆ ಮಾಡಿದ ಬುದ್ಧದೇವ ಮತ್ತು ಆತನ ಅನುಯಾಯಿತ್ವವನ್ನು ವಹಿಸಿದ ಅಶೋಕ ಚಕ್ರವರ್ತಿ, ಇನ್ನೊಬ್ಬರ ದ್ರವ್ಯವನ್ನು ಕಣ್ಣೆತ್ತಿ ಕೂಡ ನೋಡದೆ ತನ್ನ ಸ್ವಂತ ದ್ರವ್ಯದಲ್ಲಿ ಜೀವನೋಪಾಯಕ್ಕೆ ಅವಶ್ಯವಿದ್ದುದನ್ನಷ್ಟೇ ಇಟ್ಟುಕೊಂಡು ಇಲ್ಲವೆ ಭಿಕ್ಷೆಯ ಮೇಲೆ ಅವಲಂಬಿಸಿ ತ್ಯಾಗಜೀವನ ನಡಿಸಿದ ಯಾಜ್ಞವಲ್ಕ್ಯ ಇಲ್ಲವೇ ವಸಿಷ್ಠರಂಥ ಪ್ರಾಚೀನ ಋಷಿಗಳು ಇಲ್ಲವೆ ರಾಮದಾಸರಂಥ ಅರ್ವಾಚೀನ ಸಾಧುಗಳು ಈ ಬಗೆಯ ಉದಾಹರಣೆಗಳು ನಮ್ಮ ದೇಶದ ನೈತಿಕ ಸಂಸ್ಕೃತಿಯನ್ನು ಉಜ್ವಲವನ್ನಾಗಿ ಮಾಡಿವೆ. ಲೋಕಮಾನ್ಯ ಟಿಳಕ, ಮಹಾತ್ಮಾ ಗಾಂಧಿ, ರವೀಂದ್ರನಾಥ ಠಾಕೂರ, ಸಾನೇಗುರೂಜಿ, ಛೋಟಾಭಾಯಿ ಪುರಾಣಿ ಇವರಂಥ ಅರ್ವಾಚೀನ ಋಷಿಗಳೂ ಅದೇ ಸಂಸ್ಕೃತಿಯ ಪುರಸ್ಕರ್ತರಾಗಿದ್ದಾರೆ.

ಪರಕೀಯ ಸರಕಾರದವರು ಈ ದೇಶದ ರಾಜ್ಯಸೂತ್ರಗಳನ್ನು ವಹಿಸಿಕೊಂಡಂದಿನಿಂದ, ದಾರಿದ್ರ್ಯ ಮತ್ತು ಅಸುರಕ್ಷಿತತೆ ಎಂಬೀ ರಕ್ಕಸಿಯರು ದೇಶದ ನೀತಿಮತ್ತೆಯನ್ನು ಹಾಳುಗೆಡಹಿದರು. ನೀತಿ-

ನಂತರ ಅಪಮಾನವಾಗತೊಡಗಿತು. ಅನೀತಿಗೆ ಉಘೋ ಉಘೋ ಎನ್ನತೊಡಗಿದರು; ಮನುಷ್ಯನ ಬೆಲೆಯು ಕಡಿಮೆಯಾಗಿ ಶ್ರೀಮಂತಿಕೆಯ ಬೆಲೆಯೇ ಹೆಚ್ಚುತ್ತ ನಡೆಯಿತು. ಅಖಿಲ ಕರ್ನಾಟಕದ ರಕ್ತವನ್ನು ಶೋಷಣಮಾಡುವುದಕ್ಕಾಗಿಯೇ ಸಜ್ಜಾಗಿ ಕುಳಿತ ಇಂಗ್ಲಿಷರು, ತಮ್ಮ ಕಾರ್ಯವನ್ನು ಸಾಧಿಸಿಕೊಡುವುದಕ್ಕಾಗಿ ಸಹಸ್ರಾರು ಹಸ್ತಕರನ್ನು ನಿರ್ಮಾಣಮಾಡಿದರು. 'ನೀನು ಸ್ವಲ್ಪು ತೆಗೆದುಕೊಂಡು ಉಳಿದದ್ದನ್ನೆಲ್ಲ ನನಗೆ ಒಪ್ಪಿಸು' ಎಂಬ ವ್ಯವಹಾರದ ತತ್ತ್ವವನ್ನು ಜಾರಿಯಲ್ಲಿ ತಂದದ್ದರಿಂದ, ಬಡವರು, ಶ್ರೀಮಂತರು ಎಂಬ ಎರಡು ವರ್ಗಗಳು ಉಂಟಾದುವು. ಶ್ರೀಮಂತರು ಅತ್ಯಂತ ಶ್ರೀಮಂತರಾದರು; ಬಡವರು ಅತಿ ಕಂಗಾಲರಾದರು. ಶ್ರೀಮಂತರ ಸಂಪತ್ತು ಅನೀತಿಯಿಂದ ಸಂಪಾದಿಸಲ್ಪಡಹತ್ತಿತು. ಸಂಪತ್ತಿನ ಸೊಕ್ಕಿನಲ್ಲಿ ಅವರಿಗೆ ನೀತಿಯ ಮಹತ್ತ್ವವು ಹೇಗೆ ತಿಳಿಯಬೇಕು? ಹೀಗಾಗಿ, ಬಡವರ ಮುಂದೆ ಹೊಟ್ಟೆತುಂಬಿಸಿಕೊಳ್ಳುವುದೇ ಒಂದು ದೊಡ್ಡ ಸಮಸ್ಯೆಯಾಗಿಬಿಟ್ಟಿತು. 'ಬುಭುಕ್ಷಿತಃ ಕಿಂ ನ ಕರೋತಿ ಪಾಪಂ?' ಎಂಬಂತೆ ಹಸಿದು ಕಂಗಾಲರಾದವರು ಯಾವ ಅನೀತಿಗೂ ಹೆದರದಾದರು. ಎರಡು ತುತ್ತು ಅನ್ನಕ್ಕಾಗಿ ನೀತಿಯನ್ನು ಬಿಡುವ ಪ್ರಸಂಗ ಬಂತು. ಸತ್ಯವು ಹೇಳಹೆಸರಿಲ್ಲದೆ ಹಿಂದಕ್ಕೆ ಸರಿಯಿತು. ಬ್ರಹ್ಮಚರ್ಯವು ಕಾಣದಂತಾಯಿತು. ಎರಡನೆಯವರ ಹಿಂಸೆಯನ್ನು ಪ್ರತ್ಯಕ್ಷ ಇಲ್ಲವೆ ಅಪ್ರತ್ಯಕ್ಷ ರೀತಿಯಿಂದ ಮಾಡುವುದು ನಿತ್ಯದ ಮಾತಾಗಿಬಿಟ್ಟಿತು. ಕಳವು-ಹೊಡೆದಾಟಗಳ ಪ್ರಮಾಣವು ಹೆಚ್ಚುತ್ತ ನಡೆಯಿತು. ಅತ್ಯಗತ್ಯವಿದ್ದುದಷ್ಟನ್ನೇ ಹತ್ತಿರ ಇಟ್ಟುಕೊಳ್ಳುತ್ತ ಹೆಚ್ಚಿನ ದ್ರವ್ಯಸಂಚಯ ಮಾಡಬಾರದೆಂಬ ಅಪರಿಗ್ರಹವ್ರತವು ಕನಸಿನೊಳಗಿನ ಸಂಗತಿಯಾಯಿತು. ಇದರ ವಿರುದ್ಧವಾಗಿ ಕಳ್ಳಸೇಟಿ-ಲಂಚಗುಳಿತನಗಳೇ ನಿತ್ಯದ ಮಾತಾಗಿವೆ.

ನೀತಿತತ್ತ್ವದ ಪಾಲನೆಯನ್ನು ನಾವು ಮಾಡದಾದೆವು. ಈ ಘಾತಿಗೆ ಮುಖ್ಯ ಕಾರಣವೆಂದರೆ, ಮನೋನಿಗ್ರಹದ ಅಭಾವವೇ ಸರಿ. ನಮ್ಮ ಮನಸ್ಸಿನ ದಾಸರೇ ನಾವಾದೆವು. ಮನಸ್ಸಿನೊಳಗಿನ ಸ್ವಾರ್ಥವನ್ನು ಬದಿಗೊತ್ತಿ ಜನಹಿತದ ದೃಷ್ಟಿಯಿಂದ ಯೋಗ್ಯವಾದುದನ್ನು ಮಾಡುವುದೇ ನೀತಿಯೆಂದೆನಿಸಿಕೊಳ್ಳುತ್ತದೆ. ಸಾಂಘಿಕ ಸ್ಪರ್ಧೆಗಳಲ್ಲಿ ಮತ್ತು ಪಂದ್ಯಾಟಗಳಲ್ಲಿ ಇಂಥ ನೀತಿಮತ್ತೆಯ ಪ್ರದರ್ಶನಕ್ಕೆ ಮೇಲಿಂದ ಮೇಲೆ ಪ್ರಸಂಗಗಳು ದೊರೆಯುತ್ತವೆ. ತನ್ನ ಪಕ್ಷವು ಜಯಿಸಬೇಕೆಂಬ ಆಶೆ ಮನಸ್ಸಿನಲ್ಲಿ ಪ್ರಬಲವಾಗಿದ್ದರೂ ಸತ್ಯಪಾಲನೆಯನ್ನು ತಾನು ಮಾಡಲೇ ಬೇಕೆಂಬ ಪ್ರವೃತ್ತಿಯು ಆಟಗಾರನಲ್ಲಿ ಜಾಗೃತವಿರುವಂತೆ ಮಾಡುವುದೇ ಶಿಕ್ಷಣವು. ಇಂಥ ಶಿಕ್ಷಣವನ್ನು ಶಾರೀರಿಕ ಶಿಕ್ಷಣಕರ್ತರು ತರುಣರಿಗೆ ಕೊಡುತ್ತ ಹೋದರೆ, ನಮ್ಮ ನಾಡಿನ ನೈತಿಕ ಮಟ್ಟವು ಹೆಚ್ಚುವುದರಲ್ಲಿ ಸಂದೇಹವಿಲ್ಲ. ಬೇರೆ ಬೇರೆ ಶಿಬಿರಗಳಲ್ಲಿ ಚಿಕ್ಕ ಚಿಕ್ಕ ಸಮಾಜಗಳನ್ನು ರಚಿಸುತ್ತ ಅವುಗಳ ಮುಖಾಂತರವಾಗಿ ನೀತಿತತ್ತ್ವದ ಆಚರಣೆಯ ಶಿಕ್ಷಣವನ್ನು ಪ್ರತ್ಯಕ್ಷವಾಗಿ ಕೊಡಲು ನಾವು ಸಮರ್ಥರಾಗುವೆವು.

ಮನಃಸಂಯಮದ ಜೊತೆಗೆ ಸದ್ಭಾವನೆಗಳ ವಿಕಾಸವನ್ನು ಮಾಡಲೂ ನಮಗೆ ಅವಕಾಶ ದೊರೆಯುವುದು. ಇಂಥ ಸದ್ಭಾವನೆಗಳ ವಿಕಾಸಕ್ಕೆ ಶಾರೀರಿಕ ಶಿಕ್ಷಣದಂಥ ಬೇರೆ ಉತ್ಕೃಷ್ಟ ಕ್ಷೇತ್ರವು ದೊರೆಯುವುದು ತೀರ ಕಠಿಣವೇ ಸರಿ.

ಸಾರಾಂಶವೇನೆಂದರೆ, 'ಪಾರತಂತ್ರ್ಯದಿಂದ ನಿರ್ಮಾಣವಾದ ಶಾರೀರಿಕ, ಮಾನಸಿಕ, ಸಾಮಾಜಿಕ ಮತ್ತು ನೈತಿಕ ವಿಕೃತಿಯನ್ನು ಇಲ್ಲದಂತೆ ಮಾಡಿ, ನವರಾಷ್ಟ್ರ ನಿರ್ಮಾಣಕಾರ್ಯವನ್ನು ನಾವು ಸಾಧಿಸುವುದಾದರೆ, ಶಾರೀರಿಕ ಶಿಕ್ಷಣದಷ್ಟು ಪ್ರಭಾವಶಾಲಿಯಾದ ಸಾಧನವು ದೊರೆಯುವುದು ದುಃಸಾಧ್ಯವೇ ಸರಿ.' ಎಂಬೀ ಮಾತನ್ನು ನಮ್ಮ ರಾಷ್ಟ್ರೀಯ ಸರಕಾರವೂ ರಾಷ್ಟ್ರೀಯ ಸಂಸ್ಥೆಗಳೂ ವಿದ್ಯಾಲಯಗಳೂ ವ್ಯಾಯಾಮಶಾಲೆಗಳೂ, ಸ್ವಯಂಸೇವಕ ಸಂಸ್ಥೆಗಳೂ, ಇಷ್ಟೇ ಏಕೆ ಮಾತೃಭೂಮಿಯ ಉದ್ಧಾರವನ್ನು ಮಾಡಬೇಕೆಂದು ಬಯಸುವ ಪ್ರತಿಯೊಬ್ಬ ಸುಪುತ್ರ-ಸುಪುತ್ರಿಯರೂ ಲಕ್ಷ್ಯದಲ್ಲಿಡುವುದು ಆವಶ್ಯಕವಾಗಿದೆ.

“ಇದೀಗ ಉದಯಿಸಿದ ಸ್ವರಾಜ್ಯವೃಕ್ಷದ ಬೇರು ದೃಢವಾಗಬೇಕು. ಅದು ಬೆಳೆಯಬೇಕು, ಅವುಗಳಿಗೆ ಸುಗಂಧದ ಹೂಗಳು ಬಿಡಬೇಕು, ಕೊನೆಯಲ್ಲಿ ಗಿಡದ ತುಂಬಾ ಸವಿಹಣ್ಣುಗಳು ಆಗಬೇಕು ಎಂಬ ಇಚ್ಛೆ ನಮಗುಂಟು. ಈ ಇಚ್ಛೆಯನ್ನು ಕೈಗೂಡಿಸಲು ನೆರವಾಗುವ ಪರಿಣಾಮಕಾರಕ ಗೊಬ್ಬರವಾವುದು? ಅದರ ಹೆಸರು ಹೇಳಿರಿ” ಎಂದು ಯಾರಾದರೂ ನನಗೆ ಕೇಳಿದರೆ 'ನಾನು ನಿಶ್ಚಯವಾಗಿ ಹೀಗೆ ಉತ್ತರ ಕೊಡುವೆನು. 'ಶಾರೀರಿಕ ಶಿಕ್ಷಣವೇ ಆ ಗೊಬ್ಬರವು.'

[ಈ ವಿಷಯದ ಮೊದಲಿನ ಲೇಖಾಂಕವು ನಮ್ಮ ಎಪ್ರಿಲ್ ತಿಂಗಳ ಸಂಚಿಕೆಯಲ್ಲಿ ಅಚ್ಚಾಗಿದೆ. ಈ ಲೇಖನವನ್ನು ಒದಗಿಸಿದ ಶ್ರೀ. ಜಾವಡೆಕರರಿಗೂ, ಅದನ್ನು ಒದಗಿಸಿಕೊಡಲು ಕಾರಣರಾದ ಹುಬ್ಬಳ್ಳಿಯ ನ್ಯೂ ಇಂಗ್ಲಿಷ್ ಸ್ಕೂಲಿನ ಪ್ರಿ. ಕೊಪ್ಪಿಕರರಿಗೂ, ಮರಾಠಿಯಿಂದ ಕನ್ನಡಿಸಿ ಕೊಟ್ಟ ಅದೇ ಶಾಲೆಯ ಶಿಕ್ಷಕರಾದ ಶ್ರೀ. ನರೇಗಲ್ಲರಿಗೂ ನಾವು ವಂದನೆಗಳನ್ನರ್ಪಿಸುತ್ತೇವೆ. ಸಂ. ಜ.]

ಕುಮಟಾದಲ್ಲಿ ನಮ್ಮ ಏಜಂಟರು

ದಿ ಫ್ರೋರವರ್ ಏಜನ್ಸೀಸ್, ನ್ಯೂಜ್ ಏಜಂಟ್ಸ್

ಗುಡಗೇರಿಯಲ್ಲಿ ನಮ್ಮ ಏಜಂಟರು

ಶ್ರೀ. ಡಿ. ಎನ್. ಹುಲಕೋಟಿ, ನ್ಯೂಜ್ ಏಜಂಟ್

ಈ ಮಲ್ಲಿಗೆ! ಈ ಗುಲಾಬಿ! ....

ಶ್ರೀ. ಚೆನ್ನವೀರ ಕಣವಿ, ಎಂ. ಎ. ಧಾರವಾಡ

೧

ಈ ಮಲ್ಲಿಗೆ ಈ ಗುಲಾಬಿ
ಚೆಲುವಿನೆರಡು ಕಣ್ಣು ಗೊಂಬಿ
ರಾಗದಾ ಪರಾಗ ತುಂಬಿ
ಬದುಕು ಬಣ್ಣ ಪಡೆಯಿತೆಂಬಿ —
ನಸುಕು ತುಟಿಯ ತೆರೆದಿದೆ
ಜೀವರಸವನೆರೆದಿದೆ !

೨

ಕಣ್ಣು ಬೆಳಕ ಕಣ್ಣು ಕುಡಿದು
ಹೃದಯದಂತರಾಳಕಿಳಿದು
ಒಲವಿನಗ್ನಿಕುಂಡದಲ್ಲಿ
ಕರಗಿ ಮಿರುಗಿ ಹೊಮ್ಮುತಿಲ್ಲಿ
ಉಷಃಕಾಲದಾರತಿ !
ಚೈತನ್ಯದ ಪ್ರದ್ಯುತಿ !

೩

ಸ್ವರ್ಣ ಕಿರಣದರುಣ ಕಂದ
ಈ ಸುಗಂಧದಲ್ಲಿ ಮಿಂದ !
ಗಾಳಿ ತೀಡೆ ಮಂದ ಮಂದ,
ಆನಂದವೊ ಅನಿರ್ಬಂಧ !
ಹೂವಿನಂತೆ ನುಣ್ಣಗೆ-
ಕಂಡ ಕಣ್ಣು ತಣ್ಣಗೆ.

೪

ಈ ಪ್ರಶಾಂತ ಕಾಲದಲ್ಲಿ
ಮೌನ ವೀಣೆ ಮಿಡಿವುದಿಲ್ಲಿ
ಈ ಮಹಾಂತ ಧಾಮದಲ್ಲಿ
ಸ್ವರ್ಗ ಭಿಕ್ಷೆ ಬೇಡಿತಿಲ್ಲಿ
ಇಲ್ಲಿ ಎಲ್ಲ ಪ್ರೀತವು
ಮಾತು ಕೂಡ ಗೀತವು.

೫

ಮಡಿಯನುಟ್ಟ ಮಲ್ಲಿತೆಲರು
ನೆಲದ ಗಲ್ಲ ಮುಟ್ಟೆ ಹಸುರು
ನಿಮಿರಿ ನಿಂತ ಕಲಾ ಕುಸುರು
ಇಳೆಗಿಳಿದಿರೆ ಬಾನಿನವರು
ಮಂಜು ಹನಿಯ ರೂಪದಿ ?
ಅಪ್ಸರೆಯರು ಶಾಪದಿ !

೬

ಬಂತು ತುಂಬಿ, ಗಾನ ತುಳುಕಿ
ಬಂತು ಚಿಟ್ಟೆ ಬಣ್ಣ ಸೋಕಿ
ಒಂದು ಜೇನ ಹನಿಯ ಹುಡುಕಿ
ಒಂದು ಬಣ್ಣಕಾಗಿ ಬೆದಕಿ
ಭೃಂಗ ಗುಂಗು ಹಿಡಿಸಿತೊ !
ಚಿಟ್ಟೆ ನೃತ್ಯವಾಡಿತು.

೭

ಎಲೆ ಮಲ್ಲಿಗೆ, ಚೆಲು ಗುಲಾಬಿ,
ಬಾರ ಚಿಟ್ಟೆ, ಬಾರ ತುಂಬಿ,
ಮನದ ತುಂಗ ಶೃಂಗದಲ್ಲಿ
ಎನ್ನ ಹೃದಯ ರಂಗದಲ್ಲಿ
ದ್ವೈತವಿರದ ಕೂಟದಲ್ಲಿ
ಸದಾನಂದದೂಟೆಯಲ್ಲಿ
ಹಾಡಿ ನೃತ್ಯವಾಡಿರೇ
ಚಿರಂಜೀವಿಯಾಗಿರಿ !

ವಿಜ್ಞಾನಿಗೆ

ಶ್ರೀ ಬಾಳು ಬಿ. ಉಪಾಧ್ಯೆ ಶಮನೆವಾಡಿ

卐

ಓ ! ವಿಜ್ಞಾನಿ !!
ಆಕಾಶದಲಿ ಹಾರಿ
ಅಸುರಚೇಷ್ಟೆಯ ತೋರಿ
ಸೂರ್ಯ-ಚಂದ್ರರ ಸೇರಿ
ಅಣುಶಕ್ತಿಯನು ಹುಡುಕಿ
ಅಸುರ ವೃತ್ತಿಗೆ ತೊಡಕಿ
ಅಸುವ ಹೀರುವ ನಿನ್ನ ಯುಕ್ತಿ !
ಅಂತರಾತ್ಮನ ಶಕ್ತಿ
ಅಣುವಿಗೂ ಮೇಲ್ ಪಂಕ್ತಿ !
ಅಡಗಿ ಹೋಯಿತೆ ಭಕ್ತಿ !!
ಒಂದೊಂದು ಶೋಧದಲಿ
ಹನ್ನೊಂದು ರೋಗಗಳು ಅಲ್ಲಿ !
ಛಿನ್ನವಾಗುತಿದೆ ಆಶಾ-ಅನ್ನ
ಅನ್ನವೆನ್ನುತಿದೆ ದೇಶ !
ನಿಲ್ಲಿಸು ! ನಿಲ್ಲಿಸು !!
ನಿನ್ನ ಅಸುರಾಟ !!!
ಎಲ್ಲವನು ತನ್ನಂಕಿತದಲಿಟ್ಟು
ಎಲ್ಲರನು ನಿನ್ನೆಡೆಗೆ ಎಳೆದಿಟ್ಟು
ಎಲ್ಲಿ ಸಾಗಿರುವೆ ವಿಜ್ಞಾನಿ ?
ಏನು ಹುಡುಕಿದರೂ
ನೀನು ದುಡುಕಿದರೂ
ಸಿಗಲಾರದ ನೆಲೆ !
ಯಾವ ಶೋಧದಲಿ ನೀನು ?
ಎಲ್ಲದರಲಿ ಕೊಲೆ !!
ನಿನ್ನನ್ನೇ ಕೊಲ್ಲುವುದಲೆ ! ವಿಜ್ಞಾನಿ !!
ಬಿಡು ನಿನ್ನ ಬಿಂಕ
ಇಡು ವಿಜ್ಞಾನಕ್ಕೆ ಸುಂಕ !
ಜ್ಞಾನಚಕ್ಷುವನು ತೆರೆದು
ವಿಜ್ಞಾನವನು ಬಿಸುಟೊಗೆದು
ಅಂತರಾತ್ಮನನು ನೋಡು
ಅದಕೆ ಚೇತನೆ ಕೊಡು !
ಚಿತ್‌ಪ್ರಭೆಯನು ಕಂಡು
ಚಿದಾನಂದನನು ಕೂಡು !!

ತಿರುಗಿ ತಿರುಪೆಗೆ

(ಒಂದು ಕಥೆ)

ಶ್ರೀ. ದೊಡ್ಡಮನೆ ಸೀತಾರಾಮು, ಚಿತ್ರದುರ್ಗ

★

...ೂರು ವರ್ಷದ ಮಗುವಾಗಿದ್ದಾಗಲೇ ಮಾಲಳನ್ನು ...ಬೂಜಿ ಸ್ವೀಕರಿಸಿದ. ಅಚ್ಚುಮೆಚ್ಚಾಗಿ ಬೆಳೆಸಿ ...ಯದ ಹೆಂಗುಸನ್ನಾಗಿ ಮಾಡಿದ. ಮನಸ್ಸಿನ ಧರ್ಮ ವಿಚಿತ್ರ. ಬಾಬೂಜಿ ಮಾಲಳನ್ನು ಅಗಲಿ ಹೊರಟುಬಿಟ್ಟ!

★

"Those that live single, take it for a curse, or do ...ings worse."

— Lord Bacon

೧

ಮಾಲಾ ಒಂದೇ ಸಮನಾಗಿ ಕಣ್ಣೀರುಗರೆಯುತ್ತಿದ್ದಳು. ಎಷ್ಟು ...ತ್ತರೂ ಅವಳ ಶೋಕಧಗ್ದ ಹೃದಯಕ್ಕೆ ಸಮಾಧಾನವಿರಲಿಲ್ಲ. ...ನೆಯಲ್ಲಿ ಯಾರೂ ಇರಲಿಲ್ಲ. ಸುತ್ತಲೂ ನೀರವತೆ ಮನೆ ...ಡಿತ್ತು. ಹೃದಯದ ಶೋಕಾಗ್ನಿಗೆ ಆಜ್ಯಹಾಕಿ ಉರಿಯನ್ನು ...ಳಿಸುವ ನೀರವತೆ ಸುತ್ತಲೂ ನೆಲೆಮಾಡಿತ್ತು. ಅಶ್ರುಪ್ರವಾ...ಕ್ಕೆ ಅಣೆಕಟ್ಟೇ ಇರಲಿಲ್ಲ. ಹೃದಯಬಾನಿನಲ್ಲಿ ನೆನಪಿನ ಬಿರುಗಾಳಿ ...ೀಕದ ಮೋಡಗಳನ್ನು ತಂದೊಟ್ಟುತ್ತಿದ್ದಾಗ, ಮೂರುದಿನಗಳ ...ದೆ ನಡೆದುದನ್ನು ನೆನಪಿಸಿಕೊಂಡೊಡನೆ, ಮಾಲಾ ಕಂಪಿಸುವಳು, ...ಸುವಳು; ನರಕದರ್ಶನವಾದಂತಾಗುವುದು ಮಾಲಳಿಗೆ. ಇದ್ದ...ದ್ದಂತೆಯೆ ನೆಲದಮೇಲೆ ಕುಸಿದು ಹೊರಳಾಡಿ, ಬಸಿರನ್ನು ಕಿವುಚಿ ...ಕ್ಕಿಸಿ ಬಿಕ್ಕಿಸಿ ಅಳುವಳು. ಕಗ್ಗತ್ತಲಿನಲ್ಲಿ ಭೂತವನ್ನು ನೋಡಿ...ದಂತೆ ಒಮ್ಮೊಮ್ಮೆ ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿ...ಕೊಳ್ಳುವಳು. ಮಾಲಾ ಒಂದೇಸಮನಾಗಿ ಕಣ್ಣೀರುಗರೆಯು...ತ್ತಿದ್ದಳು. ಎಷ್ಟು ಅತ್ತರೂ ಸಮಾಧಾನವಿರಲಿಲ್ಲ.

...ಶೋಕದ ತೆರೆಯನ್ನು ಹೊದ್ದುಕೊಂಡಿದ್ದ ನೀರವತೆಯನ್ನು ...ದಿಸಿ ಬಾಗಿಲು 'ಕಿರ್' ಎಂದಿತು. ನಾರಾಯಣ ಜೋಯಿಸರು ...ಕ್ಕೆ ಕಾಲಿಟ್ಟರು.

"ಮಾಲಾ!"

ಮಾಲಾ ಉತ್ತರಿಸಲಿಲ್ಲ. ಕತ್ತನ್ನು ಮೇಲಕ್ಕೆತ್ತಿ ಮಂಜುಗಣ್ಣಿ...ದ ಜೋಯಿಸರನ್ನು ನೋಡಿದಳು :

"ಹುಂ! ಸುಮ್ಮನೆ ಅತ್ತರೆ ಏನು ಬಂತು ಮಾಲಾ?!"

ತನ್ನ ಅಸಹಾಯಕ ಪರಿಸ್ಥಿತಿಯನ್ನು ಹೇಳುವಂತೆ ಮತ್ತೊಮ್ಮೆ ನೋಡಿದಳು ಮಾಲಾ.

"ಇಲ್ಲಿ ನೋಡು, ಮಾಲಾ!"

ಮಾಲಾ 'ಛಿಟಾರ'ನೆ ಚೀರಿದಳು. ಅವನೂ ಅದೇ ಮಾತನ್ನು ಮೊದಲು ಹೇಳಿದುದು.

"ಮಾಲಾ!" ಜೋಯಿಸರು ಹತ್ತಿರ ಬಂದರು. ಹುರುಕು ಗಡ್ಡವನ್ನು ಮಾಲಳ ಮೃದುಕೆನ್ನೆಯ ಬಳಿ ತಂದು, ರಮಿಸ-ಹೋದರು. ಮಾಲಾ ಎಲ್ಲ ಶಕ್ತಿಯನ್ನು ಒಟ್ಟುಗೂಡಿಸಿ, ಜೋಯಿಸರನ್ನು ದೂಡಿದಳು. ಪೆಚ್ಚುಮೋರೆ ಹಾಕಿಕೊಂಡು, ಒಂದು ನಿಮಿಷ ಜೋಯಿಸರು ನಿಂತರು.

"ಸಾಕಿಕೊಂಡವನು ಕೈಬಿಟ್ಟುಹೋದ. ನಾನು ಹೇಳಿದ ಹಾಗೆ ಕೇಳಿಕೊಂಡು ಇರುತ್ತೀಯೆ ಎಂದು ತಿಳಿದಿದ್ದೆ. ಗಂಡಿನಾಸರೆಯಿಲ್ಲದೆ ಈ ಪೋಲಿ ಊರಲ್ಲಿ ಹೇಗೆ ಬಾಳುತ್ತೀಯೆ?"

"ನಾನೇನು ಸೂಳೆಯಲ್ಲ!" ಮಾಲಾ ದಿಟ್ಟತನದಿಂದ ಉತ್ತರಿಸಿದಳು.

"ಸೂಳೆಯಲ್ಲ, ನನ್ನ ರತಿ!"

"ಥೂ! ನಾಚಿಕೆಯಿಲ್ಲ, ನಾಕು ಮಕ್ಕಳ ತಂದೆಯಾಗಿ!" ಮಾಲಾ ಮಡಿಗೋಲನ್ನು ಕೈಗೆ ತೆಗೆದುಕೊಂಡಳು. ಜೋಯಿಸರು ಬೇಗ ಹೊರಕ್ಕೆ ಹೊರಟುಹೋದರು.

ಮಾಲಾ ಮತ್ತೆ ಒಂದೇ ಸಮನಾಗಿ ಕಣ್ಣೀರ್ಗರೆಯಲಾರಂಭಿಸಿದಳು.

"ಇಲ್ಲಿ ನೋಡು, ಮಾಲಾ!"

ಅವನೂ ಅದೇ ಮಾತನ್ನು ಹೇಳಿದುದು ಮೊದಲು.

ನೆನಪಿನ ಬಿರುಗಾಳಿ ಬೀಸಿತು ಮತ್ತೊಮ್ಮೆ....

ಅವನನ್ನು ಕಾಣದವರಾರೂ ಇಲ್ಲ ಆ ಊರಿನಲ್ಲಿ. ಹದಿನೈದು ವರ್ಷಗಳ ಹಿಂದೆ, ಐದುವರ್ಷದ ಮಾಲಳೊಡನೆ ಬಂದು ನೆಲಸಿದ್ದ ಅವನು. ಮಾಲಾ ಅವನನ್ನು 'ಬಾಬೂಜಿ' ಎಂದು ಕರೆಯುತ್ತಿದ್ದುದರಿಂದ, ಅವನು ಊರಿನವರಿಗೆಲ್ಲ 'ಬಾಬೂಜಿ' ಆಗಿದ್ದ.

ಬಾಬುಜಿ ಬಂದ ಹದಿನೈದು ವರ್ಷಗಳಿಂದ ಯಾರೊಡನೆಯೂ ಸ್ನೇಹ ಬೆಳೆಸಿರಲಿಲ್ಲ. ಸಾಧಾರಣವಾಗಿ ಬಡತನ ಒಬ್ಬನನ್ನು, ಸಂಗಪರಿತ್ಯಾಗಮಾಡಿ ಒಂಟಿಯಾಗಿ ಬಾಳುವಂತೆ ಪ್ರೇರೇಪಿಸುತ್ತದೆ. ಆದರೆ ಬಾಬೂಜಿ ಬಡತನದಿಂದ ತೊಳಲುವವನಂತೆ ಕಾಣುತ್ತಿರಲಿಲ್ಲ. ಪ್ರತಿತಿಂಗಳೂ ಅವನಿಗಾಗಿ ಇನ್ನೂರು ರೂಪಾಯಿ ಅವನ ಸ್ವಂತ ಊರಿನಿಂದ ಬರುತ್ತಿತ್ತು. ಅವನ ಸ್ವಂತ ಊರು ಯಾವುದೆಂಬುದು ಆ ಊರಿನವರಿಗಾರಿಗೂ ತಿಳಿದಿರಲಿಲ್ಲ; ಅವನೇಕೆ ಆ ಊರಿಗೆ ಬಂದನೆಂಬುದೂ ತಿಳಿದಿರಲಿಲ್ಲ. ಈಗಲೂ ಆ ಊರಿನವರು ಬಾಬೂಜಿಯನ್ನು ಒಂದು ತರದ ವಿಚಿತ್ರ ಮನುಷ್ಯನೆನ್ನುತ್ತಾರೆ.

ಒಬ್ಬ ಸೂಕ್ಷ್ಮಮತಿ, ತನ್ನ ಸಂಗಾತಿಗಳು ತನ್ನ ಸರಿಸಮಾನರಲ್ಲವೆಂಬುದನ್ನರಿತು ಒಂಟಿಯಾಗಿರಲು ಯತ್ನಿಸುತ್ತಾನೆ. ಆ ಕೂಡಲೆ

ಪ್ರಪಂಚ ಅವನನ್ನು ಮರೆತಂತೆ ಅವನಿಗೆ ತೋರುತ್ತದೆ. ಆದರೆ ಬಾಬೂಜಿ ಊರಿಗೆಬಂದಾಗಿನಿಂದಲೂ ಒಬ್ಬೊಂಟಿಗನಾಗಿಯೇ ಇದ್ದನು. ಆ ಊರಿನವರಾರೂ ಅವನನ್ನು ಗಣನೆಗೆ ತಂದುಕೊಂಡಿರಲಿಲ್ಲ. ಆ ಊರಿಗೆ ಬಂದಾಗ ಬಾಬೂಜಿಗೆ ಸುಮಾರು ಮೂವತ್ತು, ಅಥವಾ ಮೂವತ್ತೆರಡು ವರ್ಷಗಳೇನೊ! ಅವನ ಸುಕ್ಕುಗಟ್ಟಿದ, ಬಿಳುಚಿಕೊಂಡ ಕಾಂತಿಹೀನ ಮೊಗ, ಒಳಕ್ಕೆ ಹುದುಗಿಹೋದ ಚಿಕ್ಕ ಕಣ್ಣುಗಳು, ಅರೆನರೆತ ಕೂದಲನ್ನು ನೋಡಿದ ಯಾರಾದರೂ, ಅವನಿಗಾಗಲೆ ನಲವತ್ತು ವರುಷ ಸಂದಿದೆಯೆಂದು ಧಾರಾಳವಾಗಿ ಹೇಳುತ್ತಿದ್ದರು. ಬೆಳಗಾಗುತ್ತಲೆ ಮಲ್ಲಿನ ಪಂಚೆಯುಟ್ಟು, ಉತ್ತರೀಯ ಹೊದೆದು, ಅರ್ಧಗಂಟೆಗೊಂದು ಸಿಗರೇಟು ಸೇದಿ ಚಿಟಿಕೆ ಹೊಡೆಯುತ್ತ, ಊರಿನ ಕಾಲುವೆಯ ದಡದಲ್ಲಿ ತಿರುಗಾಡುವ. ತಿರುಗಾಡುತ್ತ ನಿಮಿಷಕ್ಕೊಂದು ಬಾರಿ ಕತ್ತು ಹಾಕುವ ತೆಳ್ಳನೆಯ ವ್ಯಕ್ತಿ ಬಾಬೂಜಿ. ತಿರುಗಾಡುವುದು ಬೇಸರವಾದರೆ ಬಾಬೂಜಿ ಪುಸ್ತಕ ಭಂಡಾರಕ್ಕೆ ಹೋಗಿ ಪುಸ್ತಕ ಓದುತ್ತಿದ್ದ; ಯಾವುದೋ ಚರಿತ್ರೆಯಲ್ಲಿನ ಸಾಲುಗಳನ್ನು ಗುರುತು ಹಾಕಿಕೊಳ್ಳುತ್ತಿದ್ದ. ಪುಸ್ತಕಭಂಡಾರದ ಗುಮಾಸ್ತರೊಮ್ಮೆ 'ಅವರು ವಿಪರೀತ ಓದಿದ್ದಾರೆ. ಓದಿಓದಿ ಒಂದು ತರಹೆ ಆಗಿ ಬಿಟ್ಟಿದೆ ಅವರ ಮನಸ್ಸು. ಸೊಗಸಾಗಿ ಕಥೆ-ಕವನಗಳನ್ನು ಬರೆಯುತ್ತಾರೆ. ಬರೆದುದನ್ನು ಪ್ರಕಟಿಸುವ ಇಚ್ಛೆಯಿಲ್ಲ' ಎಂದು ಹೇಳಿದುದು ಜ್ಞಾಪಕ. ನನ್ನ ಅನುಭವದ ಮೇಲೆ ಹೇಳುವುದಾದರೆ, ಅವನಿಗೆ ಕವಿಯ ಮನಸ್ಸಿದ್ದಿತು; ನನಗೆ ಬಾಬೂಜಿ ಭಾವುಕನಂತೆ ಕಾಣುತ್ತಿದ್ದ. ನಾನು ಹಲವು ಬಾರಿ-ಏಕೆ ಪ್ರತಿದಿನವೂ- ನಮ್ಮೂರ ಕಾಲುವೆಯ ದಿಬ್ಬವೇರಿ, ರವಿ ಪಶ್ಚಿಮ ಸಾಗರದಲ್ಲಿ ರಕ್ತೋಜ್ವಲಿತನಾಗಿ, ಕೆಂಗಾಂತಿಯನ್ನೊಕ್ಕುತ್ತ ಮುಳುಗುವುದನ್ನು ಪರವಶನಾದವನಂತೆ ಬಾಬೂಜಿ ನಿಟ್ಟಿಸುತ್ತಿದ್ದುದನ್ನು ನೋಡಿದ್ದೆ. ಬಾಬೂಜಿ ರಾತ್ರಿ ಎಂಟು ಘಂಟೆಯವರೆಗೂ ಊರ ಹೊರಗಡೆ, ಹೊಲ-ತೋಟಗಳಲ್ಲಿ ಸುತ್ತಿಬರುತ್ತಿದ್ದುದನ್ನು ನಾನು ಅನೇಕ ಬಾರಿ ನೋಡಿದ್ದೆ. ಒಂದೆರಡು ಬಾರಿ ಮಾತ್ರ ಅವರು ಸಣ್ಣಮಕ್ಕಳನ್ನೆತ್ತಿಕೊಂಡು ಮುದ್ದಾಡಿದುದನ್ನು, ಒಬ್ಬೊಂಟಿಗರಾಗಿ, ಆಕಾಶದನ್ನೇ ದಿಟ್ಟಿಸುತ್ತ, ಮೋಡಗಳು ಚಲಿಸಿದಂತೆ ದೃಷ್ಟಿಯನ್ನು ಚಲಿಸುತ್ತ ದುಃಖಿತನಂತೆ ಕಾಲುವೆಯ ಕೆರೆಯಲ್ಲಿ ಕುಳ್ಳಿರುತ್ತಿದ್ದುದನ್ನು ನಾನು ನೋಡಿದ್ದೆ. ದಾರಿಯಲ್ಲಿ ಎಂತಹ ಗಾಡಿಕಾತಿ ಬರಲಿ, ಬಾಬೂಜಿ ಕತ್ತೆತ್ತಿ ಅವಳತ್ತ ದಿಟ್ಟಿಸುತ್ತಿರಲಿಲ್ಲ. ಆದರೂ ಒಮ್ಮೊಮ್ಮೆ ಸೋತವನಂತೆ ಸುತ್ತ ತಿರುಗಿನೋಡಿ, ಯಾರೂ ಪರಿಚಿತರಿಲ್ಲವೆಂಬುದನ್ನು ಮನಗಂಡು, ಹಾದುಹೋಗುವ ಯುವತಿಯನ್ನು ಸೌಂದರ್ಯ ಆರಾಧಕನಂತೆ ನೋಡುವುದನ್ನೂ ನಾನು ಹೊಂಚುಹಾಕಿ ನೋಡಿದ್ದೆ.

ಬಾಬೂಜಿ ಮಾಲಾ ದೊಡ್ಡವಳಾಗುವವರೆಗೂ ಒಬ್ಬ ಸೇವಕನನ್ನಿಟ್ಟುಕೊಂಡಿದ್ದರು. ಕಡೆಯವರೆಗೂ ಇಬ್ಬರೇ ವಾಸಿಸಿದರು ಆ ಮನೆಯಲ್ಲಿ, ಆಮೇಲೆ.

ಒಮ್ಮೊಮ್ಮೆ ಬಾಬೂಜಿ, ಜೀವನದಲ್ಲಿ ವಿಧಿಯೆಣೆಸಿದ ನಿರಾಶೆಯನ್ನುಂಡು ಬೇಸತ್ತ ನೀರಸಿಯಂತೆ ಕಾಣುತ್ತಿದ್ದ. ಅಂತೂ ಅವನೊಬ್ಬ ವಿಚಿತ್ರ ವ್ಯಕ್ತಿ.

ಅಂದು ಬಾಬೂಜಿ ಎಂದಿನಂತೆ ಉತ್ತರೀಯ ಹೊದೆದು, ಸಿಗರೇಟು ಸೇದುತ್ತ, ನಿಮಿಷಕ್ಕೊಂದು ಬಾರಿ ಕತ್ತು ಹಾಕುತ್ತ, ಕಾಲುವೆಯ ಕರೆಯಲ್ಲಿ ನಡೆದಿದ್ದನು. ಕಣ್ಣಿನ ದೃಷ್ಟಿ ಯಾವುದನ್ನೋ ಬಯಸಿ ಸುತ್ತ ಅರಸಿ ನೋಡಿತು. ತೀರದ ಹಸಿವು ಕಣ್ಣಿನಲ್ಲಿ ಹೊಕ್ಕು ನೋಡಿತು ಸುತ್ತ ಅರಸಿ.

ಅಂದು ಗಂಗಾಪೂಜೆ. ಊರಿನ ಹೆಂಗಳೆಯರೆಲ್ಲರೂ ಒನಪು ವೈಯಾರ ಬೀರುತ್ತ ಗಂಗಾಪೂಜೆಯ ಹೆಸರಿನಲ್ಲಿ 'ಚೆನ್ನೆಯರು, ಕನ್ನೆಯರು, ಗಾಡಿಕಾತಿ'ಯರಾಗಿ ಸೌಂದರ್ಯಪ್ರದರ್ಶನ ಮಾಡುತ್ತ ಕಾಲುವೆಯ ಬಳಿ ನೆರೆದಿದ್ದರು. ತೀರದ ಬಯಕೆ ಮತ್ತೊಮ್ಮೆ ಮೈಯನ್ನಾವರಿಸಿ, ಬಾಬೂಜಿಯ ಕಣ್ಣಿನಲ್ಲಿ ಹೊಕ್ಕು ನೋಡಿತು ಸುತ್ತ ಅರಸಿ.

ಬಾಬೂಜಿ ಗಾಳಿಯಲ್ಲಿ, ಎಳೆಯೆಳೆಯಾಗಿ ಹರಿದು, ಲೀನವಾಗುತ್ತಿದ್ದ ಧೂಮದ ತೆರೆಯ ಮೇಲೆ ಚಿತ್ರಿಸಿಕೊಂಡ; ನೆನಪು ನೆರವಾಯಿತು. ಆ ವಿಶಾಲವಾದ ನೀಲಿಯ ಕಣ್ಣು-ಕಣ್ಣನ್ನು ಸೆಳೆಯುವ ಮಿಂಚುಗಣ್ಣು; ಸೆಳೆದು ಮನಸ್ಸನ್ನು ಸೆರೆಹಿಡಿದು ಮಾಟಗೈವ ಮಿಂಚುಗಣ್ಣಿಗಾಗಿ ಅರಸಿದ. ಅರಸಿ ನಿರಾಶನಾದ ಬಾಬೂಜಿ. ಹಿಂದಿನ ಸುಖ ಯಾವುದೋ ನೆನಪಿಗೆ ಬಂದು ಕಣ್ಣಿನಲ್ಲಿ ನೀರೂರಿಸಿತು. ಬಾಬೂಜಿ ಮತ್ತೊಮ್ಮೆ ಅರಸಿದ: ಅದೋ ಎರಡು ನೀಳವಾದ ಜಡೆಯನ್ನು ತೂಗಿ ಬಿಟ್ಟುಕೊಂಡು ನಡೆಯುತ್ತಿರುವಳು ವೈಯ್ಯಾರಿ— ಅವಳ ಕಣ್ಣು. ಥೂ! ಮೆಳ್ಳೆಗಣ್ಣು!

ಬಾಬೂಜಿ ನಿಟ್ಟುಸಿರು ಬಿಟ್ಟ. ತೀರದ ಬಯಕೆಯ ಜ್ವಾಲೆ ಮೈಯನ್ನಾವರಿಸಿ ದಹಿಸತೊಡಗಿತು.

'ಅದೊ! ದೂರದಲ್ಲಿ. ಒಬ್ಬರ ನಡುವೆ ಮತ್ತೊಬ್ಬರ ಕೈ ಬಳಸಿದೆ. ಹರಟೆ ಕೊಚ್ಚುತ್ತ ಗಂಡ-ಹೆಂಡತಿ ಎಂತು ಸಾಗಿದ್ದಾರೆ! ಓ! ಏನು ಸುಖ, ಆನಂದ ಅವರದು! ಅದೋ! ಆಕೆಯ ಕಣ್ಣು; ಹೌದು! ಅದೇ ನೀಲಿಯ ಕಣ್ಣು. ಆದರೆ, ಅದೇ ಕಣ್ಣಲ್ಲ; ಆ ನಿಷ್ಕಳಂಕ, ಮುಗುವಿನ ಕಂಗಳ ಕಾಂತಿಯನ್ನು ಸೂಸುವ ಮಿಂಚುಗಣ್ಣಲ್ಲ. ಅಂತೆ ಇದೆ. ಅದೇ ಏನು ನೋಡೋಣ!— ಬಾಬೂಜಿಯ ಮನಸ್ಸು ಆಲೋಚಿಸಿತು.

"ಏನ್ರೀ, ಬಹಳ ಸಭ್ಯಸ್ತರಂತೆ ಕಾಣುತ್ತೀರಿ!" ಗಂಡ ಎಚ್ಚರಿಸಿದ.

"ಸ್ವಲ್ಪ ದೂರ ನಡೆದು ಹೋಗುವುದಕ್ಕೆ ಏನೋ?" ಹೆಂಡತಿ ವೈಯಾರದಿಂದ ಆಡಿದಳು ಕಡೆಗಣ್ಣಿನಿಂದ ನೋಡುತ್ತ.

ಬಾಬೂಜಿ ಅತ್ತ ಸರಿದು ಹೋದ.

"ಥೂ! ಆರೀತಿ ಹತ್ತಿರ ಸರಿದು ನೋಡಬಾರದಿತ್ತು" ಎಂದಿತು ಅವನ ಮನಸ್ಸು.

ಮತ್ತೊಮ್ಮೆ ತೀರದ ಹಸಿವು ಕಣ್ಣಿಗಾಗಿ ಅರಸಿತು.

"ಇದ್ಯಾವುದೋ ಮಂಕು! ಎಂದೂ ಹೆಣ್ಣನ್ನೆ ಕಂಡಿರಲಿಲ್ಲವೇನೊ ಅನ್ನುವ ಹಾಗೆ ನೋಡುತ್ತೆ!"

ಬಾಬೂಜಿಯ ಹೃದಯಕ್ಕೆ! ಛಾಟಿಯ ಏಟು ಬಿದ್ದಂತಾಯಿತು.

ಸ್ವಲ್ಪ ದೂರ ಬಾಬೂಜಿ ಕತ್ತುತಗ್ಗಿಸಿ ನಡೆದ.

" ಹೇಗೆ ನೋಡುತ್ತಾನೆ ನೋಡು ; ಒಳ್ಳೆ ತಿನ್ನುವವನ ಹಾಗೆ ! "

" ಒಳ್ಳೇ ಮಿಕ ನೋಡಿದ ಹಾಗೆ ! "

' ಖೊಳ್ ' ಎಂದು ನಕ್ಕರು ಹೆಂಗೆಳೆಯರೆಲ್ಲರು.

ಮತ್ತೊಂದು ಬಾರಿ ಕಾದ ಕಬ್ಬಿಣದ ಅಲಗು ಅವನ ಹೃದಯವನ್ನು ಚುಚ್ಚಿತು.

" ಇಲ್ಲ, ಅರಸು. ಆ ನೀಲಿಯ ಸುಂದರ ಕಣ್ಣಿಗಾಗಿ ಅರಸು !" ಪ್ರಚಂಡ ಕೂಗುಹಾಕಿತು ತೀರದ ಬಯಕೆ, ಹಸಿದ ಹುಲಿಯ ಗರ್ಜನೆಯಂತೆ.

ಬಾಬೂಜಿ ಕಾಲುವೆಯನ್ನು ಎರಡುಬಾರಿ ಸುತ್ತಿದರೂ 'ಆ ನೀಲಿಯ ಮುಗ್ಧ ಕಣ್ಣು ದೊರೆಯಲಿಲ್ಲ. ಬಾಬೂಜಿ ಮರಳ ಮೇಲೆ ಬೆರಳಾಡಿಸುತ್ತ ಕುಳಿತ. ಅಂದು ಕಂಡು ನಗೆ ತೋರಿ ಆಶೆಯನ್ನು ಬಗೆದು ಇಂದು ಇಲ್ಲವಾದ, ದೂರವಾದ ಆ ನೀಲಿಯ ಮುಗ್ಧ ಕಣ್ಣುಗಳನ್ನು ಬರೆಯುತ್ತ ಕುಳಿತ. ಎಷ್ಟು ಹೊತ್ತು ಕುಳಿತಿದ್ದನೊ ! ನೀಲಿಯ ಮುಗ್ಧ ಕಣ್ಣು ಹುಚ್ಚು ಹಿಡಿಸಿಬಿಟ್ಟಿತ್ತು. ಅವನ ಕಣ್ಣು ಕುಡಿಯಲ್ಲಿ ನೀರು ಶೇಖರವಾಗಿತ್ತು. ನೀಲಿಯ ಕಣ್ಣುಗಳನ್ನು ತನ್ನದು ಮಾಡಿಕೊಳ್ಳಲೇ ಬೇಕೆಂಬ, ಅದರ ಸೌಂದರ್ಯವನ್ನೀಂಟಬೇಕೆಂಬ ಬಯಕೆ ಬೃಹದಾಕಾರ ತಾಳಿ, ಮನಸ್ಸಿನ ಕೋಟೆಯನ್ನು ಮುತ್ತಿತ್ತು. ಆ ಕಣ್ಣುಗಳನ್ನೇ ನೆನೆಯುತ್ತ ಬಾಬೂಜಿ ಮನೆಗೆ ನಿಧಾನವಾಗಿ— ಸಿಗರೇಟು ಸೇದುತ್ತ— ಬಂದಾಗ, ರಾತ್ರಿ ಹತ್ತು ಗಂಟೆಯಾಗಿತ್ತು.

ಬಾಬೂಜಿ ಬಾಗಿಲನ್ನು ನೂಕಿ ಒಳಗೆ ಕಾಲಿಟ್ಟ. ಮಾಲಾ ಗೋಡೆಗೆ ಒರಗಿಕೊಂಡು ಕುಳಿತಿದ್ದಳು.

ಬಾಬೂಜಿ ನೋಡಿದ. ಎಷ್ಟು ನೋಡಿದರೂ ತೃಪ್ತಿಯಾಗಲಿಲ್ಲ: ಅದೇ ಕಣ್ಣು ! ಅದೇ ನೀಲಿಯ, ನಿಷ್ಕಳಂಕ, ಮುಗ್ಧ, ಸುವಿಶಾಲ ಕಣ್ಣು. ಏನು ಮನೋಹರ ! ಒತ್ತಾಗಿ ಬೆಳೆದಿದ್ದ ರೆಪ್ಪೆಗೂದಲಿನ ನೀಲಿಯ ಛಾಯೆಯ ಮೋಗಡೆ, ಕಣ್ಣನ್ನು, ಮನವನ್ನು ಸೆಳೆಯುತ್ತಿತ್ತು ಸ್ಫಟಿಕದಂತಹ ಮಿಂಚುಗಣ್ಣು. ಆ ಮಿಂಚುಗಣ್ಣುಗಳ ಮೇಲೆ, ಅದೇ, ಗೆರೆಕೊರೆದಂತಹ, ಬಾಗಿದ ಹುಬ್ಬು, ಕಣ್ಣಿಗೆ ಹೊಂದುವ ಅದೇ ಅಂಗಸೌಷ್ಠವ.

ಬಾಬೂಜಿಯ ಆನಂದ ವರ್ಣಿಸಲಸದಳ. ಕಡುಬಡವನಿಗೆ ಚಿನ್ನದ ಖನಿ ದೊರಕಿದಂತಾಗಿತ್ತು; ರೋಗಿಗೆ ಅಮೃತ ದೊರಕಿದಂತಾಗಿತ್ತು; ಕಡುಕಾಮಿಗೆ ರಂಭೆ ದೊರಕಿದಂತಾಗಿತ್ತು. ಬಾಯಿತೆರೆದು ಒಂದೇ ಸಮನೆ ದಿಟ್ಟಿಸಿ ನೋಡಿದ ಬಾಬೂಜಿ.

" ಬಾಬೂಜಿ ! " ಮೆಲ್ಲನೆದ್ದಳು ಮಾಲಾ.

ಅವಳ ಕಣ್ಣಿನ ನಿಡಿದಾದ ರೆಪ್ಪೆ, ಬಾಬುಜಿಯ ಮನವನ್ನು ಸೂರೆಗೊಂಡು ಮಿಡಿಯಿತು.

" ಮಾಲಾ, ಇಲ್ಲಿ ನೋಡು, ಮಾಲಾ ! "

ಬಾಬೂಜಿ ಮಾಲಳನ್ನು ಬಿಗಿದಪ್ಪಿದ. ಅವಳ ಕಣ್ಣಮೇಲೆ, ತುಟಿಯಮೇಲೆ ಮುತ್ತಿನ ಮಳೆಗರೆದ—ಚೆಲ್ಲಿಕವಿ ಬಯಸಿದಂತೆ.

ಅವನ ತೋಳ ಬಂಧನ ಬಿಗಿಯಾಯಿತು.

ಮಾಲಾ ' ಛಿಟಾರ್ 'ನೆ ಚೀರಿದಳು. ಅವಳ ಮೈ ನಡುಗಿತು, ಸ್ವಪ್ನದಲ್ಲಿ ಪಿಶಾಚಿಯನ್ನು ಕಂಡವಳಂತೆ. ಅವಳಿಗಾವುದೋ ಹೊಸ ಅನುಭವವಾಯಿತು ಅವನ ಬಂಧನದಲ್ಲಿ; ಅವಳು ಸಹಿಸಲಾರದ ಹೊಸ ಅನುಭವ.

ಮಾಲಾ ತನ್ನ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ, ಬಾಬೂಜಿಯನ್ನು ದೂಕಿದಳು. ಬಾಬೂಜಿ ಸ್ವಲ್ಪ ಹೊತ್ತು ಪೆಚ್ಚುಮೋರೆ ಹಾಕಿಕೊಂಡು ನಿಂತಿದ್ದ. ಮಾಲಾ ಕೋಣೆಗೆ ಓಡಿ ಹೋಗಿ ಬಾಗಿಲು ಮುಚ್ಚಿಕೊಂಡು ಬಿಕ್ಕಿಸಲಾರಂಭಿಸಿದಳು.

ಒಂದೇ ಸಮನಾಗಿ ಕಣ್ಣೀರುಗರೆದಳು. ಎಷ್ಟು ಅತ್ತರೂ ಅವಳ ಶೋಕದಗ್ಧ ಹೃದಯಕ್ಕೆ ಸಮಾಧಾನವಿರಲಿಲ್ಲ.

' ತಂದೆಯೆನಿಸಿಕೊಂಡವನು ಮಗಳ ಮೇಲೆ ಕೈಮಾಡುವುದುಂಟೆ ? ಛಿ ! ನನ್ನದು ಎಂತಹ ಪಾಪಿ ಜನ್ಮ ! ಬಾಬೂಜಿ ಎಂತಹ ನೀಚ ! 'ಮಗಳು' ಎನ್ನುವ ಅಭಿಮಾನವೆಲ್ಲ ಅಳಿದು, ಬರಿಯ ಕಾಮಪಿಪಾಸೆಯುಂಟಾಯಿತೆ ಅವನ ಹೃದಯಕ್ಕೆ ? ಈ ಹೇಯ ದೌರ್ಜನ್ಯ ಮಗಳ ಮೇಲೆಯೆ ? ಥೂ ? ಬಾಬೂಜಿಯಂತಹ ನೀಚ ಪ್ರಪಂಚದ ಮೇಲೆ ದೊರೆಯಲಾರ !

ಬಾಬೂಜಿ ಮನೆ ಬಿಟ್ಟು ಹೊರಟ ಸಪ್ಪುಳವಾಯಿತು. ಮಾಲಾ ಬಿಕ್ಕಿಸಿ ಅಳುತ್ತಲಿದ್ದಳು.

ಮಾಲಾ ಅಂದು ನಿದ್ದೆ ಮಾಡಲಿಲ್ಲ. ಬಾಬೂಜಿಯ ಭೂತ ಮತ್ತೆ ಬಂದು ಅವಳನ್ನು ಅಪ್ಪಿಕೊಂಡಂತಾಗುವುದು. ಮಾಲಾ ಬಲವಾಗಿ ಕಣ್ಣು ಮುಚ್ಚಿಕೊಂಡು ಕಿರುಚುವಳು. ಮಾಲಳಿಗೆ ಇದ್ದ ಶಕ್ತಿಯೆಲ್ಲ ಉಡುಗಿ ಹೋಗಿತ್ತು. ಹಾಸಿಗೆಯ ಮೇಲೆ ಸೊರಗಿ ಬಿದ್ದು ಹೊರಳಾಡಿ ಕಣ್ಣೀರ್ಗರೆದಳು. ಆ ಸಂದರ್ಭವನ್ನು ನೆನಪಿಸಿಕೊಂಡೊಡನೆಯೆ, ಅವಳಿಗೆ ಸಹಸ್ರ ವಿಷದ ಮುಳ್ಳುಗಳು ಚುಚ್ಚಿದ ವೇದನೆಯುಂಟಾಗುವುದು; ಜಗದ ಪೈಶಾಚಿಕ ಬುದ್ಧಿಯೆಲ್ಲ ಅವಳ ದೇಹವನ್ನು ಕಿತ್ತುತಿನ್ನುತ್ತಿರುವಂತಾಗುವುದು.

ಮಾಲಾ ಕೊಂದುಕೊಳ್ಳೋಣವೆಂದಳು. ಹೃದಯ ಮುಂದುವರೆಯಿತು. ಆದರೆ ಕೈ ಹಿಂಜರಿಯಿತು.

* * * *

ಬಾಬೂಜಿ ಮನೆಬಿಟ್ಟು ಹೊರಟ. ಕಾಲುವೆಯ ಕರೆಯಲ್ಲಿ ಒಂದೇಸಮನೆ ಸುತ್ತಾಡತೊಡಗಿದ. ಅವನ ಮನಸ್ಸು ಯಾವುದೋ ಅನಿರ್ವಚನೀಯ ವೇದನೆಯನ್ನನುಭವಿಸುತ್ತಿತ್ತು. ಅವನಿಗದೇಕೊ ಸಾಫೋಕ್ಲೀಸ್ ನಾಟಕವೊಂದು ನೆನಪಾಗುತ್ತಿತ್ತು. ಅಲ್ಲಿ ಬರುವ ರಾಜನಂತೆ, ಎಲ್ಲರ ಮುಂದೆ ತನ್ನ ಸ್ಥಿತಿಯನ್ನು ಹೇಳಿಕೊಂಡು ಅಳಬೇಕೆನ್ನಿಸಿತು ಬಾಬೂಜಿಗೆ. ಅವನಿಗೆ ತಿಳಿಯದಂತೆ ಕಣ್ಣೀರು ಉರುಳಿ ಬೀಳುತ್ತಿತ್ತು, ಮೈಮೇಲೆ ಪ್ರಜ್ಞೆಯೇ ಇಲ್ಲದಂತೆ. ಅದೇ ಸಂದರ್ಭವನ್ನು ನೆನೆಸಿಕೊಂಡು, ಒಮ್ಮೆ ಹಣೆಗೆ ' ಛಟ್ ' ಎಂದು

ತಾಯಂದಿರೆ,

ನಿಮ್ಮ ಮಗುವಿಗೆ

ಸಾಕಷ್ಟು ತಾಯ ಹಾಲು ಬೇಕಿಲ್ಲವೆ ?

ಹಾಗಾದರೆ ನೀವು ಈ ದಿನದಿಂದಲೇ

ಜೆನ್-ಓ ಮಿಲ್ಕ್

(GEN-O MILK)

ತೆಗೆದುಕೊಳ್ಳಲು ಪ್ರಾರಂಭಮಾಡಿರಿ !

ನಿಮ್ಮ ಊರಿನ ಕೆಮಿಸ್ಟರಲ್ಲಿ ದೊರೆಯದೆ ಹೋದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಅಜಿತ ಲ್ಯಾಬ್ಸ್. ಲಿ. ಮಿರಜ

ಹೊಡೆದುಕೊಳ್ಳುತ್ತ ಬಾಬೂಜಿ ಕಾಲುವೆಯ ಒಳಕ್ಕೆ ಇಳಿದುಬಿಟ್ಟ. ಮತ್ತೆ ಎಚ್ಚೆತ್ತುಗೊಂಡು ದಂಡೆಗೆ ಬಂದು ನಿಂತ.

ಚಂದಿರ ಕಾರ್ಪೊರೇಷನಿನ ಮನೆಯಿಂದ ಮನೆಗೆ [illegible] ಸುತ್ತ ನಡೆದಿದ್ದ. ಅಲ್ಲೊಂದು ಇಲ್ಲೊಂದು ನಕ್ಷತ್ರಗಳು ಮಿನುಗುತ್ತಿದ್ದುವು. ಎಲ್ಲೆಲ್ಲೂ ನಿಶ್ಶಬ್ದ. ಆಗಾಗ ಮರದ ಎಲೆಗಳ ಸಂದಿನಿಂದ ಯಾವುದೋ ಹಕ್ಕಿ ಕೂಗುತ್ತಿತ್ತು.

ಬಾಬೂಜಿಗೆ ಸಹಿಸಲಾಗಲಿಲ್ಲ. ಮುಂದೆ ಬೆಳೆದು ನಿಂತಿದ್ದ ಮರಕ್ಕೆ 'ಫಡ್' ಎಂದು ತನ್ನ ಹಣೆಯನ್ನು 'ಢೀ' ಕೊಟ್ಟ; ಹುಲ್ಲಿನ ಮೇಲೆ ಬಿದ್ದು ಹೊರಳಾಡಿ, ಮಗುವಿನಂತೆ ಬಿಕ್ಕಿ ಅತ್ತ.

"ನಾನೆಂತಹ ಕೆಲಸ ಮಾಡಿದೆ !"

"ಇದುವರೆಗೂ ತುಳಿದಿದ್ದ ಬಯಕೆ ಇಂದು [illegible] ವಾಯಿತೆ ?

"ಸಾವಿತ್ರಿ ಸ್ಥಿತಿಯೇನಾಗಿದೆಯೊ ? ಆಕೆ ಮುಂದೆ ನನ್ನ [illegible] ತೋರಿಸಿಕೊಳ್ಳಲಿ ?

"ಹಾ ! ಆಕೆಗೆ ಹೇಗೆ ಮುಖ ತೋರಿಸಲಿ ? ಎಲ್ಲಾದರೂ ದೂರ ಹೋಗಿ ಬಿಡಬೇಕು.

"ಆಕೆ ಗೋಳಿನ್ನು ! ಅಷ್ಟು ಬಿಟ್ಟು ಆದರೆ ನಾನು ದೂರ ಹೋದರೆ ಆಕೆ ಗತಿ ಏನು ?

"ಉಹು ! ನಾನು ಬದುಕಬಾರದು. ಜೀವನವೆಲ್ಲ ಬರಿಯ ಅಳಲಿನ ಗೋಳು ! ಈ ಜೀವನ ಸಾಕು. ಕೊನೆಯ ಬಾರಿಗೆ ಆಕೆಗೆ ಮೊಗ ತೋರಿಸಿ ಹೋಗುವೆ !"

ಕತ್ತಲಿನಲ್ಲಿ ಬಾಬೂಜಿ ಮನೆಯತ್ತ 'ಧಡ, ಧಡ' ಕಾಲಿಟ್ಟ. ಬೀಗದ ಕೈಯನ್ನು ಹುಡುಕಿಕೊಂಡಿದ್ದ [illegible] ತೆರೆದ ಬಾಗಿಲು "ಕಿರ್" ಎಂದಿತು.

"ಸಾವಿತ್ರಿ !" ಆರ್ತಸ್ವರದಿಂದ ಕೂಗಿದ ಬಾಬೂಜಿ. [illegible] ಉತ್ತರಿಸಲಿಲ್ಲ. ಆಕೆಯ ಅಳುವಿಗೆ ಕೊನೆಯಿರಲಿಲ್ಲ.

"ಸಾವಿತ್ರಿ, ಇದೊಂದು ಬಾರಿ ಮೊಗ ತೋರಿಸು !"

"ಇಲ್ಲ, ನಿನ್ನಂತಹ ಪಾಪಿ.........." ಸಾವಿತ್ರಿ [illegible] ಕೊಂಡಿದ್ದಳೊ ?

"ಇಲ್ಲ. ನನ್ನ ಕಥೆಯನ್ನು ಕೇಳಿಬಿಡು. ಕೊನೆಯ ಬಾರಿ ಮೊಗತೋರಿಸು !"

"ಬಾಬೂಜಿ ! ನನ್ನ ಗತಿ ?"

"ಇಲ್ಲ. ಸಾವಿತ್ರಿ ! ನಿನ್ನನ್ನು ಬಿಟ್ಟುಹೋಗುವುದಿಲ್ಲ."

ಆಕೆಯ ಸಮಾಧಾನಕ್ಕೆ ನುಡಿದ ಬಾಬೂಜಿ.

ಸಾವಿತ್ರಿ ಕಣ್ಣೀರಿನಿಂದ ತೊಯ್ದ ಮುಖವನ್ನು ಒರಸಿಕೊಳ್ಳುತ್ತ ಹೊರಕ್ಕೆ ಬಂದಳು.

ಬಾಬೂಜಿ ಕತ್ತು ತಗ್ಗಿಸಿಕೊಂಡು ಹೇಳಲಾರಂಭಿಸಿದ :

"ನಾನು ಮೊದಲಿನಿಂದಲೂ ಧಾರ್ಮಿಕ [illegible]. ಆದರ್ಶ [illegible] ಸಂತೋಷಗಳು ನನ್ನ ಹೃದಯದಲ್ಲಿ ಬಹುಬೇಗ ಪ್ರತಿಷ್ಠಿತಗೊಳ್ಳುತ್ತಿದ್ದುವು. ನನ್ನ ಮನೆಯಲ್ಲಿ ನನಗೊಬ್ಬ [illegible] ಮದುವೆಯಾದ ಮರುವರ್ಷದಲ್ಲಿಯೆ ಆಕೆಯ ಗಂಡ [illegible]. ನನ್ನ [illegible] ತನ್ನ ಹುಟ್ಟಿದ [illegible] ತಂದೆ [illegible]. ಜೀವನಕ್ಕೆ ಬೇಕಾಗುವುದನ್ನು [illegible] ಬರುತ್ತಿದ್ದರು. ಈ ಎಲ್ಲ ಘಟನೆಗಳು ನನ್ನ ಮನಸ್ಸಿನ ಮೇಲೆ [illegible] ಪರಿಣಾಮವನ್ನುಂಟುಮಾಡಿದುವು. ನಾನು [illegible] ಇತರೆಯವರ, ಧರ್ಮದ, [illegible] ಹೆಣ್ಣು-ಗಂಡುಗಳ ಬಗ್ಗೆ ನನ್ನ ಮನಸ್ಸು [illegible] ಅವರ ಬಗ್ಗೆ ಮರುಕಪಡುತ್ತಿತ್ತು. [illegible] ಯಾಂತ್ರಿಕವಾಗಿ ಬಾಳ್ವೆಯ ನಿರರ್ಥಕತೆ ನನ್ನಲ್ಲಿ [illegible] ಬಯಕೆಗೆ ಎಡೆಗೊಡಲಿಲ್ಲ. ನಾನು ಯಾರೊಡನೆಯೂ [illegible] ಬೆರೆಯಲಾರಂಭಿಸಿದೆ. ನಾನು ನಿರಾಶಾವಾದಿಯಾದೆ. ಆದುದರಿಂದ ನಾನು ಮೊದಲಿನಿಂದಲೂ ಮದುವೆಗೆ ಮನಸ್ಸು ಮಾಡಲಿಲ್ಲ. ಆದರೆ ನಾನು ಬೆಳೆದಂತೆ ಈ ಸುಖದ ಬಯಕೆ ನನ್ನನ್ನು ಬೇರೆ ಎಡೆಗೆ ಎಳೆಯಿತು. ನನ್ನ ಮನಸ್ಸು [illegible] ಸೌಂದರ್ಯದ ಕಡೆಗೆ ಓಡಿತು.

"ನಾನು ಅಂದು ಆಕೆಯನ್ನು ಅಕಸ್ಮಾತ್ತಾಗಿ ನೋಡಿದೆ. ಆಕೆ ಕಣ್ಣುಗಳು ನನ್ನನ್ನು ನೋಡಿದುವು. ಆ ಕಣ್ಣುಗಳೇ ನನ್ನ

ಹುಚ್ಚುಹಿಡಿಸಿದುದು. ಆ ನೀಲಿಯ ಮುಗ್ಧ, ಸುವಿಶಾಲ, ಸ್ಫಟಿಕ-ಸದೃಶ ಮಿಂಚುಗಣ್ಣುಗಳನ್ನು ನಾನು ಇಲ್ಲಿಯ ವರೆಗೂ ಮರೆತಿಲ್ಲ. [illegible] ಕಣ್ಣುಗಳನ್ನು ಹೊಂದಲು, ನನ್ನವನ್ನಾಗಿ ಮಾಡಿಕೊಳ್ಳಲು, ನನ್ನ [illegible]ನಸ್ಸು ಇಂದಿಗೂ ತಹತಹಪಡುತ್ತಿದೆ. ಅವಳನ್ನು ನೋಡುವ [illegible]ವಾಗಿಯೆ ಕಾಲೇಜಿನಿಂದ ಅವಳು ಹಿಂದಿರುಗುವ ವೇಳೆಗೆ [illegible] ಬರುವ ದಾರಿಯಲ್ಲೇ ನಾನು ಹೋಗುತ್ತಿದ್ದೆ. ಒಂದು [illegible] ಅವಳು ಗೆಳತಿಯೊಡನೆ 'ಇದೇನು! ನಾವು ಬರುವುದನ್ನೇ [illegible]ದುಕೊಂಡಿರುತ್ತಾನೇನೊ!' ಎಂದು ಹೇಳುತ್ತ ನನ್ನ [illegible] [illegible] ಅರ್ಥಪೂರ್ಣ ನಗೆಬೀರುತ್ತ ಬೇರೆ ದಾರಿಗೆ ತಿರುಗಿದಳು. [illegible]ಮ್ಮೆ ನಾನು ಅವಳ ಮನೆಯ ಮುಂದೆ ಹಾದುಹೋಗುವಾಗ, [illegible] ಬರುವುದನ್ನೇ ಕಾದಿದ್ದು, ನಾನು ಬಂದೊಡನೆಯೇ ಪ್ರಣಯ-[illegible]ಯೊಂದನ್ನು ಹಾಡಲು ಪ್ರಾರಂಭಿಸಿದಳು. ಅವಳ ಈ ವರ್ತನೆ [illegible] ಹುಚ್ಚುಹಿಡಿಸಿತು. ಅವಳನ್ನು ಮಾತನಾಡಿಸಲು ಹಾತೊರೆದೆ. [illegible] ಅವಳು ಮಾತನಾಡಲು ಅವಕಾಶವನ್ನೇ ಕಲ್ಪಿಸಿಕೊಡು-[illegible]ತ್ತಿರಲಿಲ್ಲ. ಒಂದು ಬಾರಿ ಅಕಸ್ಮಾತ್ತಾಗಿ ನಾನು 'ಫ್ಯಾನ್ಸಿ ಸ್ಟೋರ್' [illegible]ನಿಂದ ಹೊರಕ್ಕೆ ಬರಬೇಕೆನ್ನುವಾಗ ಕಾದು ನಿಂತಿದ್ದು, ನಾನು [illegible] ಕಾಲಿಟ್ಟೊಡನೆಯೇ ಒಳಕ್ಕೆ ಕಾಲಿಟ್ಟು ಭುಜತಾಗಿಸಿ [illegible]' ಎಂದು ನಗೆಯ ನೋಟ ಬೀರಿ ವ್ಯಂಗ್ಯಾರದಿಂದ ನುಡಿದಳು.

"ಅವಳು ಎಂದಿದ್ದರೂ ನನ್ನವಳೇ ಎಂದು ತಿಳಿದಿದ್ದೆ. ಆದರೆ [illegible] ದಿನಗಳಲ್ಲಿಯೆ ಅವಳ ಮದುವೆ ಡಾಕ್ಟರನೊಬ್ಬನೊಡನೆ [illegible]ಯಿತೆಂದು ತಿಳಿದಾಗ ನನ್ನ ಹೃದಯ ಒಡೆಯಿತು. ನನಗೆ ಎಲ್ಲ [illegible] ಕನಿಷ್ಟ ಎಂದೆನಿಸತೊಡಗಿದುವು. ಅವಳನ್ನು ಒಂದು ಬಾರಿ [illegible] ಕೇಳಿದೆ: 'ನೀನು ಹೀಗೆ ಮೋಸ ಮಾಡಬಹುದೆ?' ಎಂದು. [illegible] ಅವಳು ನಸುನಕ್ಕು 'ಗಂಡಸರು ಹುಚ್ಚರಂತೆ ಹೆಂಗಸರ ಹಿಂದೆ [illegible]ಲಾರಂಭಿಸಿದರೆ, ಅವರನ್ನು ಸ್ವಲ್ಪವಾದರೂ ಆಟವಾಡಿಸ-[illegible]!' ಎಂದು ವ್ಯಂಗ್ಯವಾಗಿ ಉತ್ತರವಿತ್ತಳು. ಅಂದಿನಿಂದ [illegible]ನ್ನು ನಾನು ಕಂಡಿಲ್ಲ. ಅವಳು, ಎಲ್ಲವುದಕ್ಕಿಂತ ಅವಳ [illegible]ಗಳು, ನನ್ನವಾಗಬೇಕೆಂಬ ದಾಹ ಅಡಗಲೇ ಇಲ್ಲ.

"ನಾನು ಜೀವನದಲ್ಲಿ ಒಂದು ಬಗೆಯ ಹುಚ್ಚನಂತಾದೆ. ಆ [illegible]ನ್ನು ಮರೆಸಲೊ ಏನೋ—ಕುಡಿತ, ಸೂಳೆಗಾರಿಕೆಗಳನ್ನು [illegible] ಮಾಡಿದೆ. ಇಲ್ಲದ ರೋಗಗಳು ಹತ್ತಿಕೊಂಡು ಜೀವನ [illegible] ಎನ್ನಿಸಿತು. ಆದರೂ ಆ ಕಣ್ಣುಗಳ ಮೇಲಿನ ಮೋಹ [illegible] ಅಳಿಯಲೇ ಇಲ್ಲ.

"ಒಂದು ದಿನ ನನಗೆ ಜ್ಞಾನೋದಯವಾಯಿತು. ನಾನು ನಡೆ-[illegible] ಹಾದಿ ಅನೀತಿಯ ಹಾದಿಯೆಂಬುದು ತಿಳಿದು, ನಾನು [illegible]ರ್ಯವಿಲ್ಲದೆ ಕೆಟ್ಟೆ. ಈ ಹೊಲಸು ಜೀವನ ಸಾಕು; [illegible] ಮೇಲಾದರೂ ಶುಭ್ರವಾದ ನೀತಿಯುಕ್ತ ಬಾಳ್ವೆ ನಡೆಸೋಣ. [illegible]ದುಕೊಂಡೆ. ಆದರೂ ಆ ಕಣ್ಣುಗಳ ಮೇಲಿನ ಮೋಹ ಮಾತ್ರ [illegible]ಯಲಿಲ್ಲ.

"ಅದೇ ಹುಚ್ಚಿನಲ್ಲಿ ಒಂದು ದಿನ ನಗರದ ಬೀದಿಯಲ್ಲಿ ನಡೆಯು-ತ್ತಿದ್ದೆ. ಎದುರಿಗೆ ಮೂರು ವರ್ಷದ ಮಗುವೊಂದು ನಿಂತು 'ಕಾಸು ಕೊಡಿ, ಸೋಮಿ!' ಎಂದು ಗೋಗರೆಯಿತು. ನಾನು ಬಯಸಿದ ನೀಲಿಗಣ್ಣು ಆ ಮಗುವಿನಲ್ಲಿದ್ದುವು; ಅವಳ ತದ್‌ರೂಪದಂತಿತ್ತು ಆ ಮಗು. ನಾನು ಆ ಮಗುವನ್ನು ಎತ್ತಿ ಮುದ್ದಾಡಿದೆ, ಪಿತೃ ವಾತ್ಸಲ್ಯದಿಂದ. 'ನಿನ್ನ ಹೆಸರೇನು?' ಎಂದು ಕೇಳಿದೆ, 'ಮಾಲಿ' ಎಂದುತ್ತರ ಕೊಟ್ಟಿತು. 'ನನ್ನೊಡನೆ ಬರುವೆಯಾ? ಬಂದರೆ ಬಣ್ಣದ ಬೊಂಬೆ, ಬಿಸ್ಕತ್ತು ಕೊಡಿಸುತ್ತೇನೆ.' ಎಂದು ಕೇಳಿದೆ. ಆ ಮುಗ್ಧ ಬಡಮಗು ಒಪ್ಪಿಕೊಂಡಿತು. ಅವಳೇ ಇಂದಿನ ಮಾಲಾ—ನೀನು! ನೀನು ಐದು ವರ್ಷದವಳಾಗುವ ವರೆಗೆ ನಾನು ನಮ್ಮೂರಿ-ನಲ್ಲಿದ್ದೆ. ನನ್ನ ಅತ್ತಿಗೆ ನಿನ್ನ ಮೇಲೆ ತೋರಿಸುತ್ತಿದ್ದ ಕ್ರೌರ್ಯ ಅತ್ತೆ-ಸೊಸೆಯರ ನಿತ್ಯಯುದ್ಧ ನನಗೆ ಬೇಜಾರವನ್ನುಂಟು ಮಾಡಿತು. ಅಲ್ಲಿಂದ ಈ ಊರಿಗೆ ಬಂದೆ. ಈ ಊರಿನಲ್ಲಿ ಹದಿನೈದು ವರ್ಷ ಎಲ್ಲರಿಗೂ ಅಪರಿಚಿತನಾಗಿ ಕಾಲಕಳೆದೆ, ನಿನ್ನೊಡನೆ. ನಾನು ನಿನ್ನ ತಂದೆಯಲ್ಲ, ಸಾಕುತಂದೆ. ನೀನು ಭಿಕ್ಷುಕರ ಮಗಳು. ಅಂದು ನಿನ್ನ ತಂದೆ-ತಾಯಿ ಎಷ್ಟು ಅತ್ತರೋ ತಿಳಿಯದು.

"ಇಂದು ಅದೇ ನೀಲಿಗಣ್ಣು ನನ್ನನ್ನು ಕಾಡಿ ಗೋಳಾಡಿಸಿತು. ಅದಕ್ಕಾಗಿ ಈ ಊರಿನ ಹೆಂಗೆಳೆಯರಲ್ಲೆಲ್ಲ ಅರಸಿ ನಿರಾಶನಾದೆ,

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಮನೋಹರ { ನೀಲಿ } ಹೇರ್ ಆಯಿಲ್

ಕೂದಲನ್ನು ದೀರ್ಘವಾಗಿ, ಕಪ್ಪಾಗಿ, ಸೊಂಪಾಗಿ
ಬೆಳೆಸುತ್ತದೆ. ಬಾಲನರೆಗೆ ಪ್ರತಿಕ್ರಿಯೆ.

ಗರ್ಭಾಶಯಕ್ಕೆ { ಜೀವಿನಿ } ಟಾನಿಕ್

ಸ್ತ್ರೀಯರ ಜನನೇಂದ್ರಿಯ ವಿಕಾರಗಳಿಗೆ ಗುಣ-
ದಾಯಕವಾದುದು; ಉಷ್ಣ ರೋಗಗಳನ್ನೆಲ್ಲ ಶಮನ-
ಗೊಳಿಸುತ್ತದೆ; ಮತ್ತು ಔಷಧಸಾಧ್ಯಬಂಜೆತನಕ್ಕೆ
ಸಿದ್ಧಯೋಗ.

ಅಜೀರ್ಣ ವಿಕಾರಗಳಿಗೆ { ಪಂಚವಟಿ } ರಾಮಬಾಣ.

ಸದ್ವೈದ್ಯ ಶಾಲಾ, ನಂಜನಗೂಡು.

'ನಂಜನಗೂಡು ಟೂತ್ ಪೌಡರು' ಮತ್ತು
ಆಯುರ್ವೇದೀಯ ಔಷಧಗಳು ತಯಾರಾಗುವ
ಕಾರಖಾನೆ.

ನಿನ್ನಲ್ಲಿ ಅದೇ ಕಣ್ಣು, ಅದೇ ರೂಪವನ್ನು ಕಂಡೆ. ಮತಿ ಮಾಯ-ವಾಯಿತು. ಉದ್ರೇಕ ಉಕ್ಕಿತು. ನನ್ನ ಮೈಯಲ್ಲಿ ವಿದ್ಯುಚ್ಛಕ್ತಿ ಪ್ರವಹಿಸಿದಂತಾಯಿತು. ಅವಳೇ ಎದುರಿನಲ್ಲಿ ನಿಂತಿರುವಂತೆ ಭಾಸ-ವಾಯಿತು. ಅಚಾತುರ್ಯ ನಡೆದುಹೋಯಿತು. ನನ್ನ-ನಿನ್ನಲ್ಲಿದ್ದುದು, ತಂದೆ-ಮಗಳ ಸಂಬಂಧ; ಇಂದು ನಾನು ಸೋತೆ. ನನ್ನನ್ನು ಕ್ಷಮಿಸು, ಮಾಲಾ! ನಾನು ಬಹು ಹೇಯವಾದ ಕೆಲಸ ಮಾಡಿದೆ! "

ಬಾಬೂಜಿ ಮಾಲಳ ಕಾಲಿಗೆರಗಿದ. ಮಾಲಾ ಓಡಿ ಹೋಗಿ ಕೋಣೆಯಲ್ಲಿಯ ಹಾಸಿಗೆಯ ಮೇಲುರುಳಿದಳು.

ಬಾಬೂಜಿ ಬೆಪ್ಪು ಹಿಡಿದವನಂತೆ ಸ್ವಲ್ಪ ಹೊತ್ತು ನಿಂತಿದ್ದು ಹೊರಟುಹೋದ.

* * * *

ಅಂದು ಹೊರಟುಹೋದ ಬಾಬೂಜಿ ಇನ್ನೂ ಮರಳಿರಲಿಲ್ಲ, ಮರಳುವ ಆಶೆಯೂ ಇರಲಿಲ್ಲ. ಮಾಲಾ ಒಂದೇ ಸಮನಾಗಿ ಮೂರು ದಿವಸದಿಂದ ಕಣ್ಣೀರುಗರೆಯುತ್ತಿದ್ದಳು.

" ಗಂಡಿನಾಸರೆಯಿಲ್ಲದೆ ಈ ಪೋಲಿ ಊರಿನಲ್ಲಿ ಹೇಗೆ ಬಾಳು-ತ್ತೀಯೆ ? "

ನಾರಾಯಣ ಜೋಯಿಸರ ಮಾತು ನಿಮಿಷ-ನಿಮಿಷಕ್ಕೂ ಪ್ರತಿ-ಧ್ವನಿತವಾಗುತ್ತಿತ್ತು.

ಬಾಬೂಜಿ ಕಾಣದಾದನೆಂದು ಸುದ್ದಿ ತಿಳಿದಾಗ, ನಾರಾಯಣ ಜೋಯಿಸರು ಬಂದು ಮಾಲಳನ್ನು ಸಮಾಧಾನ ಮಾಡಿದ್ದರು. ಆ ಊರು ಪೋಲಿ ಊರು ಎನ್ನುವುದಕ್ಕೆ, ಅರ್ಧ ಘಂಟೆ ಹಿಂದೆ ಜೋಯಿ-ಸರು ಮಾಡಿದ ಕೃತ್ಯ ಮಾಲಳ ಎದುರಿಗೆ ಸಾಕ್ಷಿ ನುಡಿಯುತ್ತಿತ್ತು.

ಮಾಲಾ ಕಣ್ಣೀರುಗರೆಯುತ್ತ ಕುಳಿತಿದ್ದಳು. ದೂರದಲ್ಲಿ ದಿನವೂ ಬರುತ್ತಿದ್ದ ಭಿಕ್ಷುಕರ ಕೂಗು ಕೇಳಿಸಿತು:

" ಅನ್ನ ಕೊಟ್ವಾರ್, ಬಟ್ಟೆ ಕೊಟ್ವಾರ್ ಎನ್ನಯ್ಯ, ಶಿವ ತಂದೆ."

ಧರುಮಾರೇ ತಾಯಿ ತಂದ್ಯೆಯಮ್ಮ

ಓ ಶಿವನೇ ! ಕಣ್ಣುಕಾಣದ ಪರದೇಶ್ಯಮ್ಮ ! "

ಕಣ್ಣುಕಾಣದ ಮುದುಕ ಹೆಂಡತಿಯ ಹೆಗಲಮೇಲೆ ಕೈಹಾಕಿ ಕೋಲೂರಿ ಬರುತ್ತಿದ್ದ.

ಮಾಲಾ ಎಂದಿನಂತೆ ಅನ್ನ ತೆಗೆದುಕೊಂಡು ಬಂದು ನಿಂತಳು.

" ಅಮ್ಮಾ, ತಾಯಿ. ಏನಾದರೂ ಮಿಕ್ಕಿದ್ರೆ ಹಾಕ್ರವ್ವ. "

ಮಾಲಾ ಕಣ್ಣೀರು ಸುರಿಸುತ್ತಲೆ ಭಿಕ್ಷೆ ನೀಡಿದಳು. ' ನೀನು ಭಿಕ್ಷುಕರ ಮಗಳು ' ಎಂಬ ಮೂರು ದಿಸದ ಹಿಂದಿನ ಮಾತು ಅವಳ ಹೃದಯವನ್ನಿರಿಯುತ್ತಿತ್ತು.

" ಯಾಕ್ರವ್ವಾ, ಕಣ್ಣೀರು ಹಾಕ್ತೀರಿ ? " ಮುದುಕಿ ಭಿಕ್ಷುಕಿ ಕೇಳಿದಳು.

" ಏನೋ....... " ಮಾತೇ ಹೊರಡಲಿಲ್ಲ ಮಾಲಳ ಬಾ[illegible]ಯಿಂದ.

" ಹೆಣ್ಣು ಜನ್ಮ ಅಂದ್ರೆ ಹಂಗವ್ವ: ಕಣ್ಣೀರಿನ ಕಡಲು!"

" ನಿಜ ಕಣಮ್ಮಾ ನೀನು ಹೇಳುವುದು. " ಮಾತು ತೊ[illegible] ಆಡಿದಳು ಮಾಲಾ.

" ಯಾರ‍್ಯಾರು ಏನೇನು ಕೇಳಿಕೊಂಡು ಬಂದಿರುತ್ತಾರೊ ಅ[illegible] ಉಂಡೇ ಹೋಗಬೇಕು ತಾಯಿ. ಮನುಷ್ಯರ ಕೈಯಾಗೇನಯ್ತ; ಅಲ್ಲಿ ಕೂತ್ಕೊಂಡು ಸೂತ್ರ ಎಳಿತವ್ನೆ ಪರಮಾತ್ಮ. "

" ಏನು ಪರಮಾತ್ಮನೊ ! ಏನು ದೇವರೊ ! "

" ಹೌದವ್ವ ! ಎಲ್ಲರು ಹಂಗೆ. ಕಷ್ಟ ಬಂದಾಗೆ ಎ[illegible] ಬೇಜಾರೆ. ಹಂಗಂತ ದೇವರನ್ನ ಬೈದರೆ ಹೆಂಗವ್ವ. ದೇವರು ಹಿಡಿದೇ ಹಿಡಿತಾನೆ. "

ಮಾಲಾ ಬಿಕ್ಕಿಸಿ ಬಿಕ್ಕಿಸಿ ಅಳಲಾರಂಭಿಸಿದಳು.

" ಯಾಕವ್ವ ಹಂಗೆ ಅಳ್ತಿ ? ಏನಾಯ್ತವ್ವ, ಹೇಳು ತಾ[illegible] ಸುಮ್ಮನೆ ಅತ್ತರೆ ? "

" ನಿನಗೇತಕ್ಕೆ, ತಾಯಿ ? "

" ಹೇಳು ಮಹಾರಾಯ್ತಿ. "

" ಸಾಕಿಕೊಂಡ ತಂದೆ ಬಿಟ್ಟು ಹೋದನವ್ವಾ " ಮಾಲಾ ಬಿ[illegible] ಅತ್ತಳು.

" ಎಲ್ಲಿ ಹೋದನವ್ವಾ ? ಎಷ್ಟು ದಿನವಾಯ್ತು ? "

" ಮೂರು ದಿನವಾಯಿತು. ಹೆಣ್ಣು ಹೆಂಗಸರನ್ನು ಹೀಗೆ ಬಿ[illegible] ಹೋಗಬಹುದೆ ? "

" ಅಯ್ಯೋ, ಪಾಪ ! ಅವನೆಂತ ನಿಷ್ಕರುಣಿ, ತಾಯಿ ! "

" ಈ ಊರಲ್ಲಿ ನಾನೊಬ್ಬಳೆ ಹೇಗೆ ಬಾಳ್ವೆಮಾಡಲಿ ? "

" ನೋಡವ್ವಾ ! ನಂದೂ ಹಿಂಗೇನವ್ವ ಕಥೆ. ಈಗ ಇಪ್ಪ[illegible] ವರುಷಕ್ಕೆ ಹಿಂದೆ ನನಗೊಂದು ಕೂಸು ಹುಟ್ಟಿತ್ತವ್ವ. ಭಿಕ್ಷು[illegible] ರಾದ್ರೇನು, ಮಹಾರಾಜರಾದ್ರೇನು, ಮಕ್ಕಳು ಅಂದ ಮೇಲೆ ಹೆತ್ತೋ[illegible] ಜೀವ ಇದ್ದ ಹಾಗೆ. ಅಷ್ಟು ಪ್ರೀತಿಯಿಂದ ಸಾಕ್ತಿದ್ವಿ. ಕೇಪ[illegible] ಆ ಮಗು ಹೆಂಗಿತ್ತವ್ವ ! ನಮ್ಮ ಜಾತೀಲ್ಲಿ ಎಂದೂ ಹುಟ್ಟಿರಲಿಕ್ಕಿ[illegible] ಅವಳ ಕಣ್ಣು, ನೀಲಿಯಾಗಿ ವಜ್ರ ಹೊಳೆದಂಗೆ, ನಕ್ಷತ್ರ ಹೊ[illegible] ದಂಗೆ ಹೊಳೀತಿತ್ತವ್ವ. ಎಲ್ಲೋ ರಾಜಕುಮಾರಿಯಾಗಿ ಹು[illegible] ಬೇಕಿತ್ತು; ನನ್ನ ಹೊಟ್ಟೇಲಿ ಹುಟ್ಟಿಬಿಟ್ಟಿತು. ಇಂತ ಸುಕುಮ[illegible] ಬಡತನ ಯಾಕನುಭವಿಸಬೇಕು— ಅಂತ ದೇವರು, ಆ ಮಗೂ[illegible] ನಮ್ಮಿಂದ ದೂರಮಾಡಿಬಿಟ್ಟನವ್ವ. "

ಮುದುಕಿ ಭಿಕ್ಷುಕಿ ಅಳತೊಡಗಿದಳು.

" ಯಾಕೆ ? ಏನಾಯಿತು ? "

ನೂರು ವರ್ಷ ತುಂಬಿತ್ರನ್ನ. ಇದ್ದಕ್ಕಿದ್ದ ಹಂಗೆ ಮಂಗ ಯವಾಗಿ ಬಿಡ್ತು. ಅದಕ್ಕಾಗಿ ಹೊಟ್ಟೆಕಟ್ಟಿ ಪೇಟೆಪೇಟೆ ತಿರುಗ್ತಾನ್ನ, ಸಿಕ್ಕಲಿಲ್ಲ. ಎಲ್ಲಾದರೂ ಸುಖವಾಗಿದ್ದರೆ ಆಯಿತು ಸಮಾಧಾನ ಮಾಡಿಕೊಂಡೆ, ತಾಯಿ."

"ಏನು ಹೆಸರಿಟ್ಟಿದ್ದೆ, ಮಗಳಿಗೆ?" ಅನಿರೀಕ್ಷಿತವಾಗಿ ಕೇಳಿ ಮಾಲಾ.

"ಮಾಲೀ, ಅಂತ."

ಮಾಲಳ ಎದೆಯನ್ನು ಕೂರಲಗಿನಿಂದ ತಿವಿದಂತಾಯಿತು. ಮಾಲಾ ಕ್ಷಣೆ ಮನೆಯೊಳಕ್ಕೆ ಹೊರಟುಹೋದಳು. 'ಆ ಕುರುಡ ಭಿಕ್ಷುಕ ನನ್ನ ತಾಯಿ-ತಂದೆ. ದೇವರು ತಂದೆ-ತಾಯಿಗಳನ್ನು ತಂದು ಬಿಟ್ಟಿದ್ದಾನೆ. ಭಿಕ್ಷುಕರೆಂದು ಕಡೆಗಣಿಸಲೆ? ಅವರೊಡನೆ ನು ತಿರುಗಿ ತಿರುಪೆಗೆ ಹೊರಡಲೇಬೇಕು. ಈ ಊರಿನಲ್ಲಿ ನಾನು ನನಂತೆಯಾಗಿ ಬಾಳಲಾರೆ. ಸುಖಕ್ಕಾಗಿ ತಂದೆ-ತಾಯಿನ್ನು ತ್ಯಜಿಸಲಾರೆ. ತಿರುಗಿ ತಿರುಪೆಗೆ!' ಅವಳ ಮನಸ್ಸು ರಿಸಿತು.

ಮಾರನೆಯ ದಿನ ಮಾಲಾ ಭಿಕ್ಷುಕರಿಗಾಗಿ ಕಾದು ನಿಂತಿದ್ದಳು. ರದಲ್ಲಿ ಕೇಳಿಸಿತು ಕೂಗು:

"ಅನ್ನಕೊಟ್ಟಾರ್, ಬಟ್ಟೆಕೊಟ್ಟಾರ್ ಎನ್ನಯ್ಯ, ಶಿವ. ನರುಮಾರೇ ತಾಯಿ-ತಂದೆಮ್ಮ.

ಓ, ಶಿವನೇ! ಭಗವಂತ, ಕಣ್ಣುಕಾಣದ ಪರದೇಶ್ಯಮ್ಮ."

ತಂದೆ-ತಾಯಿ ಮಗಳ ಮನೆಯ ಮುಂದೆ ಭಿಕ್ಷೆಗೆ ನಿಂತರು.

"ತಾಯಿೞಾ, ಏನಾದ್ರೂ ಮಿಕ್ಕಿದ್ರೆ ನೀಡವ್ವಾ." ತಾಯಿ, ಮಗಳನ್ನು ಯಿ' ಎಂದಳು.

ಮಾಲಳಿಗೆ ಸಹಿಸಲಾರದ ವೇದನೆಯುಂಟಾಗುತ್ತಿತ್ತು.

"ನಿನಗೆ ಅಮೂಲ್ಯವಾದ ಭಿಕ್ಷೆ ಕೊಡುತ್ತೇನೆ." ಮಾಲಾ ತ್ತ ಹೇಳಿದಳು.

"ನೀಡವ್ವಾ, ಪುಣ್ಯಾತ್ಮಗಿತ್ತಿ!"

"ನೀನು ಅದನ್ನು ತೆಗೆದುಕೊಳ್ಳುತ್ತೀಯಾ?"

"ಏನು ನೀಡುತ್ತೀ ತಾಯಿ?"

"ನಿನ್ನ ಮಗಳನ್ನು!"

"ಎಲ್ಲಿದ್ದಾಳೆ?"

"ನಾನೇ!"

"ನೀನು! ಅಲ್ಲ, ಎಂದಿಗೂ ಅಲ್ಲ. ನೀನು ಬಂಗಾರದ ಮಗಳು; ಮಗಳಲ್ಲ!"

"ಹೌದು. ನಾನೇ ಮಾಲಿ, ಮಾಲಾ!"

"ಸಾಧ್ಯವಿಲ್ಲ, ತಾಯಿ."

"ಇಲ್ಲ. ತಂದೆ-ತಾಯಿಗಳನ್ನು ಬಿಟ್ಟು ಮಗಳೆಲ್ಲಿ ಹೋದಾಳು?"

ಭಿಕ್ಷುಕಿ ನೋಡಿದಳು. ಅದೇ ನೀಲಿಗಣ್ಣು, ಅದೇ ಮುಖ, ಅದೇ ರೂಪ. ಅವಳ ಕಣ್ಣುಗಳಿಂದ ಸಂತೋಷದ ಹನಿ ಉದುರಿತು. ಮಾಲಾ ತಾಯಿಯ ಭುಜವನ್ನು ಕಣ್ಣೀರಿನಿಂದ ತೊಯ್ಸಿದಳು.

"ಮಾಲೀ!" ತಾಯಿ ಕರೆದಳು.

"ಅಮ್ಮಾ!" ಪ್ರೀತಿಯ ಉತ್ತರ ಕೊಟ್ಟಳು ಮಗಳು.

೨

ಮಾರನೆಯ ದಿನ ಮುಂದಿನ ಊರಿನಲ್ಲಿ ಮನೆಮನೆಯ ಮುಂದೆ ಮೂರು ಜನ ಕೂಗುತ್ತಿದ್ದರು:

"ಬಿಕ್ಕೆ ಬೇಡಿ ಕಾಲಕಳೆವ ಜೀವವದೆಂಥದೊ!
ಸಾವ ಬಯಸಿ ಜೀವ ಹಿಡಿವ ಬಾಳದೆಂಥದೊ!
ಕೂಳು ಹಿಡಿಯ ನೀಡದಂಥ ಕರವದೆಂಥದೊ!
ಓ, ಶಿವನೆ! ಭಗವಂತ, ಕಣ್ಣುಕಾಣದ ಪರದೇಶ್ಯಮ್ಮಾ!"

ಅವಶ್ಯ ಸಂಗ್ರಹಿಸಲೇ ಬೇಕಾದ ಪುಸ್ತಕ

ನಮ್ಮ ರಾಜ್ಯಘಟನೆ

(ಲೇಖಕ: ಶ್ರೀ. ಗಲಗಲಿ)

ಬೆಲೆ: ೧೨ ಆಣೆಗಳು

ಇಂದಿನ ಪರೀಕ್ಷೆಯ ಹೊಸ ಧೋರಣೆಯಂತೆ ಪುಸ್ತಕ ರಚಿಸಲಾಗಿದೆ. ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಎಲ್ಲ ವಿಷಯಗಳನ್ನು, ಮಕ್ಕಳಿಗೆ ತಿಳಿಯುವಂತೆ ತಿಳಿಯಾದ ಭಾಷೆಯಲ್ಲಿ ವಿವೇಚಿಸಲಾಗಿದೆ. ಪ್ರತಿ ಪ್ರಕರಣದ ಕೊನೆಗೆ ಉಪಯುಕ್ತ ಹಾಗೂ ಮಹತ್ತ್ವದ ಪ್ರಶ್ನೆಗಳನ್ನೂ ಕೊಟ್ಟಿದೆ. ಕಾರಣ ಈ ಪುಸ್ತಕವನ್ನು ಪ್ರಾ. ಶಾ. ಪ್ರ. ಪ. ಮತ್ತು ಎಸ್. ಎಸ್. ಸಿ. ಪರೀಕ್ಷೆಯ ವಿದ್ಯಾರ್ಥಿಗಳು ಕೂಡಲೆ ಸಂಗ್ರಹಿಸುವುದು ಒಳ್ಳೆಯದೆಂದು ಬೇರೆ ಹೇಳಬೇಕಿಲ್ಲ.

ಇಂದೇ ನಿಮ್ಮ ಪ್ರತಿ ತರಿಸಿಕೊಂಡು ಯಶವನ್ನು ಗಳಿಸಿರಿ!

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಸಿಕ್ಕುವುದು.

ಆಕಳವಾಡಿ ಬುಕ್‌ಡಿಪೋ, ಧಾರವಾಡ

ನಿನ್ನಲ್ಲಿ ಅದೇ ಕಣ್ಣು, ಅದೇ ರೂಪವನ್ನು ಕಂಡೆ. ಮತಿ ಮಾಯ-ವಾಯಿತು. ಉದ್ರೇಕ ಉಕ್ಕಿತು. ನನ್ನ ಮೈಯಲ್ಲಿ ವಿದ್ಯುಚ್ಛಕ್ತಿ ಪ್ರವಹಿಸಿದಂತಾಯಿತು. ಅವಳೇ ಎದುರಿನಲ್ಲಿ ನಿಂತಿರುವಂತೆ ಭಾಸ-ವಾಯಿತು. ಅಚಾತುರ್ಯ ನಡೆದುಹೋಯಿತು. ನನ್ನ-ನಿನ್ನಲ್ಲಿದ್ದುದು, ತಂದೆ-ಮಗಳ ಸಂಬಂಧ; ಇಂದು ನಾನು ಸೋತೆ. ನನ್ನನ್ನು ಕ್ಷಮಿಸು, ಮಾಲಾ! ನಾನು ಬಹು ಹೇಯವಾದ ಕೆಲಸ ಮಾಡಿದೆ! "

ಬಾಬೂಜಿ ಮಾಲಳ ಕಾಲಿಗೆರಗಿದ. ಮಾಲಾ ಓಡಿ ಹೋಗಿ ಕೋಣೆಯಲ್ಲಿಯ ಹಾಸಿಗೆಯ ಮೇಲುರುಳಿದಳು.

ಬಾಬೂಜಿ ಬೆಪ್ಪು ಹಿಡಿದವನಂತೆ ಸ್ವಲ್ಪ ಹೊತ್ತು ನಿಂತಿದ್ದು ಹೊರಟುಹೋದ.

* * * *

ಅಂದು ಹೊರಟುಹೋದ ಬಾಬೂಜಿ ಇನ್ನೂ ಮರಳಿರಲಿಲ್ಲ, ಮರಳುವ ಆಶೆಯೂ ಇರಲಿಲ್ಲ. ಮಾಲಾ ಒಂದೇ ಸಮನಾಗಿ ಮೂರು ದಿವಸದಿಂದ ಕಣ್ಣೀರುಗರೆಯುತ್ತಿದ್ದಳು.

" ಗಂಡಿನಾಸರೆಯಿಲ್ಲದೆ ಈ ಪೋಲಿ ಊರಿನಲ್ಲಿ ಹೇಗೆ ಬಾಳು-ತ್ತೀಯೆ ? "

ನಾರಾಯಣ ಜೋಯಿಸರ ಮಾತು ನಿಮಿಷ-ನಿಮಿಷಕ್ಕೂ ಪ್ರತಿ-ಧ್ವನಿತವಾಗುತ್ತಿತ್ತು.

ಬಾಬೂಜಿ ಕಾಣದಾದನೆಂದು ಸುದ್ದಿ ತಿಳಿದಾಗ, ನಾರಾಯಣ ಜೋಯಿಸರು ಬಂದು ಮಾಲಳನ್ನು ಸಮಾಧಾನ ಮಾಡಿದ್ದರು. ಆ ಊರು ಪೋಲಿ ಊರು ಎನ್ನುವುದಕ್ಕೆ, ಅರ್ಧ ಘಂಟೆ ಹಿಂದೆ ಜೋಯಿ-ಸರು ಮಾಡಿದ ಕೃತ್ಯ ಮಾಲಳ ಎದುರಿಗೆ ಸಾಕ್ಷಿ ನುಡಿಯುತ್ತಿತ್ತು.

ಮಾಲಾ ಕಣ್ಣೀರುಗರೆಯುತ್ತ ಕುಳಿತಿದ್ದಳು. ದೂರದಲ್ಲಿ ದಿನವೂ ಬರುತ್ತಿದ್ದ ಭಿಕ್ಷುಕರ ಕೂಗು ಕೇಳಿಸಿತು:

" ಅನ್ನ ಕೊಟ್ಟಾರ್, ಬಟ್ಟೆ ಕೊಟ್ಟಾರ್ ಎನ್ನಯ್ಯ, ಶಿವ ತಂದೆ.

ಧರುಮಾರೇ ತಾಯಿ ತಂದ್ಯೆಯಮ್ಮ

ಓ ಶಿವನೇ ! ಕಣ್ಣುಕಾಣದ ಪರದೇಶ್ಯಮ್ಮ ! "

ಕಣ್ಣುಕಾಣದ ಮುದುಕ ಹೆಂಡತಿಯ ಹೆಗಲಮೇಲೆ ಕೈಹಾಕಿ ಕೋಲೂರಿ ಬರುತ್ತಿದ್ದ.

ಮಾಲಾ ಎಂದಿನಂತೆ ಅನ್ನ ತೆಗೆದುಕೊಂಡು ಬಂದು ನಿಂತಳು.

" ಅಮ್ಮಾ, ತಾಯಿ. ಏನಾದರೂ ಮಿಕ್ಕಿದ್ರೆ ಹಾಕ್ರವ್ವ. "

ಮಾಲಾ ಕಣ್ಣೀರು ಸುರಿಸುತ್ತಲೆ ಭಿಕ್ಷೆ ನೀಡಿದಳು. ' ನೀನು ಭಿಕ್ಷುಕರ ಮಗಳು ' ಎಂಬ ಮೂರು ದಿನದ ಹಿಂದಿನ ಮಾತು ಅವಳ ಹೃದಯವನ್ನಿರಿಯುತ್ತಿತ್ತು.

" ಯಾಕ್ರವ್ವಾ, ಕಣ್ಣೀರು ಹಾಕ್ತೀರಿ ? " ಮುದುಕಿ ಭಿಕ್ಷುಕಿ ಕೇಳಿದಳು.

" ಏನೋ....... " ಮಾತೇ ಹೊರಡಲಿಲ್ಲ ಮಾಲಳ ಬಾ...ಯಿಂದ.

" ಹೆಣ್ಣು ಜನ್ಮ ಅಂದ್ರೆ ಹಿಂಗವ್ವ : ಕಣ್ಣೀರಿನ ಕಡಲು...

" ನಿಜ ಕಣಮ್ಮಾ ನೀನು ಹೇಳುವುದು. " ಮಾತು ...ಆಡಿದಳು ಮಾಲಾ.

" ಯಾರ್‍ಯಾರು ಏನೇನು ಕೇಳಿಕೊಂಡು ಬಂದಿರುತ್ತಾರೊ ಅ... ಉಂಡೇ ಹೋಗಬೇಕು ತಾಯಿ. ಮನುಷ್ಯರ ಕೈಯಾಗೇನಯ್ತ... ಅಲ್ಲಿ ಕೂತ್ಕೊಂಡು ಸೂತ್ರ ಎಳೆತನ್ನೆ ಪರಮಾತ್ಮ. "

" ಏನು ಪರಮಾತ್ಮನೊ ! ಏನು ದೇವರೊ ! "

" ಹೌದವ್ವ ! ಎಲ್ಲರು ಹಿಂಗೆ. ಕಷ್ಟ ಬಂದಾಗೆ ಎ... ಬೇಜಾರೆ. ಹಿಂಗಂತ ದೇವರನ್ನ ಬೈದರೆ ಹೆಂಗವ್ವ. ದೇವ... ಹಿಡಿದೇ ಹಿಡಿತಾನೆ. "

ಮಾಲಾ ಬಿಕ್ಕಿಸಿ ಬಿಕ್ಕಿಸಿ ಅಳಲಾರಂಭಿಸಿದಳು.

" ಯಾಕವ್ವ ಹಿಂಗೆ ಅಳ್ತಿ ? ಏನಾಯ್ತವ್ವ, ಹೇಳು ತಾ... ಸುಮ್ಮನೆ ಅತ್ತರೆ ? "

" ನಿನಗೇತಕ್ಕೆ, ತಾಯಿ ? "

" ಹೇಳು ಮಹಾರಾಯ್ತಿ. "

" ಸಾಕಿಕೊಂಡ ತಂದೆ ಬಿಟ್ಟು ಹೋದನವ್ವಾ " ಮಾಲಾ ಬಿ... ಅತ್ತಳು.

" ಎಲ್ಲಿ ಹೋದನವ್ವಾ ? ಎಷ್ಟು ದಿನವಾಯ್ತು ? "

" ಮೂರು ದಿನವಾಯಿತು. ಹೆಣ್ಣು ಹೆಂಗಸರನ್ನು ಹೀಗೆ ಬಿ... ಹೋಗಬಹುದೆ ? "

" ಅಯ್ಯೋ, ಪಾಪ ! ಅವನೆಂತ ನಿಷ್ಕರುಣಿ, ತಾಯಿ ! "

" ಈ ಊರಲ್ಲಿ ನಾನೊಬ್ಬಳೆ ಹೇಗೆ ಬಾಳ್ವೆಮಾಡಲಿ ? "

" ನೋಡವ್ವಾ ! ನಂದೂ ಹಿಂಗೇನವ್ವ ಕಥೆ. ಈಗ ಇಪ್ಪ... ವರುಷಕ್ಕೆ ಹಿಂದೆ ನನಗೊಂದು ಕೂಸು ಹುಟ್ಟಿತ್ತವ್ವ. ಭಿಕ್ಷ... ರಾದ್ರೇನು, ಮಹಾರಾಜರಾದ್ರೇನು, ಮಕ್ಕಳು ಅಂದ ಮೇಲೆ ಹೆತ್ತ... ಜೀವ ಇದ್ದ ಹಾಗೆ. ಅಷ್ಟು ಪ್ರೀತಿಯಿಂದ ಸಾಕ್ತಿದ್ವಿ. ಕೇ... ಆ ಮಗು ಹೆಂಗಿತ್ತವ್ವ ! ನಮ್ಮ ಜಾತೀಲ್ಲಿ ಎಂದೂ ಹುಟ್ಟಿರಲಿ... ಅವಳ ಕಣ್ಣು, ನೀಲಿಯಾಗಿ ವಜ್ರ ಹೊಳೆದಂಗೆ, ನಕ್ಷತ್ರ ಹ... ದಂಗೆ ಹೊಳೀತಿತ್ತವ್ವ. ಎಲ್ಲೋ ರಾಜಕುಮಾರಿಯಾಗಿ ಹು... ಬೇಕಿತ್ತು; ನನ್ನ ಹೊಟ್ಟೇಲಿ ಹುಟ್ಟಿಬಿಟ್ಟಿತು. ಇಂತ ಸುಕುಮ... ಬಡತನ ಯಾಕನುಭವಿಸಬೇಕು—ಅಂತ ದೇವರು, ಆ ಮಗು... ನಮ್ಮಿಂದ ದೂರಮಾಡಿಬಿಟ್ಟನವ್ವ. "

ಮುದುಕಿ ಭಿಕ್ಷುಕಿ ಅಳತೊಡಗಿದಳು.

" ಯಾಕೆ ? ಏನಾಯಿತು ? "

ಮೂರು ವರ್ಷ ತುಂಬಿತ್ರನ್ನ. ಇದ್ದಕ್ಕಿದ್ದ ಹಂಗೆ ಮಂಗ ಮಾಗಿ ಬಿಡ್ತು. ಅದಕ್ಕಾಗಿ ಹೊಟ್ಟೆಕಟ್ಟಿ ಪೇಟಿಪೇಟಿ ತಿರು-ಗ್ಯಾ, ಸಿಕ್ಕಲಿಲ್ಲ. ಎಲ್ಲಾದರೂ ಸುಖವಾಗಿದ್ದರೆ ಆಯಿತು ಸಮಾಧಾನ ಮಾಡಿಕೊಂಡೆ, ತಾಯಿ."

ಏನು ಹೆಸರಿಟ್ಟಿದ್ದೆ, ಮಗಳಿಗೆ?" ಅನಿರೀಕ್ಷಿತವಾಗಿ ಕೇಳಿ-ಮಾಲಾ.

ಮಾಲೀ, ಅಂತ."

ಾಲಳ ಎದೆಯನ್ನು ಕೂರಲಗಿನಿಂದ ತಿವಿದಂತಾಯಿತು. ಮಾಲಾ ್ನೆ ಮನೆಯೊಳಕ್ಕೆ ಹೊರಟುಹೋದಳು. 'ಆ ಕುರುಡ ಭಿಕ್ಷು-ನ್ನ ತಾಯಿ-ತಂದೆ. ದೇವರು ತಂದೆ-ತಾಯಿಗಳನ್ನು ತಂದು ಬಿಟ್ಟಿದ್ದಾನೆ. ಭಿಕ್ಷುಕರೆಂದು ಕಡೆಗಣಿಸಲೆ? ಅವರೊಡನೆ ತಿರುಗಿ ತಿರುಪೆಗೆ ಹೊರಡಲೇಬೇಕು. ಈ ಊರಿನಲ್ಲಿ ನಾನು ವಂತೆಯಾಗಿ ಬಾಳಲಾರೆ. ಸುಖಕ್ಕಾಗಿ ತಂದೆ-ತಾಯಿ-್ನ ತ್ಯಜಿಸಲಾರೆ. ತಿರುಗಿ ತಿರುಪೆಗೆ!' ಅವಳ ಮನಸ್ಸು ರಿಸಿತು.

ಾರನೆಯ ದಿನ ಮಾಲಾ ಭಿಕ್ಷುಕರಿಗಾಗಿ ಕಾದು ನಿಂತಿದ್ದಳು. ದಲ್ಲಿ ಕೇಳಿಸಿತು ಕೂಗು :

ಅನ್ನಕೊಟ್ಟಾರ್, ಬಟ್ಟೆಕೊಟ್ಟಾರ್ ಎನ್ನಯ್ಯ, ಶಿವ.

ರುಮಾರೇ ತಾಯಿ-ತಂದೆಮ್ಮ.

, ಶಿವನೇ! ಭಗವಂತ, ಕಣ್ಣುಕಾಣದ ಪರದೇಶ್ಯಮ್ಮ."

ಂದೆ-ತಾಯಿ ಮಗಳ ಮನೆಯ ಮುಂದೆ ಭಿಕ್ಷೆಗೆ ನಿಂತರು.

ತಾಯಿಾ, ಏನಾದ್ರೂ ಮಿಕ್ಕಿದ್ರೆ ನೀಡವ್ವಾ." ತಾಯಿ, ಮಗಳನ್ನು ಮಿ' ಎಂದಳು.

ಾಲಳಿಗೆ ಸಹಿಸಲಾರದ ವೇದನೆಯುಂಟಾಗುತ್ತಿತ್ತು.

ನಿನಗೆ ಅಮೂಲ್ಯವಾದ ಭಿಕ್ಷೆ ಕೊಡುತ್ತೇನೆ." ಮಾಲಾ ತ್ತ ಹೇಳಿದಳು.

ನೀಡವ್ವಾ, ಪುಣ್ಯಾತ್ಮಗಿತ್ತಿ!"

ನೀನು ಅದನ್ನು ತೆಗೆದುಕೊಳ್ಳುತ್ತೀಯಾ?"

ಏನು ನೀಡುತ್ತೀ ತಾಯಿ?"

ನಿನ್ನ ಮಗಳನ್ನು!"

ಎಲ್ಲಿದ್ದಾಳೆ?"

ನಾನೇ!"

ನೀನು! ಅಲ್ಲ, ಎಂದಿಗೂ ಅಲ್ಲ. ನೀನು ಭಂಗಾರದ ಮಗಳು; ಮಗಳಲ್ಲ!"

"ಹೌದು. ನಾನೇ ಮಾಲಿ, ಮಾಲಾ!"

"ಸಾಧ್ಯವಿಲ್ಲ, ತಾಯಿ."

"ಇಲ್ಲ. ತಂದೆ-ತಾಯಿಗಳನ್ನು ಬಿಟ್ಟು ಮಗಳೆಲ್ಲಿ ಹೋದಾಳು?"

ಭಿಕ್ಷುಕಿ ನೋಡಿದಳು. ಅದೇ ನೀಲಿಗಣ್ಣು, ಅದೇ ಮುಖ, ಅದೇ ರೂಪ. ಅವಳ ಕಣ್ಣುಗಳಿಂದ ಸಂತೋಷದ ಹನಿ ಉದುರಿತು. ಮಾಲಾ ತಾಯಿಯ ಭುಜವನ್ನು ಕಣ್ಣೀರಿನಿಂದ ತೊಯ್ಸಿದಳು.

"ಮಾಲೀ!" ತಾಯಿ ಕರೆದಳು.

"ಅಮ್ಮಾ!" ಪ್ರೀತಿಯ ಉತ್ತರ ಕೊಟ್ಟಳು ಮಗಳು.

•

ಮಾರನೆಯ ದಿನ ಮುಂದಿನ ಊರಿನಲ್ಲಿ ಮನೆಮನೆಯ ಮುಂದೆ ಮೂರು ಜನ ಕೂಗುತ್ತಿದ್ದರು :

"ಬಿಕ್ಕೆ ಬೇಡಿ ಕಾಲಕಳೆವ ಜೀವವದೆಂಥದೊ!
ಸಾವ ಬಯಸಿ ಜೀವ ಹಿಡಿವ ಬಾಳದೆಂಥದೊ!
ಕೂಳು ಹಿಡಿಯ ನೀಡದಂಥ ಕರವದೆಂಥದೊ!
ಓ, ಶಿವನೆ! ಭಗವಂತ, ಕಣ್ಣುಕಾಣದ ಪರದೇಶ್ಯಮ್ಮಾ!"

ಅವಶ್ಯ ಸಂಗ್ರಹಿಸಲೇ ಬೇಕಾದ ಪುಸ್ತಕ

ನಮ್ಮ ರಾಜ್ಯಘಟನೆ

(ಲೇಖಕ : ಶ್ರೀ. ಗಲಗಲಿ)

ಬೆಲೆ : ೧೨ ಆಣೆಗಳು

ಇಂದಿನ ಪರೀಕ್ಷೆಯ ಹೊಸ ಧೋರಣೆಯಂತೆ ಪುಸ್ತಕ ರಚಿಸಲಾಗಿದೆ. ಹೊಸ ಅಭ್ಯಾಸಪತ್ರಿಕೆಯ ಪ್ರಕಾರ ಎಲ್ಲ ವಿಷಯಗಳನ್ನು, ಮಕ್ಕಳಿಗೆ ತಿಳಿಯುವಂತೆ ತಿಳಿಯಾದ ಭಾಷೆಯಲ್ಲಿ ವಿವೇಚಿಸಲಾಗಿದೆ. ಪ್ರತಿ ಪ್ರಕರಣದ ಕೊನೆಗೆ ಉಪಯುಕ್ತ ಹಾಗೂ ಮಹತ್ತ್ವದ ಪ್ರಶ್ನೆಗಳನ್ನೂ ಕೊಟ್ಟಿದೆ. ಕಾರಣ ಈ ಪುಸ್ತಕವನ್ನು ಪ್ರಾ. ಶಾ. ಪ್ರ. ಪ. ಮತ್ತು ಎಸ್. ಎಸ್. ಸಿ. ಪರೀಕ್ಷೆಯ ವಿದ್ಯಾರ್ಥಿಗಳು ಕೂಡಲೆ ಸಂಗ್ರಹಿಸು-ವುದು ಒಳ್ಳೆಯದೆಂದು ಬೇರೆ ಹೇಳಬೇಕಿಲ್ಲ.

ಇಂದೇ ನಿಮ್ಮ ಪ್ರತಿ ತರಿಸಿಕೊಂಡು ಯಶವನ್ನು ಗಳಿಸಿರಿ!

ವ್ಯಾಪಾರಿಗಳಿಗೆ ಧಾರಾಳ ಕಮಿಶನ್ ಸಿಕ್ಕುವುದು.

ಅಕಳವಾಡಿ ಬುಕ್‌ಡಿಪೋ, ಧಾರವಾಡ

ಸೂರ್ಯಶಕ್ತಿಯ ಪ್ರಯೋಜನಗಳು

(ವೈಜ್ಞಾನಿಕ ಪ್ರಬಂಧ)

ಡಾ. ವೆಂಕೋಬಾಚಾರ್ಯ ಉಪಾಧ್ಯಾಯ, ಎಂ.ಎಸ್‌ಸಿ., ಹೈದರಾಬಾದ್

★

ಸೂರ್ಯನ ಶಕ್ತಿ ಅಗಾಧವಾದುದು, ಅಪಾರವಾದುದು. ಭೂಮಿಯ ಮೇಲಿನ ಪ್ರತಿಯೊಂದು ವ್ಯಾಪಾರಕ್ಕೂ ಸ್ವಾಭಾವಿಕವಾಗಿ ಸೂರ್ಯಶಕ್ತಿ ಮೂಲಕಾರಣವಾಗಿದೆ. ಇಂದಿನ ವೈಜ್ಞಾನಿಕ ದೃಷ್ಟಿ, ಸೂರ್ಯಶಕ್ತಿಯನ್ನು ಅನೇಕ ಪ್ರಯೋಜನಗಳಿಗಾಗಿ ಬಳಸುವುದರಲ್ಲಿದೆ.

★

ಸೂರ್ಯನು ನಮ್ಮ ಭೂಮಿಯಿಂದ ೯ ಕೋಟಿ ಮೈಲುಗಳ ದೂರದಲ್ಲಿದ್ದರೂ, ಅವನಿಂದ ನಮಗೆ ಬೇಕಾದಷ್ಟು ಬೆಳಕು ಮತ್ತು ಶಾಖ ಸಿಕ್ಕುತ್ತದೆ. ಬರಿಗಣ್ಣಿನಿಂದ ಅವನನ್ನು ನೋಡುವುದಕ್ಕೆ ಬರುವಂತಿಲ್ಲ. ಬರಿಗಣ್ಣಿನಿಂದ ಅವನ ಕಡೆಗೆ ಬಹಳ ಹೊತ್ತಿನವರೆಗೆ ನೋಡಿದರೆ ನಾವು ಕುರುಡರಾಗಿಬಿಡುವ ಸಂಭವವಿರುತ್ತದೆ. ನೀಲಿ-ಕನ್ನಡಿಯೊಂದನ್ನು ಕಣ್ಣೆದುರು ಹಿಡಿದು ಸೂರ್ಯನನ್ನು ಕಾಣಬಹುದಾಗಿದೆ. ಭೂಮಿಯ ಮೇಲೆ ಬೀಳುತ್ತಿರುವ ಅವನ ಶಕ್ತಿ ಅಪಾರವಾದದ್ದು. ಭೂಮಿಯ ಮೇಲೆ ಆಗುವ ಎಲ್ಲ ತರದ ಬದಲಾವಣೆಗಳಿಗೆ ಸೂರ್ಯನೇ ಕಾರಣ. ಅವನಿಂದ ಭೂಮಿ ಕಾಯುತ್ತದೆ; ಗಾಳಿ ಚಲಿಸುತ್ತದೆ. ನಮ್ಮ ಶರೀರದಲ್ಲಿ 'ಡಿ' ಜೀವನಸತ್ತ್ವವು ಉತ್ಪನ್ನವಾಗುವುದು ಅವನಿಂದಲೇ. ನೀರು ಆವಿಯಾಗಿ ಮಳೆಯಾಗುವುದು ಅವನಿಂದಲೇ. ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರಿನಿಂದ ಸಸಿಗಳು ಸಕ್ಕರೆ, ಪಿಷ್ಟಶರ್ಕರೆ, ಸೆಲ್ಯುಲೋಜ್ ಮುಂತಾದುವುಗಳನ್ನು ತಯಾರಿಸುವುದು ಸೂರ್ಯನಿಂದಲೇ. ಎಂದರೆ ಪ್ರಕಾಶಸಂಯೋಜನೆಯ ಮೂಲಕವಾಗಿಯೇ. ಅರಣ್ಯಗಳು ಬೆಳೆಯುವುದು ಅವನಿಂದಲೇ. ಅವನು ಗಾಳಿಯಲ್ಲಿ ಯಾವಾಗಲೂ ತೇವ ಇರುವಂತೆ ಮಾಡುತ್ತಾನೆ. ಜಲಪಾತ ಮತ್ತು ಹೊಳೆಗಳಿಗೆ ಇವನೇ ಕಾರಣಕರ್ತನು. ಹಲವು ಎಂಜಿನುಗಳನ್ನು ನಡೆಸಲು ಉಪಯೋಗವಾಗುವ ಪೆಟ್ರೋಲು, ಕಲ್ಲಿದ್ದಲುಗಳು ಸೂರ್ಯನಿಂದಲೇ ಉಂಟಾದುವು. ಇವೆಲ್ಲವೂ ಸೂರ್ಯನು ಕೂಡಿಟ್ಟ ಶಕ್ತಿ. ಒಂದು ಕಾಲದಲ್ಲಿ ಅವನ ಶಕ್ತಿಯಿಂದಲೇ ಬೆಳೆದ ಗಿಡ-ಮರಗಳು ಭೂಮಿಯ ಕೆಳಕ್ಕೆ ಬಿದ್ದು, ಅವೇ ಕಲ್ಲಿದ್ದಲುಗಳಲ್ಲಿ ರೂಪಾಂತರ ಹೊಂದಿವೆ. ಅಂಥ ಕಲ್ಲಿದ್ದಲು-ಎಣ್ಣೆಗಳನ್ನು ನಾವು ಸುಡಲು, ಆ ಕೂಡಿಟ್ಟ ಕಾವು ನಮಗೆ ಸಿಕ್ಕುತ್ತದೆ. ನಮ್ಮ ಶಕ್ತಿ ಸೂರ್ಯನಿಂದಲೇ ಬರುವಂಥದು. ನಾವು ತಿನ್ನುವ ಆಹಾರವೆಲ್ಲ ಅವನ ಶಕ್ತಿಯ ಸಂಗ್ರಹ. ಅವೇ ಉರಿದು ಜೀರ್ಣವಾಗಿ ನಮ್ಮ ಶರೀರವೆಂಬ ಗಾಡಿಯ ಪ್ರತಿಯೊಂದು ಚಕ್ರವು ನಡೆಯುತ್ತದೆ.

ಸೂರ್ಯನ ಪ್ರಕಾಶವು ಭೂಮಿಯ ಮೇಲೆ ಬೀಳುವುದು ನಿಂತುಹೋದರೆ, ಅಥವಾ ಅವನ ಪ್ರಕಾಶವು ಅಡಗಿಹೋದರೆ, ಜಗ ಶೂನ್ಯವಾಗಿಬಿಡುತ್ತದೆ. ಗಾಳಿಯ ಚಲನೆ ನಿಂತುಹೋಗುತ್ತ ಸಸಿಗಳು, ಪ್ರಾಣಿಗಳು ಜೀವಿಸುವುದು ಕಷ್ಟವಾಗುತ್ತದೆ. ಹೊ ಜಲಪಾತ ಮತ್ತು ಸಮುದ್ರಗಳಲ್ಲಿದ್ದ ಎಲ್ಲ ನೀರು ಒಟ್ಟುಗೂ ಹಿಮದಂತೆ ಗಟ್ಟಿಯಾಗಿಬಿಡುತ್ತದೆ. ಒಟ್ಟಿನ ಮೇಲೆ ಸೂರ್ಯನಿಲ್ಲ ಜೀವನ ಸಾಧ್ಯವಿಲ್ಲ.

ಸೂರ್ಯನು ಅನಿಲಗಳ ಅಪಾರವಾದ ಒಂದು ಗೋಲ. ಭೂಮಿಯಿಂದ ನೋಡುವಾಗ ಅವನು ಚಂದ್ರನಷ್ಟೇ ಚಿಕ್ಕವನಾ ಕಾಣುತ್ತಾನೆ. ಆದರೆ ನಿಜವಾಗಿಯೂ ಅವನ ಗಾತ್ರ ಚಂದ್ರನಿಗಿ ೬ ಕೋಟಿ ಪಾಲು ದೊಡ್ಡದಾಗಿದೆ. ಅವನ ತೂಕ ಭೂಮಿಯ ತೂಕಕ್ಕಿಂತ ಮೂರು ಲಕ್ಷ ಪಾಲು ಹೆಚ್ಚು. ಎಲ್ಲ ಗ್ರಹಗ ತೂಕಕ್ಕಿಂತ ೭೦೦ ಪಾಲು ಹೆಚ್ಚು. ರೋಹಿತದರ್ಶಕದಿ ಸೂರ್ಯನ ರಚನೆಯನ್ನು ತಿಳಿದುಕೊಳ್ಳಬಹುದಾಗಿದೆ. ಸೂರ್ಯ ಮೈಯಲ್ಲಿ ಹೈಡ್ರೋಜನ್ ಅನಿಲವು ಅವನ ತೂಕದ ಅರ್ಧದಷ್ಟು ಪ್ರಮಾಣದಲ್ಲಿಯೂ, ಹೀಲಿಯಂ, ಆಕ್ಸಿಜನ್ ಸಾಧಾರ ಪ್ರಮಾಣದಲ್ಲಿಯೂ ಕಾರ್ಬನ್, ನೈಟ್ರೋಜನ್ ಮತ್ತು ಇತ ಅನೇಕ ಲೋಹಗಳು ಕಡಮೆಯ ಪ್ರಮಾಣದಲ್ಲಿಯೂ ಇರುತ್ತ ಅವನ ಮಧ್ಯಬಿಂದುವಿನಲ್ಲಿರುವ ಉಷ್ಣತೆ ಸುಮಾರು ೨೦ ದಶಲಕ್ಷ ಸೆಂಟಿಗ್ರೇಡು. ಮತ್ತು ಅಲ್ಲಿರುವ ಒತ್ತಡ ಭೂಮಿಯ ಒತ್ತಡಕ್ಕಿಂ ಎಷ್ಟೋ ದಶಲಕ್ಷ ಪಾಲು ಹೆಚ್ಚಾಗಿದೆ. ಭೂಮಿಯ ಮೇ ಸೂರ್ಯನಲ್ಲಿರುವಷ್ಟು ಉಷ್ಣತೆಯನ್ನು ಹುಟ್ಟಿಸಲು ವೈಜ್ಞಾನಿ ರಿಂದಲೂ ಇನ್ನೂ ಸಾಧ್ಯವಾಗಿಲ್ಲ. ಕಾರ್ಬನ್ ಮತ್ತು ಕಬ್ಬಿಣದಿ ಕೂಡಿದ ಅಥವಾ ಕೇವಲ ಸಿಲಿಕಾದಿಂದ ಕೂಡಿದ ಪ್ರಾಣಿ (ಇದ್ದ ದರೆ) ಸೂರ್ಯನ ಮೇಲುಮೈಯನ್ನು ಮುಟ್ಟಿದಲ್ಲಿ ಅದು ಕೂಡಲೆ ಸುಟ್ಟು ಬೂದಿಯಾಗಿಬಿಡುತ್ತದೆ. ಮನುಷ್ಯನು ಸೂರ್ಯನ ಒಳ ಭಾಗದಲ್ಲಿ ಪ್ರವೇಶಿಸಿ ಅವನ ಮಧ್ಯಬಿಂದುವನ್ನು ಮುಟ್ಟಲಿಕ್ಕೆ ಪ್ರಯತ್ನಮಾಡಿದರೆ, ಮನುಷ್ಯನ ಶರೀರ ಸುಟ್ಟು ಬೂದಿಯಾಗುವ ದಂತೂ ಇರಲಿ, ಅಣು ಮತ್ತು ಪರಮಾಣುಗಳಲ್ಲಿ ಅದು ರೂಪಾಂತ

ಗೊಂಡು ಬಿಡುತ್ತದೆ. ಮಧ್ಯಬಿಂದುವಿನ ಹತ್ತಿರ ಉಷ್ಣತೆ ಹೆಚ್ಚಿದ್ದ ಮೂಲಕ ಈ ಅಣು-ಪರಮಾಣುಗಳ ವಿಘಟನೆಯಿಂದ ಎಲೆಕ್ಟ್ರಾನ್, ಪ್ರೋಟಾನ್ ಮತ್ತು ನ್ಯೂಟ್ರಾನುಗಳು ಹುಟ್ಟಿಕೊಂಡು, ಸೂರ್ಯನ ಒಳಭಾಗದಲ್ಲಿ ಸುತ್ತಾಡಲು ಪ್ರಾರಂಭಿಸುತ್ತವೆ.

ಇನ್ನು ನಿಜವಾಗಿ ಸೂರ್ಯನು ಉರಿಯುವನೆ ?—ಎಂಬ ಪ್ರಶ್ನೆ. ಇದರ ವಿಷಯವಾಗಿ ಎಷ್ಟೋ ಊಹೆಗಳಿವೆ. ಪುರಾತನ ಕಾಲದಲ್ಲಿ ಜನರು ಸೂರ್ಯನಲ್ಲಿ ಕಲ್ಲಿದ್ದಲು ಇದೆಯೆಂದೂ, ಅದು ಉರಿಯುವುದರಿಂದ ಬೆಳಕು ಮತ್ತು ಶಾಖ ಹುಟ್ಟುತ್ತದೆಂದೂ ನಂಬಿದ್ದರು. ಸೂರ್ಯನಲ್ಲಿ ಕೇವಲ ಕಲ್ಲಿದ್ದಲು ಇದ್ದುದಾದರೆ, ಅದು ಇಲ್ಲಿಯವರೆಗೆ ಸುಟ್ಟು ಬೂದಿಯಾಗಬೇಕಾಗಿತ್ತು.

ಹೆಲ್ಮಹಾಲ್ಟ್ಜ ಎಂಬ ಭೌತಶಾಸ್ತ್ರಜ್ಞನ ಊಹೆಯ ಪ್ರಕಾರ, ಸೂರ್ಯನು ಅನಿಲಗಳ ಅಪಾರವಾದ ಒಂದು ಗೋಲವೆಂದೂ ಆ ಮಹಾಮಂಡಲವು ಒಂದು ವರ್ಷಕ್ಕೆ ೨೫೦ ಅಡಿಯಷ್ಟು ಸಂಕೋಚವಾಗುತ್ತ ಹೋಗುತ್ತಿದೆಯೆಂದೂ ಈ ಮುದುರುವಿಕೆಯಿಂದಲೆ ಇಷ್ಟೆಲ್ಲ ಕಾವೂ, ಬೆಳಕೂ ಉಂಟಾಗುತ್ತದೆಂದೂ ನಂಬಲಾಗಿತ್ತು. ಸೂರ್ಯನು ಮುದುರುತ್ತಿರುವುದೆಂಬುದು ನಿಜವಾದರೂ, ಸುಮಾರು ಎಂಟು ಲಕ್ಷ ಮೈಲು ವ್ಯಾಸವುಳ್ಳ ಅವನ ಮೈಯಲ್ಲಿ ಒಂದು ವರ್ಷಕ್ಕೆ ೨೫೦ ಅಡಿ ಮುದರುವಿಕೆಯು ಎಷ್ಟು ಸ್ವಲ್ಪ ?

ಸೂರ್ಯವಿಸ್ತರಣದ ವಿಷಯವಾಗಿ ಮೇಲೆ ತಿಳಿಸಿದ ಊಹೆಗಳು ನಿಜವಾಗಿಲ್ಲೆಂದೂ ಡಾ. ಬೇಥೇ ಅವರ ತತ್ತ್ವದಂತೆ ೨೦ ದಶಲಕ್ಷ ಸೆಂಟಿಗ್ರೇಡ್ ಉಷ್ಣತೆಯಲ್ಲಿ ಕಾರ್ಬನ್ ಮತ್ತು ನೈಟ್ರೋಜನುಗಳ ವೇಗವರ್ಧಕ ಕ್ರಿಯೆಯ ಮೂಲಕ ಸೂರ್ಯನಲ್ಲಿದ್ದ ಹೈಡ್ರೋಜನ್ ಅನಿಲವು ಹೀಲಿಯಮಿನಲ್ಲಿ ಪರಿವರ್ತನೆಯಾಗಿ, ಅದರ ಸ್ವಲ್ಪ ಅಂಶವು ಅಪಾರವಾದ ಶಕ್ತಿಯ ರೂಪದಲ್ಲಿ ಸೂರ್ಯನಿಂದ ಹೊರಬೀಳುತ್ತದೆ. ಈ ಕ್ರಿಯೆಯಲ್ಲಿ ಕಾರ್ಬನ್ ಮತ್ತು ನೈಟ್ರೋಜನುಗಳು ಪುನಃ ಹುಟ್ಟಿಕೊಂಡು ವೇಗವರ್ಧಕದಂತೆ ಕೆಲಸ ಮಾಡುತ್ತವೆ. ಮತ್ತು ಈ ಕ್ರಿಯೆ ಸೂರ್ಯನಲ್ಲಿದ್ದ ಸಂಪೂರ್ಣ ಹೈಡ್ರೋಜನ್ ಹೀಲಿಯಮಿನಲ್ಲಿ ಪರಿವರ್ತನೆಯಾಗುವವರೆಗೆ ನಡೆಯುತ್ತದೆ. ಇದೇ ರಾಸಾಯನಿಕ ಕ್ರಿಯೆಯ ಆಧಾರದ ಮೇಲೆ "ಹೈಡ್ರೋಜನ್ ಬಾಂಬು" ತಯಾರಿಸಲಾಗಿದೆ. ಆದಕಾರಣ ಸೂರ್ಯನನ್ನು 'ನೈಸರ್ಗಿಕ ಹೈಡ್ರೋಜನ್ ಬಾಂಬು' ಎಂದು ಕರೆಯಬಹುದು.

ಶಕ್ತಿ ಆವಶ್ಯಕವಾದ ವಸ್ತುಗಳಲ್ಲಿ ಒಂದಾಗಿದೆ. ಜಗತ್ತಿನಲ್ಲಿ ಶಕ್ತಿಯನ್ನು ಹುಟ್ಟಿಸುವುದಕ್ಕೆ ನೈಸರ್ಗಿಕವಾಗಿ ದೊರೆಯುವ ಹೂಳಿಟ್ಟ ಗಿಡದ ಅಥವಾ ಪ್ರಾಣಿಯ ಅವಶಿಷ್ಟಭಾಗದ ಉರುವಲುಗಳು ಎಂದರೆ ಕಲ್ಲಿದ್ದಲು, ಎಣ್ಣೆ ಮುಂತಾದುವುಗಳು, ಸುಮಾರು ೬ ಮಹಾಪದ್ಮ ಟನ್ ಕಲ್ಲಿದ್ದಲಿನ ಸಮತೂಕದ್ದಾಗಿದೆ ಎಂದು ಅಂದಾಜು ಮಾಡಲಾಗಿದೆ. ಪ್ರತಿ ವರ್ಷ ಜಗತ್ತಿನಲ್ಲಿ ಉರುವಲದ ವ್ಯಯ ೩ ಅಬ್ಜ ಟನ್ನು. ಉರುವಲದ ವ್ಯಯ ಹೀಗೆಯೆ ನಡೆದರೆ, ಈಗಿದ್ದ ಸಂಗ್ರಹ ಮೂರು ಸಾವಿರ ವರ್ಷಗಳ ವರೆಗೆ ಸಾಕಾಗುತ್ತದೆ. ಯುರೋಪ್ ಸಂಯುಕ್ತ ರಾಷ್ಟ್ರಗಳು ಬಳಸುವಷ್ಟು ಉರುವಲುಗಳನ್ನು ಇನ್ನುಳಿದ ರಾಷ್ಟ್ರಗಳು ಬಳಸಿದರೆ, ಜಗತ್ತಿನಲ್ಲಿದ್ದ ಉರುವಲದ ಸಂಗ್ರಹ ಕೇವಲ ಕೆಲವೇ ನೂರು ವರ್ಷಗಳಲ್ಲಿ ಮುಗಿದು ಹೋಗಬಹುದು. ಆದ ಕಾರಣ ಸೂರ್ಯಶಕ್ತಿಯನ್ನು ಅನೇಕ ಉದ್ಯಮಗಳಲ್ಲಿ ಉಪಯೋಗಿಸುವ ಪ್ರಶ್ನೆ ಬಹಳ ಮಹತ್ತ್ವದ್ದಾಗಿದೆ.

ಬಿಸಿಲು ಹೆಚ್ಚು ಇದ್ದಾಗ, ಭೂಮಿಯ ಮೇಲೆ ಬೀಳುತ್ತಿರುವ ಸೂರ್ಯನ ಶಕ್ತಿ, ಪ್ರತಿ ಚದರುಗಜಕ್ಕೆ ಒಂದು ಕಿಲೋವ್ಯಾಟಿನಷ್ಟಾಗುವುದು. ಎಂದರೆ ಪ್ರತಿ ಚದರಮೈಲಿನ ಮೇಲೆ ಬೀಳುತ್ತಿರುವ ಅವನ ಶಕ್ತಿ, ೭೫೦ ಟನ್ ನೀರನ್ನು, ಹೆಪ್ಪುಗಟ್ಟುವ ಬಿಂದುವಿನಿಂದ ಕುದಿಯುವ ಬಿಂದುವರೆಗೆ ತರುವುದಕ್ಕೆ ಬೇಕಾಗುವ ಶಾಖದಷ್ಟಿರುತ್ತದೆ. ಇದೇ ಶಕ್ತಿ ಸಮುದ್ರಗಳಲ್ಲಿಯ ನೀರನ್ನು ಆವಿಯಾಗಿ ಮಾಡುತ್ತದೆ; ಭೂಖಂಡಗಳನ್ನು ಬೆಚ್ಚಗಿಡುತ್ತದೆ. ನಾಲ್ಕು ಚದರು ಮೈಲುಗಳಷ್ಟು ಸೂರ್ಯಶಕ್ತಿಯನ್ನು ಪ್ರತಿಬಂಧ ಮಾಡಿದಲ್ಲಿ, ಅದು ನಮಗೆ ಬೇಕಾದ ಎಲ್ಲ ಶಕ್ತಿಗಳನ್ನೂ ಒದಗಿಸುತ್ತದೆ.

ಸೂರ್ಯನಲ್ಲಿ ಹೈಡ್ರೋಜನ್ ಅನಿಲವು ಇರುತ್ತದೆಂದು ಈ ಮೊದಲೇ ತಿಳಿಸಿದೆ. ಇದು ಹೀಲಿಯಮಿನಲ್ಲಿ ಪರಿವರ್ತನೆಯಾದಾಗ, ಸೂರ್ಯನಲ್ಲಿ ಅಪಾರವಾದ ಶಕ್ತಿ ಹುಟ್ಟುತ್ತದೆ. ಮತ್ತು ಈ ಕ್ರಿಯೆ ಸೂರ್ಯನನ್ನು ಬಹಳ ಕಾಲದ ವರೆಗೆ ಶಕ್ತಿಯನ್ನು ವಿಸ್ತರಣಗೊಳಿಸುವುದರಲ್ಲಿ ಸಹಾಯ ಮಾಡುತ್ತದೆ. ನಾಲ್ಕು ಗ್ರಾಮು ಹೈಡ್ರೋಜನ್ ಹೀಲಿಯಮಿನಲ್ಲಿ ಪರಿವರ್ತನೆಯಾದಾಗ, ಎಷ್ಟೋ ದಶಲಕ್ಷ ಕ್ಯಾಲರಿ ಬಿಡುಗಡೆಯಾಗುತ್ತದೆ. ಈ ರೀತಿ ಬಿಡುಗಡೆಯಾಗುವ ಶಕ್ತಿಯನ್ನು ಉಪಯೋಗಿಸಿ, ಮೋಟರ್ ಅಥವಾ ವಿದ್ಯುತ್-ಶೀತಕಾರಕ ಯಂತ್ರವನ್ನು ಐದು ಸಾವಿರ ವರ್ಷಗಳ ವರೆಗೆ ನಡೆಯಿಸಬಹುದು.

ಆವಿ ಯಂತ್ರಗಳ ಸಂಶೋಧನೆಯಾದಂದಿನಿಂದ ನೀರನ್ನು ಆವಿಯಲ್ಲಿ ರೂಪಾಂತರಗೊಳಿಸಲು ಸೂರ್ಯಶಕ್ತಿಯನ್ನು ಪಡೆದಿದ್ದಾ-

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ ನಿಮ್ಮ ಸರಕಿನ ಪ್ರಚಾರವಾಗಬೇಕಾಗಿದ್ದರೆ ನಮಗೆ ಒಪ್ಪಿಸಿರಿ!

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್‌ಲ್ಯಾಂಟರ್ನ್ ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ.

ಯಿತು. ಆದರೆ ಇಂಥ ಯಂತ್ರಗಳ ತಯಾರಿಕೆಗೆ ತಗಲುವ ವೆಚ್ಚ ಹೆಚ್ಚಾಗಿದ್ದರಿಂದ, ಅವುಗಳಿಗೆ ವ್ಯಾಪಾರದ ದೃಷ್ಟಿಯಿಂದ ಹೆಚ್ಚು ಮಹತ್ವ ಸಿಕ್ಕಲಿಲ್ಲ.

ಸೂರ್ಯ ಆವಿಯಂತ್ರಗಳಿಗೆ ಅಷ್ಟೇ ಅಲ್ಲ; ವಾಸ್ತವದಲ್ಲಿ ಸೂರ್ಯವಿಸ್ತರಣದ ನೇರವಾದ ಉಪಯುಕ್ತತೆಯ ಯಾವುದಾದರೊಂದು ಯೋಜನೆಗೂ ಬೇರೆ ದೊಡ್ಡ ಆತಂಕಗಳಿವೆ. ಸೂರ್ಯ ಪ್ರಕಾಶವು ವಿಚ್ಛಿನ್ನ ಪ್ರಕಾಶ, ಹಗಲು ಮತ್ತು ರಾತ್ರಿಯ ಕ್ರಮಬದ್ಧವಾದ ಪರಿವರ್ತನೆ, ಬಿರುಗಾಳಿ, ಮೋಡ ಮುಸುಕಿದ ದಿನಗಳು — ಇವೆಲ್ಲವುಗಳಿಂದ ಸೂರ್ಯಶಕ್ತಿಯಂತ್ರಗಳಲ್ಲಿ ಆತಂಕ ಉಂಟಾಗುವುದು. ಇಂಥ ಕತ್ತಲೆ ಮತ್ತು ಮೋಡ ಹಾಕಿದ ಕಾಲದ ಪರಿಸ್ಥಿತಿಯನ್ನು ದೂರಗೊಳಿಸುವುದಕ್ಕಾಗಿ, ಶಕ್ತಿಸಂಗ್ರಹದ ಅನೇಕ ಉಪಾಯಗಳನ್ನು ಸೂಚಿಸಲಾಗಿದೆ.

ನವದೆಹಲಿಯ ರಾಷ್ಟ್ರೀಯ ಭೌತಪ್ರಯೋಗಶಾಲೆಯಲ್ಲಿ ಸೂರ್ಯನ ಬಿಸಿಲಿನಿಂದ ಬಿಸಿಲೊಲೆಯನ್ನು ತಯಾರಿಸಲಾಗಿದೆ. ಈ ಒಲೆ ಬರೀ ಸೂರ್ಯನ ಬಿಸಿಲಿನಿಂದಲೇ ಅಡಿಗೆ ಮಾಡುತ್ತದೆ. ಮತ್ತು ಅಡಿಗೆ ಮಾಡಿದ ಪದಾರ್ಥಗಳನ್ನು ಬೆಚ್ಚಗಿಡುತ್ತದೆ. ಈ ಒಲೆಗಳನ್ನು ಉರಿಸಲು ಏನೂ ಬೇಕಾಗಿಲ್ಲ; ಬೆಳಕಿದ್ದರೆ ಸಾಕು. ಇಂಥ ಬಿಸಿಲೊಲೆಯೊಂದರಲ್ಲಿ ೩೦೦ ವ್ಯಾಟಗಳ ವಿದ್ಯುತ್ ಒಲೆಯಷ್ಟು ಶಾಖೋತ್ಪತ್ತಿಯಾಗುತ್ತದೆ. ರಾಷ್ಟ್ರೀಯ ಭೌತ ಪ್ರಯೋಗಶಾಲೆಯವರು, ಆದಷ್ಟು ಶೀಘ್ರವಾಗಿ ಇದನ್ನು ಭಾರತೀಯ ಗೃಹಗಳಲ್ಲಿ ಬಳಕೆಗೆ ತರುವಂತಹ ಏರ್ಪಾಡು ಮಾಡಿಸಿದರೆ, ಗೃಹಿಣಿಯರಿಗೆ ದೊಡ್ಡ ಅನುಕೂಲ ಮಾಡಿದಂತಾಗುವುದು.

ಇತ್ತೀಚೆಗೆ ಒಂದು ಹೊಸತರದ ಫೋಟೋ ಎಲೆಕ್ಟ್ರಿಕ್ ಸೆಲ್ಲಿನಿಂದ ಸೂರ್ಯನ ಬೆಳಕನ್ನು ವಿದ್ಯುತ್-ಶಕ್ತಿಯಲ್ಲಿ ರೂಪಾಂತರಿಸುವ ಪ್ರಯತ್ನಗಳು ನಡೆದಿವೆ. ಇಂಥ ಸೆಲ್ಲಿಗೆ "ಬ್ಲಾಕಿಂಗ್ ಲೇಯರ್ ಸೆಲ್" ಎಂದು ಹೆಸರು. ಇದರ ಸಹಾಯದಿಂದ ಸೂರ್ಯನ ವಿಸ್ತರಣದ ಸ್ವಲ್ಪ ಭಾಗವಷ್ಟೆ ವಿದ್ಯುತ್‌ಶಕ್ತಿಯಲ್ಲಿ ರೂಪಾಂತರ ಹೊಂದುತ್ತದೆ. ಇಂಥ ಸೆಲ್ಲುಗಳ ತಯಾರಿಕೆಗೆ ತಗಲುವ ವೆಚ್ಚ ಬಹಳ ಹೆಚ್ಚಾಗಿದ್ದರಿಂದ, ದೊಡ್ಡ ಪ್ರಮಾಣದಲ್ಲಿ ಸೂರ್ಯನ ಬೆಳಕಿನಿಂದ ವಿದ್ಯುತ್‌ಶಕ್ತಿಯನ್ನು ಹುಟ್ಟಿಸುವುದು ಬಗೆಹರಿಯದ ಸಮಸ್ಯೆಯಾಗಿದೆ.

ಸೂರ್ಯಶಕ್ತಿಯನ್ನು ಪರಮಾಣುಶಕ್ತಿಯಲ್ಲಿ ರೂಪಾಂತರಿಸಿ, ಅದನ್ನು ಅನೇಕ ಉದ್ಯಮಗಳಲ್ಲಿ ಉಪಯೋಗಿಸುವ ವಿಷಯವಾಗಿ ಈಗಾಗಲೇ ಅರ್ಜಂಟೈನಾದಲ್ಲಿ ಪ್ರಯೋಗಗಳು ನಡೆದಿವೆ. ಪ್ರೊ. ರಿಚರ್ ಅವರ ಹೇಳಿಕೆಯಂತೆ, ಸೂರ್ಯಶಕ್ತಿಯಿಂದ ಪರಮಾಣುಶಕ್ತಿಯನ್ನು ಪಡೆಯುವುದಕ್ಕಾಗಿ ದೊಡ್ಡ ದೊಡ್ಡ ಸೂರ್ಯ ಭಟ್ಟಿಗಳನ್ನು ತಯಾರಿಸುವ ಕೆಲಸ ಪ್ರಾರಂಭವಾಗಿದೆ. ಈ ಭಟ್ಟಿಗಳ ಸಹಾಯದಿಂದ ಬಹಳ ಸುಲಭವಾಗಿ ಲೋಹಗಳನ್ನು ಸಂಪೂರ್ಣವಾಗಿ ಆವಿಯಲ್ಲಿ ರೂಪಾಂತರಿಸಬಹುದು.

ಮಾಸ್ಕೋವಿನ ವಿಜ್ಞಾನಿಗಳು ಸೂರ್ಯಕಿರಣಗಳನ್ನು ಶಾಖಶಕ್ತಿಯಲ್ಲಿ ರೂಪಾಂತರಿಸಿ, ಅದನ್ನು ವಿದ್ಯುತ್-ಶಕ್ತಿಯಂತ್ರ, ಉದ್ಯಮ ಮತ್ತು ಔಷಧಗಳಲ್ಲಿ ಉಪಯೋಗಿಸುವ ವಿಷಯವಾಗಿ ಪ್ರಯತ್ನಗಳನ್ನು ನಡೆಸಿದ್ದಾರೆ— ಎಂದು ಇತ್ತೀಚಿನ ಸಮಾಚಾರ. ಅಲ್ಲಿನ ಹೀಲಿಯೊ ಟೆಕ್ನಿಕಲ್ ಪ್ರಯೋಗಶಾಲೆಯಲ್ಲಿ, ಇಂಥ ಶಕ್ತಿಯನ್ನು ಪಡೆಯಲು ಬೇಕಾಗುವ ಸಲಕರಣೆಗಳನ್ನು ತಯಾರಿಸುವ ಕೆಲಸ ಪ್ರಾರಂಭವಾಗಿದೆ.

ಡಾ. ಭಾಭಾ ಅವರ ಹೇಳಿಕೆಯಂತೆ, ಸೂರ್ಯಶಕ್ತಿಯನ್ನು ವಾಯುಸಂಚಾರವನ್ನು ಹಿಡಿತದಲ್ಲಿಡುವ ಯಂತ್ರಸಮುದಾಯಗಳ ಶಕ್ತ್ಯಾಗಿ ಹುಟ್ಟಿಸುವುದಕ್ಕೆ ಉಪಯೋಗಿಸಿ, ಈ ಉದ್ಯಮವನ್ನು ದೊಡ್ಡ ಪ್ರಮಾಣದಲ್ಲಿ ಅಭಿವೃದ್ಧಿಗೊಳಿಸಬಹುದಾಗಿದೆ.

ಒಟ್ಟಿನಲ್ಲಿ ಸೂರ್ಯಶಕ್ತಿಯ ವಿಚಾರವಾಗಿ ಇನ್ನೂ ಎಷ್ಟು ಬೇಕೋ ಅಷ್ಟು ಕೆಲಸವಾಗಿಲ್ಲ. ಇನ್ನು ಮೇಲೆ ಆಗಬೇಕಾಗಿದೆ. ಮತ್ತು ಈ ಕೆಲಸ ಭಾರತದಲ್ಲಿ ಹೆಚ್ಚಾಗಿ ನಡೆಯಬೇಕಾಗಿದೆ. ಏಕೆಂದರೆ ಇಲ್ಲಿಯ ಹವಾಮಾನ ಬಹಳ ಅನುಕೂಲವಾಗಿದೆ. ಆದ ಕಾರಣ, ಭಾರತದ ವಿಜ್ಞಾನಿಗಳು ಇದರಲ್ಲಿ ಹೆಚ್ಚು ಆಸಕ್ತಿ ವಹಿಸಿ, ಪರಿಶ್ರಮಪಟ್ಟು ಸೂರ್ಯಶಕ್ತಿಯನ್ನು ಅನೇಕ ಉದ್ಯಮಗಳಲ್ಲಿ ಉಪಯೋಗಿಸುವ ವಿಧಾನಗಳನ್ನು ಕಂಡುಹಿಡಿದರೆ, ಅವರು ಇಡಿಯ ಜಗತ್ತಿಗೇ ಒಂದು ಹೊಸ ಶಕ್ತಿಯನ್ನು ನೀಡಿದಂತಾಗುವುದು.

ಕಾಲರಾ ಕ್ರಿಮಿಗಳ ಮೇಲೆ ತಾಮ್ರದ ಪರಿಣಾಮ

ಡಾ. ಕಮಲಾಪುರ ಕಾಂತರಾಯರು, ಎಂ.ಬಿ.ಬಿ.ಎಸ್., **ಧಾರವಾಡ**

★

೧೯೩೦ರಲ್ಲಿ ಗಿಂಡಿಯಲ್ಲಿರುವ ಕಿಂಗ್ಸ್ ಇನ್‌ಸ್ಟಿಟ್ಯೂಟಿನಲ್ಲಿ ಕ್ರಿಮಿ-ಶಾಸ್ತ್ರಜ್ಞರಾದ ಶ್ರೀ. ರಾಘವಾಚಾರ್ಯರು, ಕಾಲರಾ ಮತ್ತು ವಿಷಮಜ್ವರಗಳ ಕ್ರಿಮಿಗಳ ಮೇಲೆ ತಾಮ್ರದಿಂದ ಆಗುವ ಪರಿಣಾಮ-ವನ್ನು ಕುರಿತು ಪ್ರಯೋಗ ನಡೆಯಿಸಿದರು.

ಈ ಕ್ರಿಮಿಗಳಿಂದ ದೂಷಿತವಾದ ನದಿಯ ಇಲ್ಲವೆ ಕೆರೆಯ ನೀರನ್ನು ೧ರಿಂದ ೫ ಗಂಟೆಯ ಕಾಲದ ವರೆಗೆ ತಾಮ್ರದ ಪಾತ್ರೆಗಳಲ್ಲಿ ಹಾಕಿ ಇಡುವುದರಿಂದ, ನೀರಿನಲ್ಲಿಯ ಈ ಕ್ರಿಮಿಗಳು ನಾಶವಾಗುವುವೆಂದು ಅಭಿಪ್ರಾಯಪಟ್ಟರು.

೧೯೪೦ರಲ್ಲಿ ಶ್ರೀಮಾನ್ ಬೋಸ ಮತ್ತು ಶ್ರೀಮಾನ್ ಚಟರ್ಜಿಯವರು ಕಾಲರಾ ಕ್ರಿಮಿಗಳಿಂದ ದೂಷಿತವಾದ ನೀರಿನಲ್ಲಿ ತಾಮ್ರದ ತುಣುಕುಗಳನ್ನು ಹಾಕಿ ಅದರ ಪರಿಣಾಮವನ್ನು ಪರೀಕ್ಷಿಸಿದರು.

ಪರಿಶುದ್ಧ (Distiled) ಮಾಡಿದ ನೀರಿನಲ್ಲಿ ಕಾಲರಾ ಕ್ರಿಮಿ-ಗಳನ್ನು ಬಿಟ್ಟು, ಅದರಲ್ಲಿ ೧–೨ ಗಂಟೆಯ ವರೆಗೆ ತಾಮ್ರದ ತಂತಿಯ ತುಣುಕುಗಳನ್ನು ಹಾಕಿ ಇಟ್ಟು ಪರೀಕ್ಷಿಸಲಾಗಿ, ಅದರಲ್ಲಿ ಕಾಲರಾ ಕ್ರಿಮಿಗಳು ಸಿಕ್ಕಲಿಲ್ಲ. ತಾಮ್ರದ ತಂತಿ ಇಲ್ಲದ ನೀರಿನಲ್ಲಿ ೪೮ ಗಂಟೆಗಳ ವರೆಗೆ ಅವು ಜೀವಂತ ಇದ್ದುವು.

ಕೆರೆಯ ನೀರನ್ನು ಸೋಸಿ ಅದರಲ್ಲಿ ತಾಮ್ರದ ತಂತಿಯ ತುಣುಕು-ಗಳನ್ನು ಹಾಕಿ, ೧೬ ಗಂಟೆಯ ನಂತರ ಪರೀಕ್ಷೆ ಮಾಡಿದಲ್ಲಿ, ಆ ನೀರಿ-ನಲ್ಲಿ ಕಾಲರಾ ಜಂತುಗಳು ಕಂಡುಬರಲಿಲ್ಲ. ಅದೇ ತಾಮ್ರದ ತಂತಿ ಇಲ್ಲದ ನೀರಿನಲ್ಲಿ ಅವು ೧೫ ದಿನಗಳ ವರೆಗೆ ಇದ್ದುವು.

ನೀರಿನಲ್ಲಿ ತಾಮ್ರದ ತುಣುಕುಗಳನ್ನು ಹಾಕಿ ೨ ಗಂಟೆಯ ವರೆಗೆ ಇಟ್ಟು, ಅದರಲ್ಲಿ ಕಾಲರಾ ಕ್ರಿಮಿಗಳನ್ನು ಬಿಟ್ಟಲ್ಲಿ ೩೦ ನಿಮಿಷಗಳ ನಂತರ ಆ ಕ್ರಿಮಿಗಳು ಆ ನೀರಿನಲ್ಲಿ ಸಿಕ್ಕಲಿಲ್ಲ. ೨ ತಾಸಿನ ಬದ-ಲಾಗಿ ೪ ತಾಸಿನ ವರೆಗೆ ತಾಮ್ರದ ತಂತಿಯನ್ನು ಹಾಕಿಟ್ಟ ನೀರಿನಲ್ಲಿ ಆ ಕ್ರಿಮಿಗಳು ೧೫ ನಿಮಿಷಗಳ ವರೆಗೆ ಮಾತ್ರ ಜೀವಿಸಿದ್ದುವು.

ನೀರಿನಲ್ಲಿ ತಾಮ್ರದ ಅಂಶವು ಅಲ್ಪಪ್ರಮಾಣದಲ್ಲಿ ಸೇರಿದರೂ ಕೂಡ, ಈ ಕ್ರಿಮಿಗಳು ಬದುಕಲಾರವೆಂದು ಈ ಪ್ರಯೋಗಗಳಿಂದ ವ್ಯಕ್ತವಾಗುತ್ತದೆ.

ಕಾಜಿನ ಪಾತ್ರೆಗಳಲ್ಲಿ ಹಾಕಿಟ್ಟ ನೀರಿನಲ್ಲಿ ತಾಮ್ರದ ತುಣುಕು-ಗಳನ್ನು ಸೇರಿಸುವ ಬದಲು, ಸ್ವಚ್ಛವಾದ ತಾಮ್ರದ ಪಾತ್ರೆಯಲ್ಲಿ ನೀರನ್ನು ತುಂಬಿ, ಅದರಲ್ಲಿ ಕಾಲರಾ ಕ್ರಿಮಿಗಳನ್ನು ಹಾಕಿ ಪರೀಕ್ಷಿ-ಸಲಾಗಿ, ಆ ಕ್ರಿಮಿಗಳು ಕೇವಲ ೧೬ ಗಂಟೆಗಳಲ್ಲಿಯೇ ಇಲ್ಲದಂತೆ ಆದುವು. ಊರಲ್ಲಿ ಕಾಲರಾ ಜೇನೆಯು ಇದ್ದಾಗ ಕೂಡ ಕುಡಿ-ಯುವ ನೀರನ್ನು ತಾಮ್ರದ ಪಾತ್ರೆಗಳಲ್ಲಿ ೪ರಿಂದ ೬ ಗಂಟೆಯ ವರೆಗೆ ಇಟ್ಟು ಕುಡಿಯಲು ಉಪಯೋಗಿಸಬಹುದೆಂದು ಈ ಮಹನೀಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ನಮ್ಮ ದೇಶದಲ್ಲಿ ಕುಡಿಯುವ ನೀರನ್ನು ತಾಮ್ರದ ಪಾತ್ರೆಗಳಲ್ಲಿ ಇಡುವುದು ಪೂರ್ವಕಾಲದಿಂದ ಬಂದ ರೂಢಿಯಿದೆ. ಸೂರ್ಯೋ-ದಯಕ್ಕಿಂತ ಮುಂಚೆ ನಮ್ಮ ಹೆಣ್ಣುಮಕ್ಕಳು, ನದಿಗಳಿಗೆ ಹೋಗಿ ಸ್ನಾನತೀರಿಸಿಕೊಂಡು, ತಲೆಯ ಮೇಲೆ ತಾಮ್ರದ ಕೊಡಗಳನ್ನು ಹೊತ್ತುತರುವ ದೃಶ್ಯವು ಬಹಳ ಸಾಮಾನ್ಯವಾಗಿತ್ತು. ಆದರೆ ನಾವು ಇತ್ತಿತ್ತಲಾಗಿ ಪಾಶ್ಚಿಮಾತ್ಯ ಸಂಸ್ಕೃತಿಗೆ ಮರುಳಾಗಿ, ಬೆಳ್ಳಿ, ಕಾಜು, ಸ್ಟೀಲ್ ಮತ್ತು ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುವು-ದನ್ನು ಪ್ರಾರಂಭಿಸಿದ್ದೇವೆ. ಇದರಿಂದ ನಾವು ಅನೇಕ ಬೇನೆ-ಬೇಸರಿಕೆ ಗಳಿಗೊಳಗಾಗಿದ್ದೇವೆ, (Health Magazine)

ವಿಶೇಷ ಸಂಗತಿ :

ನಮ್ಮ ಹಿಂದಿನ ಸಾಂಪ್ರದಾಯಿಕ ಅನೇಕ ರೂಢಿ-ಆಚಾರಗಳು, ಇಂದಿನ ವೈಜ್ಞಾನಿಕ ದೃಷ್ಟಿಗೆ ಅಂಧಸಂಪ್ರದಾಯವಾಗಿ ಕಾಣುತ್ತ-ಲಿದ್ದರೂ, ಅವೆಲ್ಲ ಒಂದಿಲ್ಲೊಂದು ಬಗೆಯ ವೈಜ್ಞಾನಿಕಸಿದ್ಧಿಯ ಪರಿಣಾಮಗಳೇ— ಎಂಬುದು, ನಮ್ಮ ಹೊಸ ವೈಜ್ಞಾನಿಕ ದೃಷ್ಟಿ-ಯಿಂದ ಸಿದ್ಧವಾಗಬೇಕಿದೆ. ಇಂದಿನ ಅನೇಕ ಸಂಶೋಧನೆಗಳು ಸಾಂಪ್ರದಾಯಿಕ ರೂಢಿ-ಆಚಾರಗಳ ವಿಜ್ಞಾನಶುದ್ಧತೆಯನ್ನು ಪುರಸ್ಕರಿಸುತ್ತಲಿರುವುದು ಸಮಾಧಾನದ ಸಂಗತಿ. ತಾಮ್ರಧಾತುವಿಗೆ ನಮ್ಮ ಸನಾತನಸಂಪ್ರದಾಯ ತುಂಬ ಪ್ರಾಶಸ್ತ್ಯವನ್ನು ಕೊಟ್ಟಿದೆ. ಕರ್ನಾಟಕದಲ್ಲಿ ಸಂಪ್ರದಾಯವಂತರಲ್ಲಿ ತಾಮ್ರದುವಲ್ಲದೆ ಮಿಕ್ಕ ಧಾತುವಿನ ಪಾತ್ರೆಯನ್ನು ಬಳಸುತ್ತಿರಲೇ ಇಲ್ಲ. ಕುಡಿಯುವ ತಂಬಿಗೆ, ಥಾಲಿ, ಅಡಿಗೆಯ ಪಾತ್ರೆಗಳು, ದೇವರ ಉಪಕರಣಗಳು, ದೇವರ ಪ್ರತಿಮೆಗಳು ಎಲ್ಲವೂ ತಾಮ್ರದುವೇ ಇರುತ್ತಿದ್ದುವು. ನಮ್ಮ ಮೊದಲಿಗರ ವೈಜ್ಞಾನಿಕದೃಷ್ಟಿ ತಾಮ್ರದಲ್ಲಿ ಯಾವ ಪ್ರಯೋಜನ-ವನ್ನು ಕಂಡಿದ್ದಿತೋ ಏನೊ ! ಮುಂದಿನವರಿಗೆ ತಾಮ್ರದ ಪಾತ್ರೆ-ಪಡಗಗಳನ್ನು ಬಳಸಬೇಕೆಂಬ ಆಚಾರ ಮಾತ್ರ ನೆನಪಿನಲ್ಲುಳಿಯಿತು; ಅದರ ವೈಜ್ಞಾನಿಕ ಪ್ರಯೋಜನ ಮರೆತು ಹೋಯಿತು. ಎಂತಲೇ ಅದೊಂದು ಅಂಧಪರಂಪರೆಯೆಂದು ಹೊಸ ಕಾಲದವರಿಗೆ ಎನಿಸಿತು. ಆದರೆ ಇಂದಿನ ವೈಜ್ಞಾನಿಕ ಸಂಶೋಧನೆ ತಾಮ್ರದ ಬಳಕೆಯ ಪ್ರಯೋಜನವನ್ನು ಪ್ರಯೋಗಗಳಿಂದ ಕಂಡುಹಿಡಿದು, ನಮ್ಮ ಹಳೆಯ ಸಂಪ್ರದಾಯದ ಮೇಲೆ ಬೆಳಕನ್ನು ಕೆಡಹಿದುದು ಸಮಾ-ಧಾನದ ಸಂಗತಿ. ನಮ್ಮ ಸನಾತನ ಪರಂಪರೆಗಳ ಸಂಶೋಧನೆ ಹೆಚ್ಚಾಗಿ ನಡೆಯುವುದು ಅವಶ್ಯವಾದ ಮಾತಾಗಿದೆ. ಸಂ. ಜ.

ಮಗಳ-ಮದುವೆ

(ಒಂದು ವಿಮರ್ಶೆ)*

ವಿಮರ್ಶಕರು : ಶ್ರೀ. ನಿಜ್ಜಿ ಅಣ್ಣಾರಾಯರು, ಉಗಾರ

卐

ಇದೀಗಿನ ಕನ್ನಡ ಸಾಹಿತ್ಯದ ಕಾಲವನ್ನು ಕಾದಂಬರಿಯ ಕಾಲವೆಂದು ಕರೆಯಬಹುದು. ಹೊಸಗನ್ನಡದಲ್ಲಿ ಕಾದಂಬರೀಪ್ರಪಂಚವು ಬಂಗಾಲಿ ಮರಾಠಿ ಕೃತಿಗಳ, ಅನುವಾದಗಳಿಂದ ಆರಂಭವಾಯಿತು. ಆದರೆ ಈಗಿನ ಕನ್ನಡ ಕಾದಂಬರೀಯುಗವು ಮಾತ್ರ ಸ್ವತಂತ್ರ ಕಾದಂಬರಿಗಳಿಂದ ಮೊದಲಾಯಿತು. ಈ ಯುಗವನ್ನು ಆರಂಭಿಸಿದವರಲ್ಲಿ ಶ್ರೀ. 'ಆನಂದಕಂದ'ರ ಹೆಸರು ಮೇಲ್ಪಂಕ್ತಿಯಲ್ಲಿ ನಿಲ್ಲುತ್ತದೆ. ಇವರ 'ಸುದರ್ಶನ' ಕಾದಂಬರಿಯಿಂದಲೇ ಉತ್ತರ ಕರ್ನಾಟಕದಲ್ಲಿ ಸ್ವತಂತ್ರ ಸಾಮಾಜಿಕ ಕಾದಂಬರಿಗಳ ಯುಗವು ಆರಂಭವಾಯಿತೆಂದರೆ ಅತಿಶಯೋಕ್ತಿಯಾಗಲಾರದು.

ಕಾದಂಬರಿ, ಸಣ್ಣಕತೆ, ಕವನ ಮತ್ತು ಪ್ರಬಂಧಗಳಿಂದ ಕನ್ನಡ ಜನತೆಯ ಮನಸ್ಸನ್ನು ತಮ್ಮ ಕಡೆಗೆ ಸೆಳೆದುಕೊಂಡ 'ಆನಂದಕಂದ'ರು ಪತ್ರಿಕಾಪ್ರಪಂಚಕ್ಕೆ ಇಳಿದು, ನಡುವೆ ಕಾದಂಬರಿ ಸಾಹಿತ್ಯ ನಿರ್ಮಿತಿಯ ಕಡೆಗೆ ಅಷ್ಟು ಮನಸ್ಸು ಹಾಕಲಿಲ್ಲ. ಹೊಸ ಹೊಸ ಲೇಖಕರನ್ನು ಬೆಳಕಿಗೆ ತರುವ ಕಾರ್ಯವನ್ನು 'ಜಯಂತಿ' ಮಾಸಪತ್ರಿಕೆಯ ಮುಖಾಂತರ ಹದಿನಾಲ್ಕು ವರ್ಷಗಳಿಂದ ಒಂದೇ ಸವನೆ ಸಾಗಿಸಿದರು. ಆದರಿಂದ ಇಂದು ನಾವು ಕನ್ನಡದಲ್ಲಿ ಹೊಸ ಹೊಸ ಬರೆಹಗಾರರ ಬಳಗವನ್ನು ಕಾಣುವೆವು. ಕನ್ನಡ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಈ ಕಾರ್ಯವು ಬಹು ಬೆಲೆಯುಳ್ಳುದು. ಇಂತಹ ಒಂದು ಮಹತ್ತ್ವದ ಸೇವೆಯಲ್ಲಿ ತಮ್ಮ ತನು-ಮನ-ಧನಗಳನ್ನೆಲ್ಲ ಸವೆಯಿಸುವುದರಲ್ಲಿ ತನ್ಮಯರಾದ ಶ್ರೀ. 'ಆನಂದಕಂದ'ರು ನಡುವೆ ಬಹುದಿನಗಳ ವರೆಗೆ ಕಾದಂಬರಿಗಳನ್ನು ಬರೆಯದೆ ಇದ್ದುದು ಆಶ್ಚರ್ಯಕರವಾದುದೇನೂ ಅಲ್ಲ. **'ಅಶಾಂತಿಪರ್ವ'** ದ ತರುವಾಯ ೧೭–೧೮ ವರ್ಷಗಳ ವರೆಗೆ 'ಆನಂದಕಂದ'ರು ಕಾದಂಬರಿಯನ್ನು ಬರೆಯದಿದ್ದರೂ, ಅವರ ಹೊಸ ಕಾದಂಬರಿಯ ಪ್ರಕಾಶನವನ್ನು ಎದುರು ನೋಡುವ ಕನ್ನಡ ವಾಚಕವರ್ಗವೇನು ಕಡಿಮೆಯಾಗಿಲ್ಲ. ಅಷ್ಟು ಅವರ ಕಾದಂಬರಿಗಳು ಓದುಗರ ಮನಸ್ಸನ್ನು ಆಕರ್ಷಿಸಿಕೊಂಡಿವೆ.

ಕಲೆಗಾರನು ತನ್ನ ಅನುಭವವನ್ನು ಹೆಚ್ಚಿಸಿಕೊಂಡಂತೆ, ಅವನ ಕಲಾಕೃತಿಗೊಂದು ಸಜೀವತೆಯು ಉಂಟಾಗುತ್ತದೆ. ಕರ್ತೃವಿನ ಜೀವನದೃಷ್ಟಿಯು ಪರಿಪಕ್ವವಾಗುತ್ತ ನಡೆದಂತೆ, ಕೃತಿಯು ಸುಂದರವಾಗುತ್ತದೆ, ಜೀವನಾದರ್ಶವನ್ನು ಬೆಳಗುವ ಕನ್ನಡಿಯಾಗುತ್ತದೆ. ಅವಕ್ಕೆ ಸಂಯಮದ ಜೋಡು ಕೂಡಿದರಂತೂ ಇನ್ನೂ ಕಳೆಗಟ್ಟುತ್ತದೆ. ಇವೆಲ್ಲ ಗುಣಗಳನ್ನು ಮೈಗೂಡಿಸಿಕೊಂಡು ಆನಂದಕಂದರ 'ಮಗಳ ಮದುವೆ' ಎಂಬ ಕಾದಂಬರಿಯು ಇದೀಗ ಕನ್ನಡ ಕಾದಂಬರೀ ಪ್ರಪಂಚದಲ್ಲಿ ಬೆಳಕಿಗೆ ಬಂದಿದೆ.

ಸಬ್‌ರಜಿಸ್ಟ್ರಾರ ಕಚೇರಿಯಲ್ಲಿರುವ ಕಾರಕೂನ ಗೋಪಾಲರಾಯರು. ಅವರ ಮಗಳು ಕಾವೇರಿ. ಇವಳ ಮದುವೆಯ ವಿಚಾರದಿಂದ ಕಾದಂಬರಿ ಆರಂಭವಾಗುತ್ತದೆ. ವೆಂಕಣ್ಣನೆಂಬ ವರ, ಕನ್ಯೆಯ ಪರೀಕ್ಷೆಗೆಂದು ತನ್ನ ಗೆಳೆಯರೊಡನೆ ಬರುತ್ತಾನೆ. ಅವರಲ್ಲಿ ರತ್ನಾಕರನೆಂಬ ತರುಣನೊಬ್ಬ— ಎಂ. ಎ. ಆದ ದೇಶಭಕ್ತ. ಒಂದು ದೃಷ್ಟಿಯಿಂದ ಇವನೇ ಈ ಕಾದಂಬರಿಯ ಮುಖ್ಯ ಪಾತ್ರ. ಕಾವೇರಿಯ ಗೆಳತಿ ಕುಮುದೆಯ ಮತ್ತು ರತ್ನಾಕರರ ಪರಿಚಯ ಈ ಸಂದರ್ಭದಲ್ಲಿ ಒದಗಿ ಬರುತ್ತದೆ. ಕುಮುದೆಯು ಆಧುನಿಕ ಶಿಕ್ಷಣ ಪಡೆದ ತರುಣಿ. ಅವಳ ಚೆಲುವು ಚಟುವಟಿಕೆಗಳನ್ನು ಕಂಡೋ, ಕಾವೇರಿಗೆ ಇಂಗ್ಲಿಷ್ ಬರುವುದಿಲ್ಲವೆಂದೋ, ಅಂದು ನೋಡಲು ಬಂದ ಕನ್ಯೆಯನ್ನು ನಿರಾಕರಿಸಿ ವೆಂಕಣ್ಣ ಹೋಗುತ್ತಾನೆ.

ಗೋಪಾಲರಾಯರ ಮನೆತನ ಮಧ್ಯಮವರ್ಗದ್ದು. ಮೇಲಾಗಿ ಸಂಪ್ರದಾಯವಂತರಾಗಿ ಬಾಳಿದವರು. ಅವರ ಮಗಳು ಕೂಡ ಕನ್ನಡ ಕಲಿತು, ಮನೆತನ ನಡೆಯಿಸಲು ಬೇಕಾದ ಎಲ್ಲ ಗುಣಗಳನ್ನೂ ಸಂಪಾದಿಸಿದ ವಧು. ಚೆಲುವೆ. ಆದರೆ ಇಂದಿನ ತರುಣರ ಬಯಕೆಯಂತೆ ಇಂಗ್ಲಿಷ್ ಭಾಷೆ, ಹಾಡು, ಕುಣಿತಗಳು ಅವಳಿಗೆ ಬರುವುದಿಲ್ಲ. ಅದರೊಡನೆ ವರದಕ್ಷಿಣೆ- ವರೋಪಚಾರಗಳನ್ನು ಹೆಚ್ಚಾಗಿ ಕೊಡಲಿಕ್ಕೂ ರಾಯರು ಅಸಮರ್ಥರು. ಹೀಗಾಗಿ ಕಾವೇರಿಯ ಮದುವೆಯಾಗದೆ ಉಳಿದುಬಿಟ್ಟದ್ದಿತು. ಮೊದಲ ನಿರೀಕ್ಷಣೆಯಲ್ಲಿಯೇ, ರತ್ನಾಕರನೊಬ್ಬ ಮಾತ್ರ ಕಾವೇರಿಯ ಗುಣಗಳನ್ನು ಕಂಡುಕೊಂಡ. ಅಲ್ಲದೆ ಗೋಪಾಲರಾಯರಿಗೆ ಮಗಳ ಮದುವೆಯನ್ನು ಮಾಡಲು ನೆರವಾಗಿ ಬಂದ.

ವೆಂಕಣ್ಣನ ಸ್ನೇಹಿತನೆಂದು ಕಾವೇರಿಯನ್ನು ನೋಡಲು ರತ್ನಾಕರ ಬರಬೇಕಾಗುತ್ತಿದ್ದಿತೋ ಇಲ್ಲವೋ, ಆದರೆ ವೆಂಕಣ್ಣನ ಅಣ್ಣ ರಂಗಣ್ಣನ ಗೆಳೆಯನೆಂದು ಅಂದು ವೆಂಕಣ್ಣನ ಜೊತೆಗೆ ಬಂದ. ಕೊನೆಗೆ ವೆಂಕಣ್ಣ ನಿರಾಕರಿಸಿದ ಕಾವೇರಿಯನ್ನು ರಂಗಣ್ಣನಿಗೆ ಕೊಡಿಸಿ ಮದುವೆ ಮಾಡಿಸಿದ. ಮದುವೆಯ ಸಂಭ್ರಮದೊಡನೆ ಕಾದಂಬರಿಯು ಮುಗಿಯುತ್ತದೆ.

ನಿರಪೇಕ್ಷ ಬುದ್ಧಿಯಿಂದ ಸಮಾಜಸೇವೆಯನ್ನು ಮಾಡುವ ಕಾಲಕ್ಕೆ— ಪ್ರತೀಕಾರವಾಗುವಂತೆ— ಹಲವರಿಂದ ಸಹಕಾರವೂ ಒದಗುವುದುಂಟು. ಅಲ್ಲದೆ ಸ್ವಂತದ ಆಶೆ— ಆಕಾಂಕ್ಷೆಗಳೂ ಫಲಿಸುವ ಸಂಭವವೂ ಇರುವುದು. ಹಾಗೆಯೇ ರತ್ನಾಕರನಿಗೂ ಆಯಿತು. ಈ ಕಾವೇರಿಯ ಮದುವೆಯ ಪೌರೋಹಿತ್ಯವನ್ನು ವಹಿಸುವಾಗ, ಕುಮುದೆಯ ಪರಿಚಯ-ಸಲುಗೆಗಳು ಬೆಳೆದುವು. **ಪರಿಚಯ ಪ್ರಣಯದಲ್ಲಿ**

* 'ಆನಂದಕಂದ'ರು ಬರೆದ ಹೊಸ ಕಾದಂಬರಿ. ಪ್ರಕಾಶಕರು **ಶರತ್ ಪ್ರಕಾಶನ** ಮಂದಿರ, ಧಾರವಾಡ. ಕ್ರಾ. ಅ. ೩೫೦ ಪುಟ. ಬೆಲೆ ೪-೦-೦.

ಪರಿವರ್ತನಗೊಂಡು ಒಂದು ಮಟ್ಟಕ್ಕೂ ಬಂದು ನಿಂತಿತು. 'ಗಂಡುಸೇ ಆಗಲಿ, ಹೆಂಗುಸೇ ಆಗಲಿ, ಒಂಟಿಗನಾಗಿ ಬಾಳುವು-ದೆಂದರೆ ಅದು ಅಪೂರ್ಣಜೀವನ! ಒಂದೇ ಗಾಲಿಯ ರಥವಿದ್ದಂತೆ! ಗಂಡು-ಹೆಣ್ಣಿನ ಜೊತೆಯ ಬಾಳೇ ಪೂರ್ಣಜೀವನ' ಎಂಬ ಅನುಭವ ರತ್ನಾಕರನಿಗುಂಟಾಯಿತು. ತನ್ನ ಜೀವನ ಪೂರ್ಣಗೊಳ್ಳಲು, ಕುಮುದೆಯ ಜೊತೆ ಅವಶ್ಯವೆಂದು ನಿರ್ಣಯಿಸಿತು. ಕುಮುದೆಯ ಜೀವನವೂ ಕೂಡ ಹಾಗೆಯೇ; ಆದರೆ ಅವಳ ತಂದೆ, ಅನಂತರಾಯರಲ್ಲಿ ತಮ್ಮ ಭಾವೀ ಅಳಿಯನ ಬಗ್ಗೆ ಇರುವ ಕಲ್ಪನೆ-ಗಳೇ ಬೇರೆಯಾದುವು. ಇನ್ನು ಅವರ ಕಲ್ಪನೆಯಂತೆ ರತ್ನಾಕರನು ಕೆಲವು ಗುಣಗಳನ್ನು ಸಂಪಾದಿಸಬೇಕು. ಅದರ ಜೊತೆಗೆ ಕೆಲವು ಚಟುವಟಿಕೆಗಳಿಂದ ಅವನು ದೂರವಿರಬೇಕು. ಅಂದರೆ ಅವರಿಗೆ ರತ್ನಾಕರ ಆದರ್ಶ ವರ. ಈ ವರಪರೀಕ್ಷೆಯಲ್ಲಿ ತಂದೆ-ಮಗಳ ಹೋರಾಟವನ್ನೇ ಮುಂದರಿಸಿ 'ಕುಮುದಾ' ಎಂಬ ಇನ್ನೊಂದು ಕಾದಂಬರಿಗೆ ಲೇಖಕರು ಇಲ್ಲಿ ಪ್ರಸ್ತಾವನೆ ಹಾಕಿದ್ದಾರೆ. ಇದೊಂದು ವಿಧದಲ್ಲಿ ಮಗಳ ಮದುವೆಯ ಚಿತ್ರದ ಇನ್ನೊಂದು ಮಗ್ಗಲು ನಮ್ಮ ಮುಂದೆ ಇಲ್ಲಿ ರೂಪುಗೊಂಡು ನಿಂತಿದೆ.

ಹುಬ್ಬಳ್ಳಿಯ ಗಿರಣಿಯೊಂದರಲ್ಲಿ ಲೆಕ್ಕಪತ್ರವನ್ನಿಡುವ ಕಾರಕೂನ ಸಂಜೀವರಾಯರು, ರತ್ನಾಕರನಿಗೆ ಸೋದರಮಾವನಾಗಬೇಕು. ಅಲ್ಲದೆ ವಿಧವೆಯಾಗಿ ಬಾಳುವೆ ಸಾಗಿಸುತ್ತಿರುವ ರತ್ನಾಕರನ ತಾಯಿಗೆ ಸ್ವಲ್ಪಮಟ್ಟಿಗೆ ಆಶ್ರಯವಿತ್ತ ಋಣದ ಭಾರ ಬೇರೆಯಿದೆ. ಆದ್ದರಿಂದ ಸಂಜೀವರಾಯರು, ತಮ್ಮ ಮದುವೆಗಾದ ಮಗಳಿಗೆ— ಸುಭದ್ರೆಗೆ— ರತ್ನಾಕರ ಪತಿಯಾಗಬೇಕೆಂದು ಬಯಸುತ್ತಾರೆ. ರತ್ನಾಕರನ ತಾಯಿಯೂ, ಒಮ್ಮೆ ತನ್ನ ಮಗನು ಒಳ್ಳೆಯ ಕೆಲಸ-ವೊಂದನ್ನು ಸಂಪಾದಿಸಿ, ಸಂಸಾರಿಯಾಗಬೇಕೆಂಬ ಪ್ರಲೋಭನೆಗೆ ಒಳಗಾಗಿ, ಗಾಂಧೀ ಚಳವಳಿಯಲ್ಲಿ ಸೇರಿದ ಮಗನನ್ನು ಸಂಸಾರಕ್ಕೆ ಹಚ್ಚಲು ಮದುವೆಯೊಂದು ಉಪಾಯವೆಂದು ಯೋಚಿಸಿ, ಸುಭದ್ರೆ-ಯಲ್ಲಿ ರತ್ನಾಕರನನ್ನೇ ಮದುವೆಯಾಗುವೆನೆನ್ನುವ ಹಟದ ಬೀಜ-ವನ್ನು ಬಿತ್ತುತ್ತಾಳೆ. ಆದರೆ ಮಗನ ಮೇಲಿರುವ ಅಪಾರ ವಿಶ್ವಾಸ-ದಿಂದ ತನ್ನ ವಿಚಾರ ತಪ್ಪು— ಎಂಬ ಅರಿವೂ ಅವಳಿಗೆ ಬೇಗನೆ ಉಂಟಾಗುತ್ತದೆ. ಏನಿದ್ದರೂ ಸಂಜೀವರಾಯರ ಮಗಳ ಮದುವೆಯ ಪ್ರಶ್ನೆಯ ಚಿತ್ರವೂ ಇಲ್ಲಿ ಆನುಷಂಗಿಕವಾಗಿ ನಮ್ಮ ಮುಂದೆ ಬರುತ್ತದೆ.

ಹೀಗೆ ಮಗಳ ಮದುವೆಯಲ್ಲಿ ಮೂರುವಿಧದ ಮದುವೆಯ ಸಂದರ್ಭ ಸಮಸ್ಯೆಗಳ ಚಿತ್ರಣವು ಮುಪ್ಪುರಿಗೊಂಡು ಮೂಡಿನಿಂತಿದೆ. ಇದಕ್ಕೆ ಹಿನ್ನೆಲೆಯಾಗಿ ೧೯೩೦ನೆಯ ಇಸ್ವಿಯ ರಾಜಕೀಯ ಚಳವಳಿಯ ವಾತಾವರಣವು ಬಂದಿದೆ. ಇದರಿಂದಲೂ, ವೆಂಕಣ್ಣನ ಗೆಳೆಯರ ಕುಹಕತನದಿಂದಲೂ, ಕಾದಂಬರಿಯ ಕಥಾನಕದಲ್ಲಿ ಒಂದು ತರದ ಚಟುವೂ ಕುತೂಹಲ ಜನಕ ಸನ್ನಿವೇಶಗಳೂ ಉಂಟಾಗಿವೆ. ಹೀಗಾಗಿ ವಿಶೇಷ ಏರಿಳಿವುಗಳಿಲ್ಲದುದೂ ಜನಜೀವನದೊಳಗಿನ ಸಾಮಾನ್ಯ ಘಟನೆಯೂ ಎನಿಸುವಂತಹ ಕಥಾನಕವು ಕೂಡ, ಕಲೆಗಾರಿಕೆಯ ಕೈವಾಡದಿಂದ ಮನೋಹರವಾದ ಕಥಾವಸ್ತುವಾಗಿದೆ. ಇದರಲ್ಲಿಯೆ ಆನಂದಕಂದರ ಕಥನಕಲೆಯ ಮೇಲ್ಮೆಯಿದೆ.

ಇನ್ನೊಂದು ರೀತಿಯ ಹೊಸತನವನ್ನು ಈ ಕಾದಂಬರಿಯ ಕಥನಕಲೆಯಲ್ಲಿ ನಾವು ಕಾಣುತ್ತೇವೆ. ಕಥೆಗೆ ಜೀವ-ಜೀವಾಳ-ವಾಗಿರಬೇಕಾದುದು ಹೋರಾಟವೊಂದು. ವ್ಯಕ್ತಿ-ಸಮಾಜಗಳಲ್ಲಿ, ವ್ಯಕ್ತಿ-ವ್ಯಕ್ತಿಗಳಲ್ಲಿ, ವ್ಯಕ್ತಿಯ ಎರಡು ಮಾನಸಿಕ ಶಕ್ತಿಗಳಲ್ಲಿ, ಧ್ಯೇಯನಿಷ್ಠೆ-ಸ್ವಾರ್ಥಗಳಲ್ಲಿ— ಹೀಗೆ ವಿವಿಧವಿಧಗಳಲ್ಲಿ ಅದು ರೂಪುಗೊಂಡು ನಿಲ್ಲುವುದುಂಟು: ಇಂತಹ ನೇರವಾದ ಸಮರ ಪ್ರಸಂಗ ಯಾವುದೂ ಈ ಕಾದಂಬರಿಯ ಕಥಾನಕದಲ್ಲಿ ಒಡೆದು ತೋರುವಂತಿಲ್ಲ. ಕಾವೇರಿಗೂ ರಂಗಣ್ಣನಿಗೂ ವಿವಾಹ ಮಾಡ-ಬೇಕೆನ್ನುವ ರತ್ನಾಕರನಿಗೆ, ತನ್ನ ರಾಜಕೀಯ ರಂಗದ ಪರಿಸ್ಥಿತಿ-ಯೊಡನೆ ಹೋರಾಡಬೇಕಾಗುತ್ತದೆಯೇ ಹೊರತಾಗಿ, ವಿರೋಧಕ ಶಕ್ತಿಯೊಡನೆ ಅಂಥ ಸಮರಪ್ರಸಂಗವಿಲ್ಲ. ಇನ್ನೇನು, ವೆಂಕಣ್ಣನ ಸ್ನೇಹಿತರಿಂದ ಒಂದು ಮಾದರಿಯ ಹೋರಾಟ ನಿರ್ಮಾಣವಾಗ-ಬಹುದಿತ್ತು; ಆದು ರಂಗಣ್ಣನ ಮನಸ್ಸಿನಲ್ಲಿಯೇ ಮೂಡಿ ಮುಳು-ಗುತ್ತಿದೆ, ಓದುಗರ ಮನಸ್ಸನ್ನು ತೂಗಾಡಿಸಿ ಬಿಡುತ್ತಿದೆ; ರತ್ನಾಕರ-ನನ್ನೆನೂ ಆದು ಕಣಕ್ಕೆ ಇಳಿಸುವುದಿಲ್ಲ. ಇಂಥದೊಂದು— ಕನ್ನಡ ಸಾಹಿತ್ಯಕ್ಕೆ ನಾವೀನ್ಯಪೂರ್ಣವಾದ— ಹೋರಾಟ ಈ ಕಾದಂಬರಿ-ಯಲ್ಲಿ ಮೈದಾಳಿ ನಿಂತಿದೆ.

ಇನ್ನು ಪಾತ್ರಸೃಷ್ಟಿಯ ವಿಚಾರ: ರತ್ನಾಕರನು ಧ್ಯೇಯನಿಷ್ಠ ಜೀವಿಯಾದರೂ ಮಾನವಸಹಜವಾದ ಮಾನಸಿಕ ತೂಗಾಟ ಅವನಲ್ಲಿಯೂ ಇದೆ. ಯುವಕರಲ್ಲಿರುವ ಭಾವನೆಯ ಆವೇಗವಿದೆ. ಆದಕ್ಕೆ ವಿವೇಕ ಹಾಗೂ ಗುರಿಬದ್ಧ ಜೀವನಗಳ ಕಡಿವಾಣಗಳಿವೆ. ಆದರಂತೆ ಕುಮುದೆಯ ಪಾತ್ರವೂ ಕೂಡ. ಅವಳು, ಮುಂದೆ ಎಂದೋ ತನ್ನವನಾಗಬಹುದಾದ ವೀರವೃತ್ತಿಯ ರತ್ನಾಕರನನ್ನೇ ಬಯಸುವಳು ಹೊರತಾಗಿ, ಕ್ಷಮೆ ಕೇಳಿ ಈಗಲೇ ತನ್ನವನಾಗಿ ಬಿಡಬಹುದಾದ ರತ್ನಾಕರನನ್ನು ಯಾವಾಗಲೂ ಬಯಸುವುದಿಲ್ಲ. ತನ್ನ ಸುಖಕ್ಕಿಂತ ದೇಶದ ಕಾರ್ಯ ಹೆಚ್ಚಿನದೆಂದು ತಿಳಿದ ತರಳೆ ಯವಳು; ಆದರೂ ತಾರುಣ್ಯಕ್ಕಿರುವ ಸಹಜವಾದ ಮನಸ್ಸಿನ ಹೊಯ್ದಾಟ ಅವಳಲ್ಲಿಯೂ ಇದೆ. ಇನ್ನು ವೇಣಕ್ಕ, ತುಂಗಮ್ಮ, ಅಂಬಕ್ಕ, ರಮಾಬಾಯಿ ಮತ್ತು ರಂಗಣ್ಣನ ಕಕ್ಕಿ ಇವರೆಲ್ಲರೂ ಭಾರತೀಯ ಮಹಿಳೆಯರ ಪ್ರತಿನಿಧಿಗಳಂತಿದ್ದಾರೆ. ಆದರಂತೆ ಗೋಪಾಳರಾಯ, ಅನಂತರಾಯ, ಸಂಜೀವರಾಯರು ಸಮಾಜ-ದೊಳಗಿನ ಒಂದೊಂದು ಮಾದರಿಯ ವ್ಯಕ್ತಿಗಳ ಪ್ರತಿನಿಧಿಗಳಂ-ತಿದ್ದಾರೆ. ಈ ಮೂವರೂ ಹೆಣ್ಣನ್ನು ಹಡೆದು, ಮಗಳ ಮದುವೆಯ ವಿಚಾರದಲ್ಲಿರುವ ತಂದೆಯಂದಿರೇ ಆದರೂ, ವಿವಿಧ ಮಾದರಿಯ ಮನೋವೃತ್ತಿಯ ವ್ಯಕ್ತಿಗಳವರು. ಅನಂತರಾಯ ರತ್ನಾಕರನ ರಾಜಕೀಯ ಚಟುವಟಿಕೆಗಳನ್ನು ಸಹಾನು-

ಭೀತಿಯಿಂದ ಕಾಣದಂಥವನಾದರೂ, ಅವನ ಸುಗುಣಗಳನ್ನು ಮೆಚ್ಚುತ್ತಾನೆ; ಸಮಾಜಸೇವೆಯನ್ನು ಸ್ವಾಗತಿಸುತ್ತಾನೆ. ಈ ಗುಣಗ್ರಾಹಕತೆಯ ಚಿತ್ರಣವನ್ನು ನಾವು ಮೆಚ್ಚುತ್ತೇವೆ. ಆದರಿಂದ ಒಂದು ಪಾಠವನ್ನು ನಾವು ಕಲಿಯುತ್ತೇವೆ. ಇದರಂತೆಯೇ ಅಂಬಕ್ಕನ ಪಾತ್ರದಿಂದಲೂ ನಮ್ಮ ನಾಡಿನ ತಾಯಂದಿರು ತಿಳಿದು-ಕೊಳ್ಳುವ ಸಂಗತಿಗಳು ಹಲವು ಇವೆ. ಅವಳ ಮಾತೃಹೃದಯ, ಮಗನ ಮೇಲಿರುವ ನಿಷ್ಠೆಯನ್ನು ಯಾರೂ ಮೆಚ್ಚಬೇಕು. ಇನ್ನು ಪೋಲೀಸರು, ಹಳ್ಳಿಯ ಒಕ್ಕಲಿಗ, ಖಾದಿ ಭಾಂಡಾರದ ಶಂಕರಣ್ಣ, ಡ್ರಾಯವರ್ ದತ್ತೋಬಾ ಇವರೆಲ್ಲ ಕಾದಂಬರಿಯಲ್ಲಿ ನಡುನಡುವೆ ಬಂದು, ತಮ್ಮ ತಮ್ಮ ಪಾತ್ರವನ್ನು ಪ್ರದರ್ಶಿಸಿ, ಕಥೆಗೆ ಕಳೆಯನ್ನು ತರುತ್ತಾರೆ. ಅದರಂತೆ ರಂಗಣ್ಣನ ಕಾರ್ಯಕ್ಷೇತ್ರವನ್ನೂ, ಅವನ ವಿದ್ಯಾರ್ಥಿಜೀವನವನ್ನೂ ಕಂಡುಕೊಂಡ ನಾವು, ಅವನನ್ನು ಪೂರ್ಣ-ವಾಗಿ ಅರಿತುಕೊಳ್ಳುತ್ತೇವೆ. ರತ್ನಾಕರನಿಗೆ ತಕ್ಕ ಗೆಳೆಯನೆಂದೂ ಭಾವಿಸುತ್ತೇವೆ. ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ರಂಗಣ್ಣನ ಸೇವೆಯ ಮಹತ್ತ್ವವನ್ನು ನಾವು ತಿಳಿದುಕೊಂಡು ಸಂತೋಷ-ಗೊಳ್ಳುತ್ತೇವೆ. ಆದರೆ ಅವನಿಗೆ ಸಂಸಾರದಲ್ಲಿ ಜೊತೆಯಾಗಿ ನಿಲ್ಲುವ ಕಾವೇರಿಯ ಪಾತ್ರದ ಪರಿಪೋಷಣೆಯು ನಮ್ಮ ಬಗೆಗಣ್ಣಿನೆದುರಿಗೆ ಅಷ್ಟು ಸ್ಫುಟವಾಗಿ ಮೂಡುವುದಿಲ್ಲ. ರತ್ನಾಕರನ ಪರೀಕ್ಷೆಯೇ ಪರೀಕ್ಷೆ, ಅವನ ತೀರ್ಮಾನವೇ ತೀರ್ಮಾನವಾಗಿಬಿಡುತ್ತದೆ. ಇಂದಿನ ನಮ್ಮ ಸಮಾಜದಲ್ಲಿ — ಮದುವೆಯ ಕಾಲಕ್ಕೆ ವಧುವಾಗಿ ನಿಲ್ಲುವ ಅವರಲ್ಲೂ ಕಾವೇರಿಯು ಇರುವಂಥ ಪರಿಸ್ಥಿತಿಯಲ್ಲಿರುವ — ಹೆಣ್ಣು ಮಕ್ಕಳ ಪಾತ್ರವೇ ಹಾಗೆಯೋ, ಕುಮುದೆ-ರತ್ನಾಕರರ ಉಜ್ವಲ ಚಾರಿತ್ರ್ಯದ ಚಿತ್ರಣದಲ್ಲಿ ಲೇಖಕರು ಕಾವೇರಿಯ ಕಡೆಗೆ ಅಷ್ಟು ಗಮನ ಕೊಡಲಿಲ್ಲವೆಂದೋ, ಬರಲಿರುವ 'ಕುಮುದಾ' ಕಾದಂಬರಿ-ಯಲ್ಲಿ ಅವಳ ಗೃಹಿಣೀಜೀವನದ ಪ್ರಸ್ಫುಟ ಚಿತ್ರ ಬರಲಿರುವುದ-ರಿಂದಲೋ ಏನೋ, ಅವಳು ಕಾದಂಬರಿಯಲ್ಲಿ ವ್ಯಕ್ತಿತ್ವ ನಿಲ್ಲಲಿಲ್ಲ. ಆದರೂ ಅವಳ ಮೂಕವೇದನೆಯ ಕಾವು ಓದುಗರ ಕರುಳಿಗೆ ತಟ್ಟದೆ ಹೋಗುವುದಿಲ್ಲ. ಇನ್ನುಳಿದ 'ಅಗಲಾವೇ' ಮೊದಲಾದ ವೆಂಕಣ್ಣನ ಗೆಳೆಯರ ಬಳಗವೂ ಅವರವರ ಹೆಸರಿಗೆ ತಕ್ಕಂತೆಯೇ ಇದ್ದದ್ದಾಗಿದೆ. ಅವರ ಮಧ್ಯದಲ್ಲಿರುವ ವೆಂಕಣ್ಣನು ಕೂಡ ಹಾಗೆಯೇ ಇರುವನು. ಇವೆಲ್ಲ ಪಾತ್ರಗಳ ಚಿತ್ರಣವು ಬಹು ಚೆನ್ನಾಗಿ ಬಂದಿದೆ.

ಕಾದಂಬರಿಯ ಲೇಖನಕಲೆಯಲ್ಲಿ ಕಥಾನಕ, ಪಾತ್ರಸೃಷ್ಟಿಗಳಿ-ಗಿರುವಷ್ಟೇ ಮಹತ್ತ್ವವು ನಿರೂಪಣೆಯ ರೀತಿಗೂ, ಭಾಷಾಶೈಲಿಗೂ ಇರುತ್ತದೆ. ಲೇಖಕನಿಗೆ ತಾನು ಚಿತ್ರಿಸುತ್ತಿರುವ ಜೀವನದ ಅನು-ಭವವು ಪೂರ್ಣವಾಗಿದ್ದರೆ, ಅದು ತನಗೆ ತಕ್ಕ ನಿರೂಪಣೆಯ ಕ್ರಮ-ವನ್ನು ಅಳವಡಿಸಿಕೊಂಡು ಕೃತಿಯಲ್ಲಿ ಮೂಡಿ ನಿಲ್ಲುತ್ತದೆ. ಶ್ರೀ 'ಆನಂದಕಂದ' ರಿಗೆ ಹಳ್ಳಿ-ಪಟ್ಟಣಗಳೆರಡರಲ್ಲಿಯ ಜೀವನದ ಪರಿಚಯವೂ ಅನುಭವವೂ ಇದೆ. ಅದರಿಂದ ಅವರು ಇಲ್ಲಿ ಚಿತ್ರಿಸು-ತ್ತಿರುವ ಸನ್ನಿವೇಶಗಳಲ್ಲೆಲ್ಲ ಸಜೀವತೆಯಿದೆ. ಆ ಪ್ರಸಂಗಗಳು ನಮ್ಮ ಕಣ್ಣೆದುರಿಗೆಯೇ ನಡೆದಂತೆಯೂ ನಾವೂ ಆ ವಾತಾವರಣ-ದಲ್ಲಿಯೇ ಇದ್ದಂತೆಯೂ ಎನಿಸುತ್ತದೆ. ಸಂಭಾಷಣೆಯ ಮೂಲಕ ಮುಖ್ಯವಾಗಿ ಇಲ್ಲಿ ಕಥೆಯನ್ನು ಪ್ರದರ್ಶಿಸಲಾಗಿದೆ. ಅದರಿಂದ ಮುದ್ದಾಪುರ, ಹುಬ್ಬಳ್ಳಿ, ಧಾರವಾಡಗಳಲ್ಲೆಲ್ಲ ನಾವು ರತ್ನಾಕರನ ಜೊತೆಯಲ್ಲಿ ವಿಹರಿಸುತ್ತೇವೆ; ಅವನುಣ್ಣುವ ಸವಿಯೂಟಗಳನ್ನು ಉಣ್ಣುತ್ತೇವೆ; ವೇಷಭೂಷಣಗಳನ್ನು ಧರಿಸುತ್ತೇವೆ. ಕಾದಂಬರಿಯ ಪಾತ್ರಗಳೊಡನೆ ಸಮರಸವಾಗಿಹೋಗುತ್ತೇವೆ. ಕಥೆಯ ಇನ್ನುಳಿದ ಭಾಗವನ್ನು ನಮಗೆ ತಿಳಿಸಲಿಕ್ಕೆ ಲೇಖಕರು ಬಳಸಿದ ಹಲವು ಪತ್ರ-ಗಳ ಉಪಯೋಗವೂ ಕಲಾತ್ಮಕವಾಗಿದೆ. ಅಲ್ಲದೆ ಈ ಕಾದಂಬರಿ-ಯಲ್ಲಿ ನಿರೂಪಣೆಯಲ್ಲಿರುವ ಸಾಂಕೇತಿಕತೆಯೂ ಬಹು ಅರ್ಥ-ಪೂರ್ಣವಾಗಿ ಅಲ್ಲಲ್ಲಿ ಬಂದಿದೆ. ಕಾವೇರಿ-ರಂಗಣ್ಣರ ಮದುವೆಗೆ ಕಾರಣಪುರುಷನಾದ ರತ್ನಾಕರನು, ಅವರ ಲಗ್ನಸಮಾರಂಭದಲ್ಲಿ ಪುರೋಹಿತರ ವೇಷದಲ್ಲಿ ತಲೆ ಮರೆಯಿಸಿಕೊಂಡಿದ್ದುದು ಬಹಳ ಸ್ವಾರಸ್ಯವುಳ್ಳದಾಗಿದೆ.

ಇನ್ನು ಕಾದಂಬರಿಯ ಭಾಷೆಯು ಪರಿಶುದ್ಧವೂ, ಪಾತ್ರಗಳಿಗೆ ಅನುಗುಣವಾಗಿಯೂ ಭಾವಕ್ಕೆ ತಕ್ಕ ರೀತಿಯಲ್ಲಿಯೂ ಪ್ರವಹಿಸಿದೆ. ಅದರಿಂದ ಕಾದಂಬರಿಗೊಂದು ಅಚ್ಚುಕಟ್ಟುತನ, ಸೌಂದರ್ಯಗಳು ಉಂಟಾಗಿವೆ.

'ಆನಂದಕಂದ' ರ ಈ 'ಮಗಳ ಮದುವೆ' ಕಾದಂಬರಿಯನ್ನು ಕುರಿತು ಇಷ್ಟೆಲ್ಲ ಮಾತುಗಳನ್ನು ಹೇಳಿದ ಮೇಲೆಯೂ ಇನ್ನೊಂದು ಸಂಗತಿಯನ್ನು ಇಲ್ಲಿ ಕಾಣಿಸಬೇಕಾಗುವುದು. ಇತ್ತಿತ್ತಲಾಗಿ ಬಹು ದಿನಗಳಿಂದ 'ಆನಂದಕಂದ' ರು ತಮ್ಮ ಕಾದಂಬರಿಯ ಮುಖಾಂತರ ಕನ್ನಡ ವಾಚಕವರ್ಗಕ್ಕೆ ಸಂದರ್ಶನವನ್ನಿತ್ತಿಲ್ಲ. ಆದರೂ ಅವರ ವ್ಯಕ್ತಿತ್ವವು 'ಜಯಂತಿ' ಪತ್ರಿಕೆಯ ಸಂಪಾದಕೀಯ ಲೇಖನಗಳು, ಸಾಮಾಜಿಕನ ಸಂವಚನಗಳು — ಇವೇ ಮೊದಲಾದ ಸಾಹಿತ್ಯ-ಪ್ರಕಾರಗಳಿಂದ ಆಗಾಗ ಜನತೆಯ ಮನಃಪಟಲದ ಮೇಲೆ ಮೂಡಿ ನಿಂತಿದೆ. ಎಂದರೆ ಶ್ರೀ. ಬೆಟಗೇರಿ ಕೃಷ್ಣಶರ್ಮರ ಜೀವನದೃಷ್ಟಿ, ವ್ಯಕ್ತಿತ್ವಗಳು ಜನತೆಗೆ 'ಜಯಂತಿ' ಯ ಮೂಲಕ ಪ್ರತಿತಿಂಗಳೂ ಹೋಗಿ ಮುಟ್ಟಿ, ಚಿರಪರಿಚಿತವಾಗಿವೆ. ಅದರಿಂದ ಈ ಕಾದಂಬರಿ-ಯನ್ನು ಓದಲು ತಕ್ಕೊಂಡ ಪ್ರತಿಯೊಬ್ಬ ವಾಚಕನೂ, ಆ ಪೂರ್ವ-ಪರಿಚಿತ ಬೆಟಗೇರಿಯವರನ್ನೇ ಇದರಲ್ಲೂ ಕಾಣುತ್ತಾನೆ. ಆಗ ಇದರಲ್ಲಿ ಹೊಸದೇನಿದೆ? — ಎಂದು ಕೆಲವರು ಥಟ್ಟನೆ ಕೇಳಿ-ಬಿಡುವ ಸಾಹಸ ಮಾಡುತ್ತಾರೆ. ಅಂಥವರು ಒಂದು ಮಾತನ್ನು ಇಲ್ಲಿ ಗಮನಿಸಬೇಕು. ತನ್ನ ಕೃತಿಯಲ್ಲಿ ಕಲಾಜೀವಿ ವ್ಯಕ್ತಿತ್ವ ನಿಲ್ಲುವುದೊಂದು ದೊಡ್ಡ ಮಾತು; ಅದೊಂದು ಸಿದ್ಧಿ. ಅಲ್ಲದೆ ಪ್ರತಿಯೊಂದು ವ್ಯಕ್ತಿಗೂ ಒಂದು ಜೀವನದೃಷ್ಟಿಯಿರುತ್ತದೆ. ಅದು ಅವರು ಬೆಳೆದ ವಾತಾವರಣ, ಬಾಳಿನ ಅನುಭವ, ಪಡೆದ ಸಂಸ್ಕಾರ-

([illegible]ನೆಯ ಪುಟ ನೋಡಿರಿ)

ಸಾಹಿತ್ಯವಿಹಾರ

ಸತ್ತ್ವಪೂರ್ಣ ಕಾದಂಬರಿಗಳು

ಶ್ರೀ. ಕೆ. ಎಸ್. ಶರ್ಮಾ ವಿದ್ವಾನ್ ಕಾಸರಗೋಡು ದ. ಕ.

ಇಪ್ಪತ್ತನೆಯ ಶತಮಾನವೆಂಬುದು ಧಾರಾಕಾರವಾಗಿ ಪ್ರವಹಿಸುತ್ತಿರುವ ಕಾದಂಬರಿವಾಹಿನಿಯ ಯುಗವು. ಜನತೆಯ ಜೀವನವನ್ನು— ವಿವಿಧ ಗತಿಯಲ್ಲಿ ಸಾಗುವ ಜೀವನದ ಆಗುಹೋಗುಗಳನ್ನು ಯಥಾವತ್ತಾಗಿ ನಿರೂಪಿಸಬೇಕಾದ ಒಂದು ಸಂಧಿಕಾಲ. ಜನತೆಯ ಜೀವನದ ಸಾವಿರಾರು ಚಿತ್ರಗಳನ್ನು ಕಂಡು, ಜೀವನದ ಸುಖದುಃಖಗಳ ಯಥಾರ್ಥವಾದ ತಿಳಿವನ್ನು ಅರಿತು, ಸರಸ ವಿರಸಾತ್ಮಕ ಜೀವನದ ಅನುಭವಗಳನ್ನು ಸಮರಸದಲ್ಲಿ ಕೇಲಿ-ಹಾಯಿಸಿ, ಸತ್ಯವನ್ನು ಕಾಣಬೇಕಾದ ಮುನ್ನಡೆಯ ಕಾಲವಿದು. ಕಥೆಯ ರೂಪದಲ್ಲಿ— ಚೇತೋಹಾರಿಯಾಗಿ ಕುಣಿವ ರಸತರಂಗಿಣಿಯ ಮಧುರ ತರಂಗನಾದದಲ್ಲಿ ಹೃದಯಸ್ಪರ್ಶಿಯಾದ ಜೀವನಮರ್ಮವನ್ನು ಪ್ರತಿಭಾಸಿಸುವ, ಸುಂದರ ಚಿತ್ರದಲ್ಲಿ— ಮಿರುಗಿನಿಂತ ಕಾದಂಬರಿಯ ಹೊನಲಲ್ಲಿ ಸುಖವಾಗಿ ಜೀವನವನ್ನು ರೂಪೀಕರಿಸಬೇಕಾದ ಒಂದು ಉತ್ತಮ ಸಂಧಿಯಿದು. ತತ್ತ್ವಗಳನ್ನು ಸುಖವಾಗಿ ರೂಪಿಸುವ ಈ ಕಾದಂಬರೀಯುಗದ ಮಾರ್ಗವು ಅದೊಂದು ಮೃದುಮಧುರ, ಹಿತಗತಿಯಲ್ಲಿ ಸಾಗುವ ವಿಚಾರಧಾರೆಗಳ ಸಂಕಲನವು. ಆದುದರಿಂದಲೇ ಇಂದು ಕಾದಂಬರಿಗಳ ಸ್ಥಾನವು ಜನತೆಯ ಮುಂದೆ ಒಂದು ಆಟದ ಬೊಂಬೆಯಾಗಿದೆ; ಪ್ರೀತಿಯ ಸೊತ್ತಾಗಿದೆ.

ಕಾದಂಬರಿಯ ಹಿರಿಮೆಯು ಈ ತೆರನಾದರೆ, ಅದೇಕೋ ಈ ಕಾದಂಬರೀಪ್ರಪಂಚದಲ್ಲಿ ದೊಡ್ಡದೊಂದು ಆಂದೋಲನವೇ ಆಗಿ ಹೋಗಿದೆ. ದಿನದಿಂದ ದಿನಕ್ಕೆ ಅಧಿಕಾಧಿಕವಾಗಿ ಹೊರಬರುತ್ತಿರುವ ಕಾದಂಬರಿಗಳ ಒಳಮೈ-ಹೊರಮೈಗಳಲ್ಲಿ, ಭಯಂಕರವಾದ ಗೊಂದಲವು ಪುಟದೇಳತೊಡಗಿವೆ. ಕಾದಂಬರಿಗಳಲ್ಲಿ ಹೆಚ್ಚಿನವುಗಳ ರೀತಿಯೂ ಒಂದೇ ಒಂದು ಪಂಥದಿಂದ ಸಾಗಿದ ವಿವಿಧ ಗತಿಗಳೆಂದರೂ ಹೆಚ್ಚಾಗದು. ಮಧ್ಯಮ ವರ್ಗದವರ ಜೀವನದ ಕಥನಗಳೇ ಇವುಗಳಲ್ಲಿ ತುಂಬಿವೆ. ಈ ವರ್ಗದ ಮೂಲೆ-ಮೂಲೆಗಳಲ್ಲೂ ಸಂದುಗೊಂದಿಗಳಲ್ಲೂ ಹೊಕ್ಕು ಬಡಗುಮಾಸ್ತನಿಂದ ಹೊರಟು— ಶ್ರೀಮಂತಿಕೆಯ ಪಟ್ಟದವರೆಗೂ—ಸೂಳೆಯ ಜೀವನ, ವಿಧವೆಯಜೀವನ ಇವುಗಳಿಂದ ಆರಂಭಿಸಿ, ವಂಚನೆಯ ಬಲೆಯಲ್ಲಿ ಮುಳುಗಾಡುವ ಪ್ರಣಯಿಗಳು ಪ್ರಿಯ-ಪ್ರಿಯತಮೆಯರ ಪ್ರೇಮಬಲಿದಾನದ ಘಟನೆಗಳು— ಇವು ಈ ವರೆಗೂ ಸಾಗಿದ್ದಾಯಿತು. ಇಂತಹ ಸಂದರ್ಭಗಳಲ್ಲಿಯೇ— ಜೀವನದ ಗತಿಯನ್ನು ಬಣ್ಣಿಸಿದ ಕಾದಂಬರಿಗಳೇ ನೂರಾರು! ಇಂತಹ ಜೀವನದಲ್ಲೂ ನಾವು ಸತ್ಯವನ್ನು ಕಾಣುವ ಕಣ್ಣನ್ನು ತೆರೆಯಬೇಕಾಗಿದೆ. ಜೀವನದ ಒಳಮೈಗಳ ಚಿತ್ರವು ಜನತೆಯ ಹೃತ್ಪಟದಲ್ಲಿ ಅಚ್ಚೊತ್ತಬೇಕು. ಆಶೆ-ಪ್ರತ್ಯಾಶೆಗಳಲ್ಲಿ ತೊನೆದಾಡುವ ಜೀವನದ ಮರ್ಮವನ್ನು ತೋರಬೇಕು. ಹೀಗಿರದೆ ಕೇವಲ ಒಂದೇ ಪಥದಲ್ಲಿ ಸಾಗಿದ ಈ ವಿಧದ ಬಾಳಿನ ನಿರೂಪಣೆಯು ಇಂದು ಅದೇಕೋ ಚರ್ವಿತಚರ್ವಣವಾಗಿದೆ. ಇನ್ನೀ ಸಂಪ್ರದಾಯಕ್ಕೆ ಪೂರ್ಣವಿರಾಮವು ಬೇಕಾಗಿದೆ. ಜೀವನದ ತಾಕಲಾಟದಲ್ಲಿ ತೊನೆದಾಡುವ ದಲಿತಜನಾಂಗದ— ಅಸ್ಪೃಶ್ಯ ಜನಾಂಗದ— ಹೃದಯವನ್ನು ನಾವು ಕಾಣಬೇಕು ನಮ್ಮ ಜನತೆ ಚೋಮ, ಸುಬ್ಬ, ಕರಿಂಬರನ್ನು ಪ್ರೀತಿಯಿಂದ ಕಾಣುವಂತಾಗಬೇಕು. ಶ್ರೀಗಳಾದ ಕಾರಂತರ 'ಚೋಮನದುಡಿ'— ಎಬ್ಬಿಸಿದ ಜೀವನ, ಕುಡಿಯರ ಕೂಸು-ಕಂಡ ಸತ್ಯವು ಜೀವನದಲ್ಲಿ ಅಚ್ಚಳಿಯದೆ ಉಳಿವ ಚಿತ್ರಗಳಾಗಿವೆ. ಶ್ರೀ. ಕು. ವೆಂ. ಪು. ರವರ ಮಲೆನಾಡಿನ ಚಿತ್ರಗಳು, ಕಾನೂರು ಸುಬ್ಬಮ್ಮ ಹೆಗ್ಗಡಿತಿ ಇವು ಎಂದೆಂದೂ ಮರೆಯಲಾಗದ ಚಿತ್ರಗಳಾಗಿವೆ. ಈ ಕಾದಂಬರಿಗಳು ಜನತೆಯ ಹೃದಯವನ್ನು ಸ್ಪರ್ಶಿಸಿದಷ್ಟು ಬೇರಾವ ಕಾದಂಬರಿಗಳೂ ಮುದ್ದಾಗಿ ಸ್ಪರ್ಶಿಸಲಿಲ್ಲವೆಂಬ ಸತ್ಯವನ್ನು ಎಲ್ಲರೂ ಬಲ್ಲೆವು. ಇವು ಬೀರಿದ ಸತ್ಯವಚನಗಳು ಮನೋವೇಧಕಗಳಾಗಿವೆಯೆಂಬುದಿದು ನಿಷ್ಪಕ್ಷಪಾತವು. ಕಟ್ಟಿದ ಮನೆಯು ಸ್ಥಿರವಾಗಿ ನಿಲ್ಲಬೇಕಾದರೆ, ಆಧಾರವಾದ ಪಂಚಾಂಗವು ದೃಢವಾಗಿರಬೇಕು. ಅಂತೆಯೆ ಸಂಸ್ಕೃತಜನಾಂಗದ ಜೀವನದ ಗತಿಯು ಸುಗಮವಾಗಿ ಸಾಗಬೇಕಾದರೆ, ಆಧಾರಭೂತವಾದ ದಲಿತವರ್ಗದ ಜೀವನದ ಯಥಾರ್ಥವಾದ ಅನುಭವವು ನಮಗಾಗಬೇಕಾಗಿದೆ. ಹಾಗಾದರೆ ಮಾತ್ರ ಜೀವನವು ಸುಧಾರಿಸಬಲ್ಲುದು. ಹೀಗಿಲ್ಲದ ಕಾದಂಬರಿಗಳು ಸಾರುವ ತತ್ತ್ವಗಳು ನೆಲೆಯಾಗಿ ಹೃದಯಾವರ್ಜಕಗಳಾಗಿ ಉಳಿಯಲಾರವೆಂಬುದನ್ನು ನಾವು ಮರೆಯಬಾರದು. ಅದಕ್ಕಾಗಿಯೆ ಕವಿಗಳಿಗೆ— ಲೇಖಕರಿಗೆ— ವಾತಾವರಣದ ಜ್ಞಾನವೂ ಸಮಾಜದ ಅನುಭವವೂ ದೇಶ-ಕಾಲ-ಜ್ಞಾನವೂ ಇರಬೇಕೆನ್ನುವುದು. ಕವಿಯು ಚಿತ್ರಿಸುವ ಜೀವನವು— ಅವನ ಪರಿಪೂರ್ಣ ಅನುಭವದ ಪ್ರತೀಕವಿರಬೇಕು.

ಇನ್ನೊಂದು ವಿಚಾರವೆಂದರೆ— "ನಮ್ಮ ಕಾದಂಬರಿಗಳಲ್ಲಿ 'ಕ್ರಾಂತಿ'ಯೇಳಬೇಕಾಗಿದೆ. ಕ್ರಾಂತಿಪದವೆಂದ ಮಾತ್ರಕ್ಕೆ ಕುಸಿಯಬೇಕಾಗಿಲ್ಲ. ಇದು ರಕ್ತಪ್ರವಾಹದ ಕ್ರಾಂತಿಯಲ್ಲ; ರಾಷ್ಟ್ರಜಾಗೃತಿಯನ್ನುಂಟುಮಾಡುವ ಶಾಂತಿಮಯ ಕ್ರಾಂತಿ. ಅದುವೆ ಬದಲಾವಣೆ. ಜೀವನಕ್ಕೂ ರಾಷ್ಟ್ರಕ್ಕೂ ಪಾರಸ್ಪರಿಕವಾಗಿ ಹೊಂದಿಕೊಂಡಿರುವ ಬಾಂಧವ್ಯವು ಜನತೆಗೆ ಸಿಗಬೇಕಾಗಿದೆ. ರಾಷ್ಟ್ರಕ್ಕಾಗಿ ತನು-ಮನ-ಧನವನ್ನು ಧಾರೆಯಾಗಿ ಸಮರ್ಪಿಸುವ ಆ ಒಂದು ಉದಾತ್ತ ಸ್ಫೂರ್ತಿಯುತ ಜೀವನವು ನಮ್ಮ ಜನತೆಯಲ್ಲಿ ತುಂಬಬೇಕಾಗಿದೆ. ಪಾಶ್ಚಿಮಾತ್ಯ ರಾಷ್ಟ್ರಗಳ ಇತಿಹಾಸವು, ದೈನಂದಿನ ಜೀವನದ ರಾಷ್ಟ್ರ-

ಪ್ರೇಮವು, ನಮ್ಮ ಜನತೆಗೆ ಆದರ್ಶಪ್ರಾಯವಾಗುವಂತೆ ಕಾದಂಬರಿಗಳು ಆ ಸತ್ಯವನ್ನು ತೋರಬೇಕಾಗಿದೆ. ಇಂತಹ ರಾಷ್ಟ್ರಪ್ರೇಮವನ್ನು, ರಾಷ್ಟ್ರಜಾಗೃತಿಯನ್ನು ತುಂಬುವ ಕಾದಂಬರಿಗಳು ನಮಗೆ ಬೇಕಾಗಿವೆ. ಇಂತಹ ಕಾದಂಬರಿಗಳಿಂದು ಇಲ್ಲವೆಂದಲ್ಲ ಈ ಸಮರ್ಥನೆ. ಆದರೆ ಅವುಗಳ ಸಂಪತ್ತು ಇನ್ನೂ ಸಾಲದು. ಈ ಪ್ರಜಾಪ್ರಭುತ್ವದ ಹಿರಿಮೆಯು, ಹೊಣೆಗಾರಿಕೆಯು ಪ್ರತಿಯೊಬ್ಬ ವ್ಯಕ್ತಿಗೂ ಇದೆಯೆಂಬುದನ್ನು ನಾವಿಂದು ನೆನೆದು, ಅಂತಹ ಕಾದಂಬರಿಗಳ ವಿಪುಲವಿಸ್ತಾರಕ್ಕೆ ಆದರವನ್ನು ನೀಡಬೇಕಾಗಿದೆ. ಈ ಧಾರೆಯಲ್ಲೇ ಸಾಮಾಜಿಕ, ಆರ್ಥಿಕ, ಧಾರ್ಮಿಕ, ನೈತಿಕ ಜೀವನಗಳ ದೃಷ್ಟಿಯನ್ನು ಸಮತಟ್ಟಿ ತೂಗಬೇಕಾಗಿದೆ. ಹಾಗಾದರೆ ಮಾತ್ರ ಜನತೆಯ ಮುಂದೆ ನಿಂತ ಕಾದಂಬರಿಗಳ ಪ್ರವಾಹವು ಅನಸ್ಯೂತವಾಗಿ ಹರಿದು ಇಕ್ಕೆಲಗಳಾದ ಒಳವ್ಯೆ-ಹೊರವ್ಯೆಗಳನ್ನು ಬೆಳಗುವುದು.

ಮತ್ತೊಂದು, ಶ್ಲೀಲಾಶ್ಲೀಲತೆಯ ವಿಚಾರ. ಈ ಭಾಗದಲ್ಲೂ ಹಲವಾರು ಗೊಂದಲಗಳು. ಕಾಮಪ್ರಚೋದನ ಸಾಹಿತ್ಯವೆಂದು ಕೆಲವೆಡೆ ವಿಮರ್ಶಕರು ಜನತೆಯ ಹಿತವನ್ನು ಬಯಸಿ ಕೆಂಗಣ್ಣನ್ನು ಹಾಯಿಸುತ್ತಿರುವರು. ಕೆಲವು ಲೇಖಕರಂತೂ ವಿಮರ್ಶೆಯ ವಿಚಾರವನ್ನು ದೂರವಿಸೆದು, ಈ ಬಗೆಯ ಸಾಹಿತ್ಯದಲ್ಲಿ ಕುಶಲ ನಿರ್ಮಾಣವನ್ನು ಎಸಗುತ್ತಿರುವರು. 'ಕವಿಧರ್ಮ'ವೆಂದು ಹಕ್ಕಿನಿಂದ ಬರೆವ ಧಾಟಿಯಿದು. ಇದ್ದುದನ್ನು ಇದ್ದ ಹಾಗೇ ಬರೆವೆನೆಂದು ಹೊರಟು— 'ಕಥಾರಂಭದಲ್ಲೇ ಇದಾರಿಗೂ ಸಮ್ಮತಿಸುವದಿಲ್ಲ' ಎಂದು ಅದೊಂದು ಬಗೆಯ ಧೈರ್ಯದಿಂದ ಬರೆದ ಧಾಟಿಯಂತಾಯಿತು ಈ ಬಗೆಯ ನಿರ್ಮಾಣವು.

ಸಾಹಿತಿಯು ಜೀವನಧರ್ಮಗಳನ್ನು ಒಳಗಣ್ಣು-ಹೊರಗಣ್ಣುಗಳಿಂದ ನೋಡುವವನಾದರೂ, ಜನತೆಯ ಮುಂದೆ ತಾನಿಡುವ ವಸ್ತುವಿನ ಯೋಗ್ಯತೆಯನ್ನು— ದೇಶಕಾಲಗಳನ್ನು ಕಾಣಬೇಕು. ಪಾಶ್ಚಿಮಾತ್ಯ ದೇಶಗಳ ಅನುಕರಣೆಯು ಒಮ್ಮೆಗೇ ಅಸಾಧ್ಯವೆಂಬ ಮಾತನ್ನು ಮರೆಯಬಾರದು. ಜನತೆಯ ಮುಂದಿಡುವ ವಸ್ತುವಿನ ಯೋಗ್ಯತೆಯು ಕವಿಹೃದಯದಲ್ಲಿ ತೂಗಲ್ಪಡಬೇಕು. ಅಪ್ರಾಸಂಗಿಕವಾದಲ್ಲಿ— ವಾಚಕನು ತಾನೋದಿ ಇತರರೊಡನೆ ಹೇಳಬು ಹೋಗುವ ಪ್ರಸಂಗದಲ್ಲಿ ಬರುವ ಈ ಬಗೆಯ ಕಥನಕೌಶಲವು ಅಶ್ಲೀಲವೆನಿಸುವುದು. ನಮ್ಮ ಜನತೆಯು ಲೈಂಗಿಕಾನುಭವವನ್ನು ಸರಿಯಾಗಿ ಅರಿತಿರಬೇಕೆಂದು ಈ ರೀತಿಯಲ್ಲಿ ವಿಪುಲವಾಗಿ ಬರೆಯುತ್ತ ಹೋದರೆ, ಉಳಿದ ದಿನನಿತ್ಯದ ಜೀವನಾನುಭವಗಳ ವಿಪುಲವಿಸ್ತರಣವೂ ತುಂಬಬೇಕಾಗಿ ಬಂದರೆ— ಕಾದಂಬರಿಗಳು ಪುಟಗಳೆಷ್ಟನ್ನು ಕಾದಿರಿಸಬೇಕು? ಏನೆ ಇರಲಿ! ಕಾಮವಿಷಯಕ ಜ್ಞಾನವೂ ಮುಂದಿಗೆ— ಬೇಕು. ಜನತೆಯ ಒಳಿತನ್ನು ರೂಪಿಸುವ ಹೃದಯವೂ ಕವಿಗೆ ಬೇಕು. ಜನತೆಯ ಗುಟ್ಟು, ಕವಿಧರ್ಮ ಇವೆರಡನ್ನೂ ಅಳೆದು ನೋಡಿ, ಉಚಿತ ಮಾರ್ಗವನ್ನು ತೋರುವ ವಿಮರ್ಶಕನ ವಿಮರ್ಶೆಯೂ ಸಾಹಿತ್ಯದಲ್ಲಿ ಅಗತ್ಯಬೇಕು. ಸಾಹಿತ್ಯೋದಧಿಯಲ್ಲಿ ವಿಮರ್ಶಕನ ಸ್ಥಾನಮಾನವು ಅತಿ ಮಹತ್ತ್ವದ್ದೆಂಬ ಮಾತನ್ನು ಯಾವ ಲೇಖಕನೂ ಮರೆಯಬಾರದು. ನಿಜವಾದ ವಿಮರ್ಶಕನು ವ್ಯಕ್ತಿಗತವಾದ ವಿಮರ್ಶೆಗೆ ಹೋಗಲಾರನು. ಅವನ ದೃಷ್ಟಿ ಕಾವ್ಯದಲ್ಲಿ! ಕಾವ್ಯಧರ್ಮದಲ್ಲಿ!!

ಹೀಗೆ ಜನತೆಯು ಸಾರ್ವಕಾಲೀನ ಸ್ಥಿತಿಗನುಸರಿಸಿ, ನೈತಿಕ ಪಂಥದ ವೈದೀವಿಗೆಯಾಗಿ— ರಾಷ್ಟ್ರೀಯ ಭಾವನೆಯನ್ನು ಬೇರೂರಿಸುವ ಉದಾತ್ತ ಚಿತ್ರದಿಂದ ಕಳೆಗೊಳ್ಳುವ ಕಾದಂಬರಿಯು, ಹಿಂದುಳಿದ ವರ್ಗದ ಚಿತ್ರವನ್ನು—ಮಧ್ಯಮ ವರ್ಗದ ಜೀವನದ ಮುನ್ನಡೆಯೊಡನೆ ಎರಕವಾಗಿಸಿ ಸಾಗುವಂತಾಗಲಿ! ಆಗಲೇ ಜನಜಾಗೃತಿಯೂ, ಸರ್ವತೋಮುಖವಾದ ಆರೋಗ್ಯವೂ ದೇಶದಲ್ಲಿ ತುಂಬುವುದು. ಚಿರಕಾಲಿಕ ಸಂಸ್ಕೃತಿಯೂ ಬೇರೂರಿ— ಜನತೆಯ ಮಾನಸಿಕ ಪರಿವರ್ತನೆಯೂ ಉನ್ನತಿಯೆಡೆಗೆ ಸಾಗಿ— ದೇಶದ ಸಂಸ್ಕಾರ ಪೂರ್ಣವಾಗುವುದು.

ಓ! ನನ್ನೆದೆಯ ಹಾಡೆ

ಶ್ರೀ. ದೇವೇಂದ್ರನಾಯಕ, ಧಾರವಾಡ

ಒಳಗೊಳಗೆ ಪರಿತಪಿಸಿ
ಹುದುಗಿಕೊಂಡಿರಬೇಡ
ತೀರದಾ ಅಳಲನ್ನೆ;
ತಿಳಿತಿಳಿದು ನಿಡುಸುಯಿದು
ನೆನೆದು ನಿಂದಿರಬೇಡ
ಬಾರದಾ ನಲಿವನ್ನೆ! ೧

ಮನದೊಳಗೆ ಗುನುಗುನುಗಿ
ಹಾಡಿಕೊಂಡಿರಬೇಡ
ಮುಗುದವಹ ಹಾಡನ್ನೆ;
ಅಡಿಗಡಿಗೆ ಕಳವಳಿಸಿ
ತೀಡಿಕೊಂಡಿರಬೇಡ
ಮಿಡುಕುತಹ ಮಾತನ್ನೆ. ೨

ಗೆಲುವಿನಲಿ ಕುಲು-ಕುಲನೆ
ನಕ್ಕುಕೊಂಡಿರು ಏಳು
ಅಂತರ್ಯ ಚೇತನದಿ!
ಒಲವಿನಲಿ ನಲಿ-ನಲಿದು
ಹೇಳಿಕೊಂಡಿರು ಏಳು
ಸಾಹಸದ ಸ್ಫೂರ್ತಿಯನು! ೩

ನಿನ್ನೊಳಗೆ ನೀ ಕೊರಗಿ
ನೀನು ಸಾಧಿಸೆ ಏನು—
ದೈನ್ಯದಾ ಸ್ಥಿತಿಯಲ್ಲಿ?
ಆ ಗೆಲುವು, ಆ ಒಲವು
ಮತ್ತೆ ಸುಳಿದಿದೆ ನೋಡು
ಓ, ನನ್ನೆದೆಯ ಹಾಡೆ! ೪

— ಶರತ್‌ಪ್ರಕಾಶನ ಮಂದಿರದ ಮೂರನೆಯ ಪ್ರಕಟನೆ —

ಮಗಳ ಮದುವೆ

(ಸಾಮಾಜಿಕ ಕಾದಂಬರಿ)

卐

ಬರೆದವರು : 'ಆನಂದಕಂದ'

ಕ್ರೌನ್ ಅಷ್ಟಪತ್ರದ ೩೫೦ ಪುಟಗಳು

ಬೆಲೆ ಸಾದಾ ಪ್ರತಿಗೆ ೪-೦-೦
ಉತ್ತಮ ಪ್ರತಿಗೆ ೪-೧೨-೦

೧೯೩೦ ನೆಯ ಇಸ್ವಿಯ ಸತ್ಯಾಗ್ರಹದ ಆಂದೋಲನವನ್ನು ಹಿನ್ನೆಲೆಯಾಗಿಟ್ಟುಕೊಂಡು, ಉತ್ತರ ಕರ್ಣಾಟಕದ ಪಟ್ಟಣ ಮತ್ತು ಹಳ್ಳಿಗಳ ಸಾಮಾಜಿಕಜೀವನವನ್ನು ವಾಸ್ತವಸುಂದರವಾಗಿ ಚಿತ್ರಿಸಿದ ಕಾದಂಬರಿಯಿದು. ಹಿನ್ನೆಲೆಯ ಚಿತ್ರಣ, ಕಥಾವಸ್ತು, ಪಾತ್ರಸೃಷ್ಟಿ, ಭಾವಪರಿಪುಷ್ಟಿ, ಭಾಷೆಯರೀತಿ— ಈ ಎಲ್ಲ ದೃಷ್ಟಿಯಿಂದಲೂ ಹೊಸತು-ಹೊಸತೆನಿಸುವಂಥ ರಮ್ಯ ಕಾದಂಬರಿ.

ಓದಿದವರೆಲ್ಲ ಈ ಕಾದಂಬರಿಯನ್ನು ಮೆಚ್ಚಿ ಕೊಂಡಾಡುತ್ತಲಿದ್ದಾರೆ.

ಆನಂದಕಂದರ

'**ಸುದರ್ಶನ**' ಸಾಮಾಜಿಕ ಕಾದಂಬರಿಯನ್ನು ಓದಿದ್ದೀರಲ್ಲವೆ ?

'**ರಾಜಯೋಗಿ**'
'**ಅಶಾಂತಿಪರ್ವ**' } ಈ ಐತಿಹಾಸಿಕ ಕಾದಂಬರಿಗಳನ್ನು ಓದಿದ್ದೀರಲ್ಲವೇ ?

'**ಮಗಳ ಮದುವೆ**'ಯನ್ನೂ ತರಿಸಿ ಒಂದು ಸಲ ಓದಿನೋಡಿರಿ. ಓದಲು ಕೈಯಲ್ಲಿ ಹಿಡಿದವರು ೩೫೦ **ಪುಟಗಳನ್ನು** ಮುಗಿಸುವವರೆಗೂ ಕೆಳಗಿಡಲಾರಿರಿ. ಕಾದಂಬರಿಯಲ್ಲಿಯ ಒಂದೊಂದು ಪರಿಚ್ಛೇದವೂ ಒಂದೊಂದು ರಸಸೃಷ್ಟಿಯ ಚಿತ್ರವನ್ನೇ ಮನದ ಮುಂದೆ ನಿಲ್ಲಿಸುವುದು.

ಅಚ್ಚಾಗಿ ಸಿದ್ಧವಾಗಿದೆ. ಬೇಕಾದವರು ಕೂಡಲೆ ಬರೆದುಕೊಳ್ಳಬೇಕು.

ಶರತ್ ಪ್ರಕಾಶನ ಮಂದಿರ, ವಿಜಯರೋಡ್, ಧಾರವಾಡ

ಶರತ್ ಪ್ರಕಾಶನ ಮಂದಿರ, ಧಾರವಾಡ

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕ ವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳಬೇಕು !
ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ
ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

'ಆನಂದಕಂದ' ರ ಕಥೆ, ಕಾದಂಬರಿ, ಕವನ ಸಂಕಲನ, ನಾಟಕಸಂಕಲನ, ಸಾಹಿತ್ಯ ಸಂಸ್ಕೃತಿಯ ಗ್ರಂಥಗಳು ಎಲ್ಲವೂ ನಮ್ಮಲ್ಲಿ ದೊರೆಯುವುವು. ವ್ಯಾಪಾರಿಗಳಿಗೆ ಅನುಕೂಲ ದರದ ಕಮಿಶನ್ ಕೊಡಲಾಗುವುದು. ಎಲ್ಲರೂ ನಮ್ಮೊಡನೆ ವ್ಯವಹಾರ ಬೆಳೆಯಿಸಬೇಕು. ನಮ್ಮ ಮಂದಿರ ಪ್ರಕಟಿಸಿದ 'ಆನಂದಕಂದರ' ತರಂಗರೂಪಕ ಸಂಕಲನ:

ಬೆಳವಡಿ ಮಲ್ಲಮ್ಮ

ಕ್ರಾ. ೮. ೧೧೭ ಪುಟಗಳು. ಹೊಳಪಿನ ಕಾಗದ. ಬೆಲೆ ೧-೮-೦.

ಹೊಸತಾಗಿಯೆ ಹೊರಟ ಕವನಸಂಕಲನ

ಕಾರಹುಣ್ಣಿವೆ

ಇದರಲ್ಲಿ 'ಆನಂದಕಂದ'ರ ರಸವತ್ತಾದ ೫೨ ಕವನಗಳು ಸಂಕಲನಗೊಂಡಿವೆ. ವಿವಿಧ ಭಾವಗಳನ್ನು ವಿಸ್ತರಿಸಿದ ಸುಂದರವಾದ ಭಾವಗೀತಗಳು ! ಸಂಗೀತಗಾರರ ಕಾವ್ಯಗಾಯನ ಕಾರ್ಯಕ್ರಮಕ್ಕೆ ತುಂಬ ಸಹಕಾರಿಯಾದುವು !

ಕ್ರಾ. ೮. ೧೨೮ ಪುಟಗಳು. ಅಂದವಾದ ಅಚ್ಚು. ಬೆಲೆ ೨-೦-೦.

ಸದ್ಯ ನಮ್ಮಲ್ಲಿ ದೊರೆಯುವ 'ಆನಂದಕಂದ'ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	**ವಿರಹಿಣಿ**	**ಬಡತನದ ಬಾಳು**	**ಕರ್ನಾಟಕ ಜನಜೀವನ**
ಸುದರ್ಶನ	**ಒಡನಾಡಿ**	**ನಮ್ಮ ಬದುಕು**	ಜೀವನಚರಿತ್ರ
ಅಶಾಂತಿಪರ್ವ		**ಸಂಸಾರ ಚಿತ್ರ**	**ಶ್ರೀ ಬಸವಣ್ಣನವರು**
ಮಗಳ ಮದುವೆ		**ಮಾತನಾಡುವ ಕಲ್ಲು**	

ಅಲ್ಲದೆ ಶ್ರೀ. ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಜಾಡಿಯ ಜಾಣಿಕ್ಯನ '**ಜಾತೀಯಸಮಸ್ಯೆ**' '**ಕರ್ನಾಟಕ ಏಕೀಕರಣ**', ಈ ಕಿರುಹೊತ್ತಿಗೆಗಳೂ ದೊರೆಯುವುವು.

ಶರತ್ ಪ್ರಕಾಶನ ಮಂದಿರಕ್ಕೆ ೫ರೂ. ಸಲ್ಲಿಸಿ ಗ್ರಾಹಕಸದಸ್ಯರಾದವರಿಗೆ ವಿಶೇಷ ಸವಲತ್ತುಗಳು. ಬೇಗನೇ ಪತ್ರವ್ಯವಹಾರವನ್ನು ಮಾಡಿರಿ

ಸಂಚಾಲಕ : ಎಸ್. ಡಿ. ಧರಮಟ್ಟಿ, ಶ. ಪ್ರ. ಮಂದಿರ, ಧಾರವಾಡ.

Printed by V. Y. Jathar at the Karnatak Printing Works, Dharwar, and Published for the Proprietors
Jayanti Publications, by M. V. Melligatti at the Jayanti Office, Dharwar -4309-52.